# ಅಭ್ಯರ್ಥಿಗಳ ಕೈಪಿಡಿ

ದಾಖಲೆ ಸಂಖ್ಯೆ – 26, ಆವೃತ್ತಿ 1

ಫೆಬ್ರವರಿ 2019

**ಭಾರತ ಚುನಾವಣಾ ಆಯೋಗ**

"ಯಾರೇ ಮತದಾರನು ಮತದಾನದಿಂದ ವಂಚಿತನಾಗಬಾರದು"

# ಅಭ್ಯರ್ಥಿಗಳ ಕೈಪಿಡಿ

**ದಾಖಲೆ ಸಂಖ್ಯೆ 26, ಆವೃತ್ತಿ 1**

**ಫೆಬ್ರವರಿ 2019**

## ಭಾರತ ಚುನಾವಣಾ ಆಯೋಗ

**ವಿಷಯ ಸೂಚಿ**


| | | |
|---|---|---|
| **1.** | **ಪೀಠಿಕೆ** | |
| 1.1 | ಸಾಮಾನ್ಯ | |
| 1.2. | ಮಾದರಿ ನೀತಿ ಸಂಹಿತೆ | |
| 1.3. | ಪೋಲಿಂಗ್ ಏಜೆಂಟರುಗಳು | |
| 1.4. | ಭಯ/ಬೆದರಿಕೆಗೆ ಗುರಿಯಾಗುವ ಸಾಧ್ಯತೆ ಇರುವ ಪ್ರದೇಶಗಳ ನಕ್ಷೆ ಸಿದ್ಧಪಡಿಸುವುದು | |
| 1.5. | ಬ್ಯಾಂಕ್ ಖಾತೆ | |
| 1.6. | ವಿದ್ಯುನ್ಮಾನ ಮತಯಂತ್ರ ಮತ್ತು ವಿ.ವಿ.ಪಿ.ಎ.ಟಿ (EVM and VVPAT) | |
| 1.7. | ಮೇಲಿನ ಯಾರಿಗೂ ಅಲ್ಲ (NOTA) | |
| 1.8. | ಅಂಚೆ ಮತ ಪತ್ರಗಳು (Postal Ballot Papers) | |
| 1.9. | ಹಣಬಲವನ್ನು ನಿಗ್ರಹಿಸುವುದು | |
| 1.10. | ಸೂಕ್ಷ್ಮ ವೀಕ್ಷಕರು (Micro observers) | |
| 1.11. | ವಲಯ ಅಧಿಕಾರಿ | |
| 1.12. | ವಿಷಮ ಸನ್ನಿವೇಷಗಳ (Critical Events) ವೀಡಿಯೋ ಚಿತ್ರೀಕರಣ | |
| 1.13. | ಕೇಂದ್ರ ಪೊಲೀಸ್ ದಳಗಳು (CPF) | |
| 1.14. | ಮತದಾರರ ಸಹಾಯ ಕೇಂದ್ರ | |
| 1.15. | ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಓ) | |
| 1.16. | ಪಾರದರ್ಶಕತೆ | |
| 1.17. | ಕ್ಷೇತ್ರಗಳ ಪುನರ್-ವಿಂಗಡಣೆ ಮತ್ತು ವಿಸ್ತೀರ್ಣ | |
| 1.18. | ಭಾವಚಿತ್ರವಿರುವ ಮತದಾರರ ಪಟ್ಟಿ (PER) ಮತ್ತು ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳು (EPIC) | |
| 1.19. | ಅಭ್ಯರ್ಥಿಯು ಕಡ್ಡಾಯವಾಗಿ ಒಬ್ಬ ಮತದಾರನಾಗಿರತಕ್ಕದ್ದು. | |
| 1.20. | ನಾಮಪತ್ರ ಸಲ್ಲಿಸಲು ನಿಗದಿಪಡಿಸಿರುವ ಸಸಸಸಸಸಕೊನೆಯ ದಿನಾಂಕಕ್ಕೆ ಮುಂಚೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವುದು. | |
| 1.21. | ಮತದಾರರ ಪಟ್ಟಿಯಲ್ಲಿನ ನಮೂದುಗಳ ತಿದ್ದುಪಾಟುಗಳು | |
| **2.** | **ಅರ್ಹತೆ ಮತ್ತು ಅನರ್ಹತೆಗಳು** | |
| 2.1. | ಪೀಠಿಕೆ | |
| 2.2. | ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಅರ್ಹತೆಗಳು | |
| 2.3. | ವಿಧಾನಸಭಾ ಚುನಾವಣೆಗೆ ಇರಬೇಕಾದ ಅರ್ಹತೆಗಳು | |
| 2.4. | ಮತದಾರರ ಪಟ್ಟಿಯಲ್ಲಿ ಹೆಸರು, ಇತ್ಯಾದಿಗಳ ತಿದ್ದುಪಡಿ | |
| 2.5. | ಅಭ್ಯರ್ಥಿಗಳಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ | |
| 2.6. | ಸಾಗರೋತ್ತರ ಮತದಾರನು ನಾಮಪತ್ರ ಸಲ್ಲಿಸುವುದು | |
| 2.7. | ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವ ಬಗ್ಗೆ ಪ್ರಮುಖ ಅಂಶಗಳು | |
| 2.8. | ಲೋಕಸಭಾ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಸಂಬಂಧಿಸಿದ ಅನರ್ಹತೆಗಳು | |
| 2.9. | ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ಅನರ್ಹತೆಗಳು | |
| 2.10. | ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದ ವಿಧಾನ ಸಭಾ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಅನರ್ಹತೆಗಳು | |

| | | |
|---|---|---|
| 2.11. | ಮತ ಚಲಾಯಿಸುವ ಅನರ್ಹತೆಯ ಪರಿಣಾಮದಿಂದ ಸದಸ್ಯತ್ವಕ್ಕೆ ಸಂಬಂಧಿಸಿದ ಅನರ್ಹತೆ | |
| **3.** | **ನಾಮಪತ್ರಗಳು ಮತ್ತು ಚಿಹ್ನೆಗಳ ಹಂಚಿಕೆ** | |
| 3.1. | ನಾಮಪತ್ರಗಳು | |
| 3.2. | ನಾಮಪತ್ರಗಳನ್ನು ಸಲ್ಲಿಸುವ ಅವಧಿ | |
| 3.3. | ನಾಮಪತ್ರದ ನಮೂನೆ | |
| 3.4. | ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಅಭ್ಯರ್ಥಿಯು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು | |
| 3.5. | ಅರ್ಹತೆಗಳು ಮತ್ತು ಅನರ್ಹತೆಗಳು | |
| 3.6. | ನಾಮಪತ್ರ | |
| 3.7. | ಅನರ್ಹತೆಯ ಖಂಡಗಳಿಗೆ ಸಂಬಂಧಿಸಿದ ಮಾಹಿತಿ | |
| 3.8. | ಅಫಿಡಾವಿಟ್‌ಗಳನ್ನು ಭರ್ತಿ ಮಾಡುವುದು | |
| 3.9. | ನಾಮಪತ್ರದಲ್ಲಿ ಅಭ್ಯರ್ಥಿಯ ಹೆಸರು | |
| 3.10. | ಸೂಕ್ತ ನಮೂನೆಯಲ್ಲಿ ನಾಮಪತ್ರವನ್ನು ಸಲ್ಲಿಸಬೇಕಾದ ದಿನಾಂಕ | |
| 3.11. | ನಾಮಪತ್ರವನ್ನು ಸಲ್ಲಿಸುವ ಸಮಯ | |
| 3.12. | ನಾಮಪತ್ರವನ್ನು ಯಾರು ಸಲ್ಲಿಸಬಹುದು | |
| 3.13. | ನಾಮಪತ್ರವನ್ನು ಯಾರಿಗೆ ಸಲ್ಲಿಸಬೇಕು | |
| 3.14. | ನಾಮಪತ್ರವನ್ನು ಎಲ್ಲಿ ಸಲ್ಲಿಸಬೇಕು | |
| 3.15. | ನಾಮಪತ್ರಗಳನ್ನು ಸಲ್ಲಿಸುವ ಸಮಯದಲ್ಲಿ ವಾಹನ ಮತ್ತು ಜನರ ಸಂಖ್ಯೆಯ ಮೇಲೆ ನಿರ್ಬಂಧ | |
| 3.16. | ನಿಮ್ಮ ನಾಮಪತ್ರಕ್ಕೆ ಯಾರು ಸಹಿ ಮಾಡಿರಬೇಕು | |
| 3.17. | ಸೂಚಕರ ಸಂಖ್ಯೆ | |
| 3.18. | ನಿಮ್ಮ ಸೂಚಕರು ಕ್ಷೇತ್ರದ ಮತದಾರರಾಗಿರಲೇಬೇಕು | |
| 3.19. | ನೀವು ಅಥವಾ ನಿಮ್ಮ ಸೂಚಕರು ತಮ್ಮ ಸಹಿ ಮಾಡಲು ಸಾಧ್ಯವಿಲ್ಲದಿದ್ದರೆ ತಾವು ಏನು ಮಾಡಬೇಕು | |
| 3.20. | ನಾಮಪತ್ರದಲ್ಲಿ ಅಭ್ಯರ್ಥಿಗಳು ಮಾಡಬೇಕಾದ ಘೋಷಣೆಗಳು | |
| 3.21. | ಅಭ್ಯರ್ಥಿಯು ಸರ್ಕಾರದ ಅಡಿಯಲ್ಲಿ ಹೊಂದಿರುವ ಪದದಿಂದ ವಜಾಗೊಂಡ ಐದು ವರ್ಷಗಳೊಳಗೆ ಸ್ಪರ್ಧಿಸಬೇಕಾದರೆ ಏನು ಮಾಡಬೇಕು | |
| 3.22. | ಅಭ್ಯರ್ಥಿಯು ಬೇರೊಂದು ಕ್ಷೇತ್ರದ ಮತದಾರರಾಗಿದ್ದರೆ, ಮತದಾರರ ಪಟ್ಟಿಯ ಪ್ರತಿಯನ್ನು ಹಾಜರುಪಡಿಸುವಿಕೆ | |
| 3.23. | ಒಂದೇ ಮತಕ್ಷೇತ್ರದಿಂದ ಅಭ್ಯರ್ಥಿಯಾಗಿ ನಿಲ್ಲುವುದಕ್ಕೆ ಅಭ್ಯರ್ಥಿಯು ಎಷ್ಟು ನಾಮಪತ್ರಗಳನ್ನು ಸಲ್ಲಿಸಬಹುದು | |
| 3.24. | ಠೇವಣಿಗಳು | |
| 3.25. | ಚುನಾವಣಾ ಚಿಹ್ನೆಗಳು | |
| 3.26. | ಅಭ್ಯರ್ಥಿಯು ಚಿಹ್ನೆಗಳನ್ನು ಆಯ್ಕೆ ಮಾಡಿಕೊಳ್ಳುವುದು | |
| 3.27. | ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ | |
| 3.28. | ಪ್ರಾರಂಭಿಕ ಪರಿಶೀಲನೆ | |
| 3.29. | ಅಭ್ಯರ್ಥಿಯ ಭಾವಚಿತ್ರ | |

| | | |
|---|---|---|
| 3.30. | ಮತದಾರರ ಪಟ್ಟಿಯಲ್ಲಿ ಅಥವಾ ನಾಮಪತ್ರದಲ್ಲಿ ತಪ್ಪುಗಳು, ಮುದ್ರಣದೋಷಗಳು, ಇತ್ಯಾದಿ | |
| 3.31. | ನಾಮಪತ್ರಕ್ಕೆ ಸ್ವೀಕೃತಿ ಮತ್ತು ಪರಿಶೀಲನೆಗಾಗಿ ನೋಟೀಸು ಮತ್ತು ಚಿಹ್ನೆಗಳ ಹಂಚಿಕೆ | |
| 3.32. | ನಾಮಪತ್ರಗಳ ನೋಟೀಸುಗಳ ಪರಿಶೀಲನೆ | |
| **4.** | **ನಾಮಪತ್ರಗಳ ಪರಿಶೀಲನೆ** | |
| 4.1. | ನಾಮಪತ್ರಗಳ ಪರಿಶೀಲನೆಯನ್ನು ಯಾರ ಮೂಲಕ ಮಾಡಿಸಬೇಕು | |
| 4.2. | ನಾಮಪತ್ರಗಳ ಪರಿಶೀಲನೆಗೆ ಯಾರು ಹಾಜರಾಗಬಹುದು | |
| 4.3. | ನಾಮಪತ್ರಗಳ ಪರಿಶೀಲನೆಗಾಗಿ ಯುಕ್ತ ಸೌಲಭ್ಯಗಳು | |
| 4.4. | ಎತ್ತಬಹುದಾದ ಆಕ್ಷೇಪಣೆಗಳು | |
| 4.5. | ನಾಮಪತ್ರವನ್ನು ತಿರಸ್ಕರಿಸಲು ಇರುವ ಕಾರಣಗಳು | |
| 4.6. | ಅಭ್ಯರ್ಥಿಯು ಮಾಡುವ ಪ್ರಮಾಣವಚನ ಅಥವಾ ಪ್ರತಿಜ್ಞಾವಿಧಿ | |
| 4.7. | ಒಂದು ನಾಮಪತ್ರದ ತಿರಸ್ಕರಣೆಯಿಂದ, ಯಾವುದೇ ಇತರ ನಾಮಪತ್ರವು ಸಿಂಧುವೆಂದು ಕಂಡುಬಂದರೆ, ಅಭ್ಯರ್ಥಿಯ ನಾಮನಿರ್ದೇಶನಕ್ಕೆ ಬಾಧಕವಾಗುವುದಿಲ್ಲ | |
| 4.8. | ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಯು ಸಲ್ಲಿಸುವ ದಸ್ತಾವೇಜುಗಳು ಮತ್ತು ಇತರ ಸಾಮಾಗ್ರಿಗಳ ಸೂಚಕ ಪಟ್ಟಿ | |
| 4.9. | ಅಭ್ಯರ್ಥಿಗಳ ಹೆಸರುಗಳ ತಿದ್ದುಪಡಿ | |
| 4.10. | ಅಭ್ಯರ್ಥಿಗಳ ಮಾರ್ಗದರ್ಶನಕ್ಕೆ ಸಂಬಂಧಿಸಿದಂತೆ ಮಾಡಬೇಕಾದ್ದು ಮತ್ತು ಮಾಡಬಾರದ್ದು | |
| 4.11. | ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಮಾರ್ಗದರ್ಶನಕ್ಕೆ ಸಂಬಂಧಿಸಿದ ನೀತಿ ಸಂಹಿತೆ– ಮಾಡಬೇಕಾದ್ದು ಮತ್ತು ಮಾಡಬಾರದ್ದು | |
| **5.** | **ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು** | |
| 5.1. | ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು | |
| 5.2. | ಹಿಂತೆದುಕೊಳ್ಳುವ ನೋಟೀಸು | |
| 5.3. | ಕ್ರಮಬದ್ಧವಾಗಿ ಹಿಂತೆಗೆದುಕೊಳ್ಳಲು ಇರುವ ಅಗತ್ಯತೆಗಳು | |
| 5.4. | ಹಿಂತೆಗೆದುಕೊಳ್ಳುವ ನೋಟೀಸು ಅಂತಿಮವಾದುದಾಗಿರುವುದು | |
| 5.5. | ಹಿಂತೆಗೆದುಕೊಳ್ಳುವ ನೋಟೀಸನ್ನು ಸ್ವೀಕರಿದ ಬಗ್ಗೆ ಸ್ವೀಕೃತಿ ಪತ್ರ | |
| 5.6. | ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ | |
| 5.7. | ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಹೆಸರುಗಳ ಅನುಕ್ರಮಣಿಕೆ | |
| 5.8. | ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಗುರುತಿನ ಚೀಟಿ ನೀಡುವುದು | |
| **6.** | **ಚುನಾವಣಾ ಏಜೆಂಟ್** | |
| 6.1. | ಚುನಾವಣಾ ಏಜೆಂಟ್‌ರ ನೇಮಕ | |
| **7.** | **ಪ್ರಚಾರದ ಅವಧಿ** | |
| 7.1. | ಪೀಠಿಕೆ | |
| 7.2. | ಭ್ರಷ್ಟಾಚಾರಗಳು ಮತ್ತು ಚುನಾವಣಾ ಅಕ್ರಮಗಳು | |
| 7.3. | ಮಾದರಿ ನೀತಿ ಸಂಹಿತೆ ಮತ್ತು ಅದರ ಪಾಲನೆ | |
| 7.4. | ಚುನಾವಣಾ ಮಾದರಿ ನೀತಿ ಸಂಹಿತೆಯ ಅವಲೋಕನ ಸಮಿತಿಗಳು | |
| 7.5. | ಮೆರವಣಿಗೆಗಳು ಮತ್ತು ಸಭೆಗಳು | |
| 7.6. | ಸಾರ್ವಜನಿಕ ಅಥವಾ ಖಾಸಗಿ ಆಸ್ತಿಗಳನ್ನು ವಿರೂಪಗೊಳಿಸುವುದು | |

| | | |
|---|---|---|
| 7.7. | ಗಲಭೆಯುಂಟಾಗಬಹುದಾದ ಸೂಕ್ಷ್ಮ ಪ್ರದೇಶವನ್ನು ಗುರ್ತಿಸುವುದು | |
| 7.8. | ಮತದಾನ ನಡೆಯುವ 48 ಗಂಟೆಗಳ ಅವಧಿಗೂ ಮುನ್ನ ಸಾರ್ವಜನಿಕ ಸಭೆಗಳ ಮತ್ತು ಮೆರವಣಿಗೆಗಳ ನಿಷೇಧ | |
| 7.9. | ಸಾರ್ವಜನಿಕ ಸಭೆಗಳಿಗೆ ಅಡಚಣೆ | |
| 7.10. | ಚುನಾವಣಾ ನೀತಿ ಸಂಹಿತೆಯ ಕಟ್ಟುನಿಟ್ಟಿನ ಪಾಲನೆ –ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಪಾಲನೆ ಮಾಡಬೇಕಾದವು ಮತ್ತು ಮಾಡಬಾರದವು | |
| 7.11. | ಚುನಾವಣಾ ಕರ ಪತ್ರಗಳು ಇತ್ಯಾದಿಗಳ ಮುದ್ರಣ ಮತ್ತು ಪ್ರಕಟಣೆಯ ನಿರ್ಬಂಧಗಳು | |
| 7.12. | ಸಂಕ್ಷಿಪ್ತ ಸಂದೇಶ ಸೇವೆಗಳ (ಎಸ್‌ಎಂಎಸ್‌ಗಳು) ದುರುಪಯೋಗದ ನಿಷೇಧ | |
| 7.13. | ಪ್ರಚಾರಾವಧಿ ಮುಗಿದ ತರುವಾಯ ಮತಕ್ಷೇತ್ರದಲ್ಲಿ ರಾಜಕೀಯ ಕಾರ್ಯಕರ್ತರು ಉಪಸ್ಥಿತರಿರುವುದರ ಮೇಲೆ ನಿರ್ಬಂಧ | |
| 7.14. | ಅನಧಿಕೃತ ಗುರುತಿನ ಸ್ಲಿಪ್‌ಗಳು | |
| 7.15. | ಮತದಾನ ಪ್ರಕ್ರಿಯೆಯ ತಾಲೀಮುಗಳನ್ನು ನಡೆಸುವುದು | |
| 7.16. | ಮತದಾನ ಪ್ರಕ್ರಿಯೆಯ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸುವುದು | |
| 7.17. | ಡಮ್ಮಿ ಬ್ಯಾಲೆಟ್ ಪೇಪರ್ | |
| 7.18. | ಡಮ್ಮಿ ಬ್ಯಾಲೆಟ್ ಯೂನಿಟ್‌ಗಳು | |
| 7.19. | ಮತದಾನ ಕೇಂದ್ರಗಳಲ್ಲಿ ಇವಿಎಂ ನ ಮುದ್ರಿತ ಮಾದರಿ | |
| 7.20. | ಚಿಹ್ನೆ | |
| 7.21. | ಮೃತಪಟ್ಟ, ಗೈರುಹಾಜರಾದ, ಸ್ಥಳಾಂತರಗೊಂಡಿರುವ ಮತ್ತು ನಕಲಿ ಮತದಾರರ ಪಟ್ಟಿ | |
| 7.22. | ಮತದಾನಕ್ಕೆ ಮುನ್ನ ಅಭ್ಯರ್ಥಿಯ ಮರಣ | |
| **8.** | **ಸೂಕ್ಷ್ಮ ವಿಷಯಗಳ ಕುರಿತಾಗಿ ವಿಡಿಯೋ ಚಿತ್ರೀಕರಣ** | |
| 8.1. | ವಿಡಿಯೋ ಚಿತ್ರೀಕರಣಕ್ಕೆ ಸಂಬಂಧಿಸಿದ ಸೂಚನೆಗಳು | |
| **9.** | **ಇವಿಎಂ ಮತ್ತು ವಿವಿಪ್ಯಾಟ್‌ನ ಪರಿಚಯ** | |
| 9.1. | ಪ್ರಸ್ತಾವನೆ | |
| 9.2. | ವಿದ್ಯುನ್ಮಾನ ಮತಯಂತ್ರದ (ಇವಿಎಂ) ಪರಿಚಯ | |
| 9.3. | ವಿವಿಪ್ಯಾಟ್‌ನ ಪರಿಚಯ | |
| **10.** | **ಮತದಾನಕ್ಕಾಗಿ ಸಿದ್ಧತೆ– ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಕಾರ್ಯಾಚರಣೆಗೊಳಿಸುವುದು** | |
| 10.1. | ಪ್ರಾರಂಭಿಕ | |
| 10.2. | ಇವಿಎಂ ಮತ್ತು ವಿವಿಪ್ಯಾಟ್‌ಗಳ ಪ್ರಥಮ ಹಂತದ ತಪಾಸಣೆ ಮತ್ತು ಯಾದೃಚ್ಛೀಕರಣ | |
| 10.3. | ಇವಿಎಂ ಮತ್ತು ವಿವಿಪ್ಯಾಟ್‌ಗಳಿಗೆ ಸಂಖ್ಯೆಯನ್ನು ನೀಡುವುದು | |
| 10.4. | ವಿದ್ಯುನ್ಮಾನ ಮತಯಂತ್ರಗಳ ದತ್ತಾಂಶ | |
| 10.5. | ಮತಯಂತ್ರಗಳ ಯಾದೃಚ್ಛೀಕರಣ ಕುರಿತು ಕಾರ್ಯಸೂಚಿ | |
| 10.6. | ರಿಟರ್ನಿಂಗ್ ಅಧಿಕಾರಿಗಳಿಗೆ ಪಟ್ಟಿ ಹಾಗೂ ವಿದ್ಯುನ್ಮಾನ ಮತಯಂತ್ರಗಳ ವಿತರಣೆ | |
| 10.7. | ದ್ವಿತೀಯ ಯಾದೃಚ್ಛೀಕರಣ | |
| 10.8. | ವಿದ್ಯುನ್ಮಾನ ಮತಯಂತ್ರಗಳ ಸಿದ್ಧತೆ | |
| 10.9. | ವಾಸ್ತವಿಕ ಮತದಾನಕ್ಕಾಗಿ ಇವಿಎಂ ಗಳ ಪ್ರಸರಣ | |
| 10.10. | ಆರಂಭದಿಂದ ಅಣಕು ಮತದಾನ ನಡೆಯುವವರೆಗೆ ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ಬದಲಾಯಿಸುವಿಕೆ | |

| | | |
|---|---|---|
| 10.11. | ವಾಸ್ತವಿಕ ಮತದಾನ ಸಮಯದಲ್ಲಿ ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ಬದಲಾಯಿಸುವಿಕೆ | |
| 10.12. | ಮತದಾನ ಮುಕ್ತಾಯವಾದ ನಂತರ ಸಿಯು, ಬಿಯು ಮತ್ತು ವಿವಿಪ್ಯಾಟ್‌ಗಳ ಸ್ವೀಕೃತಿ | |
| 10.13. | ಮರುಮತದಾನಕ್ಕಾಗಿ ಬಳಸುವ ವಿದ್ಯುನ್ಮಾನ ಮತಯಂತ್ರಗಳು ಹಾಗೂ ವಿವಿಪ್ಯಾಟ್‌ಗಳು | |
| 10.14. | ರಾಜಕೀಯ ಪಕ್ಷಗಳು/ ಅಭ್ಯರ್ಥಿಗಳೊಂದಿಗೆ ಸಂವಹನ | |
| 10.15. | ಸನ್ನಿವೇಶಗಳನ್ನು ವಿಡಿಯೋಗ್ರಾಫ್ ಮಾಡುವುದು | |
| 10.16. | ಮತ ಯಂತ್ರಗಳ ಸಿದ್ಧತೆಯ ದಿನಾಂಕ ಮತ್ತು ಸಮಯದ ಬಗ್ಗೆ ಅಭ್ಯರ್ಥಿಗಳಿಗೆ ನೋಟೀಸು | |
| 10.17. | ಬ್ಯಾಲೆಟ್ ಯೂನಿಟ್‌ನ ಸಿದ್ಧತೆ | |
| 10.18. | ಮತ ಪತ್ರವನ್ನು ಅಳವಡಿಸುವುದು | |
| 10.19. | ಉಪಯೋಗಿಸದಿರುವಂತಹ ಅಭ್ಯರ್ಥಿಗಳ ಬಟನ್‌ಗಳನ್ನು ಮರೆ ಮಾಚುವುದು | |
| 10.20. | ಎಂ2 ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಸ್ಲೈಡ್ ಸ್ವಿಚ್ ಅನ್ನು ಸೆಟ್ ಮಾಡುವುದು | |
| 10.21. | ಎಂ3 ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಥಂಬ್‌ವೀಲ್‌ಗಳನ್ನು ಸೆಟ್ ಮಾಡುವುದು | |
| 10.22. | ಬ್ಯಾಲೆಟಿಂಗ್ ಯೂನಿಟ್‌ಅನ್ನು ಮೊಹರು ಮಾಡುವುದು | |
| 10.23. | ಬ್ಯಾಲೆಟ್ ಯೂನಿಟ್‌ಗಳು, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವುದು | |
| 10.24. | ಕಂಟ್ರೋಲ್ ಯೂನಿಟನ್ನು ಅಣಿಗೊಳಿಸುವುದು | |
| 10.25. | ಬ್ಯಾಟರಿಯನ್ನು ಅಳವಡಿಸುವುದು | |
| 10.26. | ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯನ್ನು ಸೆಟ್ ಮಾಡುವುದು | |
| 10.27. | ಮತಯಂತ್ರದಲ್ಲಿ ದಾಖಲಾದ ಹಿಂದಿನ ಮಾಹಿತಿಯನ್ನು ಅಳಿಸಿ ಹಾಕುವುದು | |
| 10.28. | 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್' ಅನ್ನು ಮೊಹರು ಮಾಡುವುದು | |
| 10.29. | ವಿವಿಪ್ಯಾಟ್‌ಅನ್ನು ಸೆಟ್ ಮಾಡುವುದು | |
| 10.30. | ಸಿದ್ಧಪಡಿಸಲಾದ ವಿದ್ಯುನ್ಮಾನ ಮತಯಂತ್ರಗಳು ಹಾಗೂ ವಿವಿಪ್ಯಾಟ್‌ನ ಸುರಕ್ಷಿತ ಸಂರಕ್ಷಣೆ | |
| 10.31. | ಮತಯಂತ್ರಗಳ ದಾಖಲೆಗಳ ನಿರ್ವಹಣೆ | |
| 10.32. | ಮತಗಟ್ಟೆ ಸಿಬ್ಬಂದಿಗೆ ಮತಯಂತ್ರಗಳ ಸರಬರಾಜು | |
| **11.** | **ಅಂಚೆ ಮತಪತ್ರಗಳು** | |
| 11.1. | ಸೇವಾ ಮತದಾರರು | |
| 11.2. | ಅಂಚೆ ಮತಪತ್ರಗಳು – ನಮೂನೆ ಮತ್ತು ಭಾಷೆ | |
| 11.3. | ಚುನಾವಣಾ ಕರ್ತವ್ಯದಲ್ಲಿರುವ ಸಿಬ್ಬಂದಿಗಳಿಗೆ ಅಂಚೆ ಮತಪತ್ರಗಳು | |
| **12.** | **ಮತದಾನ ಸಿಬ್ಬಂದಿ** | |
| 12.1. | ಮತದಾನ ಸಿಬ್ಬಂದಿಗಳ ರಚನೆ | |
| 12.2. | ಮತದಾನ ಸಿಬ್ಬಂದಿ ತಂಡಗಳನ್ನು ರಚಿಸುವ ಕಾರ್ಯವಿಧಾನಗಳು | |
| 12.3. | ಮತಗಟ್ಟೆ ಕಾರ್ಯ ತಂಡದ ರಚನೆ | |
| **13.** | **ವೀಕ್ಷಕರು** | |
| 13.1. | **ಪ್ರಾರಂಭಿಕ** | |
| 13.2. | ವೀಕ್ಷಕರ ಶಾಸನಬದ್ಧ ಅಧಿಕಾರಗಳು | |
| 13.3. | ಸೂಕ್ಷ್ಮ ವೀಕ್ಷಕರು | |

| | | |
|---|---|---|
| 13.4. | ಸೆಕ್ಟರ್‌ಅಧಿಕಾರಿಗಳು | |
| **14.** | **ಮತಗಟ್ಟೆಗಳಲ್ಲಿ ಭದ್ರತಾ ವ್ಯವಸ್ಥೆ** | |
| 14.1. | ಭದ್ರತೆ | |
| **15.** | **ಮತದಾನದ ದಿನ** | |
| 15.1. | **ಪೀಠಿಕೆ** | |
| 15.2. | ಮತದಾನದ ದಿನ ರಜೆ ಘೋಷಣೆ | |
| 15.3. | ಚುನಾವಣಾ ಪ್ರಚಾರದ ನಿರ್ಬಂಧ | |
| 15.4. | ಮತಗಟ್ಟೆಗಳ ಸಮೀಪ ಅಥವಾ ಮತಗಟ್ಟೆಗೆ ಶಸ್ತ್ರಾಸ್ತ್ರ ಸಮೇತ ಹೋಗುವುದಕ್ಕೆ ನಿಷೇಧ | |
| 15.5. | ಅಭ್ಯರ್ಥಿಗಳ ಚುನಾವಣಾ ಬೂತ್‌ಗಳು | |
| 15.6. | ಮತದಾರರನ್ನು ಮತ ಚಲಾಯಿಸದಂತೆ ತಡೆಯುವುದು | |
| 15.7. | ಮತದಾರರ ಅನುಕೂಲಕ್ಕಾಗಿ ಕಾನೂನುಬಾಹಿರವಾಗಿ ವಾಹನಗಳನ್ನು ಬಾಡಿಗೆ ತೆಗೆದುಕೊಳ್ಳುವುದು | |
| 15.8. | ಮತದಾನದ ದಿನ ವಾಹನ ಸಂಚಾರದ ನಿರ್ಬಂಧ | |
| 15.9. | ಮತಗಟ್ಟೆಗಳಲ್ಲಿ ಮತಪತ್ರಗಳನ್ನು ವಿದ್ಯುನ್ಮಾನ ಮತಯಂತ್ರಗಳಿಂದ (ಇವಿಎಂ) ಹೊರತೆಗೆಯುವುದು ಅಪರಾಧ | |
| 15.10. | ಗಲಭೆ ಸೃಷ್ಟಿಸುವ ವ್ಯಕ್ತಿಗಳನ್ನು ಹೊರಹಾಕುವುದು | |
| 15.11. | ಪೋಲಿಂಗ್ ಏಜೆಂಟರು | |
| 15.12. | ಪೋಲಿಂಗ್ ಏಜೆಂಟನು ಮತಗಟ್ಟೆಯನ್ನು ತಲುಪಿದಾಗ | |
| 15.13. | ಮತಗಟ್ಟೆಗಳಲ್ಲಿ ಪೋಲಿಂಗ್ ಏಜೆಂಟರ ಉಪಸ್ಥಿತಿ ಮತ್ತು ಕಡ್ಡಾಯ ಅಣಕು ಮತದಾನ ನಡೆಸುವುದು ಮತ್ತು ಪ್ರಮಾಣೀಕರಣದ ಬಗ್ಗೆ ಪತ್ತೆಹಚ್ಚುವುದು | |
| 15.14. | ಪೋಲಿಂಗ್ ಏಜೆಂಟರ ಕರ್ತವ್ಯಗಳು | |
| 15.15. | ಪೋಲಿಂಗ್ ಏಜೆಂಟರು ತರಬೇಕಾದ ಸಾಮಾಗ್ರಿಗಳು | |
| 15.16. | ಮತಗಟ್ಟೆಗಳಲ್ಲಿ ಬ್ಯಾಡ್ಜ್ ಇತ್ಯಾದಿಗಳನ್ನು ಧರಿಸುವುದು | |
| 15.17. | ಮತಗಟ್ಟೆಗಳಲ್ಲಿ ವ್ಯವಸ್ಥೆ | |
| 15.18. | ಮತಗಟ್ಟೆಯ ಒಳಗಡೆಗೆ ಪ್ರವೇಶಿಸಲು ಅನುಮತಿಸಬೇಕಾದ ವ್ಯಕ್ತಿಗಳು | |
| 15.19. | ಏಜೆಂಟರುಗಳಿಗೆ ಆಸನ ವ್ಯವಸ್ಥೆ | |
| 15.20. | ಮತದಾನ ಪ್ರಾರಂಭಕ್ಕೂ ಮುಂಚಿನ ಪೂರ್ವಭಾವೀ ಸಿದ್ದತೆಗಳು | |
| 15.21. | ಮತದಾನ ಪ್ರಾರಂಭಿಸುವುದಕ್ಕೆ ಮುಂಚೆ ಇವಿಎಂ ಮತ್ತು ವಿವಿಪ್ಯಾಟನ್ನು ಸಿದ್ಧಪಡಿಸುವುದು | |
| 15.22. | ಬ್ಯಾಲೆಟಿಂಗ್ ಯೂನಿಟ್‌ನಲ್ಲಿನ ಸಿದ್ಧತೆಗಳು | |
| 15.23. | ಕಂಟ್ರೋಲ್ ಯೂನಿಟ್‌ಅನ್ನು ಸಿದ್ಧಗೊಳಿಸುವುದು | |
| 15.24. | ವಿವಿಪ್ಯಾಟ್‌ನಲ್ಲಿನ ಸಿದ್ಧತೆಗಳು | |
| 15.25. | ಇವಿಎಂ ಮತ್ತು ವಿವಿಪ್ಯಾಟ್‌ನಲ್ಲಿ ದಾಖಲಾದ ಮತಗಳನ್ನು ಪ್ರತ್ಯಕ್ಷವಾಗಿ ತೋರಿಸುವುದು | |
| 15.26. | ಅಣುಕು ಮತದಾನ | |
| 15.27. | ಕಂಟ್ರೋಲ್ ಯೂನಿಟ್‌ನಲ್ಲಿ ಗ್ರೀನ್ ಪೇಪರ್ ಸೀಲ್ ಅಳವಡಿಸುವುದು | |
| 15.28. | ವಿಶೇಷ ಟ್ಯಾಗ್ | |
| 15.29. | ಸ್ಟ್ರಿಪ್‌ಸೀಲ್ | |

| | | |
|---|---|---|
| 15.30. | ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್‌ನ್ನು ಮೊಹರು ಮಾಡುವ ವಿಧಾನ | |
| 15.31. | ಪೇಪರ್ ಸೀಲ್‌ಗಳ ಲೆಕ | |
| 15.32. | ಇವಿಎಂ ಮತ್ತು ವಿವಿಪ್ಯಾಟ್ ವಾಸ್ತವಿಕ ಮತದಾನಕ್ಕೆ ಸಿದ್ದವಾಗಿದೆ | |
| 15.33. | ಮತದಾನದ ರಹಸ್ಯವನ್ನು ಕಾಪಾಡುವುದು | |
| 15.34. | ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಪ್ರಿಸೈಡಿಂಗ್ ಅಧಿಕಾರಿಯವರಿಂದ ಘೋಷಣೆ | |
| 15.35. | ಮತದಾನದ ಆರಂಭ | |
| 15.36. | ಮತಗಟ್ಟೆಗೆ ಮತದಾರರ ಪ್ರವೇಶ | |
| 15.37. | ಪತ್ರಿಕಾ ಪ್ರತಿನಿಧಿಗಳು ಮತ್ತು ಛಾಯಾಗ್ರಾಹಕರಿಗೆ ಸೌಲಭ್ಯಗಳು | |
| 15.38. | ಇವಿಎಂಗಳಲ್ಲಿ ಮತಗಳನ್ನು ದಾಖಲು ಮಾಡುವ ವಿಧಾನ | |
| 15.39. | ಮತಗಟ್ಟೆಯಲ್ಲಿ ಮತದಾನದ ಪ್ರಕ್ರಿಯೆ | |
| 15.40. | ಮತದಾರರ ಗುರುತನ್ನು ಪ್ರಶ್ನಿಸುವುದು | |
| 15.41. | ಮೃತರಾದ, ಗೈರುಹಾಜರಾದ ಮತ್ತು ಅನುಮಾನಾಸ್ಪದರೆಂದು ಆಪಾದಿಸಲಾದ ಮತದಾರರ ಪಟ್ಟಿ. | |
| 15.42. | ಮತದಾರರ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸುವುದು | |
| 15.43. | ಆಕ್ಷೇಪಣಾ ಶುಲ್ಕ | |
| 15.44. | ಆಕ್ಷೇಪಣೆಯ ಬಗ್ಗೆ ಸಂಕ್ಷಿಪ್ತ ವಿಚಾರಣೆ | |
| 15.45. | ಆಕ್ಷೇಪಣಾ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಹಿಂದಿರುಗಿಸುವುದು | |
| 15.46. | ಕೈತಪ್ಪುಗಳು ಹಾಗೂ ಮುದ್ರಣ ದೋಷಗಳನ್ನು ಗಣನೆಗೆ ತೆಗೆದುಕೊಳ್ಳುವಂತಿಲ್ಲ | |
| 15.47. | ಮತದಾರನ ಅರ್ಹತೆಯನ್ನು ಪ್ರಶ್ನಿಸುವಂತಿಲ್ಲ | |
| 15.48. | ಅಪ್ರಾಪ್ತ ಮತದಾರರು ಮತದಾನ ಮಾಡುವುದನ್ನು ತಡೆಯಲು ಮುಂಜಾಗ್ರತಾ ಕ್ರಮಗಳು | |
| 15.49. | ಬದಲಿ ಮತದಾರನ (ಪ್ರಾಕ್ಸಿ) ಮೂಲಕ ಮತದಾನ: ವರ್ಗೀಕೃತ ಸೇವಾ ಮತದಾರರು | |
| 15.50. | ಅಂಧ ಅಥವಾ ದುರ್ಬಲ ಮತದಾರರಿಂದ ಮತಚಲಾವಣೆ | |
| 15.51. | ಟೆಂಡರ್ಡ್ (ಚಲಾಯಿಸಿದ) ಮತಗಳು | |
| 15.52. | ಮತವನ್ನು ಚಲಾಯಿಸುವುದಿಲ್ಲ ಎಂದು ನಿರ್ಧರಿಸಿರುವ ಮತದಾರರು | |
| 15.53. | ಮತದಾನದ ರಹಸ್ಯವನ್ನು ಉಲ್ಲಂಘಿಸುವುದು | |
| 15.54. | ಕಾಗದದ ತಾಳೆದರ್ಶಕದ (ಪೇಪರ್ ಟ್ರೈಯಲ್) ಮೇಲೆ ಮುದ್ರಿತವಾದ ವಿವರಗಳ ಬಗ್ಗೆ ದೂರುಗಳಿದ್ದ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ | |
| 15.55. | ಪ್ರಿಸೈಡಿಂಗ್ ಅಧಿಕಾರಿ(ಹಾಗೂ ಇತರೆ ಸಿಬ್ಬಂದಿ) ವೋಟಿಂಗ್ ಕಂಪಾರ್ಟ್‌ಮೆಂಟ್‌ನ ಹತ್ತಿರ ಹೋಗುವುದರ ಮೇಲೆ ನಿರ್ಬಂಧಗಳು | |
| 15.56. | ಮತದಾನ ಮುಕ್ತಾಯವಾಗುವ ಸಮಯದಲ್ಲಿ ಮತಗಟ್ಟೆಯಲ್ಲಿ ಹಾಜರಿರುವ ವ್ಯಕ್ತಿಗಳಿಂದ ಮತದಾನ | |
| 15.57. | ಮತದಾನದ ಮುಕ್ತಾಯ | |
| 15.58. | ಪ್ರಿಸೈಡಿಂಗ್ ಅಧಿಕಾರಿಯು ದಾಖಲಿಸಿದ ಒಟ್ಟು ಮತಗಳ ಲೆಕ್ಕದ (ನಮೂನೆ 17–ಎಯಲ್ಲಿ) ಪ್ರತಿಯನ್ನು ಒದಗಿಸುವುದು | |

| | | |
|---|---|---|
| 15.59. | ಮತದಾನ ಮುಕ್ತಾಯಗೊಂಡ ನಂತರ ಇವಿಎಂ ಮತ್ತು ವಿವಿಪ್ಯಾಟನ್ನು ಮೊಹರು ಮಾಡುವುದು | |
| 15.60. | ಚುನಾವಣಾ ಕಾಗದಪತ್ರಗಳನ್ನು ಪ್ಯಾಕೆಟ್ಟುಗಳಲ್ಲಿಟ್ಟು ಮೊಹರು ಮಾಡುವುದು | |
| 15.61. | ಇವಿಎಂ, ವಿವಿಪ್ಯಾಟ್ ಮತ್ತು ಚುನಾವಣಾ ಕಾಗದ ಪತ್ರಗಳನ್ನು ಸ್ವೀಕಾರ ಕೇಂದ್ರಕ್ಕೆ ಸಾಗಿಸುವುದು | |
| 15.62. | ಮತಯಂತ್ರಗಳನ್ನು ಕೊಂಡೊಯ್ಯುವ ವಾಹನಗಳ ಜೊತೆ ಹೋಗುವುದು | |
| 15.63. | ಇವಿಎಂ, ವಿವಿಪ್ಯಾಟ್ ಮತ್ತು ಇತರೇ ಸಾಮಗ್ರಿಗಳನ್ನು ಸ್ವೀಕರಿಸಲು ಸ್ವೀಕಾರ ಕೇಂದ್ರಗಳಲ್ಲಿ ವ್ಯವಸ್ಥೆಗಳನ್ನು ಮಾಡುವುದು | |
| 15.64. | ಮುಂದೂಡಿದ ಮತದಾನ | |
| 15.65. | ಹೊಸ ಮತದಾನ | |
| 15.66. | ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡಾಗ ಹೊಸ ಮತದಾನ ನಡೆಸುವುದು | |
| 15.67. | ಮತಗಟ್ಟೆಯಲ್ಲಿ ಮತದಾರರ ರಿಜಿಸ್ಟರ್‌ಅನ್ನು (ನಮೂನೆ 17–ಎ) ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿದಾಗ, ವ್ಯತ್ಯಾಸಗಳು ಕಂಡುಬಂದರೆ ಹೊಸ ಮತದಾನ ನಡೆಸುವುದು | |
| **16.** | **ಮತಗಳ ಎಣಿಕೆ** | |
| 16.1. | ಪ್ರಾಸ್ತಾವಿಕ | |
| 16.2. | ಮತಎಣಿಕೆ ಅಧಿಕಾರಿ/ ಸಿಬ್ಬಂದಿಗಳ ನೇಮಕ ಮತ್ತು ಅವರ ಯಾದೃಚ್ಛಿಕ ಬದಲಾವಣೆ | |
| 16.3. | ಮೀಸಲು ಸಿಬ್ಬಂದಿ | |
| 16.4. | ವೀಕ್ಷಕರು ಯಾದೃಚ್ಛಿಕವಾಗಿ ಅಡ್ಡ ತಪಾಸಣೆ ಮಾಡುವುದು | |
| 16.5. | ವೀಕ್ಷಕರ ಪಾತ್ರ | |
| 16.6. | ಮತ ಎಣಿಕೆಯ ದಿನಾಂಕ, ಸ್ಥಳ ಮತ್ತು ಸಮಯ | |
| 16.7. | ಮತ ಎಣಿಕೆಯ ಪ್ರಾರಂಭ | |
| 16.8. | ಬೇರೆಬೇರೆ ಸ್ಥಳಗಳ ಮತಎಣಿಕೆ | |
| 16.9. | ಮತ ಎಣಿಕೆ ಸಭಾಂಗಣಕ್ಕೆ ಹೋಗಲು ಅನುಮತಿಸಲ್ಪಟ್ಟ ವ್ಯಕ್ತಿಗಳು | |
| 16.10. | ಮತ ಎಣಿಕೆಗೆ ನೇಮಕ ಮಾಡಲ್ಪಟ್ಟ ಎಣಿಕಾ ಏಜೆಂಟರ ಸಂಖ್ಯೆ | |
| 16.11. | ಎಣಿಕಾ ಏಜೆಂಟರ ಅರ್ಹತೆಗಳು | |
| 16.12. | ಎಣಿಕಾ ಏಜೆಂಟ್‌ಗಳ ನೇಮಕಾತಿ | |
| 16.13. | ಎಣಿಕಾ ಏಜೆಂಟರನ್ನು ನೇಮಕ ಮಾಡಲು ಇರುವ ಕಾಲಮಿತಿ | |
| 16.14. | ಎಣಿಕಾ ಏಜೆಂಟರ ನೇಮಕಾತಿಯನ್ನು ಹಿಂಪಡೆಯುವಿಕೆ | |
| 16.15. | ಎಣಿಕಾ ಕೊಠಡಿಯೊಳಗೆ ಎಣಿಕಾ ಏಜೆಂಟರ ಪ್ರವೇಶ | |
| 16.16. | ಎಣಿಕಾ ಏಜೆಂಟರುಗಳಿಗೆ ಬ್ಯಾಡ್ಜುಗಳು | |
| 16.17. | ಎಣಿಕಾ ಕೊಠಡಿಯೊಳಗೆ ಶಿಸ್ತು ಮತ್ತು ಸಂಯಮತೆಯನ್ನು ಕಾಪಾಡಿಕೊಳ್ಳುವುದು | |
| 16.18. | ಎಣಿಕಾ ಆವರಣದಲ್ಲಿ ಮತ್ತು ಎಣಿಕಾ ಕೊಠಡಿಯಲ್ಲಿ ಧೂಮಪಾನ ನಿಷೇಧ | |
| 16.19. | ಎಣಿಕಾ ಏಜೆಂಟರುಗಳಿಗೆ ಆಸನದ ವ್ಯವಸ್ಥೆ | |
| 16.20. | ಎಣಿಕಾ ಕೊಠಡಿಗಳ ಮತ್ತು ಅವುಗಳ ಭದ್ರತೆಯ ನಿರ್ವಹಣೆ | |
| 16.21. | ಮತದಾನದ ಗೌಪ್ಯತೆಯನ್ನು ಕಾಪಾಡುವುದು | |
| 16.22. | ಮತ ಎಣಿಕೆಯು ನಿರಂತರವಾಗಿರಬೇಕು | |

| | | |
|---|---|---|
| 16.23. | ಅಂಚೆ ಮತಪತ್ರಗಳನ್ನು ಮೊದಲು ಎಣಿಕೆ ಮಾಡುವುದು | |
| 16.24. | ಮತಗಟ್ಟೆಗಳಲ್ಲಿ ಚಲಾಯಿಸಿದ ಮತಗಳ ಎಣಿಕೆ | |
| 16.25. | ಕಂಟ್ರೋಲ್ ಯೂನಿಟ್‌ಗಳನ್ನು ಒಳಗೊಂಡಿರುವ ಕ್ಯಾರಿಯಿಂಗ್ ಕೇಸ್‌ಗಳನ್ನು ತೆರೆಯುವುದು | |
| 16.26. | ಕಂಟ್ರೋಲ್ ಯೂನಿಟ್ ಮೇಲಿನ ಮೊಹರನ್ನು ಪರಿಶೀಲಿಸುವುದು | |
| 16.27. | ಕಂಟ್ರೋಲ್ ಯೂನಿಟ್ ಮೇಲಿನ ಮೊಹರುಗಳನ್ನು ಮತ್ತು ಗುರುತು ಚಿಹ್ನೆಗಳನ್ನು ಪರಿಶೀಲಿಸುವುದು | |
| 16.28. | ಕಾಗದದ ಮೊಹರಿನ (ಪೇಪರ್ ಸೀಲ್) ಮೇಲಿನ ಕ್ರಮ ಸಂಖ್ಯೆಯನ್ನು ತಾಳೆ ನೋಡುವುದು | |
| 16.29. | ಕಂಟ್ರೋಲ್ ಯೂನಿಟ್ ವಿರೂಪಗೊಂಡಿರುವುದು ಕಂಡುಬಂದಲ್ಲಿ ಅದನ್ನು ಪ್ರತ್ಯೇಕವಾಗಿಡಬೇಕು | |
| 16.30. | ಫಲಿತಾಂಶವನ್ನು ಖಚಿತಪಡಿಸುವುದು | |
| 16.31. | ನಮೂನೆ 17–ಸಿ.ಯ "ಭಾಗ–ಖಖ –ಎಣಿಕೆ ಫಲಿತಾಂಶ" ಅಂಕಣವನ್ನು ಭರ್ತಿಮಾಡುವುದು | |
| 16.32. | ಅಂತಿಮ ಫಲಿತಾಂಶ ಶೀಟ್ | |
| 16.33. | ಒಂದು ಮತದಾನ ಕೇಂದ್ರದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನ | |
| 16.34. | ಮರು ಎಣಿಕೆ | |
| 16.35. | ಮರುಮತದಾನಕ್ಕೆ ಘೋಷಿಸಿದಾಗ ಎಣಿಕೆಯನ್ನು ಮುಂದೂಡುವುದು | |
| 16.36. | ಎಣಿಕೆ ನಂತರ ಮತಯಂತ್ರಗಳನ್ನು ಬಿಡುಗಡೆಗೊಳಿಸುವುದು | |
| 16.37. | ಸಮಾನ ಮತಗಳು | |
| 16.38. | ಚುನಾವಣಾ ಫಲಿತಾಂಶದ ಘೋಷಣೆ | |
| 16.39. | ಚುನಾವಣಾ ಪ್ರಮಾಣಪತ್ರ | |
| **17.** | **ಬಹು ಚುನಾವಣೆಗಳು** | |
| 17.1. | ಸಂಸತ್ತಿನ ಎರಡೂ ಸದನಗಳಿಗೆ ಚುನಾವಣೆ | |
| 17.2. | ರಾಜ್ಯಸಭೆಗೆ ಚುನಾಯಿತಗೊಂಡ ಲೋಕಸಭೆಯ ಸದಸ್ಯ | |
| 17.3. | ರಾಜ್ಯಸಭೆಯ ಸದಸ್ಯ ಲೋಕಸಭೆಗೆ ಆಯ್ಕೆಯಾಗುವುದು | |
| 17.4. | ಸಂಸತ್ತಿನ ಉಭಯ ಸದನಗಳ ಪೈಕಿ, ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನಮಂಡಲದ ಒಂದು ಸದನದಲ್ಲಿ ಅಥವಾ ಎರಡು ಸದನಗಳ ಪೈಕಿ ಯಾವುದೇ ಸದನದಲ್ಲಿನ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಗೊಳ್ಳುವುದು | |
| 17.5. | ಸಂಸತ್ತಿನ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳಿಗೆ ಚುನಾವಣೆ | |
| 17.6. | ರಾಜ್ಯ ವಿಧಾನಮಂಡಲದ ಎರಡೂ ಸದನಗಳಿಗೆ ಚುನಾವಣೆ | |
| **18.** | **ಚುನಾವಣಾ ವೆಚ್ಚಗಳ ಹಾಗೂ ಅಭ್ಯರ್ಥಿಗಳ ಲೆಕ್ಕಪತ್ರಗಳ ಮೇಲ್ವಿಚಾರಣೆ** | |
| 18.1. | ಕಾನೂನು ಉಪಬಂಧಗಳು | |
| 18.2. | ತಾರಾಪ್ರಚಾರಕರ ಮೇಲೆ ಭರಿಸಲಾದ ಚುನಾವಣಾ ವೆಚ್ಚ | |
| 18.3. | ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ರಿಟರ್ನಿಂಗ್ ಅಧಿಕಾರಿಯವರ ಪಾತ್ರ | |
| 18.4. | ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಮಾತ್ರವೇ ಲೆಕ್ಕಗಳನ್ನು ಸಲ್ಲಿಸಬೇಕು | |
| 18.5. | ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿಗೆ ಸ್ಪರ್ಧೆ | |
| 18.6. | ಅಭ್ಯರ್ಥಿಗಳು ಲೆಕ್ಕಗಳನ್ನು ಸಲ್ಲಿಸಬೇಕಾಗಿರುವ ಪ್ರಾಧಿಕಾರ | |
| 18.7. | ಅಭ್ಯರ್ಥಿಗಳಿಂದ ಲೆಕ್ಕಗಳು ಮತ್ತು ಚುನಾವಣಾ ವೆಚ್ಚದ ರಿಜಿಸ್ಟರುಗಳ ನಿರ್ವಹಣೆ | |

| | | |
|---|---|---|
| 18.8. | ಅಭ್ಯರ್ಥಿಯು ತನ್ನ ಲೆಕ್ಕಪತ್ರಗಳನ್ನು ತಪಾಸಣೆಗೆ ಹಾಗೂ ಪ್ರದರ್ಶನಕ್ಕೆ ಲಭ್ಯವಾಗುವಂತೆ ಮಾಡುವುದು. | |
| 18.9. | ದರಪಟ್ಟಿಗಳನ್ನು ಸಿದ್ಧಪಡಿಸುವಿಕೆ | |
| 18.10. | ಬ್ಯಾರಿಕೇಡುಗಳು ಮತ್ತು ವೇದಿಕೆಗಳು ಮೊದಲಾದವುಗಳಿಗೆ ತಗಲುವ ಖರ್ಚು | |
| 18.11. | ಲೆಕ್ಕವನ್ನು ಸಲ್ಲಿಸುವ ವಿಧಾನ | |
| 18.12. | ಲೆಕ್ಕಗಳೊಂದಿಗೆ ಸಲ್ಲಿಸಬೇಕಾಗಿರುವ ವೋಚರ್‌ಗಳು | |
| 18.13. | ವೋಚರುಗಳಿಗೆ ಸಹಿ ಮಾಡಬೇಕು | |
| 18.14. | ಲೆಕ್ಕವನ್ನು ಸಲ್ಲಿಸಲು ಕೊನೆಯ ದಿನ | |
| 18.15. | ಚುನಾವಣಾ ದಿನದ ಅರ್ಥ | |
| 18.16. | ಲೆಕ್ಕವನ್ನು ಸ್ವೀಕರಿಸಿದ್ದರ ಕುರುಹಾಗಿ ಸ್ವೀಕೃತಿಯನ್ನು ನೀಡುವುದು | |
| 18.17. | ಲೆಕ್ಕ ಸಲ್ಲಿಕೆಯ ನೋಟೀಸು | |
| 18.18. | ಲೆಕ್ಕ ತಪಾಸಣೆ ಮತ್ತು ಪ್ರತಿಗಳು | |
| 18.19. | ಆಯೋಗಕ್ಕೆ ವರದಿ ಮಾಡುವುದು | |
| 18.20. | ಪ್ರತಿಯೊಂದು ಮತ ಕ್ಷೇತ್ರಕ್ಕೆ ಪ್ರತ್ಯೇಕ ವರದಿ | |
| 18.21. | ಲೆಕ್ಕಪತ್ರಗಳನ್ನು ತಡವಾಗಿ ಸಲ್ಲಿಸುವುದು | |
| 18.22. | ಪರಿಶೀಲನೆಯ ಸ್ವರೂಪ | |
| 18.23. | ವರದಿಯ ಪ್ರಕಟಣೆ | |
| 18.24. | ವರದಿ ಕುರಿತಂತೆ ಆಯೋಗದ ತೀರ್ಮಾನ | |
| 18.25. | ಅಭ್ಯರ್ಥಿಗಳಿಗೆ ಆಯೋಗದ ನೋಟೀಸನ್ನು ರವಾನಿಸುವುದು | |
| 18.26. | ತಪ್ಪಿತಸ್ಥ ಅಭ್ಯರ್ಥಿಯ ಮನವಿ | |
| 18.27. | ಜಿಲ್ಲಾ ಚುನಾವಣಾಧಿಕಾರಿಯ ಪೂರಕ ವರದಿ | |
| 18.28. | ಆಯೋಗದ ಅಂತಿಮ ಆದೇಶ | |
| 18.29. | ಅನರ್ಹತೆಯನ್ನು ತೆಗೆದುಹಾಕುವುದು | |
| 18.30. | ಕಾಲಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು | |
| 18.31. | ಗರಿಷ್ಠ ಚುನಾವಣಾ ವೆಚ್ಚಗಳು | |
| 18.32. | ಹಣಬಲದ ಭ್ರಷ್ಟ ಪ್ರಭಾವವನ್ನು ನಿಯಂತ್ರಣ ಮಾಡುವ ಕ್ರಮ | |
| 18.33. | ಚುನಾವಣಾ ವೀಕ್ಷಕರ ನೇಮಕಾತಿ | |
| 18.34. | ಚುನಾವಣೆಗೆ ಸ್ಪರ್ಧಿಸಿರುವ ಯಾರೇ ಅಭ್ಯರ್ಥಿಗೆ ಲೆಕ್ಕವನ್ನು ಸಲ್ಲಿಕೆಯಿಂದ ವಿನಾಯಿತಿ ನೀಡುವಂತಿಲ್ಲ | |
| 18.35. | ಸುಸಂಗತ ಕಾನೂನು ಉಪಬಂಧಗಳು | |
| **19.** | **ಇತರೆ** | |
| 19.1. | ಅನಕ್ಷರಸ್ಥ ವ್ಯಕ್ತಿಗಳಿಂದ ಸಹಿ ಪಡೆಯುವುದು | |
| 19.2. | ಕೈ ಬರಹದ, ಬೆರಳಚ್ಚಿನ, ಕೊರೆಯಚ್ಚಿನ ಅಥವಾ ಖಾಸಗಿಯಾಗಿ ಮುದ್ರಿತವಾದ ನಮೂನೆಗಳು | |
| 19.3. | ಚುನಾವಣಾ ಕಾಗದಪತ್ರಗಳ ತಯಾರಿಕೆ ಹಾಗೂ ತಪಾಸಣೆ | |
| 19.4. | ಇನ್ನಿತರ ಚುನಾವಣಾ ಕಾಗದಪತ್ರಗಳ ತಯಾರಿಕೆ ಹಾಗೂ ತಪಾಸಣೆ | |
| 19.5. | ಫಲಿತಾಂಶ ಪತ್ರಗಳು ಹಾಗೂ ಚುನಾವಣಾ ವಿವರ ಪಟ್ಟಿಕೆಗಳ ಪ್ರತಿಗಳನ್ನು ಒದಗಿಸುವುದು | |
| 19.6. | ಠೇವಣಿಯ ಮರುಪಾವತಿಗಾಗಿ ನಮೂನೆ | |

| | | |
|---|---|---|
| 19.7. | ಯಾವಾಗ ಮರುಪಾವತಿಸಬೇಕು? | |
| 19.8. | ಒಂದು ಮತಕ್ಷೇತ್ರದಲ್ಲಿ ಮಾತ್ರ ಹಿಂದಿರುಗಿಸಬಹುದಾದ ಠೇವಣಿ | |
| 19.9. | ಠೇವಣಿಯ ಮರುಪಾವತಿಗಾಗಿ ಷರತ್ತುಗಳು | |
| 19.10. | ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮರುಪಾವತಿ | |
| 19.11. | ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಷೇಧ | |
| 19.12. | ಮಕ್ಕಳ ದುಡಿಮೆ | |
| **20.** | **ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು** | |
| 20.1. | ಚುನಾವಣೆಗೆ ಯಾರು ಸ್ಪರ್ಧಿಸಬಹುದು? | |
| 20.2. | ಭದ್ರತಾ ಠೇವಣಿ | |
| 20.3. | ನಾಮನಿರ್ದೇಶನಗಳು | |
| 20.4. | ಪ್ರಮಾಣ ಅಥವಾ ದೃಢೀಕರಣ | |
| 20.5. | ಚುನಾವಣಾ ಚಿಹ್ನೆಗಳ ಹಂಚಿಕೆ | |
| 20.6. | ಚುನಾವಣಾ ಏಜೆಂಟ್ | |
| 20.7. | ಪೋಲಿಂಗ್ ಏಜೆಂಟ್ | |
| 20.8. | ಮತದಾನ ಸಿಬ್ಬಂದಿ | |
| 20.9. | ಚುನಾವಣಾ ಪ್ರಚಾರ | |
| 20.10. | ಮತದಾನದ ದಿನ | |
| 20.11. | ಸೂಕ್ಷ್ಮ ವೀಕ್ಷಕರು | |
| 20.12. | ಮತಗಳ ಎಣಿಕೆ | |
| 20.13. | ಚುನಾವಣಾ ವೆಚ್ಚ | |
| 20.14. | ವಿದ್ಯುನ್ಮಾನ ಮತಯಂತ್ರಗಳು | |
| **ಪರಿಶಿಷ್ಟ–1**- ಭಾರತದ ಸಂವಿಧಾನದಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ | | |
| **ಪರಿಶಿಷ್ಟ–2**– ಜನತಾ ಪ್ರಾತಿನಿಧ್ಯ ಅಧಿನಿಯಮ, 1950 ರಿಂದ ಆಯ್ದುಕೊಳ್ಳಲಾದ ಉದ್ಧೃತ ಭಾಗಗಳು | | |
| **ಪರಿಶಿಷ್ಟ–3**– ಭಾರತದ ಸಂವಿಧಾನದಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ | | |
| **ಪರಿಶಿಷ್ಟ–4** – ಪ್ರಮಾಣ ವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ | | |
| **ಪರಿಶಿಷ್ಟ–5** – ಅಧಿಸೂಚನೆಗಳು | | |
| **ಪರಿಶಿಷ್ಟ–6** – ನಮೂನೆ – 2ಎ– ನಾಮಪತ್ರ | | |
| **ಪರಿಶಿಷ್ಟ 7** – ನಮೂನೆ –2ಬಿ – ನಾಮಪತ್ರ | | |
| **ಪರಿಶಿಷ್ಟ 8** – ನಮೂನೆ 26 | | |
| **ಪರಿಶಿಷ್ಟ 9** – ವಿಧಾನಸಭಾ ಕ್ಷೇತ್ರಗಳಲ್ಲಿನ ರಾಜ್ಯಗಳು ಮತ್ತು ಭಾಷೆಗಳು | | |
| **ಪರಿಶಿಷ್ಟ 9ಎ** – ರಾಜ್ಯಗಳು ಮತ್ತು ಲೋಕಸಭಾ ಕ್ಷೇತ್ರದಲ್ಲಿನ ಭಾಷೆಗಳು | | |
| **ಪರಿಶಿಷ್ಟ–10** – ನಮೂನೆ – ಎ | | |
| **ಪರಿಶಿಷ್ಟ–11** – ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಮಾಡಬೇಕಾದದ್ದು ಮತ್ತು ಮಾಡದಿರುವುದು | | |
| **ಪರಿಶಿಷ್ಟ 12** – ಚುನಾವಣೆ ಘೋಷಣೆ ಆದ ದಿನಾಂಕದಿಂದ ಮತ್ತು ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗುವವರೆಗೆ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ಅನುಸರಿಸಬೇಕಾದ ಮಾರ್ಗಸೂಚಿ. | | |
| **ಪರಿಶಿಷ್ಟ 13** – ನಮೂನೆ 5– ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಸೂಚನೆ | | |

| | |
|---|---|
| **ಪರಿಶಿಷ್ಟ 14 –** ನಮೂನೆ 8 – ಚುನಾವಣಾ ಏಜೆಂಟ್‌ನ ನೇಮಕಾತಿ | |
| **ಪರಿಶಿಷ್ಟ 15 –** ನಮೂನೆ 9– ಚುನಾವಣಾ ಏಜೆಂಟನ ನೇಮಕವನ್ನು ರದ್ದುಗೊಳಿಸುವುದು | |
| **ಪರಿಶಿಷ್ಟ 16** | |
| **ಪರಿಶಿಷ್ಟ–17 –** ರಾಜಕೀಯ ಪಕ್ಷಗಳ ಮತ್ತು ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಮಾದರಿ ನೀತಿ ಸಂಹಿತೆ | |
| **ಪರಿಶಿಷ್ಟ–18 –** ಭಿತ್ತಿಪತ್ರಗಳು ಮುಂತಾದವುಗಳ ಮುದ್ರಣದ ಮೇಲೆ ನಿರ್ಬಂಧದ ಆದೇಶ | |
| **ಪರಿಶಿಷ್ಟ– 19 –** ಚುನಾವಣೆ ನಡೆಸುವ ನಿಯಮಗಳು, 1992 | |
| **ಪರಿಶಿಷ್ಟ–20 –** ನಮೂನೆ 17ಎ | |
| **ಪರಿಶಿಷ್ಟ–21 –** ನಮೂನೆ 17 ಬಿ | |
| **ಪರಿಶಿಷ್ಟ–22 –** ನಮೂನೆ 17ಸಿ | |
| **ಪರಿಶಿಷ್ಟ –23 –** ನಮೂನೆ – 10 | |
| **ಪರಿಶಿಷ್ಟ –24 –** ನಮೂನೆ – 11 | |
| **ಪರಿಶಿಷ್ಟ –25 –** ಅಭ್ಯರ್ಥಿಯ ಮತ್ತು ಅವರ ಚುನಾವಣಾ ಏಜೆಂಟರ ಮಾದರಿ ಸಹಿಗಳ ನಮೂನೆ | |
| **ಪರಿಶಿಷ್ಟ–26 –** ಪ್ರಿಸೈಡಿಂಗ್ ಅಧಿಕಾರಿರವರಿಂದ ಘೋಷಣೆ | |
| **ಪರಿಶಿಷ್ಟ –27 –** ಆಕ್ಷೇಪಿತ ಮತಗಳ ಪಟ್ಟಿ | |
| **ಪರಿಶಿಷ್ಟ–28 –** ಅಣಕು ಮತದಾನದ ಪ್ರಮಾಣಪತ್ರ | |
| **ಪರಿಶಿಷ್ಟ–29 –** ಮತ ಎಣಿಕೆಯ ದಿನಾಂಕ, ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟರುಗಳಿಗೆ ನೋಟೀಸ್ | |
| **ಪರಿಶಿಷ್ಟ–30 –** ಮತ ಎಣಿಕೆಯ ದಿನಾಂಕ, ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟರಿಗೆ ನೋಟೀಸ್ | |
| **ಪರಿಶಿಷ್ಟ –31 –** (ನಮೂನೆ) –18 – ಎಣಿಕೆಯ ಏಜೆಂಟರ ನೇಮಕಾತಿ | |
| **ಪರಿಶಿಷ್ಟ–32 –** ನಮೂನೆ 19 – ಎಣಿಕೆ ಏಜೆಂಟರ ನೇಮಕವನ್ನು ಹಿಂಪಡೆಯುವುದು | |
| **ಪರಿಶಿಷ್ಟ–33 –** ನಮೂನೆ–20 – ಅಂತಿಮ ಫಲಿತಾಂಶ ಶೀಟ್ | |
| **ಪರಿಶಿಷ್ಟ –34 –** ಭಾರತ ಸಂವಿಧಾನದಿಂದ ಉದ್ಧೃತ ಭಾಗಗಳು | |
| **ಪರಿಶಿಷ್ಟ–35 –** ಜನತಾ ಪ್ರಾತಿನಿಧ್ಯ ಅಧಿನಿಯಮ 1951 ರಿಂದ ಉದ್ಧೃತ ಭಾಗಗಳು | |
| **ಪರಿಶಿಷ್ಟ –36 –** ಚುನಾವಣೆ ನಡೆಸುವ ನಿಯಮಗಳು, 1961ರ ಉದ್ಧೃತ ಭಾಗಗಳು | |
| **ಪರಿಶಿಷ್ಟ –37 –** ಏಕಕಾಲಿಕ ಸದಸ್ಯತ್ವ ನಿಯಮಗಳು, 1950ರ ಉದ್ಧೃತ ಭಾಗ. | |
| **ಪರಿಶಿಷ್ಟ–38 –** ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಉದ್ಧೃತ ಭಾಗಗಳು | |
| **ಪರಿಶಿಷ್ಟ–39 –** ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34ನೇ ಪ್ರಕರಣದ ಮೇರೆಗೆ ಠೇವಣಿ ಮರುಪಾವತಿ ಮಾಡುವುದಕ್ಕೆ ಅರ್ಜಿ | |
| **ಪರಿಶಿಷ್ಟ –40 –** ಚುನಾವಣೆ ನಡೆಸುವ ನಿಯಮಗಳು, 1961 ರ ಉದ್ಧೃತ ಭಾಗಗಳು | |
| **ಪರಿಶಿಷ್ಟ–41 –** ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಚುನಾವಣಾ ವೆಚ್ಚದ ಬಗ್ಗೆ ಪ್ರತಿದಿನದ ಲೆಕ್ಕಗಳಿಗಾಗಿ ನಿರ್ವಹಿಸಬೇಕಾದ ರಿಜಿಸ್ಟರ್ | |
| **ಪರಿಶಿಷ್ಟ–42** | |
| **ಪರಿಶಿಷ್ಟ–43 –**ನಮೂನೆ ಸಿ–1 ಯಿಂದ ಸಿ–3 | |

# 1. ಪೀಠಿಕೆ

## 1.1. ಸಾಮಾನ್ಯ

1.1.1. ಭಾರತ ಸಂವಿಧಾನವು ಪ್ರಾತಿನಿಧಿಕ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸಿದ್ದು, ಅದರ ಅಡಿಯಲ್ಲಿ ಕಾನೂನಿನ ಮೇರೆಗೆ ನಿರ್ಧರಿಸಿರುವಂತೆ ಪ್ರಾದೇಶಿಕ ಮತಕ್ಷೇತ್ರಗಳಿಗೆ ಚುನಾವಣೆಗಳನ್ನು ನಡೆಸಲಾಗುವುದು.

1.1.2. ಅಭ್ಯರ್ಥಿಯು, ಒಂದು ಸಂಸದೀಯ ಅಥವಾ ಒಂದು ವಿಧಾನಸಭಾ ಮತಕ್ಷೇತ್ರಕ್ಕೆ ಸ್ಪರ್ಧಿಸುವುದಿದ್ದರೆ, ಚುನಾವಣೆಯ ಕಾನೂನುಗಳು ಮತ್ತು ಕಾರ್ಯವಿಧಾನಗಳ ಪ್ರಮುಖ ಉಪಬಂಧಗಳ ಬಗ್ಗೆ ತಿಳಿದಿರುವುದು ಅತ್ಯಗತ್ಯವಾಗಿದೆ. ಆಗ, ಅಭ್ಯರ್ಥಿಯು ನೀವು ಯಾವುದೇ ಅನಾನುಕೂಲ ಅಥವಾ ಕ್ಲಿಷ್ಟತೆಗಳನ್ನು ಎದುರಿಸಬೇಕಾಗುವುದಿಲ್ಲ. ಬಹುಶಃ ಅಭ್ಯರ್ಥಿಯು ಈಗಾಗಲೇ ಚುನಾವಣೆಗೆ ಸಂಬಂಧಿಸಿದ ಕಾನೂನು ಉಪಬಂಧಗಳು ಮತ್ತು ನಿಯಮಗಳನ್ನು ತಿಳಿದಿರಬಹುದು. ಆದರೂ, ಅಭ್ಯರ್ಥಿಗಳ ಅನುಕೂಲ ಮತ್ತು ಮಾರ್ಗದರ್ಶನಕ್ಕಾಗಿ, ಭಾರತ ಚುನಾವಣಾ ಆಯೋಗವು ಈ ಕೈಪಿಡಿಯನ್ನು ಹೊರತಂದಿದೆ. ಇದರಲ್ಲಿ ಲೋಕಸಭೆಯ ಅಥವಾ ವಿಧಾನಸಭೆಯ ಚುನಾವಣೆಗೆ ಸಂಬಂಧಿಸಿದಂತೆ ಹೊರಡಿಸಿರುವ (ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯನ್ನು ಹೊರತುಪಡಿಸಿ) ಪ್ರಮುಖವಾಗಿರುವ ಮತ್ತು ಅವಶ್ಯಕವಾಗಿರುವ ಕಾನೂನು, ನಿಯಮಗಳು ಮತ್ತು ಸೂಚನೆಗಳು/ನಿರ್ದೇಶನಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ.

1.1.3. ಕಾಲಕಾಲಕ್ಕೆ ವಿಶ್ವಾರ್ಹವಾಗಿ ಚುನಾವಣೆಗಳನ್ನು ನಡೆಸುತ್ತಿರುವುದು ಆಧುನಿಕ ಪ್ರಜಾಪ್ರಭುತ್ವ ಭಾರತದ ಹೆಗ್ಗುರುತಾಗಿದೆ. ಭಾರತದ ಚುನಾವಣಾ ವ್ಯವಸ್ಥೆಯು ಜಗತ್ತಿನಾದ್ಯಂತ ಪ್ರಸಿದ್ಧಿ ಹೊಂದಿದ್ದು, ಈ ಖ್ಯಾತಿಯನ್ನು ಮತ್ತಷ್ಟು ಬಲಪಡಿಸುವ ಜವಾಬ್ದಾರಿ ಚುನಾವಣೆಯಲ್ಲಿ ಸ್ಪರ್ಧಿಸುವ ಒಬ್ಬ ಅಭ್ಯರ್ಥಿಯ ಮೇಲಿದೆ. ಚುನಾವಣೆಯು ಶಾಂತಿಯುತವಾಗಿ ನಡೆದರೂ, ಚುನಾವಣಾ ಸಿಬ್ಬಂದಿ ಜಾಗರೂಕರಾಗಿಲ್ಲದಿದ್ದಲ್ಲಿ, ಚುನಾವಣಾ ಅಕ್ರಮಗಳು ನಡೆಯುವ ಸಾಧ್ಯತೆ ಇರುತ್ತದೆ. ಚುನಾವಣೆಯು ಮುಕ್ತ ಮತ್ತು ನ್ಯಾಯಯುತವಾಗಿರಬೇಕೆಂದು ಎಲ್ಲಾ ಅಭ್ಯರ್ಥಿಗಳು ಗ್ರಹಿಸಿ ಅಂಗೀಕರಿಸಿದರೆ ಮಾತ್ರ, ಚುನಾವಣೆಯು ನಿಜವಾಗಿಯೂ ಮುಕ್ತ ಮತ್ತು ನ್ಯಾಯಸಮ್ಮತವಾಗಿರುತ್ತದೆ.

1.1.4. ಕಾಲಾನುಕ್ರಮದಲ್ಲಿ, ಅದರಲ್ಲಿಯೂ ನಿರ್ದಿಷ್ಟವಾಗಿ ಇತ್ತೀಚಿನ ದಿನಗಳಲ್ಲಿ, ದೇಶದಲ್ಲಿ ಚುನಾವಣಾ ನಿರ್ವಹಣೆಯ ಮಾರ್ಗ ಮತ್ತು ವಿಧಾನಗಳಲ್ಲಿ, ತೀವ್ರತರನಾದ ಬದಲಾವಣೆಗಳು ಆಗಿವೆ. ಚುನಾವಣೆಗಳೊಂದಿಗೆ ಹೆಚ್ಚುತ್ತಿರುವ ಸಂಕೀರ್ಣತೆಗಳಿಂದಾಗಿ, ಒಂದು ಸಾಂಸ್ಥಿಕ ಜವಾಬ್ದಾರಿಯಾಗಿ ಹೆಚ್ಚು ಹೆಚ್ಚು ಅತಿ ಸೂಕ್ಷ್ಮ ವ್ಯವಸ್ಥೆಯಾಗಿ ಬದಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಭಾರತ

ಚುನಾವಣಾ ಆಯೋಗವು ಹೊರಡಿಸಿದ ಹೊಸ ಮಾರ್ಗಸೂಚಿಗಳು ಮತ್ತು ಸೂಚನೆಗಳ ಬೆಳಕಿನಲ್ಲಿ ಚುನಾವಣಾ ನಿರ್ವಹಣೆಯ ಕೆಲವು ಪ್ರಮುಖ ಲಕ್ಷಣಗಳ ರೂಪರೇಷೆಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

## 1.2. ಮಾದರಿ ನೀತಿ ಸಂಹಿತೆ:

ಮಾದರಿ ನೀತಿ ಸಂಹಿತೆಯನ್ನು, ಸ್ಪಷ್ಟವಾಗಿ ಮತ್ತು ಕಟ್ಟುನಿಟ್ಟಾಗಿ ಜಾರಿಗೊಳಿಸುವುದರಿಂದ ಚುನಾವಣೆಗಳ ವಿಶ್ವಾಸಾರ್ಹತೆ ಹೆಚ್ಚುತ್ತದೆ ಮತ್ತು ಹಿತಾಸಕ್ತಿದಾರರು ಹಾಗೂ ಮತದಾರರಲ್ಲಿ ವಿಶ್ವಾಸವನ್ನು ಹೆಚ್ಚಿಸುತ್ತದೆ. ಸಿಬ್ಬಂದಿ ವರ್ಗವನ್ನು ಚುನಾವಣಾ ಉದ್ದೇಶಗಳಿಗಾಗಿ ದುರುಪಯೋಗ ಮಾಡಿಕೊಳ್ಳುವುದಿಲ್ಲವೆಂದು ಖಾತ್ರಿಪಡಿಸಲಾಗಿದೆ. ಮತ್ತೊಬ್ಬನಂತೆ ನಟಿಸಿ ಮತ ಚಲಾವಣೆ ಮಾಡುವುದು, ಮತದಾರರಿಗೆ ಲಂಚ ನೀಡುವುದು ಮತ್ತು ಆಮಿಷಗಳನ್ನು ಒಡ್ಡುವುದು, ಮತದಾರಲ್ಲಿ ಭಯ ಮೂಡಿಸುವುದು, ಬೆದರಿಕೆ ಹಾಕುವುದು ಮುಂತಾದ ಚುನಾವಣಾ ಅಪರಾಧಗಳು, ದುರಾಚರಣೆಗಳು ಮತ್ತು ಭ್ರಷ್ಟ ಆಚರಣೆಗಳನ್ನು ಎಲ್ಲ ರೀತಿಯಲ್ಲೂ ತಡೆಗಟ್ಟಲಾಗಿದೆ ಮತ್ತು ತಡೆಗಟ್ಟಬೇಕಾಗಿದೆ ಎಂದು ಖಚಿತಪಡಿಸಬೇಕಾಗಿದೆ. ಭಾವಚಿತ್ರ ಹೊಂದಿರುವ ಮತದಾರರ ಪಟ್ಟಿಯನ್ನು ಬಳಕೆಗೆ ತಂದಿರುವುದರಿಂದ ಮತ್ತೊಬ್ಬರಂತೆ ನಟಿಸಿ ಮತ ಚಲಾವಣೆ ಮಾಡುವಂಥ ಅಕ್ರಮಗಳನ್ನು ಕಡಿಮೆ ಮಾಡಲು ಸಹಾಯಕವಾಗಿದೆ.

## 1.3. ಪೋಲಿಂಗ್ ಏಜೆಂಟರುಗಳು

1.3.1. ಅಭ್ಯರ್ಥಿಯು ನೇಮಕ ಮಾಡುವ ಪೋಲಿಂಗ್ ಏಜೆಂಟನು ಅದೇ ಮತಗಟ್ಟೆಯ ಒಬ್ಬ ಮತದಾರನಾಗಿರಬೇಕು. ಪೋಲಿಂಗ್ ಏಜೆಂಟ್‌ನ ನೇಮಕಾತಿಯ ಉದ್ದೇಶವೆಂದರೆ ಮತಗಟ್ಟೆಯಲ್ಲಿ ನಡೆಯುವ ಚುನಾವಣಾ ಪ್ರಕ್ರಿಯೆಯಲ್ಲಿ ಬಾಹ್ಯ ಹಸ್ತಕ್ಷೇಪವನ್ನು ಕಡಿಮೆಗೊಳಿಸುವುದಾಗಿದೆ. ಅಂಥ ಪೋಲಿಂಗ್ ಏಜೆಂಟ್‌ಗಳು, ಆಯಾ ಮತಗಟ್ಟೆ ಪ್ರದೇಶದ ಸಾಮಾನ್ಯ ನಿವಾಸಿಯಾಗಿರಬೇಕು ಮತ್ತು ಸಂಬಂಧಪಟ್ಟ ಮತಗಟ್ಟೆ ಇರುವ ಅಥವಾ ನೆರೆಹೊರೆ ಮತಗಟ್ಟೆ ಇರುವ ಪ್ರದೇಶದ ಮತದಾರನಾಗಿರಬೇಕು. ಪೋಲಿಂಗ್ ಏಜೆಂಟನು ಇಆರ್‌ಓ/ ಬಿಎಲ್‌ಓ ರವರು ನೀಡಿದ ಮತದಾರರ ಗುರುತಿನ ಚೀಟಿಯನ್ನು ಅಥವಾ ಆಯೋಗವು ಗೊತ್ತುಪಡಿಸಿದ ಇತರ ಯಾವುದೇ ಬದಲಿ ಗುರುತಿನ ಚೀಟಿಯನ್ನು ಹೊಂದಿರುವುದು ಅಗತ್ಯ. ಯಾವುದೇ ವಲಯದ ಮ್ಯಾಜಿಸ್ಟ್ರೇಟರು ಪೋಲಿಂಗ್ ಏಜೆಂಟ್‌ನನ್ನು ಗುರುತಿನ ಚೀಟಿ ಹಾಜರು ಪಡಿಸುವಂತೆ ಕೇಳಿದಾಗ, ಆತನು

ಆಯೋಗವು ಗೊತ್ತುಪಡಿಸಿದ ಮತದಾರರ ಗುರುತಿನ ಭಾವಚಿತ್ರ, ಯಾವುದಾದರೂ ಇತರೆ ಬದಲಿ ಗುರುತಿನ ಚೀಟಿಯನ್ನು ಹಾಜರುಪಡಿಸಬೇಕು.

## 1.4. ಭಯ/ಬೆದರಿಕೆಗೆ ಗುರಿಯಾಗುವ ಸಾಧ್ಯತೆ ಇರುವ ಪ್ರದೇಶಗಳ ನಕ್ಷೆ ಸಿದ್ಧಪಡಿಸುವುದು

1.4.1. ದೇಶದ ಕೆಲವು ಭಾಗಗಳಲ್ಲಿ ಮತದಾರರಿಗೆ, ಅದರಲ್ಲೂ ನಿರ್ದಿಷ್ಟವಾಗಿ ದುರ್ಬಲ ವರ್ಗಗಳಿಗೆ ಸೇರಿದ ಮತದಾರರಿಗೆ ಭಯ ಮೂಡಿಸುವ ಮತ್ತು ಬೆದರಿಕೆ ಹಾಕುವ ಕೃತ್ಯಗಳು ಚಿಂತೆಗೆ ಕಾರಣವಾಗಿವೆ. ಈ ಸವಾಲನ್ನು ಎದುರಿಸುವ ದೃಷ್ಟಿಯಿಂದ, 'ಭಯ/ಬೆದರಿಕೆಗೆ ಗುರಿಯಾಗುವ ಸಂಭವವಿರುವ ಪ್ರದೇಶಗಳ ನಕ್ಷೆಯನ್ನು ಸಿದ್ಧಪಡಿಸುವ' ವ್ಯವಸ್ಥೆಯನ್ನು ಆಯೋಗವು ಇತ್ತೀಚೆಗೆ ಜಾರಿಗೊಳಿಸಿದೆ. ಕಾನೂನು ಮತ್ತು ಸುವ್ಯವಸ್ಥೆಯ ದೃಷ್ಟಿಯಿಂದ ಅನುಕೂಲಕರವಾದ ವಾತಾವರಣ ಇದ್ದಾಗ ಮಾತ್ರ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯನ್ನು ನಡೆಸಲು ಸಾಧ್ಯ. ಚುನಾವಣೆಯ ಸಮೀಪದ ದಿನಗಳಲ್ಲಿ ಮತ್ತು ಮತದಾನದ ದಿನದಂದು ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಯ ಬಗ್ಗೆ ನಿಗಾ ವಹಿಸುವುದು ಅತ್ಯಂತ ಅವಶ್ಯಕ.

## 1.5. ಬ್ಯಾಂಕ್ ಖಾತೆ

1.5.1. ಚುನಾವಣಾ ವೆಚ್ಚಕ್ಕಾಗಿ ಪ್ರತಿಯೊಬ್ಬ ಅಭ್ಯರ್ಥಿಯು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಬೇಕು: ಚುನಾವಣಾ ವೆಚ್ಚವನ್ನು ಮೇಲ್ವಿಚಾರಣೆ ಮಾಡುವುದಕ್ಕೆ ಅನುಕೂಲವಾಗುವಂತೆ ಪ್ರತಿ ಅಭ್ಯರ್ಥಿಯು ಚುನಾವಣಾ ವೆಚ್ಚದ ಉದ್ದೇಶಕ್ಕಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು ಅಗತ್ಯ. ಇದನ್ನು ಅಭ್ಯರ್ಥಿಯು ತನ್ನ ನಾಮಪತ್ರಗಳನ್ನು ಸಲ್ಲಿಸುವ ಒಂದು ದಿನದ ಮೊದಲು ತೆರೆಯಬೇಕು.

1.5.2. ಅಭ್ಯರ್ಥಿಯು ಬ್ಯಾಂಕ್ ಖಾತೆಯ ಸಂಖ್ಯೆಯನ್ನು ತನ್ನ ನಾಮಪತ್ರ ಸಲ್ಲಿಸುವ ಸಮಯದಲ್ಲಿ ರಿಟರ್ನಿಂಗ್ ಅಧಿಕಾರಿಗೆ ತಿಳಿಸಬೇಕು. ಚುನಾವಣೆಗೆ ಸಂಬಂಧಿಸಿದ ಎಲ್ಲಾ ವೆಚ್ಚಗಳನ್ನು ಅಭ್ಯರ್ಥಿಯು ಇದೇ ಖಾತೆಯಿಂದಲೇ ಮಾಡಬೇಕು. ಅಭ್ಯರ್ಥಿಯ ಸ್ವಂತ ಹಣವೂ ಸೇರಿದಂತೆ, ಯಾವ ಮೂಲಗಳಿಂದಲೇ ಬಂದಿರಲಿ, ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಚುನಾವಣೆಗೆ ಖರ್ಚು ಮಾಡುವ ಎಲ್ಲಾ ಹಣವನ್ನು ಈ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಡತಕ್ಕದ್ದು.

## 1.6. ವಿದ್ಯುನ್ಮಾನ ಮತಯಂತ್ರ ಮತ್ತು ವಿ.ವಿ.ಪಿ.ಎ.ಟಿ (EVM and VVPAT)

1.6.1. 2004ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಲ್ಲ ಮತಗಟ್ಟೆಗಳಲ್ಲಿ ಸಾರ್ವತ್ರಿಕವಾಗಿ ವಿದ್ಯುನ್ಮಾನ ಮತಯಂತ್ರವನ್ನು ಬಳಸಲಾಯಿತು. ನಾಗಾಲ್ಯಾಂಡ್‌ನಲ್ಲಿ ನಡೆದ 51 –ನೋಕೇನ್ಸ್ (ST)

ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮೊಟ್ಟಮೊದಲ ಬಾರಿಗೆ ಇವಿಎಂನೊಂದಿಗೆ ವಿ.ವಿ.ಪಿ.ಎ.ಟಿ. ಯನ್ನು ಬಳಸಲಾಯಿತು. ಆದಾಗ್ಯೂ, ವಿದ್ಯುನ್ಮಾನ ಮತಯಂತ್ರ ಮತ್ತು ವಿ.ವಿ.ಪಿ.ಎ.ಟಿ ಬಗ್ಗೆ ಮತದಾರರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದ ಬಗ್ಗೆ ಉಪೇಕ್ಷಿಸಲಾಗದು. ಇವಿಎಂ ಮತ್ತು ವಿ.ವಿ.ಪಿ.ಎ.ಟಿ ಬಗ್ಗೆ ಎಲ್ಲ ಮತದಾರರಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ದೂರದ ಪ್ರದೇಶಗಳ ಜನರಲ್ಲಿ ಮತ್ತು ಹೊಸ ಮತದಾರರಲ್ಲಿ ಜಾಗೃತಿಯನ್ನು ಮೂಡಿಸುವುದು ಆಯೋಗದ ಪ್ರಯತ್ನವಾಗಿದೆ. ಆಯೋಗವು ಮತಗಟ್ಟೆಗಳಿಗೆ ಇವಿಎಂ ಮತ್ತು ವಿ.ವಿ.ಪಿ.ಎ.ಟಿ ಗಳನ್ನು ಹಂಚಿಕೆ ಮಾಡುವುದಕ್ಕಾಗಿ ಇವಿಎಂ ಮತ್ತು ವಿ.ವಿ.ಪಿ.ಎ.ಟಿ.ಗಳ ಯಾದೃಚ್ಛೀಕರಣ ವ್ಯವಸ್ಥೆಯನ್ನು ಜಾರಿಗೊಳಿಸಿದೆ ಮತ್ತು ಈ ಸಂಬಂಧದಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ನಿರ್ದಿಷ್ಟ ಜವಾಬ್ದಾರಿಯನ್ನು ವಹಿಸಿದೆ. ಈ ಪದ್ಧತಿಯಲ್ಲಿ ಇವಿಎಂ ಮತ್ತು ವಿ.ವಿ.ಪಿ.ಎ.ಟಿ.ಗಳ ಮೊದಲ ಹಂತದ ತಪಾಸಣೆಯನ್ನು, ಸಂದರ್ಭಾನುಸಾರ, ಬಿಇಎಲ್/ಇಸಿಐಎಲ್ ಸಂಸ್ಥೆಗಳ ಇಂಜಿನಿಯರುಗಳು ಜಿಲ್ಲಾ ಕೇಂದ್ರಗಳಲ್ಲಿ ಮಾಡುತ್ತಾರೆ. ಈ ಹಂತದಲ್ಲಿ, ವಿಧಾನಸಭಾ ಮತಕ್ಷೇತ್ರಗಳಿಗೆ ವಿತರಿಸುವುದಕ್ಕಾಗಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮಕ್ಷಮದಲ್ಲಿ ಇವಿಎಂ ಮತ್ತು ವಿ.ವಿ.ಪಿ.ಎ.ಟಿ. ಗಳ ಯಾದೃಚ್ಛೀಕರಣವನ್ನು ಮಾಡಲಾಗುತ್ತದೆ. ನಿರ್ದಿಷ್ಟ ಮತಗಟ್ಟೆಗಳಿಗೆ ಹಂಚಿಕೆ ಮಾಡುವುದಕ್ಕಾಗಿ ಇವಿಎಂ ಮತ್ತು ವಿ.ವಿ.ಪಿ.ಎ.ಟಿ.ಗಳ ಎರಡನೇ ಯಾದೃಚ್ಛೀಕರಣವನ್ನು ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟ್‌ನ ಅಥವಾ ಅಭ್ಯರ್ಥಿಯ ಅಧಿಕೃತ ಪ್ರತಿನಿಧಿಯ ಮತ್ತು ಚುನಾವಣಾ ಆಯೋಗದ ವೀಕ್ಷಕರ ಸಮ್ಮುಖದಲ್ಲಿ ಮಾಡಲಾಗುವುದು.

1.6.2. ವಿ.ವಿ.ಪಿ.ಎ.ಟಿ ಯನ್ನು ಮತದಾರರು ತಾವು ಯಾರಿಗೆ ಮತ ಚಲಾಯಿಸಿದ್ದಾರೋ ಅಂಥ ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಮತ್ತು ಚುನಾವಣಾ ಚಿಹ್ನೆಯನ್ನು ತೋರಿಸಿ ನಂತರ ಮುದ್ರಿತ ಕಾಗದದ ಸ್ಲಿಪ್ ಕಟ್ ಆಗಿ ವಿ.ವಿ.ಪಿ.ಎ.ಟಿ ಪೆಟ್ಟಿಗೆಯೊಳಗೆ ಬೀಳುತ್ತದೆ. ಇದರಿಂದ ಅಭ್ಯರ್ಥಿಯು ಪಾರದರ್ಶಕ ವಿ.ವಿ.ಪಿ.ಎ.ಟಿ ವಿಂಡೋ ಮೂಲಕ ತಾನು ಯಾರಿಗೆ ಮತ ಚಲಾಯಿಸಿದ್ದೇನೆಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ.

## 1.7. ಮೇಲಿನ ಯಾರಿಗೂ ಅಲ್ಲ (NOTA)

1.7.1. ಮೇಲಿನ ಯಾರಿಗೂ ಅಲ್ಲ (NOTA)ವು ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಮತ ಚಲಾಯಿಸುವುದಿಲ್ಲವೆಂಬ ಮತದಾರನ ಅಭಿಪ್ರಾಯಕ್ಕೆ ನೀಡಿದ ಅವಕಾಶವಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ: 2004ರ 161, ದಿನಾಂಕ: 27.09.2013ರ

ತನ್ನ ತೀರ್ಪಿನಲ್ಲಿ ಆಯೋಗವು NOTA ಆಯ್ಕೆಗಾಗಿ ಮತಪತ್ರ/ ಇವಿಎಂಗಳಲ್ಲಿ ಅಗತ್ಯ ಅವಕಾಶವನ್ನು ಕಲ್ಪಿಸಬೇಕು. ಇದರಿಂದ, ಮತದಾರರು ಯಾರೇ ಅಭ್ಯರ್ಥಿಗೆ ಮತ ಚಲಾಯಿಸಲು ಅಪೇಕ್ಷಿಸದ ತಮ್ಮ ತೀರ್ಮಾನದ ರಹಸ್ಯದ ಉಲ್ಲಂಘನೆಯಲ್ಲದೆ ಯಾರೇ ಅಭ್ಯರ್ಥಿಗೆ ಮತ ಚಲಾಯಿಸದಿರುವ ತಮ್ಮ ಆಯ್ಕೆಯನ್ನು ಚಲಾಯಿಸಬಹುದು. ಮತಪತ್ರದಲ್ಲಿ ಕೊನೆಯ ಅಭ್ಯರ್ಥಿಯ ಹೆಸರು ಮತ್ತು ವಿವರಗಳನ್ನು ಒಳಗೊಂಡ ಪ್ಯಾನೆಲ್‌ನ ನಂತರ NOTA ಇರುತ್ತದೆ. ಯಾರೇ ಅಭ್ಯರ್ಥಿಗೆ ಮತ ಚಲಾಯಿಸಲು ಬಯಸದ ಮತದಾರರು, ತಮ್ಮ ತೀರ್ಮಾನದ ಗೌಪ್ಯತೆ ಉಲ್ಲಂಘನೆಯಾಗದಂತೆ ಯಾರೇ ಅಭ್ಯರ್ಥಿಗೆ ಮತ ಚಲಾಯಿಸದ ತನ್ನ ಹಕ್ಕನ್ನು ಚಲಾಯಿಸಬಹುದು. ಉದಾಹರಣೆಗೆ: ಒಂದು ಚುನಾವಣೆಯಲ್ಲಿ, 15 ಜನ ಅಭ್ಯರ್ಥಿಗಳಿದ್ದರೆ, 16ನೇ ಪ್ಯಾನೆಲ್‌ನಲ್ಲಿ NOTA ಸಂಕೇತದೊಂದಿಗೆ 'ಮೇಲಿನ ಯಾರಿಗೂ ಅಲ್ಲ' ಎಂದು ಬರೆದ ಪದಗಳಿದ್ದು, 16ನೇ ಪ್ಯಾನೆಲ್ ಪಕ್ಕದ್ದಲ್ಲಿ ಮತದಾನದ ಬಟನ್ ಸಹ ಇರುತ್ತದೆ.

## 1.8. **ಅಂಚೆ ಮತ ಪತ್ರಗಳು** (Postal Ballot Papers)

1.8.1. ಇತ್ತೀಚಿನ ಚುನಾವಣೆಗಳಲ್ಲಿ ಅಂಚೆ ಮತಪತ್ರಗಳಿಗೆ ಸಂಬಂಧಿಸಿದಂತೆ ಆಯೋಗವು ಹೊಸ ಸೂಚನೆಗಳನ್ನು ಹೊರಡಿಸಿದೆ. ಈ ಹೊಸ ವ್ಯವಸ್ಥೆಯು ಅಂಚೆ ಮತಪತ್ರಗಳನ್ನು ಅರ್ಹ ಮತದಾರರಿಗೆ ರವಾನಿಸುವಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಮತ್ತು ಮತಪತ್ರಗಳನ್ನು ಅವರಿಗೆ ತಲುಪಿಸುವಲ್ಲಿ ಮತ್ತು ಮತದಾರರಿಂದ ಮರಳಿ ಮತಪತ್ರಗಳನ್ನು ಸ್ವೀಕರಿಸುವಲ್ಲಿ ಆಗುವ ಹೆಚ್ಚಿನ ಅಂಚೆ ವಿಳಂಬವನ್ನು ತಪ್ಪಿಸಲು ಅಂಚೆ ಮತಪತ್ರಗಳನ್ನು ನಿರ್ವಹಿಸುವಲ್ಲಿ ರಿಟರ್ನಿಂಗ್ ಅಧಿಕಾರಿಗಳು ಹೆಚ್ಚಿನ ಕಾಳಜಿ ವಹಿಸಿ ತೊಡಗಿಕೊಳ್ಳಬೇಕೆಂದು ಅಪೇಕ್ಷಿಸುತ್ತದೆ. ಈ ಹೊಸ ಪದ್ಧತಿಯನ್ನು ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿ ಮಾಡುವಲ್ಲಿ ಅಭ್ಯರ್ಥಿಗಳಿಗೆ ಮತ್ತು ಅವರ ಚುನಾವಣಾ ಏಜೆಂಟರಿಗೆ ಕೆಲವು ಜವಾಬ್ದಾರಿಗಳಿವೆ. ದಿನಾಂಕ: 21.10.2016ರ ಅಧಿಸೂಚನೆಯ ಮೂಲಕ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ಕ್ಕೆ ತಿದ್ದುಪಡಿಯನ್ನು ಮಾಡುವ ಮೂಲಕ, 18ನೇ ನಿಯಮದ (3)ನೇ ಖಂಡದ (ii) ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಲಾದ (ಸೇವಾ ಮತದಾರರು) ವ್ಯಕ್ತಿಗಳಿಗೆ, ಭಾರತದ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂತಹ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ರಿಟರ್ನಿಂಗ್ ಅಧಿಕಾರಿಯು ಸೇವಾ ಮತದಾರರಿಗೆ ಅಂಚೆ ಮತಪತ್ರಗಳನ್ನು ರವಾನಿಸಬಹುದು. ಅಂಚೆ ಮತಪತ್ರಗಳನ್ನು

ವಿದ್ಯುನ್ಮಾನ ಸಾಧನಗಳ ಮೂಲಕ ರವಾನಿಸಿದಾಗ, ಈ ನಿಯಮದ ಮತ್ತು 22, 24 ಮತ್ತು 27ನೇ ನಿಯಮದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

## 1.9. ಹಣಬಲವನ್ನು ನಿಗ್ರಹಿಸುವುದು

1.9.1. ಸ್ಪರ್ಧೆಯ ಸಮಾನ ಅವಕಾಶವನ್ನು ವಿಫಲಗೊಳಿಸುವಂಥ ಹಣಬಲವನ್ನು ನಿಗ್ರಹಿಸುವುದು ನ್ಯಾಯಸಮ್ಮತ ಚುನಾವಣೆಯ ಬಹುಮುಖ್ಯವಾದ ಪೂರ್ವಷರತ್ತಾಗಿದೆ. ಇದನ್ನು ಅಭ್ಯರ್ಥಿಗಳು/ ರಾಜಕೀಯ ಪಕ್ಷಗಳು ಮಾಡುವ ಚುನಾವಣಾ ವೆಚ್ಚದ ಮೇಲೆ ನಿಗಾ ಇಡುವುದರಿಂದ ಮಾತ್ರ ಸಾಧಿಸಬಹುದಾಗಿದೆ. ವಾಹನಗಳ ಮೂಲಕ ಪ್ರಚಾರ ಮಾಡುವಾಗ ಮತ್ತು ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಪಾಸ್ತಿಗಳನ್ನು ವಿರೂಪಗೊಳಿಸದೆ ಇರುವುದರ ಸಂಬಂಧದಲ್ಲಿನ ಸೂಚನೆಗಳೂ ಸೇರಿದಂತೆ ಚುನಾವಣಾ ಆಯೋಗವು ತನ್ನ ಹಲವಾರು ಸೂಚನೆಗಳ ಅನುಷ್ಠಾನಕ್ಕಾಗಿ ಚುನಾವಣಾ ವ್ಯವಸ್ಥೆಯೊಂದಿಗೆ ನಿಮ್ಮ ಸಹಕಾರವನ್ನು ನಿರೀಕ್ಷಿಸುತ್ತದೆ.

## 1.10. ಸೂಕ್ಷ್ಮ ವೀಕ್ಷಕರು (Micro observers)

1.10.1. ಆಯೋಗದ ವೀಕ್ಷಕರ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ನೇರವಾಗಿ ಕಾರ್ಯನಿರ್ವಹಿಸುವಂಥ ಮತಗಟ್ಟೆ ಮಟ್ಟದ ಸೂಕ್ಷ್ಮ ವೀಕ್ಷಕರನ್ನು ನೇಮಕ ಮಾಡುವ ವ್ಯವಸ್ಥೆಯನ್ನು ಆಯೋಗವು ಜಾರಿಗೊಳಿಸಿದೆ. ಒಂದು ಸಾಮಾಜಿಕ ವರ್ಗವು ಮತ್ತೊಂದು ಸಾಮಾಜಿಕ ದುರ್ಬಲ ವರ್ಗದ ಮೇಲೆ ಆಧಿಪತ್ಯ ಸ್ಥಾಪಿಸಿ ಮತದಾರರನ್ನು ಭಯ/ ಬೆದರಿಕೆಗೆ ಗುರಿಯಾಗಿಸುವುದು, ಮತಗಟ್ಟೆ ಪ್ರದೇಶವನ್ನು ತಲುಪಲು ಸಾಧ್ಯವಾಗದಿರುವುದು, ಎಪಿಕ್ ಲಭ್ಯವಿಲ್ಲದಿರುವುದು, ಹಿಂಸೆ ನಡೆದಿರುವ ಬಗ್ಗೆ ಪೂರ್ವ ಇತಿಹಾಸ, ಮುಂತಾದ ವಿವಿಧ ಸಂಗತಿಗಳ ಆಧಾರದ ಮೇಲೆ ಮತಗಟ್ಟೆಗಳಲ್ಲಿ ಸೂಕ್ಷ್ಮ ವೀಕ್ಷಕರನ್ನು ನಿಯೋಜಿಸಲಾಗುವುದು.

## 1.11. ವಲಯ ಅಧಿಕಾರಿ

1.11.1 ಜಿಲ್ಲಾ ಚುನಾವಣಾಧಿಕಾರಿಯು ಪ್ರತಿ ಚುನಾವಣಾ ಕ್ಷೇತ್ರಕ್ಕೆ ಸಾಕಷ್ಟು ಸಂಖ್ಯೆಯ ವಲಯ ಅಧಿಕಾರಿಗಳನ್ನು ನೇಮಿಸಬೇಕು. ಒಬ್ಬ ವಲಯ ಅಧಿಕಾರಿಯು 10–12 ಮತಗಟ್ಟೆಗಳ ಮೇಲ್ವಿಚಾರಣೆ ಮಾಡಬೇಕು. ಅವರು, ತಮಗೆ ವಹಿಸಿದ ಎಲ್ಲಾ ಮತಗಟ್ಟೆಗಳಲ್ಲಿ ಚುನಾವಣಾ ಪ್ರಕ್ರಿಯೆಯ ಸಮನ್ವಯತೆಯನ್ನು ನೋಡಿಕೊಳ್ಳುವರು.

## 1.12. ವಿಷಮ ಸನ್ನಿವೇಷಗಳ (Critical Events) ವೀಡಿಯೋ ಚಿತ್ರೀಕರಣ

1.12.1. ಮತದಾರರ ಸಂಖ್ಯೆ, ಮತಕ್ಷೇತ್ರದ ವ್ಯಾಪ್ತಿ, ಸೂಕ್ಷ್ಮ ಮತಗಟ್ಟೆಗಳ ಸಂಖ್ಯೆ, ಮತಗಟ್ಟೆಗಳನ್ನು ವಶಪಡಿಸಿಕೊಂಡ ಹಾಗೂ ಇತರ ದುರಾಚರಣೆಗಳಿಗೆ ಸಂಬಂಧಿಸಿದ ಹಿಂದಿನ ಇತಿಹಾಸ ಮುಂತಾದ ಅಂಶಗಳನ್ನು, ಸಾಮಾನ್ಯ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ, ಭ್ರಷ್ಟಾಚಾರಗಳನ್ನು ಮತ್ತು ಚುನಾವಣಾ ಅಪರಾಧಗಳನ್ನು ಮಾಡುವ ಸಂಭವ ಮುಂತಾದ ಸಂಬಂಧಪಟ್ಟ ಘಟನೆಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮತ್ತು ಮತದಾನದ ದಿನದಂದು ವಿಷಮ ಸನ್ನಿವೇಷಗಳ (Critical Events) ವೀಡಿಯೋ ಚಿತ್ರೀಕರಣ ಮಾಡಲಾಗುವುದು ಮತ್ತು ವೀಡಿಯೋ ಚಿತ್ರೀಕರಣವನ್ನು ವಿಶ್ಲೇಷಿಸಿದ ತರುವಾಯ, ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು.

## 1.13. ಕೇಂದ್ರ ಪೊಲೀಸ್ ದಳಗಳು (CPF)

1.13.1. ಚುನಾವಣೆಯು ನಡೆಯುವ ರಾಜ್ಯಗಳಿಗೆ, ವಾಸ್ತವಿಕ ಅವಶ್ಯಕತೆಯ ಮಾಪನದ ಆಧಾರದ ಮೇಲೆ ಗಣನೀಯ ಸಂಖ್ಯೆಯ ಕೇಂದ್ರ ಪೊಲೀಸ್ ದಳವನ್ನು ಆಯೋಗವು ನಿಯೋಜಿಸುತ್ತದೆ.

## 1.14. ಮತದಾರರ ಸಹಾಯ ಕೇಂದ್ರ

1.14.1. ಮೂರು ಅಥವಾ ಅದಕ್ಕಿಂತ ಹೆಚ್ಚಿನ ಮತಗಟ್ಟೆಗಳು ಇರುವಂಥ ಆವರಣದಲ್ಲಿ/ಕಟ್ಟಡದಲ್ಲಿ ಮತದಾನದ ದಿನದಂದು, ಮತದಾರರು ತಮ್ಮ ಮತಗಟ್ಟೆಯನ್ನು ಗುರುತಿಸಲು ಹಾಗೂ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಗುರುತಿಸಿಕೊಳ್ಳಲು ಸಹಾಯ ಮಾಡುವ ಸಲುವಾಗಿ ಒಂದು ಸಿಬ್ಬಂದಿ ತಂಡವು ಕಾರ್ಯನಿರ್ವಹಿಸುವ "ಮತದಾರರ ಸಹಾಯ ಕೇಂದ್ರ"ವನ್ನು ಸಹ ಸ್ಥಾಪಿಸಲಾಗುತ್ತದೆ. ಮತದಾರರ ಪಟ್ಟಿಯಲ್ಲಿ ಅವರ ಕ್ರಮಸಂಖ್ಯೆ ಮತ್ತು ಮತಗಟ್ಟೆ ಹೆಸರು, ಇವುಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವಲ್ಲಿ ಮತದಾರನಿಗೆ ನೆರವಾಗಲು ಈ ಕೇಂದ್ರದಲ್ಲಿ, ಸಂಬಂಧಪಟ್ಟ ಪ್ರತಿಯೊಂದು ಮತಗಟ್ಟೆಗಳ ಅಕ್ಷರಾನುಕ್ರಮವಾಗಿ ತಯಾರಿಸಲ್ಪಟ್ಟ ಭಾಗವಾರು ಮತದಾರರ ಪಟ್ಟಿಯನ್ನು ಇಡಲಾಗುವುದು.

## 1.15. ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಓ)

1.15.1. ಬಿಎಲ್‌ಓ ಸಾಮಾನ್ಯವಾಗಿ ಅದೇ ಮತಗಟ್ಟೆಯ ಮತದಾರನಾಗಿದ್ದು ಸ್ಥಳೀಯ ಮತದಾರರಿಗೆ ಪರಿಚಿತನಾದ ಸ್ಥಳೀಯ ಸರ್ಕಾರಿ/ ಅರೆಸರ್ಕಾರಿ ಅಧಿಕಾರಿಯಾಗಿರುತ್ತಾನೆ. ಅವನು ತನಗೆ

ತಿಳಿದಿರುವ ಸ್ಥಳೀಯ ಮಾಹಿತಿಯ ಆಧಾರದ ಮೇಲೆ ಮತದಾರರ ಪಟ್ಟಿಯನ್ನು ಪರಿಷ್ಕರಿಸುತ್ತಾನೆ. ವಾಸ್ತವವಾಗಿ ಬಿಎಲ್‌ಓ ತನಗೆ ವಹಿಸಿದ ಮತಪ್ರದೇಶಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತ್ತು ವಾಸ್ತವಿಕ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಅತ್ಯಂತ ಕೆಳಹಂತದ ಭಾರತ ಚುನಾವಣಾ ಆಯೋಗದ ಪ್ರತಿನಿಧಿಯಾಗಿದ್ದಾನೆ. ಬಿಎಲ್‌ಓ ಪೂರ್ಣಪ್ರಮಾಣದ ಚುನಾವಣಾ ಸಿಬ್ಬಂದಿಯಲ್ಲದಿದ್ದರೂ, ಆತ ಜವಾಬ್ದಾರಿಯುತ ನಾಗರಿಕ ಕರ್ತವ್ಯವನ್ನು ಸಲ್ಲಿಸುತ್ತಿರುವ, ಬಿಎಲ್‌ಓನ ಜವಾಬ್ದಾರಿಯಿಂದಾಗಿ, ಆತನ ಸೇವೆ ಅಗತ್ಯವಾಗಿರುತ್ತದೆ. ಚುನಾವಣೆಗೆ ಸಂಬಂಧಿಸಿದಂತೆ ಆತ ಸ್ಥಳೀಯ ಜನರ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕನಾಗಿರುತ್ತಾನೆ. ಪ್ರತಿಯೊಬ್ಬ ಬಿಎಲ್‌ಓನು ತನ್ನ ಮೇಲ್ವಿಚಾರಣೆಯಲ್ಲಿ ಒಂದು/ ಎರಡು ಮತಗಟ್ಟೆಗಳನ್ನು ಹೊಂದಿರುತ್ತಾನೆ.

## 1.16. ಪಾರದರ್ಶಕತೆ

1.16.1. ಪರಿಣಾಮಕಾರಿ ಮತ್ತು ದಕ್ಷ ಚುನಾವಣಾ ನಿರ್ವಹಣೆಗಾಗಿ ಪಾರದರ್ಶಕತೆ ಮೂಲಮಂತ್ರವಾಗಿದ್ದು, ಈ ಪಾರದರ್ಶಕತೆಯು ಚುನಾವಣೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು. ಚುನಾವಣಾ ವ್ಯವಸ್ಥೆಯು ಪಾರದರ್ಶಕವಾಗಿರಬೇಕು ಮತ್ತು ಚುನಾವಣಾ ನಿರ್ವಹಣೆಯಲ್ಲಿ ತೊಡಗಿರುವ ಯಾರೇ ಸಿಬ್ಬಂದಿಯು ಪಕ್ಷಪಾತ ಮಾಡುತ್ತಿದ್ದಾರೆಂಬ ಯಾವುದೇ ದೂರುಗಳಿಗೆ ಆಸ್ಪದವಿರಬಾರದೆಂದು ಆಯೋಗವು ಬಯಸುತ್ತದೆ. ಯಾವುದೇ ಚುನಾವಣಾ ಸಿಬ್ಬಂದಿಯು ಚುನಾವಣಾ ಕಾರ್ಯಗಳಲ್ಲಿ ಪಕ್ಷಪಾತ ಮಾಡುವುದನ್ನು ಆಯೋಗವು ಗಂಭೀರವಾಗಿ ಪರಿಗಣಿಸುತ್ತದೆ. ಆದುದರಿಂದ ಈ ಸಂಬಂಧದಲ್ಲಿ ಆಯೋಗವು ಕಾಲಕಾಲಕ್ಕೆ ರಾಜಕೀಯ ಪಕ್ಷಗಳಿಗೆ ಮತ್ತು ಅಭ್ಯರ್ಥಿಗಳಿಗೆ ಹೊರಡಿಸಿದ ಸೂಚನೆಗಳ ಬಗ್ಗೆ ತಿಳಿಸುತ್ತದೆ.

## 1.17. ಕ್ಷೇತ್ರಗಳ ಪುನರ್‌–ವಿಂಗಡಣೆ ಮತ್ತು ವಿಸ್ತೀರ್ಣ

1.17.1. ಚುನಾವಣೆಯಲ್ಲಿ ಅಭ್ಯರ್ಥಿಯು ಸ್ಪರ್ಧಿಸುತ್ತಿರುವ ಅಥವಾ ಸ್ಪರ್ಧಿಸಲು ಉದ್ದೇಶಿಸಿರುವ ಮತಕ್ಷೇತ್ರದ ನಿಖರವಾದ ವ್ಯಾಪ್ತಿಯನ್ನು ತಿಳಿದಿರುವುದು ಬಹಳ ಮುಖ್ಯ. ಎಲ್ಲ ರಾಜ್ಯಗಳಲ್ಲಿನ ಸಂಸತ್‌ ಮತ್ತು ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯನ್ನು (ಅರುಣಾಚಲ ಪ್ರದೇಶ, ಅಸ್ಸಾಂ, ಜಮ್ಮು ಮತ್ತು ಕಾಶ್ಮೀರ, ಝಾರ್ಖಂಡ್‌, ಮಣಿಪುರ ಮತ್ತು ನಾಗಾಲ್ಯಾಂಡ್‌ ಇವುಗಳನ್ನು ಹೊರತುಪಡಿಸಿ) ಕ್ಷೇತ್ರಗಳ ಪುನರ್‌–ವಿಂಗಡಣಾ ಅಧಿನಿಯಮ, 2002ರ ಅಡಿಯಲ್ಲಿ ರಚಿಸಲಾದ ಕ್ಷೇತ್ರ ಪುನರ್‌–

ವಿಂಗಡಣಾ ಆಯೋಗವು ಪುನರ್‌ನಿಗದಿ ಪಡಿಸಿದೆ. ಅಭ್ಯರ್ಥಿಯ ಮತಕ್ಷೇತ್ರವೂ ಈ ಪೈಕಿ ಒಂದು ಕ್ಷೇತ್ರವಾಗಿರಬಹುದು. ಅಭ್ಯರ್ಥಿಯು ಇದನ್ನು ಸಂಸದೀಯ ಮತ್ತು ವಿಧಾನಸಭಾ ಮತಕ್ಷೇತ್ರಗಳ ಆದೇಶ, 2008 ಇದರಿಂದ ಪರಿಶೀಲಿಸಿಕೊಳ್ಳಬಹುದು (ವೆಬ್‌ಸೈಟ್‌ನಲ್ಲಿ ಲಭ್ಯವಿದೆ). ಅಭ್ಯರ್ಥಿಯು ತನ್ನ ಕ್ಷೇತ್ರದ ಸ್ವರೂಪದ ಬಗ್ಗೆ ಎಂದರೆ, ನಿಮ್ಮ ಕ್ಷೇತ್ರವು ಸಾಮಾನ್ಯ ಕ್ಷೇತ್ರವೇ ಅಥವಾ ಮೀಸಲು ಕ್ಷೇತ್ರವೇ ಎಂದು ಸಹ ತಿಳಿದಿರಬೇಕು. ಸಂಸದೀಯ ಮತ್ತು ವಿಧಾನಸಭಾ ಕ್ಷೇತ್ರಗಳ ಪುನರ್‌–ವಿಂಗಡಣಾ ಆದೇಶದ ಪರಿಷ್ಕೃತ ಪ್ರತಿಯನ್ನು ಪರಾಮರ್ಶಿಸಿ. ಸದರಿ ಆದೇಶದ ಪರಿಷ್ಕೃತ ಪ್ರತಿಗಳು ಅಭ್ಯರ್ಥಿಗಳ ಕ್ಷೇತ್ರದ ಜಿಲ್ಲಾ ಚುನಾವಣಾ ಅಧಿಕಾರಿ, ರಿಟರ್ನಿಂಗ್ ಅಧಿಕಾರಿ ಮತ್ತು ಚುನಾವಣಾ ನೋಂದಣಾಧಿಕಾರಿಗಳ ಬಳಿ ಅಭ್ಯರ್ಥಿಗಳ ಪರಿಶೀಲನೆಗಾಗಿ ಲಭ್ಯವಿರುತ್ತದೆ.

## 1.18. ಭಾವಚಿತ್ರವಿರುವ ಮತದಾರರ ಪಟ್ಟಿ (PER) ಮತ್ತು ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳು (EPIC)

1.18.1. ಪ್ರತಿಯೊಂದು ರಾಜ್ಯದ ಲೋಕಸಭೆ/ವಿಧಾನಸಭೆಯ ಚುನಾವಣೆಯನ್ನು ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ನಡೆಸಲಾಗುತ್ತದೆ. ಭಾರತದ ಪ್ರಜೆಯಾಗಿರುವ ಮತ್ತು ಅರ್ಹತಾ ದಿನಾಂಕದಂದು (ಅಂದರೆ ಯಾವ ವರ್ಷದಲ್ಲಿ ಮತದಾರರ ಪಟ್ಟಿಯನ್ನು ತಯಾರಿಸಲಾಗುವುದೋ ಅಥವಾ ಪರಿಷ್ಕರಿಸಿ ಅಂತಿಮವಾಗಿ ಪ್ರಕಟಿಸಲಾಗುವುದೋ ಆ ವರ್ಷದ ಜನವರಿ 1ನೇ ತಾರೀಖಿನಂದು) 18 ವರ್ಷಕ್ಕಿಂತ ಕಡಿಮೆ ವಯಸ್ಸಿನವನಲ್ಲದ ಮತ್ತು ಭಾರತದ ನಿವಾಸಿಯಲ್ಲದ, ಅಸ್ವಸ್ಥ ಚಿತ್ತನಾಗಿರುವ, ಅಪರಾಧ ಅಥವಾ ಭ್ರಷ್ಟಾಚಾರ ಅಥವಾ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿರುವ ಕಾರಣಗಳಿಂದಾಗಿ ಭಾರತದ ಸಂವಿಧಾನದ ಅಥವಾ ಸಂಬಂಧಪಟ್ಟ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನನ್ವಯ ಅನ್ಯಥಾ ಅನರ್ಹನಾಗಿಲ್ಲದ ಪ್ರತಿಯೊಬ್ಬ ವ್ಯಕ್ತಿಯು ಮತದಾರನಾಗಿ ನೋಂದಾಯಿತನಾಗಲು (ಅನುಚ್ಛೇದ 326ರಂತೆ) ಹಕ್ಕು ಹೊಂದಿರುತ್ತಾನೆ. ಈ ಬಗ್ಗೆ ಸಂವಿಧಾನಾತ್ಮಕವಾದ ಮತ್ತು ಶಾಸನಬದ್ಧವಾದ ಕೆಲವು ಅರ್ಹತೆಗಳು ಮತ್ತು ಅನರ್ಹತೆಗಳನ್ನು ಗೊತ್ತುಪಡಿಸಲಾಗಿದೆ. ಮತದಾರರ ಪಟ್ಟಿಯಲ್ಲಿ ನೋಂದಾವಣೆಯಾಗಲು ಪೂರೈಸಬೇಕಾದ ಷರತ್ತುಗಳನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರಲ್ಲಿ ತಿಳಿಸಲಾಗಿದೆ. ಈ ಕುರಿತು ಸಂಬಂಧಪಟ್ಟ ಉಪಬಂಧಗಳನ್ನು **ಪರಿಶಿಷ್ಟ–1**ರಲ್ಲಿ ಯಥಾವತ್ತಾಗಿ ನೀಡಲಾಗಿದೆ.

1.18.2. ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ ಪ್ರಕರಣ 15ರಲ್ಲಿ ನಿರೂಪಿಸಿರುವಂತೆ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕಾಗಿ ಒಂದು ಮತದಾರರ ಪಟ್ಟಿ ಇರಬೇಕು ಮತ್ತು ಅದನ್ನು ಚುನಾವಣಾ

ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟು ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಸಿದ್ಧಪಡಿಸಬೇಕು. ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ, ಒಂದು ಸಂಸದೀಯ ಮತಕ್ಷೇತ್ರದ ಮತದಾರರ ಪಟ್ಟಿಯು, ಆ ಸಂಸದೀಯ ಮತಕ್ಷೇತ್ರದಲ್ಲಿ ಅಡಕವಾಗಿರುವ ಎಲ್ಲ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಒಳಗೊಂಡಿರಕ್ಕದ್ದು. ವಿಧಾನ ಸಭೆಯನ್ನು ಹೊಂದಿಲ್ಲದ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ (ಎಂದರೆ, ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳು, ಚಂದೀಘರ್, ದಾದ್ರ ಮತ್ತು ನಗರ ಹವೇಲಿ, ದಮನ್ ಮತ್ತು ದೀಯು ಹಾಗೂ ಲಕ್ಷದ್ವೀಪ) ಸಂಸದೀಯ ಮತಕ್ಷೇತ್ರಗಳಿಗಾಗಿ ಪ್ರತ್ಯೇಕವಾದ ಮತದಾರರ ಪಟ್ಟಿಗಳನ್ನು, ಇತರ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಧಾನಸಭಾ ಮತಕ್ಷೇತ್ರಗಳಿಗೆ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಿದ ರೀತಿಯಲ್ಲಿಯೇ ಸಿದ್ಧಪಡಿಸಲಾಗುವುದು.

1.18.3. ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಸಭಾ ಮತಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಜಮ್ಮು ಮತ್ತು ಕಾಶ್ಮೀರ ಜನತಾ ಪ್ರಾತಿನಿಧ್ಯ ಅಧಿನಿಯಮ, 1957 ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಅನುಸಾರವಾಗಿ ಸಿದ್ಧಪಡಿಸಲಾಗುವುದು. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಪಟ್ಟಂತೆ ಸಂವಿಧಾನದಲ್ಲಿ ಪರಿಭಾಷಿಸಲಾದಂತೆ ರಾಜ್ಯ ವಿಷಯಗಳನ್ನು ಮಾತ್ರ ಅದರಲ್ಲಿ ಸೇರ್ಪಡೆ ಮಾಡಲು ಹಕ್ಕು ಇರುತ್ತದೆ.

1.18.4. ದೋಷರಹಿತ ಮತದಾರರ ಪಟ್ಟಿಯನ್ನು ತಯಾರಿಸುವ ಬಗ್ಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಮತಗಟ್ಟೆ ಹಂತದ ಅಧಿಕಾರಿಗಳ ವ್ಯವಸ್ಥೆಯನ್ನು ಜಾರಿಗೊಳಿಸಿದ ಪರಿಣಾಮವಾಗಿ, ಮೃತ ಮತ್ತು ಸ್ಥಳಾಂತರಗೊಂಡ ಮತದಾರರ ಹೆಸರನ್ನು ಗುರುತಿಸುವ ಮತ್ತು ತೆಗೆದು ಹಾಕುವ ಕಾರ್ಯವು ಹೆಚ್ಚು ನಿಖರವಾಗಿದೆ ಮತ್ತು ಇದು ಮತದಾರರ ಪಟ್ಟಿಗಳ ಪಾವಿತ್ರ್ಯತೆಯನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಸಿಬ್ಬಂದಿ ವರ್ಗಕ್ಕೆ ಸಹಾಯಕವಾಗಿದೆ.

ಎ. ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಮತದಾನದ ಸಂದರ್ಭದಲ್ಲಿ ಪೋಲಿಂಗ್ ಏಜೆಂಟರನ್ನು (ಮತ್ತು ಮತ ಎಣಿಕೆಯ ಸಂದರ್ಭದಲ್ಲಿ ಎಣಿಕೆ ಏಜೆಂಟರನ್ನು) ನೇಮಿಸುವ ಮಾದರಿಯಲ್ಲೇ, ಪಟ್ಟಿಯ ಪರಿಷ್ಕರಣೆಗಾಗಿ ಬಿಎಲ್ಒ ಅವರಿಗೆ ಪೂರಕವಾಗಿ ಅವುಗಳು ಒಬ್ಬ ಮತಗಟ್ಟೆ ಮಟ್ಟದ ಏಜೆಂಟ್‌ರನ್ನು (BLA) ನೇಮಿಸಬಹುದೆಂದು ಆಯೋಗವು ಬಯಸುತ್ತದೆ.

ಬಿ. ನಕಲಿ ಮತದಾನವನ್ನು ತಡೆಯುವ ನಿಟ್ಟಿನಲ್ಲಿ ಭಾವಚಿತ್ರವುಳ್ಳ ಮತದಾರರ ಗುರುತಿನ ಚೀಟಿಯು ಅತ್ಯಂತ ಸಹಕಾರಿಯಾಗಿದೆ. 1994 ರಿಂದ ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿಗಳನ್ನು ನೀಡುವ ಕಾರ್ಯ ಪ್ರಾರಂಭವಾಯಿತು. ವಿತರಿಸಲಾದ ಪ್ರತಿಯೊಂದು ಎಪಿಕ್‌ಗೂ ಒಂದು ವಿಶಿಷ್ಟ ಸಂಖ್ಯೆಯನ್ನು ನೀಡಲಾಗಿದೆ ಮತ್ತು ಅದನ್ನು ಈ ಎಪಿಕ್‌ಗಳಲ್ಲಿ ಮುದ್ರಿಸಲಾಗಿರುತ್ತದೆ. ಈ ಎಪಿಕ್ ನಂಬರ್‌ನ್ನು ಮತದಾರರ ಪಟ್ಟಿಯಲ್ಲೂ ಸೇರಿಸಲಾಗಿರುತ್ತದೆ. ಮತ್ತೊಬ್ಬರಂತೆ ನಟಿಸಿ ಮತ ಚಲಾಯಿಸುವುದನ್ನು ತಪ್ಪಿಸಲು ಮತದಾರರ ಭಾವಚಿತ್ರವನ್ನು ಈಗ ಮತದಾರರ ಪಟ್ಟಿಯಲ್ಲಿಯೇ ಮುದ್ರಿಸಲಾಗಿರುತ್ತದೆ. ಇದರಿಂದಾಗಿ ಮತಗಟ್ಟೆಗಳಲ್ಲಿ ಮತದಾರರನ್ನು ನಿಖರವಾಗಿ ಗುರುತಿಸುವ ಉದ್ದೇಶ ಈಡೇರಿದಂತಾಗುತ್ತದೆ.

ಸಿ. ಅಲ್ಲದೆ, ಮತದಾನದ ದಿನದಂದು, ಮತ್ತೊಬ್ಬನಂತೆ ನಟಿಸಿ ಮತಚಲಾಯಿಸುವುದನ್ನು ತಡೆಗಟ್ಟುವ ದೃಷ್ಟಿಯಿಂದ, ಆಯೋಗವು, ಭಾವಚಿತ್ರ ಸಹಿತವಾದ ಮತದಾರರ ಪಟ್ಟಿಗಳನ್ನು (PER) ಸಿದ್ಧಪಡಿಸಿದ್ದು, ಇದು ಈಗ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಲಭ್ಯವಿದೆ.

ಡಿ. ಹಾಲಿ ಚಾಲ್ತಿಯಲ್ಲಿರುವ ಮತದಾರರ ಪಟ್ಟಿಯಲ್ಲಿ ಪ್ರಸ್ತುತ ಸೇರಿಸಲಾಗಿರುವ ಎಲ್ಲ ಮಾಹಿತಿಯ ಜೊತೆಗೆ ಭಾವಚಿತ್ರವಿರುವ ಮತದಾರರ ಪಟ್ಟಿಯು ಮತದಾರರ ಭಾವಚಿತ್ರಗಳನ್ನು ಹೊಂದಿರುತ್ತದೆ. ಇದು ಮತದಾನದ ದಿನದಂದು ಮತಗಟ್ಟೆಯಲ್ಲಿ ಮತದಾರರ ಗುರುತನ್ನು ಪರಿಶೀಲಿಸುವ ಪ್ರಕ್ರಿಯೆಯನ್ನು ಸರಳಗೊಳಿಸುತ್ತದೆ.

ಇ. ಮತಗಟ್ಟೆಯಲ್ಲಿ ಮತದಾರರನ್ನು ಗುರುತಿಸಲು ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಬಳಸಲಾಗುವುದು. ಅಂಥ ಮತದಾರರ ಸಂದರ್ಭದಲ್ಲಿ ಅವರ ಗುರುತನ್ನು ಚುನಾವಣಾ ಆಯೋಗವು ಈ ಬಗ್ಗೆ ನಿಗದಿಪಡಿಸುವ ಬದಲಿ ದಾಖಲೆಗಳ ಮೂಲಕ ಸಾಬೀತುಪಡಿಸಬಹುದು. ಈ ಸಂಬಂಧದಲ್ಲಿ ನಿರ್ದಿಷ್ಟ ಆದೇಶಗಳನ್ನು ಆಯೋಗವು ಚುನಾವಣೆಯ ಸಂದರ್ಭದಲ್ಲಿ ಹೊರಡಿಸುವುದು.

ಎಫ್. ಬೇರೊಂದು ವಿಧಾನ ಸಭಾ ಕ್ಷೇತ್ರದ ಚುನಾವಣಾ ನೋಂದಣಿ ಅಧಿಕಾರಿಯು ನೀಡಿದಂತಹ ಭಾವಚಿತ್ರ ಇರುವ ಗುರುತಿನ ಚೀಟಿಯನ್ನು ಒಬ್ಬ ಮತದಾರನು ಮತದಾನದ ವೇಳೆ ಹಾಜರುಪಡಿಸಿದಲ್ಲಿ, ಅಂಥ ಗುರುತಿನ ಚೀಟಿಯನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು. ಆದರೆ, ಮತದಾರನು ಮತಚಲಾಯಿಸಲು ಯಾವ ಮತಗಟ್ಟೆಗೆ ಬಂದಿರುವನೋ ಆ ಮತಗಟ್ಟೆಯ ಮತದಾರರ ಪಟ್ಟಿಯಲ್ಲಿ ಅವನ ಹೆಸರು ಇರಬೇಕು. ಆದರೆ ಇಂತಹ ಪ್ರಕರಣದಲ್ಲಿ ಆ ಮತದಾರನು ಒಂದಕ್ಕಿಂತ ಹೆಚ್ಚು ಮತಗಟ್ಟೆಯಲ್ಲಿ ಮತ ಚಲಾಯಿಸದಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಈ ಸಂಬಂಧದಲ್ಲಿ ಆತನ ಎಡ ತೋರುಬೆರಳಿನ ಮೇಲೆ ಅಳಿಸಲಾಗದ ಶಾಯಿಯ ಗುರುತು

ಇಲ್ಲದಿರುವುದನ್ನು ಪರಿಶೀಲಿಸಬೇಕು, ಮತ್ತು ಮತ ಚಲಾಯಿಸಲು ಅವನಿಗೆ ಅವಕಾಶ ನೀಡುವಾಗ ಅವನ ಎಡತೋರು ಬೆರಳಿನ ಮೇಲೆ ಅಳಿಸಲಾಗದ ಶಾಯಿಯನ್ನು ಹಾಕತಕ್ಕದ್ದು.

## 1.19. ಅಭ್ಯರ್ಥಿಯು ಕಡ್ಡಾಯವಾಗಿ ಒಬ್ಬ ಮತದಾರನಾಗಿರತಕ್ಕದ್ದು.

1.19.1. ಒಂದು ರಾಜ್ಯದ ಸಂಸತ್‌ನ ಅಥವಾ ವಿಧಾನ ಮಂಡಲದ ಚುನಾವಣೆಗೆ ಸ್ಪರ್ಧಿಸುವ ಒಬ್ಬ ಅಭ್ಯರ್ಥಿಗೆ ಇರಬೇಕಾದ ಮೂಲಭೂತ ಅರ್ಹತೆಗಳಲ್ಲಿ ಅತಿ ಮುಖ್ಯವಾದುದೆಂದರೆ, ಸಂಬಂಧಪಟ್ಟ ಆ ವ್ಯಕ್ತಿಯು ಒಬ್ಬ ಮತದಾರನಾಗಿರಬೇಕಾಗಿರುತ್ತದೆ. ಮುಂದಿನ ಅಧ್ಯಾಯದಲ್ಲಿ, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗೆ ಇರಬೇಕಾದ ಹಲವು ಅರ್ಹತೆಗಳು ಮತ್ತು ಅನರ್ಹತೆಗಳ ಬಗ್ಗೆ ಸವಿವರವಾಗಿ ಚರ್ಚಿಸಲಾಗಿದೆ. ಆದಾಗ್ಯೂ, ಒಬ್ಬ ಅಭ್ಯರ್ಥಿಯಾಗಿ, ಯಾವ ಚಾಲ್ತಿ ಮತದಾರರ ಪಟ್ಟಿಯನ್ನು ಆಧರಿಸಿ ಚುನಾವಣೆಯನ್ನು ನಡೆಸಲಾಗುತ್ತಿದೆಯೋ ಆ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿರುವುದನ್ನು ಅಭ್ಯರ್ಥಿಯು ಮೊದಲು ಖಾತ್ರಿ ಮಾಡಿಕೊಳ್ಳತಕ್ಕದ್ದು. ಕಾನೂನಿನ ಪ್ರಕಾರ, ಚುನಾವಣಾ ವೇಳಾಪಟ್ಟಿ ಪ್ರಕಟಿಸುವ ಸಾಕಷ್ಟು ಮುಂಚೆ, ಮತಕ್ಷೇತ್ರದ ಮತದಾರರ ಪಟ್ಟಿಯನ್ನು ಮೊದಲು ಪರಿಷ್ಕರಿಸಿ, ಅಂತಿಮವಾಗಿ ಪ್ರಕಟಿಸಲಾಗುವುದು. ಒಂದು ಮತಕ್ಷೇತ್ರದ ಮತದಾರರ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಿದ ತರುವಾಯವೂ ಸಹ, ಮತದಾರರ ಪಟ್ಟಿಯಲ್ಲಿ ಯಾರ ಹೆಸರು ಬಿಟ್ಟುಹೋಗಿದೆಯೋ ಆ ವ್ಯಕ್ತಿಯು ಅಂಥ ಸೇರ್ಪಡೆಗೆ ಅರ್ಹರಿದ್ದಲ್ಲಿ, ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸುವಂತೆ ಕೋರಿ ಅರ್ಜಿಸಲ್ಲಿಸಲು ಹಕ್ಕು ಹೊಂದಿರುತ್ತಾರೆ. ಅಂಥ ಸೇರ್ಪಡೆಯ ಕಾರ್ಯ ವಿಧಾನದ ಬಗ್ಗೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ 23ನೇ ಪ್ರಕರಣದಲ್ಲಿ ಮತ್ತು ಮತದಾರರ ನೋಂದಣಿ ನಿಯಮ, 1960ರ 26ನೇ ನಿಯಮದಲ್ಲಿ ಉಪಬಂಧ ಕಲ್ಪಿಸಲಾಗಿದೆ. 26ನೇ ನಿಯಮದ ಮೇರೆಗೆ ಹೆಸರಿನ ಸೇರ್ಪಡೆಗಾಗಿನ ಅರ್ಜಿಯನ್ನು ದ್ವಿಪ್ರತಿಯಲ್ಲಿ ಸಂಬಂಧಪಟ್ಟ ಮತಕ್ಷೇತ್ರದ ಚುನಾವಣಾ ನೋಂದಣಿ ಅಧಿಕಾರಿಗೆ ನಮೂನೆ 6ರಲ್ಲಿ ಸಲ್ಲಿಸಬೇಕು. ಅಂಥ ಅರ್ಜಿಗಾಗಿ ಯಾವುದೇ ಶುಲ್ಕವನ್ನು ಸಂದಾಯ ಮಾಡಬೇಕಾಗಿಲ್ಲ. ಚುನಾವಣಾ ನೋಂದಣಿ ನಿಯಮಗಳು, 1960ರಲ್ಲಿ ಹೇಳಲಾದ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ, ಆ ಅರ್ಜಿದಾರನು ಮತದಾರರ ಪಟ್ಟಿಯಲ್ಲಿ ನೋಂದಾಯಿತನಾಗಲು ಹಕ್ಕು ಹೊಂದಿದ್ದಾನೆ ಎಂದು ಚುನಾವಣಾ ನೋಂದಣಿ ಅಧಿಕಾರಿಗೆ ಮನದಟ್ಟಾದರೆ, ಅವನು ಅರ್ಜಿದಾರನ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ನಿರ್ದೇಶಿಸಬಹುದು.

## 1.20. ನಾಮಪತ್ರ ಸಲ್ಲಿಸಲು ನಿಗದಿಪಡಿಸಿರುವ ಸಸಸಸಸಸಕೊನೆಯ ದಿನಾಂಕಕ್ಕೆ ಮುಂಚೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವುದು.

1.20.1. ಒಂದು ಚುನಾವಣೆಗಾಗಿ ನಾಮಪತ್ರ ಸಲ್ಲಿಸಲು ಗೊತ್ತುಪಡಿಸಿದ ಕೊನೆಯ ದಿನಾಂಕದ ನಂತರ ಮತ್ತು ಅಂಥ ಚುನಾವಣೆ ಮುಗಿಯುವ ಮುನ್ನ, ಅಂಥ ಯಾವುದೇ ಸೇರ್ಪಡೆಗಳನ್ನು ಅನುಮತಿಸಲಾಗುವುದಿಲ್ಲವೆಂಬುದನ್ನು ಅಭ್ಯರ್ಥಿಯು ಲಕ್ಷ್ಯದಲ್ಲಿಡಬೇಕಾದುದು ಅವಶ್ಯಕ. ಮತದಾರರ ನೋಂದಣಿ ನಿಯಮಗಳು, 1960ರ ನಿಯಮ 26ರ ಅಡಿಯಲ್ಲಿ, ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಅರ್ಜಿ ಸಲ್ಲಿಸಿದ ವ್ಯಕ್ತಿಯ ಅರ್ಜಿಯನ್ನು ಮತದಾರರ ನೋಂದಣಿ ಅಧಿಕಾರಿಯ ಕಚೇರಿಯ ಪ್ರಕಟಣಾ ಫಲಕದಲ್ಲಿ, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಪ್ರದರ್ಶಿಸಿದ 7 ದಿನಗಳ ನಂತರ ಮಾತ್ರ ಹೆಸರಿನ ಸೇರ್ಪಡೆಗಾಗಿ ಆದೇಶ ಮಾಡಬಹುದು. ಚುನಾವಣೆ ನಡೆಸುವ ಬಗ್ಗೆ ಅಧಿಸೂಚನೆಯನ್ನು ಹೊರಡಿಸುವ ಸಾಕಷ್ಟು ಮುಂಚೆಯೇ ಪಟ್ಟಿಯಲ್ಲಿ ಹೆಸರು ಸೇರಿಸಲು ಅರ್ಜಿಯನ್ನು ಸಲ್ಲಿಸಿದ್ದ ಹೊರತು, ಅಂಥ ಯಾವುದೇ ಸೇರ್ಪಡೆಯು ವಾಸ್ತವಿಕವಾಗಿ ಸಾಧ್ಯವಿಲ್ಲ.

## 1.21. ಮತದಾರರ ಪಟ್ಟಿಯಲ್ಲಿನ ನಮೂದುಗಳ ತಿದ್ದುಪಾಟುಗಳು

1.21.1. ಮತದಾರರ ಪಟ್ಟಿಯಲ್ಲಿನ ನಮೂದುಗಳ ತಿದ್ದುಪಾಟಿಗಾಗಿ ಒಬ್ಬ ವ್ಯಕ್ತಿಯು ಜನತಾಪ್ರಾತಿನಿಧ್ಯ ಅಧಿನಿಯಮ, 1950ರ 22ನೇ ಪ್ರಕರಣದ ಅಡಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಅಂಥ ತಿದ್ದುಪಾಟಿಗಾಗಿ ಅರ್ಜಿಯನ್ನು ಆ ಕ್ಷೇತ್ರದ ಚುನಾವಣಾ ನೋಂದಣಿ ಅಧಿಕಾರಿಗೂ ಸಹ ಸಲ್ಲಿಸಬಹುದು. ಚುನಾವಣೆಗಾಗಿ ನಾಮಪತ್ರ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಮತ್ತು ಚುನಾವಣೆ ಮುಕ್ತಾಯವಾಗುವ ಮುಂಚೆ ಮತದಾರರ ಪಟ್ಟಿಯಲ್ಲಿ ತಿದ್ದುಪಾಟಿಗಾಗಿ ಇಲ್ಲಿ ಮತ್ತೆ ಯಾವುದೇ ಆದೇಶ ಮಾಡಲಾಗುವುದಿಲ್ಲ. ಮೇಲ್ಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಯ ತರುವಾಯ, ಅದರಲ್ಲಿ ಹೆಸರುಗಳನ್ನು ಸೇರ್ಪಡೆ ಮಾಡುವ ಮತ್ತು ನಮೂದುಗಳ ತಿದ್ದುಪಾಟು ಮಾಡುವ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ಉಪಬಂಧಗಳು ಜನತಾಪ್ರಾತಿನಿಧ್ಯ ಅಧಿನಿಯಮ, 1950ರ 22 ಮತ್ತು 23ನೇ ಪ್ರಕರಣದಲ್ಲಿ ಮತ್ತು ಮತದಾರರ ನೋಂದಣಿ ನಿಯಮಗಳು, 1960ರ ನಿಯಮ 26 ಮತ್ತು 27ರಲ್ಲಿ ಒಳಗೊಂಡಿವೆ. ಈ ಉಪಬಂಧಗಳನ್ನು **ಪರಿಶಿಷ್ಟ–II** ರಲ್ಲಿ ಯಥಾವತ್ತಾಗಿ ನಿರೂಪಿಸಲಾಗಿದೆ.

# 2. ಅರ್ಹತೆ ಮತ್ತು ಅನರ್ಹತೆಗಳು

## 2.1. ಪೀಠಿಕೆ

2.1.1. ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಾಗಿ ಅಭ್ಯರ್ಥಿಯು ಕೆಲವೊಂದು ಅರ್ಹತೆಗಳನ್ನು ಹೊಂದಿರಬೇಕಾಗಿದ್ದು, ಅದೇ ಸಂದರ್ಭದಲ್ಲಿ ಅಭ್ಯರ್ಥಿಯು ಯಾವುದೇ ರೀತಿಯ ಅನರ್ಹತೆಯನ್ನು ಹೊಂದಿರಬಾರದು. ಈ ಅರ್ಹತೆಗಳು ಮತ್ತು ಅನರ್ಹತೆಗಳ ಬಗ್ಗೆ ಭಾರತ ಸಂವಿಧಾನ ಮತ್ತು ಚುನಾವಣಾ ಶಾಸನಗಳ ಅಡಿಯಲ್ಲಿ ನಿರೂಪಿಸಲಾಗಿದೆ.

## 2.2. ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಅರ್ಹತೆಗಳು

2.2.1. ಒಂದು ಸಂಸದೀಯ ಮತಕ್ಷೇತ್ರದಿಂದ ಅಭ್ಯರ್ಥಿಯು ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸಿದ್ದಲ್ಲಿ, ಅವರು ಈ ಕೆಳಕಂಡ ಪ್ರತಿಯೊಂದು ಅರ್ಹತೆಗಳನ್ನು ಹೊಂದಿರಬೇಕು:

1. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು [ಸಂವಿಧಾನದ 84(ಎ) ಅನುಚ್ಛೇದದ ಪ್ರಕಾರ];
2. ಅಭ್ಯರ್ಥಿಯು ಚುನಾವಣಾ ಆಯೋಗವು ಆ ಬಗ್ಗೆ ಅಧಿಕೃತಗೊಳಿಸಿರುವ ಯಾರೇ ವ್ಯಕ್ತಿಯ ಮುಂದೆ ಸಂವಿಧಾನದ ಮೂರನೇ ಅನುಸೂಚಿಯಲ್ಲಿ ಈ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಯಲ್ಲಿ ಪ್ರಮಾಣವಚನ ಅಥವಾ ದೃಢೀಕರಣವನ್ನು ಮಾಡತಕ್ಕದ್ದು ಮತ್ತು ಅದಕ್ಕೆ ಸಹಿ ಮಾಡತಕ್ಕದ್ದು [ಸಂವಿಧಾನದ 84(ಎ) ಅನುಚ್ಛೇದ ಹಾಗೂ ಮೂರನೇ ಅನುಸೂಚಿಯಲ್ಲಿನ ನಮೂನೆ III/ಎ];
3. ನಾಮಪತ್ರಗಳನ್ನು ಪರಿಶೀಲಿಸಲು ಗೊತ್ತುಪಡಿಸಿರುವ ದಿನಾಂಕದಂದು ಅಭ್ಯರ್ಥಿಯು ಇಪ್ಪತ್ತೈದಕ್ಕಿಂತ ಕಡಿಮೆ ವಯಸ್ಸಿನವರಾಗಿರಬಾರದು [ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 36(2)ನೇ ಪ್ರಕರಣದೊಂದಿಗೆ ಓದಲಾಗುವ ಸಂವಿಧಾನದ 84(ಬಿ) ಅನುಚ್ಛೇದದ ಮೇರೆಗೆ);
4. ಎ. ಅಭ್ಯರ್ಥಿಯು, ಯಾವುದೇ ರಾಜ್ಯದಲ್ಲಿನ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಸ್ಥಾನದ ಒಬ್ಬ ಅಭ್ಯರ್ಥಿಯಾಗಿದ್ದಲ್ಲಿ, ಅವರು ಆ ರಾಜ್ಯದ ಅಥವಾ ಯಾವುದೇ ಇತರ ರಾಜ್ಯದ ಯಾವುದೇ ಪರಿಶಿಷ್ಟ ಜಾತಿಯ ಸದಸ್ಯರಾಗಿರಬೇಕು, ಮತ್ತು ಅದರ ಜೊತೆಗೆ ಅವರು ಯಾವುದೇ ಸಂಸದೀಯ ಮತಕ್ಷೇತ್ರದ ಮತದಾರರಾಗಿರಬೇಕು.

ಬಿ. ಅಭ್ಯರ್ಥಿಯು, ಯಾವುದೇ ರಾಜ್ಯದಲ್ಲಿನ (ಅಸ್ಸಾಂನ ಸ್ವಾಯತ್ತ ಜಿಲ್ಲೆಯಲ್ಲಿನದನ್ನು ಹೊರತುಪಡಿಸಿ) ಪರಿಶಿಷ್ಟ ವರ್ಗಕ್ಕೆ ಮೀಸಲಾಗಿರುವ ಸ್ಥಾನದ ಒಬ್ಬ ಅಭ್ಯರ್ಥಿಯಾಗಿದ್ದಲ್ಲಿ, ಆ ರಾಜ್ಯದ ಅಥವಾ ಯಾವುದೇ ಇತರ ರಾಜ್ಯದ (ಅಸ್ಸಾಂನ ಬುಡಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ಯಾವುದೇ ಪರಿಶಿಷ್ಟ ವರ್ಗದ ಒಬ್ಬ ಸದಸ್ಯರಾಗಿರಬೇಕು, ಮತ್ತು ಅದರ ಜೊತೆಗೆ ಅವರು ಯಾವುದೇ ಸಂಸದೀಯ ಮತಕ್ಷೇತ್ರದ ಮತದಾರರಾಗಿಬೇಕು.

ಸಿ. ಅಭ್ಯರ್ಥಿಯು ಅಸ್ಸಾಂನ ಸ್ವಾಯತ್ತ ಜಿಲ್ಲೆಯಲ್ಲಿನ ಪರಿಶಿಷ್ಟ ವರ್ಗಕ್ಕೆ ಮೀಸಲಾಗಿರುವ ಒಂದು ಸ್ಥಾನದ ಅಭ್ಯರ್ಥಿಯಾಗಿದ್ದಲ್ಲಿ, ಅವರು ಯಾವುದೇ ಪರಿಶಿಷ್ಟ ವರ್ಗದ ಸದಸ್ಯರಾಗಿರಬೇಕು ಮತ್ತು ಇದರ ಜೊತೆಗೆ, ಅಂಥ ಸ್ಥಾನವನ್ನು ಯಾವ ಸಂಸದೀಯ ಮತಕ್ಷೇತ್ರದಲ್ಲಿ ಮೀಸಲಿಡಲಾಗಿದೆಯೋ ಆ ಸಂಸದೀಯ ಮತಕ್ಷೇತ್ರದ ಅಥವಾ ಯಾವುದೇ ಅಂಥ ಸ್ವಾಯತ್ತ ಜಿಲ್ಲೆಯನ್ನು ಒಳಗೊಂಡಿರುವ ಯಾವುದೇ ಇತರ ಸಂಸದೀಯ ಮತಕ್ಷೇತ್ರದ ಮತದಾರನಾಗಿರಬೇಕು.

ಡಿ. ಅಭ್ಯರ್ಥಿಯು ಲಕ್ಷದ್ವೀಪ ಕೇಂದ್ರಾಡಳಿತ ಪ್ರದೇಶದಲ್ಲಿನ ಪರಿಶಿಷ್ಟ ವರ್ಗಕ್ಕೆ ಮೀಸಲಾಗಿರುವ ಸ್ಥಾನದ ಒಬ್ಬ ಅಭ್ಯರ್ಥಿ ಆಗಿದ್ದಲ್ಲಿ, ಆಗ ಅವರು ಆ ಕೇಂದ್ರಾಡಳಿತ ಪ್ರದೇಶದ ಯಾವುದೇ ಪರಿಶಿಷ್ಟ ವರ್ಗದ ಒಬ್ಬ ಸದಸ್ಯರಾಗಿರಬೇಕು, ಮತ್ತು ಅದರ ಜೊತೆಗೆ, ಆ ಕೇಂದ್ರಾಡಳಿತ ಪ್ರದೇಶದ ಸಂಸದೀಯ ಮತಕ್ಷೇತ್ರದ ಒಬ್ಬ ಮತದಾರನಾಗಿರಬೇಕು. **ವಿ.ಸೂ:–** ಅಭ್ಯರ್ಥಿಯು ಈ ಪ್ರವರ್ಗದ ಅಡಿಯಲ್ಲಿ ಬರುವ ಅಭ್ಯರ್ಥಿ ಆಗಿರುವ ಸಂದರ್ಭದಲ್ಲಿ, ಇಟಾಲಿಕ್ ಅಕ್ಷರಗಳಲ್ಲಿ ಮುದ್ರಿಸಿರುವ ಪದಗಳನ್ನು ಎಚ್ಚರಿಕೆಯಿಂದ ಗಮನಿಸಿ.

ಇ. ಅಭ್ಯರ್ಥಿಯು ಸಿಕ್ಕಿಂ ರಾಜ್ಯಕ್ಕೆ ಹಂಚಿಕೆ ಮಾಡಿರುವ ಸ್ಥಾನದ ಒಬ್ಬ ಅಭ್ಯರ್ಥಿಯಾಗಿದ್ದಲ್ಲಿ, ನೀವು ಸಿಕ್ಕಿಂ ಸಂಸದೀಯ ಮತಕ್ಷೇತ್ರದ ಒಬ್ಬ ಮತದಾರರಾಗಿರಬೇಕು.

ಎಫ್. ಅಭ್ಯರ್ಥಿಯು ಒಂದು ಸಾಮಾನ್ಯ ಸ್ಥಾನದ ಅಭ್ಯರ್ಥಿಯಾಗಿದ್ದಲ್ಲಿ, ಎಂದರೆ, ಈ ಹಿಂದೆ ಹೇಳಿರುವ ಉಪಖಂಡಗಳಲ್ಲಿ ಉಲ್ಲೇಖಿಸಲಾದಂತೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಮೀಸಲು ಇಡದ ಕ್ಷೇತ್ರದ ಅಭ್ಯರ್ಥಿಯಾಗಿದ್ದಲ್ಲಿ, ಆಗ ಅವರು ಯಾವುದೇ ಸಂಸದೀಯ ಮತಕ್ಷೇತ್ರದ ಒಬ್ಬ ಮತದಾರನಾಗಿರಬೇಕು (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 4ನೇ ಪ್ರಕರಣ ನೋಡಿ).

## 2.3. ವಿಧಾನಸಭಾ ಚುನಾವಣೆಗೆ ಇರಬೇಕಾದ ಅರ್ಹತೆಗಳು

2.3.1. ಅಭ್ಯರ್ಥಿಯು ಒಂದು ರಾಜ್ಯದ (ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತು ಪಡಿಸಿ) ಅಥವಾ ಕೇಂದ್ರಾಡಳಿತ ಪ್ರದೇಶದ (ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶವನ್ನೂ ಒಳಗೊಂಡಂತೆ) ವಿಧಾನಸಭಾ ಚುನಾವಣೆಯ ಒಬ್ಬ ಅಭ್ಯರ್ಥಿಯಾಗಿ ಸ್ಪರ್ಧಿಸಲು ಇಚ್ಛಿಸಿರುವಲ್ಲಿ, ಈ ಕೆಳಕಾಣಿಸಿರುವ ಪ್ರತಿಯೊಂದು ಅರ್ಹತೆಗಳನ್ನು ಹೊಂದಿರಬೇಕು:

1. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು. (ಸಂವಿಧಾನದ 173(ಎ) ಅನುಚ್ಛೇದ, ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಅಧಿನಿಯಮ, 1963ರ 4(ಎ) ಪ್ರಕರಣ, ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ ಅಧಿನಿಯಮ, 1991ರ 4(ಎ) ಪ್ರಕರಣ).

2. ಅಭ್ಯರ್ಥಿಯು ಸಂವಿಧಾನದ ಮೂರನೇ ಅನುಸೂಚಿಯಲ್ಲಿನ ಉದ್ದೇಶಗಳಿಗಾಗಿ ಅಥವಾ ಸಂದರ್ಭಾನುಸಾರ, ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಅಧಿನಿಯಮ, 1963ರ ಮೊದಲನೇ ಅನುಸೂಚಿಯಲ್ಲಿ ಅಥವಾ ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ ಅಧಿನಿಯಮ, 1991ರ ಅನುಸೂಚಿಯಲ್ಲಿನ (ಸಂವಿಧಾನದ ಅನುಚ್ಛೇದ 173 (ಎ) ಮತ್ತು ಮೂರನೇ ಅನುಸೂಚಿಯಲ್ಲಿನ ನಮೂನೆ VIIಎ), ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಅಧಿನಿಯಮ, 1963ರ ಪ್ರಕರಣ 4(ಎ) ಮತ್ತು ಮೊದಲನೇ ಅನುಸೂಚಿಯಲ್ಲಿನ ನಮೂನೆ 1 ಮತ್ತು ದೆಹಲಿ ರಾಷ್ಟ್ರ ರಾಜಧಾನಿ ಪ್ರದೇಶ ಸರ್ಕಾರ ಅಧಿನಿಯಮ, 1991ರ ಪ್ರಕರಣ 4(ಎ) ಮತ್ತು ಅನುಸೂಚಿಯಲ್ಲಿನ ನಮೂನೆ 1 ಇದರ ಉದ್ದೇಶಕ್ಕಾಗಿ ನಿರೂಪಿಸಿರುವ ನಮೂನೆಗೆ ಅನುಸಾರವಾಗಿ, ನೀವು ಚುನಾವಣಾ ಆಯೋಗವು ಆ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯ ಮುಂದೆ ಮೂರನೇ ಅನುಸೂಚಿಯಲ್ಲಿ, ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಯಲ್ಲಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಬೇಕು ಮತ್ತು ಅದಕ್ಕೆ ರುಜು ಮಾಡಬೇಕು.

3. ನಾಮಪತ್ರಗಳ ಪರಿಶೀಲನೆಯ ದಿನಾಂಕದಂದು ಅಭ್ಯರ್ಥಿಯು ಇಪ್ಪತ್ತೈದಕ್ಕಿಂತ ಕಡಿಮೆ ವಯಸ್ಸಿನವರಾಗಿರಬಾರದು. [ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 36(2)(ಎ) ಪ್ರಕರಣದೊಂದಿಗೆ ಓದಲಾಗುವ ಸಂವಿಧಾನದ 173 ಬಿ ಅನುಚ್ಛೇದ, ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಅಧಿನಿಯಮ, 1963ರ 4(ಬಿ) ಪ್ರಕರಣ ಮತ್ತು ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ ಅಧಿನಿಯಮ, 1991ರ 4(ಬಿ) ಪ್ರಕರಣ].

ಎ. ಅಭ್ಯರ್ಥಿಯು ಒಂದು ರಾಜ್ಯದ, ಅಥವಾ ಕೇಂದ್ರಾಡಳಿತ ಪ್ರದೇಶದ ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟಿರುವಂಥ ಆ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನ ಸಭೆಯಲ್ಲಿನ ಒಂದು ಸ್ಥಾನಕ್ಕೆ ಅಭ್ಯರ್ಥಿಯಾಗಿದ್ದರೆ, ಆಗ ಅವರು ಸಂದರ್ಭಾನುಸಾರ, ಆ ಯಾವುದೇ ಜಾತಿಗಳ ಅಥವಾ ಆ ಯಾವುದೇ ಪಂಗಡಗಳ ಒಬ್ಬ ಸದಸ್ಯನಾಗಿರಬೇಕು ಮತ್ತು ಅದರ ಜೊತೆಗೆ, ಆ ರಾಜ್ಯದಲ್ಲಿನ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಯಾವುದೇ ವಿಧಾನಸಭಾ ಕ್ಷೇತ್ರದ ಒಬ್ಬ ಮತದಾರನಾಗಿರಬೇಕು;

ಬಿ. ಅಸ್ಸಾಂ ಸ್ವಾಯತ್ತ ಜಿಲ್ಲೆಯ ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿಟ್ಟಿರುವ ಒಂದು ಸ್ಥಾನಕ್ಕಾಗಿ ಅವರು ಒಬ್ಬ ಅಭ್ಯರ್ಥಿಯಾಗಿದ್ದರೆ, ಆಗ ಅವರು ಯಾವುದೇ ಸ್ವಾಯತ್ತ ಜಿಲ್ಲೆಯ ಒಂದು ಪರಿಶಿಷ್ಟ ಪಂಗಡದ ಒಬ್ಬ ಸದಸ್ಯನಾಗಿರಬೇಕು ಮತ್ತು ಇದರ ಜೊತೆಗೆ ಆ ಜಿಲ್ಲೆಗಾಗಿ ಯಾವ ವಿಧಾನ ಸಭಾ ಕ್ಷೇತ್ರದಲ್ಲಿ ಅಂಥ ಸ್ಥಾನವನ್ನು ಅಥವಾ ಯಾವುದೇ ಇತರ ಸ್ಥಾನವನ್ನು ಮೀಸಲಿಡಲಾಗಿದೆಯೋ ಆ ವಿಧಾನ ಸಭಾ ಕ್ಷೇತ್ರದ ಒಬ್ಬ ಮತದಾರನಾಗಿರಬೇಕು;

ಸಿ. ಸಿಕ್ಕಿಂ ವಿಧಾನ ಸಭೆಯಲ್ಲಿ ಭೂಟಿಯ ಲಿಪ್ಚ ಮೂಲದ ಸಿಕ್ಕಿಮೀಯರಿಗಾಗಿ ಮೀಸಲಿರಿಸಿದ ಒಂದು ಸ್ಥಾನಕ್ಕೆ ಅಭ್ಯರ್ಥಿಯಾಗಿದ್ದರೆ, ಆಗ ಅವರು ಭೂಟಿಯಾ ಅಥವಾ ಲಿಪ್ಚ ಮೂಲದ ಒಬ್ಬ ವ್ಯಕ್ತಿಯಾಗಿರಬೇಕು, ಮತ್ತು ಇದರ ಜೊತೆಗೆ, ಅವರು ಆ ರಾಜ್ಯದ ಯಾವುದೇ ವಿಧಾನಸಭಾ ಕ್ಷೇತ್ರದ ಒಬ್ಬ ಮತದಾರನಾಗಿರಬೇಕು;

ಡಿ. ಅಭ್ಯರ್ಥಿಯು ಸಿಕ್ಕಿಂನ ವಿಧಾನ ಸಭೆಯಲ್ಲಿ ಸಂಘಾಗಳಿಗಾಗಿ ಮೀಸಲಿರಿಸಿದ ಸ್ಥಾನಕ್ಕಾಗಿ ಸ್ಪರ್ಧಿಸಿದರೆ, ಆಗ ಅವರು ಆ ರಾಜ್ಯದಲ್ಲಿನ ಸಂಘಾ ಕ್ಷೇತ್ರದ ಒಬ್ಬ ಮತದಾರನಾಗಿರಬೇಕು;

ಇ. ಅಭ್ಯರ್ಥಿಯು ಒಂದು ಸಾಮಾನ್ಯ ಕ್ಷೇತ್ರಕ್ಕೆ ಎಂದರೆ, ಮೇಲೆ ಹೇಳಿದಂತೆ ಮೀಸಲಿರಿಸದ ಒಂದು ಕ್ಷೇತ್ರಕ್ಕೆ ಒಬ್ಬ ಅಭ್ಯರ್ಥಿಯಾಗಿದ್ದರೆ, ಆಗ ಅವರು ಆ ರಾಜ್ಯದ ಅಥವಾ ಸಂಬಂಧಪಟ್ಟ ಕೇಂದ್ರಾಡಳಿತ ಪ್ರದೇಶದ ಯಾವುದೇ ಚುನಾವಣಾ ಕ್ಷೇತ್ರದ ಒಬ್ಬ ಮತದಾರನಾಗಿರಬೇಕು.

2.3.2. ಮೇಲೆ ಉಲ್ಲೇಖಿಸಲಾದ ಸಂವಿಧಾನದ ಮತ್ತು ಕಾನೂನಿನ ಸಂಬಂಧಪಟ್ಟ ಎಲ್ಲ ಉಪಬಂಧಗಳನ್ನು **ಪರಿಶಿಷ್ಟ–III**ರಲ್ಲಿ ಯಥಾವತ್ತಾಗಿ ನಿರೂಪಿಸಲಾಗಿದೆ.

2.3.3. ಅಭ್ಯರ್ಥಿಯು ಲೋಕಸಭೆಯ/ವಿಧಾನಸಭೆಯ ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದರೆ, ಅವರು ಈ ಮೇಲೆ ತಿಳಿಸಿರುವ ವಿವಿಧ ಅರ್ಹತೆಗಳನ್ನು ಹೊಂದಿರಬೇಕು. ಈ ಬಗ್ಗೆ ಅಭ್ಯರ್ಥಿಯು ತುಂಬಾ ಎಚ್ಚರದಿಂದಿರಬೇಕು. ಈ ಮುಂದಿನ ಎರಡು ಅಂಶಗಳ ಬಗ್ಗೆ ಅವರು ವಿಶೇಷ ಗಮನವನ್ನು ವಹಿಸಬೇಕೆಂದು ಸಲಹೆ ನೀಡಲಾಗಿದೆ.

## 2.4. ಮತದಾರರ ಪಟ್ಟಿಯಲ್ಲಿ ಹೆಸರು, ಇತ್ಯಾದಿಗಳ ತಿದ್ದುಪಡಿ

2.4.1. ಅಭ್ಯರ್ಥಿಯ ಹೆಸರು ಮತ್ತು ಭಾವಚಿತ್ರವು ಮತದಾರರ ಪಟ್ಟಿಯಲ್ಲಿ ಸರಿಯಾಗಿ ನೋಂದಣಿಯಾಗಿದೆಯೇ ಮತ್ತು ಅದರಲ್ಲಿನ ಭಾವಚಿತ್ರವು ಅವರಿಗೆ ತಾಳೆಯಾಗುತ್ತದೆಯೇ ಎಂಬುದನ್ನು ಗಮನಿಸಬೇಕು. ಅಭ್ಯರ್ಥಿಯ ಹೆಸರು, ತಂದೆ/ತಾಯಿ/ಪತಿಯ ಹೆಸರಿನಲ್ಲಿ ಅಥವಾ ವಿಳಾಸದಲ್ಲಿ ಅಥವಾ ಇತರ ವಿಷಯಗಳಲ್ಲಿ (ನಿಮ್ಮ ವಯಸ್ಸು ಮತ್ತು ಲಿಂಗ ಸೇರಿದಂತೆ) ಕಾಗುಣಿತದ ತಪ್ಪಿದ್ದಲ್ಲಿ ಅಥವಾ ವಿವರಣೆಯಲ್ಲಿ ತಪ್ಪಿದ್ದಲ್ಲಿ ಅಥವಾ ಭಾವಚಿತ್ರ ತಾಳೆಯಾಗದಿದ್ದಲ್ಲಿ, ಕೂಡಲೇ ಆ ತಪ್ಪನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಅಭ್ಯರ್ಥಿಯು ತಪ್ಪನ್ನು ಗುರುತಿಸಿ ಸಕಾಲದಲ್ಲಿ ಸರಿ ಮಾಡಿಸಿಕೊಳ್ಳದಿದ್ದಲ್ಲಿ, ಆಗ ನಾಮಪತ್ರ ಪರಿಶೀಲನೆಯ ಸಂದರ್ಭದಲ್ಲಿ, ಇತರೆ ಸ್ಪರ್ಧಿಗಳು ಆಕ್ಷೇಪಣೆಗಳನ್ನು ಎತ್ತಬಹುದು. ಅದು ಅಭ್ಯರ್ಥಿಗೆ ಪ್ರತಿಕೂಲವಾಗಿ ಪರಿಣಮಿಸಬಹುದು. ಅಭ್ಯರ್ಥಿಯ ಹಿತ ದೃಷ್ಟಿಯಿಂದ ವಕೀಲರ ಸಲಹೆ ಪಡೆಯಬಹುದು.

## 2.5. ಅಭ್ಯರ್ಥಿಗಳಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ

2.5.1. ಈಗಾಗಲೇ ಮಾಡಿರುವ ಉಲ್ಲೇಖಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಯು ಯಾವುದೇ ಕಾರಣಕ್ಕೂ ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವುದನ್ನು ಮತ್ತು ಅದಕ್ಕೆ ಸಹಿ ಮಾಡುವುದನ್ನು ಮರೆಯಬಾರದು. ಅಭ್ಯರ್ಥಿಯು ಯಾರ ಮುಂದೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಅದಕ್ಕೆ ಸಹಿ ಮಾಡಬಹುದೋ ಅಂಥ ಹಲವು ವ್ಯಕ್ತಿಗಳನ್ನು ಚುನಾವಣಾ ಆಯೋಗವು ಅಧಿಕೃತಗೊಳಿಸಿದೆ. ಅದಕ್ಕೆ ಸಂಬಂಧಪಟ್ಟ ಚುನಾವಣಾ ಆಯೋಗದ ಅಧಿಸೂಚನೆಗಳನ್ನು **ಪರಿಶಿಷ್ಟ-IV**ರಲ್ಲಿ ಯಥಾವತ್ತಾಗಿ ನಿರೂಪಿಸಲಾಗಿದೆ.

2.5.2. ಯಾವುದೇ ನಿರ್ದಿಷ್ಟ ಚುನಾವಣೆಯಲ್ಲಿ, ಆ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ತಾತ್ವಿಕವಾಗಿ ಅಧಿಕೃತ ವ್ಯಕ್ತಿಗಳಾಗಿರುತ್ತಾರೆ. ಒಂದು ವೇಳೆ, ಅಭ್ಯರ್ಥಿಯು ಕಾರಾಗೃಹದಲ್ಲಿ ಬಂಧಿತನಾಗಿದ್ದಲ್ಲಿ, ಅಥವಾ ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿದ್ದಲ್ಲಿ, ಅವನು ಬಂಧಿತನಾಗಿರವ ಅಥವಾ ಸ್ಥಾನಬದ್ಧತೆಯಲ್ಲಿರುವ ಆ ಕಾರಾಗೃಹದ ಅಧೀಕ್ಷಕರು ಅಥವಾ ಸ್ಥಾನ ಬದ್ಧತಾ ಶಿಬಿರದ ಕಮಾಂಡೆಂಟರು ಪ್ರಮಾಣ ಬೋಧಿಸಲು ಅಧಿಕಾರ ಹೊಂದಿರುತ್ತಾರೆ. ಒಂದುವೇಳೆ, ಅಭ್ಯರ್ಥಿಯು ಕಾಯಿಲೆಯ ಕಾರಣದಿಂದಾಗಿ ಅಥವಾ ಇತರ ಕಾರಣದಿಂದಾಗಿ ಆಸ್ಪತ್ರೆಯಲ್ಲಿ ಅಥವಾ ಬೇರೆ ಕಡೆಯಲ್ಲಿ ಹಾಸಿಗೆ ಹಿಡಿದಿರುವಲ್ಲಿ, ಆ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಗೆ ಅಥವಾ ಅವನಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರಿಗೆ ಅಂಥದೇ ಅಧಿಕಾರ ನೀಡಲಾಗಿದೆ. ಒಂದು ವೇಳೆ ಅಭ್ಯರ್ಥಿಯು ಭಾರತ ದೇಶದಿಂದ ಹೊರಗಿದ್ದಲ್ಲಿ, ಆ ಅಭ್ಯರ್ಥಿಯು ಯಾವ ದೇಶದಲ್ಲಿರುವನೋ ಆ ದೇಶದಲ್ಲಿರುವಂಥ ಭಾರತದ ರಾಜ ತಾಂತ್ರಿಕರ ಮುಂದೆ ಅಥವಾ

ಕಾನ್ಸಲರ್ ಪ್ರತಿನಿಧಿಯ ಮುಂದೆ ಅಥವಾ ಅಂಥ ರಾಜ ತಾಂತ್ರಿಕರು ಅಥವಾ ಕಾನ್ಸಲರ್ ಪ್ರತಿನಿಧಿಯು ಅಧಿಕೃತಗೊಳಿಸಬಹುದಾದ ಯಾರೇ ವ್ಯಕ್ತಿಯ ಮುಂದೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಬಹುದು ಮತ್ತು ಅದಕ್ಕೆ ಸಹಿ ಮಾಡಬಹುದು. ಒಬ್ಬ ಅಭ್ಯರ್ಥಿಯು ಯಾವುದೇ ಇತರ ಕಾರಣಕ್ಕಾಗಿ ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಮುಂದೆ ಹಾಜರಾಗಲು ಸಾಧ್ಯವಾಗದಿದ್ದರೆ ಅಥವಾ ಅವರ ಮುಂದೆ ಹಾಜರಾಗಲು ಅಡ್ಡಿಗಳಿದ್ದರೆ, ಈ ಸಂಬಂಧದಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಚುನಾವಣಾ ಆಯೋಗವು ವಿಶೇಷವಾಗಿ ನಾಮನಿರ್ದೇಶಿಸಿದ ಯಾರೇ ಇತರ ವ್ಯಕ್ತಿಯ ಮುಂದೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಬಹುದು ಮತ್ತು ಅದಕ್ಕೆ ಸಹಿ ಮಾಡಬಹುದು. ಆಯೋಗವು, ಯಾರ ಮುಂದೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಅದಕ್ಕೆ ಸಹಿ ಮಾಡಬಹುದೋ ಅಂಥ ಎಲ್ಲ ಸ್ಟೈಪೆಂಡಿಯರಿ ಪ್ರಿಸಿಡೆನ್ಸಿ ಮ್ಯಾಜಿಸ್ಟ್ರೇಟರು, ಪ್ರಥಮ ದರ್ಜೆ ಸ್ಟೈಪೆಂಡಿಯರಿ ಮ್ಯಾಜಿಸ್ಟ್ರೇಟರು, ಎಲ್ಲ ಜಿಲ್ಲಾ ನ್ಯಾಯಾಧೀಶರು ಮತ್ತು ಜಿಲ್ಲಾ ನ್ಯಾಯಾಧೀಶರನ್ನು ಹೊರತು ಪಡಿಸಿ ಒಂದು ರಾಜ್ಯದ ನ್ಯಾಯಾಂಗ ಸೇವೆಗೆ ಸೇರಿದ ಎಲ್ಲ ವ್ಯಕ್ತಿಗಳನ್ನು ಸಹ ಅಧಿಕೃತಗೊಳಿಸಿದೆ.

## 2.6. ಸಾಗರೋತ್ತರ ಮತದಾರನು ನಾಮಪತ್ರ ಸಲ್ಲಿಸುವುದು

2.6.1. ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ ಪ್ರಕರಣ 20ಎ ಮೇರೆಗೆ, ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹವಿರುವಂಥ ನಮೂನೆ 6ರಲ್ಲಿ ಕ್ಲೇಮು ಅರ್ಜಿ ಸಲ್ಲಿಸಿರುವಂತಹ ಒಬ್ಬ ಸಾಗರೋತ್ತರ ಮತದಾರನ ಹೆಸರನ್ನು ಆತನ ಪಾಸ್‌ಪೋರ್ಟ್‌ನಲ್ಲಿ ನಮೂದಿಸಿರುವಂತೆ ಭಾರತದಲ್ಲಿನ ಆತನ ವಾಸಸ್ಥಳವಿರುವ ಪ್ರದೇಶಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಯ ಭಾಗದಲ್ಲಿ ಸೇರಿಸತಕ್ಕದ್ದು. ಅಂತಹ ವ್ಯಕ್ತಿಯು ಕ್ಲೇಮು ಅರ್ಜಿಯನ್ನು ನಮೂನೆ 6ಎ ನಲ್ಲಿ ಸಂಬಂಧಪಟ್ಟ ಮತಕ್ಷೇತ್ರದ ಇಆರ್‌ಓ ಅವರಿಗೆ ಖುದ್ದಾಗಿ ಸಲ್ಲಿಸತಕ್ಕದ್ದು. ಇಲ್ಲವೇ, ನಮೂನೆ 6ಎ ನಲ್ಲಿ ತಿಳಿಸಲಾದಂತೆ ಅಗತ್ಯ ದಸ್ತಾವೇಜುಗಳ ಸ್ವ–ದೃಢೀಕೃತ ಪ್ರತಿಗಳೊಂದಿಗೆ ಇಆರ್‌ಓ ಅವರಿಗೆ ಅಂಚೆ ಮೂಲಕ ಕಳುಹಿಸತಕ್ಕದ್ದು. ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡೆಗೊಳಿಸುವುದರಿಂದ ಸಾಗರೋತ್ತರ ಮತದಾರನಿಗೆ ಕಾನೂನಿನ ಇತರ ಅಗತ್ಯತೆಗಳನ್ನು ಪಾಲಿಸುವುದಕ್ಕೊಳಪಟ್ಟು, ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕು ಪ್ರದತ್ತವಾಗುತ್ತದೆ. ಅಂಥ ಅಭ್ಯರ್ಥಿಯು ಕಾನೂನಿನ ಮೇರೆಗೆ ನಿಗದಿಪಡಿಸಿದ ಅವಶ್ಯಕ ಅರ್ಹತೆಗಳಲ್ಲಿ ಒಂದಾದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನವನ್ನು ನಿಗದಿಪಡಿಸಿದ ನಮೂನೆಯಲ್ಲಿ ಆ ಸಂಬಂಧ ಚುನಾವಣಾ ಆಯೋಗವು ಅಧಿಕೃತಗೊಳಿಸಿದ ವ್ಯಕ್ತಿಯ ಮುಂದೆ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ

ರಿಟರ್ನಿಂಗ್ ಅಧಿಕಾರಿಯು ಹಾಗೆ ಅಧಿಕೃತಗೊಳಿಸಿದ ವ್ಯಕ್ತಿಗಳಲ್ಲೊಬ್ಬರಾಗಿರುತ್ತಾರೆ. ಒಂದು ವೇಳೆ ಭಾರತದ ಹೊರಗಿರುವ ಅಭ್ಯರ್ಥಿಯ ಸಂದರ್ಭದಲ್ಲಿ ಪ್ರತಿಜ್ಞೆಯನ್ನು ಆತನು ಅಭ್ಯರ್ಥಿಯಾಗಿ ಕಾಣಿಸಿಕೊಂಡ ದೇಶದಲ್ಲಿರುವ ಭಾರತದ ರಾಜ ತಾಂತ್ರಿಕ ಅಥವಾ ಕೌನ್ಸೆಲರ್‌ನ ಪ್ರತಿನಿಧಿಯ ಮುಂದೆ ಮಾಡಬಹುದು. ಸಾಗರೋತ್ತರ ಮತದಾರನು ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನವನ್ನು ಮಾಡುವುದಕ್ಕಾಗಿ ಸಂಬಂಧಪಟ್ಟ ದೇಶದ ಭಾರತೀಯ ನಿಯೋಗದಲ್ಲಿರುವ ಅಧಿಕೃತ ವ್ಯಕ್ತಿಯನ್ನು ಸಂಪರ್ಕಿಸಬಹುದಾಗಿದೆ.

2.6.2. ನಾಮಪತ್ರಗಳನ್ನು ಸಲ್ಲಿಸಬಹುದಾದಂತಹ ಸಾಗರೋತ್ತರ ಮತದಾರನು ಚುನಾವಣೆಗೆ ನಾಮಪತ್ರ ಸಲ್ಲಿಸುವ ಅವಧಿಯಲ್ಲಿ ಭಾರತದಲ್ಲಿಯೇ ಇದ್ದರೆ, ಆತನು ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿಯ ಮುಂದೆ ಪ್ರಮಾಣವಚನ ಅಥವಾ ಪ್ರತಿಜ್ಞಾ ವಿಧಿಯನ್ನು ತೆಗೆದುಕೊಳ್ಳಬಹುದಾಗಿದೆ. ಸಾಗರೋತ್ತರ ಮತದಾರನಾಗಿರುವಂತಹ ಅಭ್ಯರ್ಥಿಯು ಪ್ರತಿಜ್ಞೆಯನ್ನು ಕೈಗೊಳ್ಳಲು ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಮುಂದೆ ಹಾಜರಾಗಿದ್ದ ಪಕ್ಷದಲ್ಲಿ ಆಗ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಯವರು ಆ ವ್ಯಕ್ತಿಯ ಪಾಸ್‌ಪೋರ್ಟ್‌ನಲ್ಲಿರುವ ವಿವರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸುವ ಮೂಲಕ ವ್ಯಕ್ತಿಯ ಗುರುತನ್ನು ಯುಕ್ತ ರೀತಿಯಲ್ಲಿ ಪರಿಶೀಲನೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಆದ್ದರಿಂದ, ಅಂಥ ವ್ಯಕ್ತಿಯು ಪ್ರಮಾಣವಚನ ಅಥವಾ ಪ್ರತಿಜ್ಞಾ ವಿಧಿಯನ್ನು ಕೈಗೊಳ್ಳುವ ಸಮಯದಲ್ಲಿ ಆತನು/ಆಕೆಯು ತಮ್ಮ ಮೂಲ ಪಾಸ್‌ಪೋರ್ಟ್ ಅನ್ನು ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಯವರ ಪರಿಶೀಲನೆಗಾಗಿ ಒದಗಿಸುವುದು ಅನಿವಾರ್ಯವಾಗಿರುತ್ತದೆ. ಮತದಾನದ ಸಮಯದಲ್ಲಿಯೂ ಸಹ ಸಾಗರೋತ್ತರ ಮತದಾರರ ಗುರುತನ್ನು ಅವರ ಪಾಸ್‌ಪೋರ್ಟ್‌ಗಳಲ್ಲಿರುವ ವಿವರಗಳನ್ನು ಪರೀಕ್ಷಿಸುವುದರ ಮೂಲಕ ಪರಿಶೀಲಿಸಬೇಕು.

## 2.7. ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವ ಬಗ್ಗೆ ಪ್ರಮುಖ ಅಂಶಗಳು:

2.7.1. ಆ ಚುನಾವಣೆಯಲ್ಲಿ ನಾಮಪತ್ರಗಳ ಪರಿಶೀಲನೆಗಾಗಿ ಚುನಾವಣಾ ಆಯೋಗವು ನಿಗದಿ ಪಡಿಸಿರುವ ದಿನಾಂಕಕ್ಕೆ ಮುಂಚೆ, ಪ್ರಮಾಣ ಅಥವಾ ಪ್ರತಿಜ್ಞೆಯನ್ನು ಮಾಡಬೇಕು ಮತ್ತು ಅದಕ್ಕೆ ಸಹಿ ಮಾಡಬೇಕು. ಪಶುಪತಿನಾಥ್–ವಿರುದ್ಧ–ಹರಿಹರ ಪ್ರಸಾದ್ ಸಿಂಗ್ (1968)2 ಎಸ್‌ಸಿಆರ್ 812– ಎಐಆರ್ 1968/ ಎಸ್ ಸಿ 1064) ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಪ್ರಮಾಣ ಅಥವಾ ಶ್ರದ್ಧಾಪೂರ್ವಕ ದೃಢೀಕರಣವನ್ನು ಮಾಡುವ ವಿಷಯದಲ್ಲಿ ಎರಡು ಪರಿಮಿತಿಗಳನ್ನು ವಿಧಿಸಿದೆ.

ಮೊದಲನೆಯದಾಗಿ, ಭಾರತ ಸಂವಿಧಾನದ ಮೂರನೇ ಅನುಸೂಚಿಯಲ್ಲಿನ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನದ ನಮೂನೆಯಲ್ಲಿನ "ನಾಮ ನಿರ್ದೇಶನ ಹೊಂದಿದವನಾಗಿ" ಎಂಬ ಪದಗಳು ಒಬ್ಬ ಅಭ್ಯರ್ಥಿಯು ಅಭ್ಯರ್ಥಿಯಾಗಿ ನಾಮ ನಿರ್ದೇಶಿತನಾಗುವುದಕ್ಕೆ ಮುಂಚೆ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಕೈಗೊಳ್ಳಲು ಅಥವಾ ಮಾಡಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತೋರಿಸುತ್ತದೆ ಎಂದು ನ್ಯಾಯಾಲಯವು ತೀರ್ಪು ನೀಡಿದೆ. ಇದರ ಅರ್ಥವೆಂದರೆ, ನ್ಯಾಯಾಲಯದ ಈ ನಿರ್ಣಯದ ಪ್ರಕಾರ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 30,31,32 ಮತ್ತು 33ನೇ ಪ್ರಕರಣಗಳಲ್ಲಿ ಒಳಗೊಂಡಿರುವ ಸಂಬಂಧಪಟ್ಟ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಒಬ್ಬ ಅಭ್ಯರ್ಥಿಯು ತನ್ನ ನಾಮಪತ್ರವನ್ನು 33ನೇ ಪ್ರಕರಣದ ಮೇರೆಗೆ ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸಿದ ಮೇಲೆ ಮಾತ್ರವೇ ಅವನು ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನವನ್ನು ಕೈಗೊಳ್ಳಬಹುದು ಮತ್ತು ಅದಕ್ಕೆ ಸಹಿ ಮಾಡಬಹುದು. ಎರಡನೆಯದಾಗಿ, ನ್ಯಾಯಾಲಯವು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 36(2)(ಎ) ಪ್ರಕರಣದಲ್ಲಿರುವ "ನಾಮಪತ್ರಗಳ ಪರಿಶೀಲನೆಗಾಗಿ ನಿಗದಿ ಪಡಿಸಿದ ದಿನಾಂಕದಂದು" ಎಂಬ ಪದಾವಳಿಗೆ ಯಾವ ಇಡೀ ದಿನದಂದು ನಾಮಪತ್ರದ ಪರಿಶೀಲನೆಯು ನಡೆಯುವುದೋ ಆ ಇಡೀ ದಿನ ಎಂದು ಅರ್ಥ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ನ್ಯಾಯಾಲಯದ ಈ ನಿರ್ಣಯದ ಪ್ರಕಾರ ಅರ್ಹತೆಯು ಪರಿಶೀಲನೆಯ ದಿನದಂದು ಪ್ರಾರಂಭದ ಕ್ಷಣದಲ್ಲಿಯೇ ಇರಬೇಕು. ಎಂದರೆ, ಪ್ರಮಾಣ ಅಥವಾ ಶ್ರದ್ಧಾಪೂರ್ವಕ ದೃಢೀಕರಣವನ್ನು ನಾಮಪತ್ರಗಳ ಪರಿಶೀಲನೆಯ ದಿನದ ಪ್ರಾರಂಭಕ್ಕೆ ಮುಂಚೆ ಮಾಡಿರಬೇಕಾಗುತ್ತದೆ. ಪರಿಶೀಲನೆಗಾಗಿ ನಾಮಪತ್ರಗಳನ್ನು ರಿಟರ್ನಿಂಗ್ ಅಧಿಕಾರಿಯು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ, ಅಂಥ ಪ್ರಮಾಣ ಅಥವಾ ದೃಢೀಕರಣವನ್ನು ಪರಿಶೀಲನೆಯ ದಿನಾಂಕದಂದು ಯಾವುದೇ ಸಮಯದಲ್ಲಿ ಮಾಡಲು ಸಾಧ್ಯವಿಲ್ಲ. ಉಚ್ಚ ನ್ಯಾಯಾಲಯವು ಇದನ್ನು ತರುವಾಯದ ಪ್ರಕರಣದಲ್ಲಿ, ಎಂದರೆ ಖಾದರ್ ಖಾನ್ ಹುಸೇನ್ ಖಾನ್ ಮತ್ತು ಇತರರು–ವಿರುದ್ಧ–ಎಸ್ ನಿಜಲಿಂಗಪ್ಪ(1970) ISCA 548–ಇದರಲ್ಲಿ ಈ ವಿಚಾರವನ್ನು ಸ್ಥಿರೀಕರಿಸಿದೆ. ಆದ್ದರಿಂದ, ನೀವು, ನಾಮಪತ್ರ ಸಲ್ಲಿಸಿದ ನಿಕಟ ತರುವಾಯದಲ್ಲೇ ಪ್ರಮಾಣ ಮಾಡಬೇಕು. ಆದರೆ ಯಾವ ಸಂದರ್ಭದಲ್ಲೂ ಇದು ಪರಿಶೀಲನೆಯ ದಿನಾಂಕದ ಹಿಂದಿನ ದಿನಕ್ಕಿಂತ ವಿಳಂಬವಾಗಬಾರದು.

2.7.2. ಪ್ರಮಾಣ ಅಥವಾ ಪ್ರತಿಜ್ಞೆಯನ್ನು ಅಧಿಕೃತ ಅಧಿಕಾರಿಯ ಮುಂದೆ ಖುದ್ದಾಗಿ ಮಾಡಬೇಕು.

2.7.3. ಒಂದು ಸಾರ್ವತ್ರಿಕ ಚುನಾವಣೆಯಲ್ಲಿ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದ್ದರೆ, ಒಂದಕ್ಕಿಂತ ಹೆಚ್ಚು ಸಲ ಪ್ರಮಾಣ ಅಥವಾ ಪ್ರತಿಜ್ಞೆಯನ್ನು ಮಾಡುವ ಅವಶ್ಯಕತೆ ಇಲ್ಲ.

ಈ ಅಂಶವನ್ನು ಸರ್ವೋಚ್ಚ ನ್ಯಾಯಾಲಯವು ಕೆ.ಕೆ. ಖಾದರ್ ಖಾನ್ ಹುಸೇನ್ ಖಾನ್ ಮತ್ತು ಇತರರು–ವಿರುದ್ಧ– ಎಸ್.ನಿಜಲಿಂಗಪ್ಪ ಮತ್ತು ಇತರರು (1970) ಖಅಂ 548– ಪ್ರಕರಣದ ತೀರ್ಪಿನಲ್ಲಿ ವ್ಯಕ್ತ ಪಡಿಸಿದೆ. 173(ಎ) ಅನುಚ್ಛೇದದ ಭಾಷೆಯು ಇದನ್ನು ಸ್ಪಷ್ಟಪಡಿಸುತ್ತದೆ; ಇದಕ್ಕೆಲ್ಲಾ ಅಗತ್ಯವಾಗಿರುವುದು ಯಾವುದೆಂದರೆ, ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸುವುದರಿಂದ ಅನರ್ಹಗೊಳ್ಳುವುದನ್ನು ನಿವಾರಿಸುವ ಹಾಗೆ ಸಂವಿಧಾನದ ಮೂರನೇ ಅನುಸೂಚಿಯಲ್ಲಿ ನಿರೂಪಿಸಿರುವ ನಮೂನೆಗೆ ಅನುಸಾರವಾಗಿ ಒಂದು ಪ್ರಮಾಣ ಮತ್ತು ಪ್ರತಿಜ್ಞೆ ಮಾಡುವುದು ಅಗತ್ಯವಾಗುತ್ತದೆ. ಸದರಿ ಅನುಚ್ಛೇದವು ಪ್ರತಿಯೊಂದು ಮತಕ್ಷೇತ್ರದಲ್ಲಿನ ಉಮೇದುವಾರಿಕೆಯ ಸಿಂಧುತ್ವಕ್ಕೆ ಮುಂಚೆ ಪ್ರಮಾಣ ಅಥವಾ ಪ್ರತಿಜ್ಞೆಯನ್ನು ಮಾಡಬೇಕು ಎಂದು ಉಲ್ಲೇಖಿಸುವುದಿಲ್ಲ, ಆದರೆ ಅವಶ್ಯ ಅರ್ಹತೆಯನ್ನು ಪಡೆದದ್ದಾದರೆ, ಆ ಅರ್ಹತೆಯು ಆ ಅನುಚ್ಛೇದದಲ್ಲಿ ಹೇಳಿರುವ ಪ್ರತಿಷೇಧವನ್ನು ತೆಗೆದು ಹಾಕುತ್ತದೆ ಎಂಬ ಸಂಗತಿಯನ್ನು ಗುರುತಿಸುತ್ತದೆ. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದರೆ, ಅಭ್ಯರ್ಥಿಯು ಪ್ರತಿಯೊಂದು ಮತಕ್ಷೇತ್ರದಲ್ಲಿ ಪ್ರಮಾಣ ಮಾಡುವುದು ಮತ್ತು ಅದಕ್ಕೆ ಸಹಿ ಮಾಡುವುದು ಅಪೇಕ್ಷಣೀಯ ಅಥವಾ ನಾಮಪತ್ರ ಪರಿಶೀಲನೆಯ ಸಮಯದಲ್ಲಿ ಅನವಶ್ಯಕ ಆಕ್ಷೇಪಣೆಗಳು ಎದುರಾಗುವುದನ್ನು ನಿವಾರಿಸುವ ಹಾಗೆ ಯಾವುದೇ ಸ್ಥಳಗಳಲ್ಲಿ ಪ್ರಮಾಣ ಮಾಡಿರುವ ಬಗ್ಗೆ ತೃಪ್ತಿಕರವಾದ ಪುರಾವೆಯನ್ನು ಅವರು ಇಟ್ಟುಕೊಂಡಿರಬೇಕು. ಕೆಲವು ಇತರ ಪ್ರಾಧಿಕಾರದ ಮುಂದೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿರುವ ಬಗ್ಗೆ ಸಾಬೀತು ಪಡಿಸುವ ಹೊಣೆಗಾರಿಕೆಯು ಅಭ್ಯರ್ಥಿಯ ಮೇಲೆಯೇ ಇರುತ್ತದೆ. ಆ ನಿರ್ದಿಷ್ಟ ಚುನಾವಣೆಗಾಗಿ ಅಧಿಕೃತ ಅಧಿಕಾರಿಯ ಮುಂದೆ ಅಭ್ಯರ್ಥಿಯು ಈ ಮೊದಲೇ ಪ್ರಮಾಣ ಅಥವಾ ಪ್ರತಿಜ್ಞೆಯನ್ನು ಮಾಡಿ ಅದಕ್ಕೆ ಸಹಿ ಮಾಡಿದ್ದೀರೆಂದು ಅಭ್ಯರ್ಥಿಯು ಅಥವಾ ಆತನ ಪ್ರತಿನಿಧಿಯು ರಿಟರ್ನಿಂಗ್ ಅಧಿಕಾರಿಗೆ ಮನದಟ್ಟು ಮಾಡಿಕೊಟ್ಟರೆ ಸಾಕಾಗುತ್ತದೆ.

2.7.4. ಅಭ್ಯರ್ಥಿಯು ಅಧಿಕೃತ ವ್ಯಕ್ತಿಯ ಮುಂದೆ ಮೊದಲು ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಆ ತರುವಾಯ ಅದಕ್ಕೆ ಸಹಿ ಮಾಡಬೇಕಾಗುತ್ತದೆ. ಪ್ರಮಾಣ ವಚನದ ನಮೂನೆಯನ್ನು ಮುದ್ರಿಸಿರುವ ಕಾಗದದ ಮೇಲೆ ಕೇವಲ ಸಹಿ ಮಾಡುವುದಷ್ಟೇ ಸಾಕಾಗುವುದಿಲ್ಲ ಎಂಬುದನ್ನು ಅವರು ಗಮನದಲ್ಲಿಡಬೇಕು. ಅಭ್ಯರ್ಥಿಯು ಅಧಿಕೃತ ವ್ಯಕ್ತಿಯ ಮುಂದೆ ಪ್ರಮಾಣ ಮಾಡಬೇಕಾಗುತ್ತದೆ. ಪ್ರಮಾಣ ವಚನವನ್ನು ಓದುವಂತೆ ಮತ್ತು ಆ ನಂತರ ದಿನಾಂಕ ನಮೂದಿಸಿ ಅದಕ್ಕೆ ಸಹಿ ಮಾಡುವಂತೆ ಅವರು ನಿಮಗೆ ಹೇಳುವರು. ಒಂದು ವೇಳೆ ಅಭ್ಯರ್ಥಿಯು ಅನಕ್ಷರಸ್ಥರಾಗಿದ್ದರೆ ಅಥವಾ ನಮೂನೆಯನ್ನು ಓದಲು ಸಾಧ್ಯವಿಲ್ಲದಿದ್ದರೆ, ಅಧಿಕೃತ ವ್ಯಕ್ತಿಯು ಓದಿ ಅದನ್ನು

ಪುನರುಚ್ಚಾರ ಮಾಡುವಂತೆ ಹೇಳುತ್ತಾರೆ ಮತ್ತು ಆ ತರುವಾಯ ನಮೂನೆಯ ಮೇಲೆ ಅವರ ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳುತ್ತಾರೆ. ಸದರಿ ಅಧಿಕೃತ ವ್ಯಕ್ತಿಯು ಆ ದಿನದಂದು ಮತ್ತು ಸಮಯದಂದು ಪ್ರಮಾಣ ಅಥವಾ ಪ್ರತಿಜ್ಞೆಯನ್ನು ಕೈಗೊಂಡು ಅದಕ್ಕೆ ಸಹಿ ಮಾಡಿರುವುದಾಗಿ ನಮೂನೆಯ ಮೇಲೆ ಹಿಂಬರಹ ಮಾಡಬೇಕು.

2.7.5. ಅಧಿಕೃತ ವ್ಯಕ್ತಿಯು ಅಭ್ಯರ್ಥಿಗೆ ಆ ದಿನದಂದು ಒಂದು ನಿರ್ದಿಷ್ಟ ಸಮಯದಲ್ಲಿ ತನ್ನ ಮುಂದೆ ಪ್ರಮಾಣ ಮಾಡಿ ಅದಕ್ಕೆ ಅಭ್ಯರ್ಥಿಯು ಸಹಿ ಮಾಡಿರುತ್ತಾರೆಂಬ ಬಗ್ಗೆ ಒಂದು ಪ್ರಮಾಣ ಪತ್ರವನ್ನು ನೀಡುತ್ತಾರೆ. ಅಭ್ಯರ್ಥಿಗೆ ಪ್ರಮಾಣಪತ್ರ ನೀಡದೇ ಇದ್ದಲ್ಲಿ, ಅಭ್ಯರ್ಥಿಯಲ್ಲಿ ಕೇಳಿ ಪಡೆಯಬಹುದು.

2.7.6. ಒಂದು ವೇಳೆ, ಅಧಿಕೃತ ವ್ಯಕ್ತಿಯು ಕಾರಾಗೃಹದ ಅಥವಾ ಸ್ಥಾನಬದ್ಧತಾ ಶಿಬಿರದ ಅಧೀಕ್ಷಕ ಅಥವಾ ಕಮಾಂಡೆಂಟ್ ಆಗಿದ್ದಲ್ಲಿ, ಅವರು ನಾಮಪತ್ರಗಳ ಪರಿಶೀಲನೆಯ ಸಮಯದಲ್ಲಿ ಪುರಾವೆಯಾಗಿ ರಿಟರ್ನಿಂಗ್ ಅಧಿಕಾರಿಯ ಮುಂದೆ ಹಾಜರು ಪಡಿಸುವುದಕ್ಕಾಗಿ ಪ್ರಮಾಣವಚನದ ಪ್ರಮಾಣೀಕೃತ ಪ್ರತಿಯನ್ನು ಕೂಡಲೇ ಅಭ್ಯರ್ಥಿಗೆ ನೀಡಬೇಕು. ಕಾರಾಗೃಹದ ಅಧೀಕ್ಷಕರು ಅಥವಾ ಸ್ಥಾನಬದ್ಧತಾ ಶಿಬಿರದ ಕಮಾಂಡೆಂಟರು ಅಭ್ಯರ್ಥಿಯು ಯಾವ ದಿನಾಂಕ ಮತ್ತು ಸಮಯದಲ್ಲಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಸಹಿ ಮಾಡಿರುವಿರೋ ಆ ದಿನಾಂಕ ಮತ್ತು ಸಮಯವನ್ನು ತಿಳಿಸಿ ರಿಟರ್ನಿಂಗ್ ಅಧಿಕಾರಿಗೆ ಏಕಕಾಲದಲ್ಲಿ ಕ್ಷಿಪ್ರ ರವಾನೆ ಸಾಧನಗಳ ಮೂಲಕ ಲಿಖಿತವಾಗಿ ಕಳುಹಿಸುವರು. ಅಭ್ಯರ್ಥಿಯು ಸಹಿ ಮಾಡಿ ಸಲ್ಲಿಸಿರುವ ಪ್ರಮಾಣ ಅಥವಾ ಪ್ರತಿಜ್ಞೆಯ ಮೂಲಪ್ರತಿಯನ್ನು ಸಹ ಅವರು ರಿಟರ್ನಿಂಗ್ ಅಧಿಕಾರಿಗೆ ಕಳುಹಿಸಿಕೊಡುವರು.

2.7.7. ಅಧಿಕೃತ ವ್ಯಕ್ತಿಯು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕನಾಗಿದ್ದರೆ ಅಥವಾ ವೃತ್ತಿ ವೈದ್ಯರಾಗಿದ್ದರೆ ಅಥವಾ ಅಭ್ಯರ್ಥಿಯು ಇರುವಂಥ ದೇಶದಲ್ಲಿರುವ ಭಾರತದ ಒಬ್ಬ ರಾಜತಾಂತ್ರಿಕನಾಗಿದ್ದರೆ ಅಥವಾ ಕಾನ್ಸುಲರ್ ಪ್ರತಿನಿಧಿಯಾಗಿದ್ದರೆ, ಜಿಲ್ಲಾ ನ್ಯಾಯಾಧೀಶರಾಗಿದ್ದರೆ ಅಥವಾ ಜಿಲ್ಲಾ ನ್ಯಾಯಾಧೀಶರಲ್ಲದ ರಾಜ್ಯ ನ್ಯಾಯಿಕ ಸೇವೆಗೆ ಸೇರಿದ ವ್ಯಕ್ತಿಯಾಗಿದ್ದರೆ ಅಥವಾ ಸ್ಟೈಪೆಂಡಿಯರಿ ಪ್ರಿಸಿಡೆನ್ಸಿ ಮ್ಯಾಜಿಸ್ಟ್ರೇಟ್ ಆಗಿದ್ದರೆ ಅಥವಾ ಪ್ರಥಮ ದರ್ಜೆ ಸ್ಟೈಪೆಂಡಿಯರಿ ಮ್ಯಾಜಿಸ್ಟ್ರೇಟ್ ಆಗಿದ್ದರೆ, ಅಥವಾ ಚುನಾವಣಾ ಆಯೋಗವು ನಾಮನಿರ್ದೇಶಿಸಿದ ವ್ಯಕ್ತಿಯಾಗಿದ್ದರೆ, ನೀವು ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಅದಕ್ಕೆ ಸಹಿ ಮಾಡಿದ ತರುವಾಯ, ಆದಷ್ಟು ಬೇಗ ಅವರು ಆ ಸಂಗತಿಯನ್ನು ಪ್ರಮಾಣೀಕರಿಸಿ ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳಬೇಕು ಮತ್ತು ಮೂಲ ಪ್ರತಿಯನ್ನು ಅಭ್ಯರ್ಥಿಗೆ ಹಸ್ತಾಂತರಿಸಬೇಕು. ಮೂಲ ಪ್ರಮಾಣ ಅಥವಾ ಪ್ರತಿಜ್ಞಾ ವಚನದ ಪತ್ರವನ್ನು ನಾಮಪತ್ರಗಳ ಪರಿಶೀಲನೆಗೆ ನಿಗದಿ ಪಡಿಸಿರುವ ಸಮಯಕ್ಕೆ ಅಥವಾ ಅದಕ್ಕೂ ಮುಂಚೆ ರಿಟರ್ನಿಂಗ್ ಅಧಿಕಾರಿಯ

ಮುಂದೆ ಹಾಜರು ಪಡಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಅಭ್ಯರ್ಥಿಯದ್ದಾಗಿದೆ.

2.7.8. ಪ್ರಮಾಣವಚನದ ಅಥವಾ ಪ್ರತಿಜ್ಞಾವಚನದ ನಮೂನೆಯನ್ನು ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಪಡೆಯಬೇಕು.

2.7.9. ಪ್ರಮಾಣ ಅಥವಾ ಪ್ರತಿಜ್ಞೆಯನ್ನು ಮಾಡಿ ಅದಕ್ಕೆ ಸಹಿ ಮಾಡಿರುವ ಬಗ್ಗೆ ಪರಿಶೀಲನೆಯ ಸಂದರ್ಭದಲ್ಲಿ ರಿಟರ್ನಿಂಗ್ ಅಧಿಕಾರಿಯ ಮುಂದೆ ಹಾಜರುಪಡಿಸಲು ಸಮರ್ಪಕವಾದ ದಾಖಲೆ ಪತ್ರಗಳನ್ನು ಅಭ್ಯರ್ಥಿಯು ಜೋಪಾನವಾಗಿ ಇಟ್ಟುಕೊಂಡಿರಬೇಕು. ಇಲ್ಲದಿದ್ದಲ್ಲಿ, ಅಭ್ಯರ್ಥಿಯು ಅಗತ್ಯ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿಲ್ಲ ಮತ್ತು ಅದಕ್ಕೆ ಸಹಿ ಮಾಡಿಲ್ಲವೆಂದು ಯಾರಾದರೂ ಆಕ್ಷೇಪಣೆ ಸಲ್ಲಿಸಿದಲ್ಲಿ, ಅವರಿಗೆ ಕಷ್ಟ ಎದುರಾಗಬಹುದು. ಇದರಿಂದಾಗಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅನರ್ಹನಾಗುತ್ತಾನೆ.

## 2.8. ಲೋಕಸಭಾ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಸಂಬಂಧಿಸಿದ ಅನರ್ಹತೆಗಳು

ಅಭ್ಯರ್ಥಿಯು ಒಂದು ಸಂಸದೀಯ ಮತಕ್ಷೇತ್ರದಿಂದ ಲೋಕಸಭೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಯಸಿದಲ್ಲಿ, ಅವರು ಈ ಮುಂದಿನ ಯಾವುದೇ ಸಾಂವಿಧಾನಿಕ ಮತ್ತು ಶಾಸನಬದ್ಧವಾದ ಅನರ್ಹತೆಗಳನ್ನು ಹೊಂದಿರಬಾರದು:

### 2.8.1. ಸಾಂವಿಧಾನಿಕ ಅನರ್ಹತೆಗಳು:

1. ಮೊದಲನೆಯದಾಗಿ, ಅಭ್ಯರ್ಥಿಯು ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಡಿಯಲ್ಲಿ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು. [ಸಂವಿಧಾನದ ಅನುಚ್ಛೇದ 102(1)(ಎ)] ಈ ಸಾಮಾನ್ಯ ನಿಯಮಕ್ಕೆ ಕೆಲವು ವಿನಾಯತಿಗಳಿವೆ. ಮೊದಲನೇ ವಿನಾಯತಿಯನ್ನು ಅನುಚ್ಛೇದ 102 (2)ರಲ್ಲಿಯೇ ಉಲ್ಲೇಖಿಸಲಾಗಿದೆ. ಅದರ ಪ್ರಕಾರ, ಕೇಂದ್ರದ ಅಥವಾ ಯಾವುದೇ ರಾಜ್ಯದ ಸಚಿವರೊಬ್ಬರ ಹುದ್ದೆಯನ್ನು ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಡಿಯಲ್ಲಿ ಒಂದು ಲಾಭದಾಯಕ ಹುದ್ದೆ ಎಂದು ಪರಿಗಣಿಸಲಾಗುವುದಿಲ್ಲ. ಇತರ ವಿನಾಯತಿಗಳನ್ನು ಸಂಸತ್ (ಅನರ್ಹತೆಗಳ ನಿವಾರಣೆ) ಅಧಿನಿಯಮ, 1959 (1959ರ 10)ರಲ್ಲಿ ಉಲ್ಲೇಖಿಸಲಾಗಿದೆ.

**ವಿ.ಸೂ.** 1. ಅಭ್ಯರ್ಥಿಯ ಅನುಕೂಲಕ್ಕಾಗಿ, ಈ ಅಧಿನಿಯಮವನ್ನು (1959ರ 10) ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಸಚಿವಾಲಯದ ಮೂಲಕ ಭಾರತ ಸರ್ಕಾರವು ಪ್ರಕಟಿಸಿರುವ ಚುನಾವಣಾ ಕಾನೂನು ಕೈಪಿಡಿಯಲ್ಲಿ ಯಥಾವತ್ತಾಗಿ ನಿರೂಪಿಸಲಾಗಿದೆ.

2. ಎರಡನೆಯದಾಗಿ, ಅಭ್ಯರ್ಥಿಯು ಮಾನಸಿಕವಾಗಿ ಅಸ್ವಸ್ಥಚಿತ್ತರಾಗಿರಬಾರದು ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿರಬಾರದು. [ಸಂವಿಧಾನದ 102(1)(ಬಿ) ಅನುಚ್ಛೇದ].

3. ಮೂರನೆಯದಾಗಿ, ಅಭ್ಯರ್ಥಿಯು ಅವಿಮುಕ್ತ ದಿವಾಳಿಯಾಗಿರಬಾರದು (ಸಂವಿಧಾನದ 102(1)(ಸಿ) ಅನುಚ್ಛೇದ).

4. ನಾಲ್ಕನೆಯದಾಗಿ, ಅಭ್ಯರ್ಥಿಯು ಒಬ್ಬ ಭಾರತದ ನಾಗರಿಕನಾಗಿಲ್ಲದಿದ್ದರೆ ಅಥವಾ ನೀವು ಯಾವುದೇ ವಿದೇಶೀ ರಾಜ್ಯದ ನಾಗರಿಕತ್ವವನ್ನು ಸ್ವ–ಇಚ್ಛೆಯಿಂದ ಆರ್ಜಿಸಿದ್ದರೆ ಅಥವಾ ಒಂದು ವಿದೇಶೀ ರಾಷ್ಟ್ರಕ್ಕೆ ಯಾವುದೇ ನಿಷ್ಠೆ ಮತ್ತು ಅನುಸಕ್ತಿ ಹೊಂದಿರುವುದನ್ನು ಒಪ್ಪಿಕೊಂಡಿದ್ದರೆ, ಅವರನ್ನು ಅನರ್ಹಗೊಳಿಸಲಾಗುವುದು. ಸರಳವಾಗಿ ಹೇಳುವುದಾದರೆ, ಅಭ್ಯರ್ಥಿಯು ಒಬ್ಬ ಅನ್ಯದೇಶೀಯ ಅಥವಾ ವಿದೇಶೀಯನಾಗಿರಬಾರದು. [ಸಂವಿಧಾನದ ಅನುಚ್ಛೇದ 102(1)(ಡಿ)].

5. ಕೊನೆಯದಾಗಿ, ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಭ್ಯರ್ಥಿಯು ಅನರ್ಹರಾಗಿರಬಾರದು. [ಸಂವಿಧಾನದ ಅನುಚ್ಛೇದ 102(1)(ಇ)].

### 2.8.2. **ಶಾಸನಬದ್ಧ ಅನರ್ಹತೆಗಳು**

ಮೇಲೆ ಉಲ್ಲೇಖಿಸಿರುವ ಸಂವಿಧಾನದ 102(1)(ಇ) ಅನುಚ್ಛೇದದಲ್ಲಿ ಯೋಜಿಸಲಾದಂತೆ ಸಂಸತ್ತು ರಚಿಸಿರುವ ಕಾನೂನು ಯಾವುದೆಂದರೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951. ಮೇಲ್ಕಂಡ ಸಾಂವಿಧಾನಿಕ ಅನರ್ಹತೆಗಳ ಜೊತೆಗೆ, 1951ರ ಜನತಾ ಪ್ರಾತಿನಿಧ್ಯ ಅಧಿನಿಯಮವು ಸಂಸತ್ತಿನ ಒಬ್ಬ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗಿರಲು ಹಲವು ಅನರ್ಹತೆಗಳನ್ನು ನಿರೂಪಿಸಿದೆ. ಈ ಅನರ್ಹತೆಗಳ ಬಗ್ಗೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 8ನೇ ಪ್ರಕರಣ, 8–ಎ ಪ್ರಕರಣ, 9ನೇ ಪ್ರಕರಣ, 9ಎ ಪ್ರಕರಣ, 10 ಮತ್ತು 10–ಎ ಪ್ರಕರಣದಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ, ಈ ಅನರ್ಹತೆಗಳನ್ನು ಮೇಲೆ

ವಿವರಿಸಲಾದ ಸಾಂವಿಧಾನಿಕ ಅನರ್ಹತೆಗಳಿಂದ ಪ್ರತ್ಯೇಕವಾಗಿ ಗುರುತಿಸುವ ಸಲುವಾಗಿ, ಶಾಸನ ಬದ್ಧ ಅನರ್ಹತೆಗಳು ಎಂದು ಕರೆಯಬಹುದು. ಶಾಸನಬದ್ಧ ಅನರ್ಹತೆಗಳ ಒಟ್ಟು ಸಂಖ್ಯೆ ಆರು.

1. ಮೊದಲನೆಯ ಶಾಸನಬದ್ಧ ಅನರ್ಹತೆಯು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 8ರಲ್ಲಿ ಒಳಗೊಂಡಿದೆ. ಈ ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯು,–

(ಎ) ಭಾರತ ದಂಡ ಸಂಹಿತೆ, 1860 (1860ರ 45)ರ 153ಎ ಪ್ರಕರಣ (ಮತ,ಮೂಲ ವಂಶ, ಜನ್ಮಸ್ಥಳ, ನಿವಾಸ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ಮಧ್ಯೆ ದ್ವೇಷವನ್ನು ಹೆಚ್ಚಿಸುವ ಅಪರಾಧ, ಮತ್ತು ಸೌಹಾರ್ದತೆಗೆ ಬಾಧಕವಾಗುವ ಕೃತ್ಯಗಳನ್ನು ಮಾಡುವುದು) ಅಥವಾ 171ಇ ಪ್ರಕರಣ (ಲಂಚಗುಳಿತನದ ಅಪರಾಧ) ಅಥವಾ 171 ಎಫ್ ಪ್ರಕರಣ (ಚುನಾವಣೆಯಲ್ಲಿ ಅನುಚಿತ ಪ್ರಭಾವಕ್ಕೊಳಗಾಗಿರುವ ಅಥವಾ ಮತ್ತೊಬ್ಬರ ಸೋಗಿನಲ್ಲಿ ಮತ ಚಲಾಯಿಸುವ ಅಪರಾಧ) ಅಥವಾ 376ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣ ಅಥವಾ 376ಎ ಪ್ರಕರಣ ಅಥವಾ 376ಬಿ ಪ್ರಕರಣ ಅಥವಾ 376ಸಿ ಪ್ರಕರಣ ಅಥವಾ 376ಡಿ ಪ್ರಕರಣ (ಬಲಾತ್ ಸಂಭೋಗಕ್ಕೆ ಸಂಬಂಧಿಸಿದ ಅಪರಾಧಗಳು) ಅಥವಾ 498ಎ ಪ್ರಕರಣ (ಗಂಡ ಅಥವಾ ಗಂಡನ ಸಂಬಂಧಿಕರಿಂದ ಸ್ತ್ರೀಗೆ ಉಂಟು ಮಾಡುವ ಕ್ರೌರ್ಯದ ಅಪರಾಧ) ಅಥವಾ 505ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ (ವರ್ಗಗಳ ನಡುವೆ ವೈರ, ದ್ವೇಷ ಅಥವಾ ವೈಮನಸ್ಯವನ್ನು ಉಂಟು ಮಾಡುವ ಅಥವಾ ಬೆಳೆಸುವ ಹೇಳಿಕೆಯನ್ನು ಕೊಡುವ ಅಪರಾಧ ಅಥವಾ ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಮತೀಯ ಪೂಜೆಯಲ್ಲಿ ಅಥವಾ ಮತೀಯ ಕರ್ಮಗಳಲ್ಲಿ ತೊಡಗಿದ ಯಾವುದೇ ಕೂಟದಲ್ಲಿ ಕೊಡುವ ಅಂಥ ಹೇಳಿಕೆಗೆ ಸಂಬಂಧಿಸಿದ ಅಪರಾಧ) ಮೇರೆಗೆ; ಅಥವಾ

(ಬಿ) "ಅಸ್ಪೃಶ್ಯತೆ"ಯ ಬೋಧನೆ ಮತ್ತು ಆಚರಣೆಗಾಗಿ ಶಿಕ್ಷೆಯನ್ನು ಮತ್ತು ಅದರಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯ ಜಾರಿಯನ್ನು ಉಪಬಂಧಿಸುವ ನಾಗರೀಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955ರ (1955ರ 22) ಮೇರೆಗೆ; ಅಥವಾ

(ಸಿ) ಸೀಮಾ ಸುಂಕ ಅಧಿನಿಯಮ, 1962 (1962ರ 52)ರ 11ನೇ ಪ್ರಕರಣದ (ನಿಷೇಧಿತ ಸರಕುಗಳನ್ನು ಅಮದು ಮಾಡುವ ಅಥವಾ ರಫ್ತು ಮಾಡುವ ಅಪರಾಧ) ಮೇರೆಗೆ; ಅಥವಾ

(ಡಿ) ಕಾನೂನು ಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967 (1967ರ 37)ರ 10 ರಿಂದ 12ರ ವರೆಗಿನ ಪ್ರಕರಣಗಳ (ಕಾನೂನು ಬಾಹಿರವೆಂದು ಘೋಷಿಸಲಾಗಿರುವ ಸಂಘದ

ಸದಸ್ಯನಾಗಿರುವ ಅಪರಾಧ, ಕಾನೂನು ಬಾಹಿರ ಸಂಘದ ನಿಧಿಗಳೊಂದಿಗೆ ವ್ಯವಹರಿಸುವುದಕ್ಕೆ ಸಂಬಂಧಪಟ್ಟ ಅಪರಾಧ ಅಥವಾ ಅಧಿಸೂಚಿತ ಸ್ಥಳಕ್ಕೆ ಸಂಬಂಧಿಸಿದಂತೆ ಮಾಡಿದ ಆದೇಶದ ಉಲ್ಲಂಘನೆಗೆ ಸಂಬಂಧಪಟ್ಟ ಅಪರಾಧ) ಮೇರೆಗೆ; ಅಥವಾ

(ಇ) ವಿದೇಶಿ ವಿನಿಯಮ (ನಿಯಂತ್ರಣ) ಅಧಿನಿಯಮ, 1973ರ (1973ರ 46) ಮೇರೆಗೆ; ಅಥವಾ

(ಎಫ್) ನಿದ್ರಾಜನಕ ಔಷಧಿಗಳು ಮತ್ತು ಮನಃಪ್ರಭಾವಿ ಪದಾರ್ಥಗಳ ಅಧಿನಿಯಮ, 1985 (1985ರ 61)ರ ಮೇರೆಗೆ; ಅಥವಾ

(ಜಿ) ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1987ರ (1987ರ 28) 3ನೇ ಪ್ರಕರಣದ (ಭಯೋತ್ಪಾದಕ ಕಾರ್ಯಗಳನ್ನು ಮಾಡುವ ಅಪರಾಧ) ಅಥವಾ 4ನೇ ಪ್ರಕರಣದ (ವಿಚ್ಛಿದ್ರಕಾರಕ ಚಟುವಟಿಕೆಗಳನ್ನು ಮಾಡುವ ಅಪರಾಧ) ಮೇರೆಗೆ; ಅಥವಾ

(ಎಚ್) ಧಾರ್ಮಿಕ ಸಂಸ್ಥೆಗಳ (ದುರುಪಯೋಗದ ಪ್ರತಿಬಂಧ) ಅಧಿನಿಯಮ, 1988ರ (1988ರ 41) 7ನೇ ಪ್ರಕರಣದ (3ರಿಂದ 6ರ ವರೆಗಿನ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುವ ಅಪರಾಧ) ಮೇರೆಗೆ; ಅಥವಾ

(ಐ) ಜನತಾ ಪ್ರಾತಿನಿಧ್ಯ  ಅಧಿನಿಯಮ, 1951ರ 125ನೇ ಪ್ರಕರಣದ (ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರವನ್ನು ಬೆಳೆಸುವ ಅಪರಾಧ) ಅಥವಾ 135ನೇ ಪ್ರಕರಣದ (ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವ ಅಪರಾಧ) ಅಥವಾ 135ಎ ಪ್ರಕರಣ (ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ) ಅಥವಾ 136ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ (ಯಾವುದೇ ನಾಮನಿರ್ದೇಶನ ಪತ್ರಗಳನ್ನು ಮೋಸದಿಂದ ವಿರೂಪಗೊಳಿಸುವ ಅಥವಾ ಮೋಸದಿಂದ ನಾಶಪಡಿಸುವ ಅಪರಾಧ); ಅಥವಾ

(ಜೆ) ಪೂಜಾ ಸ್ಥಳಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1991ರ 6ನೇ ಪ್ರಕರಣ (ಪೂಜಾ ಸ್ಥಳವನ್ನು ಪರಿವರ್ತಿಸುವ ಅಪರಾಧ); ಅಥವಾ

(ಕೆ) ರಾಷ್ಟ್ರಗೌರವ ಅಪಮಾನ ಪ್ರತಿಬಂಧಕ ಅಧಿನಿಯಮ, 1971 (1971ರ 69)ರ 2ನೇ ಪ್ರಕರಣ (ಭಾರತದ ರಾಷ್ಟ್ರಧ್ವಜಕ್ಕೆ ಅಥವಾ ಭಾರತ ಸಂವಿಧಾನಕ್ಕೆ ಅಪಮಾನ ಮಾಡುವ ಅಪರಾಧ) ಅಥವಾ 3ನೇ ಪ್ರಕರಣ (ರಾಷ್ಟ್ರಗೀತೆ ಹಾಡುವುದನ್ನು ಪ್ರತಿಬಂಧಿಸುವ ಅಪರಾಧ); ಅಥವಾ

(ಎಲ್) ಸತಿ ಹೋಗುವಿಕೆ (ಪ್ರತಿಬಂಧ) ಅಧಿನಿಯಮ, 1987 (1988ರ 3); ಅಥವಾ

(ಎಂ) ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 (1988ರ 49); ಅಥವಾ

(ಎನ್) ಭಯೋತ್ಪಾದನ ಪ್ರತಿಬಂಧಕ ಅಧಿನಿಯಮ, 2002 (2002ರ 15); – ಇವುಗಳ ಮೇರೆಗೆ

(i) ಅಪರಾಧಿಯೆಂದು ನಿರ್ಣೀತನಾಗಿರುವ ವ್ಯಕ್ತಿಯು ಜುಲ್ಮಾನೆ ಶಿಕ್ಷೆಗೆ ಮಾತ್ರ ಗುರಿಯಾಗಿರುವಲ್ಲಿ, ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಆರು ವರ್ಷಗಳ ಅವಧಿಗಾಗಿ ಅನರ್ಹಗೊಳ್ಳತಕ್ಕದ್ದು;

(ii) ಅಪರಾಧಿಯೆಂದು ನಿರ್ಣಿತನಾಗಿರುವ ವ್ಯಕ್ತಿಯು ಕಾರಾವಾಸ ಶಿಕ್ಷೆಗೆ ಗುರಿಯಾಗಿರುವಲ್ಲಿ, ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳಿಸತಕ್ಕದ್ದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕದ್ದು;

2. 8ನೇ ಪ್ರಕರಣದ ಉಪ–ಪ್ರಕರಣದ ಮೇರೆಗೆ ದಾಸ್ತಾನು ಮಾಡುವುದನ್ನು ಅಥವಾ ಲಾಭ ಬಡುಕತನವನ್ನು ಅಥವಾ ಆಹಾರ ಅಥವಾ ಔಷಧಗಳ ಕಲಬೆರೆಕೆ ಪ್ರತಿಬಂಧಿಸುವ ಬಗ್ಗೆ ಉಪಬಂಧಿಸುವ ಯಾವುದೇ ಕಾನೂನನ್ನು; ಅಥವಾ ವಧು–ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961ರ 28)ರ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿರುವುದಕ್ಕಾಗಿ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ಮತ್ತು ಆರು ತಿಂಗಳುಗಳಿಗೆ ಕಡಿಮೆ ಇಲ್ಲದ ಕಾರಾವಾಸ ಶಿಕ್ಷೆಗೆ ಗುರಿಯಾದ ಒಬ್ಬ ವ್ಯಕ್ತಿಯು, ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕದ್ದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕದ್ದು.

3. ಮೇಲಿನ (i) ಮತ್ತು (ii)ರಲ್ಲಿ ಉಲ್ಲೇಖಿಸಿರುವ ಅಪರಾಧವನ್ನು ಹೊರತುಪಡಿಸಿ ಯಾವುದೇ ಇತರ ಅಪರಾಧಕ್ಕಾಗಿ ಭಾರತದಲ್ಲಿನ ಯಾವುದೇ ನ್ಯಾಯಾಲಯದಿಂದ ಅಪರಾಧಿ ಎಂದು ನಿರ್ಣೀತನಾದ ಮತ್ತು ಎರಡು ವರ್ಷಗಳಿಗೆ ಕಡಿಮೆಯಿಲ್ಲದಂತೆ ಕಾರಾಗೃಹ ಶಿಕ್ಷೆಗೆ ಗುರಿಯಾದ ಯಾರೇ ವ್ಯಕ್ತಿಯನ್ನು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳಿಸತಕ್ಕದ್ದು ಮತ್ತು ಅವನು ಕಾರಾಗೃಹದಿಂದ ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರಿಯತಕ್ಕದ್ದು. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 8(3)ನೇ ಪ್ರಕರಣದ ಉದ್ದೇಶಗಳಿಗಾಗಿ ಸಾಮಾನ್ಯ ವಿಚಾರಣೆಯಲ್ಲಿ ಒಂದಕ್ಕಿಂತ ಹೆಚ್ಚಿನ ಅಪರಾಧಗಳಿಗೆ ಕಾರಾವಾಸದ ಶಿಕ್ಷೆಯಿಂದ ಶಿಕ್ಷಿತನಾದರೆ, ಪ್ರತಿ ಅಪರಾಧಿತ ಕಾರಾವಾಸದ ಶಿಕ್ಷೆಯ ಅವಧಿಯನ್ನು ಸೇರಿಸಬೇಕು. ಅಂಥ ಅಪರಾಧ ನಿರ್ಣಯ ಅಥವಾ ಶಿಕ್ಷೆಯ ಪರಿಣಾಮವಾಗಿ ಕಾರಾಗೃಹದಲ್ಲಿರಿಸಲು

ಆದೇಶಿಸಲಾಗಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಒಟ್ಟು ಅವಧಿಯು ಎರಡು ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಾಗಿರತಕ್ಕದ್ದು ಮತ್ತು ಅಪರಾಧಿಯೆಂದು ನಿರ್ಣಿತನಾದ ವ್ಯಕ್ತಿಯು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 8(3)ನೇ ಪ್ರಕರಣದಡಿ ಅನರ್ಹನಾಗತಕ್ಕದ್ದು. ಸದರಿ ಪ್ರಕರಣದಡಿಯಲ್ಲಿನ ಅನರ್ಹತೆಯು ಅಪರಾಧ ನಿರ್ಣಯದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿದ್ದರೂ ಮತ್ತು ಸ್ಪರ್ಧಿಸಲಿಚ್ಛಿಸಿರುವ ವ್ಯಕ್ತಿ ಜಾಮೀನಿನ ಮೇಲಿರಲಿ ಅಥವಾ ಇಲ್ಲದಿರಲಿ, ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಅಪರಾಧ ನಿರ್ಣಯದ ದಿನಾಂಕದಿಂದ ಪ್ರಾರಂಭವಾಗುತ್ತದೆಂದು ಚುನಾವಣಾ ಆಯೋಗವು ಸ್ಪಷ್ಟಪಡಿಸಿದೆ.

4. ಎರಡನೇ ಶಾಸನ ಬದ್ಧ ಅನರ್ಹತೆಯು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 8–ಎ ಪ್ರಕರಣದಲ್ಲಿ ಅಡಕವಾಗಿದೆ. ಚುನಾವಣೆಯಲ್ಲಿ ನಡೆಸಿದ ಭ್ರಷ್ಟಾಚಾರಗಳ ಆಧಾರದ ಮೇಲೆ ಅನರ್ಹಗೊಳಿಸಲು ಅವಕಾಶ ಕಲ್ಪಿಸುತ್ತದೆ. ಚುನಾವಣಾ ತಕರಾರು ಅರ್ಜಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ಅಥವಾ ಚುನಾವಣಾ ಮೇಲ್ಮನವಿಯಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಒಬ್ಬ ವ್ಯಕ್ತಿಯು ಭ್ರಷ್ಟಾಚಾರ ಮಾಡಿರುವ ತಪ್ಪಿತಸ್ಥನೆಂದು ಕಂಡುಬಂದರೆ, ಚುನಾವಣಾ ಆಯೋಗದ ಅಭಿಪ್ರಾಯಕ್ಕೆ ಅನುಸಾರವಾಗಿ, ರಾಷ್ಟ್ರಪತಿಯವರು ನಿರ್ಧರಿಸಬಹುದಾದಂತೆ, ಆರು ವರ್ಷಗಳನ್ನು ಮೀರದಂಥ ಅವಧಿಯವರೆಗೆ ಅನರ್ಹಗೊಳಿಸಬಹುದು.

5. ಮೂರನೇ ಶಾಸನಬದ್ಧ ಅನರ್ಹತೆಯು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 9ನೇ ಪ್ರಕರಣದಲ್ಲಿ ಒಳಗೊಂಡಿದೆ. ಅದು ಭ್ರಷ್ಟಾಚಾರ ಅಥವಾ ದೇಶದ್ರೋಹಕ್ಕಾಗಿ ವಜಾ ಆಗಿರುವ ವ್ಯಕ್ತಿಯನ್ನು ಅನರ್ಹಗೊಳಿಸಲು ಉಪಬಂಧ ಕಲ್ಪಿಸುತ್ತದೆ. ಸರ್ಕಾರದ ಅಧೀನದಲ್ಲಿ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿದ್ದು ಭ್ರಷ್ಟಾಚಾರ ಅಥವಾ ದೇಶದ್ರೋಹಕ್ಕಾಗಿ ವಜಾ ಆಗಿರುವ ಒಬ್ಬ ವ್ಯಕ್ತಿಯನ್ನು, ಹಾಗೆ ವಜಾ ಆದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅನರ್ಹಗೊಳಿಸತಕ್ಕದ್ದು. ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿರುವ ವ್ಯಕ್ತಿಯನ್ನು ಭ್ರಷ್ಟಾಚಾರ ಅಥವಾ ದೇಶದ್ರೋಹಕ್ಕಾಗಿ ವಜಾ ಮಾಡಲಾಗಿದೆ ಅಥವಾ ಮಾಡಲಾಗಿಲ್ಲ ಎಂಬುದಾಗಿ ಚುನಾವಣಾ ಆಯೋಗವು ನೀಡಿದ ಪ್ರಮಾಣಪತ್ರವು ಆ ಸಂಗತಿಯ ಬಗ್ಗೆ ನಿರ್ಣಾಯಕ ರುಜುವಾತು ಆಗಿರತಕ್ಕದ್ದು. ಆದಾಗ್ಯೂ, ಒಬ್ಬ ವ್ಯಕ್ತಿಯನ್ನು ಭ್ರಷ್ಟಾಚಾರಕ್ಕಾಗಿ ಅಥವಾ ದೇಶದ್ರೋಹಕ್ಕಾಗಿ ವಜಾ ಮಾಡಲಾಗಿದೆ ಎಂಬ ಪ್ರಮಾಣಪತ್ರವನ್ನು, ಸದರಿ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರತು ನೀಡತಕ್ಕುದಲ್ಲ.

6. ನಾಲ್ಕನೇ ಶಾಸನಬದ್ಧ ಅನರ್ಹತೆಯು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 9–ಎ ಪ್ರಕರಣದಲ್ಲಿ ಒಳಗೊಂಡಿದೆ. ಈ ಪ್ರಕರಣದ ಮೇರೆಗೆ, ಒಬ್ಬ ವ್ಯಕ್ತಿಯು ಭಾರತ ಸರ್ಕಾರಕ್ಕೆ ಸರಕುಗಳ ಸರಬರಾಜಿಗಾಗಿ ಅಥವಾ ಅದು ಕೈಗೊಂಡಿರುವ ಯಾವುದೇ ಕಾಮಗಾರಿಗಳ ನಿರ್ವಹಣೆಗಾಗಿ ಆ ಸರ್ಕಾರದೊಂದಿಗೆ ತನ್ನ ವೃತ್ತಿ ಅಥವಾ ವ್ಯವಹಾರದ ಕ್ರಮದಲ್ಲಿ ತಾನು ಮಾಡಿಕೊಂಡಿರುವ ಕರಾರು ಅಸ್ತಿತ್ವದಲ್ಲಿದ್ದರೆ ಮತ್ತು ಹಾಗೆ ಇರುವವರೆಗೆ ಸಂಸತ್ತಿನ ಒಬ್ಬ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗುವುದಕ್ಕಾಗಿ ಅನರ್ಹಗೊಳ್ಳತಕ್ಕದ್ದು. ಆದಾಗ್ಯೂ, ಅಭ್ಯರ್ಥಿಯು ಭಾರತ ಸರ್ಕಾರಕ್ಕೆ ಸರಕುಗಳ ಸರಬರಾಜಿಗಾಗಿ ಅಥವಾ ಅದು ಕೈಗೊಂಡಿರುವ ಯಾವುದೇ ಕಾಮಗಾರಿಗಳ ನಿರ್ವಹಣೆಗಾಗಿ ಆ ಸರ್ಕಾರದೊಂದಿಗೆ ಅವರ ವೃತ್ತಿ ಅಥವಾ ವ್ಯವಹಾರದ ಕ್ರಮದಲ್ಲಿ ಅವರು ಕರಾರನ್ನು ಮಾಡಿಕೊಂಡಿದ್ದು ಮತ್ತು ಕರಾರಿನ ತನ್ನ ಭಾಗವನ್ನು ಪೂರ್ಣವಾಗಿ ಪಾಲಿಸಿರುವಲ್ಲಿ, ಆಗ, ಸರ್ಕಾರವು ಪೂರ್ಣವಾಗಿ ಅಥವಾ ಭಾಗಶಃ ಈ ಕರಾರಿನ ತನ್ನ ಭಾಗವನ್ನು ಪಾಲಿಸಿಲ್ಲವೆಂಬ ಕಾರಣ ಮಾತ್ರದಿಂದಲೇ ಆ ಕರಾರು ಅಸ್ತಿತ್ವದಲ್ಲಿದೆ ಎಂದು ಭಾವಿಸತಕ್ಕದ್ದಲ್ಲ.

7. ಐದನೆಯ ಅನರ್ಹತೆ ಎಂದರೆ, ಸರ್ಕಾರಿ ಕಂಪನಿಯ ಅಧೀನದಲ್ಲಿನ ಹುದ್ದೆಯನ್ನು ಹೊಂದಿರುವುದು. ಇದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ನೇ ಪ್ರಕರಣದಲ್ಲಿ ಒಳಗೊಂಡಿದೆ. ಒಬ್ಬ ವ್ಯಕ್ತಿಯು, ಯಾವ ಕಂಪನಿ ಅಥವಾ ನಿಗಮದ ಬಂಡವಾಳದಲ್ಲಿ ಭಾರತ ಸರ್ಕಾರವು ಶೇ.25ಕ್ಕಿಂತ ಕಡಿಮೆ ಇಲ್ಲದಷ್ಟು ಷೇರನ್ನು ಹೊಂದಿದೆಯೋ ಆ ಯಾವುದೇ ಕಂಪನಿಯ ಅಥವಾ ನಿಗಮದ ವ್ಯವಸ್ಥಾಪಕ ಏಜೆಂಟ್, ವ್ಯವಸ್ಥಾಪಕ ಅಥವಾ ಕಾರ್ಯದರ್ಶಿ ಆಗಿದ್ದರೆ ಮತ್ತು ಹಾಗೆ ಆಗಿರುವವರೆಗೆ, ಅವನು ಸಂಸತ್ತಿನ ಸದಸ್ಯತ್ವಕ್ಕೆ ಅನರ್ಹನಾಗತಕ್ಕದ್ದು. ಸಹಕಾರ ಸಂಘವನ್ನು ಈ ನಿಯಮದ ವ್ಯಾಪ್ತಿಯಿಂದ ಹೊರತು ಪಡಿಸಲಾಗಿದೆ.

8. ಕೊನೆಯ ಶಾಸನಬದ್ಧ ಅನರ್ಹತೆಯು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10–ಎ ಪ್ರಕರಣದಲ್ಲಿ ಒಳಗೊಂಡಿದೆ. ಇದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲಗೊಂಡಿದ್ದಕ್ಕೆ ಸಂಬಂಧಿಸಿದ ಒಂದು ಅನರ್ಹತೆಯಾಗಿದೆ. ಅಭ್ಯರ್ಥಿಯು ಹಿಂದಿನ ಯಾವುದೇ ಸಂದರ್ಭದಲ್ಲಿ ಒಬ್ಬ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾಗ, ಆ ಸಂದರ್ಭದಲ್ಲಿ ಅವರು ಅಂಥ ಯಾವುದೇ ಅನರ್ಹತೆಗೆ ಗುರಿಯಾಗಿರಲಿಲ್ಲ ಎಂದು ಆಶಿಸಲಾಗಿದೆ. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ

ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕಗಳನ್ನು ಸಲ್ಲಿಸಲು ಅಭ್ಯರ್ಥಿಯು ವಿಫಲರಾದುದಕ್ಕಾಗಿ ಅವರನ್ನು ಅನರ್ಹಗೊಳಿಸಿದ್ದಲ್ಲಿ, ಆಗ, ಅನರ್ಹತೆಯ ಅವಧಿಯು, ಚುನಾವಣಾ ಆಯೋಗವು ನಿಮ್ಮನ್ನು ಅನರ್ಹಗೊಳಿಸುವ ಆದೇಶವನ್ನು ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯದಾಗಿರುವುದರಿಂದ, ಆ ಮೂರು ವರ್ಷಗಳ ಅವಧಿ ಮುಕ್ತಾಯವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು. ಅಭ್ಯರ್ಥಿಯು ಲೋಕಸಭಾ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಯಸಿದ್ದರೆ, ಅವರು ಈ ಎಲ್ಲ ಸಾಂವಿಧಾನಿಕ ಮತ್ತು ಶಾಸನಬದ್ಧ ಅನರ್ಹತೆಗಳಿಗೆ ಗುರಿಯಾಗಿರಬಾರದು.

## 2.9. ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ಅನರ್ಹತೆಗಳು

ಅಭ್ಯರ್ಥಿಯು ಒಂದು ರಾಜ್ಯದ (ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತು ಪಡಿಸಿ) ವಿಧಾನಸಭಾ ಕ್ಷೇತ್ರದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದರೆ, ಅವರು ಈ ಮುಂದಿನ ಯಾವುದೇ ಸಾಂವಿಧಾನಿಕ ಮತ್ತು ಶಾಸನಬದ್ಧ ಅನರ್ಹತೆಗೆ ಗುರಿಯಾಗಿರಬಾರದು.

(ಎ) ಒಂದು ರಾಜ್ಯದ ವಿಧಾನಸಭೆಯ ಸದಸ್ಯತ್ವಕ್ಕೆ ಸಾಂವಿಧಾನಿಕ ಅನರ್ಹತೆಗಳು (ಜಮ್ಮು ಮತ್ತು ಕಾಶ್ಮೀರ ಹಾಗೂ ಕೇಂದ್ರಾಡಳಿತ ಪ್ರದೇಶದ ವಿಧಾನ ಸಭೆಯನ್ನು ಹೊರತುಪಡಿಸಿ) ಈ ಅನರ್ಹತೆಗಳು ಭಾರತ ಸಂವಿಧಾನದ 191ನೇ ಅನುಚ್ಛೇದದಲ್ಲಿ ಅಡಕವಾಗಿವೆ.

1. ಮೊದಲನೆಯದಾಗಿ, ಅಭ್ಯರ್ಥಿಯು, ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯಸರ್ಕಾರದ ಅಧೀನದಲ್ಲಿರುವ ಯಾವ ಹುದ್ದೆಯನ್ನು ಧಾರಣ ಮಾಡಿದವನು ಅನರ್ಹನಾಗುವುದಿಲ್ಲವೆಂದು ಸಂಸತ್ತು ಅಥವಾ ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ ಘೋಷಿಸಿದೆಯೋ ಅಂಥ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು. ಯಾವ ವಿವಿಧ ಲಾಭದಾಯಕ ಹುದ್ದೆಗಳನ್ನು ಧಾರಣ ಮಾಡಿದರೆ, ಆ ಹುದ್ದೆಗಳ ಧಾರಕನು ರಾಜ್ಯ ವಿಧಾನಮಂಡಲದ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಅದರ ಸದಸ್ಯನಾಗಲು ಅನರ್ಹಗೊಳ್ಳುವುದಿಲ್ಲವೋ ಅಂಥ ವಿವಿಧ ಹುದ್ದೆಗಳನ್ನು ಘೋಷಿಸುವ ಕಾನೂನುಗಳನ್ನು ವಿವಿಧ ರಾಜ್ಯ ವಿಧಾನ ಮಂಡಲಗಳು ರಚಿಸಿವೆ.
2. ಎರಡನೆಯದಾಗಿ, ಅಭ್ಯರ್ಥಿಯು ಮಾನಸಿಕವಾಗಿ ಅಸ್ವಸ್ಥ ಚಿತ್ತರಾಗಿರಬಾರದು ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿರಬಾರದು.

3. ಮೂರನೆಯದಾಗಿ ಅಭ್ಯರ್ಥಿಯು ಅವಿಮುಕ್ತ ದಿವಾಳಿಯಾಗಿರಬಾರದು.

4. ನಾಲ್ಕನೆಯದಾಗಿ, ಅಭ್ಯರ್ಥಿ ಒಬ್ಬ ಭಾರತದ ನಾಗರಿಕನಾಗಿಲ್ಲದಿದ್ದರೆ ಅಥವಾ ಯಾವುದೇ ವಿದೇಶಿ ರಾಷ್ಟ್ರದ ನಾಗರಿಕತ್ವವನ್ನು ಸ್ವ–ಇಚ್ಛೆಯಿಂದ ಆರ್ಜಿಸಿದ್ದರೆ ಅಥವಾ ಒಂದು ವಿದೇಶೀ ರಾಷ್ಟ್ರಕ್ಕೆ ಯಾವುದೇ ನಿಷ್ಠೆ ಅಥವಾ ಅನುಸಕ್ತಿಯನ್ನು ಹೊಂದಿರುವುದನ್ನು ಒಪ್ಪಿಕೊಂಡಿದ್ದರೆ ಅವರನ್ನು ಅನರ್ಹಗೊಳಿಸಲಾಗುವುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಅಭ್ಯರ್ಥಿಯು ಒಬ್ಬ ಅನ್ಯದೇಶೀಯ ಅಥವಾ ವಿದೇಶೀಯನಾಗಿರಬಾರದು.

5. ಕೊನೆಯದಾಗಿ, ಅಭ್ಯರ್ಥಿಯು ಸಂಸತ್ತು ಮಾಡಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅನರ್ಹಗೊಂಡಿರಬಾರದು.

(ಬಿ) ಪುದುಚೇರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಸದಸ್ಯರಾಗುವುದಕ್ಕೆ ಸಂಬಂಧಿಸಿದಂತೆ ಇರುವ ಸಾಂವಿಧಾನಿಕ ಅನರ್ಹತೆಗಳು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರದ ಅಧಿನಿಯಮ, 1963ರ 14ನೇ ಪ್ರಕರಣದಲ್ಲಿ ಒಳಗೊಂಡಿವೆ.

1. ಮೊದಲನೆಯದಾಗಿ, ಅಭ್ಯರ್ಥಿ ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರಾಡಳಿತ ಪ್ರದೇಶ ಸರ್ಕಾರದ ಅಧೀನದಲ್ಲಿರುವ ಯಾವ ಹುದ್ದೆಯನ್ನು ಧಾರಣ ಮಾಡಿದವನು ಅನರ್ಹನಾಗುವುದಿಲ್ಲವೆಂದು ಸಂಸತ್ತು ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯು ಕಾನೂನಿನ ಮೂಲಕ ಘೋಷಿಸಿದೆಯೋ ಆ ಹುದ್ದೆಯನ್ನು ಹೊರತುಪಡಿಸಿ ಇತರ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು. ಪಾಂಡಿಚೆರಿ ವಿಧಾನ ಸಭೆಯು ಪಾಂಡಿಚೆರಿ ವಿಧಾನಸಭಾ ಸದಸ್ಯರ (ಅನರ್ಹತೆಗಳ ನಿವಾರಣೆ) ಅಧಿನಿಯಮ, 1994ನ್ನು ಅಂಗೀಕರಿಸಿದೆ. ಅಭ್ಯರ್ಥಿಯು ಆ ವಿಧಾನ ಸಭಾ ಚುನಾವಣೆಯ ಅಭ್ಯರ್ಥಿಯಾಗಿದ್ದರೆ, ಆ ಅಧಿನಿಯಮವನ್ನು ಗಮನವಿಟ್ಟು ಅಧ್ಯಯನ ಮಾಡಬೇಕು.

2. ಎರಡನೆಯದಾಗಿ, ಅಭ್ಯರ್ಥಿಯು ಮೇಲ್ಕಂಡ ಪ್ಯಾರಾದಲ್ಲಿ ಉಲ್ಲೇಖಿಸಲಾದ ಭಾರತ ಸಂವಿಧಾನದ 102(1)ನೇ ಅನುಚ್ಛೇದದ (ಬಿ) ಉಪಖಂಡದ, (ಸಿ) ಉಪಖಂಡದ ಅಥವಾ (ಡಿ)ಉಪಖಂಡದ ಉಪಬಂಧಗಳಲ್ಲಿ ಅಥವಾ ಆ ಅನುಚ್ಛೇದದ ಅನುಸಾರವಾಗಿ ಮಾಡಲಾದ ಯಾವುದೇ ಕಾನೂನಿನ ಉಪಬಂಧಗಳಲ್ಲಿ ನಿರೂಪಿಸಲಾದಂತೆ ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗುವುದಕ್ಕೆ ಸಂಬಂಧಿಸಿದ ಯಾವುದೇ ಅನರ್ಹತೆಗಳಿಗೆ ಗುರಿಯಾಗಿರಬಾರದು. ನೀವು ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಯಸಿದ್ದರೆ, 14(1)ಬಿ

ಪ್ರಕರಣದಲ್ಲಿ ಬಳಸಲಾದ "ಆ ಅನುಚ್ಛೇದದ ಅನುಸಾರವಾಗಿ ಮಾಡಲಾದ ಯಾವುದೇ ಕಾನೂನು" ಎಂಬ ಪದಾವಳಿಯಿಂದಾಗಿ, 1959ರ ಸಂಸತ್ (ಅನರ್ಹತೆಗಳ ನಿವಾರಣೆ) ಅಧಿನಿಯಮವು ಅನ್ವಯವಾಗುತ್ತದೆಂದು ಭಾವಿಸುವುದು ಸೂಕ್ತ. ಏಕೆಂದರೆ ಯಾವ ಅಧಿನಿಯಮಕ್ಕೆ ಸಂಬಂಧಪಟ್ಟಂತೆ ಉಲ್ಲೇಖವನ್ನು ಮಾಡಲಾಗುವುದೋ ಆ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರಲ್ಲಿ ಒಳಗೊಂಡಿರುವ ಅನರ್ಹತೆಗಳಿಗೆ ಸಂಬಂಧಪಟ್ಟ ಸೂಕ್ತ ಉಪಬಂಧಗಳ ಜೊತೆಯಲ್ಲಿ 102ನೇ ಅನುಚ್ಛೇದಕ್ಕೆ ಅನುಸಾರವಾಗಿ ಸಂಸತ್ (ಅನರ್ಹತೆಗಳ ನಿವಾರಣೆ) ಅಧಿನಿಯಮ, 1959ನ್ನೂ ಸಹ ರಚಿಸಲಾಗಿದೆ. ಈ ವಿಷಯದ ದೃಷ್ಟಿಯಿಂದ, ಅಭ್ಯರ್ಥಿಯು ನಾಮಪತ್ರವನ್ನು ಸಲ್ಲಿಸುವುದಕ್ಕೆ ಮುಂಚೆ, ಸರ್ಕಾರದ ಅಧೀನದಲ್ಲಿರುವ ಲಾಭದಾಯಕ ಹುದ್ದೆಯು ಸಂಸತ್ (ಅನರ್ಹತಾ ನಿವಾರಣೆ) ಅಧಿನಿಯಮ, 1959ರ 3ನೇ ಪ್ರಕರಣದ (ಎಚ್) ಖಂಡ ಅಥವಾ (ಐ) ಖಂಡದ ನಿಷೇಧಾತ್ಮಕ ವ್ಯಾಪ್ತಿಯೊಳಗೆ ಬರುವಂತಿದ್ದರೆ, ಅದು ಲಾಭದಾಯಕ ಹುದ್ದೆಯಾಗಿರುವಷ್ಟರ ಮಟ್ಟಿಗೆ, ಅಂಥ ಯಾವುದೇ ಹುದ್ದೆಗೆ ಅಭ್ಯರ್ಥಿಯು ರಾಜೀನಾಮೆ ನೀಡಬೇಕೇ ಎಂಬ ಬಗ್ಗೆ ಎಚ್ಚರಿಕೆಯಿಂದ ಪರಿಶೀಲಿಸಬೇಕು. ಅಭ್ಯರ್ಥಿಯ ಸುರಕ್ಷತೆಯ ದೃಷ್ಟಿಯಿಂದ ನಿಮ್ಮ ಆಯ್ಕೆಯ ತರುವಾಯ, ಯಾವುದೇ ಸಂದರ್ಭದಲ್ಲಿ ಅದನ್ನು ಯಾರೂ ಪ್ರಶ್ನಿಸದ ಹಾಗೆ ನಿಮ್ಮ ವಕೀಲರ ಸಲಹೆ ಪಡೆಯುವುದು ಸೂಕ್ತ.

(ಸಿ) ಒಂದು ರಾಜ್ಯದ (ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ) ಅಥವಾ ಪುದುಚೆರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯ ಸದಸ್ಯತ್ವಕ್ಕಾಗಿ ಶಾಸನಬದ್ಧ ಅನರ್ಹತೆಗಳು.

ಒಂದು ರಾಜ್ಯದ ಅಥವಾ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯ ಸದಸ್ಯತ್ವದ ಶಾಸನಬದ್ಧ ಅನರ್ಹತೆಗಳು ಸಂಸತ್ತಿನ ಸದಸ್ಯತ್ವದ ಶಾಸನಬದ್ದ ಅನರ್ಹತೆಗಳಂತೆ ಒಂದೇ ರೀತಿಯದ್ದಾಗಿದ್ದು, ಅವುಗಳು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 8ನೇ ಪ್ರಕರಣ, 8ಎ ಪ್ರಕರಣ, 9ನೇ ಪ್ರಕರಣ, 9ಎ ಪ್ರಕರಣ, 10ನೇ ಪ್ರಕರಣ ಮತ್ತು 10ಎ ಪ್ರಕರಣದಲ್ಲಿ ಒಳಗೊಂಡಿವೆ. ಆದರೆ ಇಲ್ಲಿ ಇರುವ ವ್ಯತ್ಯಾಸವೆಂದರೆ, 9ಎ ಪ್ರಕರಣ ಅಥವಾ 10ನೇ ಪ್ರಕರಣದಂಥ ಯಾವುದೇ ಪ್ರಕರಣದಲ್ಲಿ, ಒಂದು ರಾಜ್ಯದ ವಿಧಾನಸಭಾ ಸದಸ್ಯತ್ವದ ಅನರ್ಹತೆಗೆ ಸಂಬಂಧಪಟ್ಟಂತೆ "ಸಮುಚಿತ ಸರ್ಕಾರಕ್ಕೆ" ಮಾಡಿದ ಉಲ್ಲೇಖಕ್ಕೆ ಆ ರಾಜ್ಯದ ಸರ್ಕಾರ ಎಂದು ಅರ್ಥ ಮತ್ತು ಪುದುಚೆರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಸದಸ್ಯತ್ವದ ಅನರ್ಹತೆಗೆ ಸಂಬಂಧಪಟ್ಟಂತೆ ಆ ಕೇಂದ್ರಾಡಳಿತ ಪ್ರದೇಶ ಸರ್ಕಾರ ಮಾತ್ರವಲ್ಲದೆ ಕೇಂದ್ರ ಸರ್ಕಾರ ಎಂದೂ ಸಹ ಅರ್ಥ. ಹೀಗಾಗಿ ಅಭ್ಯರ್ಥಿಯು ತಮ್ಮ ವೃತ್ತಿ ಅಥವಾ

ವ್ಯವಹಾರದ ಕ್ರಮದಲ್ಲಿ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರನೊಂದಿಗೆ ಅಭ್ಯರ್ಥಿಯು ಮಾಡಿಕೊಂಡಿರುವ ಯಾವುದೇ ಕರಾರು ಅಸಿತ್ವದಲ್ಲಿದ್ದರೆ ಅಭ್ಯರ್ಥಿಯು ಅನರ್ಹರಾಗುತ್ತಾರೆ ಮತ್ತು ಅವರು ಆ ಕೇಂದ್ರಾಡಳಿತ ಪ್ರದೇಶದ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದೊಂದಿಗೆ ಅಂಥ ಯಾವುದೇ ಒಪ್ಪಂದವನ್ನು ಮಾಡಿಕೊಂಡಿದ್ದರೆ, ಆಗಲೂ ಸಹ ಅನರ್ಹಗೊಳ್ಳುತ್ತಾರೆ. ಇದೇ ಪರಿಸ್ಥಿತಿಯೇ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ನೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಹ ಅನ್ವಯವಾಗುತ್ತದೆ. ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರಲ್ಲಿ ನೀಡಿರುವ "ರಾಜ್ಯ ಸರ್ಕಾರ" ದ ವ್ಯಾಖ್ಯಾನದ ಕಾರಣದಿಂದಾಗಿ ಈ ಅಭಿಪ್ರಾಯವನ್ನು ತಾಳಲಾಗಿದೆ. ಇದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ಕ್ಕೆ ಸಹ ತರುವಾಯದ ಅಧಿನಿಯಮದ 2(1)(ಎ) ಪ್ರಕರಣದ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಅಧಿನಿಯಮ, 1963ರ 55ನೇ ಪ್ರಕರಣದ ಕಾರಣದಿಂದಾಗಿ ಅನ್ವಯವಾಗುತ್ತದೆ. ಚುನಾವಣೆಯಂಥ ಗಂಭೀರ ವಿಷಯಗಳಲ್ಲಿ ಬಹಳ ಎಚ್ಚರಿಕೆಯಿಂದ ಸುರಕ್ಷಿತ ಹೆಜ್ಜೆಗಳನ್ನು ಇಡಬೇಕು. ಅಭ್ಯರ್ಥಿಯು ಈ ವಿಷಯದಲ್ಲಿ ಒಬ್ಬ ವಕೀಲರೊಂದಿಗೆ ಸಮಾಲೋಚಿಸುವುದು ಸೂಕ್ತ.

## 2.10. ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದ ವಿಧಾನ ಸಭಾ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಅನರ್ಹತೆಗಳು:

2.10.1. ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದ ವಿಧಾನ ಸಭೆಯ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಅದರ ಸದಸ್ಯನಾಗಿರಲು, ಒಬ್ಬ ಸದಸ್ಯನು ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶ ಸರ್ಕಾರದ ಅಧೀನದಲ್ಲಿರುವ ಯಾವ ಹುದ್ದೆಯನ್ನು ಧಾರಣ ಮಾಡಿದವನು ಅನರ್ಹನಾಗುವುದಿಲ್ಲವೆಂದು ಸಂಸತ್ತು ಅಥವಾ ಯಾವುದೇ ರಾಜ್ಯದ ವಿಧಾನ ಮಂಡಲವು ಅಥವಾ ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದ ಅಥವಾ ಯಾವುದೇ ಇತರ ಕೇಂದ್ರಾಡಳಿತ ಪ್ರದೇಶದ ವಿಧಾನ ಸಭೆಯು ಕಾನೂನಿನ ಮೂಲಕ ಘೋಷಿಸಿದೆಯೋ ಅಂಥ ಹುದ್ದೆಯನ್ನು ಹೊರತುಪಡಿಸಿ, ಇತರ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರತಕ್ಕದ್ದಲ್ಲ. ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ ಅಧಿನಿಯಮ, 1991ರ 15(1)(ಎ) ಮತ್ತು 15(2) ರ ಮೇರೆಗೆ ಒಬ್ಬ ವ್ಯಕ್ತಿಯು ಕೇಂದ್ರದ ಅಥವಾ ಒಂದು ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ಒಬ್ಬ ಸಚಿವನಾಗಿ ಇರುವ ಕಾರಣ ಮಾತ್ರದಿಂದಲೇ ಅವನು ಲಾಭದಾಯಕ ಹುದ್ದೆಯನ್ನು ಹೊಂದಿರುವವನೆಂದು ಭಾವಿಸತಕ್ಕದ್ದಲ್ಲ.

2.10.2. ಯಾರೇ ವ್ಯಕ್ತಿಯನ್ನು ಸಂವಿಧಾನದ 102(1)ನೇ ಅನುಚ್ಛೇದದ ಅಥವಾ ಸದರಿ ಅಧಿನಿಯಮದ 15(1)(ಬಿ) ಮತ್ತು 40(3)ನೇ ಪ್ರಕರಣದ ಉಪಬಂಧಗಳ ಮೇರೆಗೆ ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಅದರ ಸದಸ್ಯನಾಗಿರಲು ತತ್ಕಾಲದಲ್ಲಿ ಅನರ್ಹಗೊಳಿಸಲಾಗಿದ್ದರೆ, ಅವನು ಸಹ ಅನರ್ಹನಾಗತಕ್ಕದ್ದು.

2.10.3. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಈ ಅಧ್ಯಾಯದಲ್ಲಿ ಹಿಂದೆ ಚರ್ಚಿಸಲಾದಂಥ ಸಂಸತ್ತಿನ ಚುನಾವಣೆಗೆ ಸಂಬಂಧಪಟ್ಟ ಅನರ್ಹತೆಗಳು ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದ ವಿಧಾನಸಭೆಯ ಚುನಾವಣೆಗೆ ಸಹ ಅನ್ವಯವಾಗುತ್ತದೆ.

## 2.11. ಮತ ಚಲಾಯಿಸುವ ಅನರ್ಹತೆಯ ಪರಿಣಾಮದಿಂದ ಸದಸ್ಯತ್ವಕ್ಕೆ ಸಂಬಂಧಿಸಿದ ಅನರ್ಹತೆ

2.11.1. ಈ ಸಂಬಂಧದಲ್ಲಿ ಅಭ್ಯರ್ಥಿಯು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 11ಎ ಪ್ರಕರಣವನ್ನು ಪರಾಮರ್ಶಿಸಬಹುದು. ಸದರಿ ಪ್ರಕರಣವು ಅಪರಾಧ ನಿರ್ಣಯ ಮತ್ತು ಭ್ರಷ್ಟ ಆಚರಣೆಗಳ ಕಾರಣದಿಂದಾಗಿ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕೆ ಅನರ್ಹಗೊಳಿಸಲು ಉಪಬಂಧ ಕಲ್ಪಿಸುತ್ತದೆ.

1. ಭಾರತ ದಂಡ ಸಂಹಿತೆಯ 171 ಇ ಅಥವಾ 171 ಎಫ್ ಅಡಿಯಲ್ಲಿ ಅಥವಾ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 125ನೇ ಪ್ರಕರಣ ಅಥವಾ 135ನೇ ಪ್ರಕರಣ ಅಥವಾ 136ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ದಂಡನಾರ್ಹವಾದ ಒಂದು ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿರುವ ಯಾರೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ ಮತ ಚಲಾಯಿಸಲು ಅನರ್ಹಗೊಳ್ಳತ್ತಕ್ಕದ್ದು. ಮತ ಚಲಾಯಿಸುವುದಕ್ಕೆ ಸಂಬಂಧಪಟ್ಟ ಅಂಥ ಅನರ್ಹತೆಯ ಅವಧಿಯು ಅಪರಾಧ ನಿರ್ಣಯವಾದ ದಿನಾಂಕದಿಂದ ಆರು ವರ್ಷಗಳು.
2. ಒಬ್ಬ ವ್ಯಕ್ತಿಯು ಭ್ರಷ್ಟಾಚರಣೆಯ ತಪ್ಪಿತಸ್ಥನೆಂದು ಕಂಡುಬಂದ ಸಂದರ್ಭದಲ್ಲಿ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 99ನೇ ಪ್ರಕರಣದ ಅಡಿಯಲ್ಲಿ ಮಾಡಿರುವ ಆದೇಶದ ಮೂಲಕ, ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಅನರ್ಹಗೊಳಿಸುವುದಕ್ಕಾಗಿ 8–ಎ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ರಾಷ್ಟ್ರಪತಿಯವರು ನಿರ್ಧರಿಸಬಹುದಾದಷ್ಟೇ ಅವಧಿಯವರೆಗೆ ಅವನು ಮತಚಲಾಯಿಸಲು ಅನರ್ಹಗೊಳ್ಳತಕ್ಕದ್ದು.
3. ಒಬ್ಬ ವ್ಯಕ್ತಿಯು, ತಾತ್ಕಾಲದಲ್ಲಿ, ಚುನಾವಣೆಗಳ ಸಂಬಂಧದಲ್ಲಿ ಭ್ರಷ್ಟಾಚಾರ ಅಥವಾ ಇತರ ಅಪರಾಧಗಳಿಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಮತ ಚಲಾಯಿಸುವುದಕ್ಕೆ ಅನರ್ಹಗೊಂಡಿದ್ದರೆ, ಆಗ ಅವನು ಮತದಾರರ ಪಟ್ಟಿಯಲ್ಲಿ ಹೆಸರು

ನೋಂದಣಿ ಮಾಡಿಸಲು ಅನರ್ಹನಾಗುತ್ತಾನೆ. ನೋಂದಣಿಯ ತರುವಾಯ ಯಾರೇ ವ್ಯಕ್ತಿಯು ಹಾಗೆ ಅನರ್ಹಗೊಂಡರೆ, ಮತದಾರರ ಪಟ್ಟಿಯಿಂದ ಅನರ್ಹಗೊಂಡವರ ಹೆಸರನ್ನು ಆ ಕೂಡಲೇ ತೆಗೆದು ಹಾಕಬೇಕಾಗುತ್ತದೆ. ಈ ಉಪಬಂಧಗಳು ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ 16ನೇ ಪ್ರಕರಣದಲ್ಲಿ ಒಳಗೊಂಡಿವೆ. ಈಗಾಗಲೇ ತಿಳಿದಿರುವಂತೆ ಚುನಾವಣೆಯಲ್ಲಿ ಸ್ಪರ್ಧಿಸಲು ಇರಬೇಕಾದ ಒಂದು ಅರ್ಹತೆ ಎಂದರೆ, ಅಭ್ಯರ್ಥಿಯು ಆ ಸಂಬಂಧಪಟ್ಟ ಕ್ಷೇತ್ರದ ಮತದಾರನಾಗಿರಬೇಕು (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 4ನೇ ಮತ್ತು 5ನೇ ಪ್ರಕರಣವನ್ನು ನೋಡಿ). ಆದರೆ, ಅಭ್ಯರ್ಥಿಯು ಮತದಾನ ಮಾಡಲು ಅನರ್ಹಗೊಂಡಿದ್ದಲ್ಲಿ, ಆಗ ಮತದಾರನಾಗಿರಲು ಸಾಧ್ಯವಿಲ್ಲ. ಹಾಗಾಗಿ, ಮತದಾನ ಮಾಡಲು ಸಾಧ್ಯವಿಲ್ಲದಿರುವುದರಿಂದ, ನೀವು ಸಂಸದೀಯ ಮತಕ್ಷೇತ್ರದಿಂದ ಅಥವಾ ವಿಧಾನಸಭಾ ಮತಕ್ಷೇತ್ರದಿಂದ ಸ್ಪರ್ಧಿಸಲು ಅರ್ಹರಾಗುವುದಿಲ್ಲ. ಅರ್ಹತೆಗಳು ಮತ್ತು ಅನರ್ಹತೆಗಳಿಗೆ ಸಂಬಂಧಪಟ್ಟ ಎಲ್ಲ ಮುಖ್ಯ ಅಂಶಗಳನ್ನು ಮೇಲೆ ಉಲ್ಲೇಖಿಸಲಾಗಿದೆ. ಮೇಲೆ ಉಲ್ಲೇಖಿಸಿರುವ ಉಪಬಂಧಗಳನ್ನು ಅಭ್ಯರ್ಥಿಯು ಗಮನವಿಟ್ಟು ಓದಬೇಕು. ಏಕೆಂದರೆ ಈ ಕೈಪಿಡಿಯ ಅಧ್ಯಯನವು ಅಭ್ಯರ್ಥಿಯು ಸಂವಿಧಾನದ ಉಪಬಂಧಗಳು ಮತ್ತು ಕಾನೂನಿನ ಉಪಬಂಧಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

# 3. ನಾಮಪತ್ರಗಳು ಮತ್ತು ಚಿಹ್ನೆಗಳ ಹಂಚಿಕೆ

## 3.1. ನಾಮಪತ್ರಗಳು

3.1.1. ಅಭ್ಯರ್ಥಿಗೆ, ಲೋಕಸಭೆಗೆ ಅಥವಾ ಸಂದರ್ಭಾನುಸಾರ, ವಿಧಾನಸಭೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಮತ್ತು ಸದಸ್ಯನಾಗಿ ಚುನಾಯಿತನಾಗಲು ಎಲ್ಲಾ ಅಗತ್ಯ ಅರ್ಹತೆಗಳನ್ನು ಹೊಂದಿದ್ದಾರೆಂದು ಕಂಡುಬಂದರೆ ಮತ್ತು ಅಂಥ ಸದಸ್ಯತ್ವಕ್ಕೆ ಯಾವುದೇ ರೀತಿಯಲ್ಲೂ ಅನರ್ಹತೆಯನ್ನು ಹೊಂದಿಲ್ಲ ಎಂದು ಕಂಡುಬಂದರೆ ಮತ್ತು ಲೋಕಸಭಾ ಅಥವಾ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಯಸಿದರೆ, ಅಭ್ಯರ್ಥಿಯು ಎರಡು ಸಂದರ್ಭಗಳಲ್ಲಿ ಅದನ್ನು ಎಂದರೆ, ನೂತನ ಲೋಕಸಭೆ ಅಥವಾ ನೂತನ ವಿಧಾನಸಭೆ ರಚನೆಯಾಗುವುದಕ್ಕೆ ಅಗತ್ಯವಿರುವ ಸಾರ್ವತ್ರಿಕ ಚುನಾವಣೆಯಲ್ಲಾಗಲಿ ಅಥವಾ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವ ಉದ್ದೇಶಕ್ಕಾಗಿ ನಡೆಯುವ ಉಪ–ಚುನಾವಣೆಯಲ್ಲಾಗಲಿ ಅಭ್ಯರ್ಥಿಯಾಗಿ ಸ್ಪರ್ಧಿಸಬಹುದು.

3.1.2. ಆದರೆ, ಅಭ್ಯರ್ಥಿಯು ಈ ಕೆಳಕಂಡ ಸಂದರ್ಭಗಳಲ್ಲಿ, ಚುನಾವಣೆಗೆ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲಾಗದು:–

(ಎ) ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ (ಲೋಕಸಭೆಯ ಚುನಾವಣೆಯು ಎಲ್ಲಾ ಕ್ಷೇತ್ರಗಳಿಗೂ ಒಂದೇ ಬಾರಿ ನಡೆಯಲಿ ಅಥವಾ ಒಂದೇ ಬಾರಿಗೆ ನಡೆಯದಿರಲಿ)ಎರಡಕ್ಕಿಂತ ಹೆಚ್ಚು ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಲಾಗದು;

(ಬಿ) ವಿಧಾನಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ (ವಿಧಾನಸಭೆಯ ಚುನಾವಣೆಯು ಎಲ್ಲಾ ಕ್ಷೇತ್ರಗಳಿಗೂ ಒಂದೇ ಬಾರಿ ನಡೆಯಲಿ ಅಥವಾ ಒಂದೇ ಬಾರಿಗೆ ನಡೆಯದಿರಲಿ) ಎರಡಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಲಾಗದು;

(ಸಿ) ಎರಡು ಅಥವಾ ಹೆಚ್ಚು ಕ್ಷೇತ್ರಗಳಿಗೆ ಏಕಕಾಲದಲ್ಲಿ ನಡೆಯುವ ಲೋಕಸಭೆಯ ಉಪ–ಚುನಾವಣೆಗಳ ಸಂದರ್ಭದಲ್ಲಿ, ಎರಡಕ್ಕಿಂತ ಹೆಚ್ಚು ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಲಾಗದು;

(ಡಿ) ಎರಡು ಅಥವಾ ಹೆಚ್ಚು ಕ್ಷೇತ್ರಗಳಿಗೆ ಏಕಕಾಲದಲ್ಲಿ ನಡೆಯುವ ವಿಧಾನಸಭಾ ಉಪ–ಚುನಾವಣೆಗಳ ಸಂದರ್ಭದಲ್ಲಿ, ಎರಡಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಲಾಗದು.

**ವಿವರಣೆ:** ಚುನಾವಣಾ ಆಯೋಗವು ಒಂದೇ ದಿನದಂದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 149 ಅಥವಾ 150ನೇ ಪ್ರಕರಣದ ಅಡಿಯಲ್ಲಿ ಉಪ-ಚುನಾವಣೆಗಳಿಗಾಗಿ ಅಧಿಸೂಚನೆಯನ್ನು ಹೊರಡಿಸಿದಲ್ಲಿ, ಎರಡು ಅಥವಾ ಹೆಚ್ಚಿನ ಉಪ-ಚುನಾವಣೆಗಳು ಏಕಕಾಲದಲ್ಲಿ ನಡೆಯುತ್ತವೆಯೆಂದು ಭಾವಿಸತಕ್ಕದ್ದು.

3.1.3. ಅಭ್ಯರ್ಥಿಯು ಈ ನಿರ್ಬಂಧವನ್ನು ಉಲ್ಲಂಘಿಸಿ, ಒಂದೇ ವರ್ಗದ ಎರಡು ಕ್ಷೇತ್ರಗಳಿಗಿಂತ ಹೆಚ್ಚು ಕ್ಷೇತ್ರಗಳ ಚುನಾವಣೆಗೆ ನಾಮಪತ್ರವನ್ನು ಸಲ್ಲಿಸಿದರೆ, 1951ರ ಅಧಿನಿಯಮದ 33(7)ನೇ ಪ್ರಕರಣದ ಉಪಬಂಧಗಳನ್ನು ಪಾಲಿಸದಿರುವ ಸಂಬಂಧವಾಗಿ ಆತನು ಮೂರು, ನಾಲ್ಕು ಮತ್ತು ಅಂಥ ಹೆಚ್ಚಿನ ಕ್ಷೇತ್ರಗಳಿಗೆ ಸಲ್ಲಿಸಿರುವ ಆತನ ನಾಮಪತ್ರಗಳನ್ನು ರಿಟರ್ನಿಂಗ್ ಅಧಿಕಾರಿಯು ತಿರಸ್ಕರಿಸತಕ್ಕದ್ದು.

3.1.4. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ, ಭಾರತದ ರಾಷ್ಟ್ರಪತಿಯು ಮತ್ತು ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ರಾಜ್ಯದ ರಾಜ್ಯಪಾಲರು ಹೊರಡಿಸುವ (ಸಾಮಾನ್ಯ ಮಾತಿನಲ್ಲಿ ರಿಟ್ ಅಧಿಸೂಚನೆ ಎಂದು ಕರೆಯಲಾಗುವ) ಒಂದು ಅಥವಾ ಅದಕ್ಕಿಂತ ಹೆಚ್ಚು ಅಧಿಸೂಚನೆಗಳ ಮೂಲಕ ಸಾರ್ವತ್ರಿಕ ಚುನಾವಣೆಯ ಹಂತಗಳನ್ನು ಚಾಲನೆಗೊಳಿಸಲಾಗುತ್ತದೆ. ಎಲ್ಲಾ ಉಪ-ಚುನಾವಣೆಗಳ ಸಂದರ್ಭದಲ್ಲಿ, ಅಂಥ ಅಧಿಸೂಚನೆಗಳನ್ನು ಚುನಾವಣಾ ಆಯೋಗವು ಹೊರಡಿಸುತ್ತದೆ.

3.1.5. ಅಂಥ ಅಧಿಸೂಚನೆಗಳನ್ನು ಎಂದರೆ, ಸಾರ್ವತ್ರಿಕ ಚುನಾವಣೆಗಳು ಅಥವಾ ಉಪ-ಚುನಾವಣೆಗಳಿಗೆ ಆದೇಶಗಳನ್ನು ಮೇಲೆ ತಿಳಿಸಲಾದಂತೆ ಹೊರಡಿಸಿದ ಕೂಡಲೇ, ಚುನಾವಣಾ ಆಯೋಗವು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 30ನೇ ಪ್ರಕರಣದ ಅಡಿಯಲ್ಲಿ, ಗೆಜೆಟ್ ಅಧಿಸೂಚನೆಯ ಮೂಲಕ ಚುನಾವಣೆಯ ವೇಳಾಪಟ್ಟಿಯನ್ನು ನಿಗದಿಪಡಿಸುತ್ತದೆ. ವೇಳಾಪಟ್ಟಿಯನ್ನು ನಿಗದಿಪಡಿಸುವ ಈ ಅಧಿಸೂಚನೆಯನ್ನು ಸಾರ್ವತ್ರಿಕ ಚುನಾವಣೆ ಅಥವಾ ಉಪ-ಚುನಾವಣೆಗೆ ಆದೇಶಗಳನ್ನು ಹೊರಡಿಸಿದ ದಿನದಂದೇ ಹೊರಡಿಸಲಾಗುತ್ತದೆ. 30ನೇ ಪ್ರಕರಣದ ಅಡಿಯಲ್ಲಿ ವೇಳಾಪಟ್ಟಿಯನ್ನು ನಿಗದಿಪಡಿಸುವ ಅಧಿಸೂಚನೆಯನ್ನು ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಭಾರತ ರಾಜಪತ್ರದಲ್ಲಿ ಪ್ರಕಟಿಸಲಾಗುತ್ತದೆ, ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಆಯಾ ಸಂಬಂಧಪಟ್ಟ ರಾಜ್ಯಗಳ ರಾಜ್ಯಪತ್ರದಲ್ಲಿ ಪ್ರಕಟಿಸಲಾಗುತ್ತದೆ. ವೇಳಾಪಟ್ಟಿಯನ್ನು ನಿಗದಿಪಡಿಸುವ ಈ ಅಧಿಸೂಚನೆಯು,

(ಎ) ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ನಿಗದಿಪಡಿಸುತ್ತಿದ್ದು, ಆ ದಿನಾಂಕವು ಅಧಿಸೂಚನೆಯನ್ನು ಪ್ರಕಟಿಸಿದ ಅಥವಾ ಚುನಾವಣೆಯನ್ನು ಘೋಷಿಸುವ ಆದೇಶವನ್ನು ಪ್ರಕಟಿಸಿದ ನಂತರದ ಏಳನೇ ದಿನವಾಗಿರತಕ್ಕದ್ದು ಅಥವಾ ಏಳನೇ ದಿನವು ಸಾರ್ವತ್ರಿಕ ರಜಾದಿನವಾಗಿದ್ದರೆ,

ನಂತರದ ಸಾರ್ವತ್ರಿಕ ರಜಾದಿನವಲ್ಲದ ದಿನವನ್ನು ಗೊತ್ತುಪಡಿಸತಕ್ಕದ್ದು; (ಒಂದು ವೇಳೆ ಅಧಿಸೂಚನೆಯನ್ನು ಅಥವಾ ಚುನಾವಣಾ ರಿಟ್ ಅನ್ನು ಮಾರ್ಚ್ ತಿಂಗಳ 1ನೇ ತಾರೀಖಿನಂದು ಹೊರಡಿಸಿದರೆ, ಆಗ ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕವು ಮಾರ್ಚ್ 8ನೇ ತಾರೀಖು (ಅದು ಏಳನೇ ದಿನವಾಗಿರುತ್ತದೆ) ಆಗುತ್ತದೆ, ಆದರೆ ಮಾರ್ಚ್ 8ನೇ ತಾರೀಖು ಸಾರ್ವತ್ರಿಕ ರಜಾದಿನವಾಗಿದ್ದರೆ, ಆಗ ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕವು ಮಾರ್ಚ್ 9ನೇ ತಾರೀಖು ಆಗಿರುತ್ತದೆ. ಮಾರ್ಚ್ 9ನೇ ತಾರೀಖು ಕೂಡ ಸಾರ್ವತ್ರಿಕ ರಜಾ ದಿನವಾಗಿದ್ದರೆ, ಆಗ ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕವು ಮಾರ್ಚ್ 10ನೇ ತಾರೀಖು ಆಗುತ್ತದೆ, ನಂತರ ಮಾರ್ಚ್ 10 ಕೂಡ ಸಾರ್ವತ್ರಿಕ ರಜಾದಿನವಾಗಿದ್ದರೆ, ಆಗ ಮಾರ್ಚ್ 11 ಹೀಗೆ ನಂತರದ ದಿನಗಳನ್ನು ಪರಿಗಣಿಸಬೇಕಾಗುತ್ತದೆ);

(ಬಿ) ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕವು ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ನಂತರದ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವತ್ರಿಕ ರಜಾದಿನವಾಗಿದ್ದರೆ, ಸಾರ್ವತ್ರಿಕ ರಜಾದಿನವಾಗಿರದ ಅದರ ನಂತರದ ದಿನವಾಗಿರತಕ್ಕದ್ದು (ಎಂದರೆ, ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವು, ಮಾರ್ಚ್ 8 ಆಗಿದ್ದರೆ, ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕವು, ಮಾರ್ಚ್ 9ನೇ ತಾರೀಖು ಸಾರ್ವತ್ರಿಕ ರಜಾದಿನವಲ್ಲ ಎಂಬ ಊಹೆಯ ಮೇಲೆ, ಮಾರ್ಚ್ 9ನೇ ದಿನಾಂಕವಾಗಿರತಕ್ಕದ್ದು);

(ಸಿ) ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕವು ನಾಮತ್ರಗಳನ್ನು ಪರಿಶೀಲಿಸಿದ ದಿನಾಂಕದ ನಂತರದ ಎರಡನೇ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವತ್ರಿಕ ರಜಾದಿನವಾಗಿದ್ದರೆ, ಸಾರ್ವತ್ರಿಕ ರಜಾದಿನವಲ್ಲದ ನಂತರದ ದಿನವಾಗಿರತಕ್ಕದ್ದು (ಎಂದರೆ, ನಾಮಪತ್ರಗಳ ಪರಿಶೀಲನಾ ದಿನಾಂಕವು ಮಾರ್ಚ್ 9ನೇ ದಿನಾಂಕವಾಗಿದ್ದರೆ, ಆಗ ಉಮೇದುವಾರಿಕೆಗಳನ್ನು ಹಿಂಪಡೆಯುವ ಕೊನೆಯ ದಿನಾಂಕವು ಮಾರ್ಚ್ 11ನೇ ತಾರೀಖು ಸಾರ್ವತ್ರಿಕ ರಜಾದಿನವಲ್ಲ ಎಂಬ ಊಹೆಯ ಮೇಲೆ, ಮಾರ್ಚ್ 11ನೇ ತಾರೀಖು ಉಮೇದುವಾರಿಕೆ ಹಿಂಪಡೆಯುವದಕ್ಕೆ ಕೊನೆಯ ದಿನಾಂಕವಾಗಿರುತ್ತದೆ); ಮತ್ತು

(ಡಿ) ಮತದಾನವು ಅಗತ್ಯವಿದ್ದರೆ ಮತದಾನದ ದಿನಾಂಕವು ಉಮೇದುವಾರಿಕೆಯನ್ನು ಹಿಂಪಡೆಯಲು ನಿಗದಿಯಾದ ಕೊನೆಯ ದಿನಾಂಕದ ನಂತರ ಹದಿನಾಲ್ಕನೇ ದಿನಕ್ಕಿಂತ ಮುಂಚಿತವಲ್ಲದ ದಿನಾಂಕವಾಗಿರತಕ್ಕದ್ದು. ಎಂದರೆ, ಉಮೇದುವಾರಿಕೆಗಳನ್ನು ಹಿಂಪಡೆಯುವ ಕೊನೆಯ ದಿನಾಂಕವು ಮಾರ್ಚ್ 11ನೇ ದಿನಾಂಕವಾಗಿದ್ದರೆ, ಮತದಾನವು ಮಾರ್ಚ್ ತಿಂಗಳ 25ನೇ ದಿನಾಂಕಕ್ಕಿಂತ ಮುಂಚೆ ನಡೆಯತಕ್ಕದ್ದಲ್ಲ. ಏಕೆಂದರೆ, ಮತದಾನದ ದಿನಾಂಕವು ಉಮೇದುವಾರಿಕೆಗಳನ್ನು

ಹಿಂಪಡೆಯುವ ಕೊನೆಯ ದಿನಾಂಕದ ನಂತರದ ಹದಿನಾಲ್ಕನೆಯ ದಿನಕ್ಕಿಂತ ಮುಂಚಿನ ದಿನವಾಗಿರಬಾರದು. ಮತದಾನವು ಒಂದು ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚಿನ ದಿನಗಳಲ್ಲಿ ನಡೆಯಬಹುದಾಗಿದೆ. ಅಂಥ ಸಂದರ್ಭದಲ್ಲಿ, ಮತದಾನದ ಮೊದಲನೆಯ ದಿನಾಂಕವು ಮೇಲಿನ ನಿದರ್ಶನದ ಅನುಸಾರ ಮಾರ್ಚ್ 25ನೇ ದಿನಾಂಕಕ್ಕಿಂತ ಮುಂಚಿನದಾಗಿರಬಾರದು.

3.1.6. ಆದ್ದರಿಂದ, ಅಭ್ಯರ್ಥಿಯು ಗಮನಿಸಬೇಕಾದದ್ದೆಂದರೆ, ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕವಾಗಲಿ ಅಥವಾ ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕವಾಗಲಿ ಅಥವಾ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕವಾಗಲಿ ಆ ಯಾವ ದಿನಗಳೂ ಸಾರ್ವತ್ರಿಕ ರಜಾದಿನಗಳಾಗಿರುವಂತಿಲ್ಲ. ಆದರೆ, ಈ ನಿರ್ಬಂಧ ಮತದಾನದ ದಿನಾಂಕಕ್ಕೆ ಅನ್ವಯವಾಗುವುದಿಲ್ಲ. ಸಾರ್ವತ್ರಿಕ ರಜಾದಿನದಂದು ಮತದಾನ ನಡೆಸುವುದಕ್ಕೆ ಯಾವುದೇ ನಿರ್ಬಂಧವಿರುವುದಿಲ್ಲ.

**ಸೂಚನೆ:** ಮೇಲೆ ಸೂಚಿಸಿದಂತೆ 'ಸಾರ್ವತ್ರಿಕ ರಜಾದಿನ' ಎಂದರೆ, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ 25ನೇ ಪ್ರಕರಣದ ಅಡಿಯಲ್ಲಿ ಘೋಷಿಸಿದ ಸಾರ್ವತ್ರಿಕ ರಜಾದಿನವೇ ಹೊರತು, ಇನ್ನಿತರ ಯಾವುದೇ ರಜಾದಿನವಲ್ಲ.

3.1.7. ಚುನಾವಣಾ ಆಯೋಗವು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 30ನೇ ಪ್ರಕರಣದ ಅಡಿಯಲ್ಲಿ ಚುನಾವಣಾ ವೇಳಾಪಟ್ಟಿಯನ್ನು ನಿಗದಿಪಡಿಸಿ ಅಧಿಸೂಚನೆ ಹೊರಡಿಸಿದ ನಂತರ, ರಿಟರ್ನಿಂಗ್ ಅಧಿಕಾರಿಯು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 31ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿತ ಚುನಾವಣೆಯ ಬಗ್ಗೆ ಸಾರ್ವಜನಿಕ ನೋಟೀಸನ್ನು ಹೊರಡಿಸುತ್ತಾರೆ. ಈ ಸಾರ್ವಜನಿಕ ನೋಟೀಸಿನ ಮೂಲಕ ರಿಟರ್ನಿಂಗ್ ಅಧಿಕಾರಿಯು ಚುನಾವಣೆಗೆ ಅಭ್ಯರ್ಥಿಗಳ ನಾಮಪತ್ರಗಳನ್ನು ಆಹ್ವಾನಿಸಿ, ನಾಮಪತ್ರಗಳನ್ನು ಸಲ್ಲಿಸಬೇಕಾದ ಸ್ಥಳವನ್ನು ಗೊತ್ತುಪಡಿಸುತ್ತಾರೆ. 31ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾಗುವ ಈ ಸಾರ್ವಜನಿಕ ನೋಟೀಸು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ಅನುಬಂಧದಲ್ಲಿ ಸೇರಿಸಲಾಗಿರುವ ನಮೂನೆ–1ರಲ್ಲಿರುತ್ತದೆ. ನಮೂನೆ–1ರಲ್ಲಿರುವ ಸಾರ್ವಜನಿಕ ನೋಟೀಸನ್ನು ಸಾಮಾನ್ಯವಾಗಿ ರಿಟರ್ನಿಂಗ್ ಅಧಿಕಾರಿಯ ಸೂಚನಾ ಫಲಕದಲ್ಲಿ ಮತ್ತು ಗ್ರಾಮಪಂಚಾಯತಿ, ಪಂಚಾಯತ್ ಸಮಿತಿಗಳು ಮುಂತಾದವೂ ಒಳಗೊಂಡಂತೆ ನೋಟೀಸಿಗೆ ವ್ಯಾಪಕ ಪ್ರಚಾರ ದೊರೆಯುವ ಸ್ಥಳವೆಂದು ಅವರು ಭಾವಿಸುವಂಥ ಸ್ಥಳಗಳಲ್ಲಿ ಪ್ರಕಟಿಸಲಾಗುತ್ತದೆ.

## 3.2. ನಾಮಪತ್ರಗಳನ್ನು ಸಲ್ಲಿಸುವ ಅವಧಿ

3.2.1. ಈಗಾಗಲೇ ಮೇಲೆ ತಿಳಿಸಲಾದಂತೆ, ನಾಮಪತ್ರಗಳನ್ನು ಸಲ್ಲಿಸುವುದಕ್ಕೆ (ಅಧಿಸೂಚನೆ ಹೊರಡಿಸಿದ ದಿನವೂ ಸೇರಿದಂತೆ) ಕೇವಲ ಎಂಟು ದಿನಗಳ ಕಾಲಾವಕಾಶವಿರುತ್ತದೆ. ಆದರೆ, ನಾಮಪತ್ರಗಳನ್ನು ಈ ಮಧ್ಯೆ ಬರುವ ರಜಾ ದಿನಗಳಂದು ಸಲ್ಲಿಸುವಂತಿಲ್ಲ.

## 3.3. ನಾಮಪತ್ರದ ನಮೂನೆ

3.3.1. ನಾಮಪತ್ರವು ನಿಗದಿಪಡಿಸಿದ ನಮೂನೆಯಲ್ಲಿಯೇ ಇರಬೇಕು. ಲೋಕಸಭಾ ಚುನಾವಣೆಗೆ ಅಭ್ಯರ್ಥಿಯು ಸಲ್ಲಿಸುವ ನಾಮಪತ್ರವು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ಕ್ಕೆ ಅನುಬಂಧಿಸಲಾದ ನಮೂನೆ 2–ಎ ನಲ್ಲಿರಬೇಕು. ವಿಧಾನಸಭಾ ಚುನಾವಣೆಗೆ ಸಲ್ಲಿಸುವ ನಾಮಪತ್ರವು ನಮೂನೆ 2–ಬಿ ಯಲ್ಲಿರಬೇಕು (ನಮೂನೆ 2ಎ ಮತ್ತು 2ಬಿ ಗಳನ್ನು ಅನುಬಂಧ–6 ಮತ್ತು 7 ರಲ್ಲಿ ಯಥಾವತ್ತಾಗಿ ನಿರೂಪಿಸಲಾಗಿದೆ). ನಾಮಪತ್ರದ ನಮೂನೆಯ ಮುದ್ರಿತ ಪ್ರತಿಗಳನ್ನು ಅತ್ಯಂತ ಕಡಿಮೆ ದರದಲ್ಲಿ ರಿಟರ್ನಿಂಗ್ ಅಧಿಕಾರಿಯವರಿಂದ ಕೊಂಡುಕೊಳ್ಳಬಹುದು. ಅಧಿಕೃತವಾಗಿ ಮುದ್ರಿಸಿದ ನಮೂನೆಗಳು ಲಭ್ಯವಿಲ್ಲದಿದ್ದರೆ ಅಥವಾ ಪಡೆಯಲು ಸಾಧ್ಯವಿಲ್ಲದಿದ್ದರೆ, ಅಭ್ಯರ್ಥಿಯು ಖಾಸಗಿಯಾಗಿ ಮುದ್ರಿಸಿದ, ಬೆರಳಚ್ಚು ಮಾಡಿದ ಅಥವಾ ಸೈಕ್ಲೋಸ್ಟೈಲ್ಡ್ ನಮೂನೆಯನ್ನು ಬಳಸಿಕೊಳ್ಳಬಹುದಾಗಿದೆ; ಆದರೆ, ಅಭ್ಯರ್ಥಿಯು ಬಳಸುವ ಆ ನಮೂನೆಯು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ಕ್ಕೆ ಅನುಬಂಧಿಸಿದ ಸೂಕ್ತ ನಮೂನೆಗೆ ತಕ್ಕ ರೀತಿಯಲ್ಲಿ ಸಂವಾದಿಯಾದುದಾಗಿದೆ ಎಂಬ ಬಗ್ಗೆ ಎಚ್ಚರಿಕೆ ವಹಿಸಬೇಕು. ಅಲ್ಲದೆ, ನಾಮಪತ್ರದಲ್ಲಿ ಭರ್ತಿಮಾಡುವ ಪ್ರತಿಯೊಂದು ನಮೂದಿನ ಬಗ್ಗೆಯೂ ಅಭ್ಯರ್ಥಿಯು ವಿಶೇಷವಾಗಿ ಗಮನ ವಹಿಸಬೇಕು.

## 3.4. ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಅಭ್ಯರ್ಥಿಯು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು:

**3.4.1.** ಚುನಾವಣಾ ವೆಚ್ಚಕ್ಕಾಗಿ ಪ್ರತಿಯೊಂದು ಅಭ್ಯರ್ಥಿಯು ಒಂದು ಪ್ರತ್ಯೇಕವಾದ ಬ್ಯಾಂಕ್ ಖಾತೆಯನ್ನು ತೆರೆಯಬೇಕು. ಚುನಾವಣಾ ವೆಚ್ಚ ಮೇಲ್ವಿಚಾರಣೆಯನ್ನು ಸುಗಮಗೊಳಿಸುವ ಸಲುವಾಗಿ, ಪ್ರತಿಯೊಂದು ಅಭ್ಯರ್ಥಿಯು, ವಿಶೇಷವಾಗಿ ಚುನಾವಣಾ ವೆಚ್ಚ ಉದ್ದೇಶಕ್ಕಾಗಿ ಒಂದು ಪ್ರತ್ಯೇಕವಾದ ಬ್ಯಾಂಕ್ ಖಾತೆಯನ್ನು ತೆರೆಯಬೇಕಾಗುತ್ತದೆ. ಅಭ್ಯರ್ಥಿಯು ತನ್ನ ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವ ದಿನಾಂಕಕ್ಕೆ ಕನಿಷ್ಠಪಕ್ಷ ಒಂದು ದಿನ ಮುಂಚೆ ಈ ಖಾತೆಯನ್ನು ತೆರೆಯತಕ್ಕದ್ದು. ಅಭ್ಯರ್ಥಿಯು ತನ್ನ ನಾಮಪತ್ರ ಸಲ್ಲಿಸುವ ಸಮಯದಲ್ಲಿ ಈ ಬ್ಯಾಂಕ್ ಖಾತೆಯ ಖಾತೆ

ಸಂಖ್ಯೆಯನ್ನು ರಿಟರ್ನಿಂಗ್ ಅಧಿಕಾರಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು. ಅಭ್ಯರ್ಥಿಯು ಎಲ್ಲಾ ಚುನಾವಣಾ ವೆಚ್ಚವನ್ನು ಈ ಬ್ಯಾಂಕ್ ಖಾತೆಯಿಂದಲೇ ಮಾಡತಕ್ಕದ್ದು. ಅಭ್ಯರ್ಥಿಯ ಸ್ವಂತ ಹಣ ಸೇರಿದಂತೆ ಯಾವುದೇ ಮೂಲದಿಂದ ಬರುವ ಅದರ ಹಣ/ ನಿಧಿಯನ್ನು ಪರಿಗಣಿಸದೇ, ಚುನಾವಣೆಯಲ್ಲಿ ಖರ್ಚು ಮಾಡಬೇಕಾದ ಎಲ್ಲಾ ಹಣವನ್ನು ಈ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಡತಕ್ಕದ್ದು.

**3**.4.2. ಬ್ಯಾಂಕ್ ಖಾತೆಯನ್ನು ಅಭ್ಯರ್ಥಿ ತನ್ನ ಹೆಸರಿನಲ್ಲಿ ಅಥವಾ ತನ್ನ ಚುನಾವಣಾ ಏಜೆಂಟ್‌ನ ಹೆಸರಿನಲ್ಲಿ ಜಂಟಿಯಾಗಿ ತೆರೆಯಬಹುದು. ಆದರೆ, ಅಭ್ಯರ್ಥಿಯ ಕುಟುಂಬ ಸದಸ್ಯರೊಂದಿಗೆ ಅಥವಾ ಅಭ್ಯರ್ಥಿಯು ಚುನಾವಣಾ ಏಜೆಂಟ್‌ನಾಗಿರದ ವ್ಯಕ್ತಿಯೊಂದಿಗೆ ಜಂಟಿಯಾಗಿ ಖಾತೆಯನ್ನು ತೆರೆಯಬಾರದು.

**3**.4.3. ಬ್ಯಾಂಕ್ ಖಾತೆಯನ್ನು ರಾಜ್ಯದಲ್ಲಿ ಎಲ್ಲಿಯೇ ಆಗಲಿ ತೆಗೆಯಬಹುದು. ಸಹಕಾರಿ ಬ್ಯಾಂಕ್‌ಗಳು ಅಥವಾ ಅಂಚೆ ಕಚೇರಿಯಲ್ಲಿ ಸೇರಿದಂತೆ ಯಾವುದೇ ಬ್ಯಾಂಕ್‌ನಲ್ಲಿ ಖಾತೆಗಳನ್ನು ತೆಗೆಯಬಹುದಾಗಿದೆ. ಚುನಾವಣಾ ಉದ್ದೇಶಕ್ಕೆ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಬೇಕಾಗಿರುವುದರಿಂದ, ಈಗಾಗಲೇ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಯನ್ನು ಈ ಉದ್ದೇಶಕ್ಕೆ ಬಳಸಬಾರದು.

## 3.5. ಅರ್ಹತೆಗಳು ಮತ್ತು ಅನರ್ಹತೆಗಳು

**3.5.1**. ಅಭ್ಯರ್ಥಿಯು ಎಲ್ಲಾ ಅಗತ್ಯ ಅರ್ಹತೆಗಳನ್ನು ಪಡೆದಿರಲೇ ಬೇಕು ಮತ್ತು ಯಾವುದೇ ಅನರ್ಹತೆಯನ್ನು ಹೊಂದಿರಬಾರದು. ಈ ನಿಟ್ಟಿನಲ್ಲಿ ಈ ಮುಂಚಿನ ಅಧ್ಯಾಯಗಳಲ್ಲಿ ವಿಸ್ತೃತ ಮಾರ್ಗಸೂಚಿಯನ್ನು ಈಗಾಗಲೇ ನೀಡಲಾಗಿದೆ.

## 3.6. ನಾಮಪತ್ರ

**3.6.1**. ಅಭ್ಯರ್ಥಿಯ ನಾಮಪತ್ರವು ಸಂಬಂಧಪಟ್ಟ ನಮೂನೆಗಳಲ್ಲಿ ಎಂದರೆ, (ಲೋಕಸಭಾ ಚುನಾವಣೆಗೆ) ನಮೂನೆ–2ಎ ಯಲ್ಲಿರಬೇಕು, (ವಿಧಾನಸಭಾ ಚುನಾವಣೆಗೆ) ನಮೂನೆ–2ಬಿ ಯಲ್ಲಿರಬೇಕು. ಅಭ್ಯರ್ಥಿಯು ನಾಮಪತ್ರವನ್ನು ತುಂಬಾ ಜಾಗರೂಕತೆಯಿಂದ ಭರ್ತಿ ಮಾಡಿದ್ದಾನೆಂದು ಖಚಿತಪಡಿಸಿಕೊಳ್ಳಬೇಕು ಮತ್ತು ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ಸ್ಫುಟವಾಗಿ ನೀಡಬೇಕು. ಅಭ್ಯರ್ಥಿಯು ಎರಡು ಸ್ಥಳಗಳಲ್ಲಿ ತನ್ನ ಸಹಿಯನ್ನು ಹಾಕುವುದು ಅಗತ್ಯ. ಇಲ್ಲದಿದ್ದಲ್ಲಿ, ನಾಮಪತ್ರ ತಿರಸ್ಕೃತವಾಗುವ ಸಾಧ್ಯತೆ ಇರುತ್ತದೆ.

## 3.7. ಅನರ್ಹತೆಯ ಖಂಡಗಳಿಗೆ ಸಂಬಂಧಿಸಿದ ಮಾಹಿತಿ

3.7.1. ಅಭ್ಯರ್ಥಿಯು ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಾಗಿದ್ದಾನೆಂದು ಘೋಷಣೆಯನ್ನು ಮಾಡಬೇಕು. ಅಭ್ಯರ್ಥಿಯು ಸಂವಿಧಾನದ 102(1) ಮತ್ತು 191(1)ನೇ ಅನುಚ್ಛೇಧಗಳಲ್ಲಿ ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ IIನೇ ಭಾಗದ IIIನೇ ಅಧ್ಯಾಯದಲ್ಲಿ ನಮೂದಿಸಲಾದ ಪ್ರತಿಯೊಂದು ಖಂಡದ ಸಂಬಂಧದಲ್ಲಿ ಘೋಷಣೆಯನ್ನು ಮಾಡಬೇಕಾಗುತ್ತದೆ.

## 3.8. ಅಫಿಡಾವಿಟ್‌ಗಳನ್ನು ಭರ್ತಿ ಮಾಡುವುದು

3.8.1. ನಾಮಪತ್ರಗಳೊಂದಿಗೆ ಪ್ರತಿಯೊಬ್ಬ ಅಭ್ಯರ್ಥಿಯು ನಮೂನೆ 26(ಅನುಬಂಧ–8)ರಲ್ಲಿ ಅಫಿಡವಿಟ್‌ನ್ನು ಭರ್ತಿ ಮಾಡುವುದು ಅಗತ್ಯ. ಅಫಿಡವಿಟ್ಟನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಅಥವಾ ಸಂಬಂಧಪಟ್ಟ ರಾಜ್ಯ ಉಚ್ಚ ನ್ಯಾಯಾಲಯವು ನೇಮಕ ಮಾಡುವ ಸಾರ್ವಜನಿಕ ನೋಟರಿ ಅಥವಾ ಪ್ರತಿಜ್ಞಾ ಆಯುಕ್ತರ ಮುಂದೆ ಅಫಿಡವಿಟ್‌ಗೆ ಪ್ರಮಾಣ ಮಾಡಬೇಕು. ಸಂಬಂಧಪಟ್ಟ ಹೇಳಿಕೆದಾರನು ಅಫಿಡವಿಟ್‌ನ ಪ್ರತಿ ಪುಟಕ್ಕೆ ಸಹಿ ಹಾಕಬೇಕು ಅಥವಾ ಯಾರ ಮುಂದೆ ಪ್ರತಿಜ್ಞಾವಚನ ಮಾಡಲಾಯಿತೋ ಅಂಥ ನೋಟರಿ, ಪ್ರತಿಜ್ಞಾ ಆಯುಕ್ತ/ ಮ್ಯಾಜಿಸ್ಟ್ರೇಟರ ಮೊಹರನ್ನು ಪ್ರತಿ ಪುಟದ ಮೇಲೆ ಹಾಕಬೇಕು. ಸಂಬಂಧಪಟ್ಟ ರಾಜ್ಯದ ಕಾನೂನಿನಡಿಯಲ್ಲಿ ಗೊತ್ತುಪಡಿಸಬಹುದಾದಂತಹ ಮೊತ್ತದ ಸ್ಟಾಂಪ್ ಪೇಪರ್‌ನ ಮೇಲೆ ಯುಕ್ತವಾಗಿ ಪ್ರಮಾಣ ಮಾಡಿದ ಅಫಿಡವಿಟ್‌ಗಳು ಇರಬೇಕು.

3.8.2. ನಾಮಪತ್ರಗಳನ್ನು ನೀಡುವಾಗ, ರಿಟರ್ನಿಂಗ್ ಅಧಿಕಾರಿಯು ಚುನಾವಣೆ ನಡೆಸುವ ನಿಯಮಗಳು 1961ಕ್ಕೆ ಅನುಬಂಧಿಸಿರುವ ನಮೂನೆ 26ನ್ನು (ಅನುಬಂಧ–8) ನಾಮಪತ್ರದೊಂದಿಗೆ ಲಗತ್ತಿಸಬೇಕು. ಅಫಿಡವಿಟ್‌ನ ಯಾವುದೇ ಅಂಕಣವನ್ನು ಖಾಲಿ ಬಿಡುವಾಗಲೀ ಮಾಡಬಾರದು ಅಥವಾ ರೈಟ್ ಮಾರ್ಕ್ ಅಥವಾ ಗೆರೆ ಎಳೆಯುವ ಮೂಲಕ ಭರ್ತಿ ಮಾಡಬಾರದು. ಅಂಕಣದಲ್ಲಿ ಕೇಳಿರುವ ಮಾಹಿತಿಯು ಲಭ್ಯವಿಲ್ಲದಿದ್ದರೆ, ಅಥವಾ ಅಭ್ಯರ್ಥಿಗೆ ಅನ್ವಯವಾಗದಿದ್ದರೆ, ಆ ಅಂಕಣದಲ್ಲಿ ಇಲ್ಲವೆಂದು ಅಥವಾ ಅನ್ವಯವಾಗುವುದಿಲ್ಲವೆಂದು ಬರೆಯಬೇಕು. [ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಮ್ಮ ನಾಮಪತ್ರಗಳೊಂದಿಗೆ ಅಭ್ಯರ್ಥಿಯು ಸಲ್ಲಿಸುವ ನಾಮಪತ್ರಗಳಲ್ಲಿ, ಅಭ್ಯರ್ಥಿಗಳು ಎಲ್ಲಾ ಅಂಕಣಗಳನ್ನು ಭರ್ತಿ ಮಾಡಬೇಕು ಮತ್ತು ಯಾವುದೇ ಅಂಕಣವನ್ನು ಖಾಲಿ ಬಿಡತಕ್ಕದ್ದಲ್ಲವೆಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಅಫಿಡವಿಟ್ಟನ್ನು ಭರ್ತಿ ಮಾಡುವಾಗ ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳೊಂದಿಗೆ ಸಲ್ಲಿಸುವ ಅಫಿಡವಿಟ್‌ಗಳಲ್ಲಿ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಇಲ್ಲದಿದ್ದಲ್ಲಿ,

ರಿಟರ್ನಿಂಗ್ ಅಧಿಕಾರಿಯು ಹೊಸ ಅಫಿಡವಿಟ್ಟನ್ನು ಸಲ್ಲಿಸುವಂತೆ ಅಭ್ಯರ್ಥಿಗೆ ನೋಟೀಸನ್ನು ನೀಡತಕ್ಕದ್ದು. ಮಾನ್ಯ ನ್ಯಾಯಾಲಯವು ಯಾವುದೇ ವಿವರದ ಮುಂದೆ ಒದಗಿಸಬೇಕಾದ ಮಾಹಿತಿಯು ಇಲ್ಲದಿದ್ದಲ್ಲಿ, ಇಲ್ಲ, ಅನ್ವಯವಾಗುವುದಿಲ್ಲ, ತಿಳಿದುಬಂದಿರುವುದಿಲ್ಲ ಎಂಬ ಪದಗಳನ್ನು ಸಂದರ್ಭಾನುಸಾರ ಅಂಥ ಅಂಕಣಗಳಲ್ಲಿ ಬರೆಯಬೇಕು. ಅವುಗಳನ್ನು ಭರ್ತಿ ಮಾಡದೆ ಖಾಲಿಯಾಗಿ ಬಿಡಬಾರದು. ಅಭ್ಯರ್ಥಿಗೆ ಸೂಚಿಸಿದಾಗ್ಯೂ ಅಂಕಣಗಳನ್ನು ಖಾಲಿ ಬಿಟ್ಟರೆ, ನಾಮಪತ್ರಗಳ ಪರಿಶೀಲನೆಯ ಸಂದರ್ಭದಲ್ಲಿ ಅವುಗಳನ್ನು ರಿಟರ್ನಿಂಗ್ ಅಧಿಕಾರಿಯು ತಿರಸ್ಕರಿಸಬೇಕಾಗುತ್ತದೆ] ಅಫಿಡವಿಟ್‌ನ ಪ್ರತಿ ಪುಟದ ಮೇಲೆ ಸಹಿ ಹಾಕಿರಬೇಕು.

3.8.3. ಭಾರತ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಲಾಗ್‌ಇನ್ ಆಗಿ ಮಾಹಿತಿಯನ್ನು ನಮೂದು ಮಾಡುವುದರ ಮೂಲಕ ಅಭ್ಯರ್ಥಿಗಳು ಅಫಿಡವಿಟ್‌ಗಳ ಇ–ಫೈಲಿಂಗ್ (ನಮೂನೆ 26) ಸೌಲಭ್ಯದ ಆಯ್ಕೆಯನ್ನು ಉಪಯೋಗಿಸಿಕೊಳ್ಳಬಹುದು. ಅಂತಹ ಸಂದರ್ಭದಲ್ಲಿ, ಸೂಕ್ತವಾದ ವರ್ಗ ಮೌಲ್ಯ (ಡಿನಾಮಿನೇಶನ್) ವಿರುವ ಛಾಪಾ ಕಾಗದದಲ್ಲಿ ಮುದ್ರಿತ ಪ್ರತಿಯನ್ನು ತೆಗೆದುಕೊಳ್ಳಬೇಕು ಮತ್ತು ಅದನ್ನು ರಿಟರ್ನಿಂಗ್ ಅಧಿಕಾರಿಯವರ ಮುಂದೆ ಸಲ್ಲಿಸುವುದಕ್ಕಾಗಿ ಪ್ರಮಾಣವಚನ ಬೋಧಿಸುವ ಆಯುಕ್ತರ ಅಥವಾ ಪ್ರಥಮ ವರ್ಗದ ಮ್ಯಾಜಿಸ್ಟ್ರೇಟ್ ಅಥವಾ ಪಬ್ಲಿಕ್ ನೋಟರಿ ಎದುರಿಗೆ ಪ್ರಮಾಣ ಮಾಡಬೇಕು. ನೋಟರಿ ಮಾಡಿದ ಅಫಡವಿಟ್ ಅನ್ನು ನಾಮಪತ್ರ ಸಲ್ಲಿಸಬೇಕಾದ ಕೊನೆಯ ದಿನಾಂಕದಂದು ಮಧ್ಯಾಹ್ನ 3.00 ಗಂಟೆಯ ಒಳಗೆ ಸಲ್ಲಿಸಬೇಕು ಎಂಬುದನ್ನು ಗಮನಿಸುವುದು ಅಗತ್ಯ. ನೋಟರಿ ಮಾಡಿದ ಅಫಿಡವಿಟ್ ಅನ್ನು ಭೌತಿಕ ರೂಪದಲ್ಲಿ ಸಲ್ಲಿಸಬೇಕಾದ ಶಾಸನಬದ್ಧ ಅಗತ್ಯತೆಗಾಗಿ ಇ–ಫೈಲಿಂಗ್ ಒಂದು ಪರ್ಯಾಯ ವಿಧಾನ ಆಗಿರುವುದಿಲ್ಲ. ಇ–ಫೈಲಿಂಗ್‌ನ ಈ ಸೌಲಭ್ಯವು ಎರಡು ಭಾಷೆಗಳಲ್ಲಿ ಅಂದರೆ ಆಂಗ್ಲ ಮತ್ತು ಹಿಂದಿ ಭಾಷೆಯಲ್ಲಿ ಲಭ್ಯವಿರುತ್ತದೆ.

3.8.4. ಅಫಿಡವಿಟ್‌ಗಳ ಪ್ರತಿಗಳನ್ನು ಚುನಾವಣಾ ಕ್ಷೇತ್ರದ ಒಳಗೆಯೇ ಇರುವ ಸಾರ್ವಜನಿಕ ಸ್ಥಳದ ಆವರಣದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸಲಾಗುವುದು. ಎಲ್ಲಾ ಸಂದರ್ಭದಲ್ಲಿಯೂ ಕಚೇರಿಯು ಚುನಾವಣಾ ಕ್ಷೇತ್ರದ ಗಡಿಯಿಂದ ಹೊರಭಾಗದಲ್ಲಿ ಇದ್ದರೂ ಸಹ ರಿಟರ್ನಿಂಗ್ ಅಧಿಕಾರಿಯವರ ಸೂಚನಾ ಫಲಕದಲ್ಲಿ ಪ್ರತಿಗಳನ್ನು ಪ್ರದರ್ಶಿಸಲಾಗುವುದು.

3.8.5. ಅಭ್ಯರ್ಥಿಗಳು ಸಲ್ಲಿಸುವ ಅಫಿಡವಿಟ್‌ಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು: ಮಾನ್ಯತೆ ಪಡೆದ ಪಕ್ಷಗಳಿಂದ ಅಥವಾ ಮಾನ್ಯತೆ ಪಡೆಯದ ಪಕ್ಷಗಳಿಂದ ನಿಲ್ಲಿಸಲಾದ ಅಥವಾ ಸ್ವತಂತ್ರ ಅಭ್ಯರ್ಥಿಗಳಾದ ಎಲ್ಲಾ ಅಭ್ಯರ್ಥಿಗಳಿಂದ ಸಲ್ಲಿಸಲಾದ ಅಫಿಡವಿಟ್‌ಗಳನ್ನು ಅಭ್ಯರ್ಥಿಗಳು ಅವುಗಳನ್ನು ಸಲ್ಲಿಸಿದ ತಕ್ಷಣ ಮತ್ತು ಯಾವುದೇ ಸಂದರ್ಭದಲ್ಲಿ 24 ಗಂಟೆಗಳೊಳಗಾಗಿ ವೆಬ್‌ಸೈಟ್‌ನಲ್ಲಿ ಹಾಕಲಾಗುವುದು. ಯಾರೇ ಅಭ್ಯರ್ಥಿಯು ತಮ್ಮ ಅಭ್ಯರ್ಥಿತನವನ್ನು

ಹಿಂಪಡೆದಾಗಲೂ ಸಹ ಈಗಾಗಲೇ ಅಪ್‌ಲೋಡ್ ಮಾಡಿರುವ ಅಫಿಡವಿಟ್ ಅನ್ನು ತೆಗೆಯತಕ್ಕದ್ದಲ್ಲ.

3.8.6. ನಮೂನೆ 26ರಲ್ಲಿ ಮಾಡಿರುವ ತಿದ್ದುಪಡಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಸಿ) ಸಂಖ್ಯೆ. 784/2015 (ಲೋಕ್ ಪ್ರಹಾರಿ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು) ಮತ್ತು ರಿಟ್ ಅರ್ಜಿ ಸಂಖ್ಯೆ (ನಾಗರಿಕ) : 536/2011 (ಸಾರ್ವಜನಿಕ ಹಿತಾಸಕ್ತಿಗಳ ವೇದಿಗೆ ಮತ್ತು ಇತರರು ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು)ರಲ್ಲಿ ನೀಡಿರುವ ತೀರ್ಪುಗಳಿಗೆ ಅನುಗುಣವಾಗಿವೆ.

3.8.7. ರಿಟ್ ಅರ್ಜಿ ಸಂಖ್ಯೆ: 536/2011 (ನಾಗರಿಕ)ರಲ್ಲಿ ನೀಡಿರುವ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇತರ ವಿಷಯಗಳ ಜೊತೆಗೆ ಈ ಮುಂದಿನಂತೆ ನಿರ್ದೇಶನಗಳನ್ನು ನೀಡಿದೆ:–

(i) ಚುನಾವಣಾ ಆಯೋಗದಿಂದ ಒದಗಿಸಲಾಗಿರುವಂತೆ ನಮೂನೆಯನ್ನು ಪ್ರತಿಯೊಬ್ಬ ಚುನಾವಣಾ ಅಭ್ಯರ್ಥಿಯು ಭರ್ತಿ ಮಾಡತಕ್ಕದ್ದು ಮತ್ತು ಅದರಲ್ಲಿ ಅಗತ್ಯಪಡಿಸಿರುವ ಎಲ್ಲಾ ವಿವರಗಳನ್ನು ನಮೂನೆಯು ಹೊಂದಿರತಕ್ಕದ್ದು. (ii) ಅಭ್ಯರ್ಥಿಯ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳ ಕುರಿತು ದಪ್ಪ ಅಕ್ಷರಗಳಲ್ಲಿ ನಮೂನೆಯಲ್ಲಿ ನಮೂದಿಸಿರತಕ್ಕದ್ದು. (iii) ಅಭ್ಯರ್ಥಿಯು, ನಿರ್ದಿಷ್ಟ ಪಕ್ಷದ ಟಿಕೆಟ್‌ನ ಆಧಾರದ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಸಂದರ್ಭದಲ್ಲಿ, ಅವರು ತಮ್ಮ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳ ಕುರಿತು ಪಕ್ಷಕ್ಕೆ ತಿಳಿಸಬೇಕು. (iv) ಕ್ರಿಮಿನಲ್ ಪೂರ್ವ ವೃತ್ತಾಂತವನ್ನು ಹೊಂದಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿರುವ ಈ ಮೇಲೆ ಹೇಳಲಾದ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಂಬಂಧಪಟ್ಟ ರಾಜಕೀಯ ಪಕ್ಷವು ಹೊಣೆಯಾಗಿರುವುದು. (v) ಅಭ್ಯರ್ಥಿ ಹಾಗೆಯೇ ಸಂಬಂಧಪಟ್ಟ ರಾಜಕೀಯ ಪಕ್ಷವು ಅಭ್ಯರ್ಥಿಯ ಪೂರ್ವ ವೃತ್ತಾಂತದ ಬಗ್ಗೆ ಸ್ಥಳೀಯವಾಗಿ ವ್ಯಾಪಕ ಪ್ರಸರಣ ಹೊಂದಿರುವ ದಿನ ಪತ್ರಿಕೆಗಳಲ್ಲಿ ಘೋಷಣೆಯನ್ನು ಹೊರಡಿಸತಕ್ಕದ್ದು ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ವ್ಯಾಪಕ ಪ್ರಚಾರವನ್ನು ಸಹ ನೀಡಬೇಕು. ವ್ಯಾಪಕ ಪ್ರಚಾರ ಎಂದರೆ, ನಾಮಪತ್ರಗಳು ಸಲ್ಲಿಕೆಯಾದ ನಂತರ ಕನಿಷ್ಠ ಪಕ್ಷ ಮೂರು ಬಾರಿಯಾದರೂ ಸಹ ಪ್ರಚಾರ ನೀಡತಕ್ಕದ್ದು ಎಂದು ಅದರ ಅರ್ಥವಾಗಿರುತ್ತದೆ.

3.8.8. ಈ ಮೇಲೆ ಹೇಳಲಾದ ತೀರ್ಪಿನ ಅನುಸಾರವಾಗಿ, ಬಾಕಿ ಇರುವ ಪ್ರಕರಣಗಳಾಗಲಿ ಅಥವಾ ಹಿಂದೆ ಅಪರಾಧ ನಿರ್ಣಯವಾಗಿರುವ ಪ್ರಕರಣಗಳೇ ಆಗಿರಲಿ, ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಅಭ್ಯರ್ಥಿಗಳು ಮತ್ತು ಅಂತಹ ಅಭ್ಯರ್ಥಿಗಳನ್ನು ನಿಲ್ಲಿಸುವ ರಾಜಕೀಯ ಪಕ್ಷಗಳು

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ನಡೆಸುವ ಚುನಾವಣೆಗಳಲ್ಲಿ ಪಾಲಿಸಬೇಕಾದ ನಿರ್ದೇಶನಗಳನ್ನು ಚುನಾವಣಾ ಆಯೋಗವು ಈ ಕೆಳಕಂಡಂತೆ ನೀಡಿದೆ.

(ಎ) ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಲೋಕಸಭೆ, ರಾಜ್ಯ ಸಭೆ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು – ಬಾಕಿ ಇರುವ ಪ್ರಕರಣಗಳನ್ನಾಗಲಿ ಅಥವಾ ಅಭ್ಯರ್ಥಿಯನ್ನು ಅಪರಾದಿಯೆಂದು ನಿರ್ಣಯಿಸಲಾಗಿರುವ ಪ್ರಕರಣಗಳನ್ನಾಗಲಿ ಹೊಂದಿರುವ ಅಭ್ಯರ್ಥಿಯು ಅಂತಹ ಪ್ರಕರಣಗಳ ಕುರಿತು ಘೋಷಣೆಯನ್ನು ವ್ಯಾಪಕ ಪ್ರಚಾರಕ್ಕಾಗಿ ಚುನಾವಣಾ ಕ್ಷೇತ್ರದ ಪ್ರದೇಶದಲ್ಲಿ ವ್ಯಾಪಕ ಪ್ರಸರಣವನ್ನು ಹೊಂದಿರುವ ದಿನ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು. ಉಮೇದುವಾರಿಕೆಯನ್ನು ಹಿಂಪಡೆಯುವುದಕ್ಕಾಗಿನ ಕೊನೆಯ ದಿನಾಂಕದ ನಂತರದ ದಿನದಿಂದ ಮತದಾನದ ಮುಂಚಿನ ಎರಡು ದಿನಗಳವರೆಗೂ ಕನಿಷ್ಟ ಮೂರು ಬೇರೆ ಬೇರೆ ದಿನಾಂಕಗಳಂದು ಇದಕ್ಕೆ ಲಗತ್ತಿಸಿರುವ ನಮೂನೆ ಸಿ–1 (ಅನುಬಂಧ 43)ರಲ್ಲಿ ಈ ಘೋಷಣೆಯನ್ನು ಪ್ರಕಟಿಸಬೇಕು. ಈ ವಿಷಯವನ್ನು ಕನಿಷ್ಟ 12 ಫಾಂಟ್ ಗಾತ್ರದಲ್ಲಿ ಪ್ರಕಟಿಸಬೇಕು ಮತ್ತು ದಿನಪತ್ರಿಕೆಗಳಲ್ಲಿ ಸೂಕ್ತ ಸ್ಥಳಗಳಲ್ಲಿ ಪ್ರಕಟಿಸಬೇಕು. ಇದರಿಂದಾಗಿ, ವ್ಯಾಪಕ ಪ್ರಚಾರಕ್ಕಾಗಿ ನೀಡಿರುವ ನಿರ್ದೇಶನಗಳನ್ನು ಸಂಪೂರ್ಣವಾಗಿ ಪಾಲಿಸಿದಂತಾಗುವುದು.

(ಬಿ) ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವಂತಹ ಎಲ್ಲಾ ಅಭ್ಯರ್ಥಿಗಳು ಸಹ ಈ ಮೇಲೆ ಹೇಳಲಾದ ಅವಧಿಯ ಸಂದರ್ಭದಲ್ಲಿ ಮೂರು ಬೇರೆ ಬೇರೆ ದಿನಾಂಕಗಳಂದು ಟಿವಿ ವಾಹಿನಿಗಳಲ್ಲಿ ಮೇಲೆ ಹೇಳಲಾದ ಘೋಷಣೆಯನ್ನು ಪ್ರಕಟಿಸುವಂತೆ ಅಗತ್ಯಪಡಿಸಲಾಗಿದೆ. ಆದರೆ, ಮತದಾನ ಮುಕ್ತಾಯಕ್ಕೆ ನಿಗದಿಪಡಿಸಿದಿರುವ ಸಮಯದೊಂದಿಗೆ ಮುಕ್ತಾಯವಾಗುವ 48 ಗಂಟೆಗಳ ಅವಧಿಗೆ ಮುಂಚಿತವಾಗಿ ಟಿವಿ ವಾಹಿನಿಯಲ್ಲಿ ಘೋಷಣೆಯನ್ನು ಪ್ರಕಟಿಸುವುದಕ್ಕೆ ಸಂಬಂಧಿಸಿದಂತೆ ಪ್ರಕಟಣೆಯು ಮುಕ್ತಾಯವಾಗಬೇಕು.

(ಸಿ) ನಮೂನೆ 26ರ ಐಟಮ್ 5 ಮತ್ತು 6ರಲ್ಲಿರುವ ಘೋಷಣೆಗಳ ಪ್ರಕಾರ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಎಲ್ಲಾ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ರಿಟರ್ನಿಂಗ್ ಅಧಿಕಾರಿಯವರು ಕ್ರಿಮಿನಲ್ ಪ್ರಕರಣಗಳನ್ನು ದಿನಪತ್ರಿಕೆಗಳಲ್ಲಿ ಮತ್ತು ಟಿವಿ ವಾಹಿನಿಗಳಲ್ಲಿ ವ್ಯಾಪಕ ಪ್ರಚಾರ ಮಾಡುವುದರ ಬಗ್ಗೆ ಘೋಷಣೆಯನ್ನು ಪ್ರಕಟಿಸುವುದಕ್ಕಾಗಿ ಇದರಲ್ಲಿ ನೀಡಿರುವ ನಿರ್ದೇಶನಗಳ ಕುರಿತು ಲಿಖಿತ ನೆನಪೋಲೆಯನ್ನು ನೀಡತಕ್ಕದ್ದು. ಅಭ್ಯರ್ಥಿಗಳಿಗೆ ನೀಡುವ ಅಂತಹ ನೆನಪೋಲೆಯ ನಿಗದಿತ ಮಾದರಿ ನಮೂನೆಯನ್ನು ನಮೂನೆ ಸಿ–3 **(ಅನುಬಂಧ–43)** ರೂಪದಲ್ಲಿ ಅನುಬಂಧಿಸಲಾಗಿದೆ. ಈ ಕುರಿತು ತಮ್ಮ ಘೋಷಣೆಗಳನ್ನು ಪ್ರಕಟಿಸಲಾಗಿರುವ ದಿನಪತ್ರಿಕೆಗಳ ಪ್ರತಿಗಳನ್ನು ತಮ್ಮ

ಚುನಾವಣಾ ವೆಚ್ಚಗಳ ಲೆಕ್ಕದೊಂದಿಗೆ ಅಭ್ಯರ್ಥಿಗಳು ಜಿಲ್ಲಾ ಚುನಾವಣಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು.

(ಡಿ) ಮಾನ್ಯತೆ ಪಡೆದಿರುವ ಪಕ್ಷಗಳೇ ಆಗಲಿ ಅಥವಾ ಮಾನ್ಯತೆ ಪಡೆದಿರದ ನೋಂದಣಿಯಾಗಿರುವ ಪಕ್ಷಗಳೆ ಆಗಿರಲಿ, ರಾಜಕೀಯ ಪಕ್ಷಗಳಿಂದ ನಿಲ್ಲಿಸಲ್ಪಟ್ಟಿರುವ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಅಭ್ಯರ್ಥಿಗಳ ಸಂದರ್ಭದಲ್ಲಿ, ಅಂತಹ ಅಭ್ಯರ್ಥಿಗಳು ತಮ್ಮ ವಿರುದ್ಧ ಇರುವ ಕ್ರಿಮಿನಲ್ ಪ್ರಕರಣಗಳ ಕುರಿತು ತಮ್ಮ ರಾಜಕೀಯ ಪಕ್ಷಕ್ಕೆ ತಿಳಿಸಿರುವಾಗ, ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಯವರ ಮುಂದೆ ಘೋಷಣೆ ಮಾಡುವಂತೆ ಅಗತ್ಯಪಡಿಸಲಾಗಿದೆ.

### 3.8.9. ರಾಜಕೀಯ ಪಕ್ಷಗಳು

ಬಾಕಿ ಇರುವ ಪ್ರಕರಣಗಳನ್ನಾಗಲಿ ಅಥವಾ ಹಿಂದೆ ಅಪರಾಧಿಯೆಂದು ನಿರ್ಣಯಿಸಲಾಗಿರುವ ಪ್ರಕರಣಗಳಾಗಲಿ, ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಅಭ್ಯರ್ಥಿಗಳನ್ನು ನಿಲ್ಲಿಸಿರುವ ಮಾನ್ಯತೆ ಪಡೆದಿರುವ ಪಕ್ಷಗಳು ಅಥವಾ ಮಾನ್ಯತೆ ಪಡೆಯದೇ ಇರುವ ಪಕ್ಷಗಳು ತಮ್ಮ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ಟಿವಿ ವಾಹಿನಿಗಳಲ್ಲಿ ಮತ್ತು ವ್ಯಾಪಕ ಪ್ರಸರಣ ಹೊಂದಿರವ ದಿನಪತ್ರಿಕೆಗಳಲ್ಲಿ ಈ ಕುರಿತು ವಿವರಗಳನ್ನು ನೀಡುವ ಘೋಷಣ ಪ್ರಮಾಣಪತ್ರವನ್ನು ಪ್ರಕಟಿಸುವಂತೆ ಅಗತ್ಯಪಡಿಸಲಾಗಿದೆ. ರಾಜಕೀಯ ಪಕ್ಷಗಳಿಂದ ಪ್ರಕಟಿಸಲ್ಪಡುವ ಈ ಘೋಷಣೆಯನ್ನು ಇದಕ್ಕೆ ಅನುಬಂಧಿಸಿದ ನಮೂನೆ ಸಿ–2 (**ಅನುಬಂಧ–43**)ರಲ್ಲಿ ಪ್ರಕಟಿಸಬೇಕು. ಮೇಲಿನ ಕಂಡಿಕೆ 3.8.8ರಲ್ಲಿ ನಮೂದಿಸಲಾದ ಅವಧಿಯಲ್ಲಿ ಕನಿಷ್ಠ ಪಕ್ಷ ಮೂರು ಬೇರೆಬೇರೆ ದಿನಾಂಕಗಳಂದು ದಿನಪತ್ರಿಕೆಗಳಲ್ಲಿ ಹಾಗೂ ಟಿವಿ ವಾಹಿನಿಗಳಲ್ಲಿ ಘೋಷಣೆಯನ್ನು ಪ್ರಕಟಿಸುವಂತೆ ಅಗತ್ಯಪಡಿಸಲಾಗಿದೆ. ಟಿವಿ ವಾಹಿನಿಗಳ ಸಂದರ್ಭದಲ್ಲಿ, ಚುನಾವಣೆಗಾಗಿ ಮತದಾನ ಮುಕ್ತಾಯವಾಗುವುದಕ್ಕಾಗಿ ನಿಗದಿ ಪಡಿಸಿದ ಕೊನೆಯ 48 ಗಂಟೆಗಳ ಅವಧಿಗೆ ಮುಂಚೆ ಪ್ರಕಟಣೆಯನ್ನು ನೀಡಬೇಕು. ಎಲ್ಲಾ ಅಂತಹ ರಾಜಕೀಯ ಪಕ್ಷಗಳು ತಾವು ಈ ನಿರ್ದೇಶನಗಳ ಅಗತ್ಯತೆಗಳನ್ನು ಪೂರೈಸಿರುವುದಾಗಿ ತಿಳಿಸುವ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂದರ್ಭದಲ್ಲಿ ಪಕ್ಷವು ಪ್ರಕಟಿಸಿದ ಘೋಷಣೆಗಳನ್ನು ಒಳಗೊಂಡಿರುವ ಪತ್ರಿಕಾ ತುಣುಕುಗಳನ್ನು ಲಗತ್ತಿಸಿ ಸಂಬಂಧಪಟ್ಟ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ವರದಿ ಸಲ್ಲಿಸತಕ್ಕದ್ದು.

3.8.10. ಅಭ್ಯರ್ಥಿಗೆ ಸರ್ಕಾರಿ ವಸತಿಗೃಹ ಏನಾದರು ಹಂಚಿಕೆಯಾಗಿದ್ದರೆ, ಆ ಸಂಬಂಧದಲ್ಲಿನ ಬಾಕಿಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಶಪಥಪತ್ರಕ್ಕಾಗಿ ಉಪಬಂಧಗಳನ್ನು ಸಾರ್ವಜನಿಕ ಹಣಕಾಸು ಸಂಸ್ಥೆಗಳ ಹಾಗೂ ಸರ್ಕಾರದ ಹೊಣೆಗಾರಿಕೆ ಸಂಬಂಧಿಸಿದ ಬಾಬು–8ರ ಅಡಿಯಲ್ಲಿ ನಿಯಮ

26ರಲ್ಲಿ ಸೇರಿಸಲಾಗಿದೆ ಎಂಬುದನ್ನು ಸಹ ಗಮನಿಸಬಹುದು. ಆದ್ದರಿಂದ, ಅಭ್ಯರ್ಥಿಗಳು ಈ ಸಂಬಂಧದಲ್ಲಿನ ಅಗತ್ಯ ಘೋಷಣೆ/ ವಿವರಗಳನ್ನು ನಮೂನೆ–26ರ ಬಾಬು–8ರಲ್ಲಿ ನೀಡತಕ್ಕದ್ದು.

3.8.11. ಚುನಾವಣೆಯ ತರುವಾಯ ಅಭ್ಯರ್ಥಿಗಳು ಘೋಷಣೆ ಪ್ರಕಟಿಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಯವರಿಗೆ ಹಾಗೂ ರಾಜಕೀಯ ಪಕ್ಷಗಳು ರಾಜ್ಯದ ಮುಖ್ಯ ಚುನಾವಣಾಧಿಕಾರಿಯವರಿಗೆ ವರದಿಯನ್ನು ಸಲ್ಲಿಸತಕ್ಕದ್ದು. ಆಯೋಗವು ಈ ಉದ್ದೇಶಕ್ಕಾಗಿ ನಮೂನೆ ಸಿ–4 ಮತ್ತು ಸಿ–5 (ಅನುಬಂಧ–43)ಅನ್ನು ಒದಗಿಸಿದೆ.

## 3.9. ನಾಮಪತ್ರದಲ್ಲಿ ಅಭ್ಯರ್ಥಿಯ ಹೆಸರು

3.9.1. ಅಭ್ಯರ್ಥಿಯು ನಾಮಪತ್ರದಲ್ಲಿ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನಮೂದಿಸಿರುವಂತೆಯೇ ನೀಡಬೇಕು. ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ತಪ್ಪಾದ ಅಕ್ಷರಗಳಿಂದ ಕೂಡಿದೆ ಅಥವಾ ಇನ್ನಾವುದೇ ರೀತಿಯಲ್ಲಿ ತಪ್ಪಾಗಿ ಕಂಡು ಬರುತ್ತಿದೆಯೆಂದು ನೀವು ಭಾವಿಸಿದರೆ, ನೀವು ನಿಮ್ಮ ಸರಿಯಾದ ಹೆಸರನ್ನು ನಾಮಪತ್ರದಲ್ಲಿ ನೀಡಬೇಕು. ರಿಟರ್ನಿಂಗ್ ಅಧಿಕಾರಿಯು ಮತದಾರರ ಪಟ್ಟಿಯಲ್ಲಿ ಆಗಿರುವ ದೋಷವನ್ನು ಪರಿಶೀಲಿಸುತ್ತಾರೆ. ಅಂಥ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ತಪ್ಪಾಗಿರುವ ಕುರಿತಾದ ಮೇಲ್ಕಂಡ ಸಂಗತಿಯನ್ನು ತಿಳಿಸುವ ಒಂದು ಅರ್ಜಿಯನ್ನೂ ಸಹ ನಾಮಪತ್ರದ ಜೊತೆಗೆ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸುವುದು ಸೂಕ್ತವಾಗುತ್ತದೆ.

## 3.10. ಸೂಕ್ತ ನಮೂನೆಯಲ್ಲಿ ನಾಮಪತ್ರವನ್ನು ಸಲ್ಲಿಸಬೇಕಾದ ದಿನಾಂಕ

3.10.1. ಸೂಕ್ತ ನಮೂನೆಯಲ್ಲಿರುವ ನಾಮಪತ್ರವನ್ನು 30ನೇ ಪ್ರಕರಣದ ಅಡಿಯಲ್ಲಿ ಚುನಾವಣಾ ವೇಳಾಪಟ್ಟಿಯನ್ನು ನಿಗದಿಪಡಿಸುವ ಅಧಿಸೂಚನೆಯನ್ನು ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿದ ನಂತರ ನಾಮಪತ್ರವನ್ನು ಸಲ್ಲಿಸುವ ಕೊನೆಯ ದಿನಾಂಕವೂ ಸೇರಿದಂತೆ ಯಾವುದೇ ದಿನದಂದು ಸಾಧ್ಯವಾದಷ್ಟು ಬೇಗನೆ ಸಲ್ಲಿಸಬೇಕು.

**ಸೂಚನೆ:** ಆದರೆ ಯಾವುದೇ ಅಂಥ ದಿನಾಂಕವು ಸಾರ್ವತ್ರಿಕ ರಜಾದಿನವಾಗಿದ್ದರೆ, ಅಂದು ನಾಮಪತ್ರವನ್ನು ಸಲ್ಲಿಸಲಾಗದು.

## 3.11. ನಾಮಪತ್ರವನ್ನು ಸಲ್ಲಿಸುವ ಸಮಯ

3.11.1. ಮೇಲೆ ತಿಳಿಸಲಾದ ಯಾವುದೇ ದಿನದಂದು ಪೂರ್ವಾಹ್ನ 11 ಗಂಟೆಯಿಂದ ಅಪರಾಹ್ನ 3 ಗಂಟೆಯ ಅವಧಿಯಲ್ಲಿ ಮಾತ್ರವೇ ನಾಮಪತ್ರವನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ನಾಮಪತ್ರವನ್ನು ಸಲ್ಲಿಸುವುದಕ್ಕಾಗಿ ಕೊನೆಯ ದಿನಾಂಕದಂದು ನಾಮಪತ್ರಗಳನ್ನು ಸಲ್ಲಿಸುವವರ ಸಂಖ್ಯೆ ಹೆಚ್ಚಿರುವುದನ್ನು ಗಮನಿಸಬೇಕು. ಅವರು ನಾಮಪತ್ರವನ್ನು ಸ್ವೀಕರಿಸುವ ಕೊಠಡಿ/ ಸಭಾಂಗಣದೊಳಗೆ ಅಗತ್ಯ ಕಾಗದ ಪತ್ರಗಳೊಂದಿಗೆ 3 ಗಂಟೆಗೆ ಮುಂಚೆ ಇರಬೇಕು ಹಾಗೂ ಅವರ ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಔಪಚಾರಿಕತೆಗಳನ್ನು ಕ್ರಮಬದ್ಧವಾಗಿ ಮುಗಿಯುವವರೆಗೆ ಕೊಠಡಿಯನ್ನು ಬಿಡುವಹಾಗಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ತದನಂತರ, ರಿಟರ್ನಿಂಗ್ ಅಧಿಕಾರಿಯವರು ಯಾರೇ ವ್ಯಕ್ತಿಯನ್ನು ಕೊಠಡಿ / ಸಭಾಂಗಣವನ್ನು ಪ್ರವೇಶಿಸುವುದಕ್ಕೆ ಅಥವಾ ಆ ಕೊಠಡಿಯೊಳಗೆ ಯಾವುದೇ ಕಾಗದ ಪತ್ರವನ್ನು ತರಲು ಅನುಮತಿಸಬಾರದು.

## 3.12. ನಾಮಪತ್ರವನ್ನು ಯಾರು ಸಲ್ಲಿಸಬಹುದು

3.12.1 ಅಭ್ಯರ್ಥಿ ಅಥವಾ ಆತನ/ಆಕೆಯ ಸೂಚಕರು ಯಾರಾದರು ನಾಮಪತ್ರವನ್ನು ಖುದ್ದಾಗಿ ಸಲ್ಲಿಸಬಹುದು ಆದರೆ ಇನ್ನಾರೂ ಸಲ್ಲಿಸಲಾಗದು. ಇದನ್ನು ನೀವು ತುಂಬಾ ಸ್ಪಷ್ಟವಾಗಿ ಗಮನಿಸಬೇಕು. ಸಾಧ್ಯವಿದ್ದಲ್ಲಿ ಅಭ್ಯರ್ಥಿಯು ನಾಮಪತ್ರವನ್ನು ಖುದ್ದಾಗಿ ಸಲ್ಲಿಸಬೇಕು. ಏಕೆಂದರೆ ಅನಿರೀಕ್ಷಿತ ತೊಡಕು ಅಥವಾ ತೊಂದರೆ ಕಾಣಿಸಿಕೊಂಡು ನಿಮ್ಮ ಅಭ್ಯರ್ಥಿತನಕ್ಕೆ ಗಂಡಾಂತರವೊದಗುವ ಸಂಭವವಿರುತ್ತದೆ. ಅಭ್ಯರ್ಥಿ ಅಥವಾ ಆತನ/ಆಕೆಯ ಸೂಚಕರು ನಾಮಪತ್ರವನ್ನು ಅಂಚೆಯ ಮೂಲಕ ಕಳುಹಿಸುವಂತಿಲ್ಲ. ನಾಮಪತ್ರವನ್ನು ಆರ್‌ಓ ಅಥವಾ ಎಆರ್‌ಓ ಅವರ ವಸತಿಗೃಹದಲ್ಲಾಗಲಿ ಅಥವಾ ನಮೂನೆ–1ರಲ್ಲಿನ ನೋಟೀಸ್‌ನಲ್ಲಿ ನಮೂದಿಸಿದ ಸ್ಥಳದ ಬೇರೆಡೆಯಾಗಲಿ ಸಲ್ಲಿಸುವಹಾಗಿಲ್ಲ. ನಾಮಪತ್ರವನ್ನು ಯಾವುದೇ ಇತರೆ ಸ್ಥಳದಲ್ಲಿ ಸಲ್ಲಿಸಿದರೆ ಅದನ್ನು ತಿರಸ್ಕರಿಸಲಾಗುವುದು.

## 3.13. ನಾಮಪತ್ರವನ್ನು ಯಾರಿಗೆ ಸಲ್ಲಿಸಬೇಕು

3.13.1. ಅಭ್ಯರ್ಥಿ ನಾಮಪತ್ರವನ್ನು ಮತಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗೆ ಅಥವಾ ಈ ಬಗ್ಗೆ ರಿಟರ್ನಿಂಗ್ ಅಧಿಕಾರಿಯು ಅಧಿಕೃತಗೊಳಿಸುವಂಥ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಬೇಕು. ಈ ಅಧಿಕೃತ ಸಹಾಯಕ ರಿಟರ್ನಿಂಗ್ ಅಧಿಕಾರಿಯನ್ನು ಚುನಾವಣೆಗಳನ್ನು ನಡೆಸುವ ನಿಯಮಗಳು,

1961ರಲ್ಲಿ ಅನುಬಂಧಿಸಿದ ನಮೂನೆ–1ರಲ್ಲಿ 31ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಚುನಾವಣೆಯ ಸಾರ್ವಜನಿಕ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾಗುತ್ತದೆ.

## 3.14. ನಾಮಪತ್ರವನ್ನು ಎಲ್ಲಿ ಸಲ್ಲಿಸಬೇಕು

3.14.1. ನಾಮಪತ್ರವನ್ನು ಮೇಲೆ ಹೇಳಿದ ನಮೂನೆ–1ರಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಸಲ್ಲಿಸಬೇಕು. ಬೇರೆ ಇನ್ನಾವುದೇ ಸ್ಥಳದಲ್ಲಿ ಸಲ್ಲಿಸಬಾರದು. ನಾಮಪತ್ರವನ್ನು ನಿರ್ದಿಷ್ಟಪಡಿಸಿದ ಅಧಿಕಾರಿಯ ನಿವಾಸದಲ್ಲಿ ಅಥವಾ ನಮೂನೆ–1ರಲ್ಲಿರುವ ನೋಟೀಸಿನಲ್ಲಿ ಸೂಚಿಸಿದ ಸ್ಥಳದ ಹೊರಗೆ ಸಲ್ಲಿಸಬಾರದು. ಯಾವುದೇ ಇತರ ಸ್ಥಳದಲ್ಲಿ ಸಲ್ಲಿಸಿದರೆ, ಅದು ತಿರಸ್ಕೃತವಾಗುತ್ತದೆ.

## 3.15. ನಾಮಪತ್ರಗಳನ್ನು ಸಲ್ಲಿಸುವ ಸಮಯದಲ್ಲಿ ವಾಹನ ಮತ್ತು ಜನರ ಸಂಖ್ಯೆಯ ಮೇಲೆ ನಿರ್ಬಂಧ

3.15.1. ನಾಮಪತ್ರಗಳನ್ನು ಸಲ್ಲಿಸುವ ಸಮಯದಲ್ಲಿ ಕೆಲವು ಅಭ್ಯರ್ಥಿಗಳ ಜೊತೆಗೆ ಬರುವ ಭಾರೀ ಸಂಖ್ಯೆಯ ವಾಹನಗಳು ಮತ್ತು ಜನರಿಂದ ರಿಟರ್ನಿಂಗ್ ಅಧಿಕಾರಿಗಳ ಕಚೇರಿಗಳಲ್ಲಿ ಸಾಮಾನ್ಯ ಕಾನೂನು ಸುವ್ಯವಸ್ಥೆಯ ಬಗ್ಗೆ ತೀವ್ರ ಆತಂಕ ಉಂಟಾಗುತ್ತಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು, ರಿಟರ್ನಿಂಗ್ ಅಧಿಕಾರಿಗಳ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಕಚೇರಿಯ 100 ಮೀಟರ್ ಸುತ್ತಳತೆಯೊಳಗೆ ಬರಲು ಅವಕಾಶವಿರುವ ವಾಹನಗಳ ಗರಿಷ್ಠ ಸಂಖ್ಯೆಯನ್ನು ಮೂರಕ್ಕೆ ಸೀಮಿತಗೊಳಿಸಲಾಗಿದೆ ಮತ್ತು ನಾಮಪತ್ರ ಸಲ್ಲಿಸುವ ವೇಳೆಯಲ್ಲಿ ರಿಟರ್ನಿಂಗ್ ಅಧಿಕಾರಿಗಳ/ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಕಚೇರಿಯನ್ನು ಪ್ರವೇಶಿಸುವುದಕ್ಕೆ ಅವಕಾಶವಿರುವ ವ್ಯಕ್ತಿಗಳ ಗರಿಷ್ಠ ಸಂಖ್ಯೆಯನ್ನು (ಅಭ್ಯರ್ಥಿಯೂ ಒಳಗೊಂಡಂತೆ) ಐದಕ್ಕೆ ಸೀಮಿತಗೊಳಿಸಲಾಗಿದೆ. ಅಭ್ಯರ್ಥಿಗಳು ಯಾವುದೇ ರೀತಿಯಲ್ಲಿ ಈ ಸೂಚನೆಗಳನ್ನು ಉಲ್ಲಂಘಿಸದಂತೆ ನೋಡಿಕೊಳ್ಳಬೇಕು.

3.15.2. ಇಬ್ಬರು ಚುನಾವಣಾಧಿಕಾರಿಗಳ ಕೇಂದ್ರ ಕಚೇರಿ ಒಂದೇ ಕಟ್ಟದಲ್ಲಿರುವಾಗ ಅಭ್ಯರ್ಥಿಗಳ ಜೊತೆಗೆ ಬರುವ ವಾಹನಗಳ ಹಾಗೂ ವ್ಯಕ್ತಿಗಳ ಸಂಖ್ಯೆಯನ್ನು ಕುರಿತ ಸೂಚನೆಗಳಿಗೆ ಕಟ್ಟುನಿಟ್ಟಾಗಿ ಬದ್ಧರಾಗಿರುವುದನ್ನು ಖಚಿತಪಡಿಸಲು ಎರಡಕ್ಕಿಂತ ಹೆಚ್ಚಿಗಿರದ ಚುನಾವಣಾ ಕ್ಷೇತ್ರಗಳಿಗೆ ನೋಡಲ್ ಅಧಿಕಾರಿಯಾಗಿ ಪೊಲೀಸ್ ಉಪ–ಅಧಿಕ್ಷಕರ ದರ್ಜೆಗಿಂತ ಕಡಿಮೆ ಇರದ ಪೊಲೀಸ್ ಸಿಬ್ಬಂದಿಯನ್ನು ಸಾಕಷ್ಟು ಸಹಾಯಕ ಸಿಬ್ಬಂದಿಯೊಂದಿಗೆ ನೇಮಿಸಬೇಕು. ರಿಟರ್ನಿಂಗ್ ಅಧಿಕಾರಿಯವರ ಕಚೇರಿಗಳು ಬೇರೆ ಬೇರೆ ಕಾಂಪೌಂಡ್‌ನಲ್ಲಿದ್ದರೆ ಅಥವಾ ಎರಡಕ್ಕಿಂತ ಹೆಚ್ಚಿನ

ರಿಟರ್ನಿಂಗ್ ಅಧಿಕಾರಿಗಳ ಕೇಂದ್ರ ಕಚೇರಿಗಳು ಒಂದೇ ಕಟ್ಟಡದಲ್ಲಿದ್ದರೆ ಪೊಲೀಸ್ ಆಯುಕ್ತರು ಅಥವಾ ಪೊಲೀಸ್ ಅಧಿಕ್ಷಕರು ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಕ್ಕೆ ಸೂಕ್ತ ಏರ್ಪಾಡುಗಳನ್ನು ಮಾಡುವುದು.

## 3.16. ನಿಮ್ಮ ನಾಮಪತ್ರಕ್ಕೆ ಯಾರು ಸಹಿ ಮಾಡಿರಬೇಕು

3.16.1. ಅಭ್ಯರ್ಥಿಯು ನಾಮಪತ್ರದ ನಮೂನೆಯ ಕಡೆ ದೃಷ್ಟಿಹರಿಸಿದರೆ, ಅದರಲ್ಲಿ ನಿಮ್ಮ ಸೂಚಕನ(ರ) ಸಹಿ ಮತ್ತು ನಿಮ್ಮ ಸ್ವಂತ ಸಹಿ ಮಾಡಬೇಕಾಗಿರುವುದು ಕಂಡುಬರುತ್ತದೆ. ನಿಮ್ಮ ಸೂಚಕನ(ರ) ಸಹಿ ಮತ್ತು ನಿಮ್ಮ ಸ್ವಂತ ಸಹಿಯು ನಾಮಪತ್ರದ ನಮೂನೆಯಲ್ಲಿ ಅಂಥ ಸಹಿಗಾಗಿ ತೋರಿಸಿದ ಸೂಕ್ತ ಸ್ಥಳಗಳಲ್ಲಿಯೇ ಇರಬೇಕು. ನೀವು ಸೂಚಕರ ಸಹಿಗಾಗಿ ತೋರಿಸಿದ ಸ್ಥಳದಲ್ಲಿ ನಿಮ್ಮ ಸಹಿಯನ್ನು ಹಾಕದಂತೆ ಮತ್ತು ನಿಮ್ಮ ಸಹಿಗಾಗಿ ತೋರಿಸಿದ ಸ್ಥಳದಲ್ಲಿ ಸೂಚಕರ ಸಹಿ ಹಾಕದಂತೆ ಎಚ್ಚರಿಕೆ ವಹಿಸಿ. ನಾಮಪತ್ರವು ಬಹಳ ಮುಖ್ಯವಾದ ದಸ್ತಾವೇಜಾಗಿದ್ದು, ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಕರಾರುವಕ್ಕಾಗಿ ಭರ್ತಿ ಮಾಡಲು ಸೂಕ್ಷ್ಮ ಕಾಳಜಿ ವಹಿಸಬೇಕೆಂಬುದನ್ನು ಸದಾ ನೆನಪಿನಲ್ಲಿಡಿ. ಸೂಚಕರು ಒಬ್ಬನೇ ಅಭ್ಯರ್ಥಿಯ ಅಥವಾ ಬೇರೆ ಬೇರೆ ಅಭ್ಯರ್ಥಿಗಳ ಒಂದಕ್ಕಿಂತ ಹೆಚ್ಚು ನಾಮಪತ್ರಗಳಿಗೆ ಸಹಿ ಮಾಡಬಹುದು.

## 3.17. ಸೂಚಕರ ಸಂಖ್ಯೆ

3.17.1. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ತಿದ್ದುಪಡಿಗೊಂಡ 33ನೇ ಪ್ರಕರಣದ ಅಡಿಯಲ್ಲಿ, ಲೋಕಸಭೆ ಅಥವಾ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿನ ಅಭ್ಯರ್ಥಿಯ ನಾಮಪತ್ರಕ್ಕೆ:–

i. ಅಭ್ಯರ್ಥಿಯು ಮಾನ್ಯತೆ ಪಡೆದಿರುವ ರಾಷ್ಟ್ರೀಯ ಪಕ್ಷದಿಂದ ಅಥವಾ ಒಂದು ರಾಜ್ಯ ಪಕ್ಷವಾಗಿ ಮಾನ್ಯತೆ ಪಡೆದಿರುವ ರಾಜ್ಯ ಅಥವಾ ರಾಜ್ಯಗಳಲ್ಲಿನ ಮಾನ್ಯತೆ ಪಡೆದ ರಾಜ್ಯ ಪಕ್ಷದಿಂದ ಚುನಾವಣೆಗೆ ನಿಂತಿದ್ದರೆ, ಸೂಚಕನಾಗಿ ಆ ಕ್ಷೇತ್ರದ ಒಬ್ಬ ಮತದಾರನು (2ಎ ಮತ್ತು 2ಬಿ ನಮೂನೆಗಳ ಭಾಗ– I ಅನ್ನು ನೋಡಿ) ಸಹಿ ಮಾಡುವ ಅಗತ್ಯವಿರತಕ್ಕದ್ದು.

ii. ಅಭ್ಯರ್ಥಿಯು ನೋಂದಣಿಯಾಗಿದ್ದು ಮಾನ್ಯತೆ ಪಡೆಯದ ಪಕ್ಷದಿಂದ ಚುನಾವಣೆಗೆ ನಿಂತಿದ್ದರೆ ಅಥವಾ ಆತನು ಒಬ್ಬ ಸ್ವತಂತ್ರ ಅಭ್ಯರ್ಥಿಯಾಗಿದ್ದರೆ, ಸೂಚಕರಾಗಿ ಕ್ಷೇತ್ರದ ಹತ್ತು (10) ಮಂದಿ ಮತದಾರರು (2ಎ ಮತ್ತು 2ಬಿ ನಮೂನೆಗಳ ಭಾಗ– II ಅನ್ನು ನೋಡಿ) ಸಹಿ ಮಾಡುವ ಅಗತ್ಯವಿರತಕ್ಕದ್ದು.

3.17.2. ಒಂದು ರಾಜ್ಯದಲ್ಲಿ ಮಾನ್ಯತೆ ಪಡೆದ ರಾಜ್ಯ ಪಕ್ಷವು ಮಾನ್ಯತೆ ಪಡೆಯದ ಇನ್ನೊಂದು ರಾಜ್ಯದಲ್ಲಿ ಅಂತಹ ಇತರೆ ರಾಜ್ಯದಲ್ಲಿ ಆ ಪಕ್ಷವು ನಿಲ್ಲಿಸಿರುವ ಅಭ್ಯರ್ಥಿಯ(ಗಳ) ನಾಮಪತ್ರಕ್ಕೂ ಸಹ ಸೂಚಕರಾಗಿ ಕ್ಷೇತ್ರದ ಹತ್ತು (10) ಮತದಾರರು ಸಹಿ ಮಾಡುವ ಅಗತ್ಯವಿರುತ್ತದೆ.

## 3.18. ನಿಮ್ಮ ಸೂಚಕರು ಕ್ಷೇತ್ರದ ಮತದಾರರಾಗಿರಲೇಬೇಕು.

3.18.1. ಅಭ್ಯರ್ಥಿಯು ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿದ್ದರೆ, ದೇಶದ ಯಾವುದೇ ಸಂಸತ್ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇರಬೇಕು. ಆತನು/ಆಕೆಯು ಸ್ಪರ್ಧಿಸುತ್ತಿರುವ ಲೋಕಸಭಾ ಮತಕ್ಷೇತ್ರದ ಮತದಾರನಾಗಿರಲೇಬೇಕಾದ ಅಗತ್ಯವಿಲ್ಲ. ಅದೇ ರೀತಿ, ಆನತು/ಆಕೆಯು ರಾಜ್ಯ ವಿಧಾನಸಭಾ ಚುನಾವಣಾ ಅಭ್ಯರ್ಥಿಯಾಗಲು ಬಯಸಿದ್ದರೆ, ಅವರು ರಾಜ್ಯದೊಳಗಿನ ಯಾವುದೇ ವಿಧಾನಸಭಾ ಕ್ಷೇತ್ರದ ಮತದಾರನಾಗಿರಬೇಕು ಮತ್ತು ಆತನು/ಆಕೆಯು ಅಭ್ಯರ್ಥಿಯಾಗಲು ಬಯಸುವ ವಿಧಾನಸಭಾ ಕ್ಷೇತ್ರದ ಮತದಾರರಾಗಿರಲೇಬೇಕಾದ ಅಗತ್ಯವೇನೂ ಇಲ್ಲ (ಆದರೆ ಈ ಸಾಮಾನ್ಯ ನಿಯಮವು ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳಲ್ಲಿ, ಸಿಕ್ಕಿಂ ರಾಜ್ಯದಲ್ಲಿ ಮತ್ತು ಲಕ್ಷದ್ವೀಪ ಕೇಂದ್ರಾಡಳಿತ ಪ್ರದೇಶದಲ್ಲಿ ಕಾಯ್ದಿರಿಸಿದ ಕೆಲವು ಸೀಟುಗಳ ಸಂದರ್ಭದಲ್ಲಿ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 4, 5 ಮತ್ತು 5(ಎ) ಪ್ರಕರಣಗಳಲ್ಲಿ ತಿಳಿಸಿದ ಕೆಲವು ಅಪವಾದಗಳಿಗೆ ಒಳಪಟ್ಟಿರುತ್ತದೆ. ಈ ಉಪಬಂಧಗಳನ್ನು ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಯಾವುದೇ ಅಂಥ ಕ್ಷೇತ್ರದಿಂದ ನೀವು ಅಭ್ಯರ್ಥಿಯಾಗಿದ್ದರೆ, ನೀವು ಆ ಹೆಚ್ಚುವರಿ ಅಗತ್ಯತೆಗಳನ್ನು ಪೂರೈಸಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳುವ ಬಗ್ಗೆ ಎಚ್ಚರಿಕೆ ವಹಿಸಿ). ಆದರೆ ನಿಮ್ಮ ಸೂಚಕನ(ರ) ವಿಷಯದಲ್ಲಿ ಹೀಗಿರುವುದಿಲ್ಲ. ತಮ್ಮ ಸೂಚಕ(ನು/ರು) ನೀವು ಚುನಾಯಿತರಾಗಲು ಬಯಸುವ ಲೋಕಸಭಾ ಕ್ಷೇತ್ರದ ಅಥವಾ ವಿಧಾನಸಭಾ ಕ್ಷೇತ್ರದ ಮತದಾರನಾ(ರಾ)ಗಿರಲೇಬೇಕು. ತಾವು ಚುನಾಯಿತರಾಗಲು ಬಯಸುತ್ತಿರುವ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಸೂಚಕನ(ರ) ಹೆಸರು ನೋಂದಾಯಿತವಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ. ಆತನ ಹೆಸರು ಅದರಲ್ಲಿಲ್ಲದಿದ್ದರೆ, ಆಗ, ಮತದಾರರ ಪಟ್ಟಿಯಲ್ಲಿ ಹೆಸರಿರುವ ಮತ್ತೊಬ್ಬ ವ್ಯಕ್ತಿಯು ತಮ್ಮ ಸೂಚಕನಾಗಬೇಕು ಮತ್ತು ತಮ್ಮ ನಾಮಪತ್ರಕ್ಕೆ ಸೂಚಕನಾಗಿ ಸಹಿ ಮಾಡಬೇಕು. ತಾವು ಚುನಾಯಿತರಾಗಲು ಬಯಸುವ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ವ್ಯಕ್ತಿಯು ತಮ್ಮ ಸೂಚಕನಾಗಬೇಕೆಂದು ತಾವು ಬಯಸಿದರೆ, ನಾಮಪತ್ರವನ್ನು ಸಲ್ಲಿಸುವ ಮುಂಚೆ, ಆ ಹಂತದಲ್ಲಿ ಸಾಧ್ಯವಿದ್ದರೆ, ಆತನ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು ಕ್ರಮ ಕೈಗೊಳ್ಳಬೇಕು. ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ಸೇರ್ಪಡೆಗೊಳಿಸುವ ಬಗ್ಗೆ ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಮುಖ್ಯವಾಗಿ,

ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ತರುವಾಯ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡೆಗೊಳಿಸುವುದಕ್ಕೆ ನಿರ್ದೇಶಿಸುವಂತಿಲ್ಲ ಎಂಬುದನ್ನು ತಾವು ಗಮನಿಸಬೇಕು.

3.18.2. ಆದ್ದರಿಂದ, ತಮ್ಮ ಸೂಚಕನಾ(ರಾ)ಗಬಹುದಾದ ಮತದಾರರ ಎಲ್ಲ ವಿವರಗಳು ಕ್ರಮಬದ್ಧವಾಗಿದೆಯೇ ಮತ್ತು ಭಾವಚಿತ್ರವುಳ್ಳ ಮತದಾರರ ಪಟ್ಟಿಯಲ್ಲಿ ಆ ಮತದಾರರ ಭಾವಚಿತ್ರವು ವ್ಯತ್ಯಾಸವಾಗಿಲ್ಲವೇ ಎಂಬುದನ್ನು ಪರಿಶೀಲಿಸುವುದಕ್ಕೆ ತಾವು ಸ್ಪರ್ಧಿಸಲು ಉದ್ದೇಶಿಸಿರುವ ಕ್ಷೇತ್ರದ ಮತದಾರರ ಪಟ್ಟಿಯ ಪ್ರತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುವಂತೆ ಅಭ್ಯರ್ಥಿಗೆ ಸೂಚಿಸಲಾಗಿದೆ.

## 3.19. ನೀವು ಅಥವಾ ನಿಮ್ಮ ಸೂಚಕರು ತಮ್ಮ ಸಹಿ ಮಾಡಲು ಸಾಧ್ಯವಿಲ್ಲದಿದ್ದರೆ ತಾವು ಏನು ಮಾಡಬೇಕು.

3.19.1. ಕಾನೂನಿನ ಅಡಿಯಲ್ಲಿ (ನೋಡಿ: ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 2(2)ನೇ ನಿಯಮ) ಅಭ್ಯರ್ಥಿ ಅಥವಾ ಆತನ/ಆಕೆಯ ಸೂಚಕರು ಸಹಿ ಮಾಡಲು ಸಾಧ್ಯವಿಲ್ಲದಿದ್ದರೆ, ಆಗ ನೀವು ಮತ್ತು ನಿಮ್ಮ ಸೂಚಕರು ರಿಟರ್ನಿಂಗ್ ಅಧಿಕಾರಿಯ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಅಥವಾ ಈ ಬಗ್ಗೆ ಚುನಾವಣಾ ಆಯೋಗವು ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯ ಸಮ್ಮುಖದಲ್ಲಿ ನಾಮಪತ್ರದಲ್ಲಿ ಒಂದು ಗುರುತು ಅಥವಾ ಹೆಬ್ಬೆಟ್ಟು ಗುರುತು ಹಾಕಿದರೆ ಮತ್ತು ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಅಥವಾ ಅಂಥ ಇತರ ಅಧಿಕಾರಿಯು ನಿಮ್ಮ ಸೂಚಕರ ಗುರುತಿನ ಬಗ್ಗೆ ಅಥವಾ ನಿಮ್ಮ ಗುರುತಿನ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಆ ಗುರುತು/ ಹೆಬ್ಬೆಟ್ಟು ಗುರುತು ನಿಮ್ಮದು ಅಥವಾ ನಿಮ್ಮ ಸೂಚಕರದು ಎಂದು ದೃಢೀಕರಿಸಿದರೆ, ಅದನ್ನು ನಾಮಪತ್ರದಲ್ಲಿ ಸಹಿ ಹಾಕಲಾದದ್ದೆಂದು ಭಾವಿಸತಕ್ಕದ್ದು. ಅಂತಹ ಪ್ರಕರಣಗಳಲ್ಲಿ ಗುರುತು/ ಹೆಬ್ಬೆಟ್ಟು ಗುರುತು ಆರ್‌ಓ ಅಥವಾ ಎಆರ್‌ಓ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯ ಸಮ್ಮುಖದಲ್ಲಿ ಹಾಕಬೇಕೆಂಬುದನ್ನು ಗಮನಿಸಬೇಕು. ಆನಂತರ ಅವರು ಅದನ್ನು ದೃಢೀಕರಿಸಬೇಕು.

## 3.20. ನಾಮಪತ್ರದಲ್ಲಿ ಅಭ್ಯರ್ಥಿಗಳು ಮಾಡಬೇಕಾದ ಘೋಷಣೆಗಳು

3.20.1. ಸೂಚಕರು ಸಲ್ಲಿಸುವ ನಾಮಪತ್ರಕ್ಕೆ ಒಪ್ಪಿಗೆ ಸೂಚಿಸುವಾಗ ಅಭ್ಯರ್ಥಿಯು ನಾಮಪತ್ರದಲ್ಲಿಯೇ ಘೋಷಣೆ ಮಾಡುವುದು ಅಗತ್ಯವಾಗಿರುತ್ತದೆ.

(ಎ) ಮೊದಲನೆಯದಾಗಿ, ಅಭ್ಯರ್ಥಿಯ ವಯಸ್ಸಿಗೆ ಸಂಬಂಧಿಸಿದಂತೆ, ಈಗಾಗಲೇ ಪ್ರಸ್ತಾಪಿಸಲಾದಂತೆ ಲೋಕಸಭಾ ಅಥವಾ ರಾಜ್ಯ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಯಾಗಲು ಬಯಸುವ ವ್ಯಕ್ತಿಗೆ

ಇಪ್ಪತ್ತೈದಕ್ಕಿಂತ ಕಡಿಮೆ ವಯಸ್ಸು ಆಗಿರಬಾರದು. ಅಭ್ಯರ್ಥಿಯು ನಾಮಪತ್ರದಲ್ಲಿ ತಮ್ಮ ಸರಿಯಾದ ವಯಸ್ಸನ್ನು ನಮೂದಿಸಬೇಕು. ಮತದಾರರ ಪಟ್ಟಿಯಲ್ಲಿ ತಮ್ಮ ವಯಸ್ಸು ಸರಿಯಾಗಿಲ್ಲವೆಂದು ತಮಗೆ ಕಂಡುಬಂದರೆ, ತಾವು ನಾಮತ್ರದಲ್ಲಿ ತಮ್ಮ ಪ್ರಸಕ್ತ ವಯಸ್ಸನ್ನು ನಮೂದಿಸಬೇಕೇ ಹೊರತು ಮತದಾರರ ಪಟ್ಟಿಯಲ್ಲಿ ಕಂಡುಬರುವ ತಪ್ಪು ವಯಸ್ಸನ್ನಲ್ಲ;

**ಸೂಚನೆ:**ಅಭ್ಯರ್ಥಿಯ ವಯಸ್ಸು ಕಾನೂನಿನ ಮೇರೆಗೆ ಇರುವ ಕನಿಷ್ಠ ವಯಸ್ಸಿಗೆ ಹತ್ತಿರವಾದುದಾಗಿದ್ದರೆ, ಎಂದರೆ ತಮಗೆ ಇಪ್ಪತ್ತೈದು ವರ್ಷವಷ್ಟೇ ವಯಸ್ಸಾಗಿದ್ದರೆ ಅಥವಾ ಅದಕ್ಕಿಂತ ಸ್ವಲ್ಪ ಮಾತ್ರ ಹೆಚ್ಚಾಗಿದ್ದರೆ ಅಥವಾ ಎದುರಾಳಿ ಅಭ್ಯರ್ಥಿಯು ತಮ್ಮ ವಯಸ್ಸಿನ ಬಗ್ಗೆ ಆಕ್ಷೇಪಣೆ ಎತ್ತಬಹುದು ಎಂಬ ಸಂದೇಹವಿದ್ದರೆ, ತಮ್ಮ ವಯಸ್ಸಿನ ಸೂಕ್ತ ರುಜುವಾತಿನೊಂದಿಗೆ ಸ್ವತಃ ತಮ್ಮ ವಯಸ್ಸನ್ನು ದೃಢೀಕರಿಸತಕ್ಕದ್ದು.

(ಬಿ) ಎರಡನೆಯದಾಗಿ, ಅಭ್ಯರ್ಥಿಯ ರಾಜಕೀಯ ಪಕ್ಷಕ್ಕೆ ಸಂಬಂಧಿಸಿದಂತೆ, ಅಭ್ಯರ್ಥಿಯು ಯಾವುದೇ ರಾಜಕೀಯ ಪಕ್ಷದ ವತಿಯಿಂದ ಅಭ್ಯರ್ಥಿಯಾಗಿರುವ ಸಂದರ್ಭದಲ್ಲಿ, ಆ ಬಗ್ಗೆ ಘೋಷಿಸಬೇಕು.

**ವಿ.ಸೂ.** ನೀವು ರಾಜಕೀಯ ಪಕ್ಷದಿಂದ ಅಭ್ಯರ್ಥಿಯಾಗಿರುವ ಬಗ್ಗೆ ಘೋಷಣೆಯನ್ನು ನೀವು ಸ್ವತಂತ್ರ ಅಭ್ಯರ್ಥಿಯಾಗಿರುವ ಸಂದರ್ಭದಲ್ಲಿ ಮಾಡಬೇಕಾಗಿಲ್ಲ.

(ಸಿ) ಮೂರನೆಯದಾಗಿ, ಆದ್ಯತೆಯ ಕ್ರಮಾನುಸಾರ ಮೂರು ಚಿಹ್ನೆಗಳ ಆಯ್ಕೆಗೆ ಅವಕಾಶವಿರುತ್ತದೆ.

(ಡಿ) ನಾಲ್ಕನೆಯದಾಗಿ, ನಾಮಪತ್ರದಲ್ಲಿ ನೀಡಿರುವಂತೆ ನಿಮ್ಮ ಹೆಸರು ಮತ್ತು ನಿಮ್ಮ ತಂದೆ/ತಾಯಿ/ಪತಿಯ ಹೆಸರಿನ ಕಾಗುಣಿತ ಸರಿಯಾಗಿರುವ ಬಗ್ಗೆ ಘೋಷಿಸಬೇಕು;

(ಇ) ಐದನೆಯದಾಗಿ, ಅಭ್ಯರ್ಥಿಯು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಸ್ಥಾನವನ್ನು ಭರ್ತಿ ಮಾಡಲು ಆಯ್ಕೆಯಾಗುವುದಕ್ಕೆ ಅರ್ಹರಾಗಿದ್ದೀರಿ ಮತ್ತು ಅನರ್ಹತೆಯನ್ನೂ ಸಹ ಹೊಂದಿಲ್ಲ ಎಂಬ ಸಂಗತಿಯ ಬಗ್ಗೆ ಘೋಷಣೆಯನ್ನು ಮಾಡಬೇಕು, ಮತ್ತು

(ಎಫ್) ಆರನೆಯದಾಗಿ, ಲೋಕಸಭೆಗೆ ಅಥವಾ ಸಂದರ್ಭಾನುಸಾರ, ರಾಜ್ಯದ ವಿಧಾನಸಭೆಗೆ ಏಕಕಾಲದಲ್ಲಿ ನಡೆಯುವ ಪ್ರಸ್ತುತ ಸಾರ್ವತ್ರಿಕ ಚುನಾವಣೆ/ ಉಪ–ಚುನಾವಣೆಗಳಲ್ಲಿ ಎರಡಕ್ಕಿಂತ ಹೆಚ್ಚು ಲೋಕಸಭಾ/ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಯಾಗಿ ಉಮೇದುವಾರಿಕೆ ಸಲ್ಲಿಸಿಲ್ಲ ಮತ್ತು ಸಲ್ಲಿಸುವುದಿಲ್ಲ ಎಂಬ ಸಂಗತಿಯ ಬಗ್ಗೆ ಘೋಷಿಸಬೇಕು.

3.20.2. ಮೇಲೆ ತಿಳಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಘೋಷಣೆ ಮಾಡುವ ಜೊತೆಗೆ, ಅಭ್ಯರ್ಥಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಕ್ಷೇತ್ರದಿಂದ ಚುನಾವಣಾ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ, ನಾಮಪತ್ರದಲ್ಲಿ ಮತ್ತೊಂದು ಘೋಷಣೆಯನ್ನು ಮಾಡಬೇಕಾಗುತ್ತದೆ. ಅಭ್ಯರ್ಥಿಯು

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರೆ, ಆತನು/ಆಕೆಯು ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದರೂ ಕೂಡ ಸಾಮಾನ್ಯ ಕ್ಷೇತ್ರದಲ್ಲಿಯೂ ಸಹ ಭದ್ರತಾ ಠೇವಣಿಯಲ್ಲಿ ನಿಮಗೆ ರಿಯಾಯಿತಿ ಮೊತ್ತದ ಹಕ್ಕು ದೊರೆಯುವುದರಿಂದ ಆತನ/ಆಕೆಯು ತಮ್ಮ ವರ್ಗದ ಬಗ್ಗೆ ಘೋಷಣೆ ಮಾಡಬೇಕು. ಘೋಷಣೆ ಮಾಡುವಲ್ಲಿ ಸಾಧ್ಯವಾದಷ್ಟು ಕರಾರುವಕ್ಕಾದ ವಿವರಗಳನ್ನು ನೀಡುವ ಬಗ್ಗೆ ಎಚ್ಚರಿಕೆ ವಹಿಸಬೇಕು. ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದೀರಿ ಎಂಬ ಸಂಗತಿಯ ರುಜುವಾತಾಗಿ ಯಾವುದೇ ಪ್ರಮಾಣ ಪತ್ರದ ಪ್ರತಿ ಅಥವಾ ಸಮುಚಿತ ದಸ್ತಾವೇಜನ್ನು ನಾಮಪತ್ರದ ಜೊತೆ ಸಲ್ಲಿಸಬಹುದು. ರಿಟರ್ನಿಂಗ್ ಅಧಿಕಾರಿಯು ಅಂತಹ ರುಜುವಾತನ್ನು ಕೋರಬಹುದು.

## 3.21. ಅಭ್ಯರ್ಥಿಯು ಸರ್ಕಾರದ ಅಡಿಯಲ್ಲಿ ಹೊಂದಿರುವ ಪದದಿಂದ ವಜಾಗೊಂಡ ಐದು ವರ್ಷಗಳೊಳಗೆ ಸ್ಪರ್ಧಿಸಬೇಕಾದರೆ ಏನು ಮಾಡಬೇಕು.

3.21.1. ಅಭ್ಯರ್ಥಿಯು, ಭಾರತ ಸರ್ಕಾರದ ಅಡಿಯಲ್ಲಿ ಅಥವಾ ರಾಜ್ಯ ಸರ್ಕಾರದ ಅಡಿಯಲ್ಲಿ ಯಾವುದೇ ಪದವನ್ನು ಹೊಂದಿದ್ದು, ವಜಾಗೊಂಡಿದ್ದರೆ ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 9ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಅನರ್ಹತೆಯ ಅವಧಿಯು ಎಂದರೆ, ವಜಾಗೊಂಡಂದಿನಿಂದ ಐದು ವರ್ಷಗಳ ಅವಧಿಯು ಮುಕ್ತಾಯಗೊಂಡಿರದಿದ್ದರೆ, ಆಗ ಅಭ್ಯರ್ಥಿಯನ್ನು ಭ್ರಷ್ಟಾಚಾರಕ್ಕಾಗಿ ಅಥವಾ ಸರ್ಕಾರಕ್ಕೆ ಮಾಡಿದ ವಿಶ್ವಾಸದ್ರೋಹಕ್ಕಾಗಿ ವಜಾಗೊಳಿಸಿಲ್ಲ ಎಂಬ ಮಟ್ಟಿಗೆ ಚುನಾವಣಾ ಆಯೋಗವು ನಿಗದಿತ ರೀತಿಯಲ್ಲಿ ನೀಡಿದ ಪ್ರಮಾಣಪತ್ರವನ್ನು ಸಲ್ಲಿಸಿದ ಹೊರತು, ಅಭ್ಯರ್ಥಿಯಾಗಿ ಸೂಕ್ತ ರೀತಿಯಲ್ಲಿ ನಾಮಪತ್ರ ಸಲ್ಲಿಸಿದ್ದಾರೆಂದು ಭಾವಿಸತಕ್ಕದ್ದಲ್ಲ.

## 3.22. ಅಭ್ಯರ್ಥಿಯು ಬೇರೊಂದು ಕ್ಷೇತ್ರದ ಮತದಾರರಾಗಿದ್ದರೆ, ಮತದಾರರ ಪಟ್ಟಿಯ ಪ್ರತಿಯನ್ನು ಹಾಜರುಪಡಿಸುವಿಕೆ

3.22.1. ಅಭ್ಯರ್ಥಿಯು ಅಭ್ಯರ್ಥಿಯಾಗಿ ನಿಲ್ಲುವ ಕ್ಷೇತ್ರವಲ್ಲದ ಬೇರೆ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಮತದಾರನಾಗಿ ಹೆಸರನ್ನು ನೋಂದಾಯಿಸಿಕೊಂಡಿದ್ದರೆ, ಆಗ ನಾಮಪತ್ರದೊಂದಿಗೆ ಹಿಂದಿನ ಕ್ಷೇತ್ರದ ಸಂಪೂರ್ಣ ಮತದಾರರ ಪಟ್ಟಿಯ ಪ್ರತಿಯನ್ನು ಅಥವಾ ಅದು ಸಾಧ್ಯವಿಲ್ಲದಿದ್ದರೆ, ಆ ಮತದಾರರ ಪಟ್ಟಿಯ ಸಂಬಂಧಪಟ್ಟ ಭಾಗದ ಪ್ರತಿಯನ್ನು (ಸಂಬಂಧಪಟ್ಟ ಭಾಗ ಎಂದರೆ, ಮತದಾರರ ಪಟ್ಟಿಯ ಅವರ ಹೆಸರಿರುವ ಭಾಗ ಎಂದರ್ಥ)ಅಥವಾ ಅದೂ ಕೂಡ ಸಾಧ್ಯವಿಲ್ಲದಿದ್ದರೆ, ಅಂಥ ಪಟ್ಟಿಯಲ್ಲಿ ಅವರ ಹೆಸರಿಗೆ ಸಂಬಂಧಪಟ್ಟ ಸೂಕ್ತ ನಮೂದುಗಳ ಪ್ರಮಾಣೀಕೃತ ಪ್ರತಿಯನ್ನು

ಸಲ್ಲಿಸಲೇಬೇಕು. ಯಾವುದೇ ಕಾರಣಕ್ಕಾಗಿ ಅಭ್ಯರ್ಥಿಯ ನಾಮಪತ್ರದೊಂದಿಗೆ ಈ ಯಾವುದೇ ದಸ್ತಾವೇಜುಗಳನ್ನು ಸಲ್ಲಿಸಲು ಸಾಧ್ಯವಿಲ್ಲದಿದ್ದರೆ, ಆಗ ನಾಮಪತ್ರದ ಪರಿಶೀಲನೆಯ ಸಮಯದಲ್ಲಿ, ಈ ಯಾವುದೇ ದಸ್ತಾವೇಜುಗಳನ್ನು ರಿಟರ್ನಿಂಗ್ ಅಧಿಕಾರಿಯ ಮುಂದೆ ಹಾಜರುಪಡಿಸಲೇ ಬೇಕು; ಇಲ್ಲದಿದ್ದರೆ, ಅಭ್ಯರ್ಥಿಯ ನಾಮಪತ್ರ ತಿರಸ್ಕೃತಗೊಳ್ಳುತ್ತದೆ.

## 3.23. ಒಂದೇ ಮತಕ್ಷೇತ್ರದಿಂದ ಅಭ್ಯರ್ಥಿಯಾಗಿ ನಿಲ್ಲುವುದಕ್ಕೆ ಅಭ್ಯರ್ಥಿಯು ಎಷ್ಟು ನಾಮಪತ್ರಗಳನ್ನು ಸಲ್ಲಿಸಬಹುದು

3.23.1. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 33ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಒಂದೇ ಕ್ಷೇತ್ರದಲ್ಲಿ ಅಭ್ಯರ್ಥಿಯಾಗಿ ನಿಲ್ಲುವುದಕ್ಕೆ ಅಭ್ಯರ್ಥಿ ಅಥವಾ ಆತನ ಪರವಾಗಿ ಗರಿಷ್ಠ ನಾಲ್ಕು ನಾಮಪತ್ರಗಳನ್ನು ಸಲ್ಲಿಸಬಹುದು ಮತ್ತು ಈ ನಾಮಪತ್ರಗಳನ್ನು ಒಟ್ಟಿಗೆ ಅಥವಾ ಪ್ರತ್ಯೇಕವಾಗಿ ಭರ್ತಿ ಮಾಡಬಹುದು.

## 3.24. ಠೇವಣಿಗಳು

3.24.1. ನಿಗದಿಪಡಿಸಿದ ಭದ್ರತಾ ಠೇವಣಿಯನ್ನು ಚುನಾವಣಾ ಅಭ್ಯರ್ಥಿಯು ಇಡಲೇಬೇಕೆಂದು ಕಾನೂನು ಅಗತ್ಯ ಪಡಿಸುತ್ತದೆ. ಭದ್ರತಾ ಠೇವಣಿಯನ್ನು ಇಡಲು ವಿಫಲವಾದರೆ, ಅಭ್ಯರ್ಥಿಯ ನಾಮಪತ್ರವು ಅಸಿಂಧುವಾಗುತ್ತದೆ. ಅಭ್ಯರ್ಥಿಯು ಲೋಕಸಭಾ ಕ್ಷೇತ್ರದ ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲಲು ಬಯಸಿದರೆ, ಠೇವಣಿ ಇಡಬೇಕಾದ ಮೊತ್ತವು ಹತ್ತು ಸಾವಿರ ರೂಪಾಯಿಗಳಾಗಿರುತ್ತದೆ (ರೂ.10,000/–). ಆದರೆ, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ಸದಸ್ಯನಾಗಿರುವ ಅಭ್ಯರ್ಥಿಗೆ ರಿಯಾಯಿತಿಯನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ಸದಸ್ಯನಾಗಿರುವ ವ್ಯಕ್ತಿಯು ಲೋಕಸಭಾ ಕ್ಷೇತ್ರದಿಂದ ಅಭ್ಯರ್ಥಿಯಾಗಿ ನಿಲ್ಲಲು ಬಯಸಿದರೆ, ಆತನು ಐದು ಸಾವಿರ ರೂಪಾಯಿಗಳ (ರೂ.5,000/–) ಠೇವಣಿಯನ್ನು ಇಡಬೇಕಾಗುತ್ತದೆ; ಅಭ್ಯರ್ಥಿಯು ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದರೆ, ಐದು ಸಾವಿರ ರೂಪಾಯಿಗಳ (ರೂ.5,000/–) ಠೇವಣಿಯನ್ನು ಇಡಬೇಕಾಗುತ್ತದೆ ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ಸದಸ್ಯರಾಗಿದ್ದರೆ ನೀವು ಎರಡು ಸಾವಿರದ ಐದು ನೂರು ರೂಪಾಯಿಗಳ (ರೂ.2,500/–) ಠೇವಣಿ ಇಡಬೇಕಾಗುತ್ತದೆ. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಅಭ್ಯರ್ಥಿಯು, ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿಲ್ಲದ ಕ್ಷೇತ್ರಕ್ಕೆ ಎಂದರೆ, ಸಾಮಾನ್ಯ ಕ್ಷೇತ್ರಕ್ಕೆ ಸ್ಪರ್ಧಿಸಿದರೂ ಕೂಡ, ಆ ಅಭ್ಯರ್ಥಿಯು ಕಡಿಮೆ ಮೊತ್ತದ ಠೇವಣಿಯನ್ನು ಮಾತ್ರವೇ ಇಡಬೇಕಾದ ಅಗತ್ಯವಿರುತ್ತದೆ.

3.24.2.ಒಂದೇ ಕ್ಷೇತ್ರದಿಂದ ಅಭ್ಯರ್ಥಿಯು ನಾಲ್ಕು ನಾಮಪತ್ರಗಳನ್ನು ಸಲ್ಲಿಸಬಹುದೆಂದು ಈಗಾಗಲೇ ಪ್ರಸ್ತಾಪಿಸಲಾಗಿದೆ, ಆದರೆ ಅಂಥ ಸಂದರ್ಭದಲ್ಲಿ, ನಾಲ್ಕು ಬೇರೆ ಬೇರೆ ಠೇವಣಿಗಳನ್ನು ಇಡಬೇಕಾಗಿಲ್ಲ. ಮೊದಲ ನಾಮಪತ್ರಕ್ಕೆ ಸಂಬಂಧಿಸಿದಂತೆ ನೀವು ಒಂದೇ ಒಂದು ಠೇವಣಿಯನ್ನು ಇಟ್ಟರೆ ಸಾಕಾಗುತ್ತದೆ. ಇತರ ನಾಮಪತ್ರಗಳ ಸಂಬಂಧದಲ್ಲಿ ಯಾವುದೇ ಠೇವಣಿಯ ಅಗತ್ಯವಿರುವುದಿಲ್ಲ. ಅಭ್ಯರ್ಥಿಯು ಸಲ್ಲಿಸುವ ಮೊದಲ ನಾಮಪತ್ರಕ್ಕೆ ಮಾತ್ರ ಠೇವಣಿಗೆ ಸಂಬಂಧಿಸಿದ ಮೂಲ ಖಜಾನೆ ರಸೀದಿ ಅಥವಾ ಚಲನ್ ಅನ್ನು ಲಗತ್ತಿಸಬೇಕಾಗುತ್ತದೆ. ಅಭ್ಯರ್ಥಿಯು ಸಲ್ಲಿಸಬಹುದಾದ ಮುಂದಿನ ಪ್ರತಿಯೊಂದು ನಾಮಪತ್ರಕ್ಕೆ ಠೇವಣಿಗೆ ಸಂಬಂಧಿಸಿದ ಮೂಲ ರಸೀದಿ ಅಥವಾ ಚಲನ್‌ನ ಯಥಾ ಪ್ರತಿಯನ್ನು ಲಗತ್ತಿಸಬಹುದು. ಅಭ್ಯರ್ಥಿಯ ಮುಂದಿನ ಪರಾಮರ್ಶೆಗೆ ಅಥವಾ ಬಳಕೆಗೆ ಭಾರತದ ರಿಸರ್ವ್ ಬ್ಯಾಂಕ್ ಅಥವಾ ಸರ್ಕಾರಿ ಖಜಾನೆಯು ನೀಡಿದ ಖಜಾನೆ ರಸೀದಿ ಅಥವಾ ಚಲನ್‌ನ ಅಧಿಕೃತ ನಕಲು ಪ್ರತಿಯನ್ನು ಸದಾ ತಮ್ಮೊಂದಿಗೆ ಇಟ್ಟುಕೊಂಡಿರಿ.

3.24.3. ಅಭ್ಯರ್ಥಿಯು ನಿರ್ದಿಷ್ಟವಾಗಿ ಗಮನಿಸಬೇಕಾದದ್ದೆಂದರೆ, ಠೇವಣಿಯನ್ನು ಎರಡು ರೀತಿಗಳಲ್ಲಿ ಇಡಬಹುದಾಗಿದೆ. ನಾಮಪತ್ರವನ್ನು ಸಲ್ಲಿಸುವ ಸಮಯದಲ್ಲಿ ರಿಟರ್ನಿಂಗ್ ಅಧಿಕಾರಿಯ ಬಳಿ ಹಣವನ್ನು ನಗದಾಗಿ ಠೇವಣಿ ಇಡಬಹುದು ಅಥವಾ ಭಾರತದ ರಿಸರ್ವ್ ಬ್ಯಾಂಕ್ ಅಥವಾ ಸರ್ಕಾರದ ಖಜಾನೆಯಲ್ಲಿಯಾದರೂ ಠೇವಣಿ ಇಡಬಹುದು. ಇದನ್ನು ರಿಟರ್ನಿಂಗ್ ಅಧಿಕಾರಿಗೆ ನಾಮಪತ್ರ ಸಲ್ಲಿಸುವುದಕ್ಕೆ ಮುಂಚೆ ಮಾಡಬೇಕು ಮತ್ತು ಈಗಾಗಲೇ ಪ್ರಸ್ತಾಪಿಸಲಾದಂತೆ, ಭಾರತದ ರಿಸರ್ವ್ ಬ್ಯಾಂಕ್‌ನಿಂದ ಅಥವಾ ಸರ್ಕಾರಿ ಖಜಾನೆಯಿಂದ ದ್ವಿಪ್ರತಿಯಲ್ಲಿ ಪಡೆದುಕೊಳ್ಳುವ ಖಜಾನೆ ರಸೀದಿ ಅಥವಾ ಚಲನ್ ಅನ್ನು ನಿಮ್ಮ ನಾಮಪತ್ರಕ್ಕೆ ಲಗತ್ತಿಸಬೇಕು. ನಾಮಪತ್ರವನ್ನು ಸಲ್ಲಿಸುವ ಸಮಯದಲ್ಲಿ, ರಿಟರ್ನಿಂಗ್ ಅಧಿಕಾರಿಯ ಬಳಿ ಹಣವನ್ನು ನಗದು ರೂಪದಲ್ಲಿ ಠೇವಣಿ ಇಡದಿದ್ದರೆ ಅಥವಾ ನಾಮಪತ್ರಕ್ಕೆ ಖಜಾನೆ ರಸೀದಿ ಅಥವಾ ಚಲನ್ ಅನ್ನು ಲಗತ್ತಿಸಿರದಿದ್ದರೆ, ಆಗ ನಾಮಪತ್ರವು ತಿರಸ್ಕೃತವಾಗುತ್ತದೆ.

3.24.4.ಸಂಸತ್ ಚುನಾವಣೆಗೆ ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಠೇವಣಿಯನ್ನು ಇಡಬೇಕು "8443–ಸಿವಿಲ್ ಡೆಪಾಸಿಟ್ಸ್–121–ಡೆಪಾಸಿಟ್ಸ್ ಇನ್ ಕನೆಕ್ಷನ್ ವಿತ್ ಎಲೆಕ್ಷನ್ಸ್–2–ಲೋಕಸಭಾ ಅಭ್ಯರ್ಥಿಗಳು ಇಡುವ ಠೇವಣಿಗಳು"; ರಾಜ್ಯ ವಿಧಾನಮಂಡಲದ ಚುನಾವಣೆಯ ಅಭ್ಯರ್ಥಿಗಳು ಈ ಕೆಳಕಂಡ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಠೇವಣಿಯನ್ನು ಇಡಬೇಕು; "8443–ಸಿವಿಲ್ ಡೆಪಾಸಿಟ್ಸ್–121–ಡೆಪಾಸಿಟ್ಸ್ ಇನ್ ಕನೆಕ್ಷನ್ ವಿತ್ ಎಲೆಕ್ಷನ್ಸ್–1–ರಾಜ್ಯ/

ಕೇಂದ್ರಾಡಳಿತ ಪ್ರದೇಶಗಳ ವಿಧಾನಮಂಡಲಗಳ ಚುನಾವಣಾ ಅಭ್ಯರ್ಥಿಗಳು ಇಡುವ ಠೇವಣಿಗಳು".

### 3.25. ಚುನಾವಣಾ ಚಿಹ್ನೆಗಳು

3.25.1. ನಾಮಪತ್ರದ ನಮೂನೆಯನ್ನು ಗಮನಿಸಿದಾಗ, ಅಭ್ಯರ್ಥಿಯು ಮಾನ್ಯತೆ ಪಡೆದ ರಾಷ್ಟ್ರೀಯ ಅಥವಾ ರಾಜ್ಯ ಪಕ್ಷಗಳ ಮೂಲಕ ಸ್ಪರ್ಧಿಸಿಲ್ಲದಿದ್ದರೆ, ಅವರು ನಿರ್ದಿಷ್ಟಪಡಿಸಿದ ಚಿಹ್ನೆಗಳ ಪಟ್ಟಿಯಿಂದ ಮೂರು ಚಿಹ್ನೆಗಳನ್ನು ಆದ್ಯತಾ ಕ್ರಮವಾಗಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಚುನಾವಣೆಗಳನ್ನು ನಡೆಸುವ ನಿಯಮಗಳು, 1961 ಇದು ಲೋಕಸಭಾ ಅಥವಾ ವಿಧಾನಸಭಾ ಕ್ಷೇತ್ರಗಳ ಚುನಾವಣೆಗಳಲ್ಲಿ ಅಭ್ಯರ್ಥಿಗಳು ಆಯ್ಕೆ ಮಾಡಬಹುದಾದ ಚಿಹ್ನೆಗಳು ಮತ್ತು ಅವರ ಆಯ್ಕೆಯು ಯಾವ ನಿರ್ಬಂಧಗಳಿಗೆ ಒಳಪಟ್ಟಿರಬೇಕು ಎಂಬುದನ್ನು ಚುನಾವಣಾ ಆಯೋಗವು ಭಾರತ ರಾಜಪತ್ರದಲ್ಲಿ ಮತ್ತು ಪ್ರತಿಯೊಂದು ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿರ್ದಿಷ್ಟಪಡಿಸುವಂತೆ ಅಗತ್ಯಪಡಿಸಿದೆ.

3.25.2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ನಾಮಪತ್ರಗಳನ್ನು ಸಲ್ಲಿಸಿದರೆ, ರಿಟರ್ನಿಂಗ್ ಅಧಿಕಾರಿಯು ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಗಳನ್ನು ಹಂಚಿಕೆ ಮಾಡುವ ಸಮಯದಲ್ಲಿ ಮೊದಲು ಸಲ್ಲಿಸಿದ ನಾಮಪತ್ರದಲ್ಲಿ ಚಿಹ್ನೆಗಳ ಕುರಿತಾಗಿ ಮಾಡಿದ ಘೋಷಣೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೇ ಹೊರತು ಚಿಹ್ನೆಗಳ ಬಗ್ಗೆ ಇತರ ಘೋಷಣೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ. ರಿಟರ್ನಿಂಗ್ ಅಧಿಕಾರಿಯು ಮೊದಲು ಸಲ್ಲಿಸಿದ ನಾಮಪತ್ರಗಳನ್ನು ತಿರಸ್ಕರಿಸಿ ಎರಡು ಅಥವಾ ಮೂರು ಅಥವಾ ನಾಲ್ಕನೆಯ ನಾಮಪತ್ರವನ್ನು ಒಪ್ಪಿಕೊಂಡರೂ ಕೂಡ ಅಭ್ಯರ್ಥಿಯ ಮೊದಲನೆಯ ನಾಮಪತ್ರದಲ್ಲಿ ಅವರು ಮಾಡಿದ ಚಿಹ್ನೆಗಳ ಆಯ್ಕೆಯನ್ನೇ ಚಿಹ್ನೆಗಳ ಹಂಚಿಕೆ ಮಾಡುವ ಸಮಯದಲ್ಲಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದೆಂದು ಸಹ ಈ ನಿಯಮಗಳು ಅಗತ್ಯಪಡಿಸುತ್ತವೆ.

3.25.3. ಅಲ್ಲದೆ, ಉಮೇದುವಾರಿಕೆಗಳನ್ನು ಹಿಂತೆಗದುಕೊಳ್ಳುವ ಅವಧಿ ಮುಗಿದ ನಂತರ ಮತ್ತು ನಾಮಪತ್ರಗಳು ಸಿಂಧುವೆಂದು ಕಂಡುಬಂದ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಾಕಣದಲ್ಲಿ ಇದ್ದರೆ, ಆಗ ರಿಟರ್ನಿಂಗ್ ಅಧಿಕಾರಿಯು ಹಿಂತೆಗೆದುಕೊಳ್ಳುವ ಅವಧಿ ಮುಕ್ತಾಯವಾದ ಕೂಡಲೇ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಚುನಾವಣಾ ಆಯೋಗವು ಹೊರಡಿಸಿದ ಯಾವುದೇ ನಿರ್ದೇಶನಕ್ಕೊಳಪಟ್ಟು, ಕಾರ್ಯ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮೊದಲು ಸಲ್ಲಿಸಲಾದ ನಾಮಪತ್ರದಲ್ಲಿ ತೋರಿಸಲಾದಂಥ ಆತನ ಆಯ್ಕೆಗೆ ಸಂವಾದಿಯಾಗಿ

ಪ್ರತಿಯೊಬ್ಬ ಸ್ಪರ್ಧಿಸುವ ಅಭ್ಯರ್ಥಿಗೂ ವಿಭಿನ್ನ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದೆಂದು ಈ ನಿಯಮಗಳು ಅಗತ್ಯಪಡಿಸುತ್ತವೆ.

3.25.4. ಈ ನಿಯಮಗಳಿಗೆ ಅನುಗುಣವಾಗಿ, ಚುನಾವಣಾ ಆಯೋಗವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಚುನಾವಣೆಗಳಲ್ಲಿ ಚಿಹ್ನೆಗಳ ವಿವರಣೆ, ಕಾಯ್ದಿರಿಸುವಿಕೆ, ಆಯ್ಕೆ ಮತ್ತು ಹಂಚಿಕೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಮನ್ನಣೆಗಾಗಿ ಮತ್ತು ಅದರೊಂದಿಗೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಆದೇಶವನ್ನು 1968ರ ಆಗಸ್ಟ್ 31ರಂದು ಹೊರಡಿಸಿತ್ತು. ಈ ಆದೇಶವನ್ನು ಚುನಾವಣಾ ಚಿಹ್ನೆಗಳ (ಕಾಯ್ದಿರಿಸುವಿಕೆ ಮತ್ತು ಹಂಚಿಕೆ) ಆದೇಶ, 1968 ಎಂದು ಕರೆಯಲಾಗುವುದು.

3.25.5. ಈ ಆದೇಶವು ಪಕ್ಷಗಳನ್ನು ರಾಷ್ಟ್ರೀಯ ಮತ್ತು ರಾಜ್ಯ ಪಕ್ಷಗಳೆಂದು ಪಕ್ಷಗಳನ್ನು ಮಾನ್ಯತೆ ನೀಡುವ ಉಪಬಂಧಗಳನ್ನು ಸಹ ಮಾಡುತ್ತದೆ. ಈ ಆದೇಶದ 17ನೇ ಕಂಡಿಕೆಯ ಮೇರೆಗೆ, ಆಯೋಗವು ನಿಯತವಾಗಿ ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ಪಕ್ಷಗಳ ಹೆಸರು, ಅವುಗಳಿಗೆ ಅನುಕ್ರಮವಾಗಿ ಮೀಸಲಿರಿಸಿದ ಚಿಹ್ನೆಗಳ ಪಟ್ಟಿ, ನೋಂದಾಯಿಸಲಾದ ಮಾನ್ಯತೆ ಪಡೆಯದ ಪಕ್ಷಗಳ ಪಟ್ಟಿ, ಮುಕ್ತ ಚಿಹ್ನೆಗಳ ಪಟ್ಟಿಯನ್ನು ಅಧಿಸೂಚನೆಗಳ ಮೂಲಕ ಸೂಚಿಸುತ್ತದೆ. ಯಾರೇ ಅಭ್ಯರ್ಥಿಯು ಈ ಪಟ್ಟಿಯಿಂದ ಹೊರತಾದ ಚಿಹ್ನೆಗಳನ್ನು ಆಯ್ಕೆ ಮಾಡಿಕೊಳ್ಳಬಾರದು. ಹಾಗೆ ಮಾಡಿದರೆ, ಅಂಥ ಆಯ್ಕೆಯನ್ನು ರಿಟರ್ನಿಂಗ್ ಅಧಿಕಾರಿಯು ಅನುಮೋದಿಸುವಂತಿಲ್ಲ.

## 3.26. ಅಭ್ಯರ್ಥಿಯು ಚಿಹ್ನೆಗಳನ್ನು ಆಯ್ಕೆ ಮಾಡಿಕೊಳ್ಳುವುದು

3.26.1. ರಾಷ್ಟ್ರೀಯ ಅಥವಾ ರಾಜ್ಯ ಪಕ್ಷಗಳ ಮೂಲಕ ಸ್ಪರ್ಧಿಸುವ ಅಭ್ಯರ್ಥಿಗೆ ಅಂಥ ಪಕ್ಷಗಳಿಗೆ ಮೀಸಲಿರಿಸಿದ ಚಿಹ್ನೆಗಳನ್ನು ಮಾತ್ರ ಹಂಚಿಕೆ ಮಾಡಬೇಕೆ ಹೊರತು ಇತರ ಚಿಹ್ನೆಗಳನ್ನು ಹಂಚಿಕೆ ಮಾಡಬಾರದು. ಆದರೆ, ನಮೂನೆ ಎ ಮತ್ತು ಬಿ ಮುಂತಾದವುಗಳ ಭರ್ತಿ ಮಾಡಿರುವ ಅಗತ್ಯತೆಗಳನ್ನು ಯುಕ್ತವಾಗಿ ಅನುಸರಿಸಲಾಗುವುದು. ಈ ದೃಷ್ಟಿಯಿಂದ ಅಭ್ಯರ್ಥಿಯು ತನ್ನ ನಾಮಪತ್ರ ಸಲ್ಲಿಸುವಾಗ ಅಧ್ಯತಾಕ್ರಮವಾಗಿ ಮೂರು ಚಿಹ್ನೆಗಳನ್ನು ಸೂಚಿಸುವ ಅಗತ್ಯವಿಲ್ಲ. ಆದರೆ ಆತನು ನಾಮಪತ್ರದ ಸಂಬಂಧಪಟ್ಟ ಭಾಗದಲ್ಲಿ ತಾನು ಸಂಬಂಧಿಸಿದ ಪಕ್ಷದ ಮೂಲಕ ಸ್ಪರ್ಧಿಸುತ್ತಿದ್ದಾನೆಂಬುದನ್ನು ಘೋಷಿಸಬೇಕು.

3.26.2. ಇವುಗಳ ಹೊರತಾಗಿ, ಅಭ್ಯರ್ಥಿಯು, ಆಯೋಗವು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಲಾದ ಯುಕ್ತ ಚಿಹ್ನೆಗಳ ಪಟ್ಟಿಯಿಂದ ಆದ್ಯತಾಕ್ರಮವಾಗಿ ಮೂರು

ಚಿಹ್ನೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು ಮತ್ತು ತಮ್ಮ ನಾಮಪತ್ರದಲ್ಲಿ ಅಂಥ ಆದ್ಯತೆಯನ್ನು ಸೂಚಿಸಬೇಕು.

## 3.27. ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ

3.27.1. ಕಾನೂನಿಗನುಸಾರವಾಗಿ ಆಯೋಗದ ಚಿಹ್ನೆಗಳ ಆದೇಶದ ಉಪಬಂಧಗಳಿಗನುಸಾರವಾಗಿ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಗೆ ಒಂದು ಚಿಹ್ನೆಯನ್ನು ನೀಡತಕ್ಕದ್ದು. ಒಂದೇ ಚುನಾವಣಾ ಕ್ಷೇತ್ರದಲ್ಲಿ ನಡೆಯುವ ಚುನಾವಣೆಗೆ ಸ್ಪರ್ಧಿಸುವ ಬೇರೆ ಬೇರೆ ಅಭ್ಯರ್ಥಿಗಳಿಗೆ ಬೇರೆ ಬೇರೆ ಚಿಹ್ನೆಗಳನ್ನು ಹಂಚಿಕೆ ಮಾಡತಕ್ಕದ್ದು.

3.27.2. ಮೇಲ್ಕಂಡ ಚಿಹ್ನೆಗಳ ಆದೇಶದಿಂದ ಅಭ್ಯರ್ಥಿಯು ಈ ಮುಂದಿನ ಅಂಶಗಳನ್ನು ಗಮನಿಸಬಹುದು: ಎಂದರೆ,

(ಎ) ಮೊದಲನೆಯದಾಗಿ, ಚಿಹ್ನೆಗಳಲ್ಲಿ ಎರಡು ಪ್ರವರ್ಗಗಳಿವೆ ಅವುಗಳೆಂದರೆ,-

(i) ಕಾಯ್ದಿರಿಸಿದ ಚಿಹ್ನೆಗಳು, ಮತ್ತು

(ii) ಮುಕ್ತ ಚಿಹ್ನೆಗಳು.

(ಬಿ) 'ಕಾಯ್ದಿರಿಸಿದ ಚಿಹ್ನೆ' ಎಂದರೆ, ಮನ್ನಣೆ ಪಡೆದ ರಾಜಕೀಯ ಪಕ್ಷಕ್ಕೆ ಕಾಯ್ದಿರಿಸಿದ ಚಿಹ್ನೆಯಾಗಿದ್ದು, 'ಮುಕ್ತ ಚಿಹ್ನೆಯು' ಕಾಯ್ದಿರಿಸಿದ ಚಿಹ್ನೆಗಿಂತ ಬೇರೆಯಾದ ಚಿಹ್ನೆಯಾಗಿದೆ.

(ಸಿ) ಮುಕ್ತ ಚಿಹ್ನೆಗಳು ಮತ್ತು ಕಾಯ್ದಿರಿಸಿದ ಚಿಹ್ನೆಗಳು ರಾಜ್ಯದಿಂದ ರಾಜ್ಯಕ್ಕೆ ವಿಭಿನ್ನವಾಗಿರುತ್ತವೆ.

(ಡಿ) ಮೂರು ಪ್ರವರ್ಗದ ರಾಜಕೀಯ ಪಕ್ಷಗಳಿವೆ, ಅವುಗಳೆಂದರೆ,-

(i) ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳು (ಅವು ಎಲ್ಲಾ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಮನ್ನಣೆ ಪಡೆದಿರುತ್ತವೆ).

(ii) ಮಾನ್ಯತೆ ಪಡೆದ ರಾಜ್ಯ ಪಕ್ಷಗಳು (ಅವು ಕೆಲವು ನಿರ್ದಿಷ್ಟ ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರವೇ ಮನ್ನಣೆ ಪಡೆದಿರುತ್ತವೆ).

(iii) ನೋಂದಾಯಿತವಾದ- ಮಾನ್ಯತೆ ಪಡೆಯದ ಪಕ್ಷಗಳು.

**ವಿ.ಸೂ:-** ಚುನಾವಣಾ ಆಯೋಗವು ಕಾಲಕಾಲಕ್ಕೆ ಮನ್ನಣೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ಪಕ್ಷಗಳ ಪಟ್ಟಿಯನ್ನು ಮತ್ತು ಕ್ರಮವಾಗಿ ಅವುಗಳಿಗೆ ಕಾಯ್ದಿರಿಸಿದ ಚಿಹ್ನೆಗಳ ಪಟ್ಟಿಯನ್ನು, ನೋಂದಾಯಿತವಾದ ಮನ್ನಣೆ ಪಡೆದಿರದ ಪಕ್ಷಗಳ ಪಟ್ಟಿಯನ್ನು ಮತ್ತು ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದ ಮುಕ್ತ ಚಿಹ್ನೆಗಳ ಪಟ್ಟಿಗಳನ್ನು ನಿರ್ದಿಷ್ಟಪಡಿಸಿ

ಕ್ರೋಢೀಕೃತ ಅಧಿಸೂಚನೆಯನ್ನು ಹೊರಡಿಸುತ್ತದೆ. ಅಭ್ಯರ್ಥಿಯು ಆಯೋಗವು ಹೊರಡಿಸಿದ ಮಾಡುವ ಮುಂಚೆ, ನಿಮ್ಮನ್ನು ಚುನಾವಣೆಗೆ ನಿಲ್ಲಿಸಿರುವ ಪಕ್ಷದ ಹೆಸರಿನ ಬಗ್ಗೆ ಮತ್ತು ನಿಮ್ಮ ಅಧಿಸೂಚನೆಯಲ್ಲಿ ಪಟ್ಟಿ ಮಾಡಿದ ಹೆಸರಿನ ಪ್ರಕಾರ ರಾಜಕೀಯ ಪಕ್ಷದ ಸರಿಯಾದ ಹೆಸರನ್ನು ನಮೂದಿಸಬೇಕು. ಹಾಗೆಯೇ ಚಿಹ್ನೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸಬೇಕು. ಮೇಲೆ ಹೇಳಲಾದ ಅಧಿಸೂಚನೆಯು ಆಯೋಗದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

(ಇ) ರಾಷ್ಟ್ರೀಯ ಅಥವಾ ರಾಜ್ಯ ಪಕ್ಷವು ಯಾವ ರಾಜ್ಯದಲ್ಲಿ ಮನ್ನಣೆ ಪಡೆದಿದೆಯೋ ಆ ರಾಜ್ಯ ಪಕ್ಷವು ನಿಲ್ಲಿಸಿರುವ ಅಭ್ಯರ್ಥಿಯು ತನ್ನ ನಾಮಪತ್ರದಲ್ಲಿ ಆ ಪಕ್ಷದ ಕಾಯ್ದಿರಿಸಿದ ಚಿಹ್ನೆಯನ್ನು ಮಾತ್ರ ಆಯ್ಕೆ ಮಾಡಬೇಕೇ ಹೊರತು ಬೇರೆ ಯಾವುದೇ ಚಿಹ್ನೆಯನ್ನಲ್ಲ ಮತ್ತು ಅದನ್ನು ರಿಟರ್ನಿಂಗ್ ಅಧಿಕಾರಿಯು ಹಂಚಿಕೆ ಮಾಡತಕ್ಕದ್ದು. ಎಂದರೆ, ಅಭ್ಯರ್ಥಿಯನ್ನು ರಾಜ್ಯ ಪಕ್ಷವು ನಿಲ್ಲಿಸದ್ದರೆ, ಆಗ ಅವರ ನಾಮಪತ್ರದಲ್ಲಿ ಬೇರೆ ಯಾವುದೇ ಚಿಹ್ನೆಯಲ್ಲದೆ ಆ ಪಕ್ಷಕ್ಕೆ ಕಾಯ್ದಿರಿಸಿರುವ ಚಿಹ್ನೆಯನ್ನು ಮಾತ್ರವೇ ಆಯ್ಕೆ ಮಾಡಬಹುದು.

(ಎಫ್) ಕಾಯ್ದಿರಿಸಿದ ಚಿಹ್ನೆಯನ್ನು, ಯಾವ ಪಕ್ಷಕ್ಕೆ ಚಿಹ್ನೆಯನ್ನು ಮೀಸಲಿರಿಸಲಾಗಿದೆಯೋ ಆ ಪಕ್ಷವು ನಿಲ್ಲಿಸಿದ ಅಭ್ಯರ್ಥಿಗೆ ಮಾತ್ರ ಹಂಚಿಕೆ ಮಾಡಬಹುದು. ಅಂಥ ಚಿಹ್ನೆಗಳನ್ನು ಸಂಬಂಧಪಟ್ಟ ಪಕ್ಷವು ಆ ಕ್ಷೇತ್ರದಲ್ಲಿ ಯಾವುದೇ ಅಭ್ಯರ್ಥಿಯನ್ನು ನಿಲ್ಲಿಸದಿದ್ದರೂ ಸಹ, ಅಂಥ ಕ್ಷೇತ್ರದಲ್ಲಿನ ಇತರ ಅಭ್ಯರ್ಥಿಗಳಿಗೆ ಹಂಚಿಕೆ ಮಾಡುವಂತಿಲ್ಲ.

(ಜಿ) ಕೆಲವು ರಾಜ್ಯ ಅಥವಾ ರಾಜ್ಯಗಳಲ್ಲಿ ರಾಜ್ಯ ಪಕ್ಷವೆಂದು ಮನ್ನಣೆ ಪಡೆದಿರುವ ಒಂದು ರಾಜಕೀಯ ಪಕ್ಷವು, ಅದು ರಾಜ್ಯ ಪಕ್ಷವೆಂದು ಮನ್ನಣೆ ಪಡೆದಿರದ ಇತರ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಮತಕ್ಷೇತ್ರದಲ್ಲಿ ಅಭ್ಯರ್ಥಿಯನ್ನು ನಿಲ್ಲಿಸಿದ್ದರೆ, ಆಗ ಅಂಥ ಅಭ್ಯರ್ಥಿಗೆ, ಉಳಿದೆಲ್ಲಾ ಅಭ್ಯರ್ಥಿಗಳಿಗಿಂತ ಪ್ರತ್ಯೇಕವಾಗಿ ಯಾವ ರಾಜ್ಯ ಅಥವಾ ರಾಜ್ಯಗಳಲ್ಲಿ ಅದು ಮನ್ನಣೆ ಪಡೆದ ರಾಜ್ಯ ಪಕ್ಷವಾಗಿದೆಯೋ ಆ ರಾಜ್ಯ ಅಥವಾ ರಾಜ್ಯಗಳಲ್ಲಿ ಆ ಪಕ್ಷಕ್ಕೆ ಕಾಯ್ದಿರಿಸಿರುವ ಚಿಹ್ನೆಯನ್ನೇ, ಆ ಚಿಹ್ನೆಯನ್ನು ಆ ಇತರ ರಾಜ್ಯದ ಚಿಹ್ನೆಗಳ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಲಾಗಿಲ್ಲ ಎಂಬುದು ಏನೇ ಇದ್ದರೂ, ಈ ಕೆಳಕಂಡ ಪ್ರತಿಯೊಂದು ಷರತ್ತುಗಳನ್ನು ಪೂರೈಸಿದ ಮೇಲೆ ಹಂಚಿಕೆ ಮಾಡಬಹುದು. ಆ ಷರತ್ತುಗಳೆಂದರೆ:–

(ಎ) ಚುನಾವಣೆಯನ್ನು ಘೋಷಿಸುವ ಅಧಿಸೂಚನೆಯನ್ನು ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿದ ನಂತರದ ಮೂರನೆಯ ದಿನವನ್ನು ಮೀರದಂತೆ ಸದರಿ ಪಕ್ಷವು ತಾನು ನಿಲ್ಲಿಸಿದ ಅಭ್ಯರ್ಥಿಗೆ ಆ ಚಿಹ್ನೆಯನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡುವಂತೆ ಚುನಾವಣಾ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸಬೇಕು;

(ಬಿ) ಸದರಿ ಅಭ್ಯರ್ಥಿಯು ತನ್ನ ನಾಮಪತ್ರದಲ್ಲಿ, ಆ ಪಕ್ಷವು ತನ್ನನ್ನು ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸಿದೆಯೆಂದು ಮತ್ತು ಆ ಅಭ್ಯರ್ಥಿಗೆ ಸಂಬಂಧಿಸಿದಂತೆ ಆ ಪಕ್ಷವು ಚುನಾವಣಾ ಚಿಹ್ನೆಗಳು (ಕಾಯ್ದಿರಿಸುವಿಕೆ ಮತ್ತು ಹಂಚಿಕೆ) ಆದೇಶ, 1968ರ ಕಂಡಿಕೆ 13ರ (ಬಿ), (ಸಿ) ಮತ್ತು (ಡಿ) ಖಂಡಗಳ ಅಗತ್ಯತೆಗಳನ್ನು ಕೂಡ ಪೂರೈಸಿದೆಯೆಂದು ಘೋಷಣೆ ಮಾಡಬೇಕು; ಮತ್ತು

(ಸಿ) ಹಾಗೆ ಹಂಚಿಕೆ ಮಾಡುವಂತೆ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವುದಕ್ಕೆ ಯುಕ್ತ ಕಾರಣವಿಲ್ಲವೆಂದು ಆಯೋಗವು ಅಭಿಪ್ರಾಯ ಪಡಬೇಕು:

ಪರಂತು, ಈಗಾಗಲೇ ಅದೇ ಚಿಹ್ನೆಯನ್ನು ಆ ರಾಜ್ಯದ ಇತರ ಕೆಲವು ರಾಜ್ಯ ಪಕ್ಷಕ್ಕೆ ಕಾಯ್ದಿರಿಸಿದ್ದಲ್ಲಿ, ಆ ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಆ ರಾಜ್ಯದ ರಾಜ್ಯ ಪಕ್ಷವಲ್ಲದಿರುವ ರಾಜ್ಯ ಪಕ್ಷವು ನಿಲ್ಲಿಸಿರುವ ಅಭ್ಯರ್ಥಿಗೆ ಈ ಮೇಲೆ ಹೇಳಿರುವ ಯಾವುದೂ ಅನ್ವಯವಾಗತಕ್ಕದ್ದಲ್ಲ.

(ಎಚ್) ಚುನಾವಣೆಗಳು ಲೋಕಸಭಾ ಕ್ಷೇತ್ರಕ್ಕೆ ಮತ್ತು ಅಂಥ ಲೋಕಸಭಾ ಕ್ಷೇತ್ರವು ಒಳಗೊಂಡಿರುವ ವಿಧಾನಸಭಾ ಕ್ಷೇತ್ರಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆದಲ್ಲಿ, ಆಗ–

(i) ಲೋಕಸಭಾ ಕ್ಷೇತ್ರಕ್ಕೆ ನಡೆಯುವ ಚುನಾವಣೆಯಲ್ಲಿ ಬೇರೊಂದು ರಾಜ್ಯದಲ್ಲಿನ ರಾಜ್ಯ ಪಕ್ಷವು ನಿಲ್ಲಿಸಿದ ಅಭ್ಯರ್ಥಿಗೆ ಕಂಡಿಕೆ (ಎಚ್) ಅಡಿಯಲ್ಲಿ ಚಿಹ್ನೆಯನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಿದರೆ, ಆ ಚಿಹ್ನೆಯನ್ನು ಸದರಿ ವಿಧಾನಸಭಾ ಕ್ಷೇತ್ರಗಳ ಪೈಕಿ ಯಾವುದೇ ಕ್ಷೇತ್ರದ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿಗೆ ಅಂಥ ಅಭ್ಯರ್ಥಿಯು ಆ ರಾಜಕೀಯ ಪಕ್ಷವು ನಿಲ್ಲಿಸಿರುವ ಅಭ್ಯರ್ಥಿಯಾಗಿದ್ದ ಹೊರತು, ಹಂಚಿಕೆ ಮಾಡತಕ್ಕದ್ದಲ್ಲ; ಮತ್ತು

(ii) ಸದರಿ ವಿಧಾನಸಭಾ ಕ್ಷೇತ್ರಗಳ ಪೈಕಿ ಯಾವುದೇ ಕ್ಷೇತ್ರಕ್ಕೆ ನಡೆಯುವ ಯಾವುದೇ ಚುನಾವಣೆಯಲ್ಲಿ ಸದರಿ ಪಕ್ಷವು ನಿಲ್ಲಿಸಿದ ಅಭ್ಯರ್ಥಿಗೆ ಕಂಡಿಕೆ (ಹೆಚ್) ಅಡಿಯಲ್ಲಿ ಚಿಹ್ನೆಯನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಿದರೆ, ಆ ಚಿಹ್ನೆಯನ್ನು ಸದರಿ ಲೋಕಸಭಾ ಕ್ಷೇತ್ರಕ್ಕೆ ನಡೆಯುವ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿಗೆ ಅಂಥ ಅಭ್ಯರ್ಥಿಯು ಆ ರಾಜಕೀಯ ಪಕ್ಷವು ನಿಲ್ಲಿಸಿರುವ ಅಭ್ಯರ್ಥಿಯಾಗಿದ್ದ ಹೊರತು, ಹಂಚಿಕೆ ಮಾಡತಕ್ಕದ್ದಲ್ಲ.

(ಐ) ರಾಜಕೀಯ ಪಕ್ಷವೆಂದು ಕರೆದುಕೊಳ್ಳುವ ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಉಪಬಂಧಗಳನ್ನು ಬಳಸಿಕೊಳ್ಳುವ ಉದ್ದೇಶ ಹೊಂದಿರುವ ಭಾರತದ ಸ್ವತಂತ್ರ ನಾಗರೀಕರ ಯಾವುದೇ ಸಂಘ ಅಥವಾ ನಿಕಾಯವು, ಅಧಿನಿಯಮದ 29ಎ ಪ್ರಕರಣದ ಅಡಿಯಲ್ಲಿ ಮತ್ತು ಆಯೋಗವು ಹೊರಡಿಸಿದ ನೋಂದಣಿಗೆ ಸಂಬಂಧಿಸಿದ ಮಾರ್ಗಸೂಚಿಗಳಲ್ಲಿ

ಅಗತ್ಯಪಡಿಸಲಾದಂಥ ಮಾಹಿತಿಯನ್ನು ಒದಗಿಸುವ ಮೂಲಕ ಒಂದು ರಾಜಕೀಯ ಪಕ್ಷವಾಗಿ ನೋಂದಣಿಯಾಗುವುದಕ್ಕೆ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದು. ಸದರಿ ಅಗತ್ಯತೆಗಳನ್ನು ಪೂರೈಸಿದ ಮೇಲೆ, ಆಯೋಗವು ಅದನ್ನು ಒಂದು ರಾಜಕೀಯ ಪಕ್ಷವೆಂದು ನೋಂದಣಿ ಮಾಡಬಹುದು. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 29ಎ ಪ್ರಕರಣದ ಅಡಿಯಲ್ಲಿ ಹಾಗೆ ನೋಂದಣಿಯಾದ ಪಕ್ಷವನ್ನು ಚುನಾವಣಾ ಚಿಹ್ನೆಗಳು (ಕಾಯ್ದಿರಿಸುವಿಕೆ ಮತ್ತು ಹಂಚಿಕೆ) ಆದೇಶ, 1968ರ ಉದ್ದೇಶಗಳಿಗಾಗಿ ಒಂದು ನೋಂದಾಯಿತ ರಾಜಕೀಯ ಪಕ್ಷವೆಂದು ಭಾವಿಸತಕ್ಕದ್ದು. ಆನಂತರ ಹಾಗೆ ನೋಂದಣಿಯಾದ ಪಕ್ಷವು ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದ ಕಾರ್ಯಕ್ಷಮತೆಯನ್ನಾಧರಿಸಿ, ಮನ್ನಣೆ ಪಡೆದ ರಾಷ್ಟ್ರೀಯ ಅಥವಾ ರಾಜ್ಯ ಪಕ್ಷವಾಗಬಹುದು ಅಥವಾ ನೋಂದಣಿಯಾದ ಮಾನ್ಯತೆ ಪಡೆಯದ ಪಕ್ಷವಾಗಬಹುದು.

(ಜೆ) ರಾಷ್ಟ್ರೀಯ ಅಥವಾ ರಾಜ್ಯ ಪಕ್ಷವು ನಿಲ್ಲಿಸಿರದ ಅಭ್ಯರ್ಥಿಗಳು, ಎಂದರೆ, ನೋಂದಣಿಯಾದ ಮನ್ನಣೆ ಪಡೆಯದ ರಾಜಕೀಯ ಪಕ್ಷಗಳು ನಿಲ್ಲಿಸಿದ ಅಭ್ಯರ್ಥಿಗಳು ಮತ್ತು ಸ್ವತಂತ್ರ ಅಭ್ಯರ್ಥಿಗಳು ತಮ್ಮ ನಾಮ ಪತ್ರಗಳಲ್ಲಿ ಅವರು ಚುನಾವಣೆಯಲ್ಲಿ ನಿಲ್ಲ ಬಯಸುವ, ರಾಜ್ಯದ ಎದುರಿನಲ್ಲಿ ತೋರಿಸಿರುವ ಮುಕ್ತ ಚಿಹ್ನೆಗಳಿಂದ ಮಾತ್ರವೇ ಚಿಹ್ನೆಗಳನ್ನು ಆಯ್ಕೆ ಮಾಡಬಹುದೇ ಹೊರತು ಬೇರೆ ಚಿಹ್ನೆಯನ್ನು ಆಯ್ಕೆ ಮಾಡುವಂತಿಲ್ಲ. ಯಾವುದೇ ಮುಕ್ತ ಚಿಹ್ನೆಯನ್ನು ಆ ಚುನಾವಣೆಯಲ್ಲಿನ ಒಬ್ಬನೇ ಒಬ್ಬ ಅಭ್ಯರ್ಥಿಯು ಆಯ್ಕೆ ಮಾಡಿಕೊಂಡಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ಆ ಚಿಹ್ನೆಯನ್ನು ಬೇರೆ ಯಾರಿಗೂ ಹಂಚಿಕೆ ಮಾಡದೆ ಆ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದು.

(ಕೆ) ಚುನಾವಣೆಯಲ್ಲಿ ಒಂದೇ ಮುಕ್ತ ಚಿಹ್ನೆಯನ್ನು ಹಲವಾರು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿದ್ದಲ್ಲಿ, ಆಗ–

(ಎ) ಆ ಹಲವಾರು ಅಭ್ಯರ್ಥಿಗಳಲ್ಲಿ ಒಬ್ಬನೇ ಒಬ್ಬ ಅಭ್ಯರ್ಥಿಯು ನೋಂದಣಿಯಾದ ಮನ್ನಣೆ ಪಡೆಯದ ರಾಜಕೀಯ ಪಕ್ಷವು ನಿಲ್ಲಿಸಿದ ಅಭ್ಯರ್ಥಿಯಾಗಿದ್ದರೆ ಮತ್ತು ಉಳಿದ ಎಲ್ಲರೂ ಸ್ವತಂತ್ರ ಅಭ್ಯರ್ಥಿಗಳಾಗಿದ್ದರೆ, ರಿಟರ್ನಿಂಗ್ ಅಧಿಕಾರಿಯು ಆ ಮುಕ್ತ ಚಿಹ್ನೆಯನ್ನು ಬೇರೆ ಯಾರಿಗೂ ಹಂಚಿಕೆ ಮಾಡದೆ ಅಂಥ ಮನ್ನಣೆ ಪಡೆಯದ ರಾಜಕೀಯ ಪಕ್ಷಕ್ಕೆ ಹಂಚಿಕೆ ಮಾಡತಕ್ಕದ್ದು ಮತ್ತು ಆ ಹಲವಾರು ಅಭ್ಯರ್ಥಿಗಳ ಪೈಕಿ ಎರಡು ಅಥವಾ ಹೆಚ್ಚು ಅಭ್ಯರ್ಥಿಗಳು ವಿವಿಧ ಮನ್ನಣೆ ಪಡೆಯದ ರಾಜಕೀಯ ಪಕ್ಷಗಳಿಂದ ನಿಲ್ಲಿಸಿದ ಅಭ್ಯರ್ಥಿಗಳಾಗಿದ್ದರೆ ಮತ್ತು ಉಳಿದವರು ಸ್ವತಂತ್ರ ಅಭ್ಯರ್ಥಿಗಳಾಗಿದ್ದರೆ, ರಿಟರ್ನಿಂಗ್ ಅಧಿಕಾರಿಯು ಚೀಟಿ ಎತ್ತುವ ಮೂಲಕ ವಿವಿಧ ಮನ್ನಣೆ ಪಡೆಯದ ರಾಜಕೀಯ ಪಕ್ಷಗಳು ನಿಲ್ಲಿಸಿರುವ ಎರಡು ಅಥವಾ ಹೆಚ್ಚು ಅಭ್ಯರ್ಥಿಗಳ ಪೈಕಿ ಯಾರಿಗೆ ಆ ಮುಕ್ತ ಚಿಹ್ನೆಯನ್ನು

ಹಂಚಿಕೆ ಮಾಡಬೇಕೆಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಆ ಮುಕ್ತ ಚಿಹ್ನೆಯನ್ನು ಬೇರೆ ಯಾರಿಗೂ ಹಂಚಿಕೆ ಮಾಡದೆ ಚೀಟಿಯು ಯಾರ ಹೆಸರಿಗೆ ಬಂದಿತೋ ಆ ಅಭ್ಯರ್ಥಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು;

ಆದರೆ, ಅಂಥ ವಿವಿಧ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳು ನಿಲ್ಲಿಸಿದ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಅಂಥ ಅಭ್ಯರ್ಥಿಗಳಿದ್ದು, ಒಬ್ಬನೇ ಒಬ್ಬ ಅಭ್ಯರ್ಥಿಯು ಹಾಲಿ ಲೋಕಸಭಾ ಅಥವಾ ಸಂದರ್ಭಾನುಸಾರ ವಿಧಾನಸಭಾ ಸದಸ್ಯನಾಗಿದ್ದರೆ ಅಥವಾ ಆ ಚುನಾವಣೆಯ ನಿಕಟ ಪೂರ್ವದಲ್ಲಿ ಅಂಥ ಸದಸ್ಯನಾಗಿದ್ದರೆ (ಆತನು ಅಂಥ ಸದಸ್ಯನಾಗಿ ಆಯ್ಕೆಯಾದ ಹಿಂದಿನ ಚುನಾವಣೆಯಲ್ಲಿ ಆ ಮುಕ್ತ ಚಿಹ್ನೆಯನ್ನು ಅಥವಾ ಯಾವುದೇ ಇತರ ಚಿಹ್ನೆಯನ್ನು ಆತನಿಗೆ ಆಯ್ಕೆ ಮಾಡಲಾಗಿತ್ತೇ ಎಂಬ ಯಾವ ಸಂಗತಿಯನ್ನೂ ಪರಿಗಣಿಸದೆ) ರಿಟರ್ನಿಂಗ್ ಅಧಿಕಾರಿಯು ಆ ಮುಕ್ತ ಚಿಹ್ನೆಯನ್ನು ಬೇರೆ ಯಾರಿಗೂ ಹಂಚಿಕೆ ಮಾಡದೆ ಆ ಅಭ್ಯರ್ಥಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು.

(ಬಿ) ಆ ಹಲವಾರು ಅಭ್ಯರ್ಥಿಗಳ ಪೈಕಿ ಯಾವುದೇ ಮಾನ್ಯತೆ ಪಡೆಯದ ರಾಜಕೀಯ ಪಕ್ಷವು ನಿಲ್ಲಿಸಿರುವ ಅಭ್ಯರ್ಥಿಗಳಾರೂ ಇಲ್ಲದಿದ್ದರೆ ಮತ್ತು ಎಲ್ಲರೂ ಸ್ವತಂತ್ರ ಅಭ್ಯರ್ಥಿಗಳಾಗಿದ್ದರೆ, ಸ್ವತಂತ್ರ ಅಭ್ಯರ್ಥಿಗಳಲ್ಲಿ ಒಬ್ಬ ಅಭ್ಯರ್ಥಿಯು ಹಾಲಿ ಲೋಕಸಭಾ ಅಥವಾ ಸಂದರ್ಭಾನುಸಾರ ವಿಧಾನಸಭಾ ಸದಸ್ಯನಾಗಿದ್ದರೆ ಅಥವಾ ಆ ಚುನಾವಣೆಯ ನಿಕಟ ಪೂರ್ವದಲ್ಲಿ ಅಂಥ ಸದಸ್ಯನಾಗಿದ್ದರೆ, ಆತನು ಅಂಥ ಸದಸ್ಯನಾಗಿ ಆಯ್ಕೆಯಾದ ಹಿಂದಿನ ಚುನಾವಣೆಯಲ್ಲಿ ಆ ಮುಕ್ತ ಚಿಹ್ನೆಯನ್ನು ಆತನಿಗೆ ಹಂಚಿಕೆ ಮಾಡಿದ್ದರೆ, ರಿಟರ್ನಿಂಗ್ ಅಧಿಕಾರಿಯು ಆ ಮುಕ್ತ ಚಿಹ್ನೆಯನ್ನು ಬೇರೆ ಯಾರಿಗೂ ಹಂಚಿಕೆ ಮಾಡದೆ ಆ ಅಭ್ಯರ್ಥಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು; ಮತ್ತು

(ಸಿ) ಆ ಹಲವಾರು ಅಭ್ಯರ್ಥಿಗಳ ಪೈಕಿ ಎಲ್ಲರೂ ಸ್ವತಂತ್ರ ಅಭ್ಯರ್ಥಿಗಳಾಗಿದ್ದು, ಯಾರೊಬ್ಬರೂ ಮೇಲೆ ಹೇಳಿದಂತೆ ಹಾಲಿ ಸದಸ್ಯರಾಗಿರದಿದ್ದರೆ ಅಥವಾ ಹಿಂದೆ ಸದಸ್ಯರಾಗಿರದಿದ್ದರೆ, ರಿಟರ್ನಿಂಗ್ ಅಧಿಕಾರಿಯು, ಆ ಸ್ವತಂತ್ರ ಅಭ್ಯರ್ಥಿಗಳ ಪೈಕಿ ಯಾರಿಗೆ ಆ ಮುಕ್ತ ಚಿಹ್ನೆಯನ್ನು ಹಂಚಿಕೆ ಮಾಡಬೇಕು ಎಂಬುದನ್ನು ಚೀಟಿ ಎತ್ತುವ ಮೂಲಕ ನಿರ್ಧರಿಸಿ, ಬೇರೆ ಯಾರಿಗೂ ಅದನ್ನು ಹಂಚಿಕೆ ಮಾಡದೆ ಚೀಟಿಯು ಯಾರ ಹೆಸರಿಗೆ ಬಂದಿತೋ ಆ ಅಭ್ಯರ್ಥಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು.

3.27.3. ಚುನಾವಣೆಯ ಅಧಿಸೂಚನೆ ದಿನಾಂಕಕ್ಕಿಂತ ಆರು ವರ್ಷಗಳಕ್ಕಿಂತಲೂ ಹಿಂದಿನದಲ್ಲದ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ರಾಷ್ಟ್ರೀಯ ಅಥವಾ ರಾಜ್ಯದ ಮಾನ್ಯತೆ ಪಡೆದ ರಾಜಕೀಯ ಪಕ್ಷವಾಗಿದ್ದರೆ, ಆದರೆ ಪ್ರಸ್ತುತ ಮಾನ್ಯತೆ ಹೊಂದಿರದೆ ಆ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ಮತಕ್ಷೇತ್ರದಲ್ಲಿ ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸಿದ್ದರೆ, ಅಂಥ ರಾಜಕೀಯ ಪಕ್ಷವು ಚಿಹ್ನೆಗಳ ಆದೇಶ ಪ್ಯಾರಾ 10ಎ ಅಡಿಯಲ್ಲಿ ಚಿಹ್ನೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸಿದ ಮೇಲೆ ಆಯೋಗವು ಆ ರಾಜ್ಯದಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಆ ಪಕ್ಷವು ಹಿಂದೆ ಮಾನ್ಯತೆ ಪಡೆದಿರಲಿ ಅಥವಾ ಇಲ್ಲದಿರಲಿ ಅದು ಹಿಂದೆ ಮಾನ್ಯತೆ ಪಡೆದ ರಾಷ್ಟ್ರೀಯ ಅಥವಾ ರಾಜ್ಯಪಕ್ಷವಾಗಿದ್ದಾಗ ಅದಕ್ಕೆ ಮೀಸಲಿರಿಸಿದ ಚಿಹ್ನೆಯ ಬಳಕೆಗೆ ಅವಕಾಶ ಮಾಡಿಕೊಡತಕ್ಕದ್ದು.

3.27.4. ಆರು ವರ್ಷಗಳಿಗಿಂತಲೂ ಹಿಂದಿನದಲ್ಲದ ಮಾನ್ಯತೆ ಪಡೆದ ಪಕ್ಷವಾಗಿದ್ದಲ್ಲಿ, ಮತ್ತೊಂದು ರಾಜ್ಯದಲ್ಲಿ ಒಂದು ರಾಜ್ಯ ಪಕ್ಷದ ಹಾಗೆ ಮಾನ್ಯತೆ ಪಡೆದ ಪಕ್ಷದಿಂದ ಅಥವಾ ನೋಂದಾಯಿತ ಮಾನ್ಯತೆ ಪಡೆಯದ ಪಕ್ಷದಿಂದ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಆ ರಾಜ್ಯ ಪಕ್ಷದ ಮೀಸಲು ಚಿಹ್ನೆಯನ್ನು/ಮಾನ್ಯತೆ ಪಡೆದ ರಾಜಕೀಯ ಪಕ್ಷವಾಗಿದ್ದಾಗ ಮಾತ್ರ ಅದರ ಮೀಸಲು ಚಿಹ್ನೆಯಾಗಿರುವಂಥ ಚಿಹ್ನೆಯನ್ನು ಹಂಚಿಕೆ ಮಾಡಬಹುದು. ಇದಕ್ಕಾಗಿ, ಆಯೋಗವು ಪ್ಯಾರಾಗ್ರಾಫ್ 10 ಅಥವಾ 10ಎ ಅಡಿಯಲ್ಲಿ ನಿರ್ದಿಷ್ಟ ನಿರ್ದೇಶನಗಳನ್ನು ನೀಡಿದೆ.

3.27.5. ಚಿಹ್ನೆಯ ಆದೇಶ 1968,ರ ಪ್ಯಾರಾಗ್ರಾಫ್ 10ಬಿ ಅಡಿಯಲ್ಲಿ, ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷವು, ಲೋಕಸಭೆ ಅಥವಾ ವಿಧಾನಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಮುಕ್ತ ಚಿಹ್ನೆಗಳ ಪಟ್ಟಿಯಿಂದ ಸಾಮಾನ್ಯ ಚಿಹ್ನೆಯ ಹಂಚಿಕೆಗಾಗಿ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸಬಹುದು. ಒಂದು ರಾಜ್ಯದಲ್ಲಿ ಪ್ಯಾರಾ 10ಬಿ ಅಡಿಯಲ್ಲಿ ಸಾಮಾನ್ಯ ಚಿಹ್ನೆ ಹುಡುಕುವುದಕ್ಕಾಗಿ ಒಂದು ಪಕ್ಷವು ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ //ಕನಿಷ್ಠ ಶೇಕಡಾ 5ರಷ್ಟು ಸ್ಥಾನಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸತಕ್ಕದ್ದು. ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ, ಒಂದು ರಆಜ್ಯದಲ್ಲಿ ಸಾಮಾನ್ಯ ಚಿಹ್ನೆ ಹೂಡುವುದಕ್ಕಾಗಿ ಒಂದು ಪಕ್ಷವು ಆ ರಾಜ್ಯದಲ್ಲಿರುವ ಕನಿಷ್ಠ ಪಕ್ಷ ಎರಡು (2) ಸಂಸದೀಯ ಕ್ಷೇತ್ರಗಳಿಂದ ಸ್ಪರ್ಧಿಸತಕ್ಕದ್ದು. ಪ್ಯಾರಾ 10ಬಿಯ ಅಗತ್ಯತೆಗಳ ಅನುಸಾರ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸಿದ್ದರೆ, ಆಯೋಗವು, ಅಂಥ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಸಾಮಾನ್ಯ ಚಿಹ್ನೆ ಹಂಚಿಕೆಗಾಗಿ ನಿರ್ದೇಶನಗಳನ್ನು ನೀಡುವುದು. ಅಂಥ ಚಿಹ್ನೆಯು ಇನ್ನಿತರೆ ಮತಕ್ಷೇತ್ರಗಳಲ್ಲಿ, ಚಿಹ್ನೆ ಆದೇಶ, 1968ರ ಪ್ಯಾರಾ 12ರ ಉಪಬಂಧಗಳ ಅನುಸಾರ ಇತರೆ ಅಭ್ಯರ್ಥಿಗಳಿಗೆ ಹಂಚುವುದಕ್ಕಾಗಿ ಮುಕ್ತವಾಗಿರುವುದು. ನೋಂದಾಯಿತ ಪಕ್ಷವಾಗಿರುವಂಥ

ಸಂದರ್ಭದಲ್ಲಿ, ಪ್ಯಾರಾ 10ಬಿ ಅಡಿಯಲ್ಲಿ ಯಾವುದೇ ನಿರ್ದಿಷ್ಟ ಚಿಹ್ನೆಯನ್ನು ಹಂಚಲಾಗಿದ್ದರೂ, ಆದರೆ, ಆ ಪಕ್ಷವು ಅಭ್ಯರ್ಥಿಯನ್ನು ನಿಲ್ಲಿಸದಿದ್ದರೆ ಅಥವಾ ಆ ಪಕ್ಷದ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಿದ್ದಲ್ಲಿ, ಆಗ ಸದರಿ ಚಿಹ್ನೆಗಾಗಿ ಇಚ್ಛಿಸಿರುವಂಥ ಇತರೆ ಅಭ್ಯರ್ಥಿಗಳಿಗೂ ಸಹ ಸಂಬಂಧಪಟ್ಟ ಚಿಹ್ನೆಯನ್ನು ಹಂಚಿಕೆ ಮಾಡಬಹುದಾಗಿದೆ.

3.27.6. ರಾಷ್ಟ್ರೀಯ ಅಥವಾ ರಾಜ್ಯ ಪಕ್ಷದ ಮೂಲಕ ಸ್ಪರ್ಧಿಸದಿರುವ ಇನ್ನಿತರೆ ಅಭ್ಯರ್ಥಿಗಳು, ತಮ್ಮ ನಾಮಪತ್ರದಲ್ಲಿ ಮುಕ್ತ ಚಿಹ್ನೆಗಳ ಪಟ್ಟಿಯಿಂದ ಮಾತ್ರ ಚಿಹ್ನೆಯ ಆಯ್ಕೆಯನ್ನು ಸೂಚಿಸಬಹುದು ಹಾಗೂ ಚಿಹ್ನೆಗಳ ಆದೇಶ 1968ರ ಪ್ಯಾರಾ 10 ಅಥವಾ 10ಎ ಅಡಿಯಲ್ಲಿ ರಿಯಾಯಿತಿ ನೀಡಿದ ಪಕ್ಷದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಯಾವುದೇ ಇತರೆ ಚಿಹ್ನೆಯನ್ನು ಸೂಚಿಸತಕ್ಕದ್ದಲ್ಲ.

3.27.7. ಅಂಥ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯು ಯಾವುದೇ ಮುಕ್ತ ಚಿಹ್ನೆಯನ್ನು ಆಯ್ಕೆ ಮಾಡಿಕೊಂಡಲ್ಲಿ, ರಿಟರ್ನಿಂಗ್ ಅಧಿಕಾರಿಯು, ಆ ಅಭ್ಯರ್ಥಿಗೆ ಆ ಚಿಹ್ನೆಯನ್ನು ಹಂಚಿಕೆ ಮಾಡುವುದು ಹಾಗೂ ಅದನ್ನು ಮತ್ತೆ ಬೇರೆ ಯಾರಿಗೂ ಹಂಚಬಾರದು. ದಯವಿಟ್ಟು, ಚಿಹ್ನೆಗಳ ಆದೇಶ, 1968ರ ಪ್ಯಾರಾ 12 ಅನ್ನು ನೋಡಿ.

3.27.8. ಅಂಥ ಚುನಾವಣೆಯಲ್ಲಿ, ಅದೇ ಮುಕ್ತ ಚಿಹ್ನೆಯನ್ನು ಹಲವು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿದ್ದರೆ,

(1) ಆ ಹಲವು ಅಭ್ಯರ್ಥಿಗಳ ಪೈಕಿ, ಕೇವಲ ಒಬ್ಬನು ಮಾತ್ರ ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷದ ಮೂಲಕ ಸ್ಪರ್ಧಿಸಿರುವ ಅಭ್ಯರ್ಥಿಯಾಗಿದ್ದಲ್ಲಿ ಹಾಗೂ ಉಳಿದವರೆಲ್ಲರೂ ಸ್ವತಂತ್ರ ಅಭ್ಯರ್ಥಿಗಳಾಗಿದ್ದಲ್ಲಿ, ಆಗ ರಿಟರ್ನಿಂಗ್ ಅಧಿಕಾರಿಯು, ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷದ ಮೂಲಕ ಸ್ಪರ್ಧಿಸುತ್ತಿರುವ ಅಭ್ಯರ್ಥಿಗೆ ಆ ಮುಕ್ತ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು. ನೋಂದಾಯಿತ ಪಕ್ಷದ ಅಭ್ಯರ್ಥಿಯು ಸ್ವತಂತ್ರ ಅಭ್ಯರ್ಥಿಗಳಿಗಿಂತಲೂ ಹೆಚ್ಚು ಆದ್ಯತೆಯನ್ನು ಪಡೆಯುತ್ತಾರೆ ಎಂಬುದು ಇದರರ್ಥ.

(2) ನೋಂದಾಯಿತ ಮಾನ್ಯತೆ ಪಡೆಯದ ಪಕ್ಷಗಳ ಇಬ್ಬರು (ಅಥವಾ ಹೆಚ್ಚು) ಅಭ್ಯರ್ಥಿಗಳು ಅದೇ ಮುಕ್ತ ಚಿಹ್ನೆಯನ್ನು ಆಯ್ಕೆ ಮಾಡಿಕೊಂಡಲ್ಲಿ, ಆಗ ಅವರಲ್ಲಿ ಈ ಹಿಂದೆ ಲೋಕಸಭೆ ಅಥವಾ ವಿಧಾನಸಭೆಗೆ ಸದಸ್ಯರಾಗಿದ್ದಲ್ಲಿ ಸಂದರ್ಭಾನುಸಾರ, ಇತರರಿಗಿಂತಲೂ ಅವರಿಗೆ ಆದ್ಯತೆ ನೀಡಿ ಸಂಬಂಧಪಟ್ಟ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು. ಒಂದು ವೇಳೆ ಈ ಹಿಂದೆ ಯಾರೂ ಸದಸ್ಯರಾಗಿರದಿದ್ದಲ್ಲಿ, ಆಗ ರಿಟರ್ನಿಂಗ್ ಅಧಿಕಾರಿಯು ಅವರೆಲ್ಲರನ್ನು ಕೂಡಿಸಿ, ಚೀಟಿ ಎತ್ತುವ ಮೂಲಕ ಆಯ್ಕೆ ಮಾಡಿ ಗೆದ್ದಂತ ಅಭ್ಯರ್ಥಿಗೆ ಮಾತ್ರ ಆ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು.

(3) ಸ್ವತಂತ್ರ ಅಭ್ಯರ್ಥಿಗಳು ಅದೇ ಮುಕ್ತ ಚಿಹ್ನೆಯನ್ನು ಬಯಸಿದ್ದಲ್ಲಿ ಹಾಗೂ ಅವರೆಲ್ಲರ ಪೈಕಿ ಒಬ್ಬನು ಈ ಹಿಂದೆ ಲೋಕಸಭೆಯ ಸದಸ್ಯನಾಗಿದ್ದಲ್ಲಿ, ಅಲ್ಲದೇ ಈ ಹಿಂದಿನ ಚುನಾವಣೆಯಲ್ಲಿ ಆ ನಿರ್ದಿಷ್ಟ ಮುಕ್ತ ಚಿಹ್ನೆಯನ್ನು ಅವನಿಗೆ ಹಂಚಿಕೆ ಮಾಡಲಾಗಿ ಆತನು ಸದಸ್ಯನಾಗಿ ಆಯ್ಕೆ ಆಗಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು, ಆ ಅಭ್ಯರ್ಥಿಗೆ ಆ ಮುಕ್ತ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು. ಇಂಥ ಪ್ರಕರಣಗಳಲ್ಲಿ ಇನ್ನಿತರೆ ಸ್ವತಂತ್ರ ಅಭ್ಯರ್ಥಿಗಳಿಗಿಂತ ಈ ಹಿಂದೆ ಸದಸ್ಯನಾಗಿರುವ ಅಭ್ಯರ್ಥಿಗೆ ಹೆಚ್ಚು ಮಹತ್ವ ನೀಡಲಾಗುತ್ತದೆ.

(4) ಅದೇ ಮುಕ್ತ ಚಿಹ್ನೆಗಾಗಿ ಸ್ವತಂತ್ರ ಅಭ್ಯರ್ಥಿಗಳು ಬಯಸಿದ್ದರೆ, ಅವರಾರೂ ಹಿಂದೆ ಲೋಕಸಭೆ ಅಥವಾ ವಿಧಾನಸಭೆಯ ಸದಸ್ಯರಾಗಿರದಿದ್ದಲ್ಲಿ, ಆಗ ಆ ಮುಕ್ತ ಚಿಹ್ನೆಯ ಹಂಚಿಕೆಯನ್ನು ಚೀಟಿ ಎತ್ತುವ ಮೂಲಕ ನಿರ್ಧರಿಸಬೇಕು.

3.27.9. ನಾಮಪತ್ರದ ನಮೂನೆಯಿಂದ ನಿಮಗೆ ತಿಳಿದುಬರುವುದೇನೆಂದರೆ, ನೀವು ಪಕ್ಷದ ಅಭ್ಯರ್ಥಿಯಾಗಿದ್ದರೆ ಆ ಬಗ್ಗೆ ನೀವು ನಾಮಪತ್ರದಲ್ಲಿ ಘೋಷಣೆ ಮಾಡುವ ಅಗತ್ಯವಿರುತ್ತದೆ. ಪ್ರಸ್ತುತ ನೀವು ಮನ್ನಣೆ ಪಡೆದ ಪಕ್ಷದಿಂದ ಎಂದರೆ, ರಾಷ್ಟ್ರೀಯ ಪಕ್ಷ ಅಥವಾ ರಾಜ್ಯ ಪಕ್ಷದಿಂದ ಅಭ್ಯರ್ಥಿಯಾಗಿರಬಹುದು ಅಥವಾ ನೀವು ನೋಂದಾಯಿತವಾದ– ಮಾನ್ಯತೆ ಪಡೆಯದ ಪಕ್ಷದಿಂದ ಎಂದರೆ, ಚಿಹ್ನೆಯನ್ನು ಕಾಯ್ದಿರಿಸದಿರುವ ಪಕ್ಷದಿಂದ ಅಭ್ಯರ್ಥಿಯಾಗಿರಬಹುದು. ಈ ಕೆಳಗೆ ತಿಳಿಸಿರುವ ಷರತ್ತುಗಳನ್ನು ಪೂರೈಸಿದರೆ ಮಾತ್ರವೇ ನೀವು ಒಂದು ನಿರ್ದಿಷ್ಟ ಪಕ್ಷದಿಂದ ಅಭ್ಯರ್ಥಿಯಾಗಿದ್ದೀರೆಂದು ಭಾವಿಸತಕ್ಕದ್ದೆಂದು ಆಯೋಗದ ಆದೇಶವು ಸ್ಪಷ್ಟವಾಗಿ ನಿರೂಪಿಸುತ್ತದೆ:

(ಎ) ಅಭ್ಯರ್ಥಿಯು ಆತನ/ಆಕೆಯ ನಾಮಪತ್ರದಲ್ಲಿ ಇರುವ ಹಾಗೆ ನಿಗದಿಪಡಿಸಿದ ಘೋಷಣೆಯನ್ನು ಮಾಡುವುದು. ಅಭ್ಯರ್ಥಿಯು ಆ ರಾಜಕೀಯ ಪಕ್ಷದ ಸದಸ್ಯರಾಗಿದ್ದಲ್ಲಿ, ಆತನ/ಆಕೆಯ ಹೆಸರನ್ನು ಆ ಪಕ್ಷದ ಸದಸ್ಯರ ಪಟ್ಟಿಗಳಲ್ಲಿ ನಮೂದಿಸಲಾಗಿರುತ್ತದೆ.

(ಬಿ) ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕದಂದು ಮಧ್ಯಾಹ್ನ 3 ಗಂಟೆಯ ಒಳಗೆ ಆ ಮತಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗೆ ಪೂರೈಸಿದಂಥ ನಮೂನೆ–ಬಿಯಲ್ಲಿ ರಾಜಕೀಯ ಪಕ್ಷವು ಲಿಖಿತವಾಗಿ ಒಂದು ನೋಟೀಸನ್ನು ನೀಡುವುದು.

(ಸಿ) ಹಾಗೂ ನೋಟಿಸನ್ನು ಕಳುಹಿಸುತ್ತಿರುವ ಅಧ್ಯಕ್ಷರು, ಕಾರ್ಯದರ್ಶಿ ಅಥವಾ ಅಂಥ ಇತರೆ ಕಚೇರಿ ಪಧಾಧಿಕಾರಿಗಳು ಅಂಥ ನೋಟಿಸನ್ನು ಕಳುಹಿಸಲು ಪಕ್ಷವು ಅಧಿಕೃತಗೊಳಿಸುವುದು.

(ಡಿ) ಪಕ್ಷವು, ಸಂವಹನಕ್ಕಾಗಿ ಅಧಿಕೃತಗೊಳಿಸಿರುವಂಥ ವ್ಯಕ್ತಿಯ ಹೆಸರು ಹಾಗೂ ಮಾದರಿ ಸಹಿ ಅನ್ನು ಆಯಾ ಮತಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗೆ ಮತ್ತು ಆಯಾ ರಾಜ್ಯ ಅಥವಾ ಸಂಬಂಧಪಟ್ಟ ಕೇಂದ್ರಾಡಳಿತ ಪ್ರದೇಶದ ಮುಖ್ಯ ಚುನಾವಣಾಧಿಕಾರಿಗೆ ನಮೂನೆ 'ಎ' ಯಲ್ಲಿ ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು ಮಧ್ಯಾಹ್ನ 3 ಗಂಟೆಯೊಳಗೆ ಸಲ್ಲಿಸುವುದು; ಹಾಗೂ

(ಇ) ಪಕ್ಷವು ಅಧಿಕೃತಗೊಳಿಸಿದ ಸದರಿ ಕಚೇರಿ ಪದಾಧಿಕಾರಿ ಅಥವಾ ವ್ಯಕ್ತಿಯು ಕೇವಲ ಶಾಹಿಯಲ್ಲಿ ಸಹಿ ಮಾಡಿದ ಎ ಮತ್ತು ಬಿ ನಮೂನೆಗಳನ್ನು ಸ್ವೀಕರಿಸತಕ್ಕದ್ದು. ಆದರೆ, ಯಾರೇ ಅಂಥ ಕಚೇರಿ ಪದಾಧಿಕಾರಿ ಅಥವಾ ಅಧಿಕೃತಗೊಳಿಸಿದ ವ್ಯಕ್ತಿಯು ರಬ್ಬರ್ ಸ್ಟಾಂಪ್ ಇತ್ಯಾದಿ ಸಾಧನಗಳ ಮೂಲಕ ಮಾಡಿದ ಯಾವುದೇ ನಕಲು ಸಹಿ ಅಥವಾ ಸಹಿಗಳನ್ನು ಸ್ವೀಕರಿಸಬಾರದು ಹಾಗೂ ಫ್ಯಾಕ್ಸ್, ಇ–ಮೇಲ್‌ಗಳ ಮೂಲಕ ಕಳುಹಿಸಿದ ಯಾವುದೇ ನಮೂನೆಯನ್ನು ಸ್ವೀಕರಿಸತಕ್ಕದ್ದಲ್ಲ.

3.27.10. ಪಕ್ಷಕ್ಕೆ ಸಂಬಂಧಿಸಿದ ಮುಖ್ಯ ಅಭ್ಯರ್ಥಿಯ ಜೊತೆಗೆ ಒಬ್ಬ ಬದಲಿ ಅಭ್ಯರ್ಥಿಯು ನಮೂನೆ ಬಿಯಲ್ಲಿ ನಾಮಪತ್ರ ಸಲ್ಲಿಸಲು ಅವಕಾಶವಿದೆ. ಸೂಕ್ತ ಅಭ್ಯರ್ಥಿ ನಾಮಪತ್ರ ಸಲ್ಲಿಸದಿದ್ದಲ್ಲಿ, ಅಥವಾ ಪರಿಶೀಲನೆಯ ದಿನದಂದು ಮುಖ್ಯ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಅಥವಾ ಮುಖ್ಯ ಅಭ್ಯರ್ಥಿಯು ತನ್ನ ನಾಮಪತ್ರವನ್ನು ಹಿಂತೆಗೆದುಕೊಂಡಲ್ಲಿ (ಹಾಗೂ ಬದಲಿ ಅಭ್ಯರ್ಥಿಯ ನಾಮಪತ್ರವು ಅನ್ಯಥಾ ಸಿಂಧು ಮತ್ತು ಸ್ವಿಕಾರ್ಹವಾಗಿದ್ದರೆ ಮತ್ತು ಅವನು ಇನ್ನೂ ಆ ಕ್ಷೇತ್ರದಲ್ಲಿ ಇದ್ದರೆ) ಮಾತ್ರ ಬದಲಿ ಅಭ್ಯರ್ಥಿಯನ್ನು ಪಕ್ಷದ ಅಭ್ಯರ್ಥಿ ಎಂದು ಪರಿಗಣಿಸಲಾಗುವುದು.

3.27.11. ರಾಜಕೀಯ ಪಕ್ಷಗಳು ಒಬ್ಬ ಅಭ್ಯರ್ಥಿಯ ಪರವಾಗಿ ಅಧಿಕೃತತೆಯನ್ನು ರದ್ದುಪಡಿಸಲು ನಮೂನೆ ಬಿ ಅಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡುತ್ತವೆ ಮತ್ತು ಈ ಮುಂದಿನ ಷರತ್ತುಗಳಿಗೊಳಪಟ್ಟು ಮತ್ತೊಬ್ಬ ಅಭ್ಯರ್ಥಿಯ ಪರವಾಗಿ ನಮೂನೆ ಬಿ ಅಲ್ಲಿ ಪರಿಷ್ಕೃತ ನೋಟಿಸನ್ನು ನೀಡುತ್ತದೆ ಎಂದರೆ:

(1) ಈ ಹಿಂದೆ, ಅಧಿಕೃತತೆಯನ್ನು ರದ್ದುಪಡಿಸಲು ಅಥವಾ ಬದಲಾಯಿಸಲು ನಮೂನೆ ಬಿ ಅಲ್ಲಿ ಸಲ್ಲಿಸಿದಂಥ ಪರಿಷ್ಕೃತ ನೋಟಿಸನ್ನು ಅಭ್ಯರ್ಥಿಯ ಪರವಾಗಿ ಈ ಹಿಂದಿನ ನೋಟಿಸನ್ನು ರದ್ದುಪಡಿಸಲಾಗಿತ್ತೆಂದು ಸ್ಪಷ್ಟವಾಗಿ ತಿಳಿಸತಕ್ಕದ್ದು. ಈ ಪರಿಷ್ಕೃತ ನೋಟಿಸನ್ನು ಸಂಬಂಧಪಟ್ಟ ಮತಕ್ಷೇತ್ರದ ರಿಟರ್ನಿಂಗ್ ಅಧಿಕಾರಿಯವರು ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕದಂದು ಮಧ್ಯಾಹ್ನ 3 ಗಂಟೆಯೊಳಗೆ ಸ್ವೀಕರಿಸತಕ್ಕದ್ದು.

(2) ನಮೂನೆ ಬಿ ಅಲ್ಲಿ ಸಲ್ಲಿಸಿದಂಥ ಪರಿಷ್ಕೃತ ನೋಟಿಸನ್ನು ಅಧಿಕೃತ ಕಚೇರಿ ಪದಾಧಿಕಾರಿಗಳು ಸಹಿ ಮಾಡಿರುವರು ಮತ್ತು ಚಿಹ್ನೆಗಳ ಆದೇಶದ ಪ್ಯಾರಾಗ್ರಾಫ್ 13ರ ಖಂಡ (ಡಿ)ನಲ್ಲಿ ಉಲ್ಲೇಖಿಸಲಾಗಿದೆ;

(3) ತದನಂತರದ ಅಧಿಕಾರ ಪತ್ರದ ನೈಜತೆಯ ಬಗ್ಗೆ ರಿಟರ್ನಿಂಗ್ ಅಧಿಕಾರಿಗೆ ಮನವರಿಕೆಯಾಗಬೇಕು; ಮತ್ತು

(4) ಯಾರ ಪರವಾಗಿ ತದನಂತರದ ಅಧಿಕಾರ ಪತ್ರವನ್ನು ನೀಡಲಾಗಿದೆಯೋ ಆ ಅಭ್ಯರ್ಥಿಯು ತಾನು ಸದರಿ ರಾಜಕೀಯ ಪಕ್ಷದಿಂದ ಅಭ್ಯರ್ಥಿಯಾಗಿದ್ದೇನೆಂದು ತನ್ನ ನಾಮಪತ್ರದಲ್ಲಿ ಈಗಾಗಲೇ ಘೋಷಣೆ ಮಾಡಿರಬೇಕು.

3.27.12. ಒಂದು ರಾಜಕೀಯ ಪಕ್ಷವು ಒಂದೇ ಚುನಾವಣಾ ಕ್ಷೇತ್ರಕ್ಕೆ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ನಮೂನೆ ಬಿ ಯಲ್ಲಿ ನೋಟೀಸನ್ನು ಸಲ್ಲಿಸಿದ್ದರೆ, ಮತ್ತು ಪಕ್ಷವು ಅಂಥ ನೋಟೀಸಿನಲ್ಲಿ ಈ ಮುಂಚಿನ ನೋಟೀಸನ್ನು/ ನೋಟೀಸುಗಳನ್ನು ರದ್ದುಪಡಿಸಲಾಗಿದೆಯೆಂದು ಹೇಳಿರದಿದ್ದರೆ, ಆಗ ನಿಮಗೆ ಯಾವ ಅಭ್ಯರ್ಥಿಯ ಸಂಬಂಧದಲ್ಲಿ ನಾಮಪತ್ರದ ನೋಟೀಸನ್ನು ಮೊದಲ ಬಾರಿಗೆ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಲಾಗಿತ್ತೋ ಅದನ್ನು ಅಂಗೀಕರಿಸಬೇಕು ಮತ್ತು ಉಳಿದ ಅಭ್ಯರ್ಥಿ(ಗಳು) ಯನ್ನು ಆ ಪಕ್ಷದಿಂದ ನಿಲ್ಲಿಸಲಾದ ಅಭ್ಯರ್ಥಿ(ಗಳು)ಯೆಂದು ಪರಿಗಣಿಸಬಾರದು.

3.27.13. ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ನಿಲ್ಲಿಸಿವೆಯೆಂದು ಅಭ್ಯರ್ಥಿಯು ತನ್ನ ನಾಮ ಪತ್ರಗಳಲ್ಲಿ ಕ್ಲೇಮು ಮಾಡಿದ್ದರೆ ಮತ್ತು ಎರಡು / ಅಂಥ ಎಲ್ಲಾ ಪಕ್ಷಗಳು ಅವನ ಪರವಾಗಿ ಎ ಮತ್ತು ಬಿ ನಮೂನೆಗಳನ್ನು ಸಲ್ಲಿಸಿದ್ದರೆ ರಿಟರ್ನಿಂಗ್ ಅಧಿಕಾರಿಯು ಅವುಗಳನ್ನ ಪರಿಶೀಲಿಸುವ ಸಮಯದಲ್ಲಿ ಯಾವ ರಾಜಕೀಯ ಪಕ್ಷಗಳು ಅವನನ್ನು ಸದಸ್ಯನನ್ನಾಗಿಸಿಕೊಂಡಿವೆ ಮತ್ತು ತನ್ನ ನಾಮ ಪತ್ರಗಳಲ್ಲಿ ನಮೂದಿಸಿದ ಇತರ ರಾಜಕೀಯ ಪಕ್ಷ/ಪಕ್ಷಗಳ ಸದಸ್ಯನಾಗಿರುವುದು ನಿಂತುಹೋಗಿದೆಯೇ ಎಂಬ ಸಂಗತಿಗಳನ್ನು ಪರಿಶೀಲಿಸಬೇಕು ಮತ್ತು ತದನುಸಾರವಾಗಿ ಅಭ್ಯರ್ಥಿಯು ಯಾವ ಪಕ್ಷಕ್ಕೆ ಸೇರಿರುವನೆಂಬುದನ್ನು ನಿರ್ಣಯಿಸಬೇಕು.

3.27.14. ನಿರ್ದಿಷ್ಟ ರಾಜಕೀಯ ಪಕ್ಷವು ನಿಲ್ಲಿಸಿದ ಅಭ್ಯರ್ಥಿಯೆಂದು ತನ್ನ ಯಾವುದೇ ನಾಮಪತ್ರಗಳಲ್ಲಿ ಅಭ್ಯರ್ಥಿಯು ಘೋಷಣೆ ಮಾಡದಿದ್ದಲ್ಲಿ, ಆ ಪಕ್ಷವು ಆ ಸಲುವಾಗಿ 'ಎ' ಮತ್ತು 'ಬಿ' ನಮೂನೆಗಳನ್ನು ರಿಟರ್ನಿಂಗ್ ಅಧಿಕಾರಿಗೆ ನೀಡಿದರೂ ಸಹ ಅವನನ್ನು ಆ ಪಕ್ಷವು ನಿಲ್ಲಿಸಿದ ಅಭ್ಯರ್ಥಿಯೆಂದು ಭಾವಿಸಬಾರದು. ಹಾಗೂ ಆ ಪಕ್ಷಕ್ಕಾಗಿ ಯಾವುದೇ ಚಿಹ್ನೆಯನ್ನು ಕಾಯ್ದಿರಿಸಿದ್ದರೆ ಅದನ್ನು ಅವನಿಗೆ ಹಂಚಿಕೆ ಮಾಡತಕ್ಕದ್ದಲ್ಲ.

3.27.15. ಅದೇ ರೀತಿ, ನಿರ್ದಿಷ್ಟ ರಾಜಕೀಯ ಪಕ್ಷವು ಅವನನ್ನು ನಿಲ್ಲಿಸಿದೆಯೆಂದು ಅಭ್ಯರ್ಥಿಯು ತನ್ನ ನಾಮಪತ್ರಗಳಲ್ಲಿ ಘೋಷಣೆ ಮಾಡಿದ್ದರೆ, ಆದರೆ ಆ ಪಕ್ಷವು ಬೇರೆ ಅಭ್ಯರ್ಥಿಯನ್ನು ನಿಲ್ಲಿಸಿದ್ದರೆ, ಅಂಥ ತರುವಾಯದ ಪಕ್ಷವು ಅವನನ್ನು ಸೇರಿಸಿಕೊಳ್ಳಲು ಇಚ್ಛಿಸಿದರೂ ಸಹ ಆ ಅಭ್ಯರ್ಥಿಯು ಮತ್ತೊಂದು ಪಕ್ಷದ ಮೂಲಕ ನಿಂತಿರುವುದಾಗಿ ಘೋಷಿಸಿ ಇನ್ನೊಂದು ನಾಮಪತ್ರವನ್ನು ನಿಗದಿತ ಅವಧಿಯೊಳಗೆ ಸಲ್ಲಿಸಿದ್ದ ಹೊರತು ಮತ್ತು ಆತನ ಪರವಾಗಿ, ನಿಗದಿತ ಕಾಲ ಮಿತಿಯೊಳಗೆ ಇತರ ಪಕ್ಷದ ಮೂಲಕ ನಮೂನೆ ಎ ಮತ್ತು ಬಿ ಯನ್ನು ಸಲ್ಲಿಸಿದ್ದ ಹೊರತು ಬೇರೆ ಪಕ್ಷದ ಮೂಲಕ ನಿಲ್ಲಿಸಲಾಗಿದೆಯೆಂದು ಭಾವಿಸುವಂತಿಲ್ಲ.

3.27.16. ಚಿಹ್ನೆಗಳ ಆದೇಶವು, ಕೆಲವೊಮ್ಮೆ ರಾಜಕೀಯ ಪಕ್ಷಗಳು ನಮೂದಿಸಿರುವಂಥ ಚುನಾವಣಾ ಮೈತ್ರಿಗಳನ್ನು ಮಾನ್ಯ ಮಾಡುವುದಿಲ್ಲ ಎಂಬುದನ್ನು ಸಹ ಅಭ್ಯರ್ಥಿಗಳು ಗಮನಿಸಬೇಕು. ಆದ್ದರಿಂದ, ರಾಷ್ಟ್ರೀಯ ಅಥವಾ ರಾಜ್ಯ ಪಕ್ಷಕ್ಕಾಗಿ ಮೀಸಲಿರಿಸಿದ ಚಿಹ್ನೆಯನ್ನು, ಅಂಥ ರಾಷ್ಟ್ರೀಯ ಅಥವಾ ರಾಜ್ಯ ಪಕ್ಷವೇ ನಿಲ್ಲಿಸಿರುವ ಅಭ್ಯರ್ಥಿಗೆ ಹೊರತುಪಡಿಸಿ, ಯಾರೇ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದಲ್ಲ.

## 3.28 ಪ್ರಾರಂಭಿಕ ಪರಿಶೀಲನೆ

3.28.1. ನಾಮಪತ್ರವನ್ನು ಸಲ್ಲಿಸಿದ ಮೇಲೆ, ನಾಮಪತ್ರದಲ್ಲಿ ನಮೂದಿಸಲಾದ ಅಭ್ಯರ್ಥಿಯ ಮತ್ತು ಆತನ ಸೂಚಕನ ಹೆಸರು ಮತ್ತು ಮತದಾರರ ಪಟ್ಟಿಯ ಸಂಖ್ಯೆಯು ಮತದಾರರ ಪಟ್ಟಿಗಳಲ್ಲಿ ನಮೂದಿಸಲಾದಂತೆಯೇ ಇದೆಯೆಂದು ರಿಟರ್ನಿಂಗ್ ಅಧಿಕಾರಿಯು ಮನವರಿಕೆ ಮಾಡಿಕೊಳ್ಳುತ್ತಾರೆ.

3.28.2. ಪರಿಷ್ಕರಿಸಲಾದ ನಮೂನೆ 26ರಲ್ಲಿ ಇರುವ ಶಪಥಪತ್ರವನ್ನು ಕ್ರಮಬದ್ಧವಾಗಿ ತುಂಬಲಾಗಿದೆಯೇ ಮತ್ತು ಅದನ್ನು ನಾಮಪತ್ರದೊಂದಿಗೆ ಲಗತ್ತಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸುವುದು. ಅದನ್ನು ಲಗತ್ತಿಸಿಲ್ಲದಿದ್ದರೆ, ರಿಟರ್ನಿಂಗ್ ಅಧಿಕಾರಿ ಅಥವಾ ನಿರ್ದಿಷ್ಟಪಡಿಸಿದ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಆತನ ಗಮನಕ್ಕೆ ತರತಕ್ಕದ್ದು. ಇದನ್ನು ತಾಳೆಪಟ್ಟಿಯ ರೂಪದಲ್ಲಿನ ನೋಟಿಸ್ ಮುಖಾಂತರ ಅಗತ್ಯಪಡಿಸಬೇಕು.

3.28.3. ಪ್ರತಿ ಅಭ್ಯರ್ಥಿಯ ಸಂಬಂಧದಲ್ಲಿ, ರಿಟರ್ನಿಂಗ್ ಅಧಿಕಾರಿಅಥವಾ ನಿರ್ದಿಷ್ಟಪಡಿಸಿದ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಗಳು ಪೂರೈಸಬೇಕಾದ ದಸ್ತಾವೇಜುಗಳು/ ಅಗತ್ಯತೆಗಳ ತಾಳೆಪಟ್ಟಿಯನ್ನು ದ್ವಿಪ್ರತಿಯಲ್ಲಿ ನಿರ್ವಹಿಸತಕ್ಕದ್ದು.

ತಾಳೆ ಪಟ್ಟಿಯನ್ನು ಕೆಳಗೆ ನೀಡಲಾಗಿದೆ

**ಮೂಲ/ದ್ವಿಪ್ರತಿ**

(ಮೂಲಪ್ರತಿಯನ್ನು ನಾಮಪತ್ರದೊಂದಿಗೆ ಇಡತಕ್ಕದ್ದು ಹಾಗೂ

ದ್ವಿಪ್ರತಿಯನ್ನು ಅಭ್ಯರ್ಥಿಗೆ ಹಸ್ತಾಂತರಿಸತಕ್ಕದ್ದು)

**ನಾಮಪತ್ರ ಸಲ್ಲಿಸುವುದಕ್ಕೆ ಸಂಬಂಧಿಸಿದ ದಸ್ತಾವೇಜುಗಳ ತಾಳೆಪಟ್ಟಿ**

ಚುನಾವಣಾ ಕ್ಷೇತ್ರದ ಹೆಸರು : ______________________

ಅಭ್ಯರ್ಥಿಯ ಹೆಸರು : ______________________

ನಾಮಪತ್ರವನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ : ______________

ನಾಮಪತ್ರದ ಕ್ರಮಸಂಖ್ಯೆ : ____________________

| **ಕ್ರಮ ಸಂಖ್ಯೆ** | **ದಸ್ತಾವೇಜುಗಳು** | **ದಾಖಲ್ಮಾಡಲಾಗಿದೆಯೇ (ಹೌದು/ಇಲ್ಲ ಎಂದು ಬರೆಯಿರಿ) ದಸ್ತಾವೇಜುಗಳಲ್ಲಿ ಯಾವುದೇ ದೋಷ/ ನ್ಯೂನ್ಯತೆ ಇದ್ದರೆ, ಅದನ್ನು ನಿರ್ದಿಷ್ಟಪಡಿಸತಕ್ಕದ್ದು)** |
|---|---|---|
| 1 | ನಮೂನೆ 26ರಲ್ಲಿರುವ ಅಫಡವಿಟ್<br>(ಎ) ಎಲ್ಲಾ ಅಂಕಣಗಳನ್ನು ಭರ್ತಿ ಮಾಡಲಾಗಿದೆಯೇ?<br>(ಬಿ) ಇಲ್ಲ ಎಂದಾದರೆ, ಆ ಖಾಲಿ ಇರುವಂಥ ಅಂಕಣ(ಗಳನ್ನು) ಯಾವುದು (ದಯವಿಟ್ಟು ನಿರ್ದಿಷ್ಟಪಡಿಸಿ);<br>(ಸಿ) ಅಫಿಡವಿಟ್ ಅನ್ನು ಪ್ರಮಾಣವಚನ ಬೋಧಿಸುವ ಕಮೀಷನರ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್‌ರ ಸಮ್ಮುಖದಲ್ಲಿ ಅಥವಾ ನೋಟರಿ ಪಬ್ಲಿಕ್‌ರವರ ಸಮ್ಮುಖದಲ್ಲಿ ಪ್ರಮಾಣ ಮಾಡಲಾಗಿದೆಯೇ? | |
| 2 | ಮತದಾರರ ಪಟ್ಟಿಯ ಪ್ರಮಾಣೀಕೃತ ಉದ್ಧೃತ ಭಾಗ (ಅಭ್ಯರ್ಥಿಯು ಬೇರೆ ಬೇರೆ ಚುನಾವಣಾ ಕ್ಷೇತ್ರದ ಮತದಾರನಾಗಿರುವಾಗ) | |
| 3 | ಎ ಮತ್ತು ಬಿ ನಮೂನೆಗಳು (ರಾಜಕೀಯ ಪಕ್ಷಗಳು ಚುನಾವಣೆಗೆ ನಿಲ್ಲಿಸಿರುವ ಅಭ್ಯರ್ಥಿಗಳಾದ ಸಂದರ್ಭದಲ್ಲಿ ಅನ್ವಯವಾಗುತ್ತದೆ) | |
| 4 | ಜಾತಿ ಪ್ರಮಾಣಪತ್ರದ ಪ್ರತಿ (ಅಭ್ಯರ್ಥಿಯು ಪ.ಜಾ/ಪ.ಪಂ.ಕ್ಕೆ ಸೇರಿರುವುದಾಗಿ ಕ್ಲೇಮು ಮಾಡಿದ್ದರೆ) | |
| 5 | ಭದ್ರತಾ ಠೇವಣಿ (ಇಡಲಾಗಿದೆಯೇ) | |
| 6 | ಪ್ರತಿಜ್ಞೆ/ ಪ್ರಮಾಣವಚನ (ತೆಗೆದುಕೊಂಡಿದ್ದರೆ) | |

ದಾಖಲ್ಮಾಡಲಾಗಿಲ್ಲದಿರುವ ಕೆಳಕಂಡ ದಸ್ತಾವೇಜುಗಳನ್ನು ಈ ಮುಂದೆ ಸೂಚಿಸಲಾದಂತೆ ದಾಖಲ್ಮಾಡತಕ್ಕದ್ದು.

(ಎ) ________________ ಅನ್ನು ____________ ಒಳಗೆ ದಾಖಲ್ಮಾಡತಕ್ಕದ್ದು;

(ಬಿ) ನಮೂನೆ 26ರಲ್ಲಿನ ಶಪಥಪತ್ರದಲ್ಲಿ ಮೇಲೆ ಹೇಳಲಾದ ಕಾಲಂಗಳನ್ನು ಖಾಲಿ ಬಿಡಲಾಗಿದೆ. ನೀವು, ನಾಮಪತ್ರಗಳ ಪರಿಶೀಲನೆಯು ಪ್ರಾರಂಭವಾಗುವುದಕ್ಕೆ ಮುಂಚೆ ಕ್ರಮವಾಗಿ ತುಂಬಲಾದ ಕಾಲಂಗಳೊಂದಿಗೆ ಹೊಸ ಶಪಥಪತ್ರವನ್ನು ಸಲ್ಲಿಸಬೇಕು. ಇದಕ್ಕೆ ತಪ್ಪಿದ್ದಲ್ಲಿ ನಾಮಪತ್ರವು ತಿರಸ್ಕರಿಸಲು ಹೊಣೆಯಾಗಿರುತ್ತದೆ;

(ಸಿ) ________________ ಅನ್ನು ____________ ಒಳಗೆ ದಾಖಲ್ಮಾಡತಕ್ಕದ್ದು.

_______________

ಸ್ವೀಕರಿಸಿದೆ.

_______________

(ಅಭ್ಯರ್ಥಿಯ ಸಹಿ) ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಸಹಿ

(ಸಹಿ)

ದಿನಾಂಕ ಮತ್ತು ಸಮಯ:

ಸ್ಥಳ:

**ವಿಶೇಷ ಸೂಚನೆ:–**

1. ನಮೂನೆ 26ರಲ್ಲಿ ಶಪಥಪತ್ರ, ನಮೂನೆಗಳು ಎ ಮತ್ತು ಬಿ ಇವುಗಳನ್ನು ನಾಮಪತ್ರಗಳನ್ನು ಸಲ್ಲಿಸುವ ಕಡೆಯ ದಿನಾಂಕದಂದು ಮಧ್ಯಾಹ್ನ 3:00 ಗಂಟೆಯೊಳಗೆ ಸಲ್ಲಿಸಬೇಕಾಗುತ್ತದೆ.
2. ನಮೂನೆ 26ರಲ್ಲಿರುವ ಅಫಿಡವಿಟ್‌ನಲ್ಲಿನ ಅಂಕಣಗಳು ಖಾಲಿ ಉಳಿದಿದ್ದರೆ, ಬಾಬ್ತು 1ರ ಎದುರು ಅದನ್ನು ನಿರ್ದಿಷ್ಟಪಡಿಸಬೇಕು ಮತ್ತು ನಾಮಪತ್ರಗಳ ಪರಿಶೀಲನೆ ಪ್ರಾರಂಭಗೊಳಿಸುವುದಕ್ಕೆ ನಿಗದಿಪಡಿಸಿರುವ ಸಮಯದೊಳಗೆ ಇತ್ತೀಚಿನ ಎಲ್ಲಾ ವಿಷಯಗಳನ್ನು ಭರ್ತಿ ಮಾಡಿ ಒಂದು ಪರಿಪೂರ್ಣ ಅಫಿಡವಿಟ್ ಅನ್ನು ಸಲ್ಲಿಸಲು ಅಭ್ಯರ್ಥಿಗೆ ಹೇಳಬೇಕು/ ಸೂಚಿಸಬೇಕು. ರಿಟರ್ನಿಂಗ್ ಅಧಿಕಾರಿಯವರು ನೆನಪೋಲೆ ನೀಡಿದ ನಂತರವೂ ಸಹ, ಎಲ್ಲಾ ವಿಷಯಗಳಲ್ಲಿ ಪರಿಪೂರ್ಣ

ಪರಿಷ್ಕೃತ ಅಫಿಡವಿಟ್ ಅನ್ನು ಸಲ್ಲಿಸಲು ವಿಫಲತೆಯು, ನಾಮಪತ್ರವನ್ನು ತಿರಸ್ಕರಿಸಲು ಕಾರಣವಾಗುತ್ತದೆ.

3. ನಾಮಪತ್ರವನ್ನು ಸಲ್ಲಿಸಿದ ನಂತರ ಹಾಗೂ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕಕ್ಕೆ ಮುಂಚೆ ಪ್ರಮಾಣವನ್ನು ಮಾಡಬೇಕಾಗುತ್ತದೆ.
4. ಮತದಾರರ ಪಟ್ಟಿಯ ಪ್ರಮಾಣೀಕೃತ ಉದ್ಧೃತ ಭಾಗವನ್ನು ಪರಿಶೀಲನೆಯ ಕಾಲದಲ್ಲಿ ಸಲ್ಲಿಸಬೇಕು.

**3.28.4.** ತಾಳೆಪಟ್ಟಿಯ ಎರಡೂ ಪ್ರತಿಗಳಿಗೆ ರಿಟರ್ನಿಂಗ್ ಅಧಿಕಾರಿಅಥವಾ ನಿರ್ದಿಷ್ಟಪಡಿಸಿದ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಹಾಗೂ ಅಭ್ಯರ್ಥಿಯು ಸಹಿ ಹಾಕತಕ್ಕದ್ದು. ತಾಳೆಪಟ್ಟಿಯ ದ್ವಿಪ್ರತಿಯನ್ನು ಅಭ್ಯರ್ಥಿಯು ದಾಖಲ್ಮಾಡಿದ ನಾಮಪತ್ರದೊಂದಿಗೆ ಇಟ್ಟುಕೊಂಡು ನಾಮಪತ್ರವನ್ನು ಸಲ್ಲಿಸಿರುವ ಅಭ್ಯರ್ಥಿ/ ಸೂಚಕರಿಗೆ ಮೂಲ ಪತ್ರಿಯನ್ನು ಹಸ್ತಾಂತರಿಸತಕ್ಕದ್ದು.

**3.28.5.** ನಾಮಪತ್ರವನ್ನು ಸಲ್ಲಿಸಿದ ತರುವಾಯ ದಸ್ತಾವೇಜನ್ನು ದಾಖಲ್ಮಾಡಿದ್ದರೆ ಹಾಗೂ ಮಾಡಿರುವಾಗ ಅವನ್ನು ದಾಖಲ್ಮಾಡಿದ ದಿನಾಂಕ ಮತ್ತು ಕಾಲವನ್ನು ಸ್ಪಷ್ಟವಾಗಿ ಹೇಳುವ ಮೂಲಕ ಅದರ ಪರಿಣಾಮವಾಗಿ ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಗೆ ಸ್ವೀಕೃತಿಯನ್ನು ನೀಡಬೇಕು.

## 3.29 ಅಭ್ಯರ್ಥಿಯ ಭಾವಚಿತ್ರ

3.29.1 ಪ್ರತಿಯೊಂದು ಚುನಾವಣೆಯಲ್ಲಿ, ಅಭ್ಯರ್ಥಿಗಳು ನಾಮಪತ್ರದೊಂದಿಗೆ ಅಗತ್ಯತೆ/ ನಿರ್ದಿಷ್ಟ ಸೂಚನೆಗಳಿಗೆ ಅನುಗುಣವಾಗಿ ತಮ್ಮ ಭಾವಚಿತ್ರ ಮತ್ತು ಯಾವುದೇ ಸಂದರ್ಭದಲ್ಲಿಯೂ ನಾಮಪತ್ರಗಳ ಪರಿಶೀಲನೆಗೆ ನಿರ್ದಿಷ್ಟಪಡಿಸಿದ ದಿನಾಂಕದೊಳಗಾಗಿ ಇತ್ತೀಚಿನ ಭಾವಚಿತ್ರವನ್ನು ಸಲ್ಲಿಸುವುದು ಅಗತ್ಯವಾಗಿರತಕ್ಕದ್ದು. ಭಾವಚಿತ್ರವು ಅದರ ಹಿಂಭಾಗದಲ್ಲಿ ಅಭ್ಯರ್ಥಿಯ/ ಚುನಾವಣಾ ಏಜೆಂಟನ ಸಹಿ ಹೊಂದಿರಬೇಕು ಭಾವಚಿತ್ರಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿರುವ ವಿವರಣೆಗಳು ಈ ಮುಂದಿನಂತಿವೆ:

i) ಅಭ್ಯರ್ಥಿಗಳು ಅವರ ಇತ್ತೀಚಿನ ಭಾವಚಿತ್ರವನ್ನು ಸಲ್ಲಿಸುವುದು ಅಗತ್ಯವಾಗಿರುತ್ತದೆ. (ಚುನಾವಣಾ ಅಧಿಸೂಚನೆಯ ದಿನಾಂಕಕ್ಕಿಂತ ಮುಂಚಿನ ಮೂರು ತಿಂಗಳ ಅವಧಿಯಲ್ಲಿ ತೆಗೆದಿರುವಂಥದ್ದು)

ii) ಭಾವಚಿತ್ರವು 2 ಸೆ.ಮೀ ×2.5 ಸೆ.ಮೀ ಸ್ಟಾಂಪ್ ಗಾತ್ರದ (2 ಸೆ.ಮೀ ಅಗಲ ಮತ್ತು 2.5 ಸೆ. ಮೀ ಎತ್ತರ) ಬಿಳಿ/ಅರೆಬಿಳಿ ಹಿನ್ನಲೆಯುಳ್ಳ ಕ್ಯಾಮೆರಾವನ್ನು ನೋಡುತ್ತಿರುವ ಪೂರ್ಣ

ಮುಖವುಳ್ಳ, ಕಣ್ಣುಗಳು ತೆರೆದಿರುವ ಸಹಜ ಮುಖಭಾವವುಳ್ಳದ್ದಾಗಿರಬೇಕು. ಭಾವಚಿತ್ರವು ಅಭ್ಯರ್ಥಿಯ ಅನುಕೂಲಕ್ಕೆ ತಕ್ಕಂತೆ ಬಣ್ಣದ ಅಥವಾ ಕಪ್ಪುಬಿಳುಪಿನದ್ದಾಗಿರಬಹುದು.

iii) ಭಾವಚಿತ್ರವು ಸಾಮಾನ್ಯ ಉಡುಪಿನಲ್ಲಿ ತೆಗೆಸಿದ್ದಾಗಿರಬೇಕು. ಸಮವಸ್ತ್ರದಲ್ಲಿರುವ ಭಾವಚಿತ್ರವನ್ನು ಅನುಮತಿಸುವುದಿಲ್ಲ. ಟೋಪಿಗಳನ್ನು, ಕಡು ಕಪ್ಪು ಕನ್ನಡಕಗಳನ್ನು ಸಹ ಹಾಕಿರಬಾರದು.

3.29.2. ಭಾವಚಿತ್ರವನ್ನು ಸಲ್ಲಿಸುವಾಗ ಭಾವಚಿತ್ರ ಸಲ್ಲಿಸುವ ಅಭ್ಯರ್ಥಿ/ ಚುನಾವಣಾ ಏಜೆಂಟ್/ ಸೂಚಕನು ಅದು ಕಳೆದ 3 ತಿಂಗಳ ಅವಧಿಯಲ್ಲಿ ತೆಗೆದುದಾಗಿದ್ದು, ಅದು ಅಭ್ಯರ್ಥಿಯ ಭಾವಚಿತ್ರವೇ ಆಗಿರುವುದನ್ನು ತಿಳಿಸುವ (ಹೆಸರು ಮತ್ತು ವಿಳಾಸವನ್ನು ಸೂಚಿಸಿ) ಘೋಷಣೆಯನ್ನು ಸಲ್ಲಿಸುವಂತೆ ಅವರನ್ನು ಕೇಳತಕ್ಕದ್ದು. ಘೋಷಣೆಯ ನಮೂನೆಯನ್ನು ಈ ಕೆಳಗೆ ನೀಡಿದೆ
(ಸೂಚನೆ 576/3/2015/ಎಸ್‌ಡಿಆರ್, ದಿನಾಂಕ: 16.03.2015 ಮತ್ತು 576/3/2015 ಎಸ್‌ಡಿಆರ್ ಸಂಪುಟ II ದಿನಾಂಕ: 21.05.2015).

**ಅಭ್ಯರ್ಥಿಯ ಭಾವಚಿತ್ರವನ್ನು ಸಲ್ಲಿಸುವಾಗ ಅಭ್ಯರ್ಥಿ/ ಚುನಾವಣಾ ಏಜೆಂಟ್/ ಸೂಚಕರು ಮಾಡಬೇಕಾದ ಘೋಷಣೆ**

ವಿಷಯ– ವಿಧಾನಸಭಾ ಸದಸ್ಯರಿಂದ ರಾಜ್ಯ ಸಭೆಗೆ/ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆ / ____________ (ಚುನಾವಣಾ ಕ್ಷೇತ್ರದ ಹೆಸರು) ಯಿಂದ ________________ (ಸಭೆಯ ಹೆಸರು ಸೂಚಿಸಿ)ಗೆ ನಡೆಯುವ ಚುನಾವಣೆ

ನಾನು, ________________________________________________ (ಹೆಸರು ಮತ್ತು ವಿಳಾಸ), ಶ್ರೀ ____________ ಇವರ ಮಗ/ಮಗಳು/ಪತ್ನಿಯಾಗಿದ್ದು ಮೇಲೆ ತಿಳಿಸಿರುವ ಚುನಾವಣೆಗೆ ಅಭ್ಯರ್ಥಿಯಾಗಿ ನಾಮ ನಿರ್ದೇಶಿತನಾಗಿದ್ದೇನೆ. ನನ್ನ ಭಾವಚಿತ್ರವನ್ನು ಮತಪತ್ರದ ಮೇಲೆ ಮುದ್ರಿಸುವ ಉದ್ದೇಶದಿಂದ ಅದನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ. ಈ ಭಾವಚಿತ್ರವನ್ನು ಚುನಾವಣಾ ಅಧಿಸೂಚನೆಯ ದಿನಾಂಕಕ್ಕಿಂತ ಮುಂಚಿನ ಮೂರು ತಿಂಗಳ ಅವಧಿಯಲ್ಲಿ ತೆಗೆಸಿರುವುದಾಗಿದೆಯೆಂದು ಘೋಷಿಸುತ್ತೇನೆ.

(ಅಭ್ಯರ್ಥಿಯು ಸ್ವತಃ ತಾನೇ ಭಾವಚಿತ್ರವನ್ನು ಸಲ್ಲಿಸುವಾಗ ಈ ಭಾಗವನ್ನು ಭರ್ತಿ ಮಾಡುವುದು)

ಅಥವಾ

ಮೇಲೆ ಸೂಚಿಸಿದ ಚುನಾವಣೆಯ ಅಭ್ಯರ್ಥಿಯಾದ, ಶ್ರೀ ____________ ಅವರ ಮಗ/ಮಗಳು/ಪತ್ನಿಯಾದ ಶ್ರೀ ______________ (ಅಭ್ಯರ್ಥಿಯ ಹೆಸರು ಮತ್ತು ವಿಳಾಸ) ಅವರಿಗೆ ನಾನು ____________(ಹೆಸರು) ಚುನಾವಣಾ ಏಜೆಂಟ್/ಸೂಚಕನಾಗಿದ್ದು, ಸದರಿ ಅಭ್ಯರ್ಥಿಯ ಭಾವಚಿತ್ರವನ್ನು ಮತಪತ್ರದ ಮೇಲೆ ಮುದ್ರಿಸುವ ಉದ್ದೇಶದಿಂದ ಅದನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ. ಈ ಭಾವಚಿತ್ರವನ್ನು ಚುನಾವಣಾ ಅಧಿಸೂಚನೆಯ ದಿನಾಂಕಕ್ಕಿಂತ ಮುಂಚಿನ ಮೂರು ತಿಂಗಳ ಅವಧಿಯಲ್ಲಿ ತೆಗೆಸಿರುವುದಾಗಿದೆಯೆಂದು ಘೋಷಿಸುತ್ತೇನೆ.

(ಚುನಾವಣಾ ಏಜೆಂಟ್/ಸೂಚಕನು ಭಾವಚಿತ್ರವನ್ನು ಸಲ್ಲಿಸುವಾಗ ಈ ಭಾಗವನ್ನು ಭರ್ತಿ ಮಾಡುವುದು)

ದಿನಾಂಕ:________________

ಹೆಸರು: ________________
ವಿಳಾಸ: ________________
ದೂ. ಸಂ. ______________

**3.30. ಮತದಾರರ ಪಟ್ಟಿಯಲ್ಲಿ ಅಥವಾ ನಾಮಪತ್ರದಲ್ಲಿ ತಪ್ಪುಗಳು, ಮುದ್ರಣದೋಷಗಳು, ಇತ್ಯಾದಿ:**

3.30.1. ಮತದಾರರ ಪಟ್ಟಿಯಲ್ಲಿ ಅಥವಾ ನಾಮಪತ್ರದಲ್ಲಿ ನಮೂದಿಸಿದ ಅಭ್ಯರ್ಥಿ ಅಥವಾ ಆತನ ಸೂಚಕ ಅಥವಾ ಯಾರೇ ಇತರ ವ್ಯಕ್ತಿಯ ಹೆಸರಿಗೆ ಸಂಬಂಧಿಸಿದಂತೆ ಅಥವಾ ಅದರಲ್ಲಿ ನಮೂದಿಸಿದ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ತಪ್ಪು ಪ್ರಯೋಗ, ಅಥವಾ ನಿಖರವಲ್ಲದ ವಿವರಣೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷ ಇರತಕ್ಕದಲ್ಲವೆಂದು ಮತ್ತು ಮತದಾರರ ಪಟ್ಟಿಯಲ್ಲಿನ ಅಥವಾ ನಾಮಪತ್ರದಲ್ಲಿನ ಅಭ್ಯರ್ಥಿ ಅಥವಾ ಆತನ ಸೂಚಕ ಅಥವಾ ಯಾರೇ ಇತರ ವ್ಯಕ್ತಿಗೆ ಸಂಬಂಧಿಸಿದ ಮತದಾರರ ಪಟ್ಟಿಯ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವು ಮತದಾರರ ಪಟ್ಟಿ ಅಥವಾ ನಾಮಪತ್ರದ ಸಂಪೂರ್ಣ ಕಾರ್ಯನಿರ್ವಹಣೆಗೆ ಬಾಧಕವಾಗತಕ್ಕದ್ದಲ್ಲವೆಂದು ಕಾನೂನು ತಿಳಿಸುತ್ತದೆ. ಅಲ್ಲದೆ, ಯಾವುದೇ ಅಂಥ ತಪ್ಪು ಪ್ರಯೋಗ, ನಿಖರವಲ್ಲದ ವಿವರಣೆ ಅಥವಾ ದೋಷವನ್ನು ಸರಿಪಡಿಸುವುದಕ್ಕೆ ಅನುಮತಿ ನೀಡುವಂತೆ ಅಥವಾ ಅಗತ್ಯವಿದ್ದಲ್ಲಿ, ಮತದಾರರ ಪಟ್ಟಿ ಅಥವಾ ನಾಮಪತ್ರದಲ್ಲಿ ಆಗಿರುವ ಅಂಥ ತಪ್ಪು ಪ್ರಯೋಗ ನಿಖರವಲ್ಲದ ವಿವರಣೆ ಅಥವಾ ದೋಷವನ್ನು ಕಡೆಗಣಿಸುವಂತೆಯೂ ಸಹ ರಿಟರ್ನಿಂಗ್ ಅಧಿಕಾರಿಯನ್ನು ಕಾನೂನು ಅಗತ್ಯಪಡಿಸುತ್ತದೆ. ಮತದಾರರ ಪಟ್ಟಿಯಲ್ಲಿ ಅಥವಾ ನಾಮಪತ್ರದಲ್ಲಿ ನಿಮ್ಮ ಹೆಸರು ಅಥವಾ ನಿಮ್ಮ ಸೂಚಕರು ಅಥವಾ ಇತರ ಯಾರೇ ವ್ಯಕ್ತಿಯ ಹೆಸರಿಗೆ ಸಂಬಂಧಿಸಿದಂತೆ ಅಥವಾ ಉಳಿದ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಅಂಥ ತಪ್ಪು ಪ್ರಯೋಗ ಅಥವಾ ನಿಖರವಲ್ಲದ ವಿವರಣೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವು ಆಗದಿರುವಂತೆ ಸೂಕ್ತ ಎಚ್ಚರಿಕೆ ವಹಿಸುವಂತೆ ಈಗಲೂ ಸಹ ನಿಮಗೆ ಸೂಕ್ತ ಸಲಹೆ ನೀಡಲಾಗಿದೆ. ಅಭ್ಯರ್ಥಿಯಾಗಿ ನಿಲ್ಲಲು ನೀವು ಸಾಕಷ್ಟು ಮುಂಚಿತವಾಗಿಯೇ ನಿರ್ಧರಿಸಬೇಕು ಎಂಬ ಭಾವನೆಯ ಕಾರಣದಿಂದ ನಿಮ್ಮ ಹೆಸರು ಮತ್ತು ನಿಮ್ಮ ಸೂಚಕರ ಹೆಸರು ಇರುವ ಮತದಾರರ ಪಟ್ಟಿಗಳನ್ನು, ಚುನಾವಣೆಗೆ ಆದೇಶ ಹೊರಡಿಸುವ ಮುಂಚೆ ಸಾಕಷ್ಟು ಮುಂಚಿತವಾಗಿಯೇ ಪರಿಶೀಲಿಸುವಂತೆ ನಿಮಗೆ ತಿಳಿಸಲಾಗಿದೆ. ಚುನಾವಣೆಗಾಗಿ ಆದೇಶ ಹೊರಡಿಸುವ ಮುಂಚಿತವಾಗಿ ಮತದಾರರ ಪಟ್ಟಿಯನ್ನು ಪರಿಶೀಲಿಸಿದ ನಂತರ ಮತದಾರರ ಪಟ್ಟಿಯಲ್ಲಿ ನಿಮಗೆ ಅಥವಾ ನಿಮ್ಮ ಸೂಚಕರಿಗೆ ಅಥವಾ ಯಾರೇ ವ್ಯಕ್ತಿಗೆ (ಉದಾ:– ನಿಮ್ಮ ತಂದೆಯ ಹೆಸರು) ಅಥವಾ ಭಾವಚಿತ್ರದ ವ್ಯತ್ಯಾಸ ಅಥವಾ ಇತರ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ತಪ್ಪು ಪ್ರಯೋಗ, ನಿಖರವಲ್ಲದ ವಿವರಣೆ ಅಥವಾ ಯಾವುದೇ ದೋಷ ನಿಮಗೆ ಕಂಡುಬಂದರೆ, ನಂತರ ನೀವು ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ 22ನೇ ಪ್ರಕರಣದ ಅಡಿಯಲ್ಲಿ ದೋಷ, ಇತ್ಯಾದಿಗಳನ್ನು

ಸರಿಪಡಿಸುವುದಕ್ಕಾಗಿ ಮತ್ತು 23ನೇ ಪ್ರಕರಣದ ಅಡಿಯಲ್ಲಿ ನಿಮ್ಮ ಹೆಸರು ಅಥವಾ ನಿಮ್ಮ ಸೂಚಕರ ಹೆಸರು, ಇತ್ಯಾದಿಯನ್ನು ಸೇರ್ಪಡೆಗೊಳಿಸುವುದಕ್ಕಾಗಿ ಶೀಘ್ರ ಕ್ರಮಗಳನ್ನು ಕೈಗೊಳ್ಳಬೇಕು.

### 3.31. ನಾಮಪತ್ರಕ್ಕೆ ಸ್ವೀಕೃತಿ ಮತ್ತು ಪರಿಶೀಲನೆಗಾಗಿ ನೋಟೀಸು ಮತ್ತು ಚಿಹ್ನೆಗಳ ಹಂಚಿಕೆ

3.31.1. ನಾಮಪತ್ರವನ್ನು ಯಾರ ಮುಂದೆ ಸಲ್ಲಿಸಲಾಗುತ್ತದೆಯೋ, ಆ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ನಾಮಪತ್ರದ ಒಂದು ಭಾಗದಲ್ಲಿ ವಿಲೆ ಪ್ರಮಾಣಪತ್ರವನ್ನು ತುಂಬಿ ಅದಕ್ಕೆ ಸಹಿ ಮಾಡುವಂತೆ ಅಗತ್ಯಪಡಿಸುವುದನ್ನು ನೀವು ನಾಮಪತ್ರದ ನಮೂನೆಯಿಂದ ಕಂಡುಕೊಳ್ಳಬಹುದು. ನಾಮಪತ್ರವನ್ನು ಸಲ್ಲಿಸುವಾಗ ನಾಮಪತ್ರವನ್ನು ಯಾರ ಮುಂದೆ ಸಲ್ಲಿಸಲಾಗುತ್ತದೆಯೋ ಆ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ನಿಮ್ಮ ಸಮ್ಮುಖದಲ್ಲಿ ನಾಮಪತ್ರದ ಕ್ರಮಸಂಖ್ಯೆಯನ್ನು ನಮೂದಿಸಿದ್ದಾರೆ ಮತ್ತು ವಿಲೆ ಪ್ರಮಾಣಪತ್ರದ ನಮೂನೆಯನ್ನು ಭರ್ತಿಮಾಡಿ ಅದಕ್ಕೆ ಸಹಿ ಹಾಕಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

3.31.2. ನಾಮಪತ್ರವನ್ನು ಯಾರ ಮುಂದೆ ಸಲ್ಲಿಸಲಾಗುತ್ತದೆಯೋ ಆ ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ನಿಮಗೆ ಅಥವಾ ನಾಮಪತ್ರವನ್ನು ನೀಡಿದ ನಿಮ್ಮ ಸೂಚಕರಿಗೆ ನಾಮಪತ್ರಗಳನ್ನು ಪರಿಶೀಲಿಸುವುದಕ್ಕೆ ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಸ್ಥಳದ ಲಿಖಿತ ಸೂಚನೆಯನ್ನು ಒಳಗೊಂಡಿರುವ ಸ್ವೀಕೃತಿಯನ್ನು ನೀಡುವ ಅಗತ್ಯತೆಯು ನಾಮಪತ್ರದಿಂದ ನಿಮಗೆ ತಿಳಿದು ಬರುತ್ತದೆ. ನಾಮಪತ್ರ ಸಲ್ಲಿಸಿದ್ದಕ್ಕೆ ನೀಡುವ ಸ್ವೀಕೃತಿ ಪತ್ರವು ಪರಿಶೀಲನೆಗೆ ನಿಗದಿಪಡಿಸಿದ ಸಮಯ, ದಿನಾಂಕ ಮತ್ತು ಸ್ಥಳದ ವಿವರವನ್ನು ಸಹ ಒಳಗೊಂಡಿದ್ದು ಅಂಥ ಸ್ವೀಕೃತಿ ಪತ್ರ ಪಡೆದುಕೊಳ್ಳುವುದನ್ನು ಮರೆಯಬಾರದು ಅಥವಾ ನಿರ್ಲಕ್ಷಿಸಬಾರದು. ಈ ಎಲ್ಲವೂ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 35ನೇ ಪ್ರಕರಣದಲ್ಲಿ ಒಳಗೊಂಡಿರುವ ಶಾಸನಾತ್ಮಕ ಅಗತ್ಯತೆಗಳಾಗಿವೆ. ಆದ್ದರಿಂದ ನೀವು ನಾಮಪತ್ರವನ್ನು ಯಾರಿಗೆ ಸಲ್ಲಿಸಿದ್ದೀರೋ ಆ ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ನಾಮಪತ್ರದಲ್ಲಿ ನೀಡಲಾಗಿರುವ ನಮೂನೆಯಲ್ಲಿ ಸಲ್ಲಿಕೆ ಪ್ರಮಾಣಪತ್ರವನ್ನು (Certificate of delivery) ನಿಮ್ಮ ಸಮ್ಮುಖದಲ್ಲಿ ಸೂಕ್ತ ರೀತಿಯಲ್ಲಿ ಮಾಡಿದ್ದಾರೆಂಬುದನ್ನು ನೋಡಿಕೊಳ್ಳಿ ಮತ್ತು ಅವರಿಂದ ನಾಮಪತ್ರದ ಸ್ವೀಕೃತಿ ಪತ್ರವನ್ನು ಕೇಳುವುದಕ್ಕೆ ಸಂಕೋಚ ಪಡಬೇಡಿ, ನೀವು ಅಥವಾ ನಿಮ್ಮ ಸೂಚಕರು ನಾಮಪತ್ರವನ್ನು ಸಲ್ಲಿಸಿ ಆ ಸ್ಥಳದಿಂದ ಹೋಗುವ ಮುಂಚೆ ನಿಮಗೆ ಆ ಸ್ವೀಕೃತಿಯನ್ನು ಕೊಡುವುದು ಅವರ ಬದ್ಧ ಕರ್ತವ್ಯವಾಗಿರುತ್ತದೆ.

3.31.3. ನಾಮಪತ್ರಗಳ ಪರಿಶೀಲನೆಗೆ ಸಂಬಂಧಪಟ್ಟ ಮೇಲ್ಕಂಡ ನೋಟೀಸಿನ ಜೊತೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಯನ್ನು ಹಂಚಿಕೆ ಮಾಡುವ ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಮತ್ತೊಂದು ನೋಟೀಸನ್ನು ಕೂಡ ನಿಮಗೆ ನೀಡುವಂತೆ ರಿಟರ್ನಿಂಗ್ ಅಧಿಕಾರಿಗೆ ಆಯೋಗವು ನಿರ್ದೇಶಿಸಿದೆ. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ನಿಮ್ಮ ಹೆಸರು ಸೇರ್ಪಡೆಯಾಗಿದ್ದರೆ ಚಿಹ್ನೆಗಳನ್ನು ಹಂಚಿಕೆ ಮಾಡುವ ಸಮಯದಲ್ಲಿ ನೀವು ಹಾಜರು ಪಡಿಸಬೇಕಾಗುವುದರಿಂದ ನೀವು ಆ ನೋಟೀಸನ್ನು ಪಡೆದುಕೊಳ್ಳಬೇಕು.

## 3.32. ನಾಮಪತ್ರಗಳ ನೋಟೀಸುಗಳ ಪರಿಶೀಲನೆ

3.32.1. ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ಪ್ರತಿಯೊಂದು ದಿನಾಂಕಗಳಂದು, 35ನೇ ಪ್ರಕರಣದ ಅಡಿಯಲ್ಲಿ ರಿಟರ್ನಿಂಗ್ ಅಧಿಕಾರಿಯು, ತಾನು ಸ್ವೀಕರಿಸಿದ ನಾಮಪತ್ರಗಳ ನೋಟೀಸನ್ನು ತನ್ನ ಕಚೇರಿಯ ಕೆಲವು ಎದ್ದು ಕಾಣುವ ಸ್ಥಳಗಳಲ್ಲಿ ಹಾಕುವಂತೆ ಮಾಡಲು ಅಗತ್ಯಪಡಿಸಲಾಗಿದೆ. ಈ ನೋಟೀಸು ಚುನಾವಣೆಗಳನ್ನು ನಡೆಸುವ ಪ್ರಕ್ರಿಯೆ ನಿಯಮಗಳು, 1961ಕ್ಕೆ ಲಗತ್ತಿಸಿದ ನಮೂನೆ–3ಎನಲ್ಲಿರುತ್ತದೆ. ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಮೇಲೆ ತಿಳಿಸಲಾದಂತೆ ಕಾನೂನಿನ ಅಡಿಯಲ್ಲಿ ತನ್ನ ಕಚೇರಿಯ ಕೆಲವು ಎದ್ದು ಕಾಣುವ ಸ್ಥಳದಲ್ಲಿ ಹಾಕಿರುವ, ನಾಮಪತ್ರಗಳನ್ನು ಸಲ್ಲಿಸಿರುವ ವಿವಿಧ ಅಭ್ಯರ್ಥಿಗಳಿಗೆ ಸಂಬಂಧಿಸಿದ ಅಂಥ ನಾಮಪತ್ರಗಳ ನೋಟೀಸುಗಳನ್ನು ನಿಮ್ಮ ಎದುರು ಅಭ್ಯರ್ಥಿಗಳ ನಾಮಪತ್ರಗಳಲ್ಲಿ ಏನಾದರೂ ದೋಷವಿದೆಯೇ ಎಂದು ಕಂಡುಕೊಳ್ಳಲು ಅಧ್ಯಯನ ಮಾಡುವಂತೆ ಮತ್ತು ಪರಿಶೀಲಿಸುವಂತೆ ನಿಮಗೆ ಸೂಚಿಸಲಾಗಿದೆ. ಅಂಥ ದೋಷಗಳೇನಾದರೂ ನಿಮಗೆ ಕಂಡುಬಂದರೆ, ಆಗ ನೀವು ಇಚ್ಛೆ ಪಟ್ಟರೆ, ನಾಮಪತ್ರಗಳ ಪರಿಶೀಲನೆಯ ಸಮಯದಲ್ಲಿ ನಿಮ್ಮ ಯಾರೇ ಎದುರಾಳಿ ಅಭ್ಯರ್ಥಿಗಳ ವಿರುದ್ಧ ನೀವು ಆಕ್ಷೇಪಣೆಯನ್ನು ಸಲ್ಲಿಸಬಹುದು.

# 4. ನಾಮಪತ್ರಗಳ ಪರಿಶೀಲನೆ

## 4.1. ನಾಮಪತ್ರಗಳ ಪರಿಶೀಲನೆಯನ್ನು ಯಾರ ಮೂಲಕ ಮಾಡಿಸಬೇಕು

4.1.1. ನೀವು ನಾಮಪತ್ರವನ್ನು ಸಲ್ಲಿಸಿದ್ದೀರಿ ಮತ್ತು ಇತರ ಅಭ್ಯರ್ಥಿಗಳೂ ಸಹ ಹಾಗೆಯೇ ಸಲ್ಲಿಸಿರುತ್ತಾರೆ. ಚುನಾವಣಾ ಪ್ರಕ್ರಿಯೆಯ ಮುಂದಿನ ಹಂತವು ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳನ್ನು ಪರಿಶೀಲಿಸುವುದಾಗಿದೆ. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 30ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಚುನಾವಣಾ ವೇಳಾಪಟ್ಟಿಯಲ್ಲಿ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ರಿಟರ್ನಿಂಗ್ ಅಧಿಕಾರಿಯು ಸ್ವೀಕರಿಸಿದ ಎಲ್ಲಾ ನಾಮಪತ್ರಗಳನ್ನು ಪರಿಶೀಲನೆ ಮಾಡುವಂತೆ ಕಾನೂನಿನ ಮೂಲಕ ಆತನನ್ನು ಅಗತ್ಯಪಡಿಸಲಾಗಿರುತ್ತದೆ.

4.1.2. ನಾಮಪತ್ರಗಳ ಪರಿಶೀಲನೆಯು ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ನಿಗದಿಯಾದ ಕೊನೆಯ ದಿನಾಂಕ ಮುಗಿದ ಮಾರನೆಯ ದಿನವೇ ನಡೆಯುತ್ತದೆ. ಆದ್ದರಿಂದ ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ಇಂದು ಕೊನೆಯ ದಿನಾಂಕವಾಗಿದ್ದರೆ, ನಾಳೆ ನಾಮಪತ್ರಗಳ ಪರಿಶೀಲನೆಯ ದಿನಾಂಕವಾಗುತ್ತದೆ. ಆದರೆ ನಾಳೆಯೇನಾದರೂ ಸಾರ್ವಜನಿಕ ರಜೆಯಾಗಿದ್ದರೆ, ಆಗ ನಾಮಪತ್ರಗಳ ಪರಿಶೀಲನೆಯು ನಾಳಿದ್ದು, ಸಾರ್ವಜನಿಕ ರಜಾದಿನವಲ್ಲದಿದ್ದರೆ ಅಂದು ನಡೆಯುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ನಾಮಪತ್ರಗಳ ಪರಿಶೀಲನೆಯು ಈಗಾಗಲೇ ತಿಳಿಸಿರುವಂತೆ ಸಾರ್ವಜನಿಕ ರಜಾ ದಿನದಂದು ನಡೆಯುವಂತಿಲ್ಲ.

4.1.3. ನಾಮಪತ್ರಗಳ ಪರಿಶೀಲನೆಯನ್ನು ರಿಟರ್ನಿಂಗ್ ಅಧಿಕಾರಿಯು ಮಾತ್ರವೇ ನಡೆಸಬಹುದಾಗಿದೆ. ಈ ಕಾರ್ಯವನ್ನು ರಿಟರ್ನಿಂಗ್ ಅಧಿಕಾರಿಯು ಸಹಾಯಕ ರಿಟರ್ನಿಂಗ್ ಅಧಿಕಾರಿಗೂ ಕೂಡ ಪ್ರತ್ಯಾಯೋಜಿಸಲಾಗದು. ಒಂದೇ ಒಂದು ಅಪವಾದವೆಂದರೆ, ನಾಮಪತ್ರಗಳ ಪರಿಶೀಲನೆಗೆ ಸಂಬಂಧಿಸಿದ ಪ್ರಕಾರ್ಯವನ್ನು ನಿರ್ವಹಿಸುವುದರಿಂದ ರಿಟರ್ನಿಂಗ್ ಅಧಿಕಾರಿಯು ಅನಿವಾರ್ಯವಾಗಿ ನಿರ್ಬಂಧಿತವಾಗಿದ್ದಾಗ ಮಾತ್ರವೇ ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳನ್ನು ಪರಿಶೀಲಿಸುವುದಕ್ಕೆ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಅಧಿಕಾರ ನೀಡಬಹುದು (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 22(2) ನೇ ಪ್ರಕರಣದ ಪರಂತುಕವನ್ನು ನೋಡಿ).

## 4.2. ನಾಮಪತ್ರಗಳ ಪರಿಶೀಲನೆಗೆ ಯಾರು ಹಾಜರಾಗಬಹುದು

4.2.1. ಕಾನೂನು ರೀತ್ಯಾ ಪ್ರತಿಯೊಬ್ಬ ಅಭ್ಯರ್ಥಿಯ ಸಂದರ್ಭದಲ್ಲಿ, ನಾಲ್ವರು ವ್ಯಕ್ತಿಗಳು ಮಾತ್ರ ಪರಿಶೀಲನಾ ಸ್ಥಳಕ್ಕೆ ಹಾಜರಾಗಬಹುದು. ಈ ನಾಲ್ವರು ವ್ಯಕ್ತಿಗಳು ಯಾರೆಂದರೆ:

(1) ಅಭ್ಯರ್ಥಿ (2) ಅಭ್ಯರ್ಥಿಯ ಚುನಾವಣಾ ಏಜೆಂಟ್ (3) ಅಭ್ಯರ್ಥಿಯ ಒಬ್ಬ ಸೂಚಕ ಮತ್ತು (4) ಅಭ್ಯರ್ಥಿಯು ಲಿಖಿತವಾಗಿ ಅಧಿಕೃತಗೊಳಿಸಿದ ಬೇರೊಬ್ಬ ವ್ಯಕ್ತಿ. ಅಭ್ಯರ್ಥಿಯು ಒಂದೇ ಕ್ಷೇತ್ರದಿಂದ ಗರಿಷ್ಠ ಸಂಖ್ಯೆಯ ನಾಮಪತ್ರಗಳನ್ನು ಸಲ್ಲಿಸಿದ್ದರೂ ಕೂಡ, ಎಂದರೆ, ನಾಲ್ಕು ನಾಮಪತ್ರಗಳು ಮತ್ತು ಬೇರೆ ಬೇರೆ ಸೂಚಕರು ಇದ್ದರೂ ಸಹ, ಪರಿಶೀಲನೆಯ ಸಮಯದಲ್ಲಿ ಒಬ್ಬ ಸೂಚಕನು ಮಾತ್ರ ಹಾಜರಿರಬಹುದು. ಉದಾಹರಣೆಗೆ, ಒಂದು ನಿರ್ದಿಷ್ಟ ಕ್ಷೇತ್ರದಿಂದ ನಾಮಪತ್ರಗಳನ್ನು ಸಲ್ಲಿಸಿರುವ ಹತ್ತು ಅಭ್ಯರ್ಥಿಗಳಿದ್ದರೆ, ಆಗ ಪರಿಶೀಲನೆಯಲ್ಲಿ ಎಲ್ಲ ನಲವತ್ತು ಜನರು ಹಾಜರಿರಬಹುದು. ಪರಿಶೀಲನೆಯ ಸಮಯದಲ್ಲಿ ನೀವು ಲಿಖಿತವಾಗಿ ಅಧಿಕೃತಗೊಳಿಸಬೇಕಾದ ನಾಲ್ಕನೆಯ ವ್ಯಕ್ತಿಯು ಚುನಾವಣಾ ಕಾನೂನಿನ ಬಗ್ಗೆ ತಿಳಿದಿರುವ ವಕೀಲರಾಗಿದ್ದರೆ ಉತ್ತಮ. ಏಕೆಂದರೆ ಪರಿಶೀಲನೆಯ ಸಮಯದಲ್ಲಿ ಅವರು ಅಭ್ಯರ್ಥಿಯ ಹಿತಾಸಕ್ತಿಯನ್ನು ಕಾಯಬಹುದು. ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಯು ಹಾಜರಿರುವುದು ಅವರವರ ಹಿತಾಸಕ್ತಿಗೆ ಬಿಟ್ಟ ವಿಷಯವಾಗಿದೆ.

## 4.3. ನಾಮಪತ್ರಗಳ ಪರಿಶೀಲನೆಗಾಗಿ ಯುಕ್ತ ಸೌಲಭ್ಯಗಳು

4.3.1. ಪರಿಶೀಲನೆಯ ಸಮಯದಲ್ಲಿ (ಅಭ್ಯರ್ಥಿಯೂ ಸೇರಿದಂತೆ) ಅವರ ಪರವಾಗಿ ಹಾಜರಿರಬಹುದಾದ ನಾಲ್ವರು ವ್ಯಕ್ತಿಗಳು ರಿಟರ್ನಿಂಗ್ ಅಧಿಕಾರಿಯು ಪರಿಶೀಲನೆಗಾಗಿ ಕೈಗೆತ್ತಿಕೊಳ್ಳುವ ಎಲ್ಲಾ ಅಭ್ಯರ್ಥಿಗಳ ನಾಮಪತ್ರಗಳ ಪರಿಶೀಲನೆಗಾಗಿ ಹೊಂದಬಹುದಾದ ಎಲ್ಲಾ ಯುಕ್ತ ಸೌಲಭ್ಯಗಳನ್ನು ಹೊಂದಿರತಕ್ಕದ್ದು. ಇದು ಅಭ್ಯರ್ಥಿಗೂ ಮತ್ತು ಅವರೊಂದಿಗೆ ಹಾಜರಿರಬಹುದಾದ ಇತರ ಮೂವರು ವ್ಯಕ್ತಿಗಳಿಗೂ, ಎಂದರೆ, ಅಭ್ಯರ್ಥಿಯ ಚುನಾವಣಾ ಏಜೆಂಟ್, ಅಭ್ಯರ್ಥಿಯ ಒಬ್ಬ ಸೂಚಕರು ಮತ್ತು ಅಭ್ಯರ್ಥಿಯು ಅಧಿಕೃತಗೊಳಿಸುವ ವ್ಯಕ್ತಿ ಇವರಿಗೆ ಇರುವ ಮೌಲ್ಯಯುತ ಹಕ್ಕಾಗಿರುತ್ತದೆ.

## 4.4. ಎತ್ತಬಹುದಾದ ಆಕ್ಷೇಪಣೆಗಳು

4.4.1. ಅಭ್ಯರ್ಥಿಯು ಯಾವುದೇ ನಾಮಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಹುರುಳಿಲ್ಲದ ಅಥವಾ ತಾಂತ್ರಿಕ ಆಕ್ಷೇಪಣೆಗಳನ್ನು ಎತ್ತಬಾರದು. ಅದೇ ರೀತಿ, ಅಭ್ಯರ್ಥಿಯ ನಾಮಪತ್ರದ ವಿರುದ್ಧ ಎತ್ತುವ

ಹುರುಳಿಲ್ಲದ ಅಥವಾ ತಾಂತ್ರಿಕ ಆಧಾರದ ಮೇಲಿನ ಯಾವುದೇ ಆಕ್ಷೇಪಣೆಯನ್ನು ಅಭ್ಯರ್ಥಿಯಾಗಲೀ ಅಥವಾ ಅವರನ್ನು ಪ್ರತಿನಿಧಿಸುವ ವ್ಯಕ್ತಿಯಾಗಲಿ ವಿರೋಧಿಸಬೇಕು. ರಿಟರ್ನಿಂಗ್ ಅಧಿಕಾರಿಯು ಮಹತ್ವದ ಸ್ವರೂಪದ್ದಲ್ಲದ ಯಾವುದೇ ನ್ಯೂನ್ಯತೆಯ ಆಧಾರದ ಮೇಲೆ, ಯಾವುದೇ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲವೆಂದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 36(4)ನೇ ಪ್ರಕರಣವು ಸ್ಪಷ್ಟವಾಗಿ ವಿಧಿಸಿದೆ. ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 4ನೇ ನಿಯಮವು ನಾಮಪತ್ರದಲ್ಲಿ ಚಿಹ್ನೆಗಳಿಗೆ ಸಂಬಂಧಿಸಿದ ಘೋಷಣೆಯನ್ನು ಸಂಪೂರ್ಣಗೊಳಿಸಲು ತಪ್ಪಿರುವುದು ಅಥವಾ ಅದನ್ನು ಸಂಪೂರ್ಣಗೊಳಿಸುವಲ್ಲಿ ನ್ಯೂನ್ಯತೆಯಾಗಿರುವುದು ಮಹತ್ವದ ಸ್ವರೂಪದ ನ್ಯೂನ್ಯತೆಯಲ್ಲವೆಂದು ವಿಧಿಸಿದೆ. ಆದ್ದರಿಂದ, ನಿಮ್ಮ ವಿರೋಧಿ ಅಭ್ಯರ್ಥಿಗಳಲ್ಲಿ ಯಾರೇ ಒಬ್ಬರು ಮಹತ್ವದ ಸ್ವರೂಪದ್ದಲ್ಲದ ನ್ಯೂನ್ಯತೆಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಯನ್ನು ಎತ್ತಿದರೆ, ಅಭ್ಯರ್ಥಿ ಅಥವಾ ಅವರ ಪರವಾಗಿ ಹಾಜರಿರಬಹುದಾದ ಯಾರೇ ವ್ಯಕ್ತಿಗಳು ಅದನ್ನು ವಿರೋಧಿಸಬಹುದು. ನಾಮಪತ್ರವನ್ನು ಸಲ್ಲಿಸಿದ ಮೇಲೆ ರಿಟರ್ನಿಂಗ್ ಅಧಿಕಾರಿಯು ನಾಮಪತ್ರದಲ್ಲಿ ನಮೂದಿಸಲಾದ ಅಭ್ಯರ್ಥಿ ಮತ್ತು ಆತನ ಸೂಚಕನ ಹೆಸರುಗಳು ಮತ್ತು ಮತದಾರರ ಪಟ್ಟಿಯ ಸಂಖ್ಯೆಗಳು ಮತದಾರರ ಪಟ್ಟಿಗಳಲ್ಲಿ ನಮೂದಿಸಿರುವುದೇ ಆಗಿದೆಯೆಂಬುದನ್ನು ಸ್ವತಃ ಮನವರಿಕೆ ಮಾಡಿಕೊಳ್ಳಬೇಕು ಎಂಬುದನ್ನು ಈಗಾಗಲೇ ತಿಳಿಸಲಾಗಿದೆ. ಆದ್ದರಿಂದ, ರಿಟರ್ನಿಂಗ್ ಅಧಿಕಾರಿಯು ಮತದಾರರ ಪಟ್ಟಿಯಲ್ಲಿ ಅಥವಾ ನಾಮಪತ್ರದಲ್ಲಿ ನಮೂದಿಸಿದ ಅಭ್ಯರ್ಥಿಯ ಹೆಸರು ಅಥವಾ ಅವರ ಸೂಚಕರ ಅಥವಾ ಇತರ ಯಾವುದೇ ವ್ಯಕ್ತಿಯ ಹೆಸರಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಸ್ಥಳ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಯಾವುದೇ ತಪ್ಪುಪ್ರಯೋಗ ಅಥವಾ ಯಾವುದೇ ನಿಖರವಲ್ಲದ ವಿವರಣೆ ಅಥವಾ ಲಿಪಿಕ ಅಥವಾ ತಾಂತ್ರಿಕ ಅಥವಾ ಮುದ್ರಣ ದೋಷದ ಆಧಾರದ ಮೇಲೆ ಅವರ ನಾಮಪತ್ರವನ್ನು ತಿರಸ್ಕರಿಸುವಂತಿಲ್ಲ. ಆದರೆ, ಯಾವುದೇ ಹೆಸರು ಮತ್ತು ಸ್ಥಳಕ್ಕೆ ಸಂಬಂಧಿಸಿದಂಥ ವಿವರಣೆಯು ಎಲ್ಲರಿಗೂ ತಿಳಿದಿರುವಂಥದ್ದೇ ಆಗಿರುತ್ತದೆ. ಪರಿಶೀಲನೆಯ ಸಮಯದಲ್ಲಿ ಅಂಥ ತಪ್ಪು ಪ್ರಯೋಗ ಅಥವಾ ನಿಖರವಲ್ಲದ ವಿವರಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಯಾವುದೇ ಆಕ್ಷೇಪಣೆಗಳು ಉದ್ಭವವಾದರೆ, ಆ ಕೂಡಲೇ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 33(4)ನೇ ಪ್ರಕರಣದ ಪರಂತುಕದ ಕಡೆಗೆ ಗಮನ ಸೆಳೆಯಬಹುದು.

4.4.2. ಅಭ್ಯರ್ಥಿಯ ನಾಮಪತ್ರದ ವಿರುದ್ಧ ಯಾವುದೇ ಆಕ್ಷೇಪಣೆಯನ್ನು ಎತ್ತಿದಾಗ, ಯಾವುದೇ ಹುರುಳಿಲ್ಲದ ಅಥವಾ ತಾಂತ್ರಿಕ ಕಾರಣದ ಮೇಲೆ ನಾಮಪತ್ರವನ್ನು ತಿರಸ್ಕರಿಸಬಾರದೆಂದು ರಿಟರ್ನಿಂಗ್ ಅಧಿಕಾರಿಯ ಮನವೊಲಿಸಲು ಪ್ರಯತ್ನಿಸಬೇಕು. ಅಭ್ಯರ್ಥಿಯ ಮತ್ತು ಸೂಚಕನ

ಗುರುತಿನ ಬಗ್ಗೆ ಆತನಿಗೆ ಮನವರಿಕೆಯಾದರೆ, ಆಗ ಆತನು, ಅಭ್ಯರ್ಥಿ ಅಥವಾ ಸೂಚಕನ ಹೆಸರಿನಲ್ಲಿ ಆಗಿರುವ ಯಾವುದೇ ತಾಂತ್ರಿಕ ದೋಷ ಅಥವಾ ನಿಖರವಲ್ಲದ ನಿರೂಪಣೆಯ ಅಥವಾ ಯಾವುದೇ ಸ್ಥಳದ ನಿಖರವಲ್ಲದ ನಿರೂಪಣೆಯ ಆಧಾರದ ಮೇಲೆ ಮಾತ್ರವೇ ನಾಮಪತ್ರವನ್ನು ತಿರಸ್ಕರಿಸಬಾರದು.

## 4.5. ನಾಮಪತ್ರವನ್ನು ತಿರಸ್ಕರಿಸಲು ಇರುವ ಕಾರಣಗಳು

4.5.1. ಈ ಕೆಳಕಂಡ ಕಾರಣಗಳ ಪೈಕಿ ಯಾವುದೇ ಒಂದು ಕಾರಣದ ಮೇಲೆ ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಿದಾಗ ಅದು ಸಮರ್ಥಿತವಾಗುತ್ತದೆ ಎಂಬುದನ್ನು ನೆನಪಿನಲ್ಲಿಡಿ:

i. ಲೋಕಸಭೆ ಅಥವಾ ರಾಜ್ಯ ವಿಧಾನಸಭೆಯ ಸದಸ್ಯನಾಗುವುದಕ್ಕೆ ಅಭ್ಯರ್ಥಿಗೆ ಸ್ಪಷ್ಟವಾದ ಅರ್ಹತೆಯಿಲ್ಲದಿರುವುದು; ಅಥವಾ

ii. ಅಂಥ ಸದಸ್ಯನಾಗಿರಲು ಅಭ್ಯರ್ಥಿಯು ಕಾನೂನಿನಲ್ಲಿ ಸ್ಪಷ್ಟವಾಗಿ ಅನರ್ಹತೆ ಹೊಂದಿರುವುದು; ಅಥವಾ

iii. ತಾವು ಸಂವಿಧಾನವು ಅಗತ್ಯಪಡಿಸಿರುವಂತೆ ಪ್ರಮಾಣವಚನ ಅಥವಾ ಪ್ರತಿಜ್ಞಾವಿಧಿ ತೆಗೆದುಕೊಳ್ಳದಿರುವುದು; ಅಥವಾ

iv. ತಮ್ಮ ನಾಮಪತ್ರವನ್ನು ಸಕಾಲದಲ್ಲಿ ಸಲ್ಲಿಸದಿರುವುದು; ಅಥವಾ

v. ಸ್ವತಃ ಅಭ್ಯರ್ಥಿಯು ಅಥವಾ ಅಭ್ಯರ್ಥಿಯ ಸೂಚಕರಲ್ಲದ ಬೇರೊಬ್ಬ ವ್ಯಕ್ತಿಯು ಅಭ್ಯರ್ಥಿಯ ನಾಮಪತ್ರವನ್ನು ರಿಟರ್ನಿಂಗ್ ಅಧಿಕಾರಿಗೆ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸುವುದು; ಅಥವಾ

vi. ರಿಟರ್ನಿಂಗ್ ಅಧಿಕಾರಿಯು ಹೊರಡಿಸಿದ ಸಾರ್ವಜನಿಕ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಅಭ್ಯರ್ಥಿಯ ನಾಮಪತ್ರವನ್ನು ಸಲ್ಲಿಸದಿರುವುದು; ಅಥವಾ

vii. ಅಭ್ಯರ್ಥಿಯ ನಾಮಪತ್ರವನ್ನು ರಿಟರ್ನಿಂಗ್ ಅಧಿಕಾರಿ ಅಥವಾ ಆತನಿಂದ ಅಧಿಕಾರ ಪಡೆದ ಯಾರೇ ಸಹಾಯಕ ರಿಟರ್ನಿಂಗ್ ಅಧಿಕಾರಿಯಲ್ಲದ ಬೇರೊಬ್ಬ ವ್ಯಕ್ತಿಗೆ ಸಲ್ಲಿಸಿರುವುದು; ಅಥವಾ

viii. ಅಭ್ಯರ್ಥಿಯ ನಾಮಪತ್ರವು ಮುಖ್ಯವಾಗಿ ನಿಗದಿತ ನಮೂನೆಯಲ್ಲಿಲ್ಲದಿರುವುದು; ಅಥವಾ

ix. ಅಭ್ಯರ್ಥಿಯ ನಾಮಪತ್ರವನ್ನು ಅಗತ್ಯವಿರುವಷ್ಟು ಸಂಖ್ಯೆಯ ಸೂಚಕರು ಸೂಚಿಸದಿರುವುದು ಅಥವಾ ಅಭ್ಯರ್ಥಿ ಅಥವಾ ಅಭ್ಯರ್ಥಿಯ ಸೂಚಕನು(ರು) ಅಥವಾ ಇಬ್ಬರೂ ನಾಮಪತ್ರದಲ್ಲಿ ಸಹಿಗಾಗಿ ಉದ್ದೇಶಿಸಿದ ಜಾಗಗಳಲ್ಲಿ ಸಹಿ ಮಾಡದಿರುವುದು; ಅಥವಾ

x. ಈಗಾಗಲೇ ವಿವರಿಸಲಾದಂತೆ ಕಾನೂನು ರೀತ್ಯಾ ಸೂಕ್ತ ಭದ್ರತಾ ಠೇವಣಿಯನ್ನು ಮಾಡದಿರುವುದು; ಅಥವಾ

xi. ಅಭ್ಯರ್ಥಿಯ ಸಹಿ ಅಥವಾ ಅವರ ಸೂಚಕನ(ರ) ಸಹಿಯು(ಗಳು) ನೈಜವಲ್ಲದಿರುವುದು; ಅಥವಾ

xii. ಅಭ್ಯರ್ಥಿಯ ಕ್ಷೇತ್ರದ ಸ್ಥಾನವನ್ನು ಯಾವ ವರ್ಗಕ್ಕೆ ಮೀಸಲಿಡಲಾಗಿದೆಯೋ ಆ ವರ್ಗಕ್ಕೆ ಅವರು ಸೇರದಿರುವುದು. ಉದಾಹರಣೆಗೆ, ಅಭ್ಯರ್ಥಿಯ ಪರಿಶಿಷ್ಟ ಜಾತಿಗೆ ಸೇರಿಲ್ಲದಿದ್ದರೂ ಪರಿಶಿಷ್ಟ ಜಾತಿಗಳಿಗೆ ಮೀಸಲಾದ ಸ್ಥಾನಕ್ಕೆ ಸ್ಪರ್ಧಿಸಲು ಅಭ್ಯರ್ಥಿಯು ನಾಮಪತ್ರವನ್ನು ಸಲ್ಲಿಸುವುದು; ಅಥವಾ

xiii. ಸೂಚಕನು ಆ ಕ್ಷೇತ್ರದ ಮತದಾರನಾಗಿಲ್ಲದಿರುವುದು ಅಥವಾ ಸೂಚಕನಾಗಲು ಅರ್ಹನಲ್ಲದಿರುವುದು;

xiv. ನಿಗದಿತ ನಮೂನೆಗಳಲ್ಲಿ ಎರಡು ಅಫಿಡವಿಟ್‌ಗಳನ್ನು ಅಭ್ಯರ್ಥಿಯ ನಾಮಪತ್ರದೊಂದಿಗೆ ಸಲ್ಲಿಸಲು ತಪ್ಪಿರುವುದು;

xv. ನಾಮಪತ್ರದಲ್ಲಿ ಅಭ್ಯರ್ಥಿಯ ವಯಸ್ಸನ್ನು ನಮೂದಿಸಲು ತಪ್ಪಿರುವುದು.

xvi. ಅಭ್ಯರ್ಥಿಯು ನಾಮಪತ್ರ ಸಲ್ಲಿಸಿರುವ ಚುನಾವಣಾ ಕ್ಷೇತ್ರದ ಮತದಾರನಾಗಿರದಿದ್ದಲ್ಲಿ ಮತ್ತು ತಾನು ಮತದಾರನೆಂದು ನೋಂದಾಯಿಸಿರುವ ಕ್ಷೇತ್ರದ ಮತದಾರರ ಪಟ್ಟಿಯ ಒಂದು ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಥವಾ ನಾಮಪತ್ರದೊಂದಿಗೆ ಅಂಥ ಮತದಾರರ ಪಟ್ಟಿಯಲ್ಲಿ ಆತನ ಹೆಸರಿಗೆ ಸಂಬಂಧಿಸಿದ ನಮೂದುಗಳ ಪ್ರಮಾಣೀಕೃತ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಥವಾ ಸದರಿ ಅಧಿನಿಯಮದ 33 (5)ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಪರಿಶೀಲನೆಯ ಅವಧಿಯಲ್ಲಿ ಅದನ್ನು ಸಲ್ಲಿಸದಿರುವುದು;

xvii. ಅಫಿಡವಿಟ್‌ನಲ್ಲಿ ಅಂಕಣಗಳನ್ನು ಖಾಲಿ ಬಿಟ್ಟಿರುವುದು ಮತ್ತು ನೋಟೀಸನ್ನು ನೀಡಿದರೂ ಹೊಸ ಅಫಿಡವಿಟ್‌ನ್ನು ಸಲ್ಲಿಸದಿರುವುದು.

4.5.2. ರಿಟರ್ನಿಂಗ್ ಅಧಿಕಾರಿಯು ಯಾವುದೇ ಕಾರಣಕ್ಕೆ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಿದರೆ, ಅಭ್ಯರ್ಥಿಯು ಅಂಥ ತಿರಸ್ಕರಣೆಗೆ ಕಾರಣಗಳನ್ನು ಒಳಗೊಂಡ ರಿಟರ್ನಿಂಗ್ ಅಧಿಕಾರಿಯ

ಆದೇಶದ ಪ್ರಮಾಣೀಕೃತ ಪ್ರತಿಯನ್ನು ಪಡೆದುಕೊಳ್ಳಬೇಕು. ಆಯೋಗದ ಸೂಚನೆಯ ಅನುಸಾರ, ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸುವ ಆದೇಶವನ್ನು ಹೊರಡಿಸಿದ ಕೂಡಲೇ ಅದರ ಪ್ರತಿಯನ್ನು ಪಡೆದುಕೊಳ್ಳುವುದಕ್ಕೆ ಅಭ್ಯರ್ಥಿಯು ಹಕ್ಕುಳ್ಳವರಾಗಿರುತ್ತಾರೆ. ಅದಕ್ಕಾಗಿ ಅಭ್ಯರ್ಥಿಯು ಯಾವುದೇ ಶುಲ್ಕ ಅಥವಾ ಚಾರ್ಜುಗಳನ್ನು ಪಾವತಿ ಮಾಡುವ ಅಗತ್ಯವಿಲ್ಲ. ನಾಮಪತ್ರಗಳು ಸಿಂಧುವಾಗಿ ಅಂಗೀಕೃತವಾದರೆ, ಇತರ ನಾಮಪತ್ರಗಳು ತಿರಸ್ಕೃತಗೊಂಡರೂ ಸಹ ಅಭ್ಯರ್ಥಿಯು ಸಿಂಧುಗೊಂಡ ನಾಮನಿರ್ದೇಶಿತ ಅಭ್ಯರ್ಥಿಯಾಗುತ್ತಾನೆ.

4.5.3. ಅಭ್ಯರ್ಥಿಯನ್ನು ನಾಮನಿರ್ದೇಶಿಸಿರುವುದರ ವಿರುದ್ಧ ಯಾವುದೇ ಆಕ್ಷೇಪಣೆಯನ್ನು ಎತ್ತಿರುವುದು ಕಂಡುಬಂದರೆ, ಆ ಯಾವುದೇ ಆಕ್ಷೇಪಣೆಯನ್ನು ಅಲ್ಲಗಳೆಯುವುದಕ್ಕೆ ಅಭ್ಯರ್ಥಿಯು ಸಮಯಾವಕಾಶ ಕೋರಿ ಅರ್ಜಿ ಸಲ್ಲಿಸಬಹುದು. ಆ ಆಕ್ಷೇಪಣೆಯನ್ನು ಅಲ್ಲಗೆಳೆಯುವುದಕ್ಕೆ ಸ್ವಲ್ಪ ಸಮಯಾವಕಾಶದ ಅಗತ್ಯವಿದ್ದು, ಅಭ್ಯರ್ಥಿಯು ಕೂಡಲೇ ಸಮಯಾವಕಾಶಕ್ಕಾಗಿ ರಿಟರ್ನಿಂಗ್ ಅಧಿಕಾರಿಗೆ ಅರ್ಜಿಸಲ್ಲಿಸಬಹುದು. ಅಂಥ ಸಂದರ್ಭದಲ್ಲಿ ರಿಟರ್ನಿಂಗ್ ಅಧಿಕಾರಿಯು 36ನೇ ಪ್ರಕರಣದ 15ನೇ ಉಪಪ್ರಕರಣದ ಪರಂತುಕದ ಪ್ರಕಾರ, ಅಂಥ ಸಂದರ್ಭಗಳಲ್ಲಿ ಪರಿಶೀಲನೆಗಾಗಿ ನಿಗದಿಪಡಿಸಿದ ದಿನದ ನಂತರದ ದಿನಾಂಕವನ್ನು ಬಿಟ್ಟು ಆ ನಂತರದ ದಿನವನ್ನು ಮೀರದಂತೆ ಆತನಿಗೆ ಅಲ್ಲಗಳೆಯುವುದಕ್ಕೆ ಸಮಯಾವಕಾಶವನ್ನು ನೀಡಲು ಎರಡು ದಿನಗಳವರೆಗೆ ಮುಂದೂಡಬಹುದು.

## 4.6. ಅಭ್ಯರ್ಥಿಯು ಮಾಡುವ ಪ್ರಮಾಣವಚನ ಅಥವಾ ಪ್ರತಿಜ್ಞಾವಿಧಿ

4.6.1. ಈ ಸಂಬಂಧದಲ್ಲಿ, ಪಶುಪತಿನಾಥ್ ಸಿಂಗ್–ವಿರುದ್ಧ–ಹರಿಹರ್ ಪ್ರಸಾದ್‌ಸಿಂಗ್ (ಎಐಆರ್ 1968 ಎಸ್ ಸಿ 1064) ಮೊಕದ್ದಮೆಯಲ್ಲಿ ನೀಡಿದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಕಡೆಗೆ ಮತ್ತೊಮ್ಮೆ ನಿಮ್ಮ ಗಮನಸೆಳೆಯಬಹುದಾಗಿದೆ. ಆ ನಿರ್ಣಯದ ಅನುಸಾರ, ಅಭ್ಯರ್ಥಿಯು ನಾಮಪತ್ರ ಸಲ್ಲಿಸಿದ ನಂತರ ಮತ್ತು ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕಕ್ಕೆ ಮುಂಚೆ ಅಭ್ಯರ್ಥಿಯು ಪ್ರಮಾಣವಚನ ಅಥವಾ ಪ್ರತಿಜ್ಞಾ ವಿಧಿ ಮಾಡಬೇಕು. ಈ ಸಂಬಂಧ ಈಗಾಗಲೇ ವಿವರವಾದ ಸೂಚನೆಗಳನ್ನು ಹಿಂದಿನ ಅಧ್ಯಾಯನದಲ್ಲಿ ನೀಡಲಾಗಿದೆ.

## 4.7. ಒಂದು ನಾಮಪತ್ರದ ತಿರಸ್ಕರಣೆಯಿಂದ, ಯಾವುದೇ ಇತರ ನಾಮಪತ್ರವು ಸಿಂಧುವೆಂದು ಕಂಡುಬಂದರೆ, ಅಭ್ಯರ್ಥಿಯ ನಾಮನಿರ್ದೇಶನಕ್ಕೆ ಬಾಧಕವಾಗುವುದಿಲ್ಲ

4.7.1. ಅಭ್ಯರ್ಥಿಯು ಒಂದೇ ಕ್ಷೇತ್ರಕ್ಕೆ ನಾಲ್ಕು ನಾಮಪತ್ರಗಳನ್ನು ಸಲ್ಲಿಸಬಹುದೆಂದು ಈಗಾಗಲೇ ತಿಳಿಸಲಾಗಿದೆ. ಈ ನಾಲ್ಕು ನಾಮಪತ್ರಗಳ ಪೈಕಿ ಯಾವುದೇ ಒಂದು ನಾಮಪತ್ರವು ಸಿಂಧುವಾದುದೆಂದು ಕಂಡುಬಂದರೆ, ಉಳಿದ ಮೂರು ನಾಮಪತ್ರಗಳು ತಿರಸ್ಕೃತಗೊಂಡರೂ ಕೂಡ, ಅಭ್ಯರ್ಥಿಯ ಅರ್ಹ ನಾಮನಿರ್ದೇಶನಕ್ಕೆ ಅದೊಂದೇ ಸಾಕಾಗುತ್ತದೆ. ಆದ್ದರಿಂದ, ಅಭ್ಯರ್ಥಿಯು ಗರಿಷ್ಠ ಸಂಖ್ಯೆಯ ಎಂದರೆ, ನಾಲ್ಕು ನಾಮಪತ್ರಗಳನ್ನು ಸಲ್ಲಿಸುವುದು ಸೂಕ್ತ.

## 4.8. ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಯು ಸಲ್ಲಿಸುವ ದಸ್ತಾವೇಜುಗಳು ಮತ್ತು ಇತರ ಸಾಮಾಗ್ರಿಗಳ ಸೂಚಕ ಪಟ್ಟಿ

4.8.1. ನಾಮಪತ್ರಕ್ಕೆ ವಿರುದ್ಧವಾಗಿ ಉದ್ಭವಿಸಬಹುದಾದ ಆಕ್ಷೇಪಣೆಗಳನ್ನು ಎದುರಿಸುವುದಕ್ಕೆ ಪರಿಶೀಲನೆಯ ಸ್ಥಳಕ್ಕೆ ಈ ಕೆಳಕಂಡ ದಸ್ತಾವೇಜುಗಳನ್ನು ಅಭ್ಯರ್ಥಿಯು ತನ್ನೊಂದಿಗೆ ತರಬೇಕು, ಅವುಗಳೆಂದರೆ:

(ಎ) ನಾಮಪತ್ರ ಸಲ್ಲಿಸುವ ಸಮಯದಲ್ಲಿ ರಿಟರ್ನಿಂಗ್ ಅಧಿಕಾರಿಯು ನೀಡುವ ಚೆಕ್‌ಲಿಸ್ಟ್‌ನ ಪ್ರತಿ;

(ಬಿ) ನಿಮ್ಮ ವಯಸ್ಸನ್ನೂ ಸಮರ್ಥಿಸುವ ದಾಖಲೆ;

(ಸಿ) ಠೇವಣಿಯನ್ನು ನಗದು ರೂಪದಲ್ಲಿ ಮಾಡಿದ್ದರೆ, ರಿಟರ್ನಿಂಗ್ ಅಧಿಕಾರಿಯು ಅಥವಾ ಅಧಿಕೃತಗೊಂಡ ಸಹಾಯಕ ರಿಟರ್ನಿಂಗ್ ಅಧಿಕಾರಿಯು ನೀಡಿದ ರಸೀದಿ ಮತ್ತು ಠೇವಣಿಯನ್ನು ಸರ್ಕಾರಿ ಖಜಾನೆಯಲ್ಲಿ ಅಥವಾ ಭಾರತದ ರಿಸರ್ವ್ ಬ್ಯಾಂಕ್‌ನಲ್ಲಿ ಮಾಡಿದ್ದರೆ, ಖಜಾನೆ ರಸೀದಿ ಅಥವಾ ಚಲನ್‌ನ ದ್ವಿಪ್ರತಿ;

(ಡಿ) ನೀವು ನಾಮಪತ್ರವನ್ನು ಸಲ್ಲಿಸಿದ ಮೇಲೆ, ರಿಟರ್ನಿಂಗ್ ಅಧಿಕಾರಿಯು ಅಥವಾ ಅಧಿಕೃತಗೊಂಡ ಸಹಾಯಕ ರಿಟರ್ನಿಂಗ್ ಅಧಿಕಾರಿಯು ನೀಡಿದ ನಾಮಪತ್ರದ ರಸೀದಿ ಮತ್ತು ಪರಿಶೀಲನೆಯ ನೋಟೀಸು; ಮತ್ತು

(ಇ) ನಮೂನೆ 26ರಲ್ಲಿ ಸಲ್ಲಿಸಿರುವ ಅಫಿಡವಿಟ್‌ನ ಪ್ರತಿ

(ಎಫ್) ನಿಮ್ಮ ನಾಮಪತ್ರದ ವಿರುದ್ಧ ಎತ್ತಿರುವ ಅಥವಾ ಎತ್ತಬಹುದಾದ ಯಾವುದೇ ಆಕ್ಷೇಪಣೆಯನ್ನು ನಿರಸನಗೊಳಿಸುವುದಕ್ಕೆ ಮತ್ತು ಅಲ್ಲಗಳೆಯುವುದಕ್ಕೆ ಅಗತ್ಯವಿರಬಹುದಾದ ಯಾವುದೇ ಇತರ ಸಾಕ್ಷ್ಯ ಅಥವಾ ದಾಖಲೆ.

## 4.9. ಅಭ್ಯರ್ಥಿಗಳ ಹೆಸರುಗಳ ತಿದ್ದುಪಡಿ:

4.9.1. ಹಿಂದೆ ಅಭ್ಯರ್ಥಿಗಳು ಮತಪತ್ರಗಳಲ್ಲಿ ತಮ್ಮ ಹೆಸರುಗಳನ್ನು ಸರಿಯಗಿ ಹಾಕಿಲ್ಲವೆಂದು ದೂರುಗಳನ್ನು ಸಲ್ಲಿಸಿರುತ್ತಾರೆ. ಅಂಥ ದೂರುಗಳನ್ನು ತಪ್ಪಿಸುವ ಸಲುವಾಗಿ ಪ್ರತಿಯೊಬ್ಬ ಅಭ್ಯರ್ಥಿ, ಆತನ ಗೈರು ಹಾಜರಿಯಲ್ಲಿ ಆತನ ಚುನಾವಣಾ ಏಜೆಂಟ್ ಅಥವಾ ಆತನ ಸೂಚಕರು, ಮತಪತ್ರಗಳನ್ನು ಮುದ್ರಿಸುವ ಪ್ರತಿಯೊಂದು ಭಾಷೆಯಲ್ಲಿ ನಾಮಪತ್ರಗಳನ್ನು ಸಲ್ಲಿಸುವ ಸಮಯದಲ್ಲಾಗಲೀ ಅಥವಾ ನಾಮಪತ್ರಗಳ ಪರಿಶೀಲನೆ ಮುಗಿದ ನಂತರ ಕೂಡಲೇ ಅಥವಾ ಚಿಹ್ನೆಗಳನ್ನು ಹಂಚಿಕೆ ಮಾಡುವ ಸಮಯದಲ್ಲಿ ಲಿಖಿತದಲ್ಲಿ ಅಭ್ಯರ್ಥಿಯ ಸರಿಯಾದ ಹೆಸರನ್ನು ನೀಡುವುದು ಅಗತ್ಯ. ಆದರೆ, ತನ್ನ ನಾಮಪತ್ರದಲ್ಲಿ ತನ್ನ ಹೆಸರು ತಪ್ಪು ಅಕ್ಷರಗಳಿಂದ ಕೂಡಿದೆ ಅಥವಾ ಬೇರೆ ರೀತಿಯಲ್ಲಿ ತೋರಿಸಲಾಗಿದೆ ಅಥವಾ ತಾನು ಜನಪ್ರಿಯನಾಗಿರುವ ಹೆಸರಿಗಿಂತ ಭಿನ್ನವಾದುದಾಗಿದೆ ಎಂದು ಅಭ್ಯರ್ಥಿಯು ಭಾವಿಸಿದರೆ, ಆಗ ಆತನು ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ರಿಟರ್ನಿಂಗ್ ಅಧಿಕಾರಿಗೆ ತನ್ನ ಹೆಸರಿನ ಸೂಕ್ತ ಮಾದರಿ ಮತ್ತು ಸ್ಪೆಲ್ಲಿಂಗ್ ಅನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದು. ರಿಟರ್ನಿಂಗ್ ಅಧಿಕಾರಿಗೆ ಆ ಕೋರಿಕೆಯ ನೈಜತೆ ಬಗ್ಗೆ ಮನವರಿಕೆಯಾದರೆ, ಆತನು ನಮೂನೆ 4ರಲ್ಲಿನ ಪಟ್ಟಿಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡತಕ್ಕದ್ದು ಮತ್ತು ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಆ ಮಾದರಿ ಮತ್ತು ಸ್ಪೆಲ್ಲಿಂಗ್ ಅನ್ನು ಅಳವಡಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ತಯಾರಾದ ನಂತರ ಅಂಥ ಮನವಿಯನ್ನು ಪುರಸ್ಕರಿಸಲಾಗುವುದಿಲ್ಲ.

## 4.10. ಅಭ್ಯರ್ಥಿಗಳ ಮಾರ್ಗದರ್ಶನಕ್ಕೆ ಸಂಬಂಧಿಸಿದಂತೆ ಮಾಡಬೇಕಾದ್ದು ಮತ್ತು ಮಾಡಬಾರದ್ದು

4.10.1. ನಮ್ಮ ದೇಶದ ಚುನಾವಣಾ ಕಾನೂನು ಸಾಕಷ್ಟು ಸಮಗ್ರವಾದುದಾಗಿದೆ ಮತ್ತು ಪ್ರಕ್ರಿಯೆಯು ಸಾಕಷ್ಟು ವಿಸ್ತಾರವಾದುದಾಗಿದೆ. ಇದು ಚುನಾವಣೆಯು ಶುದ್ಧವಾಗಿ ನಡೆಯುವಂತೆ ನೋಡಿಕೊಳ್ಳುವ ಹೊಣೆಯುಳ್ಳದ್ದಾಗಿದೆ. ಕೆಲವು ಮಾಡಬೇಕಾದ್ದು/ ಮಾಡಬಾರದ್ದು ಯಾವುದೆಂಬುದನ್ನು ತಮ್ಮ ಮಾರ್ಗದರ್ಶನಕ್ಕಾಗಿ ಅನುಬಂಧ-11 ರಲ್ಲಿ ಸೂಚಿಸಲಾಗಿದೆ. ಇದೇ ಪರಿಪೂರ್ಣವಲ್ಲ, ಇದು ಕೇವಲ ನಿದರ್ಶನ ಎಂಬುದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು.

4.11. **ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಮಾರ್ಗದರ್ಶನಕ್ಕೆ ಸಂಬಂಧಿಸಿದ ನೀತಿ ಸಂಹಿತೆ– ಮಾಡಬೇಕಾದ್ದು ಮತ್ತು ಮಾಡಬಾರದ್ದು.**

4.11.1. ಮಾದರಿ ನೀತಿ ಸಂಹಿತೆಯ (ಅನುಬಂಧ–17) ಜೊತೆಗೆ, ಚುನಾವಣೆ ಘೋಷಣೆಯಾದಂದಿನಿಂದ, ಚುನಾವಣಾ ಪ್ರಕ್ರಿಯೆ ಯುಕ್ತಾಯಗೊಳ್ಳುವವರೆಗೆ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಪಾಲನೆ ಮಾಡಬೇಕಾದ ಮತ್ತು ಅವರ ಮಾರ್ಗದರ್ಶನಕ್ಕೆ ಸಂಬಂಧಿಸಿದ ಮಾದರಿ ನೀತಿ ಸಂಹಿತೆ– ಮಾಡಬೇಕಾದ್ದು ಮತ್ತು ಮಾಡಬಾರದ್ದು ಎಂಬ ಮತ್ತೊಂದು ಸೆಟ್ ಅನ್ನು ಆಯೋಗವು ಇತ್ತೀಚೆಗೆ ಹೊರಡಿಸಿದೆ. ಈ ಮಾದರಿ ನೀತಿ ಸಂಹಿತೆ – ಮಾಡಬೇಕಾದ್ದು ಮತ್ತು ಮಾಡಬಾರದ್ದು ಇದರ ಒಂದು ಪ್ರತಿಯನ್ನು ಅನುಬಂಧ 12 ರಲ್ಲಿಯೂ ಸಹ ನೀಡಲಾಗಿದೆ. ಅಭ್ಯರ್ಥಿಯಾಗಲಿ ಅಥವಾ ಅವರನ್ನು ಅಭ್ಯರ್ಥಿಯಾಗಿ ನಿಲ್ಲಿಸಿರುವ ರಾಜಕೀಯ ಪಕ್ಷವಾಗಲಿ ಅಥವಾ ಅವರ ಏಜೆಂಟರು, ಕಾರ್ಯಕರ್ತಕರು, ಬೆಂಬಲಿಗರು ಮತ್ತು ಅವರ ಸಹಾನುಭೂತಿಗಾರರಾಗಲಿ ಈ ಮಾಡಬೇಕು ಮತ್ತು ಮಾಡಬಾರದು ಸದರಿ ಸಂಹಿತೆಯನ್ನು ಉಲ್ಲಂಘಿಸುವುದಕ್ಕೆ ಸಮನಾದಂಥ ಯಾವುದೇ ಕಾರ್ಯವನ್ನು ಮಾಡುವ ಅಥವಾ ಮಾಡದೆ ಬಿಡುವ ಕಾರ್ಯಗಳಲ್ಲಿ ತೊಡಗದಂತೆ ನೋಡಿಕೊಳ್ಳುವುದು ಅಭ್ಯರ್ಥಿಯ ಹೊಣೆಯಾಗಿರುತ್ತದೆ.

# 5. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು

## 5.1. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು.

5.1.1. ಅಭ್ಯರ್ಥಿಯ ನಾಮಪತ್ರವು ಅಂಗೀಕೃತವಾದರೆ, ಆತನು/ಆಕೆಯು ಕ್ರಮಬದ್ಧವಾದ ನಾಮನಿರ್ದೇಶಿತ ಅಭ್ಯರ್ಥಿಯಾಗುತ್ತಾರೆ. ಆಗಲೂ ಸಹ, ಹಲವಾರು ಕಾರಣಗಳಿಂದಾಗಿ ಆತನು/ಆಕೆಯು ಸ್ಪರ್ಧೆಯಿಂದ ಹಿಂದೆ ಸರಿಯಲು ಬಯಸಬಹುದು. ಅಂತಹ ಕಾರಣಗಳು ವೈಯುಕ್ತಿಕವಾದುದಾಗಿರಬಹುದು ಅಥವಾ ರಾಜಕೀಯವಾದುದಾಗಿರಬಹುದು. ನಾಮಪತ್ರಗಳ ಪರಿಶೀಲನೆ ಮುಕ್ತಾಯವಾದ ನಂತರ ಮಾತ್ರ ನೀವು ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಅದಕ್ಕಿಂತ ಮುಂಚಿನ ಯಾವ ಹಂತದಲ್ಲಿಯೂ ಈ ಅವಕಾಶ ಇಲ್ಲವೆಂಬುದನ್ನು ನೀವು ಗಮನದಲ್ಲಿಟ್ಟುಕೊಂಡಿರಬೇಕು.

## 5.2. ಹಿಂತೆದುಕೊಳ್ಳುವ ನೋಟೀಸು

5.2.1. ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಯ ನಾಮಪತ್ರವನ್ನು ಪರಿಶೀಲಿಸಿ, ಅದು ಸಿಂಧುವಾಗಿರುವುದೆಂದು ತೀರ್ಮಾನಿಸಿದ ನಂತರವೂ ಆತನು/ಆಕೆಯು ತನ್ನ ನಾಮಪತ್ರವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದಲ್ಲಿ, ಆತನು/ಆಕೆಯು ಒಂದು ಲಿಖಿತ ನೋಟೀಸಿನ ಮೂಲಕ, ಹಾಗೆ ಹಿಂತೆಗೆದುಕೊಳ್ಳಬಹುದು. ಅಂಥ ನೋಟೀಸು ಚುನಾವಣೆಗಳನ್ನು ನಡೆಸುವ ನಿಯಮಗಳು, 1961 ಕ್ಕೆ (ಪರಿಶಿಷ್ಟ 13) ಲಗತ್ತಿಸಿರುವ ನಮೂನೆ 5ರಲ್ಲಿರತಕ್ಕದ್ದು. ಅಭ್ಯರ್ಥಿಯು ಈ ನಮೂನೆ 5 ಅನ್ನು ಜಾಗ್ರತೆಯಿಂದ ಭರ್ತಿಮಾಡಿ ಅದರಲ್ಲಿ ಸಹಿಮಾಡಿದ ನಂತರ, ನಾಮಪತ್ರ ಹಿಂತೆಗೆದುಕೊಳ್ಳಲು ಪ್ರಕರಣ 30ಸಿ ಮೇರೆಗೆ ನಿಗದಿಪಡಿಸಲಾದ ಕೊನೆಯ ದಿನದಂದು ಅಪರಾಹ್ನ 3.00ಗಂಟೆಯೊಳಗೆ, ನೀವೇ ಖುದ್ದಾಗಿ ಅಥವಾ ಆತನ/ಆಕೆಯ ಯಾರೇ ಸೂಚಕರು ಅಥವಾ ಆತನ/ಆಕೆಯ ಚುನಾವಣಾ ಏಜೆಂಟರ ಮೂಲಕವಾಗಲೀ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು. ನಿಮ್ಮ ನೋಟೀಸನ್ನು ಸಲ್ಲಿಸುವ ಅಂಥ ಸೂಚಕರು ಅಥವಾ ಚುನಾವಣಾ ಏಜೆಂಟರು ಲಿಖಿತದಲ್ಲಿ ಈ ಬಗ್ಗೆ ನಿಮ್ಮಿಂದ ಅಧಿಕೃತಗೊಂಡವರಾಗಿರಬೇಕು. ಇಲ್ಲವಾದಲ್ಲಿ, ಆ ನೋಟೀಸನ್ನು ರಿಟರ್ನಿಂಗ್ ಅಧಿಕಾರಿಯು ಸ್ವೀಕರಿಸುವುದಿಲ್ಲ. ಯಾವುದೇ ಕಾರಣಕ್ಕೂ ನೋಟೀಸನ್ನು ಅಂಚೆ ಮೂಲಕ ಕಳುಹಿಸತಕ್ಕದ್ದಲ್ಲ.

## 5.3. ಕ್ರಮಬದ್ಧವಾಗಿ ಹಿಂತೆಗೆದುಕೊಳ್ಳಲು ಇರುವ ಅಗತ್ಯತೆಗಳು

5.3.1. ಹಿಂತೆಗೆದುಕೊಳ್ಳುವ ನೋಟೀಸು ನಿಗದಿತ ನಮೂನೆಯಲ್ಲಿರಬೇಕು (ನಮೂನೆ5).

5.3.2. ಅದಕ್ಕೆ ಅಭ್ಯರ್ಥಿಯು ಸಹಿ ಮಾಡಿರಬೇಕೇ ಹೊರತು, ಆತನ/ಆಕೆಯ ಪರವಾಗಿ ಬೇರೆ ಯಾರೂ ಸಹಿ ಮಾಡಿರತಕ್ಕದ್ದಲ್ಲ.

5.3.3. ನಾಮಪತ್ರ ಹಿಂತೆಗೆದುಕೊಳ್ಳಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಪರಾಹ್ನ 3.00 ಗಂಟೆಯೊಳಗೆ ರಿಟರ್ನಿಂಗ್ ಅಧಿಕಾರಿಗೆ ಅದನ್ನು ಸಲ್ಲಿಸತಕ್ಕದ್ದು.

5.3.4. ಅಂಥ ನೋಟೀಸನ್ನು ಅಭ್ಯರ್ಥಿಯು ಖುದ್ದಾಗಿ ಅಥವಾ ಆತನ/ಆಕೆಯ ನಾಮಪತ್ರಕ್ಕೆ ಸೂಚಕರಾಗಿ ಸಹಿ ಮಾಡಿರುವ ನಿಮ್ಮ ಸೂಚಕರ ಪೈಕಿ ಒಬ್ಬರಾಗಲೀ ಅಥವಾ ಯುಕ್ತವಾಗಿ ನೇಮಕಗೊಂಡಿರುವ ನಿಮ್ಮ ಚುನಾವಣಾ ಏಜೆಂಟನಾಗಲೀ ಸಲ್ಲಿಸತಕ್ಕದ್ದು. ಆದರೆ ಅಂತಹ ನೋಟೀಸನ್ನು ಸೂಚಕರು ಅಥವಾ ಚುನಾವಣಾ ಏಜೆಂಟರು ಸಲ್ಲಿಸಿದರೆ, ಆಗ ಅಂಥ ಸೂಚಕನು ಅಥವಾ ಚುನಾವಣಾ ಏಜೆಂಟನು ಅಭ್ಯರ್ಥಿಯಿಂದ ಈ ಬಗ್ಗೆ ಲಿಖಿತದಲ್ಲಿ ಅಧಿಕೃತಗೊಂಡವರಾಗಿರಬೇಕು.

## 5.4. ಹಿಂತೆಗೆದುಕೊಳ್ಳುವ ನೋಟೀಸು ಅಂತಿಮವಾದುದಾಗಿರುವುದು.

5.4.1. ಅಭ್ಯರ್ಥಿಯು ಒಮ್ಮೆ ಹಿಂತೆಗೆದುಕೊಳ್ಳುವ ನೋಟೀಸನ್ನು ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಿದಲ್ಲಿ, ಅದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 37(2) ನೇ ಪ್ರಕರಣದ ಅಡಿಯಲ್ಲಿ ಅಂತಿಮವಾದುದಾಗಿರುತ್ತದೆ ಮತ್ತು ಅದನ್ನು ಯಾವುದೇ ಸಂದರ್ಭದಲ್ಲಿಯೂ ರದ್ದುಗೊಳಿಸಲು ಅವಕಾಶ ನೀಡಲಾಗುವುದಿಲ್ಲ ಎಂಬುದನ್ನು ನೀವು ತುಂಬ ಎಚ್ಚರಿಕೆಯಿಂದ ನೆನಪಿಟ್ಟುಕೊಳ್ಳಬೇಕು.

5.4.2. ಅಭ್ಯರ್ಥಿಯು ಸ್ಪರ್ಧೆಯಿಂದ ಹಿಂದೆ ಸರಿಯಲು ತೀರ್ಮಾನಿಸಿದಲ್ಲಿ, ಈ ಮೇಲ್ಕಂಡ ಎಲ್ಲ ಷರತ್ತುಗಳನ್ನು ಪೂರೈಸಿರುವ ಬಗ್ಗೆ ವಿಶೇಷ ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ, ನಿಮ್ಮ ಉಮೇದುವಾರಿಕೆಯ ಹಿಂತೆಗೆದುಕೊಳ್ಳುವಿಕೆಯನ್ನು ಕಾನೂನಿನ ದೃಷ್ಟಿಯಲ್ಲಿ ಹಿಂತೆಗೆದುಕೊಳ್ಳುವಿಕೆ ಎಂದು ಪರಿಗಣಿಸಲಾಗುವುದಿಲ್ಲ ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 38ನೇ ಪ್ರಕರಣದ ಮೇರೆಗೆ ರಿಟರ್ನಿಂಗ್ ಅಧಿಕಾರಿ ತಯಾರಿಸುವ ಸ್ಪರ್ಧಿಗಳ ಪಟ್ಟಿಯಲ್ಲಿ ನಿಮ್ಮ ಹೆಸರು ಸೇರ್ಪಡೆಯಾಗುತ್ತದೆ. ಇದರ ಫಲಿತಾಂಶವೆಂದರೆ, ನೀವು ವಾಸ್ತವವಾಗಿ ಸ್ಪರ್ಧಿಸದಿದ್ದರೂ ಕೂಡಾ, ಮತಪತ್ರದ ಮೇಲೆ ನಿಮ್ಮ ಹೆಸರು ಕಾಣಿಸುತ್ತದೆ ಹಾಗೂ ನಿಮ್ಮ ನಾಮಪತ್ರದ ಜೊತೆಗೆ ಸಲ್ಲಿಸಿರುವ ಠೇವಣಿ ಹಣವನ್ನು ನಿಮಗೆ ಹಿಂತಿರುಗಿಸಲಾಗುವುದಿಲ್ಲ. ಹಾಗೂ ನೀವು ಚುನಾವಣಾ ವೆಚ್ಚದ ಲೆಕ್ಕಪತ್ರವನ್ನು ಸಹ ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಒಂದುವೇಳೆ, ನಾಮಪತ್ರ ಹಿಂತೆಗೆದುಕೊಳ್ಳುವ ನಿಮ್ಮ ನೋಟೀಸು ಸರಿಯಾಗಿದ್ದರೆ ಮತ್ತು ಸಿಂಧುವಾಗಿದ್ದರೆ ಹಾಗೂ ಅದನ್ನು

ರಿಟರ್ನಿಂಗ್ ಅಧಿಕಾರಿಯು ಅಂಗೀಕರಿಸಿದ್ದರೆ, ಆಗ ನೀವು ಇರಿಸಿದ್ದ ನಿಮ್ಮ ಠೇವಣಿ ಹಣವನ್ನು ನಿಮ್ಮ ನಾಮಪತ್ರದ ಜೊತೆ ಹಿಂದೆ ಪಡೆಯಲು ಹಕ್ಕುಳ್ಳವರಾಗುತ್ತೀರಿ. ಅಲ್ಲದೆ, ನೀವು ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಸಲ್ಲಿಸುವ ಅಗತ್ಯವಿಲ್ಲ.

## 5.5. ಹಿಂತೆಗೆದುಕೊಳ್ಳುವ ನೋಟೀಸನ್ನು ಸ್ವೀಕರಿದ ಬಗ್ಗೆ ಸ್ವೀಕೃತಿ ಪತ್ರ

5.5.1. ನೀವು ಅಥವಾ ನಿಮ್ಮ ಪರವಾಗಿ ನಿಮ್ಮಿಂದ ಲಿಖಿತ ಮೂಲಕ ಅಧಿಕೃತರಾಗಿರುವ ನಿಮ್ಮ ಸೂಚಕ ಅಥವಾ ಚುನಾವಣಾ ಏಜೆಂಟನು ನಾಮಪತ್ರ ಹಿಂತೆಗೆದುಕೊಳ್ಳುವ ಬಗ್ಗೆ ನೋಟೀಸನ್ನು ರಿಟರ್ನಿಂಗ್ ಅಧಿಕಾರಿಗೆ ತಲುಪಿಸಿದ ನಂತರ, ಹಿಂತೆಗೆದುಕೊಳ್ಳುವ ನೋಟೀಸು ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರವನ್ನು ಪಡೆಯುವ ಸಲುವಾಗಿ ಅಲ್ಲಿಯೇ ಸ್ವಲ್ಪ ಸಮಯ ಕಾಯಿರಿ. ಈ ಸ್ವೀಕೃತಿ ಪತ್ರವನ್ನು ನಿಮಗೆ ರಿಟರ್ನಿಂಗ್ ಅಧಿಕಾರಿಯು ನೀಡುವರು. ಈ ಸ್ವೀಕೃತಿ ಪತ್ರ ಪಡೆಯದೆ ನೀವು ರಿಟರ್ನಿಂಗ್ ಅಧಿಕಾರಿಯ ಕಚೇರಿಯಿಂದ ಹೊರಡಬಾರದು. ಏಕೆಂದರೆ, ನಿಮ್ಮ ಠೇವಣಿ ಹಣವನ್ನು ಹಿಂತಿರುಗಿ ಪಡೆಯುವಲ್ಲಿ ಈ ಸ್ವೀಕೃತಿ ಪತ್ರವು ಸಹಾಯಕವಾಗುವುದು.

## 5.6. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ

5.6.1. ನಾಮಪತ್ರ ಹಿಂತೆಗೆದುಕೊಳ್ಳಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಪರಾಹ್ನ 3.00 ಗಂಟೆಯ ನಂತರ ಹಾಗೂ ಚಿಹ್ನೆ ಹಂಚಿಕೆಯನ್ನು ಪೂರ್ಣಗೊಳಿಸಿದ ನಂತರ ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಒಂದು ಪಟ್ಟಿಯನ್ನು ರಿಟರ್ನಿಂಗ್ ಅಧಿಕಾರಿಯು ನಮೂನೆ 7ಎ ನಲ್ಲಿ ಸಿದ್ಧಪಡಿಸುವರು. ಆ ಪಟ್ಟಿಯು ತಮ್ಮ ಉಮೇದುವಾರಿಕೆಯನ್ನು ಹಿಂಪಡೆಯದ, ಸಿಂಧುವಾದ ನಾಮನಿರ್ದೇಶಿತ ಅಭ್ಯರ್ಥಿಗಳ ಹೆಸರು, ಅವರ ವಿಳಾಸ, ಅವರ ಭಾವಚಿತ್ರ ಮತ್ತು ಅಭ್ಯರ್ಥಿಗೆ ಹಂಚಿಕೆ ಮಾಡಲಾದ ಚಿಹ್ನೆಯನ್ನು ಒಳಗೊಂಡಿರುತ್ತದೆ.

5.6.2. ರಿಟರ್ನಿಂಗ್ ಅಧಿಕಾರಿಯು, ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿದ ಕೂಡಲೇ ಸ್ಪರ್ಧಿಸುತ್ತಿರುವ ಅಂಥ ಪಟ್ಟಿಯ ಒಂದು ಪ್ರತಿಯನ್ನು ಪ್ರತಿಯೊಬ್ಬ ಅಭ್ಯರ್ಥಿಗೂ ಹಾಗೂ ಅವರ ಚುನಾವಣಾ ಏಜೆಂಟರಿಗೂ ನೀಡುವರು ಮತ್ತು ಅದರ ಒಂದು ಪ್ರತಿಯನ್ನು ತಮ್ಮ ಕಚೇರಿಯ ಎದ್ದುಕಾಣುವ ಸ್ಥಳದಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡಬೇಕು.

5.6.3. ಚುನಾವಣೆ ನಡೆಸುವ ನಿಯಮಗಳು 1961ರ 31ನೇ ನಿಯಮದ (1)ನೇ ಉಪನಿಯಮದ ಪ್ರಕಾರ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಒಂದು ಪ್ರತಿಯನ್ನು ಪ್ರತಿ ಮತಗಟ್ಟೆಯ ಹೊರಗಡೆ ಪ್ರದರ್ಶಿಸುವುದಕ್ಕೆ ಅಗತ್ಯವಾಗಿರುತ್ತದೆ.

5.6.4. ಸದರಿ ಪಟ್ಟಿಯನ್ನು ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಭಾರತ ರಾಜ್ಯಪತ್ರದಲ್ಲಿ ಹಾಗೂ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಸಂಬಂಧಪಟ್ಟ ರಾಜ್ಯದ ರಾಜ್ಯಪತ್ರದಲ್ಲಿಯೂ ಸಹ ಪ್ರಕಟಿಸುವರು.

## 5.7. ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಹೆಸರುಗಳ ಅನುಕ್ರಮಣಿಕೆ

5.7.1. ಜನತಾಪ್ರಾತಿನಿಧ್ಯ ಅಧಿನಿಯಮ, 1951ರ ತಿದ್ದುಪಡಿಯಾದ ಪ್ರಕರಣ 38ರ ಮತ್ತು ಪರಿಷ್ಕೃತ ನಮೂನೆ 4 ( ಸಿಂಧುವಾಗಿ ನಾಮನಿರ್ದೇಶಿತರಾಗಿರುವ ಅಭ್ಯರ್ಥಿಗಳ ಪಟ್ಟಿ) ಮತ್ತು ನಮೂನೆ 7ರ (ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿ) ಪ್ರಕಾರ ಸದರಿ ಪಟ್ಟಿಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಹೆಸರುಗಳನ್ನು ಮೂರು ಪ್ರವರ್ಗಗಳ ಅಡಿಯಲ್ಲಿ ವ್ಯವಸ್ಥೆಗೊಳಿಸಲಾಗುವುದು. ಅವುಗಳೆಂದರೆ:–

(i) ಮಾನ್ಯತೆ ಪಡೆರುವ ರಾಷ್ಟ್ರೀಯ ಪಕ್ಷಗಳ ಮತ್ತು ಸಂಬಂಧಪಟ್ಟ ರಾಜ್ಯದಲ್ಲಿನ ರಾಜ್ಯ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು,

(ii) ನೋಂದಾಯಿತವಾಗಿದ್ದು ಮಾನ್ಯತೆ ಪಡೆದಿಲ್ಲದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು, ಮತ್ತು

(iii)ಇತರೆ (ಪಕ್ಷೇತರ) ಅಭ್ಯರ್ಥಿಗಳು. ಆದ್ದರಿಂದ, ಸದರಿ ಕ್ರಮದಲ್ಲಿ ಈ ಪ್ರವರ್ಗಗಳ ಅಡಿಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಹೆಸರುಗಳನ್ನು ಸದರಿ ಪಟ್ಟಿಯಲ್ಲಿ ಹಾಗೂ ಮತಪತ್ರದಲ್ಲಿ ಅಳವಡಿಸಲಾಗುವುದು. ಮೇಲ್ಕಂಡ ಮೂರು ಪ್ರವರ್ಗದಲ್ಲಿ ಪ್ರತ್ಯೇಕವಾಗಿ ನಮೂದಿಸಿರುವ ಹೆಸರುಗಳನ್ನು ಅಕಾರಾದಿಯಾಗಿ (Alphabetically) ಅಳವಡಿಸಲಾಗುತ್ತದೆಂಬುದನ್ನು ನೀವು ತಿಳಿದಿರತಕ್ಕದ್ದು. (ಆದರೂ ಸಹ, ಪರಿಷ್ಕೃತ ನಮೂನೆ 7ಎಯಲ್ಲಿ ನೀಡಿರುವ ಈ ಮೇಲ್ಕಾಣಿಸಿದ ಮೂರು ಪ್ರವರ್ಗಗಳ ಶೀರ್ಷಿಕೆಗಳು ಮತಪತ್ರದಲ್ಲಿ ಕಂಡುಬರತಕ್ಕದ್ದಲ್ಲ. ಆದರೆ, ಎಲ್ಲ ಮೂರು ಪ್ರವರ್ಗಗಳಿಗೆ ಕ್ರಮಸಂಖ್ಯೆಯನ್ನು ಅನುಕ್ರಮವಾಗಿ ನೀಡಲಾಗುತ್ತದೆ.

5.7.2. ಅಭ್ಯರ್ಥಿಗಳು ನೀಡಿರುವ ಹೆಸರುಗಳು ಅಂಕಿತನಾಮವಾಗಿರಲಿ ಅಥವಾ ಅಡ್ಡ ಹೆಸರುಗಳಾಗಿರಲಿ ಅವುಗಳನ್ನು ಪರಿಗಣಿಸದೆ ಅಕ್ಷರಾನುಕ್ರಮದ ಆಧಾರದ ಮೇಲೆ ರಿಟರ್ನಿಂಗ್ ಅಧಿಕಾರಿಯು, ಕ್ರಮಬದ್ಧವಾಗಿ ನಾಮ ನಿರ್ದೇಶಿತರಾಗಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಹಾಗೂ ಮತ ಪತ್ರಗಳ ಮೇಲೆ ಈ ಮೂರು ಪ್ರವರ್ಗಗಳ ಪೈಕಿ ಪ್ರತಿಯೊಂದು ಪ್ರವರ್ಗದಲ್ಲಿ ಅಕ್ಷರಾನುಕ್ರಮದಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ವ್ಯವಸ್ಥೆಗೊಳಿಸಲು ನಿರ್ಧರಿಸುತ್ತಾರೆ. ಅಭ್ಯರ್ಥಿಯ ಹೆಸರಿನ ಮುಂಚೆ ಇನಿಷಿಯಲ್‌ಗಳೇನಾದರೂ ಇದ್ದರೆ ಅವುಗಳನ್ನು ಈ ಮೇಲ್ಕಂಡ ಉದ್ದೇಶಗಳಿಗಾಗಿ ನಿರ್ಲಕ್ಷಿಸತಕ್ಕದ್ದು. ಉದಾಹರಣೆಗೆ, ಅಭ್ಯರ್ಥಿಯು ತನ್ನ ಹೆಸರನ್ನು ಟಿ.ಕೆ.ರೆಡ್ಡಿ ಎಂದು ನೀಡಿದ್ದಲ್ಲಿ, ಅಭ್ಯರ್ಥಿಯ ಹೆಸರಿನ ಮೊದಲಕ್ಷರದ ಕ್ರಮದ ಅನುಸಾರ ಅಭ್ಯರ್ಥಿಯ ಹೆಸರು ಇರಬೇಕಾದ ಸ್ಥಳವನ್ನು ಆರ್ ಅಕ್ಷರಕ್ಕೆ ಸಂಬಂಧಿಸಿದಂತೆ ನಿರ್ಧರಿಸಬೇಕೇ ಹೊರತು 'ಟಿ' ಅಕ್ಷರಕ್ಕೆ ಸಂಬಂಧಿಸಿದಂತೆ ಅಲ್ಲ. ಆದಾಗ್ಯೂ, ಒಂದೇ ಪ್ರವರ್ಗದಲ್ಲಿ ಒಂದೇ ಹೆಸರನ್ನು ಹೊಂದಿರುವ, ಆದರೆ ಬೇರೆ ಬೇರೆ ಇನಿಷಿಯಲ್‌ಗಳಿರುವ ಇಬ್ಬರು ಅಭ್ಯರ್ಥಿಗಳಿದ್ದರೆ, ಉದಾಹರಣೆಗೆ ಪಿ.ಎಸ್.ರೆಡ್ಡಿ ಮತ್ತು ಟಿ.ಕೆ.ರೆಡ್ಡಿ ಎಂದು ಇದ್ದಲ್ಲಿ, ಹಿಂದೆಯೇ ಸೂಚಿಸಿರುವಂತೆ, ಅವರ ಇನಿಷಿಯಲ್‌ಗಳ ಮೊದಲಕ್ಷರಕ್ಕೆ ಅನುಗುಣವಾಗಿ ಆ ಎರಡು ಹೆಸರುಗಳನ್ನು ಪಟ್ಟಿಯಲ್ಲಿ ಅಳವಡಿಸಲಾಗುವುದು. ಅಲ್ಲದೆ, ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಹೆಸರು ಒಂದೇ ಆಗಿದ್ದು ಆದರೆ ಅವರು ಬೇರೆ ಬೇರೆ ಅಡ್ಡಹೆಸರುಗಳನ್ನು ಹೊಂದಿದ್ದರೆ, ಆಗ ಅವರ ಅಡ್ಡಹೆಸರುಗಳಿಗೆ ಸಂಬಂಧಿಸಿದಂತೆ ಆಂತರಿಕ ಅಕ್ಷರಾನುಕ್ರಮದಲ್ಲಿ ಅಭ್ಯರ್ಥಿಗಳ ಹೆಸರಿನ ಪಟ್ಟಿಯನ್ನು ಸಿದ್ಧಗೊಳಿಸಲಾಗುವುದು.

5.7.3. ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 22(3)ನೇ ಮತ್ತು 30(3)ನೇ ನಿಯಮದನುಸಾರ, ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಹೆಸರು ಒಂದೇ ಆಗಿದ್ದಲ್ಲಿ, ಅವರ ಹೆಸರಿಗೆ ಉದ್ಯೋಗ, ವಾಸಸ್ಥಳ ಅಥವಾ ಇತರೇ ಅಂಶಗಳನ್ನು ಸೇರಿಸುವ ಮೂಲಕ ಅವರೊಳಗೆ ವ್ಯತ್ಯಾಸ ಕಲ್ಪಿಸಬೇಕು ಎಂದು ಉಪಬಂಧ ಮಾಡಿದೆ. ಅಂತಹ ಪ್ರಕರಣಗಳಲ್ಲಿ, ಒಂದೇ ಪ್ರವರ್ಗದಡಿಯಲ್ಲಿ ಬರುವಂಥ, ಕ್ರಮಬದ್ಧವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಹೆಸರಿನ ಪಟ್ಟಿಯಲ್ಲಿ ಮತ್ತು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಹಾಗೂ ಮತಪತ್ರಗಳಲ್ಲಿ, ಆ ಅಭ್ಯರ್ಥಿಗಳ ಹೆಸರುಗಳ ಅಳವಡಿಕೆಯು ಅಭ್ಯರ್ಥಿಗಳ ನಡುವೆ ವ್ಯತ್ಯಾಸ ಕಲ್ಪಿಸುವ ಹೆಸರುಗಳಿಗೆ ಸಂಬಂಧಿಸಿದಂತೆ ಇರತಕ್ಕದ್ದು.

5.7.4. ಅಭ್ಯರ್ಥಿಯು ತನ್ನ ಹೆಸರಿನ ಜೊತೆಗೆ, ಅವನಿಗೆ ಸಂಬಂಧಪಟ್ಟ ಯಾವುದೇ ಗೌರವಸೂಚಕ, ಶೈಕ್ಷಣಿಕ, ಅನುವಂಶಿಕ, ಉದ್ಯೋಗ ಸಂಬಂಧಿ ಅಥವಾ ಇತರೆ ಯಾವುದೇ ಬಿರುದನ್ನು (title)

ಹೆಚ್ಚುವರಿಯಾಗಿ ಸೇರಿಸಲು ಯಾವುದೇ ಆಕ್ಷೇಪಣೆ ಇಲ್ಲ. ಆದರೆ ಈ ಬಿರುದನ್ನು ಕ್ರಮಬದ್ಧವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ಅಥವಾ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಹಾಗೂ ಮತಪತ್ರಗಳಲ್ಲಿ ಯಾವುದೇ ಕಾರಣಕ್ಕೂ ಹೆಸರನ್ನು ಅಕ್ಷರಾನುಕ್ರಮದಲ್ಲಿ ವ್ಯವಸ್ಥೆಗೊಳಿಸುವಲ್ಲಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

5.7.5. ರಿಟರ್ನಿಂಗ್ ಅಧಿಕಾರಿಯು, ಕ್ರಮಬದ್ಧವಾಗಿ ನಾಮ ನಿರ್ದೇಶಿತರಾದ ಅಭ್ಯರ್ಥಿಗಳ ಹೆಸರಿನ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಆಯೋಗವು ನಿರ್ದಿಷ್ಟ ಪಡಿಸಿರುವಂಥ ಭಾಷೆಯ ಲಿಪಿಗೆ ಅನುಸಾರವಾಗಿ ಅಕ್ಷರಾನುಕ್ರಮದಲ್ಲಿ ವ್ಯವಸ್ಥೆಗೊಳಿಸಬೇಕು. (ಪರಿಶಿಷ್ಟ 9 ಹಾಗೂ 9ಎ).

## 5.8. ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಗುರುತಿನ ಚೀಟಿ ನೀಡುವುದು.

5.8.1. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿದ ನಂತರ, ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಗೆ ಈ ಕೆಳಗೆ ನಮೂದಿಸಿರುವ ನಮೂನೆಯಲ್ಲಿ ಒಂದು ಗುರುತಿನ ಚೀಟಿಯನ್ನು ನೀಡತಕ್ಕದ್ದು.

**ಅಭ್ಯರ್ಥಿಯ ಗುರುತಿನ ಚೀಟಿ**

ಭಾವಚಿತ್ರ

ಶ್ರೀ/ಶ್ರೀಮತಿ________________________ರವರು__________ ಮತಕ್ಷೇತ್ರದಿಂದ ________________ಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯಾಗಿದ್ದಾರೆ. ಮತ್ತು ಇವರು________________ಪಕ್ಷದ ಉಮೇದುವಾರರಾಗಿರುತ್ತಾರೆ.

____________

ಸ್ಥಳ: ಅಭ್ಯರ್ಥಿಯ ಸಹಿ

ದಿನಾಂಕ:

ದೃಢೀಕರಿಸಿದವರು

____________

ರಿಟರ್ನಿಂಗ್ ಅಧಿಕಾರಿ

(ಮೊಹರು)

**ವಿ.ಸೂ.** ಆಯೋಗದಲ್ಲಿ ನೋಂದಾಯಿಸಲ್ಪಟ್ಟಿರುವ ಒಂದು ರಾಜ್ಯಮಟ್ಟದ ಪಕ್ಷ ಅಥವಾ ಒಂದು ರಾಷ್ಟ್ರೀಯ ಪಕ್ಷ ಅಥವಾ ನೋಂದಾಯಿತವಾಗಿರುವ ಮಾನ್ಯತೆ ಪಡೆಯದ ಪಕ್ಷವು ಅಭ್ಯರ್ಥಿಯನ್ನು ನಿಲ್ಲಿಸಿದ್ದಲ್ಲಿ, ಆತನು/ಆಕೆಯು ಪಕ್ಷದ ಹೆಸರನ್ನು ನಮೂದಿಸಬೇಕು. ಇಲ್ಲವಾದಲ್ಲಿ, ಪಕ್ಷವನ್ನು ಸೂಚಿಸುವ ನಮೂನೆಯಲ್ಲಿನ ಕೊನೆಯ ಭಾಗವನ್ನು ಹೊಡೆದು ಹಾಕಬೇಕು.

**5**.8.2. ಎಲ್ಲಾ ಚುನಾವಣೆಗಳಲ್ಲಿ, ಸ್ಪರ್ಧಿಸುವ ಅಭ್ಯರ್ಥಿಗಳಿಗೆ ನೀಡಲಾಗುವ ಗುರುತಿನ ಚೀಟಿಯಲ್ಲಿ ಅವರ ಭಾವಚಿತ್ರಗಳಿರಬೇಕೆಂದು ಆಯೋಗವು ತೀರ್ಮಾನಿಸಿದೆ. ಆದ್ದರಿಂದ ಎಲ್ಲಾ ಅಭ್ಯರ್ಥಿಗಳು, ಉಮೇದುವಾರಿಕೆಯನ್ನು ಹಿಂಪಡೆಯುವುದಕ್ಕೆ ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿದ ತರುವಾಯ, ಆದಷ್ಟು ಬೇಗನೆ, ತಮ್ಮ ಇತ್ತೀಚಿನ ಭಾವಚಿತ್ರಗಳ ಎರಡು ಪ್ರತಿಗಳನ್ನು ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಬೇಕು. ಎಲ್ಲಾ ಅಭ್ಯರ್ಥಿಗಳು ಗುರುತಿನ ಚೀಟಿಗಳನ್ನು ದ್ವಿಪ್ರತಿಗಳಲ್ಲಿ ಸಿದ್ಧಪಡಿಸಬೇಕು. ಆ ಎರಡನೇ ಪ್ರತಿಯನ್ನು ದಾಖಲೆಯ ಉದ್ದೇಶಗಳಿಗಾಗಿ ಕಚೇರಿ ಪ್ರತಿಯಾಗಿ ರಿಟರ್ನಿಂಗ್ ಅಧಿಕಾರಿಯವರು ಇಟ್ಟುಕೊಳ್ಳಬೇಕು.

5.8.3. ನೀವು ರಿಟರ್ನಿಂಗ್ ಅಧಿಕಾರಿಯಿಂದ ನಿಮ್ಮ ಗುರುತಿನ ಚೀಟಿಯನ್ನು ಪಡೆದುಕೊಳ್ಳುವುದನ್ನು ಮರೆಯಬಾರದು. ಅದನ್ನು ಯಾವಾಗಲೂ ನೀವು ನಿಮ್ಮ ಬಳಿಯಲ್ಲೇ ಇಟ್ಟುಕೊಂಡಿರಬೇಕು. ಚುನಾವಣಾ ಪ್ರಚಾರದ ವೇಳೆಯಲ್ಲಿ, ಮತದಾನದ ದಿನದಂದು ಮತ್ತು ಮತಗಳ ಎಣಿಕೆಯ ದಿನದಂದು, ಹೀಗೆ ಹಲವಾರು ಸಂದರ್ಭಗಳಲ್ಲಿ, ಒಬ್ಬ ಅಭ್ಯರ್ಥಿಯಾಗಿ ನೀವು ನಿಮ್ಮ ಗುರುತನ್ನು ಸಾಬೀತು ಪಡಿಸುವ ಸಂದರ್ಭಗಳು ಎದುರಾಗಬಹುದು. ಅಂಥ ಸಂದರ್ಭಗಳಲ್ಲಿ ಒಬ್ಬ ಅಭ್ಯರ್ಥಿಯಾಗಿ ನಿಮ್ಮ ಗುರುತನ್ನು ಈ ಗುರುತಿನ ಚೀಟಿಯು ಶೀಘ್ರ ಸಾಬೀತುಪಡಿಸುವುದು.

# 6. ಚುನಾವಣಾ ಏಜೆಂಟ್

## 6.1. ಚುನಾವಣಾ ಏಜೆಂಟ್‌ರ ನೇಮಕ

6.1.1. ಒಬ್ಬ ಅಭ್ಯರ್ಥಿಯು, ತಮ್ಮ ಚುನಾವಣಾ ಏಜೆಂಟ್ ಆಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳಬಹುದು. ಅಭ್ಯರ್ಥಿಯು ನಾಮಪತ್ರ ಸಲ್ಲಿಸುವ ಸಮಯದಲ್ಲಿ ಒಬ್ಬ ಚುನಾವಣಾ ಏಜೆಂಟನನ್ನು ನೇಮಕ ಮಾಡಿಕೊಳ್ಳಲೇಬೇಕೆಂದು ಕಾನೂನಿನಲ್ಲಿ ಒತ್ತಾಯವಿರುವುದಿಲ್ಲ. ಈ ರೀತಿಯ ನೇಮಕಾತಿಯನ್ನು, ನೀವು ಇಚ್ಛಿಸಿದಲ್ಲಿ, ನೀವು ಅಭ್ಯರ್ಥಿಯೆಂದು ನಾಮನಿರ್ದೇಶಿತರಾದ ನಂತರ ಯಾವುದೇ ಕಾಲದಲ್ಲಿ ಮಾಡಬಹುದು ಅಥವಾ ಮಾಡದೆಯೂ ಇರಬಹುದು. ಇಂತಹ ಪ್ರತಿಯೊಂದು ನೇಮಕಾತಿಯನ್ನು ನಮೂನೆ 8 (ಪರಿಶಿಷ್ಟ–14) ರಲ್ಲಿ ದ್ವಿಪ್ರತಿಯಲ್ಲಿ, ಅಭ್ಯರ್ಥಿಯು ಔಪಚಾರಿಕ ಪತ್ರದ ಮೂಲಕ ಮಾಡಬೇಕು ಮತ್ತು ಅದನ್ನು ರಿಟರ್ನಿಂಗ್ ಅಧಿಕಾರಿಗೆ ಕಳುಹಿಸಿಕೊಡಬೇಕು. ರಿಟರ್ನಿಂಗ್ ಅಧಿಕಾರಿಯು ಅದರ ಒಂದು ಪ್ರತಿಯನ್ನು ತಾನು ಇಟ್ಟುಕೊಂಡು, ಎರಡನೇ ಪ್ರತಿಯಲ್ಲಿ ನೇಮಕಾತಿಯನ್ನು ತಾನು ಅನುಮೋದಿಸಿರುವುದರ ಸಂಕೇತವಾಗಿ ತನ್ನ ಮೊಹರು ಹಾಗೂ ಸಹಿ ಮಾಡಿ ಅಭ್ಯರ್ಥಿಗೆ /ಚುನಾವಣಾ ಏಜೆಂಟನಿಗೆ ಹಿಂದಿರುಗಿಸುವರು.

6.1.2. ಸಂಸತ್ತಿನ ಯಾವುದೇ ಸದನದ ಅಥವಾ ಒಂದು ರಾಜ್ಯದ ವಿಧಾನ ಮಂಡಲದ ಯಾವುದೇ ಸದನದ ಸದಸ್ಯನಾಗಿರಲು ಅಥವಾ ಚುನಾವಣೆಯಲ್ಲಿ ಮತದಾನ ಮಾಡಲು ಸಂವಿಧಾನದ ಅಥವಾ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಅಡಿಯಲ್ಲಿ ತತ್ಕಾಲದಲ್ಲಿ ಲೋಕಸಭೆ/ವಿಧಾನಸಭೆಯಲ್ಲಿ ಸ್ಪರ್ಧಿಸಲು ಅಥವಾ ಮತಚಲಾಯಿಸಲು ಅನರ್ಹನಾಗಿರುವ ಯಾರೇ ವ್ಯಕ್ತಿಯು, ಎಷ್ಟು ಕಾಲದವರೆಗೆ ಅನರ್ಹತೆಯು ಇರುವುದೋ ಅಷ್ಟು ಕಾಲದವರೆಗೆ ಯಾವುದೇ ಚುನಾವಣೆಯಲ್ಲಿ ಚುನಾವಣಾ ಏಜೆಂಟ್‌ನಾಗಿರಲು ಸಹ ಅನರ್ಹನಾಗತಕ್ಕದ್ದು.

6.1.3. ಅಲ್ಲದೆ, ರಾಜ್ಯವು ಭದ್ರತೆ ಒದಗಿಸಿರುವ ಕೇಂದ್ರ ಅಥವಾ ರಾಜ್ಯಗಳ ಸಚಿವರು ಮತ್ತು ಎಂಪಿಗಳು, ಎಂ.ಎಲ್.ಎಗಳು, ಎಂ.ಎಲ್.ಸಿಗಳು ಮತ್ತು ಯಾರೇ ಇತರ ವ್ಯಕ್ತಿಯ ಜೊತೆಯಲ್ಲಿರುವ ಭದ್ರತಾ ಸಿಬ್ಬಂದಿಗೆ ಮತಗಟ್ಟೆಯೊಳಗೆ ಮತ್ತು ಎಣಿಕೆ ಕೇಂದ್ರದೊಳಗೆ ಪ್ರವೇಶಿಸುವುದಕ್ಕೆ ಅನುಮತಿ ನೀಡಲು ಸಾಧ್ಯವಿಲ್ಲದ ಕಾರಣದಿಂದಾಗಿ ಅಥವಾ ಅವರ ಭದ್ರತಾ ಸಿಬ್ಬಂದಿ ಇಲ್ಲದಿರುವಾಗ ಅವರ ಭದ್ರತೆಗೆ ಅಪಾಯ ಸಂಭವಿಸಬಹುದಾಗಿರುವುದರಿಂದ ಅವರನ್ನು ಚುನಾವಣಾ ಏಜೆಂಟರನ್ನಾಗಿ (ಹಾಗೂ ಪೋಲಿಂಗ್ ಮತ್ತು ಮತ ಎಣಿಕೆ ಏಜೆಂಟ್ ಆಗಿ ಸಹ) ನೇಮಕ ಮಾಡತಕ್ಕದ್ದಲ್ಲ ಎಂದು ಆಯೋಗವು ಸೂಚಿಸಿದೆ. ಭದ್ರತಾ ಸಿಬ್ಬಂದಿಯ ರಕ್ಷಣೆ ಪಡೆದಿರುವ ಯಾರೇ ವ್ಯಕ್ತಿಯು ತಾನು

ಚುನಾವಣಾ ಏಜೆಂಟ್‌ನಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವ ಹಾಗೆ ಭದ್ರತಾ ಸಿಬ್ಬಂದಿಯನ್ನು ಹಿಂದಿರುಗಿಸಲು ಅವರಿಗೆ ಅವಕಾಶ ನೀಡತಕ್ಕದ್ದಲ್ಲ.

6.1.4. ಅಭ್ಯರ್ಥಿಯು ಚುನಾವಣಾ ಏಜೆಂಟನ ನೇಮಕವನ್ನು ರದ್ದುಪಡಿಸಲು, ನಮೂನೆ 9 (ಪರಿಶಿಷ್ಟ – 15) ರಲ್ಲಿ ಸಹಿ ಮಾಡಿ ಲಿಖಿತದಲ್ಲಿ ಅದನ್ನು ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಿ ಚುನಾವಣಾ ಏಜೆಂಟ್‌ನ ನೇಮಕಾತಿಯನ್ನು ರದ್ದುಪಡಿಸಬಹುದು. ನೀವು ರಿಟರ್ನಿಂಗ್ ಅಧಿಕಾರಿಗೆ ಅದನ್ನು ಸಲ್ಲಿಸಿದ ದಿನದಿಂದ ಅದು ಜಾರಿಗೆ ಬರುವುದು. ಹಾಗೆ ನೇಮಕವನ್ನು ರದ್ದುಪಡಿಸಿದ ಅಥವಾ ಚುನಾವಣಾ ಏಜೆಂಟನು ಮೃತಪಟ್ಟ ಸಂದರ್ಭದಲ್ಲಿ, ಅವರ ಸ್ಥಾನದಲ್ಲಿ ನೀವು ಬೇರೊಬ್ಬ ಚುನಾವಣಾ ಏಜೆಂಟ್‌ನನ್ನು ನೇಮಿಸಿಕೊಳ್ಳಬಹುದು. ನೀವು ನಮೂನೆ–8ರಲ್ಲಿ ಲಿಖಿತದಲ್ಲಿ ಅಂಥ ನೇಮಕಾತಿ ಕುರಿತು ರಿಟರ್ನಿಂಗ್ ಅಧಿಕಾರಿಗೆ ನೋಟೀಸನ್ನು ನೀಡಬೇಕು ಮತ್ತು ಅದರಲ್ಲಿ ಆ ಸಂಗತಿಗಳನ್ನು ನಿರೂಪಿಸಬೇಕು.

6.1.5. ಚುನಾವಣಾ ಏಜೆಂಟನು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ಮತ್ತು ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಮೂಲಕ ಅಧಿಕೃತಗೊಳಿಸಿರುವಂತೆ ನಿಮ್ಮ ಚುನಾವಣೆಗೆ ಸಂಬಂಧಿಸಿರುವ ಪ್ರಕಾರ್ಯಗಳನ್ನು ನಿರ್ವಹಿಸಬಹುದು. ಅದರಲ್ಲೂ ವಿಶೇಷವಾಗಿ ನೀವು ಮತ್ತು ನಿಮ್ಮ ಚುನಾವಣಾ ಏಜೆಂಟನು ಚುನಾವಣೆಯ ಸಂಬಂಧದಲ್ಲಿ ಪ್ರತಿಯೊಂದು ಬಾಬಿಗಾಗಿ ಮಾಡಿದ ವೆಚ್ಚಗಳ ಪೂರ್ಣ ಲೆಕ್ಕವನ್ನು ಇಡಬೇಕು ಮತ್ತು ಅದನ್ನು ಸಮರ್ಥಿಸುವ ವೋಚರುಗಳೊಂದಿಗೆ ಆ ಚುನಾವಣಾ ಲೆಕ್ಕಪತ್ರಗಳನ್ನು ಸಲ್ಲಿಸಬೇಕು. ನಿಮ್ಮ ಚುನಾವಣಾ ಏಜೆಂಟ್‌ನು ಮಾಡಿದ (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 123ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ) ಯಾವುದೇ ಭ್ರಷ್ಟಾಚಾರವನ್ನು ಕಾನೂನಿನನ್ವಯ, ನೀವೇ ಮಾಡಿದವುಗಳೆಂದು ಪರಿಗಣಿಸಲಾಗುವುದು ಮತ್ತು ಅದು ನಿಮ್ಮ ಚುನಾವಣೆಯನ್ನು/ ಆಯ್ಕೆಯನ್ನು ಅಸಿಂಧುಗೊಳಿಸುವುದೆಂದು ಸ್ಪಷ್ಟಗೊಳಿಸಲಾಗಿದೆ. ಈ ಕಾರಣದಿಂದಾಗಿ, ಚುನಾವಣಾ ಏಜೆಂಟನನ್ನು ಆಯ್ಕೆ ಮಾಡಿಕೊಳ್ಳುವ ಪೂರ್ವದಲ್ಲಿ ನೀವು ಎಚ್ಚರ ವಹಿಸಬೇಕು. ಭ್ರಷ್ಟಾಚಾರಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ 123ನೇ ಪ್ರಕರಣದ ಉಪಬಂಧಗಳನ್ನು ಗಮನವಿಟ್ಟು ಓದಿಕೊಳ್ಳಬೇಕೆಂದು ನಿಮ್ಮ ಚುನಾವಣಾ ಏಜೆಂಟ್‌ನಿಗೆ ಸೂಚಿಸಿ. ನಿಮ್ಮ ಪರವಾಗಿ ಆತನು ಮಾಡುವ ಎಲ್ಲ ಕಾರ್ಯಗಳಿಗೆ ನೀವು ಸಂಪೂರ್ಣ ಜವಾಬ್ದಾರರಾಗಿರುತ್ತೀರಿ.

6.1.6. ಹೆಚ್ಚುವರಿ ಚುನಾವಣಾ ಏಜೆಂಟ್‌ನ ನೇಮಕಾತಿ: ಪ್ರತಿಯೊಬ್ಬ ಅಭ್ಯರ್ಥಿಯು ವಿವಿಧ ವೆಚ್ಚ ಸಂಬಂಧಿ ವಿಷಯಗಳಲ್ಲಿ ತನಗೆ ನೆರವಾಗಲು ಒಬ್ಬ ಹೆಚ್ಚುವರಿ ಚುನಾವಣಾ ಏಜೆಂಟ್‌ನನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ವೆಚ್ಚ ಮೇಲ್ವಿಚಾರಣೆ ವಿಷಯಗಳಿಗೆ ಸಂಬಂಧಿಸಿದಂತೆ

ಶಾಸನಾತ್ಮಕವಲ್ಲದ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಮಾತ್ರ ಈ ಹೆಚ್ಚುವರಿ ಏಜೆಂಟ್‌ನನ್ನು ನೇಮಕ ಮಾಡಿಕೊಳ್ಳಬೇಕು. ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 12ನೇ ನಿಯಮದೊಂದಿಗೆ ಓದಿಕೊಂಡು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 40ನೇ ಪ್ರಕರಣದ ಅಡಿಯಲ್ಲಿ ಅಭ್ಯರ್ಥಿಯ ಪರವಾಗಿ ಶಾಸನಾತ್ಮಕ ಕರ್ತವ್ಯಗಳನ್ನು ನಿರ್ವಹಿಸಲು ಅಧಿಕೃತಗೊಂಡ ಚುನಾವಣಾ ಏಜೆಂಟ್ ಮಾತ್ರ ನಿರ್ವಹಿಸತಕ್ಕದ್ದು.

6.1.7. ಚುನಾವಣಾ ಆಯೋಗವು, ಚುನಾವಣಾ ಏಜೆಂಟರಿಗೆ ಗುರುತಿನ ಚೀಟಿಯನ್ನು ನೀಡಬೇಕೆಂದು ನಿರ್ದರಿಸಿದೆ. ನಮೂನೆ 8ರಲ್ಲಿರುವ ಚುನಾವಣಾ ಏಜೆಂಟ್‌ನ ನೇಮಕಾತಿ ಪತ್ರವೇ ಅಂಥ ಗುರುತಿನ ಚೀಟಿಯ ಉದ್ದೇಶವನ್ನು ಈಡೇರಿಸುತ್ತದೆ. ನಮೂನೆ 8ರಲ್ಲಿನ ನೇಮಕಾತಿ ಪತ್ರದ ಎರಡೂ ಪ್ರತಿಗಳ ಬಲಬದಿಯ ಮೇಲ್ಭಾಗದ ತುದಿಯಲ್ಲಿ ನಿಮ್ಮ ಚುನಾವಣಾ ಏಜೆಂಟರ ಭಾವಚಿತ್ರವನ್ನು ಸಹ ಅಂಟಿಸಬೇಕು. ಅಧ್ಯಾಯ – Vರ 5.8.2ನೇ ಪ್ಯಾರಾದಲ್ಲಿ ನಿಮ್ಮ ಭಾವಚಿತ್ರಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಅನುಸರಿಸುವ ಕ್ರಮದಲ್ಲಿಯೇ ರಿಟರ್ನಿಂಗ್ ಅಧಿಕಾರಿಯವರು ಚುನಾವಣಾ ಏಜೆಂಟರ ಭಾವಚಿತ್ರವನ್ನು ದೃಢೀಕರಿಸುವರು.

# 7. ಪ್ರಚಾರದ ಅವಧಿ

## 7.1. ಪೀಠಿಕೆ

7.1.1. ಚುನಾವಣಾ ಕಾನೂನಿನನ್ವಯ ಅಭ್ಯರ್ಥಿಯು ತನ್ನ ಉಮೇದುವಾರಿಕೆ ಹಿಂಪಡೆಯುವಿಕೆಗಾಗಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಮತದಾನದ ನಡುವಿನ ಹದಿಮೂರು ಪೂರ್ಣ ದಿನಗಳಿಗಿಂತ ಕಡಿಮೆ ಇರುವಂತಿಲ್ಲ. ಈ ಅವಧಿಯನ್ನು ಚುನಾವಣಾ ಪ್ರಚಾರಕ್ಕಾಗಿ ಮತ್ತು ಮತದಾರರಿಗೆ ಮತಹಾಕುವ ಬಗ್ಗೆ ತಿಳಿವಳಿಕೆ ನೀಡಲು ಮತ್ತು ಅಭ್ಯರ್ಥಿಯು ನಿಯೋಜಿಸಿದ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರು ಹಾಗೂ ಏಜೆಂಟರಿಗೆ ತರಬೇತಿ ನೀಡಲು ಸರಿಯಾಗಿ ಉಪಯೋಗಿಸಿಕೊಳ್ಳಬೇಕು.

7.1.2. ಮತಕ್ಷೇತ್ರದಲ್ಲಿ ಸ್ಪರ್ಧಿಸುವ ಅಭ್ಯರ್ಥಿಯು ಅಲ್ಲಿ ಮತಯಂತ್ರಗಳ ಮೂಲಕ ಮತದಾನ ನಡೆಯುವಂತಿದ್ದರೆ, ಈ ಅವಧಿಯನ್ನು ಮತದಾರರು ಮತಯಂತ್ರದಲ್ಲಿ ತಮ್ಮ ಮತವನ್ನು ಹೇಗೆ ದಾಖಲಿಸಬೇಕು ಎಂಬುದನ್ನು ತಿಳಿಸಲು ಉಪಯೋಗಿಸಿಕೊಳ್ಳಬೇಕು. ಅದೇರೀತಿ ಅಭ್ಯರ್ಥಿಯಿಂದ ನೇಮಕವಾದ ಪೋಲಿಂಗ್ ಹಾಗೂ ಕೌಂಟಿಂಗ್ ಏಜೆಂಟರಿಗೆ ಮತಯಂತ್ರ ಬಳಸುವ ರೀತಿ ನೀತಿಗಳನ್ನು ಸಹ ಅವರಿಗೆ ತಿಳಿಸಬೇಕು. ಅವರ ಮಾರ್ಗದರ್ಶನಕ್ಕಾಗಿ ಚುನಾವಣಾ ಆಯೋಗ ಪ್ರತ್ಯೇಕವಾದ ಕೈಪಿಡಿಗಳನ್ನು ಅವರಿಗಾಗಿ ತಂದಿದ್ದು, ಅದನ್ನು ಅವರು ಎಚ್ಚರಿಕೆಯಿಂದ ಓದಿಕೊಳ್ಳಬೇಕು.

## 7.2. ಭ್ರಷ್ಟಾಚಾರಗಳು ಮತ್ತು ಚುನಾವಣಾ ಅಕ್ರಮಗಳು

7.2.1. ಚುನಾವಣಾ ಪ್ರಚಾರವನ್ನು ಕೈಗೊಂಡಿರುವಾಗ, ಮುಕ್ತ ಹಾಗೂ ನ್ಯಾಯಸಮ್ಮತವಾದ ಚುನಾವಣೆ ನಡೆಸಲು ನೀವು ಗರಿಷ್ಟಮಟ್ಟದ ನೈತಿಕತೆ ಹಾಗೂ ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳಬೇಕು. ಬಹುತೇಕ ಸಂದರ್ಭಗಳಲ್ಲಿ ಸುಗಮವಾಗಿ ನಡೆಯುವ ಚುನಾವಣೆಯು, ಸ್ನೇಹದಿಂದ ಚುನಾವಣೆಗೆ ಸ್ಪರ್ಧಿಸಿದವರು ಜಯಶಾಲಿಯಾಗಲು ಚುನಾವಣಾ ಸಮಯದಲ್ಲಿ ಭ್ರಷ್ಟಾಚಾರ ಮತ್ತು ಚುನಾವಣಾ ಅಪರಾಧಗಳಿಗೆ ಸಂಬಂಧಿಸಿದ ಚುನಾವಣಾ ನಿಯಮಗಳನ್ನು ಉಲ್ಲಂಘಿಸುವುದರಿಂದ ಸುಗಮ ರೀತಿಯ ಚುನಾವಣೆಗೆ ಹಾನಿಯಾಗುತ್ತದೆ. ಚುನಾವಣೆ ಕಾನೂನಿನಲ್ಲಿ ಇಂತಹ ಅನೇಕ ಭ್ರಷ್ಟ ಮಾರ್ಗಗಳನ್ನು ಹಾಗೂ ಚುನಾವಣಾ ಅಪರಾಧಗಳನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 123 ರಿಂದ 136ನೇ ಪ್ರಕರಣಗಳಲ್ಲಿ ಮತ್ತು ಭಾರತ ದಂಡ ಸಂಹಿತೆ ಅಧ್ಯಾಯ IX -A ಯಲ್ಲಿ ತಿಳಿಸಿದೆ. ಅಭ್ಯರ್ಥಿಯ ಅನುಕೂಲಕ್ಕಾಗಿ ಮೇಲೆ ನಮೂದಿಸಿದ ಉಪಬಂಧಗಳನ್ನು ಅನುಬಂಧ–

16 ರಲ್ಲಿ ಮತ್ತೆ ನೀಡಲಾಗಿದೆ. ಅಭ್ಯರ್ಥಿಯ ಏಜೆಂಟರು ಮತ್ತು ಕಾರ್ಯಕರ್ತರು ಮಾಡಿರುವಂಥ ಯಾವುದೇ ಭ್ರಷ್ಟಾಚಾರಗಳು ಮತ್ತು ಅಪರಾಧಗಳು ಆಯೋಗದ ಚುನಾವಣೆಯನ್ನು ಕೆಡಿಸಿದಂತಾಗುತ್ತದೆ. ಆದುದರಿಂದ, ಅಭ್ಯರ್ಥಿಯು ಅತ್ಯುತ್ಸಾಹದಿಂದ ಇರುವ ಏಜೆಂಟರು ಹಾಗೂ ಕಾರ್ಯಕರ್ತರು ಮತದಾರರಿಗೆ ಆಮಿಷ ತೋರಿಸುವ ಯಾವುದೇ ಆಕ್ಷೇಪಾರ್ಹ ಚಟುವಟಿಕೆಗಳಲ್ಲಿ ತೊಡಗದಂತೆ ಅವರನ್ನು ನೋಡಿಕೊಳ್ಳಬೇಕು. ಭ್ರಷ್ಟಾಚಾರದ ಒಂದೇ ಒಂದು ಸಣ್ಣ ನಿದರ್ಶನ ಸಿಕ್ಕರೂ ಕೂಡ, ಚುನಾವಣೆಯಲ್ಲಿ ಅಭ್ಯರ್ಥಿಯು ಜಯಶಾಲಿಯಾದರೂ ಸಹ ಅವರ ಸ್ಥಾನವನ್ನು ಚ್ಯುತಿಗೊಳಿಸಲು ಅದು ಸಾಕಾಗಬಹುದಾಗುತ್ತದೆ.

7.2.2. ವಿಶೇಷವಾಗಿ, ನಿಮ್ಮ ಪರವಾಗಿ ಈ ಕೆಳಕಂಡ ಅಂಶಗಳ ಬಗ್ಗೆ ಅವಕಾಶ ನೀಡಬಾರದು ಎಂದರೆ:

i. ಮತದಾರರಿಗೆ ಯಾವುದೇ ಲಂಚದ ಆಮಿಷಕ್ಕೆ ಅಥವಾ ನ್ಯಾಯವಲ್ಲದ ಪ್ರಭಾವಗಳಿಂದ ಬಲಪ್ರಯೋಗಗೊಳಿಸುವಿಕೆಗೆ ಅಥವಾ ಇತರರ ಸೋಗಿನಲ್ಲಿ ಮತ ಚಲಾವಣೆ ಮಾಡುವುದಕ್ಕೆ;

ii. ಯಾರೇ ಮತದಾರರನ್ನು ಮತದಾನ ಕೇಂದ್ರಕ್ಕೆ ಮತ್ತು ಮತದಾನ ಕೇಂದ್ರದಿಂದ ಯಾವುದೇ ಸಾರಿಗೆ ವಾಹನದ ಮೂಲಕ ಕರೆದೊಯ್ಯಲು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವ್ಯವಸ್ಥೆ ಮಾಡುವುದು; (ಇದೂ ಕೂಡ ದಂಡನಾರ್ಹ ಅಪರಾಧವಾಗಿರುತ್ತದೆ);

iii. ಭಾರತದ ವಿವಿಧ ವರ್ಗಗಳ ನಾಗರಿಕರ ನಡುವೆ ಧರ್ಮ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ದ್ವೇಷ ಬೆಳೆಸುವುದು ಅಥವಾ ಹಾಗೆ ದ್ವೇಷಭಾವನೆ ಬೆಳೆಸಲು ಪ್ರಯತ್ನಿಸುವುದೂ ಕೂಡಾ ಭ್ರಷ್ಟಾಚಾರವಾಗುತ್ತದೆ ಮತ್ತು ಚುನಾವಣೆಯಿಂದ ಅಭ್ಯರ್ಥಿಯನ್ನು ಅನೂರ್ಜಿತಗೊಳಿಸುವಿಕೆಗೆ ಕಾರಣವಾಗುವುದಲ್ಲದೆ ಅದು ಅಭ್ಯರ್ಥಿಯ ಸದಸ್ಯತ್ವವನ್ನೇ ಅನರ್ಹಗೊಳಿಸುವಿಕೆಗೆ ಕಾರಣವಾಗಿ, ಚುನಾವಣೆಗೆ ಸಂಬಂಧಿಸಿದ ಅಪರಾಧವಾಗಿ ಮೂರು ವರ್ಷಗಳಿಗೂ ಹೆಚ್ಚಿನ ಅವಧಿಯ ಜೈಲುಶಿಕ್ಷೆಗೆ ಅಥವಾ, ದಂಡ ಅಥವಾ ಇವೆರಡರ ದಂಡನೀಯ ಶಿಕ್ಷೆಗೆ ಗುರಿಯಾಗಬಹುದಾಗಿರುತ್ತದೆ;

iv. ಯಾರೇ ಸರ್ಕಾರಿ ನೌಕರನು ತಾನು ಇಚ್ಛಿಸಿದ ಅಭ್ಯರ್ಥಿಗೆ ತನ್ನ ಮತ ಹಾಕುವುದನ್ನು ಹೊರತುಪಡಿಸಿ, ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಯಾರೇ ಸರ್ಕಾರಿ ನೌಕರನಿಂದ ನೆರವು ಪಡೆಯುವುದು;

**ವಿ.ಸೂ:** ಸರ್ಕಾರಿ ನೌಕರನು ಇಂತಹ ನೆರವು ನೀಡುವುದೂ ಕೂಡ ಭ್ರಷ್ಟಾಚಾರ ಹಾಗೂ ಅಪರಾಧವಾಗುತ್ತದೆ. ಅಭ್ಯರ್ಥಿಯು ಹಾಗೆ ಮಾಡಲು ಅವರಿಗೆ ಪ್ರಚೋದಿಸಿದರೆ, ಅವರು ಹಾಗೆ ಮಾಡಲು ಕುಮ್ಮಕ್ಕು ನೀಡಿದ ಅಪರಾಧಕ್ಕೆ ಹೊಣೆಗಾರರಾಗುತ್ತೀರಿ:

ಆದರೆ, ಸರ್ಕಾರದ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ಮತ್ತು ಆ ವ್ಯಕ್ತಿಯ ಅಧಿಕೃತ ಕರ್ತವ್ಯವನ್ನು ನಿರ್ವಹಿಸಲು ಅಥವಾ ಹಾಗೆ ಮಾಡಿದನೆಂದು ತಾತ್ಪರ್ಯವಾಗುವ ಯಾವುದೇ ನಿರ್ದಿಷ್ಟಪಡಿಸಿದ ವರ್ಗಗಳಿಗೆ ಸೇರಿದ ವ್ಯಕ್ತಿಯು ಯಾರೇ ಅಭ್ಯರ್ಥಿಗೆ ಅಥವಾ ಅವನ ಚುನಾವಣಾ ಏಜೆಂಟನಿಗೆ ಅಥವಾ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಸಮ್ಮತಿಯಂತೆ ಕಾರ್ಯನಿರ್ವಹಿಸುವ ಯಾರೇ ಇತರ ವ್ಯಕ್ತಿಗೆ ಯಾವುದೇ ರೀತಿಯ ವ್ಯವಸ್ಥೆಗಳನ್ನು ಮಾಡುವುದು ಅಥವಾ ಯಾವುದೇ ಸೌಲಭ್ಯಗಳನ್ನು ಕಲ್ಪಿಸುವುದು ಅಥವಾ ಯಾವುದೇ ಇತರೆ ಕೆಲಸ ಅಥವಾ ಕಾರ್ಯವನ್ನು ಮಾಡುವುದು (ಅಭ್ಯರ್ಥಿಯು ಹೊಂದಿರುವ ಯಾವುದೇ ಹುದ್ದೆ ಅಥವಾ ಯಾವುದೇ ಇತರ ಕಾರಣದಿಂದ), ಹಾಗೆ ಮಾಡಿದಂಥ ವ್ಯವಸ್ಥೆಗಳು, ಸೌಲಭ್ಯಗಳು ಅಥವಾ ಯಾವುದೇ ಕೆಲಸ ಅಥವಾ ಕಾರ್ಯವು ಅಭ್ಯರ್ಥಿಯ ಚುನಾವಣಾ ನಿರೀಕ್ಷೆಗಳ ಮುಂದುವರಿಕೆಗಾಗಿ ನೆರವು ನೀಡಿರುವುದು ಎಂದು ಭಾವಿಸತಕ್ಕದ್ದಲ್ಲ.

v. ಅಭ್ಯರ್ಥಿಯ ಚುನಾವಣಾ ವೆಚ್ಚಗಳು ಕಾನೂನು ರೀತಿಯ ಗರಿಷ್ಠತೆಯನ್ನು ಮೀರುವುದು;

vi. ಯಾವುದೇ ಪ್ರಭಾವ ಅಥವಾ ಇತರ ರೀತಿಯಿಂದ ಮತದಾನ ಕೇಂದ್ರದಿಂದ ಮತಪತ್ರಗಳನ್ನು ಅಥವಾ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಥವಾ ಮತ ಪೆಟ್ಟಿಗೆ ಅಥವಾ ಮತಯಂತ್ರಕ್ಕೆ ಹಾನಿ ಮಾಡುವುದು (ಇವೆಲ್ಲವೂ ಕ್ರಿಮಿನಲ್ ಅಪರಾಧಗಳಾಗುತ್ತವೆ);

vii. ಅಭ್ಯರ್ಥಿಯಾಗಲೀ ಅಥವಾ ಅವರ ಏಜೆಂಟನಾಗಲಿ ಅಥವಾ ಅಭ್ಯರ್ಥಿಯ ಅಥವಾ ಅವರ ಏಜೆಂಟನ ಅನುಮತಿಯ ಮೇರೆಗೆ ಯಾರೇ ವ್ಯಕ್ತಿಯು ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆ ಮೂಲಕ ಮತದಾನ ಮಾಡುವಂತೆ ಕೇಳಿಕೊಳ್ಳುವುದು ಅಥವಾ ಧಾರ್ಮಿಕ ಸಂಕೇತಗಳ ಮೂಲಕ ಅಥವಾ ರಾಷ್ಟ್ರೀಯ ಸಂಕೇತಗಳ ಮೂಲಕ ಅಂದರೆ ರಾಷ್ಟ್ರ ಧ್ವಜ ಅಥವಾ ರಾಷ್ಟ್ರ ಚಿಹ್ನೆಗಳ ಮೂಲಕ ಮತದಾನ ಮಾಡುವುದನ್ನು ತಡೆಯುವುದು ಕಾನೂನಿನನ್ವಯ ಭ್ರಷ್ಟಾಚಾರವಾಗುತ್ತದೆ. (ಆದಾಗ್ಯೂ, ಯಾರೇ ಅಭ್ಯರ್ಥಿಗೆ ಧಾರ್ಮಿಕ ಅಥವಾ ರಾಷ್ಟ್ರ ಚಿಹ್ನೆಯನ್ನು ಹಂಚಿಕೆ ಮಾಡಿದೆ ಎಂದು ಭಾವಿಸತಕ್ಕದ್ದಲ್ಲ);

viii. ಯಾವುದೇ ಉಮೇದುವಾರನಿಗೆ ಸಂಬಂಧಿಸಿದಂತೆ ವ್ಯಕ್ತಿ ಚಾರಿತ್ರ್ಯ, ನಡತೆ, ಹೇಳಿಕೆ, ಸಂಗತಿ ಮೊದಲಾದವುಗಳ ಬಗೆಗಿನ ಸುಳ್ಳು ಪ್ರಕಟಣೆ ಮಾಡುವುದು;

ix. ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 135–ಎ ಪ್ರಕರಣದಲ್ಲಿ ಮತಗಟ್ಟೆ ಸ್ವಾಧೀನಪಡಿಸಿಕೊಳ್ಳುವುದನ್ನು ವ್ಯಾಖ್ಯಾನಿಸಿದ್ದು, ಈ ರೀತಿ ಮಾಡುವುದು ಭ್ರಷ್ಟಾಚಾರವಾಗುತ್ತದೆ

ಮತ್ತು ಚುನಾವಣಾ ಅಪರಾಧವಾಗಿ 6 ತಿಂಗಳಿಗಿಂತ ಕಡಿಮೆ ಇಲ್ಲದಂತಹ ಶಿಕ್ಷೆಯಿಂದ ಹಿಡಿದು ಗರಿಷ್ಟ ಎರಡು ವರ್ಷಗಳವರೆಗೆ ಕಾರಾಗೃಹ ಶಿಕ್ಷೆಯ ಜೊತೆಗೆ ದಂಡವನ್ನೂ ತೆರಬೇಕಾಗುತ್ತದೆ.

## 7.3. ಮಾದರಿ ನೀತಿ ಸಂಹಿತೆ ಮತ್ತು ಅದರ ಪಾಲನೆ

7.3.1 ಮೇಲ್ಕಂಡ ಭ್ರಷ್ಟಾಚಾರಗಳು ಮತ್ತು ಚುನಾವಣಾ ಅಪರಾಧಗಳಲ್ಲದೆ, ಚುನಾವಣಾ ಪ್ರಚಾರದ ಭಿನ್ನ ಕ್ರಮಗಳಿಂದಾಗಿ ಜನರಲ್ಲಿ ಪರಸ್ಪರ ದ್ವೇಷಭಾವನೆ, ಕಿರಿಕಿರಿ, ಮುಖಾಮುಖಿ ಅಸಮಾಧಾನವನ್ನು ಹುಟ್ಟುಹಾಕುವ ಮೂಲಕ ವಿವಿಧ ರಾಜಕೀಯ ಪಕ್ಷಗಳು & ಅಭ್ಯರ್ಥಿಗಳು ವಾತಾವರಣವನ್ನು ಕಲುಷಿತಗೊಳಿಸಬಹುದು. ಸುಗಮ ಶಾಂತಿಯುತ ಚುನಾವಣೆ ನಡೆಸಲು ಚುನಾವಣಾ ಆಯೋಗವು ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ ಮಾದರಿ ನೀತಿ ಸಂಹಿತೆಯನ್ನು ಮಾಡಿದೆ.

7.3.2. ಆಯೋಗವು ಚುನಾಣೆಯನ್ನು ಘೋಷಿಸಿದ ದಿನದಿಂದಲೇ ಮಾದರಿ ನೀತಿ ಸಂಹಿತೆಯು ಜಾರಿಗೆ ಬರುತ್ತದೆ. ಮಾದರಿ ನೀತಿ ಸಂಹಿತೆಯು ಪ್ರಕಟಿಸುತ್ತಿರುವ ಅಂಶಗಳಿಗೂ ಅನ್ವಯವಾಗತಕ್ಕದ್ದು. ಸದರಿ ಸಂಹಿತೆಯನ್ನು ಪರಿಶಿಷ್ಠ-17 ರಲ್ಲಿ ನೀಡಲಾಗಿದೆ.

7.3.3. ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು, ಕಾರ್ಯಕರ್ತರು ಈ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ, ಅಧಿಕಾರಿಗಳು ಎಂತಹ ಕಠಿಣ ಪರಿಸ್ಥಿತಿಯಲ್ಲೂ ಅಂದರೆ ಕಾಯಿಲೆ ಬಿದ್ದರೂ ಅಥವಾ ಘರ್ಷಣೆ ಎದುರಾದರೂ ಚುನಾವಣೆಯನ್ನು ಶಾಂತವಾಗಿ ನಡೆಸುತ್ತಾರೆ. ಆದುದರಿಂದ ಚುನಾವಣೆಯನ್ನು ಯಶಸ್ವಿಗೊಳಿಸಲು ಅಧಿಕಾರಿಗಳು ನಿಮ್ಮಿಂದ ಸಹಕಾರವನ್ನು ಬಯಸುವರು.

## 7.4. ಚುನಾವಣಾ ಮಾದರಿ ನೀತಿ ಸಂಹಿತೆಯ ಅವಲೋಕನ ಸಮಿತಿಗಳು

7.4.1. ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸ್ಪರ್ಧಿಸುವ ಅಭ್ಯರ್ಥಿಗಳು ಮಾದರಿ ನೀತಿ ಸಂಹಿತೆಯನ್ನು ಪಾಲಿಸುವುದನ್ನು ಖಚಿತಪಡಿಸಲು ಮತ್ತು ಆ ಸಂಹಿತೆಯ ನಿರ್ದಿಷ್ಟ ಉಲ್ಲಂಘನೆಯ ಪ್ರಕರಣಗಳ ಪರಿಶೀಲನೆಗಾಗಿ ಚುನಾವಣಾ ಆಯೋಗವು, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಂದರೆ, ಜಿಲ್ಲಾಧಿಕಾರಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು, ಮುಂತಾದವರು ಹಾಗೂ ಜಿಲ್ಲೆಯ ಹಿರಿಯ ಪೋಲೀಸ್ ಅಧಿಕಾರಿಗಳ ಒಂದು ಸ್ಥಾಯೀ ಸಮಿತಿ ರಚಿಸುವಂತೆ ತಿಳಿಸಿದ್ದು, ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಎಲ್ಲಾ ರಾಷ್ಟ್ರೀಯ ಮತ್ತು ರಾಜ್ಯದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸದರಿ ಸಮಿತಿಗಳೊಂದಿಗೆ ಸಹಕರಿಸಬೇಕು.

7.4.2. ಆಯೋಗವು ಮೇಲ್ಕಂಡ ಜಿಲ್ಲಾ ಸಮಿತಿಗಳ ಜೊತೆಗೆ ಇದೇ ರೀತಿಯ ಸಮಿತಿಯೊಂದನ್ನು ಪ್ರತಿ ಕ್ಷೇತ್ರದಲ್ಲೂ ರಚಿಸುತ್ತದೆ. ಈ ಸಮಿತಿಯು ರಿಟರ್ನಿಂಗ್ ಅಧಿಕಾರಿ ಅವರ ಅಧೀನದಲ್ಲಿ

ಉಮೇದುವಾರರಾಗಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಅಥವಾ ಅವರ ಅಧಿಕೃತ ಪ್ರತಿನಿಧಿಗಳು ಹಾಗೂ ಹಿರಿಯ ಪೋಲೀಸ್ ಅಧಿಕಾರಿಗಳೊಂದಿಗೆ ಕಾರ್ಯನಿರ್ವಹಿಸಬೇಕು. ಈ ಸಮಿತಿಯು ಆಗಾಗ್ಗೆ ಸಭೆ ಸೇರಬೇಕು, ಸಾಧ್ಯವಾದರೆ ಪ್ರತಿದಿನ ಸಭೆ ಸೇರಿದರೆ ಇನ್ನು ಉತ್ತಮ. ಇದು ಒಂದು ರೀತಿಯ ಕಾವಲು ಸಮಿತಿಯಾಗಿ ಮಾದರಿ ನೀತಿ ಸಂಹಿತೆಯನ್ನು ಹೇಗೆ ಅನುಷ್ಠಾನಗೊಳಿಸುತ್ತಿದೆ ಎಂಬುದನ್ನು ವೀಕ್ಷಿಸಬೇಕು. ಯಾವುದಾದರೂ ನೀತಿ ಸಂಹಿತೆ ಉಲ್ಲಂಘನೆಯಾಗಿರುವ ಬಗ್ಗೆ ಅಭ್ಯರ್ಥಿಯ ಪ್ರಕರಣಗಳೇನಾದರೂ ಗಮನಕ್ಕೆ ಬಂದರೆ, ಅವುಗಳನ್ನು ಸಮಿತಿಯ ಮುಂದೆ ತಂದು ಈ ಬಗ್ಗೆ ಪರಿಹಾರ ಅಥವಾ ದಂಡನಾ ಕ್ರಮಗಳ ಅವಶ್ಯಕೆಯಿದ್ದರೆ ಆ ಬಗ್ಗೆ ವರದಿ ಮಾಡಬೇಕು.

## 7.5. ಮೆರವಣಿಗೆಗಳು ಮತ್ತು ಸಭೆಗಳು

7.5.1. ಅಭ್ಯರ್ಥಿಯು ಅಥವಾ ಆತನ ಪಕ್ಷವು ಸಾರ್ವಜನಿಕ ಅಥವಾ ಖಾಸಗಿ ಜಾಗದಲ್ಲಿ ಸಭೆ ನಡೆಸಲು ಪೂರ್ವಭಾವಿಯಾಗಿ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯಬೇಕು. ಆಯೋಗವು ಸಾರ್ವಜನಿಕ ಕಲ್ಯಾಣ ಮಂಟಪ, ಸಭಾ ಭವನ ಮುಂತಾದವುಗಳು ದೊರೆಯುವಂತೆ ಎಲ್ಲಾ ಅಭ್ಯರ್ಥಿಗಳಿಗೂ ಸಮಾನ ಪ್ರಾತಿನಿಧ್ಯ ನೀಡುವುದಲ್ಲದೆ ಯಾವುದೇ ರಾಜಕೀಯ ಪಕ್ಷಕ್ಕಾಗಲಿ, ಅಭ್ಯರ್ಥಿಗಾಗಲಿ ಒಲವು ತೋರದಂತೆ, ಆದ್ಯತೆ ಬಿಟ್ಟು ಸಮಾನತೆಯಿಂದ ನೋಡಿಕೊಳ್ಳಲು ಸೂಚನೆ ನೀಡಿದೆ. ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು ಅಥವಾ ಮತ್ತಿತರ ಆರಾಧನಾ ಸ್ಥಳಗಳನ್ನು ಪ್ರಚಾರ ಕಾರ್ಯಕ್ಕೆ ಅಥವಾ ಸಭೆಗಳಿಗೆ ಬಳಸಬಾರದು. ಅದೇ ರೀತಿ ಮೆರವಣಿಗೆಗಳಿಗೂ ಸಹ ಅನುಮತಿಯನ್ನು ಅಗತ್ಯವಾಗಿ ಪಡೆಯಬೇಕು. ಸ್ಥಳೀಯ ಪೋಲೀಸ್ ಅಧಿಕಾರಿಗಳಿಗೆ ಸಂಚಾರ ಮತ್ತು ರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ಮೊದಲೇ ಅರ್ಜಿಯನ್ನು ಸಲ್ಲಿಸಿರಬೇಕು. ಒಂದು ರಸ್ತೆ, ಮಾರ್ಗದಲ್ಲಿ ಅಭ್ಯರ್ಥಿಯೊಬ್ಬರು ಮೆರವಣಿಗೆಯನ್ನು ಮಾಡುವಂತಿದ್ದರೆ ಅದೇ ದಿನ ಅದೇ ರಸ್ತೆ, ಮಾರ್ಗದಲ್ಲಿ ಮತ್ತೊಬ್ಬ ಅಭ್ಯರ್ಥಿ ಮೆರವಣಿಗೆ ನಡೆಸುವುದನ್ನು ನಿಯಂತ್ರಿಸಿದೆ. ಮತದಾರರಿಗೆ ಚಿತ್ರದ ಮೂಲಕ ಮಾಡುವ ಜಾಗೃತಿ ಪ್ರತಿನಿಧೀಕರಣವು ಮೃದುವಾದ, ಅತ್ಯಾಧುನಿಕ, ನಿಜ ಅರಿವು ಮೂಡಿಸುವಂಥವುಗಳಾಗಿರಬೇಕು. ಭಾಷಣಗಳನ್ನು ಮಾಡುವಾಗ ಹಾಗೂ ಘೋಷಣೆಗಳನ್ನು ಕೂಗುವಾಗ ಅತ್ಯಂತ ಹೆಚ್ಚಿನ ಸಂಯಮ ಮತ್ತು ಸಭ್ಯತೆಯನ್ನು ಕಾಯ್ದುಕೊಳ್ಳಬೇಕು.

7.5.2. ಚುನಾವಣಾ ಪ್ರಚಾರಕಾರ್ಯದ ಉದ್ದೇಶಕ್ಕಾಗಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲು ಧ್ವನಿವರ್ಧಕ ಅಥವಾ ಧ್ವನಿ ವಿಸ್ತಾರಕ (ಪರಿವರ್ಧಕ) ಅಥವಾ ಬೇರಾವುದೇ ರೀತಿಯ ಉಪಕರಣಗಳನ್ನು ಜೋಡಿಸಿದ್ದರೂ ಅವುಗಳನ್ನು ರಾತ್ರಿ 10 ರಿಂದ ಬೆಳಿಗ್ಗೆ 6 ಗಂಟೆವರೆಗೆ ಬಳಸುವಂತಿಲ್ಲ.

7.5.3. ಯಾವುದೇ ಮತದಾನ ಕ್ಷೇತ್ರದಲ್ಲಿ ಮತದಾನಕ್ಕೂ ಮುಂಚಿನ 48 ಗಂಟೆಗಳ ಅವಧಿಯಲ್ಲಿ ಯಾವುದೇ ರೀತಿಯ ಧ್ವನಿವರ್ಧಕ ಜೋಡಿಸಿದ ವಾಹನಗಳನ್ನು ಬಳಸುವಂತಿಲ್ಲ.

7.5.4. ಚುನಾವಣಾ ಪ್ರಚಾರ ಕಾರ್ಯಕ್ಕೆ ಇಷ್ಟೇ ಸಂಖ್ಯೆಯ ವಾಹನಗಳನ್ನು ಬಳಸಬೇಕೆಂದು ಯಾವುದೇ ನಿರ್ಬಂಧವಿಲ್ಲ. ಆದರೆ ಅಧಿಕೃತ ಅನುಮತಿಯನ್ನು ಪಡೆಯದೆ ಯಾವುದೇ ವಾಹನವನ್ನು ಬಳಸಬಾರದು. ಚುನಾವಣಾ ಪ್ರಚಾರಕಾರ್ಯಕ್ಕೆ ಬಳಸುವ ವಾಹನಗಳ ವಿವರಗಳನ್ನು ಪ್ರಚಾರಕಾರ್ಯಕ್ಕೂ ಮುನ್ನ ಜಿಲ್ಲಾ ಚುನಾವಣಾ ಅಧಿಕಾರಿ ಅಥವಾ ವಿಶೇಷ ಅಧಿಕಾರ ನೀಡಿ ನೇಮಿಸಲ್ಪಟ್ಟ ಜಿಲ್ಲಾ ಚುನಾವಣಾ ಅಧಿಕಾರಿ(ಗಳಿಗೆ) ನೀಡಬೇಕು. ಯಾವ ವಾಹನಗಳನ್ನು ಪ್ರಚಾರಕ್ಕೆ ಬಳಸುವಿರೋ ಆ ರೀತಿಯ ವಾಹನಗಳಿಗೆ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಒಂದು ವೇಳೆ ಮತ್ತೇನಾದರೂ ಹೆಚ್ಚಿನ ವಾಹನಗಳು ಬೇಕಾದರೆ ಅಭ್ಯರ್ಥಿಗಳಾಗಲೀ ಅಥವಾ ಅವರ ಚುನಾವಣಾ ಏಜೆಂಟರಾಗಲಿ ಅವುಗಳ ವಿವರಗಳನ್ನು ಸಲ್ಲಿಸಿ ಹೆಚ್ಚುವರಿ ಬೇಕಾದ ವಾಹನಗಳಿಗೆ ಅನುಮತಿಯನ್ನು ಪಡೆಯಬೇಕು. ಚುನಾವಣಾ ಪ್ರಚಾರ ಕಾರ್ಯಕ್ಕೆ ಹೆಚ್ಚುವರಿ ವಾಹನಗಳು ಬೇಕಾದಲ್ಲಿ ವಿವರಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಆ ವಾಹನಗಳನ್ನು ಯಾವ ಕ್ಷೇತ್ರ ಅಥವಾ ಪ್ರದೇಶದಲ್ಲಿ ಬಳಸುತ್ತಾರೆ ಎಂಬ ಬಗ್ಗೆ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಚುನಾವಣಾ ಪ್ರಚಾರ ಕಾರ್ಯಕ್ಕೆ ಬಳಸುವ ಪ್ರಚಾರ ವಾಹನಗಳ ಖರ್ಚು ವೆಚ್ಚವನ್ನು ಉಮೇದುವಾರನ ಚುನಾವಣಾ ವೆಚ್ಚದಲ್ಲಿ ಭರಿಸತಕ್ಕದ್ದು.

7.5.5. ಚುನಾವಣಾ ಪ್ರಚಾರಕ್ಕೆ ಬಳಸುವ ವಾಹನವನ್ನು ಜಿಲ್ಲಾ ಆಡಳಿತಾಧಿಕಾರಿಗಳಲ್ಲಿ ನೋಂದಣಿ ಮಾಡಿಸದೇ ಪ್ರಚಾರ ಕಾರ್ಯದಲ್ಲಿ ಬಳಸಲ್ಪಡುತ್ತಿದ್ದರೆ, ಅಂತಹ ವಾಹನಗಳನ್ನು ಅನಧಿಕೃತ ಎಂದು ಪರಿಗಣಿಸಲಾಗುತ್ತದೆ ಮತ್ತು ಇದು, ಭಾರತ ದಂಡ ಸಂಹಿತೆಯ ಅಧ್ಯಾಯ IX–ಎ ರಲ್ಲಿ ತಿಳಿಸಿದಂತೆ ದಂಡನಾರ್ಹ ಅಪರಾಧವಾಗಿದ್ದು, ಕೂಡಲೇ ಪ್ರಚಾರ ಕಾರ್ಯದಿಂದ ಅಂತಹ ವಾಹನವನ್ನು ವಶಕ್ಕೆ ಪಡೆಯಬೇಕು.

7.5.6. ವಾಹನಗಳ ಹೊರಭಾಗಕ್ಕೆ ಧ್ವನಿವರ್ಧಕದಂತಹ ಸಾಧನಗಳನ್ನು ಜೋಡಿಸುವಂತಿದ್ದರೆ ಮೋಟಾರು ವಾಹನ ಅಧಿನಿಯಮ/ನಿಯಮಗಳ ಮತ್ತು ಯಾವುದೇ ಸ್ಥಳೀಯ ಕಾನೂನು/ನಿಯಮಗಳನ್ವಯ ಮಾಡಬೇಕು. ವಿಶೇಷ ಪ್ರಚಾರ ವಾಹನಗಳನ್ನು ರೂಪಾಂತರಗೊಳಿಸಬೇಕಾದರೆ ಅಂದರೆ, ವೀಡಿಯೋ ರಥ, ಮುಂತಾದವುಗಳನ್ನು ಉಪಯೋಗಿಸುವಂತಿದ್ದರೆ, ಅದಕ್ಕೆ ಮೋಟಾರು ವಾಹನಗಳ ಅಧಿನಿಯಮದ ಅಡಿ ಸಕ್ಷಮ ಪ್ರಾಧಿಕಾರದ ಅಗತ್ಯ ಅನುಮತಿಯನ್ನು ಪಡೆಯತಕ್ಕದ್ದು.

7.5.7. ಅಭ್ಯರ್ಥಿಯು ಪ್ರಚಾರಕ್ಕಾಗಿ ಬಳಸುವ ವಾಹನ ಎಡೆಬಿಡದೆ ಓಡಾಡುವ ಕಾರಣ ರಿಟರ್ನಿಂಗ್ ಅಧಿಕಾರಿಗಳಿಂದ ಪೂರ್ವಭಾವಿಯಾಗಿ ಪಡೆದ ಅನುಮತಿಯ ಮೂಲ ಪ್ರಮಾಣ ಪತ್ರವನ್ನು

(ನಕಲು ಪ್ರತಿಯಲ್ಲದ) ವಾಹನದ ಮುಂಭಾಗದ ಗಾಜಿನ ಮೇಲೆ ಯಾವ ಉಮೇದುವಾರನ ಹೆಸರಿನಲ್ಲಿ ನೀಡಲಾಗಿದೆ ಎಂಬುದನ್ನು ಸ್ಪಷ್ಟವಾಗಿ ಕಾಣುವಂತೆ ಪ್ರದರ್ಶಿಸಬೇಕು.

7.5.8. ಹೆಲಿಕಾಪ್ಟರ್ ಬಳಸುವ ಮತ್ತು ಅದನ್ನು ಇಳಿಸುವ ಬಗ್ಗೆ ಹಾಗೂ ಅದರಲ್ಲಿ ಪ್ರಯಾಣಿಸುವವರ ವಿವರಗಳನ್ನು ಪ್ರಯಾಣಕ್ಕೆ 3 ದಿನ ಮುನ್ನವೇ ಜಿಲ್ಲಾ ಆಡಳಿತಾಧಿಕಾರಿಗಳಿಗೆ ತಿಳಿಸಬೇಕು.

## 7.6. ಸಾರ್ವಜನಿಕ ಅಥವಾ ಖಾಸಗಿ ಆಸ್ತಿಗಳನ್ನು ವಿರೂಪಗೊಳಿಸುವುದು

ಹಲವು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ಯಾವುದೇ ಆಸ್ತಿಯನ್ನು, ಅಂದರೆ ಕಟ್ಟಡ, ಶಿಲ್ಪ, ಗುಡಿಸಲು, ಗೋಡೆ, ಮರ, ಬೇಲಿ, ಗೂಟ, ಕಂಬ ಮತ್ತಿತರ ನಿರ್ಮಾಣಗಳನ್ನು ವಿರೂಪಗೊಳಿಸುವುದನ್ನು ತಡೆಯಲು ಕಾನೂನುಗಳನ್ನು ರೂಪಿಸಿವೆ. ದುರ್ಬಲಗೊಳಿಸುವುದರಲ್ಲಿ ಸೌಂದರ್ಯವನ್ನು ಹಾನಿಗೊಳಿಸುವುದು, ಅದಕ್ಕೆ ಹಾನಿ ಮಾಡುವುದು, ರೂಪಗೆಡಿಸುವುದು, ನಾಶ ಅಥವಾ ಯಾವುದೇ ರೀತಿಯಲ್ಲಿ ನೋವುಂಟು ಮಾಡುವಿಕೆಯು ವಿರೂಪಗೊಳಿಸುವಿಕೆಯಲ್ಲಿ ಸೇರುತ್ತಿದ್ದು, ಇಂಥ ಅಪರಾಧವು ಸಂಜ್ಞೇಯವಾದುದು ಮತ್ತು ಶಿಕ್ಷಾರ್ಹವಾದುದಾಗಿದ್ದು, ಅಂದರೆ ಕಾರಾಗೃಹವಾಸ ಅಥವಾ ದಂಡ ಅಥವಾ ಅವೆರಡೂ ಆಗಿರುತ್ತದೆ. ಅಭ್ಯರ್ಥಿಯು ಮತ್ತು ಅವರ ಏಜೆಂಟರು ಈ ಕಾನೂನುಗಳನ್ನು ಅಥವಾ ಸಾರ್ವಜನಿಕ ಆಸ್ತಿ ಅಥವಾ ಖಾಸಗಿ ಆಸ್ತಿಗಳಿಗೆ ಸಂಬಂಧಿಸಿದ ಸಾಮಾನ್ಯ ಕಾನೂನುಗಳನ್ನು ಉಲ್ಲಂಘಿಸಬಾರದು. ಭಾರತ ಚುನಾವಣಾ ಆಯೋಗವು ಕಾಲಕಾಲಕ್ಕೆ, ಸಾರ್ವಜನಿಕ ಹಾಗೂ ಖಾಸಗಿ ಒಡೆತನದ ಆಸ್ತಿಗಳನ್ನು ವಿರೂಪಗೊಳಿಸಬಾರದೆಂದು ಆದೇಶ ಹೊರಡಿಸುತ್ತದೆ. ಅದ್ದರಿಂದ ಅಭ್ಯರ್ಥಿಯು ಸಾರ್ವಜನಿಕ ಆಸ್ತಿಗಳನ್ನು ವಿರೂಪಗೊಳಿಸುವಾಗ ಈ ಸ್ಥಳೀಯ ಕಾನೂನುಗಳನ್ನು ತಿಳಿದಿರಬೇಕಾಗಿರುತ್ತದೆ ಹಾಗೂ ಈ ಕೆಳಕಂಡ ಆಯೋಗದ ಸೂಚನೆಗಳನ್ನು ಅನುಸರಿಸಬೇಕಾಗುತ್ತದೆ.

### i. ಸಾರ್ವಜನಿಕ ಸ್ಥಳಗಳ ವಿರೂಪಗೊಳಿಸುವಿಕೆ

1. ಗೋಡೆ ಬರಹ ಬರೆಯುವಂತಿಲ್ಲ, ಭಿತ್ತಿಪತ್ರಗಳನ್ನು ಅಂಟಿಸುವಂತಿಲ್ಲ. ವಿರೂಪಗೊಳಿಸುವ ಇನ್ನಾವುದೇ ರೀತಿಯನ್ನೂ ಮಾಡುವಂತಿಲ್ಲ ಅಥವಾ ಯಾವುದೇ ಕಟೌಟ್ಸ್, ತೂಗು ಚಿತ್ರ, ಬ್ಯಾನರ್ (ಪತಾಕೆ/ಧ್ವಜ), ರಾಜಕೀಯ ಜಾಹಿರಾತು ಇತ್ಯಾದಿಗಳನ್ನು ಹಾಕಲು ಯಾವುದೇ ಸರ್ಕಾರಿ ಸ್ಥಳವಿದ್ದರೂ ಈ ಬಗ್ಗೆ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.
2. ಒಂದು ವೇಳೆ ಹಣ ಪಾವತಿಸಿ ಮತ್ತು ಇತರೆ ರೀತಿಯಲ್ಲಿ ಈ ಮೇಲಿನಂತೆ ಪ್ರಚಾರ ಮಾಡಲು ಕಾನೂನು ಅವಕಾಶ ನೀಡಿದ್ದರೆ, ಈ ಕಾನೂನುಗಳಿಗೊಳಪಟ್ಟು ಹಾಗೆ ಮಾಡಲು ಸ್ಥಳೀಯ

ಕಟ್ಟುನಿಟ್ಟಿನ ಆದೇಶ ನೀಡಬಹುದು. ಯಾವುದೇ ರಾಜಕೀಯ ಪಕ್ಷ(ಗಳು) ಅಥವಾ ಅಭ್ಯರ್ಥಿ(ಗಳು) ಈ ರೀತಿಯ ಸ್ಥಳದ ಮೇಲೆ ಪ್ರಭಾವ ಬೀರುವಿಕೆ / ಏಕಸ್ವಾಮ್ಯತೆ ಹೊಂದಿಲ್ಲ ಎಂಬುದು ಖಚಿತಪಡಿಸಿಕೊಳ್ಳಬೇಕು. ಎಲ್ಲಾ ರಾಜಕೀಯ ಪಕ್ಷಗಳಿಗೆ, ಅಭ್ಯರ್ಥಿಗಳಿಗೆ ಈ ಸಂಬಂಧ ಸಮಾನ ಅವಕಾಶವನ್ನು ಒದಗಿಸಬೇಕು.

3. ಸಾರ್ವಜನಿಕ ಸ್ಥಳದಲ್ಲಿ ಬಿಲ್ ಪ್ರಕಟಣೆಗಳು, ಹೋರ್ಡಿಂಗ್‌ಗಳು ಇತ್ಯಾದಿ ಜಾಹಿರಾತುಗಳನ್ನು ಪ್ರದರ್ಶಿಸಲು ಸ್ಥಳವನ್ನು ನಿರ್ದಿಷ್ಟವಾಗಿ ಗುರುತು ಮಾಡಿದ್ದರೆ ಮತ್ತು ಇಂತಹ ಜಾಗವನ್ನು ಈಗಾಗಲೇ ಬಾಡಿಗೆಗೆ ಅಥವಾ ಯಾವುದೇ ಏಜೆನ್ಸಿಗೆ ಹಂಚಿಕೆ ಮಾಡಿದ್ದರೆ, ಜಿಲ್ಲಾ ಚುನಾವಣಾ ಅಧಿಕಾರಿಗಳು ಸಂಬಂಧಪಟ್ಟ ಪುರಸಭೆ ಅಧಿಕಾರಿಗಳ ಮೂಲಕ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಇಂತಹ ಜಾಗದಲ್ಲಿ ಚುನಾವಣಾ ಅವಧಿಯಲ್ಲಿ ಚುನಾವಣಾ ಸಂಬಂಧಿ ಜಾಹಿರಾತುಗಳನ್ನು ಪ್ರಕಟಿಸಲು ಸಮಾನ ಅವಕಾಶ ನೀಡುವುದನ್ನು ಖಚಿತಪಡಿಸಿಕೊಳ್ಳಬಹುದು.

**ii. ಖಾಸಗಿ ಸ್ಥಳಗಳನ್ನು ವಿರೂಪಗೊಳಿಸುವುದು**

ಎ. ತಾತ್ಕಾಲಿಕವಾಗಿ ಪ್ರಕಟಿಸುವ ಮತ್ತು ಸುಲಭವಾಗಿ ತೆಗೆದುಹಾಕಬಹುದಾದ ರೀತಿಯ ಜಾಹಿರಾತಿನ ವಸ್ತುಗಳನ್ನು, ಅಂದರೆ ಧ್ವಜಗಳು ಮತ್ತು ಬ್ಯಾನರ್‌ಗಳನ್ನು ಖಾಸಗಿ ಆವರಣದಲ್ಲಿ ಹಾಕಲು ಅಲ್ಲಿನ ನಿವಾಸಿಯಿಂದ ಅನುಮತಿಯನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ರಾಜ್ಯಗಳಲ್ಲಿ ಯಾವುದೇ ಸ್ಥಳೀಯ ಕಾನೂನು ಇರುವುದಿಲ್ಲ. ಇಂತಹ ಅನುಮತಿಯನ್ನು ಯಾವುದೇ ಒತ್ತಡ ಅಥವಾ ಬೆದರಿಕೆಯ ಮೂಲಕ ಪಡೆಯದೆ ಸ್ವಪ್ರೇರಣೆಯಿಂದ ಪಡೆಯಬೇಕು. ಅಂತಹ, ಬ್ಯಾನರ್ ಅಥವಾ ಧ್ವಜಗಳು ಇತರರಿಗೆ ಯಾವುದೇ ರಗಳೆ, ಉಪದ್ರವಗಳನ್ನು ಉಂಟುಮಾಡಬಾರದು. ಈ ಕುರಿತ ಲಿಖಿತ ಒಪ್ಪಿಗೆಯ ನಕಲು ಪ್ರತಿಯನ್ನು ಇವುಗಳನ್ನು ಹಾಕುವ 3 ದಿನಗಳಿಗೂ ಮುನ್ನ ಚುನಾವಣಾ ಅಧಿಕಾರಿಗೆ ಸಲ್ಲಿಸಬೇಕು ಹಾಗೂ ಈ ಬ್ಯಾನರ್‌ಗಳನ್ನು ಈ ಕೆಳಗಿನ (ಸಿ) ಉಪ–ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವಂತೆ ಮಾತ್ರ ಹಾಕಬೇಕು.

ಬಿ. ಸುಲಭವಾಗಿ ತೆಗೆದುಹಾಕಲಾಗದಿರುವ ಗೋಡೆ ಬರಹ, ಭಿತ್ತಿ ಪತ್ರಗಳನ್ನು ಅಂಟಿಸುವುದು ಮತ್ತು ಇತರ ಶಾಶ್ವತ ಮತ್ತು ಅರೆಶಾಶ್ವತ ವಿರೂಪಗೊಳಿಸುವಿಕೆಗೆ ಯಾವುದೇ ಸ್ಥಳೀಯ ಕಾನೂನುಗಳು ಅನುಮತಿ ನೀಡದಿದ್ದರೆ, ಈ ಬಗ್ಗೆ ಸ್ವತ್ತಿನ ಮಾಲೀಕನ ಒಪ್ಪಿಗೆ ಪಡೆದಿದ್ದಾಗ್ಯೂ ಕೂಡ ಎಲ್ಲಾ ಸಂದರ್ಭಗಳಲ್ಲಿ ಅದನ್ನೇ

ಅವಲಂಬಿಸಬಾರದು. ಇದು ಈ ಬಗ್ಗೆ ಸ್ಥಳೀಯ ಕಾನೂನುಗಳು ಇಲ್ಲದ ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ.

ಸಿ. ಖಾಸಗಿ ಆವರಣದ ಮಾಲೀಕರ ಒಪ್ಪಿಗೆಯಿಂದ ಗೋಡೆ ಬರಹ ಮತ್ತು ಪೋಸ್ಟರ್‌ಗಳನ್ನು ಅಂಟಿಸಲು, ಹೋರ್ಡಿಂಗ್‌ಗಳನ್ನು ನಿಲ್ಲಿಸಲು, ಬ್ಯಾನರ್ ಇತ್ಯಾದಿಗಳನ್ನು ಹಾಕಲು ಸ್ಥಳೀಯ ಕಾನೂನುಗಳು ಇಲ್ಲದಿರುವಲ್ಲಿ, ಸಂಬಂಧಿಸಿದ ಅಭ್ಯರ್ಥಿಗಳು ಅಥವಾ ರಾಜಕೀಯ ಪಕ್ಷಗಳು ಸ್ವತ್ತಿನ ಮಾಲೀಕರ ಪೂರ್ವಭಾವಿ ಅನುಮತಿಯನ್ನು ಪಡೆದು, ಈ ಕೆಳಕಂಡ ನಮೂನೆಯಲ್ಲಿ ಆ ಮೂಲ ಪ್ರತಿಯ ನಕಲು ಪ್ರತಿಗಳನ್ನು 3 ದಿನಗಳ ಒಳಗಾಗಿ ರಿಟರ್ನಿಂಗ್ ಅಧಿಕಾರಿಗೆ ಅಥವಾ ಅವರು ಗೊತ್ತುಪಡಿಸಿದ ಅಧಿಕಾರಿಗೆ ಸಲ್ಲಿಸತಕ್ಕದ್ದು. ಇಂಥ ಪ್ರಕರಣಗಳಲ್ಲಿ ಈ ಸಂಬಂಧವಾಗಿ ಅನುಮತಿ ನೀಡಿದ ಮಾಲೀಕನ ಖರ್ಚು ವೆಚ್ಚದ ಅಥವಾ ಆಗಬಹುದಾದ ವೆಚ್ಚದ ವಿವರಗಳನ್ನು ಹಾಗೂ ಮಾಲೀಕರ ಹೆಸರು, ವಿಳಾಸ, ನೀಡತಕ್ಕದ್ದು. ಸಮುದಾಯಗಳ ನಡುವೆ ಎತ್ತಿಕಟ್ಟುವಿಕೆಯಂತಹ ಅಥವಾ ಅವಿಶ್ವಾಸ ಉಂಟು ಮಾಡಬಹುದಾದ ರೀತಿಯ ಬರಹಗಳು ಇಲ್ಲದಿರುವ ಬರಹ/ಪ್ರದರ್ಶನಗಳಿಗೆ ಮಾತ್ರ ಅನುಮತಿ ನೀಡಬೇಕು. ಈ ರೀತಿಯ ನಿರ್ದಿಷ್ಟಪಡಿಸಿದ ಪ್ರಚಾರದ ವೆಚ್ಚವನ್ನು ಅಭ್ಯರ್ಥಿಯ ಕ್ಷೇತ್ರದ ಚುನಾವಣಾ ವೆಚ್ಚದಲ್ಲಿ ಸೇರಿಸತಕ್ಕದ್ದು. ಅಭ್ಯರ್ಥಿಗೆ ತಿಳಿಸದೇ ಪಕ್ಷಕ್ಕೆ ಮಾಡಿದ ವಿಶೇಷ ಪ್ರಚಾರದ ವೆಚ್ಚವನ್ನು ಆತನ ಲೆಕ್ಕದಲ್ಲಿ ಸೇರಿಸುವಂತಿಲ್ಲ. ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಯು ಯಾವ ಗ್ರಾಮ/ಪ್ರದೇಶ/ನಗರವಾರು ಪ್ರಚಾರ ಕೈಗೊಂಡ ವಿವರದ ಮಾಹಿತಿಯನ್ನು ರಿಟರ್ನಿಂಗ್ ಅಧಿಕಾರಿಗೆ ಅಥವಾ ಅಧಿಕೃತ ಅಧಿಕಾರಿಗೆ ಅಥವಾ ಚುನಾವಣಾ ವೀಕ್ಷಕರು ಅಥವಾ ಇತರೆ ಅಧಿಕಾರಿಗಳು ಈ ಸಂಬಂಧ ಪರೀಕ್ಷಿಸಲು ಹಾಗೂ ಚುನಾವಣೆಯನ್ನು ಸುಲಭವಾಗಿ ನಡೆಸಲು ಅನುವಾಗುವಂತೆ ಈ ಬಗ್ಗೆ ಅನುಮತಿ ಪಡೆದ 3 ದಿನಗಳೊಳಗೆ ಸಲ್ಲಿಸಬೇಕು.

**--------------- ಲೋಕಸಭೆ /ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ಶ್ರೀ/ಶ್ರೀಮತಿ -------------------------- ಅವರು ಚುನಾವಣೆ ಸಂಬಂಧ ಪ್ರದರ್ಶಿಸುವ ಗೋಡೆ ಬರಹಗಳು/ಭಿತ್ತಿ ಪತ್ರಗಳು/ಹೋರ್ಡಿಂಗ್ಸ್/ ಬ್ಯಾನರ್‌ಗಳು ಮುಂತಾದವುಗಳ ವಿವರಗಳು.**

ಗ್ರಾಮ/ನಗರ/ಪ್ರದೇಶದ ಹೆಸರು : ______________________

| ಕ್ರ.ಸಂ | ಲಿಖಿತ ಅನುಮತಿ ಪಡೆದ ಖಾಸಗಿ ಆಸ್ತಿಯ ಮಾಲೀಕರ ಹೆಸರು & ವಿಳಾಸ | ಗೋಡೆ ಬರಹ/ ಹೊರ್ಡಿಂಗ್ಸ್/ ಬ್ಯಾನರ್ ಅಥವಾ ಭಿತ್ತಿ ಪತ್ರದ (ಗೋಡೆ ಬರಹ, ಹೊರ್ಡಿಂಗ್ಸ್/ ಬ್ಯಾನರ್ ಅಥವಾ ಭಿತ್ತಿ ಪತ್ರಗಳ ಅಳತೆಯ) ವಿವರಗಳನ್ನು ಸೂಚಿಸಬೇಕು | ಗೋಡೆಬರಹ/ಹೊರ್ಡಿಂಗ್ಸ್/ಬ್ಯಾನರ್ /ಪೋಸ್ಟರ್ ಇತ್ಯಾದಿಗಳಿಗೆ ಖರ್ಚು ಮಾಡಿದ /ಮಾಡಬಹುದಾದ ವೆಚ್ಚ (ರೂ.ಗಳಲ್ಲಿ) |
|---|---|---|---|
| | | | |
| | | | |
| | | | ಒಟ್ಟು |

ಡಿ. ಜಾರಿಯಲ್ಲಿರುವ ಯಾವುದೇ ಸ್ಥಳೀಯ ಕಾನೂನು ಮತ್ತು ಯಾವುದೇ ನ್ಯಾಯಾಲಯದ ಆದೇಶಗಳ ನಿರ್ಬಂಧಗಳಿಗೊಳಪಟ್ಟು ರಾಜಕೀಯಪಕ್ಷಗಳು, ಅಭ್ಯರ್ಥಿಗಳು, ಅವರ ಏಜೆಂಟ್‌ಗಳು, ಕಾರ್ಯಕರ್ತರು ಅಥವಾ ಬೆಂಬಲಿಗರು ತಮ್ಮ ಸ್ವಂತ ಖರ್ಚಿನಲ್ಲಿ ಬ್ಯಾನರ್‌ಗಳನ್ನು, ಬಂಟಿಂಗ್‌ಗಳನ್ನು, ಧ್ವಜಗಳನ್ನು, ಕಟೌಟ್‌ಗಳನ್ನು ಸ್ವಇಚ್ಛೆಯಿಂದ ಯಾವುದೇ ಪಕ್ಷದ, ಸಂಘಟನೆಯ ಅಥವಾ ವ್ಯಕ್ತಿಯ ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗದೆ ಚುನಾವಣಾ ಪ್ರಚಾರಕ್ಕೆ ಹಾಕಿಕೊಳ್ಳಬಹುದು, ಆದರೆ ಈ ಪ್ರಚಾರ ಸಾಮಗ್ರಿಗಳು ಯಾವುದೇ ರೀತಿಯಲ್ಲಿ ಯಾರೊಬ್ಬರಿಗೂ ಅನಾನುಕೂಲವಾಗುವಂತೆ ಇರುವಂತಿಲ್ಲ. ಇಂಥ ಪ್ರದರ್ಶಿತ ಬ್ಯಾನರ್ ಗಳು, ಧ್ವಜಗಳು, ಮುಂತಾದವು ಯಾರೇ ನಿರ್ದಿಷ್ಟ ಅಭ್ಯರ್ಥಿಗೆ ಮತಹಾಕುವಂತೆ ಆಕರ್ಷಿಸುವ ರೀತಿಯಲ್ಲಿ ಇದ್ದರೆ, ಅವು ಐ.ಪಿ.ಸಿ. ಯ171–ಹೆಚ್ ಪ್ರಕರಣದ ಉಪಬಂಧಗಳಲ್ಲಿ ತಿಳಿಸಿರುವ ದಂಡನೆಗೆ ಒಳಗಾಗುತ್ತವೆ. ಐ.ಪಿ.ಸಿ.ಯ 171–ಹೆಚ್ ಪ್ರಕರಣವು ಯಾರೇ ಅಭ್ಯರ್ಥಿಯು ಈ ಪ್ರಚಾರ ಸಾಮಗ್ರಿಗಳಿಗೆ ಖರ್ಚು ಮಾಡುವ ವೆಚ್ಚಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯ ಅಥವಾ ವಿಶೇಷ ಪ್ರಾಧಿಕಾರದ ಲಿಖಿತ ಅನುಮತಿ ಪಡೆಯದಿದ್ದರೆ, ಇದಕ್ಕಾಗಿ 500/– ರೂ.ಗಳಿಗೂ ಹೆಚ್ಚಿನ ದಂಡ ವಿಧಿಸುವುದನ್ನು ತಿಳಿಸುತ್ತದೆ. ಹತ್ತು ರೂ.ಗಳನ್ನು ಮೀರದಂಥ ವೆಚ್ಚಗಳನ್ನು ಮಾಡುವ ಯಾರೇ ವ್ಯಕ್ತಿ, ಅಂಥ ಖರ್ಚುಗಳನ್ನು ಮಾಡಿದ 10 ದಿನಗಳೊಳಗೆ ಪ್ರಾಧಿಕಾರಿಯ ಒಪ್ಪಿಗೆ ಪಡೆಯದಿದ್ದರೆ, ಅದನ್ನು ಅಭ್ಯರ್ಥಿಯ ಒಪ್ಪಿಗೆಯೊಂದಿಗೆ ಮಾಡಲಾದುದು ಎಂದು ಭಾವಿಸತಕ್ಕದ್ದು.

## (iii) ಸಭಾಂಗಣಗಳು/ಆಡಿಟೋರಿಯಂಗಳು ಹಾಗೂ ಇತರೆ ಸಾರ್ವಜನಿಕ ಆಸ್ತಿಗಳನ್ನು ವಿರೂಪಗೊಳಿಸುವುದು

1. ಸಭಾಂಗಣಗಳು / ಆಡಿಟೋರಿಯಂಗಳು / ಸ್ವಂತ ಸಭಾ ಭವನಗಳು ಸರ್ಕಾರದ / ಸ್ಥಳೀಯ ಪ್ರಾಧಿಕಾರಗಳ/ ಸರ್ಕಾರಿ ವಲಯ ಉದ್ಯಮಗಳ/ಸಹಕಾರ ಸಂಘಗಳ ಸ್ವಾಮ್ಯಕ್ಕೊಳಪಟ್ಟವುಗಳಾಗಿದ್ದಲ್ಲಿ, ಅವುಗಳ ಆಡಳಿತದ ಕಾನೂನುಗಳಲ್ಲಿ/ ಮಾರ್ಗದರ್ಶನಗಳಲ್ಲಿ ರಾಜಕೀಯ ಸಭೆಗಳನ್ನು ನಡೆಸುವುದನ್ನು ಸೇರಿಸಿರದಿದ್ದರೆ ಅದಕ್ಕೆ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಹಂಚಿಕೆಯನ್ನು ಸರಿಯಾದ ರೀತಿಯಲ್ಲಿ ಮಾಡಿದೆ. ಯಾವುದೇ ರಾಜಕೀಯ ಪಕ್ಷದ ಅಥವಾ ಅಭ್ಯರ್ಥಿಯ ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗಿಲ್ಲವೆಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಅಂತಹ ಸ್ಥಳಗಳಲ್ಲಿ ಬ್ಯಾನರ್ಸ್, ಬಂಟಿಂಗ್ಸ್, ಧ್ವಜಗಳು, ಕಟೌಟ್ಸ್‌ಗಳನ್ನು ಪ್ರದರ್ಶಿಸುವುದಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನು/ಮಾರ್ಗದರ್ಶಿ ಸೂತ್ರಗಳ ಮೇರೆಗಿನ ಯಾವುವೇ ನಿರ್ಬಂಧಗಳಿಗೆ ಒಳಪಟ್ಟು ಸಭೆಗಳನ್ನು ನಡೆಸಲು ಅನುಮತಿ ನೀಡಬಹುದು. ಅಂತಹ ಸ್ಥಳದಲ್ಲಿ ಹಾಕಿದ ಬ್ಯಾನರ್‌ಗಳು, ಧ್ವಜಗಳು ಮುಂತಾದವುಗಳನ್ನು ಸಭೆ ಮುಕ್ತಾಯವಾದ ನಂತರ ಆವರಣವನ್ನು ಬಳಸಿದ ಪಕ್ಷ/ವ್ಯಕ್ತಿಯು ಕೂಡಲೇ ಅವುಗಳನ್ನು ತೆಗೆದು ಹಾಕಬೇಕು. ಗೋಡೆ ಬರಹ/ಪೋಸ್ಟರ್ ಮುಂತಾದಂಥ ಶಾಶ್ವತ/ಅರೆಶಾಶ್ವತವಾಗಿ ವಿರೂಪಗೊಳಿಸುವ ಸಾಮಗ್ರಿಗಳನ್ನು ಅಂಥ ಸ್ಥಳದಲ್ಲಿ ಬರೆಯಲು / ಅಂಟಿಸಲು ಅನುಮತಿಸತಕ್ಕದ್ದಲ್ಲ.
2. ಯಾವುದೇ ರಾಜಕೀಯ ಪಕ್ಷ/ಸಂಘ/ಅಭ್ಯರ್ಥಿ/ವ್ಯಕ್ತಿಯಿಂದ ಸ್ಥಳೀಯ ಕಾನೂನು ಅಥವಾ ಮೇಲ್ಕಂಡ ಯಾವುವೇ ಸೂಚನೆಗಳನ್ನು ಉಲ್ಲಂಘಿಸಿ ಯಾವುದೇ ಆಸ್ತಿಯು ವಿರೂಪಗೊಳಿಸುವಿಕೆಗೆ ಒಳಗಾಗಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿ/ಜಿಲ್ಲಾ ಚುನಾವಣಾ ಅಧಿಕಾರಿಯು ಕೂಡಲೇ ಅಂಥ ಪ್ರಕಟಣೆಗಳನ್ನು ತೆಗೆದುಹಾಕಲು ಅಂಥ ಅಪರಾಧಿಗೆ ನೋಟೀಸ್ ನೀಡಬೇಕು. ಒಂದು ರಾಜಕೀಯ ಪಕ್ಷ/ಸಂಘ/ಅಭ್ಯರ್ಥಿ/ವ್ಯಕ್ತಿಯು ಈ ಬಗ್ಗೆ ಕ್ರಮ ವಹಿಸದಿದ್ದರೆ, ಜಿಲ್ಲಾ ಪ್ರಾಧಿಕಾರಗಳು ಅಂಥ ವಿರೂಪಗೊಳಿಸುವಿಕೆಯನ್ನು ತೆಗೆಯಲು ಕ್ರಮವಹಿಸಬಹುದು. ಇದನ್ನು ತೆಗೆಯಲು ಮಾಡಿದ ವೆಚ್ಚವನ್ನು ಇದಕ್ಕೆ ಕಾರಣವಾದ ರಾಜಕೀಯ ಪಕ್ಷ/ಸಂಘ/ಅಭ್ಯರ್ಥಿ/ವ್ಯಕ್ತಿಗಳಿಂದ ವಸೂಲಿ ಮಾಡಬಹುದು ಮತ್ತು ಇದನ್ನು ಸಂಬಂಧಿಸಿದ ಅಭ್ಯರ್ಥಿಯ ಚುನಾವಣಾ ವೆಚ್ಚಕ್ಕೆ ಸೇರಿಸಬೇಕು ಹಾಗೂ ಸಂಬಂಧಿಸಿದ ಕಾನೂನಿನ ಉಪಬಂಧಗಳ ಅಡಿಯಲ್ಲಿ ಅಪರಾಧಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದು.

## iv. ವಾಹನಗಳ ವಿರೂಪಗೊಳಿಸುವಿಕೆ

1. ಮೋಟಾರು ವಾಹನ ಅಧಿನಿಯಮ, ಅದರ ನಿಯಮಗಳು ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ನ್ಯಾಯಾಲಯದ ಆದೇಶಗಳಿಗೆ ಒಳಪಟ್ಟು, ಖಾಸಗಿ ವಾಹನಗಳಲ್ಲಿ ವಾಹನದ ಮಾಲೀಕನು ತನ್ನ ಇಷ್ಟದಂತೆ ಧ್ವಜಗಳು ಮತ್ತು ಸ್ಟಿಕ್ಕರ್‌ಗಳನ್ನು ವಾಹನದ ಮೇಲೆ ಇರಿಸಿಕೊಳ್ಳಬಹುದು. ಆದರೆ ಇವು ಇತರ ರಸ್ತೆ ಬಳಕೆದಾರರಿಗೆ ಯಾವುದೇ ಅನಾನುಕೂಲ ಅಥವಾ ಅಡ್ಡಿಯಾಗಂತೆ ಇರಿಸಿಕೊಳ್ಳಬೇಕು. ಒಂದು ವೇಳೆ ಪ್ರದರ್ಶಿಸುವ ಧ್ವಜಗಳು, ಸ್ಟಿಕ್ಕರ್‌ಗಳು ಯಾವುದೇ ನಿರ್ದಿಷ್ಟ ಅಭ್ಯರ್ಥಿಗೆ ಮತ ಕೇಳುವ ಉದ್ದೇಶವನ್ನು ಹೊಂದಿ ಪ್ರದರ್ಶಿತವಾಗಿದ್ದರೆ, ಅದರ ವಿರುದ್ಧ ಐ.ಪಿ.ಸಿ.ಯ 171 ಹೆಚ್ ಉಪಬಂಧಗಳನುಸಾರ ಕ್ರಮಕೈಗೊಳ್ಳಬಹುದಾಗಿರುತ್ತದೆ.
2. ವಾಣಿಜ್ಯ ವಾಹನಗಳಲ್ಲಿ ಯಾವುದೇ ಧ್ವಜ, ಸ್ಟಿಕ್ಕರ್ ಮುಂತಾದವುಗಳನ್ನು ಪ್ರದರ್ಶಿಸಲು ಆ ವಾಹನಕ್ಕೆ ಚುನಾವಣಾ ಪ್ರಚಾರಕ್ಕಾಗಿ ಜಿಲ್ಲಾ ಚುನಾವಣಾ ಅಧಿಕಾರಿ/ರಿಟರ್ನಿಂಗ್ ಅಧಿಕಾರಿಯವರ ಅಗತ್ಯ ಪರವಾನಗಿಯನ್ನು ಪಡೆದ ಹೊರತು ಮತ್ತು ಅದರ ಮೂಲಪ್ರತಿಯನ್ನು ವಾಹನದ ಚಾಲಕನ ಮುಂದಿನ ಗಾಜಿನ ಮೇಲೆ ಪ್ರದರ್ಶಿಸದ ಹೊರತು ಅನುಮತಿ ನೀಡತಕ್ಕದ್ದಲ್ಲ.
3. ವಾಹನಗಳ ಮೇಲೆ ಧ್ವನಿವರ್ಧಕಗಳನ್ನು ಅಳವಡಿಸುವುದೂ ಸೇರಿದಂತೆ ಬಾಹ್ಯವಾಗಿ ಮಾರ್ಪಾಡು ಮಾಡುವುದು ಮೋಟಾರು ವಾಹನಗಳ ಅಧಿನಿಯಮ / ನಿಯಮಗಳ ಮತ್ತು ಯಾವುದೇ ಇತರ ಸ್ಥಳೀಯ ಕಾನೂನು /ನಿಯಮಗಳ ಉಪಬಂಧಗಳಿಗೆ ಒಳಪಟ್ಟಿರುತ್ತದೆ. ವಾಹನಗಳಲ್ಲಿ ವಿಶೇಷ ಪ್ರಚಾರಕ್ಕಾಗಿ ವೀಡಿಯೋ ರಥ, ಮುಂತಾದವುಗಳನ್ನು ಬಳಸುವಂತಿದ್ದರೆ ಮೋಟಾರು ವಾಹನಗಳ ಅಧಿನಿಯಮಯಡಿ ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಅನುಮತಿಯನ್ನು ಪಡೆದ ನಂತರ ಮಾತ್ರವೇ ಅವುಗಳನ್ನು ಬಳಸಬಹುದು.

## v. ಪ್ರಚಾರ ಕುರಿತ ಇತರೆ ಬಾಬುಗಳು

ವೆಚ್ಚದ ಲೆಕ್ಕಪತ್ರಕ್ಕೆ ಒಳಪಟ್ಟು ಈ ಕೆಳಗಿನವುಗಳಿಗೆ ಅನುಮತಿಸಬಹುದು:–

1. ಮೆರವಣಿಗೆಗಳು ಮತ್ತು ರ್‍ಯಾಲಿಗಳು, ಮುಂತಾದವುಗಳಲ್ಲಿ ಧ್ವಜಗಳು, ಬ್ಯಾನರ್‌ಗಳು, ಕಟೌಟ್ಸ್‌ಗಳು ಇತ್ಯಾದಿಗಳನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಸ್ಥಳೀಯ ಕಾನೂನುಗಳು ಮತ್ತು ನಿರ್ಬಂಧಿತ ಆದೇಶಗಳಿಗೊಳಪಟ್ಟು ಕೊಂಡೊಯ್ಯಬಹುದು.
2. ಅಂತಹ ಮೆರವಣಿಗೆಗಳಲ್ಲಿ ಪಕ್ಷ/ ಅಭ್ಯರ್ಥಿಯು ಸರಬರಾಜು ಮಾಡಿದ ಟೋಪಿ/ಮುಖವಾಡ/ಸ್ಕಾರ್ಫ್ ಇತ್ಯಾದಿ ವಿಶೇಷ ಪರಿಕರಗಳನ್ನು ಧರಿಸಲು ಅನುಮತಿ

ನೀಡಬಹುದು. ಆದಾಗ್ಯೂ, ಪಕ್ಷ/ಅಭ್ಯರ್ಥಿಯು ಪ್ರಮುಖ ವಸ್ತ್ರಗಳಾದ ಸೀರೆ/ಷರ್ಟ್, ಮುಂತಾದವುಗಳನ್ನು ನೀಡುವುದಕ್ಕೆ ಅನುಮತಿ ಇರುವುದಿಲ್ಲ.

3. ಸರ್ಕಾರಿ, ಅನುದಾನಿತ, ಖಾಸಗಿ ಶಿಕ್ಷಣ ಸಂಸ್ಥೆಗಳ ಆವರಣಗಳನ್ನು ರಾಜಕೀಯ ಪ್ರಚಾರಗಳು ಮತ್ತು ರ್‍ಯಾಲಿಯನ್ನು ನಡೆಸುವುದಕ್ಕೆ ಉಪಯೋಗಿಸತಕ್ಕದ್ದಲ್ಲ.

### vi. ತಾತ್ಕಾಲಿಕ ಪ್ರಚಾರ ಕಛೇರಿಯ ಸ್ಥಾಪನೆ

ಸ್ಥಳೀಯ ಪ್ರಚಾರದ ಉದ್ದೇಶಕ್ಕಾಗಿ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ತಾತ್ಕಾಲಿಕ ಪ್ರಚಾರ ಕಛೇರಿ ಸ್ಥಾಪಿಸಲು ಅನುಮತಿಸಬಹುದು ಅಂದರೆ:–

1. ಇಂಥ ಕಛೇರಿಯನ್ನು ಯಾವುದೇ ಸಾರ್ವಜನಿಕ ಅಥವಾ ಖಾಸಗೀ ಸ್ವತ್ತನ್ನು ಒತ್ತುವರಿ ಮಾಡುವ ಮೂಲಕ ತೆರೆಯುವಂತಿಲ್ಲ.
2. ಇಂಥ ಕಚೇರಿಗಳನ್ನು ಯಾವುದೇ ಧಾರ್ಮಿಕ ಸ್ಥಳಗಳು ಅಥವಾ ಅಂಥ ಧಾರ್ಮಿಕ ಸ್ಥಳಗಳ ಆವರಣಗಳಲ್ಲಿ ಆರಂಭಿಸುವಂತಿಲ್ಲ.
3. ಇಂತಹ ಯಾವುದೇ ಕಛೇರಿಗಳನ್ನು ಯಾವುದೇ ಶೈಕ್ಷಣಿಕ ಸಂಸ್ಥೆಯ/ಆಸ್ಪತ್ರೆಗಳ ಪಕ್ಕದಲ್ಲಿ ತೆರೆಯುವಂತಿಲ್ಲ.
4. ಇಂಥ ಕಚೇರಿಗಳನ್ನು ಈಗಿರುವ ಮತದಾನ ಕೇಂದ್ರದ 200 ಮೀ.ಗಳ ವ್ಯಾಪ್ತಿಯೊಳಗೆ ಆರಂಭಿಸುವಂತಿಲ್ಲ.
5. ಇಂತಹ ಕಛೇರಿಗಳಲ್ಲಿ ಪಕ್ಷದ ಚಿಹ್ನೆ/ಫೋಟೋಗಳೊಂದಿಗೆ ಪಕ್ಷದ ಒಂದು ಧ್ವಜ ಮತ್ತು ಬ್ಯಾನರ್ ಅನ್ನು ಮಾತ್ರ ಪ್ರದರ್ಶಿಬಹುದು.
6. ಇಂತಹ ಕಛೇರಿಗಳಲ್ಲಿ ಬಳಸಲಾಗುವ ಬ್ಯಾನರ್‌ನ ಗಾತ್ರವು '4 ಅಡಿ x 8ಅಡಿ' ಅಳತೆಯನ್ನು ಮೀರಿರಬಾರದು ಮತ್ತು ಸ್ಥಳೀಯ ಕಾನೂನುಗಳಲ್ಲಿ ಬ್ಯಾನರ್/ಹೋರ್ಡಿಂಗ್ ಇತ್ಯಾದಿಗಳಿಗೆ ಕಡಿಮೆ ಗಾತ್ರವನ್ನು ಸೂಚಿಸಿದ್ದರೆ, ಅವುಗಳು ಸ್ಥಳೀಯ ಕಾನೂನಿನ ಪ್ರಕಾರ ನಿರ್ದಿಷ್ಟಪಡಿಸಿದ ಚಾಲ್ತಿಯಲ್ಲಿರುವ ಗಾತ್ರದಲ್ಲಿರಬೇಕು.

## 7.7. ಗಲಭೆಯುಂಟಾಗಬಹುದಾದ ಸೂಕ್ಷ್ಮ ಪ್ರದೇಶವನ್ನು ಗುರ್ತಿಸುವುದು

7.7.1. ದೇಶದ ಕೆಲವು ಭಾಗಗಳಲ್ಲಿ, ಅದರಲ್ಲೂ ಸಮಾಜದ ಸೂಕ್ಷ್ಮ ಪ್ರದೇಶದ ವರ್ಗಗಳ ಮತದಾರರು ವಿಶೇಷವಾಗಿ ಭಯ ಹಾಗೂ ಬೆದರಿಕೆಯ ಕಾರಣದಿಂದ ಕಳವಳಕ್ಕೆ ಒಳಗಾಗಿದ್ದಾರೆ. ಈ ಸವಾಲನ್ನು ಎದುರಿಸುವ ದೃಷ್ಟಿಯಿಂದ ಚುನಾವಣಾ ಆಯೋಗವು 'ಸೂಕ್ಷ್ಮ ಪ್ರದೇಶವನ್ನು

ಗುರ್ತಿಸುವ' ವ್ಯವಸ್ಥೆಯನ್ನು ಪರಿಚಯಿಸಿದೆ. ಕಾನೂನು ಸುವ್ಯವಸ್ಥೆಯ ಒಂದು ಅನುಕೂಲಕರವಾದ ವಾತಾವರಣದಲ್ಲಿ ಮಾತ್ರ ಮುಕ್ತ ಮತ್ತು ನ್ಯಾಯೋಚಿತ ಚುನಾವಣೆಯನ್ನು ನಡೆಸಬಹುದಾಗಿದೆ. ಆದ್ದರಿಂದ, ಚುನಾವಣೆ ಮತ್ತು ಮತದಾನ ನಡೆಯುವ ಅವಧಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ಕಾಪಾಡುವುದು ಅತ್ಯಗತ್ಯವಾಗಿದೆ. ಚುನಾವಣೆಗಳಲ್ಲಿ ಹಣ ಮತ್ತು ಅಧಿಕಾರದ ಬಲಪ್ರದರ್ಶನ ನಡೆಯುವುದನ್ನು ತಿಳಿದುಕೊಂಡು ಮತ್ತು ಚುನಾವಣಾ ರಾಜಕೀಯದಲ್ಲಿ ಕೆಲವು ಚಾಲ್ತಿಯಲ್ಲಿರುವ ಸಾಮಾಜಿಕ ಆರ್ಥಿಕ ವಾಸ್ತವಗಳನ್ನು ಗಣನೆಗೆ ತೆಗೆದುಕೊಂಡು, ಚುನಾವಣಾ ಆಯೋಗವು ಮತದಾನ ಕೇಂದ್ರದ ಪ್ರದೇಶಗಳಲ್ಲಿ ಇಂತಹ ಭಯ ಮತ್ತು ಬೆದರಿಕೆಯುಂಟು ಮಾಡುವ ಪ್ರಕರಣಗಳನ್ನು ತಡೆಯಲು ಈ ಕೆಳಕಂಡ ಸೂಚನೆಗಳನ್ನು ನೀಡಿರುತ್ತದೆ.

## 7.8. ಮತದಾನ ನಡೆಯುವ 48 ಗಂಟೆಗಳ ಅವಧಿಗೂ ಮುನ್ನ ಸಾರ್ವಜನಿಕ ಸಭೆಗಳ ಮತ್ತು ಮೆರವಣಿಗೆಗಳ ನಿಷೇಧ

7.8.1. ಯಾರೇ ವ್ಯಕ್ತಿಯು, ಕಾನೂನು ಪ್ರಕಾರ;

ಎ. ಚುನಾವಣೆಗೆ ಸಂಬಂಧಿಸಿದಂತೆ, ಯಾವುದೇ ಸಾರ್ವಜನಿಕ ಸಭೆ ಕರೆಯುವುದು, ನಡೆಸುವುದು, ಹಾಜರಾಗುವುದು, ಅದರಲ್ಲಿ ಸೇರುವುದು ಅಥವಾ ಭಾಷಣ ಮಾಡುವುದು ಅಥವಾ ಮೆರವಣಿಗೆ ನಡೆಸುವುದನ್ನು ಮಾಡತಕ್ಕದ್ದಲ್ಲ; ಅಥವಾ

ಬಿ. ಸಿನಿಮಾಟೋಗ್ರಾಫ್, ದೂರದರ್ಶನ ಅಥವಾ ಇತರ ರೀತಿಯ ಉಪಕರಣಗಳ ಮೂಲಕ ಯಾವುದೇ ಚುನಾವಣಾ ವಿಷಯವನ್ನು ಸಾರ್ವಜನಿಕರಿಗೆ ಪ್ರದರ್ಶಿಸತಕ್ಕದ್ದಲ್ಲ; ಅಥವಾ

ಸಿ. ಮತದಾನ ಮುಗಿಯಲು ನಿಗದಿ ಪಡಿಸಿದ 48 ಗಂಟೆಗಳ ಅವಧಿಯಲ್ಲಿ ಯಾವುದೇ ಚುನಾವಣೆಯ ವಿಷಯ ಕುರಿತು ಸಾರ್ವಜನಿಕರನ್ನು ಆಕರ್ಷಿಸುವ ದೃಷ್ಠಿಯಿಂದ, ಯಾವುದೇ ಸಂಗೀತ ಕಛೇರಿ ಅಥವಾ ಯಾವುದೇ ನಾಟಕ ಪ್ರದರ್ಶನ ಅಥವಾ ಯಾವುದೇ ಇತರ ಮನರಂಜನೆ ಅಥವಾ ಅಂಥ ವ್ಯವಸ್ಥೆಗಳನ್ನು ಮಾಡತಕ್ಕದ್ದಲ್ಲ.

7.8.2. ಮೇಲ್ಕಂಡ ನಿಬಂಧನೆಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಜೈಲು ಶಿಕ್ಷೆಗೆ ಅಥವಾ ದಂಡನೆಗೆ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

7.8.3. "ಚುನಾವಣಾ ವಿಷಯ" ಎಂದರೆ, ಚುನಾವಣೆ ಫಲಿತಾಂಶವನ್ನು ಪ್ರಭಾವಿಸುವ ಅಥವಾ ಅದರ ಪರಿಣಾಮವನ್ನು ಉದ್ದೇಶಿಸಿದ ಅಥವಾ ಅದನ್ನು ಗಣನೆಗೆ ತೆಗೆದುಕೊಳ್ಳುವ ಯಾವುದೇ ವಿಷಯ ಎಂದರ್ಥ.

7.8.4. ಸಾರ್ವಜನಿಕ ಸಭೆಗಳನ್ನು ನಡೆಸುವಾಗ ಅಥವಾ ಯಾವುವೇ ಮೆರವಣಿಗೆಗಳು ಇತ್ಯಾದಿಗಳನ್ನು ಕೈಗೊಳ್ಳುವಾಗ ನೀವು ಈ ನಿಬಂಧನೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

### 7.9. ಸಾರ್ವಜನಿಕ ಸಭೆಗಳಿಗೆ ಅಡಚಣೆ:

7.9.1. ನಿಮ್ಮ ಪ್ರತಿಸ್ಪರ್ಧಿ ಅಭ್ಯರ್ಥಿಯ ಯಾರೇ ಬೆಂಬಲಿಗ ಅಥವಾ ನಿಮಗೆ ಅಥವಾ ನಿಮ್ಮ ಪಕ್ಷದ ವಿರೋಧಿಯಾದ ಯಾರಾದರೂ ನಿಮ್ಮ ಚುನಾವಣಾ ಸಭೆಗಳಲ್ಲಿ ಯಾವುದೇ ಅಡಚಣೆಯನ್ನು ಉಂಟುಮಾಡಿದರೆ, ಆ ಸಭೆಯ ಅಧ್ಯಕ್ಷರು, ಸಭೆಗೆ ತೊಂದರೆ ಉಂಟುಮಾಡಿದ ಯಾವುದೇ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಪತ್ತೆ ಹಚ್ಚಲು ಅಲ್ಲಿ ನಿಯೋಜಿಸಿರುವ ಯಾರೇ ಪೊಲೀಸ್ ಅಧಿಕಾರಿಯಲ್ಲಿ ಕೇಳಿಕೊಳ್ಳಬಹುದು. ಪೋಲೀಸರು ತಪ್ಪಿತಸ್ಥರ ವಿರುದ್ಧ ಜನತಾ ಪ್ರಾತಿನಿಧ್ಯ ಅಧಿನಿಯಮ 1951 ರ 127ನೇ ಪ್ರಕರಣದ ಅಡಿಯಲ್ಲಿ ಕಾನೂನುಕ್ರಮ ಜರುಗಿಸಬಹುದು. ಈ ಪ್ರಕರಣದ ಅಡಿಯಲ್ಲಿನ ಅಪರಾಧವು ಸಂಜ್ಞೇಯವಾದುದಾಗಿರುತ್ತದೆ. ಇದನ್ನು ಅನುಬಂಧ–16ರಲ್ಲಿ ಸಲ್ಲಿಸಲಾಗಿದೆ.

7.9.2. ಅಂತೆಯೇ, ನಿಮ್ಮ ಕಾರ್ಯಕರ್ತರು, ಏಜೆಂಟರು ಮತ್ತು ಬೆಂಬಲಿಗರು ಸಹ ಪ್ರತಿ ಸ್ಪರ್ಧಿ ಅಭ್ಯರ್ಥಿಗಳ ಸಾರ್ವಜನಿಕ ಸಭೆಗಳಿಗೆ ತೊಂದರೆಯುಂಟು ಮಾಡಬಾರದೆಂದು ತಿಳಿಸಬೇಕು.

### 7.10. ಚುನಾವಣಾ ನೀತಿ ಸಂಹಿತೆಯ ಕಟ್ಟುನಿಟ್ಟಿನ ಪಾಲನೆ –ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಪಾಲನೆ ಮಾಡಬೇಕಾದವು ಮತ್ತು ಮಾಡಬಾರದವು.

7.10.1. ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ತಿಳಿಸಿದಂತೆ, ಆಯೋಗವು ಮುಕ್ತ, ನಿಷ್ಪಕ್ಷಪಾತ, ಮತ್ತು ಶಾಂತಿಯುತ ಚುನಾವಣೆಗಳನ್ನು ನಡೆಸುವುದನ್ನು ಖಚಿತಗೊಳಿಸುವುದಕ್ಕಾಗಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ ಅವರ ಮಾರ್ಗದರ್ಶನಕ್ಕಾಗಿ ಅವರು ಮಾಡುವ ಮತ್ತು ಮಾಡಬಾರದ ವಿಷಯಗಳ ಬಗ್ಗೆ ಎರಡು ಸೆಟ್‌ಗಳನ್ನು (ಅನುಬಂಧ 11 & 12 ನ್ನು ನೋಡಿ) ನೀಡಿದೆ. ಅಭ್ಯರ್ಥಿಯು ಮಾತ್ರವಲ್ಲದೆ ಮತ್ತು ರಾಜಕೀಯ ಪಕ್ಷ, ನೀವು ಸ್ಥಾಪಿಸಿದ ಹೊಸ ಪಕ್ಷ, ಅವರ ಏಜೆಂಟ್‌ಗಳು, ಕಾರ್ಯಕರ್ತರು, ಕೆಲಸಗಾರರು, ಬೆಂಬಲಿಗರು, ಹಿತೈಷಿಗಳು ಚುನಾವಣಾ

ಘೋಷಣೆಯ ಸಮಯದಿಂದ ಮತ್ತು ಅವುಗಳ ಮುಕ್ತಾಯದವರೆಗೆ ಕಡ್ಡಾಯವಾಗಿ ಮಾಡಬಹುದಾದ ಮತ್ತು ಮಾಡಬಾರದವುಗಳನ್ನು ಗಮನಿಸಿ ಖಚಿತಪಡಿಸಿಕೊಳ್ಳಬೇಕು.

## 7.11. ಚುನಾವಣಾ ಕರ ಪತ್ರಗಳು ಇತ್ಯಾದಿಗಳ ಮುದ್ರಣ ಮತ್ತು ಪ್ರಕಟಣೆಯ ನಿರ್ಬಂಧಗಳು

7.11.1. ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 127–ಎ ಪ್ರಕರಣದಲ್ಲಿ ಚುನಾವಣಾ ಕರ ಪತ್ರಗಳು ಮತ್ತು ಭಿತ್ತಿಚಿತ್ರಗಳ ಮುದ್ರಣ ಮತ್ತು ಪ್ರಕಟಣೆಯ ನಿರ್ಬಂಧಗಳನ್ನು ವಿಧಿಸಿದ್ದು, ಅದರಂತೆ ಈ ಕೆಳಕಂಡ ಅಂಶಗಳ ಬಗ್ಗೆ ಸಹ ಅಭ್ಯರ್ಥಿಯ ಗಮನಕ್ಕೆ ತಿಳಿಸಿದೆ ಅಂದರೆ:–

ಎ. ಮುದ್ರಣ ಮಾಡುವ ಅಥವಾ ವಿಶೇಷವಾಗಿ ಮುದ್ರಿಸುವ ಯಾವುದೇ ಪ್ರತಿಯೊಂದು ಚುನಾವಣಾ ಕರಪತ್ರದಲ್ಲಿ, ಜಾಹಿರಾತಿನಲ್ಲಿ ಅಥವಾ ಪ್ರಕಟಣೆ ಭಿತ್ತಿ ಪತ್ರಗಳಲ್ಲಿ (ಕೈಯಿಂದ ಬರೆಯುವುದನ್ನು ಹೊರತುಪಡಿಸಿ) ಅವುಗಳ ಮುಂಭಾಗದಲ್ಲಿ ಮುದ್ರಕರ ಹೆಸರು ಮತ್ತು ವಿಳಾಸ ಮತ್ತು ಪ್ರಕಾಶಕರ ಹೆಸರು ಮತ್ತು ವಿಳಾಸವನ್ನು ಕಡ್ಡಾಯವಾಗಿ ಮುದ್ರಿಸಬೇಕು:

ಬಿ. ಅಂಥ ದಸ್ತಾವೇಜಿನ ಮುದ್ರಕರು ಇವುಗಳ ಪ್ರಕಾಶಕರಿಂದ ಈ ಕುರಿತು ಆತನ ಸಹಿ ಹಾಕಿದ ಗುರುತಿನ ಬಗ್ಗೆ (ದ್ವಿಪ್ರತಿಯಲ್ಲಿ) ಒಂದು ಘೋಷಣೆಯನ್ನು ಪಡೆಯಬೇಕು. ಪ್ರಕಾಶಕರ ಹೆಸರನ್ನು ವೈಯುಕ್ತಿಕವಾಗಿ ತಿಳಿದಿರುವ ಇಬ್ಬರಿಂದ ಇದನ್ನು ದೃಢೀಕರಿಸಬೇಕು (ಪರಿಶಿಷ್ಠ–18ರ ಅನುಬಂಧ 'ಎ' ಯನ್ನು ನೋಡಿ).

ಸಿ. ದಸ್ತಾವೇಜನ್ನು ಮುದ್ರಿಸಿದ ಮುದ್ರಕನು ಅದನ್ನು ರಾಜ್ಯದ ರಾಜಧಾನಿಯಲ್ಲಿ ಮುದ್ರಿಸಿದ್ದರೆ ಕೂಡಲೇ ಅದರ ಘೋಷಣೆಯ ಒಂದು ಪ್ರತಿಯನ್ನು ಮುಖ್ಯ ಚುನಾವಣಾ ಅಧಿಕಾರಿಗೆ ಕಳುಹಿಸಬೇಕು ಮತ್ತು ಒಂದು ವೇಳೆ ಬೇರೆ ಯಾವುದೇ ಸಂದರ್ಭದಲ್ಲಿ ಮುದ್ರಿಸಿದರೆ ಅದನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಕಳುಹಿಸಬೇಕು.

ಡಿ. ಈ ಪ್ರಕರಣದ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದರೆ 6 ತಿಂಗಳವರೆಗೆ ಜೈಲು ಶಿಕ್ಷೆ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ದಂಡ ಅಥವಾ ಇವೆರಡರಿಂದಲೂ ದಂಡಿಸಬಹುದು.

ಇ. ಆದಾಗ್ಯೂ ಈ ನಿರ್ಬಂಧಗಳು ಕೇವಲ ದಿನಾಂಕ, ಸಮಯ, ಸ್ಥಳ ಮತ್ತು ಇತರ ವಿವರಗಳನ್ನು ತಿಳಿಸುವ ಹ್ಯಾಂಡ್ ಬಿಲ್, ಪ್ರಕಟಣೆ, ಭಿತ್ತಿಪತ್ರಗಳಿಗೆ ಅಥವಾ ಚುನಾವಣಾ ಏಜೆಂಟ್ ಅಥವಾ ಕಾರ್ಯಕರ್ತರಿಗೆ ತಿಳಿಸುವ ಚುನಾವಣಾ ಸಭೆಯ ಇತರ ವಿವರಗಳು ಮತ್ತು ನಿಯತ ಸೂಚನೆಗಳಿಗೆ ಅನ್ವಯಿಸುವುದಿಲ್ಲ.

7.11.2. ಕಾನೂನಿನ ಈ ಮೇಲ್ಕಂಡ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ನಿಟ್ಟಿನಲ್ಲಿ ಆಯೋಗವು ದಿನಾಂಕ 2.9.94ರ ಆದೇಶದಲ್ಲಿ (ಪರಿಶಿಷ್ಠ–18) ವಿವರವಾಗಿ ತಿಳಿಸಿದ್ದು, ಆ ಆದೇಶವು ಮುಖ್ಯವಾಗಿ ಈ ಕೆಳಕಂಡವುಗಳನ್ನು ಉಪಬಂಧಿಸುತ್ತದೆ.

ಎ. ಮುದ್ರಕನು ಮೇಲ್ಕಂಡ ಉಪ ಪ್ಯಾರಾ (ಸಿ)ಯಲ್ಲಿ ತಿಳಿಸಲಾದ ಒಂದರ ಬದಲಿಗೆ ಮುದ್ರಿಸಿದ ಸಾಮಗ್ರಿಯ ನಾಲ್ಕು ಪ್ರತಿಗಳನ್ನು ಇದನ್ನು ಮುದ್ರಿಸಿದ 3 ದಿನಗಳೊಳಗೆ ಮುಖ್ಯ ಚುನಾವಣಾ ಅಧಿಕಾರಿ / ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಪ್ರತಿಯನ್ನು ಕಳುಹಿಸಬೇಕು. ಇದಕ್ಕೆ ವಿಫಲರಾದರೆ ಮೇಲ್ಕಂಡ ಉಪಬಂಧಗಳ ಉಲ್ಲಂಘನೆಯಾಗಿದೆ ಎಂದು ಪರಿಗಣಿಸಬೇಕು.

ಬಿ. ಮುದ್ರಕನು ಘೋಷಣೆಯ ಜೊತೆಗೆ ಮುದ್ರಿತ ಸಾಮಗ್ರಿಯ ಪ್ರತಿಗಳನ್ನು, ಮುದ್ರಿತ ಕರಪತ್ರಗಳು, ಮುಂತಾದವುಗಳ ಸಂಖ್ಯೆಯನ್ನು, ಆಯೋಗವು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಮುದ್ರಕನು ಸಹಿ ಮಾಡಿ ದೃಢೀಕರಿಸಿದ ಬೆಲೆಯನ್ನು ಒದಗಿಸಬೇಕು. ಈ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಒಂದು ನಮೂನೆಯನ್ನು ಪರಿಶಿಷ್ಠ– 18ರ ಅನುಬಂಧ–ಬಿ ನಲ್ಲಿ ಒದಗಿಸಿದೆ.

ಸಿ. ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು ಚುನಾವಣಾ ಅಭ್ಯರ್ಥಿಗಳು ಮತ್ತು ಇತರ ಆಸಕ್ತರು ಕಾನೂನಿನ ಅವಶ್ಯಕತೆಗಳನ್ನು ಹೊಂದಿರುವ ದಸ್ತಾವೇಜುಗಳನ್ನು ಪರಿಶೀಲಿಸಲು ಅನುವಾಗುವಂತೆ ಚುನಾವಣಾ ಪೋಸ್ಟರ್‌ಗಳು, ಕರಪತ್ರಗಳು ಇತ್ಯಾದಿಗಳನ್ನು ತಮ್ಮ ಕಛೇರಿಯಲ್ಲಿ ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸಬೇಕು. ಇದರಿಂದ ಇತರ ಚುನಾವಣಾ ಪೋಸ್ಟರ್‌ಗಳು, ಕರ ಪತ್ರಗಳನ್ನು ನೋಡಿ ಕಾನೂನಿನ ಉಲ್ಲಂಘನೆಯೇನಾದರೂ ಆಗಿದ್ದರೆ ಅದನ್ನು ಅಧಿಕಾರಿಗಳ ಗಮನಕ್ಕೆ ತರಲು ಸಹಾಯಕವಾಗುತ್ತದೆ.

ಡಿ. ಮುಖ್ಯ ಚುನಾವಣಾ ಅಧಿಕಾರಿಗಳು ಸಹ ಅಂತಹ ದಾಖಲೆಗಳನ್ನು ಸ್ವೀಕರಿಸಿದ ಸಂಬಂಧದಲ್ಲಿ ಈ ಮೇಲ್ಕಂಡ ರೀತಿಯಲ್ಲಿ ಮಾಡಬೇಕು.

ಇ. ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ಮತ್ತು ಇತರೆ ಪ್ರಾಧಿಕಾರಿಗಳು ಜನತಾ ಪ್ರತಿನಿಧ್ಯ ಅಧಿನಿಯಮ 1951ರ 127–ಎ ಪ್ರಕರಣದ ಅನುಸಾರ ಚುನಾವಣಾ ಭಿತ್ತಿಪತ್ರ, ಕರಪತ್ರ, ಮುಂತಾದವುಗಳ ಪ್ರಕಟಣೆಯಲ್ಲಿ ಉಲ್ಲಂಘನೆಯಾಗಿರುವುದು ಕಂಡುಬಂದರೆ ಅಂಥ ಅಪರಾಧಗಳ ಪತ್ತೆ ಮತ್ತು ತನಿಖೆಗೆ ಸಂಬಂಧಿಸಿದಂತೆ ಸೂಚನೆ ನೀಡಬೇಕು. ಈ ಸಂಬಂಧದ ಎಲ್ಲಾ ಪ್ರಕರಣಗಳಲ್ಲಿ ಅಪರಾಧಿಗಳ ವಿರುದ್ಧ ಕ್ರಮಕೈಗೊಳ್ಳಲು ತ್ವರಿತ ವಿಚಾರಣೆ ಆರಂಭಿಸಬೇಕು.

7.11.3. ಇತ್ತೀಚಿನ ದಿನಗಳಲ್ಲಿ ಚುನಾವಣಾ ಅವಧಿಯಲ್ಲಿ, ಮುದ್ರಣ ಮಾಧ್ಯಮದಲ್ಲಿ, ಅದರಲ್ಲೂ ವಿಶೇಷವಾಗಿ ವೃತ್ತಪತ್ರಿಕೆಗಳಲ್ಲಿ, ಕೆಲವು ಸಂಘಟನೆಗಳ ಹೆಸರಿನಲ್ಲಿ ನಿರ್ದಿಷ್ಟ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು, ಕೆಲವು ಪ್ರತಿನಿಧಿಗಳು ಮತ್ತು ಇತರರ ಪರ ಮತ್ತು ವಿರುದ್ಧ

ಜಾಹೀರಾತುಗಳನ್ನು ಪ್ರಕಟಪಡಿಸುವ ಪ್ರವೃತ್ತಿಯು ಭಾರತ ಚುನಾವಣಾ ಆಯೋಗದ ಗಮನಕ್ಕೆ ಬಂದಿದೆ. ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 127–ಎ ಪ್ರಕರಣದ ಉಪಬಂಧಗಳ ಅಗತ್ಯತೆಯನ್ನು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರುವ ಮತ್ತು ಪಾಲಿಸುವ ದಿಸೆಯಲ್ಲಿ, ಆಯೋಗವು ಈ ಮುಂದಿನ ಆದೇಶಗಳನ್ನು ಹೊರಡಿಸಿದೆ–

ಎ. ಜಾಹೀರಾತುಗಳಿಗೆ, ಸಂಬಂಧಪಟ್ಟಂತೆ ಮೂಲವನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ, ಈ ಮುಂದಿನ ಕ್ರಮವನ್ನು ಕೈಗೊಳ್ಳತಕ್ಕದ್ದು:–

i. ಜಾಹೀರಾತು ಅಭ್ಯರ್ಥಿಯ ಸಮ್ಮತಿ ಅಥವಾ ಆತನ ಅರಿವಿಗೆ ಬಂದಂತಿದ್ದರೆ, ಅದನ್ನು ಸಂಬಂಧಪಟ್ಟ ಅಭ್ಯರ್ಥಿ(ಗಳು) ಅಧಿಕೃತಗೊಳಿಸಿರುತ್ತಾರೆಂದು ಪರಿಗಣಿಸಲಾಗುವುದು ಮತ್ತು ಅದಕ್ಕೆ ತಗಲುವ ವೆಚ್ಚವನ್ನು ಅಭ್ಯರ್ಥಿ (ಗಳ) ಚುನಾವಣಾ ವೆಚ್ಚಗಳ ಲೆಕ್ಕಕ್ಕೆ ಹಾಕಲಾಗುವುದು;

ii. ಜಾಹೀರಾತನ್ನು ಅಭ್ಯರ್ಥಿಯು ಅಧಿಕೃತಗೊಳಿಸಿಲ್ಲವಾದರೆ ಆಗ ಐಪಿಸಿ 171 ಹೆಚ್ ಪ್ರಕರಣದ (ಸಂಬಂಧಪಟ್ಟ ಅಭ್ಯರ್ಥಿಯ (ಗಳ) ಲಿಖಿತ ಪ್ರಮಾಣವನ್ನು ಹೊಂದಿರದ ಜಾಹೀರಾತಿನ ಮೇಲೆ ಮಾಡುವ ವೆಚ್ಚ) ಉಲ್ಲಂಘನೆಗಾಗಿ ಪ್ರಕಾಶಕನ ವಿರುದ್ಧ ಕ್ರಮ ಜರುಗಿಸತಕ್ಕದ್ದು.

ಬಿ. ಜಾಹೀರಾತಿನಲ್ಲಿ ಪ್ರಕಾಶಕನ ಗುರುತನ್ನು ಸೂಚಿಸಿಲ್ಲವಾದರೆ, ಆಗ ಜಿಲ್ಲಾ ಚುನಾವಣಾ ಅಧಿಕಾರಿ/ ರಿಟರ್ನಿಂಗ್ ಅಧಿಕಾರಿಯು ಸಂಬಂಧಪಟ್ಟ ವೃತ್ತಪತ್ರಿಕೆಗಳನ್ನು ಸಂಪರ್ಕಿಸಿ ಮಾಹಿತಿ ಪಡೆದು ಮೇಲ್ಕಂಡಂತೆ ಸಮುಚಿತ ಕ್ರಮವನ್ನು ಜರುಗಿಸತಕ್ಕದ್ದು.

7.11.4. ಅಭ್ಯರ್ಥಿ ಅಥವಾ ಆತನ ಪರವಾಗಿ ಮುದ್ರಿಸಿ ಪ್ರಕಟಿಸಿರುವ ಚುನಾವಣಾ ಕರಪತ್ರಗಳು ಮತ್ತು ಭಿತ್ತಿಪತ್ರಗಳಿಗೆ ಸಂಬಂಧಿಸಿದಂತೆ ಕಾನೂನಿನ ಮೇಲ್ಕಂಡ ಎಲ್ಲ ಅಗತ್ಯತೆಗಳನ್ನು ಮತ್ತು ಆಯೋಗದ ನಿರ್ದೇಶನಗಳನ್ನು ಅನೂಚಾನವಾಗಿ ಪಾಲಿಸಿರುವುದನ್ನು ನೀವು ಖಚಿತಪಡಿಸಿಕೊಳ್ಳಬೇಕು. ಆರೋಗ್ಯಕರ ಚುನಾವಣಾ ಪ್ರಚಾರಗಳನ್ನು ಖಾತ್ರಿಪಡಿಸಲು ಮತ್ತು ಚುನಾವಣೆಗಳ ಪರಿಶುದ್ಧತೆಯನ್ನು ಕಾಪಾಡುವಲ್ಲಿ ಇದು ಅತ್ಯಾವಶ್ಯಕ. ಅಲ್ಲದೆ ಕಾನೂನಿನ ಮೇಲ್ಕಂಡ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಚುನಾವಣಾ ಭಿತ್ತಿಪತ್ರಗಳು ಅಥವಾ ಕರಪತ್ರಗಳ ಪ್ರಕಟಣೆ ಕುರಿತಂತೆ ಅಭ್ಯರ್ಥಿಯ ಗಮನ ಅಥವಾ ಅರಿವಿಗೆ ಬರುವ ಯಾವುದೇ ಪ್ರಕರಣದ ಬಗ್ಗೆ ಪ್ರಾಧಿಕಾರಗಳಿಗೆ ವರದಿ ಮಾಡಲು ಯಾವುದೇ ಹಿಂಜರಿಕೆ ಬೇಡ.

## 7.12. ಸಂಕ್ಷಿಪ್ತ ಸಂದೇಶ ಸೇವೆಗಳ (ಎಸ್‌ಎಂಎಸ್‌ಗಳು) ದುರುಪಯೋಗದ ನಿಷೇಧ

7.12.1. ಇತ್ತೀಚಿಗೆ, ಚುನಾವಣಾ ಕಾನೂನು, ಮಾದರಿ ನೀತಿ ಸಂಹಿತೆಯ ಉಪಬಂಧಗಳು, ಮತ್ತು ಅವುಗಳ ಸಂಬಂಧ ಹೊರಡಿಸಲಾಗಿರುವ ಭಾರತ ಚುನಾವಣಾ ಆಯೋಗದ ನಿರ್ದೇಶನಗಳು/ ಸೂಚನೆಗಳನ್ನು ಉಲ್ಲಂಘಿಸಿ ಚುನಾವಣೆಗಳ ಅವಧಿಯಲ್ಲಿ ಕೆಲವರು ಖುದ್ದು ಆಸಕ್ತಿವಹಿಸಿ ಸಂಕ್ಷಿಪ್ತ ಸಂದೇಶ ಸೇವೆಗಳಲ್ಲಿ ಕೆಲವು ಆಕ್ಷೇಪಾರ್ಹ ಸಂದೇಶಗಳನ್ನು ರವಾನಿಸುತ್ತಿರುವ ಪ್ರವೃತ್ತಿಯನ್ನು ಸಹ ಗಮನಿಸಿದೆ. ಮೇಲ್ಕಂಡ ಕೃತ್ಯಗಳಿಂದಾಗಿ, ಉಚಿತ, ನ್ಯಾಯಸಮ್ಮತ ಮತ್ತು ಶಾಂತಿಯುತ ಚುನಾವಣಾ ಪ್ರಕ್ರಿಯೆಯ ವಾತಾವರಣವೇ ಕಲುಷಿತಗೊಳ್ಳುತ್ತಿದೆ. ಈ ಸಂಬಂಧ ಭಾರತ ಚುನಾವಣಾ ಆಯೋಗವು ಈ ಮುಂದಿನ ನಿರ್ದೇಶನಗಳನ್ನು ಹೊರಡಿಸಿದೆ:

i. ಚುನಾವಣಾ ಕಾನೂನು, ಮಾದರಿ ನೀತಿ ಸಂಹಿತೆಯ ಉಪಬಂಧಗಳು ಮತ್ತು ಅವುಗಳ ಸಂಬಂಧ ಹೊರಡಿಸಿರುವ ಆಯೋಗದ ನಿರ್ದೇಶನಗಳು/ ಸೂಚನೆಗಳನ್ನು ಉಲ್ಲಂಘಿಸುವ ಆಕ್ಷೇಪಾರ್ಹ ಎಸ್‌ಎಮ್‌ಎಸ್ ಗಳಿಗಾಗಿ ಪೊಲೀಸ್ ಪ್ರಾಧಿಕಾರಗಳು ಅಂತಹ ಎಸ್‌ಎಂಎಸ್ ಅನ್ನು ಸ್ವೀಕರಿಸುವವರು ಸದರಿ ಎಸ್‌ಎಂಎಸ್ ಅನ್ನು (ಆಕ್ಷೇಪಾರ್ಹ ಎಸ್‌ಎಂಎಸ್ ಕಳುಹಿಸಿರುವವರ ಸಂಖ್ಯೆಯೊಂದಿಗೆ) ಕಳುಹಿಸಲು ವಿಶೇಷ ಮೊಬೈಲ್ ಸಂಖ್ಯೆಗಳನ್ನು ಜಾಹೀರುಪಡಿಸತಕ್ಕದ್ದು. ಪೊಲೀಸ್ ಪ್ರಾಧಿಕಾರಿಗಳು ಸಮುಚಿತ ತನಿಖೆಯನ್ನು ಕೈಗೊಂಡು ಅಂತಹ ಎಸ್‌ಎಂಎಸ್ ಅನ್ನು ಕಳುಹಿಸಿರುವವರ ಮೂಲವನ್ನು ಪತ್ತೆಹಚ್ಚಿ ಭಾರತ ದಂಡ ಸಂಹಿತೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951, ಚುನಾವಣೆಯನ್ನು ನಡೆಸುವ ನಿಯಮಗಳು, 1961, ಆಯೋಗವು ಅವುಗಳಡಿ ಹೊರಡಿಸಿರುವ ಸೂಚನೆಗಳು/ ನಿರ್ದೇಶನಗಳು ಮತ್ತು ಆ ವಿಷಯದಲ್ಲಿ ಅನ್ವಯವಾಗಬಹುದಾದ ಯಾವುದೇ ಇತರ ಕಾನೂನಿನ ಸಂಬಂಧಪಟ್ಟ ಉಪಬಂಧಗಳ ಮೇರೆಗೆ ಸಮುಚಿತ ಕ್ರಮವನ್ನು ಕೈಗೊಳ್ಳತಕ್ಕದ್ದು.

ii. ಒಂದು ಪರ್ಯಾಯ ಚುನಾವಣಾ ಕಾರ್ಯತಂತ್ರದ ಭಾಗವಾಗಿ ಪ್ರಚಾರದ ಅವಧಿಯಲ್ಲಿ ಸಗಟು ಎಸ್‌ಎಂಎಸ್ (ಗಳನ್ನು) ಪ್ರಸಾರ ಮಾಡಿರುವುದು ಗಮನಕ್ಕೆ ಬಂದಾಗಲೆಲ್ಲಾ ಸದರಿ ವಿಷಯವನ್ನು ರಿಟರ್ನಿಂಗ್ ಅಧಿಕಾರಿ ಅಥವಾ ಜಿಲ್ಲಾ ಚುನಾವಣಾ ಅಧಿಕಾರಿಯು ಮುಖ್ಯ ಚುನಾವಣಾ ಅಧಿಕಾರಿಯವರ ಗಮನಕ್ಕೆ ತರುವುದು. ಅವರು ಸೇವಾದಾತನಿಂದ ಬರಬೇಕಾದ ವೆಚ್ಚವನ್ನು ಅನುಕ್ರಮವಾಗಿ ಲೆಕ್ಕಹಾಕಿ ಅದನ್ನು ಅಭ್ಯರ್ಥಿಗೆ ಅಥವಾ ಸಂದರ್ಭಾನುಸಾರ ಸಂಬಂಧಪಟ್ಟ ಅಭ್ಯರ್ಥಿಗಳ ಲೆಕ್ಕಕ್ಕೆ ಹಾಕತಕ್ಕದ್ದು.

iii. ಮತದಾನ ಪೂರ್ಣಗೊಳ್ಳುವುದಕ್ಕೆ ನಿಗದಿಪಡಿಸಿದ ಸಮಯ ಕೊನೆಗೊಳ್ಳುವ 48 ಗಂಟೆಗಳ ಒಂದು ಅವಧಿಗೆ ರಾಜಕೀಯ ಸ್ವರೂಪದ ಸಗಟು ಎಸ್‌ಎಂಎಸ್‌ಗಳ ಪ್ರಸಾರವನ್ನು ನಿಷೇಧಿಸತಕ್ಕದ್ದು.

## 7.13. ಪ್ರಚಾರಾವಧಿ ಮುಗಿದ ತರುವಾಯ ಮತಕ್ಷೇತ್ರದಲ್ಲಿ ರಾಜಕೀಯ ಕಾರ್ಯಕರ್ತರು ಉಪಸ್ಥಿತರಿರುವುದರ ಮೇಲೆ ನಿರ್ಬಂಧ

7.13.1. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 126ನೇ ಪ್ರಕರಣದ ಕಡೆ ಅಭ್ಯರ್ಥಿಯ ಗಮನವನ್ನು ಸಹ ಸೆಳೆಯಲಾಗುತ್ತಿದ್ದು, ಅದು ಮತದಾನ ಮುಕ್ತಾಯಗೊಳ್ಳುವ 48 ಗಂಟೆಗಳ ಅವಧಿಯ ಪ್ರಚಾರದ ಮೇಲೆ ನಿರ್ಬಂಧಗಳನ್ನು ವಿಧಿಸುತ್ತದೆ. ಹೀಗಾಗಿ, ಪ್ರಚಾರದ ಅವಧಿಯು ಪೂರ್ಣಗೊಂಡ ತರುವಾಯ ಜಿಲ್ಲಾ ಚುನಾವಣಾ ಆಡಳಿತ/ ಪೊಲೀಸ್ ಆಡಳಿತವು ಅಂತಹ ಎಲ್ಲ ಕಾರ್ಯಕರ್ತರು ಪ್ರಚಾರದ ಅವಧಿ ಮುಗಿದ ಕೂಡಲೇ ಮತಕ್ಷೇತ್ರದಿಂದ ಹೊರಹೋಗಿರುವುದನ್ನು ಖಚಿತಪಡಿಸಿತಕ್ಕದ್ದೆಂದು ಆಯೋಗವು ಸೂಚಿಸಿದೆ. ಆದರೆ, ಚುನಾವಣೆ ನಡೆಯುತ್ತಿರುವ ಸಂಸತ್ ಕ್ಷೇತ್ರ ಅಥವಾ ವಿಧಾನಸಭಾ ಕ್ಷೇತ್ರದ ಚುನಾಯಿತ ಸಂಸದರು ಅಥವಾ ಚುನಾಯಿತ ಶಾಸಕರನ್ನು ಅವರು ಚುನಾವಣೆ ನಡೆಯುವ ಕ್ಷೇತ್ರಗಳ ಮತದಾರರಲ್ಲದಿದ್ದರೂ ಲೋಕಸಭೆ/ ರಾಜ್ಯ ವಿಧಾನಸಭೆಗೆ ನಡೆಯಲಾದ ಚುನಾವಣೆಯ ಸಂದರ್ಭದಲ್ಲಿ ತಮ್ಮ ಕ್ಷೇತ್ರವನ್ನು ಬಿಟ್ಟು ಹೋಗುವಂತೆ ಹೇಳಬಾರದು.

ಆದಾಗ್ಯೂ, ಪ್ರಚಾರಾವಧಿ ಮುಕ್ತಾಯವಾದ ನಂತರ ಎಂದರೆ, ಮತದಾನ ಮುಕ್ತಾಯಗೊಳ್ಳುವ 48 ಗಂಟೆಗೆ ಮೊದಲು ಕ್ಷೇತ್ರದಲ್ಲಿ ಯಾವುದೇ ಪ್ರಚಾರ ಕೈಗೊಳ್ಳಲು ಅನುಮತಿ ನೀಡಬಾರದು. ಅಲ್ಲದೆ ಸಂಸತ್ ಕ್ಷೇತ್ರದ ಚುನಾವಣೆಯ ಸಂಬಂಧದಲ್ಲಿ, ಶಾಸಕರು ತಮ್ಮ ಸ್ವಂತ ಕ್ಷೇತ್ರದಲ್ಲಿ ಉಳಿದುಕೊಳ್ಳಬಹುದು. ಆದರೆ ಸಂಸತ್ ಕ್ಷೇತ್ರದ ಇತರ ವಿಧಾನಸಭಾ ಭಾಗಗಳಿಗೆ ಭೇಟಿ ನೀಡಬಾರದು.

## 7.14. ಅನಧಿಕೃತ ಗುರುತಿನ ಸ್ಲಿಪ್‌ಗಳು

7.14.1. ರಾಜಕೀಯ ಪಕ್ಷಗಳು/ ಅಭ್ಯರ್ಥಿಗಳು ಮತದಾರರಿಗೆ ಈ ಮುಂದಿನ ಮಾಹಿತಿಯನ್ನು ಒಳಗೊಂಡಿರುವ ಅನಧಿಕೃತ ಗುರುತಿನ ಚೀಟಿಗಳನ್ನು ನೀಡಬಹುದು–

i. ಮತದಾರರ ಪಟ್ಟಿಯಲ್ಲಿರುವ ಮತದಾರನ ಹೆಸರು ಮತ್ತು ಕ್ರಮ ಸಂಖ್ಯೆ;

ii. ಮತದಾರರ ಪಟ್ಟಿಯ ಭಾಗದ ಸಂಖ್ಯೆ;

iii. ಮತಗಟ್ಟೆಯ ಕ್ರಮಸಂಖ್ಯೆ ಮತ್ತು ಹೆಸರು; ಮತ್ತು

7.14.2. ಗುರುತಿನ ಚೀಟಿಗಳು ಬಿಳಿ ಹಾಳೆಯ ರೂಪದಲ್ಲಿದ್ದು ಅವು ಅಭ್ಯರ್ಥಿಯ ಹೆಸರು ಮತ್ತು/ ಅಥವಾ ಆತನ ಪಕ್ಷದ ಹೆಸರು ಮತ್ತು/ ಅಥವಾ ಅಭ್ಯರ್ಥಿ ಅಥವಾ ಆತನ ಪಕ್ಷದ ಚುನಾವಣಾ ಚಿಹ್ನೆಯನ್ನು ಒಳಗೊಂಡಿರತಕ್ಕದ್ದಲ್ಲ. ಈ ಚೀಟಿಗಳು ಪಕ್ಷದ ಪರವಾಗಿ ಅಥವಾ ಅಭ್ಯರ್ಥಿಯ ಪರವಾಗಿ ಮತಯಾಚಿಸುವ ಯಾವುದೇ ಘೋಷಣೆ ಅಥವಾ ಯಾವುದೇ ಭಾಷಣವನ್ನು ಸಹ ಒಳಗೊಂಡಿರತಕ್ಕದ್ದಲ್ಲ. ಅಂತಹ ಚೀಟಿಗಳನ್ನು ಮತದಾರರು ಮತಗಟ್ಟೆಗಳಿಗೆ ಒಯ್ದರೆ ಮತಗಟ್ಟೆಯೊಳಗೆ ಪ್ರಚಾರ ಮಾಡಿದಂತಾಗುವುದರಿಂದ ಅವುಗಳಿಗೆ ಅನುಮತಿ ಇರುವುದಿಲ್ಲ. ಮತಗಟ್ಟೆಯ 100 ಮೀಟರ್‌ಗಳ ವ್ಯಾಪ್ತಿಯೊಳಗೆ ಯಾವುದೇ ಚೀಟಿಗಳನ್ನು ಪರಿಚಲಿಸಿದರೆ ಅದೂ ಕೂಡ ಪ್ರಚಾರ ಮಾಡಿದಂತಾಗುವುದರಿಂದ ಅದಕ್ಕೆ ಕಾನೂನು ಹಾಗೆ ಪರಿಚಲಿಸುವುದಕ್ಕೆ ಅನುಮತಿಸುವುದಿಲ್ಲ. ನಿಮ್ಮ ಮಾರ್ಗದರ್ಶನಕ್ಕಾಗಿ ಗುರುತಿನ ಚೀಟಿಗಳ ಎರಡು ಮಾದರಿಗಳನ್ನು ಈ ಮುಂದೆ ನೀಡಲಾಗಿದೆ.

ಅಭ್ಯರ್ಥಿಗಳು ನೀಡಬಹುದಾದ ಸ್ಲಿಪ್‌ಗಳಲ್ಲಿ ಇರುವ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ:

- ಸಂಸತ್/ವಿಧಾನಸಭಾ ಕ್ಷೇತ್ರದ ಹೆಸರು----------------
- ಮತಗಟ್ಟೆ ಸಂಖ್ಯೆ ಮತ್ತು ಹೆಸರು ---------------
- ಸ್ಥಳದ ವಿವರ ---------------
- ಮತದಾರರ ಪಟ್ಟಿಯಲ್ಲಿ ಮತದಾರನ ಕ್ರಮಸಂಖ್ಯೆ
- ವಿಭಾಗದ ಸಂಖ್ಯೆ -------------
- ಹೆಸರು: ----------------

## 7.15. ಮತದಾನ ಪ್ರಕ್ರಿಯೆಯ ತಾಲೀಮುಗಳನ್ನು ನಡೆಸುವುದು.

7.15.1. ಅಭ್ಯರ್ಥಿಯು ತನ್ನ ಪೋಲಿಂಗ್ ಏಜೆಂಟರಿಗೆ ಅವರಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಮತದಾನ ಪ್ರಕ್ರಿಯೆಯ ತಾಲೀಮುಗಳನ್ನು ನಡೆಸುವುದರಿಂದ ಅವರಿಗೆ ಮತದಾನ ಪ್ರಕ್ರಿಯೆ ಮತ್ತು ಮತಯಂತ್ರಗಳ ಕಾರ್ಯಾಚರಣೆ ವಿಧಾನವನ್ನು ಮನವರಿಕೆ ಮಾಡಿಕೊಟ್ಟಂತಾಗುತ್ತದೆ.

**7.16. ಮತದಾನ ಪ್ರಕ್ರಿಯೆಯ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸುವುದು:**

7.16.1. ಅಭ್ಯರ್ಥಿಯ ಕಾರ್ಯಕರ್ತರು ಮತದಾನ ಪ್ರಕ್ರಿಯೆಯ ಬಗ್ಗೆ ಅದರಲ್ಲೂ ವಿಶೇಷವಾಗಿ ಮತ ಯಂತ್ರಗಳನ್ನು ಬಳಸಿ ಮತಗಳನ್ನು ದಾಖಲು ಮಾಡುವ ವಿಧಾನದ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸತಕ್ಕದ್ದು. ಯಾವುದೇ ಭಯವಿಲ್ಲದೆ ಮತಯಂತ್ರಗಳನ್ನು ಬಳಸುವಂತೆ ಮತ್ತು ಅವರ ಸಹಿ ಅಥವಾ ಹೆಬ್ಬೆರಳಿನ ಗುರುತನ್ನು ಹಾಕುವಂತೆ ಮತದಾರರಿಗೆ ತಿಳಿವಳಿಕೆ ನೀಡತಕ್ಕದ್ದು. ಹೀಗೆ ಮಾಡುವುದರಿಂದ ಮತದಾರನ ಸಹಿ/ ಹೆಬ್ಬೆಟ್ಟಿನ ಗುರುತನ್ನು ಒಳಗೊಂಡಿರುವ ಮತದಾರರ ರಿಜಿಸ್ಟರ್‌ಗಳ ಲಕೋಟೆಗಳನ್ನು ಮತದಾನ ಮುಗಿದ ಕೂಡಲೇ ಪ್ರಿಸೈಡಿಂಗ್ ಅಧಿಕಾರಿಗಳು ಮತ್ತು ಅಭ್ಯರ್ಥಿಗಳ ಪೋಲಿಂಗ್ ಏಜೆಂಟರ ಮೊಹರುಗಳಿಂದ ಮೊಹರು ಮಾಡಲಾಗುತ್ತದಲ್ಲದೆ ಅಂತಹ ಮೊಹರು ಮಾಡಿದ ಲಕೋಟೆಗಳನ್ನು ಆ ತರುವಾಯ ಸಕ್ಷಮ ನ್ಯಾಯಾಲಯದ ಆದೇಶದ ಹೊರತಾಗಿ ಯಾರೇ ವ್ಯಕ್ತಿಯು ತೆರೆಯುವುಂತಿಲ್ಲ ಅಥವಾ ಪರೀಕ್ಷಿಸುವಂತಿಲ್ಲವಾದ್ದರಿಂದ ಅವರ ಮತದಾನದ ಗೌಪ್ಯತೆಯನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದಂತಾಗುವುದಿಲ್ಲವೆಂಬ ಅಥವಾ ಅವರ ಗುರುತು ಬಹಿರಂಗಗೊಳ್ಳುವುದಿಲ್ಲವೆಂಬ ಅಂಶವನ್ನು ಅವರಿಗೆ ಮನವರಿಕೆ ಮಾಡಿಕೊಡತಕ್ಕದ್ದು.

7.16.2. ಅಭ್ಯರ್ಥಿಯ ಕಾರ್ಯಕರ್ತರೂ ಸಹ ಮತಗಟ್ಟೆಯಲ್ಲಿ ಅನುಸರಿಸಲಾಗುವ ಮತದಾನ ಪ್ರಕ್ರಿಯೆಯ ಇತರ ವಿವರಗಳ ಬಗ್ಗೆ ಮತದಾರರಿಗೆ ಮನವರಿಕೆ ಮಾಡಿಕೊಡತಕ್ಕದ್ದು. ಮತದಾರನ ಹೆಸರು  ಮತದಾರರ ಪಟ್ಟಿಯಲ್ಲಿರುವುದು ಕಂಡು ಬಂದ ಮತ್ತು ಆತನ ಗುರುತನ್ನು ಪತ್ತೆ ಹಚ್ಚಿದ ತರುವಾಯ ಆತನ ಎಡ ತೋರುಬೆರಳಿಗೆ ಅಳಿಸಲಾಗದ ಶಾಯಿಯಿಂದ ಗುರುತು ಮಾಡಲಾಗುವುದೆಂದು ಮತದಾರನಿಗೆ ತಿಳಿಸತಕ್ಕದ್ದು. ಪ್ರಸ್ತುತ ಆಯೋಗವು ಮತದಾರನ ಬೆರಳಿನ ಮೇಲೆ ಅಳಿಸಲಾಗದ ಶಾಹಿಯನ್ನು ಹಚ್ಚುವ ವಿಧಾನವನ್ನು ಬದಲಿಸಿದೆ. ಈಗ ಈ ಮುಂದಿನ ರೇಖಾ ಚಿತ್ರದಲ್ಲಿ ತೋರಿಸಲಾದಂತೆ ಎಡಗೈ ತೋರು ಬೆರಳಿನ ತುತ್ತತುದಿಯಿಂದ ಮೊದಲ ಗೆಣ್ಣಿನ ಕೊನೆಯವರೆಗೆ ಒಂದು ಗೆರೆಯಂತೆ ಮತದಾರನ ಎಡಗೈ ತೋರುಬೆರಳಿನ ಮೇಲೆ ಹಚ್ಚಲಾಗುವುದು:–

ಆನಂತರ ಮತದಾರನು ಮತದಾರರ ರಿಜಿಸ್ಟರ್‌ನಲ್ಲಿ ಸಹಿ ಮಾಡುವುದು ಅಥವಾ ಹೆಬ್ಬೆರಳಿನ ಗುರುತನ್ನು ನೀಡುವುದು ಅಗತ್ಯವಾಗಿದೆ. ಮತದಾರನು ರಿಜಿಸ್ಟರ್‌ನಲ್ಲಿ ತನ್ನ ಹೆಬ್ಬೆರಳಿನ ಗುರುತನ್ನು ನೀಡಿದರೆ ಪೋಲಿಂಗ್ ಅಧಿಕಾರಿಯ ಟೇಬಲ್ ಮೇಲೆ ಇಟ್ಟಿರುವ ಒದ್ದೆ ಬಟ್ಟೆ ಅಥವಾ ಚಿಂದಿ ಬಟ್ಟೆಯಿಂದ ತನ್ನ ಹೆಬ್ಬೆರಳನ್ನು ಶುಚಿಗೊಳಿಸಿಕೊಳ್ಳತಕ್ಕದ್ದು. ಮತಯಂತ್ರದ ಮೇಲೆ ಯಾವುದೇ ರೀತಿಯ ಕಲೆಯಾಗುವ ಸಂಭಾವ್ಯತೆಯನ್ನು ತಪ್ಪಿಸಲು ಹೀಗೆ ಮಾಡುವುದು

ಅತ್ಯಗತ್ಯ. ಎಡಗೈ ತೋರುಬೆರಳಿನ ಮೇಲೆ ಗುರುತು ಮಾಡುವ ಹೊಸ ವಿಧಾನದ ಬಗ್ಗೆ ಮತದಾರರಿಗೆ ತಿಳಿಯಪಡಿಸುವುದರಿಂದ ಅವರು ಮತಗಟ್ಟೆಯಲ್ಲಿ ಆ ಬಗ್ಗೆ ಯಾವುದೇ ಆಕ್ಷೇಪ ಎತ್ತುವುದಿಲ್ಲ. ಆ ತರುವಾಯ ಮತಯಂತ್ರದ ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಪೋಲಿಂಗ್ ಅಧಿಕಾರಿಯು ಮತದಾರನ ಚೀಟಿಯ ಆಧಾರದ ಮೇಲೆ ತೆರೆಮರೆಯಲ್ಲಿರುವ ಮತದಾನ ಘಟಕದಲ್ಲಿ ಇಟ್ಟಿರುವ ಬ್ಯಾಲೆಟ್ ಯೂನಿಟ್‌ನಲ್ಲಿ ತನ್ನ ಮತವನ್ನು ದಾಖಲು ಮಾಡಲು ಮತದಾರನಿಗೆ ಅನುಮತಿಸತಕ್ಕದ್ದು. ಆ ಉದ್ದೇಶಕ್ಕಾಗಿ ಪೋಲಿಂಗ್ ಅಧಿಕಾರಿಯು ಮತವನ್ನು ದಾಖಲು ಮಾಡುವ ಬ್ಯಾಲೆಟ್ ಯೂನಿಟ್ ಅನ್ನು ಸಕ್ರಿಯಗೊಳಿಸುವ ಕಂಟ್ರೋಲ್ ಯೂನಿಟ್‌ನ ಬ್ಯಾಲೆಟ್ ಬಟನ್‌ನನ್ನು ಒತ್ತುವುದು. ಮತದಾರನು ತನ್ನ ಆಯ್ಕೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯ ಎದುರು ಬ್ಯಾಲೆಟ್ ಯೂನಿಟ್‌ನಲ್ಲಿರುವ "ಕ್ಯಾಂಡಿಡೇಟ್" ಬಟನ್‌ನನ್ನು ಹಾಗೆ ಸುಮ್ಮನೆ ಒತ್ತುವ ಮೂಲಕ ತನ್ನ ಮತವನ್ನು ದಾಖಲಿಸುವನು. ಸದರಿ ಬಟನ್‌ನನ್ನು ಒತ್ತಿದ ಮೇಲೆ ಮತದಾರನು ಯಾವ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯುಳ್ಳ ಬಟನ್‌ನನ್ನು ಒತ್ತಿರುವನೋ ಆ ಬಟನ್‌ನ ಎದುರು ಒಂದು ಕೆಂಪು ದೀಪ ಪ್ರಕಾಶಿಸುವುದು ಮತದಾರನಿಗೆ ಗೋಚರವಾಗುತ್ತದೆ ಮತ್ತು ವಿವಿಪಿಎಟಿ ಅಭ್ಯರ್ಥಿಯ ಚಿಹ್ನೆ, ಹೆಸರು ಮತ್ತು ಕ್ರಮಸಂಖ್ಯೆಗಳನ್ನು ಒಳಗೊಂಡ ಚಿಕ್ಕ ಸ್ಲಿಪ್ ಅನ್ನು ಮುದ್ರಿಸುತ್ತದೆ. ಇದು ವಿವಿಪಿಎಟಿ ವಿಂಡೋನಲ್ಲಿ ಏಳು ಸೆಕೆಂಡುಗಳವರೆಗೆ ಕಾಣಿಸುತ್ತದೆ ಮತ್ತು ಕಂಟ್ರೋಲ್ ಯೂನಿಟ್‌ನಿಂದ ಬೀಪ್ ಶಬ್ದವೂ ಸಹ ಕೇಳಿಬರುತ್ತದೆ. ಈ ಶ್ರವ್ಯ ಮತ್ತು ದೃಶ್ಯ ಸೂಚನೆಗಳು ಮತದಾರನು ತನ್ನ ಆಯ್ಕೆಯ ಅಭ್ಯರ್ಥಿಗೆ ಯಥೋಚಿತವಾಗಿ ತನ್ನ ಮತವನ್ನು ದಾಖಲು ಮಾಡಿರುವ ಸಂಗತಿಗೆ ಸಮರ್ಥನೆಯನ್ನು ಒದಗಿಸುತ್ತವೆ.

## 7.17. ಡಮ್ಮಿ ಬ್ಯಾಲೆಟ್ ಪೇಪರ್

7.17.1. ಅಭ್ಯರ್ಥಿಯು ತನ್ನದೇ ಹೆಸರು ಮತ್ತು ಚಿಹ್ನೆಯನ್ನು ಬಳಸಿ ಮತ್ತು ನೈಜ ಬ್ಯಾಲೆಟ್ ಪೇಪರ್‌ನ ಮೇಲೆ ಕಂಡುಬರುವ ಸ್ಥಳವನ್ನು ಸೂಚಿಸಿ ಬ್ಯಾಲೆಟ್ ಯೂನಿಟ್‌ನಲ್ಲಿ ಪ್ರದರ್ಶನಗೊಳ್ಳುವ ಡಮ್ಮಿ ಬ್ಯಾಲಟ್ ಪೇಪರ್‌ಗಳನ್ನು ಮುದ್ರಿಸಬಹುದು. ಆದಾಗ್ಯೂ, ಡಮ್ಮಿ ಬ್ಯಾಲೆಟ್ ಪೇಪರ್ ಚುನಾವಣಾ ಕಣದಲ್ಲಿ ಸ್ಪರ್ಧಿಸಿರುವ ಇತರ ಅಭ್ಯರ್ಥಿಗಳ ಹಾಲಿ ಹೆಸರುಗಳು ಮತ್ತು ಚಿಹ್ನೆಗಳನ್ನು ಒಳಗೊಳ್ಳತಕ್ಕದ್ದಲ್ಲ. ನಸುಗೆಂಪು ಮತ್ತು ಬಿಳಿ ಬಣ್ಣವನ್ನು ಹೊರತುಪಡಿಸಿ, ಕಂದು ಹಳದಿ ಅಥವಾ ಬೂದು ಮೊದಲಾದ ಇತರ ಯಾವುದೇ ಬಣ್ಣದಲ್ಲಿ ಮುದ್ರಿಸಬಹುದು. ಆದರೆ, ಗುಲಾಬಿ

ಮತ್ತು ಬಿಳಿ ಬಣ್ಣದಲ್ಲಿ ಮುದ್ರಿಸಬಾರದು. ಡಮ್ಮಿ ಬ್ಯಾಲೆಟ್ ಪೇಪರುಗಳು ಅಳತೆ ಮತ್ತು ಬಣ್ಣದಲ್ಲಿ ನೈಜ ಬ್ಯಾಲೆಟ್ ಪೇಪರ್‌ಗಳನ್ನು ಹೋಲದಂತಿರುವುದನ್ನು ಖಚಿತಪಡಿಸಿಕೊಳ್ಳಬೇಕು.

**7.18. ಡಮ್ಮಿ ಬ್ಯಾಲೆಟ್ ಯೂನಿಟ್‌ಗಳು**

7.18.1. ಮತದಾರರಿಗೆ ತಿಳಿವಳಿಕೆಯನ್ನು ಮೂಡಿಸುವ ಉದ್ದೇಶಕ್ಕಾಗಿ ಡಮ್ಮಿ ಬ್ಯಾಲೆಟ್ ಯೂನಿಟ್‌ಗಳನ್ನು ಸಿದ್ಧಪಡಿಸುವುದಕ್ಕೆ ಯಾವುದೇ ಅಭ್ಯಂತರವಿಲ್ಲ. ಡಮ್ಮಿ ಬ್ಯಾಲೆಟ್ ಯೂನಿಟ್‌ಗಳನ್ನು ಅಧಿಕೃತ ಬ್ಯಾಲೆಟ್ ಯೂನಿಟ್‌ಗಳ ಅರ್ಧದಷ್ಟು ಅಳತೆಯ ಮರ, ಪ್ಲಾಸ್ಟಿಕ್ ಅಥವಾ ಪ್ಲೈಬೋರ್ಡ್ ಪೆಟ್ಟಿಗೆಗಳಿಂದ ಸಿದ್ಧಪಡಿಸಬಹುದಾಗಿದ್ದು, ಅವುಗಳಿಗೆ ಕಂದು, ಹಳದಿ ಅಥವಾ ಬೂದು ಬಣ್ಣ ಬಳಿಯಬಹುದು. ಈ ಡಮ್ಮಿ ಬ್ಯಾಲೆಟ್ ಯೂನಿಟ್‌ಗಳು ಡಮ್ಮಿ ಬ್ಯಾಲೆಟ್ ಪೇಪರ್‌ನಲ್ಲಿರುವಂತೆ ನಿಮ್ಮ ಕ್ರಮಸಂಖ್ಯೆ ಹೆಸರು ಮತ್ತು ಚಿಹ್ನೆಯನ್ನು ತೋರಿಸುವುದಕ್ಕೆ ಅವಕಾಶ ಕಲ್ಪಿಸುತ್ತವೆ. ಇದು ಒಂದು ಬ್ಯಾಟರಿ ಚಾಲಿತ ಬಟನ್‌ನನ್ನು ಸಹ ಹೊಂದಿದ್ದು ಬಟನ್‌ನನ್ನು ಒತ್ತಿದಾಗ ಒಂದು ದೀಪವು ಉರಿಯುತ್ತದೆ.

**7.19. ಮತದಾನ ಕೇಂದ್ರಗಳಲ್ಲಿ ಇವಿಎಂ ನ ಮುದ್ರಿತ ಮಾದರಿ:**

7.19.1. ಇವಿಎಂ ಅನ್ನು ಹೇಗೆ ಬಳಸಬೇಕೆಂಬ ಬಗ್ಗೆ ಅನಕ್ಷರಸ್ಥ ಮತದಾರರಿಗೆ ವಿವರಿಸುವುದಕ್ಕೆ ಸಂಬಂಧಪಟ್ಟಂತೆ ಆಯೋಗವು ಈ ಮುಂದಿನ ಸೂಚನೆಗಳನ್ನು ನೀಡಿದೆ–

ಎ. ಒಂದು ಕಾರ್ಡ್‌ಬೋರ್ಡ್ (ನೈಜ ಅಳತೆ) ಮೇಲೆ ಅಂಟಿಸಿದ ಇವಿಎಂ ಬ್ಯಾಲೆಟ್ ಯೂನಿಟ್‌ನ ಒಂದು ಮುದ್ರಿತ ಮಾದರಿಯನ್ನು ಎಲ್ಲ ಪ್ರಿಸೈಡಿಂಗ್ ಅಧಿಕಾರಿಗಳಿಗೆ ಪೂರೈಸತಕ್ಕದ್ದು. ಅಂತಹ ಮಾದರಿ ಬ್ಯಾಲೆಟ್‌ಅನ್ನು ಮುದ್ರಿಸುವಾಗ ಬಳಕೆಯಲ್ಲಿಲ್ಲದ ಡಮ್ಮಿ ಹೆಸರು ಮತ್ತು ಡಮ್ಮಿ ಚಿಹ್ನೆಗಳನ್ನು ಮಾತ್ರವೇ ಬಳಸಲಾಗುತ್ತಿದೆಯೇ ಹೊರತು ಯಾವುದೇ ನೈಜ ಹೆಸರುಗಳು ಅಥವಾ ಚಿಹ್ನೆಗಳನ್ನಲ್ಲ ಎಂಬುದನ್ನು ಖಚಿತಪಡಿಸುವಲ್ಲಿ ಎಚ್ಚರಿಕೆ ವಹಿಸತಕ್ಕದ್ದಲ್ಲದೆ, ಸದರಿ ಬಣ್ಣದಲ್ಲಿ ಮುದ್ರಿಸುವುದರಿಂದ 'ನೀಲಿ ಗುಂಡಿ' 'ಹಸಿರು ದೀಪ' ಮತ್ತು 'ಕೆಂಪು ದೀಪ' ಮೊದಲಾದವುಗಳ ಉದ್ದೇಶವನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ.

ಬಿ. ಯಾರೇ ಮತದಾರನು ಇವಿಎಂ ಬಳಸಿ ಮತಚಲಾಯಿಸಲು ನೆರವು ಕೋರುವ ಅಥವಾ ಅಸಹಾಯಕತೆಯನ್ನು ವ್ಯಕ್ತಪಡಿಸುವ ಸಂದರ್ಭ ಎದುರಾದರೆ, ಪ್ರಿಸೈಡಿಂಗ್ ಅಧಿಕಾರಿಯು ಮತದಾರನಿಗೆ ಅರ್ಥವಾಗುವಂತಹ ರೀತಿಯಲ್ಲಿ ಇವಿಎಂ ಬ್ಯಾಲೆಟ್‌ನ ಕಾರ್ಡ್‌ಬೋರ್ಡ್ ಮಾದರಿಯನ್ನು ಬಳಸಿ ಮತದಾನ ಪ್ರಕ್ರಿಯೆಯನ್ನು ಮತದಾರನಿಗೆ ವಿವರಿಸಬೇಕು. ಈ

ಕಾರ್ಯವನ್ನು ಮತದಾನ ಘಟಕದ ಹೊರಗೆ ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಮಾತ್ರವೇ ನಡೆಸಬೇಕೆ ಹೊರತು ಮತದಾನ ಘಟಕದ ಒಳಭಾಗದಲ್ಲಿ ನಡೆಸುವಂತಿಲ್ಲ.

ಸಿ. ಪ್ರಿಸ್ಯೈಡಿಂಗ್ ಅಧಿಕಾರಿ ಅಥವಾ ಇತರ ಮತಗಟ್ಟೆ ಸಿಬ್ಬಂದಿ ಮತದಾನ ಘಟಕಕ್ಕೆ ಪದೇಪದೇ ಎಡತಾಕುವಂತಿಲ್ಲ. ಹೀಗೆ ಮಾಡುವುದರಿಂದ ದೂರುಗಳಿಗೆ ಎಡೆ ಮಾಡಿಕೊಟ್ಟಂತಾಗುತ್ತದೆ.

ಡಿ. ಯಾರೇ ಮತದಾರನು ಯಾವುದೇ ಕಾಗದಪತ್ರ, ಟೇಪುಗಳು ಮೊದಲಾದವುಗಳನ್ನು ಚಿಹ್ನೆ/ ಹೆಸರುಗಳು/ ಬ್ಯಾಲೆಟ್ ಬಟನ್‌ನ ಮೇಲೆ ಅಂಟಿಸುವಂತಹ ಯಾವುದೇ ಕಿಡಿಗೇಡಿ ಕೃತ್ಯವನ್ನು ಎಸಗದಿರುವುದನ್ನು ಖಾತರಿಪಡಿಸಿಕೊಳ್ಳುವ ದಿಸೆಯಲ್ಲಿ ಪ್ರಿಸ್ಯೈಡಿಂಗ್ ಅಧಿಕಾರಿಯು ಕಾಲಕಾಲಕ್ಕೆ ಬ್ಯಾಲೆಟ್ ಯೂನಿಟ್‌ನ್ನು ಪರಿಶೀಲಿಸಬಹುದಾಗಿದ್ದರೂ ಮತದಾನ ಘಟಕದೊಳಗೆ ಯಾರೇ ಮತದಾರರು ಇಲ್ಲದಿರುವ ಸಂದರ್ಭದಲ್ಲಿ ಮತಗಟ್ಟೆ ಏಜೆಂಟರ ನಿಕಟ ಸಮ್ಮುಖದಲ್ಲಿ ಪರಿಶೀಲಿಸುವ ಕಾರ್ಯವನ್ನು ನಡೆಸತಕ್ಕದ್ದು.

## 7.20. ಚಿಹ್ನೆ

7.20.1. ಮತದಾರರ ಅನುಕೂಲಕ್ಕಾಗಿ ಅಭ್ಯರ್ಥಿಯು ತನ್ನ ಚಿಹ್ನೆಯ ಪ್ರತಿಗಳನ್ನು ಮುದ್ರಿಸಿ ಅವರಿಗೆ ಹಂಚಿಕೆ ಮಾಡಬಹುದಾದರೂ ಮತದಾರರು ಚಿಹ್ನೆಯನ್ನು ಒಳಗೊಂಡಿರುವ ಕಾಗದ ಪತ್ರವನ್ನು ತಮ್ಮೊಂದಿಗೆ ಮತಗಟ್ಟೆಯೊಳಗೆ ಒಯ್ಯುವಂತಿಲ್ಲ.

## 7.21. ಮೃತಪಟ್ಟ, ಗೈರುಹಾಜರಾದ, ಸ್ಥಳಾಂತರಗೊಂಡಿರುವ ಮತ್ತು ನಕಲಿ ಮತದಾರರ ಪಟ್ಟಿ.

7.21.1. ಇತ್ತೀಚಿಗೆ ಮತದಾನದ ದಿನದಂದು ಕೆಲವು ವೇಳೆ ವ್ಯಕ್ತಿಗಳು ಮೃತಪಟ್ಟಿರುವ ಅಥವಾ ಬೇರೆ ಸ್ಥಳಗಳಿಗೆ ಸ್ಥಳಾಂತರಗೊಂಡಿರುವ ಮತದಾರರ ಹೆಸರಿನಲ್ಲಿ ಬೇರೊಬ್ಬರು ಮತಚಲಾಯಿಸಲು ಮತಗಟ್ಟೆಗೆ ಬರುತ್ತಿರುವುದು ಭಾರತ ಚುನಾವಣಾ ಆಯೋಗದ ಗಮನಕ್ಕೆ ಬಂದಿದೆ. ಪ್ರಚಾರ ಕಾರ್ಯದ ಅವಧಿಯಲ್ಲಿ ಅಭ್ಯರ್ಥಿಯ ಪರವಾಗಿ ಅವರ ಕಾರ್ಯಕರ್ತರು ಹಾಗೂ ಏಜೆಂಟರು ಮತದಾರರ ಪಟ್ಟಿಯಲ್ಲಿ ಕಂಡುಬರುವ ಹೆಸರುಗಳ ಪೈಕಿ ಮೃತಪಟ್ಟವರು, ಹೆಚ್ಚು ಕಡಿಮೆ ಖಾಯಂ ಆಗಿ ಸ್ಥಳವನ್ನು ತೊರೆದಿರಬಹುದಾದಂತಹ ಮತದಾರರನ್ನು ಗುರುತಿಸಬಹುದು. ಪ್ರತಿಯೊಂದು ಮತಗಟ್ಟೆಗೆ ಪ್ರತ್ಯೇಕವಾಗಿ ಮೃತಪಟ್ಟ, ಗೈರುಹಾಜರಾದ ಅಥವಾ ಸ್ಥಳಾಂತರಗೊಂಡ ಮತ್ತು ನಕಲಿ ಮತದಾರರ ಪಟ್ಟಿಯೊಂದನ್ನು ಸಿದ್ಧಪಡಿಸುವಂತೆ ತಮ್ಮ ಕಾರ್ಯಕರ್ತರಿಗೆ ತಿಳಿಸಬಹುದು. ಎಲ್ಲ ಸ್ಪರ್ಧಾಳುಗಳೂ ಒಪ್ಪುವಂತ, ಅಂತಹ ಒಂದು ಪಟ್ಟಿಯನ್ನು ಸಿದ್ಧಪಡಿಸಲು ಸಾಧ್ಯವಾದಲ್ಲಿ ಮತಕ್ಷೇತ್ರದಲ್ಲಿ ಮೊದಲ ಮತದಾನದ ದಿನಕ್ಕೆ

ಕಡೇಪಕ್ಷ ಏಳು ದಿನಗಳಿಗೂ ಮುಂಚಿತವಾಗಿ ರಿಟರ್ನಿಂಗ್ ಅಧಿಕಾರಿಗೆ ಒಪ್ಪಿತ ಪಟ್ಟಿಯನ್ನು ಕಳುಹಿಸುವ ವ್ಯವಸ್ಥೆ ಮಾಡುವುದು. ಪಟ್ಟಿಗೆ ಎಲ್ಲ ಸ್ಪರ್ಧಾಳುಗಳ ಒಪ್ಪಿಗೆಯನ್ನು ಪಡೆಯಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸುವುದು, ಇಲ್ಲವಾದಲ್ಲಿ ನೀವೇ ಸಿದ್ಧಪಡಿಸಿರುವ ಪಟ್ಟಿಯನ್ನು ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸುವುದು.

7.21.2. ಮತದಾನದ ಸಂದರ್ಭದಲ್ಲಿ ಬೇರೊಬ್ಬ ಮತದಾರನ ಸೋಗಿನಲ್ಲಿ ಮತ ಚಲಾಯಿಸುವುದನ್ನು ತಪ್ಪಿಸಲು, ಆಯೋಗವು ಗೈರು ಹಾಜರಾದ, ಸ್ಥಳಾಂತರಗೊಂಡ ಮತ್ತು ಮೃತ ಮತದಾರರ (ಎಎಸ್‌ಡಿ ಮತದಾರರು) ಸಂಬಂಧದಲ್ಲಿ ಈ ಮುಂದಿನ ನಿರ್ದೇಶನಗಳನ್ನು ಹೊರಡಿಸಿದೆ:

- ಅಂಥ ಮತದಾರರ ಪಟ್ಟಿಯನ್ನು ಮತಗಟ್ಟೆವಾರಾಗಿ ಸಿದ್ಧಪಡಿಸಿ, ಅಂಥ ಪಟ್ಟಿಯನ್ನು ಪ್ರತಿ ಪ್ರಿಸೈಡಿಂಗ್ ಅಧಿಕಾರಿಗೆ ಒದಗಿಸಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಮತದಾನದ ದಿನದಂದು, ಮತದಾರನು ಮತ ಚಲಾಯಿಸಲು ಮತದಾರರ ಗುರುತಿನ ಚೀಟಿಯನ್ನು ಅಥವಾ ಚುನಾವಣಾ ಆಯೋಗವು ಅನುಮತಿಸಿದ ಪರ್ಯಾಯ ಭಾವಚಿತ್ರವಿರುವ ಗುರುತಿನ ಚೀಟಿಗಳಲ್ಲಿ ಯಾವುದಾದರೊಂದನ್ನು ಸಲ್ಲಿಸಬೇಕಾಗುತ್ತದೆ. ಪ್ರಿಸೈಡಿಂಗ್ ಅಧಿಕಾರಿಯು ಖುದ್ದಾಗಿ ಅಂಥ ದಾಖಲೆಗಳನ್ನು ಪರಿಶೀಲಿಸಿ, ನಮೂನೆ 17ರಲ್ಲಿನ ಮತದಾರರ ರಿಜಿಸ್ಟರ್‌ನಲ್ಲಿ ಸಂಬಂಧಪಟ್ಟ ಪೋಲಿಂಗ್ ಅಧಿಕಾರಿಯು ಆ ವಿವರಗಳನ್ನು ಸೂಕ್ತವಾಗಿ ದಾಖಲಿಸಬೇಕು.
- ಮತದಾರರ ರಿಜಿಸ್ಟರ್‌ನ (ನಮೂನೆ 17ಎ) ಸಹಿ/ಹೆಬ್ಬೆಟ್ಟಿನ ಮುದ್ರೆ ಎಂಬ ಅಂಕಣದ ಪಕ್ಕದಲ್ಲಿ ಸಹಿಯ ಜೊತೆಗೆ ಅಂಥ ಮತದಾರರ ಹೆಬ್ಬೆಟ್ಟಿನ ಮುದ್ರೆಯನ್ನು ಸಹ ಪಡೆದುಕೊಳ್ಳತಕ್ಕದ್ದು. ಮತದಾರ ಅಕ್ಷರಸ್ಥನಾಗಿದ್ದು, ಸಹಿ ಮಾಡುವ ಸಾಮರ್ಥ್ಯ ಹೊಂದಿದ್ದರೂ ಸಹ ಸಹಿಯ ಜೊತೆಗೆ ಹೆಬ್ಬೆಟ್ಟಿನ ಮುದ್ರೆಯನ್ನು ಪಡೆಯಬೇಕು.
- ಪ್ರಿಸೈಡಿಂಗ್ ಅಧಿಕಾರಿಯು ಎಎಸ್‌ಡಿ ಪಟ್ಟಿಯಿಂದ ಹಲವಾರು ಮತದಾರರಿಗೆ ಸೂಕ್ತ ಪರಿಶೀಲನೆಯ ನಂತರ ಮತ ಚಲಾಯಿಸಲು ಅನುಮತಿ ನೀಡಲಾಯಿತು ಎಂಬುದನ್ನು (ಪರಿಶೀಲನೆಗಾಗಿ ನಮೂನೆ 17ರೊಂದಿಗೆ ಇರಿಸುವುದು) ಮತದಾನದ ಕೊನೆಯಲ್ಲಿ ದಾಖಲಿಸಿ ಪ್ರಮಾಣಪತ್ರ ನೀಡಬೇಕು.
- ಮತಗಟ್ಟೆಯಲ್ಲಿ ವಿಡಿಯೋ ಅಥವಾ ಫೋಟೋಗ್ರಫಿಯನ್ನು ದಾಖಲಿಸುತ್ತಿದ್ದಲ್ಲಿ, ಅಂಥ ಮತದಾರರ ಫೋಟೋಗಳನ್ನು ತೆಗೆದು ದಾಖಲಿಸತಕ್ಕದ್ದು.

7.21.3. ಉಪಸ್ಥಿತರಿರುವ ಸೂಕ್ಷ್ಮ ವೀಕ್ಷಕರು ಎಎಸ್‌ಡಿ ಮತದಾರರಿಗೆ ಸಂಬಂಧಿಸಿದಂತೆ ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ ಮತ್ತು ತಮ್ಮ ವರದಿಯಲ್ಲಿ ಇದನ್ನು ನಮೂದಿಸಲಾಗಿದೆ ಎಂಬುದನ್ನು

ಖಚಿತಪಡಿಸಿಕೊಳ್ಳಬೇಕು. ಎಎಸ್‌ಡಿ ಪಟ್ಟಿಯಲ್ಲಿರುವ ಮತದಾರನಿಗೆ ಸಂಬಂಧಿಸಿದಂತೆ ಮತಗಟ್ಟೆಗಳಲ್ಲಿ ಪಾಲಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿಗೆ ವಿಶೇಷವಾಗಿ ತಿಳಿಸಿ ಹೇಳತಕ್ಕದ್ದು. ಅಲ್ಲದೆ, ಸಾಗರೋತ್ತರ ಮತದಾರರು ಗುರುತನ್ನು, ಅವರು ಮತಗಟ್ಟೆಯಲ್ಲಿ ಮತ ಚಲಾಯಿಸುವಾಗ ಮೂಲ ಪಾಸ್‌ಪೋರ್ಟ್‌ನ್ನು ಸಲ್ಲಿಸಿದ ನಂತರ ಮಾತ್ರವೇ ಅನುಮತಿ ನೀಡಬೇಕು. ಮತದಾರರಿಂದ ಸಂಗ್ರಹಿಸಿದ ಮತದಾರರ ಸ್ಲಿಪ್‌ನ್ನು ಅನುಕ್ರಮವಾಗಿ ಟ್ಯಾಗ್ ಮಾಡಿ ಮತದಾನ ಮುಕ್ತಾಯವಾದ ನಂತರ ಆ ಉದ್ದೇಶಕ್ಕಗಿ ಒದಗಿಸಲಾದ ಪ್ರತ್ಯೇಕ ಲಕೋಟೆಯಲ್ಲಿ ಇಡತಕ್ಕದ್ದು.

7.21.4. ಪಟ್ಟಿಯನ್ನು ಸರಿಯಾಗಿ ಸಿದ್ಧಪಡಿಸುವುದು. ಅದರಲ್ಲಿ ಯಾರೇ ನೈಜ ಮತದಾರನ ಹೆಸರು ಸೇರ್ಪಡೆಯಾಗದಂತೆ ಎಚ್ಚರವಹಿಸತಕ್ಕದ್ದು. ಯಾರೇ ನೈಜ ಮತದಾರನು ಮೃತ, ಗೈರು ಅಥವಾ ಸ್ಥಳಾಂತರಗೊಂಡ ಮತ್ತು ನಕಲಿ ಮತದಾರರ ಪಟ್ಟಿಯಲ್ಲಿ ತಪ್ಪಾಗಿ ನಮೂದಿಸುವುದು ಪೇಚಿಗೆ ಸಿಲುಕಿಸುವುದಲ್ಲದೆ ಆತನ ಮತಚಲಾವಣೆಯ ಹಕ್ಕೇ ಮತಗಟ್ಟೆಯಲ್ಲಿ ಪ್ರಶ್ನಾರ್ಹವಾಗುತ್ತದೆ.

7.21.5. ಆ ಮತಗಟ್ಟೆ ವ್ಯಾಪ್ತಿಯಲ್ಲಿ ಮೃತಪಟ್ಟಿರುವಂತಹ ಗೈರುಹಾಜರಾದಂತಹ ಅಥವಾ ಸ್ಥಳಾಂತರಗೊಂಡಿರುವಂತಹ ಮತ್ತು ಬದಲಿ ಮತದಾರರ ಪಟ್ಟಿಯ ಒಂದು ಪ್ರತಿಯನ್ನು ಪ್ರತಿಯೊಂದು ಮತಗಟ್ಟೆಯ ನಿಮ್ಮ ಪೋಲಿಂಗ್ ಏಜೆಂಟನಿಗೆ ಹಸ್ತಾಂತರಿಸುವುದರಿಂದ ಆತ ಮತದಾನದ ದಿನದಂದು ಅಂತಹ ಯಾರೇ ಮತದಾರರ ಹೆಸರಿನಲ್ಲಿ ಮತಚಲಾಯಿಸಲು ಬರುವ ಯಾರೇ ವ್ಯಕ್ತಿಯನ್ನು ಗಮನಿಸಿ ಸದರಿ ವಿಷಯವನ್ನು ಪ್ರಿಸೈಡಿಂಗ್ ಅಧಿಕಾರಿಯ ಗಮನಕ್ಕೆ ತರಬಹುದು.

7.21.6. ಮೇಲ್ಕಂಡ ಸೂಚನೆಗಳನ್ನು ಅನೂಚಾನವಾಗಿ ಪಾಲಿಸುವುದರಿಂದ ಅಭ್ಯರ್ಥಿಗೆ ಸಹಾಯವಾಗುವುದಲ್ಲದೆ ನಕಲಿ ಮತದಾನ ಮಾಡುವುದನ್ನು ತಡೆಗಟ್ಟುವಲ್ಲಿ ವಾಸ್ತವವಾಗಿ ಚುನಾವಣಾ ಪ್ರಾಧಿಕಾರಿಗಳಿಗೂ ಸಹ ನೆರವಾಗುತ್ತದೆ.

## 7.22. ಮತದಾನಕ್ಕೆ ಮುನ್ನ ಅಭ್ಯರ್ಥಿಯ ಮರಣ

7.22.1. ಯಾರೇ ಅಭ್ಯರ್ಥಿಯು ಮೃತಪಟ್ಟರೆ ಚುನಾವಣೆಯನ್ನೇ ರದ್ದುಪಡಿಸುವುದಕ್ಕೆ ಅವಕಾಶ ಕಲ್ಪಿಸುತ್ತಿದ್ದ ಕಾನೂನು (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 52) ಇತ್ತೀಚಿಗೆ ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಅಧಿನಿಯಮ, 1996ಕ್ಕೆ ಮಹತ್ವದ ಬದಲಾವಣೆಯನ್ನು ಮಾಡಲಾಗಿದೆ. ಪ್ರಕರಣ 52ರ ತಿದ್ದುಪಡಿಯ ಪ್ರಕಾರ ಮಾನ್ಯತೆ ಪಡೆದ ರಾಜಕೀಯ ಪಕ್ಷದ

ವತಿಯಿಂದ ಸ್ಪರ್ಧಿಸಿರುವ ಅಭ್ಯರ್ಥಿಯು ಮೃತಪಟ್ಟ ಸಂದರ್ಭದಲ್ಲಿ ಮಾತ್ರ ಈ ಮುಂದಿನ ಸಂದರ್ಭ ಸನ್ನಿವೇಶಗಳಲ್ಲಿ ಚುನಾವಣೆಯನ್ನು ಮುಂದೂಡತಕ್ಕದ್ದು.

ಎ. ಸದರಿ ಅಭ್ಯರ್ಥಿಯು ನಾಮಪತ್ರ ಸಲ್ಲಿಕೆಯ ಕಡೇ ದಿನಾಂಕದಂದು ಪೂರ್ವಾಹ್ನ 11.00 ರ ತರುವಾಯ ಯಾವುದೇ ಸಮಯದಲ್ಲಿ ಮೃತಪಟ್ಟರೆ ಮತ್ತು ಪ್ರಕರಣ 36ರ ಮೇರೆಗೆ ನಡೆಸಿರುವ ಪರಿಷ್ಕರಣೆಯಲ್ಲಿ ಆತನ ನಾಮಪತ್ರವು ಸಿಂಧುವಾಗಿರುವುದು ಕಂಡುಬಂದರೆ; ಅಥವಾ

ಬಿ. ಆತನ ನಾಮಪತ್ರವು ಪ್ರಕರಣ 36ರ ಮೇರೆಗೆ ನಡೆಸಿರುವ ಪರಿಷ್ಕರಣೆಯಲ್ಲಿ ಸಿಂಧುವಾಗಿರುವುದು ಕಂಡುಬಂದಿದ್ದು ಪ್ರಕರಣ 37ರ ಅಡಿ ಆತ ತನ್ನ ಉಮೇದುವಾರಿಕೆಯನ್ನು ಹಿಂಪಡೆಯದೆ ಮೃತಪಟ್ಟಿರುವುದು ಮತ್ತು ಇವೆರಡು ಪ್ರಕರಣಗಳಲ್ಲಿ ಪ್ರಕರಣ 38ರ ಮೇರೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ಮುನ್ನ ಯಾವುದೇ ಸಮಯದಲ್ಲಿ ಆತ ಮೃತಪಟ್ಟರೆ; ಅಥವಾ

ಸಿ. ಆತ ಒಬ್ಬ ಸ್ಪರ್ಧಿಸಿರುವ ಅಭ್ಯರ್ಥಿಯಾಗಿ ಮೃತಪಟ್ಟರೆ ಮತ್ತು ಮತದಾನ ಪ್ರಾರಂಭವಾಗುವ ಮುನ್ನ ಆತನು ಮೃತಪಟ್ಟರೆ.

7.22.2. ಅಭ್ಯರ್ಥಿಯ ಮರಣದ ಸತ್ಯಾಸತ್ಯತೆಯನ್ನು ಮನವರಿಕೆ ಮಾಡಿಕೊಂಡ ತರುವಾಯ, ರಿಟರ್ನಿಂಗ್ ಅಧಿಕಾರಿಯು ಚುನಾವಣಾ ಆಯೋಗವು ತರುವಾಯ ಅಧಿಸೂಚಿಸಬಹುದಾದಂತಹ ದಿನಾಂಕಕ್ಕೆ ಮತದಾನವನ್ನು ಮುಂದೂಡಲು ಆದೇಶಿಸುವುದು.

7.22.3. ಮೇಲ್ಕಂಡ (ಎ) ಯಲ್ಲಿ ನಮೂದಿಸಿರುವ ಅಭ್ಯರ್ಥಿಯು ಮೃತಪಟ್ಟ ಸಂದರ್ಭದಲ್ಲಿ ಮೃತ ಅಭ್ಯರ್ಥಿಯ ನಾಮಪತ್ರವೂ ಸೇರಿದಂತೆ ಎಲ್ಲ ನಾಮಪತ್ರಗಳ ಪರಿಷ್ಕರಣೆಯ ತರುವಾಯ ಮಾತ್ರವೇ ಮತದಾನವನ್ನು ಮುಂದೂಡುವ ಆದೇಶವನ್ನು ಹೊರಡಿಸುವುದು. ಅಂತಹ ಪ್ರಕರಣದಲ್ಲಿ ಅಭ್ಯರ್ಥಿಯು ಸಾವನ್ನಪ್ಪುವ ಸಮಯದಲ್ಲಿ ಚುನಾವಣಾ ಚಿಹ್ನೆಗಳು (ಕಾಯ್ದಿರಿಸುವಿಕೆ ಮತ್ತು ಹಂಚಿಕೆ) ಆದೇಶ 1969ರ ಪ್ಯಾರಾ 13ರಲ್ಲಿ ನಮೂದಿಸಿರುವ ಎಲ್ಲ ಅಗತ್ಯತೆಗಳನ್ನು ಪೂರೈಸಲಾಗಿದ್ದರೆ ಮಾತ್ರವೇ ಅಭ್ಯರ್ಥಿಯು ಮಾನ್ಯತೆ ಪಡೆದ ರಾಜಕೀಯ ಪಕ್ಷದ ವತಿಯಿಂದ ಸ್ಪರ್ಧಿಸಿರುವ ಅಭ್ಯರ್ಥಿಯೆಂದು ಬಾವಿತವಾಗತಕ್ಕದ್ದೆಂಬ ಅಂಶವನ್ನು ಗಮನಿಸತಕ್ಕದ್ದು. ಅಭ್ಯರ್ಥಿಯು ಮೃತಪಟ್ಟ ಸಮಯದಲ್ಲಿ 'ಎ' ಮತ್ತು 'ಬಿ' ನಿಗದಿತ ನಮೂನೆಗಳಲ್ಲಿ ಅಭ್ಯರ್ಥಿಯು ಸ್ಪರ್ಧಿಸುವ ಸಂಬಂಧ ಪಕ್ಷವು ಸೂಚನೆ ನೀಡದಿದ್ದರೆ, ಮತದಾನವನ್ನು ಮುಂದೂಡುವ ಉದ್ದೇಶಕ್ಕಾಗಿ ಅಭ್ಯರ್ಥಿಯು ಮಾನ್ಯತೆ ಪಡೆದ ರಾಜಕೀಯ ಪಕ್ಷದ ವತಿಯಿಂದ ಸ್ಪರ್ಧಿಸುವ ಅಭ್ಯರ್ಥಿಯೆಂದು ಭಾವಿಸತಕ್ಕದ್ದಲ್ಲ. ಅಂತಹ ಒಂದು ಸಂದರ್ಭದಲ್ಲಿ ದಿನದ ಅಪರಾಹ್ನ 3.00 ಗಂಟೆಯೊಳಗೆ (ಚಿಹ್ನೆಗಳ ಆದೇಶದ ಪ್ಯಾರಾ 13ರಡಿ

ಅಗತ್ಯಪಡಿಸಲಾದ) ಅಗತ್ಯವಿರುವ ಸೂಚನೆಯನ್ನು ತಾನು ಒದಗಿಸುತ್ತೇನೆಂಬ ಯಾವುದೇ ಪಕ್ಷದ ವಾದವನ್ನು ಪುರಸ್ಕರಿಸುವಂತಿಲ್ಲ.

7.22.4. ಈ ಸಂಬಂಧ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 52ನೇ ಪ್ರಕರಣದ ಉದ್ದೇಶಕ್ಕಾಗಿ ಮಾನ್ಯತೆ ಪಡೆದ ರಾಜಕೀಯ ಪಕ್ಷವೆಂದರೆ ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷ ಅಥವಾ ಸಂಬಂಧಪಟ್ಟ ರಾಜ್ಯದಲ್ಲಿ ಒಂದು ರಾಜ್ಯ ಪಕ್ಷವಾಗಿ ಮಾನ್ಯತೆ ಪಡೆದ ಒಂದು ಪಕ್ಷ. ಒಂದು ನಿರ್ದಿಷ್ಟ ರಾಜ್ಯದಲ್ಲಿ ಒಂದು ರಾಜ್ಯ ಪಕ್ಷವಾಗಿ ಮಾನ್ಯತೆ ಪಡೆದ ಒಂದು ಪಕ್ಷವನ್ನು ಆ ಪಕ್ಷವು ಇತರ ರಾಜ್ಯಗಳಲ್ಲಿ ತನ್ನ ಚಿಹ್ನೆಯನ್ನು ಬಳಸಿಕೊಳ್ಳಲು ವಿನಾಯಿತಿಯನ್ನು ನೀಡಲಾಗಿದ್ದರೂ ಸಹ ಅದನ್ನು ರಾಜ್ಯ ಪಕ್ಷವಾಗಿ ಮಾನ್ಯತೆ ಪಡೆಯದ ಇತರ ರಾಜ್ಯದಲ್ಲಿ ಒಂದು ನೋಂದಾಯಿತ ಮಾನ್ಯತೆ ಪಡೆಯದ ಪಕ್ಷವೆಂದು ಮಾತ್ರವೇ ಪರಿಗಣಿಸಲಾಗುವುದು. ಆದ್ದರಿಂದ ಅಂತಹ ಒಂದು ಪಕ್ಷದ ವತಿಯಿಂದ ಸ್ಪರ್ಧಿಸಿರುವ ಅಭ್ಯರ್ಥಿಯು ಮೃತಪಟ್ಟ ಕಾರಣದಿಂದಾಗಿ ಮತದಾನವನ್ನು ಮುಂದೂಡುವಂತಿಲ್ಲ.

7.22.5. ಮಾನ್ಯತೆ ಪಡೆದ ರಾಜಕೀಯ ಪಕ್ಷದ ವತಿಯಿಂದ ಸ್ಪರ್ಧಿಸಿರುವ ಅಭ್ಯರ್ಥಿಯು ಮೃತಪಟ್ಟಿರುವ ಬಗ್ಗೆ ರಿಟರ್ನಿಂಗ್ ಅಧಿಕಾರಿಯ ವರದಿಯನ್ನು ಸ್ವೀಕರಿಸಿದ ತರುವಾಯ ಚುನಾವಣಾ ಆಯೋಗವು ಮೃತಪಟ್ಟ ಅಭ್ಯರ್ಥಿಯ ಸ್ಥಳದಲ್ಲಿ ಸದರಿ ಚುನಾವಣೆಗಾಗಿ ಬೇರೊಬ್ಬ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡುವಂತೆ ಸಂಬಂಧಪಟ್ಟ ರಾಜಕೀಯ ಪಕ್ಷವನ್ನು ಕೋರುತ್ತದೆ. ರಾಜಕೀಯ ಪಕ್ಷವು ಚುನಾವಣಾ ಆಯೋಗವು ಹಾಗೆ ನೋಟೀಸನ್ನು ಜಾರಿ ಮಾಡಿದ ಏಳು ದಿನಗಳೊಳಗೆ ನಾಮನಿರ್ದೇಶನ ಮಾಡತಕ್ಕದ್ದು. ಅಂಥ ಅಭ್ಯರ್ಥಿಯ ನಾಮನಿರ್ದೇಶನವನ್ನು ಸಹ ನಿಗದಿತ ನಮೂನೆಯಲ್ಲಿಯೇ (ಅಂದರೆ ನಮೂನೆ 2ಎ ಅಥವಾ ಸಂದರ್ಭಾನುಸಾರ 2ಬಿ) ಮಾಡತಕ್ಕದ್ದು ಮತ್ತು ಅವರು ಸಹ ಒಂದು ಹೊಸ ಭದ್ರತಾ ಠೇವಣಿಯನ್ನು ಇಡತಕ್ಕದ್ದು. ನಿಗದಿತ ನಮೂನೆಯಲ್ಲಿ ಮಾಡಿರುವ ನಾಮನಿರ್ದೇಶನವು ಚುನಾವಣಾ ಚಿಹ್ನೆಗಳು (ಕಾಯ್ದಿರಿಸುವಿಕೆ ಮತ್ತು ಹಂಚಿಕೆ) ಆದೇಶ, 1968ರ 13ನೇ ಪ್ಯಾರಾಗ್ರಾಫ್ ಮೇರೆಗೆ ನಿರ್ದಿಷ್ಟಪಡಿಸಿದ ನಮೂನೆ ಎ ಮತ್ತು ನಮೂನೆ ಬಿ ಯಲ್ಲಿ ಪಕ್ಷದ ಅಗತ್ಯವಿರುವ ಸೂಚನೆಯನ್ನು ಸಹ ಒಳಗೊಂಡಿರತಕ್ಕದ್ದು. ಅಂತಹ ಅಭ್ಯರ್ಥಿಗೆ ಸಂಬಂಧಪಟ್ಟಂಥ ನಾಮಪತ್ರ ಸಲ್ಲಿಕೆ, ನಾಮಪತ್ರ ಪರಿಷ್ಕರಣೆ, ಉಮೇದುವಾರಿಕೆಯನ್ನು ಹಿಂಪಡೆಯುವಿಕೆಗೆ ಸಂಬಂಧಪಟ್ಟಂತಿರುವ ಕಾನೂನಿನ ಇತರ ಎಲ್ಲ ಅಗತ್ಯತೆಗಳನ್ನು ಸಹ ಪಾಲಿಸಿರತಕ್ಕದ್ದು.

7.22.6 ಮತದಾನವನ್ನು ಮುಂದೂಡುವ ಮೊದಲು ಪ್ರಕರಣ 37ರ ಉಪ–ಪ್ರಕರಣ (1)ರ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂಪಡೆಯುವ ನೋಟೀಸನ್ನು ನೀಡಲಾಗಿದ್ದು ವ್ಯಕ್ತಿಯು ಮೃತಪಟ್ಟ ಅಭ್ಯರ್ಥಿಯ ಸ್ಥಳದಲ್ಲಿ ಒಬ್ಬ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲು ಅರ್ಹನಾಗಿರುತ್ತಾನೆ.

7.22.7. ಮತದಾನವನ್ನು ಮುಂದೂಡುವ ಮೊದಲು ಪ್ರಕರಣ 38ರ ಮೇರೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದ್ದರೆ ರಿಟರ್ನಿಂಗ್ ಅಧಿಕಾರಿಯು ಮೃತಪಟ್ಟ ಅಭ್ಯರ್ಥಿಯ ಸ್ಥಳದಲ್ಲಿ ನಾಮನಿರ್ದೇಶನಗೊಂಡ ಅಭ್ಯರ್ಥಿಯ ಹೆಸರು ಸೇರಿದಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಒಂದು ಹೊಸ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸತಕ್ಕದ್ದು.

7.22.8. ಮುಂದಿನ ಚುನಾವಣಾ ಹಂತಗಳನ್ನು ಆಯೋಗವು ಅಧಿಸೂಚಿಸಿದ ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಮುಂದುವರಿಸುವುದು

# 8. ಸೂಕ್ಷ್ಮ ವಿಷಯಗಳ ಕುರಿತಾಗಿ ವಿಡಿಯೋ ಚಿತ್ರೀಕರಣ

## 8.1. ವಿಡಿಯೋ ಚಿತ್ರೀಕರಣಕ್ಕೆ ಸಂಬಂಧಿಸಿದ ಸೂಚನೆಗಳು

8.1.1. ಚುನಾವಣಾ ಕಾನೂನು ಮತ್ತು ಅದರ ಸ್ಥಾಯಿ ಸೂಚನೆಗಳ ಉಲ್ಲಂಘನೆಗಳ ನೈಜ, ವಿಶ್ವಾಸಾರ್ಹ ಮತ್ತು ಸಮವರ್ತಿ ದಾಖಲೆಯನ್ನು ಹೊಂದುವ ಮತ್ತು ಅವುಗಳ ಸುಧಾರಣಾ ಕ್ರಮಗಳ ಪರಿಣಾಮವನ್ನು ನಿರ್ಧರಿಸುವ ದೃಷ್ಟಿಯಿಂದ ಚುನಾವಣಾ ಆಯೋಗವು ಈ ಕೆಳಗಿನ ಸೂಚನೆಗಳನ್ನು ಹೊರಡಿಸಿದೆ.

1. ಸಾರ್ವಜನಿಕ ಪ್ರಚಾರ, ಮತದಾನದ ದಿನ, ಮತ ಚಲಾವಣೆಗೊಂಡ ಮತ ಪೆಟ್ಟಿಗೆಗಳು ಮತ್ತು ಇತರ ಸಾಮಗ್ರಿಗಳ ಸಾಗಣೆ ಮತ್ತು ಸ್ವೀಕೃತಿ, ಮತ ಎಣಿಕೆ ಮತ್ತು ಒಂದು ಸ್ವತಂತ್ರ ಬೌದ್ಧಿಕ ಮತ್ತು ಉದ್ದೇಶಪೂರ್ವಕ ರೀತಿಯಲ್ಲಿ ಫಲಿತಾಂಶಗಳನ್ನು ಘೋಷಣೆ ಮಾಡುವ ಅವಧಿಗೆ ನಿರ್ಬಂಧಿಸದಿರುವುದು ಸೇರಿದಂತೆ ಚುನಾವಣಾ ಕಾರ್ಯಪ್ರಕ್ರಿಯೆಯ ಅವಧಿಯಲ್ಲಿ ಎದುರಾಗುವ ಸಂದಿಗ್ಧ ಘಟನೆಗಳನ್ನು ವಿಡಿಯೋಗ್ರಫಿ ಮಾಡುವ ಮೂಲಕ ದಾಖಲು ಮಾಡುವ ವ್ಯವಸ್ಥೆಗಳನ್ನು ಮಾಡತಕ್ಕದ್ದು.
2. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿಗಳು ಸರ್ಕಾರಿ ಅಥವಾ ಅರೆ–ಸರ್ಕಾರಿ ಏಜೆನ್ಸಿಗಳಲ್ಲಿ ಲಭ್ಯವಿರುವ ಕ್ಯಾಮರಾಗಳು ಮತ್ತು ಸಿಬ್ಬಂದಿಯನ್ನು ಬಳಕೆ ಮಾಡಿಕೊಳ್ಳಬಹುದು ಅಥವಾ ಸ್ಥಳೀಯ ಖಾಸಗಿ ವೃತ್ತಿಪರ ವಿಡಿಯೋಗ್ರಾಫರ್‌ಗಳ ಸೇವೆಯನ್ನು ಮಜೂರಿಗೆ ಗೊತ್ತು ಮಾಡಿಕೊಳ್ಳಬಹುದು.
3. ವಿಡಿಯೋ ತಂಡಗಳ ಪ್ರವಾಸ ಕಾರ್ಯಯೋಜನೆಯನ್ನು ರೂಪಿಸುವಾಗ ಮತದಾರರ ಸಂಖ್ಯೆ, ಕ್ಷೇತ್ರ ವ್ಯಾಪ್ತಿ, ಸೂಕ್ಷ್ಮ ಮತದಾನ ಕೇಂದ್ರಗಳ ಸಂಖ್ಯೆ, ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು ಮತ್ತು ಇತರ ದುರಾಚಾರಗಳ ಪೂರ್ವೇತಿಹಾಸ, ಸಾಮಾನ್ಯ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ, ಆಯೋಗವನ್ನು ಭ್ರಷ್ಟಾಚಾರಗಳು ಮತ್ತು ಚುನಾವಣಾ ಅಪರಾಧಗಳ ಸಂಭಾವ್ಯತೆ ಮತ್ತು ಇತರ ಸಂಬಂಧಪಟ್ಟ ಅಂಶಗಳನ್ನು ರಿಟರ್ನಿಂಗ್ ಅಧಿಕಾರಿಯು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.
4. ಅಂದಾಜು ಮಾಡಿರುವಂತೆ, ರಿಟರ್ನಿಂಗ್ ಅಧಿಕಾರಿಯು ಅಗತ್ಯವಿರುವಷ್ಟು ವಿಡಿಯೋ ತಂಡಗಳನ್ನು ನಿರ್ಧರಿಸಬೇಕು. ಆಯೋಗವು ವಿಡಿಯೋ ತಂಡಗಳಿಗೆ ಸಂಬಂಧಿಸಿದಂತೆ ವಿಧಾನಸಭೆ/ ಲೋಕಸಭೆ ಕ್ಷೇತ್ರಕ್ಕೆ ಗರಿಷ್ಠ ಅಥವಾ ಕನಿಷ್ಠ ಮಿತಿಯನ್ನು

ನಿರ್ದಿಷ್ಟಪಡಿಸಿರುವುದಿಲ್ಲ ಮತ್ತು ಮೇಲ್ಕಾಣಿಸಿದ ಅಂಶಗಳ ಹಿನ್ನೆಲೆಯಲ್ಲಿ ಕರಾರುವಕ್ಕು ಲೆಕ್ಕಾಚಾರವನ್ನು ರಿಟರ್ನಿಂಗ್ ಅಧಿಕಾರಿಯ ವಿವೇಚನೆಗೆ ಬಿಡಲಾಗಿದೆ.

8.1.2. ಆಯೋಗವು ವಿಡಿಯೋಗ್ರಾಫರ್‌ಗಳು ಮತ್ತು ಅವರ ನಿಯೋಜನೆಯ ಆಯ್ಕೆ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನ ಸೂಚನೆಗಳನ್ನು ಹೊರಡಿಸಿದೆ:–

1. ಮಜೂರಿ ಮೇಲೆ ನಿಯೋಜಿಸಿಕೊಳ್ಳುವ ಖಾಸಗಿ ವಿಡಿಯೋ ಗ್ರಾಫರ್‌ಗಳನ್ನು ಅವರವರ ವೃತ್ತಿಪರ ಸಾಮರ್ಥ್ಯ, ಟ್ರ್ಯಾಕ್ ರೆಕಾರ್ಡ್, ಹಣಕಾಸು ಸಾಮರ್ಥ್ಯ ಮತ್ತಿತರೆ ಅಂಶಗಳನ್ನು ಆದ್ಯಂತವಾಗಿ ಪರಿಶೀಲಿಸತಕ್ಕದ್ದು.
2. ವಿಡಿಯೋಗ್ರಾಫರ್‌ಗಳು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿರಬಾರದು ಮತ್ತು ಸ್ಪರ್ಧಿಸಿರುವ ಯಾರೇ ಅಭ್ಯರ್ಥಿಗಳ ಅಥವಾ ರಾಜಕೀಯ ಪಕ್ಷದ ಯಾವುದೇ ಮುಖಂಡರ ಹಿತೈಷಿಗಳು ಅಥವಾ ಬೆಂಬಲಿಗರಾಗಿ ಗುರುತಿಸಿ ಕೊಂಡವರಾಗಿರಬಾರದು ಅಥವಾ ಅವರ ಹತ್ತಿರದ ಸಂಬಂಧಿಗಳಾಗಿರಬಾರದು ಅಥವಾ ಯಾವುದೇ ರಾಜಕೀಯ ಪಕ್ಷ ಅಥವಾ ಸ್ಪರ್ಧಿಸಿರುವ ಅಭ್ಯರ್ಥಿಯು ಮಜೂರಿ ಮೇಲೆ ಅವರನ್ನು ನಿಯೋಜಿಸಿಕೊಂಡಿರಬಾರದು.
3. ವಿಡಿಯೋಗ್ರಾಫರ್‌ಗಳಿಗೆ ಚಹಾ, ಲಘು ಉಪಹಾರ ತಿನಿಸು ಮೊದಲಾದುವುಗಳನ್ನು ರಿಟರ್ನಿಂಗ್ ಅಧಿಕಾರಿಯು ಒದಗಿಸುವುದು ಅಗತ್ಯವಾಗಿದೆ ಮತ್ತು ಅವರು ಕರ್ತವ್ಯದ ಮೇಲಿದ್ದಾಗ ಅವರವರ ಯೋಗಕ್ಷೇಮವನ್ನು ಅವರವರ ಪಾಡಿಗೆ ಬಿಡುವಂತಿಲ್ಲ. ವಿಡಿಯೋ ಗ್ರಾಫರ್‌ಗಳು ಸ್ಪರ್ಧಿಸಿರುವ ಯಾರೇ ಅಭ್ಯರ್ಥಿ ಅಥವಾ ಯಾವುದೇ ರಾಜಕೀಯ ಪಕ್ಷ ಅಥವಾ ಅವರ ಕಾರ್ಯಕರ್ತರ ಆತಿಥ್ಯವನ್ನು ಸ್ವೀಕರಿಸದಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.
4. ವಿಡಿಯೋ ತಂಡಗಳು ಒಬ್ಬ ಚುನಾವಣಾ ಸಂಬಂಧಿ ಹಿರಿಯ ಅಧಿಕಾರಿಯ ಖುದ್ದು ಉಸ್ತುವಾರಿ ಮತ್ತು ಮಾರ್ಗದರ್ಶನದಂತೆ ಕಾರ್ಯನಿರ್ವಹಿಸತಕ್ಕದ್ದು.
5. ಅಗತ್ಯವಾದಗಲೆಲ್ಲ ವಿಡಿಯೋ ತಂಡಗಳು ಸಾಮಾನ್ಯ/ ಚುನಾವಣಾ ವೆಚ್ಚ ವೀಕ್ಷಕರ ಜೊತೆಯಲ್ಲಿರುವಂತೆ ಕೋರಬಹುದಾಗಿದ್ದು ಹೀಗೆ ಮಾಡುವುದರಿಂದ ಅವರ ಗಮನಕ್ಕೆ ಬರುವ ಎಲ್ಲ ಸಂದಿಗ್ಧ ಸನ್ನಿವೇಶಗಳನ್ನು ಸಹ ವಿಡಿಯೋ ಟೇಪ್ ಮಾಡಬಹುದಾಗಿದೆ.
6. ಯೋಜನೆಯ ಹಿಂದಿನ ತತ್ವವೇನೆಂದರೆ ಮತದಾನಕ್ಕೆ ಭಂಗತರುವ ಸಾಧ್ಯತೆಗಳಿರುವಂತಹ ಸಂದಿಗ್ಧ ಸಂದರ್ಭಗಳನ್ನು ದಾಖಲಿಸುವುದು ಮಾತ್ರವಲ್ಲದೆ ಕೇವಲ ಕ್ಯಾಸೆಟ್ ತುಂಬಿಸುವ ಸಲುವಾಗಿಯೇ ಒಂದು ನಿಯತ ಕ್ರಮದಲ್ಲಿ ಎಲ್ಲ ಘಟನೆಗಳನ್ನು ವಿಡಿಯೋ ಟೇಪ್

ಮಾಡುತ್ತಾ ಕೂರುವುದಲ್ಲ ಎಂಬಂಶವನ್ನು ವಿಡಿಯೋಗ್ರಾಫರ್‌ಗಳಿಗೆ ಮನದಟ್ಟು ಮಾಡಿಸತಕ್ಕದ್ದು.

8.1.3. ವಿಶೇಷ ನಿರೀಕ್ಷಣೆ ಮತ್ತು ವಿಡಿಯೋಗ್ರಫಿಗಾಗಿ ಈ ಕೆಳಗಿನ ಸಂಗತಿಗಳನ್ನು ಪರಿಗಣಿಸತಕ್ಕದ್ದು–

- ಮಂತ್ರಿಗಳು, ಮಾನ್ಯತೆ ಪಡೆದ ರಾಷ್ಟ್ರೀಯ/ ರಾಜ್ಯಮಟ್ಟದ ಪಕ್ಷಗಳ ಉನ್ನತ ಸ್ಥಾನಗಳನ್ನು ಅಲಂಕರಿಸಿರುವ ನಾಯಕರು, ಭಾಷಣ ಮಾಡುವ/ ಭಾಗವಹಿಸುವ ಸಭೆ.
- ದೊಂಬಿ ಅಥವಾ ಗಲಭೆ ಸಂದರ್ಭಗಳು ಅಥವಾ ಇಟ್ಟಿಗೆ ಚೂರನ್ನು ತೂರಿ ಹಲ್ಲೆ ಮಾಡುವುದು, ಗುಂಪು ಗಲಭೆ, ಇತ್ಯಾದಿ.
- ಹಿಂಸಾರೂಪಿ ಘಟನೆಗಳು, ಆಸ್ತಿ ಹಾನಿ, ಲೂಟಿ, ಬೆಂಕಿ ಹಚ್ಚುವುದು, ಶಸ್ತ್ರಾಸ್ತ್ರಗಳನ್ನು ಝಳಪಿಸುವುದು ಇತ್ಯಾದಿ.
- ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು.
- ಮತದಾರರಿಗೆ ಬೆದರಿಕೆ ಹಾಕುವುದು.
- ಸೀರೆ, ದೋತಿ, ಕಂಬಳಿಗಳು ಮೊದಲಾದಂಥ ವಸ್ತುಗಳನ್ನು ವಿತರಿಸುವ ಮೂಲಕ ಮತದಾರರನ್ನು ಓಲೈಸುವುದು/ ಆಮಿಷ ಒಡ್ಡುವುದು.
- ಮತದಾನ ಕೇಂದ್ರಗಳ 100 ಮೀಟರ್ ವ್ಯಾಪ್ತಿಯೊಳಗೆ ಪ್ರಚಾರ ಮಾಡುವುದು.
- ದೊಡ್ಡ ಕಟೌಟ್ಸ್‌ಗಳು, ಮೊದಲಾದಂಥ ಆಡಂಬರ ಪ್ರದರ್ಶನ, ಇತ್ಯಾದಿ.
- ಅನುಮಾನಾಸ್ಪದ/ ಕ್ರಿಮಿನಲ್ ಹಿನ್ನೆಲೆಯುಳ್ಳ ಅಭ್ಯರ್ಥಿಗಳ ಚಲನವಲನ ಮತ್ತು ಕಾರ್ಯಚಟುವಟಿಕೆಗಳು.
- ಅತಿ ಸೂಕ್ಷ್ಮ ಮತ್ತು ಸೂಕ್ಷ್ಮ ಮತದಾನ ಕೇಂದ್ರಗಳು.
- ನಾಮಪತ್ರ ಸಲ್ಲಿಕೆ, ಪರಿಶೀಲನೆ ಮತ್ತು ಉಮೇದುವಾರಿಕೆಯನ್ನು ಹಿಂಪಡೆಯುವಂತಹ ಪ್ರಮುಖ ಘಟನೆಗಳು.
- ರಿಟರ್ನಿಂಗ್ ಅಧಿಕಾರಿಗಳು ಇವಿಎಂ ಗಳನ್ನು ಸಿದ್ಧಪಡಿಸುವುದು.
- ಇವಿಎಂ ಗಳನ್ನು ಇಟ್ಟ ತರುವಾಯ ಭದ್ರತಾ ಕೋಣೆಯನ್ನು ಮುಚ್ಚಿ ಭದ್ರಪಡಿಸುವುದು.
- ಮತ ಎಣಿಕೆಗೆ ಇವಿಎಂ ಗಳನ್ನು ಹೊರ ತೆಗೆಯುವ ಮೊದಲು ಭದ್ರತಾ ಕೊಠಡಿಗಳನ್ನು ತೆರೆಯುವ ಸಂದರ್ಭ.

- ಮತ ಎಣಿಕೆ ಪ್ರಕ್ರಿಯೆ.

**ಸೂಚನೆ**: ಇವು ಊಹಾತ್ಮಕವಾಗಿವೆಯೇ ಹೊರತು ಪರಿಪೂರ್ಣವಾಗಿರುವುದಿಲ್ಲ. ಎಲ್ಲ ವಿಡಿಯೋ ಮತ್ತು ಡಿಜಿಟಲ್ ಫೋಟೊಗ್ರಫಿಯನ್ನು ದಿನಾಂಕ ಮತ್ತು ಸಮಯದ ದಾಖಲಾತಿಯೊಂದಿಗೆ ಮಾಡುವುದರಿಂದ ನೈಜ ಸಮಯ ಮತ್ತು ದಿನಾಂಕವನ್ನು ಪರಿಶೀಲಿಸಲು ನೆರವಾಗುತ್ತದೆ.

8.1.4. ಸಾರ್ವಜನಿಕ ಸಭೆಯ ಯಾರೇ ಸಂಘಟಕರು, ಭಾಷಣಕಾರರು ಅಥವಾ ಇತರೆ ಭಾಗವಹಿಸುವವರು ಚುನಾವಣೆ ನಡೆಸುವುದಕ್ಕೆ ಸಂಬಂಧಪಟ್ಟಂತೆ ಇರುವ ಆಯೋಗದ ಅಥವಾ ಮಾದರಿ ನೀತಿ ಸಂಹಿತೆಯ ನಿರ್ದೇಶನಗಳನ್ನು ಅಥವಾ ಶಾಸನಬದ್ಧ ಉಪಬಂಧಗಳನ್ನು ಉಲ್ಲಂಘಿಸಿರುವರೇ ಅಥವಾ ಅವುಗಳನ್ನು ಮೀರಿರುವರೇ ಎಂಬುದನ್ನು ಗುರುತಿಸಲು ರಿಟರ್ನಿಂಗ್ ಅಧಿಕಾರಿಯು ತಕ್ಷಣವೇ ಸಿದ್ಧಪಡಿಸಿರುವ ವಿಡಿಯೋ ಫಿಲ್ಮ್‌ಗಳನ್ನು ನೋಡತಕ್ಕದ್ದು.

8.1.5. ರಿಟರ್ನಿಂಗ್ ಅಧಿಕಾರಿ ಸ್ವತಃ ಸಕ್ಷಮನಾಗಿರುವ ಸಂದರ್ಭಗಳಲ್ಲಿ ತಪ್ಪಿತಸ್ಥರೆಂದು ಕಂಡುಬರುವಂಥವರೆಲ್ಲರ ವಿರುದ್ಧ ಶಿಸ್ತುಕ್ರಮವು ಸೇರಿದಂತೆ ತ್ವರಿತ ಸೂಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ಆಯೋಗಕ್ಕೆ ತಿಳಿಸತಕ್ಕದ್ದು.

8.1.6. ಗಂಭೀರ ಉಲ್ಲಂಘನೆ ಪ್ರಕರಣಗಳ ಬಗ್ಗೆ, ರಿಟರ್ನಿಂಗ್ ಅಧಿಕಾರಿಯು ಆಯೋಗಕ್ಕೆ ವರದಿ ಮಾಡುವುದೆಂದು ತೀರ್ಮಾನಿಸಿದರೆ ಆಗ ಸಂಬಂಧಿಸಿದ ವಿಡಿಯೋಟೇಪನ ಒಂದು ಪ್ರತಿಯನ್ನು ಸಾಧ್ಯವಿರುವ ಕ್ಷಿಪ್ರಗತಿಯ ಮಾರ್ಗದ ಮೂಲಕ ಆಯೋಗಕ್ಕೆ ಕಳುಹಿಸುವುದು.

8.1.7. ವಿಡಿಯೋಗ್ರಾಫಿಕ್ ಕ್ಲಿಪ್ಪಿಂಗ್‌ಗಳನ್ನು ಒಂದು ನಿರ್ದಿಷ್ಟ ಮತಕ್ಷೇತ್ರದಲ್ಲಿ ಪ್ರಚಲಿತವಿರುವ ಘಟನಾವಳಿಯ ಬಗ್ಗೆ ಆಯೋಗಕ್ಕೆ ತಿಳಿಯಪಡಿಸಲು ಸಾಧ್ಯವಾಗುವಂತೆ ದೈನಂದಿನ ಆಧಾರದ ಮೇಲೆ ಮತಕ್ಷೇತ್ರದಲ್ಲಿ ಲಭ್ಯವಿರುವ ವೀಕ್ಷಕರೊಬ್ಬರಿಗೆ ತೋರಿಸುವುದು ಅಗತ್ಯವಾಗಿದೆ. ಹೀಗೆ ಮಾಡುವುದರಿಂದ ಅಗತ್ಯವಿದ್ದಲ್ಲಿ ತುರ್ತು ಪರಿಹಾರ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಲು ನೆರವಾಗುತ್ತದೆ.

8.1.8. ಮತಗಳ ಎಣಿಕೆ ಕಾರ್ಯವನ್ನು ಕೈಗೊಳ್ಳಲು ಮತ್ತು ಫಲಿತಾಂಶವನ್ನು ಘೋಷಣೆ ಮಾಡುವ ಸಂಬಂಧ ಆಯೋಗದ ಸ್ಪಷ್ಟನೆಯನ್ನು ಕೋರುವಾಗ ರಿಟರ್ನಿಂಗ್ ಅಧಿಕಾರಿಯು ವಿಡಿಯೋಗ್ರಾಫ್ ಮಾಡಿದ ಘಟನಾವಳಿಗಳಲ್ಲಿ ಮಾಡಲಾಗಿರುವ ಎಲ್ಲ ಉಲ್ಲಂಘನೆಗಳನ್ನು ಸಮುಚಿತವಾಗಿ ಮತ್ತು ಸಂಪೂರ್ಣವಾಗಿ ವಿಲೇ ಮಾಡಲಾಗಿರುವುದಕ್ಕೆ ಸಂಬಂಧಿಸಿದಂತೆ ಒಂದು ಖಚಿತ ಹೇಳಿಕೆಯನ್ನು ದಾಖಲು ಮಾಡಿರತಕ್ಕದ್ದು.

8.1.9. 2003ರ ಸಿವಿಲ್ ಅಪೀಲು ಸಂಖ್ಯೆ. 9228 (ಜನಕ್ ಬಿಂಗ್ಹಾಮ್ ವಿರುದ್ದ ದಾಸ್ ರೈ ಮತ್ತು ಇತರರು) ರ ದಿನಾಂಕ: 11ನೇ ಜನವರಿ 2005 ರ ತನ್ನ ತೀರ್ಪಿನಲ್ಲಿ ಸುಪ್ರಿಂಕೋರ್ಟ್ ನೀಡಿರುವ ಸಲಹೆಗಳಿಗೆ ಮನ್ನಣೆ ನೀಡಿ ಆಯೋಗವು ಪ್ರಸ್ತುತ ಮತದಾನ ಗೌಪ್ಯತೆಯ ಬಗ್ಗೆ ಯಾವುದೇ ರೀತಿಯಲ್ಲಿ ರಾಜಿ ಮಾಡಿಕೊಳ್ಳದೆ ಮತದಾರರ ಭಾವಚಿತ್ರಕ್ಕಾಗಿ ಮತದಾನ ಕೇಂದ್ರಗಳೊಳಗೆ ಪೋಟೊ ತೆಗೆಯಬಹುದೆಂದು ಮತ್ತು ಮತದಾನ ವ್ಯವಹರಣೆಗಳನ್ನು ಸೆರೆಹಿಡಿಯಬಹುದೆಂದು ನಿರ್ದೇಶಿಸಿದೆ. ಅಂಥ ಫೋಟೊಗ್ರಫಿಗಾಗಿ ಮುಖ್ಯ ಚುನಾವಣಾ ಅಧಿಕಾರಿಯೊಂದಿಗೆ ಸಮಾಲೋಚಿಸಿ ಸಂಬಂಧಪಟ್ಟ ಜಿಲ್ಲಾ ಚುನಾವಣಾ ಅಧಿಕಾರಿ (ಡಿಇಒ) ಯವರು ಏರ್ಪಾಡುಗಳನ್ನು ಮಾಡುವುದು.

8.1.10. ಆಯೋಗವು ಗುರುತಿಸಿರುವಂಥ ಪ್ರದೇಶ/ ವಿಧಾನಸಭಾ ಕ್ಷೇತ್ರಗಳು/ ಮತದಾನ ಕೇಂದ್ರಗಳಲ್ಲಿ ಮತದಾರರ ವಿಡಿಯೋ/ ಡಿಜಿಟಲ್ ಪೋಟೊಗ್ರಫಿ ಸಂಬಂಧ ನಿರ್ದಿಷ್ಟವಾಗಿ ನಿರ್ದೇಶಿಸಲಾದ ನಿರ್ದಿಷ್ಟ ಸಂದರ್ಭಗಳಲ್ಲಿ ತಮ್ಮ ಮತ ಚಲಾಯಿಸಲು ಬರುವ ಆದರೆ ಎಪಿಕ್ ಅಥವಾ ಇತರೆ ಇಸಿಐ ಅನುಮೋದಿತ ಭಾವಚಿತ್ರ ಗುರುತಿನ ಚೀಟಿಯನ್ನು ಹೊಂದಿರದ ಎಲ್ಲ ಮತದಾರರ ಮುಖಗಳನ್ನು ಅವರು 17–ಎ ಎಂದರೆ ಮತದಾರರ ರಿಜಿಸ್ಟರ್‌ನ ನಮೂನೆಯಲ್ಲಿ ನಮೂದು ಮಾಡುವ ಕ್ರಮಾನುಗತಿಯಲ್ಲಿ ಸೆರೆಹಿಡಿದಿರುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಎಚ್ಚರಿಕೆ ವಹಿಸತಕ್ಕದ್ದು. ಮತದಾರರು 17–ಎ ನಮೂನೆಯಲ್ಲಿ ನಮೂದು ಮಾಡಿದ ಕೂಡಲೇ ಅವರ ಭಾವಚಿತ್ರಗಳನ್ನು ತೆಗೆಯತಕ್ಕದ್ದು.

8.1.11. ಮತದಾನ ಕೇಂದ್ರ ಮತ್ತು ಅದರ ಸುತ್ತಮುತ್ತಲೂ ನಡೆಯುವ ಸಂದಿಗ್ಧ ವಿಷಮ ಸನ್ನಿವೇಷಗಳನ್ನು ಅಂಥ ಮತದಾನ ಕೇಂದ್ರಗಳಲ್ಲಿ ವಿಡಿಯೋ/ ಡಿಜಿಟಲ್ ಕ್ಯಾಮರಾದಲ್ಲಿಯೂ ಕೂಡ ಸೆರೆಹಿಡಿಯತಕ್ಕದ್ದು. ಉದಾಹರಣೆಗೆ,

- ಅಣಕು ಮತದಾನ ಮತ್ತು ಮತದಾನ ಪ್ರಾರಂಭಕ್ಕೂ ಮೊದಲು ಇವಿಎಂ ಸೀಲ್ ಮಾಡುವುದು.
- ಮತದಾನ ಘಟಕದ ಸುಸ್ಥಿತಿ
- ಪೋಲಿಂಗ್ ಏಜೆಂಟರ ಹಾಜರಿ
- ಮತದಾನಕ್ಕೆ ನಿಗದಿಪಡಿಸಿದ ಸಮಯವು ಮುಕ್ತಾಯಗೊಳ್ಳುವ ಹಂತದಲ್ಲಿ ಹೊರಗಡೆ ಕಾಯುತ್ತಿರುವ ಮತದಾರರು ಮತ್ತು ಸರದಿ ಸಾಲಿನಲ್ಲಿರುವ ಕೊನೆಯ ಮತದಾರ
- ವಲಯಾಧಿಕಾರಿಗಳು, ವೀಕ್ಷಕರು ಮತ್ತು ಇತರೆ ಚುನಾವಣಾ ಕಾರ್ಯನಿರ್ವಾಹಕರು, ಮೊದಲಾದವರ ಭೇಟಿ.

8.1.12. ಜಿಲ್ಲಾ ಚುನಾವಣಾ ಅಧಿಕಾರಿಗಳು ನಿರ್ದಿಷ್ಟಪಡಿಸಿದ ಮತದಾನ ಕೇಂದ್ರವನ್ನು ಸೆರೆಹಿಡಿಯಲು ಯುಕ್ತ ಸ್ವೀಕೃತಿಯ ಮೇರೆಗೆ ಆ ಉದ್ದೇಶಕ್ಕಾಗಿ ಆಯ್ಕೆ ಮಾಡಿ ತರಬೇತಿ ನೀಡಿರುವ ಅಧಿಕಾರಿಗಳಿಗೆ ಡಿಜಿಟಲ್ ಕ್ಯಾಮರಾಗಳನ್ನು ನೀಡುವುದು. ಆ ಅಧಿಕಾರಿಗಳು ಮತದಾನದ ಅವಧಿಯಲ್ಲಿ ಮೇಲೆ ಸೂಚಿಸಲಾದಂತೆ ಮತದಾರರ ಭಾವಚಿತ್ರಗಳನ್ನು ಸೆರೆಹಿಡಿಯುವುದು ಮತ್ತು ಮತದಾನದ ಕೊನೆಯಲ್ಲಿ "ನಾನು ______ ಮತದಾನ ಕೇಂದ್ರ ಸಂಖ್ಯೆ ______ ದಿನಾಂಕದಂದು ಮತ್ತು ಕ್ಯಾಮರದಲ್ಲಿರುವ ಒಟ್ಟು ಭಾವಚಿತ್ರಗಳ ಸಂಖ್ಯೆ ______ ಮತದಾನ ಮಾಡಿರುವ ಎಲ್ಲ ಮತದಾರರ ಭಾವಚಿತ್ರಗಳನ್ನು ಸೆರೆಹಿಡಿದಿರುತ್ತೇನೆಂದು" ಪ್ರಮಾಣಪತ್ರವನ್ನು ನೀಡತಕ್ಕದ್ದು.

8.1.13. ಮತದಾನ ಪ್ರಕ್ರಿಯೆ ಪೂರ್ಣಗೊಂಡ ತರುವಾಯ ಪೋಟೊಗ್ರಫಿ ಕಾರ್ಯನಿರ್ವಹಿಸದ್ದ ಅಧಿಕಾರಿಯು ಸಂಗ್ರಹಣ ಕೇಂದ್ರದಲ್ಲಿ ಆ ಉದ್ದೇಶಕ್ಕಾಗಿ ತೆರೆದಿರುವ ಒಂದು ಪ್ರತ್ಯೇಕ ಕೌಂಟರ್‌ನಲ್ಲಿ ಮೇಲ್ಕಂಡ ಪ್ರಮಾಣಪತ್ರದೊಂದಿಗೆ ಕ್ಯಾಮರಾವನ್ನು ಇಡತಕ್ಕದ್ದು. ಈ ಅಧಿಕಾರಿಗಳಿಗೆ ಮತದಾನ ಕೇಂದ್ರದೊಳಗೆ ಪೋಟೊಗ್ರಫಿಯನ್ನು ಮಾಡಲು ಅವರಿಗೆ ಸಾಧ್ಯವಾಗುವಂತೆ ಸೂಕ್ತ ಕರ್ತವ್ಯ ನಿರತ ಪಾಸುಗಳನ್ನು ನೀಡುವುದು. ಅಂಥ ಕ್ಯಾಮರಾಗಳನ್ನು ಸ್ವೀಕರಿಸಿದ ಮೇಲೆ ಜಿಲ್ಲಾ ಚುನಾವಣಾ ಅಧಿಕಾರಿಯು ಪೋಟೊಗ್ರಾಫ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅವುಗಳನ್ನು ತಾಳೆ ನೋಡುವ ಏರ್ಪಾಡುಗಳನ್ನು ಮಾಡತಕ್ಕದ್ದು. ರಿಟರ್ನಿಂಗ್ ಅಧಿಕಾರಿಗಳು ಮತ್ತು ವೀಕ್ಷಕರು ಮರುಮತದಾನಕ್ಕಾಗಿ ಶಿಫಾರಸ್ಸುಗಳನ್ನು ಮಾಡುವಾಗ ಫೋಟೊ ಹೊಂದಾಣಿಕೆಯ ಫಲಿತಾಂಶಗಳನ್ನು ಬಳಸಿಕೊಳ್ಳುವರು. ಎಲ್ಲ ಮತದಾನ ಕೇಂದ್ರಗಳಿಗೆ ಸಂಬಂಧಿಸಿದಂತೆ ಡೌನ್‌ಲೋಡ್ ಮಾಡಲಾದ ಡೇಟಾವನ್ನು ನಂತರದ ಬಳಕೆಗಾಗಿ ಸಿಡಿ ಗಳಲ್ಲಿ ಡಿಇಓ ಗಳು ತಮ್ಮ ಬಳಿ ಇಟ್ಟುಕೊಳ್ಳುವರು. ಈ ಸಂಬಂಧ ಮುಖ್ಯ ಚುನಾವಣಾ ಅಧಿಕಾರಿಯು ಹೊರಡಿಸಿದ ಸೂಚನೆಗಳಿಗನುಸಾರವಾಗಿ ತರುವಾಯದ ಹಂತಗಳಲ್ಲಿ ಅಥವಾ ಚುನಾವಣೆಗಳಲ್ಲಿನ ಉಪಯೋಗಕ್ಕಾಗಿ ಪೋಟೊಗ್ರಾಫ್‌ಗಳನ್ನು ಮತ್ತು ಅವುಗಳ ಹೋಲಿಕೆಯನ್ನು ಡೌನ್‌ಲೋಡ್ ಮಾಡಿಕೊಂಡ ತರುವಾಯ ಕ್ಯಾಮರಾಗಳನ್ನು ಕ್ಲಿಯರ್ ಮಾಡುವುದು.

8.1.14. ಮತದಾನ ಕೇಂದ್ರಗಳೊಳಗೆ ಡಿಜಿಟಲ್ ಪೋಟೊಗ್ರಫಿ ವಿಭಾಗದಲ್ಲಿ ಕರ್ತವ್ಯ ನಿರತರಾಗುವ ಸಿಬ್ಬಂದಿ ವರ್ಗಕ್ಕೆ ತರಬೇತಿಯನ್ನು ಮುಖ್ಯ ಚುನಾವಣಾ ಅಧಿಕಾರಿಯು ಏರ್ಪಡಿಸತಕ್ಕದ್ದು. ಮುಖ್ಯ ಚುನಾವಣಾ ಅಧಿಕಾರಿ/ ಜಿಲ್ಲಾ ಚುನಾವಣಾ ಅಧಿಕಾರಿಗಳು ದೂರವಿರುವ ಪ್ರದೇಶಗಳಲ್ಲಿ ಕ್ಯಾಮರಾಗಳ ಕಾರ್ಯಾಚರಣೆಗಾಗಿ ಸಾಕಷ್ಟು ಬ್ಯಾಟರಿಗಳು ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳುವುದು. ಎಲ್ಲ 2ನೇ ಮತಗಟ್ಟೆ ಅಧಿಕಾರಿಗಳು, ಎಲ್ಲ ಪ್ರಿಸೈಡಿಂಗ್ ಅಧಿಕಾರಿಗಳು,

ಎಲ್ಲ ಎಆರ್ಒ ಗಳು/ ಆರ್ಒ ಗಳು/ ಡಿಇಒ ಗಳು/ ವೀಕ್ಷಕರು/ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳಿಗೆ ಈ ಏರ್ಪಾಡುಗಳ ಬಗ್ಗೆ ತಿಳಿಯಪಡಿಸತಕ್ಕದ್ದು.

8.1.15. ಆಯೋಗದ ಆದೇಶಗಳಿಗೆ ಅನುಸಾರವಾಗಿ ತಯಾರಿಸಿದ ಪ್ರತಿಯೊಂದು ವಿಡಿಯೋ ಕ್ಯಾಸೆಟ್ ಅನ್ನು ಸಂಬಂಧಪಟ್ಟ ಚುನಾವಣಾ ದಾಖಲೆಯ ಭಾಗವಾಗಿ ಮತ್ತು ಆಯೋಗದ ಲಿಖಿತ ಪೂರ್ವಾನುಮೋದನೆಯೊಂದಿಗೆ ಮತ್ತು ಚುನಾವಣೆಯ ಇತರೆ ದಾಖಲೆಗಳ ಸಂದರ್ಭಗಳಲ್ಲಾದರೆ, ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅವುಗಳನ್ನು ತೆಗೆದುಹಾಕುವವರೆಗೂ ಅವುಗಳನ್ನು ಸುರಕ್ಷಿತವಾಗಿಡುವ ಸಂಬಂಧ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಅವುಗಳನ್ನು ದಾಸ್ತಾನು ಮಾಡತಕ್ಕದ್ದು.

8.1.16. ಅಂತಹ ಎಲ್ಲ ವಿಡಿಯೋ ಕ್ಯಾಸೆಟ್‌ಗಳನ್ನು ಇತರೆ ಎಲ್ಲಾ ಚುನಾವಣಾ ಸಂಬಂಧಿ ದಾಖಲೆಗಳಿಗೆ ಸಂಬಂಧಪಡುವಂತೆ ಸಂಬಂಧಪಟ್ಟ ಜಿಲ್ಲಾ ಚುನಾವಣಾ ಅಧಿಕಾರಿಯ ಅಭಿರಕ್ಷೆಯಲ್ಲಿಡತಕ್ಕದ್ದು.

8.1.17. ಪ್ರತಿಯೊಂದು ವಿಡಿಯೋ ಟೇಪ್‌ನ್ನು ಈ ಮುಂದಿನ ರಾಜ್ಯ/ ಜಿಲ್ಲೆ/ ಎಸಿ/ ದಾಖಲು ಮಾಡಿದ ದಿನಾಂಕ/ ವಿಡಿಯೋಗ್ರಾಫ್ ಮಾಡಿದ ಘಟನೆಯ ಸಾರಾಂಶದ ಪ್ರಮಾಣಿತ ಏಕರೂಪದ ಕೋಡ್ ಸಂಖ್ಯೆಯಿಂದ ಸೂಚಿಸತಕ್ಕದ್ದು:

8.1.18. ಕ್ಯಾಸೆಟ್‌ಗಳು ಒಡೆದು ಹೋಗದಂತೆ ಅವುಗಳಿಗೆ ಎಚ್ಚರಿಕೆಯಿಂದ ಬೀಗ ಮುದ್ರೆಹಾಕಿ ಇಡುವುದು ಮತ್ತು ಹೀಗೆ ಮಾಡುವುದರಿಂದ, ಕ್ಯಾಸೆಟ್‌ನ ಒಳವಿವರಗಳನ್ನು ಮತ್ತೊಂದು ಕ್ಯಾಸೆಟ್‌ನಲ್ಲಿ ನಕಲು ಮಾಡುವುದು ಅಸಾಧ್ಯವಾದರೂ, ಅದರ ಒಳವಿವರಗಳು ಆಕಸ್ಮಿಕವಾಗಿ ಅಳಿಸಿ ಹೋಗುವುದು, ಅವುಗಳ ಸಂಕಲನ ಕಾರ್ಯಕೈಗೊಳ್ಳುವುದು, ದುರುಪಯೋಗಪಡಿಸಿಕೊಳ್ಳುವುದು, ಮೊದಲಾದವುಗಳನ್ನು ತಡೆಗಟ್ಟುವ ದೃಷ್ಟಿಯಿಂದ ದಾಸ್ತಾನು ಮಾಡಲು ಕಳುಹಿಸುವ ಮೊದಲು ಕ್ಯಾಸೆಟ್‌ನ್ನು ಟೇಪ್‌ನಿಂದ ಮುಚ್ಚತಕ್ಕದ್ದು.

8.1.19. ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ 76ನೇ ಪ್ರಕರಣವನ್ನು ಓದಲಾಗಿ ನಿಯಮ 93(2)ಕ್ಕೆ ಅನುಸಾರವಾಗಿ ಆಯೋಗವು, ಈ ಮುಂದಿನ ನಿರ್ದೇಶನಗಳನ್ನು ನೀಡಿದೆ.

- ಪರಿಶೀಲನೆ–

(ಎ) ವಿಡಿಯೋ ಕ್ಯಾಸೆಟ್‌ನ ಪರಿಶೀಲಿಸಲು ಕೋರಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು ಮತ್ತು ಪರಿಶೀಲನೆಗೆ ಅಗತ್ಯವಾಗಿರುವ ಕ್ಯಾಸೆಟ್‌ಗೆ ಸಂಬಂಧಿಸಿರುವ ಪೂರ್ಣ ವಿವರಗಳನ್ನು ಒಳಗೊಂಡಿರತಕ್ಕದ್ದು,

(ಬಿ) ಕ್ಯಾಸೆಟ್‌ನ ಪರಿಶೀಲನೆಯನ್ನು, ತುರ್ತು ಪರಿಶೀಲನೆ ಅಗತ್ಯವಿರುವ ಸಂದರ್ಭದಲ್ಲಿ 50/– ರೂಪಾಯಿಗಳ ಶುಲ್ಕ ಇರತಕ್ಕದ್ದೆಂಬುದನ್ನು ಹೊರತುಪಡಿಸಿ ಒಂದು ಗಂಟೆ ಅಥವಾ ಅದರ

ಭಾಗದ ಪರಿಶೀಲನಾ ಅವಧಿಗೆ 25/– ರೂಪಾಯಿಗಳನ್ನು ಸಂದಾಯ ಮಾಡಿದ ಮೇಲೆ, ಕ್ಯಾಸೆಟ್ ಪರಿಶೀಲನೆ ಕೋರಿ ಅರ್ಜಿ ಸಲ್ಲಿಸುವ ಯಾರೇ ವ್ಯಕ್ತಿಗೆ ಅದರ ಪರಿಶೀಲನೆಗೆ ಅವಕಾಶ ಕಲ್ಪಿಸತಕ್ಕದ್ದು,

(ಸಿ) ಸಾಮಾನ್ಯ ಅರ್ಜಿ ಕುರಿತಾದ ಪರಿಶೀಲನೆಗೆ ಅರ್ಜಿ ಸಲ್ಲಿಸಿದ ದಿನಾಂಕದ ಮುಂಬರುವ ದಿನದಂದು ಅಥವಾ ಮಾರನೆ ದಿನದಂದು ಅವಕಾಶಕಲ್ಪಿಸತಕ್ಕದ್ದು ಮತ್ತು ತುರ್ತು ಪರಿಶೀಲನೆ ಅರ್ಜಿ ಸಂಬಂಧ ಅದೇ ದಿನ ಅವಕಾಶ ಕಲ್ಪಿಸತಕ್ಕದ್ದು.

- ಪ್ರಮಾಣಿತ ಪ್ರತಿ–

(ಎ) ವಿಡಿಯೋ ಕ್ಯಾಸೆಟ್‌ನ ಪ್ರಮಾಣಿತ ಪ್ರಿಂಟನ್ನು 25/– ರೂಪಾಯಿಗಳ ಅರ್ಜಿ ಶುಲ್ಕವನ್ನು ಹಾಗೂ ನಕಲು ಮಾಡುವುದಕ್ಕೆ ಸ್ಥಳೀಯವಾಗಿ ಅನ್ವಯವಾಗಬಹುದಾದಂಥ ವಾಸ್ತವಿಕ ವೆಚ್ಚವನ್ನು ಸಂದಾಯ ಮಾಡಿದ ಮೇಲೆ ಅದನ್ನು ಕೋರಿ ಅರ್ಜಿ ಸಲ್ಲಿಸಿರುವ ಯಾರೇ ವ್ಯಕ್ತಿಗೆ ನೀಡತಕ್ಕದ್ದು. ಅರ್ಜಿಯು ಪರಿಶೀಲನೆಗಾಗಿ ಅಥವಾ ಪ್ರಮಾಣಿತ ಪ್ರತಿಗಳು– (ಪ್ರಿಂಟ್‌ಗಳು) ನ್ನು ಒದಗಿಸುವ ಅರ್ಜಿದಾರನ ಹಕ್ಕನ್ನು ಸುಸ್ಥಾಪಿಸುವಂತಿರಬೇಕು ಮತ್ತು ಆ ಉದ್ದೇಶಕ್ಕಾಗಿ ಅರ್ಜಿದಾರನು ವಿಡಿಯೋ ಕ್ಯಾಸೆಟ್‌ನಲ್ಲಿ ನೇರ ಮತ್ತು ವಾಸ್ತವ ಹಿತಾಸಕ್ತಿಯನ್ನು ಹೊಂದಿರುವುದನ್ನು ಮತ್ತು ಅಂಥ ಹಿತಾಸಕ್ತಿಯ ಸ್ವರೂಪವನ್ನು ಸ್ಪಷ್ಟವಾಗಿ ಬಹಿರಂಗಪಡಿಸತಕ್ಕದ್ದು.

(ಬಿ) ಅಧಿಕೃತ ಉದ್ದೇಶಗಳಿಗಾಗಿ ಕ್ಯಾಸೆಟ್‌ನ್ನು ಪರಿಶೀಲನೆ ಮಾಡುವುದು ಅಥವಾ ಪ್ರಮಾಣಿತ ಪ್ರತಿ (ಪ್ರಿಂಟ್) ಅಗತ್ಯವಿರುವಾಗ ಅದಕ್ಕೆ ಯಾವುದೇ ಶುಲ್ಕವನ್ನು ವಿಧಿಸುವಂತಿಲ್ಲ. ಕ್ಯಾಸೆಟ್‌ನ ಯಾವುದೇ ಪೂಟೇಜನ್ನು ತೆಗದುಹಾಕುವುದನ್ನು ಅಥವಾ ಕ್ಯಾಸೆಟ್‌ಗೆ ಹಾನಿಮಾಡುವುದನ್ನು ಅಥವಾ ವಿರೂಪಗೊಳಿಸುವುದನ್ನು ತಡೆಗಟ್ಟಲು ಸಿಬ್ಬಂದಿಯ ಪರಿಣಾಮಕಾರಿ ಉಸ್ತುವಾರಿಯನ್ನು ಖಚಿತಪಡಿಸತಕ್ಕದ್ದು ಮತ್ತು ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳಿಗೆ ಏಕಕಾಲದಲ್ಲಿ ಪರಿಶೀಲನೆಗೆ ಅವಕಾಶ ನೀಡತಕ್ಕದ್ದಲ್ಲ.

8.1.20. ವಿಡಿಯೋ ಕ್ಯಾಸೆಟ್‌ಗಳನ್ನು ಜಿಲ್ಲಾ ಚುನಾವಣಾಧಿಕಾರಿ ಅಥವಾ ಸಂದರ್ಭಾನುಸಾರ ಮುಖ್ಯ ಚುನಾವಣಾಧಿಕಾರಿಯ ಕಚೇರಿಯಲ್ಲಿ ಪರಿಶೀಲನೆಗೆ ಲಭ್ಯವಾಗುವಂತೆ ಮಾಡುವುದು;

8.1.21. ಕ್ಯಾಸೆಟ್‌ಗಳ ಒಳವಿವರಗಳ ಅಧಿಕೃತತೆ ಮತ್ತು ನಿಖರತೆಗಾಗಿ ಯಾವುದೇ ಸನ್ನಿವೇಶದಲ್ಲೂ ಯಾವುದೇ ಖಾತರಿಯನ್ನು ನೀಡಲಾಗುವುದಿಲ್ಲ ಮತ್ತು ಅವನ್ನು 'ಹೇಗಿವೆಯೋ ಹಾಗೆ' ಆಧಾರದ ಮೇಲೆ ಲಭ್ಯವಾಗುವಂತೆ ಮಾಡುವುದು.

# 9. ಇವಿಎಂ ಮತ್ತು ವಿವಿಪ್ಯಾಟ್‌ನ ಪರಿಚಯ

## 9.1. ಪ್ರಸ್ತಾವನೆ

9.1.1. ವಿದ್ಯುನ್ಮಾನ ಮತಯಂತ್ರವು (ಇವಿಎಂ), ಮತಪೆಟ್ಟಿಗೆಗೆ ಪರ್ಯಾಯವಾಗಿದ್ದು, ಚುನಾವಣಾ ಪ್ರಕ್ರಿಯೆಯಲ್ಲಿ ಮೂಲಾಧಾರವಾಗಿದೆ. ಚುನಾವಣಾ ಆಯೋಗವು 1977ರಲ್ಲಿ ಮೊದಲ ಬಾರಿಗೆ ಮತಯಂತ್ರದ ಬಗ್ಗೆ ಆಲೋಚಿಸಿ ಹೈದರಾಬಾದ್‌ನ ಭಾರತ ವಿದ್ಯುನ್ಮಾನ ನಿಗಮ ನಿಯಮಿತಕ್ಕೆ (ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ–ಇಸಿಐಎಲ್) ಇದರ ವಿನ್ಯಾಸ ಮತ್ತು ಅಭಿವೃದ್ಧಿಯ ಜವಾಬ್ದಾರಿಯನ್ನು ವಹಿಸಿತು. 1979ರಲ್ಲಿ ಇದರ ಮೊದಲ ಮಾದರಿಯನ್ನು ಅಭಿವೃದ್ಧಿಗೊಳಿಸಿ, 6ನೇ ಆಗಸ್ಟ್, 1980ರಲ್ಲಿ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಮುಂದೆ ಇದನ್ನು ಪ್ರದರ್ಶಿಸಿತು. ಇದನ್ನು ಪರಿಚಯಿಸಲು ಒಮ್ಮತದ ತೀರ್ಮಾನಕ್ಕೆ ಬಂದ ನಂತರ, ಇವಿಎಂಗಳ ತಯಾರಿಕೆಗಾಗಿ ಇಸಿಐಎಲ್ ಮತ್ತೊಂದು ಸಾರ್ವಜನಿಕ ಉದ್ದಿಮೆಯಾದ ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ (ಬಿಇಎಲ್)ನೊಂದಿಗೆ ಕಾರ್ಯನಿರ್ವಹಿಸಲು ಜೊತೆಗೂಡಿತು.

9.1.2. ಕೇರಳದಲ್ಲಿ 1982ರ ಮೇ ನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಇವಿಎಂಗಳನ್ನು ಬಳಸಲಾಯಿತು. ಆದರೆ, ಇವುಗಳ ಬಳಕೆಯನ್ನು ನಿರ್ದಿಷ್ಟವಾಗಿ ತಿಳಿಸುವ ಕಾನೂನಿನ ಅನುಪಸ್ಥಿತಿಯಿಂದಾಗಿ ಆ ಚುನಾವಣೆಯನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿತು. ಆನಂತರ 1989ರಲ್ಲಿ, ಚುನಾವಣೆಗಳಲ್ಲಿ ಇವಿಎಂಗಳನ್ನು ಬಳಸುವುದಕ್ಕಾಗಿ ನಿಯಮ ರೂಪಿಸಲು 1951ರ ಜನತಾ ಪ್ರತಿನಿಧ್ಯ ಅಧಿನಿಯಮಕ್ಕೆ ಸಂಸತ್ತಿನಲ್ಲಿ ತಿದ್ದುಪಡಿ ಮಾಡಲಾಯಿತು (ಅಧ್ಯಾಯ–3). ಇದನ್ನು ಪರಿಚಯಿಸಲು ಸಾರ್ವತ್ರಿಕ ಒಮ್ಮತ ವ್ಯಕ್ತವಾಗಿದ್ದು 1998ನೇ ಇಸವಿಯಲ್ಲಿ ಹಾಗೂ ಇವುಗಳನ್ನು ಮಧ್ಯಪ್ರದೇಶ, ರಾಜಸ್ತಾನ ಮತ್ತು ದೆಹಲಿ ಈ ಮೂರು ರಾಜ್ಯಗಳಲ್ಲಿನ 25 ವಿಧಾನಸಭಾ ಕ್ಷೇತ್ರಗಳಲ್ಲಿ ಬಳಸಲಾಯಿತು. ಇದರ ಬಳಕೆಯನ್ನು 1999ರಲ್ಲಿ 45 ಲೋಕಸಭಾ ಕ್ಷೇತ್ರಗಳಿಗೆ ಹಾಗೂ ಆನಂತರ, ಫೆಬ್ರವರಿ 2000ದಲ್ಲಿ, ಹರಿಯಾಣ ವಿಧಾನಸಭಾ ಚುನಾವಣೆಗಳ 45 ವಿಧಾನಸಭಾ ಕ್ಷೇತ್ರಗಳಿಗೆ ಮತ್ತಷ್ಟು ವಿಸ್ತರಿಸಲಾಯಿತು. 2001ರ ಮೇ ನಲ್ಲಿ ತಮಿಳುನಾಡು, ಕೇರಳ, ಪಾಂಡಿಚೇರಿ ಹಾಗೂ ಪಶ್ಚಿಮಬಂಗಾಳ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಇವಿಎಂಗಳನ್ನು ಬಳಸಲಾಯಿತು. ಆಗಿನಿಂದ ಪ್ರತಿಯೊಂದು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಆಯೋಗವು ಇವಿಎಂಗಳನ್ನು ಬಳಸುತ್ತಿದೆ. 2004ರಲ್ಲಿ,

ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ, ದೇಶದ ಎಲ್ಲ 543 ಸಂಸದೀಯ ಮತಕ್ಷೇತ್ರಗಳಲ್ಲೂ ಇವಿಎಂಗಳನ್ನು (ಒಂದು ದಶಲಕ್ಷಕ್ಕೂ ಹೆಚ್ಚು) ಬಳಸಲಾಯಿತು.

9.1.3. ಮತ ಯಂತ್ರಗಳ ಬಳಕೆಯು ಚುನಾವಣೆಗಳನ್ನು ನಡೆಸುವ ನಿಯಮಗಳು, 1961 ರಲ್ಲಿ ತತ್ಪರಿಣಾಮದ ಬದಲಾವಣೆಗಳನ್ನು ಸಹ ಅಗತ್ಯಪಡಿಸಿದ್ದು, ಮತದಾನ ಕೇಂದ್ರಗಳಲ್ಲಿ ಮತದಾನ ಮತ್ತು ಮತಗಳ ಎಣಿಕೆ ಕಾರ್ಯವನ್ನು ನಡೆಸುವ ಸಂಬಂಧ ವಿವರವಾದ ಉಪಬಂಧಗಳನ್ನು ರೂಪಿಸಿದೆ. ದಿನಾಂಕ: 24.3.1992 ರಿಂದ ಜಾರಿಗೆ ಬರುವಂತೆ ಹೊರಡಿಸಿರುವ ಚುನಾವಣೆಗಳನ್ನು ನಡೆಸುವ (ತಿದ್ದುಪಡಿ) ನಿಯಮಗಳು, 1992 ರ ಮೂಲಕ ಸದರಿ ನಿಯಮಗಳಲ್ಲಿ ಅವಶ್ಯವಾದ ಬದಲಾವಣೆಗಳನ್ನು ಮಾಡಲಾಗಿದೆ. ಈ ತಿದ್ದುಪಡಿ ನಿಯಮಗಳ ಮೂಲಕ, 49ಎ ಇಂದ 49ಎಕ್ಸ್ ವರೆಗಿನ ನಿಯಮಗಳನ್ನು ಒಳಗೊಂಡಿರುವ ಭಾಗ–ಖಗಿ ರಲ್ಲಿರುವ ಹೊಸ ಅಧ್ಯಾಯ–II ರಲ್ಲಿ ವಿದ್ಯುನ್ಮಾನ ಮತ ಯಂತ್ರಗಳನ್ನು ಬಳಸುವ ಮತದಾನ ಕೇಂದ್ರಗಳಲ್ಲಿ ಮತದಾನ ನಡೆಸುವ ಸಂಬಂಧ ವಿವರವಾದ ಉಪಬಂಧಗಳನ್ನು ರಚಿಸಿ 49ನೇ ನಿಯಮದ ತರುವಾಯ ಸೇರ್ಪಡೆ ಮಾಡಲಾಗಿದೆ. ಅಲ್ಲದೆ, ಮತ ಯಂತ್ರ ಸಾಧನಗಳಲ್ಲಿ ದಾಖಲುಲಾಗಿರುವ ಮತಗಳ ಎಣಿಕೆ ಸಂಬಂಧ ಉಪಬಂಧಗಳನ್ನು ರಚಿಸಿ, ನಿಯಮ 66ರ ತರುವಾಯ ಒಂದು ಹೊಸ ನಿಯಮ 66ಎ ಅನ್ನು ಸೇರ್ಪಡೆ ಮಾಡಲಾಗಿದೆ. ಈ ತಿದ್ದುಪಡಿ ನಿಯಮಗಳ ಮೂಲಕ, 17ಎ, 17ಬಿ ಮತ್ತು 17ಸಿ ಹೊಸ ನಮೂನೆಗಳನ್ನು ಸಹ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ಕ್ಕೆ ಅನುಬಂಧಿಸಿ ನಮೂನೆ 17ರ ತರುವಾಯ ಸೇರ್ಪಡೆ ಮಾಡಲಾಗಿದೆ.

## 9.2. ವಿದ್ಯುನ್ಮಾನ ಮತಯಂತ್ರದ (ಇವಿಎಂ) ಪರಿಚಯ

9.2.1. ವಿದ್ಯುನ್ಮಾನ ಮತಯಂತ್ರವು ಎರಡು ಯೂನಿಟ್‌ಗಳನ್ನು ಎಂದರೆ ಕಂಟ್ರೋಲ್ ಯೂನಿಟ್ (ಸಿಯು) ಮತ್ತು ಬ್ಯಾಲೆಟಿಂಗ್ ಯೂನಿಟ್ (ಬಿಯು) ಅನ್ನು ಹೊಂದಿರುತ್ತದೆ. ಮತಯಂತ್ರವು ಕಾರ್ಯಚರಣೆಯಲ್ಲಿರುವಾಗ ಈ ಎರಡು ಯೂನಿಟ್‌ಗಳು 5 ಮೀಟರ್ ಉದ್ದದ ಕೇಬಲ್ ಮೂಲಕ, ಅದರ ಒಂದು ತುದಿಯನ್ನು ಬ್ಯಾಲೆಟಿಂಗ್ ಯೂನಿಟ್‌ಗೆ ಸದಾ ಅಳವಡಿಸಿರುವ ಹಾಗೆಪರಸ್ಪರ ಸಂಪರ್ಕವನ್ನು ಹೊಂದಿರುತ್ತದೆ. ಮತಯಂತ್ರವನ್ನು ಬಳಸುವ ಸಮಯದಲ್ಲಿ ಇನ್ನೊಂದು ತೆರೆದತುದಿಯು ಕಂಟ್ರೋಲ್ ಯೂನಿಟ್‌ಗೆ ಸೇರಿಸಿಡಲಾಗುತ್ತದೆ. ಒಂದು ಬ್ಯಾಲೆಟಿಂಗ್ ಯೂನಿಟ್‌ನಲ್ಲಿ 16 ಅಭ್ಯರ್ಥಿಗಳ (ನೋಟಾ ಸೇರಿದಂತೆ) ಪ್ಯಾನೆಲ್‌ಗಳು ಇರುತ್ತದೆ.

9.2.2. ಪ್ರಸ್ತುತ, ಇವಿಎಂಗಳಲ್ಲಿ ಎರಡು ಮಾದರಿಗಳಿವೆ. ಇವನ್ನು ಎಂ2 ಇವಿಎಂ ಮತ್ತು ಎಂ3 ಇವಿಎಂಎಂದುಕರೆಯಲಾಗುತ್ತದೆ.

9.2.3. ಎಂ2 ಇವಿಎಂ: 2006ರ ನಂತರದ ಇವಿಎಂಗಳನ್ನು ಎಂ2 ಇವಿಎಂ ಎಂದು ಕರೆಯಲಾಗುತ್ತದೆ. ಎಂ2 ಇವಿಎಂನಲ್ಲಿ 4 (ನಾಲ್ಕು) ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಗರಿಷ್ಠ 64 ಅಭ್ಯರ್ಥಿಗಳ ಪ್ಯಾನಲನ್ನು (ನೋಟಾ ಸೇರಿದಂತೆ) ಅಳವಡಿಸುವಂತೆ ಹೊಂದಿಸಬಹುದಾಗಿರುತ್ತದೆ. ಅವನ್ನು ಒಂದು ಕಂಟ್ರೋಲ್ ಯೂನಿಟ್‌ನೊಂದಿಗೆ ಬಳಸಬಹುದಾಗಿರುತ್ತದೆ.

9.2.4. ಎಂ3 ಇವಿಎಂ: 2013ರ ನಂತರದ ಇವಿಎಂಗಳನ್ನು ಎಂ3 ಇವಿಎಂ ಎಂದು ಕರೆಯಲಾಗುತ್ತದೆ. ಎಂ3 ಇವಿಎಂನಲ್ಲಿ 24 (ಇಪ್ಪತ್ತ ನಾಲ್ಕು) ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಗರಿಷ್ಠ 384 ಅಭ್ಯರ್ಥಿಗಳ ಪ್ಯಾನೆಲ್‌ಗಳನ್ನು (ನೋಟಾ ಸೇರಿದಂತೆ) ಅಳವಡಿಸುವಂತೆ ಹೊಂದಿಸಬಹುದಾಗಿರುತ್ತದೆ. ನಾಲ್ಕಕ್ಕಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸುವಾಗ 5ನೇ, 9ನೇ, 13ನೇ, 17ನೇ ಮತ್ತು 21ನೇ ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಬ್ಯಾಟರಿ ಸೇರಿಸುವುದಕ್ಕೆ ಅವಕಾಶವಿರುತ್ತದೆ. ಬ್ಯಾಲೆಟಿಂಗ್ ಯೂನಿಟ್ ಸಂಖ್ಯೆಯನ್ನು 1 ರಿಂದ 24ರವರೆಗೆ ಸೆಟ್ ಮಾಡುವುದಕ್ಕಗಿ ಅವುಗಳ ಬಲ ಮೇಲ್ಭಾಗದಲ್ಲಿ ಎರಡು ಥಂಬ್‌ವೀಲ್‌ಗಳಿರುತ್ತವೆ. ದತ್ತಾಂಶವನ್ನು ಡಿಸ್‌ಪ್ಲೇ ಪ್ಯಾನಲ್ ಪ್ರತಿಯೊಂದು ಸಾಲಿನಲ್ಲಿ 12 ಲಿಪಿಗಳನ್ನು ಎರಡು ಅಡ್ಡ ಸಾಲುಗಳಲ್ಲಿ ಪ್ರದರ್ಶಿಸುತ್ತದೆ. ಎಂ3 ಇವಿಯಂನಲ್ಲಿ ಕ್ಯಾಂಡಿಡೆಂಟ್ ಸಬ್ ಸೆಕ್ಷನ್ ಅನ್ನು ಬ್ಯಾಟರಿ ಸೆಕ್ಷನಿನ ಪ್ರತ್ಯೇಕಗೊಳಿಸಲಾಗಿರುತ್ತದೆ ಮತ್ತು ಅದು ಪ್ರತ್ಯೇಕವಾದ ಹೊರಬಾಗಿಲನ್ನು ಹೊಂದಿದ್ದು ಎಡದಿಂದ ಬಲಕ್ಕೆ ತೆರೆಯುತ್ತದೆ. ಎಂ2 ಮತ್ತು ಎಂ3 ಇವಿಯಂಗಳೆರಡರಲ್ಲೂ 2000 ಮತಗಳಷ್ಟನ್ನು ದಾಖಲಿಸಬಹುದು.

9.2.5. ಬಿಇಎಲ್, ಬೆಂಗಳೂರು ಮತ್ತು ಇಸಿಐಎಲ್, ಹೈದರಾಬಾದ್ ತಯಾರಿಸಿದ ಇವಿಎಂಗಳ ವಿನ್ಯಾಸ ಮತ್ತು ಸ್ವರೂಪಗಳು ಬಹುಮಟ್ಟಿಗೆ ಒಂದೇ ಆಗಿದೆ. ದೃಷ್ಟಿಮಾಂದ್ಯ (ಅಂಧ) ವ್ಯಕ್ತಿಗಳ ಅನುಕೂಲತೆಯ ದೃಷ್ಟಿಯಿಂದ, ಸ್ಪರ್ಧಿಸುತ್ತಿರುವ ಪ್ರತಿಅಭ್ಯರ್ಥಿಗೆ ಸಂಬಂಧಪಟ್ಟನೀಲಿ ಗುಂಡಿಯ ಬಲಭಾಗದ ಮೇಲು ಹೊದಿಕೆಯ ಬ್ಯಾಲೆಟಿಂಗ್‌ಯೂನಿಟ್ ಮೇಲೆ ಬ್ರೈಲ್ ಲಿಪಿಯಲ್ಲಿ (1 ರಿಂದ 16) ಅಂಕಿಗಳನ್ನು ಉಬ್ಬಚ್ಚು ಮಾಡಲಾಗುತ್ತದೆ.

9.2.6. ವಿದ್ಯುನ್ಮಾನ ಮತಯಂತ್ರವು 7.5 ವೋಲ್ಟ್ ಬ್ಯಾಟರಿಯಿಂದ ಕಾರ್ಯ ನಿರ್ವಹಿಸುತ್ತದೆ ಮತ್ತು ಅದನ್ನು ಯಾವುದೇ ಸ್ಥಳದಲ್ಲಿ ಮತ್ತು ಯಾವುದೇ ಪರಿಸ್ಥಿತಿಗಳಲ್ಲಿ ಬಳಸಬಹುದಾಗಿರುತ್ತದೆ. ಇದು ತಿರುಚುವಿಕೆ – ಮುಕ್ತ, ದೋಷ–ಮುಕ್ತ ಮತ್ತು ಬಳಕೆದಾರ ಸ್ನೇಹಿಯಾದುದಾಗಿದೆ. ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಪ್ರತ್ಯೇಕವಾದ ಸಾಗಣೆ ಪೆಟ್ಟಿಗೆಗಳಲ್ಲಿ ಪೂರೈಸಲಾಗುತ್ತದೆ ಮತ್ತು ಅವನ್ನು ಸುಲಭವಾಗಿ ಸಾಗಿಸಬಹುದು. ಯಂತ್ರದಲ್ಲಿ ಒಮ್ಮೆ ದಾಖಲಾದ

ಮತದಾನ ಮಾಹಿತಿಯನ್ನು ಯಂತ್ರದ ಬ್ಯಾಟರಿ ತೆಗೆದುಹಾಕಿದ ಮೇಲೂ ಸಹ ಅದರ ಸ್ಮೃತಿಕೋಶದಿಂದ ಮರಳಿ ಪಡೆಯಬಹುದಾಗಿರುತ್ತದೆ.

9.2.7. ಪೋಸ್ಟಲ್ ಬ್ಯಾಲೆಟ್, ಇವಿಎಂ ಬ್ಯಾಲೆಟ್ ಹಾಗೆಯೇ ಟೆಂಡರ್ ಮತ್ತು ಬ್ರೈಲ್ ಬ್ಯಾಲೆಟ್‌ಗಾಗಿನ ಬ್ಯಾಲೆಟ್ ಪತ್ರದ ಮೇಲಿನ ಕೊನೆಯ ಅಭ್ಯರ್ಥಿಯ ಹೆಸರು ಮತ್ತು ವಿವರಗಳನ್ನು ಪ್ಯಾನಲ್ ನಂತರ ಕೊನೆಯ ಪ್ಯಾನಲ್‌ನ ಕೆಳಗೆ ' ನನ್ ಆಫ್ ದ ಎಬವ್' (ಮೇಲಿನ ಯಾವುದೂಅಲ್ಲ) (NOTA)ಎಂದು ಬರೆದಿರುವ ಪ್ಯಾನಲ್ ಇದ್ದು, ಅದು, ಚುನಾವಣಾ ಕಣದಲ್ಲಿರುವ ಯಾರೇ ಅಭ್ಯರ್ಥಿಗೆ ಮತಚಲಾಯಿಸದಿರಲು ಇರುವ ತಮ್ಮ ಆಯ್ಕೆಯನ್ನು ಚಲಾಯಿಸಲು ಇಚ್ಛಿಸುವಂತಹ ಮತದಾರರ ಪ್ರಯೋಜನಕ್ಕಾಗಿ ಇರುತ್ತದೆ. ಈ ಪದಗಳನ್ನು ಅಭ್ಯರ್ಥಿಗಳ ಹೆಸರಗಳನ್ನು ಮುದ್ರಿಸುವುದಕ್ಕೆ ಬಳಸಲಾದ ಭಾಷೆಯಲ್ಲಿ(ಗಳಲ್ಲಿ) ಬರೆದಿರತಕ್ಕದ್ದು. ಪ್ಯಾನಲ್‌ನ ಗಾತ್ರವು ಅಭ್ಯರ್ಥಿಗಳ ಸಂದರ್ಭದಲ್ಲಿ ಇರುವ ಗಾತ್ರದಷ್ಟೇ ಇರತಕ್ಕದ್ದು.

9.2.8. ಬ್ಯಾಲೆಟಿಂಗ್ ಯೂನಿಟ್ ಮೇಲೆ ಚುನಾವಣೆಯ ವಿವರಗಳನ್ನು, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಕ್ರಮ ಸಂಖ್ಯೆಗಳು, ಹೆಸರುಗಳು, ಭಾವಚಿತ್ರ ಮತ್ತು ಅವರಿಗೆ ಹಂಚಿಕೆಯಾದ ಆಯಾಯ ಚಿಹ್ನೆಗಳ ವಿವರಗಳನ್ನು ಒಳಗೊಳ್ಳುವಂತಹ ಬ್ಯಾಲೆಟ್ ಪೇಪರ್‌ನ ಪ್ರದರ್ಶನಕ್ಕೆ ಅವಕಾಶವಿರುತ್ತದೆ. ಪ್ರತಿಯೊಬ್ಬ ಅಭ್ಯರ್ಥಿಯ ಹೆಸರಿನ ಎದುರು ಒಂದು ನೀಲಿ ಬಟನ್ ಇರುತ್ತದೆ. ಈ ನೀಲಿ ಬಟನ್ ಅನ್ನು ಒತ್ತುವ ಮೂಲಕ ಮತದಾರನು ತನ್ನ ಆಯ್ಕೆಯ ಅಭ್ಯರ್ಥಿಗೆ ಮತ ಚಲಾಯಿಸಬಹುದು. ಸದರಿ ಬಟನ್‌ನ ಜೊತೆಗೆ ಪ್ರತಿಯೊಬ್ಬ ಅಭ್ಯರ್ಥಿಗಾಗಿ ಒಂದು ದೀಪ ಸಹ ಇರುತ್ತದೆ. ಮತ ದಾಖಲಾದಾಗಲೆಲ್ಲಾ ಈ ಲ್ಯಾಂಪ್ ಕೆಂಪು ಬಣ್ಣದಲ್ಲಿ ಪ್ರಕಾಶಿಸುತ್ತದೆ. ಅದೇ ಸಮಯದಲ್ಲಿ ಒಂದು ಬೀಪ್ ಶಬ್ಧ ಸಹ ಕೇಳಿಸುತ್ತದೆ. ಒಂದು ಬ್ಯಾಲೆಟಿಂಗ್ ಯೂನಿಟ್ 16 ಬಟನ್‌ಗಳನ್ನು ಹೊಂದಿರುತ್ತದೆ. 15 ಅಭ್ಯರ್ಥಿಗಳಿದ್ದ ಸಂದರ್ಭದಲ್ಲಿ ಕಡೆಯ ಪ್ಯಾನೆಲ್ 'ನೋಟಾ'ಗಾಗಿ ಇರುತ್ತದೆ.

9.2.9. ಕಂಟ್ರೋಲ್ ಯೂನಿಟ್‌ನ ಅತ್ಯಂತ ಮೇಲ್ಭಾಗದಲ್ಲಿ ಯಂತ್ರದಲ್ಲಿ ದಾಖಲಾದಂತಹ ಮಾಹಿತಿ ಮತ್ತು ದತ್ತಾಂಶವನ್ನು ಎಂದರೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಸಂಖ್ಯೆ, ಚಲಾವಣೆಯಾದ ಒಟ್ಟು ಮತಗಳ ಸಂಖ್ಯೆ, ಪ್ರತಿ ಅಭ್ಯರ್ಥಿಗಳಿಗೆ ಚಲಾವಣೆಯಾದ ಮತಗಳ ಸಂಖ್ಯೆ ಇತ್ಯಾದಿಯನ್ನು ಪ್ರದರ್ಶಿಸುವುದಕ್ಕಾಗಿ ಅವಕಾಶವಿರುತ್ತದೆ. ಕಂಟ್ರೋಲ್ ಯೂನಿಟ್‌ನ ಈ ಭಾಗವನ್ನು ಸುಲಭವಾಗಿ 'ಡಿಸ್‌ಪ್ಲೇ ಸೆಕ್ಷನ್' ಎಂದು ಕರೆಯಲಾಗುತ್ತದೆ. ಡಿಸ್‌ಪ್ಲೇ ಸೆಕ್ಷನ್ ಕೆಳಭಾಗದಲ್ಲಿ ಬ್ಯಾಟರಿ ಅಳವಡಿಸವುದಕ್ಕಾಗಿ ಒಂದು ಅಂಕಣವಿದ್ದು, ಅದು ಯಂತ್ರವನ್ನು ಚಾಲನೆ ಮಾಡುತ್ತದೆ. ಈ ಅಂಕಣದ ಬಲಭಾಗದ ಮೇಲೆ, ಮತ್ತೊಂದು ಅಂಕಣವಿದ್ದು ಅದರೊಳಗೆ, ನಿರ್ದಿಷ್ಟ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಯಂತ್ರದಲ್ಲಿ ಊಡಿಸುವುದಕ್ಕಾಗಿ

ಒಂದು ಬಟನ್ ಇರುತ್ತದೆ. ಈ ಬಟನ್ ಅನ್ನು 'Cand.Set' ಎಂದು ಕರೆಯಲಾಗುತ್ತದೆ ಮತ್ತು ಈ ಎರಡು ಅಂಕಣಗಳನ್ನು ಒಳಗೊಳ್ಳುವಂತಹ ಕಂಟ್ರೋಲ್ ಯೂನಿಟ್‌ನ ಒಟ್ಟು ಭಾಗವನ್ನು 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್' ಎಂದುಕರೆಯಲಾಗುತ್ತದೆ. ಕ್ಯಾಂಡಿಡೇಟ್ ಸೆಟ್ ಸೆಕ್ಷನ್‌ನ ಕೆಳಗೆ 'ರಿಸಲ್ಟ್ ಸೆಕ್ಷನ್' ಇರುತ್ತದೆ. ಈ ಭಾಗವು (i) ಮತದಾನ ಮುಗಿಸುವುದಕ್ಕೆ ಬಳಸಲಾಗುವ 'ಕ್ಲೋಸ್' ಬಟನ್ ಅನ್ನು ಎಡಭಾಗದಲ್ಲಿ, (ii) 'ರಿಸಲ್ಟ್' ಮತ್ತು 'ಪ್ರಿಂಟ್' ಎರಡು ಬಟನ್‌ಗಳನ್ನು ಮಧ್ಯದಲ್ಲಿ ಹೊಂದಿರುತ್ತದೆ. ರಿಸಲ್ಟ್ ಬಟನ್ ಫಲಿತಾಂಶವನ್ನು ಪಡೆಯುವುದಕ್ಕಾಗಿ ಇರುತ್ತದೆ. ಪ್ರಿಂಟ್ ಬಟನ್ ಸವಿವರವಾದ ಫಲಿತಾಂಶವನ್ನು ಪಡೆಯುವುದಕ್ಕಾಗಿ ಇರುತ್ತದೆ. (ಈ ಉದ್ದೇಶಕ್ಕಾಗಿ ಕಂಟ್ರೋಲ್ ಯೂನಿಟ್‌ಗೆ ಒಂದು ವಿಶೇಷ ಗ್ಯಾಡ್ಜೆಟ್ ಅಳವಡಿಸಬೇಕಿರುತ್ತದೆ) ಮತ್ತು (iii) ಯಂತ್ರದಲ್ಲಿ ದಾಖಲಾದ ದತ್ತಾಂಶವು ಇನ್ನು ಮುಂದೆ ಅಗತ್ಯವಿಲ್ಲದಾಗ ಆ ದತ್ತಾಂಶವನ್ನು ಅಳಿಸುವುದಕ್ಕಾಗಿ ಬಲಭಾಗದ ಮೇಲೆ 'ಕ್ಲೀಯರ್' ಬಟನ್ ಇರುತ್ತದೆ. ಕಂಟ್ರೋಲ್ ಯೂನಿಟ್‌ನ ಕೆಳಭಾಗದಲ್ಲಿ ಎರಡು ಬಟನ್‌ಗಳಿದ್ದು, ಒಂದಕ್ಕೆ 'ಬ್ಯಾಲೆಟ್' ಎಂದು ಮತ್ತು ಎರಡನೆಯದಕ್ಕೆ 'ಟೋಟಲ್' ಎಂದು ಗುರುತು ಮಾಡಲಾಗಿರುತ್ತದೆ. ಬ್ಯಾಲೆಟ್ ಬಟನ್ ಅನ್ನು ಒತ್ತಿದಾಗ ಮತ ದಾಖಲಿಸಿಕೊಳ್ಳುವುದಕ್ಕೆ ಬ್ಯಾಲೆಟಿಂಗ್ ಯೂನಿಟ್ ಸಿದ್ಧವಾಗುತ್ತದೆ ಮತ್ತು ಟೋಟಲ್ ಬಟನ್ ಒತ್ತಿದಾಗ ಆ ಘಟ್ಟದವರೆಗೆ ದಾಖಲಾದ ಮತಗಳ ಒಟ್ಟು ಸಂಖ್ಯೆಯನ್ನು (ಆದರೆ ಅಭ್ಯರ್ಥಿವಾರು ವಿಂಗಡಣೆ ಇಲ್ಲದಂತೆ) ದಾಖಲಿಸುತ್ತದೆ. ಈ ಭಾಗವನ್ನು ಕಂಟ್ರೋಲ್ ಯೂನಿಟ್‌ನ 'ಬ್ಯಾಲೆಟ್ ಸೆಕ್ಷನ್' ಎಂಬುದಾಗಿ ಕರೆಯಲಾಗುತ್ತದೆ.

## 9.3. ವಿವಿಪ್ಯಾಟ್‌ನ ಪರಿಚಯ

9.3.1 ಚುನಾವಣೆಗಳನ್ನು ನಡೆಸುವ (ತಿದ್ದುಪಡಿ) ನಿಯಮಗಳು, 2013ರ ನಿಯಮ 49ಎ ಪರಂತುಕದ ಪ್ರಕಾರ, ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳು ಅಥವಾ ಅದರ ಭಾಗಗಳಲ್ಲಿ ಮತದಾನದ ಕಾಗದ ದಾರ್ಶಕವನ್ನು ಮುದ್ರಿಸುವುದಕ್ಕಾಗಿ ಚುನಾವಣಾ ಆಯೋಗವು ಅನುಮೋದಿಸಿದಂತ ವಿನ್ಯಾಸದ ಡ್ರಾಪ್ ಬಾಕ್ಸ್ ಇರುವ ಪ್ರಿಂಟರ್ ಅನ್ನು ಸಹ ಮತಯಂತ್ರಕ್ಕೆ ಅಳವಡಿಸಬಹುದು. ಇದನ್ನು ಮತದಾರನು ಪರಿಶೀಲಿಸಿಕೊಳ್ಳಬಹುದಾದ ಕಾಗದದ ತಾಳೆದರ್ಶಕ (ವಿವಿಪ್ಯಾಟ್) ಎಂದು ಉಲ್ಲೇಖಿಸಲಾಗಿದೆ. ವಿವಿಪ್ಯಾಟ್ ವಿದ್ಯುನ್ಮಾನ ಮತಯಂತ್ರಗಳೊಂದಿಗೆ (ಇವಿಎಂಗಳು) ಜೋಡಿಸುವ ಒಂದು ಸ್ವತಂತ್ರ ಪ್ರಿಂಟರ್ ಆಗಿದ್ದು, ಮತದಾರನು ತಾನು ಇಚ್ಛಿಸಿರುವಂತೆ ತನ್ನ ಮತ ಚಲಾವಣೆಯಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಲು ಇದು ಅನುವು ಮಾಡಿಕೊಡುತ್ತದೆ. ಆಯೋಗವು ಎಲ್ಲಾ ಚುನಾವಣೆಗಳಿಗೆ

ಸಂಬಂಧಿಸಿದಂತೆ ಪ್ರತಿಯೊಂದು ಮತಗಟ್ಟೆಯಲ್ಲಿ ವಿವಿಪ್ಯಾಟ್ ಅನ್ನು ಬಳಸಲು ನಿರ್ದೇಶಿಸಿದೆ. ಪ್ರಿಸೈಡಿಂಗ್ ಅಧಿಕಾರಿಯು ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಬ್ಯಾಲೆಟ್ ಯೂನಿಟ್‌ನೊಂದಿಗೆ ವಿವಿಪ್ಯಾಟ್ ಇಟ್ಟಿರುತ್ತಾರೆ. ಚುನಾವಣಾ ಆಯೋಗವು ನಿರ್ದೇಶಿಸಿದಂಥ ರೀತಿಯಲ್ಲಿ ವಿವಿಪ್ಯಾಟ್ ಅನ್ನು ಇವಿಎಂಗೆ ಸಂಪರ್ಕ ಕಲ್ಪಿಸತಕ್ಕದ್ದು. ಈ ಉದ್ದೇಶಕ್ಕಾಗಿ ವೋಟಿಂಗ್ ಕಂಪಾರ್ಟ್‌ಮೆಂಟನ್ನು ಪ್ರಮಾಣಕ್ಕನುಗುಣವಾಗಿ ಹೆಚ್ಚಿಸಿಕೊಳ್ಳಬಹುದು. ವಿವಿಪ್ಯಾಟ್‌ನಲ್ಲಿ, ಬ್ಯಾಲೆಟ್ ಯೂನಿಟ್‌ನ ಮೇಲಿರುವ ಬ್ಯಾಲೆಟಿಂಗ್ ಬಟನ್ ಒತ್ತಿದ ಮೇಲೆ, ಮತದಾರನು, ತಾನು ಮತಚಲಾಯಿಸಿರುವ ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನು ಹೊಂದಿರುವ ಮುದ್ರಿತ ಪೇಪರ್ ಸ್ಲಿಪ್ ಅನ್ನು ಏಳು ಸೆಕೆಂಡ್‌ಗಳವರೆಗೆ ವೀಕ್ಷಿಸಲು ಸಾಧ್ಯವಾಗುತ್ತದೆ. ಅಂಥ ಮುದ್ರಿತ ಪೇಪರ್ ಸ್ಲಿಪ್ ಕತ್ತರಿಸಿ ಬೀಳುವ ಮೊದಲು ಏಳು ಸೆಕೆಂಡುಗಳವರೆಗೆ ಕಾಣಿಸಿಕೊಂಡು ನಂತರ ವಿವಿಪ್ಯಾಟ್‌ಗೆ ಸಂಪರ್ಕ ಕಲ್ಪಿಸಿರುವ ಡ್ರಾಪ್‌ಬಾಕ್ಸ್‌ನಲ್ಲಿ ಬೀಳುತ್ತದೆ.

9.3.2. ವಿವಿಪ್ಯಾಟ್ 22.5–ವೋಲ್ಟ್ ಬ್ಯಾಟರಿಯ ಸಾಮರ್ಥ್ಯದಿಂದ ಕಾರ್ಯನಿರ್ವಹಿಸಲಿದ್ದು, ಈಗ ಇದನ್ನು ಪ್ರತಿಯೊಂದು ಮತಗಟ್ಟೆಯಲ್ಲಿ ಎಲ್ಲಾ ಚುನಾವಣೆಗಳಲ್ಲಿ ಬಳಸಲಾಗುತ್ತಿದೆ. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಮುದ್ರಣಕ್ಕಾಗಿ ವಿವಿಪ್ಯಾಟ್‌ಗಳಲ್ಲಿ ಬಳಸಲಾದ ಥರ್ಮಲ್ ಪೇಪರ್‌ನಿಂದ ಸುಮಾರು 1,500 ಪೇಪರ್ ಸ್ಲಿಪ್‌ಗಳನ್ನು ಮಾತ್ರ ಮುದ್ರಿಸಬಹುದಾಗಿದೆ. ಅದರಲ್ಲಿ ಸರಿಸುಮಾರು 100 ಪೇಪರ್ ಸ್ಲಿಪ್‌ಗಳನ್ನು ವಿವಿಪ್ಯಾಟ್‌ಗಳ ಸಿದ್ಧಪಡಿಸುವ ಅವಧಿಯಲ್ಲಿ ಮತ್ತು ಮತದಾನ ದಿನದಂದು ಮತಗಟ್ಟೆಯಲ್ಲಿ ಅಣಕು ಮತದಾನದ ಅವಧಿಯಲ್ಲಿ ಮುದ್ರಣ ಮಾಡಲಾಗಿರುತ್ತದೆ. ಆದ್ದರಿಂದ, ಯಾವುದೇ ಮತಗಟ್ಟೆಗೆ ನಿಯೋಜಿಸಲಾದ ಮತದಾರರ ಗರಿಷ್ಠ ಸಂಖ್ಯೆಯು 1,400 ಆಗಿರುತ್ತದೆ. ಎಂ2 ವಿವಿಪ್ಯಾಟ್ ಇದ್ದ ಸಂದರ್ಭದಲ್ಲಿ ಕಂಟ್ರೋಲ್ ಯೂನಿಟ್ ಮತ್ತು ವಿಎಸ್‌ಡಿಯು ಪ್ರಿಸೈಡಿಂಗ್ ಅಧಿಕಾರಿ/ ಪೋಲಿಂಗ್ ಅಧಿಕಾರಿಯ ಬಳಿ ಇರುತ್ತದೆ ಮತ್ತು ಬ್ಯಾಲೆಟ್ ಯೂನಿಟ್ ಮತ್ತು ವಿವಿಪ್ಯಾಟ್ ಅನ್ನು ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಇಟ್ಟಿರುತ್ತಾರೆ. ಎಂ3 ವಿವಿಪ್ಯಾಟ್ ಇರುವಲ್ಲಿ ಯಾವುದೇ ವಿಎಸ್‌ಡಿಯು ಇರುವುದಿಲ್ಲ.

# 10. ಮತದಾನಕ್ಕಾಗಿ ಸಿದ್ಧತೆ

## ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಕಾರ್ಯಾಚರಣೆಗೊಳಿಸುವುದು

### 10.1. ಪ್ರಾರಂಭಿಕ

10.1.1. ಚುನಾವಣೆಗಳನ್ನು ನಡೆಸುವ (ತಿದ್ದುಪಡಿ) ನಿಯಮಗಳು 2013ರ ಪ್ರಕಾರ, ನಿಯಮ 49ಎ ನಂತರ, ಭಾರತ ಚುನಾವಣಾ ಆಯೋಗ ಅನುಮೋದಿಸಿದಂತಹ ವಿನ್ಯಾಸದ ಡ್ರಾಪ್ ಬಾಕ್ಸ್‌ನೊಂದಿಗೆ ಒಂದು ಪ್ರಿಂಟರ್‌ನ್ನು ಮತಪತ್ರದ ಕಾಗದದ ಪರಿಕ್ಷಾರ್ಥ ಮುದ್ರಣಕ್ಕಾಗಿ ಚುನಾವಣಾ ಆಯೋಗ ನಿರ್ದೇಶಿಸಿದಂತೆ, ಅಂತಹ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಥವಾ ಅದರ ಭಾಗದಲ್ಲಿ ಮತಯಂತ್ರಕ್ಕೆ ಜೋಡಿಸಬಹುದೆಂದು ಪರಂತುಕವನ್ನು ಸೇರಿಸಲಾಗಿದೆ. ಈ ಉಪ–ಕರಣವನ್ನು ಮತದಾರನ ದೃಢೀಕರಣ ಕುರಿತಂತೆ ಗುರುತು ಪತ್ತೆಗೆ ಪರೀಕ್ಷಾರ್ಥ ಶೋಧನಾ ಉಪಕರಣ ವಿವಿಪ್ಯಾಟ್ ಎಂದು ಕರೆಯಲಾಗಿದೆ. ಆಯೋಗವು ನಿರ್ದೇಶಿಸಲಾದಂತೆ ವಿವಿಪ್ಯಾಟ್ ಅನ್ನು ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಿಗೆ ನಡೆಯುವ ಎಲ್ಲಾ ಚುನಾವಣೆಗಳಲ್ಲೂ ಪ್ರತಿಯೊಂದು ಮತಗಟ್ಟೆಯಲ್ಲಿ ವಿದ್ಯುನ್ಮಾನ ಮತಯಂತ್ರಗಳೊಡನೆ ಬಳಸತಕ್ಕದ್ದು.

### 10.2. ಇವಿಎಂ ಮತ್ತು ವಿವಿಪ್ಯಾಟ್‌ಗಳ ಪ್ರಥಮ ಹಂತದ ತಪಾಸಣೆ ಮತ್ತು ಯಾದೃಚ್ಛೀಕರಣ

10.2.1. ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಜಿಲ್ಲಾ ಚುನಾವಣಾಧಿಕಾರಿಯ ನೇರ ನಿಯಂತ್ರಣದಲ್ಲಿ ಸಂಗ್ರಹಿಸಿ ಇಟ್ಟುಕೊಂಡಿರಬೇಕೆನ್ನುವುದು ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ನೀತಿ. ಕೆಲವೊಮ್ಮೆ ಸಂಗ್ರಹಣ ಸ್ಥಳದ ಕೊರತೆಯ ಕಾರಣದಿಂದ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಬೇರೆಬೇರೆ ಸ್ಥಳಗಳಲ್ಲಿ, ವಿಕೇಂದ್ರೀಕೃತ ರೀತಿಯಲ್ಲೂ ಸಂಗ್ರಹಿಸಿಡಬೇಕಾದ ಸಂದರ್ಭಗಳು ಬರುವ ಸಾಧ್ಯತೆಗಳಿರುತ್ತವೆ. ಅಂಥ ಸಂದರ್ಭಗಳಲ್ಲಿಯೂ ಸಹ ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಪ್ರಥಮ ಹಂತದ ತಪಾಸಣೆಗಾಗಿ ಮತ್ತು ಯಾದೃಚ್ಛೀಕರಣ ಪ್ರಕ್ರಿಯೆ ಉದ್ಧೇಶಕ್ಕಾಗಿ ಸೂಕ್ತ ಬೆಂಗಾವಲಿನಲ್ಲಿ ಜಿಲ್ಲಾ ಕೇಂದ್ರ ಸ್ಥಾನಗಳಿಗೆ ತರತಕ್ಕದ್ದು.

10.2.2. ಸಂದರ್ಭಾನುಸಾರ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ, ಜಿಲ್ಲಾ ಚುನಾವಣಾ ಅಧಿಕಾರಿಯ ವ್ಯವಸ್ಥಾಪನಾ ನಿಯಂತ್ರಣದಲ್ಲಿ ಜಿಲ್ಲಾ / ಉಪ–ವಿಭಾಗೀಯ ಕೇಂದ್ರ ಸ್ಥಾನಗಳಲ್ಲಿ ಬಿಇಎಲ್/ಇಸಿಐಎಲ್ ಇಂಜಿನಿಯರ್‌ಗಳು ಪ್ರಥಮ ಹಂತದ ತಪಾಸಣೆಯನ್ನು ನಡೆಸತಕ್ಕದ್ದು. ಪ್ರಥಮ ಹಂತದ ತಪಾಸಣೆಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳ ಸಮನ್ವಯಕ್ಕಾಗಿ,

ಜಿಲ್ಲಾ ಚುನಾವಣಾಧಿಕಾರಿಯು ತಮ್ಮ ಹಂತದಲ್ಲಿ ಒಬ್ಬರು ನೋಡಲ್ ಅಧಿಕಾರಿಯ ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಅಂಥ ಅಧಿಕಾರಿಯ ಹೆಸರು ಮತ್ತು ಅವನ ದೂರವಾಣಿ ಸಂಖ್ಯೆಗಳು ಒಳಗೊಂಡಂತೆ ಇತರೆ ವಿವರಗಳನ್ನು ಮುಖ್ಯ ಚುನಾವಣಾಧಿಕಾರಿಗೆ ತಿಳಿಸತಕ್ಕದ್ದು. ಇವಿಎಂ ಮತ್ತು ವಿವಿಪ್ಯಾಟ್‌ಗಳ ಕಾರ್ಯನಿರ್ವಹಣೆಯ ತಪಾಸಣೆ, ಪ್ರತಿ ಇವಿಎಂನ ಪ್ರತಿ 16 ಕ್ಯಾಂಡಿಡೇಟ್ ಬಟನ್‌ನಲ್ಲಿಯೂ ತಲಾ 1 ಮತವನ್ನು ಚಲಾಯಿಸುವುದು, ಇವಿಎಂಗಳ ಶೇ 1 ರಷ್ಟರಲ್ಲಿ 1200 ಮತಗಳು, ಶೇ 2 ರಷ್ಟರಲ್ಲಿ 1000 ಮತಗಳು ಹಾಗೂ ಒಟ್ಟು ಇವಿಎಂಗಳ ಶೇ 2 ರಷ್ಟರಲ್ಲಿ 500 ಮತಗಳೊಂದಿಗೆ ಅಣಕು ಮತದಾನ, ಪ್ರಥಮ ಹಂತದ ಪರಿಶೀಲನೆಯು ಅಣಕು ಮತದಾನ ಮಾಡುವ ಮೂಲಕ ಯಂತ್ರಗಳ ಕಾರ್ಯಾಚರಣೆಯನ್ನು ಪರಿಶೀಲಿಸುವುದನ್ನು ಒಳಗೊಂಡಿದೆ. ಎಫ್‌ಎಲ್‌ಸಿ ಮತದಾನ ಮತ್ತು ಅಣಕು ಮತದಾನದ ಫಲಿತಾಂಶದ ವೀಕ್ಷಣೆಯ ತರುವಾಯ, ಪ್ರತಿಯೊಂದು ಇವಿಎಂನಲ್ಲಿ ಇರುವ (ಬಿಯು, ಸಿಯು) ಮತದಾನದ ದತ್ತಾಂಶವನ್ನು ತೆಗೆದುಹಾಕಬೇಕು. ನಂತರ, ಪಿಂಕ್ ಪೇಪರ್ ಸೀಲ್‌ನಿಂದ (ಪಿಪಿಎಸ್) ಕಂಟ್ರೋಲ್ ಯೂನಿಟ್ ಅನ್ನು ಸೀಲ್ ಮಾಡುವುದು ಹಾಗೂ ಇವಿಎಂ ನಿರ್ವಹಣಾ ವ್ಯವಸ್ಥೆಯ ಮೂಲಕ ಅದರ ರಿಜಿಸ್ಟರ್‌ಗಳನ್ನು ಸಿದ್ಧಪಡಿಸುವುದು.

10.2.3. ಪ್ರಥಮ ಹಂತದ ತಪಾಸಣೆ, ಯಾದೃಚ್ಛೀಕರಣ ಮತ್ತು ಇವಿಎಂ ನಿಯೋಜನೆಗಾಗಿ ತರುವ ಪ್ರಕ್ರಿಯೆಯಲ್ಲಿ ಕೈಗೊಂಡ ವಿವಿಧ ಕ್ರಮಗಳನ್ನು ಅನುಸರಿಸುವ ಉದ್ದೇಶಕ್ಕಾಗಿ, ಒಂದು ಅಂಟಿಸುವ ಲೇಬಲ್ಲನ್ನು (ಮೊದಲೇ ಪ್ರಿಂಟ್ ಮಾಡಿದ ಸ್ಟಿಕರ್) ಸಿದ್ಧಪಡಿಸುವುದು ಮತ್ತು ಬಳಸಲು ಸಿದ್ಧ ಪಡಿಸಿಟ್ಟುಕೊಳ್ಳುವುದು. (ಈ ಸ್ಟಿಕರ್‌ಗಳನ್ನು ಪ್ರಥಮ ಹಂತದ ತಪಾಸಣೆ ಸಮಯದಲ್ಲಿ ಇಂಜಿನಿಯರುಗಳು ತರುತ್ತಾರೆ).

## 10.3. ಇವಿಎಂ ಮತ್ತು ವಿವಿಪ್ಯಾಟ್‌ಗಳಿಗೆ ಸಂಖ್ಯೆಯನ್ನು ನೀಡುವುದು

10.3.1 ಪ್ರಥಮ ಹಂತದ ಪರಿಶೀಲನೆ ಮುಗಿದ ಕೂಡಲೆ ಸ್ಟಿಕ್ಕರನ್ನು ಕಂಟ್ರೋಲಿಂಗ್ ಯೂನಿಟ್ಟಿನ ಹಿಂಬದಿಗೆ ಅಂಟಿಸಬೇಕು ಮತ್ತು ಅದನ್ನು ಪರಿಶೀಲಿಸಿದ ಇಂಜಿನಿಯರವರು ಸ್ಟಿಕ್ಕರಿನ ಸೂಕ್ತ ಸ್ಥಳದಲ್ಲಿ ದಿನಾಂಕದೊಂದಿಗೆ ತಮ್ಮ ಸಹಿ ಮಾಡಬೇಕು. ಹೀಗೆ ಮಾಡಿದರೆ ಕಂಟ್ರೋಲ್ ಯೂನಿಟ್ಟು ಎಲ್ಲ ರೀತಿಯಿಂದಲೂ ಸರಿಯಾಗಿದೆ ಎಂದು ಅರ್ಥ. ಕಂಟ್ರೋಲ್ ಯೂನಿಟ್ ಯಂತ್ರದ ವಿಶಿಷ್ಟ ಸಂಖ್ಯೆಯನ್ನು ಸಹ ಸ್ಟಿಕ್ಕರಿನ ಸೂಕ್ತ ಸ್ಥಳದಲ್ಲಿ ನಮೂದಿಸಬೇಕು.

10.3.2. ಅದೇ ಕಾಲಕ್ಕೆ ಈ ಉದ್ದೇಶಕ್ಕಾಗಿ ಜಿಲ್ಲಾ ಚುನಾವಣಾಧಿಕಾರಿಯಿಂದ ಅಧಿಕಾರ ಪಡೆದಿರುವ ಪ್ರತಿನಿಧಿಯು ಅಂತಹ ಸೂಕ್ತ ಸ್ಥಳದಲ್ಲಿ ತನ್ನ ಸಹಿಯನ್ನು ಮಾಡಬೇಕು. ಇದಾದ ನಂತರ ಸಾಕಷ್ಟು

ಮುನ್ನೆಚ್ಚರಿಕೆ ಹಾಗೂ ಕಾಳಜಿಯಿಂದ ಕಂಟ್ರೋಲ್ ಯೂನಿಟ್‌ಗಳನ್ನು ಬೀಗ ಮತ್ತು ಕೀಲಿಯೊಂದಿಗೆ ಭದ್ರವಾಗಿ ಸಂಗ್ರಹಿಸಿಡಬೇಕು. ಒಂದು ವೇಳೆ ಯಾವುದೇ ಕಂಟ್ರೋಲ್ ಯೂನಿಟ್‌ಗಳು ಪರಿಶೀಲನೆಯ ಕಾಲಕ್ಕೆ ದೋಷಪೂರಿತವೆಂದು ಕಂಡುಬಂದಲ್ಲಿ ಅಂತಹ ಕಂಟ್ರೋಲ್ ಯೂನಿಟ್ಟನ್ನು ಪ್ರತ್ಯೇಕ ಮಾಡಿ ದೋಷ ಸರಿಪಡಿಸಲು ಕ್ರಮ ತೆಗೆದುಕೊಳ್ಳುವ ಸಲುವಾಗಿ ಬೇರೆಯಾಗಿ ಇಡಬೇಕು. ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ವಿವಿಪ್ಯಾಟ್‌ಗಳಿಗೂ ಸಹ ಮೇಲಿನ ಪ್ರಕ್ರಿಯೆಯು ಅನ್ವಯವಾಗುತ್ತದೆ. ಪರಿಶೀಲಿಸಲಾಗುವ, ಸಹಿ ಮಾಡಲಾಗುವ ಮತ್ತು ಸಂಖ್ಯೆಗಳನ್ನು ನಮೂದಿಸಲಾಗುವ ಚುನಾವಣೆಗೆ ಉಪಯೋಗಿಸಲು ಅರ್ಹವಾದ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು EVM Management System(EMS)ನಲ್ಲಿ FLC OK ಎಂಬುದಾಗಿಯೂ ನಮೂದಿಸತಕ್ಕದ್ದು. ಪ್ರಥಮ ಹಂತದ ಪರಿಶೀಲನೆಯನ್ನು ಸಾಕಷ್ಟು ಮೊದಲೆ ಮಾಡಿ ಪೂರ್ಣಗೊಳಿಸತಕ್ಕದ್ದು.

## 10.4. ವಿದ್ಯುನ್ಮಾನ ಮತಯಂತ್ರಗಳ ದತ್ತಾಂಶ

10.4.1. ಪರಿಶೀಲಿಸಲಾದ ಹಾಗೂ ದೃಢೀಕರಣ ಮಾಡಿದ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಮೂಲದತ್ತಾಂಶಗಳನ್ನು (database) ಪ್ರತ್ಯೇಕವಾಗಿ ತಯಾರಿಸಿ ಯಾದೃಚ್ಛೀಕರಣಕ್ಕೆ ಸಿದ್ಧ ಮಾಡಿಟ್ಟುಕೊಳ್ಳಬೇಕು. ಈ ಮೂಲ ದತ್ತಾಂಶಗಳ (database) ಸ್ವರೂಪದಲ್ಲಿ ಯಂತ್ರದ ಸಂಖ್ಯೆಯನ್ನು (ಸಂದರ್ಭಾನುಸಾರ, ಕಂಟ್ರೋಲ್ ಯೂನಿಟ್‌ನ ಮತ್ತು ಬ್ಯಾಲೆಟಿಂಗ್ ಯೂನಿಟ್‌ನ ಹಾಗೂ ವಿವಿಪ್ಯಾಟ್‌ನ ಹಿಂಬದಿಗೆ ಇರುವ ಲೋಹದ ಪಟ್ಟಿಯ ಮೇಲೆ ಹಾಗೂ ಕೊರೆದಿರುವಂತೆ ತಯಾರಕರು ನೀಡಿರುವ ಮೂಲ ಸಂಖ್ಯೆ) ಸೂಚಿಸುವ ಕಂಟ್ರೋಲ್ ಯೂನಿಟ್‌ಗಳು/ ಬ್ಯಾಲೆಟ್ ಯೂನಿಟ್‌ಗಳು/ವಿವಿಪ್ಯಾಟ್‌ಗಳ ವಿವರಗಳನ್ನು ಒಳಗೊಂಡಿರುತ್ತದೆ.

## 10.5. ಮತಯಂತ್ರಗಳ ಯಾದೃಚ್ಛೀಕರಣ ಕುರಿತು ಕಾರ್ಯಸೂಚಿ

10.5.1. ಜಿಲ್ಲಾ ಚುನಾವಣಾಧಿಕಾರಿಗಳು, ಕಂಟ್ರೋಲ್ ಯೂನಿಟ್‌ಗಳು/ ಬ್ಯಾಲೆಟಿಂಗ್ ಯೂನಿಟ್‌ಗಳು/ ವಿವಿಪ್ಯಾಟ್‌ಗಳನ್ನು ಯಾದೃಚ್ಛೀಕರಣಕ್ಕಾಗಿ ಹಾಗೂ ಬೇರೆ-ಬೇರೆ ವಿಧಾನ ಸಭಾ ಚುನಾವಣಾ ಕ್ಷೇತ್ರಗಳಿಗೆ ಅವುಗಳನ್ನು ಹಂಚಿಕೆ ಮಾಡುವ ಒಂದು ನಿಗದಿತ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸುತ್ತಾರೆ. ಇದನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿಯೇ ಮಾಡಬೇಕು. ಮತದಾನದ ದಿನದಂದು ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೆ ಕಾಯ್ದಿರಿಸಿರುವ

ಮತಯಂತ್ರಗಳು ಸೇರಿದಂತೆ ಸಾಕಾಗುವಷ್ಟು ಕಂಟ್ರೋಲ್ ಯೂನಿಟ್‌ಗಳು/ ಬ್ಯಾಲೆಟಿಂಗ್ ಯೂನಿಟ್‌ಗಳು/ ವಿವಿಪ್ಯಾಟ್‌ಗಳನ್ನು ರ್‍ಯಾಂಡಮ್ ಆಗಿ ಆಯ್ಕೆ ಮಾಡುವಂತೆ ಹೆಚ್ಚುವರಿ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನೂ ಕೂಡ ಗ್ರೂಪ್ ಮಾಡಿ ರ್‍ಯಾಂಡಮ್ ಆಗಿ ಆಯ್ಕೆ ಮಾಡಿ, ವಿಧಾನಸಭಾ ಚುನಾವಣಾ ಕ್ಷೇತ್ರವಾರು ತರಬೇತಿಯ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳ ಉದ್ದೇಶಕ್ಕಾಗಿ (ಮತಗಟ್ಟೆ ಸಿಬ್ಬಂದಿಯ ತರಬೇತಿ ಹಾಗೂ ಮತದಾರರಿಗೆ ತಿಳುವಳಿಕೆ ಉದ್ದೇಶಕ್ಕಾಗಿ) ಹಂಚಿಕೆ ಮಾಡಬೇಕು. ಮತದಾನಕ್ಕಾಗಿ ವಿಧಾನಸಭಾ ಚುನಾವಣಾ ಕ್ಷೇತ್ರಗಳಿಗೆ ನಿಗದಿ ಮಾಡಿದ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಮೇಲೆ ಹಸಿರು ಬಣ್ಣದ ಸ್ಟಿಕ್ಕರನ್ನು ಹಾಕತಕ್ಕದ್ದು. ಅಂಥ ಸ್ಟಿಕರ್‌ನಲ್ಲಿ ರಾಜ್ಯದ/ ಕೇಂದ್ರಾಡಳಿತದ ಪ್ರದೇಶದ ಹೆಸರು ಹಾಗೂ ವಿಧಾನಸಭಾ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಸರಿಯಾಗಿ ನಮೂದಿಸಬೇಕು. ಮತದಾನಕ್ಕೆ ನಿಗದಿ ಪಡಿಸಿದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್‌ಗಳ ಸ್ಟಿಕರ್ ಮೇಲೆ "ELECTION" ಎಂದು ಬರೆದಿರಬೇಕು. ಯಾದೃಚ್ಛೀಕರಣ ಮಾಡುವಾಗ ಲೆಕ್ಕಕ್ಕೆ ಯಾವುದೇ ಚಾಲ್ತಿ / ಹಾಲಿ IDಯನ್ನು ಕೊಡುವುದಿಲ್ಲ. ಯಾದೃಚ್ಛೀಕರಣ ಮಾಡಿದ ನಂತರ, EVM Management Systemನಲ್ಲಿ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟ್ ಯೂನಿಟ್‌ಗಳು ಮತ್ತು ವಿವಿಪ್ಯಾಟ್‌ಗಳಿಗೆ "Election" ಅಥವಾ "Training/ Awareness" ಎಂಬ ಗುರುತು ಮಾಡಲಾಗುವುದು.

10.5.2. ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳಿಗಾಗಿ ಮಾತ್ರ ಎಫ್‌ಎಲ್‌ಸಿ ಒಕೆ ಯೂನಿಟ್‌ಗಳನ್ನು ಬಳಸತಕ್ಕದ್ದು. ಪೂರ್ವ ಚುನಾವಣೆಗಳ ಯಾವುದೇ ಡಾಟಾವು ಮತಯಂತ್ರದಲ್ಲಿ ಉಳಿದಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ನಕಲು ಚಿಹ್ನೆಗಳನ್ನು ಬ್ಯಾಲೆಟ್ ಪೇಪರ್ ಹಾಗೂ ವಿವಿಪ್ಯಾಟ್‌ಗಳಿಗಾಗಿ ಬಳಸಲಾಗುವುದು.

10.5.3. ಜಾಗೃತಿ, ಕಾರ್ಯಕ್ರಮಗಳ ಉದ್ದೇಶಕ್ಕೆ ಬಳಸಲಾಗುವ ಅಂತಹ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಪಟ್ಟಿಯನ್ನು ರಾಷ್ಟ್ರ ಹಾಗೂ ರಾಜ್ಯ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೂ ಸಹ ನೀಡತಕ್ಕದ್ದು. ಮತದಾರರ ತಿಳುವಳಿಕೆ ಕಾರ್ಯಕ್ರಮಗಳಿಗಾಗಿ ಗೊತ್ತುಪಡಿಸಿದ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಮೇಲೆ ಕಿತ್ತಳೆ ಬಣ್ಣದ ಒಂದು ಸ್ಟಿಕರ್ ಅನ್ನು ಹಾಕತಕ್ಕದ್ದು. ಇವುಗಳನ್ನು ಗೌಪ್ಯವಾಗಿ ಸಂಗ್ರಹಿಸಿ ಇಡಬೇಕು ಮತ್ತು ಜಿಲ್ಲಾ ಚುನಾವಣಾಧಿಕಾರಿಗಳು ನೇಮಕ ಮಾಡಿದ ಅಧಿಕೃತ ಅಧಿಕಾರಿಗಳು ಇವುಗಳನ್ನು ಬಳಸತಕ್ಕದ್ದು. ಅವರು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ

ಕಾರ್ಯಾಚರಣೆ ಕುರಿತು ಸಮಗ್ರವಾಗಿ ತರಬೇತಿಯನ್ನು ಹೊಂದಿರತಕ್ಕದ್ದು ಮತ್ತು ಲಾಗ್ ಪುಸ್ತಕವನ್ನು ನಿರ್ವಹಿಸತಕ್ಕದ್ದು.

10.5.4. ಜಾಗೃತಿ ಕಾರ್ಯಕ್ರಮಗಳ ಉದ್ದೇಶಕ್ಕಾಗಿ ಪ್ರತ್ಯೇಕಿಸಲಾದ ಶೇ. 5ರಷ್ಟು ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಸ್ಥಿತಿಯನ್ನು ಎಫ್‌ಎಲ್‌ಸಿ–ಒಕೆ ಯ ಸ್ಥಳದಲ್ಲಿ **"ತರಬೇತಿ ಮತ್ತು ತಿಳುವಳಿಕೆ"** ಎಂದು ETSನಲ್ಲಿ ಗುರುತಿಸತಕ್ಕದ್ದು.

## 10.6. ರಿಟರ್ನಿಂಗ್ ಅಧಿಕಾರಿಗಳಿಗೆ ಪಟ್ಟಿ ಹಾಗೂ ವಿದ್ಯುನ್ಮಾನ ಮತಯಂತ್ರಗಳ ವಿತರಣೆ

10.6.1. ಪ್ರಥಮ ಹಂತದ ಯಾದೃಚ್ಛೀಕರಣ ಮಾಡಿದ ತರುವಾಯ, ಮತಗಟ್ಟೆಗಳಲ್ಲಿ ಮತ್ತು ತರಬೇತಿಯಲ್ಲಿ ಬಳಸುವುದಕ್ಕಾಗಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾದ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಪ್ರತ್ಯೇಕ ಪಟ್ಟಿಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಅವುಗಳಿಗೆ ಜಿಲ್ಲಾ ಚುನಾವಣಾಧಿಕಾರಿಯ ಪ್ರತಿನಿಧಿ ಮತ್ತು ರಿಟರ್ನಿಂಗ್ ಅಧಿಕಾರಿ ಸಹಿ ಮಾಡತಕ್ಕದ್ದು ಮತ್ತು ಅಂಥ ಪಟ್ಟಿಯ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಎಲ್ಲಾ ಪ್ರತಿನಿಧಿಗಳಿಗೆ ನೀಡತಕ್ಕದ್ದು. ಯಾದೃಚ್ಛೀಕರಣ ವೇಳೆಯಲ್ಲಿ ಒಂದು ವೇಳೆ ಪ್ರತಿನಿಧಿಗಳು ಇಲ್ಲದಿದ್ದರೂ ಸಹ ಪಟ್ಟಿಯನ್ನು ಪಕ್ಷದ ಕಚೇರಿಗೆ ತಲುಪಿಸತಕ್ಕದ್ದು ಮತ್ತು ಸ್ವೀಕೃತಿಯನ್ನು ಪಡೆಯತಕ್ಕದ್ದು. ಮೊದಲ ಯಾದೃಚ್ಛೀಕರಣದ ತರುವಾಯ, ಯಾವ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಮತದಾನಕ್ಕಾಗಿ ಯಾವ ವಿಧಾನ ಸಭಾ ಕ್ಷೇತ್ರದಲ್ಲಿ ಬಳಸಬೇಕು ಮತ್ತು ಯಾವ ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್ ಹಾಗೂ ವಿವಿಪ್ಯಾಟ್ ಅನ್ನು ತರಬೇತಿಗಾಗಿ/ ತಿಳುವಳಿಕೆಗಾಗಿ ಯಾವ ವಿಧಾನ ಸಭಾ ಕ್ಷೇತ್ರದಲ್ಲಿ ಬಳಸಬೇಕು ಎಂಬುದನ್ನು ಸ್ಪಷ್ಟವಾಗಿ ಸೂಚಿಸುವ ಯಾದೃಚ್ಛೀಕರಣಗೊಂಡ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಪಟ್ಟಿಯನ್ನು ಮಾನ್ಯತೆ ಪಡೆದ ಪ್ರತಿಯೊಂದು ರಾಜಕೀಯ ಪಕ್ಷಕ್ಕೆ ನೀಡಬೇಕು ಮತ್ತು ಲಿಖಿತ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು. ಈ ಪಟ್ಟಿಯ ಒಂದು ಪ್ರತಿಯನ್ನು, ಅಭ್ಯರ್ಥಿಗಳು ನಾಮಪತ್ರವನ್ನು ಹಿಂಪಡೆಯಲು ನಿಗದಿ ಮಾಡಿರುವ ಕೊನೆಯ ದಿನಾಂಕದ ತರುವಾಯ ಎಲ್ಲಾ ಅಭ್ಯರ್ಥಿಗಳಿಗೆ ನೀಡಬೇಕು. ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಯಾಥೃಚ್ಛೀಕರಣವನ್ನು ಇವಿಎಂ ಮ್ಯಾನೇಜ್‌ಮೆಂಟ್ ಸಿಸ್ಟಂನ ಮೂಲಕ ಮಾತ್ರವೇ ಮಾಡತಕ್ಕದ್ದು.

10.6.2. ಆ ತರುವಾಯ, ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿಯು ತನ್ನ ಚುನಾವಣಾ ಕ್ಷೇತ್ರಕ್ಕೆ ಯಾದೃಚ್ಛಿಕವಾಗಿ ಹಂಚಿಕೆಯಾದ ಕಂಟ್ರೋಲ್ ಯೂನಿಟ್‌ಗಳನ್ನು/ ಬ್ಯಾಲೆಟ್ ಯೂನಿಟ್‌ಗಳನ್ನು/ ವಿವಿಪ್ಯಾಟ್‌ಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳತಕ್ಕದ್ದು. ಮತಗಟ್ಟೆಯಲ್ಲಿ ಬಳಸಲು ನಿಗದಿ

ಮಾಡಿರುವ ಕಂಟ್ರೋಲ್ ಯೂನಿಟ್‌ಗಳನ್ನು/ ಬ್ಯಾಲೆಟ್ ಯೂನಿಟ್‌ಗಳನ್ನು/ ವಿವಿಪ್ಯಾಟ್‌ಗಳನ್ನು, ಸೂಕ್ತ ಬೆಂಗಾವಲಿನಲ್ಲಿ ರಿಟರ್ನಿಂಗ್ ಅಧಿಕಾರಿಯು ಸುಭದ್ರ ಕೋಣೆಗೆ (Strong Room) ಸಾಗಿಸಿ ಇಡತಕ್ಕದ್ದು ಮತ್ತು ಅವುಗಳ ಸೂಕ್ತ ರಕ್ಷಣೆಗೆ ಸೂಕ್ತ ಪಡೆಯನ್ನು ನಿಯೋಜಿಸಿ ದಿನವಿಡೀ ಕಾವಲು ವ್ಯವಸ್ಥೆ ಮಾಡತಕ್ಕದ್ದು. ತರಬೇತಿ ಇವಿಎಂಗಳನ್ನು ಹಾಗೂ ವಿವಿಪ್ಯಾಟ್‌ಗಳನ್ನು ತರಬೇತಿ ಉದ್ದೇಶಕ್ಕಾಗಿ, ಸಂಬಂಧ ಪಟ್ಟ ಅಧಿಕಾರಿಗಳಿಗೆ ವಿತರಿಸತಕ್ಕದ್ದು. ಸುಭದ್ರ ಕೋಣೆಯಲ್ಲಿ (Strong Room) ಮೊಹರು ಮಾಡುವ ವೇಳೆಯಲ್ಲಿ, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಜರಿರಬಹುದು ಮತ್ತು ಬೀಗದ ಮೇಲೆ ತಮ್ಮ ಮೊಹರನ್ನು ಸಹ ಹಾಕಬಹುದು.

## 10.7. ದ್ವಿತೀಯ ಯಾದೃಚ್ಛೀಕರಣ

10.7.1. ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಸಿದ್ಧತೆಯ ಸಮಯದಲ್ಲಿ ಇವಿಎಂನ ಅಡ್ರೆಸ್ ಟ್ಯಾಗ್‌ನ್ನು ಸೀಲ್ ಮಾಡಲಾಗುತ್ತದೆ. ಆದ್ದರಿಂದ ಅಭ್ಯರ್ಥಿ ಸೆಟ್ಟಿಂಗ್ ಮೂಲಕ ಮತದಾನಕ್ಕಾಗಿ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವುದಕ್ಕೂ ಮುಂಚೆ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣ ಮಾಡಬೇಕು. ಮತಗಟ್ಟೆಗಳಿಗಾಗಿ ಯಾದೃಚ್ಛಿಕವಾಗಿ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಆಯ್ಕೆ ಮಾಡಿ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಹಂಚಿಕೆ ಮಾಡುವುದೇ ಎರಡನೇ ಯಾದೃಚ್ಛೀಕರಣದ ಉದ್ದೇಶ. ರಿಟರ್ನಿಂಗ್ ಅಧಿಕಾರಿಯು, ಮತದಾನಕ್ಕಾಗಿ (ಕ್ಯಾಂಡಿಡೇಟ್ ಸೆಟ್) ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಸಿದ್ಧತೆಗೆ ದಿನಾಂಕವನ್ನು ನಿಗದಿಪಡಿಸಬೇಕು ಮತ್ತು ಈ ಪ್ರಕ್ರಿಯೆ ನಡೆಯುವಾಗ ಎಲ್ಲಾ ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳು ಉಪಸ್ಥಿತರಿರುವಂತೆ ಅವರಿಗೆ ತಿಳಿಸಬೇಕು. ಅಭ್ಯರ್ಥಿಗಳು ತಮ್ಮ ನಾಮಪತ್ರವನ್ನು ಹಿಂಪಡೆಯಲು ನಿಗದಿ ಮಾಡಿದ ಕೊನೆಯ ದಿನಾಂಕದ ತರುವಾಯ ಮತ್ತು ಮತಪತ್ರಗಳನ್ನು ಅಂತಿಮಗೊಳಿಸಿದ ನಂತರ ಆದಷ್ಟು ಬೇಗನೆ ದಿನಾಂಕವನ್ನು ನಿಗದಿಪಡಿಸಬೇಕು. ಹಾಗೆ ನಿಗದಿ ಮಾಡಿದ ದಿನಾಂಕದಂದು ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ದ್ವಿತೀಯ ಯಾದೃಚ್ಛೀಕರಣವನ್ನು ಮತದಾನಕ್ಕಾಗಿ ಇವಿಎಂಗಳ ಹಾಗೂ ವಿವಿಪ್ಯಾಟ್‌ಗಳ ಸಿದ್ಧತೆಯ ಪ್ರಕ್ರಿಯೆಯನ್ನು ಮಾಡುವುದಕ್ಕೂ ಮುಂಚೆ ETS ನಲ್ಲಿ ಮಾಡಬೇಕು ಹಾಗೆ ಮಾಡಿದರೆ ಕಂಟ್ರೋಲ್ ಯೂನಿಟ್‌ಗಳನ್ನು ಮತ್ತು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಹಾಗೂ ವಿವಿಪ್ಯಾಟ್‌ಗಳನ್ನು ಮತಗಟ್ಟೆಗಳಿಗೆ ಯಾದೃಚ್ಛಿಕವಾಗಿ ಹಂಚಿಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬ್ಯಾಲೆಟಿಂಗ್ ಯೂನಿಟ್‌ಗಳು, ಕಂಟ್ರೋಲ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಒಂದು ಪಟ್ಟಿಯನ್ನು ಅವುಗಳಿಗೆ ನಿಗದಿ ಪಡಿಸಿದ ಮತಗಟ್ಟೆಗಳ ಸಂಖ್ಯೆಯೊಂದಿಗೆ ಎಲ್ಲಾ ಅಭ್ಯರ್ಥಿಗಳಿಗೆ ನೀಡಬೇಕು.

ಅದೇ ರೀತಿ, ಮೀಸಲಿಟ್ಟಿರುವ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಒಂದು ಪಟ್ಟಿಯನ್ನು ಸಹ ಅಭ್ಯರ್ಥಿಗಳಿಗೆ ನೀಡಬೇಕು ಮತ್ತು ಲಿಖಿತ ಸ್ವೀಕೃತಿಯನ್ನು ತೆಗೆದುಕೊಳ್ಳಬೇಕು.

## 10.8. ವಿದ್ಯುನ್ಮಾನ ಮತಯಂತ್ರಗಳ ಸಿದ್ಧತೆ

10.8.1. ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ (ಕ್ಯಾಂಡಿಡೇಟ್ ಸೆಟ್ಟಿಂಗ್) ಸಿದ್ಧತೆಗಾಗಿ ವೇಳಾಪಟ್ಟಿಯನ್ನು ತಿಳಿಸುವ ಒಂದು ಲಿಖಿತ ಆಮಂತ್ರಣವನ್ನು ಅಭ್ಯರ್ಥಿಗಳಿಗೆ ಕಳುಹಿಸಬೇಕು. ಅವರು/ ಅವರ ಪ್ರತಿನಿಧಿಗಳು, ಇವಿಎಂ/ವಿವಿಪ್ಯಾಟ್‌ಗಳ ಸಿದ್ಧತೆಗಳನ್ನು ನೋಡಲು ಹಾಜರಿರಬೇಕೆಂದು ಮತ್ತು ಅಣಕು ಮತದಾನದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ತಿಳಿಸತಕ್ಕದ್ದು.

10.8.2. ಈ ಹಂತದಲ್ಲಿ, ಮೇಲೆ ಹೇಳಿದಂತೆ ಯಾದೃಚ್ಛಿಕವಾಗಿ ಮತಗಟ್ಟೆವಾರು ಗುರುತು ಮಾಡಿದ ಕಂಟ್ರೋಲ್ ಯೂನಿಟ್, ಬ್ಯಾಲೆಟಿಂಗ್ ಯೂನಿಟ್ ಹಾಗೂ ವಿವಿಪ್ಯಾಟ್ ಅನ್ನು ಮತಗಟ್ಟೆಯ ಸಂಖ್ಯೆಗೆ ಸರಿಹೊಂದಿಸುವ ಮೂಲಕ ಗುರುತಿಸತಕ್ಕದ್ದು ಮತ್ತು ಅವೆರಡನ್ನೂ ಒಟ್ಟಿಗೆ ಜೊತೆಮಾಡಿ ಕಟ್ಟಿ ಇಡತಕ್ಕದ್ದು. ಪೂರ್ವ ಸಿದ್ಧತಾ ಕೊಠಡಿಯಲ್ಲಿ ಹಾಜರಿರುವ ಯಾರೇ ಅಭ್ಯರ್ಥಿಯು/ ಏಜೆಂಟನು, ವಿದ್ಯುನ್ಮಾನ ಮತಯಂತ್ರದ ಹಾಗೂ ವಿವಿಪ್ಯಾಟ್‌ನ ಕಾರ್ಯಕ್ಷಮತೆ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಳ್ಳುವ ದೃಷ್ಟಿಯಿಂದ, ಅಲ್ಲಿ ಯಾರಾದರೂ ಪರಿಣಿತ ತರಬೇತುದಾರರು/ ತಾಂತ್ರಿಕ ಸಿಬ್ಬಂದಿ ಇದ್ದರೆ, ಅವರಿಂದ ಅಣಕು ಮತದಾನ ಮಾಡಿಸುವ ಹಾಗೂ ಅದರಿಂದ ಬಂದ ಫಲಿತಾಂಶದ ದೃಢೀಕರಣ ಮಾಡಿಸುವ ಮೂಲಕ ಕಂಟ್ರೋಲ್ ಯೂನಿಟ್‌ಗಳನ್ನು/ ಬ್ಯಾಲೆಟ್ ಯೂನಿಟ್‌ಗಳನ್ನು/ವಿವಿಪ್ಯಾಟ್‌ಗಳನ್ನು ಪರೀಕ್ಷೆಗೆ ಒಳಪಡಿಸುವ ಅವಕಾಶವನ್ನು ಬಳಸಿಕೊಳ್ಳಬಹುದು. ರಿಟರ್ನಿಂಗ್ ಅಧಿಕಾರಿಯೂ ಸಹ, ವಿದ್ಯುನ್ಮಾನ ಮತಯಂತ್ರಗಳ ಹಾಗೂ ವಿವಿಪ್ಯಾಟ್‌ನ ಕಾರ್ಯ ಕ್ಷಮತೆಯನ್ನು ಪರೀಕ್ಷಿಸಲು ಅಂಥ ಕಂಟ್ರೋಲ್ ಯೂನಿಟ್/ ಬ್ಯಾಲೆಟ್ ಯೂನಿಟ್/ವಿವಿಪ್ಯಾಟ್‌ನ ಜೋಡಿಗಳ ಪೈಕಿ ಕನಿಷ್ಠ ಶೇಕಡ 5ರಷ್ಟನ್ನಾದರೂ ಯಾದೃಚ್ಛಿಕವಾಗಿ ಪರಿಶೀಲಿಸಲು ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

10.8.3. ಬ್ಯಾಲೆಟಿಂಗ್ ಯೂನಿಟ್‌ಗಳ ಸಿದ್ಧತೆಯ ತರುವಾಯ, ಅಭ್ಯರ್ಥಿಗಳ ಸಹಿ ಹೊಂದಿರುವ ಪಿಂಕ್ ಪೇಪರ್ ಸೀಲ್ (ಪಿಪಿಎಸ್)ನಿಂದ ಮೊಹರು ಮಾಡಬೇಕು. ಮೀಸಲು ಕಂಟ್ರೋಲ್ ಯೂನಿಟ್/ ಬ್ಯಾಲೆಟಿಂಗ್ ಯೂನಿಟ್/ ವಿವಿಪ್ಯಾಟ್‌ಗೆ ಲಗತ್ತಿಸಿದ ಕಾಮನ್ ಅಡ್ರೆಸ್ ಟ್ಯಾಗ್‌ನಲ್ಲಿ 'ಮೀಸಲು' ಎಂದು ಸೂಚಿಸತಕ್ಕದ್ದು.

10.8.4. ಅಡ್ರಸ್ ಟ್ಯಾಗ್‌ಗಳ ಟ್ಯಾಗಿಂಗ್‌ಅನ್ನು ಅಭ್ಯರ್ಥಿಗಳ/ ಏಜೆಂಟ್‌ಗಳ/ವೀಕ್ಷಕರ ಸಮ್ಮುಖದಲ್ಲಿ ಈ ಹಂತದಲ್ಲಿ ಸಹ ಮಾಡತಕ್ಕದ್ದು. ಮೇಲೆ ಹೇಳಿರುವಂತೆ ಮತಗಟ್ಟೆಗಳಿಗೆ ಹಂಚಿಕೆ ಮಾಡಲಾದ ಎಲ್ಲಾ ಕಂಟ್ರೋಲ್ ಯೂನಿಟ್‌ಗಳನ್ನು/ ಬ್ಯಾಲೆಟ್ ಯೂನಿಟ್‌ಗಳನ್ನು/ವಿವಿಪ್ಯಾಟ್‌ಗಳನ್ನು ಮತ್ತು ಮೀಸಲು ಮತಯಂತ್ರಗಳನ್ನು ಅಭ್ಯರ್ಥಿಗಳ/ ಏಜೆಂಟ್‌ಗಳ ಸಮ್ಮುಖದಲ್ಲಿ ಭದ್ರತಾ ಕೊಠಡಿಯಲ್ಲಿ (Strong Room) ಇರಿಸಬೇಕು. ಅವರಿಗೆ ಭದ್ರತಾ ಕೊಠಡಿಯ ಬೀಗದ ಮೇಲೆ ತಮ್ಮ ಮೊಹರನ್ನು ಹಾಕಲು ಸಹ ಅವರಿಗೆ ಅನುಮತಿ ನೀಡಬಹುದು. ಇವಿಎಂಗಳು/ ವಿವಿಪ್ಯಾಟ್‌ಗಳು ಕ್ಯಾಂಡಿಡೇಟ್ ಸೆಟ್ಟಿಂಗ್ ಮಾಡುವ ಸಂದರ್ಭದಲ್ಲಿ ಅಥವಾ ಮತದಾನದ ದಿನದಂದು ಅಣಕು ಮತದಾನ ಮಾಡುವ ಸಂದರ್ಭದಲ್ಲಿ ದೋಷಯುಕ್ತವೆಂದು ಕಂಡುಬಂದರೆ, ಅವುಗಳನ್ನು ಪ್ರತ್ಯೇಕ ಗೋದಾಮಿನಲ್ಲಿ ಸಂಗ್ರಹಿಸಿಡತಕ್ಕದ್ದು.

## 10.9. ವಾಸ್ತವಿಕ ಮತದಾನಕ್ಕಾಗಿ ಇವಿಎಂ ಗಳ ಪ್ರಸರಣ

10.9.1. ಇವಿಎಂಗಳನ್ನು ರವಾನಿಸುವ ಸಲುವಾಗಿ ಭದ್ರತಾ ಕೊಠಡಿಯಿಂದ ಹೊರ ತೆಗೆಯುವಾಗ ಅಭ್ಯರ್ಥಿಗಳು/ ಏಜೆಂಟರಿಗೆ ಲಿಖಿತ ರೂಪದಲ್ಲಿ ಭದ್ರತಾ ಕೊಠಡಿಯನ್ನು ತೆರೆಯುವ ದಿನಾಂಕ ಮತ್ತು ಸಮಯವನ್ನು ತಿಳಿಸುವ ಸಾಮಾನ್ಯ ಮುನ್ನೆಚ್ಚರಿಕೆ ಕ್ರಮವನ್ನು ಪಾಲಿಸತಕ್ಕದ್ದು.

10.9.2. ರವಾನಿಸುವ ಸಮಯದಲ್ಲಿ, ಲೋಹದ ಲೇಬಲ್ ಮತ್ತು ಅಂಟು ಸ್ಟಿಕ್ಕರ್‌ನ ಮೇಲೆ ಬರೆದಿರುವ ಯಂತ್ರ ಸಂಖ್ಯೆಯನ್ನು ಹೋಲಿಕೆ ಮಾಡಿ ನೋಡುವಂತೆ ಮತ್ತು ಇವಿಎಂ ನ್ನು ಸ್ವೀಕರಿಸುವ ಮೊದಲು ಅಡ್ರೆಸ್ ಟ್ಯಾಗ್‌ನಲ್ಲಿ ನಮೂದಿಸಿರುವ ಪಿಎಸ್ ಸಂಖ್ಯೆಯೊಂದಿಗೆ ಹೋಲಿಸಿ ನೋಡಿ ಸ್ಟಿಕ್ಕರ್ ಮೇಲೆ ಸೂಚಿಸಿರುವ ಪಿಎಸ್ ಸಂಖ್ಯೆಯನ್ನು ಸಹ ಪರಿಶೀಲಿಸುವಂತೆ ಪ್ರಿಸೈಡಿಂಗ್ ಅಧಿಕಾರಿಗಳಿಗೆ ಸಲಹೆ ನೀಡತಕ್ಕದ್ದು. ವ್ಯತ್ಯಾಸವೇನಾದರೂ ಕಂಡುಬಂದರೆ ರವಾನೆ ವ್ಯವಸ್ಥೆಯ ಪ್ರಭಾರದಲ್ಲಿರುವ ಅಧಿಕಾರಿಯ ಗಮನಕ್ಕೆ ತಂದು ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

10.9.3. ಅಭ್ಯರ್ಥಿಗಳು ತಾವು ನೇಮಕ ಮಾಡುವ ತಮ್ಮ ಮತಗಟ್ಟೆ ಏಜೆಂಟ್/ ಏಜೆಂಟರೊಂದಿಗೆ ನಿರ್ದಿಷ್ಟ ಮತದಾನ ಕೇಂದ್ರಕ್ಕೆ ಹಂಚಿಕೆ ಮಾಡಿರುವ ಇವಿಎಂ ಮತ್ತು ವಿವಿಪ್ಯಾಟ್ (ಸಿಯು/ ಬಿಯು ಇವೆರಡರ) ಚಾಲ್ತಿ ಐಡಿ ಮತ್ತುಯಂತ್ರ ಸಂಖ್ಯೆಯನ್ನು ಹಂಚಿಕೊಳ್ಳುವಂತೆ ಅವರಿಗೆ ಸೂಚಿಸಬಹುದು. ಹೀಗೆ ಮಾಡುವುದರಿಂದ ಅವರು ಮತದಾನ ದಿನದಂದು ಅಣಕು ಮತದಾನ ಪ್ರಕ್ರಿಯೆಯನ್ನು ಪ್ರಾರಂಭಿಸುವ ಮೊದಲು ಅವರ ಸಮಾಧಾನಕ್ಕಾಗಿ ಇವಿಎಂ ಮತ್ತು ವಿವಿಪ್ಯಾಟ್ ಅನ್ನು ಪರಿಶೀಲಿಸಲು ಉತ್ಸುಕರಾಗಿರುತ್ತಾರೆ. ಅಣಕು ಮತದಾನ ಪ್ರಕ್ರಿಯೆಯನ್ನು ಪ್ರಾರಂಭಿಸುವ ಮೊದಲು ಉಪಸ್ಥಿತರಿರುವ ಏಜೆಂಟರಿಗೆ ಯಂತ್ರ ಸಂಖ್ಯೆ ಮತ್ತು ಚಾಲ್ತಿ ಐಡಿ ಮೊದಲಾದವುಗಳನ್ನು

ಒಳಗೊಂಡಿರುವ ಸ್ಟಿಕ್ಕರ್‌ನ್ನು ಪ್ರದರ್ಶಿಸುವಂತೆ ಪ್ರಿಸೈಡಿಂಗ್ ಅಧಿಕಾರಿಗಳಿಗೆ ಸಲಹೆ ನೀಡತಕ್ಕದ್ದು. ಹಾಲಿ ಇರುವ ಸೂಚನೆಗಳ ಪ್ರಕಾರ ಪ್ರಿಸೈಡಿಂಗ್ ಅಧಿಕಾರಿಯ ದಿನಚರಿಯಲ್ಲಿ ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಸಿಯು/ ಸಿಯುಗಳ ಸಂಖ್ಯೆ; ಉಪಯೋಗಿಸಿದ ಸಿಯು/ ಸಿಯುಗಳ ಕ್ರಮ ಸಂಖ್ಯೆಗಳು; ಉಪಯೋಗಿಸಿದ ಬಿಯು/ ಬಿಯುಗಳ ಕ್ರಮ ಸಂಖ್ಯೆಗಳು ಮತ್ತು ಉಪಯೋಗಿಸಿದ ಬಿಯು/ ಬಿಯುಗಳ ಕ್ರಮ ಸಂಖ್ಯೆ ಮತ್ತು ಉಪಯೋಗಿಸಿದ ವಿವಿಪ್ಯಾಟ್/ ವಿವಿಪ್ಯಾಟ್‌ಗಳ ಸಂಖ್ಯೆ ಮತ್ತು ಉಪಯೋಗಿಸಿದ ವಿವಿಪ್ಯಾಟ್/ ವಿವಿಪ್ಯಾಟ್‌ಗಳ ಕ್ರಮಸಂಖ್ಯೆಗಳನ್ನು ನಮೂದಿಸಬೇಕಾಗುತ್ತದೆ ಎಂಬಂಶವನ್ನು ಗಮನಿಸುವುದು ಸುಸಂಗತವಾಗಿದೆ. ಈ ಸೂಚನೆಯನ್ನು ಜಾಗರೂಕತೆಯಿಂದ ಪಾಲಿಸತಕ್ಕದ್ದು. ಈ ಮೇಲೆ ನಮೂದಿಸಿರುವಂತೆ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಯಾದೃಚ್ಛೀಕರಣದ ಎಲ್ಲಾ ಹಂತಗಳನ್ನು ತಪ್ಪದೆ ಸಂಪೂರ್ಣವಾಗಿ ವಿಡಿಯೋ ಚಿತ್ರೀಕರಣ ಮಾಡತಕ್ಕದ್ದು ಮತ್ತು ಅವುಗಳ ದಾಖಲೆಗಳನ್ನು ಸರಿಯಾಗಿ ಇಡತಕ್ಕದ್ದು.

**10.10. ಆರಂಭದಿಂದ ಅಣಕು ಮತದಾನ ನಡೆಯುವವರೆಗೆ ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ಬದಲಾಯಿಸುವಿಕೆ:**

10.10.1. ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಸಿದ್ಧತೆಯ ಸಮಯದಲ್ಲಿ, ಮತದಾನ ತಂಡಗಳಿಗೆ ಅವುಗಳನ್ನು ವಿತರಿಸುವ ಸಂದರ್ಭದಲ್ಲಿ ಅಥವಾ ಮತದಾನ ಕೇಂದ್ರದಲ್ಲಿ ಅಣಕು ಮತದಾನ ಮಾಡುವ ಸಮಯದಲ್ಲಿ ಬ್ಯಾಲೆಟಿಂಗ್ ಯೂನಿಟ್ ಅಥವಾ ಕಂಟ್ರೋಲ್ ಯೂನಿಟ್ ಸೂಕ್ತವಾಗಿ ಕಾರ್ಯನಿರ್ವಹಿಸದಿದ್ದ ಸಂದರ್ಭದಲ್ಲಿ ಈ ಮುಂದಿನ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು:

i. ಬ್ಯಾಲೆಟಿಂಗ್ ಯೂನಿಟ್ ಸೂಕ್ತವಾಗಿ ಕಾರ್ಯನಿರ್ವಹಿಸದಿದ್ದ ಸಂದರ್ಭದಲ್ಲಿ ದೋಷವಿರುವ ಬ್ಯಾಲೆಟಿಂಗ್ ಯೂನಿಟ್‌ನ್ನು ಮಾತ್ರ ಮೀಸಲು ಬ್ಯಾಲೆಟಿಂಗ್ ಯೂನಿಟ್‌ನಿಂದ ಬದಲಾಯಿಸಬೇಕು.

ii. ಕಂಟ್ರೋಲ್ ಯೂನಿಟ್ ಸೂಕ್ತವಾಗಿ ಕಾರ್ಯನಿರ್ವಹಿಸದಿದ್ದ ಸಂದರ್ಭದಲ್ಲಿ ದೋಷವಿರುವ ಕಂಟ್ರೋಲ್ ಯೂನಿಟ್‌ನ್ನು ಮಾತ್ರವೇ ಮೀಸಲು ಕಂಟ್ರೋಲ್ ಯೂನಿಟ್‌ನಿಂದ ಬದಲಾಯಿಸಬೇಕು.

10.10.2. ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳನ್ನು ಬದಲಾಯಿಸಿದ ಪಟ್ಟಿಯನ್ನು ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟರುಗಳಿಗೆ ನೀಡತಕ್ಕದ್ದು ಹಾಗೂ ಇಟಿಎಸ್‌ನಲ್ಲಿ ಅಗತ್ಯ ನಮೂದುಗಳನ್ನು ಮಾಡಿಕೊಳ್ಳತಕ್ಕದ್ದು.

## 10.11. ವಾಸ್ತವಿಕ ಮತದಾನ ಸಮಯದಲ್ಲಿ ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ಬದಲಾಯಿಸುವಿಕೆ

10.11.1.ಯಾವುದೇ ಮತಗಟ್ಟೆಯಲ್ಲಿ ವಾಸ್ತವಿಕ ಮತದಾನ ಸಂದರ್ಭದಲ್ಲಿ ಕಂಟ್ರೋಲ್ ಯೂನಿಟ್ ಅಥವಾ ಬ್ಯಾಲೆಟಿಂಗ್ ಯೂನಿಟ್ ಸೂಕ್ತವಾಗಿ ಕಾರ್ಯ ನಿರ್ವಹಿಸದಿದ್ದ ಸಮಯದಲ್ಲಿ, ಸಂಪೂರ್ಣ ಇವಿಎಂ (ಬ್ಯಾಲೆಟಿಂಗ್ ಯೂನಿಟ್‌ಗಳು, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್) ಅನ್ನು ಬದಲಾಯಿಸುವುದು ಅಗತ್ಯವಿದೆ ಹಾಗೂ ಯಾವುದೇ ಮತಗಟ್ಟೆಯಲ್ಲಿ ವಾಸ್ತವಿಕ ಮತದಾನ ನಡೆಯುವ ಸಂದರ್ಭದಲ್ಲಿ ವಿವಿಪ್ಯಾಟ್ ಸೂಕ್ತವಾಗಿ ಕಾರ್ಯನಿರ್ವಹಿಸದಿದ್ದಲ್ಲಿ ಕೇವಲ ವಿವಿಪ್ಯಾಟ್ ಬದಲಾಯಿಸುವುದು ಅಗತ್ಯವಾಗಿದೆ. ಅಂತಹ ಬದಲಾವಣೆ ಮಾಡುವ ಸೆಕ್ಟರ್ ಆಫೀಸರ್ ಅಥವಾ ಯಾರೇ ಅಧಿಕೃತ ಅಧಿಕಾರಿಯು, ಹಾಲಿ ಇರುವ ಕಂಟ್ರೋಲ್ ಯೂನಿಟ್‌ನ/ ಬ್ಯಾಲೆಟಿಂಗ್ ಯೂನಿಟ್‌ನ/ ವಿವಿಪ್ಯಾಟ್‌ನ ಮತ್ತು ಹೊಸ ಕಂಟ್ರೋಲ್ ಯೂನಿಟ್‌ನ/ ಬ್ಯಾಲೆಟಿಂಗ್ ಯೂನಿಟ್‌ನ / ವಿವಿಪ್ಯಾಟ್‌ನ ಸಂಖ್ಯೆಯನ್ನು ಪ್ರತ್ಯೇಕವಾಗಿ ನಮೂದಿಸಿದ ಒಂದು ವಿಶೇಷ ವರದಿಯನ್ನು ಸಿದ್ಧಪಡಿಸತಕ್ಕದ್ದು. ಆ ಅಧಿಕಾರಿಯು ಆ ವಿಶೇಷ ವರದಿಯಲ್ಲಿ, ಹೆಚ್ಚಿನ ಕಂಟ್ರೋಲ್ ಯೂನಿಟ್/ ಬ್ಯಾಲೆಟ್ ಯೂನಿಟ್ಟನ್ನು / ವಿವಿಪ್ಯಾಟ್ ಅನ್ನು ಬದಲಾಯಿಸಿದ್ದಕ್ಕೆ ಕಾರಣಗಳು ಮತ್ತು ಹಾಗೆ ಬದಲಾವಣೆ ಮಾಡಿದ ಸಮಯ, ಆ ನಿರ್ದಿಷ್ಟ ಸಮಯದಲ್ಲಿ ಬದಲಾಯಿಸಿದ ಯಂತ್ರದಲ್ಲಿ ಮತದಾನವಾಗಿದ್ದ ಮತಗಳು – ಇವುಗಳ ಬಗ್ಗೆ ಸಹ ಉಲ್ಲೇಖಿಸತಕ್ಕದ್ದು ಮತ್ತು ರಿಟರ್ನಿಂಗ್ ಆಫೀಸರನಿಗೆ ಒಪ್ಪಿಸಬೇಕಾದ ವಿಶೇಷ ವರದಿಯ ಒಂದು ಪ್ರತಿಯನ್ನು ತನ್ನ ಬಳಿ ಇಟ್ಟುಕೊಂಡು ಮತ್ತೊಂದು ಪ್ರತಿಯನ್ನು ಪ್ರಿಸೈಡಿಂಗ್ ಆಫೀಸರನಿಗೆ ನೀಡತಕ್ಕದ್ದು.

10.11.2. ವಾಸ್ತವಿಕ ಮತದಾನದ ಸಮಯದಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬದಲಾಯಿಸಬೇಕಾದಂತಹ ಸಂದರ್ಭದಲ್ಲಿ, ಕಂಟ್ರೋಲ್ ಯುನಿಟ್ ಮತ್ತು ಎಲ್ಲಾ ಬ್ಯಾಲೆಟ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳು ಸೇರಿದಂತೆ ಇಡೀ ಸೆಟ್‌ನ್ನು ಬದಲಾಯಿಸತಕ್ಕದ್ದು. ಹೊಸ ವಿದ್ಯುನ್ಮಾನ ಯಂತ್ರದೊಂದಿಗೆ ಮತದಾನ ಪ್ರಾರಂಭಿಸುವುದಕ್ಕಿಂತ ಮುಂಚೆ ಅಣಕು ಮತದಾನದಲ್ಲಿ ನೋಟಾ ಒಳಗೊಂಡಂತೆ ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಗೆ ಕೇವಲ ಒಂದು ಮತವನ್ನು ಹಾಕತಕ್ಕದ್ದು ಮತ್ತು ಪ್ರಿಸೈಡಿಂಗ್ ಅಧಿಕಾರಿ ಈ ಮತದಾನ ಯಂತ್ರ ಮತ್ತು ವಿವಿಪ್ಯಾಟ್‌ಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅಣಕು ಮತದಾನ ಪ್ರಮಾಣಪತ್ರವನ್ನು ನೀಡುವುದು.ವಾಸ್ತವಿಕ ಮತದಾನದ ಸಮಯದಲ್ಲಿ ವಿವಿಪ್ಯಾಟ್‌ಗಳನ್ನು ಮಾತ್ರವೇ ಬದಲಾಯಿಸಿದ್ದ ಸಂದರ್ಭದಲ್ಲಿ, ಅಣಕು ಮತದಾನ ನಡೆಸತಕ್ಕದ್ದಲ್ಲ.

10.11.3. ಬದಲಾಯಿಸಿದ ಸಂದರ್ಭದಲ್ಲಿ, ಬದಲಾಯಿಸಿದ ನಂತರ ಬಳಸಲಾಗಿರುವ ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ವಿಶಿಷ್ಟ ಗುರುತಿನ ಸಂಖ್ಯೆಗಳನ್ನು ಇವಿಎಂ ಮ್ಯಾನೇಜ್‌ಮೆಂಟ್ ಸಿಸ್ಟಮ್ ಸಂಬಂಧಪಟ್ಟ ಮತಗಟ್ಟೆಯ ಎದುರಿಗೆ ಗುರುತು ಮಾಡತಕ್ಕದ್ದು.

## 10.12. ಮತದಾನ ಮುಕ್ತಾಯವಾದ ನಂತರ ಸಿಯು, ಬಿಯು ಮತ್ತು ವಿವಿಪ್ಯಾಟ್‌ಗಳ ಸ್ವೀಕೃತಿ

10.12.1. ಮತದಾನ ಮುಗಿದ ತರುವಾಯ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಸಮರ್ಪಕ ಬೆಂಗಾವಲಿನಲ್ಲಿ ತಂದು ಸ್ವೀಕಾರ ಕೇಂದ್ರಗಳಿಗೆ ಮರಳಿ ಒಪ್ಪಿಸತಕ್ಕದ್ದು. ಎಲ್ಲ ಔಪಚಾರಿಕ ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಿದ ನಂತರ, ನಿರ್ದಿಷ್ಟ ಮತಗಟ್ಟೆಯ ಕಂಟ್ರೋಲ್ ಯೂನಿಟ್(ಗಳು), ಬ್ಯಾಲೆಟಿಂಗ್ ಯೂನಿಟ್(ಗಳು) ಹಾಗೂ ವಿವಿಪ್ಯಾಟ್(ಗಳು)ಅನ್ನು ಅದೇ ಭದ್ರತಾ ಕೊಠಡಿಯಲ್ಲಿ ಇರಿಸತಕ್ಕದ್ದು ಹಾಗೂ ಅಭ್ಯರ್ಥಿಗಳ/ ಅವರ ಏಜೆಂಟರುಗಳ ಮತ್ತು ವೀಕ್ಷಕರ ಉಪಸ್ಥಿತಿಯಲ್ಲಿ ಆ ಕೊಠಡಿಗೆ ಮೊಹರನ್ನು ಹಾಕತಕ್ಕದ್ದು. ಬಳಸಿಲ್ಲದ ವಿವಿಪ್ಯಾಟ್‌ಗಳು ಹಾಗೂ ಬಳಸಿಲ್ಲದ ಇವಿಎಂಗಳನ್ನು ಪ್ರತ್ಯೇಕ ಭದ್ರತಾ ಕೊಠಡಿಯಲ್ಲಿಡತಕ್ಕದ್ದು.

## 10.13 ಮರುಮತದಾನಕ್ಕಾಗಿ ಬಳಸುವ ವಿದ್ಯುನ್ಮಾನ ಮತಯಂತ್ರಗಳು ಹಾಗೂ ವಿವಿಪ್ಯಾಟ್‌ಗಳು

10.13.1 ಮರು ಮತದಾನದ ಸಂದರ್ಭದಲ್ಲಿ, ಕಾಯ್ದಿರಿಸಿದ ಪಟ್ಟಿಯಿಂದ ಮರು ಮತದಾನಕ್ಕಾಗಿ ಅಗತ್ಯವಿರುವ ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್ ಅನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅಭ್ಯರ್ಥಿಗಳಿಗೆ/ ಏಜೆಂಟರುಗಳಿಗೆ ಕಂಟ್ರೋಲ್ ಯೂನಿಟ್‌ನ/ ಬ್ಯಾಲೆಟ್ ಯೂನಿಟ್‌ನ / ವಿವಿಪ್ಯಾಟ್‌ನ ಸಂಖ್ಯೆಯನ್ನು ಲಿಖಿತದಲ್ಲಿ ತಿಳಿಸತಕ್ಕದ್ದು. ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್(ಗಳು) ಹಾಗೂ ವಿವಿಪ್ಯಾಟ್‌ನ ಮೇಲಿರುವ ಅಡ್ರೆಸ್ ಟ್ಯಾಗ್‌ನಲ್ಲಿ, ಅದು ಮರು ಮತದಾನದಲ್ಲಿ ಬಳಸಬೇಕಾಗಿರುವ ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್ ಎಂಬುದನ್ನು ಮತ್ತು ಮರು ಮತದಾನದ ದಿನಾಂಕವನ್ನು ಮತ್ತು ಮತದಾನ ಕೇಂದ್ರದ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸಲಾಗಿದೆಯೆಂಬುದನ್ನು ಎಚ್ಚರಿಕೆಯಿಂದ ಖಚಿತಪಡಿಸಿ ಕೊಳ್ಳತಕ್ಕದ್ದು.

10.13.2 ಮರು ಮತದಾನದ ತರುವಾಯ, ಮರು ಮತದಾನಕ್ಕಾಗಿ ಬಳಸಿದ ವಿದ್ಯುನ್ಮಾನ ಮತಯಂತ್ರ ಮತ್ತು ವಿವಿಪ್ಯಾಟ್‌ಗಳನ್ನು ಸಂಗ್ರಹಿಸಿಡುವ ಸಲುವಾಗಿ ಭದ್ರತಾ ಕೊಠಡಿಯನ್ನು ಅಭ್ಯರ್ಥಿಗಳ/ ಅವರ ಏಜೆಂಟರುಗಳ ಮತ್ತು ವೀಕ್ಷಕರ ಉಪಸ್ಥಿತಿಯಲ್ಲಿ ಪುನಃ ತೆರೆಯತಕ್ಕದ್ದು. ಈ ಮರುಮತದಾನದ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು, ಮೂಲ ಮತದಾನದಲ್ಲಿ ಈ ಹಿಂದೆ ಬಳಸಲಾದಂಥ

ಸಂಬಂಧಪಟ್ಟ ಹಳೆಯ ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್‌ಗಳ ಜೊತೆಯಲ್ಲಿಯೇ ಇಡತಕ್ಕದ್ದು. ಸಂಬಂಧಪಟ್ಟ ಹಳೆಯ ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್‌ನ ಮೇಲೆ **"ಎಣಿಕೆ ಮಾಡಬೇಕಾಗಿಲ್ಲದುದು"** ಎಂಬ ಟ್ಯಾಗನ್ನು ಎದ್ದುಕಾಣುವಂತೆ ಹಾಕತಕ್ಕದ್ದು ಮತ್ತು ಹೊಸ ಮರುಮತದಾನದ ವಿದ್ಯುನ್ಮಾನ ಮತಯಂತ್ರದ ಹಾಗೂ ವಿವಿಪ್ಯಾಟ್‌ನ ಮೇಲೆ **"ಮರು ಮತದಾನದ ವಿದ್ಯುನ್ಮಾನ ಮತಯಂತ್ರ – ಎಣಿಕೆ ಮಾಡಬೇಕಾದುದು"** ಎಂಬ ಇನ್ನೊಂದು ಟ್ಯಾಗನ್ನು ಹಾಕತಕ್ಕದ್ದು. ರಿಟರ್ನಿಂಗ್ ಆಫೀಸರನು ಆ ಎಲ್ಲಾ ಟ್ಯಾಗುಗಳ ಮೇಲೆ ಸಹಿಯನ್ನು ಮಾಡತಕ್ಕದ್ದು.

10.13.3 ಮರು ಮತದಾನದ ಸಂದರ್ಭದಲ್ಲಿ, ಮರು ಮತದಾನದಲ್ಲಿ ಬಳಸಿದ ಕಂಟ್ರೋಲ್ ಯುನಿಟ್, ಬ್ಯಾಲೆಟ್ ಯುನಿಟ್(ಗಳು) ಹಾಗೂ ವಿವಿಪ್ಯಾಟ್‌ನ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಇವಿಎಂ ಮ್ಯಾನೇಜ್‌ಮೆಂಟ್ ಸಿಸ್ಟಂ (ಇಎಂಎಸ್) ನಮೂದಿಸತಕ್ಕದ್ದು.

## 10.14. ರಾಜಕೀಯ ಪಕ್ಷಗಳು/ ಅಭ್ಯರ್ಥಿಗಳೊಂದಿಗೆ ಸಂವಹನ

10.14.1. ರಾಜಕೀಯ ಪಕ್ಷಗಳು/ ಅಭ್ಯರ್ಥಿಗಳು ತಮ್ಮ ಎಣಿಕೆ ಏಜೆಂಟರಿಗೆ ಸೂಕ್ತ ತರಬೇತಿಯನ್ನು ನೀಡಿರಬೇಕೆಂದು ಮತ್ತು ಮತದಾನ ಕೇಂದ್ರದಲ್ಲಿ ಬಳಸಿದ ಇವಿಎಂ ಮತ್ತು ವಿವಿಪ್ಯಾಟ್‌ಗಳ ಸಂಖ್ಯೆಯನ್ನು ಸೂಚಿಸುವಂಥ ಮತ್ತು ಮತದಾನ ಮುಕ್ತಾಯವಾದಾಗ ಪ್ರಿಸೈಡಿಂಗ್ ಆಫೀಸರನು ನೀಡಿದಂಥ ನಮೂನೆ 17ಸಿಯಲ್ಲಿನ ತಮ್ಮ ಪ್ರತಿಗಳನ್ನು ಎಣಿಕೆ ಏಜೆಂಟರು (ತಾಳೆ ನೋಡುವ ಉದ್ದೇಶಕ್ಕಾಗಿ) ತೆಗೆದುಕೊಂಡು ಬಂದಿರಬೇಕೆಂದು ರಾಜಕೀಯ ಪಕ್ಷಗಳಿಗೆ/ ಅಭ್ಯರ್ಥಿಗಳಿಗೆ ಲಿಖಿತದಲ್ಲಿ ಸಲಹೆ ನೀಡಬೇಕು. ಅಲ್ಲದೆ, ಮತದಾನದ ಸಂದರ್ಭದಲ್ಲಿ ಬಳಸಿದ ಕಂಟ್ರೋಲ್ ಯೂನಿಟ್(ಗಳು) ಹಾಗೂ ವಿವಿಪ್ಯಾಟ್‌ಗಳ ಮತದಾನ ಕೇಂದ್ರವಾರು ಪಟ್ಟಿಯ ಕ್ರೋಡೀಕರಿಸಿದ ಪಟ್ಟಿಯನ್ನು ಸಹ ಅಭ್ಯರ್ಥಿಗಳಿಗೆ ನೀಡಲಾಗಿರುತ್ತದೆ. ಇದರ ಜೊತೆಗೆ ಬದಲಿಯಾಗಿ ಬಳಸಲಾದ ಕಂಟ್ರೋಲ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳು ಮರುಮತದಾನದಲ್ಲಿ ಬಳಸಲಾದ ಕಂಟ್ರೋಲ್ ಯೂನಿಟ್‌ಗಳ ಯಂತ್ರ ಸಂಖ್ಯೆಗಳಿಗೆ ಸಂಬಂಧಿಸಿದಂತೆ, ರಿಟರ್ನಿಂಗ್ ಆಫೀಸರನು ಅಭ್ಯರ್ಥಿಗಳಿಗೆ ಲಿಖಿತದಲ್ಲಿ ನೀಡುವ ಹೆಚ್ಚುವರಿ ಮಾಹಿತಿಯಿಂದ ಮತದಾನ ಕೇಂದ್ರಗಳಲ್ಲಿ ಬಳಸಿದ ಎಲ್ಲ ವಿದ್ಯುನ್ಮಾನ ಮತಯಂತ್ರಗಳ ಸಂಪೂರ್ಣ ಚಿತ್ರಣವನ್ನು ನೀಡಿದಂತಾಗುವುದು. ಈ ಬಗ್ಗೆ ಮತ್ತಷ್ಟು ಅನುಕೂಲ ಕಲ್ಪಿಸುವ ದೃಷ್ಟಿಯಿಂದ, ರಿಟರ್ನಿಂಗ್ ಅಧಿಕಾರಿಯು, ಮತದಾನ ಕೇಂದ್ರವಾರು ಬಳಸಿದ ವಿದ್ಯುನ್ಮಾನ ಮತಯಂತ್ರದ ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ಸಂಖ್ಯೆಗಳನ್ನು ಸೂಚಿಸುವ, ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್‌ಗಳ ಬಳಕೆಯ ಲೆಕ್ಕ ವಿವರವನ್ನು ಸಂಬಂಧಪಟ್ಟ ಎಣಿಕೆ ಕೇಂದ್ರದಲ್ಲಿಯೇ ಎಲ್ಲರಿಗೂ ಕಾಣುವ ಹಾಗೆ ಅಂಟಿಸತಕ್ಕದ್ದು.

10.14.2. ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಮತ್ತು ಸಂಬಂಧಿಸಿದ ಎಲ್ಲರ, ಎಂದರೆ, ರಾಜಕೀಯ ಪಕ್ಷಗಳ, ಸ್ಪರ್ಧಿಸಿರುವ ಅಭ್ಯರ್ಥಿಗಳ, ಸಂಬಂಧಪಟ್ಟ ಎಲ್ಲ ಕ್ಷೇತ್ರ ಅಧಿಕಾರಿಗಳ ಮತ್ತು ವೀಕ್ಷಕರುಗಳ ಗಮನಕ್ಕೆ ತರತಕ್ಕದ್ದು (ಮತ ಯಂತ್ರಗಳ ಮತ್ತು ವಿವಿಪ್ಯಾಟ್‌ಗಳ ಸಿದ್ಧಪಡಿಸುವಿಕೆಗೆ ಸಂಬಂಧಿಸಿದ ಸೂಚನೆಗಳನ್ನು ಆಯೋಗವು ತನ್ನ ಪತ್ರ ಸಂಖ್ಯೆ : ಇಸಿಐ 51/87/2007–ಇಎಂಎಸ್ ದಿನಾಂಕ 12.10.2007, 51/87/2010 – ಪಿಎಲ್‌ಎನ್ –IV, ದಿನಾಂಕ: 23.09.2010), ಸೂಚನೆಗಳಲ್ಲಿ ನೀಡಿದೆ. ಮತ ದಾಖಲಿಸಿದ ಯಂತ್ರಗಳನ್ನು ಕನಿಷ್ಠ ಒಂದು ಪ್ಲಾಟೂನ್‌ನ ಬಲದೊಂದಿಗೆ ಭದ್ರತಾ ಕೊಠಡಿಯಲ್ಲಿ ಇಡತಕ್ಕದ್ದು.

## 10.15. ಸನ್ನಿವೇಶಗಳನ್ನು ವಿಡಿಯೋಗ್ರಾಫ್ ಮಾಡುವುದು

10.15.1. ಮೇಲೆ ಹೇಳಲಾದ ಎಲ್ಲ ಹಂತಗಳನ್ನು ಪೂರ್ಣಪ್ರಮಾಣದಲ್ಲಿ ವಿಡಿಯೋಗ್ರಾಫ್ ಮಾಡತಕ್ಕದ್ದು ಮತ್ತು ದಾಖಲೆಗಳನ್ನು ಸರಿಯಾಗಿ ಇಡತಕ್ಕದ್ದು.

## 10.16. ಮತ ಯಂತ್ರಗಳ ಸಿದ್ಧತೆಯ ದಿನಾಂಕ ಮತ್ತು ಸಮಯದ ಬಗ್ಗೆ ಅಭ್ಯರ್ಥಿಗಳಿಗೆ ನೋಟೀಸು.

10.16.1. ಜಿಲ್ಲಾ ಚುನಾವಣಾ ಅಧಿಕಾರಿ/ ರಿಟರ್ನಿಂಗ್ ಅಧಿಕಾರಿಯು ಮತ ಯಂತ್ರಗಳ ಸಿದ್ಧತಾ ಕಾರ್ಯವನ್ನು ಕೈಗೊಳ್ಳುವ ದಿನಾಂಕಕ್ಕೆ ಕನಿಷ್ಠಪಕ್ಷ ಒಂದು ವಾರಕ್ಕೂ ಮುಂಚಿತವಾಗಿ, ಯಂತ್ರಗಳನ್ನು ಸಿದ್ಧಪಡಿಸುವ ಸ್ಥಳ ಅಥವಾ ಸ್ಥಳಗಳನ್ನು ಮತ್ತು ಅಂಥ ಸಿದ್ಧತೆಯನ್ನು ಪ್ರಾರಂಭಿಸುವ ದಿನಾಂಕ ಮತ್ತು ಸಮಯವನ್ನು ಸೂಚಿಸಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು/ ಪ್ರತಿಯೊಬ್ಬ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನಿಗೆ ಲಿಖಿತ ನೋಟೀಸನ್ನು ನೀಡುವುದು. ಮಾನ್ಯತೆ ಪಡೆದ ಪ್ರತಿಯೊಂದು ರಾಜಕೀಯ ಪಕ್ಷ/ ಅಭ್ಯರ್ಥಿಯು ಈ ಹಿಂದೆ ಹೇಳಿದ ಸ್ಥಳ ಅಥವಾ ಸ್ಥಳಗಳಿಗೆ ತಮ್ಮೊಂದಿಗೆ ಕರೆತರಲು ಅನುಮತಿಸಲಾಗಿರುವ ಪ್ರತಿನಿಧಿಗಳ ಸಂಖ್ಯೆಯನ್ನು ಸಹ ರಿಟರ್ನಿಂಗ್ ಅಧಿಕಾರಿಗೆ ತಿಳಿಸುವುದು. ಇದು ಬಳಕೆಗೆ ಸಿದ್ಧಪಡಿಸಬೇಕಿರುವ ಯಂತ್ರಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ವೀಕ್ಷಕರ ಉಪಸ್ಥಿತಿಯಲ್ಲಿ ಮಾಡಲಾದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಿದ್ಧತೆಯ ಇಡೀ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣ ಮಾಡತಕ್ಕದ್ದು.

10.16.2. ಯಾವುದೇ ಕಾರಣಕ್ಕಾಗಿ, ಅವರಿಗೆ ಕಳುಹಿಸಿರುವ ನೋಟೀಸಿನಲ್ಲಿ ನೀಡಲಾಗಿರುವ ದಿನಾಂಕ ಮತ್ತು ಸಮಯದಂದು ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಹಾಜರಿರದಿದ್ದರೆ, ಇವಿಎಂ

ಮತ್ತು ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವ ಕಾರ್ಯಾಚರಣೆಯನ್ನು ಮುಂದೂಡುವಂತಿಲ್ಲ ಎಂದು ರಿಟರ್ನಿಂಗ್ ಅಧಿಕಾರಿಗೆ ಸೂಚಿಸಲಾಗಿದೆ. ಯಾರೇ ಅಭ್ಯರ್ಥಿ ಅಥವಾ ಏಜೆಂಟ್ ಹಾಜರಿರದಿದ್ದರೂ ಕೂಡ ಅವರು ತಮ್ಮ ಕಾರ್ಯವನ್ನು ಮುಂದುವರಿಸುವುದು. ಆದಾಗ್ಯೂ, ಸಿದ್ಧತೆಯನ್ನು ಪ್ರಾರಂಭಿಸುವ ಮುನ್ನ ಕಟ್ಟಡದಲ್ಲಿ ಅಳವಡಿಸಿರುವ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುವ ವ್ಯವಸ್ಥೆಯಿಂದ ಪ್ರಕಟಣೆಗಳನ್ನು ನೀಡತಕ್ಕದ್ದು. ಯಾರೇ ಅಭ್ಯರ್ಥಿ/ ಆತನ ಚುನಾವಣಾ ಏಜೆಂಟ್ ಅಥವಾ ಲಿಖಿತದಲ್ಲಿ ಅಭ್ಯರ್ಥಿಯು ಯುಕ್ತವಾಗಿ ಅಧಿಕೃತಗೊಳಿಸಿರುವ ವ್ಯಕ್ತಿ ತಡವಾಗಿ ಬಂದಲ್ಲಿ, ಆತನಿಗೆ ಅಲ್ಲಿಂದ ಮುಂದುವರೆಯುವ ಆ ಪ್ರಕ್ರಿಯೆಯನ್ನು ವೀಕ್ಷಿಸಲು ಅವಕಾಶ ನೀಡತಕ್ಕದ್ದು.

10.16.3. ಅಭ್ಯರ್ಥಿಗಳು ಮತ್ತು ಅವರ ಏಜೆಂಟರು ಹಾಜರಿರುವಾಗ, ಜಿಲ್ಲಾ ಚುನಾವಣಾ ಅಧಿಕಾರಿ/ ರಿಟರ್ನಿಂಗ್ ಅಧಿಕಾರಿಯು ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಧಪಟ್ಟಂತೆ ತಾವು ಅನುಸರಿಸಬೇಕಿರುವ ಕಾರ್ಯವಿಧಾನವನ್ನು ಅವರಿಗೆ ವಿವರಿಸತಕ್ಕದ್ದು. ಜಿಲ್ಲಾ ಚುನಾವಣಾಧಿಕಾರಿ / ರಿಟರ್ನಿಂಗ್ ಅಧಿಕಾರಿಯು ಸಿದ್ಧತಾ ಪ್ರಕ್ರಿಯೆಯ ಅವಧಿಯಲ್ಲಿ ಕಂಟ್ರೋಲ್ ಯುನಿಟ್‌ಗಳು ಮತ್ತು ಬ್ಯಾಲೆಟ್ ಯುನಿಟ್‌ಗಳನ್ನು ಪರಿಶೀಲಿಸಲು ಅವರಿಗೆ ಅವಕಾಶ ಕಲ್ಪಿಸಿಕೊಡಬಹುದು.

## 10.17 ಬ್ಯಾಲೆಟ್ ಯೂನಿಟ್‌ನ ಸಿದ್ಧತೆ

10.17.1. ಪ್ರತಿಯೊಂದು ಬ್ಯಾಲೆಟ್ ಯುನಿಟ್‌ನ್ನು ಈ ಮುಂದಿನಂತೆ ರೀತಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳ ಹಂತದಲ್ಲಿಯೆ ಸಿದ್ಧಪಡಿಸಬೇಕಾಗುತ್ತದೆ:–

(ಎ) ಆ ಉದ್ದೇಶಕ್ಕಾಗಿ ಕಲ್ಪಿಸಲಾಗಿರುವ ಸ್ಥಳಾವಕಾಶದಲ್ಲಿ ಮತಪತ್ರವನ್ನು ಸೇರಿಸುವುದು ಮತ್ತು ನಿಗದಿಪಡಿಸುವುದು;

(ಬಿ) ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಆಧರಿಸಿ ಬಳಕೆಗೆ ಅಗತ್ಯವಿರದ ಅಭ್ಯರ್ಥಿಗಳ ಬಟನ್‌ಗಳನ್ನು ಮರೆಮಾಚುವುದು;

(ಸಿ) ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಮತ್ತು ಪ್ರತಿಯೊಂದು ಘಟಕದಲ್ಲಿ ಬಳಸಬೇಕಿರುವ ಅನುಕ್ರಮಣಿಕೆಗೆ ಅನುಸಾರವಾಗಿ ಬಳಸಬೇಕಾಗಿರುವಂಥ ಸಂಖ್ಯೆಗೆ ಅನುಗುಣವಾಗಿ ಸಮುಚಿತ ಸ್ಥಾನ ಎಂದರೆ 1, 2, 3 ಅಥವಾ ಸಂದರ್ಭಾನುಸಾರ 4 (ಅಥವಾ ಎಂ3 ಇವಿಎಂನಲ್ಲಿ 01, 02,...... 24) ರಲ್ಲಿ ಸ್ಲೈಡ್ ಸ್ವಿಚನ್ನು (ಎಂ3 ಇವಿಎಂನಲ್ಲಿರುವ ಥಂಬ್‌ವೀಲ್ ಸ್ವಿಚ್) ಸೆಟ್ ಮಾಡುವುದು; ಮತ್ತು

(ಡ) ಬಿಯು ಅನ್ನು ಮೊಹರು ಮಾಡುವುದಕ್ಕಾಗಿ ನೀಡಿರುವ ಪ್ರಕ್ರಿಯೆಯ ಅನುಸಾರವೇ ಈ ಘಟಕವನ್ನು ಮೊಹರು ಮಾಡುವುದು.

## 10.18. ಮತ ಪತ್ರವನ್ನು ಅಳವಡಿಸುವುದು

10.18.1. ಪ್ರತಿಯೊಂದು ಬ್ಯಾಲೆಟ್ ಯೂನಿಟ್‌ನ ಮೇಲೆ ಪಾರದರ್ಶಕ ಅಕ್ರಿಲಿಕ್ ಶೀಟ್ (ಮತ ಪತ್ರದ ಪರದೆ) ನ ಅಡಿ ಆ ಉದ್ದೇಶಕ್ಕಾಗಿ ವಿಶೇಷವಾಗಿ ಒದಗಿಸಿರುವ ಸ್ಥಳಾವಕಾಶದಲ್ಲಿ ಒಂದು ಮುದ್ರಿತ ಮತ ಪತ್ರವನ್ನು ಪ್ರದರ್ಶಿಸತಕ್ಕದ್ದು. ಮತ ಪತ್ರವು ಪ್ರತಿಯೊಬ್ಬ ಅಭ್ಯರ್ಥಿಯ ಕ್ರಮಸಂಖ್ಯೆ, ಆತನ ಹೆಸರು ಮತ್ತು ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಾರ ಅವರಿಗೆ ಹಂಚಿಕೆ ಮಾಡಿರುವ ಚುನಾವಣಾ ಚಿಹ್ನೆಯನ್ನು ಒಳಗೊಂಡಿರತಕ್ಕದ್ದು. ಪ್ರತಿಯೊಂದು ಬ್ಯಾಲೆಟ್ ಯೂನಿಟ್‌ನಲ್ಲಿ ಹದಿನಾರು ಅಭ್ಯರ್ಥಿಗಳಿಗೆ ಮಾತ್ರವೇ ಅವಕಾಶ ಕಲ್ಪಿಸಲಾಗಿರುವುದರಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯು ಹದಿನಾರನ್ನು ಮೀರಿದ (ನೋಟಾ ಒಳಗೊಂಡಂತೆ) ಸಂದರ್ಭದಲ್ಲಿ ಮತಪತ್ರವನ್ನು ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಶೀಟ್‌ಗಳಲ್ಲಿ ಮುದ್ರಿಸತಕ್ಕದ್ದು. ಅಭ್ಯಥಿಗಳ ಸಂಖ್ಯೆಯು ಹದಿನಾರನ್ನು ಮೀರಿದ್ದು (ನೋಟಾ ಒಳಗೊಂಡಂತೆ) ಆದರೆ ಮೂವತ್ತೆರಡಕ್ಕೆ ಸಮನಾಗಿದ್ದರೆ ಅಥವಾ ಅದಕ್ಕಿಂತ ಕಡಿಮೆ ಇದ್ದರೆ ಒಂದು ಮತ ಪತ್ರವನ್ನು ಎರಡು ಹಾಳೆಗಳಲ್ಲಿ ಮುದ್ರಿಸತಕ್ಕದ್ದು. ಮೊದಲ ಹಾಳೆಯು ಕ್ರಮ ಸಂಖ್ಯೆ 1 ರಿಂದ 16 ರವರೆಗಿನ ಅಭ್ಯರ್ಥಿಗಳ ಹೆಸರುಗಳು, ಮೊದಲಾದವನ್ನು ಒಳಗೊಂಡಿದ್ದರೆ, ಎರಡನೇ ಹಾಳೆಯು ಕ್ರಮ ಸಂಖ್ಯೆ 17ರ ತರುವಾಯದ ಅಭ್ಯರ್ಥಿಗಳ ಹೆಸರುಗಳು, ಮೊದಲಾದವನ್ನು ಒಳಗೊಂಡಿರಬೇಕು. ಅಂತೆಯೇ ಅಭ್ಯರ್ಥಿಗಳ ಸಂಖ್ಯೆಯು ಮೂವತ್ತೆರಡನ್ನೂ ಮೀರಿ ನಲವತ್ತೆಂಟರವರೆಗೆ (ನೋಟಾ ಒಳಗೊಂಡಂತೆ) ಇದ್ದಲ್ಲಿ, ಮೂರನೇ ಹಾಳೆಯು ಕ್ರಮಸಂಖ್ಯೆ 33 ಕ್ಕೂ ಮೇಲ್ಪಟ್ಟ ಮತ್ತು 48 ರ ವರೆಗಿನ ಅಭ್ಯರ್ಥಿಗಳ ಹೆಸರುಗಳು, ಮೊದಲಾದವನ್ನು ಒಳಗೊಂಡಿರತಕ್ಕದ್ದು, ಮತ್ತು ಅಭ್ಯರ್ಥಿಗಳ ಸಂಖ್ಯೆ ನಲವತ್ತೆಂಟನ್ನು ಮೀರಿದಲ್ಲಿ (ನೋಟಾ ಒಳಗೊಂಡಂತೆ) ನಾಲ್ಕನೇ ಹಾಳೆಯು ಕ್ರಮ ಸಂಖ್ಯೆ 49 ಕ್ಕೂ ಮೇಲ್ಪಟ್ಟ ಅಭ್ಯರ್ಥಿಗಳ ಹೆಸರುಗಳು, ಮೊದಲಾದವನ್ನು ಒಳಗೊಂಡಿರತಕ್ಕದ್ದು. ಟ್ರಾನ್ಸ್‌ಪರೆಂಟ್ ಆಕ್ರಿಲಿಕ್ ಶೀಟಿನಲ್ಲಿ (ಬ್ಯಾಲೆಟ್ ಪೇಪರ್ ಸ್ಕ್ರೀನ್) ಬ್ಯಾಲೆಟಿಂಗ್ ಯೂನಿಟ್‌ನ ಮೇಲೆ ಬ್ಯಾಲೆಟ್ ಪೇಪರ್ ಅನ್ನು ಅಳವಡಿಸುವುದಕ್ಕಾಗಿ ಒಂದು ವ್ಯವಸ್ಥೆ ಇದೆ. ಬ್ಯಾಲೆಟ್ ಪೇಪರ್ ಅನ್ನು ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಅಳವಡಿಸುವುದಕ್ಕೂ ಮುಂಚೆ ಪ್ರತಿಯೊಂದು ಬ್ಯಾಲೆಟ್ ಪೇಪರ್‌ನ ಹಿಂಭಾಗದ ಮೇಲೆ ರಿಟರ್ನಿಂಗ್ ಅಧಿಕಾರಿಗಳು ತಮ್ಮ ಸಹಿಯನ್ನು ಮಾಡತಕ್ಕದ್ದು/ ಹಸ್ತಾಕ್ಷರದ ಪಡಿಯಚ್ಚನ್ನು ಅಂಟಿಸತಕ್ಕದ್ದು.

10.18.2. ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಹಾಳೆಯಲ್ಲಿ ಮುದ್ರಿಸಿರುವ ಪ್ರತಿಯೊಂದು ಮತಪತ್ರವೂ ಕ್ರಮ ಸಂಖ್ಯೆ ಮತ್ತು ಹಾಳೆ ಸಂಖ್ಯೆಯನ್ನು ಹೊಂದಿರತಕ್ಕದ್ದು. ಮೊದಲ ಹಾಳೆಯಾದರೆ 1/2 ಮತ್ತು ಎರಡು ಹಾಳೆಗಳನ್ನು ಬಳಸಿದ್ದರೆ 3/4 ಮೂರನೇ ಹಾಳೆ ಮತ್ತು ನಾಲ್ಕನೇ ಹಾಳೆಗಳನ್ನು ಬಳಸಲಾಗಿದ್ದರೆ ಹಾಗೇ ಮುಂದುವರಿದು ಸೂಚಿಸುತ್ತಾ ಹೋಗುವುದು. ಇದನ್ನು ಬ್ಯಾಲೆಟ್ ಯೂನಿಟ್‌ನಲ್ಲಿ ಸೇರಿಸಿ ಅಳವಡಿಸುವ ಮೊದಲು ಅದರ ಹಿಂದೆ ರಿಟರ್ನಿಂಗ್ ಅಧಿಕಾರಿಯು ಸಹಿ ಮಾಡಿರತಕ್ಕದ್ದು ಅಥವಾ ರಿಟರ್ನಿಂಗ್ ಅಧಿಕಾರಿಯ ಪಡಿಯಚ್ಚು ಸಹಿಯನ್ನು ಹೊಂದಿರುವ ರಬ್ಬರ್ ಸ್ಟಾಂಪ್‌ನಿಂದ ಸ್ಟ್ಯಾಂಪು ಮುದ್ರೆಯನ್ನು ಹಾಕತಕ್ಕದ್ದು.

10.18.3. ಮತಪತ್ರದ ಪರದೆಯಡಿ ಮತಪತ್ರವನ್ನು ಅಳವಡಿಸುವುದಕ್ಕೆ ಮೊದಲು ಬ್ಯಾಲೆಟ್ ಯೂನಿಟ್‌ನ ಮೇಲ್ಭಾಗವನ್ನು ತೆರೆಯಬೇಕು. ಘಟಕದ ಬಲತುದಿಯ ಮೇಲ್ಭಾಗ ಮತ್ತು ಕೆಳಭಾಗದಲ್ಲಿರುವ ಲ್ಯಾಚ್‌ಗಳನ್ನು ಬಲಗಡೆಗೆ ಏಕಕಾಲಕ್ಕೆ ಒತ್ತಿ ಕವರನ್ನು ಜಗ್ಗುವ ಮೂಲಕ ತೆರೆಯಬಹುದು. ಆಗ ಬ್ಯಾಲೆಟ್ ಯೂನಿಟ್‌ನ ಮೇಲಿನ ಕವರ್ ಹಾಗೂ ಕೆಳಭಾಗವು ಪುಸ್ತಕದಂತೆ ತೆರೆದುಕೊಳ್ಳುವುದು. ತದನಂತರ ಎಡ ಭಾಗದ ತುತ್ತ ತುದಿಯಲ್ಲಿರುವ ಮೇಲ್ಭಾಗದ ಕವರಿಗೆ ಅಂಟಿಸಿರುವ ಮತ ಪತ್ರದ ಪರದೆಯನ್ನು ತೆರೆಯವುದು. ಪರದೆಯ ಬಿಡುಗಡೆ ಲ್ಯಾಚ್‌ಗಳು ಮೇಲ್ಭಾಗದ ಒಳಗಿರುತ್ತವೆ. ಮೊದಲು ಸ್ವಲ್ಪ ಬಲಗಡೆಗೆ ಲ್ಯಾಚ್‌ಗಳನ್ನು ಒಂದೇ ಬಾರಿಗೆ ಒತ್ತಿ ಮತ್ತು ನಂತರ ಅವುಗಳನ್ನು ಕೆಳಗಭಿಮುಖವಾಗಿ ತಳ್ಳಿದಲ್ಲಿ ಮತ ಪತ್ರದ ಪರದೆಯು ಮೇಲಿರುವ ಕವರಿನ ಮೇಲ್ಭಾಗದಲ್ಲಿ ತೆರೆಯುವುದಕ್ಕೆ ಸರಾಗವಾಗುತ್ತದೆ. ಮತ ಪತ್ರದ ಪರದೆಯನ್ನು ಹಾಗೆ ತೆರೆದ ತರುವಾಯ ಬ್ಯಾಲೆಟ್ ಯುನಿಟ್‌ನ ಮೇಲ್ಭಾಗದಲ್ಲಿರುವ ಕವರಿನ ಮೇಲ್ಭಾಗದ ಆ ಉದ್ದೇಶಕ್ಕಾಗಿ ಒದಗಿಸಲಾಗಿರುವ ಸ್ಥಳಾವಕಾಶದಲ್ಲಿ ಮತ ಪತ್ರವನ್ನು ಇರಿಸುವುದು. ಮತಪತ್ರವನ್ನು ಸರಿಯಾಗಿ ಜೋಡಿಸುವುದರಿಂದ ಪ್ರತಿಯೊಬ್ಬ ಅಭ್ಯರ್ಥಿಯ ಹೆಸರು ಮತ್ತು ಆತನ ಚಿಹ್ನೆಯು ಸಂವಾದಿ ದೀಪ ಮತ್ತು ಬಟನ್‌ಗೆ ಹೊಂದಿಕೊಳ್ಳುವುದಲ್ಲದೆ ಮತ ಪತ್ರದಲ್ಲಿರುವ ಅಭ್ಯರ್ಥಿಗಳ ಹೆಸರುಗಳ ಪಟ್ಟಿಗಳನ್ನು ವಿಭಜಿಸುವ ದಪ್ಪನೆಯ ಗೆರೆಗಳು ಬ್ಯಾಲ್‌ಟ್ ಯೂನಿಟ್‌ಗಳ ಮೇಲಿರುವ ಸಂವಾದಿ ಸ್ಥಳಗಳಿಗೆ ಅನುಗುಣವಾಗಿ ಜೋಡಣೆಯಾಗುತ್ತವೆ.

10.18.4. ಮತ ಪತ್ರವನ್ನು ಭದ್ರವಾಗಿ ಅಳವಡಿಸಿ ಮತ ಪತ್ರದ ಪರದೆಯನ್ನು ಕ್ಲೋಸ್ ಮಾಡಿ ಮೇಲ್ಭಾಗದಲ್ಲಿರುವ ಕವರಿನ ಮೇಲ್ಭಾಗವನ್ನು ಒತ್ತಿ ಹಿಡಿದರೆ, ಪರದೆಯ ಒಳ ಭಾಗದಲ್ಲಿ ಆ ಉದ್ದೇಶಕ್ಕಾಗಿ ವಿಶೇಷವಾಗಿ ಒದಗಿಸಿರುವ ಪರದೆಯಲ್ಲಿರುವ ಎರಡು ರಂದ್ರಗಳ ಮುಖಾಂತರ ದಾರವನ್ನು ತೂರಿಸುವ ಮೂಲಕ ಮೇಲ್ಭಾಗದ ಕವರಿನ ಒಳ ಭಾಗವನ್ನು ಮೊಹರು

ಮಾಡುವುದು. ದಾರದ ಎರಡು ತುದಿಗಳನ್ನು ಅಡ್ರೆಸ್ ಟ್ಯಾಗ್ ಮೇಲಿಟ್ಟು ರಿಟರ್ನಿಂಗ್ ಅಧಿಕಾರಿಯು ದಾರ ಮತ್ತು ಅಡ್ರೆಸ್ ಟ್ಯಾಗ್‌ನ ಮೇಲೆ ತನ್ನ ಮೊಹರನ್ನು ಹಾಕುವುದು.

## 10.19. ಉಪಯೋಗಿಸದಿರುವಂತಹ ಅಭ್ಯರ್ಥಿಗಳ ಬಟನ್‌ಗಳನ್ನು ಮರೆ ಮಾಚುವುದು

10.19.1. ಬ್ಯಾಲೆಟ್ ಯೂನಿಟ್‌ನಲ್ಲಿ, ಮತದಾರರು ಉಪಯೋಗಿಸಬಹುದಾದಂಥ ಅಭ್ಯರ್ಥಿಗಳ ಬಟನ್‌ಗಳು ಮಾತ್ರವೇ ಕಾಣುವಂತಿರತಕ್ಕದ್ದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಕಾಣುವ ಅಭ್ಯರ್ಥಿಗಳ ಸಂಖ್ಯೆಯ ಬಟನ್‌ಗಳು ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಗೆ ಸಮನಾಗಿರುವುದು, ನೋಟಾಗಾಗಿ ಒಂದು ಪ್ಯಾನೆಲ್. ಉದಾಹರಣೆಗೆ, ಅಭ್ಯರ್ಥಿಗಳ ಸಂಖ್ಯೆ ಒಂಬತ್ತಿದ್ದರೆ, ಮೇಲಿನ ಒಂಬತ್ತು ಎಂದರೆ, 1 ರಿಂದ 10 ರ ವರೆಗಿನ ಬಟನ್‌ಗಳು ಮಾತ್ರವೇ ಕಾಣುವಂತಿದ್ದು ಉಳಿದ ಏಳು (ಎಂದರೆ, 11 ರಿಂದ 16 ರ ವರೆಗಿನ) ಬಟನ್‌ಗಳನ್ನು ಮರೆಮಾಚಿರಬೇಕು. ಈ ಮೇಲೆ ವಿವರಿಸಿರುವಂತೆ ಬ್ಯಾಲೆಟ್ ಯೂನಿಟ್ ಪುಸ್ತಕದಂತೆ ತೆರೆದಿರುವಾಗಲೇ, ಅಭ್ಯರ್ಥಿಗಳ ಸಂಖ್ಯೆಯ ಬಟನ್‌ಗಳಿಗೆ ಬಿಳಿ ಮಾಸ್ಕಿಂಗ್ ಟ್ಯಾಬ್‌ಗಳನ್ನು ಸರಿಸಿ ಬೇಡದ ಬಟನ್‌ಗಳನ್ನು ಮರೆಮಾಚುವುದು. ಮರೆ ಮಾಚದ ಬಟನ್‌ಗಳ ಬಣ್ಣವು ನೀಲಿಯಾದರೆ ಮತ್ತು ಮರೆಮಾಚಿದ ಬಟನ್‌ಗಳ ಬಣ್ಣದ ಬಿಳಿಯಾಗಿರುತ್ತದೆ.

## 10.20. ಎಂ2 ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಸ್ಲೈಡ್ ಸ್ವಿಚ್ ಅನ್ನು ಸೆಟ್ ಮಾಡುವುದು.

10.20.1 ಎಂ2 ಬ್ಯಾಲೆಟ್ ಯೂನಿಟ್‌ನ ಒಳಗೆ, ಮೇಲಿನ ಬಲ ಭಾಗದಲ್ಲಿ, ಸ್ಲೈಡ್ ಸ್ವಿಚ್ ಇದ್ದು, ಅದು 1,2,3, ಮತ್ತು 4 ಹೀಗೆ ನಾಲ್ಕು ಸ್ಥಿತಿಗಳನ್ನು ಹೊಂದಿದೆ. ಸ್ಲೈಡ್ ಸ್ವಿಚ್‌ನ ಸ್ಥಾನವು ಒಂದು ನಿರ್ದಿಷ್ಟ ಬ್ಯಾಲೆಟ್ ಯೂನಿಟ್‌ನ್ನು ಕಂಟ್ರೋಲ್ ಯುನಿಟ್‌ನೊಂದಿಗೆ ಸಂಪರ್ಕ ಕಲ್ಪಿಸಬೇಕಿರುವ ಮತ್ತು ಮತದಾನ ಕೇಂದ್ರದ ಉಪಯೋಗಕ್ಕಾಗಿ ಮತದಾನ ವಿಭಾಗದೊಳಗೆ (Voting Compartment) ಇಡಬೇಕಿರುವ ಕ್ರಮಸಂಖ್ಯೆಯನ್ನು ನಿರ್ಧರಿಸುತ್ತದೆ.

10.20.2.ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯು ಹದಿನೈದರವರೆಗೆ ಇರುವಲ್ಲಿ, ನೋಟಾ ಆಯ್ಕೆಯು ಹದಿನಾರನೇ ಸ್ಥಾನದಲ್ಲಿ ಇರುವುದರಿಂದ ಒಂದು ಬ್ಯಾಲೆಟ್ ಯೂನಿಟ್‌ಅನ್ನು ಮಾತ್ರ ಬಳಸಲಾಗುತ್ತದೆ. ಅಂಥ ಸಂದರ್ಭದಲ್ಲಿ, ಸ್ಲೈಡ್ ಸ್ವಿಚ್ ಅನ್ನು 1 ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡತಕ್ಕದ್ದು. ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯು ಹದಿನೈದಕ್ಕಿಂತ ಹೆಚ್ಚಿದ್ದು ಮತ್ತು ಮೂವತ್ತೊಂದರವರೆಗೆ ಇರುವಲ್ಲಿ, ಎರಡು ಬ್ಯಾಲೆಟ್ ಯೂನಿಟ್‌ಗಳನ್ನು ಬಳಸಲಾಗುತ್ತದೆ. ಕ್ರಮಸಂಖ್ಯೆ 1ರಿಂದ 16ರವರೆಗೆ ಉಮೇದುವಾರರ ಹೆಸರುಗಳನ್ನು ಒಳಗೊಂಡಿರುವ

ಮತಪತ್ರಗಳನ್ನು ಅಳವಡಿಸಿರುವ ಮೊದಲನೇ ಬ್ಯಾಲೆಟ್ ಯೂನಿಟ್‌ನಲ್ಲಿ ಸ್ಲೈಡ್ ಸ್ವಿಚ್ ಅನ್ನು '1' ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡಬೇಕು ಮತ್ತು 17ರಿಂದ ಮುಂದಿನ ಉಮೇದುವಾರರ ಹೆಸರುಗಳನ್ನೊಳಗೊಂಡಿರುವ ಮತಪತ್ರಗಳನ್ನು ಅಳವಡಿಸಿರುವ ಎರಡನೇ ಬ್ಯಾಲೆಟ್ ಯೂನಿಟ್‌ನಲ್ಲಿ '2'ನೇ ಸ್ಥಾನಕ್ಕೆ ಸೆಟ್ ಮಾಡಬೇಕು.

10.20.3. ಅದೇ ರೀತಿಯಾಗಿ, ಮೂವತ್ತೊಂದಕ್ಕಿಂತ ಹೆಚ್ಚಿರುವ ಮತ್ತು ನಲವತ್ತೇಳರವರೆಗಿನ ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯಿರುವ ಚುನಾವಣಾ ಕ್ಷೇತ್ರದಲ್ಲಿ ಮೂರು ಬ್ಯಾಲೆಟ್ ಯೂನಿಟ್‌ಗಳನ್ನು ಬಳಸಬೇಕಾಗಿ ಬಂದರೆ, 1ರಿಂದ 16ರವರೆಗಿನ ಕ್ರಮಸಂಖ್ಯೆಗಳಲ್ಲಿ ಕಂಡುಬರುವ ಉಮೇದುವಾರರ ಹೆಸರುಗಳನ್ನೊಳಗೊಂಡಿರುವ ಮೊದಲನೇ ಬ್ಯಾಲೆಟ್ ಯೂನಿಟ್ ಅನ್ನು '1' ಎಂದು ಗುರುತು ಮಾಡಲಾದ ಸ್ಥಾನಕ್ಕೆ, 16ರಿಂದ 32ರ ವರೆಗಿನ ಕ್ರಮಸಂಖ್ಯೆಗಳಲ್ಲಿ ಕಂಡುಬರುವ ಸ್ಪರ್ಧಿಸುವ ಉಮೇದುವಾರರ ಹೆಸರುಗಳಿರುವ ಎರಡನೇ ಬ್ಯಾಲೆಟ್ ಯೂನಿಟ್‌ನಲ್ಲಿ '2' ಎಂದು ಗುರುತು ಮಾಡಲಾದ ಸ್ಥಾನಕ್ಕೆ ಮತ್ತು ಮೂರನೇ ಬ್ಯಾಲೆಟ್ ಯೂನಿಟ್‌ನಲ್ಲಿ '3' ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡಬೇಕು. ಅದೇ ರೀತಿಯಾಗಿ, ನಲವತ್ತೇಳಕ್ಕಿಂತ ಹೆಚ್ಚಿನ ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯಿರುವ ಸಂದರ್ಭದಲ್ಲಿ ನಾಲ್ಕನೇ ಬ್ಯಾಲೆಟ್ ಯೂನಿಟ್‌ಅನ್ನು ಬಳಸಬೇಕಾಗಿಬಂದರೆ ಸ್ಲೈಡ್ ಸ್ವಿಚ್ ಅನ್ನು ಕೊನೆಯ ಬ್ಯಾಲೆಟ್ ಯೂನಿಟ್‌ನಲ್ಲಿ '4' ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡತಕ್ಕದ್ದು.

**ಸೂಚನೆ:** ಬ್ಯಾಲೆಟ್ ಯೂನಿಟ್‌ಗಳ ನಡುವೆ ತಪ್ಪಾಗಿ ಯಾವುದೇ ಸಂಪರ್ಕವನ್ನು ಕಲ್ಪಿಸಲಾಗಿದ್ದರೆ ಮತಯಂತ್ರವು ಕಾರ್ಯ ನಿರ್ವಹಿಸುವುದಿಲ್ಲ ಮತ್ತು ಕಂಟ್ರೋಲ್ ಯೂನಿಟ್‌ನ ಯಾವುದೇ ಬಟನ್‌ಗಳನ್ನು ಒತ್ತಿದಾಗ ಸಂಪರ್ಕ ದೋಷವನ್ನು ಸೂಚಿಸುವಂತಹ 'ಎಲ್‌ಇ' ಅಕ್ಷರಗಳು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಕಾಣಿಸಿಕೊಳ್ಳುವುದರಿಂದ ಪ್ರತಿಯೊಂದು ಬ್ಯಾಲೆಟ್ ಯೂನಿಟ್‌ನಲ್ಲಿ ಸೂಕ್ತ ಸ್ಥಾನದಲ್ಲಿ ಸ್ಲೈಡ್ ಸ್ವಿಚ್‌ಅನ್ನು ಸೆಟ್ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ತುಂಬಾ ಅತ್ಯವಶ್ಯಕ. ಬ್ಯಾಲೆಟ್ ಯೂನಿಟ್‌ಗಳನ್ನು ಸರಿಯಾದ ಕ್ರಮಾನುಗತ ರೀತಿಯಲ್ಲಿ ಪರಸ್ಪರ ಸಂಪರ್ಕ ಕಲ್ಪಿಸುವ ಮೂಲಕ ಈ ಸಂಪರ್ಕ ದೋಷವನ್ನು ಸರಿಪಡಿಸಬೇಕು.

## 10.21 ಎಂ3 ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಥಂಬ್‌ವೀಲ್‌ಗಳನ್ನು ಸೆಟ್ ಮಾಡುವುದು

10.21.1 ಎಂ3 ಬ್ಯಾಲೆಟಿಂಗ್ ಯೂನಿಟ್‌ನ ಒಳಗಿನ ಮೇಲ್ತುದಿಯ ಬಲಭಾಗದಲ್ಲಿ ಥಂಬ್‌ವೀಲ್ ಇರುತ್ತದೆ. ಇದರ ಕ್ರಮ ಸರಣಿಯು ಮತಗಟ್ಟೆಯಲ್ಲಿ ಬಳಸಲು ವೋಟಿಂಗ್ ಕಂಪಾರ್ಟ್‌ಮೆಂಟ್ ಒಳಗೆ

ಇಡಲಾಗುವ ಒಂದು ನಿರ್ದಿಷ್ಟ ಬ್ಯಾಲೆಟಿಂಗ್ ಯೂನಿಟ್‌ಅನ್ನು ಇತರ ಬ್ಯಾಲೆಟಿಂಗ್ ಯೂನಿಟ್‌ಗಳೊಂದಿಗೆ ಯಾವ ಕ್ರಮ ಸರಣಿಯಲ್ಲಿ ಸಂಪರ್ಕ ಕಲ್ಪಿಸಲಾಗಿದೆ ಎಂಬುದನ್ನು ನಿರ್ಧರಿಸುತ್ತದೆ.

10.21.2 ಸ್ಪರ್ಧಿಸುತ್ತಿರುವ ಉಮೇದುವಾರರ ಸಂಖ್ಯೆಯು ಹದಿನೈದರವರೆಗೆ ಇರುವಲ್ಲಿ, ನೋಟಾ ಆಯ್ಕೆಯು ಹದಿನಾರನೇ ಸ್ಥಾನದಲ್ಲಿ ಇರುವುದರಿಂದ ಒಂದು ಬ್ಯಾಲೆಟ್ ಯೂನಿಟ್ ಅನ್ನು ಬಳಸಲಾಗುತ್ತದೆ. ಅಂತಹ ಸಂದರ್ಭದಲ್ಲಿ ಥಂಬ್‌ವೀಲ್ ಸ್ವಿಚ್‌ಅನ್ನು '01' ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡತಕ್ಕದ್ದು. ಸ್ಪರ್ಧಿಸುತ್ತಿರುವ ಉಮೇದುವಾರರ ಸಂಖ್ಯೆಯು ಹದಿನೈದಕ್ಕಿಂತ ಹೆಚ್ಚಿದ್ದು, ಮೂವತ್ತೊಂದರವರೆಗೆ ಇರುವಲ್ಲಿ, ಎರಡು ಬ್ಯಾಲೆಟ್ ಯೂನಿಟ್ ಅನ್ನು ಬಳಸಲಾಗುತ್ತದೆ. ಕ್ರಮ ಸಂಖ್ಯೆ 1 ರಿಂದ 16ರವರೆಗೆ ಉಮೇದುವಾರರ ಹೆಸರುಗಳನ್ನು ಒಳಗೊಂಡಿರುವ ಮತಪತ್ರಗಳನ್ನು ಅಳವಡಿಸಿರುವ ಮೊದಲನೇ ಬ್ಯಾಲೆಟ್ ಯೂನಿಟ್‌ನಲ್ಲಿ ಥಂಬ್‌ವೀಲ್ ಸ್ವಿಚ್‌ಅನ್ನು "01" ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡಬೇಕು ಹಾಗೂ ಹದಿನೇಳರಿಂದ ಮುಂದಿನ ಉಮೇದುವಾರರ ಹೆಸರುಗಳನ್ನೊಳಗೊಂಡಿರುವ ಮತಪತ್ರಗಳನ್ನು ಅಳವಡಿಸಿರುವ ಎರಡನೇ ಬ್ಯಾಲೆಟ್ ಯೂನಿಟ್‌ನಲ್ಲಿ "02" ನೇ ಸ್ಥಾನಕ್ಕೆ ಸೆಟ್ ಮಾಡಬೇಕು. ಅದೇ ರೀತಿಯಾಗಿ ಮೂವತ್ತೊಂದಕ್ಕಿಂತ ಹೆಚ್ಚಿರುವ ಮತ್ತು ನಲವತ್ತೇಳರವರೆಗೆ ಸ್ಪರ್ಧಿಸುತ್ತಿರುವ ಉಮೇದುವಾರರ ಸಂಖ್ಯೆ ಇರುವ ಚುನಾವಣಾ ಕ್ಷೇತ್ರದಲ್ಲಿ ಮೂರು ಬ್ಯಾಲೆಟ್ ಯೂನಿಟ್‌ಗಳನ್ನು ಬಳಸಬೇಕಾಗಿ ಬಂದಲ್ಲಿ, ಥಂಬ್‌ವೀಲ್‌ಗಳನ್ನು 1 ರಿಂದ 16ರವರೆಗಿನ ಕ್ರಮ ಸಂಖ್ಯೆಗಳಲ್ಲಿ ಕಂಡುಬರುವ ಉಮೇದುವಾರರ ಹೆಸರುಗಳನ್ನೊಳಗೊಂಡಿರುವ ಮೊದಲನೇ ಬ್ಯಾಲೆಟ್ ಯೂನಿಟ್ ಅನ್ನು "01" ಎಂದು ಗುರುತು ಮಾಡಲಾದ ಸ್ಥಾನಕ್ಕೆ, 16 ರಿಂದ 32ರವರೆಗಿನ ಕ್ರಮ ಸಂಖ್ಯೆಗಳಲ್ಲಿ ಕಂಡುಬರುವ ಉಮೇದುವಾರರ ಹೆಸರುಗಳನ್ನೊಳಗೊಂಡಿರುವ ಎರಡನೇ ಬ್ಯಾಲೆಟ್ ಯೂನಿಟ್ ಅನ್ನು "02" ಎಂದು ಗುರುತು ಮಾಡಲಾದ ಸ್ಥಾನಕ್ಕೆ ಹಾಗೂ ಮೂರನೇ ಬ್ಯಾಲೆಟ್ ಯೂನಿಟ್‌ನಲ್ಲಿ "03" ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡಬೇಕು. ಅದೇ ರೀತಿಯಾಗಿ ನಲವತ್ತೇಳಕ್ಕಿಂತ ಹೆಚ್ಚಿಗೆ ಸ್ಪರ್ಧಿಸುತ್ತಿರುವ ಉಮೇದುವಾರರ ಸಂಖ್ಯೆಗಳಿರುವ ಸಂದರ್ಭದಲ್ಲಿ ನಾಲ್ಕನೇ ಬ್ಯಾಲೆಟ್ ಯೂನಿಟ್ ಅನ್ನು ಬಳಸಬೇಕಾದ ಪಕ್ಷದಲ್ಲಿ ಥಂಬ್‌ವೀಲ್‌ಗಳನ್ನು ನಾಲ್ಕನೇ ಬ್ಯಾಲೆಟ್ ಯೂನಿಟ್‌ನಲ್ಲಿ "04" ಎಂದು ಗುರುತು ಮಾಡಲಾದ ಸ್ಥಾನಕ್ಕೆ ಸೆಟ್ ಮಾಡತಕ್ಕದ್ದು. ಅದೇ ರೀತಿಯಾಗಿ ಅರವತ್ಮೂರಕ್ಕಿಂತ ಹೆಚ್ಚಿಗೆ ಸ್ಪರ್ಧಿಸುತ್ತಿರುವ ಉಮೇದುವಾರರ ಸಂಖ್ಯೆ ಇರುವ ಸಂದರ್ಭದಲ್ಲಿ, ಐದನೇ ಬ್ಯಾಲೆಟ್ ಯೂನಿಟ್ ಅನ್ನು ಬಳಸಬೇಕಾದ ಸಂದರ್ಭದಲ್ಲಿ, ಥಂಬ್‌ವೀಲ್‌ಗಳನ್ನು ಐದನೇ ಬ್ಯಾಲೆಟ್ ಯೂನಿಟ್‌ನಲ್ಲಿ "05" ಎಂದು ಗುರುತು ಮಾಡಲಾದ

ಸ್ಥಾನಕ್ಕೆ ಸೆಟ್ ಮಾಡತಕ್ಕದ್ದು. ಈ ರೀತಿಯಲ್ಲಿ 24 ಬ್ಯಾಲೆಟ್ ಯೂನಿಟ್‌ಗಳನ್ನು ಎಂ3 ಇವಿಎಂನಲ್ಲಿರುವ ಕಂಟ್ರೋಲ್ ಯೂನಿಟ್‌ಗೆ ಸಂಪರ್ಕ ಕಲ್ಪಿಸಬಹುದು.

**ಸೂಚನೆ:** ಬ್ಯಾಲೆಟ್ ಯೂನಿಟ್‌ಗಳ ನಡುವೆ ತಪ್ಪಾಗಿ ಯಾವುದೇ ಸಂಪರ್ಕವನ್ನು ಕಲ್ಪಿಸಿದ್ದ ಪಕ್ಷದಲ್ಲಿ, ಎರರ್ ಎಂಬ ಸಂದೇಶವು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನೆಲ್‌ನಲ್ಲಿ ಕಾಣಿಸಿಕೊಳ್ಳುವುದರಿಂದ ಪ್ರತಿಯೊಂದು ಬ್ಯಾಲೆಟ್ ಯೂನಿಟ್‌ನ ಸೂಕ್ತ ಸ್ಥಾನದಲ್ಲಿ ಥಂಬ್‌ವೀಲ್ ಸ್ವಿಚ್‌ಅನ್ನು ಸೆಟ್ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ತುಂಬಾ ಅತ್ಯವಶ್ಯಕವಾಗಿದೆ. ಬ್ಯಾಲೆಟ್ ಯೂನಿಟ್‌ಗಳನ್ನು ಸರಿಯಾದ ಕ್ರಮಾನುಗತ ರೀತಿಯಲ್ಲಿ ಪರಸ್ಪರ ಸಂಪರ್ಕ ಕಲ್ಪಿಸುವ ಮೂಲಕ ದೋಷವನ್ನು ಸರಿಪಡಿಸತಕ್ಕದ್ದು.

## 10.22. ಬ್ಯಾಲೆಟಿಂಗ್ ಯೂನಿಟ್‌ಅನ್ನು ಮೊಹರು ಮಾಡುವುದು

10.22.1 ಅದರ ನಂತರ, ಬ್ಯಾಲೆಟಿಂಗ್ ಯೂನಿಟ್ ಅನ್ನು ಅದರ ಮೇಲಿನ ಹೊದಿಕೆಯನ್ನು ಹಿಂದಕ್ಕೆ ತರುವುದರ ಮೂಲಕ ಅದರ ಮೂಲ ಸ್ಥಾನಕ್ಕೆ ತಂದು ಮುಚ್ಚಬೇಕು. ನಂತರ ಬ್ಯಾಲೆಟ್ ಯೂನಿಟ್‌ಅನ್ನು ಮೊಹರು ಮಾಡಬೇಕು. ಈ ಉದ್ದೇಶಕ್ಕಾಗಿ, ಎರಡು ದಾರಗಳ ಪೈಕಿ ಒಂದನ್ನು ಸದರಿ ಉದ್ದೇಶಕ್ಕಾಗಿ ವಿಶೇಷವಾಗಿ ಒದಗಿಸಿದ ಮೇಲಿರುವ ಮೂರು ರಂಧ್ರಗಳ ಮುಖಾಂತರ ಮತ್ತು ಇನ್ನೊಂದನ್ನು ಕೆಳಗಿನ ಮೂರು ರಂಧ್ರಗಳ ಮುಖಾಂತರ ತೂರಿಸಿ ಪ್ರತಿಯೊಂದು ದಾರವನ್ನೂ ಗಟ್ಟಿಯಾಗಿ ಕಟ್ಟಿ ಅವುಗಳ ಎರಡು ತುದಿಗಳನ್ನು ವಿವರಗಳನ್ನು ಸೂಕ್ತವಾಗಿ ಭರ್ತಿ ಮಾಡಿದ ಅಡ್ರಸ್ ಟ್ಯಾಗ್ ಮೇಲಿಟ್ಟು ರಿಟರ್ನಿಂಗ್ ಅಧಿಕಾರಿಯವರ ಮೊಹರಿನಿಂದ ಪ್ರತಿಯೊಂದು ದಾರವನ್ನೂ ಮೊಹರು ಮಾಡಬೇಕು.

10.22.2 ರಿಟರ್ನ್ನಿಂಗ್ ಅಧಿಕಾರಿಯವರ ಮೊಹರಿನ ಜೊತೆಗೆ, ಉಮೇದುವಾರರು ಅಥವಾ ಅವರ ಏಜೆಂಟರು ತಮ್ಮ ಮೊಹರುಗಳನ್ನೂ ಸಹ ಹಾಕಲು ಹಾಗೆ ಅವರು ಇಚ್ಛಿಸಿದರೆ ಅನುಮತಿಯನ್ನು ನೀಡಬೇಕು.

10.22.3 ಹೆಚ್ಚುವರಿಯಾಗಿ ಬ್ಯಾಲೆಟ್ ಯೂನಿಟನ್ನು ವಿದ್ಯುನ್ಮಾನ ಮತಯಂತ್ರಗಳನ್ನು ಸಿದ್ಧಪಡಿಸುವ ಸಮಯದಲ್ಲಿ ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳ ಸಮಕ್ಷಮದಲ್ಲಿ ಇಂಡಿಯನ್ ಸೆಕ್ಯೂರಿಟಿ ಪ್ರೆಸ್, ನಾಸಿಕ್ ಇವರಿಂದ ಪೂರೈಸಲ್ಪಟ್ಟ ವಿಶೇಷ "ಗುಲಾಬಿ ಬಣ್ಣದ ಪೇಪರ್ ಸೀಲ್"ನಿಂದ ಮೊಹರು ಮಾಡತಕ್ಕದ್ದು. ಗುಲಾಬಿ ಬಣ್ಣದ ಪೇಪರ್ ಸೀಲನ್ನು ಕ್ಯಾಂಡಿಡೇಟ್ಸ್ ಬಟನ್ ಅಥವಾ ಅಭ್ಯರ್ಥಿಗಳ ಹೆಸರು ಅಥವಾ ಚಿಹ್ನೆಯು ಮೊಹರಿನಿಂದ ಮರೆಯಾಗದಿರುವ ರೀತಿಯಲ್ಲಿ ಬ್ಯಾಲೆಟ್ ಯೂನಿಟ್‌ನ ಅತ್ಯಂತ ಕೆಳಭಾಗದಲ್ಲಿ ಅಂಟಿಸತಕ್ಕದ್ದು. ಗುಲಾಬಿ ಬಣ್ಣದ ಪೇಪರ್ ಸೀಲನ್ನು

ಅಂಟಿಸಿದ ನಂತರ ಬಿಇಎಲ್/ಇಸಿಐಎಲ್ ಇಂಜಿನಿಯರ್ ಅವರು ಸಹಿ ಮಾಡತಕ್ಕದ್ದು. ಸಹಿಗೆ ಮೊದಲು ಅಭ್ಯರ್ಥಿಯ ಅಥವಾ ಪಕ್ಷದ ಹೆಸರನ್ನು ಸೂಚಿಸುವ ಗುಲಾಬಿ ಬಣ್ಣದ ಪೇಪರ್ ಸೀಲ್‌ನ ಮೇಲೆ ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳಿಗೆ ಕೂಡ ತಮ್ಮ ಸಹಿಗಳನ್ನು ಮಾಡಲು ಅವಕಾಶ ಮಾಡಿಕೊಡತಕ್ಕದ್ದು. ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಿಗೆ ಬ್ಯಾಲೆಟ್ ಯೂನಿಟ್ ಮೇಲಿರುವ ಗುಲಾಬಿ ಬಣ್ಣದ ಪೇಪರ್ ಸೀಲ್‌ನ ಕ್ರಮ ಸಂಖ್ಯೆಯನ್ನು ಬರೆದುಕೊಳ್ಳಲು ಸಹ ಅವಕಾಶವನ್ನು ಮಾಡಿಕೊಡತಕ್ಕದ್ದು. ಬ್ಯಾಲೆಟಿಂಗ್ ಯೂನಿಟ್ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮತ್ತು ಗುಲಾಬಿ ಬಣ್ಣದ ಪೇಪರ್ ಸೀಲ್‌ನ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸುವ ಮೂಲಕ ಬ್ಯಾಲೆಟ್ ಯೂನಿಟ್‌ನಲ್ಲಿ ಬಳಸಲಾದ ಗುಲಾಬಿ ಬಣ್ಣದ ಪೇಪರ್ ಸೀಲ್‌ನ ಕ್ರಮ ಸಂಖ್ಯೆಯನ್ನು ಬರೆದು ಇಟ್ಟುಕೊಳ್ಳಲು ರಿಜಿಸ್ಟರ್‌ಅನ್ನು ನಿರ್ವಹಿಸತಕ್ಕದ್ದು. ಅಭ್ಯರ್ಥಿಗಳ ಮತ್ತು ಅವರ ಪ್ರತಿನಿಧಿಗಳ ಸಹಿಗಳನ್ನು ಸಹ ಈ ರಿಜಿಸ್ಟರ್‌ನಲ್ಲಿ ಪಡೆಯುವುದು. ಈ ರಿಜಿಸ್ಟರ್‌ನ ಛಾಯಾಪ್ರತಿಗಳನ್ನು ವಿದ್ಯುನ್ಮಾನ ಮತಯಂತ್ರಗಳನ್ನು ಸಿದ್ಧಪಡಿಸುವ ಕಾರ್ಯವು ಮುಗಿದ ಮೇಲೆ ಎಲ್ಲಾ ಅಭ್ಯರ್ಥಿಗಳಿಗೆ ಉಚಿತವಾಗಿ ನೀಡುವುದು.

10.22.4 ಬ್ಯಾಲೆಟ್ ಯೂನಿಟ್‌ಅನ್ನು ಹಾಗೆ ಸಿದ್ಧಪಡಿಸಿ ಮೊಹರು ಮಾಡಿದ ನಂತರ, ಅದನ್ನು ಅದರ ಸಾಗಿಸುವ ಪೆಟ್ಟಿಗೆಯಲ್ಲಿಡಬೇಕು. ಮೇಲಿನ ವಿವರಗಳನ್ನೊಳಗೊಂಡ ಮತ್ತೊಂದು ಅಡ್ರೆಸ್ ಟ್ಯಾಗ್ ಅನ್ನು ಸಾಗಿಸುವ ಪೆಟ್ಟಿಗೆಯ ಹಿಡಿಗೆ ಲಗತ್ತಿಸಬೇಕು.

## 10.23. ಬ್ಯಾಲೆಟ್ ಯೂನಿಟ್‌ಗಳು, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವುದು

10.23.1 ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯು ಹದಿನೈದನ್ನು ಮೀರಿರುವಲ್ಲಿ, ಸ್ಪರ್ಧಿಸುವ ಉಮೇದುವಾರರ ವಾಸ್ತವಿಕ ಸಂಖ್ಯೆಯನ್ನು ಆಧರಿಸಿ ಒಂದಕ್ಕಿಂತ ಹೆಚ್ಚಿನ ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸಬೇಕಾಗುತ್ತದೆ. ಮತದಾನ ಕೇಂದ್ರದಲ್ಲಿ ಬಳಸಲಾಗುವಂಥ ಎಲ್ಲ ಬ್ಯಾಲೆಟ್ ಯೂನಿಟ್‌ಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸಿ ಮೊದಲ ಬ್ಯಾಲೆಟಿಂಗ್ ಯೂನಿಟ್‌ಅನ್ನು ಮಾತ್ರ ಕಂಟ್ರೋಲ್ ಯೂನಿಟ್/ವಿವಿಪ್ಯಾಟ್ ಯೂನಿಟ್‌ಗೆ ಸಂಪರ್ಕ ಕಲ್ಪಿಸಬೇಕು.

10.23.2 ಹಾಗೆ ಪರಸ್ಪರ ಸಂಪರ್ಕ ಕಲ್ಪಿಸತಕ್ಕ ಬ್ಯಾಲೆಟಿಂಗ್ ಯೂನಿಟ್‌ಗಳಲ್ಲಿ ಎರಡನೇ ಬ್ಯಾಲೆಟಿಂಗ್ ಯೂನಿಟ್‌ಅನ್ನು ಅಂದರೆ ಸ್ಲೈಡ್ ಸ್ವಿಚ್ (ಎಂ3 ಇವಿಎಂ ನಲ್ಲಿರುವ ಥಂಬ್‌ವೀಲ್ ಸ್ವಿಚ್) ಅನ್ನು '2' ರ ಸ್ಥಿತಿಗೆ (ಎಂ3 ಇವಿಎಂ ನಲ್ಲಿ 02 ಎಂದು) ಸೆಟ್ ಮಾಡಿದ ಬ್ಯಾಲೆಟಿಂಗ್ ಯೂನಿಟ್ ಅನ್ನು ಸ್ಲೈಡ್ ಸ್ವಿಚ್ (ಎಂ3 ಇವಿಎಂಗಳಲ್ಲಿ ಇರುವ ಥಂಬ್‌ವೀಲ್ ಸ್ವಿಚ್) ಅನ್ನು '1' ರ ಸ್ಥಾನಕ್ಕೆ (ಎಂ3

ಇವಿಎಂನಲ್ಲಿ 01 ಎಂದು) ಸೆಟ್ ಮಾಡಿದ ಮೊದಲನೇ ಬ್ಯಾಲೆಟಿಂಗ್ ಯೂನಿಟ್‌ಗೆ ಸಂಪರ್ಕ ಕಲ್ಪಿಸಬೇಕು. ಮೂರು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸಬೇಕಾಗಿರುವಲ್ಲಿ, ಮೂರನೇ ಬ್ಯಾಲೆಟಿಂಗ್ ಯೂನಿಟ್‌ಅನ್ನು ಎರಡನೇ ಬ್ಯಾಲೆಟಿಂಗ್ ಯೂನಿಟ್‌ಗೆ ಮತ್ತು ಎರಡನೆಯದನ್ನು ಮೊದಲನೆಯದಕ್ಕೆ ಸಂಪರ್ಕ ಕಲ್ಪಿಸಬೇಕು ಮತ್ತು ಎಲ್ಲ ನಾಲ್ಕು ಬ್ಯಾಲೆಟ್ ಯೂನಿಟ್‌ಗಳನ್ನು ಬಳಸಬೇಕಾಗಿರುವಲ್ಲಿ, ನಾಲ್ಕನೇ ಯೂನಿಟ್‌ಅನ್ನು ಮೂರನೇ ಯೂನಿಟ್‌ಗೆ, ಮೂರನೆಯದನ್ನು ಎರಡನೆಯದಕ್ಕೆ ಹಾಗೂ ಅದರಂತೆ ಸಂಪರ್ಕ ಕಲ್ಪಿಸಬೇಕು.

10.23.3ಒಂದು ಬ್ಯಾಲೆಟ್ ಯೂನಿಟ್‌ಅನ್ನು ಮತ್ತೊಂದಕ್ಕೆ ಸಂಪರ್ಕ ಕಲ್ಪಿಸುವುದಕ್ಕಾಗಿ ಬ್ಯಾಲೆಟ್ ಯೂನಿಟ್‌ನ ಹಿಂಭಾಗದಲ್ಲಿನ ಕಂಪಾರ್ಟ್‌ಮೆಂಟಿನಲ್ಲಿ ಒಂದು ಸಾಕೆಟ್ ಅನ್ನು ಒದಗಿಸಲಾಗಿರುತ್ತದೆ. ಎರಡನೇ ಬ್ಯಾಲೆಟ್ ಯೂನಿಟ್‌ನ ಇಂಟರ್ ಕನೆಕ್ಟಿಂಗ್ ಕೇಬಲ್‌ನ ಕನೆಕ್ಟರನ್ನು ಮೊದಲನೇ ಬಾಲೆಟಿಂಗ್ ಯೂನಿಟ್‌ನ ಮೇಲೆ ಹೇಳಲಾದ ಸಾಕೆಟ್‌ಗೆ ಪ್ಲಗ್ ಮಾಡಬೇಕು. ಅದೇ ರೀತಿಯಾಗಿ ಮೂರನೇ ಬ್ಯಾಲೆಟ್ ಯೂನಿಟ್‌ನ ಇಂಟರ್ ಕನೆಕ್ಟಿಂಗ್ ಕೇಬಲ್‌ನ ಕನೆಕ್ಟರನ್ನು ಎರಡನೇ ಯೂನಿಟ್‌ಗೆ ಮತ್ತು ನಾಲ್ಕನೇ ಯೂನಿಟ್‌ನ್ನು ಮೂರನೇ ಯೂನಿಟ್‌ಗೆ ಪ್ಲಗ್ ಮಾಡಬೇಕು. ಎಂ3 ಇವಿಎಂನಲ್ಲಿ, ಒಂದು ಕಂಟ್ರೋಲ್ ಯೂನಿಟ್‌ಗೆ (ನೋಟಾ ಸೇರಿದಂತೆ 384 ಅಭ್ಯರ್ಥಿಗಳಿರುವ) ಒಂದಕ್ಕೊಂದು ಸಂಪರ್ಕವಿರುವ 24 ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಸಂಪರ್ಕ ಕಲ್ಪಿಸಬಹುದು. ನಾಲ್ಕು ಬ್ಯಾಲೆಟಿಂಗ್ ಯೂನಿಟ್‌ಗಳಿಗಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸಿದ್ದ ಸಂದರ್ಭಗಳಲ್ಲಿ, 5ನೇ, 9ನೇ, 13ನೇ, 17ನೇ ಹಾಗೂ 21ನೇ ಬ್ಯಾಲೆಟ್ ಯೂನಿಟ್‌ನಲ್ಲಿ ಬ್ಯಾಟರಿ ಅಳವಡಿಸುವುದಕ್ಕಾಗಿ ಅವಕಾಶವಿದೆ. ನಾಲ್ಕು ಬ್ಯಾಲೆಟಿಂಗ್ ಯೂನಿಟ್‌ಗಳಿಗಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸಿದ್ದಲ್ಲಿ, ಬ್ಯಾಟರಿಯನ್ನು 5ನೇ, 9ನೇ, 13ನೇ, 17ನೇ ಹಾಗೂ 21ನೇ ಬ್ಯಾಲೆಟ್ ಯೂನಿಟ್‌ನಲ್ಲಿ ಅಳವಡಿಸುವುದು.

10.23.4 ಕಂಟ್ರೋಲ್ ಯೂನಿಟ್‌ನಲ್ಲಿನ ಹಿಂಭಾಗದ ಕಂಪಾರ್ಟ್‌ಮೆಂಟ್‌ನಲ್ಲಿ 'ಪವರ್' ಸ್ವಿಚ್ ಸಹ ಇದ್ದು, ಈ ಸ್ವಿಚ್ಚನ್ನು 'ಆನ್' ಮಾಡಿದಾಗ ಮತಯಂತ್ರದ ಬ್ಯಾಟರಿಯು ಕೆಲಸ ಮಾಡಲು ಪ್ರಾರಂಭಿಸುತ್ತದೆ ಮತ್ತು ಕಂಟ್ರೋಲ್ ಯೂನಿಟ್‌ಗೆ ಹಾಗೂ ಮೇಲೆ ವಿವರಿಸಿದ ರೀತಿಯಲ್ಲಿ ಕಂಟ್ರೋಲ್ ಯೂನಿಟ್‌ಗೆ ಸಂಪರ್ಕ ಕಲ್ಪಿಸಲಾದ ಎಲ್ಲ ಬ್ಯಾಲೆಟಿಂಗ್ ಯೂನಿಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುತ್ತದೆ.

## 10.24. ಕಂಟ್ರೋಲ್ ಯೂನಿಟನ್ನು ಅಣಿಗೊಳಿಸುವುದು

10.24.1. ರಿಟರ್ನಿಂಗ್ ಅಧಿಕಾರಿಯವರ ಮಟ್ಟದಲ್ಲಿ ಬ್ಯಾಲೆಟಿಂಗ್ ಯೂನಿಟ್ ರೀತಿಯಲ್ಲಿಯೇ ಮತಯಂತ್ರದ ಕಂಟ್ರೋಲ್ ಯೂನಿಟ್‌ನಲ್ಲಿಯೂ ಸಹ ಕೆಲವೊಂದು ಸಿದ್ಧತೆಗಳನ್ನು ಮಾಡಬೇಕಿರುತ್ತದೆ. ಈ ಸಿದ್ಧತೆಗಳು ಹೀಗಿವೆ:

i. ಬ್ಯಾಟರಿಯನ್ನು ಅಳವಡಿಸುವುದು,

ii. NOTAದೊಂದಿಗೆ ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯನ್ನು ಸೆಟ್ ಮಾಡುವುದು, ಮತ್ತು

iii. "ಕ್ಯಾಂಡಿಡೇಟ್ ಸೆಟ್ ಸೆಕ್ಷನ್" ಎಂದು ಕರೆಯಲಾಗುವ ಮತ್ತು ಬ್ಯಾಟರಿ ಹಾಗೂ ಅಭ್ಯರ್ಥಿಗಳ ಸಂಖ್ಯೆಯನ್ನು ಸೆಟ್ ಮಾಡುವ ಬಟನ್ ನ್ನು ಒಳಗೊಂಡಿರುವ ಚುನಾವಣಾ ಕಂಟ್ರೋಲ್ ಯುನಿಟ್‌ನ್ನು ಮೊಹರು ಮಾಡುವುದು.

## 10.25 ಬ್ಯಾಟರಿಯನ್ನು ಅಳವಡಿಸುವುದು

10.25.1 ಮೇಲೆ ಹೇಳಲಾದಂತೆ, ವಿದ್ಯುನ್ಮಾನ ಮತಯಂತ್ರವು ತಯಾರಿಕಾ ಕಂಪನಿಯಿಂದ ಪೂರೈಸುವ ವಿಶೇಷವಾದ ಬ್ಯಾಟರಿಯಿಂದ ಕಾರ್ಯನಿರ್ವಹಿಸುತ್ತದೆ. ಯಾವುದೇ ಚುನಾವಣೆಯಲ್ಲಿ ಮತಯಂತ್ರವನ್ನು ಬಳಸುವಾಗ ಹೊಸ ಬ್ಯಾಟರಿಯನ್ನು ಮಾತ್ರ ಬಳಸಬೇಕು. ಕಂಟ್ರೋಲ್ ಯೂನಿಟ್‌ನ ಮೇಲ್ಭಾಗದಲ್ಲಿ ಬ್ಯಾಟರಿಯನ್ನು ಅಳವಡಿಸುವುದಕ್ಕಾಗಿ ವ್ಯವಸ್ಥೆ ಮಾಡಲಾಗಿದೆ.

## 10.26. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯನ್ನು ಸೆಟ್ ಮಾಡುವುದು

10.26.1 ಎಂ2 ಇವಿಎಂನ ಕಂಟ್ರೋಲ್ ಯೂನಿಟ್ ಅರವತ್ತಮೂರು ಉಮೇದುವಾರರು ಬಟನ್‌ಗಳು ಮತ್ತು ಒಂದು ನೋಟಾ ಆಯ್ಕೆ ಬಟನ್ ಹೀಗೆ 64 ಬಟನ್‌ಗಳನ್ನು ಅಳವಡಿಸಬಹುದು. ಎಂ3 ಇವಿಎಂನಲ್ಲಿರುವ ಕಂಟ್ರೋಲ್ ಯೂನಿಟ್ 383 ಅಭ್ಯರ್ಥಿಗಳ ಬಟನ್‌ಗಳನ್ನು ಹಾಗೂ ಒಂದು ನೋಟಾ ಆಯ್ಕೆ ಬಟನ್ ಅನ್ನು ಅಳವಡಿಸಬಹುದು. ಆದ್ದರಿಂದ, ಮತಯಂತ್ರವನ್ನು ಬಳಸಲಾಗುವ ಪ್ರತಿಯೊಂದು ಚುನಾವಣೆಯಲ್ಲೂ ಕಂಟ್ರೋಲ್ ಯೂನಿಟನ್ನು ಆ ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರ ಸಂಖ್ಯೆ ಹಾಗೂ ನೋಟ ಆಯ್ಕೆಗೆ ಅನುಗುಣವಾಗಿ ಸೆಟ್ ಮಾಡಬೇಕಾಗುತ್ತದೆ.

10.26.2 ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯನ್ನು ಸೆಟ್ ಮಾಡುವುದಕ್ಕಾಗಿ, ಈ ಕೆಳಕಂಡ ಕಾರ್ಯಾಚರಣೆಗಳನ್ನು ನಿರ್ವಹಿಸತಕ್ಕದ್ದು:-

i. ಕಂಟ್ರೋಲ್ ಯೂನಿಟನ್ನು ಬ್ಯಾಲೆಟ್ ಯೂನಿಟ್‌ಗೆ ಅಥವಾ ಒಂದಕ್ಕಿಂತ ಹೆಚ್ಚಿನ ಬ್ಯಾಲೆಟ್ ಯೂನಿಟ್‌ಗಳನ್ನು ಬಳಸಬೇಕಾಗಿರುವಲ್ಲಿ ಎಲ್ಲ ಬ್ಯಾಲೆಟ್ ಯೂನಿಟ್‌ಗಳಿಗೆ ಸಂಪರ್ಕ ಕಲ್ಪಿಸುವ ಮೂಲಕ ಮಾತ್ರ ಕಂಟ್ರೋಲ್ ಯೂನಿಟ್‌ನಲ್ಲಿ ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯನ್ನು ಮತ್ತು ನೋಟ ಆಯ್ಕೆಯನ್ನು ಸೆಟ್ ಮಾಡಬಹುದು. ಕಂಟ್ರೋಲ್ ಯೂನಿಟ್‌ಗೆ ಬ್ಯಾಲೆಟ್ ಯೂನಿಟ್‌ಗಳ ಸಂಪರ್ಕ ಕಲ್ಪಿಸುವ ಪ್ರಕ್ರಿಯೆಯನ್ನು ಈಗಾಗಲೇ ಮೇಲೆ ವಿವರಿಸಲಾಗಿದೆ.

ii. ಕಂಟ್ರೋಲ್ ಯೂನಿಟನ್ನು ಬ್ಯಾಲೆಟ್ ಯೂನಿಟ್‌ಗೆ (ಗಳು) ಸಂಪರ್ಕ ಕಲ್ಪಿಸಿದ ನಂತರ, ಎರಡೂ ಯೂನಿಟ್‌ಗಳು ಕಾರ್ಯನಿರ್ವಹಿಸಲು ಅಗತ್ಯವಾದ ವಿದ್ಯುತ್ತನ್ನು ಪಡೆಯುವ ಹಾಗೆ 'ಪವರ್' ಸ್ವಿಚ್ಚನ್ನು **'ಆನ್'** ಸ್ಥಿತಿಗೆ ಒತ್ತಬೇಕು.

iii. ಕಂಟ್ರೋಲ್ ಯೂನಿಟ್‌ನ 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್' ನಲ್ಲಿನ 'ಕ್ಯಾಂಡ್ ಸೆಟ್' ಎಂದು ಗುರುತು ಮಾಡಲಾದ ಬಟನನ್ನು ಒತ್ತಬೇಕು. ತರುವಾಯ **'ಸೆಟ್ ಕ್ಯಾಂಡಿಡೇಟ್'** ಎಂದು ಡಿಸ್‌ಪ್ಲೇ ಪ್ಯಾನೆಲ್‌ನಲ್ಲಿ ಹೊಳೆಯುತ್ತದೆ.

iv. ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್ ಮೇಲೆ 'ಸೆಟ್ ಕ್ಯಾಂಡಿಡೇಟ್ ...' ಎಂಬ ಅಕ್ಷರಗಳು ಬೆಳಗಲು ಆರಂಭಿಸಿದಾಗ, ಬ್ಯಾಲೆಟ್ ಯೂನಿಟ್‌ನಲ್ಲಿನ ನೋಟಾ ಆಯ್ಕೆಯ ಎದುರಿಗಿರುವ ಕ್ಯಾಂಡಿಡೇಟ್ ಬಟನನ್ನು ಒತ್ತಬೇಕು. ಉದಾಹರಣೆಗೆ, ಒಂಬತ್ತು ಜನ ಸ್ಪರ್ಧಿಸಿರುವ ಉಮೇದುವಾರರಿದ್ದು, ಮತಯಂತ್ರಗಳನ್ನು ಒಂಬತ್ತು ಉಮೇದುವಾರರಿಗೆ ಸೆಟ್ ಮಾಡಬೇಕಾಗಿದ್ದರೆ, ನೋಟ ಆಯ್ಕೆಯ ಎದುರಿಗಿರುವ ಬ್ಯಾಲೆಟ್ ಯೂನಿಟ್‌ನಲ್ಲಿನ 10ನೇ ಉಮೇದುವಾರರ ಕ್ಯಾಂಡೆಡೇಟ್ ಬಟನನ್ನು ಒತ್ತಬೇಕು. ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯು 16ಕ್ಕಿಂತ ಹೆಚ್ಚಿದ್ದು, 23ರವರೆಗೆ ಎಂದು ಭಾವಿಸಿಕೊಂಡರೆ, ಎರಡನೇ ಬ್ಯಾಲೆಟ್ ಯೂನಿಟ್‌ನಲ್ಲಿನ ಕ್ರಮ ಸಂಖ್ಯೆ 24ರಲ್ಲಿನ ಸ್ಪರ್ಧಿಸುವ ಉಮೇದುವಾರರ ಮತ್ತು ನೋಟಾ ಅನ್ನು ಹೆಸರಿನ ಎದುರಿಗಿರುವ ಕ್ಯಾಂಡಿಡೇಟ್ ಬಟನ್‌ಅನ್ನು ಮತ್ತು ಒತ್ತಬೇಕು. ಆ ಬಟನ್ ಅನ್ನು ಒತ್ತುತ್ತಿದ್ದಂತೆ, ಡಿಸ್‌ಪ್ಲೇ ಪ್ಯಾನಲ್‌ಗಳು "ಸೆಟ್ ಕ್ಯಾಂಡಿಡೇಟ್ ..." ಅಕ್ಷರಗಳನ್ನು ಬೆಳಗಿಸುವುದನ್ನು ನಿಲ್ಲಿಸಿ, ಅದರ ಬದಲು ಪೂರ್ಣ ಪ್ಯಾನಲ್ ಕ್ಯಾಂಡಿಡೇಟ್ 10' ಅಥವಾ ಸಂದರ್ಭಾನುಸಾರ ಕ್ಯಾಂಡಿಡೇಟ್ 24' ಎಂಬ ರೀತಿಯಾಗಿ ಮತಯಂತ್ರದಲ್ಲಿ ಸೆಟ್ ಮಾಡಲಾದ ಉಮೇದುವಾರರ ಸಂಖ್ಯೆಯನ್ನು ಡಿಸ್‌ಪ್ಲೇ ಮಾಡುತ್ತವೆ.

10.26.3.ಅಚಾತುರ್ಯದಿಂದ, ಬ್ಯಾಲೆಟ್ ಯೂನಿಟ್ ಮೇಲೆ ಒತ್ತಿದ್ದರೆ, ಉದಾಹರಣೆಗೆ 10ನೇ ಬಟನನ್ನು ಒತ್ತುವ ಬದಲು, 9 ಅಥವಾ 11ನೇ ಬಟನನ್ನು ಒತ್ತಿದ್ದಲ್ಲಿ 'ಕ್ಯಾಂಡ್ ಸೆಟ್' ಬಟನ್‌ನ್ನು ಮತ್ತೆ ಒತ್ತುವ ಮೂಲಕ ತಪ್ಪಾಗಿ ಸೆಟ್ ಮಾಡಿರುವಂತಹವನ್ನು ಸರಿಪಡಿಸಬಹುದು. ಇದರಿಂದ ಮತಯಂತ್ರವು ಮತ್ತೆ "ಸೆಟ್ ಕ್ಯಾಂಡಿಡೇಟ್ ..." ಅಕ್ಷರಗಳನ್ನು ಬೆಳಗಿಸುತ್ತದೆ ಮತ್ತು ಸ್ಪರ್ಧಿಸಿರುವ ಉಮೇದುವಾರರ ಸರಿಯಾದ ಸಂಖ್ಯೆಯನ್ನು ಸೆಟ್ ಮಾಡುವ ಹಾಗೆ ಬ್ಯಾಲೆಟ್ ಯೂನಿಟ್ ಮೇಲಿನ ಸರಿಯಾದ ಬಟನ್ ಅನ್ನು ಒತ್ತಬೇಕು.

## 10.27. **ಮತಯಂತ್ರದಲ್ಲಿ ದಾಖಲಾದ ಹಿಂದಿನ ಮಾಹಿತಿಯನ್ನು ಅಳಿಸಿ ಹಾಕುವುದು**

10.27.1 ಮೇಲೆ ವಿವರಿಸಿದ ವಿಧಾನದಲ್ಲಿ, ಕಂಟ್ರೋಲ್ ಯೂನಿಟ್‌ನಲ್ಲಿ ಸ್ಪರ್ಧಿಸುವ ಉಮೇದುವಾರರ ಸಂಖ್ಯೆಯನ್ನು ಸೆಟ್ ಮಾಡಿದ ನಂತರ, ವಿದ್ಯುನ್ಮಾನ ಮತಯಂತ್ರಗಳನ್ನು ಪ್ರಥಮ ಹಂತದಲ್ಲಿ ಪರೀಕ್ಷಿಸುವಾಗ ಅಣಕು ಮತದಾನಕ್ಕಾಗಿ ಮತ ಚಲಾವಣೆಯಾಗಿದ್ದಲ್ಲಿ ಅದಕ್ಕೆ ಸಂಬಂಧಿಸಿದಂತೆ ಮತಯಂತ್ರದಲ್ಲಿ ದಾಖಲಾದ ಎಲ್ಲಾ ದತ್ತಾಂಶವನ್ನು ಅಳಿಸಿ ಹಾಕುವುದು. ಈ ಉದ್ದೇಶಕ್ಕಾಗಿ, ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನಲ್ಲಿರುವ 'ಕ್ಲಿಯರ್' ಎಂದು ಗುರುತು ಮಾಡಲಾದ ಬಟನನ್ನು ಒತ್ತಬೇಕು. 'ಕ್ಲಿಯರ್' ಬಟನನ್ನು ಒತ್ತುತ್ತಿದ್ದಂತೆ, ಮತಯಂತ್ರದಲ್ಲಿನ ಎಲ್ಲ ಎಣಿಕೆಗಳು ಸ್ವಯಂಚಾಲಿತವಾಗಿ **'ಸೊನ್ನೆ'**ಗೆ ಸೆಟ್ ಆಗುತ್ತದೆ ಮತ್ತು ಕಂಟ್ರೋಲ್ ಯೂನಿಟ್‌ನಲ್ಲಿನ ಡಿಸ್‌ಪ್ಲೇ ಪ್ಯಾನಲ್‌ಗಳು ಸ್ಪರ್ಧಿಸುವ ಪ್ರತಿಯೊಬ್ಬ ಉಮೇದುವಾರನಿಗೆ ಮತಯಂತ್ರದಲ್ಲಿ ದಾಖಲಾದ ಮತಗಳ ಸಂಖ್ಯೆಯು '0' **(ಸೊನ್ನೆ)** ಎಂಬುದನ್ನು ಡಿಸ್‌ಪ್ಲೇ ಮಾಡಲು ಪ್ರಾರಂಭಿಸುತ್ತವೆ.

10.27.2 ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರ ಸಂಖ್ಯೆಗನುಗುಣವಾಗಿ ಕಂಟ್ರೋಲ್ ಯೂನಿಟನ್ನು ಸೆಟ್ ಮಾಡಿದ ನಂತರ, ಪವರ್ ಸ್ವಿಚ್ಚನ್ನು ಸ್ವಿಚ್ ಆಫ್ ಮಾಡಬೇಕು ಮತ್ತು ಕಂಟ್ರೋಲ್ ಯೂನಿಟ್ ಹಾಗೂ ಬ್ಯಾಲೆಟ್ ಯೂನಿಟ್(ಗಳು)ಗಳ ಸಂಪರ್ಕವನ್ನು ಕಂಟ್ರೋಲ್ ಯೂನಿಟ್‌ನಿಂದ ಇಂಟರ್ ಕನೆಕ್ಟಿಂಗ್ ಕೇಬಲನ್ನು ತೆಗೆಯುವ ಮೂಲಕ ತಪ್ಪಿಸತಕ್ಕದ್ದು.

## **10.28 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್' ಅನ್ನು ಮೊಹರು ಮಾಡುವುದು**

10.28.1 ಬ್ಯಾಟರಿಯನ್ನು ಅಳವಡಿಸಿದ ನಂತರ ಮತ್ತು ಸ್ಪರ್ಧಿಸುವ ಉಮೇದುವಾರರ ಸಂಖ್ಯೆಗನುಗುಣವಾಗಿ ಕಂಟ್ರೋಲ್ ಯೂನಿಟ್ ಅನ್ನು ಸೆಟ್ ಮಾಡಿದ ನಂತರ, 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್'ನ್ನು ಮುಚ್ಚಬೇಕು ಮತ್ತು ಅದರ ನಂತರ 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್' ಇದರಲ್ಲಿರುವ ಬ್ಯಾಟರಿಯನ್ನು

ಮತ್ತು 'ಕ್ಯಾಂಡ್ ಸೆಟ್' ಬಟನನ್ನು ಯಾರಿಗೂ ಒತ್ತಲು ಅವಕಾಶ ಇಲ್ಲದಂತೆ ಮುಚ್ಚಿ ಮೊಹರು ಮಾಡಬೇಕು. ಆ ನಂತರ,

10.28.2. 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್' ಹೊದಿಕೆಯನ್ನು ಮೊದಲಿನ ಸ್ಥಾನದಲ್ಲೇ ಇಟ್ಟು ಅದನ್ನು ಗಟ್ಟಿಯಾಗಿ ಮುಚ್ಚಿ ಭದ್ರವಾಗಿ ಒತ್ತಬೇಕು. ನಂತರ, ಎಂ2 ಇವಿಎಂಗಳ (ಬ್ಯಾಟರಿ ಮತ್ತು ಕ್ಯಾಂಡಿಡೇಟ್ ಸೆಟ್ ಬಟನ್‌ಗಾಗಿ ಎರಡು ಪ್ರತ್ಯೇಕ ಬಾಗಿಲುಗಳಿರುವುದರಿಂದ ಎಂ3 ಇವಿಎಂಗಳಲ್ಲಿ ಎಡಭಾಗ ಮತ್ತು ಬಲಭಾಗ) ಎಡಬದಿಯಲ್ಲಿ ಸದರಿ ಉದ್ದೇಶಗಳಿಗಾಗಿ ಒದಗಿಸಿದ ಎರಡು ರಂಧ್ರಗಳಲ್ಲಿ ದಾರವನ್ನು ತೂರಿಸಿ, ದಾರವನ್ನು ಗಟ್ಟಿಯಾಗಿ ಬಿಗಿದು ಕಟ್ಟಿ, ದಾರದ ಎರಡೂ ತುದಿಗಳ ಅಡ್ರೆಸ್ ಟ್ಯಾಗ್ ಮೇಲಿರಿಸಿ ರಿಟರ್ನಿಂಗ್ ಅಧಿಕಾರಿ ಮೊಹರಿನಿಂದ ಅದನ್ನು ಮೊಹರು ಮಾಡಬೇಕು.

10.28.3ಉಮೇದುವಾರರು ಮತ್ತು ಅವರ ಏಜೆಂಟರು ಅಡ್ರೆಸ್ ಟ್ಯಾಗ್‌ನ ಮೇಲೆ ರಿಟರ್ನಿಂಗ್ ಅಧಿಕಾರಿಯ ಮೊಹರಿನ ಜೊತೆಯಲ್ಲಿ ತಮ್ಮ ಮೊಹರುಗಳನ್ನು ಹಾಕಲು ಹಾಗೆ ಬಯಸಿದರೆ ಅವರಿಗೆ ಅವಕಾಶ ನೀಡತಕ್ಕದ್ದು. ಆ ನಂತರ ಕಂಟ್ರೋಲ್ ಯೂನಿಟನ್ನು ಅದರ ಸಾಗಿಸುವ ಪೆಟ್ಟಿಗೆಯಲ್ಲಿ ಇಡತಕ್ಕದ್ದು, ಈಗ ಅದು ಮತದಾನದ ಕೇಂದ್ರಕ್ಕೆ ಸಾಗಿಸುವುದಕ್ಕೆ ಸಿದ್ಧವಾಗಿರುತ್ತದೆ. ಕಂಟ್ರೋಲ್ ಯೂನಿಟ್‌ನ ಹಿಡಿಕೆಯ ಮೇಲೂ ಸಹ ಮೇಲಿನ ವಿವರಗಳನ್ನು ಒಳಗೊಂಡಿರುವ ಅಡ್ರೆಸ್ ಟ್ಯಾಗ್ ಹಾಕಬೇಕು.

## 10.29. ವಿವಿಪ್ಯಾಟ್‌ಅನ್ನು ಸೆಟ್ ಮಾಡುವುದು

10.29.1ಮತದಾನಕ್ಕಾಗಿ ವಿವಿಪ್ಯಾಟ್ ಅನ್ನು ಸಿದ್ಧಪಡಿಸತಕ್ಕದ್ದು. ವಿವಿಪ್ಯಾಟ್ ಯೂನಿಟ್‌ನಲ್ಲಿ ಒಂದು ಹೊಸ ಬ್ಯಾಟರಿ ಪವರ್‌ಅನ್ನು ಅಳವಡಿಸಿ, ಬ್ಯಾಟರಿ ಕಂಪಾರ್ಟ್‌ಮೆಂಟ್‌ನ ಬಾಗಿಲನ್ನು ಮುಚ್ಚತಕ್ಕದ್ದು. ಆದರೆ, ಮತದಾನ ನಡೆಯುವ ಸಮಯದಲ್ಲಿ ಲೋ ಬ್ಯಾಟರಿ ಸ್ಥಿತಿಯನ್ನು ಸೂಚಿಸುತ್ತಿರುವ ಸಂದರ್ಭದಲ್ಲಿ ಪವರ್ ಪ್ಯಾಕ್‌ನ್ನು (ಕಂಟ್ರೋಲ್ ಯೂನಿಟ್ ಸ್ವಿಚ್ ಆಫ್ ಆದ ನಂತರ) ಬದಲಾಯಿಸಬೇಕಾಗಿರುವುದರಿಂದ, ಬ್ಯಾಟರಿ ಕಂಪಾರ್ಟ್‌ಮೆಂಟ್‌ನ ಮೇಲೆ ಯಾವುದೇ ರೀತಿಯ ಸೀಲ್ ಮಾಡುವ ಅಗತ್ಯವಿಲ್ಲ. ವಿವಿಪ್ಯಾಟ್‌ನಲ್ಲಿ ಹೊಸ ಪೇಪರ್ ರೋಲ್‌ಅನ್ನು ಅಳವಡಿಸತಕ್ಕದ್ದು. ಬಿಇಎಲ್/ಇಸಿಐಎಲ್ ಇಂಜಿನಿಯರುಗಳ ಸಹಕಾರದೊಂದಿಗೆ ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ನೀಡಿರುವಂತೆ ಅಭ್ಯರ್ಥಿಗಳ ಕ್ರಮ ಸಂಖ್ಯೆ, ಹೆಸರು ಹಾಗೂ ಅವರಿಗೆ ಹಂಚಿಕೆ ಮಾಡಲಾದ ಚಿಹ್ನೆಗಳು ಮತ್ತು ನೋಟಾ ಆಯ್ಕೆ ಮತ್ತು ಅದರ ಚಿಹ್ನೆಯನ್ನು ವಿವಿಪ್ಯಾಟ್‌ನಲ್ಲಿ ಲೋಡ್ ಮಾಡತಕ್ಕದ್ದು. ಬ್ಯಾಲೆಟ್ ಯೂನಿಟ್‌ನಲ್ಲಿರುವ ಬ್ಯಾಲೆಟ್ ಪೇಪರ್‌ನೊಂದಿಗೆ ಒಂದು ಟೆಸ್ಟ್ ಪ್ರಿಂಟ್‌ಔಟ್ ಅನ್ನು ಪರಿಶೀಲಿಸತಕ್ಕದ್ದು. ನಂತರ

ವಿವಿಪ್ಯಾಟ್, ಪೇಪರ್ ಸ್ಲಿಪ್‌ಗಳನ್ನು ನಿಖರವಾಗಿ ಮುದ್ರಿಸುತ್ತಿದೆಯೇ ಎಂಬುದನ್ನು ಪರಿಶೀಲಿಸಲು ಪ್ರತಿಯೊಬ್ಬ ಅಭ್ಯರ್ಥಿಗೆ ಒಂದೊಂದು ಮತವನ್ನು ಹಾಕತಕ್ಕದ್ದು.

**10.30. ಸಿದ್ಧಪಡಿಸಲಾದ ವಿದ್ಯುನ್ಮಾನ ಮತಯಂತ್ರಗಳು ಹಾಗೂ ವಿವಿಪ್ಯಾಟ್‌ನ ಸುರಕ್ಷಿತ ಸಂರಕ್ಷಣೆ**

10.30.1. ಕಾಯ್ದಿರಿಸಿದ ಯಂತ್ರಗಳೂ ಸೇರಿದಂತೆ ಚುನಾವಣೆಯಲ್ಲಿ ಬಳಸುವುದಕ್ಕಾಗಿ ಸಿದ್ಧಪಡಿಸಲಾದ ಎಲ್ಲ ಮತಯಂತ್ರಗಳನ್ನು ಡಬಲ್ ಲಾಕ್ ಮಾಡಿದ ನಂತರ ಅದಕ್ಕೆ ರಿಟರ್ನಿಂಗ್ ಅಧಿಕಾರಿಯ ಮೊಹರಿನಿಂದ ಮೊಹರು ಮಾಡಿದ ಭದ್ರತಾ ಕೊಠಡಿಯಲ್ಲಿ ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟು ಸಂರಕ್ಷಿಸಬೇಕು. ಉಮೇದುವಾರರು ಮತ್ತು ಅವರ ಏಜೆಂಟರೂ ಹಾಗೆ ಬಯಸಿದರೆ ಲಾಕ್‌ನ ಮೇಲೆ ತಮ್ಮ ಮೊಹರುಗಳನ್ನು ಹಾಕಲು ಅವರಿಗೂ ಸಹ ಅನುಮತಿ ನೀಡಬಹುದು.

10.30.2. ಸುಭದ್ರವಾದ ಕೋಣೆಯನ್ನು ಮತಗಟ್ಟೆ ಸಿಬ್ಬಂದಿ ತಮ್ಮ ತಮ್ಮ ಮತದಾನ ಕೇಂದ್ರಗಳಿಗೆ ಹೊರಡುವದಕ್ಕೆ ಮುಂಚೆ ಅವರಿಗೆ ಮತಯಂತ್ರಗಳನ್ನು ಪೂರೈಸಬೇಕಾದಾಗ ಗೊತ್ತುಪಡಿಸಲಾದ ದಿನಾಂಕದಂದು ಮತ್ತು ಸಮಯದಲ್ಲಿ ಮಾತ್ರ ತೆರೆಯಬೇಕು. ಸ್ಪರ್ಧಿಸುವ ಎಲ್ಲ ಉಮೇದುವಾರರಿಗೆ ಅಥವಾ ಅವರ ಚುನಾವಣಾ ಏಜೆಂಟರಿಗೆ ಭದ್ರತಾ ಕೊಠಡಿಯನ್ನು ತೆರೆಯುವಂತಹ ದಿನಾಂಕ ಮತ್ತು ಸಮಯದ ಬಗ್ಗೆ ಲಿಖಿತವಾಗಿ ಪೂರ್ವಸೂಚನೆಯನ್ನು ನೀಡಬೇಕು. ಭದ್ರತಾ ಕೊಠಡಿಯನ್ನು ತೆರೆಯುವ ಮತ್ತು ಮುಚ್ಚುವ ವಿವರಗಳನ್ನು ನೀಡುವ ಸರಿಯಾದ ಲಾಗ್ ಪುಸ್ತಕವನ್ನು ನಿರ್ವಹಿಸತಕ್ಕದ್ದು.

10.30.3. ತುರ್ತಾದ ಅಥವಾ ಅನಿವಾರ್ಯವಾದ ಯಾವುದೇ ಕಾರಣಕ್ಕಾಗಿ ಗೊತ್ತುಪಡಿಸಲಾದ ದಿನಾಂಕ ಮತ್ತು ಸಮಯಕ್ಕೆ ಮುಂಚೆ ಭದ್ರತಾ ಕೊಠಡಿಯನ್ನು ತೆರೆಯಬೇಕಾದ ಅಗತ್ಯಬಂದರೆ, ರಿಟರ್ನಿಂಗ್ ಅಧಿಕಾರಿಯು ಉಮೇದುವಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳಿಗೆ ನೋಟೀಸ್ ಕಳುಹಿಸಬೇಕು ಮತ್ತು ಅವರ ಸಮ್ಮುಖದಲ್ಲಿ ಕೊಠಡಿಯನ್ನು ತೆರೆಯಬೇಕು ಕೋಣೆಯನ್ನು ತೆರೆದ ಉದ್ದೇಶವು ಮುಗಿದ ನಂತರ ಕೂಡಲೇ ಕೋಣೆಯನ್ನು ಮತ್ತೆ ಮುಚ್ಚಿ ಮೊಹರು ಮಾಡಬೇಕು. ಹಾಗೆ ಕೋಣೆಯನ್ನು ತೆರೆಯುವ ಮತ್ತು ಮುಚ್ಚುವ ವಿವರಗಳನ್ನು ಸಹ, ಮೇಲೆ ತಿಳಿಸಲಾದ ಲಾಗ್ ಪುಸ್ತಕದಲ್ಲಿ ನಿಖರವಾಗಿ ಮತ್ತು ಪೂರ್ಣವಾಗಿ ಪ್ರತಿಬಿಂಬಿಸಬೇಕು ಮತ್ತು ಇಡೀ ಪ್ರಕ್ರಿಯೆಯನ್ನು ವೀಡಿಯೋದಲ್ಲಿ ಚಿತ್ರೀಕರಿಸಬೇಕು.

10.30.4. ಭದ್ರತಾ ಕೊಠಡಿಗೆ ಪೊಲೀಸ್ ಉಪಅಧೀಕ್ಷಕರ (ಡಿವೈಎಸ್ಪಿ) ದರ್ಜೆಗಿಂತ ಕಡಿಮೆಯಲ್ಲದ ಹಿರಿಯ ಪೊಲೀಸ್ ಅಧಿಕಾರಿಯ ಪ್ರಭಾರದಲ್ಲಿ ಎಲ್ಲಾ ಸಮಯಗಳಲ್ಲಿ ಸಂಪೂರ್ಣವಾಗಿ ಕಾವಲಿರತಕ್ಕದ್ದು. ಸಾಧ್ಯವಿರುವಲ್ಲಿ ಅಂತಹ ಕಾವಲು ಕಾರ್ಯಕ್ಕಾಗಿ ಕೇಂದ್ರ ಪೋಲಿಸ್ ಪಡೆಗಳನ್ನು ಬಳಸಿಕೊಳ್ಳತಕ್ಕದ್ದು.

## 10.31 ಮತಯಂತ್ರಗಳ ದಾಖಲೆಗಳ ನಿರ್ವಹಣೆ

10.31.1 ಚುನಾವಣೆಯಲ್ಲಿ ಬಳಸಲಾದ ಎಲ್ಲ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಸಂಪೂರ್ಣ ದಾಖಲೆಯನ್ನು ರಿಟರ್ನಿಂಗ್ ಅಧಿಕಾರಿಯು ಇಡತಕ್ಕದ್ದು. ಆ ದಾಖಲೆಯಲ್ಲಿ ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಬಳಸಲಾದ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಸಂಖ್ಯೆಯ ಜೊತೆಗೆ ಅಂತಹ ಪ್ರತಿಯೊಂದು ಯೂನಿಟ್‌ನ ಕ್ರಮಸಂಖ್ಯೆಗಳನ್ನು ಸ್ಪಷ್ಟವಾಗಿ ತೋರಿಸಬೇಕು. ಈ ದಾಖಲೆಯಲ್ಲಿ ಬಳಕೆಗಾಗಿ ಸಿದ್ಧಪಡಿಸಿದ ಮತ್ತು ಮೀಸಲಿರಿಸಿದ ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಹಾಗೂ ವಿವಿಪ್ಯಾಟ್‌ಗಳ ಸಂಖ್ಯೆಯ ಜೊತೆಗೆ ಅವುಗಳ ಕ್ರಮಸಂಖ್ಯೆಯನ್ನೂ ಸಹ ತೋರಿಸಬೇಕು. ಅಂತಹ ಯಾವುವೇ ಕಂಟ್ರೋಲ್ ಯೂನಿಟ್‌ಗಳು ಅಥವಾ ಬ್ಯಾಲೆಟ್ ಯೂನಿಟ್‌ಗಳನ್ನು ಅಥವಾ ವಿವಿಪ್ಯಾಟ್‌ಗಳನ್ನು ಬಳಸಿದ್ದರೆ ಎಲ್ಲಿ ಅಂತಹ ಪ್ರತಿಯೊಂದು ಯೂನಿಟ್‌ನ್ನು ಬಳಸಲಾಯಿತೆಂಬ ಬಗೆಗಿನ ಸಂಪೂರ್ಣ ದಾಖಲೆಯನ್ನು ಸರಿಯಾಗಿ ನಿರ್ವಹಿಸಬೇಕು ಮತ್ತು ಅದರಲ್ಲಿ ಕಾಯ್ದಿರಿಸಿದ ಯೂನಿಟ್‌ನ ಬಳಕೆಯ ಅವಶ್ಯಕತೆಯ ಕಾರಣಗಳನ್ನು ಸಹ ತೋರಿಸಬೇಕು.

## 10.32. ಮತಗಟ್ಟೆ ಸಿಬ್ಬಂದಿಗೆ ಮತಯಂತ್ರಗಳ ಸರಬರಾಜು

10.32.1. ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಮಾತ್ರ ಮತಯಂತ್ರಗಳನ್ನು ಒದಗಿಸಬೇಕಿದ್ದು, ಇದಕ್ಕಾಗಿ ಪ್ರತಿಯೊಬ್ಬ ಪ್ರಿಸೈಡಿಂಗ್ ಅಧಿಕಾರಿಯಿಂದ ಯುಕ್ತ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು. ಈ ಉದ್ದೇಶಕ್ಕಾಗಿ, ರಿಟರ್ನಿಂಗ್ ಅಧಿಕಾರಿಯು ಮತದಾನ ಕೇಂದ್ರಗಳ ಸಂಖ್ಯೆ ಮತ್ತು ಹೆಸರು, ಪ್ರಿಸೈಡಿಂಗ್ ಅಧಿಕಾರಿಯ ಹೆಸರು ಮತ್ತು ಆತನಿಗೆ ಒದಗಿಸಲಾದ ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್(ಗಳು) ಹಾಗೂ ವಿವಿಪ್ಯಾಟ್‌ನ

ಕ್ರಮಸಂಖ್ಯೆಗಳು ಹಾಗೂ ಅವುಗಳನ್ನು ಪಡೆದುಕೊಂಡ ಸಂಕೇತವಾಗಿ ಆತನ ಪೂರ್ಣ ಸಹಿಯನ್ನು ತೋರಿಸುವ  ಒಂದು ಪ್ರತ್ಯೇಕ ರಿಜಿಸ್ಟರನ್ನು ಇಡತಕ್ಕದ್ದು.

10.32.2. ಆ ರಿಜಿಸ್ಟರಿನಲ್ಲಿ ಪ್ರಿಸೈಡಿಂಗ್ ಅಧಿಕಾರಿಗಳಿಂದ ಹಿಂದಕ್ಕೆ ಪಡೆದುಕೊಂಡ ಮತಯಂತ್ರಗಳ ಸರಿಯಾದ ಲೆಕ್ಕವನ್ನು ಇಡಲು ಮತ್ತಷ್ಟು ವ್ಯವಸ್ಥೆ ಮಾಡಿರಬೇಕು.

10.32.3. ಯಾವುದೇ ವಿದ್ಯುನ್ಮಾನ ಮತಯಂತ್ರಗಳು ಅಥವಾ ವಿವಿಪ್ಯಾಟ್‌ನ ಬದಲಾವಣೆಯ ತುರ್ತು ಅವಶ್ಯಕತೆ ಉಂಟಾದಲ್ಲಿ ಯಾವುದೇ ಮತದಾನ ಕೇಂದ್ರಕ್ಕೆ ಸಾಧ್ಯವಾದಷ್ಟು ಕಡಿಮೆ ಸಮಯದಲ್ಲಿ ಕಾಯ್ದಿರಿಸಿದ ಮತ ಯಂತ್ರಗಳನ್ನು ಒದಗಿಸುವುದಕ್ಕಾಗಿ ಮತದಾನದ ದಿನದಂದು ಚುನಾವಣಾ ಕ್ಷೇತ್ರದ ಕೇಂದ್ರ ಸ್ಥಳ ಅಥವಾ ಸ್ಥಳಗಳಲ್ಲಿ ಕಾಯ್ದಿರಿಸಿದ ಮತ ಯಂತ್ರಗಳನ್ನು ಇಟ್ಟಿರಬೇಕು. ಈ ಮತಯಂತ್ರಗಳನ್ನು ಸಹಾಯಕ ರಿಟರ್ನಿಂಗ್ ಅಧಿಕಾರಿಗಳಲ್ಲಿ ಒಬ್ಬರು ಅಥವಾ ರಿಟರ್ನಿಂಗ್ ಅಧಿಕಾರಿಯಿಂದ ಆ ಉದ್ದೇಶಕ್ಕಾಗಿ ವಿಶೇಷವಾಗಿ ನೇಮಕಗೊಂಡ ಇತರ ಹಿರಿಯ ಅಧಿಕಾರಿಯ ಪ್ರಭಾರದಲ್ಲಿ ಇಟ್ಟಿರಬೇಕು.

# 11. ಅಂಚೆ ಮತಪತ್ರಗಳು

## 11.1. ಸೇವಾ ಮತದಾರರು

11.1.1 ಸೇವಾ ಮತದಾರರು (ಒಬ್ಬನ ಪರವಾಗಿ ಬೇರೊಬ್ಬ (ಪ್ರತಿನಿಧಿ) ಮತ ಚಲಾಯಿಸಲು ಪ್ರತಿನಿಧಿ/ಬದಲಿ ಮತದಾರರಾಗಿ ಆಯ್ಕೆಗೊಂಡ ವ್ಯಕ್ತಿಗಳನ್ನು ಹೊರತುಪಡಿಸಿ) ಅಂಚೆ ಮತಪತ್ರಗಳನ್ನು ಪಡೆಯಲು ಅರ್ಹರಾಗಿರುತ್ತಾರೆ (ಅನುಬಂಧ – 40).

11.1.2. ಮತದಾರರ ಪಟ್ಟಿಯ ಕೊನೆಯ ಭಾಗದಲ್ಲಿ ಹೆಸರುಗಳನ್ನು ಸೇರಿಸಿದ್ದು, ಪರಂತು ಅವರು ಪ್ರತಿನಿಧಿ (ಪ್ರಾಕ್ಸಿ) ಮತದಾನಕ್ಕಾಗಿ ಆಯ್ಕೆ ಮಾಡಿರದಂಥ ಎಲ್ಲಾ ಸೇವಾ ಮತದಾರರಿಗೆ ಅಂಚೆ ಮತಪತ್ರಗಳನ್ನು ಕಳುಹಿಸಬೇಕು. ಪ್ರತಿನಿಧಿ (ಪ್ರಾಕ್ಸಿ) ಯನ್ನು ನೇಮಕ ಮಾಡಿರುವ ಸೇವಾ ಮತದಾರರನ್ನು ವರ್ಗೀಕೃತ ಸೇವಾ ಮತದಾರರು (ಸಿಎಸ್‌ವಿಗಳು) ಎಂದು ಕರೆಯಲಾಗಿದೆ. ಅವರ ಸಂದರ್ಭದಲ್ಲಿ, ಪ್ರತಿನಿಧಿಯು (ಪ್ರಾಕ್ಸಿ) ಸೇವಾ ಮತದಾರನ ಮನೆಯ ವಿಳಾಸವನ್ನು ಒಳಗೊಂಡಿರುವ ಪ್ರದೇಶಕ್ಕಾಗಿ ನಿಯೋಜಿಸಿರುವ ಮತದಾನ ಕೇಂದ್ರದಲ್ಲಿ ಮತ ಚಲಾಯಿಸುತ್ತಾನೆ. 21.10.2016ರ ಅಧಿಸೂಚನೆ ರೀತ್ಯಾ ಚುನಾವಣೆ ನಡೆಸುವ ನಿಯಮಗಳು, 1961ರ ತಿದ್ದುಪಡಿಗಳಂತೆ ಸೇವಾ ಮತದಾರರ ಅಂಚೆ ಮತಪತ್ರಗಳನ್ನು, 18ನೇ ನಿಯಮದ ಖಂಡ (3)ರ (ii) ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ (ಅಂದರೆ, ಸೇವಾ ಮತದಾರರಿಗೆ) ರಿಟರ್ನಿಂಗ್ ಅಧಿಕಾರಿಯು ಭಾರತ ಚುನಾವಣಾ ಆಯೋಗ ನಿರ್ದಿಷ್ಟಪಡಿಸಿದಂತೆ ವಿದ್ಯುನ್ಮಾನ ಸಾಧನದ ಮೂಲಕ ವರ್ಗಾಯಿಸಬಹುದು. ಅಂಚೆ ಮತಪತ್ರವನ್ನು ವಿದ್ಯುನ್ಮಾನವಾಗಿ ವರ್ಗಾಯಿಸಿದ್ದಲ್ಲಿ, ಯಥೋಚಿತ ವ್ಯತ್ಯಾಸಗಳೊಂದಿಗೆ ಈ ನಿಯಮ ಮತ್ತು 22ನೇ, 24ನೇ ಮತ್ತು 27ನೇ ನಿಯಮಗಳ ಉಪಬಂದಗಳು ಅನ್ವಯವಾಗತಕ್ಕದ್ದು.

11.1.3. ಚುನಾವಣೆ ನಡೆಸುವ ನಿಯಮಗಳು, 1961ರ 23ನೇ ನಿಯಮದ (1)ನೆ ಉಪ–ನಿಯಮದ ದ್ವಿತೀಯ ಪರಂತುಕ ಉಪಬಂಧಗಳ ಪರಿಭಾಷೆಯಲ್ಲಿ, ಆಯೋಗವು ಸೇವಾ ಮತದಾರರಿಗೆ ಎಲೆಕ್ಟ್ರಾನಿಕ್ ಸಾಧನಗಳ ಮೂಲ ಅಂಚೆ ಮತಪತ್ರಗಳ ವರ್ಗಾವಣೆಗಾಗಿ ಈ ಮುಂದಿನ ವಿಧಾನವನ್ನು ನೀಡಿದೆ. ರಿಟರ್ನಿಂಗ್ ಅಧಿಕಾರಿಯು ಈ ಮುಂದಿನ ದಸ್ತಾವೇಜುಗಳನ್ನು ವಿದ್ಯುನ್ಮಾನ ರೂಪದಲ್ಲಿ ವರ್ಗಾಯಿಸತಕ್ಕದ್ದು:

(ಎ) ಅಂಚೆ ಮತ ಪತ್ರ,

(ಬಿ) ನಮೂನೆ 13–ಎ– ಮತದಾರನ ಘೋಷಣೆ,

(ಸಿ) ನಮೂನೆ 13–ಬಿ ಗಾಗಿ ಲೇಬಲ್ಲು–ಕವರ್ ಎ (ಒಳ ಲಕೋಟೆ),

(ಡಿ) ನಮೂನೆ 13–ಸಿ ಗಾಗಿ ಲೇಬಲ್ಲು–ಕವರ್ ಬಿ (ಹೊರ ಲಕೋಟೆ),

(ಇ) ನಮೂನೆ 13–ಡಿ– ಮತದಾರನ ಮಾರ್ಗದರ್ಶನಕ್ಕಾಗಿ ಸೂಚನೆಗಳು.

ಉಮೇದುವಾರಿಕೆಯನ್ನು ಹಿಂಪಡೆಯುವ ಅವಧಿಯು ಮುಕ್ತಾಯವಾದ ನಂತರ, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿದ ಕೂಡಲೇ, ರಿಟರ್ನಿಂಗ್ ಅಧಿಕಾರಿಯು ಸೇವಾ ಮತದಾರರಿಗಾಗಿ ಅಂಚೆ ಮತಪತ್ರಗಳನ್ನು ತಯಾರಿಸಿಕೊಳ್ಳತಕ್ಕದ್ದು ಮತ್ತು **ಉಮೇದುವಾರಿಕೆ ಹಿಂಪಡೆಯುವ ಕೊನೆಯ ದಿನಾಂಕದ ನಂತರದ ಮರುದಿನದ ಒಳಗಾಗಿ ಸೇವಾ ಮತದಾರರಿಗೆ ಅಂಚೆ ಮತಪತ್ರಗಳನ್ನು ಮತ್ತು ತತ್ಸಂಬಂಧಿತ ಇತರ ಪತ್ರಗಳನ್ನು ವಿದ್ಯುನ್ಮಾನ ರೂಪದಲ್ಲಿ (On ETPBs) ಅಪ್‌ಲೋಡ್ ಮಾಡುವ ಸಲುವಾಗಿ** ವ್ಯವಸ್ಥೆ ಮಾಡತಕ್ಕದ್ದು.

## 11.2 ಅಂಚೆ ಮತಪತ್ರಗಳು – ನಮೂನೆ ಮತ್ತು ಭಾಷೆ

11.2.1. ಎರಡು ಪ್ರಕಾರದ ಅಂಚೆ ಮತಪತ್ರಗಳಿಗಾಗಿ ಬೇರೆ ಬೇರೆ ನಿರ್ದಿಷ್ಟ ವಿವರಗಳಿರುತ್ತವೆಂಬುದನ್ನು ಗಮನಿಸಬಹುದಾಗಿದೆ. ಎಂದರೆ,–

(i) ಸೇವಾ ಮತದಾರರಿಗೆ ಸಂಬಂಧಿಸಿದ ಅಂಚೆ ಮತಪತ್ರಗಳು;

(ii) ಅಂಚೆ ಮತಪತ್ರದ ಮೂಲಕ ಮತಚಲಾಯಿಸಲು ಹಕ್ಕು ಹೊಂದಿರುವ' ಇತರ ಪ್ರವರ್ಗಗಳ ಮತದಾರರಿಗೆ ಸಂಬಂಧಿಸಿದ ಅಂಚೆ ಮತಪತ್ರಗಳು.

11.2.2. ಸೇವಾ ಮತದಾರರಿಗಾಗಿ, ಅಭ್ಯರ್ಥಿಗಳ ಹೆಸರು ಮತ್ತು ಪಕ್ಷದ ಸಂಲಗ್ನತೆ ಸಂಬಂಧಿಸಿದ ವಿವರಗಳನ್ನು ರಾಜ್ಯದ ಆಡಳಿತ/ ಅಧಿಕೃತ ಭಾಷೆಯಲ್ಲಿ ಮತ್ತು ಇಂಗ್ಲೀಷಿನಲ್ಲಿ ಮುದ್ರಿಸಲು ಮುಂದುವರಿಸತಕ್ಕದ್ದು. ಸೇವಾ ಮತದಾರರಿಗಾಗಿ ಅಂಚೆ ಮತಪತ್ರದಲ್ಲಿ ಚುನಾವಣಾ ಚಿಹ್ನೆಯನ್ನು ಪ್ರಿಂಟ್ ಮಾಡತಕ್ಕದ್ದಲ್ಲ. ಅದರಲ್ಲಿ ಅಭ್ಯರ್ಥಿಗಳ ಭಾವಚಿತ್ರಗಳನ್ನು ಸಹ ಪ್ರಿಂಟ್ ಮಾಡತಕ್ಕದ್ದು. ಒಂದು ಅಂಕಣದಲ್ಲಿ ಪ್ರಿಂಟ್ ಮಾಡಿದಾಗ, ಅಗತ್ಯವೆಂದು ಪರಿಗಣಿಸಿದಂತೆ ಮತ ಪತ್ರದ ಅಗಲವು 4" ಮತ್ತು 6"ರ ನಡುವೆ ಇರತಕ್ಕದ್ದು. ಅಭ್ಯರ್ಥಿಗಳ ಹೆಸರುಗಳ ಜೊತೆಗೆ ಅವರ ಪಕ್ಷದ ಸಂಲಗ್ನತೆ ಯಾವುದಾದರೂ ಇದ್ದಲ್ಲಿ, ಅದನ್ನು ಸಹ ಮುದ್ರಿಸಬೇಕು. ಅಂದರೆ, ಅಭ್ಯರ್ಥಿಯನ್ನು ರೂಪಿಸುವಂಥ ರಾಜಕೀಯ ಪಕ್ಷದ ಹೆಸರನ್ನು ಅಭ್ಯರ್ಥಿಯ ಹೆಸರಿನ ಕೆಳಗೆ ಪ್ರಿಂಟ್ ಮಾಡಬೇಕಾಗುತ್ತದೆ. ಸ್ವತಂತ್ರ ಅಭ್ಯರ್ಥಿಗಳ ಸಂದರ್ಭದಲ್ಲಿ "ಪಕ್ಷೇತರ" ಎಂಬ ಪದವನ್ನು ಪ್ರಿಂಟ್ ಮಾಡಬೇಕು.

11.2.3. ಮತದಾರರ ಇತರೆ ಪ್ರವರ್ಗಗಳಿಗೆ ಅಂದರೆ, (ಸೇವಾ ಮತದಾರರಲ್ಲದ) ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಲು ಹಕ್ಕು ಹೊಂದಿರುವಂಥವರಿಗೆ ಇರುವ ಅಂಚೆ ಮತ ಪತ್ರಗಳಿಗೆ

ಸಂಬಂಧಿಸಿದಂತೆ, ಅಂಥ ಮತಪತ್ರಗಳ ಮೇಲೆ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿದ ಚುನಾವಣಾ ಚಿಹ್ನೆಗಳನ್ನು ಮತ್ತು ಅಭ್ಯರ್ಥಿಗಳ ಭಾವಚಿತ್ರಗಳನ್ನು ಸಹ ಪ್ರಿಂಟ್ ಮಾಡತಕ್ಕದ್ದು. ಮತ ಪತ್ರದಲ್ಲಿರುವ ವಿವರಗಳನ್ನು ರಾಜ್ಯದ ಆಡಳಿತ/ ಅಧಿಕೃತ ಭಾಷೆಯಲ್ಲಿ ಹಾಗೂ ಇಂಗ್ಲೀಷಿನಲ್ಲಿ ಸಹ (ಇಂಗ್ಲೀಷ್ ಅಧಿಕೃತ ಭಾಷೆ ಆಗಿರದಿದ್ದಲ್ಲಿ) ಮುದ್ರಿಸಬೇಕು. ಮತದಾರರ ಇಂಥ ಪ್ರವರ್ಗಗಳ ಅಂಚೆ ಮತಪತ್ರದ ಸಂದರ್ಭದಲ್ಲಿ, ಮತಪತ್ರದ ಮೇಲೆ ಪಕ್ಷದ ಸಂಲಗ್ನತೆಯನ್ನು ಪ್ರಿಂಟ್ ಮಾಡಬೇಕಾದ ಅಗತ್ಯವಿರುವುದಿಲ್ಲ. ಅಭ್ಯರ್ಥಿಯ ಭಾವಚಿತ್ರ ಮತ್ತು ಮತ ಚಲಾಯಿಸಲು ಇರುವ ಸ್ಥಳದ ನಡುವೆ ಚುನಾವಣಾ ಚಿಹ್ನೆಯನ್ನು ಮುದ್ರಿಸತಕ್ಕದ್ದು.

ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಲು ಅರ್ಹರಾದ ಇತರ ಪ್ರವರ್ಗಗಳ ಮತದಾರರಿಗೆ ಸಂಬಂಧಿಸಿದ ಅಂಚೆ ಮತ ಪತ್ರಗಳ ಸಂದರ್ಭದಲ್ಲಿ, ಆಯೋಗವು ನಿರ್ಧಿಷ್ಟಪಡಿಸಿದಂತೆ "ಮೇಲಿನ ಯಾರೂ ಅಲ್ಲ" ಎಂಬ ಆಯ್ಕೆಯ ಚಿಹ್ನೆಯನ್ನು ಅಂಚೆ ಮತಪತ್ರದ ಮೇಲೆ ಚುನಾವಣಾ ಚಿಹ್ನೆಯನ್ನು ಮುದ್ರಿಸುವುದಕ್ಕೆ ಉದ್ದೇಶಿಸಿದ ಕಾಲಮಿನಲ್ಲಿ ಮುದ್ರಿಸತಕ್ಕದ್ದು.

11.2.4. ಎರಡೂ ಪ್ರಕಾರದ ಅಂಚೆ ಮತ ಪತ್ರಗಳ ಮೇಲೆ ಅಭ್ಯರ್ಥಿಗಳ ಭಾವಚಿತ್ರವನ್ನು ಮುದ್ರಿಸತಕ್ಕದ್ದು. ಅಭ್ಯರ್ಥಿಗಳ ಭಾವಚಿತ್ರವನ್ನು ಅಭ್ಯರ್ಥಿಗಳ ಹೆಸರಿನ ಪ್ಯಾನಲ್‌ನಲ್ಲಿ ಮುದ್ರಿಸತಕ್ಕದ್ದು ಮತ್ತು ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯ ನಡುವಿನಲ್ಲಿರುವ ಹೆಸರಿನ ಬಲ ಭಾಗದಲ್ಲಿ ಅಥವಾ ಸಂದರ್ಭಾನುಸಾರ, ಮತ/ ಒಪ್ಪಿಗೆಯನ್ನು ಗುರುತಿಸುವುದಕ್ಕಾಗಿ ಇರುವ ಅಂಕಣದಲ್ಲಿ ತೋರಿಸತಕ್ಕದ್ದು. ಮತ ಪತ್ರದಲ್ಲಿ ಪ್ರಿಂಟ್ ಮಾಡಿದ ಭಾವಚಿತ್ರದ ಗಾತ್ರವು 2 ಸೆಂ. ಮೀ x 2.5 ಸೆಂ. ಮೀ. ಇರತಕ್ಕದ್ದು.

## 11.3. ಚುನಾವಣಾ ಕರ್ತವ್ಯದಲ್ಲಿರುವ ಸಿಬ್ಬಂದಿಗಳಿಗೆ ಅಂಚೆ ಮತಪತ್ರಗಳು

11.3.1. ಅಂಚೆ ಮತಪತ್ರ (ಪಿಬಿ) ಮತ್ತು ಚುನಾವಣಾ ಕರ್ತವ್ಯ ಪ್ರಮಾಣಪತ್ರ (ಇಡಿಸಿ) ಪಡೆಯುವುದಕ್ಕೆ ಹಕ್ಕುಳ್ಳ ಚುನಾವಣಾ ಕರ್ತವ್ಯದ ಮೇಲಿರುವ ವ್ಯಕ್ತಿಗಳು – ತಾವು ಮತದಾರರಾಗಿ ನೋಂದಾಯಿಸಿಕೊಂಡಿರುವ ಮತಗಟ್ಟೆಯಲ್ಲಿ ತಮ್ಮ ಮತ ಚಲಾಯಿಸಲು ಸಾಧ್ಯವಾಗದಿರುವ ಚುನಾವಣಾ ಕರ್ತವ್ಯಕ್ಕೆ ನೇಮಕಗೊಂಡ ಎಲ್ಲಾ ವ್ಯಕ್ತಿಗಳು ಚುನಾವಣಾ ಪ್ರಮಾಣಪತ್ರದ ಅಥವಾ ಅಂಚೆ ಮತಪತ್ರದ ಸೌಲಭ್ಯವನ್ನು ಪಡೆಯಲಿಕ್ಕೆ ಹಕ್ಕುಳ್ಳವರಾಗಿರುತ್ತಾರೆ. ಒಂದು ಪಕ್ಷ ಅವರನ್ನು ಅವರು ಮತದಾರರಾಗಿ ನೋಂದಾಯಿಸಿಕೊಂಡ ಚುನಾವಣಾ ಕ್ಷೇತ್ರದಲ್ಲಿಯೇ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದಲ್ಲಿ, ಅವರು ಚುನಾವಣಾ ಕರ್ತವ್ಯ ಪ್ರಮಾಣಪತ್ರ ಪಡೆಯಲಿಕ್ಕೆ ಹಕ್ಕುಳ್ಳವರಾಗಿರುತ್ತಾರೆ. ಇದರಿಂದಾಗಿ, ಅವರು ತಾವು ಕರ್ತವ್ಯದ ಮೇಲಿರುವ ಮತಗಟ್ಟೆಯಲ್ಲಿಯೇ

ಮತ ಚಲಾಯಿಸುವ ಹಕ್ಕನ್ನು ಪಡೆಯುತ್ತಾರೆ. ಒಂದು ಪಕ್ಷ ಅವರು ಮತದಾರರಾಗಿ ನೋಂದಾಯಿಸಿಕೊಂಡಿರುವ ಮತಕ್ಷೇತ್ರಕ್ಕಿಂತ ಬೇರೆಯಾದ ಮತಕ್ಷೇತ್ರದಲ್ಲಿ ಕರ್ತವ್ಯದ ಮೇಲೆ ನಿಯೋಜನೆಗೊಂಡಿದ್ದರೆ ಅವರು ಅಂಚೆ ಮತಪತ್ರ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಈ ವ್ಯಕ್ತಿಗಳಲ್ಲಿ, ಚುನಾವಣಾ ಸಂಬಂಧದಲ್ಲಿ ಕರ್ತವ್ಯದ ಮೇಲಿರುವ ಕಾರಣಕ್ಕಾಗಿ ತಾವು ಮತದಾರರಾಗಿ ನೋಂದಾಯಿಸಿಕೊಂಡಿರುವ ಮತಗಟ್ಟೆಗಳಲ್ಲಿ ತಮ್ಮ ಮತಗಳನ್ನು ಚಲಾಯಿಸಲು ಸಾಧ್ಯವಾಗದಿರುವ ಮತದಾನ ತಂಡಗಳಲ್ಲಿರುವ ನೌಕರರು, ಸೆಕ್ಟರ್ ಅಧಿಕಾರಿಗಳು, ವಲಯ ಅಧಿಕಾರಿಗಳು, ರಿಟರ್ನಿಂಗ್ ಅಧಿಕಾರಿಗಳು ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾ ಉಪ ಚುನಾವಣಾಧಿಕಾರಿ, ಜಿಲ್ಲಾ ಚುನಾವಣಾಧಿಕಾರಿ ಹಾಗೂ ರಿಟರ್ನಿಂಗ್ ಅಧಿಕಾರಿಯವರ ಕಚೇರಿಗಳಲ್ಲಿ ನಿಯೋಜಿತರಾದ ಸಿಬ್ಬಂದಿಗಳು, ನಿಯಂತ್ರಣ ಕೊಠಡಿ, ಇತರ ಚುನಾವಣಾ ಸಂಬಂಧಿತ ಕಚೇರಿಗಳಲ್ಲಿ ನಿಯೋಜಿತರಾದ ಸಿಬ್ಬಂದಿಗಳು, ಸೂಕ್ಷ್ಮ ವೀಕ್ಷಕರು, ಚುನಾವಣಾ ಕರ್ತವ್ಯಕ್ಕಾಗಿ ನಿಯೋಜಿತರಾದ ಎಲ್ಲಾ ಪೊಲೀಸ್ ಸಿಬ್ಬಂದಿ, ಗೃಹ ರಕ್ಷಕರು, ವಾಹನಗಳ ಚಾಲಕರು, ನಿರ್ವಾಹಕರು ಮತ್ತು ಕ್ಲೀನರ್‌ಗಳು ಇತ್ಯಾದಿಗಳು ಸೇರಿರುತ್ತಾರೆ. ಅಭ್ಯರ್ಥಿಗಳ ಚುನಾವಣಾ ಏಜೆಂಟರು ಕೂಡ ಈ ಉದ್ದೇಶಕ್ಕಾಗಿ ಚುನಾವಣಾ ಕರ್ತವ್ಯದ ಮೇಲಿರುವ ಮತದಾರರ ಪ್ರವರ್ಗಕ್ಕೆ ಬರುತ್ತಾರೆ. ಯಾರೇ ವ್ಯಕ್ತಿಯು ತಾನು ಮತದಾರನಾಗಿ ನೋಂದಾಯಿಸಿಕೊಂಡಿರುವ ಮತಕ್ಷೇತ್ರದಲ್ಲಿಯೇ ಚುನಾವಣಾ ಕರ್ತವ್ಯದ ಮೇಲೆ ನಿಯೋಜನೆಗೊಂಡಿದ್ದಲ್ಲಿ ಆ ವ್ಯಕ್ತಿಯು ಇಡಿಸಿ (ಚುನಾವಣಾ ಕರ್ತವ್ಯದ ಪ್ರಮಾಣಪತ್ರ) ಪಡೆಯಲು ಹಕ್ಕುಳ್ಳವನಾಗಿರುತ್ತಾನೆ ಮತ್ತು ಬೇರೆ ಯಾವುದೇ ಮತಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯದ ಮೇಲೆ ನಿಯೋಜನೆಗೊಂಡಿದ್ದಲ್ಲಿ ಅಂಚೆ ಮತಪತ್ರವನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

11.3.2. ರಾಜಕೀಯ ಪಕ್ಷಗಳಿಗೆ ಮಾಹಿತಿ – ಎಲ್ಲಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಸೌಲಭ್ಯ ಕೇಂದ್ರಗಳಲ್ಲಿ ನಡೆಸಲಾಗುವ ಅಂಚೆ ಮತದಾನದ ವೇಳಾಪಟ್ಟಿಯನ್ನು ಲಿಖಿತವಾಗಿ ತಿಳಿಸಬೇಕು. ರಾಜಕೀಯ ಪಕ್ಷಗಳಿಗೆ ಸೌಲಭ್ಯ ಕೇಂದ್ರಗಳಲ್ಲಿ ನಡೆಯುವ ಅಂಚೆ ಮತದಾನ ಪ್ರಕ್ರಿಯೆಯನ್ನು ಸಾಕ್ಷೀಕರಿಸಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

11.3.3. ಅಂಚೆ ಮತದಾನಕ್ಕಾಗಿ ನಿಗದಿಪಡಿಸಬೇಕಾದ ಸಮಯ – ಪ್ರತಿಯೊಂದು ತರಬೇತಿ ಅಧಿವೇಶನದಲ್ಲಿ, ಕನಿಷ್ಠ 2 ಗಂಟೆಗಳನ್ನು ಅಂಚೆ ಮತದಾನದ ಅನುಕೂಲಕ್ಕಾಗಿ ನಿಗದಿಪಡಿಸತಕ್ಕದ್ದು. ಅಗತ್ಯವಿದ್ದರೆ, ಈ ಉದ್ದೇಶಕ್ಕಾಗಿ 2 ಗಂಟೆಗಳಿಗಿಂತ ಹೆಚ್ಚು ಸಮಯವನ್ನು ಅಗತ್ಯಕ್ಕನುಗುಣವಾಗಿ ನಿಗದಿಪಡಿಸಬಹುದು. ತರಬೇತಿಯು ಮುಕ್ತಾಯವಾದ ನಂತರ ಅಂಚೆ ಮತದಾನವನ್ನು ನಡೆಸತಕ್ಕದ್ದು. ತರಬೇತಿಯು ಮುಕ್ತಾಯವಾದ ನಂತರ ಮತ್ತು ಅಂಚೆ ಮತದಾನ ಪ್ರಕ್ರಿಯೆಯು

ಪ್ರಾರಂಭವಾದ ನಂತರ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಸೌಲಭ್ಯ ಕೇಂದ್ರದೊಳಗೆ ಬರಲು ಅವಕಾಶ ನೀಡತಕ್ಕದ್ದು.

11.3.4. ಅಭ್ಯರ್ಥಿಗಳ ಪ್ರತಿನಿಧಿಗಳಿಗಾಗಿ ವ್ಯವಸ್ಥೆಗಳು – ಅಭ್ಯರ್ಥಿಗಳ ಪ್ರತಿನಿಧಿಗಳಿಗಾಗಿ ಅಂಚೆ ಮತದಾನ ಪ್ರಕ್ರಿಯೆಗೆ ಅಡಚಣೆ ಉಂಟಾಗದಂತೆ ಕುಳಿತು ಅಂಚೆ ಮತದಾನ ಪ್ರಕ್ರಿಯೆಯನ್ನು ವೀಕ್ಷಿಸಲು ವ್ಯವಸ್ಥೆಯನ್ನು ಮಾಡತಕ್ಕದ್ದು. ಅಂಚೆ ಮತದಾನ ಪ್ರಕ್ರಿಯೆಗೆ ಯಾರೇ ವ್ಯಕ್ತಿಯು ಅಡಚಣೆಯನ್ನುಂಟುಮಾಡಿದರೆ, ಸೌಲಭ್ಯ ಕೇಂದ್ರದ ಪ್ರಭಾರ ಅಧಿಕಾರಿಯು ಅಂತಹ ವ್ಯಕ್ತಿಗೆ ಕೇಂದ್ರದ ಆವರಣದಿಂದ ತಕ್ಷಣವೇ ಹೊರಹೋಗುವಂತೆ ಆದೇಶಿಸಬಹುದು.

11.3.5. ಅಂಚೆ ಮತ ಪತ್ರ ಹಾಕುವುದಕ್ಕೆ ಅನುವಾಗುವಂತೆ ಕಲ್ಪಿಸಲಾದ ಮತ ಪೆಟ್ಟಿಗೆಯಲ್ಲಿ ಅಂಚೆ ಮತಪತ್ರಗಳನ್ನು ಹಾಕುವುದು: ಅಂಚೆ ಮತ ಪತ್ರಗಳನ್ನು ಹಾಕುವುದಕ್ಕಾಗಿ ಮೇಲ್ಭಾಗದ ತುದಿಯಲ್ಲಿ ಒಂದು ರಂಧ್ರವಿರುವ ದೊಡ್ಡದಾದ ಸ್ಟೀಲ್ ಟ್ರಂಕ್‌ವೊಂದನ್ನು ಸೌಲಭ್ಯ ಕೇಂದ್ರದಲ್ಲಿ ಅಂಚೆ ಮತಪತ್ರ ಹಾಕುವ ಮತ ಪೆಟ್ಟಿಗೆಯಾಗಿ ಉಪಯೋಗಿಸತಕ್ಕದ್ದು. ಅಂಚೆ ಮತಪತ್ರಗಳ ಮೂಲಕ ಮತದಾನ ಪ್ರಾರಂಭಿಸುವ ಮುನ್ನ, ಖಾಲಿ ಅಂಚೆ ಮತಪತ್ರ ಹಾಕುವ ಮತಪೆಟ್ಟಿಗೆಯನ್ನು ತೆರೆದು ಹಾಜರಿರುವ ಎಲ್ಲರಿಗೂ ತೋರಿಸಲಾಗುತ್ತದೆ. ನಂತರ, ಅಂಚೆ ಮತಪತ್ರ ಹಾಕುವ ಮತಪೆಟ್ಟಿಗೆಯನ್ನು ಸೌಲಭ್ಯ ಕೇಂದ್ರದ ಪ್ರಭಾರದಲ್ಲಿರುವ ಅಧಿಕಾರಿಯು ಮೊಹರು ಮಾಡುವರು. ಪ್ರತಿಯೊಬ್ಬ ಮತದಾರನು ಮೇಲೆ ವಿವರಿಸಲಾದಂತೆ ಅಂಚೆ ಮತಪತ್ರದ ಮೇಲೆ ತನ್ನ ಮತವನ್ನು ಗುರುತು ಮಾಡಿ, ಅದನ್ನು ಲಕೋಟೆಗಳಲ್ಲಿಟ್ಟು ಮೊಹರು ಮಾಡಿದ ನಂತರ ಅಂಚೆ ಮತಪತ್ರ ಹಾಕುವ ಮತಪತ್ರ ಪೆಟ್ಟಿಗೆಯಲ್ಲಿ ತನ್ನ ಅಂಚೆ ಮತವನ್ನು ಹಾಕತಕ್ಕದ್ದು.

11.3.6. ಅಂಚೆ ಮತಪತ್ರಗಳನ್ನು ವಿಂಗಡಿಸುವುದು – ಅಂಚೆ ಮತಪತ್ರಗಳ ಮೂಲಕ ಮತದಾನಕ್ಕಾಗಿ ನಿಗದಿಪಡಿಸಿದ ಮತದಾನದ ದಿನದಂದು ಎಲ್ಲಾ ಅಂಚೆ ಮತಗಳನ್ನು ಹಾಕಿದ ನಂತರ, ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮಕ್ಷಮದಲ್ಲಿ ಸೌಲಭ್ಯ ಕೇಂದ್ರದ ಪ್ರಭಾರದಲ್ಲಿರುವ ಅಧಿಕಾರಿಯು ಪೆಟ್ಟಿಗೆಯನ್ನು ತೆರೆಯುತ್ತಾರೆ. ಎಲ್ಲಾ ಅಂಚೆ ಮತಪತ್ರಗಳನ್ನು ಪೆಟ್ಟಿಗೆಯಿಂದ ಹೊರತೆಗೆಯಲಾಗುತ್ತದೆ. ಖಾಲಿ ಇರುವ ಪೆಟ್ಟಿಗೆಯನ್ನು ಸದರಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತೋರಿಸಲಾಗುತ್ತದೆ. ಅಂಚೆ ಮತ ಪತ್ರದ ಲಕೋಟೆಗಳನ್ನು ವಿಧಾನಸಭಾ ಕ್ಷೇತ್ರವಾರು ವಿಂಗಡಿಸಲಾಗುವುದು ಮತ್ತು ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ಸಂಬಂಧದಲ್ಲಿ ಸ್ವೀಕರಿಸಲಾದ ಅಂಚೆ ಮತಪತ್ರಗಳ ಒಟ್ಟು ಸಂಖ್ಯೆಯನ್ನು, ಈ ಉದ್ದೇಶಕ್ಕಾಗಿ ಸೌಲಭ್ಯ ಕೇಂದ್ರದಲ್ಲಿ ನಿರ್ವಹಿಸಲಾಗುವ ನಮೂನೆ–1ರಲ್ಲಿನ ವಿವರ ಪಟ್ಟಿಯಲ್ಲಿ ನಮೂದಿಸಲಾಗುವುದು. ಹಾಜರಿರುವ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ರಿಜಿಸ್ಟರ್‌ನಲ್ಲಿ ತಮ್ಮ ಸಹಿಗಳನ್ನು ಮಾಡುವಂತೆ

ಕೋರಲಾಗುವುದು ಮತ್ತು ರಿಜಿಸ್ಟರ್‌ನ ಸಂಬಂಧಪಟ್ಟ ಪುಟಗಳ ಪ್ರತಿಯನ್ನು ಅವರಿಗೆ ನೀಡಲಾಗುವುದು. ಒಂದು ವಿಧಾನಸಭಾ ಮತ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಅಂಚೆ ಮತ ಪತ್ರದ ಲಕೋಟೆಗಳನ್ನು ಆ ವಿಧಾನಸಭಾ ಮತಕ್ಷೇತ್ರಕ್ಕೆ ಮೀಸಲಿರಿಸಿದ ಒಂದು ದೊಡ್ಡ ಲಕೋಟೆಯಲ್ಲಿ ಇಡಲಾಗುವುದು. ಸೌಲಭ್ಯ ಕೇಂದ್ರದ ಹೆಸರು, ಅಂಚೆ ಮತಪತ್ರ ಚಲಾವಣೆಗೆ ಅನುವು ಮಾಡಿಕೊಟ್ಟ ದಿನಾಂಕ ಮತ್ತು ಅದರಲ್ಲಿ ಒಳಗೊಂಡಿರುವ ಅಂಚೆ ಮತಪತ್ರಗಳ ಸಂಖ್ಯೆಯನ್ನು ಈ ಲಕೋಟೆಯ ಮೇಲೆ ಸ್ಪಷ್ಟವಾಗಿ ಬರೆಯಬೇಕು. ಯಾವ ವಿಧಾನಸಭಾ ಮತಕ್ಷೇತ್ರಕ್ಕಾಗಿ ಲಕೋಟೆಯನ್ನು ಮೀಸಲಿರಿಸಲಾಗಿದೆಯೋ ಆ ವಿಧಾನಸಭಾ ಮತಕ್ಷೇತ್ರದ ಸಂಖ್ಯೆ ಮತ್ತು ಹೆಸರನ್ನು ಸಹ ಲಕೋಟೆಯ ಮೇಲೆ ಸ್ಪಷ್ಟವಾಗಿ ಬರೆಯಬೇಕು. ನಂತರ ಈ ಲಕೋಟೆಯನ್ನು ಈ ಉದ್ದೇಶಕ್ಕಾಗಿ ನೇಮಕಗೊಂಡಂತಹ ಉಪ–ತಹಸೀಲ್ದಾರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ವಿಶೇಷ ಸಂದೇಶ ವಾಹಕನ ಮೂಲಕ ನಮೂನೆ –1ರಲ್ಲಿ ಸುಸಂಗತ ವಿವರಪಟ್ಟಿಯ ಪ್ರತಿಯೊಂದಿಗೆ ಸಂಬಂಧಪಟ್ಟ ವಿಧಾನಸಭಾ ಮತಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗೆ ಕಳುಹಿಸಲಾಗುವುದು.

11.3.7 ಮತದಾನ ಸಿಬ್ಬಂದಿ ತಂಡಗಳನ್ನು ಮತಗಟ್ಟೆಗಳಿಗೆ ಕಳುಹಿಸುವ ದಿನದಂದು ಕೂಡ, ಸ್ಟೀಲ್ ಟ್ರಂಕ್ (ಅಂಚೆ ಮತಪತ್ರ ಹಾಕುವ ಮತಪೆಟ್ಟಿಗೆ) ಅನ್ನು ರವಾನೆ ಕೇಂದ್ರದಲ್ಲಿ ಇಟ್ಟಿರಬೇಕು. ಇದರಿಂದಾಗಿ, ತರಬೇತಿ ಅಧಿವೇಶನದಲ್ಲಿ ಮತ ಚಲಾಯಿಸದೇ ಇರುವಂತಹ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ ಯಾರೇ ನೌಕರನು ಅಂಥ ಅಂಚೆ ಮತಪತ್ರ ಹಾಕುವುದಕ್ಕಾಗಿ ಕಲ್ಪಿಸಲಾದ ಮತ ಪೆಟ್ಟಿಗೆಯಲ್ಲಿ ಅಂಚೆ ಮತಪತ್ರವನ್ನು ಒಳಗೊಂಡ ಲಕೋಟೆಯನ್ನು ಹಾಕಬಹುದಾಗಿರುತ್ತದೆ. ಎಲ್ಲಾ ಮತದಾನ ಸಿಬ್ಬಂದಿ ತಂಡಗಳು ಹೋದ ನಂತರ, ಈ ಮತ ಚಲಾಯಿಸಲು ಕಲ್ಪಿಸಲಾದ ಮತ ಪೆಟ್ಟಿಗೆಯನ್ನು ತೆರೆದು, ಮತಕ್ಷೇತ್ರವಾರು ವಿಂಗಡಿಸಿ, ಮೇಲೆ ವಿವರಿಸಲಾದಂಥ ರೀತಿಯಲ್ಲಿ ಮೊಹರಾದ ಲಕೋಟೆಗಳಲ್ಲಿ ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಗೆ ಕಳುಹಿಸಿಕೊಡಲಾಗುತ್ತದೆ. ಅಭ್ಯರ್ಥಿಗಳು ತಮ್ಮ ಪ್ರತಿನಿಧಿಯನ್ನು ನಿಯೋಜಿಸಲು ಇಚ್ಛಿಸಿದರೆ, ಅವರು ಹಾಗೆ ಮಾಡಲು ಅನುಕೂಲವಾಗುವ ಹಾಗೆ ಈ ಪ್ರಕ್ರಿಯೆಯ ಕುರಿತು ಅಭ್ಯರ್ಥಿಗಳಿಗೆ ಮುಂಚಿತವಾಗಿ ತಿಳಿಸಬೇಕು.

11.3.8 ಒಂದು ವೇಳೆ ಯಾರೇ ಮತದಾರನು ಸೌಲಭ್ಯ ಕೇಂದ್ರ/ರವಾನೆ ಕೇಂದ್ರದಲ್ಲಿ ಮತವನ್ನು ಚಲಾಯಿಸದಿದ್ದರೆ, ಆಗ ಆತ ಕೇವಲ ಅಂಚೆ ಮುಖಾಂತರವೇ ಮತದಾನ ಮಾಡಬೇಕು. ರಿಟರ್ನಿಂಗ್ ಅಧಿಕಾರಿಯ ಕಚೇರಿಯಲ್ಲಿ ಯಾವುದೇ ಡ್ರಾಪ್‌ಬಾಕ್ಸ್‌ಗಳ ಸೌಲಭ್ಯ ಕಲ್ಪಿಸತಕ್ಕದ್ದಲ್ಲ.

### 11.3.9 ಅಂಚೆ ಮೂಲಕ ಮತಪತ್ರವನ್ನು ಸ್ವೀಕರಿಸುವುದು

ಎ) ಅಂಚೆ ಇಲಾಖೆಯೊಂದಿಗೆ ಮಾಡಿಕೊಳ್ಳಬೇಕಾದ ವ್ಯವಸ್ಥೆ: ಅಂಚೆ ಮೂಲಕ ಬಂದ ಅಂಚೆ ಮತಪತ್ರಗಳನ್ನು ಸ್ವೀಕರಿಸುವುದಕ್ಕಾಗಿ, ಮುಖ್ಯ ಚುನಾವಣಾಧಿಕಾರಿಯು ಅಂಚೆ ಇಲಾಖೆಯೊಂದಿಗೆ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು ಮತ್ತು ಪ್ರತಿದಿನ ಅಂಚೆ ಮತಪತ್ರಗಳನ್ನು ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಗೆ ಬಟವಾಡೆ ಮಾಡುವುದಕ್ಕಾಗಿ ಪ್ರತಿಯೊಂದು ಸಂಸದೀಯ/ ವಿಧಾನಸಭಾ ಮತಕ್ಷೇತ್ರಕ್ಕೆ ತಲಾ ಒಂದು ಅಂಚೆ ಕಚೇರಿಯನ್ನು ನಿಗದಿಪಡಿಸುವಂತೆ ಅಂಚೆ ಇಲಾಖೆಯನ್ನು ಕೋರತಕ್ಕದ್ದು. ರಿಟರ್ನಿಂಗ್ ಅಧಿಕಾರಿಯ ಕಚೇರಿಗೆ ಪ್ರತಿ ದಿನ ಬಟವಾಡೆ ಮಾಡುವ ಸಮಯವನ್ನು ಮಧ್ಯಾಹ್ನ 3 ಗಂಟೆಗೆ ನಿಗದಿಪಡಿಸತಕ್ಕದ್ದು. ಆದರೆ, ಮತ ಎಣಿಕೆ ದಿನದಂದು ಮಾತ್ರ ಬೆಳಿಗ್ಗೆ 8 ಗಂಟೆಗಿಂತ ಮುಂಚೆ ಅಥವಾ ಆ ವಿಧಾನಸಭಾ ಮತಕ್ಷೇತ್ರದ ಮತ ಎಣಿಕೆ ಕೇಂದ್ರದಲ್ಲಿ ಮತ ಎಣಿಕೆ ಪ್ರಾರಂಭಕ್ಕೆ ನಿಗದಿಪಡಿಸಿದ ಇನ್ನಿತರ ಸಮಯಕ್ಕೆ ಮುಂಚೆ ಬಟವಾಡೆ ಮಾಡಬೇಕಾಗುತ್ತದೆ. ಮತ ಎಣಿಕಾ ಕೇಂದ್ರಗಳು ಮತ್ತು ರಿಟರ್ನಿಂಗ್ ಅಧಿಕಾರಿಯವರ ಕಚೇರಿಯ ವಿಳಾಸಗಳ ಪಟ್ಟಿಯನ್ನು ಸಿಇಓ ಅವರು ಅಂಚೆ ಇಲಾಖೆಗೆ ಲಿಖಿತವಾಗಿ ತಿಳಿಸತಕ್ಕದ್ದು.

ಬಿ) ಅಂಚೆ ಮೂಲಕ ಅಂಚೆ ಮತಪತ್ರಗಳನ್ನು ಸ್ವೀಕರಿಸುವ ಅವಧಿಯಲ್ಲಿ ರಾಜಕೀಯ ಪಕ್ಷಕಾರರು ಮತ್ತು ಅಭ್ಯರ್ಥಿಗಳು ಹಾಜರಿರಬೇಕು: ಅಂಚೆ ಕಚೇರಿಯ ಮೂಲಕ ಅಂಚೆ ಮತಪತ್ರಗಳನ್ನು ಬಟವಾಡೆ ಮಾಡುವ ಸಂದರ್ಭದಲ್ಲಿ ಎಲ್ಲಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಹಾಗೂ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಹಾಜರಿರುವಂತೆ ಅವರಿಗೆ ಅಥವಾ ಅವರ ಪ್ರತಿನಿಧಿಗಳಿಗೆ ಲಿಖಿತವಾಗಿ ತಿಳಿಸತಕ್ಕದ್ದು. ಮತ ಎಣಿಕೆ ದಿನದಂದು, ಅಂಚೆ ಮತಪತ್ರವನ್ನು ಬಟವಾಡೆ ಮಾಡಲು ಮತ ಎಣಿಕಾ ಕೇಂದ್ರದೊಳಗೆ ಪ್ರವೇಶಿಸುವುದಕ್ಕಾಗಿ ಅಂಚೆ ಇಲಾಖೆಯ ನಾಮನಿರ್ದೇಶಿತ ನೌಕರನಿಗೆ ಪಾಸನ್ನು ನೀಡತಕ್ಕದ್ದು.

ಸಿ) ಅಂಚೆ ಮೂಲಕ ಅಂಚೆ ಮತಪತ್ರಗಳನ್ನು ಸ್ವೀಕರಿಸುವ ಕಾರ್ಯವಿಧಾನ: ಅಂಚೆ ಕಚೇರಿಯು ಬಟವಾಡೆ ಮಾಡಿದ ಅಂಚೆ ಮತಪತ್ರಗಳನ್ನು ರಾಜಕೀಯ ಪಕ್ಷದ ಪ್ರತಿನಿಧಿಗಳು ಮತ್ತು ಅಭ್ಯರ್ಥಿಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಎಣಿಕೆ ಮಾಡಿ, ನಂತರ ಸ್ವೀಕರಿಸಲಾದ ಅಂಚೆ ಮತಪತ್ರಗಳ ಸಂಖ್ಯೆಯನ್ನು ಕುರಿತ ಸ್ವೀಕೃತಿಯನ್ನು ಅಂಚೆ ಕಚೇರಿಗೆ ನೀಡತಕ್ಕದ್ದು. ಈ ಸ್ವೀಕೃತಿಯ ಒಂದು ಪ್ರತಿಯನ್ನು ರಿಟರ್ನಿಂಗ್ ಅಧಿಕಾರಿಯವರ ದಾಖಲೆಯಲ್ಲಿ ಇಡತಕ್ಕದ್ದು. ಸ್ವೀಕರಿಸಲಾದ ಅಂಚೆ ಮತಪತ್ರಗಳ ಸಂಖ್ಯೆಯನ್ನು ರಿಟರ್ನಿಂಗ್ ಅಧಿಕಾರಿಯು ನಮೂನೆ–3ರ ದೈನಂದಿನ ಲೆಕ್ಕದಲ್ಲಿ ನಮೂದಿಸಿಕೊಳ್ಳತಕ್ಕದ್ದು. ಇದರ ಸಮಗ್ರ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಿಕೊಳ್ಳತಕ್ಕದ್ದು.

ಡಿ) ಅಂಚೆ ಮೂಲಕ ಸ್ವೀಕರಿಸಲಾದ ಅಂಚೆ ಮತಪತ್ರಗಳ ಸಂಗ್ರಹಣೆ: ರಿಟರ್ನಿಂಗ್ ಅಧಿಕಾರಿಯು, ಪ್ರತಿದಿನ ಅಂಚೆ ಕಚೇರಿಯಿಂದ ಸ್ವೀಕರಿಸಲಾದ ಎಲ್ಲಾ ಅಂಚೆ ಮತಪತ್ರಗಳನ್ನು ಆಯಾ ದಿನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಲಕೋಟೆಯಲ್ಲಿ ಹಾಕಿ ಇಟ್ಟುಕೊಳ್ಳತಕ್ಕದ್ದು. ಆ ಲಕೋಟೆಯ ಮೇಲೆ, ದಿನಾಂಕ ಮತ್ತು **"ಅಂಚೆ ಮೂಲಕ ಸ್ವೀಕರಿಸಲಾದ ಅಂಚೆ ಮತಪತ್ರಗಳು"** ಎಂದು ಬರೆಯತಕ್ಕದ್ದು. ಪ್ರತಿ ದಿನ ಅವರು ಅಂಚೆಯನ್ನು ಸ್ವೀಕರಿಸಿದ ನಂತರ ಈ ಲಕೋಟೆಯನ್ನು ಸಹ ಅಂಚೆ ಮತಗಳಿಗೆ ಸಂಬಂಧಿಸಿದ ಭದ್ರತಾ ಕೊಠಡಿಯಲ್ಲಿ ಇಡತಕ್ಕದ್ದು

11.3.10. ರಿಟರ್ನಿಂಗ್ ಅಧಿಕಾರಿಯವರ ಕೇಂದ್ರಕಚೇರಿಯಲ್ಲಿ ಮತ ಎಣಿಕೆ ಮಾಡದಿರುವಂಥ ಮತ ಎಣಿಕೆ ಸ್ಥಳಕ್ಕೆ ಅಂಚೆ ಮತಪತ್ರಗಳನ್ನು ಕಳುಹಿಸುವುದು: ರಿಟರ್ನಿಂಗ್ ಅಧಿಕಾರಿಯ ಕೇಂದ್ರ ಕಚೇರಿಯನ್ನು ಹೊರತುಪಡಿಸಿ, ಬೇರೆ ಸ್ಥಳದಲ್ಲಿ ಮತ ಎಣಿಕೆ ಮಾಡುವಂಥ ಸಂದರ್ಭಗಳಲ್ಲಿ, ಸಂಸದೀಯ/ ವಿಧಾನಸಭಾ ಮತಕ್ಷೇತ್ರಗಳಿಗೆ ಸಂಬಂಧಿಸಿದ ಅಂಚೆ ಮತಪತ್ರಗಳನ್ನು ಮತ ಎಣಿಕೆಯ ದಿನದ ಒಂದು ದಿನ ಮೊದಲೇ ಎಣಿಕಾ ಕೇಂದ್ರಗಳಲ್ಲಿರುವ ಸಂಬಂಧಪಟ್ಟ ಸಂಸದೀಯ / ವಿಧಾನಸಭಾ ಮತಕ್ಷೇತ್ರದ ಅಂಚೆ ಮತಪತ್ರಗಳ ಮತ್ತೊಂದು ಭದ್ರತಾ ಕೊಠಡಿಗೆ ಸ್ಥಳಾಂತರಿಸುವುದು. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿಯು, ಇದನ್ನು ಮಾಡಲಾಗುವಂಥ ಸಮಯದಲ್ಲಿ ಅಭ್ಯರ್ಥಿಗಳಿಗೆ ಲಿಖಿತವಾಗಿ ತಿಳಿಸತಕ್ಕದ್ದು. ಅಂಚೆ ಮತಪತ್ರಗಳಿಗೆ ಸಂಬಂಧಿಸಿದ ಭದ್ರತಾ ಕೊಠಡಿಯನ್ನು ಅಭ್ಯರ್ಥಿಗಳು ಅಥವಾ ಹಾಜರಿರುವ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯತಕ್ಕದ್ದು. ನಂತರ ಎಲ್ಲಾ ಅಂಚೆ ಮತಪತ್ರಗಳನ್ನು ವಿಶಾಲವಾದ ಸ್ಟೀಲ್ ಬಾಕ್ಸ್‌ನಲ್ಲಿಟ್ಟು, ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳ ಸಮ್ಮುಖದಲ್ಲಿಯೇ ಸೀಲು ಮಾಡುವುದು. ತದನಂತರ ಆ ಬಾಕ್ಸ್ ಅನ್ನು ಎಣಿಕಾ ಕೇಂದ್ರದಲ್ಲಿ ಅಂಚೆ ಮತಪತ್ರಗಳಿಗೆ ಸಂಬಂಧಿಸಿದ ಭದ್ರತಾ ಕೊಠಡಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ ರಕ್ಷಣೆಯಲ್ಲಿ ಸಾಗಿಸತಕ್ಕದ್ದು. ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಿಗೆ ಅಂಚೆ ಮತಪತ್ರಗಳನ್ನು ಸಾಗಿಸುವ ವಾಹನವನ್ನು ಬೆಂಬತ್ತಲು ಅನುಮತಿಸತಕ್ಕದ್ದು. ನಂತರ ಅಂಚೆ ಮತಪತ್ರಗಳನ್ನು ಒಳಗೊಂಡ ಬಾಕ್ಸ್ ಅನ್ನು ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಎಣಿಕಾ ಕೇಂದ್ರದಲ್ಲಿರುವ ಅಂಚೆ ಮತಪತ್ರಗಳಿಗೆ ಸಂಬಂಧಿಸಿದ ಭದ್ರತಾ ಕೊಠಡಿಯಲ್ಲಿ ಇಡುವುದು. ತದನಂತರ, ಭದ್ರತಾಕೊಠಡಿಯನ್ನು ಸೀಲು ಮಾಡಿ, ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳು ಹಾಜರಿದ್ದರೆಂಬ ಸಾಕ್ಷ್ಯಕ್ಕಾಗಿ ಅವರ ಸಹಿಗಳನ್ನು ಪಡೆಯತಕ್ಕದ್ದು. ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಿಗೆ ಭದ್ರತಾ ಕೊಠಡಿಯ ಮೇಲೆ ನಿಗಾ ಇಡಲು ಅನುಮತಿ ನೀಡತಕ್ಕದ್ದು. ಮತ್ತು ಜಿಲ್ಲಾ ಚುನಾವಣಾಧಿಕಾರಿಯು ಅವರಿಗೆ ಸೂಕ್ತ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು.

ಈ ಸಂಪೂರ್ಣ ಪ್ರಕ್ರಿಯೆ ಕುರಿತು ವಿಡಿಯೋ ಚಿತ್ರೀಕರಣವನ್ನು ಮಾಡಬೇಕು. ಮತ ಎಣಿಕೆಯ ದಿನದಂದು ರಿಟರ್ನಿಂಗ್ ಅಧಿಕಾರಿಯವರು ಭದ್ರತಾ ಕೊಠಡಿಯನ್ನು ತೆರೆದು ಎಲ್ಲಿ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಲಾಗುತ್ತಿದೆಯೋ ಆ ಟೇಬಲ್‌ಗೆ ಎಲ್ಲಾ ಅಂಚೆ ಮತಪತ್ರಗಳನ್ನು ಹಾಗೂ ಸೌಲಭ್ಯಕೇಂದ್ರಗಳಿಂದ ಸ್ವೀಕರಿಸಿದ ಸಂಬಂಧಪಟ್ಟ ರಿಜಿಸ್ಟರುಗಳ ಪುಟಗಳ ಪ್ರತಿಗಳನ್ನು ತರತಕ್ಕದ್ದು.

11.3.11 ಮತ ಎಣಿಕೆ ಮಾಡುವ ಮೊದಲು ಅಂಚೆ ಮತಪತ್ರಗಳ ಸಂಖ್ಯೆಗಳನ್ನು ತಾಳೆ ನೋಡುವುದು: ಸೌಲಭ್ಯ ಕೇಂದ್ರಗಳಿಂದ ಸ್ವೀಕರಿಸಲಾದ ಲಕೋಟೆಗಳನ್ನು ಒಂದಾದ ನಂತರ ಒಂದನ್ನು ತೆರೆಯುವುದು ಹಾಗೂ ಪ್ರತೀ ಲಕೋಟೆಯಲ್ಲಿ ಕಂಡುಬರುವ ಅಂಚೆ ಮತಪತ್ರಗಳ ಸಂಖ್ಯೆಯನ್ನು ಸೌಲಭ್ಯ ಕೇಂದ್ರದಿಂದ ಸ್ವೀಕರಿಸಿದ ಸಂಬಂಧಪಟ್ಟ ರಿಜಿಸ್ಟರುಗಳ ಪುಟಗಳ ಪ್ರತಿಗಳಲ್ಲಿ ನಮೂದಿಸಿದ ಸಂಖ್ಯೆಗಳೊಂದಿಗೆ ತಾಳೆ ನೋಡುವುದು. ತಾಳೆ ನೋಡಿದಂಥ ಫಲಿತಾಂಶವನ್ನು ಅಂಚೆ ಮತಪತ್ರಗಳ ಎಣಿಕೆಗೆ ಮೊದಲು ಅಭ್ಯರ್ಥಿಗಳು ಮತ್ತು ಅವರ ಚುನಾವಣಾ ಏಜೆಂಟರುಗಳಿಗೆ ತೋರಿಸುವುದು. ಹಾಗೆಯೇ ಅಂಚೆ ಮೂಲಕ ಸ್ವೀಕರಿಸಿದ ಅಂಚೆ ಮತಪತ್ರಗಳ ರಿಜಿಸ್ಟರನ್ನು ಸಹ ಅಭ್ಯರ್ಥಿಗಳು ಮತ್ತು ಅವರ ಚುನಾವಣಾ ಏಜೆಂಟರುಗಳಿಗೆ ತೋರಿಸತಕ್ಕದ್ದು.

# 12. ಮತದಾನ ಸಿಬ್ಬಂದಿ

## 12.1. ಮತದಾನ ಸಿಬ್ಬಂದಿಗಳ ರಚನೆ

12.1.1. ಎಲ್ಲಾ ಅರ್ಹ ಮತದಾನ ಸಿಬ್ಬಂದಿಯ ಜಿಲ್ಲಾ ಚುನಾವಣಾ ಅಧಿಕಾರಿವಾರು ದತ್ತಾಂಶವನ್ನು ಗಣಕೀಕೃತ ಯಾದೃಚ್ಛೀಕರಣಕ್ಕೆ ಅನುಕೂಲವಾಗಬಹುದಾದ ಹಾಗೆ ವಿದ್ಯುನ್ಮಾನ ರೂಪದಲ್ಲಿ ನಿರ್ವಹಿಸತಕ್ಕದು. ಮತದಾನ ಸಿಬ್ಬಂದಿಯ ಹೆಸರು, ಲಿಂಗ, ವಾಸಸ್ಥಳ (ಕ್ಷೇತ್ರ), ಕೆಲಸದ ಸ್ಥಳ, ಸ್ವಂತ ಮತಕ್ಷೇತ್ರ, ಹುದ್ದೆ, ಕಛೇರಿ ಮತ್ತು ಇಲಾಖೆ/ಸಂಸ್ಥೆ ಇತ್ಯಾದಿ ಎಲ್ಲಾ ಸುಸಂಗತ ವಿವರಗಳನ್ನು ನಮೂದಿಸತಕ್ಕದ್ದು.

12.1.2. ಈ ದತ್ತಾಂಶವು ರಾಜ್ಯ ಸರ್ಕಾರಿ ವಲಯದ ಉದ್ದಿಮೆಗಳ ನೌಕರರು, ಶಿಕ್ಷಕರುಗಳು ಇತ್ಯಾದಿ ಸೇರಿದಂತೆ ರಾಜ್ಯ ಸರ್ಕಾರಿ ನೌಕರರ, ವಿವರಗಳನ್ನು ಸ್ಪಷ್ಟವಾಗಿ ಮತ್ತು ಪ್ರತ್ಯೇಕವಾಗಿ ಒಳಗೊಂಡಿರತಕ್ಕದು. ಅವರನ್ನು ಚುನಾವಣಾ ಸಿಬ್ಬಂದಿಯಾಗಿ ನೇಮಿಸಬಹುದಾಗಿರುತ್ತದೆ.

12.1.3. ಅದೇ ರೀತಿ ಈ ದತ್ತಾಂಶವು, ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು, ಬ್ಯಾಂಕ್‌ಗಳು ಇತ್ಯಾದಿ ಒಳಗೊಂಡಂತೆ ಕೇಂದ್ರ ಸರ್ಕಾರಿ ನೌಕರರ ವಿವರಗಳನ್ನು ನಿರ್ಧಿಷ್ಟವಾಗಿ ಮತ್ತು ಪ್ರತ್ಯೇಕವಾಗಿ ಒಳಗೊಂಡಿರಬೇಕು.

12.1.4. ಅನ್ಯಥಾ ಸೂಚಿಸಲಾದ ಹೊರತು, ರಾಜ್ಯ ಸರ್ಕಾರಿ ನೌಕರರನ್ನೇ ಮತದಾನ ಸಿಬ್ಬಂದಿ ತಂಡಗಳನ್ನಾಗಿ ರಚಿಸತಕ್ಕದ್ದು. ಸಾರ್ವಜನಿಕ ವಲಯದ ಉದ್ದಿಮೆಗಳು, ಬ್ಯಾಂಕ್‌ಗಳು ಇತ್ಯಾದಿ ಒಳಗೊಂಡಂತೆ ಕೇಂದ್ರ ಸರ್ಕಾರಿ ನೌಕರರನ್ನು, ಸೂಕ್ಷ್ಮ ವೀಕ್ಷಕರನ್ನಾಗಿ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕಾಗಿ ಬಳಸಿಕೊಳ್ಳತಕ್ಕದ್ದು.

12.1.5. ಪ್ರಿಸೈಡಿಂಗ್ ಅಧಿಕಾರಿಗಳು ಮತ್ತು ಪೋಲಿಂಗ್ ಅಧಿಕಾರಿಗಳನ್ನು ಅವರ ವೇತನ ಶ್ರೇಣಿ, ಹುದ್ದೆ ಮತ್ತು ದರ್ಜೆಯ ಅಧಾರದ ಮೇಲೆ ವರ್ಗೀಕರಿಸತಕ್ಕದ್ದು. ಕಾರ್ಯ ಸಾಧ್ಯವಾದಷ್ಟುಮಟ್ಟಿಗೆ, ಪತ್ರಾಂಕಿತ (ಗೆಜೆಟೆಡ್) ಅಧಿಕಾರಿಗಳನ್ನು ಪ್ರಿಸೈಡಿಂಗ್ ಅಧಿಕಾರಿಗಳಾಗಿ ನಿಯೋಜಿಸತಕ್ಕದ್ದು, ತಪ್ಪಿದಲ್ಲಿ ಮೇಲ್ವಿಚಾರಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಪ್ರಿಸೈಡಿಂಗ್ ಅಧಿಕಾರಿಗಳನ್ನಾಗಿ ನಿಯೋಜಿಸತಕ್ಕದ್ದು. ಪ್ರಿಸೈಡಿಂಗ್ ಅಧಿಕಾರಿಯು ಮತದಾನ ತಂಡದ ಇತರೆ ಪೋಲಿಂಗ್ ಅಧಿಕಾರಿಗಳಿಗೆ ಹೋಲಿಸಿದಲ್ಲಿ ಉನ್ನತ ವೇತನ ಶ್ರೇಣಿ/ದರ್ಜೆಯನ್ನು ಹೊಂದಿದವರಾಗಿರಬೇಕು.

12.1.6. ಅಂಚೆ ಮತಪತ್ರಗಳ ನೀಡಿಕೆಗೆ ಸಂಬಂಧಿಸಿದ ಇತ್ತೀಚಿನ ಚುನಾವಣಾ ಆಯೋಗದ ಸೂಚನೆಗಳ ಪ್ರಕಾರ, ಎಲ್ಲಾ ಸಿಬ್ಬಂದಿಗಳ ವಿಧಾನಸಭಾ ಮತಕ್ಷೇತ್ರ ಸಂಖ್ಯೆ, ಭಾಗ ಸಂಖ್ಯೆ, ಕ್ರಮಸಂಖ್ಯೆಗಳನ್ನು ನಮೂದಿಸಬೇಕು. ಆತನು ಮತದಾರನಾಗಿಲ್ಲದಿದ್ದ ಪಕ್ಷದಲ್ಲಿ, ಮತದಾರರ ಪಟ್ಟಿಯ ನಿರಂತರ

ಇಂದೀಕರಣ ಪ್ರಕ್ರಿಯೆಯಲ್ಲಿ ಆತನನ್ನು ಸಂಬಂಧಪಟ್ಟ ವಿಧಾನಸಭಾ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸೇರಿರಬೇಕು ಮತ್ತು ಆತನಿಗೆ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ನೀಡಬೇಕು. ಅದರಂತೆಯೇ, ಸೂಕ್ಷ್ಮ ವೀಕ್ಷಕರಾಗಿ ನೇಮಕಗೊಳ್ಳಲಿರುವ ಸಿಬ್ಬಂದಿಯನ್ನು ತಪ್ಪದೇ ಮತದಾರರಾಗಿ ದಾಖಲಿಸಿಕೊಂಡು ಮತದಾರರ ಪಟ್ಟಿಯಲ್ಲಿ ಸೇರಿರಬೇಕು ಮತ್ತು ಅವರಿಗೆ ಮತದಾರರ ಭಾವಚಿತ್ರವಿರುವ ಚೀಟಿಯನ್ನೂ ನೀಡಬೇಕು. ಆದ್ದರಿಂದ, ಮತದಾನ ಕರ್ತವ್ಯಗಳಿಗೆ ನಿಯೋಜನೆಗೊಳ್ಳುವ ವ್ಯಕ್ತಿಗಳು ಕಡ್ಡಾಯವಾಗಿ ಮತದಾರರಾಗಿರಬೇಕು. ಅಲ್ಲದೇ, ಯಾರೇ ವ್ಯಕ್ತಿಯನ್ನು, ಆತನ, ಸ್ಥಳ ನಿಯುಕ್ತಿಗೊಂಡಿರುವ ಅಥವಾ ಆತನು ವಾಸವಾಗಿರುವ ವಿಧಾನಸಭಾ ಮತಕ್ಷೇತ್ರದಲ್ಲಿ ಅಥವಾ ಆತನ ಸ್ವಂತ ಮತಕ್ಷೇತ್ರವಾಗಿರುವ ಮತಕ್ಷೇತ್ರದಲ್ಲಿ ಮತದಾನ ಕರ್ತವ್ಯಗಳಿಗೆ ನಿಯೋಜಿಸಬಾರದು.

12.1.7. ಯಾರೇ ಅಭ್ಯರ್ಥಿಯ ಅಥವಾ ಯಾವುದೇ ರಾಜಕೀಯ ಪಕ್ಷದ ಪರವಾಗಿ ಮತದಾನ ಸಿಬ್ಬಂದಿಯ ನಡುವಿನ ಯಾವುದೇ ಮೋಸದ ಒಳಸಂಚಿನ ಆಪಾದನೆಯನ್ನು ತಪ್ಪಿಸುವ ಮತ್ತು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳ ಬಗ್ಗೆ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಮನಸ್ಸಿನಲ್ಲಿ ಭರವಸೆಯನ್ನು ಮೂಡಿಸುವ ಸಲುವಾಗಿ, ಮತದಾನ ಸಿಬ್ಬಂದಿ ತಂಡವನ್ನು ರಚಿಸುವ ಸಮಯದಲ್ಲಿ ಬೇರೆ ಬೇರೆ ಕಚೇರಿಗಳು ಮತ್ತು ಇಲಾಖೆಗಳಿಂದ ಬಂದ ಮತದಾನ ಸಿಬ್ಬಂದಿಗಳ ಸಮರ್ಪಕ ಮಿಶ್ರಣವನ್ನು ಖಚಿತಪಡಿಸಿಕೊಳ್ಳಬೇಕು. ಒಂದೇ ಕ್ರಮ ಸಮೂಹ/ ಪ್ರವರ್ಗದ ಇಬ್ಬರು ಅಧಿಕಾರಿಗಳನ್ನು ಒಟ್ಟಿಗೆ ನಿಯೋಜಿಸಬಾರದು. ಅಲ್ಲದೇ, ಮತದಾನ ಸಿಬ್ಬಂದಿ ತಂಡದ ಇಬ್ಬರು ಸದಸ್ಯರು ಒಂದೇ ಇಲಾಖೆಯವರಾಗಿರತಕ್ಕದ್ದಲ್ಲ (ಶಾಲಾ ಶಿಕ್ಷಕರುಗಳ ಸಂದರ್ಭದಲ್ಲಿ, ಅವರು ಒಂದೇ ಶಾಲೆಯಿಂದ ಬಂದವರಾಗಿರತಕ್ಕದ್ದಲ್ಲ).

12.1.8. ಮತದಾನ ಸಿಬ್ಬಂದಿ ದತ್ತಾಂಶ ಮೂಲದಲ್ಲಿ (ಡಾಟಾಬೇಸ್) ರಾಜ್ಯ ಸರ್ಕಾರದ ಇಲಾಖೆಗಳು ಹಾಗೂ ಕೇಂದ್ರ ಸರ್ಕಾರದ ಕಚೇರಿಗಳು – ಎರಡರಿಂದಲೂ ಬಂದಿರುವ ಸಿಬ್ಬಂದಿಗಳು ಒಳಗೊಂಡಿರತಕ್ಕದ್ದು. ಕೇಂದ್ರ ಸರ್ಕಾರಿ ನೌಕರರನ್ನು ವೀಕ್ಷಕರು ನಿರ್ಧರಿಸುವಂತೆ ಸೂಕ್ಷ್ಮ ವೀಕ್ಷಕರ ಕರ್ತವ್ಯಗಳಿಗೆ ಬಳಸಿಕೊಳ್ಳತಕ್ಕದ್ದು. ಮತದಾನ ಸಿಬ್ಬಂದಿಯನ್ನು ಅನ್ಯಥಾ ನಿರ್ದಿಷ್ಟವಾಗಿ ನಿರ್ದೇಶನ ನೀಡದ ಹೊರತು ಜಿಲ್ಲೆಯ ಒಳಗೆ ನಿಯೋಜಿಸಿಕೊಳ್ಳತಕ್ಕದ್ದು.

## 12.2. ಮತದಾನ ಸಿಬ್ಬಂದಿ ತಂಡಗಳನ್ನು ರಚಿಸುವ ಕಾರ್ಯವಿಧಾನಗಳು

12.2.1. ಡಾಟಾಬೇಸ್ ಮತ್ತು ಸಾಫ್ಟವೇರ್‌ಅನ್ನು ಸಿಇಓ ಅವರು ತಯಾರಿಸಿ ಅಭಿವೃದ್ಧಿಪಡಿಸಬೇಕು ಮತ್ತು ಅದನ್ನು ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ವಿತರಿಸಬೇಕು. ಜಿಲ್ಲಾ ಚುನಾವಣಾ ಅಧಿಕಾರಿಗಳು

ಸಂಬಂಧಪಟ್ಟ ಪ್ರಾಧಿಕಾರಗಳಿಂದ ಮತದಾನದ ಸಿಬ್ಬಂದಿ ತಂಡದ ಕರ್ತವ್ಯಗಳಿಗಾಗಿ ಅರ್ಹರಿರುವ ಅಧಿಕಾರಿಗಳ ಸಂಪೂರ್ಣ ಡಾಟಾಬೇಸ್‌ಅನ್ನು ಪಡೆಯಬೇಕು. ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನು ಆ ರಾಜ್ಯದ ಸಿಇಒ ಅವರಿಂದ ಅನುಮೋದನೆಗೊಂಡ ಗಣಕೀಕೃತ ಯಾದೃಚ್ಛಿಕ ಅಪ್ಲೀಕೇಷನ್ ಸಾಫ್ಟ್‌ವೇರ್‌ನ ವಿದ್ಯುನ್ಮಾನ ದತ್ತಾಂಶ ಮೂಲದಲ್ಲಿ ನಮೂದಿಸಬೇಕು.

12.2.2. ಈ ಅಧಿಕಾರಿಗಳ ಈ ಸಂಪೂರ್ಣ ಡಾಟಾಬೇಸ್‌ನಿಂದ, ಸಾಫ್ಟ್‌ವೇರ್‌ಅನ್ನು ಬಳಸಿ ಬೇಕಾಗಿರುವ ಮತದಾನ ಸಿಬ್ಬಂದಿಯ ಸಂಖ್ಯೆಯ ಶೇಕಡಾ 120ರಷ್ಟು ಇರುವ ಸಿಬ್ಬಂದಿಯ ಪಟ್ಟಿಯನ್ನು (ಮೀಸಲು ಸಿಬ್ಬಂದಿಯೂ ಸೇರಿದಂತೆ) ಯಾದೃಚ್ಛೀಕವಾಗಿ ತಯಾರಿಸಬೇಕು. ಇದು ಮೂರು ಹಂತಗಳ ಯಾದೃಚ್ಛೀಕರಣ ಪ್ರಕ್ರಿಯೆಯಲ್ಲಿ ಮೊದಲನಯದಾಗಿದೆ. ಈ ಹಂತದಲ್ಲಿ ವೀಕ್ಷಕರುಗಳು ಉಪಸ್ಥಿತರಿರಬೇಕಾದ ಅಗತ್ಯವಿಲ್ಲ. ಈ ಯಾದೃಚ್ಛೀಕೃತ ಪಟ್ಟಿಯನ್ನು ಜಿಲ್ಲಾ ಚುನಾವಣಾ ಅಧಿಕಾರಿವಾರು ತಯಾರಿಸಬೇಕೇ ಹೊರತು ಉಪವಿಭಾಗ, ತಹಸಿಲ್, ಬ್ಲಾಕ್, ವಿಧಾನಸಭಾ ಮತಕ್ಷೇತ್ರ ಇತ್ಯಾದಿಯಂಥ ಇತರ ಯಾವುದೇ ಮಟ್ಟಗಳಲ್ಲಿ ಅಲ್ಲ ಎಂಬುದನ್ನು ಗಮನಿಸಬೇಕು. ಇದು ಕೇವಲ ಮತದಾನ ಕರ್ತವ್ಯಗಳಿಗೆ ಪ್ರಿಸೈಡಿಂಗ್ ಮತ್ತು ಪೋಲಿಂಗ್ ಅಧಿಕಾರಿಗಳಾಗಿ ಆ ಜಿಲ್ಲೆಯ ಯಾವುದಾದರೊಂದು ಮತಕ್ಷೇತ್ರದಲ್ಲಿ ತರಬೇತಿಯನ್ನು ನೀಡಲಾಗುವ ಅಧಿಕಾರಿಗಳನ್ನು ಗುರುತಿಸಿ ಆಯ್ಕೆಮಾಡುವುದಾಗಿದೆ. ಯಾವುದೇ ಸಂದರ್ಭದಲ್ಲೂ, ಈ ಹಂತದಲ್ಲಿ ಮತದಾನ ಸಿಬ್ಬಂದಿಯನ್ನು ನಿಯೋಜಿಸಬಹುದಾದ ವಿಧಾನಸಭಾ ಮತಕ್ಷೇತ್ರದ ಗುರುತು ಗೊತ್ತಾಗಬಾರದು. ಈ ಹಂತದಲ್ಲಿ ಮತದಾನ ಸಿಬ್ಬಂದಿಗೆ ತಾನು ಪ್ರಿಸೈಡಿಂಗ್ ಅಧಿಕಾರಿಯೇ ಅಥವಾ ಪೋಲಿಂಗ್ ಅಧಿಕಾರಿಯೇ ಎಂಬುದು ಮತ್ತು ತರಬೇತಿಗಳ ಸ್ಥಳ ಮತ್ತು ಸಮಯ ಮಾತ್ರ ಗೊತ್ತಿರುತ್ತದೆ.

12.2.3. ಎರಡನೇ ಹಂತದ ಯಾದೃಚ್ಛೀಕಕರಣ ಪ್ರಕ್ರಿಯೆಯನ್ನು ಮತಕ್ಷೇತ್ರಕ್ಕೆ ನಿಯೋಜನೆಗೊಂಡಿರುವ ವೀಕ್ಷಕರ ಸಮ್ಮುಖದಲ್ಲಿ ಮಾಡಬೇಕು. ಈ ಹಂತದಲ್ಲಿ, ಯಾದೃಚ್ಛೀಕರಣ ತಂತ್ರಾಂಶವನ್ನು ಬಳಸಿ ಯಾದೃಚ್ಛೀಕ ಆಧಾರದ ಮೇಲೆ ವಾಸ್ತವಿಕ ಮತದಾನ ಸಿಬ್ಬಂದಿ ತಂಡಗಳನ್ನು ರಚಿಸತಕ್ಕದ್ದು. **ಈ ಹಂತದಲ್ಲಿ ವೀಕ್ಷಕರು ಕಡ್ಡಾಯವಾಗಿ ಹಾಜರಿರತಕ್ಕದ್ದು.** ಈ ಹಂತದಲ್ಲಿ ವಾಸ್ತವಿಕ ಮತದಾನ ಕೇಂದ್ರ ಗೊತ್ತಿಲ್ಲದಿದ್ದರೂ, ವಿಧಾನಸಭಾ ಮತಕ್ಷೇತ್ರ ಮತ್ತು ತಂಡದ ಸಂರಚನೆ ಬಗ್ಗೆ ತಿಳಿದುಕೊಳ್ಳಬಹುದು. ಈ ಯಾದೃಚ್ಛೀಕರಣ ಪ್ರಕ್ರಿಯೆಯನ್ನು ಮತದಾನದ ದಿನಕ್ಕೆ 6 ಅಥವಾ 7 ದಿನಗಳ ಮುಂಚಿತವಾಗಿ ನಡೆಸಬಾರದು. ನೇಮಕಾತಿ ಪತ್ರಗಳನ್ನು ಜಾರಿಮಾಡುವ ಉದ್ದೇಶಕ್ಕಾಗಿ, ಜಿಲ್ಲಾ ಚುನಾವಣಾ ಅಧಿಕಾರಿಯು ಪ್ರಾಯೋಜಿತ ಇಲಾಖೆಗಳ/ಪ್ರಾಧಿಕಾರದ ಸೇವೆಗಳನ್ನು ಬಳಸಿಕೊಳ್ಳಬಹುದು ಮತ್ತು/ಅಥವಾ ಮತದಾನ ಸಿಬ್ಬಂದಿಗೆ ಅಂತಿಮ ಸಲಹೆ ಸೂಚನೆ ನೀಡಬಹುದಾದ ಮತ್ತು ನೇಮಕಾತಿ ಪತ್ರಗಳನ್ನು ನೀಡಬಹುದಾದ ದಿನದಂದು ಅವರಿಗೆ ತಂಡ ರಚನೆವಾರು ತರಬೇತಿ

ಕಾರ್ಯಕ್ರಮವನ್ನು ಆಯೋಜಿಸಬಹುದು. ಈ ತರಬೇತಿಯಲ್ಲಿ ಅಂಚೆ ಮತಪತ್ರಗಳಿಗೂ ಕೂಡ ಅನುವು ಮಾಡಿಕೊಡಲಾಗುತ್ತದೆ.

12.2.4. ಮೂರನೇ ಹಂತದ ಯಾದೃಚ್ಛೀಕರಣ ಪ್ರಕ್ರಿಯೆಯನ್ನು ಮತದಾನ ಸಿಬ್ಬಂದಿ ತಂಡಗಳು ಮತಗಟ್ಟೆಗಳಿಗೆ ಹೊರಡುವ ಸಮಯದಲ್ಲಿ ಮಾಡತಕ್ಕದ್ದು. ಆಗ ಮತದಾನ ಸಿಬ್ಬಂದಿ ತಂಡಗಳಿಗೆ ಮತಗಟ್ಟೆಗಳನ್ನು ಹಂಚಿಕೆ ಮಾಡಲಾಗುತ್ತದೆ. ಪ್ರತಿಯೊಂದು ಮತದಾನ ಸಿಬ್ಬಂದಿ ತಂಡಕ್ಕೆ ಮತಗಟ್ಟೆಗಳ ಅಂತಿಮ ಹಂಚಿಕೆಗಾಗಿ ಈ ಮೂರನೇ ಹಂತದ ಯಾದೃಚ್ಛೀಕರಣವನ್ನು ಕೂಡ ವೀಕ್ಷಕರ ಸಮ್ಮುಖದಲ್ಲಿ ಮಾಡತಕ್ಕದ್ದು. ಪ್ರತಿ ಮತದಾನ ಸಿಬ್ಬಂದಿಗೆ ಹಂಚಿಕೆ ಮಾಡಲಾದ ವಾಸ್ತವಿಕ ಮತಗಟ್ಟೆಯನ್ನು ಮತದಾನ ಸಿಬ್ಬಂದಿ ತಂಡ ವಾಸ್ತವವಾಗಿ ರವಾನೆ ಕೇಂದ್ರದಿಂದ ಹೊರಡುವುದಕ್ಕೆ ಸ್ವಲ್ಪ ಮುಂಚಿತವಾಗಿ ಪ್ರಕಟಿಸತಕ್ಕದ್ದು.

12.2.5. ಜಿಲ್ಲಾ ಚುನಾವಣಾ ಅಧಿಕಾರಿಯು, ವೀಕ್ಷಕರ ಮುಖಾಂತರ ಚುನಾವಣಾ ಆಯೋಗಕ್ಕೆ ಮತ್ತು ಪ್ರತ್ಯೇಕವಾಗಿ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿಗೆ, ಚುನಾವಣೆಗೆ ಸಂಬಂಧಿಸಿದಂತೆ ಮತದಾನ ಸಿಬ್ಬಂದಿ ತಂಡಗಳನ್ನು ರಚಿಸಿದ ನಿಕಟ ತರುವಾಯವೇ ಆ ಬಗ್ಗೆ "ಪ್ರಮಾಣಪತ್ರವನ್ನು ನೀಡಬೇಕು:–

(i) ವೀಕ್ಷಕರ ಸಮ್ಮುಖದಲ್ಲಿ ಬೇರೆಬೇರೆ ಕಚೇರಿಗಳು ಮತ್ತು ಇಲಾಖೆಗಳಿಂದ ಬಂದ ಅಧಿಕಾರಿಗಳನ್ನು ಸಮರ್ಪಕವಾಗಿ ಮಿಶ್ರಣಮಾಡಿ ಮತದಾನ ಸಿಬ್ಬಂದಿ ತಂಡಗಳನ್ನು ರಚಿಸಲಾಗಿದೆ; ಮತ್ತು

(ii) ಅಧಿಕಾರಿಗಳನ್ನು ಕಾರ್ಯಸಾಧ್ಯವಾದಷ್ಟುಮಟ್ಟಿಗೆ ರಾಜ್ಯ ಸರ್ಕಾರದ ಇಲಾಖೆಗಳಿಂದ ಹಾಗೂ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಇತ್ಯಾದಿಗಳಿಂದ ನಿಯೋಜಿಸಿಕೊಳ್ಳಲಾಗಿದೆ;

(iii) ಮತದಾನ ಸಿಬ್ಬಂದಿ ತಂಡಗಳನ್ನು ರಚಿಸುವ ಉದ್ದೇಶಕ್ಕಾಗಿ, ಜಿಲ್ಲೆಯಲ್ಲಿನ ಎಲ್ಲಾ ಅರ್ಹ ನೌಕರರ ಸಂಪೂರ್ಣ ಡಾಟಾಬೇಸ್‌ಅನ್ನು ಬಳಸಿಕೊಳ್ಳಲಾಗಿದೆ ಎಂಬುದಾಗಿ ಪ್ರಮಾಣೀಕರಿಸುತ್ತೇನೆ".

12.2.6. ಮೊದಲನೆಯ ಹಂತದ ಯಾದೃಚ್ಛೀಕರಣವನ್ನು ಹೊರತುಪಡಿಸಿ ಇಡೀ ಯಾದೃಚ್ಛೀಕರಣ ಪ್ರಕ್ರಿಯೆಯನ್ನು ತಪ್ಪದೇ ಮತಕ್ಷೇತ್ರಕ್ಕೆ ಕಳುಹಿಸಲಾದ ವೀಕ್ಷಕರ ಸಮ್ಮುಖದಲ್ಲಿ ನಡೆಸತಕ್ಕದ್ದು. ಒಂದು ಪಕ್ಷ, ಯಾದೃಚ್ಛೀಕರಣ ಪ್ರಕ್ರಿಯೆ (ಎರಡನೆಯ ಹಂತ) ಮೂಲಕ ಮತದಾನ ಸಿಬ್ಬಂದಿ ತಂಡದ ರಚನೆಯನ್ನು ವೀಕ್ಷಕರ ಅನುಪಸ್ಥಿತಿಯಲ್ಲಿ ಮಾಡಲಾಗಿದ್ದರೆ, ಆಗ 2ನೇ ಹಂತದ ಯಾದೃಚ್ಛೀಕರಣ ಪ್ರಕ್ರಿಯೆಯನ್ನು ವೀಕ್ಷಕರ ಸಮ್ಮುಖದಲ್ಲಿ ಮತ್ತೊಮ್ಮೆ ಹೊಸದಾಗಿ ಮಾಡಬೇಕು ಮತ್ತು ಆ ಬಗ್ಗೆ ಅನುಸರಣಾ ವರದಿಯನ್ನು ಕಳುಹಿಸಬೇಕು.

12.2.7. ಗಣಕಯಂತ್ರ ಯಾದೃಚ್ಛೀಕರಣ ಪ್ರಕ್ರಿಯೆಯ ಆಧಾರದ ಮೇಲೆ ಮಹಿಳಾ ಮತದಾನ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಬಾರದು. ವೀಕ್ಷಕರು ಮಾಡಿರುವ ಯಾದೃಚ್ಛೀಕರಣದ ಮೂಲಕ ಅವರನ್ನು ಹತ್ತಿರದ ಮತಗಟ್ಟೆಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಬೇಕು. ಇದರಿಂದ ಅವರು ಮತದಾನ ನಡೆಯುವ ದಿನದಂದೇ ಮತಗಟ್ಟೆಗಳಿಗೆ ಹೋಗಲು ಅನುಕೂಲವಾಗುತ್ತದೆ.

## 12.3. ಮತಗಟ್ಟೆ ಕಾರ್ಯ ತಂಡದ ರಚನೆ

12.3.1. ಮತಗಟ್ಟೆ ಕಾರ್ಯತಂಡವು ಸಾಮಾನ್ಯವಾಗಿ, ಒಬ್ಬ ಪ್ರಿಸೈಡಿಂಗ್ ಅಧಿಕಾರಿ ಮತ್ತು ಮೂವರು ಮತಗಟ್ಟೆ ಅಧಿಕಾರಿಗಳನ್ನು ಒಳಗೊಂಡಿರುತ್ತದೆ. ವಿವಿಪ್ಯಾಟ್‌ನೊಂದಿಗೆ ವಿಎಸ್‌ಡಿಯು, ಹೊಂದಿಕೊಂಡಿದ್ದರೆ ನಾಲ್ಕನೇ ಮತಗಟ್ಟೆ ಅಧಿಕಾರಿಯ ಅಗತ್ಯವಿರುತ್ತದೆ. ಮೊದಲನೇ ಮತಗಟ್ಟೆ ಅಧಿಕಾರಿಯು ಗುರುತು ಮಾಡಿದ ಮತದಾರರ ಅಧಿಕೃತ ಪಟ್ಟಿಯ (ಮಾರ್ಕ್‌ಡ್ ಕಾಪಿ) ಪ್ರಭಾರ ಹೊಂದಿರುತ್ತಾನೆ ಮತ್ತು ಮತದಾರರನ್ನು ಗುರುತಿಸುವುದಕ್ಕೆ ಹೊಣೆಗಾರನಾಗಿರುತ್ತಾನೆ. ಎರಡನೇ ಮತಗಟ್ಟೆ ಅಧಿಕಾರಿಯು ಎಪಿಕ್/ಇತರ ಗುರುತಿಸುವ ದಸ್ತಾವೇಜುಗಳ ವಿವರಗಳನ್ನೂ ಒಳಗೊಂಡು ಮತದಾರರ ರಿಜಿಸ್ಟರ್‌ನಲ್ಲಿ (ನಮೂನೆ 17ಎ) ನಮೂದುಗಳನ್ನು ಮಾಡುತ್ತಾನೆ, ಮತದಾರರ ಸಹಿಯನ್ನು ಅಥವಾ ಹೆಬ್ಬೆಟ್ಟಿನ ಗುರುತನ್ನು (ಅನಕ್ಷರಸ್ಥ ಮತದಾರರ ಸಂದರ್ಭದಲ್ಲಿ) ತೆಗೆದುಕೊಳ್ಳುತ್ತಾನೆ, ಮತದಾರರ ಎಡ ತೋರು ಬೆರಳಿನ ಮೇಲೆ ಅಳಿಸಲಾಗದ ಶಾಯಿಯನ್ನು ಹಚ್ಚುತ್ತಾನೆ ಮತ್ತು ಮತದಾರನು ಮತ ಚಲಾಯಿಸಲು ಯಾವ ಕ್ರಮ ಸಂಖ್ಯೆಯ ಪ್ರಕಾರ ಕಂಪಾರ್ಟ್‌ಮೆಂಟ್‌ನೊಳಗೆ ಹೋಗಬೇಕೋ ಆ ಕ್ರಮಸಂಖ್ಯೆಯನ್ನು ಸೂಚಿಸಿದ ಮತದಾರರ ಚೀಟಿಯನ್ನು ನೀಡುತ್ತಾನೆ. ಮೂರನೇ ಮತಗಟ್ಟೆ ಅಧಿಕಾರಿಯು, "ಕಂಟ್ರೋಲ್ ಯೂನಿಟ್"ನ ಅಭಿರಕ್ಷಕನಾಗಿದ್ದು, "ಕಂಟ್ರೋಲ್ ಯೂನಿಟ್"ನ "ಬ್ಯಾಲೆಟ್" ಬಟನ್ ಒತ್ತುವ ಮೂಲಕ "ಬ್ಯಾಲೆಟಿಂಗ್ ಯೂನಿಟ್"ಅನ್ನು ಸಕ್ರಿಯಗೊಳಿಸುತ್ತಾನೆ ಹಾಗೂ ಎರಡನೇ ಮತಗಟ್ಟೆ ಅಧಿಕಾರಿಯು ನೀಡಿದ ಮತದಾರರ ಚೀಟಿಯಲ್ಲಿರುವ ಕ್ರಮಸಂಖ್ಯೆಯ ಕ್ರಮದಲ್ಲಿ, ಮತ ಚಲಾಯಿಸುವುದಕ್ಕಾಗಿ ವೋಟಿಂಗ್ ಕಂಪಾರ್ಟ್‌ಮೆಂಟ್‌ನ ಒಳಗೆ ಮತ ಚಲಾಯಿಸಲು ಮತದಾರನಿಗೆ ಅವಕಾಶ ಮಾಡಿಕೊಡುತ್ತಾನೆ. ಯಾವುದೇ ಒಂದು ನಿರ್ದಿಷ್ಟ ಜಿಲ್ಲೆ/ಮತಕ್ಷೇತ್ರದಲ್ಲಿ ಮತಗಟ್ಟೆ ಸಿಬ್ಬಂದಿಯ ಕೊರತೆ ಬಿದ್ದ ಸಂದರ್ಭದಲ್ಲಿ, ಮತ್ತು ಆನಂತರ ಅಂಥ ಸ್ಥಳಗಳಲ್ಲಿ, ಮತಗಟ್ಟೆ ಕಾರ್ಯ ತಂಡವು, ನಿಗದಿತ ಪ್ರಮಾಣವಾಗಿರುವ ಒಬ್ಬ ಪ್ರಿಸೈಡಿಂಗ್ ಅಧಿಕಾರಿ ಮತ್ತು ಮೂವರು ಮತಗಟ್ಟೆ ಅಧಿಕಾರಿಗಳಿಗೆ ಪ್ರತಿಯಾಗಿ ಒಬ್ಬ ಪ್ರಿಸೈಡಿಂಗ್ ಅಧಿಕಾರಿ ಮತ್ತು ಇಬ್ಬರು ಮತಗಟ್ಟೆ ಅಧಿಕಾರಿಗಳನ್ನು ಒಳಗೊಳ್ಳಬಹುದು ಎಂದು ಭಾರತ ಚುನಾವಣಾ ಆಯೋಗವು ನಿರ್ಧರಿಸಿದೆ. ಅಂಥ

ಸಂದರ್ಭದಲ್ಲಿ, ಮೊದಲನೇ ಮತಗಟ್ಟೆ ಅಧಿಕಾರಿಯ ಕರ್ತವ್ಯವು, ಮತದಾರನನ್ನು ಗುರುತಿಸಿದ ನಂತರ, ಮತದಾರನ ತೋರು ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಚ್ಚುವುದನ್ನು ಸಹ ಒಳಗೊಳ್ಳುತ್ತದೆ. ಅಂಥ ಸಂದರ್ಭಗಳಲ್ಲಿ, ಎರಡನೇ ಮತಗಟ್ಟೆ ಅಧಿಕಾರಿಯು, 17ಎ ನಮೂನೆಯಲ್ಲಿ (ಮತದಾರರ ರಿಜಿಸ್ಟರ್) ನಮೂದುಗಳನ್ನು ಮಾಡುವ ಮತ್ತು ಅದರಲ್ಲಿ ಮತದಾರರ ಸಹಿ/ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳುವ ಕರ್ತವ್ಯದ ಜೊತೆಗೆ "ಕಂಟ್ರೋಲ್ ಯೂನಿಟ್"ನ ಅಭಿರಕ್ಷಕನೂ ಸಹ ಆಗಿರುತ್ತಾನೆ. ಕೇವಲ ಇಬ್ಬರು ಮತಗಟ್ಟೆ ಅಧಿಕಾರಿಗಳನ್ನು ಬಳಸುವಂಥ ಸಂದರ್ಭಗಳಲ್ಲಿ, ಮತದಾರರ ಚೀಟಿ ಕ್ರಮಸಂಖ್ಯೆಗಳನ್ನು ಸಿದ್ಧಪಡಿಸುವ ಅಗತ್ಯವಿರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಇದಕ್ಕೆ ಬದಲಾಗಿ, ಎರಡನೇ ಮತಗಟ್ಟೆ ಅಧಿಕಾರಿಯು "ಕಂಟ್ರೋಲ್ ಯೂನಿಟ್"ಅನ್ನು ಸಕ್ರಿಯಗೊಳಿಸುತ್ತಾನೆ ಮತ್ತು ನಂತರ ಮತದಾರರನ್ನು ಮತದಾರರ ರಿಜಿಸ್ಟರಿನಲ್ಲಿ (ನಮೂನೆ 17ಎ) ಅವರು ಸಹಿ ಮಾಡಿರುವ ಅದೇ ಕ್ರಮಸರಣಿಯಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟ್‌ನ ಒಳಗೆ ಮತದಾರರನ್ನು ಕಳುಹಿಸುವನು. ಅಂಥ ಸಂದರ್ಭಗಳಲ್ಲಿ, ಮತಗಟ್ಟೆಗಳಲ್ಲಿ ಮತದಾರರ ಚೀಟಿಗಳನ್ನು ಸಿದ್ಧಪಡಿಸುವ ಅಗತ್ಯವಿರುವುದಿಲ್ಲ. ಅಲ್ಲದೆ, ಮತಗಟ್ಟೆ ಅಧಿಕಾರಿಗಳ ಸಂಖ್ಯೆಯನ್ನು ಇಬ್ಬರಿಗೆ ಸೀಮಿತಗೊಳಿಸಿರುವ ಸಂದರ್ಭಗಳಲ್ಲಿ, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಈ ಕುರಿತು ಮುಂಚಿತವಾಗಿಯೇ ಲಿಖಿತದಲ್ಲಿ ತಿಳಿಸಿರಬೇಕು. ಇಬ್ಬರು ಮತಗಟ್ಟೆ ಅಧಿಕಾರಿಗಳು ನಿರ್ವಹಿಸುವ ಕರ್ತವ್ಯಗಳ ಬಗ್ಗೆಯೂ ಸಹ ಅಭ್ಯರ್ಥಿಗಳಿಗೆ ವಿವರಿಸಬೇಕು.

## 13. ವೀಕ್ಷಕರು

### 13.1. ಪ್ರಾರಂಭಿಕ

13.1.1. ಭಾರತ ಚುನಾವಣಾ ಅಯೋಗವು, ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸಲು ಸಹಾಯಕವಾಗಲೆಂದು ಅಡಳಿತ ಸೇವೆಯ ಹಿರಿಯ ಮತ್ತು ಅನುಭವಿ ಅಧಿಕಾರಿಗಳನ್ನು ತನ್ನ ವೀಕ್ಷಕರನ್ನಾಗಿ ನೇಮಕ ಮಾಡುತ್ತದೆ. ಅವರು ಕ್ಷೇತ್ರ ಮಟ್ಟದಲ್ಲಿ ಚುನಾವಣಾ ಪ್ರಕ್ರಿಯೆಗಳ ಸಮರ್ಥ ಮತ್ತು ಪರಿಣಾಮಕಾರಿ ನಿರ್ವಹಣೆಯ ಬಗ್ಗೆ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಚುನಾವಣೆಗೆ ಸಂಬಂಧಿಸಿದ ಕಾನೂನುಗಳನ್ನು, ನಿಯಮಗಳನ್ನು, ಕಾರ್ಯವಿಧಾನಗಳನ್ನು, ಮಾರ್ಗಸೂಚಿಗಳು ಮತ್ತು ಸೂಚನೆಗಳನ್ನು ಸಂಬಂಧಪಟ್ಟ ಎಲ್ಲರೂ ಕಟ್ಟುನಿಟ್ಟಾಗಿ ಮತ್ತು ನಿಷ್ಪಕ್ಷಪಾತವಾಗಿ ಪಾಲಿಸುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕ್ಷೇತ್ರ ಮಟ್ಟದಲ್ಲಿ ಚುನಾವಣಾ ಆಡಳಿತ ಯಂತ್ರ, ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು ಮತ್ತು ಮತದಾರರೊಂದಿಗೆ ಮುಖಾಮುಖಿಯಾಗಿ ಕ್ಷೇತ್ರದಿಂದ ಚುನಾವಣಾ ಆಯೋಗಕ್ಕೆ ನೇರ ಮಾಹಿತಿಗಳನ್ನು ಕೂಡ ಒದಗಿಸುತ್ತಾರೆ.

### 13.2. ವೀಕ್ಷಕರ ಶಾಸನಬದ್ಧ ಅಧಿಕಾರಗಳು:–

13.2.1. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 20ಬಿ ಕಡೆಗೆ ಅಭ್ಯರ್ಥಿಯ ಗಮನ ಸೆಳೆಯಲಾಗಿದ್ದು, ಅದು ಈ ಕೆಳಕಂಡಂತಿದೆ:–

1. ಮತಕ್ಷೇತ್ರದಲ್ಲಿ ಅಥವಾ ಮತಕ್ಷೇತ್ರಗಳ ಸಮೂಹದಲ್ಲಿ ಚುನಾವಣೆ ಅಥವಾ ಚುನಾವಣೆಗಳನ್ನು ನಡೆಸುತ್ತಿರುವುದನ್ನು ಗಮನಿಸಲು ಮತ್ತು ಚುನಾವಣಾ ಆಯೋಗವು ತನಗೆ ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಲು ಸರ್ಕಾರದ ಅಧಿಕಾರಿಯಾಗಿರತಕ್ಕ ಒಬ್ಬ ಪರಿವೀಕ್ಷಕನನ್ನು ಚುನಾವಣಾ ಆಯೋಗವು ನಾಮನಿರ್ದೇಶನ ಮಾಡಬಹುದು.

2. (1)ನೇ ಉಪ–ಪ್ರಕರಣದ ಮೇರೆಗೆ ನಾಮನಿರ್ದೇಶಿತನಾದ ಪರಿವೀಕ್ಷಕನು, ಬಹಳಷ್ಟು ಮತಗಟ್ಟೆಗಳಲ್ಲಿ ಅಥವಾ ಮತದಾನಕ್ಕೆ ಅಥವಾ ಮತಗಳ ಎಣಿಕೆಗೆ ನಿಗದಿಪಡಿಸಲಾದ ಸ್ಥಳಗಳಲ್ಲಿ ಮತಗಟ್ಟೆಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಥವಾ ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ನಿಗದಿಪಡಿಸಲಾದ ಸ್ಥಳದಲ್ಲಿ ಬಳಸಲಾದ ಮತಪತ್ರಗಳನ್ನು ಕಾನೂನು ವಿರುದ್ಧವಾಗಿ ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಿಂದ ಹೊರಕ್ಕೆ ತೆಗೆದುಕೊಂಡು ಹೋಗಲಾಗಿದೆಯೆಂದು ಅಥವಾ ಅವುಗಳನ್ನು ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಲಾಗಿದೆಯೆಂದು ಅಥವಾ ಅವು ಕಳೆದುಹೋಗಿವೆಯೆಂದು ಅಥವಾ ಆ ಮತಗಟ್ಟೆಯ ಅಥವಾ ಸ್ಥಳದ ಮತದಾನದ ಫಲಿತಾಂಶವನ್ನು

ಖಚಿತಪಡಿಸಿಕೊಳ್ಳಲಾಗದಷ್ಟುಮಟ್ಟಿಗೆ ಅವು ಹಾನಿಗೊಳಗಾಗಿವೆಯೆಂದು ಅಥವಾ ಅವುಗಳನ್ನು ಅಕ್ರಮವಾಗಿ ತಿದ್ದಲಾಗಿದೆ ಎಂದು ಅಭಿಪ್ರಾಯಪಟ್ಟರೆ ಫಲಿತಾಂಶವನ್ನು ಘೋಷಿಸುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಅಥವಾ ಫಲಿತಾಂಶವನ್ನು ಘೋಷಿಸಿದಂತೆ ಆ ಮತಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗೆ ಅಥವಾ ಅವನು ನಾಮನಿರ್ದೇಶಿತನಾಗಿರುವಂಥ ಮತಕ್ಷೇತ್ರಗಳ ಪೈಕಿ ಯಾವುದೇ ಮತಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗೆ ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

3. ಪರಿವೀಕ್ಷಕನು ಈ ಪ್ರಕರಣದ ಮೇರೆಗೆ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಅಥವಾ ಫಲಿತಾಂಶವನ್ನು ಘೋಷಿಸದಂತೆ ರಿಟರ್ನಿಂಗ್ ಅಧಿಕಾರಿಗೆ ನಿರ್ದೇಶನ ನೀಡಿರುವಲ್ಲಿ, ಆ ಸಂಗತಿಯನ್ನು ಆ ಕೂಡಲೇ ಅವನು ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು ಮತ್ತು ಆ ತರುವಾಯ ಚುನಾವಣಾ ಆಯೋಗವು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ 58ಎ ಪ್ರಕರಣ ಅಥವಾ 64ಎ ಪ್ರಕರಣ ಅಥವಾ 66ನೇ ಪ್ರಕರಣದ ಮೇರೆಗೆ ಯುಕ್ತ ನಿರ್ದೇಶನಗಳನ್ನು ನೀಡತಕ್ಕದ್ದು. ವೀಕ್ಷಕರು, ಅಭ್ಯರ್ಥಿಗಳು ಮಾಡುವ ಚುನಾವಣಾ ವೆಚ್ಚದ ಮೇಲ್ವಿಚಾರಣೆ/ ಉಸ್ತುವಾರಿಯನ್ನು ಸಹ ಮಾಡಬೇಕು ಮತ್ತು ಅಭ್ಯರ್ಥಿಗಳು ದೈನಂದಿನ ಚುನಾವಣಾ ಖರ್ಚು–ವೆಚ್ಚಗಳ ಲೆಕ್ಕ ನಿರ್ವಹಣೆಗೆ ಸಂಬಂಧಿಸಿದಂತೆ ಆಯೋಗದ ಮಾರ್ಗದರ್ಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ಅವರು ನಿರ್ವಹಿಸಿದ ಲೆಕ್ಕಪತ್ರಗಳ ರಿಜಿಸ್ಟರ್‌ಅನ್ನು ಸಹ ಪರಿಶೀಲಿಸಬೇಕು.

### 13.3. ಸೂಕ್ಷ್ಮ ವೀಕ್ಷಕರು

13.3.1. ಈಗ, ಭಾರತ ಚುನಾವಣಾ ಅಯೋಗವು ಮತಗಟ್ಟೆ ಮಟ್ಟದಲ್ಲಿ ಕೆಲಸ ಮಾಡಲು ಸೂಕ್ಷ್ಮ ವೀಕ್ಷಕರನ್ನು ನೇಮಿಸುವ ವ್ಯವಸ್ಥೆಯನ್ನು ಪರಿಚಯಿಸಿದೆ. ಸೂಕ್ಷ್ಮ ವೀಕ್ಷಕರು ಅಯೋಗದ ವೀಕ್ಷಕರ ನೇರ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುತ್ತಾರೆ. ಒಂದು ಸಾಮಾಜಿಕ ಗುಂಪು ಇನ್ನೊಂದು ಸಾಮಾಜಿಕ ಗುಂಪಿನ ಮೇಲೆ ಪ್ರಾಬಲ್ಯ ಹೊಂದಿರುವುದು, ಪ್ರದೇಶದ ದುರ್ಗಮತೆ, ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳ (ಎಪಿಕ್ ಕಾರ್ಡ್) ಅಲಭ್ಯತೆ ಚುನಾವಣಾ ಸಂಬಂಧಿ ಹಿಂಸೆ/ಗಲಭೆಯ ಪೂರ್ವ ಇತಿಹಾಸ ಮೊದಲಾದಂಥ, ಮತದಾರರಿಗೆ ಬೆದರಿಕೆ ಅಥವಾ ಪ್ರಲೋಭನೆ ಉಂಟು ಮಾಡುವ ಸಾಧ್ಯತೆಯಿರುವಂತಹ ವಿವಿಧ ಸಂಗತಿಗಳ ಆಧಾರದ ಮೇಲೆ ಮತಗಟ್ಟೆಗಳಲ್ಲಿ ಸೂಕ್ಷ್ಮ ವೀಕ್ಷಕರನ್ನು ನಿಯೋಜಿಸಲಾಗುತ್ತದೆ. ಮತದಾನವು ಯಾವುದೇ ರೀತಿಯಲ್ಲಿ ದೋಷಪೂರಿತವಾಗಿದೆ ಎಂದು ಕಂಡುಬಂದಲ್ಲಿ, ಇವರು ತಕ್ಷಣವೇ ವಿಷಯವನ್ನು ವೀಕ್ಷಕರ ಗಮನಕ್ಕೆ

ತರಬೇಕು. ಮತಗಟ್ಟೆ ಅಧಿಕಾರಿಗಳು/ ಪೋಲಿಂಗ್ ಏಜಂಟರು ಮತದಾನದ ಕಾರ್ಯವಿಧಾನವನ್ನು ಸರಿಯಾಗಿ ಪಾಲಿಸುತ್ತಿದ್ದಾರೆಯೇ ಎಂಬುದನ್ನು ಸಹ ಗಮನಿಸಿ, ಮತದಾನದ ಕೊನೆಯಲ್ಲಿ ವರದಿಯೊಂದನ್ನು ಸಿದ್ಧಪಡಿಸಿ, ಅದನ್ನು ಸಂಗ್ರಹಣಾ ಕೇಂದ್ರದಲ್ಲಿ ವೀಕ್ಷಕರಿಗೆ ಸಲ್ಲಿಸುತ್ತಾರೆ.

### 13.4. ಸೆಕ್ಟರ್ಅಧಿಕಾರಿಗಳು

13.4.1. ಭಾರತ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿ ಘೋಷಣೆಯಾದ ದಿನಾಂಕದಿಂದ ಚುನಾವಣೆ ಪ್ರಕ್ರಿಯೆ ಮುಕ್ತಾಯ ಆಗುವವರೆಗೆ ಚುನಾವಣೆಯ ಮೇಲ್ವಿಚಾರಣೆಗಾಗಿ ಪ್ರತಿ 10 –12 ಮತಗಟ್ಟೆಗಳಿಗೆ ಒಬ್ಬರಂತೆ ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಅವರನ್ನು ಮತದಾನದ ದಿನಕ್ಕೆ 7 ದಿನಗಳ ಮುಂಚೆ ವಲಯ ಮ್ಯಾಜಿಸ್ಟೇಟರನ್ನಾಗಿ ನೇಮಕ ಮಾಡಲಾಗುವುದು ಮತ್ತು ಅವರು ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರವರ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಪೊಲೀಸ್ ಅಧಿಕಾರಿಯವರು ಅವರ ಜೊತೆಯಲ್ಲಿರುತ್ತಾರೆ. ಸೆಕ್ಟರ್ ಅಧಿಕಾರಿಗಳ ಪ್ರಮುಖ ಕಾರ್ಯವನ್ನು ಮತ್ತು ಹೊಣೆಗಾರಿಕೆಗಳನ್ನು ಈ ಕೆಳಗೆ ನೀಡಿದೆ.

#### 13.4.2. ಮತದಾನ ಪೂರ್ವ ಹೊಣೆಗಾರಿಕೆ:

1. ಮತಗಟ್ಟೆಗಳಿಗೆ ಹೋಗಲು ಇರುವ ಸಂಪರ್ಕ ರಸ್ತೆ ಮತ್ತು ಪ್ರವೇಶಾವಕಾಶಗಳ ಬಗ್ಗೆ ವಿಚಾರಿಸಿ ಖಚಿತಪಡಿಸಿಕೊಳ್ಳುವುದು.
2. ಮತಗಟ್ಟೆಗಳಲ್ಲಿ ನೀರು, ನೆರಳು, ಲ್ಯಾಂಪ್‌ಗಳು, ಶೌಚಾಲಯ ಮತ್ತು ದೂರವಾಣಿ ಇತ್ಯಾದಿಗಳಂತಹ ಮೂಲಭೂತ ಸೌಕರ್ಯ ಹಾಗೂ ಕಟ್ಟಡಗಳ ವಾಸ್ತವಿಕ ಸ್ಥಿತಿಗತಿಗಳ ಬಗ್ಗೆ ವಿಚಾರಿಸಿ ಖಚಿತಪಡಿಸಿಕೊಳ್ಳುವುದು.
3. ಹೊಸ ಮತಗಟ್ಟೆಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
4. ದೂರವಾಣಿ ಸಂಖ್ಯೆಗಳನ್ನು ಸಂಗ್ರಹಿಸಿ ಮತಗಟ್ಟೆಗೆ ಮೊಬೈಲ್ ಸಂಪರ್ಕ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
5. ಇವರು ಅನಧಿಕೃತ ಪ್ರಚಾರ ವಾಹನಗಳ ಚಲನವಲನ, ಆಸ್ತಿಯ ವಿರೂಪಗೊಳಿಸುವಿಕೆ, ಅನಧಿಕೃತ ಪ್ರಚಾರ ಸಾರ್ವಜನಿಕ ಕಟ್ಟಡಗಳು, ಸರ್ಕಾರಿ ವಾಹನಗಳು, ಸರ್ಕಾರಿ ನೌಕರರ

ದುರ್ಬಳಕೆ ಹಾಗೂ ಸಾಧ್ಯವಿರುವ ಎಲ್ಲಾ ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಬಗ್ಗೆ ನಿಗ ಇಡುವುದು ಮತ್ತು ಆ ಬಗ್ಗೆ ವರದಿ ಮಾಡುವುದು.

6. ಮತದಾನ ಪ್ರದೇಶದಲ್ಲಿನ ಮತದಾರರಿಗೆ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಪ್ರಾತ್ಯಕ್ಷಿಕೆ ಮಾಡಿ ತೋರಿಸುವುದು ಹಾಗೂ ನೋಟಾ ಆಯ್ಕೆಯ ಪರಿಚಯದ ಬಗ್ಗೆ ಮತದಾರರಿಗೆ ವಿವರಿಸಿ ಹೇಳುವುದು.
7. ಎಪಿಕ್ ಕವರೇಜ್ ಪ್ರೋಗ್ರಾಮ್ ಬಗ್ಗೆ ನಿರ್ದಿಷ್ಟ ಮಾಹಿತಿಯನ್ನು ನೀಡುವುದು.
8. ಮತದಾರರಿಗೆ ತಮ್ಮ ಮತಗಟ್ಟೆಗಳ ಸಹಾಯವಾಣಿಗಳು ಹಾಗೂ ಸ್ಥಳಗಳ ಬಗ್ಗೆ ಮಾಹಿತಿ ನೀಡುವುದು.
9. ಬಿಎಲ್‌ಓ (ಮತಗಟ್ಟೆ ಮಟ್ಟದ ಅಧಿಕಾರಿ) ಮೂಲಕ ಭಾವಚಿತ್ರದ ಮತದಾರರ ಪಟ್ಟಿಯಲ್ಲಿನ (ಪಿಇಆರ್) ತಮ್ಮ ಹೆಸರುಗಳು ಹಾಗೂ ನಮೂದುಗಳ ಬಗ್ಗೆ ಪರಿಶೀಲಿಸಿಕೊಳ್ಳುವಂತೆ ಮತದಾರರಿಗೆ ತಿಳಿಸುವುದು.
10. ಬೆದರಿಕೆ/ ಪ್ರಭಾವಕ್ಕೊಳಗಾಗುವ ಸಾಧ್ಯತೆ ಇರುವ ಪ್ರದೇಶಗಳಿಗೆ ಭರವಸೆ ಮೂಡಿಸುವ ಮತ್ತು ವಾತಾವರಣವನ್ನು ತಿಳಿಗೊಳಿಸುವ ಕ್ರಮವಾಗಿ ಪದೇ ಪದೇ ಭೇಟಿ ನೀಡುವುದು.
11. ಬೆದರಿಕೆ/ ಪ್ರಭಾವಕ್ಕೊಳಗಾಗುವ ಸಾಧ್ಯತೆ ಇರುವ ಪ್ರದೇಶಗಳನ್ನು ಗುರುತಿಸುವುದು.
12. ಬೆದರಿಕೆ ಮತ್ತು ಆತಂಕ್ಕೊಳಗಾಗುವ ಸಾಧ್ಯತೆ ಇರುವ ಮತದಾರರ ಗ್ರಾಮಗಳು, ಸಣ್ಣ ಹಳ್ಳಿಗಳು ಮತ್ತು ವಸತಿ ಭಾಗಗಳನ್ನು ಗುರುತಿಸುವುದು.
13. ಬೆದರಿಕೆ ಅಥವಾ ಪ್ರಲೋಭನೆ ಉಂಟು ಮಾಡುವ ವ್ಯಕ್ತಿಗಳನ್ನು ಗುರುತಿಸಿ ಅವರ ಬಗ್ಗೆ ರಿಟರ್ನಿಂಗ್ ಅಧಿಕಾರಿಗೆ ವರದಿ ಮಾಡುವುದು.
14. ಮತದಾರರಿಗೆ ಮತದಾನಕ್ಕಾಗಿ ಮುಕ್ತ ಅವಕಾಶ ಕಲ್ಪಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
15. ಬೆದರಿಕೆ/ಪ್ರಲೋಭನೆಗೊಳಗಾಗುವ ಸಾಧ್ಯತೆ ಇರುವ ಸಮುದಾಯಗಳಲ್ಲಿನ ಕೇಂದ್ರಗಳನ್ನು ಅವರ ದೂರವಾಣಿ ಸಂಖ್ಯೆಗಳೊಂದಿಗೆ ಸಂಪರ್ಕಿಸುವುದು.

**13.4.3. ಮತದಾನದ ಹಿಂದಿನ ದಿನದ ಹೊಣೆಗಾರಿಕೆ:**

1. ಮತದಾನ ಸಿಬ್ಬಂದಿ ತಂಡಗಳು ಮತ್ತು ಎಲ್ಲಾ ಚುನಾವಣಾ ಸಾಮಗ್ರಿಗಳು ತಮ್ಮ ಮತಗಟ್ಟೆಗೆ ತಲುಪಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

2. ಭದ್ರತಾ ಪಡೆಯು ಭದ್ರತಾಪಡೆ ನಿಯೋಜನೆ ಯೋಜನೆಯಂತೆ ಮತಗಟ್ಟೆಗಳಿಗೆ ಬಂದು ತಲುಪಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
3. ಇವಿಎಂ, ವಿವಿಪ್ಯಾಟ್ ನಿರ್ವಹಣೆ ಬಗ್ಗೆ ಅಥವಾ ಚುನಾವಣಾ ಪ್ರಕ್ರಿಯೆಯ ಬಗ್ಗೆ ಯಾವುದೇ ಕೊನೆ ಕ್ಷಣದ ಅನುಮಾನಗಳಿದ್ದರೆ ಆ ಬಗ್ಗೆ ಚುನಾವಣಾ ಸಿಬ್ಬಂದಿಗೆ ಸ್ಪಷ್ಟಪಡಿಸುವುದು.
4. ನಿಯಂತ್ರಣ ಕೊಠಡಿಗೆ ಎಲ್ಲಾ ಸರಿಯಾಗಿದೆ ಎಂಬ ಬಗ್ಗೆ ವರದಿ ನೀಡುವುದು.

**13.4.4. ಮತದಾನ ದಿನದ ಹೊಣೆಗಾರಿಕೆ:**

1. ಮತದಾನ ಪ್ರಾರಂಭಕ್ಕೂ ಮುಂಚೆ ಅಣಕು ಮತದಾನ ಸ್ಥಿತಿಗತಿಯ ಬಗ್ಗೆ ವಿಚಾರಿಸಿ ಖಚಿತಪಡಿಸಿಕೊಳ್ಳುವುದು. ಸಮಸ್ಯೆ ಏನಾದರೂ ಇದ್ದರೆ ಅದನ್ನು ಪರಿಹರಿಸಲು ಪರಿಹಾರೋಪಾಯ ಕ್ರಮವನ್ನು ಕೈಗೊಳ್ಳುವುದು.
2. ಪೋಲಿಂಗ್ ಏಜೆಂಟರ ಅನುಪಸ್ಥಿತಿಯಲ್ಲಿ ಅಣಕು ಮತದಾನ ನಡೆಸಬೇಕಾಗಿರುವ ಮತಗಟ್ಟೆಗೆ ಪದೇ ಪದೇ ಭೇಟಿ ನೀಡುವುದು ಮತ್ತು ಆ ಮತಗಟ್ಟೆಯ ಬಗ್ಗೆ ಗಮನ ಇಡುವುದು.
3. ಮತದಾನ ಪ್ರಾರಂಭದ ಬಗ್ಗೆ ವರದಿ ಮಾಡುವುದು.
4. ಮತಗಟ್ಟೆಗಳಿಗೆ ನಿಯೋಜಿಸಲಾದ ಭದ್ರತಾಪಡೆಗಳು ತಮ್ಮ ನಿಯೋಜಿತ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
5. ಅಗತ್ಯವಿರುವೆಡೆ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಬದಲಾಯಿಸುವುದು. (ಸೆಕ್ಟರ್ ಅಧಿಕಾರಿಯು ಹೆಚ್ಚುವರಿ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಇಟ್ಟುಕೊಂಡಿರಬೇಕು.)
6. ಪೋಲಿಂಗ್ ಏಜೆಂಟರ ಹಾಜರಿ/ಗೈರುಹಾಜರಿ ನಿಗಾವಹಿಸಬೇಕು ಮತ್ತು ಆ ಬಗ್ಗೆ ವರದಿ ಮಾಡಬೇಕು.
7. ಕಾರ್ಯವಿಧಾನಗಳೊಂದಿಗೆ ಮತಗಟ್ಟೆಯ ಒಳಗಡೆ ಮತದಾನ ಸಿಬ್ಬಂದಿ ತಂಡಕ್ಕೆ ನೆರವು ನೀಡುವುದು.
8. ಮತದಾನದ ಪ್ರಕ್ರಿಯೆ ಪಾವಿತ್ರತೆಯನ್ನು ಕಾಪಾಡುವುದು ಮತ್ತು ಮತಗಟ್ಟೆಗೆ ತಾವು ಭೇಟಿ ನೀಡಿದ ಸಮಯದಲ್ಲಿ ಮತದಾನದ ಎಲ್ಲಾ ಅಂಶಗಳನ್ನು ಪರಿಶೀಲಿಸುವುದು.
9. ಅಣಕು ಮತದಾನದ ಸ್ಥಿತಿಗತಿಯ ಬಗ್ಗೆ 30 ನಿಮಿಷಗಳೊಳಗಾಗಿ ರಿಟರ್ನಿಂಗ್ ಅಧಿಕಾರಿಗೆ ವರದಿ ಮಾಡುವುದು.

10. ಹಾಜರಿಲ್ಲದ್ದರಿಂದ ಗಮನ ಸೆಳೆದ ಯಾವುದೇ ವಿಭಾಗ ಅಥವಾ ಭಾಗದ ಮತದಾನ ವಿಧಾನವನ್ನು ಪರಿಶೀಲಿಸುವುದು. ಪರಿಹಾರ ಕ್ರಮಗಳಿಗಾಗಿ ರಿಟರ್ನಿಂಗ್ ಅಧಿಕಾರಿಗೆ ತಿಳಿಸುವುದು.

11. ಸೂಚಿಸಲಾದಂತೆ ಮತದಾನದ ಶೇಕಡಾವಾರು ಪ್ರಮಾಣದ ಬಗ್ಗೆ ಕಾಲಕಾಲಕ್ಕೆ ರಿಟರ್ನಿಂಗ್ ಅಧಿಕಾರಿಗೆ ವರದಿ ಮಾಡುವುದು.

12. ಚುನಾವಣಾ ದಿನದ ದೂರುಗಳನ್ನು ನಿರ್ವಹಿಸುವುದು.

13. ಮತದಾನ ಸಿಬ್ಬಂದಿ ತಂಡಗಳು ಮಾಡಿದ ಇವಿಎಂ ಮತ್ತು ವಿವಿಪ್ಯಾಟ್‌ಗಳ ಮೊಹರನ್ನು ಹಾಗೂ ಕಾಗದ ಪತ್ರಗಳ ಸಿದ್ಧಪಡಿಸುವಿಕೆಯನ್ನು ಪರಿಶೀಲಿಸುವುದು.

14. ಮತದಾನ ತಂಡಗಳೊಂದಿಗೆ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಸ್ವೀಕಾರ ಕೇಂದ್ರಕ್ಕೆ ತಲುಪಿಸಲು ಬೆಂಗಾವಲು ನೀಡುವುದು.

15. ಮತದಾನ ಸಿಬ್ಬಂದಿಯನ್ನು ಬದಲಿಸಿ ಅವರ ಜಾಗದಲ್ಲಿ ಮೀಸಲು ಸಿಬ್ಬಂದಿಗಳನ್ನು ನೇಮಿಸುವುದು.

16. ಮತದಾನದ ಮುಕ್ತಾಯದಲ್ಲಿ ಪ್ರಿಸೈಡಿಂಗ್ ಅಧಿಕಾರಿಯ ದಿನಚರಿಯನ್ನು ಸರಿಯಾಗಿ ಭರ್ತಿ ಮಾಡಲಾಗಿದೆ, ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಸರಿಯಾಗಿ ಭರ್ತಿ ಮಾಡಲಾಗಿದೆ, ನಮೂನೆ 17–ಸಿ ಪ್ರತಿಗಳನ್ನು ಪೋಲಿಂಗ್ ಏಜೆಂಟರುಗಳಿಗೆ ನೀಡಲಾಗಿದೆ, 17–ಎ ಮತದಾರರ ರಿಜಿಸ್ಟರನ್ನು ಸರಿಯಾಗಿ ಭರ್ತಿ ಮಾಡಿದೆ ಮತ್ತು ವೀಕ್ಷಕರಿಗೆ ಸಲ್ಲಿಸಬೇಕಾದ ಪ್ರಿಸೈಡಿಂಗ್ ಅಧಿಕಾರಿಯವರ ಹೆಚ್ಚುವರಿಯ ವರದಿಯ ನಮೂನೆಯನ್ನು ಸರಿಯಾಗಿ ಭರ್ತಿ ಮಾಡಲಾಗಿದೆ ಎನ್ನುವ ಬಗ್ಗೆ ಇವರು ಖಚಿತಪಡಿಸಿಕೊಳ್ಳುವರು.

13.4.5. ಮತದಾನದ ನಂತರ ಸೆಕ್ಟರ್ ಅಧಿಕಾರಿಯು ಮತದಾನದ ವರದಿಯನ್ನು ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಬೇಕು.

# 14. ಮತಗಟ್ಟೆಗಳಲ್ಲಿ ಭದ್ರತಾ ವ್ಯವಸ್ಥೆ

## 14.1. ಭದ್ರತೆ

14.1.1. ಚುನಾವಣಾ ಅವಧಿಯಲ್ಲಿ ಚುನಾವಣೆಗಳನ್ನು ಸುಗಮವಾಗಿ ನಡೆಸುವುದಕ್ಕಾಗಿ ಚುನಾವಣಾ ಆಯೋಗವು ಕೇಂದ್ರ ಪೊಲೀಸ್ ಪಡೆಗಳನ್ನು ನಿಯೋಜಿಸುತ್ತದೆ. ಚುನಾವಣಾ ಸಮಯದಲ್ಲಿ ಸ್ಥಳೀಯ ರಾಜ್ಯ ಪೊಲೀಸ್ (ಅದರ ಎಲ್ಲಾ ಬಗೆಯ ಪೊಲೀಸ್ ಪಡೆಗಳೂ ಒಳಗೊಂಡಂತೆ) ಮತ್ತು ಕೇಂದ್ರ ಅರೆ ಸೇನಾ ಪಡೆಗಳನ್ನು ಭಾರತ ಚುನಾವಣಾ ಆಯೋಗವು ಪ್ರತಿನಿಯೋಜಿಸುತ್ತದೆ ಮತ್ತು ಅವುಗಳು ಎಲ್ಲಾ ಉದ್ದೇಶಗಳಿಗಾಗಿ ಆಯೋಗದ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಡುತ್ತವೆ. ಆಯೋಗವು ಈ ಎಲ್ಲಾ ಅಂಗ ಸಂಸ್ಥೆಗಳ ನೆರವನ್ನು ಪಡೆದು ಚುನಾವಣೆಯನ್ನು ನಡೆಸುತ್ತದೆ.

14.1.2. ಆಯೋಗದ ಸೂಚನೆಗಳ ಪ್ರಕಾರ, ಮತಗಟ್ಟೆಗಳಲ್ಲಿ ಸಿಪಿಎಫ್ ಸಿಬ್ಬಂದಿಯನ್ನು ನಿಯೋಜಿಸಿರುವೆಡೆಯಲ್ಲಿ, ಅವರನ್ನು ಮತಗಟ್ಟೆ ಹೊರಗಡೆಯ ಸ್ಥಿರಪಡೆ (Static Force) ಯಾಗಿ ಉಪಯೋಗಿಸಲಾಗುತ್ತದೆ.

14.1.3. ಮಾನ್ಯ ಸರ್ವೋಚ್ಚ  ನ್ಯಾಯಾಲಯವು ಸಿಎ ಸಂಖ್ಯೆ: 9228/2003 (ಜನಕ್‌ಸಿಂಗ್ –ವಿರುದ್ಧ– ರಾಮದಾಸ್ ರೈ ಮತ್ತಿತರರು) ಪ್ರಕರಣದಲ್ಲಿ ನೀಡಿರುವ ನಿರ್ದೇಶನಗಳ ಅನುಸಾರ, ಸಿಪಿಎಫ್ ರಕ್ಷಣೆ ನೀಡಿದ ಮತಗಟ್ಟೆಗಳಲ್ಲಿ, ಮತಗಟ್ಟೆಯಲ್ಲಿ ನಿಯೋಜಿಸಿದ ಸಿಪಿಎಫ್ ತಂಡದಿಂದ ಒಬ್ಬ ಸಿಪಿಎಫ್ ಯೋಧನನ್ನು ಮತಗಟ್ಟೆಯ ಪ್ರವೇಶ ದ್ವಾರದಲ್ಲಿ ನಿಲ್ಲಿಸುವಂತೆ ಆಯೋಗವು ನಿರ್ದೇಶಿಸಿದೆ. ಹೀಗೆ ಮಾಡುವುದರಿಂದ ಆತನಿಗೆ ಮತಗಟ್ಟೆಯೊಳಗೆ ನಡೆಯುತ್ತಿರುವ ಪ್ರಕ್ರಿಯೆಗಳನ್ನು ಗಮನಿಸುತ್ತಿರಲು ಸಾಧ್ಯವಾಗುತ್ತದೆ. ವಿಶೇಷವಾಗಿ, ಮತಗಟ್ಟೆಯೊಳಗೆ ಯಾರೇ ಅನಧಿಕೃತ ವ್ಯಕ್ತಿ ಪ್ರವೇಶಿಸಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಮತ್ತು/ಅಥವಾ ಮತದಾನ ಪ್ರಕ್ರಿಯೆಯಲ್ಲಿ ಮತದಾನ ಸಿಬ್ಬಂದಿಯಾಗಲೀ ಅಥವಾ ಹೊರಗಿನವರಾಗಲೀ ಅಕ್ರಮ ಕಾರ್ಯದಲ್ಲಿ ತೊಡಗಿಲ್ಲವೆಂಬದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಹಾಗಿದ್ದರೂ, ಈ ಸಿಪಿಎಫ್ ಸಿಬ್ಬಂದಿಯು ಮತಗಟ್ಟೆಯೊಳಗೆ ನಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

14.1.4. ಮತಗಟ್ಟೆಗಳ ಪ್ರವೇಶದ್ವಾರದಲ್ಲಿ ನಿಯೋಜಿಸಿದ ಸಿಪಿಎಫ್ ಯೋಧನು ನಿರ್ದಿಷ್ಟವಾಗಿ ಈ ಮುಂದಿನವುಗಳ ಬಗ್ಗೆ ಗಮನವಿರಿಸತಕ್ಕದ್ದು:–

1. ಮತದಾನದ ಯಾವುದೇ ಅವಧಿಯಲ್ಲಿ ಮತಗಟ್ಟೆಯೊಳಗೆ ಅನಧಿಕೃತ ವ್ಯಕ್ತಿ ಹಾಜರಿರಬಾರದು.
2. ಮತಗಟ್ಟೆಯೊಳಗೆ ಯಾವೊಬ್ಬ ಮತದಾರನೂ ಇಲ್ಲದಿರುವಾಗ ಪೋಲಿಂಗ್ ಸಿಬ್ಬಂದಿ ಅಥವಾ ಪೋಲಿಂಗ್ ಏಜೆಂಟರು ಯಾವುದೇ ಮತ ಅಥವಾ ಮತಗಳನ್ನು ಚಲಾಯಿಸಲು ಪ್ರಯತ್ನಿಸಬಾರದು ಅಥವಾ ಚಲಾಯಿಸಬಾರದು.
3. ಯಾರೇ ಪ್ರಿಸೈಡಿಂಗ್ ಅಧಿಕಾರಿ/ ಪೋಲಿಂಗ್ ಅಧಿಕಾರಿಯು ಯಾರೇ ಮತದಾರನೊಂದಿಗೆ ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗಬಾರದು.
4. ಪೋಲಿಂಗ್ ಏಜೆಂಟ್ ಅಥವಾ ಪೋಲಿಂಗ್ ಅಧಿಕಾರಿಯು ಯಾರೇ ಮತದಾರರನ್ನು ಬೆದರಿಸಬಾರದು ಅಥವಾ ಅವರನ್ನು ಬೆದರಿಸುವಂತಹ ವರ್ತನೆಯನ್ನು ಮಾಡಬಾರದು.
5. ಮತಗಟ್ಟೆಯೊಳಗೆ ಯಾವುವೇ ಆಯುಧಗಳನ್ನು ತೆಗೆದುಕೊಂಡು ಹೋಗಬಾರದು.
6. ಯಾವುದೇ ಮೋಸದ ವ್ಯವಹಾರ ನಡೆಯಬಾರದು.

14.1.5. ಮತಗಟ್ಟೆಯ ಪ್ರವೇಶದ್ವಾರದಲ್ಲಿ ನಿಯೋಜಿಸಲಾಗಿರುವ ಸಿಪಿಎಫ್ ಯೋಧನಿಗೆ, ಮೇಲೆ ತಿಳಿಸಿದಂತೆ ಯಾವುದೇ ಚುನಾವಣಾ ಪ್ರಕ್ರಿಯೆಯ ಉಲ್ಲಂಘನೆಯಾಗುತ್ತಿದೆಯೆಂದು ಕಂಡುಬಂದರೆ ಅಥವಾ ಮತಗಟ್ಟೆಯೊಳಗೆ ಅಸಹಜವಾದದ್ದೇನೋ ನಡೆಯುತ್ತಿದೆಯೆಂಬುದು ಗಮನಕ್ಕೆ ಬಂದರೆ, ಆತನು, ಮತದಾನ ಪ್ರಕ್ರಿಯೆಯಲ್ಲಿ ಮಧ್ಯೆ ಪ್ರವೇಶಿಸತಕ್ಕದ್ದಲ್ಲ. ಅದರ ಬದಲಿಗೆ ಮತಗಟ್ಟೆಯಲ್ಲಿನ ಸಿಪಿಎಫ್ ಸಿಬ್ಬಂದಿಯ ಪ್ರಭಾರದಲ್ಲಿರುವ ಅಧಿಕಾರಿಗೆ ಅಥವಾ ಚುನಾವಣಾ ವೀಕ್ಷಕರಿಗೆ ಅದನ್ನು ತಿಳಿಸತಕ್ಕದ್ದು. ಸಿಪಿಎಫ್ ಸಿಬ್ಬಂದಿಯ ಪ್ರಭಾರದಲ್ಲಿರುವ ಅಧಿಕಾರಿಯು ಅದನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಕೂಡಲೇ ಲಿಖಿತ ರೂಪದಲ್ಲಿ ರಿಟರ್ನಿಂಗ್ ಅಧಿಕಾರಿಯ ಗಮನಕ್ಕೆ ಮತ್ತು ವೀಕ್ಷಕರ ಗಮನಕ್ಕೂ ಸಹ ತರತಕ್ಕದ್ದು.

14.1.6. ಒಂದಕ್ಕಿಂತ ಹೆಚ್ಚು ಮತಗಟ್ಟೆಗಳನ್ನು ಹೊಂದಿರುವ ಕಟ್ಟಡಗಳಲ್ಲಿ ಮತ್ತು ಸಿಪಿಎಫ್ ಸಿಬ್ಬಂದಿಯಲ್ಲಿ ಕೇವಲ ಅರ್ಧಭಾಗದಷ್ಟು ಸಿಬ್ಬಂದಿಯನ್ನು ಮಾತ್ರವೇ ನಿಯೋಜಿಸಲಾಗಿರುವಲ್ಲಿ, ಮತಗಟ್ಟೆಯ ಪ್ರವೇಶದ್ವಾರದಲ್ಲಿ ಕರ್ತವ್ಯ ನಿರ್ವಹಿಸಲು ಆಯ್ಕೆಯಾದ ಸಿಪಿಎಫ್ ಯೋಧನು ಒಂದು ಮತಗಟ್ಟೆಯಿಂದ ಮತ್ತೊಂದು ಮತಗಟ್ಟೆಗೆ ಓಡಾಡುತ್ತಿರಬೇಕು ಮತ್ತು ಈ ಮತಗಟ್ಟೆಗಳ ಒಳಗೆ ಏನು ನಡೆಯುತ್ತಿದೆಯೆಂಬುದನ್ನು ಗಮನಿಸುತ್ತಿರಬೇಕೆಂದು ಮತ್ತು ಅವನಿಗೆ ಅಕ್ರಮವೇನಾದರೂ ಕಂಡುಬಂದರೆ, ಸಿಪಿಎಫ್ ಸಿಬ್ಬಂದಿಯ ಪ್ರಭಾರದಲ್ಲಿರುವ ಅಧಿಕಾರಿಗೆ ಅಥವಾ ವೀಕ್ಷಕರಿಗೆ ಆ ಬಗ್ಗೆ ವರದಿ ಮಾಡಬೇಕೆಂದು ಆತನಿಗೆ ಸೂಚಿಸತಕ್ಕದ್ದು.

14.1.7. ರಿಟರ್ನಿಂಗ್ ಅಧಿಕಾರಿ/ವೀಕ್ಷಕರು, ಸಿಪಿಎಫ್ ಸಿಬ್ಬಂದಿಗಳಿಂದ ಪಡೆದ ಪ್ರತಿಕೂಲ ಪ್ರಕರಣಗಳ ಬಗ್ಗೆ ಆಯೋಗದ ಮುಂದಿನ ಸೂಚನೆಗಳ ಸಲುವಾಗಿ ಆಯೋಗಕ್ಕೆ ವರದಿ ಮಾಡತಕ್ಕದ್ದು.

14.1.8. ಸಿಪಿಎಫ್‌ಅನ್ನು ನಿಯೋಜನೆ ಮಾಡಿರುವ ಮತಗಟ್ಟೆಗಳ ಪ್ರವೇಶದ್ವಾರದಲ್ಲಿ ಮಾತ್ರ ಸಿಪಿಎಫ್ ಯೋಧನನ್ನು ನಿಯೋಜನೆ ಮಾಡತಕ್ಕದ್ದೆಂದು ಸ್ಪಷ್ಟಪಡಿಸಲಾಗಿದೆ.

14.1.9 ಮತಗಟ್ಟೆಯ ಪ್ರವೇಶದ್ವಾರದಲ್ಲಿ ನಿಯೋಜಿತನಾದ ಸಿಪಿಎಫ್ ಯೋಧನು ಮತಗಟ್ಟೆಗಳಿಗೆ ತಮ್ಮ ಮತಗಳನ್ನು ಚಲಾಯಿಸಲು ಬರುವ ಮತದಾರರ ಗುರುತನ್ನು ಪರಿಶೀಲಿಸತಕ್ಕದ್ದಲ್ಲ. ಅಂಥ ಪರಿಶೀಲನೆಯು ಪೋಲಿಂಗ್ ಸಿಬ್ಬಂದಿಯ ಕರ್ತವ್ಯವಾಗಿರುತ್ತದೆಂಬುದನ್ನು ಕೂಡ ಸ್ಪಷ್ಟಪಡಿಸಲಾಗಿದೆ.

14.1.10. ಆಯೋಗದ ಸೂಚನೆಗಳ ಪ್ರಕಾರ, ಸಿಪಿಎಫ್ ಯೋಧರನ್ನು ಮತಗಟ್ಟೆಯೊಳಗೆ ನಿಲ್ಲಿಸತಕ್ಕದ್ದಲ್ಲ.

14.1.11. ಮತದಾನ ಮುಕ್ತಾಯವಾದ ನಂತರ, ಮತ ಹಾಕಿದ ವಿದ್ಯುನ್ಮಾನ ಮತದಾನಯಂತ್ರ (ಇವಿಎಂ)ಗಳನ್ನು ಮತ್ತು ಪ್ರಿಸೈಡಿಂಗ್ ಅಧಿಕಾರಿಗಳನ್ನು ಸಿಪಿಎಫ್ ತಂಡದ ಬೆಂಗಾವಲಿನಲ್ಲಿ ಮತಪೆಟ್ಟಿಗೆ ಸ್ವೀಕೃತಿ ಕೇಂದ್ರಕ್ಕೆ ತರತಕ್ಕದ್ದು. ಈ ಸಂಬಂಧದ ವಿವರಗಳನ್ನು ಜಿಲ್ಲಾ ಚುನಾವಣಾ ಅಧಿಕಾರಿ ಮತ್ತು ಪೊಲೀಸ್ ಸೂಪರಿಂಟೆಂಡೆಂಟರು ಮುಂಚಿತವಾಗಿಯೇ ವೀಕ್ಷಕರೊಂದಿಗೆ ಸಮಾಲೋಚಿಸಿ ಸಿದ್ಧಪಡಿಸತಕ್ಕದ್ದು.

14.1.12. ಮತ ಹಾಕಿದ ವಿದ್ಯುನ್ಮಾನ ಮತದಾನಯಂತ್ರ (ಇವಿಎಂ)ಗಳನ್ನು ಶೇಖರಿಸಿರುವ ಮತ್ತು ಅದನ್ನು ಮತ ಎಣಿಕೆಯ ದಿನದವರೆಗೂ ಹಾಗೇ ಇರಿಸಿರುವ ಭದ್ರತಾ ಕೊಠಡಿಯನ್ನು ರಕ್ಷಿಸುವ ಜವಾಬ್ದಾರಿ ಕೂಡ ಸಿಪಿಎಫ್ ಹೊಂದಿರತಕ್ಕದ್ದು".

## 15. ಮತದಾನದ ದಿನ

### 15.1. ಪೀಠಿಕೆ.

15.1.1. ಮತದಾನವು ಚುನಾವಣಾ ಪ್ರಕ್ರಿಯೆಯಲ್ಲಿ ಅತ್ಯಂತ ಮಹತ್ವದ ಘಟನೆ ಆಗಿದೆ. ಪ್ರಜಾಪ್ರಭುತ್ವದಲ್ಲಿ, ಮತದಾರರು ಲೋಕಸಭೆ ಅಥವಾ ವಿಧಾನಸಭೆಯಲ್ಲಿ ತಮ್ಮನ್ನು ಪ್ರತಿನಿಧಿಸುವ ತಮ್ಮ ಆಯ್ಕೆಯ ಅಭ್ಯರ್ಥಿಯನ್ನು ಮತದಾನದ ಮೂಲಕವೇ ಆಯ್ಕೆ ಮಾಡುತ್ತಾರೆ.

### 15.2. ಮತದಾನದ ದಿನ ರಜೆ ಘೋಷಣೆ

15.2.1. ಚುನಾವಣಾ ಕಾನೂನು, ಯಾವುದೇ ವ್ಯಾಪಾರ, ವ್ಯವಹಾರ, ಕೈಗಾರಿಕಾ ಸಂಸ್ಥೆ ಅಥವಾ ಇತರೆ ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿರುವ ಮತ್ತು ಲೋಕಸಭೆ ಅಥವಾ ರಾಜ್ಯ ವಿಧಾನಸಭೆ ಚುನಾವಣೆಗೆ ಮತದಾನ ಮಾಡುವ ಹಕ್ಕನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ ಮತದಾನದ ದಿನದಂದು ಮತದಾನ ಮಾಡುವ ಸಲುವಾಗಿ ಒಂದು ದಿನದ ರಜೆ ಪಡೆಯಲು ಅವಕಾಶ ಮಾಡಿಕೊಟ್ಟಿದೆ. ಅಂತಹ ಸಂಬಳ ಸಹಿತ ರಜೆಯ ಕಾರಣಕ್ಕಾಗಿ ಅಂಥ ಯಾರೇ ವ್ಯಕ್ತಿಯ ವೇತನವನ್ನು ಕಡಿತಗೊಳಿಸತಕ್ಕದ್ದಲ್ಲ ಅಥವಾ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದಲ್ಲ.

### 15.3. ಚುನಾವಣಾ ಪ್ರಚಾರದ ನಿರ್ಬಂಧ

15.3.1. ಮತದಾನದ ದಿನ ಮತಗಟ್ಟೆಯಲ್ಲಿ ಅಥವಾ ಮತಗಟ್ಟೆಯ ಸಮೀಪ ಚುನಾವಣಾ ಪ್ರಚಾರ ಮಾಡುವುದನ್ನು ಚುನಾವಣಾ ಕಾನೂನು ನಿರ್ಬಂಧಿಸುತ್ತದೆ. ಮತಗಟ್ಟೆಯೊಳಗೆ ಅಥವಾ ಮತಗಟ್ಟೆ ಸುತ್ತಮುತ್ತಲಿನ 100 ಮೀಟರ್ ವ್ಯಾಪ್ತಿಯೊಳಗಿನ ಯಾವುದೇ ಖಾಸಗಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಯಾರೇ ವ್ಯಕ್ತಿ ಈ ಕೆಳಕಂಡ ಚಟುವಟಿಕೆಗಳನ್ನು ಮಾಡುವಂತಿಲ್ಲ.

(ಎ) ಮತಗಳಿಗಾಗಿ ಪ್ರಚಾರ ಮಾಡುವುದು;

(ಬಿ) ಯಾರೇ ಮತದಾರನಿಗೆ ಮತನೀಡುವಂತೆ ಕೋರುವುದು;

(ಸಿ) ಯಾರೇ ಮತದಾರನನ್ನು ಯಾವುದೇ ನಿರ್ದಿಷ್ಟ ಅಭ್ಯರ್ಥಿಗಳಿಗೆ ಮತ ನೀಡದಂತೆ ಮನವೊಲಿಸುವುದು;

(ಡಿ) ಯಾರೇ ಮತದಾರನನ್ನು ಚುನಾವಣೆಯಲ್ಲಿ ಮತ ಚಲಾಯಿಸದಂತೆ ಮನವೊಲಿಸುವುದು;

(ಇ) ಚುನಾವಣೆಗೆ ಸಂಬಂಧಿಸಿದ ಯಾವುದೇ ಪ್ರಕಟಣೆ ಅಥವಾ ಸಂಕೇತವನ್ನು (ಅಧಿಕೃತ ಪ್ರಕಟಣೆಗಳನ್ನು ಹೊರತುಪಡಿಸಿ) ಪ್ರದರ್ಶಿಸುವುದು;

(ಎಫ್) ಮತಗಟ್ಟೆಯೊಳಗೆ ಅಥವಾ ಮತಗಟ್ಟೆಯ ಪ್ರವೇಶ ದ್ವಾರದಲ್ಲಿ ಅಥವಾ ಮತಗಟ್ಟೆಯ ಸುತ್ತಮುತ್ತಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮೆಗಾಫೋನ್,

ಧ್ವನಿವರ್ಧಕ, ಇತ್ಯಾದಿಯಂಥ ಮನುಷ್ಯನ ಧ್ವನಿಗಳನ್ನು ಪ್ರತಿಧ್ವನಿಸುವ ಅಥವಾ ವರ್ಧಿಸುವ ಉಪಕರಣಗಳನ್ನು ಬಳಸುವುದು ಅಥವಾ ಚಾಲೂ ಮಾಡುವುದು; ಮತ್ತು

(ಜಿ) ಮತಗಟ್ಟೆಯ ಒಳಗೆ ಅಥವಾ ಅದರ ಪ್ರವೇಶ ದ್ವಾರದಲ್ಲಿ ಅಥವಾ ಅದರ ಸುತ್ತಮುತ್ತಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳಗಳಲ್ಲಿ ಜೋರಾಗಿ ಕಿರುಚುವುದು, ಅಥವಾ ಅನ್ಯಥಾ ಅನುಚಿತ ರೀತಿಯಲ್ಲಿ ವರ್ತಿಸುವುದು.

**ವಿ.ಸೂ.–** ಯಾವುದೇ ಧ್ವನಿವರ್ಧಕ ಇತ್ಯಾದಿಗಳನ್ನು ಬಳಸುವ ದೂರ ಮುಖ್ಯವಲ್ಲ. ಅವು 100 ಮೀಟರ್ ವ್ಯಾಪ್ತಿ ಹೊರಗಿದ್ದರೂ ಮತಗಟ್ಟೆಗೆ ಮತದಾನಕ್ಕೆ ಬರುವ ಯಾವುದೇ ವ್ಯಕ್ತಿಗಳಿಗೆ ತೊಂದರೆ ಮಾಡುತ್ತಿವೆಯೇ ಅಥವಾ ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಚುನಾವಣಾ ಕರ್ತವ್ಯದ ಮೇಲಿರುವ ಇನ್ನಾವುದೇ ವ್ಯಕ್ತಿಗೆ ಅಡ್ಡಿ ಉಂಟು ಮಾಡುತ್ತಿವೆಯೇ ಎಂಬುದು ಮುಖ್ಯವಾಗಿದ್ದು ಹಾಗೆ ಮಾಡಿದಲ್ಲಿ ಅದು ಚುನಾವಣಾ ಅಪರಾಧವನ್ನು ಎಸಗಿದಂತಾಗುತ್ತದೆ.

### 15.4. ಮತಗಟ್ಟೆಗಳ ಸಮೀಪ ಅಥವಾ ಮತಗಟ್ಟೆಗೆ ಶಸ್ತ್ರಾಸ್ತ್ರ ಸಮೇತ ಹೋಗುವುದಕ್ಕೆ ನಿಷೇಧ

15.4.1. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 134ಬಿ ಕಡೆಗೆ ಅಭ್ಯರ್ಥಿಯ ಗಮನವನ್ನು ಸೆಳೆಯಲಾಗಿದೆ. ಇದರ ಮೂಲ ಉದ್ದೇಶವು ಸದರಿ ಪ್ರಕರಣದ ಮೇರೆಗೆ ಸ್ಪಷ್ಟವಾಗಿ ಅನುಮತಿ ನೀಡಿರುವ ವ್ಯಕ್ತಿಗಳನ್ನು ಬಿಟ್ಟು ಬೇರೆ ಯಾರೇ ವ್ಯಕ್ತಿಗಳು ಮತಗಟ್ಟೆಗಳೊಳಗೆ ಅಥವಾ ಅದರ ಸುತ್ತಮುತ್ತಲಿನ ಪ್ರದೇಶದೊಳಗೆ ಯಾವುದೇ ಶಸ್ತ್ರಾಸ್ತ್ರಗಳನ್ನು ತೆಗದುಕೊಂಡು ಹೋಗುವ ಹಾಗಿಲ್ಲ ಅಥವಾ ಶಸ್ತ್ರಾಸ್ತ್ರಗಳನ್ನು ಪ್ರದರ್ಶನ ಮಾಡುವಂತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದಾಗಿದೆ. ಆದ್ದರಿಂದ ಚುನಾವಣಾ ಆಯೋಗವು, ಯಾವುದೇ ಸಂಸ್ಥೆಯಿಂದ ಯಾವುದೇ ಬಗೆಯ ಭದ್ರತೆಯನ್ನು ಪಡೆದಿರುವ ಯಾವುದೇ ವ್ಯಕ್ತಿಯು ಅಂತಹ ಭದ್ರತಾ ಸಿಬ್ಬಂದಿಯ ಜೊತೆಗೆ ಯಾವುದೇ ಮತಗಟ್ಟೆಯೊಳಗೆ ಪ್ರವೇಶಿಸತಕ್ಕದ್ದಲ್ಲ ಅಥವಾ ಮತಗಟ್ಟೆಯ ಸುತ್ತಮುತ್ತಲೊಳಗೆ ಓಡಾಡತಕ್ಕದ್ದಲ್ಲ ಎಂಬುದಾಗಿ ಸೂಚನೆಯನ್ನು ನೀಡಿದೆ. ಆದಾಗ್ಯೂ, ಎಸ್‌ಪಿಜಿ ರಕ್ಷಣೆಯನ್ನು ಪಡೆದಿರುವ ವ್ಯಕ್ತಿಯು ಅಭ್ಯರ್ಥಿಯಾಗಿದ್ದ ಸಂದರ್ಭದಲ್ಲಿ ಶಸ್ತ್ರಾಸ್ತ್ರ ಸಮೇತವಾದ ಸಿಪಿಟಿಯು ಮತಗಟ್ಟೆಯ ಬಾಗಿಲಿನವರೆಗೆ ಅಂತಹ ರಕ್ಷಣೆಯಲ್ಲಿರುವ ವ್ಯಕ್ತಿಯನ್ನು ಹಿಂಬಾಲಿಸಬೇಕು. ತದನಂತರ, ಶಸ್ತ್ರಾಸ್ತ್ರವನ್ನು ಕಾಣದಂತೆ ಬಚ್ಚಿಟ್ಟುಕೊಂಡಿರುವ ಒಬ್ಬನೇ ಒಬ್ಬ ಪಿಎಸ್‌ಓ ಮಾತ್ರ ರಕ್ಷಣೆ ಪಡೆದ ವ್ಯಕ್ತಿಯ ಜೊತೆಗೆ ಒಳಗಡೆ ಹೋಗಬೇಕು ಮತ್ತು ಯಾವುದೇ ರೀತಿಯಲ್ಲಿ ಮತದಾನದ

ಪ್ರಕ್ರಿಯೆಗಳಿಗೆ ಅನ್ಯಥಾ ತೊಡಕಾಗದಂತೆ ರಕ್ಷಣೆ ಪಡೆದ ವ್ಯಕ್ತಿಗೆ ಅಗತ್ಯವಾದ ರಕ್ಷಣೆಯನ್ನು ಒದಗಿಸಲು ಸಾಧ್ಯವಾಗುವ ರೀತಿಯಲ್ಲಿ ಸ್ವತಃ ನಿಂತುಕೊಳ್ಳುವುದು.

## 15.5. ಅಭ್ಯರ್ಥಿಗಳ ಚುನಾವಣಾ ಬೂತ್‌ಗಳು

15.5.1. ಚುನಾವಣಾ ಆಯೋಗವು ಹೊರಡಿಸಿರುವ ಸೂಚನೆ ಪ್ರಕಾರ ಮತದಾನದ ದಿನ ಮತಗಟ್ಟೆ ಸಮೀಪ ಯಾವುದೇ ಅಭ್ಯರ್ಥಿಗಳ ಚುನಾವಣಾ ಬೂತ್‌ಗಳನ್ನು ಸ್ಥಾಪಿಸುವಂತಿಲ್ಲ. ಮುಕ್ತ ನ್ಯಾಯೋಚಿತ ಮತ್ತು ಸರಾಗ ಚುನಾವಣೆ ನಡೆಸುವಲ್ಲಿ ಮತದಾರರಿಗೆ ಈ ರೀತಿಯ ಚುನಾವಣಾ ಬೂತ್‌ಗಳು ಆಡಚಣೆ ಉಂಟು ಮಾಡುತ್ತವೆ. ಅಲ್ಲದೇ, ವಿವಿಧ ಪಕ್ಷಗಳ ಕಾರ್ಯಕರ್ತರ ನಡುವಿನ ಘರ್ಷಣೆಗೆ ಕಾರಣವಾಗುತ್ತವೆ ಮತ್ತು ಕಾನೂನು ಸುವ್ಯವಸ್ಥೆಗೆ ಅಡ್ಡಿ ಉಂಟು ಮಾಡುತ್ತವೆ. ಅಭ್ಯರ್ಥಿಗಳು ತಮ್ಮ ಏಜೆಂಟರು, ಪಕ್ಷದ ಕಾರ್ಯಕರ್ತರಿಗೆ, ಮತದಾರರಿಗೆ ಅನಧಿಕೃತ ಗುರುತಿನ ಚೀಟಿ ವಿತರಿಸಲು ಮತದಾನ ಕೇಂದ್ರದ 200 ಮೀಟರ್ ಹೊರಗೆ ಒಂದು ಟೇಬಲ್ ಮತ್ತು 2 ಕುರ್ಚಿಗಳನ್ನು ಹಾಗೂ ಬಿಸಿಲು/ಮಳೆಯ ರಕ್ಷಣೆಗೋಸ್ಕರ ಕೊಡೆ ಅಥವಾ ಟಾರ್ಪಲ್‌ನ್ನು ಒದಗಿಸಬಹುದು. ಆದರೆ ಅ ರೀತಿಯ ಟೇಬಲ್‌ಗಳ ಸುತ್ತ ಜನದಟ್ಟಣೆ ಉಂಟಾಗುವುದಕ್ಕೆ ಅವಕಾಶ ಮಾಡಿಕೊಡತಕ್ಕದಲ್ಲ.

## 15.6. ಮತದಾರರನ್ನು ಮತ ಚಲಾಯಿಸದಂತೆ ತಡೆಯುವುದು

15.6.1. ಯಾವುದೇ ಸ್ಥಳದಲ್ಲಾಗಲೀ ಯಾವುದೇ ಮತದಾರರನ್ನು ಅವನ ಒಪ್ಪಿಗೆ ಇರಲಿ ಅಥವಾ ಇಲ್ಲದೇ ಇರಲಿ ವಶದಲ್ಲಿಟ್ಟುಕೊಂಡರೆ ಅಥವಾ ಮತಗಟ್ಟೆಗೆ ಹೋಗಲು ತಡೆಯೊಡ್ಡಿದರೆ ಅಥವಾ ಮತಚಲಾಯಿಸಲು ಯಾವುದೇ ರೀತಿಯಲ್ಲಿ ಅಡ್ಡಿಪಡಿಸಿದರೆ ಅದು ಸಂಜ್ಞೆಯ ಅಪರಾಧವಾಗುತ್ತದೆ. ಯಾರೇ ವ್ಯಕ್ತಿಯನ್ನು ಹಾಗೆ ವಶದಲ್ಲಿಟ್ಟುಕೊಳ್ಳಲಾಗಿದೆ ಅಥವಾ ಮತಗಟ್ಟೆಗೆ ಹೋಗದಂತೆ ತಡೆಯಲಾಗಿದೆ ಅಥವಾ ಮತಚಲಾಯಿಸದಂತೆ ಅಡ್ಡಿಪಡಿಸಲಾಗಿದೆ ಎಂಬ ಬಗ್ಗೆ ಅಭ್ಯರ್ಥಿಗೆ ಮಾಹಿತಿ ಬಂದಲ್ಲಿ ಅವರು ವಿಷಯವನ್ನು ಪ್ರಿಸೈಡಿಂಗ್ ಅಧಿಕಾರಿಗೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ರಿಟರ್ನಿಂಗ್ ಅಧಿಕಾರಿಗೆ ವರದಿ ಮಾಡತಕ್ಕದ್ದು. ಅವರು ವಶ ಅಥವಾ ತಡೆಯನ್ನು ಖಾಸಗಿ ಸ್ಥಳದಲ್ಲಿ ಮಾಡಲಾಗಿದ್ದರೂ ಸಹ ಯಾವ ವ್ಯಕ್ತಿಯನ್ನು ತನ್ನ ಮತದಾನದ ಹಕ್ಕನ್ನು ಚಲಾಯಿಸಲಿಕ್ಕೆ ಸಾಧ್ಯವಾಗದಂತೆ ಅಕ್ರಮವಾಗಿ ವಶದಲ್ಲಿಟ್ಟುಕೊಳ್ಳಲಾಗಿದೆಯೋ ಅಥವಾ ಅಡ್ಡಿಪಡಿಸಲಾಗಿದೆಯೋ ಅಥವಾ ತಡೆಯೊಡ್ಡಲಾಗಿದೆಯೋ ಆ ವ್ಯಕ್ತಿಯನ್ನು ಬಂಧಮುಕ್ತಗೊಳಿಸಿ ಆತನಿಗೆ ಮತ ಚಲಾಯಿಸಲು ಅನುವಾಗುವಂತೆ ಪರಿಣಾಮಕಾರಿ ಕ್ರಮವನ್ನು ತೆಗೆದುಕೊಳ್ಳುವರು.

**15.7. ಮತದಾರರ ಅನುಕೂಲಕ್ಕಾಗಿ ಕಾನೂನುಬಾಹಿರವಾಗಿ ವಾಹನಗಳನ್ನು ಬಾಡಿಗೆ ತೆಗೆದುಕೊಳ್ಳುವುದು**

15.7.1. ಅಭ್ಯರ್ಥಿಯು, ಮತದಾನದ ದಿನ, ಮತದಾರರಿಗೆ ವಾಹನ ಸೌಲಭ್ಯವನ್ನು ಅವರ ಪರವಾಗಿ ಒದಗಿಸಲು ಯಾರಿಗೂ ಅವಕಾಶ ಮಾಡಿಕೊಡಬಾರದು. ಇದು ಭ್ರಷ್ಟಾಚಾರ ಮತ್ತು ಚುನಾವಣಾ ಅಪರಾಧ ಎರಡೂ ಆಗಿರುತ್ತದೆ. ಇತರೇ ಯಾರೇ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟರು, ಬೆಂಬಲಿಗರು, ಅಥವಾ ಕಾರ್ಯಕರ್ತರು ಮತದಾರರಿಗೆ ಆ ರೀತಿಯ ವಾಹನ ಸೌಲಭ್ಯವನ್ನು ಒದಗಿಸುತ್ತಿರುವುದು ಅಭ್ಯರ್ಥಿಗೆ ಕಂಡುಬಂದಲ್ಲಿ ಅವರು ಆ ಕೂಡಲೇ ದೂರುಸಲ್ಲಿಸಿ ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 133ರ ಪ್ರಕರಣದ ಮೇರೆಗೆ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಲು ಕ್ರಮ ಕೈಗೊಳ್ಳಬೇಕು. ಅಭ್ಯರ್ಥಿಯು ಹಾಗೆ ಮಾಡದೇ ಕೇವಲ ಚುನಾವಣಾ ಪ್ರಾಧಿಕಾರಕ್ಕೆ ದೂರನ್ನಷ್ಟೇ ಸಲ್ಲಿಸಿದರೆ ತಪ್ಪಿತಸ್ಥರ ವಿರುದ್ಧದ ಹೆಚ್ಚು ಅಮೂಲ್ಯವಾದ ಸಾಕ್ಷ್ಯವನ್ನು ನಾಶಪಡಿಸಿದಂತಾಗುತ್ತದೆ. ಮತದಾರರನ್ನು ಅವರ ಸ್ಥಳಗಳಿಂದ ಮತಗಟ್ಟೆಗೆ ಕರೆದುಕೊಂಡು ಬರಲು ಅಥವಾ ಮತಗಟ್ಟೆಯಿಂದ ಅವರ ಸ್ಥಳಗಳಿಗೆ ಕರೆದುಕೊಂಡು ಹೋಗಲು ಉಚಿತ ವಾಹನ ಸೌಲಭ್ಯವನ್ನು ಒದಗಿಸುವುದು ಕೂಡ ಭ್ರಷ್ಟಾಚಾರವಾಗಿರುವುದರಿಂದ ಯುಕ್ತ ಕ್ರಮದಲ್ಲಿ ತಪ್ಪಿತಸ್ಥ ಅಭ್ಯರ್ಥಿಯ ವಿರುದ್ಧ ಚುನಾವಣಾ ಅರ್ಜಿಯನ್ನು ಸಲ್ಲಿಸುವುದಕ್ಕೆ ಆಧಾರವಾಗಿ ಸಹ ಅವರು ಈ ಸಂದರ್ಭವನ್ನು ಬಳಸಿಕೊಳ್ಳಬಹುದು. ಅಭ್ಯರ್ಥಿಯ ಪೋಲಿಂಗ್ ಏಜೆಂಟನು ಈ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿಗೆ ಲಿಖಿತ ದೂರನ್ನು ಸಹ ಸಲ್ಲಿಸಬಹುದು. ಪ್ರಿಸೈಡಿಂಗ್ ಅಧಿಕಾರಿಯು ಸದರಿ ದೂರನ್ನು ಅಂತಹ ಪ್ರಕರಣಗಳನ್ನು ವ್ಯವಹರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂತಹ ಸಂಬಂಧಪಟ್ಟ ಮ್ಯಾಜೀಸ್ಟ್ರೇಟ್‌ರವರಿಗೆ ಕಳುಹಿಸಿಕೊಡುವರು. ಅಭ್ಯರ್ಥಿಯು ತಾವು ಕಣ್ಣಾರೆ ನೋಡಿದಂತಹ ಘಟನೆಗಳ ಬಗ್ಗೆ ದೂರಿನ ಮೇಲೆ ತಮ್ಮ ಅಭಿಪ್ರಾಯವನ್ನು ದಾಖಲಿಸುವಂತೆ ಪ್ರಿಸೈಡಿಂಗ್ ಅಧಿಕಾರಿಗೆ ಸಹ ಕೋರಬಹುದು.

**15.8. ಮತದಾನದ ದಿನ ವಾಹನ ಸಂಚಾರದ ನಿರ್ಬಂಧ**

15.8.1. ಮತದಾನದ ದಿನದಂದು ಮತದಾರರಿಗೆ ಮತಗಟ್ಟೆಗೆ ತೆರಳಲು ಉಚಿತ ವಾಹನ ಕಲ್ಪಿಸುವ ಭ್ರಷ್ಟಾಚಾರ ಪದ್ಧತಿ ಮತ್ತು ಚುನಾವಣಾ ಅಪರಾಧವನ್ನು ನಿಗ್ರಹಿಸುವ ಸಲುವಾಗಿ ಚುನಾವಣಾ ಆಯೋಗವು ಯೋಜನೆಯನ್ನು ರೂಪಿಸಿದೆ. ಆ ಯೋಜನೆಯ ಮುಖ್ಯ ಮಾರ್ಗಸೂಚಿಗಳು ಈ ಕೆಳಕಂಡಂತಿವೆ:

(1) ಚುನಾವಣಾ ಕಾನೂನನ್ನು ಉಲ್ಲಂಘಿಸಿ ಮತದಾರರನ್ನು ಮತಗಟ್ಟೆಗಳಿಗೆ ಕರೆದುಕೊಂಡು ಬರುವ ಮತ್ತು ಮತಗಟ್ಟೆಗಳಿಂದ ಹಿಂದಕ್ಕೆ ಕರೆದುಕೊಂಡು ಹೋಗುವ ಪದ್ಧತಿಯನ್ನು

ತಪ್ಪಿಸುವ ಸಲುವಾಗಿ ಮತದಾನದ ದಿನದಂದು ಮತಗಟ್ಟೆಗೆ ಪ್ರದೇಶಗಳಿಗೆ ಎಲ್ಲಾ ರೀತಿಯ ವಾಹನ ಸಂಚಾರವನ್ನು ನಿರ್ಬಂಧಿಸಬೇಕೆಂಬುದು ಉದ್ದೇಶವಾಗಿದೆ.

(2) ಸಾರ್ವಜನಿಕ ಸಾರಿಗೆ ವಾಹನಗಳಾದ ಬಸ್ಸುಗಳು, ಮಿನಿ ಬಸ್ಸುಗಳ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಆದರೆ, ಅವುಗಳನ್ನು ಮತದಾರರನ್ನು ಸಾಗಿಸುವುದಕ್ಕೆ ಗುಪ್ತವಾಗಿ ಬಳಸಿಕೊಳ್ಳಲಾಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(3) ಆದಾಗ್ಯೂ, ಆಸ್ಪತ್ರೆ, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ಸು ನಿಲ್ದಾಣ, ಸ್ನೇಹಿತರು ಮತ್ತು ಸಂಬಂಧಿಕರ ಮನೆ, ಕ್ಲಬ್, ರೆಸ್ಟೋರೆಂಟ್ ಮೊದಲಾದಂತಹ ಮತಗಟ್ಟೆಗಳಿಗೆ ಬೇರೆಯದಾದ ಸ್ಥಳಗಳಿಗೆ ಪ್ರಯಾಣಿಕರನ್ನು ಕರೆದೊಯ್ಯುವ ಖಾಸಗಿ ಕಾರುಗಳು, ಟ್ಯಾಕ್ಸಿಗಳಿಗೆ ರಸ್ತೆಯಲ್ಲಿ ಸಂಚರಿಸಲು ಅನುವು ಮಾಡಿಕೊಡುವುದು. ಆದರೆ, ಅವುಗಳು ಮತದಾರರನ್ನು ಸಾಗಿಸುವುದಕ್ಕಾಗಿ ಮತಗಟ್ಟೆಗಳ ಸಮೀಪ ರಹಸ್ಯವಾಗಿ ಬರಲು ಅವಕಾಶ ನೀಡಬಾರದು. ಈ ವಾಹನಗಳ ಸಂಚಾರವನ್ನು ಅವುಗಳ ದುರ್ಬಳಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗುವ ಹಾಗೆ ಬೇರೆಡೆಗೆ ತಿರುಗಿಸತಕ್ಕದ್ದು.

(4) ಮೇಲೆ ವಿವರಿಸಿದ ರೀತಿಯಲ್ಲಿ ಲಾರಿ, ಟ್ರಕ್ಕುಗಳ ಸಂಚಾರವನ್ನು ಕೂಡ ನಿರ್ಬಂಧಿಸತಕ್ಕದ್ದು.

(5) ಜಿಲ್ಲಾ ದಂಡಾಧಿಕಾರಿಗಳು ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಇತ್ಯಾದಿಗಳಿಗೆ ಈ ನಿರ್ಬಂಧವನ್ನು ಅಕ್ಷರಶಃ ಪರಿಣಾಮಕಾರಿಯಾಗಿ ಮತ್ತು ಪರಿಪೂರ್ಣವಾಗಿ ಜಾರಿಗೆ ತರುವಂತೆ ನಿರ್ದೇಶನ ನೀಡತಕ್ಕದ್ದು ಮತ್ತು ಸಂಬಂಧಿಸಿದ ಪ್ರಾಧಿಕಾರಗಳಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು.

(6) ರಾಜಕೀಯ ಪಕ್ಷಗಳು ಮತ್ತು ಸ್ಪರ್ಧಿಸಿರುವ ಅಭ್ಯರ್ಥಿಗಳು ಮತ್ತು ಅವರಿಗೆ ಸಂಬಂಧಿಸಿದ ಅವರ ಏಜೆಂಟರು ಮತ್ತು ಕಾರ್ಯಕರ್ತರಿಗೆ ಈ ನಿರ್ಬಂಧವನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ ಮತ್ತು ಚುನಾವಣಾ ಅರ್ಜಿಯಲ್ಲಿ ಚುನಾವಣೆಯನ್ನು ಪ್ರಶ್ನಿಸಲಿಕ್ಕೆ ಸಾಕಷ್ಟು ಸಾಕ್ಷ್ಯವನ್ನು ಒದಗಿಸಲಿದೆ ಹಾಗೂ ಕಾನೂನಿನಡಿ ದಂಡನೀಯ ಕ್ರಮಕ್ಕೆ ಅಹ್ವಾನ ನೀಡಿದಂತೆ ಆಗುತ್ತದೆ ಎಂದು ಎಚ್ಚರಿಕೆ ನೀಡತಕ್ಕದು.

15.8.2. ಲೋಕಸಭೆಗೆ ನಡೆಯುವ ಚುನಾವಣೆಯ ಸಂದರ್ಭದಲ್ಲಿ ಪ್ರತಿಯೊಬ್ಬ ಸ್ಪರ್ಧಿಸಿರುವ ಅಭ್ಯರ್ಥಿಯು ಈ ಕೆಳಕಂಡಂತೆ ವಾಹನ ಬಳಕೆಗೆ ಆರ್ಹರಾಗಿರುತ್ತಾರೆ.

(ಎ) ಇಡೀ ಮತಕ್ಷೇತ್ರಕ್ಕಾಗಿ ತನ್ನ ಸ್ವಂತ ಉಪಯೋಗಕ್ಕೆ ಒಂದು ವಾಹನ.

(ಬಿ) ಇಡೀ ಮತಕ್ಷೇತ್ರಕ್ಕಾಗಿ ತನ್ನ ಚುನಾವಣಾ ಏಜೆಂಟನ ಬಳಕೆಗೆ ಒಂದು ವಾಹನ.

(ಸಿ) ಜೊತೆಗೆ ಲೋಕಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ವಿಧಾನಸಭಾ ವಿಭಾಗಗಳಲ್ಲಿ ಸಂದರ್ಭಾನುಸಾರ ತನ್ನ ಕಾರ್ಯಕರ್ತರ ಅಥವಾ ಪಕ್ಷದ ಕಾರ್ಯಕರ್ತರ ಉಪಯೋಗಕ್ಕಾಗಿ ಒಂದು ವಾಹನ.

15.8.3. ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಯ ಸಂದರ್ಭದಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು ಕೆಳಕಂಡಂತೆ ವಾಹನ ಬಳಕಗೆ ಅರ್ಹರಾಗಿರುತ್ತಾರೆ.

(ಎ) ತನ್ನ ಸ್ವಂತ ಉಪಯೋಗಕ್ಕೆ ಒಂದು ವಾಹನ.

(ಬಿ) ತನ್ನ ಚುನಾವಣಾ ಏಜೆಂಟನ್ನು ಬಳಕೆಗೆ ಒಂದು ವಾಹನ.

(ಸಿ) ಜೊತೆಗೆ ತನ್ನ ಕಾರ್ಯಕರ್ತರ ಅಥವಾ ಪಕ್ಷದ ಕಾರ್ಯಕರ್ತರ ಉಪಯೋಗಕ್ಕಾಗಿ ಒಂದು ವಾಹನ.

**ಸೂಚನೆ:**

(i) ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಪಕ್ಷದ ಕಾರ್ಯಕರ್ತರು ಅಥವಾ ಆತನ ಕಾರ್ಯಕರ್ತರಿಗೆ ನಾಲ್ಕು ಚಕ್ರ/ತ್ರಿಚಕ್ರ/ದ್ವಿಚಕ್ರ ವಾಹನಗಳನ್ನು ಅಂದರೆ, ಕಾರುಗಳು (ಎಲ್ಲಾ ರೀತಿಯ), ಟ್ಯಾಕ್ಸಿಗಳು, ಆಟೋರಿಕ್ಷಾ ಮತ್ತು ದ್ವಿಚಕ್ರ ವಾಹನಗಳನ್ನು ಮಾತ್ರ ಬಳಸಲು ಅನುಮತಿ ನೀಡಲಾಗುವುದು. ಈ ವಾಹನಗಳಲ್ಲಿ ಚಾಲಕರು ಸೇರಿದಂತೆ 5ಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಮತದಾನದ ದಿನ ಸಂಚರಿಸಲು ಅನುಮತಿ ನೀಡತಕ್ಕದ್ದಲ್ಲ.

(ii) ಮತದಾನದ ದಿನ, ಅಭ್ಯರ್ಥಿಯು ತನ್ನ ಕ್ಷೇತ್ರದಲ್ಲಿ ಹಾಜರಿರದಿದ್ದಲ್ಲಿ ಅಭ್ಯರ್ಥಿಗೆ ಮಂಜೂರಾದ ವಾಹನವನ್ನು ಬೇರೆ ಯಾರೇ ವ್ಯಕ್ತಿಯು ಬಳಸಲು ಅನುಮತಿಸುವಂತಿಲ್ಲ.

15.8.4. ಚುನಾವಣಾ ಉದ್ದೇಶಕ್ಕಾಗಿ ವಾಹನ ಬಳಕೆಗೆ ಅನುಮತಿ ನೀಡುವ ಪ್ರಾಧಿಕಾರವು ತನ್ನ ಮೊಹರು ಮತ್ತು ಸಹಿಯೊಂದಿಗೆ ನೀಡಿರುವ "ಚುನಾವಣಾ ಪರವಾನಗಿ" ಎಂಬುದಾಗಿ ದಪ್ಪ ಅಕ್ಷರದಲ್ಲಿ ಮುದ್ರಿಸಿರುವ ಪರವಾನಗಿ ಚೀಟಿಗಳನ್ನು ವಾಹನದ ಗಾಜಿನ ಮೇಲೆ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

15.8.5. ಅಭ್ಯರ್ಥಿಯು ಚುನಾವಣಾ ಆಯೋಗದ ಈ ಮಾರ್ಗಸೂಚಿಗಳನ್ನು ಎಚ್ಚರಿಕೆಯಿಂದ ಪಾಲಿಸಬೇಕು ಮತ್ತು ಚುನಾವಣೆಯ ದಿನದಂದು ಅಭ್ಯರ್ಥಿ ಮತ್ತು ಅವರ ಪಕ್ಷದ ಕಾರ್ಯಕರ್ತರು ಬಳಸಬೇಕಾಗಿರುವ ವಾಹನಗಳಿಗೆ ಸಾಕಷ್ಟು ಮುಂಚಿತವಾಗಿಯೇ ಅನುಮತಿಯನ್ನು ಪಡೆಯತಕ್ಕದ್ದು.

**15.9. ಮತಗಟ್ಟೆಗಳಲ್ಲಿ ಮತಪತ್ರಗಳನ್ನು ವಿದ್ಯುನ್ಮಾನ ಮತಯಂತ್ರಗಳಿಂದ (ಇವಿಎಂ) ಹೊರತೆಗೆಯುವುದು ಅಪರಾಧ**

15.9.1. ಯಾರೇ ಮತದಾರನು ಕಾನೂನುಬಾಹಿರವಾಗಿ ಮತಪತ್ರವನ್ನು ಅಥವಾ ಮತಯಂತ್ರವನ್ನು ಮತಗಟ್ಟೆಯಿಂದ ಹೊರಗೆ ತೆಗೆದುಕೊಂಡು ಹೋಗುವುದು ಅಥವಾ ಅನಧಿಕೃತವಾಗಿ ಅಥವಾ ಮೋಸದಿಂದ ಹಾನಿಗೊಳಿಸುವುದನ್ನು ಅಭ್ಯರ್ಥಿ ಅಥವಾ ಅವರ ಏಜೆಂಟರು ಪ್ರಾಮಾಣಿಕವಾಗಿ ಅನುಮಾನಿಸಿದಲ್ಲಿ ತಕ್ಷಣ ಈ ವಿಷಯದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಪ್ರಿಸೈಡಿಂಗ್ ಅಧಿಕಾರಿಯ ಗಮನವನ್ನು ಸೆಳೆಯುವುದು.

**15.10. ಗಲಭೆ ಸೃಷ್ಟಿಸುವ ವ್ಯಕ್ತಿಗಳನ್ನು ಹೊರಹಾಕುವುದು**

15.10.1. ಮತದಾನದ ಸಮಯದಲ್ಲಿ ಸ್ವತಃ ಅನುಚಿತವಾಗಿ ವರ್ತಿಸುವ ಅಥವಾ ಪ್ರಿಸೈಡಿಂಗ್ ಅಧಿಕಾರಿಯ ಕಾನೂನುಸಮ್ಮತ ನಿರ್ದೇಶನಗಳನ್ನು ಪಾಲಿಸದಿರುವ ಯಾರೇ ವ್ಯಕ್ತಿಯನ್ನು ಪ್ರಿಸೈಡಿಂಗ್ ಅಧಿಕಾರಿಯ ಆದೇಶಾನುಸಾರ ಪೋಲಿಸ್ ಅಧಿಕಾರಿಯು ಅಥವಾ ಆತನಿಂದ ಅಧಿಕಾರ ಪಡೆದಿರುವ ಇತರ ವ್ಯಕ್ತಿಯು ಮತಗಟ್ಟೆಯಿಂದ ಹೊರಹಾಕಬಹುದು.

**15.11. ಪೋಲಿಂಗ್ ಏಜೆಂಟರು.**

15.11.1. ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು ಪ್ರತಿಯೊಂದು ಮತಗಟ್ಟೆಯಲ್ಲಿ ಪೋಲಿಂಗ್ ಏಜೆಂಟರಾಗಿ ಕಾರ್ಯನಿರ್ವಹಿಸಲು ಒಬ್ಬ ಪೋಲಿಂಗ್ ಏಜೆಂಟನನ್ನು ಮತ್ತು ಇಬ್ಬರು ಬದಲಿ ಪೋಲಿಂಗ್ ಏಜೆಂಟರನ್ನು ನೇಮಕಮಾಡಿಕೊಳ್ಳುವ ಹಕ್ಕು ಹೊಂದಿರುತ್ತಾನೆ. ಆದಾಗ್ಯೂ, ಅವರಲ್ಲಿ ಒಬ್ಬ ಪೋಲಿಂಗ್ ಏಜೆಂಟ್ ಮಾತ್ರ ಆ ಸಮಯದಲ್ಲಿ ಮತಗಟ್ಟೆಯ ಒಳಗೆ ಹಾಜರಿರುವುದು. ಕಾಲಕಾಲಕ್ಕೆ ಅವರು ಪರಸ್ಪರ ಬದಲಾಗುತ್ತಿರಬಹುದು. ಒಬ್ಬ ಪೋಲಿಂಗ್ ಏಜೆಂಟ್ ಹೊರಗೆ ಹೋದಾಗ ಯಾರೇ ಬದಲಿ ಏಜೆಂಟನು ಅವನ ಜಾಗದಲ್ಲಿ ಕುಳಿತುಕೊಳ್ಳಬಹುದು. ಮೂವರಲ್ಲಿ ಯಾರೇ ಒಬ್ಬ ಮತಗಟ್ಟೆಯ ಒಳಗಿದ್ದಲ್ಲಿ, ಆತನನ್ನು ತತ್ಕಾಲದಲ್ಲಿ ಅಭ್ಯರ್ಥಿಯ ಪೋಲಿಂಗ್ ಏಜೆಂಟನಾಗಿ ಪರಿಗಣಿಸಲಾಗುತ್ತದೆ; ಕಾನೂನಿನ ಮೂಲಕ ಪೋಲಿಂಗ್ ಏಜೆಂಟನಿಗೆ ನೀಡಲಾಗಿರುವ ಅವೇ ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ಆತ ಹೊಂದಿರುತ್ತಾನೆ. ಮುಂದುವರೆದು, ಮಲ–ಮೂತ್ರ ವಿಸರ್ಜನೆ, ಇತ್ಯಾದಿ ಸಲುವಾಗಿ ಮಧ್ಯಾಹ್ನ 3–00 ಗಂಟೆಯ ನಂತರ ಮತಗಟ್ಟೆಯಿಂದ ಹೊರಹೋಗಲು ಮತ್ತು ಮತಗಟ್ಟೆಯ ಒಳಗೆ ವಾಪಾಸು ಬರಲು ಪೋಲಿಂಗ್ ಏಜೆಂಟರಿಗೆ ಅನುಮತಿಸಬಹುದು. ಆದಾಗ್ಯೂ, ಒಂದು ಬಾರಿಗೆ ಮತಗಟ್ಟೆ ಒಳಗೆ

ಪೋಲಿಂಗ್ ಏಜೆಂಟ್ ಅಥವಾ ಅವನ ಬದಲಿ ಏಜೆಂಟ್ ಮಾತ್ರವೇ ಹಾಜರಿರುವನೆಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಪ್ರಿಸೈಡಿಂಗ್ ಅಧಿಕಾರಿಯು ಇವಿಎಂ ಮತ್ತು ವಿವಿಪ್ಯಾಟ್ ಮೊಹರು ಮಾಡುವ ಪ್ರಕ್ರಿಯೆಯನ್ನು ವೀಕ್ಷಿಸಲು ಮತ್ತು ಘೋಷಣೆ, ಇತ್ಯಾದಿಗೆ ಸಹಿ ಹಾಕಲು ಮತದಾನ ಪ್ರಕ್ರಿಯೆ ಮುಗಿಯುವವರೆಗೂ ಇರಬೇಕೆಂದು ಪೋಲಿಂಗ್ ಏಜೆಂಟರಿಗೆ ತಿಳಿಸತಕ್ಕದ್ದು. ಪೋಲಿಂಗ್ ಏಜೆಂಟರು/ ಬದಲಿ ಏಜೆಂಟರುಗಳ ಚಲನವಲನ ಹಾಳೆಯನ್ನು ಪ್ರತಿ ಮತಗಟ್ಟೆಗೆ ಒದಗಿಸಬೇಕು. ಆ ಹಾಳೆಯಲ್ಲಿ ಪ್ರತಿಯೊಬ್ಬ ಪೋಲಿಂಗ್ ಏಜೆಂಟನು, ತಾನು ಮತದಾನ ಕೇಂದ್ರಕ್ಕೆ ಆಗಮಿಸುವ ಮತ್ತು ಮತದಾನ ಕೇಂದ್ರದಿಂದ ನಿರ್ಗಮಿಸುವ ಸಮಯವನ್ನು ಸೂಚಿಸಿ ಸಹಿ ಮಾಡಬೇಕು. ಅಲ್ಲದೆ, ಕೇಂದ್ರ ಅಥವಾ ರಾಜ್ಯ ಮಂತ್ರಿಗಳು, ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು ವಿಧಾನ ಪರಿಷತ್ ಸದಸ್ಯರು ಮತ್ತು ರಾಜ್ಯದಿಂದ ಭದ್ರತಾ ರಕ್ಷಣೆಯನ್ನು ಪಡೆದಿರುವ ಇತರೇ ಯಾರೇ ವ್ಯಕ್ತಿಗಳನ್ನು, ಅವರ ಜೊತೆಗಿರುವ ಭದ್ರತಾ ಸಿಬ್ಬಂದಿಗೆ ಮತಗಟ್ಟೆಯ ಒಳಗಡೆ ಪ್ರವೇಶಿಸಲು ಅವಕಾಶ ಇಲ್ಲದಿರುವುದರಿಂದ ಅಥವಾ ಅವರ ಭದ್ರತಾ ಸಿಬ್ಬಂದಿಯ ಅನುಪಸ್ಥಿತಿಯಲ್ಲಿ ಅವರ ಭದ್ರತೆಗೆ ಧಕ್ಕೆ ಉಂಟಾಗಬಹುದಾದ ಸಾಧ್ಯತೆ ಇರುವುದರಿಂದ, ಪೋಲಿಂಗ್ ಏಜೆಂಟರನ್ನಾಗಿ ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ಭದ್ರತಾ ರಕ್ಷಣೆಯನ್ನು ಪಡೆದಿರುವ ಯಾರೇ ವ್ಯಕ್ತಿಗೆ ಪೋಲಿಂಗ್ ಏಜೆಂಟನಾಗಿ ನೇಮಕಗೊಳ್ಳಲು ಆತನಿಗೆ ಸಾಧ್ಯವಾಗುವಂತೆ ಭದ್ರತಾ ರಕ್ಷಣೆಯನ್ನು ಬಿಟ್ಟು ಕೊಡಲು ಅನುಮತಿ ನೀಡತಕ್ಕದ್ದಲ್ಲ.

15.11.2. ಪೋಲಿಂಗ್ ಏಜೆಂಟರ ನೇಮಕಾತಿಯನ್ನು ನಮೂನೆ–10 (**ಅನುಬಂಧ–23**)ರಲ್ಲಿ ಲಿಖಿತವಾಗಿ ಮಾಡಬೇಕು. ಅಭ್ಯರ್ಥಿಯಿಂದ ನೇಮಕಗೊಂಡ ಪೋಲಿಂಗ್ ಏಜೆಂಟರು ನೇಮಕವಾಗಿರುವ ಮತಗಟ್ಟೆಗೆ ಸೇರಿದ ಸಾಮಾನ್ಯ ನಿವಾಸಿಯಾಗಿರಬೇಕು ಮತ್ತು ಅದೇ ಮತಗಟ್ಟೆಯ ಮತದಾರನಾಗಿರಬೇಕು. ಅಂತಹ ಪೋಲಿಂಗ್ ಏಜೆಂಟರು ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳನ್ನು ಹೊಂದಿರಬೇಕು. ಮತದಾನ ಪ್ರದೇಶದಲ್ಲಿನ ನೋಂದಾಯಿತ ಮತದಾರರನಾಗಿರುವ ಮತ್ತು ಅಭ್ಯರ್ಥಿಯಿಂದ ಪೋಲಿಂಗ್ ಏಜೆಂಟನಾಗಿ ನೇಮಕಗೊಳ್ಳಲಿರುವ ಯಾರೇ ವ್ಯಕ್ತಿಯು ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಹೊಂದಿಲ್ಲದಿದ್ದರೆ, ಅಂತಹ ಸಂದರ್ಭದಲ್ಲಿ, ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟನು ರಿಟರ್ನಿಂಗ್ ಅಧಿಕಾರಿಗೆ ಮನವಿಯನ್ನು ಸಲ್ಲಿಸಬೇಕು. ರಿಟರ್ನಿಂಗ್ ಅಧಿಕಾರಿಯು ಅಂತಹ ಮತದಾರರಿಗೆ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ನೀಡಲು ಅಗತ್ಯ ವ್ಯವಸ್ಥೆಯನ್ನು ಮಾಡತಕ್ಕದ್ದು. ಎಲ್ಲಾ ಪೋಲಿಂಗ್ ಏಜೆಂಟರು ತಮ್ಮ ಮತದಾರರ ಗುರುತಿನ ಭಾವಚಿತ್ರವಿರುವ ಚೀಟಿಗಳನ್ನು ಎದ್ದುಕಾಣುವಂತೆ ಪ್ರದರ್ಶಿಸಬೇಕು. ಅಭ್ಯರ್ಥಿಯು ರಿಟರ್ನಿಂಗ್ ಅಧಿಕಾರಿಗೆ

ನೇಮಕಾತಿಯ ಆದೇಶವನ್ನು ಕಳುಹಿಸುವ ಅಗತ್ಯವಿರುವುದಿಲ್ಲ. ಪೋಲಿಂಗ್ ಏಜೆಂಟನು, ಪ್ರಿಸೈಡಿಂಗ್ ಅಧಿಕಾರಿಯು ಮತಗಟ್ಟೆ ಒಳಗಡೆಗೆ ಪ್ರವೇಶಿಸಲು ತನಗೆ ಅವಕಾಶ ಮಾಡಿಕೊಡಬಹುದಾದ ಹಾಗೆ ಮತಗಟ್ಟೆಯಲ್ಲಿ ನೇಮಕಾತಿ ಆದೇಶದ ಮೂಲ ಪ್ರತಿಯನ್ನು ಹಾಜರುಪಡಿಸತಕ್ಕದ್ದು. ಪೋಲಿಂಗ್ ಏಜೆಂಟನು ಅಭ್ಯರ್ಥಿಯ ಪೋಲಿಂಗ್ ಏಜೆಂಟನಾಗಿ ಕಾರ್ಯನಿರ್ವಹಿಸಲಿಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿದುದರ ಸಂಕೇತವಾಗಿ ನಮೂನೆ–10ರಲ್ಲಿ ನೇಮಕಾತಿ ಪತ್ರಕ್ಕೆ ಸಹಿ ಮಾಡತಕ್ಕದ್ದು. ಪೋಲಿಂಗ್ ಏಜೆಂಟನ ಸಹಿಯನ್ನು ಅಭ್ಯರ್ಥಿಯ ಸಮ್ಮುಖದಲ್ಲಿ ಅಥವಾ **ಅವರ** ಚುನಾವಣಾ ಏಜೆಂಟನ ಸಮ್ಮುಖದಲ್ಲಿ ಮಾಡಬೇಕಾದುದು, ತದನಂತರ ನೇಮಕಾತಿಯನ್ನು ಮಾಡಿದಲ್ಲಿ ಪೋಲಿಂಗ್ ಏಜೆಂಟನು ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯವರ ಸಮ್ಮುಖದಲ್ಲಿ ಕೂಡ ಮತ್ತೊಮ್ಮೆ ಸಹಿ ಮಾಡಬೇಕಾದುದು ಸೂಕ್ತವಾದುದಾಗಿದೆ. ಆತನ ಸಹಿಯಲ್ಲಿ ಯಾವುದೇ ವ್ಯತ್ಯಾಸವಿರದಿರುವ ಹಾಗೆ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟನ ಮುಂದೆ ಆತನು ಸಹಿ ಮಾಡಿದ ರೀತಿಯಲ್ಲೇ ಪ್ರಿಸೈಡಿಂಗ್ ಅಧಿಕಾರಿಯ ಮುಂದೆ ಸಹಿ ಮಾಡುವಂತೆ ಆತನಿಗೆ ಹೇಳತಕ್ಕದ್ದು. ಇದು ಆತನ ಗುರುತನ್ನು ತಕ್ಷಣವೇ ಒಪ್ಪಿಕೊಳ್ಳಲಿಕ್ಕೆ ಸಹಾಯವಾಗಲಿದೆ.

15.11.3. ನಮೂನೆ–10ರಲ್ಲಿನ ನೇಮಕಾತಿ ಪತ್ರದಲ್ಲಿ ನೀಡಲಾದಂತೆ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಸಹಿಯನ್ನು ಪರಿಶೀಲಿಸಲು ಮತಗಟ್ಟೆಯ ಪ್ರಿಸೈಂಡಿಂಗ್ ಅಧಿಕಾರಿಗೆ ಸಾಧ್ಯವಾಗುವಂತೆ ಅಭ್ಯರ್ಥಿಯ ಮಾದರಿ ಸಹಿಯನ್ನು ಅಥವಾ **ಅವರ** ಚುನಾವಣಾ ಏಜೆಂಟರ ಮಾದರಿ ಸಹಿಯನ್ನು ರಿಟರ್ನಿಂಗ್ ಅಧಿಕಾರಿಯು **(ಅನುಬಂಧ–25)** ನಮೂನೆಯಲ್ಲಿ ಪಡೆಯತಕ್ಕದ್ದು ಮತ್ತು ಅದರ ಪ್ರತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಮತಕ್ಷೇತ್ರದಲ್ಲಿ ಪ್ರತಿಯೊಬ್ಬ ಪ್ರಿಸೈಡಿಂಗ್ ಅಧಿಕಾರಿ, ಆಯೋಗದ ವೀಕ್ಷಕ, ವಲಯ ಮ್ಯಾಜಿಸ್ಟ್ರೇಟ್ ಮತ್ತು ಸೆಕ್ಟರ್ ಮ್ಯಾಜಿಸ್ಟ್ರೇಟ್ ಮೊದಲಾದವರುಗಳಿಗೆ ಒದಗಿಸತಕ್ಕದ್ದು. ಅಭ್ಯರ್ಥಿಯ ಯಾರೇ ಚುನಾವಣಾ ಏಜೆಂಟನನ್ನು ನೇಮಕ ಮಾಡಿಕೊಂಡಿಲ್ಲದಿದ್ದಲ್ಲಿ ಆಗ ಚುನಾವಣಾ ಏಜೆಂಟನ ಸಹಿಗಾಗಿ ನೀಡಲಾದ ಅಂಕಣದಲ್ಲಿ **"**ಚುನಾವಣಾ ಏಜೆಂಟನನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ**"** ಎಂಬ ಪದಗಳನ್ನು ಸದರಿ ನಮೂನೆಯಲ್ಲಿ ದಾಖಲಿಸತಕ್ಕದ್ದು. ಯಾರೇ ಚುನಾವಣಾ ಏಜೆಂಟನ ನೇಮಕಾತಿಯನ್ನು ರದ್ದುಪಡಿಸುವ ಮತ್ತು ಆತನ ಸ್ಥಾನದಲ್ಲಿ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳುವ ಸ್ವಾತಂತ್ರ್ಯ ಅವರಿಗಿರುತ್ತದೆ. ಅಭ್ಯರ್ಥಿಯು ಮೂಲತಃ ಒದಗಿಸಲಾದಂತಹ ಮಾದರಿ ಸಹಿಗಳನ್ನು ಒಳಗೊಂಡ **(ಅನುಬಂಧ–25)** ನಮೂನೆಯ ಪ್ರತಿಯನ್ನು ಈಗಾಗಲೇ ಪ್ರಿಸೈಡಿಂಗ್ ಅಧಿಕಾರಿಗೆ ಪೂರೈಸಿದ

ನಂತರ, ಕೊನೆಯ ಕ್ಷಣದಲ್ಲಿ ನೇಮಕಾತಿಯಲ್ಲಿ ಯಾವುದೇ ಅಂತಹ ಬದಲಾವಣೆಯನ್ನು ಮಾಡಿದ ಪಕ್ಷದಲ್ಲಿ ಆಗ ಚುನಾವಣಾ ಏಜೆಂಟನ ನೇಮಕಾತಿಯನ್ನು ರದ್ದುಪಡಿಸಿರುವ ನಮೂನೆ –9ರ ಪ್ರತಿಯನ್ನು ಹಾಗೂ ಹೊಸ ಚುನಾವಣಾ ಏಜೆಂಟನ ನೇಮಕಾತಿ ಮಾಡಿರುವ ನಮೂನೆ –8ರ ಪ್ರತಿಯನ್ನು ಪ್ರಿಸೈಡಿಂಗ್ ಅಧಿಕಾರಿಗೆ ಪೂರೈಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರತಕ್ಕದ್ದು.

15.11.4. **ಅಭ್ಯರ್ಥಿಯು** ಅಥವಾ ಅವರ ಚುನಾವಣಾ ಏಜೆಂಟನು ಅಭ್ಯರ್ಥಿಯ ಯಾರೇ ಪೋಲಿಂಗ್ ಏಜೆಂಟರ ನೇಮಕಾತಿಯನ್ನು ನಮೂನೆ–11 **(ಅನುಬಂಧ–24)**ರಲ್ಲಿ ಲಿಖಿತವಾಗಿ ರದ್ದುಪಡಿಸಿ ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಗೆ ರದ್ದಿಯಾತಿ ಆದೇಶವನ್ನು ಸಲ್ಲಿಸತಕ್ಕದ್ದು. ಯಾರೇ ಪೋಲಿಂಗ್ ಏಜೆಂಟನು ಮತದಾನಕ್ಕೂ ಮುಂಚೆ ಮೃತನಾದ ಪಕ್ಷದಲ್ಲಿ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟನು ಆ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿಗೆ ತಿಳಿಸತಕ್ಕದ್ದು. ನೇಮಕಾತಿ ರದ್ದಿಯಾತಿ ಅಥವಾ ಮರಣದ ಸಂದರ್ಭದಲ್ಲಿ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟ್ ಈ ಮುಂಚೆ ಮಾಡಿದ ರೀತಿಯಲ್ಲೇ ನಮೂನೆ–10ರಲ್ಲಿ ಹೊಸ ನೇಮಕಾತಿ ಪತ್ರ ನೀಡುವ ಮೂಲಕ ಮತ್ತೊಬ್ಬ ಪೋಲಿಂಗ್ ಏಜೆಂಟನನ್ನು ನೇಮಿಸಬಹುದು. ಆದರೆ, ಅಂತಹ ಸಂದರ್ಭದಲ್ಲಿ ಅಂತಹ ನೇಮಕಾತಿಗೆ ಕಾರಣವಾದ ಸಂಗತಿಗಳನ್ನು ಪತ್ರದಲ್ಲಿ ತಿಳಿಸತಕ್ಕದ್ದು.

## 15.12. ಪೋಲಿಂಗ್ ಏಜೆಂಟನು ಮತಗಟ್ಟೆಯನ್ನು ತಲುಪಿದಾಗ

15.12.1. ಪೋಲಿಂಗ್ ಏಜೆಂಟನು ಮತದಾನದ ಆರಂಭಕ್ಕಿಂತ ಕನಿಷ್ಠ ಒಂದು ಗಂಟೆ ಮುಂಚಿತವಾಗಿ ಮತಗಟ್ಟೆಯನ್ನು ತಲುಪಬೇಕು. ಇದರಿಂದ ಪ್ರಿಸೈಡಿಂಗ್ ಅಧಿಕಾರಿಯು ಮತದಾನ ನಡೆಸುವುದಕ್ಕೆ ಮತಯಂತ್ರಗಳನ್ನು ಮತ್ತು ವಿವಿಪ್ಯಾಟನ್ನು ಸಿದ್ಧಪಡಿಸುವಾಗ ಮತ್ತು ಮತದಾನದ ಪ್ರಾರಂಭಕ್ಕೂ ಮುಂಚಿನ ಇತರ ಪೂರ್ವಭಾವಿ ವ್ಯವಸ್ಥೆಗಳನ್ನು ಮಾಡುವಾಗ ಮತಗಟ್ಟೆಯಲ್ಲಿ ಹಾಜರಿರುವುದಕ್ಕೆ ಸಾಧ್ಯವಾಗುತ್ತದೆ. ಈ ಯಾವುದೇ ಪೂರ್ವಭಾವಿ ಸಿದ್ಧತೆಗಳನ್ನು ಈಗಾಗಲೇ ಪೂರ್ಣಗೊಳಿಸಿದ್ದರೆ ಯಾರೇ ತಡವಾಗಿ ಬಂದ ಪೋಲಿಂಗ್ ಏಜೆಂಟರ ಸಲುವಾಗಿ ಈ ಪ್ರಕ್ರಿಯೆಗಳನ್ನು ಪುನಃ ಹೊಸದಾಗಿ ಪ್ರಾರಂಭಿಸಬೇಕಾಗಿಲ್ಲ. ಪ್ರಿಸೈಡಿಂಗ್ ಅಧಿಕಾರಿಯು ಪ್ರತಿಯೊಬ್ಬ ಪೋಲಿಂಗ್ ಏಜೆಂಟರಿಗೆ ಮತಗಟ್ಟೆಯ ಒಳಗೆ ಪ್ರವೇಶಿಸಲು ಮತ್ತು ಹೊರ ಬರಲು ಪಾಸ್‌ಗಳನ್ನು ನೀಡಲಿದ್ದಾರೆ. ಅದರ ಬಲದಿಂದ, ಪೋಲಿಂಗ್ ಏಜೆಂಟನು ಅಗತ್ಯವಾದಗಲೆಲ್ಲಾ ಮತಗಟ್ಟೆಯ ಒಳಗೆ ಪ್ರವೇಶಿಸಬಹುದು ಮತ್ತು ಮತಗಟ್ಟೆಯಿಂದ ಹೊರಬರಬಹುದು.

**15.13. ಮತಗಟ್ಟೆಗಳಲ್ಲಿ ಪೋಲಿಂಗ್ ಏಜೆಂಟರ ಉಪಸ್ಥಿತಿ ಮತ್ತು ಕಡ್ಡಾಯ ಅಣಕು ಮತದಾನ ನಡೆಸುವುದು ಮತ್ತು ಪ್ರಮಾಣೀಕರಣದ ಬಗ್ಗೆ ಪತ್ತೆಹಚ್ಚುವುದು.**

15.13.1. ಆದ್ದರಿಂದ, ಅಭ್ಯರ್ಥಿಯ ಪೋಲಿಂಗ್ ಏಜೆಂಟರು ಏಜೆಂಟರಿಗೆ ಪ್ರವೇಶ ಪಾಸು ವಿತರಣೆ, ಅಣಕು ಮತದಾನ ನಡೆಸುವುದು ಇತ್ಯಾದಿಯಂಥ ಮತದಾನ ಪೂರ್ವ ವಿಧಿ–ವಿಧಾನಗಳನ್ನು ಸಕಾಲಕ್ಕೆ ಮಾಡುವ ಹಾಗೆ ಮತದಾನ ಪ್ರಾರಂಭಕ್ಕೂ ಸಾಕಷ್ಟು ಮುಂಚಿತವಾಗಿ ಮತಗಟ್ಟೆಗಳನ್ನು ತಲುಪುವಂತೆ ನೋಡಿಕೊಳ್ಳಲು ಅಭ್ಯರ್ಥಿಗೆ ಸಲಹೆ ನೀಡಲಾಗಿದೆ.

15.13.2. ಪ್ರಿಸೈಡಿಂಗ್ ಅಧಿಕಾರಿಗಳು ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಪ್ಯಾರಾ 21.2ರಲ್ಲಿ ವಿವರಿಸಲಾದಂತೆ ಅಣಕು ಮತದಾನವನ್ನು ನಡೆಸಿ ಈ ಕೆಳಗೆ ನೀಡಲಾದ ನಿಗದಿತ ನಮೂನೆಯಲ್ಲಿ **(ಅನುಬಂಧ–28)** ಅಣಕು ಮತದಾನದ ಪ್ರಮಾಣಪತ್ರವನ್ನು ಸಿದ್ಧಪಡಿಸಿ ಸಹಿ ಮಾಡತಕ್ಕದ್ದು.

15.13.3. ಪ್ರಿಸೈಡಿಂಗ್ ಅಧಿಕಾರಿಯು ದಾಖಲೆಯ ಉದ್ದೇಶಕ್ಕಾಗಿ ಅಣಕು ಮತದಾನದ ಸಂದರ್ಭದಲ್ಲಿ ಹಾಜರಿದ್ದ ಪೋಲಿಂಗ್ ಏಜೆಂಟರ ಹೆಸರುಗಳನ್ನು ಮತ್ತು ಅವರು ಪ್ರತಿನಿಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ನಮೂದಿಸತಕ್ಕದ್ದು ಮತ್ತು ಅವರ ಸಹಿಗಳನ್ನು ಪಡೆಯತಕ್ಕದ್ದು.

15.13.4. ಅಣಕು ಮತದಾನವನ್ನು ಸಾಮಾನ್ಯವಾಗಿ ನೈಜ ಮತದಾನ ಪ್ರಾರಂಭವಾಗುವುದಕ್ಕೆ ನಿಗದಿ ಪಡಿಸಿದ ಸಮಯಕ್ಕಿಂತ ಕನಿಷ್ಟ ಒಂದು ಗಂಟೆಗೆ ಮುಂಚಿತವಾಗಿ ನಡೆಸತಕ್ಕದ್ದು. ಮತದಾನವನ್ನು ಪ್ರಾರಂಭಿಸುವುದಕ್ಕೂ 1 ಗಂಟೆ ಮುಂಚಿತವಾಗಿ ಅಣಕು ಮತದಾನವನ್ನು ನಡೆಸಲಾಗುವುದೆಂದು ಸ್ಪರ್ಧಿಸುತ್ತಿರುವ ಎಲ್ಲಾ ಅಭ್ಯರ್ಥಿಗಳಿಗೆ ಸಾಕಷ್ಟು ಮುಂಚಿತವಾಗಿ ಲಿಖಿತದಲ್ಲಿ ತಿಳಿಸಬೇಕು ಮತ್ತು ಅಣಕು ಮತದಾನದ ಸಮಯದಲ್ಲಿ ತಮ್ಮ ಪೋಲಿಂಗ್ ಏಜೆಂಟರು ಸಕಾಲಕ್ಕೆ ಹಾಜರಿರುವಂತೆ ತಿಳಿಸಲು ಅವರಿಗೆ ಸೂಚಿಸಬೇಕು. ಅಣಕು ಮತದಾನದ ಸಮಯದಲ್ಲಿ ಕನಿಷ್ಠ ಪಕ್ಷ ಇಬ್ಬರು ಅಭ್ಯರ್ಥಿಗಳ ಪೋಲಿಂಗ್ ಎಜೆಂಟರು ಹಾಜರಿರಬೇಕು. ಆದಾಗ್ಯೂ, ಕನಿಷ್ಠ ಇಬ್ಬರು ಅಭ್ಯರ್ಥಿಗಳ ಪೋಲಿಂಗ್ ಏಜೆಂಟರು ಹಾಜರಿರದಿದ್ದ ಪಕ್ಷದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ಅಣಕು ಮತದಾನ ನಡೆಸುವುದಕ್ಕೆ ಮುಂಚೆ ಇನ್ನೂ 15 ನಿಮಿಷಗಳ ಕಾಲ ಕಾಯಬಹುದು ಹಾಗೂ ಪೋಲಿಂಗ್ ಏಜೆಂಟರು ಆಗಲೂ ಬರದಿದ್ದಲ್ಲಿ, ಆಗ ಪ್ರಿಸೈಡಿಂಗ್ ಅಧಿಕಾರಿಯು ಮುಂದುವರೆದು ಅಣಕು ಮತದಾನವನ್ನು ನಡೆಸಬಹುದು. 15 ನಿಮಿಷಗಳ ಕಾಲ ಕಾಯ್ದು ತರುವಾಯ, ಅಲ್ಲಿ ಒಬ್ಬನೇ ಪೋಲಿಂಗ್ ಏಜೆಂಟ್ ಹಾಜರಿರಬಹುದಾದ ಸಾಧ್ಯತೆ ಇರುತ್ತದೆ. ಆ ಸಂದರ್ಭದಲ್ಲೂ ಕೂಡ, ಪ್ರಿಸೈಡಿಂಗ್ ಅಧಿಕಾರಿಯು ಮುಂದುವರೆದು ಅಣಕು ಮತದಾನವನ್ನು ಪ್ರಾರಂಭಿಸಬೇಕೆಂದು ಮತ್ತೆಷ್ಟು ಸ್ಪಷ್ಟಪಡಿಸಲಾಗಿದೆ. ಅಂತಹ ಸಂದರ್ಭದಲ್ಲಿ, ಈ ಅಂಶದ ಬಗ್ಗೆ ಅಣಕು ಮತದಾನ ಪ್ರಮಾಣಪತ್ರದಲ್ಲಿ ನಿರ್ದಿಷ್ಟ ನಮೂದು ಇರಬೇಕು.

15.13.5.ರಿಟರ್ನಿಂಗ್ ಅಧಿಕಾರಿಯು ಸೆಕ್ಟರ್ ಅಧಿಕಾರಿಗಳ ಮೂಲಕ ಮತ್ತು ಮತಗಟ್ಟೆ ಅಥವಾ ಸಂಚಾರಿ ದಳಗಳೊಂದಿಗಿನ ಸಂಪರ್ಕವನ್ನು ಬಳಸಿ ಅಣಕು ಮತದಾನ ನಡೆದಿದೆಯೇ ಇಲ್ಲವೇ ಎಂಬ ಬಗ್ಗೆ ಪತ್ತೆಹಚ್ಚತಕ್ಕದ್ದು ಮತ್ತು 30 ನಿಮಿಷಗಳೊಳಗಾಗಿ ಅಣಕು ಮತದಾನದ ಸ್ಥಿತಿಗತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಅಣಕು ಮತದಾನದ ಬಗ್ಗೆ ದೃಢೀಕರಿಸಿಕೊಳ್ಳದಿರುವುದು ಪ್ರಿಸೈಡಿಂಗ್ ಅಧಿಕಾರಿಯ ಕಡೆಯಿಂದ ಅಥವಾ ಇವಿಎಂ ಕಡೆಯಿಂದ ಕೆಲಮಟ್ಟಿಗೆ ಆಗಿರುವ ತೊಂದರೆಯ ಸೂಚಕವಾಗಿರಬಹುದು. ಆದ್ದರಿಂದ ರಿಟರ್ನಿಂಗ್ ಅಧಿಕಾರಿಯು ತೊಂದರೆಯನ್ನು ನಿವಾರಿಸಲು ತಕ್ಷಣವೇ ಮಧ್ಯ ಪ್ರವೇಶ ಮಾಡತಕ್ಕದ್ದು.

15.13.6. ಮಾನ್ಯತೆ ಪಡೆದ ಪಕ್ಷಗಳ ಎದುರಾಳಿ ಅಭ್ಯರ್ಥಿಗಳು ಉಪಸ್ಥಿತರಿಲ್ಲದಿರುವ ಮತ್ತು ಏಜೆಂಟರ ಅನುಪಸ್ಥಿತಿಯಲ್ಲಿ ಅಣಕು ಮತದಾನ ನಡೆಸಬೇಕಾಗಿರುವ ಮತಗಟ್ಟೆಗಳು ಚುನಾವಣಾ ಆಡಳಿತ ವ್ಯವಸ್ಥೆಯ ಹೆಚ್ಚಿನ ಗಮನಕ್ಕೆ ಪಾತ್ರವಾಗಿರುತ್ತದೆ. ಮೀಸಲು ಸೂಕ್ಷ್ಮ ವೀಕ್ಷಕರ ನಿಯೋಜನೆ, ವಿಡಿಯೋ ಕ್ಯಾಮಾರಾಗಳ ನಿಯೋಜನೆ, ಸೆಕ್ಟರ್ ಅಧಿಕಾರಿಗಳು ಮತ್ತು ಇತರ ಹಿರಿಯ ಅಧಿಕಾರಿಗಳು ಆಗಿಂದಾಗೆ ಭೇಟಿ ನೀಡುವುದು ಮೊದಲಾದಂತಹ ಕ್ರಮಗಳನ್ನು ಕೈಗೊಳ್ಳಬಹುದು.

15.13.7.ಮತದಾನ ಮುಕ್ತಾಯಗೊಂಡ ನಂತರ ಪ್ರಿಸೈಡಿಂಗ್ ಅಧಿಕಾರಿಗಳಿಂದ ಪಡೆದ ಅಣಕು ಮತದಾನದ ಪ್ರಮಾಣಪತ್ರಗಳ ಆಧಾರದ ಮೇಲೆ, ರಿಟರ್ನಿಂಗ್ ಅಧಿಕಾರಿಯು ಏಜೆಂಟರ ಅನುಪಸ್ಥಿತಿಯಲ್ಲಿ ಅಣಕು ಮತದಾನವನ್ನು ನಡೆಸಿರುವ ಅಥವಾ ಅಣಕು ಮತದಾನದ ಸಮಯದಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಒಬ್ಬರಿಗಿಂತ ಹೆಚ್ಚು ಎದುರಾಳಿ ಅಭ್ಯರ್ಥಿಗಳ ಏಜೆಂಟರು ಹಾಜರಿರದಿರುವಂತಹ ಮತಗಟ್ಟೆಗಳ ಪಟ್ಟಿಯನ್ನು ಸಿದ್ಧಪಡಿಸಬೇಕು ಮತ್ತು ಸೂಕ್ತ ಪರಿಶೀಲನೆಗಾಗಿ ಅಂತಹ ಮತಗಟ್ಟೆಗಳಿಂದ ಪಡೆದ ದಾಖಲೆಗಳ ಕಡೆಗೆ ವಿಶೇಷ ಗಮನವನ್ನು ಹರಿಸಬೇಕು. ವೀಕ್ಷಕರು ಕೂಡ ಈ ವಿಷಯದ ಬಗ್ಗೆ ತಮ್ಮ ಗಮನವನ್ನು ಹರಿಸಬೇಕು.

## 15.14. ಪೋಲಿಂಗ್ ಏಜೆಂಟರ ಕರ್ತವ್ಯಗಳು

15.14.1.ಅಭ್ಯರ್ಥಿಯ ಪೋಲಿಂಗ್ ಏಜೆಂಟರ ಮುಖ್ಯ ಕರ್ತವ್ಯ ಮತಗಟ್ಟೆಗಳಲ್ಲಿ ಅಭ್ಯರ್ಥಿಯ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬರಲಾಗುತ್ತಿದೆ ಎಂಬುದನ್ನು ನೋಡಿಕೊಂಡು ಬರುವುದಾಗಿದೆ. ಅದಕ್ಕಾಗಿ ಆತನನ್ನು ಅಭ್ಯರ್ಥಿಯ ಪೋಲಿಂಗ್ ಏಜೆಂಟನನ್ನಾಗಿ ನೇಮಕ ಮಾಡಲಾಗಿದೆ. ಆತನ ಇತರ ಕರ್ತವ್ಯಗಳೆಂದರೆ:–

(ಎ) ಮತದಾರರ ಸೋಗಿನಲ್ಲಿ ಬಂದು ಮತ ಚಲಾಯಿಸಲು ಪ್ರಯತ್ನಿಸುವ ವ್ಯಕ್ತಿಗಳನ್ನು ಆಕ್ಷೇಪಿಸಿ ಮತದಾರರ ಸೋಗಿನಲ್ಲಿ ಬಂದು ಬೇರೊಬ್ಬನ ಹೆಸರಿನಲ್ಲಿ ಮತ

ಚಲಾಯಿಸುವುದನ್ನು ಪತ್ತೆಹಚ್ಚಲು ಮತ್ತು ತಡೆಯಲು ಪ್ರಿಸೈಡಿಂಗ್ ಅಧಿಕಾರಿಗೆ ನೆರವಾಗುವುದು;

(ಬಿ) ಮತದಾನಕ್ಕೆ ಮುಂಚೆ ಮತ್ತು ಮತದಾನದ ನಂತರ ನಿಯಮಗಳಿಗೆ ಅನುಸಾರವಾಗಿ ಮತಯಂತ್ರಗಳನ್ನು ಸರಿಯಾಗಿ ಭದ್ರಪಡಿಸಿ ಮೊಹರು ಮಾಡುವಲ್ಲಿ ನೆರವಾಗುವುದು;

(ಸಿ) ಮತದಾನ ಮುಕ್ತಾಯಗೊಂಡ ನಂತರ ಪ್ರಿಸೈಡಿಂಗ್ ಅಧಿಕಾರಿಯಿಂದ ನಮೂನೆ–17ಸಿ ಯಲ್ಲಿ ದಾಖಲಿಸಲಾದ ಮತಗಳ ಲೆಕ್ಕ ಮತ್ತು ಪೇಪರ್ ಸೀಲ್ ಲೆಕ್ಕದ ಪ್ರತಿಯನ್ನು ಪಡೆಯುವುದು; ಮತ್ತು

(ಡಿ) ಮತದಾನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೂಡ ಕಾನೂನಲ್ಲಿ ಅಗತ್ಯಪಡಿಸಲಾದಂತೆ ಸಮರ್ಪಕವಾಗಿ ಭದ್ರಪಡಿಸಿ ಮೊಹರು ಮಾಡಲಾಗಿದೆ ಎಂಬುದನ್ನು ನೋಡಿಕೊಳ್ಳುವುದು.

15.14.2. ಚುನಾವಣಾ ಆಯೋಗವು "ಪೋಲಿಂಗ್ ಏಜೆಂಟರ ಕೈಪಿಡಿ" ಎಂಬ ಪ್ರತ್ಯೇಕ ಪುಸ್ತಕವನ್ನು ಹೊರತಂದಿದ್ದು, ನೀವು ಅಗತ್ಯವೆಂದು ಭಾವಿಸಿದಲ್ಲಿ ಪೋಲಿಂಗ್ ಏಜೆಂಟರಿಗೆ ವಿತರಿಸುವುದಕ್ಕಾಗಿ ಸಾಕಷ್ಟು ಸಂಖ್ಯೆಯ ಪೋಲಿಂಗ್ ಏಜೆಂಟರ ಕೈಪಿಡಿಯನ್ನು ಖರೀದಿಸಬಹುದು. ಈ ಕೈಪಿಡಿಗಳು ನಿಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿಗಳ ಕಛೇರಿಯಲ್ಲಿ ದೊರೆಯುತ್ತವೆ.

**15.15. ಪೋಲಿಂಗ್ ಏಜೆಂಟರು ತರಬೇಕಾದ ಸಾಮಾಗ್ರಿಗಳು.**

15.15.1. ಪೋಲಿಂಗ್ ಏಜೆಂಟರು ಮತದಾನ ಕೇಂದ್ರಕ್ಕೆ ಬರುವಾಗ ತಮ್ಮ ಬಳಿ ಈ ಕೆಳಕಂಡ ಸಾಮಾಗ್ರಿಗಳನ್ನು ತರಬೇಕು:–

(ಎ) ಆತನ ನೇಮಕಾತಿ ಪತ್ರ.

(ಬಿ) ಮತಗಟ್ಟೆಗೆ ಸಂಬಂಧಿಸಿದ ಮತದಾರರ ಪಟ್ಟಿಯ ಪ್ರತಿ.

(ಸಿ) ಪಟ್ಟಿಯಲ್ಲಿ ಸೇರ್ಪಡೆಗೊಂಡ ಮೃತ, ಗೈರು ಹಾಜರಾದ ಅಥವಾ ಬೇರೆಡೆಗೆ ಸ್ಥಳಾಂತರಗೊಂಡ ಮತ್ತು ಎರಡು ಕಡೆ ಹೆಸರಿರುವ ಮತದಾರರ ಹೆಸರುಗಳ ಪಟ್ಟಿ.

(ಡಿ) ಬ್ಯಾಲೆಟ್ ಯೂನಿಟ್‌ಗಳಿರುವ ಕ್ಯಾರಿಯಿಂಗ್ ಕೇಸ್‌ಗಳನ್ನು ಎಣಿಕೆ/ಸಂಗ್ರಹಣಾ ಕೇಂದ್ರಕ್ಕೆ ಸಾಗಿಸುವ ಮುಂಚೆ ಬ್ಯಾಲೆಟ್ ಯೂನಿಟ್‌ಗಳ ಕ್ಯಾರಿಯಿಂಗ್ ಕೇಸ್‌ಗಳ ಮೇಲೆ ತಮ್ಮ ಮೊಹರನ್ನು ಹಾಕುವುದಕ್ಕಾಗಿ ತಾವು ಬಳಸಬಹುದಾದಂತಹ ಒಂಚು ಚಿಕ್ಕ ಲೋಹದ ಮೊಹರು; ಮತ್ತು

(ಇ) ಪೆನ್ನು, ಪೇಪರ್ ಮತ್ತು ಪೆನ್ಸಿಲ್.

## 15.16. ಮತಗಟ್ಟೆಗಳಲ್ಲಿ ಬ್ಯಾಡ್ಜ್ ಇತ್ಯಾದಿಗಳನ್ನು ಧರಿಸುವುದು

15.16.1. ಅಭ್ಯರ್ಥಿಗಳ ಅಥವಾ ರಾಜಕೀಯ ಮುಖಂಡರ ಹೆಸರುಗಳನ್ನು ಮತ್ತು/ಅಥವಾ ಅವರ ಚಿಹ್ನೆಗಳನ್ನು ಅಥವಾ ಅದರ ಸಚಿತ್ರ ನಿರೂಪಣೆಯನ್ನು ಒಳಗೊಂಡಿರುವ ಬ್ಯಾಡ್ಜ್‌ಗಳು (ಬಿಲ್ಲೆಗಳು), ಲಾಂಛನಗಳು ಇತ್ಯಾದಿಗಳನ್ನು ಧರಿಸಲು ಮತಗಟ್ಟೆ ಒಳಗೆ ಅಥವಾ ಅದರ 100 ಮೀಟರ್ ವ್ಯಾಪ್ತಿಯೊಳಗೆ ಯಾರೇ ವ್ಯಕ್ತಿಗೆ ಅವಕಾಶ ನೀಡಬಾರದು. ಏಕೆಂದರೆ ಇದರಿಂದ ಯಾರೇ ಸ್ಪರ್ಧಿಸುತ್ತಿರುವ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡಿದಂತಾಗುತ್ತದೆ.

15.16.2. ರಾಜಕೀಯ ಪಕ್ಷದ ಹೆಸರು, ಚಿಹ್ನೆ ಅಥವಾ ಘೋಷಣಾ ವಾಕ್ಯವನ್ನು ಹೊಂದಿರುವ ಟೋಪಿಗಳು (ಕ್ಯಾಂಪ್‌ಗಳು) ಶಾಲುಗಳು, ಇತ್ಯಾದಿಯಂಥ ಧರಿಸಬಹುದಾದ ವಸ್ತುಗಳನ್ನು ಧರಿಸಿ ಮತದಾನ ದಿನದಂದು ಮತಗಟ್ಟೆಯ ಒಳಗಡೆಗೆ ಪ್ರವೇಶಿಸಲು ಅನುಮತಿಸುವಂತಿಲ್ಲ.

15.16.3. ಆದಾಗ್ಯೂ, ಪೋಲಿಂಗ್ ಏಜೆಂಟರು ತಮ್ಮನ್ನು ತಕ್ಷಣ ಗುರುತಿಸುವ ಉದ್ದೇಶಕ್ಕಾಗಿ ತಾವು ಯಾವ ಅಭ್ಯರ್ಥಿಯ ಪರ ಚುನಾವಣಾ ಏಜೆಂಟರೆಂದು ತೋರಿಸುವ ಸಲುವಾಗಿ ಆ ಅಭ್ಯರ್ಥಿಯ ಹೆಸರನ್ನು ತೋರಿಸುವ ಬ್ಯಾಡ್ಜ್‌ನ್ನು ಧರಿಸಿ ಪ್ರದರ್ಶಿಸತಕ್ಕದ್ದು.

## 15.17. ಮತಗಟ್ಟೆಗಳಲ್ಲಿ ವ್ಯವಸ್ಥೆ

15.17.1. ಪ್ರತಿ ಮತಗಟ್ಟೆಯ ಹೊರಗಡೆ ಮತಗಟ್ಟೆಯ ಪ್ರದೇಶ, ಮತಗಟ್ಟೆಯಲ್ಲಿ ಮತ ಚಲಾಯಿಸಲು ಹಕ್ಕುಳ್ಳ ಮತದಾರರು ಹಾಗೂ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸ್ಪಷ್ಟವಾಗಿ ವಿವರಿಸುವ ಸೂಚನಾ ಪತ್ರವನ್ನು ಎದ್ದು ಕಾಣುವಂತೆ ಪ್ರದರ್ಶಿಸಲಾಗುವುದು.

15.17.2. ಮತದಾರರಿಗೆ ಅವಶ್ಯಕ ನೆರವನ್ನು ಒದಗಿಸುವ ಹಾಗೆ ಮತದಾರರಿಗೆ ಅನುಕೂಲವಾಗುವ ಸ್ಥಳದಲ್ಲಿ ಮತದಾನ ಕೇಂದ್ರದ ಹೊರಗಡೆ ಕುಳಿತುಕೊಳ್ಳುವುದಕ್ಕೆ ಸಾಕಷ್ಟು ಪ್ರತ್ಯೇಕ ಆಸನ ವ್ಯವಸ್ಥೆಗಳೊಂದಿಗೆ ಡಿಇಓರವರಿಂದ ಪ್ರತಿಯೊಂದು ಮತಗಟ್ಟೆಯಲ್ಲಿ ಸಹಾಯ ಕೇಂದ್ರ ("ಹೆಲ್ಪ್ ಡೆಸ್ಕ್") ಕರ್ತವ್ಯಕ್ಕಾಗಿ ನೇಮಕಗೊಂಡ ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಓ) ಸೇವೆಯನ್ನು ಕಲ್ಪಿಸಲಾಗಿದೆ ಎಂಬುದನ್ನು ಪ್ರಿಸೈಡಿಂಗ್ ಅಧಿಕಾರಿಯು ಖಾತ್ರಿಪಡಿಸಿಕೊಳ್ಳಬೇಕು. ಮತಗಟ್ಟೆಗೆ ಮತದಾರರು ಬಂದಾಗ ಅವರ ಗಮನವನ್ನು ಸೆಳೆಯುವ ಹಾಗೆ ಸಾಧ್ಯವಾದಷ್ಟು ಮಟ್ಟಿಗೆ ಮತಗಟ್ಟೆಯ ಮುಖ್ಯ ಪ್ರವೇಶದ್ವಾರಕ್ಕೆ ತೀರಾ ಸನಿಹಕ್ಕೆ ಅವರ ಆಸನ ವ್ಯವಸ್ಥೆಗಳನ್ನು ಮಾಡುವಂತೆ ಶಿಫಾರಸ್ಸು ಮಾಡಿದೆ. ಆತನ ಆಸನದ ಹತ್ತಿರ "ಸಹಾಯ ಕೇಂದ್ರ" (ಊಜಟಠಿ ಆಜಣಞ) – ಮತಗಟ್ಟೆ ಮಟ್ಟದ ಅಧಿಕಾರಿ, ಪಿಎಸ್.ಸಂ. ––––––––––– ಎಂಬ ಪ್ರದರ್ಶನಾ ಫಲಕವನ್ನು ಪ್ರದರ್ಶಿಸಬೇಕು.

**15.18. ಮತಗಟ್ಟೆಯ ಒಳಗಡೆಗೆ ಪ್ರವೇಶಿಸಲು ಅನುಮತಿಸಬೇಕಾದ ವ್ಯಕ್ತಿಗಳು**

15.18.1. ಮತದಾರರಲ್ಲದೇ ಈ ಕೆಳಕಂಡ ವ್ಯಕ್ತಿಗಳನ್ನು ಮಾತ್ರ ಪ್ರಿಸ್ಯೆಡಿಂಗ್ ಅಧಿಕಾರಿಯು ಮತಗಟ್ಟೆಯ ಒಳಗಡೆ ಪ್ರವೇಶಿಸಲು ಅನುಮತಿ ನೀಡಬಹುದು:

ಎ) ಪೋಲಿಂಗ್ ಅಧಿಕಾರಿಗಳು;

ಬಿ) ಪ್ರತಿಯೊಬ್ಬ ಅಭ್ಯರ್ಥಿ, ಆತನ ಚುನಾವಣಾ ಏಜೆಂಟ್ ಮತ್ತು ಏಕಕಾಲಕ್ಕೆ ಪ್ರತಿ ಅಭ್ಯರ್ಥಿಯ ಒಬ್ಬ ಪೋಲಿಂಗ್ ಏಜೆಂಟ್;

ಸಿ) ಚುನಾವಣಾ ಆಯೋಗದಿಂದ ಅಧಿಕಾರ ಪಡೆದ ವ್ಯಕ್ತಿಗಳು;

ಡಿ) ಚುನಾವಣೆಯ ಸಂಬಂಧ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರರು;

**ವಿ.ಸೂ.** "ಚುನಾವಣೆಯ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರರು" ಎಂಬ ಪದಾವಳಿಯಲ್ಲಿ ಪೊಲೀಸ್ ಅಧಿಕಾರಿಗಳು (ಮತಗಟ್ಟೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಪ್ರಿಸ್ಯೆಡಿಂಗ್ ಅಧಿಕಾರಿಯು ಕರೆದ ಹೊರತು), ಕೇಂದ್ರ/ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಚಿವರುಗಳು, ರಾಜ್ಯ ಸಚಿವರುಗಳು ಮತ್ತು ಉಪಸಚಿವರುಗಳು ಸೇರುವುದಿಲ್ಲ.

ಇ) ಆಯೋಗದಿಂದ ನೇಮಕಗೊಂಡ ವೀಕ್ಷಕರು;

ಎಫ್) ಮತದಾರನ ಜೊತೆಯಲ್ಲಿರುವ ಕೈಗೂಸು;

ಜಿ) ಓಡಾಡಲಿಕ್ಕೆ ಆಗದ ಅಥವಾ ಬೇರೆಯವರ ಸಹಾಯವಿಲ್ಲದೆ ಮತ ಚಲಾಯಿಸಲಿಕ್ಕೆ ಆಗದ ಅಂಧ ಅಥವಾ ದುರ್ಬಲ ಮತದಾರರ ಜೊತೆಗಿರುವ ವ್ಯಕ್ತಿ; ಮತ್ತು

ಎಚ್) ಮತದಾರರನ್ನು ಗುರುತಿಸುವ ಅಥವಾ ಅನ್ಯಥಾ ಮತದಾನ ನಡೆಸುವ ಪ್ರಕ್ರಿಯೆಯಲ್ಲಿ ತನಗೆ ನೆರವಾಗುವ ಉದ್ದೇಶಕ್ಕಾಗಿ ಪ್ರಿಸ್ಯೆಡಿಂಗ್ ಅಧಿಕಾರಿಯು ಕಾಲಕಾಲಕ್ಕೆ ಪ್ರವೇಶಿಸಲು ಅನುಮತಿಸಬಹುದಾದಂತಹ ಇತರ ವ್ಯಕ್ತಿಗಳು.

**ವಿ.ಸೂ.** ಮತದಾರ, ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್ ಅಥವಾ ಪೋಲಿಂಗ್ ಏಜೆಂಟ್‌ರ ಜೊತೆ ಯಾರಾದರೂ ಭದ್ರತಾ ಸಿಬ್ಬಂದಿ ಇದ್ದರೆ ಅವರನ್ನು "ಮತಗಟ್ಟೆಯ ಸುತ್ತಮುತ್ತಲಿನ ಪ್ರದೇಶ" ಎಂಬುದಾಗಿ ವಿವರಿಸಲಾದ ಮತಗಟ್ಟೆಗಳ 100 ಮೀಟರ್ ಪರಿಧಿಯೊಳಗೆ ಮತ್ತು ಮತಗಟ್ಟೆಯ ಒಳಗಡೆಗೆ ಪ್ರವೇಶಿಸಲು ಅನುಮತಿ ನೀಡತಕ್ಕದ್ದಲ್ಲ.

**15.19. ಏಜೆಂಟರುಗಳಿಗೆ ಆಸನ ವ್ಯವಸ್ಥೆ**

15.19.1. ಮತದಾರರು ಮತಗಟ್ಟೆಗೆ ಪ್ರವೇಶಿಸಿದಾಗ ಮತದಾರನ ಮುಖ ಪೋಲಿಂಗ್ ಏಜೆಂಟರಿಗೆ ಕಾಣಬಹುದಾದ ಹಾಗೆ ಮತ್ತು ಅಗತ್ಯಬಿದ್ದರೆ ಮತದಾರನ ಗುರುತನ್ನು ಪೋಲಿಂಗ್ ಏಜೆಂಟರಿಗೆ ಆಕ್ಷೇಪಿಸಲು ಸಾಧ್ಯವಾಗಬಹುದಾದ ಹಾಗೆ ಮತಗಟ್ಟೆಗಳ ಒಳಗಡೆ ಪೋಲಿಂಗ್ ಏಜೆಂಟರು ಕುಳಿತಿರುವ ರೀತಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯು, ಮತಗಟ್ಟೆಯಲ್ಲಿ ಪೋಲಿಂಗ್ ಏಜೆಂಟರಿಗೆ ಆಸನದ ವ್ಯವಸ್ಥೆಯನ್ನು ಮಾಡುತ್ತಾರೆ. ಇದರಿಂದ ಪೋಲಿಂಗ್ ಏಜೆಂಟರಿಗೆ ಮತದಾರನು ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗುವುದು ಮತ್ತು ತಮ್ಮ ಮತವನ್ನು ದಾಖಲಿಸಿದ ನಂತರ ಮತಗಟ್ಟೆಯಿಂದ ಹೊರಹೋಗುವುದು ಸೇರಿದಂತೆ ಮತಗಟ್ಟೆ ಒಳಗಿನ ಇಡೀ ಕಾರ್ಯಾಚರಣೆಯನ್ನು ವೀಕ್ಷಿಸಲು ಕೂಡ ಸಾಧ್ಯವಾಗುತ್ತದೆ. ಆದರೆ, ಯಾವುದೇ ಸಂದರ್ಭದಲ್ಲೂ, ಮತದಾರನು ನೈಜವಾಗಿ ತಮ್ಮ ಮತ ದಾಖಲಿಸುವುದನ್ನು ನೋಡಲು ಅವಕಾಶವಿರುವ ಸ್ಥಳದಲ್ಲಿ ಪೋಲಿಂಗ್ ಏಜೆಂಟರಿಗೆ ಆಸನ ವ್ಯವಸ್ಥೆಯನ್ನು ಮಾಡತಕ್ಕದ್ದಲ್ಲ. ಇದರಿಂದ ಮತದಾನದದ ಗೌಪ್ಯತೆಯನ್ನು ಕಾಪಾಡಿಕೊಂಡು ಬರುವ ವಿಷಯದಲ್ಲಿ ರಾಜಿ ಮಾಡಿಕೊಂಡತಾಗುತ್ತದೆ.

15.19.2. ಆಯೋಗದ ಇತ್ತೀಚಿನ ಸೂಚನೆಗಳ ಪ್ರಕಾರ, ಅಭ್ಯರ್ಥಿಗಳ ಪೋಲಿಂಗ್ ಏಜೆಂಟರುಗಳಿಗೆ ಮತಗಟ್ಟೆಯಲ್ಲಿ ಕುಳಿತುಕೊಳ್ಳಲು ಮಾಡುವ ಆಸನ ವ್ಯವಸ್ಥೆಯನ್ನು ಈ ಮುಂದಿನ ಆದ್ಯತಾ ಕ್ರಮಗಳಲ್ಲಿ ಮಾಡತಕ್ಕದ್ದು, ಎಂದರೆ:–

(i) ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು;

(ii) ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು;

(iii) ಮತಕ್ಷೇತ್ರದಲ್ಲಿ ತಮಗೆ ಮೀಸಲಿಟ್ಟ ಚಿಹ್ನೆಗಳನ್ನು ಬಳಸಲು ಅನುಮತಿ ಪಡೆದಿರುವ ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು;

(iv) ನೋಂದಾಯಿತ ಆದರೆ ಮಾನ್ಯತೆ ಪಡೆಯದ ಪಕ್ಷಗಳ ಅಭ್ಯರ್ಥಿಗಳು ಮತ್ತು

(v) ಸ್ವತಂತ್ರ ಅಭ್ಯರ್ಥಿಗಳು.

**15.20. ಮತದಾನ ಪ್ರಾರಂಭಕ್ಕೂ ಮುಂಚಿನ ಪೂರ್ವಭಾವೀ ಸಿದ್ದತೆಗಳು.**

15.20.1. ಮತದಾನ ಪ್ರಾರಂಭಿಸುವುದಕ್ಕೆ ನಿಗದಿಪಡಿಸಿದ ಸಮಯಕ್ಕಿಂತ ಸ ುಮಾರು ಒಂದು ಗಂಟೆ ಮುಂಚಿತವಾಗಿ ಪ್ರಿಸೈಡಿಂಗ್ ಅಧಿಕಾರಿಯು ಮತದಾನ ನಡೆಸುವ ಪೂರ್ವಭಾವಿ ಸಿದ್ಧತೆಗಳ ಪರಿಶೀಲನಾ ಕಾರ್ಯವನ್ನು ಪ್ರಾರಂಭಿಸಬೇಕು. ಪ್ರಿಸೈಡಿಂಗ್ ಅಧಿಕಾರಿಯು –

(ಎ) ಮತಗಟ್ಟೆಯಲ್ಲಿ ಮತಯಂತ್ರದ ಬಳಿ ಹಾಜರಿರುವ ಚುನಾವಣಾ ಏಜೆಂಟರಿಗೆ ಮತ್ತು ಇತರೆ ವ್ಯಕ್ತಿಗಳಿಗೆ ಮತದಾನಕ್ಕೆ ಬಳಸುವ ಇವಿಎಂ ಮತ್ತು ವಿವಿಪ್ಯಾಟ್ ಸಂಪೂರ್ಣವಾಗಿ ಕಾರ್ಯನಿರ್ವಹಣಾ ಸ್ಥಿತಿಯಲ್ಲಿದೆ ಮತ್ತು ಮತಯಂತ್ರಗಳಲ್ಲಿ ಈಗಾಗಲೇ ಯಾವುದೇ ಮತಗಳು ದಾಖಲಾಗಿರುವುದಿಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸುವುದು;

(ಬಿ) ಇವಿಎಂ ಮತ್ತು ವಿವಿಪ್ಯಾಟ್‌ಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಚುನಾವಣಾ ಏಜೆಂಟರಿಗೆ ಮನವರಿಕೆ ಮಾಡಿಕೊಡಲು ಅಣುಕು ಮತದಾನ ನಡೆಸುವುದು;

(ಸಿ) ಅಂತಹ ಅಣಕು ಮತದಾನದ ಅವಧಿಯಲ್ಲಿ ದಾಖಲಿಸಿದ ಮತಗಳನ್ನು ಮತಯಂತ್ರದ ಕಂಟ್ರೋಲ್ ಯೂನಿಟ್‌ನಿಂದ ಕ್ಲಿಯರ್ ಮಾಡುವುದು ಮತ್ತು ಇವಿಎಂ ಮತ್ತು ವಿವಿಪ್ಯಾಟ್‌ನಲ್ಲಿ ಅಣಕು ಮತದಾನಕ್ಕೆ ಸಂಬಂಧಿಸಿದ ಯಾವುದೇ ದತ್ತಾಂಶವು ಇರದ ಹಾಗೆ ವಿವಿಪ್ಯಾಟ್‌ನಿಂದ ಪೇಪರ್ ಸ್ಲಿಪ್‌ಗಳನ್ನು ತೆಗೆದು ಹಾಕುವುದು;

(ಡಿ) ಅಣಕು ಮತದಾನದ ಪ್ರಮಾಣಪತ್ರವನ್ನು ಸಿದ್ಧಪಡಿಸುವುದು ಹಾಗೂ ಅದಕ್ಕೆ ಪೋಲಿಂಗ್ ಏಜೆಂಟರ ಸಹಿಗಳನ್ನು ಪಡೆಯುವುದು.

(ಇ) ಕಂಟ್ರೋಲ್ ಯುನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಕಂಪಾರ್ಟ್‌ಮೆಂಟ್‌ನ ಬಾಗಿಲಿನ ಒಳ ಬಾಗಿಲಿನ ಮೇಲೆ ಗ್ರೀನ್ ಪೇಪರ್ ಸೀಲನ್ನು ಅಳವಡಿಸಲು ಒದಗಿಸಲಾದ ಚೌಕಟ್ಟಿನಲ್ಲಿ ಗ್ರೀನ್ ಪೇಪರ್ ಸೀಲನ್ನು ಅಳವಡಿಸುವುದು;

(ಎಫ್) ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಬಾಗಿಲನ್ನು ದಾರದೊಂದಿಗೆ ಮುಚ್ಚಿ ಅದಕ್ಕೆ ವಿಶೇಷ ಟ್ಯಾಗ್ ಅಳವಡಿಸಿ ಮೊಹರು ಮಾಡುವುದು; ವಿವಿಪ್ಯಾಟ್‌ನ ಡ್ರಾಫ್‌ಬಾಕ್ಸನ್ನು ಕೂಡ ಸಾಮಾನ್ಯ ಅಡ್ರೆಸ್‌ಟ್ಯಾಗನ್ನು ಅಳವಡಿಸುವ ಮೂಲಕ ಮೊಹರು ಮಾಡತಕ್ಕದ್ದು.

(ಜಿ) ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನಿನ ಹೊರ ಕವಚವನ್ನು ದಾರದಿಂದ ಮುಚ್ಚಿ ಅದಕ್ಕೆ ಕಂಟ್ರೋಲ್ ಯೂನಿಟ್‌ನ ಅಡ್ರೆಸ್ ಟ್ಯಾಗ್‌ಅನ್ನು ಅಳವಡಿಸಿ ಮೊಹರು ಮಾಡುವುದು;

(ಹೆಚ್) ರಿಸಲ್ಟ್ ಸೆಕ್ಷನ್‌ಅನ್ನು ಸ್ಟ್ರಿಪ್ ಸಿಲ್‌ನೊಂದಿಗೆ ಹೊರಭಾಗದಿಂದ ಭದ್ರಪಡಿಸಿ ಮೊಹರು ಮಾಡುವುದು;

(ಐ) ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರು ಮತ್ತಿತ್ತರರಿಗೆ, ಗುರುತು ಮಾಡಿದ ಅಧಿಕೃತ ಮತದಾರರ ಪಟ್ಟಿಯು (ಮತ ಚಲಾಯಿಸಲು ಅನುಮತಿಸುವ ಮತದಾರರ ಹೆಸರುಗಳನ್ನು ಗುರುತು ಮಾಡುವುದಕ್ಕಾಗಿ ಬಳಸಬೇಕಾದ ಮತದಾರರ ಪಟ್ಟಿಯ ಪ್ರತಿ) ಅಂಚೆ ಮತಪತ್ರಗಳನ್ನು ಮತ್ತು ಚುನಾವಣಾ ಕರ್ತವ್ಯ ಪ್ರಮಾಣಪತ್ರಗಳನ್ನು

ನೀಡುವುದಕ್ಕಾಗಿ ಮಾಡಲಾದ ಷರಾಗಳನ್ನು ಹೊರತುಪಡಿಸಿ ಇತರೇ ಯಾವುದೇ ಷರಾಗಳನ್ನು ಒಳಗೊಂಡಿರುವುದಿಲ್ಲ; ಮತ್ತು ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ಮುಂಚೆ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿದ ನಂತರ ತಯಾರಿಸಲಾದ ಕರಡುಪಟ್ಟಿಗೆ ಹಾಗೂ ಪೂರಕ ಪಟ್ಟಿಗೆ ಅನುಬಂಧಿಸಲಾದ ಪೂರಕ ಪಟ್ಟಿ ಯಾವುದಾದರೂ ಇದ್ದಲ್ಲಿ ಅದರಲ್ಲಿ ಕಂಡುಬರುವ ಮತದಾರರ ಪಟ್ಟಿಯಿಂದ ಕೈಬಿಡುವ ಮತದಾರರ ಹೆಸರಗಳನ್ನು ಭಾವಚಿತ್ರವಿರುವ ಮತದಾರರ ಪಟ್ಟಿಯ ಸಂದರ್ಭದಲ್ಲಿ ಸಂಬಂಧಪಟ್ಟ ಮತದಾರರ ವಿವರದ ಅಂಕಣದ ಮೇಲೆ ಬರೆಯಲಾದ "Deleted" (ಕೈಬಿಡಲಾಗಿದೆ) ಎಂಬ ಪದದ ಮೇಲೆ ಉದ್ದಕ್ಕೂ ಗೆರೆ ಎಳೆದು ಹೊಡೆದು ಹಾಕುವ ಮೂಲಕ ಮರು ಮುದ್ರಿತ ಮೂಲ ಮತದಾರರ ಪಟ್ಟಿಯಲ್ಲಿ ತೋರಿಸಲಾಗಿದೆ ಎಂಬುದನ್ನು ಪ್ರದರ್ಶಿಸತಕ್ಕದ್ದು;

(ಮತದಾರರ ಪಟ್ಟಿಗೆ ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳಲ್ಲಿ ಒಬ್ಬರು ಮತ್ತು ಇನ್ನೂ ಒಬ್ಬರು ಅಧಿಕಾರಿ ಯುಕ್ತವಾಗಿ ಸಹಿ ಮಾಡುವುದು) ಮತ್ತು

(ಜೆ) ಮತದಾರರ ರಿಜಿಸ್ಟರ್ (ನಮೂನೆ–17ಎ) ಈಗಾಗಲೇ ಯಾರೇ ಮತದಾರನಿಗೆ ಸಂಬಂಧಿಸಿದ ಯಾವುದೇ ನಮೂದನ್ನು ಒಳಗೊಂಡಿರುವುದಿಲ್ಲ ಎಂಬುದನ್ನು ಅಲ್ಲಿ ಹಾಜರಿರುವ ಪೋಲಿಂಗ್ ಏಜೆಂಟ್‌ರು ಮತ್ತಿತ್ತರರಿಗೆ ಪ್ರದರ್ಶಿಸಿ ತೋರಿಸುವುದು.

**15.21. ಮತದಾನ ಪ್ರಾರಂಭಿಸುವುದಕ್ಕೆ ಮುಂಚೆ ಇವಿಎಂ ಮತ್ತು ವಿವಿಪ್ಯಾಟನ್ನು ಸಿದ್ಧಪಡಿಸುವುದು.**

15.21.1. ಮತದಾನ ನಡೆಸುವುದಕ್ಕಾಗಿ ಮತಗಟ್ಟೆಯಲ್ಲಿ ಇವಿಎಂ ಮತ್ತು ವಿವಿಪ್ಯಾಟನ್ನು ಬಳಸುವುದಕ್ಕೂ ಮುನ್ನ ಅಭ್ಯರ್ಥಿಗಳು/ ಅವರ ಏಜೆಂಟರ ಉಪಸ್ಥಿತಿಯಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವ ಮೂಲಕ, ಅದರ ಕಂಟ್ರೋಲ್ ಯೂನಿಟನ್ನು ಮತ್ತಷ್ಟು ಸಿದ್ಧಪಡಿಸಬೇಕಾದ ಅಗತ್ಯವಿದೆ. ಪ್ರಿಸೈಡಿಂಗ್ ಅಧಿಕಾರಿಯು ಮತದಾನ ಪ್ರಾರಂಭಿಸುವುದಕ್ಕೆ ನಿಗದಿಪಡಿಸಿದ ಸಮಯಕ್ಕಿಂತ ಸುಮಾರು ಒಂದು ಗಂಟೆ ಮುಂಚಿತವಾಗಿ ಸಿದ್ಧತೆಯನ್ನು ಪ್ರಾರಂಭಿಸತಕ್ಕದ್ದು. ಯಾರೇ ಪೋಲಿಂಗ್ ಏಜೆಂಟ್ ಹಾಜರಿರದಿದ್ದ ಪಕ್ಷದಲ್ಲಿ ಪೋಲಿಂಗ್ ಏಜೆಂಟ್‌ನ ಆಗಮನದ ನಿರೀಕ್ಷೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಸಿದ್ಧತೆಯನ್ನು ಮುಂದೂಡುವಂತಿಲ್ಲ ಇಲ್ಲವೇ, ಯಾರೇ ಪೋಲಿಂಗ್ ಏಜೆಂಟ್‌ನು ತಡವಾಗಿ ಬಂದ ಪಕ್ಷದಲ್ಲಿ ಅವನಿಗಾಗಿ ಸಿದ್ಧತೆಗಳನ್ನು ಮತ್ತೊಮ್ಮೆ ಪ್ರಾರಂಭಿಸುವಂತಿಲ್ಲ. ತಡವಾಗಿ ಬಂದ ಯಾರೇ ಪೋಲಿಂಗ್ ಏಜೆಂಟನು ಸಿದ್ಧತೆಯ ತರುವಾಯದ ಹಂತಗಳನ್ನು ವೀಕ್ಷಿಸಲು ಮಾತ್ರ ಸಾಧ್ಯವಾಗುತ್ತದೆ.

**15.22. ಬ್ಯಾಲೆಟಿಂಗ್ ಯೂನಿಟ್‌ನಲ್ಲಿನ ಸಿದ್ಧತೆಗಳು**

15.22.1. ಬ್ಯಾಲೆಟಿಂಗ್ ಯೂನಿಟನ್ನು ಈಗಾಗಲೇ ರಿಟರ್ನಿಂಗ್ ಅಧಿಕಾರಿಯವರ ಮಟ್ಟದಲ್ಲಿ ಸರ್ವ ರೀತಿಯಲ್ಲೂ ಯುಕ್ತವಾಗಿ ಸಿದ್ಧಪಡಿಸಲಾಗಿರುತ್ತದೆ. ಹಾಗಾಗಿ, ಪ್ರಿಸೈಡಿಂಗ್ ಅಧಿಕಾರಿಯು ಬ್ಯಾಲೆಟ್ ಯೂನಿಟ್‌ನ ಪರಸ್ಪರ ಸಂಪರ್ಕ ಕಲ್ಪಿಸುವ ಕೇಬಲ್ ಅನ್ನು ವಿವಿಪ್ಯಾಟ್‌ನ ಒಳಗಡೆಗೆ ಎಚ್ಚರಿಕೆಯಿಂದ ಪ್ಲಗ್ ಮಾಡಬೇಕಾಗುತ್ತದೆ ಎಂಬುದನ್ನು ಹೊರತುಪಡಿಸಿ ಮತದಾನದ ದಿನದಂದು ಮತಗಟ್ಟೆಯಲ್ಲಿ ಬೇರೆ ಏನನ್ನು ಮಾಡುವ ಅಗತ್ಯ ಇರುವುದಿಲ್ಲ.

15.22.2. ಮತಗಟ್ಟೆಯಲ್ಲಿ ಒಂದಕ್ಕಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸಬೇಕಾದ ಸಂದರ್ಭದಲ್ಲಿ, ಈ ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಸರಿಯಾದ ಅನುಕ್ರಮದಲ್ಲಿ ಪರಸ್ಪರ ಸಂಪರ್ಕ ಕಲ್ಪಿಸಬೇಕು. ಅಂತಹ ಸಂದರ್ಭದಲ್ಲಿ, ಮೊದಲನೆಯ ಬ್ಯಾಲೆಟಿಂಗ್ ಯೂನಿಟ್‌ನ್ನು ಮಾತ್ರ ಕಂಟ್ರೋಲ್ ಯೂನಿಟ್‌ನೊಂದಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್ ಅನ್ನು ವಿವಿಪ್ಯಾಟ್ ಮತ್ತು ಬ್ಯಾಲೆಟಿಂಗ್ ಯೂನಿಟ್‌ಗಳೊಂದಿಗೆ ಸರಿಯಾಗಿ ಸಂಪರ್ಕ ಕಲ್ಪಿಸಿದ್ದಾರೆ ಎಂಬ ಬಗ್ಗೆ ಪೋಲಿಂಗ್ ಏಜೆಂಟರು ಸ್ವತಃ ಮನವರಿಕೆ ಮಾಡಿಕೊಳ್ಳಬಹುದು. ಇಂತಹ ಪರಸ್ಪರ ಸಂಪರ್ಕ ಕಲ್ಪಿಸುವ ಕ್ರಿಯೆಯಲ್ಲಿ ಯಾವುದೇ ಲೋಪವಿದ್ದ ಪಕ್ಷದಲ್ಲಿ, ಕಂಟ್ರೋಲ್ ಯೂನಿಟ್‌ನಲ್ಲಿನ ಡಿಸ್‌ಪ್ಲೇ ಪ್ಯಾನಲ್‌ಗಳ ಮೇಲೆ ಬರುವುದರಿಂದ ಇದನ್ನು ತಕ್ಷಣವೇ ಗಮನಿಸಲಾಗುತ್ತದೆ.

15.22.3. ಪೋಲಿಂಗ್ ಏಜೆಂಟರೂ ಕೂಡ –

(i) ಬ್ಯಾಲೆಟ್ ಪೇಪರನ್ನು (ಮತಪತ್ರ), ಬ್ಯಾಲೆಟ್ ಪೇಪರ್ ಪರದೆಯ ಕೆಳಭಾಗದ ಬ್ಯಾಲೆಟ್ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಸರಿಯಾಗಿ ಜೋಡಿಸಲಾಗಿದೆಯೇ; ಮತ್ತು

(ii) ಬ್ಯಾಲೆಟಿಂಗ್ ಯೂನಿಟ್‌ನ ಬಲಭಾಗದಲ್ಲಿರುವ ಮೇಲ್ಭಾಗ ಮತ್ತು ತಳಭಾಗದಲ್ಲಿ ರಿಟರ್ನಿಂಗ್ ಅಧಿಕಾರಿಯು ಹಾಕಿರುವ ಎರಡು ಸೀಲ್‌ಗಳು ಸರಿಯಾಗಿವೆಯೇ;

(iii) ಯಾರೇ ಅಭ್ಯರ್ಥಿಯ ಬಟನ್ ಅಥವಾ ಅಭ್ಯರ್ಥಿಯ ಹೆಸರು ಅಥವಾ ಚಿಹ್ನೆಯು ಸೀಲ್‌ನಿಂದ ಮುಚ್ಚಿಕೊಳ್ಳದೇ ಇರುವ ರೀತಿಯಲ್ಲಿ ಬಿಯುನ ಅತ್ಯಂತ ಕೆಳಭಾಗದಲ್ಲಿ ಪಿಂಕ್ ಪೇಪರ್ ಸೀಲ್ ಅನ್ನು ಜೋಡಿಸಲಾಗಿದೆಯೇ;

(iv) ವಿವಿಪ್ಯಾಟ್ ಯೂನಿಟ್‌ನಿಂದ ಕಂಟ್ರೋಲ್ ಯೂನಿಟ್‌ಗೆ ಸಂಪರ್ಕಕಲ್ಪಿಸುವ ಕೇಬಲ್, ಅದು ಹಾದು ಹೋಗಿರುವಷ್ಟೂ ಇಡೀ ಉದ್ದವು ಪೋಲಿಂಗ್ ಏಜೆಂಟರುಗಳಿಗೆ ಕಾಣಿಸುವಂತಿವೆಯೇ;

(v) ಬಿಯು ಮೇಲಿನ ಸ್ಲೈಡ್ ಸ್ವಿಚ್ (ಅಥವಾ ಎಂ3 ಇವಿಎಂನಲ್ಲಿನ ಥಂಬ್ ವೀಲ್ ಸ್ವಿಚ್) ಅನ್ನು ಸರಿಯಾಗಿ ಜೋಡಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿ – ಖಚಿತಪಡಿಸಿಕೊಳ್ಳಬೇಕು.

**15.23. ಕಂಟ್ರೋಲ್ ಯೂನಿಟ್‌ಅನ್ನು ಸಿದ್ಧಗೊಳಿಸುವುದು**

15.23.1. ಕಂಟ್ರೋಲ್ ಯೂನಿಟ್‌ನ **"ಕ್ಯಾಂಡಿಡೇಟ್ ಸೆಟ್ ಸೆಕ್ಷನ್"** ಮೇಲೆ ರಿರ್ಟನಿಂಗ್ ಅಧಿಕಾರಿಯು ಹಾಕಿರುವ ಸೀಲು ಸರಿಯಾಗಿದೆ ಎಂಬುದನ್ನು ಪರಿಶೀಲಿಸಲು ಪೋಲಿಂಗ್ ಏಜೆಂಟರಿಗೆ ಅವಕಾಶ ಮಾಡಿಕೊಡಬೇಕು. ಸಂಬಂಧಪಟ್ಟ ಲೋಕಸಭೆ/ ವಿಧಾನಸಭಾ ಮತಕ್ಷೇತ್ರದಲ್ಲಿನ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಗೆ (ನೋಟಾ ಸೇರಿದಂತೆ) ಅನುಗುಣವಾಗಿ ಕಂಟ್ರೋಲ್ ಯೂನಿಟ್‌ನಲ್ಲಿ ಅಭ್ಯರ್ಥಿಗಳ ಸಂಖ್ಯೆಯನ್ನು ಸೆಟ್ ಮಾಡಿದ ನಂತರ ರಿರ್ಟನಿಂಗ್ ಅಧಿಕಾರಿಯಿಂದ ಈ ಸೀಲನ್ನು ಹಾಕಲಾಗಿರುತ್ತದೆ.

15.23.2. ನಂತರ ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟನಲ್ಲಿ ಈ ಕೆಳಕಂಡ ಸಿದ್ಧತೆಯನ್ನು ಮಾಡಲಿದ್ದಾರೆ:–

i. ವಿವಿಪ್ಯಾಟ್‌ನೊಂದಿಗೆ ಕಂಟ್ರೋಲ್ ಯೂನಿಟ್‌ನ ಸಂಪರ್ಕ ಕಲ್ಪಿಸುವುದು: ಪ್ರಿಸೈಡಿಂಗ್ ಅಧಿಕಾರಿಯು, ಬ್ಯಾಲೆಟಿಂಗ್ ಯೂನಿಟ್‌ನ ಅಥವಾ ಒಂದಕ್ಕಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಉಪಯೋಗಿಸುವಲ್ಲಿ ಮೊದಲನೆಯ ಬ್ಯಾಲೆಟಿಂಗ್ ಯೂನಿಟ್‌ನ ಪರಸ್ಪರ ಅಂತರ್ ಸಂಪರ್ಕ ಕಲ್ಪಿಸುವ ಕೇಬಲ್‌ನ್ನು ವಿವಿಪ್ಯಾಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟ್‌ನಲ್ಲಿ ಈ ಉದ್ದೇಶಕ್ಕಾಗಿ ಒದಗಿಸಲಾದ ಸಾಕೆಟ್ ಒಳಗಡೆಗೆ ತೂರಿಸಬೇಕು; ಕಂಟ್ರೋಲ್ ಯೂನಿಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟಿನಲ್ಲಿ ಈ ಉದ್ದೇಶಕ್ಕಾಗಿ ಒದಗಿಸಲಾದ ಸಾಕೆಟ್ ಒಳಗೆ ವಿವಿಪ್ಯಾಟ್‌ನ ಪರಸ್ಪರ ಸಂಪರ್ಕ ಕಲ್ಪಿಸುವ ಕೇಬಲ್‌ನ್ನು ಸೇರಿಸಬೇಕು.

ii. 'ಪವರ್' ಸ್ವಿಚ್‌ನ್ನು 'ಆನ್' ಸ್ಥಿತಿಗೆ ತರುವುದು: ನಂತರ ಕಂಟ್ರೋಲ್ ಯೂನಿಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟಿನಲ್ಲಿ ಒದಗಿಸಲಾದ 'ಪವರ್' ಸ್ವಿಚ್ಚನ್ನು 'ಆನ್' ಸ್ಥಿತಿಗೆ ತರಬೇಕು. ಇದರಿಂದ ಬೀಪ್ ಶಬ್ಧವು ಹೊರಹೊಮ್ಮುತ್ತದೆ ಮತ್ತು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಸೆಕ್ಷನ್‌ನಲ್ಲಿ 'ಆನ್' ದೀಪವು ಹಸಿರು ಬಣ್ಣದಲ್ಲಿ ಬೆಳಗುತ್ತದೆ.

ಮೇಲ್ಕಂಡ (i) ಮತ್ತು (ii)ರಲ್ಲಿ ಹೇಳಲಾದ ಪ್ರಕಾರ್ಯಗಳನ್ನು ನಿರ್ವಹಿಸಿದ ನಂತರ ಹಿಂಭಾಗದ ಕಂಪಾರ್ಟ್‌ಮೆಂಟನ್ನು ಮುಚ್ಚುವುದು. ಕಂಟ್ರೋಲ್ ಯೂನಿಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟನ್ನು ಭದ್ರವಾಗಿ ಮುಚ್ಚುವ ಉದ್ದೇಶಕ್ಕಾಗಿ, ಒಂದು ಸಣ್ಣ ತಂತಿಯ ತುಂಡನ್ನು ಈ ಉದ್ದೇಶಕ್ಕಾಗಿ ಒದಗಿಸಲಾದ ತುಂಡನ್ನು ಎರಡು ರಂಧ್ರಗಳ ಮೂಲಕ ತೂರಿಸಿ ತಂತಿಯ ತುದಿಗಳನ್ನು ಜೋಡಿಸಿ ಕೆಲವು ಸುತ್ತುಗಳನ್ನು ಸುತ್ತಿ ಭದ್ರಪಡಿಸಬಹುದು. ಆದಾಗ್ಯೂ, 'ಪವರ್'ಸ್ವಿಚ್‌ನ್ನು ಆಫ್‌ಸ್ಥಿತಿಗೆ ತಂದು ವಿವಿಪ್ಯಾಟನ್ನು ಸಂಪರ್ಕ ತಪ್ಪಿಸುವುದಕ್ಕಾಗಿ ಮತದಾನದ ನಂತರ ಮತ್ತೊಮ್ಮೆ ತೆರೆಯಬೇಕಾಗಿರುವುದರಿಂದ ಹಿಂಬದಿಯ ಕಂಪಾರ್ಟ್‌ಮೆಂಟನ್ನು ಮೊಹರು ಮಾಡತಕ್ಕದ್ದಲ್ಲ.

**15.24. ವಿವಿಪ್ಯಾಟ್‌ನಲ್ಲಿನ ಸಿದ್ಧತೆಗಳು:**


15.24.1. ಪ್ರಿಸೈಡಿಂಗ್ ಅಧಿಕಾರಿಯು ಒಂದು ಬ್ಯಾಲೆಟಿಂಗ್ ಯೂನಿಟ್‌ನ ಅಥವಾ ಒಂದಕ್ಕಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಉಪಯೋಗಿಸುವಲ್ಲಿ ಮೊದಲನೆಯ ಬ್ಯಾಲೆಟಿಂಗ್ ಯೂನಿಟ್‌ನ ಪರಸ್ಪರ ಸಂಪರ್ಕ ಕಲ್ಪಿಸುವ ಕೇಬಲ್‌ನ್ನು ವಿವಿಪ್ಯಾಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟಿನಲ್ಲಿ ಈ ಉದ್ದೇಶಕ್ಕಾಗಿ ಒದಗಿಸಲಾದ ಸಾಕೆಟ್ ಒಳಗಡೆಗೆ ತೂರಿಸಬೇಕು. ಕಂಟ್ರೋಲ್ ಯೂನಿಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟ್‌ನಲ್ಲಿ ಈ ಉದ್ದೇಶಕ್ಕಾಗಿ ಒದಗಿಸಲಾದ ಸಾಕೇಟ್ ಒಳಗೆ ವಿವಿಪ್ಯಾಟ್‌ನ ಸಂಪರ್ಕ ಕಲ್ಪಿಸುವ ಕೇಬಲನ್ನು ಸೇರಿಸಬೇಕು. ಎಂ2 ವಿವಿಪ್ಯಾಟ್ ಆಗಿದ್ದ ಸಂದರ್ಭದಲ್ಲಿ, ವಿಎಸ್‌ಡಿಯುನ ಪರಸ್ಪರ ಸಂಪರ್ಕ ಕಲ್ಪಿಸುವ ಕೇಬಲನ್ನು ವಿವಿಪ್ಯಾಟನ ಹಿಂಬದಿಯ ಕಂಪಾರ್ಟ್‌ಮೆಂಟಿನಲ್ಲಿ ಈ ಉದ್ದೇಶಕ್ಕಾಗಿ ಒದಗಿಸಲಾದ ಸಾಕೆಟ್ ಒಳಗಡೆಗೆ ತೂರಿಸಬೇಕು.

**15.25. ಇವಿಎಂ ಮತ್ತು ವಿವಿಪ್ಯಾಟ್‌ನಲ್ಲಿ ದಾಖಲಾದ ಮತಗಳನ್ನು ಪ್ರತ್ಯಕ್ಷವಾಗಿ ತೋರಿಸುವುದು**

15.25.1. ಮತದಾನವನ್ನು ಪ್ರಾರಂಭಿಸುವ ಮುಂಚೆ, ಇವಿಎಂ ಮತ್ತು ವಿವಿಪ್ಯಾಟ್ ಪೂರ್ಣ ಕಾರ್ಯನಿರ್ವಹಣಾ ಸ್ಥಿತಿಯಲ್ಲಿದೆಯೆಂಬುದನ್ನು ಮತ್ತು ಯಂತ್ರದಲ್ಲಿ ಯಾವುದೇ ಮತಗಳನ್ನು ಈಗಾಗಲೇ ದಾಖಲು ಮಾಡಿಲ್ಲವೆಂಬುದನ್ನು ಪ್ರಿಸೈಡಿಂಗ್ ಅಧಿಕಾರಿಯು ಮನವರಿಕೆ ಮಾಡಿಕೊಳ್ಳುವುದಲ್ಲದೆ, ಅಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರಿಗೆ ಸಹ ಆ ಬಗ್ಗೆ ಮನವರಿಕೆ ಮಾಡಿಕೊಡತಕ್ಕದ್ದು. ಹಾಗೆ ಮನವರಿಕೆ ಮಾಡಿಕೊಳ್ಳುವುದಕ್ಕಾಗಿ, ಪ್ರಿಸೈಡಿಂಗ್ ಅಧಿಕಾರಿಯು ಮೊದಲು ಅಲ್ಲಿ ಹಾಜರಿರುವ ಎಲ್ಲರಿಗೂ 'ಕ್ಲಿಯರ್' ಬಟನ್ ಒತ್ತಿ ಎಲ್ಲಾ ಕೌಂಟ್‌ಗಳನ್ನು ಸೊನ್ನೆ

ಸಂಖ್ಯೆಗೆ ಸೆಟ್ ಮಾಡಲಾಗಿದೆ ಎಂಬುದನ್ನು ತೋರಿಸತಕ್ಕದ್ದು. 'ಕ್ಲಿಯರ್' ಬಟನನ್ನು ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನಲ್ಲಿನ ಬಲ ಕಂಪಾರ್ಟ್‌ಮೆಂಟ್‌ನಲ್ಲಿ ಒದಗಿಸಲಾಗಿರುತ್ತದೆ. ಈ ಕಂಪಾರ್ಟ್‌ಮೆಂಟ್ ಒಳಬಾಗಿಲು ಮತ್ತು ಹೊರ ಕವಚದ ಹೊದಿಕೆಯನ್ನು ಹೊಂದಿರುತ್ತದೆ. ಒಳಬಾಗಿಲು 'ಕ್ಲಿಯರ್' ಬಟನ್, 'ರಿಸಲ್ಟ್' ಬಟನ್ ಮತ್ತು 'ಪ್ರಿಂಟ್' ಬಟನ್‌ಗಳನ್ನು ಒಳಗೊಂಡಿರುತ್ತದೆ. ಇದಕ್ಕೆ ಹೊಂದಿಕೊಂಡಂತೆ, 'ಕ್ಲೋಸ್' ಬಟನ್ ಮತ್ತೊಂದು ಆವೃತ ಭಾಗದಲ್ಲಿ ಇರುತ್ತದೆ. 'ಕ್ಲೋಸ್' ಬಟನ್ ಅನ್ನು ಒಳಗೊಂಡಿರುವ ಈ ಭಾಗವು – 'ರಿಸಲ್ಟ್ ಸೆಕ್ಷನ್'ನ ಬೇರೆ ಕವಚವನ್ನು ಮುಚ್ಚಿದಾಗ ಮುಚ್ಚಿಕೊಳ್ಳುತ್ತದೆ. ಹೊರ ಕವಚವನ್ನು ಒಳಬಾಗಿಲಿನ ಮೇಲೆ ಒದಗಿಸಲಾಗಿದ್ದು, ಇದು 'ಕ್ಲೋಸ್' ಬಟನ್ ಇರುವ ಕಂಪಾರ್ಟ್‌ಮೆಂಟ್‌ಗೂ ಸಹ ಹೊದಿಕೆಯಾಗಿರುತ್ತದೆ. 'ಕ್ಲಿಯರ್' ಬಟನನ್ನು ತಲುಪುವುದಕ್ಕಾಗಿ, ನೀವು ಮೊದಲು ಎಡಗಡೆ ಒದಗಿಸಲಾಗಿರುವ ಲ್ಯಾಚನ್ನು ಸ್ವಲ್ಪ ಒಳ ಭಾಗಕ್ಕೆ ಒತ್ತುವ ಮೂಲಕ ಹೊರ ಕವಚವನ್ನು ತೆರೆಯಬೇಕು. ಆ ತರುವಾಯ, 'ರಿಸಲ್ಟ್' ಹಾಗೂ 'ಪ್ರಿಂಟ್' ಬಟನ್‌ಗಳ ಮೇಲೆ ಇರುವ ಎರಡು ಕಿಂಡಿಗಳ ಮುಖಾಂತರ ಹೆಬ್ಬೆರಳು ಹಾಗೂ ಒಂದು ಬೆರಳನ್ನು ತೂರಿಸಿ ನಂತರ ಒಳಭಾಗದಲ್ಲಿರುವ ಲ್ಯಾಚ್‌ಗಳನ್ನು ಏಕಕಾಲದಲ್ಲಿ ಸ್ವಲ್ಪ ಒಳಮುಖವಾಗಿ ಒತ್ತುವ ಮೂಲಕ ಒಳಗಿನ ಬಾಗಿಲನ್ನು ತೆರೆಯಬಹುದು. ಯಾವುದೇ ಕಾರಣದಿಂದಲೂ ಮೇಲೆ ವಿವರಿಸಲಾದಂಥ ರೀತಿಯಲ್ಲಿ ಲ್ಯಾಚನ್ನು ರಿಲೀಸ್ ಮಾಡದೆ ಬಲಪ್ರಯೋಗಿಸಿ ಈ ಒಳಬಾಗಿಲನ್ನು ತೆರೆಯಕೂಡದು. ಬಲ ಪ್ರಯೋಗ ಮಾಡಿದಲ್ಲಿ ಅತ್ಯಂತ ಮಹತ್ವವಾದ ಈ ಕಂಪಾರ್ಟ್‌ಮೆಂಟ್ ಹಾನಿಗೊಳಗಾಗುವುದು. 'ಕ್ಲಿಯರ್' ಬಟನ್ ಒತ್ತಿದಾಗ ಕಂಟ್ರೋಲ್‌ಯೂನಿಟ್‌ನಲ್ಲಿರುವ ಡಿಸ್‌ಪ್ಲೇ ಪ್ಯಾನಲ್‌ಗಳು ಈ ಕೆಳಕಂಡ ಮಾಹಿತಿಯನ್ನು ಅನುಕ್ರಮವಾಗಿ ಪ್ರದರ್ಶಿಸಲಾರಂಭಿಸುತ್ತವೆ (ಪ್ರತಿಯೊಂದು ಸೂಚನೆಯ ನಂತರ ಬೀಪ್ ಶಬ್ಧ ಹೊರಹೊಮ್ಮುತ್ತದೆ).

**ಸೂಚನೆ:** 'ಕ್ಲಿಯರ್' ಬಟನ್ ಒತ್ತಿದಾಗ ಡಿಸ್‌ಪ್ಲೇ ಪ್ಯಾನಲ್‌ಗಳು ಮೇಲೆ ಸೂಚಿಸಿದಂತೆ ಮಾಹಿತಿಯನ್ನು ಪ್ರದರ್ಶಿಸದಿದ್ದರೆ, ಅದರ ಅರ್ಥ ಯಂತ್ರಗಳಲ್ಲಿ ದಾಖಲಾದ ಮತಗಳನ್ನು ಅಳಿಸಿ ಹಾಕುವುದಕ್ಕೆ ಅಗತ್ಯವಾದ ಈ ಹಿಂದಿನ ಕೆಲವು ಕಾರ್ಯಾಚರಣೆಗಳನ್ನು ನಿರ್ವಹಿಸಿರುವುದಿಲ್ಲ ಎಂಬುದಾಗಿರುತ್ತದೆ. ಯಂತ್ರದಲ್ಲಿರುವ ದತ್ತಾಂಶವನ್ನು ಅಳಿಸಿ



ಹಾಕಲು ಪ್ರಿಸೈಡಿಂಗ್ ಅಧಿಕಾರಿಯು ಬ್ಯಾಲೆಟಿಂಗ್ ಯೂನಿಟ್, ವಿವಿಪ್ಯಾಟ್ ಮತ್ತು ಕಂಟ್ರೋಲ್ ಯೂನಿಟ್‌ಗಳನ್ನು ಸರಿಯಾಗಿ ಜೋಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ನಂತರ ಅವರು ಕ್ಲೋಸ್ ಬಟನ್‌ಅನ್ನು ಒತ್ತಿ ತರುವಾಯ ರಿಸಲ್ಟ್ ಬಟನ್‌ಅನ್ನು ಒತ್ತಬೇಕು. ಈಗ ಅವರು ಕ್ಲಿಯರ್ ಬಟನ್‌ಅನ್ನು ಒತ್ತಿದಾಗ ಡಿಸ್‌ಪ್ಲೇ ಪ್ಯಾನಲ್‌ಗಳು ಮೇಲೆ ಸೂಚಿಸಲಾದಂತೆ ಮಾಹಿತಿಯನ್ನು ಪ್ರದರ್ಶಿಸಲಾರಂಭಿಸುತ್ತವೆ. ಡಿಸ್‌ಪ್ಲೇ ಪ್ಯಾನಲ್‌ಗಳಲ್ಲಿ ಪ್ರದರ್ಶನವಾಗುವ ಮೇಲ್ಕಂಡ ಮಾಹಿತಿಯಿಂದ ಮತಯಂತ್ರದಲ್ಲಿ ಈಗಾಗಲೇ ಯಾವುದೇ ಮತಗಳು ದಾಖಲಾಗಿರುವುದಿಲ್ಲವೆಂಬುದನ್ನು ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರು ಮನವರಿಕೆ ಮಾಡಿಕೊಡತಕ್ಕದ್ದು. ಪ್ರಿಸೈಡಿಂಗ್ ಅಧಿಕಾರಿಯು, ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್ ಖಾಲಿ ಇದೆ ಎಂಬುದನ್ನು ಸಹ ತೋರಿಸತಕ್ಕದ್ದು.

**15.26. ಅಣುಕು ಮತದಾನ**

15.26.1 ಅಣಕು ಮತದಾನ ಪ್ರಾರಂಭವಾಗುವುದಕ್ಕೂ ಮುಂಚೆ, ಪ್ರಿಸೈಡಿಂಗ್ ಅಧಿಕಾರಿಯು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಬ್ಯಾಲೆಟಿಂಗ್ ಯೂನಿಟ್(ಗಳು) ಮತ್ತು ವಿವಿಪ್ಯಾಟನ್ನು ಇಡಬೇಕು. ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಬಿಯು(BU) ಮತ್ತು ವಿವಿಪ್ಯಾಟನ್ನು ಇಡುವಾಗ, ಮತದಾನದ ಗೌಪ್ಯತೆಯ ವಿಚಾರದಲ್ಲಿ ಯಾವುದೇ ರಾಜಿಮಾಡಿಕೊಂಡಿಲ್ಲವೆಂಬುದನ್ನು ತಪ್ಪದೆ ಖಚಿತಪಡಿಸಿಕೊಳ್ಳಬೇಕು. ಯಾವುದೇ ಮತಗಳು ಮತದಾನ ಯಂತ್ರದಲ್ಲಿ ಈಗಾಗಲೇ ದಾಖಲಾಗಿಲ್ಲವೆಂದು ಮೇಲ್ಕಂಡಂತೆ ಪ್ರತ್ಯಕ್ಷವಾಗಿ ತೋರಿಸಿದ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ಪ್ರತಿಯೊಬ್ಬ ಅಭ್ಯರ್ಥಿಗೆ ಯಾದೃಚ್ಛಿಕವಾಗಿ ಕನಿಷ್ಠ ಪಕ್ಷ 50 ಮತಗಳನ್ನು ದಾಖಲು ಮಾಡುವ ಮೂಲಕ ಅಣಕು ಮತದಾನವನ್ನು ನಡೆಸತಕ್ಕದ್ದು. ಆ ಉದ್ದೇಶಕ್ಕಾಗಿ ಈ ಕೆಳಕಂಡ ಕಾರ್ಯಾಚರಣೆಗಳನ್ನು ನಿರ್ವಹಿಸತಕ್ಕದ್ದು:–

ಎ. ಕಂಟ್ರೋಲ್ ಯೂನಿಟ್‌ನ ಬ್ಯಾಲಟ್ ಸೆಕ್ಷನ್‌ನಲ್ಲಿನ 'ಬ್ಯಾಲಟ್' ಬಟನ್ ಒತ್ತಬೇಕು. 'ಬ್ಯಾಲಟ್' ಬಟನ್ ಒತ್ತಿದ ತರುವಾಯ ಡಿಸ್‌ಪ್ಲೇ ಸೆಕ್ಷನ್‌ನಲ್ಲಿ 'ಬ್ಯುಸಿ' ಲ್ಯಾಂಪು ಕೆಂಪಗೆ ಬೆಳಗಲಾರಂಭಿಸುತ್ತದೆ. ಅದೇ ಕಾಲದಲ್ಲಿ ಬ್ಯಾಲೆಟಿಂಗ್ ಯೂನಿಟ್‌ನಲ್ಲಿನ 'ರೆಡಿ' ಲ್ಯಾಂಪ್ ಸಹ ಹಸಿರಾಗಿ ಬೆಳಗಲಾರಂಭಿಸುತ್ತದೆ.

ಬಿ. ನಂತರ, ಪ್ರಿಸೈಡಿಂಗ್ ಅಧಿಕಾರಿಯು ಬ್ಯಾಲೆಟಿಂಗ್ ಯೂನಿಟ್ ಮೇಲೆ ಇರುವ ಯಾರೇ ಅಭ್ಯರ್ಥಿಗಳ ನೀಲಿ ಬಟನ್‌ಅನ್ನು ತನ್ನ ಇಚ್ಛಾನುಸಾರ ಒತ್ತುವಂತೆ ಯಾರೇ ಪೋಲಿಂಗ್ ಏಜೆಂಟರಿಗೆ ಹೇಳಬೇಕು. ನೀಲಿ ಬಟನ್‌ಗಳಲ್ಲಿ (ಮುಚ್ಚಿರದ) ಪ್ರತಿಯೊಂದನ್ನು ಕನಿಷ್ಠ ಪಕ್ಷ ಒಂದು ಬಾರಿಯಾದರೂ ಒತ್ತಬೇಕು. ಇದರಿಂದ ಮುಚ್ಚಿರದ ಪ್ರತಿಯೊಂದು ಬಟನ್‌ಅನ್ನು ಪರೀಕ್ಷಿಸಿದಂತಾಗುತ್ತದೆ ಮತ್ತು ಅವು ಸರಿಯಾಗಿ ಕೆಲಸ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡಂತಾಗುತ್ತದೆ.

ಸಿ. ಅಭ್ಯರ್ಥಿಗಳ ಬಟನ್ ಹಾಗೆ ಒತ್ತಿದ ತರುವಾಯ ಬ್ಯಾಲೆಟಿಂಗ್ ಯೂನಿಟ್ ಮೇಲಿರುವ 'ರೆಡಿ' ಲ್ಯಾಂಪು ಆಫ್ ಆಗುತ್ತದೆ ಮತ್ತು ಬಟನ್ ಬಳಿ ಇರುವ ಅಭ್ಯರ್ಥಿಯ ಲ್ಯಾಂಪು ಕೆಂಪಗೆ ಬೆಳಗಲಾರಂಭಿಸುತ್ತದೆ. ವಿವಿಪ್ಯಾಟ್‌ನಿಂದ ಮತ ಚಲಾಯಿಸಲಾದ ಅಭ್ಯರ್ಥಿಯ ಚಿಹ್ನೆ, ಹೆಸರು ಮತ್ತು ಕ್ರಮಸಂಖ್ಯೆಯನ್ನು ಒಳಗೊಂಡಿರುವ ಒಂದು ಸಣ್ಣ ಪೇಪರ್ ಸ್ಲಿಪ್ ಮುದ್ರಿತವಾಗುತ್ತದೆ ಮತ್ತು ಈ ಪೇಪರ್ ಸ್ಲಿಪ್ ವಿವಿಪ್ಯಾಟ್‌ನ ವಿಂಡೋದಲ್ಲಿ 7 ಸೆಕೆಂಡುಗಳ ಕಾಲ ಕಾಣುತ್ತದೆ. ಅಲ್ಲದೇ, ಕಂಟ್ರೋಲ್ ಯೂನಿಟ್‌ನಿಂದ ಬೀಪ್ ಶಬ್ಧ ಕೇಳಿಬರುತ್ತದೆ. ಕೆಲವು ಸೆಕೆಂಡುಗಳ ತರುವಾಯ, ಅಭ್ಯರ್ಥಿಗಳ ಲ್ಯಾಂಪ್‌ನಲ್ಲಿನ ಕೆಂಪು ದೀಪ, 'ಬ್ಯುಸಿ' ಲ್ಯಾಂಪ್‌ನಲ್ಲಿನ ಕೆಂಪು ದೀಪ ಆರಿ ಹೋಗುತ್ತದೆ ಮತ್ತು ಬೀಪ್ ಶಬ್ಧವು ನಿಲ್ಲುತ್ತದೆ. ಇದರಿಂದ ಯಾವ ಅಭ್ಯರ್ಥಿಗಳ ನೀಲಿ ಬಟನ್ ಒತ್ತಲಾಗಿದೆಯೋ ಆ ಅಭ್ಯರ್ಥಿಗೆ ಮತವು ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿದೆಯೆಂದು ಮತ್ತು ಮತಯಂತ್ರವು ಮುಂದಿನ ಮತವನ್ನು ಸ್ವೀಕರಿಸಲು ಸಿದ್ಧವಾಗಿದೆಯೆಂದು ಸೂಚಿತವಾಗುತ್ತದೆ.

(ಡಿ) ಇನ್ನುಳಿದ ಪ್ರತಿಯೊಬ್ಬ ಅಭ್ಯರ್ಥಿಗೆ ಒಂದು ಅಥವಾ ಹೆಚ್ಚು ಮತಗಳನ್ನು ದಾಖಲು ಮಾಡುವುದಕ್ಕಾಗಿ ಹಿಂದಿನ (ಎ), (ಬಿ) ಮತ್ತು (ಸಿ) ಪ್ಯಾರಾಗಳಲ್ಲಿ ವಿವರಿಸಿದ ವಿಧಾನವನ್ನು ಪುನರಾವರ್ತನೆ ಮಾಡಬೇಕು. ಪ್ರತಿಯೊಬ್ಬ ಅಭ್ಯರ್ಥಿಯ ಸಂಬಂಧದಲ್ಲಿ ಹಾಗೆ ದಾಖಲಾದ ಮತಗಳ ಲೆಕ್ಕವನ್ನು ಎಚ್ಚರಿಕೆಯಿಂದ ಇಡಬೇಕಾಗುತ್ತದೆ. ಪ್ರತಿಯೊಂದು ಮತದೊಂದಿಗೆ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳು ಮುದ್ರಿತವಾಗುತ್ತವೆ.

(ಇ) ಮತಗಳು ಹಾಗೆ ದಾಖಲಾಗುತ್ತಿರುವಾಗ, ಮತಯಂತ್ರದಲ್ಲಿ ದಾಖಲಾಗಿರುವ ಒಟ್ಟು ಮತಗಳು, ಆ ಹಂತದವರೆಗೆ ದಾಖಲಾಗಿರುವ ಮತಗಳ ಸಂಖ್ಯೆಗೆ

ತಾಳೆಯಾಗುತ್ತವೆಯೇ ಎಂಬುದನ್ನು ಯಾವುದೇ ಸಮಯದಲ್ಲಿ ಪರಿಶೀಲಿಸಲು ಕಂಟ್ರೋಲ್ ಯೂನಿಟ್‌ನ ಬ್ಯಾಲೆಟ್ ಸೆಕ್ಷನ್‌ನಲ್ಲಿನ 'ಟೋಟಲ್' ಬಟನ್ ಒತ್ತಬೇಕು.

ಸೂಚನೆ: 'ಟೋಟಲ್' ಬಟನ್‌ಅನ್ನು ಯಾರೇ ಅಭ್ಯರ್ಥಿಗೆ ಮತವನ್ನು ದಾಖಲು ಮಾಡಿದ ತರುವಾಯ ಮತ್ತು ಡಿಸ್‌ಪ್ಲೇ ವಿಭಾಗದಲ್ಲಿ 'ಬ್ಯುಸಿ' ದೀಪ ಆಫ್ ಆದ ತರುವಾಯವೇ ಒತ್ತತಕ್ಕದ್ದು.

(ಎಫ್) ಅಣಕು ಮತದಾನದ ಕೊನೆಯಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ರಿಸಲ್ಟ್ ಸೆಕ್ಷನ್‌ನಲ್ಲಿನ 'ಕ್ಲೋಸ್' ಬಟನ್ ಒತ್ತುವಾಗ, ಡಿಸ್‌ಪ್ಲೇ ಸೆಕ್ಷನ್‌ನಲ್ಲಿನ ಡಿಸ್‌ಪ್ಲೇ ಪ್ಯಾನಲ್‌ಗಳು ಕ್ರಮಾನುಗತವಾಗಿ ಮಾಹಿತಿಯನ್ನು ತೋರಿಸುತ್ತವೆ:

(ಜಿ) ಈಗ, ರಿಸಲ್ಟ್ ಸೆಕ್ಷನ್‌ನಲ್ಲಿ 'ರಿಸಲ್ಟ್' ಎಂದು ಗುರುತು ಮಾಡಿರುವ ಬಟನ್ ಒತ್ತಬೇಕು. ಆ ಬಟನ್ ಒತ್ತುತ್ತಿದ್ದಂತೆ ಡಿಸ್‌ಪ್ಲೇ ಪ್ಯಾನಲ್‌ಗಳು ಕ್ರಮಾನುಗತವಾಗಿ ಮಾಹಿತಿಯನ್ನು ತೋರಿಸಲು ಪ್ರಾರಂಭಿಸುತ್ತವೆ. ಅಣಕು ಮತದಾನದ ನಂತರ, ಪೋಲಿಂಗ್ ಏಜೆಂಟರ ಉಪಸ್ಥಿತಿಯಲ್ಲಿ ಕಂಟ್ರೋಲ್ ಯೂನಿಟ್‌ನ ಫಲಿತಾಂಶವನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು (ವಿವಿಪ್ಯಾಟ್ ಡ್ರಾಪ್‌ಬಾಕ್ಸಿನಿಂದ ತೆಗೆದ ತರುವಾಯ) ಎಣಿಕೆ ಮಾಡುವುದು ಮತ್ತು ಪ್ರತಿ ಅಭ್ಯರ್ಥಿಗೆ ಸಂಬಂಧಿಸಿದಂತೆ ಚಲಾವಣೆಗೊಂಡ ಮತಗಳು ತಾಳೆಯಾಗಿವೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು.

(ಎಚ್) ಆ ತರುವಾಯ, ಪ್ರಿಸೈಡಿಂಗ್ ಅಧಿಕಾರಿಯು, ಅಣಕು ಮತದಾನದ ಸಮಯದಲ್ಲಿ ದಾಖಲಾದ ಮತಗಳನ್ನು ಅಳಿಸಿ ಹಾಕಲು 'ಕ್ಲಿಯರ್' ಬಟನ್ ಪುನಃ ಒತ್ತಬೇಕು. 'ಕ್ಲಿಯರ್' ಬಟನ್ ಹಾಗೆ ಒತ್ತುತ್ತಿದ್ದಂತೆ ಡಿಸ್‌ಪ್ಲೇ ಪ್ಯಾನಲ್‌ನ ಎಲ್ಲ ಕೌಂಟ್‌ಗಳು ಸೊನ್ನೆ (0) ತೋರಿಸುತ್ತವೆ. ಅಲ್ಲದೆ, ವಿವಿಪ್ಯಾಟ್‌ನಲ್ಲಿರುವ ಪೇಪರ್ ಸ್ಲಿಪ್‌ಗಳನ್ನು ಸಹ ಡ್ರಾಪ್‌ಬಾಕ್ಸಿನಿಂದ ಹೊರತೆಗೆದು ಡ್ರಾಪ್‌ಬಾಕ್ಸನ್ನು ಮೊಹರು ಮಾಡಬೇಕು.

15.26.2. ಬೇರೊಬ್ಬ ಮತದಾರನ ಸೋಗಿನಲ್ಲಿ ಬಂದು ಮತ ಚಲಾಯಿಸುವ ನಕಲಿ ಮತದಾರನನ್ನು ತಡೆಗಟ್ಟುವಲ್ಲಿ ಮತ್ತು ಅಣಕು ಮತದಾನದ ಸಮಯದಲ್ಲಿ ಮತಗಟ್ಟೆಯಲ್ಲಿ ಬಳಸಲಾದ ಇವಿಎಂ ಮತ್ತು ವಿವಿಪ್ಯಾಟ್ ಸರಿಯಾದ ಕಾರ್ಯನಿರ್ವಹಣಾ ಸ್ಥಿತಿಯಲ್ಲಿದೆಯೆಂದು ಮತ್ತು ಚಲಾಯಿಸಲಾದ ಮತಗಳನ್ನು ಅಳಿಸಿ ಹಾಕಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವಲ್ಲಿ ಪೋಲಿಂಗ್ ಏಜೆಂಟರ ಹಾಜರಾತಿಯು ನೆರವಾಗುವುದರಿಂದ, ಆಯೋಗವು ಪ್ರಿಸೈಡಿಂಗ್

ಅಧಿಕಾರಿಯು ನೀಡಬೇಕಾದ ಒಂದು ಪ್ರಮಾಣಪತ್ರವನ್ನು ಪರಿಚಯಿಸಿದೆ. ಈ ಪ್ರಮಾಣ ಪತ್ರವು ಹಾಜರಿರುವ ಪೋಲಿಂಗ್ ಏಜೆಂಟರುಗಳ ಮತ್ತು ಅವರು ಪ್ರತಿನಿಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ಸೂಚಿಸುತ್ತದೆ ಮತ್ತು ಅದರ ಮೇಲೆ ಅವರ ಸಹಿಗಳನ್ನು ಪಡೆಯಲಾಗುತ್ತದೆ. ಅಣಕು ಮತದಾನದ ಪ್ರಮಾಣಪತ್ರದ ಪ್ರಪತ್ರವನ್ನು ಅನುಬಂಧ – 28ರಲ್ಲಿ ನೀಡಲಾಗಿದೆ.

**15.27 ಕಂಟ್ರೋಲ್ ಯೂನಿಟ್‌ನಲ್ಲಿ ಗ್ರೀನ್ ಪೇಪರ್ ಸೀಲ್ ಅಳವಡಿಸುವುದು**

15.27.1. ಮತದಾನದ ಗೌಪ್ಯತೆಯನ್ನು ಕಾಪಾಡಿಕೊಂಡು ಬರುವ ನಿಟ್ಟಿನಲ್ಲಿ, ಮತಪತ್ರಗಳನ್ನು ಮತ್ತು ಮತಪೆಟ್ಟಿಗೆಗಳನ್ನು ಉಪಯೋಗಿಸುವ ಸಾಂಪ್ರದಾಯಿಕ ಮತದಾನದ ವ್ಯವಸ್ಥೆಯಲ್ಲಿ ಮತಪೆಟ್ಟಿಗೆಗಳನ್ನು ಆಯೋಗವು ವಿಶೇಷವಾಗಿ ಮುದ್ರಿಸಿದ ಗ್ರೀನ್ ಪೇಪರ್ ಸೀಲ್ ಅಳವಡಿಸುವ ಮೂಲಕ ಮೊಹರು ಮಾಡಿ ಭದ್ರಪಡಿಸಲಾಗುತ್ತದೆ. ಮತಪೆಟ್ಟಿಗೆಗಳಲ್ಲಿ ಒಂದು ಸಲ ಗ್ರೀನ್ ಪೇಪರ್ ಸೀಲ್ ಅಳವಡಿಸಿ ಪೆಟ್ಟಿಗೆಯ ಮುಚ್ಚಳವನ್ನು ಮುಚ್ಚಿದ ಮೇಲೆ ಗ್ರೀನ್ ಪೇಪರ್ ಸೀಲ್ ತೂತು ಮಾಡಿ ಹರಿದುಹಾಕದ ಹೊರತು ಪೆಟ್ಟಿಗೆಯನ್ನು ತೆರೆಯಲಿಕ್ಕಾಗುವುದಿಲ್ಲ ಮತ್ತು ಅದರಲ್ಲಿರುವ ಮತಪತ್ರಗಳ ಬಗ್ಗೆ ಹಸ್ತಕ್ಷೇಪ ಮಾಡಲಿಕ್ಕಾಗುವುದಿಲ್ಲ ಅಥವಾ ಎಣಿಕೆ ಮಾಡಲು ಹೊರಗೆ ತೆಗೆಯಲಿಕ್ಕಾಗುವುದಿಲ್ಲ. ಅದೇ ಬಗೆಯ ರಕ್ಷಣಾ ವ್ಯವಸ್ಥೆಯನ್ನು ಇವಿಎಂನಲ್ಲಿ ಒದಗಿಸಲಾಗಿದೆ. ಹೀಗಾಗಿ, ಕಂಟ್ರೋಲ್ ಯೂನಿಟ್‌ಅನ್ನು ಒಂದು ಸಲ ಮೊಹರು ಮಾಡಿ ಮತದಾನ ಪ್ರಾರಂಭಿಸಲಾಯಿತೆಂದರೆ ಯಾರೊಬ್ಬರೂ ಮತದಾನ ವ್ಯವಸ್ಥೆಯನ್ನು ವ್ಯತ್ಯಸ್ತಗೊಳಿಸಲಿಕ್ಕಾಗದು. ಇದನ್ನು ಸಾಧಿಸಲು ಮತ್ತು ಖಚಿತಪಡಿಸಿಕೊಳ್ಳಲು ಮತಪೆಟ್ಟಿಗೆಯನ್ನು ಭದ್ರಗೊಳಿಸಲು ಉಪಯೋಗಿಸುವಂಥ ಗ್ರೀನ್ ಪೇಪರ್ ಸೀಲನ್ನೇ ಅಳವಡಿಸಲು ಇವಿಎಂನ ಕಂಟ್ರೋಲ್ ಯೂನಿಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

15.27.2. ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಕಂಪಾರ್ಟ್‌ಮೆಂಟಿನ ಬಾಗಿಲಿನ ಒಳ ಬದಿಯಲ್ಲಿ ಗ್ರೀನ್ ಪೇಪರ್ ಸೀಲ್ ಅಳವಡಿಸುವುದಕ್ಕೆ ಒಂದು ಚೌಕಟ್ಟನ್ನು ಒದಗಿಸಲಾಗಿದೆ, ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಕಂಪಾರ್ಟ್‌ಮೆಂಟಿನ ಬಾಗಿಲಿನ ಒಳ ಬದಿಯಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಚೌಕಟ್ಟಿನಲ್ಲಿ ಗ್ರೀನ್ ಪೇಪರ್ ಸೀಲ್ ಅಳವಡಿಸುವುದಕ್ಕೆ ಮುಂಚೆ ನೀವು ಪೇಪರ್ ಸೀಲ್‌ನ ಬಿಳಿಭಾಗದ ಮೇಲ್ಭಾಗದಲ್ಲಿ ಪೇಪರ್ ಸೀಲ್‌ನ ಕ್ರಮಸಂಖ್ಯೆಯ ನಿಕಟ ಕೆಳಗೆ ಪ್ರಿಸೈಡಿಂಗ್ ಅಧಿಕಾರಿಯು ತಮ್ಮ ಪೂರ್ಣ ಸಹಿಯನ್ನು ಮಾಡತಕ್ಕದ್ದು. ಅಲ್ಲಿ ಹಾಜರಿರುವ ಹಾಗೂ ತಮ್ಮ ಸಹಿಗಳನ್ನು ಹಾಕಲು ಇಚ್ಛಿಸುವ ಅಭ್ಯರ್ಥಿಯ ಅಥವಾ ಅವರ ಪೋಲಿಂಗ್ ಏಜೆಂಟರ ಸಹಿಗಳನ್ನು ಹಾಕಿಸತಕ್ಕದ್ದು, ಪೇಪರ್ ಸೀಲ್ ಮೇಲಿರುವ ಪೋಲಿಂಗ್ ಏಜೆಂಟರ ಸಹಿಗಳು ಅವರ

ನೇಮಕಾತಿ ಪತ್ರಗಳಲ್ಲಿರುವ ಅವರ ಸಹಿಗಳಿಗೆ ಹೊಂದಾಣಿಕೆಯಾಗುವವೇ ಎಂಬುದನ್ನು ಪ್ರಿಸೈಡಿಂಗ್ ಅಧಿಕಾರಿಯು ಪರಿಶೀಲಿಸುತ್ತಾರೆ.

15.27.3. ಆ ಸೀಲನ್ನು, ಅದು ಹೊರಗಿನಿಂದ ಕಿಂಡಿಯ ಮುಖಾಂತರ ಕಾಣುವ ಹಾಗೆ ಮತ್ತು ಗ್ರೀನ್ ಪೇಪರ್ ಸೀಲ್‌ನ ಕ್ರಮಸಂಖ್ಯೆಯು ಹೊರಭಾಗದಿಂದ ಕಾಣಿಸುವ ಹಾಗೆ ಅಳವಡಿಸಲಾಗುತ್ತದೆ.

15.27.4. ಪೇಪರ್ ಸೀಲನ್ನು ಅಳವಡಿಸಿದ ತರುವಾಯ, ಒಳಗಿನ ಕಂಪಾರ್ಟ್‌ಮೆಂಟ್‌ನ ಬಾಗಿಲನ್ನು ಯುಕ್ತ ರೀತಿಯಲ್ಲಿ ಅದುಮಿ ಮುಚ್ಚಬೇಕು. ಪೇಪರ್ ಸೀಲ್‌ನ ತೆರೆದಿರುವ ಎರಡು ತುದಿಗಳು ಒಳಗಿನ ಕಂಪಾರ್ಟ್‌ಮೆಂಟ್‌ನ ಬದಿಗಳಿಂದ ಹೊರಗೆ ಚಾಚಿಕೊಂಡಿರುವಂತೆ ಆ ಬಾಗಿಲನ್ನು ಮುಚ್ಚಬೇಕು. ಈ ಉದ್ದೇಶಕ್ಕಾಗಿ ಯಂತ್ರದಲ್ಲಿ ಒದಗಿಸಲಾದ ಚೌಕಟ್ಟಿನಲ್ಲಿ ಗ್ರೀನ್ ಪೇಪರ್ ಸೀಲ್ ಅಳವಡಿಸುವ ಮೊದಲು ಪ್ರಿಸೈಡಿಂಗ್ ಅಧಿಕಾರಿಯು ಪೇಪರ್ ಸೀಲಿನ ಬಿಳಿ ಭಾಗದ ಮೇಲೆ ಇರುವ ಪೇಪರ್ ಸೀಲಿನ ಕ್ರಮ ಸಂಖ್ಯೆಯ ನಿಕಟ ಕೆಳಗೆ ತಮ್ಮ ಪೂರ್ಣ ಸಹಿಗಳನ್ನು ಹಾಕಬೇಕು. ಅಲ್ಲಿ ಹಾಜರಿರುವ ಮತ್ತು ತಮ್ಮ ಸಹಿಗಳನ್ನು ಹಾಕಲು ಇಚ್ಛಿಸುವಂತಹ ಅಭ್ಯರ್ಥಿಗಳು ಅಥವಾ ಅವರ ಪೋಲಿಂಗ್ ಏಜೆಂಟರಿಂದ ಸಹ ಸಹಿಯನ್ನು ಪಡೆಯತಕ್ಕದ್ದು. ಅಭ್ಯರ್ಥಿಗಳಿಗೆ ಅಥವಾ ಅವರ ಪೋಲಿಂಗ್ ಏಜೆಂಟರುಗಳಿಗೆ ಬಳಕೆಗಾಗಿ ಪೂರೈಸಲಾದ ಮತ್ತು ವಾಸ್ತವಾಗಿ ಉಪಯೋಗಿಸಲಾದ ಪೇಪರ್ ಸೀಲುಗಳ ಕ್ರಮ ಸಂಖ್ಯೆಗಳನ್ನು ಬರೆದುಕೊಳ್ಳಲು ಅನುವು ಮಾಡಿಕೊಡುವುದು.

## 15.28. ವಿಶೇಷ ಟ್ಯಾಗ್

15.28.1. ಪ್ರಿಸೈಡಿಂಗ್ ಅಧಿಕಾರಿ ಮತ್ತು ಪೋಲಿಂಗ್ ಏಜೆಂಟರು ಗ್ರೀನ್ ಪೇಪರ್ ಸೀಲಿನ ಮೇಲೆ ಸಹಿ ಮಾಡಿ, ಅಳವಡಿಸಿ, ಭದ್ರಪಡಿಸಿದ ನಂತರ ಪ್ರಿಸೈಡಿಂಗ್ ಅಧಿಕಾರಿಯು, "ಕ್ಲೀಯರ್" ಬಟನ್ ಮತ್ತು "ರಿಸಲ್ಟ್" ಬಟನ್‌ಗಳ ಮೇಲಿನ ಒಳ ಕಂಪಾರ್ಟ್‌ಮೆಂಟಿನ ಬಾಗಿಲುಗಳನ್ನು ಯುಕ್ತ ರೀತಿಯಲ್ಲಿ ಅದುಮಿ, ಪೇಪರ್ ಸೀಲ್‌ನ ತೆರೆದಿರುವ ಎರಡೂ ತುದಿಗಳು ಒಳಗಿನ ಕಂಪಾರ್ಟ್‌ಮೆಂಟ್‌ನ ಎರಡೂ ಬದಿಗಳಿಂದ ಹೊರಗೆ ಚಾಚಿಕೊಂಡಿರುವಂತೆ ಬಾಗಿಲನ್ನು ಮುಚ್ಚಬೇಕು. ನಂತರ ಈ ಒಳಬಾಗಿಲನ್ನು ವಿಶೇಷ ಟ್ಯಾಗ್‌ನಿಂದ ಮೊಹರು ಮಾಡಬೇಕು. ಇದಕ್ಕಾಗಿ, ಪ್ರಿಸೈಡಿಂಗ್ ಅಧಿಕಾರಿಯು ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿಯವರು ವಿಶೇಷವಾಗಿ ಪೂರೈಸಲಾದ ಉನ್ನತ ಗುಣಮಟ್ಟದ ಹುರಿದಾರ (ಟ್ವೈನ್ ದಾರ) ವನ್ನು ಒಳಬಾಗಿಲಿನಲ್ಲಿ ಕಲ್ಪಿಸಲಾದ ಎರಡು ರಂಧ್ರಗಳ ಮೂಲಕ ತೂರಿಸಿ ಮತ್ತು ವಿಶೇಷ ಟ್ಯಾಗ್‌ನಲ್ಲಿ ಒದಗಿಸಲಾದ ರಂಧ್ರದ ಮೂಲಕ ತೂರಿಸಿ ಗಂಡು ಹಾಕಿ ಕಟ್ಟಬೇಕು ಮತ್ತು ವಿಶೇಷ ಟ್ಯಾಗ್‌ನ ಮೇಲೆ ದಾರವನ್ನು ಇಟ್ಟು ಮೊಹರು ಮಾಡುವ ಅರಗಿನಿಂದ ಮೊಹರು

ಮಾಡಬೇಕು. ಆ ತರುವಾಯ, ಮೊಹರು ಹಾಳಾಗದಂತೆ, ಅವರು 'ಕ್ಲೋಸ್' ಬಟನ್ ವಿಶೇಷ ಟ್ಯಾಗ್‌ನ ಮಧ್ಯಭಾಗದಲ್ಲಿರುವ ರಂಧ್ರದ ಮೂಲಕ ಮುಂಚಾಚಿಕೊಂಡಿರುತ್ತದೆ ಎಂಬುದನ್ನು ಖಚಿತಪಡಿಸಿಕೊಂಡು "ಕ್ಲೋಸ್" ಬಟನ್‌ನ ಕಂಪಾರ್ಟ್‌ಮೆಂಟ್‌ನಲ್ಲಿ ವಿಶೇಷ ಟ್ಯಾಗನ್ನು ಅಳವಡಿಸಬೇಕು.

15.28.2. ವಿಶೇಷ ಟ್ಯಾಗ್‌ನ್ನು ಬಳಸುವ ಮೊದಲು, ಪ್ರಿಸೈಡಿಂಗ್ ಅಧಿಕಾರಿಯು ವಿಶೇಷ ಟ್ಯಾಗ್‌ನ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮ ಸಂಖ್ಯೆಯನ್ನು ಬರೆಯಬೇಕು.

15.28.3. ವಿಶೇಷ ಟ್ಯಾಗ್ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮಸಂಖ್ಯೆಯನ್ನು ಬರೆದ ತರುವಾಯ, ವಿಶೇಷ ಟ್ಯಾಗ್‌ನ ಹಿಂಬದಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿ ಸಹಿ ಮಾಡಬೇಕು. ಮತದಾನ ಪ್ರಾರಂಭವಾಗುವ ಮುಂಚೆ ಮತಗಟ್ಟೆಯಲ್ಲಿ ಹಾಜರಿರುವ ಅಭ್ಯರ್ಥಿಗಳು/ಪೋಲಿಂಗ್ ಏಜೆಂಟರುಗಳು ಬಯಸುವುದಾದರೆ ಹಿಂಬದಿಯಲ್ಲಿ ಅವರ ಸಹಿಗಳನ್ನು ಹಾಕುವಂತೆ ತಿಳಿಸಬೇಕು. ವಿಶೇಷ ಟ್ಯಾಗ್‌ನ ಮೇಲಿರುವ ಮೊದಲೇ ಮುದ್ರಿಸಿರುವ ಕ್ರಮಸಂಖ್ಯೆಯನ್ನು ಓದಿ, ಬರೆದುಕೊಳ್ಳುವಂತೆ ಮತಗಟ್ಟೆಯಲ್ಲಿ ಹಾಜರಿರುವ ಅಭ್ಯರ್ಥಿಗೆ / ಪೋಲಿಂಗ್ ಏಜೆಂಟರುಗಳಿಗೆ ತಿಳಿಸತಕ್ಕದ್ದು, ಮತ್ತು ವಿಶೇಷ ಟ್ಯಾಗ್‌ನ ಹಿಂಬದಿಯಲ್ಲಿ ಸಹಿ ಹಾಕುವಂತೆ ತಿಳಿಸಬೇಕು.

15.28.4. ಗ್ರೀನ್ ಪೇಪರ್ ಸೀಲಿನ ಮೇಲೆ ಪ್ರಿಸೈಡಿಂಗ್ ಅಧಿಕಾರಿ ಮತ್ತು ಸ್ಪರ್ಧಿಸಿರುವ ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟರು ಸಹಿ ಮಾಡಿ, ಅದನ್ನು ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳಗಿನ ಕಂಪಾರ್ಟ್‌ಮೆಂಟಿನ ಬಾಗಿಲಿನ ಒಳಭಾಗದಲ್ಲಿ ಪೇಪರ್ ಸೀಲನ್ನು ಅಳವಡಿಸುವುದಕ್ಕಾಗಿ ಒದಗಿಸಲಾದ ಚೌಕಟ್ಟಿನ(ಗಳ)ಲ್ಲಿ ಅಳವಡಿಸಿ, ಭದ್ರಪಡಿಸುವ ಕಾರ್ಯ ಪ್ರಕ್ರಿಯೆ ಮುಗಿಸಿದ ತರುವಾಯ "ಕ್ಲಿಯರ್" ಬಟನ್ನಿನ ಮತ್ತು "ರಿಸಲ್ಟ್" ಬಟನ್‌ಗಳ ಮೇಲಿರುವ ಒಳಭಾಗದ ಕಂಪಾರ್ಟ್‌ಮೆಂಟ್‌ಅನ್ನು ವಿಶೇಷ ಟ್ಯಾಗ್ ಬಳಸಿ ಮೊಹರು ಮಾಡಬೇಕು. "ಕ್ಲಿಯರ್" ಬಟನ್ ಮತ್ತು "ರಿಸಲ್ಟ್" ಬಟನ್‌ಗಳ ಮೇಲಿರುವ ಒಳಭಾಗದ ಕಂಪಾರ್ಟ್‌ಮೆಂಟ್‌ನ ಬಾಗಿಲನ್ನು ಪೇಪರ್ ಸೀಲಿನ ಎರಡು ತೆರೆದ ತುದಿಗಳು ಒಳಬಾಗಿಲಿನ ಬದಿಗಳಿಂದ ಹೊರಕ್ಕೆ ಚಾಚಿಕೊಂಡಿರುವ ರೀತಿಯಲ್ಲಿ ಅದುಮಿ ಮುಚ್ಚಬೇಕು. ತರುವಾಯ ಈ ಒಳಭಾಗದ ಬಾಗಿಲನ್ನು ವಿಶೇಷ ಟ್ಯಾಗ್‌ನಿಂದ ಮೊಹರು ಮಾಡಬೇಕು. ಇದಕ್ಕಾಗಿ (ರಿಟರ್ನಿಂಗ್ ಅಧಿಕಾರಿಯವರು ಈ ಉದ್ದೇಶಕ್ಕಾಗಿ ವಿಶೇಷವಾಗಿ ಒದಗಿಸಿರುವ) ಉತ್ತಮ ಗುಣಮಟ್ಟದ ದಾರವನ್ನು ಒಳಭಾಗದ ದ್ವಾರದಲ್ಲಿ ಮಾಡಿರುವ ಎರಡು ರಂಧ್ರಗಳ ಮೂಲಕ ಮತ್ತು ವಿಶೇಷ ಟ್ಯಾಗ್‌ನಲ್ಲಿ ಮಾಡಿರುವ ರಂಧ್ರದ ಮೂಲಕ ತೂರಿಸಬೇಕು.

15.28.5. ಪ್ರಿಸೈಡಿಂಗ್ ಅಧಿಕಾರಿಯು ಯಾವುದೇ ಸಂದರ್ಭದಲ್ಲಿ ಹಾಳಾದ ಮತ್ತು ಹರಿದಿರುವ ವಿಶೇಷ ಟ್ಯಾಗನ್ನು ಬಳಸಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಯಾವುದೇ ಕಾರಣದಿಂದ ವಿಶೇಷ ಟ್ಯಾಗು ಹಾಳಾದರೆ ಅಥವಾ ಹರಿದುಹೋದರೆ, ಮತ್ತೊಂದನ್ನು ಬಳಸಬೇಕು. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿರವರು "ಗ್ರೀನ್ ಪೇಪರ್ ಸೀಲು"ಗಳಂತೆಯೇ 3 ಅಥವಾ 4 'ವಿಶೇಷ ಟ್ಯಾಗು'ಗಳನ್ನು ಒದಗಿಸುತ್ತಾರೆ.

15.28.6. ಇವೆಲ್ಲವನ್ನು ಮಾಡಿದ ತರುವಾಯ, ದಾರವನ್ನು ಒಂದು ಗಂಟು ಹಾಕಿ ವಿಶೇಷ ಟ್ಯಾಗನ ಮೇಲಿಟ್ಟು ಮೊಹರು ಮಾಡುವ ಅರಗಿನಿಂದ ದಾರವನ್ನು ಮೊಹರು ಮಾಡಬೇಕು. ಆ ತರುವಾಯ ಮೊಹರನ್ನು ಒಡೆಯದೆ ಈ ಉದ್ದೇಶಕ್ಕಾಗಿ ವಿಶೇಷ ಟ್ಯಾಗ್‌ನ ಮಧ್ಯದಲ್ಲಿರುವ ರಂಧ್ರದ ಮೂಲಕ "ಕ್ಲೋಸ್" ಬಟನ್ ಮುಂಚಾಚಿರುವ ರೀತಿಯಲ್ಲಿ "ಕ್ಲೋಸ್" ಬಟನ್‌ನ ಕಂಪಾರ್ಟ್‌ಮೆಂಟ್‌ನಲ್ಲಿ ವಿಶೇಷ ಟ್ಯಾಗನ್ನು ಹೊಂದಿಸಬೇಕು.

15.28.7. ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಕಂಪಾರ್ಟ್‌ಮೆಂಟ್‌ನ್ನು ಮುಚ್ಚಿ ಮೊಹರು ಮಾಡಿದ ನಂತರ ಆ ಸೆಕ್ಷನ್‌ಅನ್ನು ಮುಚ್ಚುವುದಕ್ಕಾಗಿ, ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ಗಟ್ಟಿಯಾಗಿ ಅದುಮಬೇಕು. ಹೊರ ಕವಚವನ್ನು ಹಾಗೆ ಮುಚ್ಚುವುದಕ್ಕೆ ಮೊದಲು, ಪೇಪರ್ ಸೀಲ್‌ನ ಎರಡೂ ತೆರೆದ ತುದಿಗಳು ಹೊರ ಕವಚದ ಎರಡೂ ಬದಿಗಳಿಂದ ಹೊರ ಚಾಚಿಕೊಂಡಿರುವಂತೆ ನೋಡಿಕೊಳ್ಳಬೇಕು.

15.28.8. ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ಮುಚ್ಚಿದ ನಂತರ, ಆ ಕವಚವನ್ನು (i) ಹೊರ ಕವಚದ ಎಡ ಪಾರ್ಶ್ವದಲ್ಲಿ ಈ ಉದ್ದೇಶಕ್ಕಾಗಿ ಮಾಡಿರುವ ಎರಡು ರಂಧ್ರಗಳ ಮೂಲಕ ದಾರವನ್ನು ತೂರಿಸಿ (ii) ದಾರವನ್ನು ಗಂಟುಹಾಕಿ (iii) ರಿಟರ್ನಿಂಗ್ ಅಧಿಕಾರಿ ಮಟ್ಟದಲ್ಲಿ 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್'ಗೆ ಲಗತ್ತಿಸಿರುವಂಥದ್ದೆ ರೀತಿಯ ಲೇಬಲ್ (ಅಡ್ರಸ್ ಟ್ಯಾಗ್)ಅನ್ನು ಅಳವಡಿಸಿ, ದಾರವನ್ನು ಅಡ್ರಸ್ ಟ್ಯಾಗ್ ಮೇಲಿಟ್ಟು ಅರಗು ಮತ್ತು ಪ್ರಿಸೈಡಿಂಗ್ ಅಧಿಕಾರಿಯ ಮೊಹರಿನಿಂದ ಮೊಹರು ಮಾಡಬೇಕು. ಹಾಗೆ ಮೊಹರು ಮಾಡಿದ ನಂತರ ಅಲ್ಲಿ ಹಾಜರಿರುವ ಅಭ್ಯರ್ಥಿಗಳು ಅಥವಾ ಪೋಲಿಂಗ್ ಏಜೆಂಟರು ಅಪೇಕ್ಷಿಸಿದಲ್ಲಿ, ಹೊರ ಕವಚದ ಮೇಲೆ ಅವರ ಮೊಹರುಗಳನ್ನು ಹಾಕಲು ಅವರಿಗೆ ಕೂಡ ಅನುಮತಿ ನೀಡತಕ್ಕದ್ದು.

15.28.9. ರಿಟರ್ನಿಂಗ್ ಅಧಿಕಾರಿ, ಮತದಾನದ ಸಾಮಗ್ರಿಗಳ ಭಾಗವಾಗಿ ಮುದ್ರಣವಾಗಿರದ ಖಾಲಿ ಸಾಮಾನ್ಯ ಅಡ್ರೆಸ್ ಟ್ಯಾಗ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸುವರು. ಪ್ರಿಸೈಡಿಂಗ್ ಅಧಿಕಾರಿಯು ಅಡ್ರಸ್

ಟ್ಯಾಗ್‌ನ ವಿವರಗಳನ್ನು ಎಚ್ಚರಿಕೆಯಿಂದ ಭರ್ತಿಮಾಡಬೇಕು. ಪ್ರತಿಯೊಂದು ಕಂಟ್ರೋಲ್ ಯೂನಿಟ್‌ನ ಕ್ರಮ ಸಂಖ್ಯೆಯನ್ನು ಅದರ ಕೆಳ ಭಾಗದಲ್ಲಿ ಬರೆಯಲಾಗಿರುತ್ತದೆ.

15.28.10. ಮತಗಟ್ಟೆಯಲ್ಲಿ ಹಾಜರಿರುವ ಅಭ್ಯರ್ಥಿಗಳು ಅಥವಾ ಅವರ ಪೋಲಿಂಗ್ ಏಜೆಂಟರುಗಳು ಅಪೇಕ್ಷಿಸಿದಲ್ಲಿ ಅಡ್ರೆಸ್ ಟ್ಯಾಗ್‌ನ ಮೇಲೆ ಪ್ರಿಸೈಡಿಂಗ್ ಅಧಿಕಾರಿಯವರ ಮೊಹರಿನೊಂದಿಗೆ, ಅವರ ಮೊಹರುಗಳನ್ನು ಸಹ ಹಾಕಲು ಅವರಿಗೆ ಅನುಮತಿಸಬೇಕು.

15.28.11. ಒಳ ಕಂಪಾರ್ಟ್‌ಮೆಂಟ್ ಮತ್ತು ಹೊರ ಕವಚವನ್ನು ಹಾಗೆ ಮುಚ್ಚಿ ಮೊಹರು ಮಾಡುವುದರ ಮೂಲಕ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾದ ಮತಗಳನ್ನು ವ್ಯತ್ಯಾಸಗೊಳಿಸದಂತೆ ಸಂಪೂರ್ಣ ರಿಸಲ್ಟ್ ಸೆಕ್ಷನ್‌ಅನ್ನು ಮೊಹರು ಮಾಡಿ ಭದ್ರಪಡಿಸಬೇಕು.

## 15.29. ಸ್ಟ್ರಿಪ್‌ಸೀಲ್:


15.29.1. ಇವಿಯಂಗಳನ್ನು ಮೊಹರು ಮಾಡುವ ವ್ಯವಸ್ಥೆಗಳನ್ನು ಇನ್ನಷ್ಟು ಸುಧಾರಣೆ ಮಾಡುವ ಸಲುವಾಗಿ ಭಾರತದ ಚುನಾವಣಾ ಆಯೋಗವು ಹೊರಗಿನ ಪೇಪರ್ ಸ್ಟ್ರಿಪ್‌ಸೀಲ್ (ಇನ್ನು ಮುಂದೆ ಸ್ಟ್ರಿಪ್‌ಸೀಲ್ ಎಂದು ಉಲ್ಲೇಖಿಸಲಾಗಿದೆ) ನಿಂದ ಸಂಪೂರ್ಣವಾಗಿ ಕಂಟ್ರೋಲ್ ಯೂನಿಟ್‌ನ "ರಿಸಲ್ಟ್ ಸೆಕ್ಷನ್"ಅನ್ನು ಮೊಹರು ಮಾಡಲು ಹೆಚ್ಚುವರಿ ಹೊರಗಿನ ಮೊಹರು ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಇದರಿಂದ ಕಂಟ್ರೋಲ್ ಯೂನಿಟ್‌ನ ಈ ಭಾಗವನ್ನು ಒಮ್ಮೆ ಮತದಾನ ಪ್ರಾರಂಭವಾದ ಮೇಲೆ, ಮತ ಎಣಿಕೆಯನ್ನು ಕೈಗೊಳ್ಳುವವರೆಗೆ ತೆರೆಯಲು ಸಾಧ್ಯವಾಗುವುದಿಲ್ಲ. ಮತಗಟ್ಟೆಯಲ್ಲಿ ಮತಯಂತ್ರದಲ್ಲಿ ಮೊದಲ ಮತವನ್ನು ಚಲಾಯಿಸಿದ ಸಮಯದಿಂದ ಮತ ಎಣಿಕೆಯ ಮೇಜಿಗೆ ಮತಯಂತ್ರವನ್ನು ತರುವವರೆಗೆ, ಸ್ಟ್ರಿಪ್‌ಸೀಲ್‌ಅನ್ನು ಹಾನಿಗೊಳಿಸದೆ ರಿಸಲ್ಟ್ ಸೆಕ್ಷನನ್ನು ತೆರೆಯಲು ಯಾರಿಗೂ ಸಾಧ್ಯವಿಲ್ಲ ಎಂಬುದು ಇದರಿಂದ ಖಚಿತವಾಗುತ್ತದೆ.

15.29.2. ಅದರಂತೆ, ಇವಿಎಂ ಮತ್ತು ವಿವಿಪ್ಯಾಟನ್ನು ಬಳಸಿ ಚುನಾವಣೆ ನಡೆಸುವ ಪ್ರತಿಯೊಂದು ಮತಗಟ್ಟೆಯಲ್ಲೂ ಕಂಟ್ರೋಲ್ ಯೂನಿಟ್‌ಅನ್ನು ಸ್ಟ್ರಿಪ್‌ಸೀಲ್‌ನಿಂದ ಸಂಪೂರ್ಣವಾಗಿ ಹೊರಗಡೆಯಿಂದ ಭದ್ರಪಡಿಸಿ ಮೊಹರು ಮಾಡಿರತಕ್ಕದ್ದು. ಹೀಗೆ ಮಾಡುವುದರಿಂದ, ಸ್ಟ್ರಿಪ್‌ಸೀಲ್‌ಅನ್ನು ಹಾನಿಗೊಳಿಸದೆ ಈ ಸೆಕ್ಷನನ್ನು ತೆರೆಯಲು ಸಾಧ್ಯವಾಗುವುದಿಲ್ಲ. "ಕ್ಲೋಸ್" ಬಟನ್ ಮೇಲೆ ಮುಚ್ಚಿರುವ ರಬ್ಬರ್ ಮುಚ್ಚುಳವು ಸ್ಟ್ರಿಪ್‌ಸೀಲ್‌ನಿಂದ ಮುಚ್ಚಿರದ ರೀತಿಯಲ್ಲಿ "ಕ್ಲೋಸ್" ಬಟನ್ ಮೇಲೆ ಮುಚ್ಚಿರುವ ರಬ್ಬರ್ ಮುಚ್ಚಳದ ಸ್ವಲ್ಪ ಕೆಳಗೆ "ರಿಸಲ್ಟ್ ಸೆಕ್ಷನ್"ನ ಹೊರ ಬಾಗಿಲ ಮೇಲೆ ಈ ಸ್ಟ್ರಿಪ್‌ಸೀಲ್‌ಅನ್ನು ಅಳವಡಿಸತಕ್ಕದ್ದು.

### 15.29.3 ಸ್ಟ್ರಿಪ್ ಸೀಲ್‌ನ ಭೌತಿಕ ಲಕ್ಷಣಗಳು:

**ಈ ಕೆಳಕಂಡವುಗಳು ಸ್ಟ್ರಿಪ್ ಸೀಲ್‌ನ ಭೌತಿಕ ಲಕ್ಷಣಗಳಾಗಿರುತ್ತವೆ:**

1. ಸ್ಟ್ರಿಪ್‌ಸೀಲ್ 23.5 "(ಇಪ್ಪತ್ತ ಮೂರು ಪಾಯಿಂಟ್ ಐದು ಇಂಚುಗಳು) ಉದ್ದ ಮತ್ತು 1" (ಒಂದು ಇಂಚು) ಅಗಲದ ಅಳತೆಯ ಪೇಪರ್ ಸೀಲ್ ಆಗಿದೆ. ಸ್ಟ್ರಿಪ್‌ಸೀಲ್‌ನ ಉದ್ದವು, ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಮತ್ತು ಕಂಟ್ರೋಲ್ ಯೂನಿಟ್‌ನಲ್ಲಿ ಇತರೆ ಪ್ರಮಾಣಿತ ಮೊಹರುಗಳನ್ನು ಹಾಕಿದ ನಂತರ ಕಂಟ್ರೋಲ್ ಯೂನಿಟ್‌ಗೆ ಹೆಚ್ಚುವರಿ ಮೊಹರನ್ನು ಹಾಕಲು ಅವಕಾಶ ಕಲ್ಪಿಸುವುದಕ್ಕಾಗಿ ಕಂಟ್ರೋಲ್ ಯೂನಿಟ್‌ನ ಅಗಲದುದ್ದಕ್ಕೂ ಸುಲಭವಾಗಿ ಸುತ್ತುವಷ್ಟು ಇರುತ್ತದೆ.
2. ಪ್ರತಿಯೊಂದು ಸ್ಟ್ರಿಪ್‌ಸೀಲ್ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿರುತ್ತದೆ.
3. ಈ ಸ್ಟ್ರಿಪ್ ಸೀಲ್‌ಗಳನ್ನು, ಆಯೋಗದಿಂದ ಯಥೋಚಿತವಾಗಿ ಅನುಮೋದಿತವಾದ ಸಂಸ್ಥೆಯು ಪೂರೈಸುತ್ತದೆ ಮತ್ತು ಮುಖ್ಯ ಚುನಾವಣಾಧಿಕಾರಗಳು, ಪ್ರತಿಯೊಂದು ರಾಜ್ಯಕ್ಕೆ ಕೇಂದ್ರೀಕರಣ ವ್ಯವಸ್ಥೆಯ ಮೂಲಕ ಖರೀದಿಸುತ್ತಾರೆ.
4. ಸ್ಟ್ರಿಪ್ ಸೀಲ್‌ನ ಎರಡೂ ತುದಿಗಳಲ್ಲಿ, ಮೊದಲೇ ಗೋಂದು ಹಚ್ಚಿರುವಂಥ ನಾಲ್ಕು (4) ಭಾಗಗಳಿರುತ್ತವೆ. ಅವುಗಳಲ್ಲಿ ಮೂರು ಒಂದು ಚದರ ಇಂಚು ವಿಸ್ತೀರ್ಣ ಇರುತ್ತದೆ. ('ಎ' 'ಬಿ' ಮತ್ತು 'ಸಿ' ಅಕ್ಷರಗಳಿಂದ ಗುರುತಿಸಲಾಗಿರುತ್ತದೆ.) ಮತ್ತು ಒಂದು, ಎರಡು ಚದರ ಇಂಚು ವಿಸ್ತೀರ್ಣ ಇರುತ್ತದೆ ('ಡಿ' ಅಕ್ಷರದಿಂದ ಗುರುತಿಸಲಾಗಿರುತ್ತದೆ.) ಪ್ರತಿಯೊಂದು ಗೋಂದಿನ ಭಾಗವನ್ನು ವ್ಯಾಕ್ಸ್ ಪೇಪರನ ಸ್ಟ್ರಿಪ್‌ನಿಂದ ಮುಚ್ಚಲಾಗಿರುತ್ತದೆ.
5. ಸ್ಟ್ರಿಪ್ ಸೀಲು ಒಳಭಾಗ ಮತ್ತು ಹೊರಭಾಗವನ್ನು ಹೊಂದಿರುತ್ತದೆ. ಅದರ ಒಳಭಾಗದ ಒಂದು ಕೊನೆಯಲ್ಲಿ ಮೊದಲೇ ಗೋಂದು ಹಚ್ಚಿದ ಅಕ್ಕಪಕ್ಕ ಇರುವ ಎರಡು ಭಾಗಗಳಿರುತ್ತವೆ. ಸ್ಟ್ರಿಪ್‌ನ ಒಳಭಾಗದ ಒಂದು ಕೊನೆಯಲ್ಲಿ 'ಎ' ಮತ್ತು 'ಬಿ' ಅಕ್ಷರಗಳಿಂದ ಗುರುತಿಸಲಾಗಿರುವ ಮೊದಲೇ ಗೋಂದು ಹಚ್ಚಿದ ಅಕ್ಕಪಕ್ಕ ಇರುವ ಎರಡು ಭಾಗಗಳಿರುತ್ತವೆ. ಸ್ಟ್ರಿಪ್‌ನ ಒಳಭಾಗದ ಮತ್ತೊಂದು ಕೊನೆಯಲ್ಲಿ 'ಡಿ' ಎಂದು ಗುರುತು ಮಾಡಿರುವ ಮೊದಲೇ ಗೋಂದು ಹಚ್ಚಿದ ಭಾಗವು ಸುಮಾರು 2' (ಎರಡು ಇಂಚುಗಳು) ಗಳಷ್ಟಿರುತ್ತದೆ. ಸ್ಟ್ರಿಪ್‌ನ ಹೊರಭಾಗದಲ್ಲಿ 'ಸಿ' ಎಂದು ಗುರುತು ಮಾಡಿರುವ ಒಂದೇ ಒಂದು ಮೊದಲೇ ಗೋಂದು ಹಚ್ಚಿದ ಭಾಗವಿರುತ್ತದೆ. ಸ್ಟ್ರಿಪ್ ಸೀಲ್‌ನ ಒಳಭಾಗ ಮತ್ತು ಹೊರಭಾಗವನ್ನು ತೋರಿಸುವ ನಕ್ಷೆಯನ್ನು ಈ ಮುಂದೆ ನೀಡಲಾಗಿದೆ.




ಎ, ಬಿ, ಸಿ ಮತ್ತು ಡಿ ಭಾಗಗಳು ಸೀಲ್‌ನ ಒಳಭಾಗ ಮತ್ತು ಹೊರಭಾಗಗಳಲ್ಲಿ ಗೋಂದು ಹಚ್ಚಿದ ಭಾಗಗಳಾಗಿವೆ.

**15.29.4. ಸುಲಭವಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ, ಸ್ಟ್ರಿಪ್ ಸೀಲ್‌ಅನ್ನು ಅಳವಡಿಸುವವರೆಗೆ ಮತ್ತು ಅಳವಡಿಸುವುದೂ ಸೇರಿದಂತೆ ಮತಗಟ್ಟೆಯಲ್ಲಿ ನೀವು ಕೈಗೊಳ್ಳಬೇಕಾದ ಕ್ರಮಗಳ ಸಂಪೂರ್ಣ ಕ್ರಮಾನುಗತಿಯನ್ನು ಈ ಕೆಳಗೆ ನೀಡಲಾಗಿದೆ:**

(i) ವಾಸ್ತವಿಕ ಮತದಾನ ಪ್ರಕ್ರಿಯೆಯನ್ನು ಪ್ರಾರಂಭಿಸುವುದಕ್ಕೂ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯು ಅಣಕು ಮತದಾನವನ್ನು ನಡೆಸಬೇಕು.

(ii) ಅಣಕು ಮತದಾನವನ್ನು ನಡೆಸಿ ಫಲಿತಾಂಶವನ್ನು ತೋರಿಸಿದ ನಂತರ, ಪ್ರಿಸೈಡಿಂಗ್ ಅಧಿಕಾರಿ “ಕ್ಲಿಯರ್” ಬಟನನ್ನು ಒತ್ತುವ ಮೂಲಕ ಅಣಕು ಮತದಾನದ ಸಂದರ್ಭದಲ್ಲಿ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿರುವ ಅಂಕಿ ಅಂಶಗಳನ್ನು ಅಳಿಸಿಹಾಕಬೇಕು.

(iii) ಹಾಗೆ ಅಳಿಸಿ ಹಾಕಿ ನಂತರ, ಆತ ರಿಸಲ್ಟ್ ಸೆಕ್ಷನ್‌ನ ಒಳ ಬಾಗಿಲಿನ ಕಂಡಿಗಳು ಮುಚ್ಚಿಕೊಳ್ಳುವಂತೆ ಗ್ರೀನ್ ಪೇಪರ್ ಸೀಲನ್ನು ತೂರಿಸಬೇಕು. ಗ್ರೀನ್ ಪೇಪರ್ ಸೀಲನ್ನು ಒಳಗೆ ತೂರಿಸುವಾಗ, ಅದನ್ನು ಮುಚ್ಚಿದ ನಂತರ ಸೀಲ್‌ನ ಹಸಿರು ಭಾಗವು, ಅದನ್ನು ಮುಚ್ಚಿದ ನಂತರ ಒಳದ್ವಾರದ ಕಿಟಕಿಗಳ ಮೂಲಕ ಕಣ್ಣಿಗೆ ಕಾಣುವಂತೆ ಮಾಡಲು ಎಚ್ಚರಿಕೆ ವಹಿಸಬೇಕು.

(iv) ಗ್ರೀನ್ ಪೇಪರ್ ಸೀಲುಗಳನ್ನು ಒಳ ಸೇರಿಸಿದ ನಂತರ, ರಿಸಲ್ಟ್ ಬಟನ್‌ಗಳ ಮೇಲಿನ ಒಳಬಾಗಿಲನ್ನು ಮುಚ್ಚಬೇಕು.

(v) ಅನಂತರ, ರಿಸಲ್ಟ್ ಸೆಕ್ಷನ್‌ನ ಒಳಬಾಗಿಲನ್ನು ವಿಶೇಷ ಟ್ಯಾಗಿನಿಂದ ಮೊಹರು ಮಾಡಬೇಕು.

(vi) ವಿಶೇಷ ಟ್ಯಾಗನ್ನು ಅಳವಡಿಸಿದ ನಂತರ ಗ್ರೀನ್ ಪೇಪರ್ ಸೀಲಿನ (ಸೀಲುಗಳ) ತೆರೆದ ತುದಿಗಳು ಮುಚ್ಚಲಾದ ಹೊರಬಾಗಿಲಿನ ಎರಡೂ ಕಡೆಗಳಿಂದ ಹೊರ ಚಾಚಿಕೊಂಡಿವೆ ಎಂಬುದನ್ನು ಖಚಿತಪಡಿಸಿಕೊಂಡು ಪ್ರಿಸೈಡಿಂಗ್ ಅಧಿಕಾರಿಯು ರಿಸಲ್ಟ್ ಸೆಕ್ಷನ್‌ನ ಹೊರಬಾಗಿಲನ್ನು ಮುಚ್ಚಬೇಕು.

(vii) ಆನಂತರ, ಪ್ರಿಸೈಡಿಂಗ್ ಅಧಿಕಾರಿಯು ದಾರ ಹಾಗೂ ಅಡ್ರೆಸ್ ಟ್ಯಾಗಿನಿಂದ ಹೊರಬಾಗಿಲನ್ನು ಮೊಹರು ಮಾಡಬೇಕು.

(viii) ನಂತರ ಅವರು, ಸಂಪೂರ್ಣವಾಗಿ ಹೊರಗಿನಿಂದ ರಿಸಲ್ಟ್ ಸೆಕ್ಷನ್‌ಅನ್ನು ಮೊಹರು ಮಾಡಲು ಕಂಟ್ರೋಲ್ ಯೂನಿಟ್‌ನ ಸುತ್ತಲೂ ಸ್ಟ್ರಿಪ್ ಸೀಲನ್ನು ಅಳವಡಿಸಲು ಮುಂದಾಗಬೇಕು. ಹೀಗೆ ಮಾಡುವುದರಿಂದ ಈ ಸೆಕ್ಷನ್‌ಅನ್ನು ಮತದಾನ ಪ್ರಾರಂಭವಾದ ನಂತರ ಸ್ಟ್ರಿಪ್‌ಸೀಲ್‌ಅನ್ನು ಹಾನಿಗೊಳಿಸದೆ ತೆರೆಯಲು ಸಾಧ್ಯವಿಲ್ಲ.

(ix) ಹೊರಗಿನಿಂದ ರಿಸಲ್ಟ್ ಸೆಕ್ಷನ್‌ಅನ್ನು ಮೊಹರು ಮಾಡಲು ಸ್ಟ್ರಿಪ್‌ಸೀಲ್‌ಅನ್ನು ಅಳವಡಿಸುವುದಕ್ಕೆ ಮೊದಲು, ಪ್ರಿಸೈಡಿಂಗ್ ಅಧಿಕಾರಿಯು ಪೇಪರ್ ಸೀಲ್‌ನ ಕ್ರಮಸಂಖ್ಯೆಯ ನಿಕಟ ಕೆಳಗೆ ತಮ್ಮ ಪೂರ್ಣ ಸಹಿಯನ್ನು ಮಾಡಬೇಕು. ಹಾಜರಿರುವಂತಹ ಮತ್ತು ತಮ್ಮ ಸಹಿಗಳನ್ನು ಹಾಕಲು ಇಚ್ಛಿಸುವಂತಹ ಅಭ್ಯರ್ಥಿಗಳಿಂದ ಅಥವಾ ಅವರ ಪೋಲಿಂಗ್ ಏಜೆಂಟರುಗಳಿಂದ ಅದರ ಮೇಲೆ ಸಹಿ ಮಾಡಿಸಬೇಕು. ಸ್ಟ್ರಿಪ್ ಸೀಲ್ ಮೇಲಿನ ಪೋಲಿಂಗ್ ಏಜೆಂಟರುಗಳ ಸಹಿಗಳು ಅವರ ನೇಮಕಾತಿ ಪತ್ರಗಳ ಮೇಲೆ ಮಾಡಿರುವ ಅವರ ಸಹಿಗಳನ್ನು ಹೋಲುತ್ತವೆಯೇ ಎಂಬುದನ್ನು ಪರಿಶೀಲಿಸಬೇಕು.

**(x)** ಸ್ಟ್ರಿಪ್ ಸೀಲ್ ಅನ್ನು **'ಕ್ಲೋಸ್"** ಬಟನ್ನಿನ ಸ್ವಲ್ಪ ಕೆಳಗೆ ಇರಿಸತಕ್ಕದ್ದು.

**15.30. ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್‌ನ್ನು ಮೊಹರು ಮಾಡುವ ವಿಧಾನ:**

15.30.1. ಈ ಕೆಳಕಂಡವುಗಳು ಸ್ಟ್ರಿಪ್ ಸೀಲ್‌ನಿಂದ ಇವಿಎಂ ಅನ್ನು ಮೊಹರು ಮಾಡುವುದಕ್ಕೆ ಸಂಬಂಧಿಸಿದ ಕ್ರಮಗಳಾಗಿವೆ:

**ಕ್ರಮ.1:** ಪ್ರಿಸೈಡಿಂಗ್ ಅಧಿಕಾರಿಯು, ಸೀಲ್‌ನ ಹಸಿರು (ಗ್ರೀನ್) ಭಾಗವು ಹೊರಭಾಗದಲ್ಲಿರುವುದೆಂದು ಖಾತ್ರಿಪಡಿಸಿಕೊಂಡು ಗ್ರೀನ್ ಪೇಪರ್‌ಸೀಲ್‌ನ ಒಳ ತುದಿಯನ್ನು ಮಧ್ಯಕ್ಕೆ ಮೊದಲು ಎರಡು ಮಡಿಕೆ ಮಾಡುತ್ತಾರೆ.

**ಕ್ರಮ2:** ಪ್ರಿಸೈಡಿಂಗ್ ಅಧಿಕಾರಿಯು ಬಾಗಿಲಿನ ಒಳ ತುದಿಯಿಂದ ಮುಂದಕ್ಕೆ ಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲಿನ ಬೇಸ್ ಬಳಿ, ಸ್ಟ್ರಿಪ್ ಸೀಲ್‌ನ ಮೊದಲೇ ಗೋಂದು ಹಾಕಿದ 'ಎ' ಭಾಗ ಬರುವಂತೆ ಸ್ಟ್ರಿಪ್‌ಸೀಲ್‌ಅನ್ನು ಇಡುತ್ತಾರೆ. ನಂತರ ಅವರು 'ಎ' ಭಾಗದ ಮೇಲಿರುವ ವ್ಯಾಕ್ಸ್ ಪೇಪರನ್ನು ತೆಗೆಯುತ್ತಾರೆ. ಆನಂತರ ಗೋಂದು ಹಾಕಿದ 'ಎ' ಭಾಗದ ಮೇಲೆ ಗ್ರೀನ್ ಪೇಪರ್ ಸೀಲ್‌ನ ಒಳ ಪದರವನ್ನು ಇಟ್ಟು ಅದುಮಿ, ಗ್ರೀನ್‌ಪೇಪರ್ ಸೀಲ್‌ನ ಹೊರ ಪದರವನ್ನು ಹೊರ ಬಾಗಿಲಿನ ಕೆಳಭಾಗದಿಂದ ಮುಂಚಾಚುವ ಒಳ ಪದರದ ಮೇಲೆ ಇಡುತ್ತಾರೆ.

**ಕ್ರಮ.3:** ನಂತರ ಅವರು ಮೊದಲೇ ಗೋಂದು ಹಾಕಿದ 'ಬಿ' ಭಾಗದ ಮೇಲಿನ ವ್ಯಾಕ್ಸ್ ಪೇಪರನ್ನು ತೆಗೆದು ಹೊರಬಾಗಿಲಿನ ಕೆಳ ಭಾಗದಿಂದ ಮುಂಚಾಚಿರುವ ಗ್ರೀನ್‌ಪೇಪರ್ ಸೀಲ್‌ನ ಹೊರ ಪದರದ ಮೇಲೆ ಈ ಮೊದಲೇ ಗೋಂದು ಹಾಕಿದ 'ಬಿ' ಭಾಗವನ್ನು ಇಟ್ಟು ಅದುಮುತ್ತಾರೆ.

**ಕ್ರಮ.4:** ಗ್ರೀನ್‌ಪೇಪರ್ ಸೀಲ್‌ನ ಮೇಲೆ 'ಬಿ' ಭಾಗವನ್ನು ಅಂಟಿಸಿದ ನಂತರ ಮೊದಲೇ ಗೋಂದು ಹಾಕಿದ 'ಸಿ' ಭಾಗವು ಮೇಲಿನ ಸ್ಥಾನಕ್ಕೆ ಬರುತ್ತದೆ. ಪ್ರಿಸೈಡಿಂಗ್ ಅಧಿಕಾರಿಯು ಮೊದಲೇ ಗೋಂದು ಹಾಕಿರುವ 'ಸಿ' ಭಾಗದ ಮೇಲಿನ ವ್ಯಾಕ್ಸ್ ಪೇಪರನ್ನು ತೆಗೆದು, ಗ್ರೀನ್‌ಪೇಪರ್ ಸೀಲ್‌ನ ಒಳ ಪದರ 'ಸಿ'ಗೆ ಗಟ್ಟಿಯಾಗಿ ಅಂಟಿಕೊಳ್ಳುವ ಹಾಗೆ ಹೊರಬಾಗಿಲಿನ ಮೇಲ್ಭಾಗದಿಂದ ಹೊರಚಾಚಿರುವ ಗ್ರೀನ್‌ಪೇಪರ್ ಸೀಲ್ ಅನ್ನು ಒತ್ತುತ್ತಾರೆ.

**ಕ್ರ.ಮ.5**. ನಂತರ ಅವರು ಸ್ಟ್ರಿಪ್‌ಸೀಲ್‌ನ ಉಳಿದ ಭಾಗ **"ಕ್ಲೋಸ್"** ಬಟನನ್ನು ಮುಚ್ಚಿಕೊಳ್ಳುವ ರಬ್ಬರ್ ಮುಚ್ಚಳಿಕೆಯ ಕೆಳಗೆ ಹಾದುಹೋಗುವ ಹಾಗೆ ಎಚ್ಚರಿಕೆ ವಹಿಸಿ ಎಡಭಾಗದಿಂದ ಕಂಟ್ರೋಲ್ ಯೂನಿಟ್‌ನ ಸುತ್ತಲೂ ತಂದು, ಮೊದಲೇ ಗೋಂದು ಹಾಕಿರುವ 'ಎ' 'ಬಿ' ಮತ್ತು 'ಸಿ' ಭಾಗಗಳನ್ನು ಅಂಟಿಸಲಾಗಿರುವ ಕಂಟ್ರೋಲ್ ಯೂನಿಟ್‌ನ ಹೊರ ಬಾಗಿಲ ತುದಿಯಲ್ಲಿ ಕಂಟ್ರೋಲ್ ಯೂನಿಟ್‌ನ ಬಲ ಭಾಗದಿಂದ ಸ್ಟ್ರಿಪ್ ಸೀಲ್‌ನ ಮತ್ತೊಂದು ತುದಿಯನ್ನು ತರುತ್ತಾರೆ.

**ಕ್ರಮ.6**. ಮೊದಲೇ ಗೋಂದು ಹಾಕಿರುವ 'ಡಿ' ಭಾಗವನ್ನು ಮುಚ್ಚಿರುವ ವ್ಯಾಕ್ಸ್ ಪೇಪರನ್ನು ತೆಗೆದ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಅದನ್ನು ಹೊರಬಾಗಿಲ ಮೇಲ್ಭಾಗದಿಂದ ಹೊರಚಾಚಿರುವ ಗ್ರೀನ್ ಪೇಪರ್ ಸೀಲ್‌ನ ಹೊರ ಪದರದ ಮೇಲೆ ಇಟ್ಟು ಗಟ್ಟಿಯಾಗಿ ಒತ್ತುತ್ತಾರೆ. ಮೊದಲೇ ಗೋಂದು ಹಾಕಲಾದ 'ಡಿ' ಭಾಗ **"ಕ್ಲೋಸ್"** ಬಟನ್‌ನ ಕೆಳಗಿರುವ ಸ್ಟ್ರಿಪ್ ಸೀಲ್‌ನ ಮೇಲೆ ಚಾಚಿಕೊಳ್ಳುತ್ತದೆ. ಆಗ ಅವರು ಚಾಚಿಕೊಂಡಿರುವ 'ಡಿ' ಭಾಗವನ್ನು ಸ್ಟ್ರಿಪ್ ಸೀಲ್‌ನ ಮೇಲೆ ಇಟ್ಟು ಗಟ್ಟಿಯಾಗಿ ಒತ್ತುತ್ತಾರೆ. ಮೇಲ್ಕಂಡ ಪ್ರಕ್ರಿಯೆಯ ಮೂಲಕ, ಹೊರಬಾಗಿಲ ಎರಡೂ ಕಡೆಗಳಿಂದ ಹೊರಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲ್‌ಗಳ ಎಲ್ಲ ನಾಲ್ಕು ಮುಕ್ತ ತುದಿಗಳನ್ನು ಗಟ್ಟಿಯಾಗಿ ಅಂಟಿಸಿ, ಸ್ಟ್ರಿಪ್ ಸೀಲ್‌ನಿಂದ ಭದ್ರಪಡಿಸಿದಂತಾಗುತ್ತದೆ. ಅದೇ ಸಮಯದಲ್ಲಿ ರಿಸಲ್ಟ್ ಸೆಕ್ಷನ್ ಮೇಲಿನ

ಹೊರ ಬಾಗಿಲನ್ನು ಸಹ ಎಲ್ಲ ಕಡೆಗಳಿಂದ ಈ ಸ್ಟ್ರಿಪ್ ಸೀಲ್‌ನಿಂದ ಮೊಹರು ಮಾಡಿ, ಈಗ ಈ ಸೀಲನ್ನು ಹಾನಿಗೊಳಿಸದೆ ಈ ಸೆಕ್ಷನ್‌ನನ್ನು ತೆರೆಯಲು ಬರುವುದಿಲ್ಲ.

**ಸ್ಟ್ರಿಪ್ ಸೀಲನ್ನು ಅಳವಡಿಸಿದ ನಂತರ:**

15.30.2. ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್‌ಅನ್ನು ಮೊಹರು ಮಾಡಿದ ತರುವಾಯ, ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಸಮಯದಲ್ಲಿ ಸ್ಟ್ರಿಪ್ ಸೀಲ್‌ಗೆ ಹಾನಿಯಾಗದ ಹಾಗೆ ಅಥವಾ ಅದರ ಬಗ್ಗೆ ಹಸ್ತಕ್ಷೇಪ ಮಾಡದ ಹಾಗೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಮತಗಟ್ಟೆಯಲ್ಲಿ ಮತದಾನದ ಸಮಯದಲ್ಲಿ ಅಥವಾ ಮತದಾನದ ನಂತರ ಈ ಸೀಲನ್ನು ತೆಗೆಯತಕ್ಕದ್ದಲ್ಲ. ನಿಗದಿತ ವೇಳೆಗೆ ಮತದಾನ ಕೊನೆಗೊಂಡಾಗ, ಪ್ರಿಸೈಡಿಂಗ್ ಅಧಿಕಾರಿಯವರು ಸ್ಟ್ರಿಪ್ ಸೀಲ್‌ಗೆ ಹಾನಿಯಾಗದಂತೆ "ಕ್ಲೋಸ್" ಬಟನ್ ಮೇಲಿರುವ ರಬ್ಬರ್ ಮುಚ್ಚಳವನ್ನು ತೆಗೆದು, ಮತದಾನವನ್ನು ಮುಕ್ತಾಯಗೊಳಿಸುವುದಕ್ಕೆ "ಕ್ಲೋಸ್" ಬಟನ್‌ಅನ್ನು ಒತ್ತತಕ್ಕದ್ದು ಮತ್ತು ರಬ್ಬರ್ ಮುಚ್ಚಳವನ್ನು ಮತ್ತೆ ಹಾಕತಕ್ಕದ್ದು. ಮತದಾನದ ಕೊನೆಯಲ್ಲಿ ಇತರ ವಿಧಿವಿಧಾನಗಳನ್ನು ಪೂರ್ಣಗೊಳಿಸಿದ ತರುವಾಯ, ಪ್ರಿಸೈಡಿಂಗ್ ಅಧಿಕಾರಿಯವರು, ಕಂಟ್ರೋಲ್ ಯೂನಿಟ್‌ಅನ್ನು ಅದನ್ನು ಸಾಗಿಸುವ ಪೆಟ್ಟಿಗೆಯಲ್ಲಿಟ್ಟು ಎಚ್ಚರಿಕೆಯಿಂದ ಪ್ಯಾಕ್ ಮಾಡತಕ್ಕದ್ದು ಮತ್ತು ಸಾಗಿಸುವ ಪೆಟ್ಟಿಗೆಯನ್ನು ಅಡ್ರಸ್ ಟ್ಯಾಗ್‌ನಿಂದ ಮೊಹರು ಮಾಡಬೇಕು. ಈ ಮೊಹರು ಮಾಡಲಾದ ಸಾಗಿಸುವ ಪಟ್ಟಿಗೆಯನ್ನು ಭದ್ರತಾ ಕೊಠಡಿಗೆ (ಸಂಗ್ರಹಣಾ ಕೇಂದ್ರ) ಒಪ್ಪಿಸಬೇಕು. ಮತ ಎಣಿಕೆ ಮಾಡುವ ದಿವಸ, ಸ್ಟ್ರಿಪ್ ಸೀಲ್ ಭದ್ರವಾಗಿರುವ ಕಂಟ್ರೋಲ್ ಯೂನಿಟ್‌ಅನ್ನು ಎಣಿಕೆ ಮೇಜಿನಲ್ಲಿ ಹಾಜರಿರುವ ಅಭ್ಯರ್ಥಿಗಳು/ಎಣಿಕೆ ಏಜೆಂಟರುಗಳು ಪರೀಕ್ಷಿಸುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು. ಆನಂತರವೇ ಮೊಹರನ್ನು ತೆಗೆಯತಕ್ಕದ್ದು. ಮೊಹರು ತೆಗೆಯುವಾಗ ಗ್ರೀನ್ ಪೇಪರ್ ಸೀಲ್ ಹಾನಿಗೊಳ್ಳದಂತೆ ಎಚ್ಚರ ವಹಿಸಬೇಕು. ಹೊರಕ್ಕೆ ಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲ್‌ಗಳನ್ನು ಪರೀಕ್ಷಿಸಿದ ನಂತರ ಕಂಟ್ರೋಲ್ ಯೂನಿಟ್‌ನ ಹೊರಬಾಗಿಲಿನ ಮೇಲಿರುವ ದಾರದ ಮೊಹರನ್ನು ತೆಗೆಯಬೇಕು.

**ಪ್ರಮುಖ ಮುನ್ನೆಚರಿಕೆ ಕ್ರಮಗಳು:**

- ಸ್ಟ್ರಿಪ್‌ಸೀಲ್‌ನ್ನು ರಿಸಲ್ಟ್ ಸೆಕ್ಷನ್‌ನ ಹೊರ ಬಾಗಿಲಿನ ಮೇಲಿರುವ "ಕ್ಲೋಸ್" ಬಟನ್ ಮುಚ್ಚಳದ ಕೆಳಗಿನ ಭಾಗವನ್ನು ಮುಚ್ಚವಂತೆ ಇರಿಸಬೇಕು. ಈ ಸ್ಟ್ರಿಪ್‌ನ್ನು ಅಳವಡಿಸುವಾಗ ಪ್ರಿಸೈಡಿಂಗ್ ಅಧಿಕಾರಿಯು "ಕ್ಲೋಸ್" ಬಟನನ್ನು ಮುಚ್ಚಲು ರಬ್ಬರ್ ಮುಚ್ಚಳವನ್ನು ಸ್ಪಷ್ಟವಾಗಿ ಕಾಣುವಂತೆ

ಮತ್ತು ಅದು ಈ ಸ್ಟ್ರಿಪ್‌ನಿಂದ ಭಾಗಶಃವಾಗಿಯೂ ಮುಚ್ಚಿರದಂತೆ ನೋಡಿಕೊಳ್ಳಬೇಕು. ಇದರಿಂದ ರಬ್ಬರ್ ಮುಚ್ಚಳವನ್ನು ತೆಗೆಯಲು ಮತ್ತು ಅಗತ್ಯವಾದಾಗ ಕ್ಲೋಸ್ ಬಟನ್‌ನ್ನು ಬಳಸಲು ಯಾವುದೇ ತೊಂದರೆಯಾಗುವುದಿಲ್ಲ.

- ಸ್ಟ್ರಿಪ್ ಸೀಲ್‌ನ್ನು ಬಿಗಿಯಾಗಿ ಅಳವಡಿಸಬೇಕೇ ಹೊರತು ಸಡಿಲವಾಗಿ ಅಳವಡಿಸತಕ್ಕದಲ್ಲ.
- ಯಾವುದೇ ಸನ್ನಿವೇಶಗಳಲ್ಲೂ ಹಾನಿಗೊಂಡಿರುವ ಸ್ಟ್ರಿಪ್‌ಗಳನ್ನು ಬಳಸತಕ್ಕದ್ದಲ್ಲ.
- ಪ್ರತಿಯೊಂದು ಮತಗಟ್ಟೆಗೂ ಗ್ರೀನ್ ಪೇಪರ್ ಸೀಲುಗಳನ್ನು ಒದಗಿಸುವಂತೆಯೇ ನಾಲ್ಕು (4) ಸ್ಟ್ರಿಪ್ ಸೀಲುಗಳನ್ನು ಸಹ ಒದಗಿಸಲಾಗುವುದು.
- ಪ್ರಿಸೈಡಿಂಗ್ ಅಧಿಕಾರಿಗಳು ಮತದಾನವನ್ನು ನಡೆಸುವುದಕ್ಕಾಗಿ ಮತಗಟ್ಟೆಗೆ ಒದಗಿಸಲಾದ ಪ್ರತಿಯೊಂದು ಸ್ಟ್ರಿಪ್ ಸೀಲುಗಳಿಗೆ ಸಂಬಂಧಿಸಿದಂತೆ ಪ್ರಿಸೈಡಿಂಗ್ ಅಧಿಕಾರಿಯು ಲೆಕ್ಕ ಇಡತಕ್ಕದ್ದು.
- ಪ್ರಿಸೈಡಿಂಗ್ ಅಧಿಕಾರಿ ಆಕಸ್ಮಿಕವಾಗಿ ಹಾನಿಗೊಂಡಿರುವ ಸ್ಟ್ರಿಪ್‌ಗಳು (ಅಥವಾ ಅದರ ಚೂರುಗಳು) ಸೇರಿದಂತೆ ಪ್ರತಿಯೊಂದು ಸ್ಟ್ರಿಪ್ ಸೀಲುಗಳನ್ನು ರಿಟರ್ನಿಂಗ್ ಅಧಿಕಾರಿಗಳಿಗೆ ಹಿಂದಿರುಗಿಸತಕ್ಕದ್ದು. ಯಾವುದೇ ಸ್ಟ್ರಿಪ್ ಸೀಲು, ಯಾವುದೇ ಸಮಯದಲ್ಲಿ, ಯಾರೇ ಅನಧಿಕೃತ ವ್ಯಕ್ತಿಯ ಕೈಯಲ್ಲಿರುವುದು ಕಂಡು ಬಂದರೆ ಅದಕ್ಕೆ ಅವರೇ ಹೊಣೆಗಾರರಾಗುವರು.

- ಮುಖ್ಯ ಚುನಾವಣಾ ಅಧಿಕಾರಿ ಮತ್ತು ಜಿಲ್ಲಾ ಚುನಾವಣಾ ಅಧಿಕಾರಿಗಳು ಪ್ರತಿಯೊಬ್ಬ ರಿಟರ್ನಿಂಗ್ ಅಧಿಕಾರಿಗೆ ಒದಗಿಸಲಾದ ಸ್ಟ್ರಿಪ್ ಸೀಲ್‌ಗಳ ಕ್ರಮಸಂಖ್ಯೆಗಳ ದಾಖಲೆಯನ್ನು ಇಟ್ಟುಕೊಳ್ಳತಕ್ಕದ್ದು. ಹಾಗೆಯೇ, ಪ್ರತಿಯೊಬ್ಬ ರಿಟರ್ನಿಂಗ್ ಅಧಿಕಾರಿಯು ಪ್ರತಿ ಮತಗಟ್ಟೆಗೆ ಒದಗಿಸಲಾದ ಸ್ಟ್ರಿಪ್ ಸೀಲುಗಳ ದಾಖಲೆಯನ್ನು ಇಡತಕ್ಕದ್ದು.
- ಆಯೋಗವು, ಪ್ರತ್ಯಕ್ಷವಾಗಿ ತೋರಿಸುವುದಕ್ಕೆ ಮತ್ತು ತರಬೇತಿಯ ಉದ್ದೇಶಕ್ಕಾಗಿ ನಿಮ್ಮ ರಾಜ್ಯಕ್ಕೆ ಸ್ಟ್ರಿಪ್ ಸೀಲ್‌ಗಳ ಮಾದರಿಗಳನ್ನು ನೀಡುತ್ತದೆ. ಈ ಮಾದರಿ ಸ್ಟ್ರಿಪ್‌ಗಳನ್ನು ಸಹ ಸುರಕ್ಷಿತ ಅಭಿರಕ್ಷೆಯಲ್ಲಿಡತಕ್ಕದ್ದು. ತರಬೇತಿಗೆ ಅಥವಾ ಸಂದರ್ಭಾನುಸಾರ ಪ್ರತ್ಯಕ್ಷವಾಗಿ ತೋರಿಸುವುದಕ್ಕೆ ಸ್ಟ್ರಿಪ್‌ಗಳನ್ನು ಉಪಯೋಗಿಸಿದ ತರುವಾಯ, ಬಳಸಲಾದ ಸ್ಟ್ರಿಪ್‌ಗಳನ್ನು ಚೂರು ಚೂರು ಮಾಡಿ ನಾಶಪಡಿಸತಕ್ಕದ್ದು.

**15.31.ಪೇಪರ್ ಸೀಲ್‌ಗಳ ಲೆಕ್ಕ:**

15.31.1. ಪ್ರಿಸೈಡಿಂಗ್ ಅಧಿಕಾರಿಯು, ಮತಗಟ್ಟೆಯಲ್ಲಿ ಉಪಯೋಗಿಸುವುದಕ್ಕಾಗಿ ತನಗೆ ಪೂರೈಸಿದ ಗ್ರೀನ್ ಪೇಪರ್ ಸೀಲ್‌ಗಳ ಮತ್ತು ಕಂಟ್ರೋಲ್ ಯೂನಿಟ್‌ನ್ನು ಮೊಹರು ಮಾಡಿ ಭದ್ರಪಡಿಸುವುದಕ್ಕಾಗಿ ತಾನು ವಾಸ್ತವವಾಗಿ ಉಪಯೋಗಿಸಿದ ಪೇಪರ್ ಸೀಲ್‌ಗಳ ಸರಿಯಾದ ಲೆಕ್ಕವನ್ನು ಇಡತಕ್ಕದ್ದು. ಅಂಥ ಲೆಕ್ಕವನ್ನು, ಅವರು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ಕ್ಕೆ ಅನುಬಂಧಿಸಿದ ನಮೂನೆ–17ಸಿಯ ಭಾಗ–1ರ ಬಾಬು ಸಂಖ್ಯೆ 9ರ ಪ್ರಕಾರ ಈ ಉದ್ದೇಶಕ್ಕಾಗಿ ವಿಶೇಷವಾಗಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಇಡತಕ್ಕದ್ದು.

**15.31.2** ಪ್ರಿಸೈಡಿಂಗ್ ಅಧಿಕಾರಿಯು, ಮತಗಟ್ಟೆಯಲ್ಲಿ ಬಳಕೆಗಾಗಿ ಹಾಗೆ ಪೂರೈಸಲಾದ ಮತ್ತು ವಾಸ್ತವವಾಗಿ ಉಪಯೋಗಿಸಿದ ಪೇಪರು ಸೀಲ್‌ಗಳ ಕ್ರಮಸಂಖ್ಯೆಯನ್ನು ಬರೆದುಕೊಳ್ಳಲಿಕ್ಕೆ ಅಭ್ಯರ್ಥಿಗಳು ಹಾಗೂ ಅಲ್ಲಿ ಹಾಜರಿರುವ ಅವರ ಪೋಲಿಂಗ್ ಏಜೆಂಟರುಗಳಿಗೆ ಅವಕಾಶ ನೀಡತಕ್ಕದ್ದು.

**15.32 ಇವಿಎಂ ಮತ್ತು ವಿವಿಪ್ಯಾಟ್ ವಾಸ್ತವಿಕ ಮತದಾನಕ್ಕೆ ಸಿದ್ದವಾಗಿದೆ.**

15.32.1 ಈಗ ಇವಿಎಂ ಮತ್ತು ವಿವಿಪ್ಯಾಟ್ ಎಲ್ಲಾ ವಿಧದಲ್ಲೂ ವಾಸ್ತವಿಕ ಮತದಾನಕ್ಕೆ ಸಿದ್ದವಾಗಿದೆ.

**15.33 ಮತದಾನದ ರಹಸ್ಯವನ್ನು ಕಾಪಾಡುವುದು**

15.33.1 ಪ್ರತಿಯೊಬ್ಬ ಪೋಲಿಂಗ್ ಏಜೆಂಟನು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 128ನೇ ಪ್ರಕರಣವು ಮತದಾನದ ರಹಸ್ಯವನ್ನು ಕಾಪಾಡಿಕೊಂಡು ಬರುವಂತೆ ಮತ್ತು ಕಾಪಾಡಿಕೊಂಡು ಬರುವಲ್ಲಿ ನೆರವಾಗುವಂತೆ ಅಗತ್ಯಪಡಿಸುತ್ತದೆ ಮತ್ತು ಅಂಥ ರಹಸ್ಯವನ್ನು ಉಲ್ಲಂಘಿಸಲು ಉದ್ದೇಶಪೂರ್ವಕವಾಗಿ ಯಾವುದೇ ಮಾಹಿತಿಯನ್ನು ಯಾರೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ. ಕಾನೂನಿನ ಮೇಲ್ಕಂಡ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯವರೆಗೆ ಕಾರಾವಾಸ ಶಿಕ್ಷೆಗೆ ಅಥವಾ ಜುಲ್ಮಾನೆಗೆ ಅಥವಾ ಇವೆರಡರಿಂದಲೂ ದಂಡನೆಗೆ ಗುರಿಯಾಗುತ್ತಾನೆ.

15.33.2 ಮತದಾನವು ಆರಂಭವಾಗುವುದಕ್ಕೆ ಮೊದಲು, ಪ್ರಿಸೈಡಿಂಗ್ ಅಧಿಕಾರಿಯು, ಮತದಾನದ ರಹಸ್ಯವನ್ನು ಕಾಪಾಡುವ ಅವರ ಕರ್ತವ್ಯಕ್ಕೆ ಸಂಬಂಧಿಸಿದ ಮತ್ತು ಅದನ್ನು ಉಲ್ಲಂಘಿಸಿದರೆ

ವಿಧಿಸಬಹುದಾದ ದಂಡನೆಗೆ ಸಂಬಂಧಿಸಿದ, ಮೇಲ್ಕಂಡ ಪ್ರಕರಣ 128ರ ಪ್ರಕರಣದ ಉಪಬಂಧಗಳನ್ನು ಅಲ್ಲಿ ಹಾಜರಿರುವ ಎಲ್ಲರ ಗಮನಕ್ಕೂ ತರಬೇಕು.

**15.34. ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಪ್ರಿಸೈಡಿಂಗ್ ಅಧಿಕಾರಿಯವರಿಂದ ಘೋಷಣೆ**

15.34.1. ಪ್ರಿಸೈಡಿಂಗ್ ಅಧಿಕಾರಿಯು ಮೇಲೆ ಹೇಳಲಾದಂತೆ ಪೂರ್ವಸಿದ್ಧತೆಗಳನ್ನು ಮಾಡಿಕೊಂಡ ನಂತರ ಅವರು ತಾನು ಆ ಎಲ್ಲಾ ಪೂರ್ವಸಿದ್ಧತೆಗಳನ್ನು ಪೂರ್ಣಗೊಳಿಸಿರುವೆನೆಂದು ಗೊತ್ತುಪಡಿಸಿದ ನಮೂನೆ **(ಅನುಬಂಧ–26)**ಯ ಭಾಗ–1ರಲ್ಲಿ ಘೋಷಣೆಯನ್ನು ಮಾಡಬೇಕು. ಅವನು, ಮತಗಟ್ಟೆಯಲ್ಲಿ, ಹಾಜರಿರುವ ಎಲ್ಲಾ ವ್ಯಕ್ತಿಗಳಿಗೂ ಕೇಳಿಸುವಂತೆ ಘೋಷಣೆಯನ್ನು ಓದಬೇಕು ಹಾಗೂ ಸಹಿ ಮಾಡಬೇಕು ಮತ್ತು ಅಲ್ಲಿ ಹಾಜರಿರುವ ಹಾಗೂ ಸಹಿ ಮಾಡಲು ಇಚ್ಛಿಸುವ ಪೋಲೀಂಗ್ ಏಜೆಂಟರ ಸಹಿಗಳನ್ನು ಅದರ ಮೇಲೆ ತೆಗೆದುಕೊಳ್ಳಬೇಕು. ಪೋಲಿಂಗ್ ಏಜೆಂಟರು ಆ ಘೋಷಣೆಗೆ ಸಹಿ ಮಾಡಬೇಕು ಹೀಗೆ ಮಾಡುವುದರಿಂದ ಅವರು ಮುಕ್ತ ಹಾಗೂ ನ್ಯಾಯ ಸಮ್ಮತವಾದ ರೀತಿಯಲ್ಲಿ ಮತದಾನವನ್ನು ಪ್ರಾರಂಭಿಸಲಾಯಿತೆಂಬ ಬಗ್ಗೆ ಎಲ್ಲಾ ರೀತಿಯಿಂದ ಮನವರಿಕೆ ಮಾಡಿಕೊಂಡಂತಾಗುತ್ತದೆ. ಯಾರೇ ಪೋಲಿಂಗ್ ಏಜೆಂಟನು ಈ ಘೋಷಣೆಗೆ ಸಹಿ ಮಾಡಲು ನಿರಾಕರಿಸಿದ ಪಕ್ಷದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಸದರಿ ಘೋಷಣೆಯ ನಮೂನೆಯಲ್ಲಿ ಆ ಉದ್ದೇಶಕ್ಕಾಗಿ ಒದಗಿಸಿರುವ ಕಂಡಿಕೆಯಲ್ಲಿ ಆತನ ಹೆಸರಿನ ಮುಂದೆ ನಿರಾಕರಿಸಿದ್ದಾನೆಂದು ಟಿಪ್ಪಣಿ ಬರೆಯತಕ್ಕದ್ದು.

**15.35. ಮತದಾನದ ಆರಂಭ**

15.35.1. ಮತದಾನವನ್ನು, ಈ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಸಮಯಕ್ಕೆ ಸರಿಯಾಗಿ ಪ್ರಾರಂಭಿಸಬೇಕು. ಆ ವೇಳೆಗಾಗಲೇ, ಪ್ರಿಸೈಡಿಂಗ್ ಅಧಿಕಾರಿಯು ಪೂರ್ವಭಾವಿ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿರತಕ್ಕದ್ದು. ಯಾವುದೇ ಆಕಸ್ಮಿಕ ಕಾರಣಗಳಿಗಾಗಿ, ಪೂರ್ವಭಾವಿ ಕಾರ್ಯಗಳು ಪೂರ್ಣಗೊಂಡಿಲ್ಲದಿದ್ದ ಪಕ್ಷದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಮತದಾನವನ್ನು ಪ್ರಾರಂಭಿಸುವುದಕ್ಕೆ ನಿಗದಿಪಡಿಸಿರುವ ಸಮಯಕ್ಕೆ ಸುಮಾರು ಮೂವರು ಅಥವಾ ನಾಲ್ವರು ಮತದಾರರನ್ನು ಒಳಗೆ ಬಿಡಲು ಅನುಮತಿಸುವುದು ಹಾಗೂ ಮತದಾನದ ಪ್ರಾರಂಭಿಕ ಕಾರ್ಯಗಳು ಮುಗಿಯುವವರೆಗೆ ಪೋಲಿಂಗ್ ಆಫೀಸರುಗಳು ಆ ಮತದಾರರನ್ನು ಗುರುತಿಸುವುದೇ ಮುಂತಾದ ಕಾರ್ಯಮಾಡುತ್ತಿರಲಿ.

15.35.2. ಮತದಾನ ಮುಕ್ತಾಯಗೊಳಿಸುವುದಕ್ಕೆ ನಿಗದಿಪಡಿಸಿದ ಸಮಯಕ್ಕೆ ಮುಂಚೆ ಆಗಾಗಲೇ ಮತಗಟ್ಟೆಗೆ ತಲುಪಿದ್ದು, ಮತ ಚಲಾಯಿಸುವುದಕ್ಕಾಗಿ ಸರತಿ ಸಾಲಿನಲ್ಲಿ ನಿಂತಿರುವ ಮತದಾರರಿಗೆ ಮತ ಚಲಾಯಿಸಲು ಅವಕಾಶ ಮಾಡಿಕೊಡುವುದನ್ನು ಹೊರತುಪಡಿಸಿ, ಯಾವುದೇ ಸಂದರ್ಭದಲ್ಲೂ, ಪ್ರಿಸೈಡಿಂಗ್ ಅಧಿಕಾರಿಯು, ಮತದಾನ ಮುಕ್ತಾಯಗೊಳಿಸುವುದಕ್ಕೆ ನಿಗದಿಪಡಿಸಿದ ಸಮಯವನ್ನು ವಿಸ್ತರಿಸುವಂತಿಲ್ಲ. ಈ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿ, ಮತದಾನದ ಮುಕ್ತಾಯಕ್ಕೆ ನಿಗದಿಪಡಿಸಿದ ಸಮಯದಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದು ಸರತಿ ಸಾಲಿನಲ್ಲಿ ನಿಂತಿರುವ ಮತದಾರರಿಗೆ ತಾನು ಯುಕ್ತವಾಗಿ ಸಹಿ ಮಾಡಿದ ಚೀಟಿಗಳನ್ನು ಸರತಿಯ ಕೊನೆಯಲ್ಲಿ ನಿಂತಿರುವ ಮತದಾರನಿಂದ ಪ್ರಾರಂಭಿಸಿ ಸರತಿ ಪ್ರಾರಂಭದಲ್ಲಿ ನಿಂತಿರುವ ಮತದಾರರವರೆಗೆ ಕೊಡತಕ್ಕದ್ದು.

## 15.36. ಮತಗಟ್ಟೆಗೆ ಮತದಾರರ ಪ್ರವೇಶ

15.36.1. ಸಾಮಾನ್ಯವಾಗಿ, ಪುರುಷ ಹಾಗೂ ಮಹಿಳಾ ಮತದಾರರಿಗಾಗಿ ಪ್ರತ್ಯೇಕ ಸಾಲುಗಳಿರುತ್ತವೆ. ಸಾಲುಗಳನ್ನು ನಿಯಂತ್ರಿಸುವ ವ್ಯಕ್ತಿಯು ಒಂದು ಸಲಕ್ಕೆ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ನಿರ್ದೇಶಿಸಬಹುದಾದಂತೆ ಮೂರು ಅಥವಾ ನಾಲ್ಕು ಮತದಾರರನ್ನು ಮತಗಟ್ಟೆಯ ಒಳಗೆ ಬಿಡುತ್ತಾರೆ. ಒಳಗೆ ಬರುವುದಕ್ಕೆ ಕಾಯುತ್ತಿರುವ ಇತರೆ ಮತದಾರರು ಹೊರಗಡೆ ಸಾಲಿನಲ್ಲಿ ನಿಂತಿರುವಂತೆ ನೋಡಿಕೊಳ್ಳತಕ್ಕದ್ದು. ಪುರುಷ ಮತದಾರರಿಗಾಗಿ ಹಾಗೂ ಮಹಿಳಾ ಮತದಾರರಿಗಾಗಿ ಒಂದಕ್ಕಿಂತ ಹೆಚ್ಚಿನ ಸರದಿ ಸಾಲನ್ನು ಅನುಮತಿಸಲಾಗುವುದಿಲ್ಲ. ಪೋಲಿಂಗ್ ಏಜೆಂಟರು ಇದನ್ನು ಆಕ್ಷೇಪಿಸುವಂತಿಲ್ಲ. ಮತಗಟ್ಟೆಯೊಳಗೆ ಮತ ಚಲಾಯಿಸಲು ಬರುವ ಮಹಿಳಾ ಮತದಾರರು ಹಲವಾರು ಗೃಹಕೃತ್ಯಗಳನ್ನು ಮಾಡಬೇಕಾಗಿರುವುದರಿಂದ, ಮತಗಟ್ಟೆಯೊಳಗೆ ಅವರು ಹೋಗುವ ಸಮಯದಲ್ಲಿ ಪ್ರತಿಯೊಬ್ಬ ಪುರುಷನನ್ನು ಒಳಗೆ ಬಿಡುವಾಗ ಇಬ್ಬರು ಮಹಿಳಾ ಮತದಾರರನ್ನು ಒಳ ಹೋಗಲು ಅನುಮತಿಸಬಹುದು. ಹಿರಿಯ ನಾಗರೀಕರು ಹಾಗೂ ವಿಕಲಚೇತನರು ಇತರ ಮತದಾರರೊಂದಿಗೆ ಸರದಿಯಲ್ಲಿ ಕಾಯದೆ ನೇರವಾಗಿ ಮತಗಟ್ಟೆಯೊಳಗೆ ಪ್ರವೇಶಿಸುವುದಕ್ಕೆ ಮೊದಲ ಆದ್ಯತೆಯನ್ನು ನೀಡಲಾಗಿದೆಯೆಂಬುದನ್ನು ಪ್ರಿಸೈಡಿಂಗ್ ಅಧಿಕಾರಿಗಳು ಖಾತ್ರಿಪಡಿಸಬೇಕು. ಮತಗಟ್ಟೆಯಲ್ಲಿ ಅಗತ್ಯವಿರಬಹುದಾದಂಥ ಎಲ್ಲ ಅವಶ್ಯಕ ನೆರವನ್ನು ಅವರಿಗೆ ಒದಗಿಸಬೇಕು. ಈ ಉದ್ಧೇಶಕ್ಕಾಗಿ, ಅವಶ್ಯಕವೆನಿಸಿದಲ್ಲಿ, ಅಂಥ ವ್ಯಕ್ತಿಗಳಿಗೆ ಪ್ರತ್ಯೇಕ ಸರತಿ ಸಾಲಿನ ವ್ಯವಸ್ಥೆಗಳನ್ನು ಮಾಡಬೇಕು. ಮತಗಟ್ಟೆಯೊಳಗೆ ವಿಕಲ ಚೇತನರ ವ್ಹೀಲ್ ಚೇರುಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಸಂಪೂರ್ಣ ಸೌಲಭ್ಯವನ್ನು ಒದಗಿಸಲಾಗಿದೆ ಎಂಬುದನ್ನು

ಪ್ರಿಸೈಡಿಂಗ್ ಅಧಿಕಾರಿಯು ಖಾತ್ರಿಪಡಿಸಬೇಕು. ಮಹಿಳಾ ಮತ್ತು ಪುರುಷ ಮತದಾರರನ್ನು ಪರ್ಯಾಯ ತಂಡಗಳಲ್ಲಿ ಮತಗಟ್ಟೆಯ ಒಳಗೆ ಬಿಡಬೇಕು.

**15.37. ಪತ್ರಿಕಾ ಪ್ರತಿನಿಧಿಗಳು ಮತ್ತು ಛಾಯಾಗ್ರಾಹಕರಿಗೆ ಸೌಲಭ್ಯಗಳು**

15.37.1. ಶಾಂತಿ ಮತ್ತು ಸುವ್ಯವಸ್ಥೆಗಳ ಪಾಲನೆಗೆ ಒಳಪಟ್ಟು, ಯಾರೇ ಛಾಯಾಚಿತ್ರಗಾರರು ಮತಗಟ್ಟೆಯ ಹೊರಗೆ ಸಾಲಾಗಿ ನಿಂತಿರುವ ಮತದಾರರ ಗುಂಪಿನ ಛಾಯಾಚಿತ್ರ ತೆಗೆದುಕೊಳ್ಳುವುದಕ್ಕೆ ಯಾವುದೇ ಆಕ್ಷೇಪವಿರುವುದಿಲ್ಲ. ಅದಾಗ್ಯೂ, ರಾಜ್ಯ ಸರ್ಕಾರದ ಪ್ರಚಾರ ಇಲಾಖೆಯ ಅಧಿಕಾರಿಗಳು ಸೇರಿದಂತೆ ಯಾರೊಬ್ಬರಿಗೂ ಚುನಾವಣಾ ಆಯೋಗದಿಂದ ಅನುಮತಿ ಪತ್ರವಿಲ್ಲದೆ ಮತಗಟ್ಟೆಯೊಳಗೆ ಪ್ರವೇಶಿಸಲು ಅನುಮತಿ ನೀಡತಕ್ಕದ್ದಲ್ಲ. ಯಾವುದೇ ಸಂದರ್ಭದಲ್ಲೂ, ಮತದಾರನು ತನ್ನ ಮತವನ್ನು ಚಲಾಯಿಸುತ್ತಿರುವ ಸಂದರ್ಭದಲ್ಲಿ ಆತನ ಯಾವುದೇ ಛಾಯಾಚಿತ್ರವನ್ನು ತೆಗೆಯಲು ಅನುಮತಿಯನ್ನು ನೀಡತಕ್ಕದ್ದಲ್ಲ.

**15.38. ಇವಿಎಂಗಳಲ್ಲಿ ಮತಗಳನ್ನು ದಾಖಲು ಮಾಡುವ ವಿಧಾನ**

15.38.1. ಪೋಲಿಮಗ್ ಏಜೆಂಟರು ಮತಗಟ್ಟೆಯಲ್ಲಿ ಅನುಸರಿಸುವ ಕಾರ್ಯವಿಧಾನದ ಬಗ್ಗೆ ಅನಾವಶ್ಯಕ ಆಕ್ಷೇಪಣೆಗಳನ್ನು ಎತ್ತದಿರುವ ಹಾಗೆ ಇವಿಎಂ ನಲ್ಲಿ ಮತಗಳನ್ನು ದಾಖಲಿಸುವ ವಿಧಾನದ ಬಗ್ಗೆ ಪೋಲೀಂಗ್ ಏಜೆಂಟರು ಸಂಪೂರ್ಣವಾಗಿ ತಿಳಿದಿರಬೇಕು.

15.38.2. ಮತದಾರನನ್ನು ಗುರುತಿಸುವುದು, ಆತನ ಎಡ ತೋರು ಬೆರಳಿನ ಮೇಲೆ ಅಳಿಸಲಾಗದ ಶಾಯಿಯನ್ನು ಹಚ್ಚುವುದು ಮತ್ತು ಮತದಾರರ ರಿಜಿಸ್ಟರಿನಲ್ಲಿ (ಹಿಂದಿನ ಕಂಡಿಕೆಗಳಲ್ಲಿ ವಿಸ್ತೃತವಾಗಿ ವಿವರಿಸಲಾದಂತೆ) ಆತನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯುವುದು – ಇತ್ಯಾದಿಗೆ ಸಂಬಂಧಿಸಿದ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಮತದಾರನನ್ನು ಮತಯಂತ್ರದಲ್ಲಿ ಆತನ ಮತ ದಾಖಲಿಸಲು ಅವಕಾಶ ಮಾಡಿಕೊಟ್ಟ ನಂತರ, ಮತಯಂತ್ರದ ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಪ್ರಿಸೈಡಿಂಗ್ ಅಧಿಕಾರಿ/ಪೋಲಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಲ್ಲಿರುವ 'ಬ್ಯಾಲೆಟ್' ಬಟನ್‌ಅನ್ನು ಒತ್ತಬೇಕು. ಇದು ಮತದಾರ ಮತದಾನವನ್ನು ದಾಖಲಿಸುವುದಕ್ಕೆ ಬ್ಯಾಲೆಟ್ ಯೂನಿಟ್(ಗಳ)ಅನ್ನು ಸಿದ್ಧಗೊಳಿಸುತ್ತದೆ. ಬ್ಯಾಲೆಟ್ ಬಟನ್‌ಅನ್ನು ಒತ್ತಿದಾಗ, ಕಂಟ್ರೋಲ್ ಯೂನಿಟ್ ಮೇಲೆ 'ಬಿಜಿ' ಎಂಬ ಗುರುತಿನ ದೀಪವು ಕೆಂಪು ಬಣ್ಣದಿಂದ ಉರಿಯುತ್ತದೆ. ಅದೇ ಸಮಯದಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟಿನಲ್ಲಿ ಇಟ್ಟಿರುವ ಪ್ರತಿಯೊಂದು ಬ್ಯಾಲೆಟಿಂಗ್ ಯೂನಿಟ್ಟಿನ ಮೇಲಿರುವ 'ರೆಡಿ' ಎಂಬ ಗುರುತಿನ ದೀಪವು ಹಸಿರು ಬಣ್ಣದಿಂದ

ಬೆಳಗಲಾರಂಭಿಸುತ್ತದೆ. ಮತದಾರನು, ತನ್ನ ಮತವನ್ನು ದಾಖಲಿಸುವುದಕ್ಕಾಗಿ, ಬ್ಯಾಲೆಟಿಂಗ್ ಯೂನಿಟ್ಟಿನ ಮೇಲಿರುವ ತಾನು ಆಯ್ಕೆ ಮಾಡಬಯಸುವ ಅಭ್ಯರ್ಥಿಯ ಹೆಸರು, ಭಾವಚಿತ್ರ ಹಾಗೂ ಚಿಹ್ನೆ ಎದುರಿಗೆ ಒದಗಿಸಿರುವ (ಅಭ್ಯರ್ಥಿ ಬಟನ್ ಎಂದು ಕರೆಯಲಾದ) ನೀಲಿ ಬಟನ್‌ಅನ್ನು ಒತ್ತಬೇಕು. (ಪ್ರತಿಯೊಬ್ಬ ಅಭ್ಯರ್ಥಿಗೆ ಅವರ ಹೆಸರು, ಭಾವಚಿತ್ರ ಹಾಗೂ ಚಿಹ್ನೆಯ ಎದುರಿಗೆ ಪ್ರತ್ಯೇಕ ನೀಲಿ ಬಟನ್‌ಅನ್ನು ಒದಗಿಸಲಾಗಿರುತ್ತದೆ) ಮತದಾರರು ಅಭ್ಯರ್ಥಿಯ ನೀಲಿ ಬಟನ್‌ಅನ್ನು ಒತ್ತಿದಾಗ 'ರೆಡಿ' ದೀಪವು ಆರಿಹೋಗುವುದು ಹಾಗೂ ಬ್ಯಾಲೆಟಿಂಗ್ ಯೂನಿಟ್ಟಿನಲ್ಲಿ ಅಭ್ಯರ್ಥಿಯ ನೀಲಿ ಬಟನ್ನಿನ ಪಕ್ಕದಲ್ಲಿ ಒದಗಿಸಿರುವ ಅವರ ಹೆಸರಿನ ಮುಂದಿರುವ ದೀಪವು ಕೆಂಪು ಬಣ್ಣದಲ್ಲಿ ಬೆಳಗಲಾರಂಭಿಸುತ್ತದೆ ವಿವಿಪ್ಯಾಟ್ ಮತಹಾಕಿದ ಅಭ್ಯರ್ಥಿಯ ಚಿಹ್ನೆ, ಹೆಸರು ಮತ್ತು ಕ್ರಮಸಂಖ್ಯೆ ಇರುವ ಒಂದು ಸಣ್ಣ ಪೇಪರ್ ಸ್ಲಿಪ್‌ನ್ನು ಪ್ರಿಂಟ್ ಮಾಡುತ್ತದೆ ಮತ್ತು ಇದು ವಿವಿಪ್ಯಾಟ್ ವಿಂಡೋದಲ್ಲಿ ಏಳು ಸೆಕೆಂಡುಗಳ ಕಾಲ ಕಾಣಿಸುತ್ತದೆ. ಅಲ್ಲದೆ, ಹಾಜರಿರುವ ಎಲ್ಲರಿಗೂ ಕಂಟ್ರೋಲ್ ಯೂನಿಟ್ಟಿನಿಂದ ಹೊರ ಹೊಮ್ಮುವ 'ಬೀಪ್' ಶಬ್ದವು ಕೇಳಿ ಬರುತ್ತದೆ. ಇದಾದ ಕೆಲವು ಕ್ಷಣಗಳ ನಂತರ ಬ್ಯಾಲೆಟಿಂಗ್ ಯೂನಿಟ್ಟಿನ ಅಭ್ಯರ್ಥಿಯ ಹೆಸರಿನ ಮುಂದಿರುವ ದೀಪದಲ್ಲಿರುವ ಕೆಂಪು ಬೆಳಕು, ಕಂಟ್ರೋಲ್ ಯೂನಿಟ್ಟಿನ ಬಿಸಿ ಲ್ಯಾಂಪ್‌ನಲ್ಲಿನ ಕೆಂಪು ಬೆಳಕು ಮತ್ತು ಬೀಪ್ ಶಬ್ದವು ನಿಂತುಹೋಗುತ್ತದೆ. ಹೀಗೆ ಕಣ್ಣಿಗೆ ಕಾಣುವ ಮತ್ತು ಕಿವಿಗೆ ಕೇಳುವ ಚಿಹ್ನೆಗಳು, ಮತದಾರ ಯಾವ ಅಭ್ಯರ್ಥಿಗೆ ಮತ ನೀಡಲು ಬಟನ್‌ಅನ್ನು ಒತ್ತಿರುವನೋ ಅವನಿಗೆ ಮತವು ಕಂಟ್ರೋಲ್ ಯೂನಿಟ್ಟಿನಲ್ಲಿ ದಾಖಲಾಗಿರುವುದನ್ನು ಸೂಚಿಸುವುದು. ಆಗ ಬ್ಯಾಲೆಟಿಂಗ್ ಯೂನಿಟ್ ತಂತಾನೇ ಲಾಕ್ ಆಗುತ್ತದೆ. ಮುಂದಿನ ಮತದಾರನು ತನ್ನ ಮತವನ್ನು ದಾಖಲು ಮಾಡಲು ಅವಕಾಶ ನೀಡುವುದಕ್ಕಾಗಿ ಮತ್ತೆ ಕಂಟ್ರೋಲ್ ಯೂನಿಟ್‌ನ 'ಬ್ಯಾಲೆಟ್' ಬಟನ್‌ಅನ್ನು ಒತ್ತಿದಾಗ ಮಾತ್ರ ನಂತರದ ಮತವನ್ನು ದಾಖಲು ಮಾಡಬಹುದು.

15.38.3. ಯಾರೇ ಮತದಾರನಿಗೆ ಇವಿಎಂ ಮೂಲಕ ಮತಚಲಾಯಿಸುವ ವಿಧಾನ ಸರಿಯಾಗಿ ತಿಳಿಯದಿದ್ದ ಪಕ್ಷದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಮತದಾರನಿಗೆ ಅರ್ಥವಾಗುವ ರೀತಿಯಲ್ಲಿ ಮತಗಟ್ಟೆಯಲ್ಲಿ ಇರಿಸಲಾದ ಇವಿಎಂನ ಕಾರ್ಡ್‌ಬೋರ್ಡ್ ಮಾದರಿಯನ್ನು ಬಳಸಿ ಮತದಾನ ಪ್ರಕ್ರಿಯೆಯ ಬಗ್ಗೆ ಮತದಾರರಿಗೆ ವಿವರಿಸಿ ಹೇಳಬಹುದು. ಪೋಲಿಂಗ್ ಏಜೆಂಟರು ಮತದಾರರಿಗೆ ನೆರವಾಗಲು ವೋಟಿಂಗ್ ಕಂಪಾರ್ಟ್‌ಮೆಂಟಿನೊಳಗೆ ಹೋಗುವ ಹಾಗಿಲ್ಲ.

**15.39. ಮತಗಟ್ಟೆಯಲ್ಲಿ ಮತದಾನದ ಪ್ರಕ್ರಿಯೆ.**

ಸಂಕ್ಷಿಪ್ತವಾಗಿ ಮತದಾನದ ಪ್ರಕ್ರಿಯೆಯ ಈ ಕೆಳಕಂಡಂತಿರುತ್ತದೆ:–

1. ಮತದಾರನು ಮತಗಟ್ಟೆಯನ್ನು ಪ್ರವೇಶಿಸಿದ ಮೇಲೆ ಆತನು ನೇರವಾಗಿ ಮತದಾರರನ್ನು ಗುರುತಿಸುವ ಜವಾಬ್ದಾರಿ ಹೊತ್ತಿರುವ ಮತ್ತು ಗುರುತು ಮಾಡಲಾದ ಅಧಿಕೃತ ಮತದಾರರ ಪಟ್ಟಿಯ ಪ್ರತಿಯ ಪ್ರಭಾರವನ್ನು ಹೊಂದಿರುವ ಮೊದಲನೇ ಪೋಲಿಂಗ್ ಅಧಿಕಾರಿಯ ಬಳಿಗೆ ಹೋಗುತ್ತಾನೆ. ಆತನ ಗುರುತು ರುಜುವಾತಾದ ನಂತರ ಮತ್ತು ಆತನ ಗುರುತಿನ ಬಗ್ಗೆ ಯಾರೇ ಪೋಲಿಂಗ್ ಏಜೆಂಟರು ಆಕ್ಷೇಪಣೆಯನ್ನು ಎತ್ತದಿದ್ದ ಪಕ್ಷದಲ್ಲಿ, ಎರಡನೇ ಪೋಲಿಂಗ್ ಅಧಿಕಾರಿಯು ಮತದಾರನ ಎಡ ತೋರು ಬೆರಳಿಗೆ ಅಳಿಸಲಾಗದ ಶಾಯಿಯಿಂದ ಗುರುತು ಮಾಡುತ್ತಾನೆ. 2ನೇ ಪೋಲಿಂಗ್ ಅಧಿಕಾರಿಯು 'ಮತದಾರರ ರಿಜಿಸ್ಟರ್' (ನಮೂನೆ–17ಎ) ನ ಪ್ರಭಾರವನ್ನು ಕೂಡ ಹೊಂದಿರುವುದರಿಂದ ಮತದಾರನು ಮತಗಟ್ಟೆಯನ್ನು ಬಿಡುವುದಕ್ಕೂ ಮುಂಚೆ ಅಳಿಸಲಾಗದ ಶಾಯಿಯ ಗುರುತು ಒಣಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಆತನು ಮತದಾರರ ರಿಜಿಸ್ಟರಿನಲ್ಲಿ (ನಮೂನೆ 17ಎ) ನಮೂದು ಮಾಡುವುದಕ್ಕೂ ಮುನ್ನ ಅಳಿಸಲಾಗದ ಶಾಯಿಯ ಗುರುತನ್ನು ಮಾಡುತ್ತಾನೆ. ಆ ಪೋಲಿಂಗ್ ಅಧಿಕಾರಿಯು ಮತದಾರರ ಪಟ್ಟಿಯ ಪ್ರಕಾರ ಆತನ ಕ್ರಮಸಂಖ್ಯೆಯನ್ನು ಆ ರಿಜಿಸ್ಟರಿನ ಅಂಕಣ(2) ರಲ್ಲಿ ಬರೆದುಕೊಳ್ಳುತ್ತಾನೆ. ಆತ ನಮೂನೆ 17ಎ (ಮತದಾರರ ರಿಜಿಸ್ಟರ್)ನ ಅಂಕಣ (3) ರಲ್ಲಿ ಗುರುತಿನ ದಾಖಲೆಯ ಕಡೆಯ ನಾಲ್ಕು ಅಂಕಿಗಳನ್ನು ನಮೂದಿಸಬೇಕು. ಎಪಿಕ್ ಆಧಾರದ ಮೇಲೆ ಮತಚಲಾಯಿಸುವ ಮತದಾರರಾಗಿದ್ದ ಪಕ್ಷದಲ್ಲಿ, (ಎಪಿಕ್ ಅನ್ನು ಸೂಚಿಸುವ) 'ಇಪಿ' ಎಂಬ ಅಕ್ಷರಗಳನ್ನು ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸಿದರೆ ಸಾಕು ಮತ್ತು ಎಪಿಕ್ ಸಂಖ್ಯೆಯನ್ನು ಬರೆಯುವ ಅವಶ್ಯಕತೆಯಿಲ್ಲ. ಆದಾಗ್ಯೂ, ಯಾವುದೇ ಪರ್ಯಾಯ ದಾಖಲೆಗಳ ಆಧಾರದ ಮೇಲೆ ಮತಚಲಾಯಿಸುವ ವ್ಯಕ್ತಿಗಳಾಗಿದ್ದ ಸಂದರ್ಭದಲ್ಲಿ, ದಾಖಲೆಯ ಕಡೆಯ ನಾಲ್ಕು ಅಂಕಿಗಳನ್ನು ಬರೆದುಕೊಳ್ಳುವ ಸೂಚನೆಗಳು ಅನ್ವಯವಾಗತಕ್ಕದ್ದು. ಹಾಜರುಪಡಿಸಿದ ದಾಖಲೆಯ ಬಗೆಯನ್ನು ಸಹ ಅದರಲ್ಲಿ ನಮೂದಿಸಬೇಕು. ಆತನು ಮತದಾರನಿಗೆ ಸಂಬಂಧಿಸಿದ ನಮೂದಿನ ಎದುರಿಗೆ ಸದರಿ ರಿಜಿಸ್ಟರಿನ ಅಂಕಣ (4) ರಲ್ಲಿ ಮತದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯುತ್ತಾನೆ. ಮತದಾರನು ಹಾಜರುಪಡಿಸಿದ ಎಪಿಕ್/ ಗುರುತಿನ ದಾಖಲೆಗಳ ಕಡೆಯ ನಾಲ್ಕು ಅಂಕಿಗಳನ್ನು ಮತದಾರರ ರಿಜಿಸ್ಟರಿನ (ನಮೂನೆ 17ಎ) ''ಷರಾ' ಅಂಕಣ (ಅಂಕಣ –5) ದಲ್ಲಿ ನಮೂದಿಸಬೇಕು. ಆ ನಂತರ 2ನೇ ಪೋಲಿಂಗ್ ಅಧಿಕಾರಿಯು ಮತದಾರರಿಗೆ ಮತದಾರರ ಚೀಟಿಯನ್ನು ಕೂಡ ಸಿದ್ಧಪಡಿಸುತ್ತಾನೆ.

2. ನಂತರ ಮತದಾರನು ಈ ಮತದಾರರ ಚೀಟಿಯೊಂದಿಗೆ ಮತಯಂತ್ರದ ಕಂಟ್ರೋಲ್ ಯೂನಿಟ್‌ನ ಪ್ರಭಾರ ಹೊಂದಿರುವ ಪ್ರಿಸೈಡಿಂಗ್ ಅಧಿಕಾರಿಯ / ಮೂರನೇ ಪೋಲಿಂಗ್

ಅಧಿಕಾರಿಯ ಬಳಿಗೆ ಹೋಗುತ್ತಾನೆ. ಪ್ರಿಸೈಡಿಂಗ್ ಅಧಿಕಾರಿ ಅಥವಾ ಸಂದರ್ಭಾನುಸಾರ ಮೂರನೇ ಪೋಲಿಂಗ್ ಅಧಿಕಾರಿಯು ಮತದಾರರ ಎಡಗೈ ತೋರು ಬೆರಳಿನ ಮೇಲೆ ಹಾಕಲಾಗಿರುವ ಅಳಿಸಲಾಗದ ಶಾಯಿಯ ಗುರುತನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಮತದಾರರ ಚೀಟಿಯ ಆಧಾರದ ಮೇಲೆ ಆತನಿಗೆ ಮತಯಂತ್ರದಲ್ಲಿ ತನ್ನ ಮತವನ್ನು ಚಲಾಯಿಸಲು ಅನುಮತಿಸುತ್ತಾರೆ. ಮತಯಂತ್ರದ ಮೂಲಕ ಮತವನ್ನು ಚಲಾಯಿಸುವ ಕಾರ್ಯವಿಧಾನವನ್ನು ಈ ಹಿಂದಿನ ಪ್ಯಾರಾಗಳಲ್ಲಿ ವಿವರಿಸಲಾಗಿದೆ.

3. ಮತದಾರರನ್ನು ಮತದಾರರ ರಿಜಿಸ್ಟರಿನಲ್ಲಿ ನಮೂದಿಸಿರುವ ಕ್ರಮದಲ್ಲಿಯೇ ಮತಯಂತ್ರದಲ್ಲಿ ಅವರ ಮತವನ್ನು ಚಲಾಯಿಸಲು ಅನುಮತಿ ನೀಡಲಾಗುತ್ತದೆ. ಯಾವುದೇ ಅಸಾಧಾರಣ ಸಂದರ್ಭಗಳು, ಅನಿರೀಕ್ಷಿತ ಅಥವಾ ಅನಿವಾರ್ಯ ಕಾರಣಗಳಿಂದಾಗಿ ಯಾರೇ ಮತದಾರರಿಗೆ ಸಂಬಂಧಿಸಿದಂತೆ ಅಂಥ ನಿಖರವಾದ ಕ್ರಮವನ್ನು ಅನುಸರಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಮತದಾರನು ತನ್ನ ಮತವನ್ನು ಚಲಾಯಿಸಿದ ನಿಖರವಾದ ಕ್ರಮಸಂಖ್ಯೆಯನ್ನು ತೋರಿಸುವ ಸೂಕ್ತವಾದ ನಮೂದನ್ನು ಸಂಬಂಧಪಟ್ಟ ವ್ಯಕ್ತಿಯ ಎದುರಿಗೆ ಮತದಾರರ ರಿಜಿಸ್ಟರಿನ ಷರಾ ಅಂಕಣದಲ್ಲಿ ದಾಖಲಿಸಬೇಕು. ಆ ಮೂಲಕ ಯಾವ ಮತದಾರರ ಸರಣಿ ಕ್ರಮಕ್ಕೆ ಭಂಗವುಂಟಾಗಿದೆಯೋ ಆ ತರುವಾಯದ ಮತದಾರರಿಗೆ ಸಂಬಂಧಿಸಿದಂತೆ ಅದೇ ರೀತಿಯ ನಮೂದುಗಳನ್ನು ಸಹ ಮಾಡಬೇಕು.

4. ಮತದಾರನ ಎಡಗೈಯ ತೋರು ಬೆರಳಿನಲ್ಲಿ ಅಳಿಸಲಾಗದ ಶಾಯಿಯ ಸ್ಪಷ್ಟವಾದ ಗುರುತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತದಾರನು ಮತಗಟ್ಟೆಯಿಂದ ಹೊರಹೋಗುವ ಮುನ್ನ ಮತದಾರರನ ಎಡಗೈ ತೋರು ಬೆರಳನ್ನು ಪರಿಶೀಲಿಸಿ ನೋಡುವ ಕಾರ್ಯವನ್ನು ಪ್ರಿಸೈಡಿಂಗ್ ಅಧಿಕಾರಿಯು ತನ್ನ ತಂಡದ ಮತ್ತೊಬ್ಬ ಸದಸ್ಯರಿಗೆ ವಹಿಸಿಕೊಡಬಹುದು. ಆತನು ಅಂತಹ ಗುರುತು ಸ್ಪಷ್ಟವಾಗಿ ಕಣ್ಣಿಗೆ ಕಾಣುವುದಿಲ್ಲ ಇಲ್ಲವೇ ಅಳಿಸಲಾಗದ ಶಾಯಿಯನ್ನು ಒರೆಸಿ ಹಾಕಲಾಗಿದೆ ಎಂಬುದನ್ನು ಗುರುತಿಸಿದರೆ, ಆತ ಮತದಾರನ ಎಡಗೈ ತೋರು ಬೆರಳಿಗೆ ಮತ್ತೊಮ್ಮೆ ಅಳಿಸಲಾಗದ ಶಾಯಿಯಿಂದ ಗುರುತು ಮಾಡಬೇಕು.

**15.40. ಮತದಾರರ ಗುರುತನ್ನು ಪ್ರಶ್ನಿಸುವುದು.**

**15.40.1.** ಮೇಲೆ ಹೇಳಿರುವಂತೆ, ಮತದಾರರ ಸೋಗಿನಲ್ಲಿ ಬೇರೊಬ್ಬರ ಮತವನ್ನು ಚಲಾಯಿಸಲು ಬರುವ ನಕಲಿ ಮತದಾರರನ್ನು ಪತ್ತೆ ಹಚ್ಚಲು ಮತ್ತು ಅಂಥವರು ಮತ ಚಲಾಯಿಸದಂತೆ ತಡೆಯಲು

ಪ್ರಿಸೈಡಿಂಗ್ ಅಧಿಕಾರಿಗೆ ನೆರವಾಗುವುದು ಪೋಲಿಂಗ್ ಏಜೆಂಟ್‌ರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಆದ್ದರಿಂದ, ಪೋಲಿಂಗ್ ಏಜೆಂಟನು ಯಾರೇ ನಿರ್ದಿಷ್ಟ ಮತದಾರನೆಂದು ಕ್ಲೇಮು ಮಾಡುವ ವ್ಯಕ್ತಿಯು ಆ ಮತದಾರನಾಗಿರುವುದಿಲ್ಲವೆಂಬುದು ತಮಗೆ ವೈಯಕ್ತಿವಾಗಿ ಗೊತ್ತಿದ್ದ ಪಕ್ಷದಲ್ಲಿ, ಆ ರೀತಿ ಮತದಾರನಾಗಿ ಬರುವ ವ್ಯಕ್ತಿಯ ಗುರುತನ್ನು ಆಕ್ಷೇಪಿಸುವ ಹಕ್ಕನ್ನು ಹೊಂದಿರುತ್ತಾನೆ. ಆದರೆ, ಪೋಲಿಂಗ್ ಏಜೆಂಟ್‌ರು ಗೊತ್ತುಗುರಿಯಿಲ್ಲದೆ ಪ್ರಶ್ನಿಸಕೂಡದು. ಏಕೆಂದರೆ, ಇಂತಹ ಸಂದರ್ಭಗಳಲ್ಲಿ ಕೆಲವು ಮತದಾರರು ಬೇಸರಗೊಂಡು ಮತದಾನ ಮಾಡದೇ ಸರತಿ ಸಾಲನ್ನು ಬಿಟ್ಟುಹೋಗುವ ಸಾಧ್ಯತೆಯೂ ಇರುತ್ತದೆ ಮತ್ತು ಮತದಾನವು ಸುಸೂತ್ರವಾಗಿ ಮುಂದುವರಿಯದೇ ವಿಳಂಬಕ್ಕೆ ಎಡೆಮಾಡಿಕೊಡುತ್ತದೆ.

**15.41. ಮೃತರಾದ, ಗೈರುಹಾಜರಾದ ಮತ್ತು ಅನುಮಾನಾಸ್ಪದರೆಂದು ಆಪಾದಿಸಲಾದ ಮತದಾರರ ಪಟ್ಟಿ.**

15.41.1. ಯಾರೇ ಪೋಲಿಂಗ್ ಏಜೆಂಟ್‌ರ ಬಳಿ ಮತದಾರರ ಪಟ್ಟಿಯ ಪ್ರತಿ ಮತ್ತು ತನ್ನ ಪಕ್ಷದ ಅಭ್ಯರ್ಥಿ ಅಥವಾ ಅವನ ಪಕ್ಷವು ಸಿದ್ಧಪಡಿಸಿರಬಹುದಾದಂತಹ ಮೃತರ, ಗೈರು ಹಾಜರಾದವರ ಮತ್ತು ಅನುಮಾನಾಸ್ಪದರೆಂದು ಆಪಾದಿಸಲಾದ ಮತದಾರರ ಹೆಸರುಗಳು ಇರುವ ಪಟ್ಟಿಯ ಒಂದು ಪ್ರತಿ ಇರುವುದೆಂದು ನಿರೀಕ್ಷಿಸಲಾಗಿದೆ. ಈ ಪಟ್ಟಿಯ ಒಂದು ಪ್ರತಿಯನ್ನು ಪ್ರಿಸೈಡಿಂಗ್ ಅಧಿಕಾರಿಗೆ ಕೂಡ ಒದಗಿಸಿರಬೇಕು. ಯಾರೇ ವ್ಯಕ್ತಿಯು ಅಂತಹ ಪಟ್ಟಿಯಲ್ಲಿ ಹೆಸರು ನಮೂದಿಸಿರುವ ಮತದಾರನೆಂದು ಕ್ಲೇಮು ಮಾಡಿದರೆ, ಪೋಲಿಂಗ್ ಏಜೆಂಟ್‌ನು ಆ ಸಂಗತಿಯನ್ನು ಪ್ರಿಸೈಡಿಂಗ್ ಅಧಿಕಾರಿಯ ಗಮನಕ್ಕೆ ತರಬೇಕು. ಇದು ಔಪಚಾರಿಕ ಆಕ್ಷೇಪಣೆ ಎನಿಸುವುದಿಲ್ಲ. ಪ್ರಿಸೈಡಿಂಗ್ ಅಧಿಕಾರಿರವರು ಆ ವ್ಯಕ್ತಿಯ ಗುರುತನ್ನು ಪರೀಕ್ಷಿಸುತ್ತಾರೆ.

**15.42. ಮತದಾರರ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸುವುದು.**

15.42.1. ಪ್ರಿಸೈಡಿಂಗ್ ಅಧಿಕಾರಿಯು ಪಟ್ಟಿಯನ್ನು ಪರಿಗಣಿಸದಿದ್ದರೆ, ಸಂಬಂಧಪಟ್ಟ ವ್ಯಕ್ತಿಯ ಗುರುತನ್ನು ಔಪಚಾರಿಕವಾಗಿ ಪ್ರಶ್ನಿಸಬಹುದು. ಪರಂತು, ಪ್ರಿಸೈಡಿಂಗ್ ಅಧಿಕಾರಿಯು ಸಂಬಂಧಪಟ್ಟ ವ್ಯಕ್ತಿಯು ಮತದಾರನ ಸೋಗಿನಲ್ಲಿ ಬೇರೊಬ್ಬನ ಮತವನ್ನು ಚಲಾಯಿಸಿಲು ಬಂದಿರುವ ನಕಲಿ ಮತದಾರನೆಂಬುದು ಅವರಿಗೆ ಮನವರಿಕೆಯಾಗಬೇಕು.

15.42.2. ಮೃತರಾದವರ, ಗೈರುಹಾಜರಿಯಾಗಿರುವವರ ಮತ್ತು ಅನುಮಾನಾಸ್ಪದವೆಂದು ಆಪಾದಿಸಲಾದ ಮತದಾರರ ಮೇಲ್ಕಂಡ ಪಟ್ಟಿಯಲ್ಲಿ ಮತದಾರನ ಹೆಸರು ನಮೂದಾಗದಿದ್ದು, ಆದರೆ ಮತದಾರನೆಂದು ಕ್ಲೇಮು ಮಾಡುತ್ತಿರುವ ವ್ಯಕ್ತಿಯು ನೈಜ ಮತದಾರನಲ್ಲವೆಂದು ಯಾರೇ

ಪೋಲಿಂಗ್ ಏಜೆಂಟನಿಗೆ ವೈಯಕ್ತಿಕವಾಗಿ ಗೊತ್ತಿದ್ದರೆ, ಆಗ ಅವರು ಆ ವ್ಯಕ್ತಿಯ ಗುರುತನ್ನು ಔಪಚಾರಿಕವಾಗಿ ಪ್ರಶ್ನಿಸಬಹುದು.

15.42.3. ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿತವಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಚುನಾವಣೆಯಲ್ಲಿ ಮತ ನೀಡಲು ಹಕ್ಕಿರುತ್ತದೆ. ಮತದಾರನೆಂದು ಕ್ಲೇಮು ಮಾಡಿ, ಹೆಸರು ಮತ್ತು ಇತರ ವಿವರಗಳನ್ನು ಸರಿಯಾಗಿ ನೀಡುವ ಮತ್ತು ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿ (ಎಪಿಕ್) ಅಥವಾ ಈ ನಿರ್ದಿಷ್ಟ ಚುನಾವಣೆಗೆ ಆಯೋಗದಿಂದ ಅನುಮೋದಿಸಲ್ಪಟ್ಟ ಪರ್ಯಾಯ ದಸ್ತಾವೇಜುಗಳಲ್ಲಿ ಯಾವುದಾದರೂ ಒಂದನ್ನು ಹಾಜರುಪಡಿಸುವ ಯಾರೇ ವ್ಯಕ್ತಿಯನ್ನು ಸಾಮಾನ್ಯವಾಗಿ ಆ ಮತದಾರನೆಂದೇ ಭಾವಿಸಲಾಗುವುದು. ಆದ್ದರಿಂದ, ತಮಗೆ ಪ್ರಶ್ನಿತ ವ್ಯಕ್ತಿಯ ಗುರುತು ಚೆನ್ನಾಗಿ ತಿಳಿದಿದ್ದರೆ ಮಾತ್ರವೇ ಯಾರೇ ಮತದಾರನ ಗುರುತಿನ ಬಗ್ಗೆ ಪ್ರಶ್ನಿಸುವಂತೆ ಪೋಲಿಂಗ್ ಏಜೆಂಟರಿಗೆ ಸಲಹೆ ನೀಡಲಾಗಿದೆ.

**15.43. ಆಕ್ಷೇಪಣಾ ಶುಲ್ಕ**

**15.43.1**. ಪ್ರಿಸೈಡಿಂಗ್ ಅಧಿಕಾರಿಯು, ಆಕ್ಷೇಪಣೆ ಮಾಡುವ ವ್ಯಕ್ತಿಯು ನಗದು ರೂಪದಲ್ಲಿ 2 ರೂ.ಗಳನ್ನು ತಮಗೆ ಪಾವತಿಸುವವರೆಗೆ ಯಾರೇ ಪೋಲಿಂಗ್ ಏಜೆಂಟ್‌ನು ಎತ್ತುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಬಾರದು. ಹಣವನ್ನು ಪಾವತಿಸಿದ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಚುನಾವಣಾ ಆಯೋಗವು ಗೊತ್ತುಪಡಿಸಿದ ನಮೂನೆಯಲ್ಲಿ ಆಕ್ಷೇಪಣೆ ಮಾಡಿದ ವ್ಯಕ್ತಿಗೆ ರಸೀದಿಯನ್ನು ಕೊಡುತ್ತಾರೆ.

**15.44. ಆಕ್ಷೇಪಣೆಯ ಬಗ್ಗೆ ಸಂಕ್ಷಿಪ್ತ ವಿಚಾರಣೆ**

15.44.1. ಯಾರೇ ಮತದಾರನ ಗುರುತಿನ ಬಗ್ಗೆ ಪೋಲಿಂಗ್ ಏಜೆಂಟನು ಔಪಚಾರಿಕವಾಗಿ ಪ್ರಶ್ನಿಸಿದಾಗ ಪ್ರಿಸೈಡಿಂಗ್ ಅಧಿಕಾರಿಯು, ಆಕ್ಷೇಪಣೆಗೆ ಗುರಿಯಾದ ವ್ಯಕ್ತಿಗೆ ನಕಲಿ ಮತದಾನ ಮಾಡಿದರೆ ಯಾವ ದಂಡನೆ ವಿಧಿಸಲಾಗುತ್ತದೆ ಎಂಬ ಬಗ್ಗೆ ಎಚ್ಚರಿಕೆ ನೀಡಿ, ಮತದಾರರ ಪಟ್ಟಿಯಲ್ಲಿನ ಸಂಬಂಧಪಟ್ಟ ನಮೂದನ್ನು ಪೂರ್ಣವಾಗಿ ಓದಿ ಹೇಳಿ, ಆ ನಮೂದಿನಲ್ಲಿ ಉಲ್ಲೇಖಿಸಿರುವ ವ್ಯಕ್ತಿ ತಾವೆಯೇ ಎಂದು ಆತನನ್ನು ಕೇಳಿ, ಆತನ ಹೆಸರು ಮತ್ತು ವಿಳಾಸವನ್ನು ಆಕ್ಷೇಪಿತ ಮತದಾರರ (**ಅನುಬಂಧ–27**) ಪಟ್ಟಿಯಲ್ಲಿ ನಮೂದಿಸಿ, ಅದರ ಮೇಲೆ ಆತನ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕುವಂತೆ ಆತನಿಗೆ ಹೇಳುತ್ತಾರೆ. ಆಕ್ಷೇಪಣೆಗೆ ಒಳಗಾದ ಆ ವ್ಯಕ್ತಿಯು ಹಾಗೆ ಮಾಡಲು ನಿರಾಕರಿಸಿದರೆ, ಪ್ರಿಸೈಡಿಂಗ್ ಅಧಿಕಾರಿಯು ಆತನಿಗೆ ಮತ ನೀಡಲು ಅನುಮತಿ ನೀಡುವಂತಿಲ್ಲ.

15.44.2. ಪ್ರಿಸೈಡಿಂಗ್ ಅಧಿಕಾರಿರವರು ಆಕ್ಷೇಪಿತ ಮತಗಳ ಪಟ್ಟಿಯಲ್ಲಿ ನಮೂದನ್ನು ಮಾಡಿ ಸದರಿ ಪಟ್ಟಿಯ ಸಂಬಂಧಪಟ್ಟ ಅಂಕಣದಲ್ಲಿ, ಆಕ್ಷೇಪಣೆಗೆ ಒಳಗಾದ ವ್ಯಕ್ತಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆದ ನಂತರ, ಅವರು ಆಕ್ಷೇಪಣೆಗೆ ಗುರಿಯಾದ ವ್ಯಕ್ತಿಯು ಆತನು ಹೇಳಿಕೊಳ್ಳುವಂತೆ ಮತದಾರನಾಗಿರುವುದಿಲ್ಲ ಎಂಬುದನ್ನು ರುಜುವಾತುಪಡಿಸಲು ಸಾಕ್ಷ್ಯವನ್ನು ಹಾಜರುಪಡಿಸುವಂತೆ ಆಕ್ಷೇಪ ಎತ್ತಿರುವ ವ್ಯಕ್ತಿಗೆ ಕೇಳುತ್ತಾರೆ. ಆಕ್ಷೇಪ ಎತ್ತಿದ ವ್ಯಕ್ತಿಯು ತನ್ನ ಆಕ್ಷೇಪಣೆಗೆ ಸಮರ್ಥನೆಯಾಗಿ ಮೇಲು ನೋಟದ ಪುರಾವೆಯನ್ನು ಒದಗಿಸಲು ವಿಫಲನಾದರೆ, ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪವನ್ನು ತಳ್ಳಿಹಾಕಿ ಆಕ್ಷೇಪಣೆಗೆ ಗುರಿಯಾದ ವ್ಯಕ್ತಿಗೆ ಮತ ನೀಡಲು ಅನುಮತಿ ನೀಡುತ್ತಾರೆ. ಆಕ್ಷೇಪ ಎತ್ತಿದ ವ್ಯಕ್ತಿಯು, ಆಕ್ಷೇಣೆಗೆ ಗುರಿಯಾದ ವ್ಯಕ್ತಿ ಪ್ರಶ್ನಿತ ಮತದಾರನಲ್ಲ ಎಂಬುದನ್ನು ಮೇಲ್ನೋಟಕ್ಕೆ ಸಾಬೀತುಪಡಿಸುವಲ್ಲಿ ಸಫಲನಾದರೆ, ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆಯ ಬಗ್ಗೆ ವಾದಿಸಲು ಎಂದರೆ ಮತದಾರನೆಂದು ಹೇಳಿಕೊಳ್ಳುತ್ತಿರುವ ವ್ಯಕ್ತಿ ಮತದಾರನಲ್ಲ ಎಂದು ರುಜುವಾತುಪಡಿಸಲು ಪುರಾವೆಯನ್ನು ಒದಗಿಸುವಂತೆ ನಂತರ ಅಹ್ವಾನಿಸುತ್ತಾರೆ. ವಿಚಾರಣೆಯ ಅವಧಿಯಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆಗೆ ಗುರಿಯಾದ ವ್ಯಕ್ತಿಗೆ ಆತನ ಗುರುತನ್ನು ಸಾಬೀತುಪಡಿಸುವ ಉದ್ದೇಶಕ್ಕಾಗಿ ಅಗತ್ಯವಿರುವ ಯಾವುದೇ ಪ್ರಶ್ನೆಗಳನ್ನು ಹಾಕುವ ಮೂಲಕ ಸತ್ಯ ಸಂಗತಿಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರಮಾಣ ಮಾಡಿ ಉತ್ತರ ನೀಡುವಂತೆ ಆತನಿಗೆ ಅಗತ್ಯಪಡಿಸಲು ಸ್ವತಂತ್ರ್ಯರಾಗಿರುತ್ತಾರೆ. ಅವರು ತಮ್ಮ ವಿಚಾರಣೆಯಲ್ಲಿ ತಮಗೆ ನೆರವಾಗುವುದೆಂದು ಭಾವಿಸಬಹುದಾದಂಥ ಯಾರೇ ವ್ಯಕ್ತಿಯ ಅಂದರೆ, ಅಲ್ಲಿ ಹಾಜರಿರುವ ಗ್ರಾಮ ಅಧಿಕಾರಿ, ಪ್ರಶ್ನಿತ ಮತದಾರನ ಅಕ್ಕಪಕ್ಕದ ಮನೆಯವರು ಅಥವಾ ಇತರೇ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ಕೂಡ ಪಡೆಯಬಹುದು.

15.44.3. ವಿಚಾರಣೆ ಮುಗಿದ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆ ಸಾಬೀತಾಗಿಲ್ಲವೆಂದು ಭಾವಿಸಿದರೆ, ಅವರು ಆಕ್ಷೇಪಣೆಗೆ ಗುರಿಯಾದ ವ್ಯಕ್ತಿಗೆ ಮತ ನೀಡಲು ಅನುಮತಿ ನೀಡತಕ್ಕದ್ದು. ಆದಾಗ್ಯೂ, ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆಯು ಸಾಬೀತಾಗಿದೆ ಎಂದು ಭಾವಿಸಿದರೆ, ಅವರು ಆಕ್ಷೇಪಣೆಗೆ ಗುರಿಯಾದ ವ್ಯಕ್ತಿಯನ್ನು ಮತದಾನದಿಂದ ಹೊರಗಿಡತಕ್ಕದ್ದು. ಆ ಸಂದರ್ಭದಲ್ಲಿ, ಸಂಬಂಧಪಟ್ಟ ವ್ಯಕ್ತಿಯ ಮೇಲೆ ಕಾನೂನು ಕ್ರಮ ಜರುಗಿಸಲು ಮತಗಟ್ಟೆಯು ಯಾವ ಪೋಲಿಸ್ ಠಾಣೆಯ ಅಧಿಕಾರ ವ್ಯಾಪ್ತಿಗೆ ಬರುತ್ತದೆಯೋ ಆ ಮತಗಟ್ಟೆಯ ಠಾಣಾಧಿಕಾರಿಗೆ (ಎಸ್‌ಎಚ್‌ಒ) ಸಂಬೋಧಿಸಿ ಬರೆದಿರುವ ದೂರಿನ ಜೊತೆಗೆ ಕರ್ತವ್ಯದ ಮೇಲಿರುವ ಪೋಲಿಸ್ ಸಿಬ್ಬಂದಿಯ ವಶಕ್ಕೆ ಸಂಬಂಧಪಟ್ಟ ವ್ಯಕ್ತಿಯನ್ನು ಒಪ್ಪಿಸುವಂತೆ ಕೂಡ ಪ್ರಿಸೈಡಿಂಗ್ ಅಧಿಕಾರಿಗೆ ಸೂಚಿಸಲಾಗಿದೆ.

**15.45. ಆಕ್ಷೇಪಣಾ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಹಿಂದಿರುಗಿಸುವುದು**

15.45.1. ವಿಚಾರಣೆ ಪೂರ್ಣಗೊಂಡು, ಆಕ್ಷೇಪಣೆಯು ರುಜುವಾತಾದ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಮೇಲೆ ಉಲ್ಲೇಖಿಸಿದ (ಅನುಬಂಧ–27) ಆಕ್ಷೇಪಿತ ಮತಗಳ ಪಟ್ಟಿಯಲ್ಲಿನ ಸಮುಚಿತ ಅಂಕಣದಲ್ಲಿ (ಅಂಕಣ 10) ಹಾಗೂ ರಸೀದಿ ಪುಸ್ತಕದ ಪಾವತಿ ಸಂಬಂಧಪಟ್ಟ ರಸೀದಿಯ ಪಕ್ಕದ ಪ್ರತಿಯ ಮೇಲೆ ಆಕ್ಷೇಪಣೆದಾರನ ಸ್ವೀಕೃತಿ ಸಹಿ ಪಡೆದುಕೊಂಡು ಆಕ್ಷೇಪಣಾದಾರನಿಗೆ ಆಕ್ಷೇಪಣಾ ಶುಲ್ಕ ರೂ.2ನ್ನು ಹಿಂದಿರುಗಿಸುತ್ತಾರೆ.

15.45.2. ಆದರೆ, ಆಕ್ಷೇಪವು ಕ್ಷುಲ್ಲಕವಾದುದು ಅಥವಾ ಸದುದ್ದೇಶದಿಂದ ಕೂಡಿಲ್ಲವೆಂಬುದಾಗಿ ಪ್ರಿಸೈಡಿಂಗ್ ಅಧಿಕಾರಿ ಅಭಿಪ್ರಯಪಟ್ಟಲ್ಲಿ, ಆಕ್ಷೇಪಣಾ ಶುಲ್ಕವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುತ್ತಾರೆಯೇ ಹೊರತು ಆಕ್ಷೇಪಣಾದಾರನಿಗೆ ಹಿಂದಿರುಗಿಸುವುದಿಲ್ಲ.

**15.46. ಕೈತಪ್ಪುಗಳು ಹಾಗೂ ಮುದ್ರಣ ದೋಷಗಳನ್ನು ಗಣನೆಗೆ ತೆಗೆದುಕೊಳ್ಳುವಂತಿಲ್ಲ**

15.46.1. ಮತದಾರ ಪಟ್ಟಿಯಲ್ಲಿ ನಮೂದಾಗಿರುವ ಮತದಾರರಿಗೆ ಸಂಬಂಧಪಟ್ಟ ವಿವರಗಳು ಕೆಲವೊಮ್ಮೆ ತಪ್ಪಾಗಿ ಮುದ್ರಿತವಾಗಿರುತ್ತವೆ ಅಥವಾ ಹಳೆಯ ವಿವರಗಳಾಗಿರುತ್ತವೆ, ಉದಾಹರಣೆಗೆ, ಮತದಾರನ ವಯಸ್ಸು. ಪೋಲಿಂಗ್ ಏಜೆಂಟನು ಮುದ್ರಿತ ಮತದಾರರ ಪಟ್ಟಿಯಲ್ಲಿನ ಮತದಾರನ ವಯಸ್ಸಿಗೆ ಸಂಬಂಧಿಸಿದ ಯಾವುದೇ ನಮೂದು ಕೇವಲ ಕೈತಪ್ಪಿನದ್ದಾಗಿದ್ದಲ್ಲಿ ಅಥವಾ ಮುದ್ರಣ ದೋಷದ್ದಾಗಿದ್ದಲ್ಲಿ ಅಂಥದ್ದನ್ನು ಗಣನೆಗೆ ತೆಗೆದುಕೊಳ್ಳಬಾರದು ಹಾಗೂ ಅಂಥ ಮತದಾರನ ಗುರುತಿನ ಬಗ್ಗೆ ಆತನಿಗೆ ಅನ್ಯಥಾ ಮನವರಿಕೆಯಾದರೆ ಅಂಥ ಮತದಾರನ ಬಗ್ಗೆ ಆಕ್ಷೇಪವೆತ್ತಬಾರದು. ಮತದಾರ ಪಟ್ಟಿಯನ್ನು ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಸಿದ್ಧಪಡಿಸುವಾಗ, ಅಧಿಕೃತ ಮತದಾರ ಪಟ್ಟಿಯ (ಮಾರ್ಕ್ಡ್‌ಕಾಪಿ) ಪ್ರತಿಯಲ್ಲಿ ವ್ಯಕ್ತಿಯ ಹೆಸರು ಬಿಟ್ಟುಹೋಗಿದ್ದಲ್ಲಿ, ಅಂಥ ಮತದಾರನ ಹೆಸರು ಮತ್ತೊಂದು ಭಾಷೆಯಲ್ಲಿನ ಮತದಾರ ಪಟ್ಟಿಯ ಆವೃತ್ತಿಯಲ್ಲಿ ಇರುವುದು ಕಂಡರೆ, ಅಂಥ ಮತದಾರನಿಗೆ ಮತ ಚಲಾಯಿಸಲು ಅನುಮತಿ ಕೊಡುವಂತೆ ಪ್ರಿಸೈಡಿಂಗ್ ಅಧಿಕಾರಿಗೆ ಸೂಚನೆ ನೀಡಲಾಗಿದೆ. ಅಂಥ ಮತದಾರರಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪ ಎತ್ತದಿರುವಂತೆ ಪೋಲಿಂಗ್ ಏಜೆಂಟರಿಗೆ ಸಲಹೆ ನೀಡಬೇಕಾಗುತ್ತದೆ.

**15.47. ಮತದಾರನ ಅರ್ಹತೆಯನ್ನು ಪ್ರಶ್ನಿಸುವಂತಿಲ್ಲ**

15.47.1. ಅಧಿಕೃತ ಮತದಾರರ ಪಟ್ಟಿಯ (ಮಾರ್ಕ್ಡ್ ಕಾಪಿ) ಪ್ರತಿಯಲ್ಲಿ ಮತದಾರ ಎಂಬುದಾಗಿ ಹೆಸರು ನೋಂದಾಯಿಸಲಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ ಚುನಾವಣೆಯಲ್ಲಿ ಮತಚಲಾಯಿಸುವುದಕ್ಕೆ

ಅರ್ಹನಾಗಿರುತ್ತಾನೆ. ಅಂಥ ವ್ಯಕ್ತಿಯ ಗುರುತಿನ ಬಗ್ಗೆ ಸಂದೇಹವಿಲ್ಲದಿರುವವರೆಗೂ ಅಂಥ ವ್ಯಕ್ತಿಯು ಮತದಾರನಾಗಿ ನೋಂದಾಯಿಸಿಕೊಂಡಿರುವ ಅರ್ಹತೆಯ ಬಗೆಗೆ ಪ್ರಿಸೈಡಿಂಗ್ ಅಧಿಕಾರಿಯವರ ಮುಂದೆ ಯಾರೇ ಪೋಲಿಂಗ್ ಏಜೆಂಟನು ಮತಗಟ್ಟೆಯಲ್ಲಿ ಯಾವುದೇ ಪ್ರಶ್ನೆ ಎತ್ತುವಂತಿಲ್ಲ.

**15.48. ಅಪ್ರಾಪ್ತ ಮತದಾರರು ಮತದಾನ ಮಾಡುವುದನ್ನು ತಡೆಯಲು ಮುಂಜಾಗ್ರತಾ ಕ್ರಮಗಳು**

15.48.1. ಈ ಮೇಲೆ ತಿಳಿಸಲಾಗಿರುವಂತೆ, ಮತದಾರ ಪಟ್ಟಿಯಲ್ಲಿ ಮತದಾರ ಎಂಬುದಾಗಿ ಹೆಸರು ಸೇರ್ಪಡೆಯಾಗಿರುವಂತಹ ವ್ಯಕ್ತಿಯ ಅರ್ಹತೆಯ ಬಗೆಗೆ ಪ್ರಿಸೈಡಿಂಗ್ ಅಧಿಕಾರಿಯು ಮತದಾನ ಕೇಂದ್ರದಲ್ಲಿ ಪ್ರಶ್ನಿಸುವಂತಿಲ್ಲ ಅಥವಾ ವಿಚಾರಣೆ ಮಾಡುವಂತಿಲ್ಲ. ಆದಾಗ್ಯೂ, ಅಂಥ ಮತದಾರನ ಗುರುತಿನ ಬಗ್ಗೆಯಾಗಲಿ ಹಾಗೂ ಆತನ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಸಂಗತಿಯ ಬಗ್ಗೆಯಾಗಲಿ ಪ್ರಿಸೈಡಿಂಗ್ ಅಧಿಕಾರಿಗೆ ಮೇಲ್ನೋಟಕ್ಕೆ ಮನವರಿಕೆಯಾಗಿದ್ದು, ಆದರೆ, ಅಂಥ ವ್ಯಕ್ತಿಯು ಮತದಾನದ ಕನಿಷ್ಟ ವಯಸ್ಸಿಗಿಂತ ಕಡಿಮೆ ವಯಸ್ಸಿನವನೆಂಬುದಾಗಿ ಪರಿಗಣಿಸಿದರೆ ಸಂಬಂಧಪಟ್ಟ ವ್ಯಕ್ತಿಯಿಂದ ಆತನ ವಯಸ್ಸಿನ ಬಗ್ಗೆ ನಿರ್ದಿಷ್ಟ ನಮೂನೆಯಲ್ಲಿ ಘೋಷಣೆಯನ್ನು ಪಡೆಯುವಂತೆ ಆಯೋಗವು ಪ್ರಿಸೈಡಿಂಗ್ ಅಧಿಕಾರಿಗೆ ಸೂಚನೆ ನೀಡಿದೆ. ಅಂಥ ಮತದಾರನಿಂದ ಘೋಷಣೆಯನ್ನು ಪಡೆಯುವುದಕ್ಕೆ ಮೊದಲು, ಪ್ರಿಸೈಡಿಂಗ್ ಅಧಿಕಾರಿಯು – ಮತದಾರರ ಪಟ್ಟಿಯಲ್ಲಿ ತನ್ನ ಹೆಸರಿನ ಸೇರ್ಪಡೆಯಾಗಿರುವುದರ ಸಂಬಂಧದಲ್ಲಿ ಸುಳ್ಳು ಘೋಷಣೆ ಮಾಡಿದರೆ, ಅದಕ್ಕಾಗಿ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 31ರಲ್ಲಿ ಇರುವ ದಂಡನಾ ಉಪಬಂಧಗಳನ್ನು ಆತನಿಗೆ ತಿಳಿಸಿ ಹೇಳುತ್ತಾರೆ.

15.48.2. ಮತದಾರರ ಪಟ್ಟಿಯಲ್ಲಿ ಹೆಸರುಗಳು ಸೇರ್ಪಡೆಯಾಗಿದ್ದು, ಆದರೆ, ಅವರು ಮತದಾನ ಮಾಡುವ ವಯಸ್ಸಿಗಿಂತ ಕಡಿಮೆ ವಯಸ್ಸಿನವರಾಗಿರುವುದಾಗಿ ಕಂಡುಬಂದರೆ ಅಂಥ ಮತದಾರರ ಪ್ರಕರಣಗಳನ್ನು ಪೋಲಿಂಗ್ ಏಜೆಂಟನು ಪ್ರಿಸೈಡಿಂಗ್ ಅಧಿಕಾರಿಗಳ ಗಮನಕ್ಕೆ ತರಬಹುದು. ಇದರಿಂದಾಗಿ ಪ್ರಿಸೈಡಿಂಗ್ ಅಧಿಕಾರಿಯು ಮೇಲೆ ತಿಳಿಸಿರುವಂತೆ, ಅಂಥ ಮತದಾರರ ಪ್ರಕರಣಗಳ ಸಂಬಂಧದಲ್ಲಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**15.49. ಬದಲಿ ಮತದಾರನ (ಪ್ರಾಕ್ಸಿ) ಮೂಲಕ ಮತದಾನ: ವರ್ಗೀಕೃತ ಸೇವಾ ಮತದಾರರು:**

15.49.1. ಅಂಚೆ ಮತಪತ್ರಕ್ಕೆ ಪರ್ಯಾಯವಾಗಿ, ಸೇನಾ ಅಧಿನಿಯಮ, 1950ರ ಉಪಬಂಧಗಳು ಅನ್ವಯಿಸುವ ಸೇನಾ ಪಡೆಗಳಿಗೆ ಸಂಬಂಧಿಸಿದ ಸೇವಾ ಮತದಾರರಿಗೆ ಮತ್ತು ಪಡೆಗಳಿಗೆ

ಸಂಬಂಧಿಸಿದ ಸದಸ್ಯರುಗಳಿಗೆ ಬದಲಿ ಮತದಾರನ (ಪ್ರಾಕ್ಸಿ) ಮೂಲಕ ಅಥವಾ ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ. ಬದಲಿ ಮತದಾರನ (ಪ್ರಾಕ್ಸಿ) ಮೂಲಕ ಮತ ಚಲಾಯಿಸುವ ಮತದಾರರನ್ನು 'ವರ್ಗೀಕೃತ ಸೇವಾ ಮತದಾರ' (CSVs) ರೆಂದು ಪರಿಗಣಿಸಲಾಗಿದೆ. ಇವರು ತಮ್ಮ ಪರವಾಗಿ ಆ ಕ್ಷೇತ್ರದಲ್ಲಿ ಮತದಾರನಾಗಿರುವ ಯಾರೊಬ್ಬರನ್ನಾದರೂ ಮತ ಚಲಾಯಿಸಲು ಆಯ್ಕೆ ಮಾಡಿಕೊಳ್ಳಬಹುದು. ಬದಲಿ (ಪ್ರಾಕ್ಸಿ) ಮತದಾನ ಮಾಡುವ ವ್ಯಕ್ತಿಗೆ 18 ವರ್ಷ ತುಂಬಿರಬೇಕು ಮತ್ತು ಮತದಾರನಾಗಿ ನೋಂದಾಯಿಸಿ ಕೊಳ್ಳುವುದಕ್ಕೆ ಅನರ್ಹನಾಗಿರಬಾರದು. ಅವನ ನೇಮಕಾತಿಯನ್ನು ನಮೂನೆ 13–Fನಲ್ಲಿ ಮಾಡಬೇಕು. ಈ ರೀತಿ ಮಾಡುವ ನೇಮಕಾತಿಯು ಮುಂಬರುವ ಎಲ್ಲಾ ಚುನಾವಣೆಗಳಿಗೆ ಅನ್ವಯಿಸುವುದು. ಅದು ಎಲ್ಲಿಯವರೆಗೆಂದರೆ ಸೇನಾ ಮತದಾರನು ಅದೇ ಸೇವೆಯಲ್ಲಿ ಮುಂದುವರಿದರೆ ಅಥವಾ ಅವನ ನೇಮಕಾತಿ ಆದೇಶವನ್ನು ಹಿಂತೆಗೆದುಕೊಂಡರೆ ಅಥವಾ ಬದಲಿ (ಪ್ರಾಕ್ಸಿ) ಮತದಾರನು ಮರಣ ಹೊಂದಿದರೆ ಅಥವಾ ಇತರೆ ಕಾರಣಗಳಿಗಾಗಿ ಆ ರೀತಿ ನೇಮಕಾತಿ ಆದೇಶವನ್ನು ಹಿಂಪಡೆದುಕೊಂಡರೆ ಹೊಸದಾಗಿ ಸೇರ್ಪಡೆ ಮಾಡಿದ ನಮೂನೆ 13Gಯನ್ನು ಬಳಸಬೇಕು.

15.49.2. CSV ಯಿಂದ ಬದಲಿ (ಪ್ರಾಕ್ಸಿ) ಮತದಾರನ ನೇಮಕಾತಿಯಾಗಿದೆಯೆಂದು ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ರಿಟರ್ನಿಂಗ್ ಅಧಿಕಾರಿಯು ಮತದಾರರ ಪಟ್ಟಿಯ ಕಡೆಯ ಭಾಗದಲ್ಲಿ ಸೇವಾ ಮತದಾರನ ಹೆಸರಿನ ಮುಂದೆ ಆತನ ಪರವಾಗಿ ಮತಹಾಕಲು ಬದಲಿ (ಪ್ರಾಕ್ಸಿ) ಮತದಾರನನ್ನು ನೇಮಕಾತಿ ಮಾಡಿದೆ ಎಂದು ನಮೂದು ಮಾಡಬೇಕು. ಬದಲಿ (ಪ್ರಾಕ್ಸಿ) ಮತದಾನದ ಸೌಲಭ್ಯವನ್ನು ಮುಂದಿನ ಚುನಾವಣೆಯಲ್ಲಿಯೂ ಬಳಸಿಕೊಳ್ಳಬೇಕಾದರೆ, ಆ ಚುನಾವಣೆಯ ನಾಮನಿರ್ದೇಶನದ ಕೊನೆಯ ದಿನಾಂಕದೊಳಗೆ ರಿಟರ್ನಿಂಗ್ ಅಧಿಕಾರಿಗೆ ಈ ಮಾಹಿತಿಯನ್ನು ತಿಳಿಸಬೇಕು. ರಿಟರ್ನಿಂಗ್ ಅಧಿಕಾರಿಯು ಆಯೋಗವು ನೀಡಿದ ಸೂಚನೆ ಮತ್ತು ನಿರ್ದೇಶನದಂತೆ CSVs ಮತ್ತು ಅದಕ್ಕೆ ಸಂಬಂಧಪಟ್ಟ ಬದಲಿ (ಪ್ರಾಕ್ಸಿ) ಮತದಾರರ ಪೂರ್ಣ ವಿಳಾಸವನ್ನು ಪಟ್ಟಿ ಮಾಡಿ ಪ್ರತ್ಯೇಕವಾಗಿಟ್ಟುಕೊಳ್ಳಬೇಕು. ನಾಮನಿರ್ದೇಶನ ಮಾಡುವುದಕ್ಕೆ ನಿಗದಿಪಡಿಸಿದ್ದ ದಿನಾಂಕವು ಮುಗಿದುಹೋದ ಮೇಲೆ, ರಿಟರ್ನಿಂಗ್ ಅಧಿಕಾರಿಯು ಮತಗಟ್ಟೆವಾರು ಎಲ್ಲಾ CSVs ಮತ್ತು ಬದಲಿ (ಪ್ರಾಕ್ಸಿ) ಮತದಾರರ ಉಪ ಪಟ್ಟಿಯನ್ನು ತಯಾರಿಸಿ ಇಟ್ಟುಕೊಳ್ಳಬೇಕು. ಈ ಎಲ್ಲಾ ಉಪಪಟ್ಟಿಗಳನ್ನು ಮತದಾರರ ಪಟ್ಟಿಯ ಭಾಗದ ಕೊನೆಯಲ್ಲಿ ಸೇರ್ಪಡೆ ಮಾಡಬೇಕು.

ಉಪಪಟ್ಟಿಯೊಂದಿಗಿನ ಹಾಗೂ ಮತದಾರರ ಪಟ್ಟಿಯ ಭಾಗವನ್ನು ಆ ಮತಗಟ್ಟೆಯ ಮತದಾರರ ಪಟ್ಟಿಯಾಗಿ ಗುರುತು ಮಾಡಬೇಕು.

15.49.3. CSVಯ ಪರವಾಗಿ ನೇಮಿಸಲ್ಪಟ್ಟ ಬದಲಿ (ಪ್ರಾಕ್ಸಿ) ಮತದಾರನು CSVಯ ಮತವು ಯಾವ ಮತಗಟ್ಟೆಯಲ್ಲಿರುವುದೋ ಅಲ್ಲಿಗೆ ತೆರಳಿ ಬೇರೆ ಮತದಾರರ ರೀತಿಯಲ್ಲಿಯೇ ಮತವನ್ನು ಚಲಾಯಿಸಬೇಕು. ನಿಯಮ 37ರಂತೆ ಇಂತಹ ಬದಲಿ (ಪ್ರಾಕ್ಸಿ) ಮತದಾರರಿಗೆ ಎಡಗೈನ ಮಧ್ಯದ ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಚ್ಚಬೇಕು. ಬದಲಿ (ಪ್ರಾಕ್ಸಿ) ಮತದಾರನು CSV ಪರವಾಗಿ ಮತವನ್ನು ಹಾಕುವುದರ ಜೊತೆಗೆ ಆತನು ಆ ಕ್ಷೇತ್ರದಲ್ಲಿ ನೋಂದಾಯಿತ ಮತದಾರನಾಗಿದ್ದರೆ ಆತನ ಮತವನ್ನು ಕೂಡ ಚಲಾಯಿಸಬಹುದು.

15.49.4. ಬದಲಿ (ಪ್ರಾಕ್ಸಿ) ಮತದಾರನನ್ನು ನೇಮಕ ಮಾಡಿದ CSV ಗೆ ಅಂಚೆ ಮತಪತ್ರ ನೀಡುವಂತಿಲ್ಲ.

**15.50. ಅಂಧ ಅಥವಾ ದುರ್ಬಲ ಮತದಾರರಿಂದ ಮತಚಲಾವಣೆ**

15.50.1. ಅಂಧತ್ವ ಅಥವಾ ಇತರೆ ದೈಹಿಕ ದುರ್ಬಲತೆಯ ಕಾರಣದಿಂದ ಯಾರೇ ಮತದಾರನು ಇವಿಎಂನ ಬ್ಯಾಲೆಟಿಂಗ್ ಯೂನಿಟ್(ಗಳ) ಮೇಲೆ ಅಂಟಿಸಿರುವ ಸಂಕೇತಗಳನ್ನು ಗುರುತಿಸಲು ಅಸಮರ್ಥನಾಗಿದ್ದಾನೆಂದೂ ಹಾಗೂ ಸಹಾಯಕರ ನೆರವಿಲ್ಲದೆ ಸಮುಚಿತವಾದ ಬಟನನ್ನು ಒತ್ತುವ ಮೂಲಕ ತನ್ನ ಮತ ದಾಖಲಿಸಲು ಅಸಮರ್ಥನಾಗಿದ್ದಾನೆಂದೂ ಪ್ರಿಸೈಡಿಂಗ್ ಅಧಿಕಾರಿಗೆ ಮನವರಿಕೆಯಾದರೆ, ಪ್ರಿಸೈಡಿಂಗ್ ಅಧಿಕಾರಿಯು ಅಂಥ ಮತದಾರನಿಗೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವನಲ್ಲದ ಸಂಗಡಿಗನೊಬ್ಬನನ್ನು ಅವನ ಪರವಾಗಿ ಮತ್ತು ಅವನ ಇಚ್ಛೆಯನುಸಾರ ಮತವನ್ನು ದಾಖಲಿಸಲು ಅವನ ಜೊತೆಗೆ ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಕರೆದೊಯ್ಯಲು ಅನುಮತಿಯನ್ನು ನೀಡಬಹುದು. ಆದರೆ ಮತದಾರನು ಅನಕ್ಷರಸ್ಥ ಎಂಬುದು ಅವನ ಪರವಾಗಿ ಮತಹಾಕಲು ಸಂಗಡಿಗನ ನೆರವು ಪಡೆಯುವುದಕ್ಕೆ ಸಮರ್ಥ ಕಾರಣವಾಗುವಂತಿಲ್ಲ. ದೃಷ್ಟಿದೋಷವುಳ್ಳ (ಅಂಧ) ವ್ಯಕ್ತಿಗಳ ಅನುಕೂಲಕ್ಕಾಗಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯ ನೀಲಿ ಬಟನ್‌ನ ಬಲಭಾಗದಲ್ಲಿ ಬ್ಯಾಲೆಟಿಂಗ್ ಯೂನಿಟ್ (ಬಿಯು)ನ ಮೇಲ್ಭಾಗದ ಕವಚದ ಮೇಲೆ ಬ್ರೈಲ್ ಲಿಪಿಯಲ್ಲಿ ಅಂಕಿಗಳನ್ನು (1ರಿಂದ 16) ಒದಗಿಸಲಾಗಿದೆ.

15.50.2. ಇವಿಎಂನ ಬ್ಯಾಲೆಟಿಂಗ್ ಯೂನಿಟ್ ಮೇಲೆ ತಮ್ಮ ಆಯ್ಕೆಯ ಅಭ್ಯರ್ಥಿಗೆ ಸಂಬಂಧಿಸಿದ ಬಟನ್ ಅನ್ನು ಒತ್ತುವುದರ ಮೂಲಕ ಸ್ವತಃ ತಾವೇ ಮತ ಚಲಾಯಿಸಲು ಸಮರ್ಥರಿರುವ ದುರ್ಬಲ ಮತದಾರರಿಗೆ ಮತಗಟ್ಟೆಯಲ್ಲಿನ ಮತದಾನ ಅಂಕಣದವರೆಗೆ ಮಾತ್ರ ಅಧಿಕೃತ ಸಂಗಡಿಗನನ್ನು ಕರೆದುಕೊಂಡು ಹೋಗಲು ಅನುಮತಿ ನೀಡಬೇಕೇ ಹೊರತು ಮತದಾನದ ಅಂಕಣದೊಳಗಡೆಗೆ

ಕರೆದುಕೊಂಡು ಹೋಗಲು ಅನುಮತಿಸತಕ್ಕದ್ದಲ್ಲ. ಇದು, ಮತದಾರನ ದೈಹಿಕ ದುರ್ಬಲತೆಯ ಸ್ವರೂಪವು ಮತದಾರನಿಗೆ ಕೇವಲ ಆತನ ಓಡಾಟಕ್ಕೆ ಮಾತ್ರ ನೆರವು ಅಗತ್ಯವಿರುವ ಆದರೆ ಮತಚಲಾಯಿಸಲು ನೆರವು ಅಗತ್ಯವಿರದಿರುವಂತಹ ಪ್ರಕರಣಗಳಲ್ಲಿ ಅನ್ವಯಿಸುತ್ತದೆ. ಇಂತಹ ಪ್ರಕರಣಗಳಲ್ಲಿ ಪ್ರಿಸೈಡಿಂಗ್ ಅಧಿಕಾರಿಯವರು ನಿರ್ಧಾರ ತೆಗೆದುಕೊಳ್ಳಬೇಕು.

15.50.3. ಅಲ್ಲದೆ, ಯಾರೇ ಮತದಾನ ಸಿಬ್ಬಂದಿಯು ಅಂಥ ದುರ್ಬಲ ಮತದಾರನ ಪರವಾಗಿ ಮತಚಲಾಯಿಸಲು ಸಂಗಡಿಗನಾಗಿ ಕಾರ್ಯನಿರ್ವಹಿಸುವಂತಿಲ್ಲ.

15.50.4. ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿ ಅಥವಾ ಅವನ ಚುನಾವಣೆ ಏಜೆಂಟ್ ಅಥವಾ ಪೋಲಿಂಗ್ ಏಜೆಂಟನು ಅಂಧ ಅಥವಾ ದುರ್ಬಲ ಮತದಾರನ ಸಂಗಡಿಗನಾಗಿ ಕಾರ್ಯನಿರ್ವಹಿಸಬಹುದು. (ಆದರೆ ಅವನು 18 ವರ್ಷಗಳಿಗಿಂತ ಕಡಿಮೆ ವಯಸ್ಸಿನವನಾಗಿರುವಂತಿಲ್ಲ) ಆದರೆ, ಅವನು ಒಂದು ದಿನದಲ್ಲಿ ಒಬ್ಬ ಮತದಾರನಿಗೆ ಮಾತ್ರ ಸಂಗಡಿಗನಾಗಿ ಕೆಲಸವನ್ನು ನಿರ್ವಹಿಸಬಹುದಾಗಿದೆ. ಮತದಾರನ ಸಂಗಡಿಗನಾಗಿ ಕಾರ್ಯನಿರ್ವಹಿಸಲು ಯಾವುದೇ ವ್ಯಕ್ತಿಗೆ ಅನುಮತಿ ನೀಡುವ ಮೊದಲು ಮತದಾರನ ಪರವಾಗಿ ಆತನು ದಾಖಲಿಸಿದ್ದ ಮತದಾನದ ರಹಸ್ಯವನ್ನು ಕಾಪಾಡುವುದಾಗಿಯೂ ಹಾಗೂ ಅದೇ ದಿನ ಆತ ಇತರೇ ಯಾವುದೇ ಮತಗಟ್ಟೆಯಲ್ಲಿ ಇತರೇ ಮತದಾರನಿಗೆ ಸಂಗಡಿಗನಾಗಿ ಕಾರ್ಯನಿರ್ವಹಿಸಿಲ್ಲವೆಂಬ ಘೋಷಣೆಯನ್ನು ಆತನಿಂದ ನಿಗದಿತ ನಮೂನೆಯಲ್ಲಿ ಪಡೆದು ಇಟ್ಟುಕೊಳ್ಳತಕ್ಕದ್ದು.

15.50.5. 49 ಎನ್ ನಿಯಮದ ಉಪನಿಯಮ (1)ರ ಮೊದಲನೇ ಪರಂತುಕದ ಮೇರೆಗೆ ಒಬ್ಬ ವ್ಯಕ್ತಿಯು ಒಬ್ಬ ಮತದಾರನಿಗಿಂತ ಹೆಚ್ಚಿನ ಮತದಾರರಿಗೆ ಸಂಗಡಿಗನಾಗಿ ಕಾರ್ಯನಿರ್ವಹಿಸುವಂತಿಲ್ಲ. ಈ ಉಪಬಂಧಗಳ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳಲು ಮತದಾನ ಸಿಬ್ಬಂದಿಗೆ ಅನುವುಮಾಡಿಕೊಡುವ ಸಲುವಾಗಿ, ಅಳಿಸಲಾಗದ ಶಾಯಿಯ ಲೇಪನವು /ಅನ್ವಯವು ಮತದಾರನ ಜೊತೆಯಲ್ಲಿ ಬರುವ ಆತನ ಸಂಗಡಿಗನಿಗೂ ಸಹ ಅನ್ವಯಿಸುತ್ತದೆ. ಅಳಿಸಲಾಗದ ಶಾಯಿಯನ್ನು ಮತದಾರನ ಸಂಗಡಿಗನ ಬಲಗೈನ ಮಧ್ಯ ಬೆರಳಿನ ಮೇಲೆ ಹಚ್ಚಬೇಕು. ಇಂತಹ ಸಂದರ್ಭಗಳಲ್ಲಿ ಮತದಾರನ ಎಡಗೈ ಮಧ್ಯ ಬೆರಳಿನ ಮೇಲೆ ಶಾಯಿಯ ಗುರುತು ಮಾಡುವುದನ್ನು ಚಾಲ್ತಿಯಲ್ಲಿರುವ ಉಪಬಂಧಗಳ ಪ್ರಕಾರ ಮುಂದುವರಿಸತಕ್ಕದ್ದು.

15.50.6. ಮತದಾನ ಅಂಕಣದ ಒಳಗೆ ಮತದಾರನು ತನ್ನ ಸಂಗಡಿಗನನ್ನು ಕರೆದುಕೊಂಡು ಹೋಗಲು ಅನುಮತಿ ನೀಡುವ ಮುನ್ನ ಸಂಗಡಿಗನ ಬಲಗೈ ಮಧ್ಯ ಬೆರಳಿನ ಮೇಲೆ ಈಗಾಗಲೇ ಅಳಿಸಲಾಗದ ಶಾಯಿಯಿಂದ ಗುರುತು ಮಾಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವರ ಆ ಬೆರಳನ್ನು

ಪರಿಶೀಲಿಸಬೇಕು. ಈಗಾಗಲೇ ಗುರುತು ಮಾಡಲ್ಪಟ್ಟಿರುವುದಾಗಿ ಕಂಡುಬಂದರೆ, 49ಎನ್ ನಿಯಮದ ಉದ್ದೇಶಗಳಿಗಾಗಿ ಅಂತಹ ವ್ಯಕ್ತಿಗೆ ಸಂಗಡಿಗನಾಗಿ ಬರಲು ಅನುಮತಿ ನೀಡಬಾರದು.

15.50.7. ಯಾರೇ ವ್ಯಕ್ತಿಗೆ ಮತದಾರನ ಸಂಗಡಿಗನಾಗಿ ಕಾರ್ಯನಿರ್ವಹಿಸಲು ಅನುಮತಿ ನೀಡುವ ಮುನ್ನ, ಆತನು ಮತದಾರನ ಪರವಾಗಿ ತಾನು ಚಲಾಯಿಸಿದ ಮತವನ್ನು ಅತ್ಯಂತ ಗೌಪ್ಯವಾಗಿಡುವುದಾಗಿ ಮತ್ತು ಆ ದಿನದಿಂದ ಇತರೆ ಯಾವುದೇ ಮತದಾನ ಕೇಂದ್ರದಲ್ಲಿ ಈಗಾಗಲೇ ಯಾರೇ ಬೇರೊಬ್ಬ ಮತದಾರನ ಸಂಗಡಿಗನಾಗಿ ವರ್ತಿಸಿಲ್ಲವೆಂಬುದಾಗಿ ಘೋಷಣೆ ಮಾಡಬೇಕಾಗಿದೆ. ಮತದಾರನ ಸಂಗಡಿಗರಿಂದ ಘೋಷಣೆಯನ್ನು ನಿಗದಿತ ನಮೂನೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯವರು ಪಡೆಯುತ್ತಾರೆ.

15.50.8. ಪ್ರಿಸೈಡಿಂಗ್ ಅಧಿಕಾರಿಯವರು ಸಂಗಡಿಗರ ನೆರವಿನಿಂದ ಮತದಾರರು ಮತ ಚಲಾಯಿಸಿದ ಪ್ರಕರಣಗಳ ದಾಖಲೆಯನ್ನು ನಮೂನೆ 14–ಎ ಯಲ್ಲಿ ಇಟ್ಟುಕೊಳ್ಳತಕ್ಕದ್ದೆಂದು 49–ಎನ್ ನಿಯಮದ (2)ನೇ ಉಪ–ನಿಯಮ ಹೇಳುತ್ತದೆ. ಇದು, ಮತದಾರನಿಗೆ ಅವನ ಮತ ಚಲಾಯಿಸುವಲ್ಲಿ ನೆರವಾಗಲು, ಮತದಾರನೊಂದಿಗೆ ಮತದಾನದ ಅಂಕಣದೊಳಗೆ ಪ್ರವೇಶಿಸಲು ಸಂಗಡಿಗನಿಗೆ ಅನುಮತಿ ನೀಡಿದ ಎಲ್ಲಾ ಪ್ರಕರಣಗಳನ್ನೂ ಒಳಗೊಂಡಿರತಕ್ಕದ್ದು. ಸಂಗಡಿಗನು ಮತದಾರನಿಗೆ ಆತನ ಓಡಾಟಕ್ಕೆ ಮಾತ್ರ ನೆರವಾಗಲು ಬಂದಿರುವ ಮತ್ತು ಮತದಾನ ಅಂಕಣದೊಳಗೆ ಪ್ರವೇಶಿಸದೇ ಇರುವ ಪ್ರಕರಣಗಳನ್ನು ನಮೂನೆ–14ಎ ನಲ್ಲಿ ಸೇರಿಸತಕ್ಕದ್ದಲ್ಲ.

### 15.51. ಟೆಂಡರ್ಡ್ (ಚಲಾಯಿಸಿದ) ಮತಗಳು

**15.51.1.** ಬೇರೊಬ್ಬ ವ್ಯಕ್ತಿಯು ಈಗಾಗಲೇ ಮತವನ್ನು ಚಲಾಯಿಸಿ ಹೋದ ನಂತರ ನಾನೇ ನಿಜವಾದ ಮತದಾರನೆಂದು ಹೇಳಿಕೊಂಡು ಮತವನ್ನು ಚಲಾಯಿಸಲು ಮತ್ತೊಬ್ಬ ವ್ಯಕ್ತಿಯು ಬರುವ ಸಂಭವ ಬರಬಹುದು. ಇಂಥ ಪ್ರಕರಣದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಅಂತಹ ಮತದಾರನಿಗೆ ಹಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ, ಅಂಥ ವ್ಯಕ್ತಿಗಳ ಗುರುತನ್ನು ರುಜುವಾತುಪಡಿಸಿಕೊಂಡ ನಂತರ, ಅವರು ಟೆಂಡರ್ಡ್ ಮತಪತ್ರದ ಮೂಲಕ ಮತವನ್ನು ಚಲಾವಣೆ ಮಾಡಲು ಅನುವು ಮಾಡಿಕೊಡಬೇಕು. ಆದರೆ ಮತಯಂತ್ರದ ಮೂಲಕ ಮತ ಚಲಾವಣೆಗೆ ಅವಕಾಶ ನೀಡುವಂತಿಲ್ಲ. ಇಂಥ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಟೆಂಡರ್ಡ್ ಮತಗಳ ಪಟ್ಟಿಯಲ್ಲಿ ಅಗತ್ಯವಾದ ನಮೂದುಗಳನ್ನು ಮಾಡಿ, (ಚುನಾವಣೆ ನಡತೆ ನಿಯಮಗಳು 1961ರ ಜೊತೆ ಲಗತ್ತಿಸಲಾದ

ನಮೂನೆ 17–B ರಲ್ಲಿರುವಂತೆ) ಅದಕ್ಕೆ ಮತದಾರನಿಂದ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಳ್ಳತಕ್ಕದ್ದು. ಮತದಾರನಿಗೆ ಮತದಾನ ಯಂತ್ರದ ಬ್ಯಾಲೆಟಿಂಗ್ ಯೂನಿಟ್ ಮೇಲೆ ಅಂಟಿಸಲಾದ ಬ್ಯಾಲೆಟ್ ಪೇಪರ್ ರೀತಿಯದೇ ಬ್ಯಾಲೆಟ್ ಪೇಪರನ್ನು ನೀಡಬೇಕು. ಅಂತಹ ಬ್ಯಾಲೆಟ್ ಪೇಪರ್‌ನ ಹಿಂದೆ "ಟೆಂಡರ್ಡ್ ಮತಪತ್ರ"ವೆಂದು ಮುದ್ರಿತವಾಗಿರುತ್ತದೆ ಅಥವಾ ಬರೆಯಲಾಗಿರುತ್ತದೆ. ಮತದಾರನು ತನ್ನ ಮತವನ್ನು ತನಗೆ ಸರಬರಾಜು ಮಾಡಿರುವ ಬಾಣದ ಕತ್ತರಿ ಗುರುತಿನ ರಬ್ಬರ್ ಸ್ಟಾಂಪಿನ ಮೂಲಕ ಸಾಂಪ್ರದಾಯಿಕ ಪದ್ಧತಿಯಲ್ಲಿ ದಾಖಲಿಸಬೇಕು. ಮತದಾರನು ವೋಟಿಂಗ್ ಕಂಪಾರ್ಟ್‌ಮೆಂಟಿನಲ್ಲಿ ಮತವನ್ನು ದಾಖಲಿಸಿದ ನಂತರ ಅಂಥ ಟೆಂಡರ್ಡ್ ಬ್ಯಾಲೆಟ್ ಪೇಪರನ್ನು ಮಡಿಚಿ ಪ್ರಿಸೈಡಿಂಗ್ ಅಧಿಕಾರಿಗೆ ನೀಡಬೇಕು. ಪ್ರಿಸೈಡಿಂಗ್ ಅಧಿಕಾರಿಯು ಎಲ್ಲ ಟೆಂಡರ್ಡ್ ಮತಪತ್ರಗಳನ್ನು ಆ ಉದ್ದೇಶಕ್ಕಾಗಿ ವಿಶೇಷವಾಗಿ ಒದಗಿಸಿರುವ ಲಕೋಟೆಯಲ್ಲಿ ಪ್ರತ್ಯೇಕವಾಗಿ ಇಡತಕ್ಕದ್ದು.

**15.52. ಮತವನ್ನು ಚಲಾಯಿಸುವುದಿಲ್ಲ ಎಂದು ನಿರ್ಧರಿಸಿರುವ ಮತದಾರರು:**

15.52.1. ಒಬ್ಬ ಮತದಾರನು ತನ್ನ ಮತದಾರರ ಪಟ್ಟಿಯ ಸಂಖ್ಯೆಯನ್ನು ಯುಕ್ತವಾಗಿ ಮತದಾರರ ರಿಜಿಸ್ಟರ್‌ನಲ್ಲಿ (ನಮೂನೆ 17–A) ಯುಕ್ತವಾಗಿ ನಮೂದಿಸಿದ ನಂತರ ಮತ್ತು ಆ ರಿಜಿಸ್ಟರಿನಲ್ಲಿ ತನ್ನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಿದ ನಂತರ ತನ್ನ ಮತವನ್ನು ದಾಖಲು ಮಾಡುವುದಿಲ್ಲ ಎಂದು ನಿರ್ಧರಿಸಿದರೆ, ಅವನನ್ನು ಮತ ದಾಖಲಿಸುವಂತೆ ಬಲವಂತಪಡಿಸುವಂತಿಲ್ಲ ಅಥವಾ ಒತ್ತಾಯಿಸತಕ್ಕದ್ದಲ್ಲ. ಪ್ರಿಸೈಡಿಂಗ್ ಅಧಿಕಾರಿಯ ಬಳಿ ಇರುವ ಮತದಾರರ ರಿಜಿಸ್ಟರ್‌ನಲ್ಲಿ ಆ ಮತದಾರನ ಹೆಸರಿರುವ ಮುಂದಿನ ಷರಾ ಅಂಕಣದಲ್ಲಿ ನಿಯಮ 49–ಓರ ಪ್ರಕಾರ "ಮತವನ್ನು ಚಲಾಯಿಸಲು ನಿರಾಕರಿಸಿದ್ದಾನೆ" ಎಂದು ಬರೆದು ಅದಕ್ಕೆ ಅವನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಳ್ಳತಕ್ಕದ್ದು. ಆದರೆ ಮತದಾರರ ರಿಜಿಸ್ಟರಿನ ಅಂಕಣ (1)ರಲ್ಲಿ ಆ ಮತದಾರನ ಅಥವಾ ನಂತರದ ಯಾವುದೇ ಮತದಾರರ ಕ್ರಮಸಂಖ್ಯೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡುವ ಅವಶ್ಯಕತೆ ಇರುವುದಿಲ್ಲ.

15.52.2. ಮತದಾರನು ಮತವನ್ನು ದಾಖಲಿಸುವುದಕ್ಕಾಗಿ ಕಂಟ್ರೋಲ್ ಯೂನಿಟ್‌ನಲ್ಲಿರುವ 'ಮತಪತ್ರ' ಬಟನ್‌ಅನ್ನು ಒತ್ತಿದ ಮೇಲೆ ಅವನು ಮತವನ್ನು ಚಲಾಯಿಸಲು ನಿರಾಕರಿಸಿದರೆ, ಪ್ರಿಸೈಡಿಂಗ್ ಅಧಿಕಾರಿ/ ಮೂರನೇ ಪೋಲಿಂಗ್ ಅಧಿಕಾರಿ ಆಗಲಿ ಅಥವಾ ಕಂಟ್ರೋಲ್ ಯೂನಿಟ್‌ನ ಜವಾಬ್ದಾರಿ ಹೊಂದಿರುವ ಯಾರಾದರೂ ಆಗಲಿ, ಅವರು ನಂತರದ ಮತದಾರನನ್ನು ಮತವನ್ನು ಚಲಾಯಿಸಲು ನೇರವಾಗಿ ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗುವಂತೆ ನಿರ್ದೇಶಿಸಬೇಕು

ಅಥವಾ ಕಂಟ್ರೋಲ್ ಯೂನಿಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟಿನಲ್ಲಿ ಇರುವ 'ಪವರ್' ಸ್ವಿಚ್ಚನ್ನು ಆಫ್ ಮಾಡತಕ್ಕದ್ದು. ನಂತರ ಪವರ್ ಸ್ವಿಚ್ಚನ್ನು ಪುನಃ 'ಆನ್' ಸ್ಥಿತಿಯಲ್ಲಿ ಇಟ್ಟು ನಂತರದ ಮತದಾರನನ್ನು ಮತವನ್ನು ಚಲಾಯಿಸಲು ನೇರವಾಗಿ ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗುವಂತೆ ನಿರ್ದೇಶಿಸಬೇಕು. ಕಂಟ್ರೋಲ್ ಯೂನಿಟ್ ನಲ್ಲಿರುವ "ಮತಪತ್ರ" ಬಟನ್‌ಅನ್ನು ಒತ್ತಿದ ಮೇಲೆ ಆ ಮತದಾರನು ಮತವನ್ನು ಚಲಾಯಿಸಲು ನಿರಾಕರಿಸಿದರೆ, ಪ್ರಿಸೈಡಿಂಗ್ ಅಧಿಕಾರಿ/ಮೂರನೇ ಪೋಲಿಂಗ್ ಅಧಿಕಾರಿ ಆಗಲಿ ಅಥವಾ ಕಂಟ್ರೋಲ್ ಯೂನಿಟ್‌ನ ಜವಾಬ್ದಾರಿ ಹೊಂದಿರುವ ಯಾರಾದರೂ ಆಗಲಿ, ಅವರು ಕಂಟ್ರೋಲ್ ಯೂನಿಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟ್ ನಲ್ಲಿರುವ 'ಪವರ್' ಸ್ವಿಚ್ಚನ್ನು 'ಆಫ್' ಮಾಡಿ, ಕಂಟ್ರೋಲ್ ಯೂನಿಟ್‌ನಿಂದ ವಿವಿಪ್ಯಾಟ್ ಮತ್ತು ಬ್ಯಾಲೆಟಿಂಗ್ ಯೂನಿಟ್ (ಗಳು)ನ್ನು ಬೇರ್ಪಡಿಸಬೇಕು. ಕಂಟ್ರೋಲ್ ಯೂನಿಟ್‌ನಿಂದ ವಿವಿಪ್ಯಾಟ್ ಮತ್ತು ಬ್ಯಾಲೆಟಿಂಗ್ ಯೂನಿಟ್(ಗಳ)ನ್ನು ಬೇರ್ಪಡಿಸಿದ ನಂತರ 'ಪವರ್' ಸ್ವಿಚ್ಚನ್ನು ಪುನಃ 'ಆನ್' ಸ್ಥಿತಿಯಲ್ಲಿ ಇಡತಕ್ಕದ್ದು. ಈಗ 'ಬ್ಯೂಜಿ' ಲ್ಯಾಂಪ್ 'ಆಫ್' ಸ್ಥಿತಿಗೆ ಹೋಗಬೇಕು ಮತ್ತು ಮತದಾನವನ್ನು ಮುಕ್ತಾಯಗೊಳಿಸಲು 'ಕ್ಲೋಸ್' ಬಟನ್‌ಅನ್ನು ಕ್ರಿಯಾತ್ಮಕವಾಗಿಸಬಹುದು.

15.52.3. ಯಾರೇ ಅಭ್ಯರ್ಥಿಗೆ ಮತ ನೀಡಲು ಇಚ್ಛಿಸದ ಮತದಾರರು ತಮ್ಮ ನಿರ್ಧಾರದ ಗೌಪ್ಯತೆಯ ಉಲ್ಲಂಘನೆ ಆಗದಂತೆ ಯಾವ ಅಭ್ಯರ್ಥಿಗೂ ತಮ್ಮ ಮತವನ್ನು ನೀಡದಿರುವ ತಮ್ಮ ಹಕ್ಕನ್ನು ಚಲಾಯಿಸಬಹುದು. ಅದರಲ್ಲಿ ಬರೆಯಲಾದ 'ಮೇಲ್ಕಂಡ ಯಾವ ಅಭ್ಯರ್ಥಿಗೂ ನನ್ನ ಮತ ಇಲ್ಲ' ಎಂಬ ಅಕ್ಷರಗಳನ್ನು ಮತ್ತು ನೋಟಾ ಚಿಹ್ನೆಯನ್ನು ಹೊಂದಿರುವ ಬ್ಯಾಲೆಟ್ ಪ್ಯಾನಲ್ ಮತ ಚಲಾವಣೆಗೆ ಲಭ್ಯವಿರುತ್ತದೆ.

**15.53. ಮತದಾನದ ರಹಸ್ಯವನ್ನು ಉಲ್ಲಂಘಿಸುವುದು**

15.53.1.ಮತಗಟ್ಟೆಯಲ್ಲಿ ಮತ ಚಲಾವಣೆಗೆ ಅನುಮತಿ ನೀಡಲಾದ ಪ್ರತಿಯೊಬ್ಬ ಮತದಾರನೂ ಮತದಾನದ ರಹಸ್ಯವನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಹಾಗೂ ನಿಗದಿತ ಮತದಾನದ ವಿಧಾನವನ್ನು ಅನುಸರಿಸುವುದು ಅಗತ್ಯವಾಗಿದೆ. ಪ್ರಿಸೈಡಿಂಗ್ ಅಧಿಕಾರಿಯು ಮತದಾರನಿಗೆ ಮತದಾನದ ರಹಸ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹಾಗೂ ನಿಗದಿತ ಮತದಾನದ ವಿಧಾನವನ್ನು ಅನುಸರಿಸಬೇಕೆಂದು ಎಚ್ಚರಿಕೆ ನೀಡಿದ ನಂತರವೂ, ಯಾರೇ ಮತದಾರನು ಅದನ್ನು ಪಾಲಿಸಲು ನಿರಾಕರಿಸಿದರೆ, ಪ್ರಿಸೈಡಿಂಗ್ ಅಧಿಕಾರಿಯು ಅಥವಾ ಆತನ ನಿರ್ದೇಶನ ಪಡೆದ ಪೋಲಿಂಗ್ ಅಧಿಕಾರಿನು ಅಂತಹ ಮತದಾರನಿಗೆ ಮತ ಚಲಾಯಿಸಲು ಅನುಮತಿಯನ್ನು ನೀಡಬಾರದು.

ಈಗಾಗಲೇ, ಮತದಾರನಿಗೆ ಮತದಾರನ ಚೀಟಿಯನ್ನು ನೀಡಿದ್ದ ಪಕ್ಷದಲ್ಲಿ, ಅದನ್ನು ಅವನಿಂದ ಹಿಂತೆಗೆದುಕೊಳ್ಳತಕ್ಕದ್ದು ಮತ್ತು ರದ್ದುಗೊಳಿಸತಕ್ಕದ್ದು. ಪ್ರಿಸೈಡಿಂಗ್ ಅಧಿಕಾರಿಯು ಮತದಾರರ ರಿಜಿಸ್ಟರಿನಲ್ಲಿ ಮತದಾರನಿಗೆ ಸಂಬಂಧಿಸಿದ ನಮೂದಿನ ಎದುರು ಷರಾ ಅಂಕಣದಲ್ಲಿ 'ಮತ ಚಲಾಯಿಸಲು ಅವಕಾಶ ನೀಡಿಲ್ಲ – ಮತದಾನದ ವಿಧಾನವನ್ನು ಉಲ್ಲಂಘಿಸಲಾಗಿದೆ' ಎಂದು ಷರಾ ಬರೆಯತಕ್ಕದ್ದು. ಆ ನಮೂದಿನ ಕೆಳಗೆ ಪ್ರಿಸೈಡಿಂಗ್ ಅಧಿಕಾರಿಯು ಸಹಿಯನ್ನು ಮಾಡಬೇಕು. ಆ ಮತದಾರನ ಕ್ರಮ ಸಂಖ್ಯೆಯಲ್ಲಿ ಅಥವಾ ಮತದಾರರ ರಿಜಿಸ್ಟರಿನ ಅಂಕಣ 1ರಲ್ಲಿ ನಂತರದ ಯಾವುದೇ ಮತದಾರನ ಕ್ರಮಸಂಖ್ಯೆಯಲ್ಲಿ ಬದಲಾವಣೆ ಮಾಡುವ ಅಗತ್ಯವಿರುವುದಿಲ್ಲ.

### 15.54. ಕಾಗದದ ತಾಳೆದರ್ಶಕದ (ಪೇಪರ್ ಟ್ರೈಯಲ್) ಮೇಲೆ ಮುದ್ರಿತವಾದ ವಿವರಗಳ ಬಗ್ಗೆ ದೂರುಗಳಿದ್ದ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ

15.54.1. ಮತದಾರನು ಮತ ಚಲಾಯಿಸಿದ ನಂತರ ವಿವಿಪ್ಯಾಟ್‌ನಲ್ಲಿ ಮುದ್ರಿತವಾದ ಪೇಪರ್ ಸ್ಲಿಪ್, ಅವನು ಯಾವ ಅಭ್ಯರ್ಥಿಗೆ ಮತ ಚಲಾಯಿಸಿರುವನೋ ಆ ಅಭ್ಯರ್ಥಿಗೆ ಬದಲಾಗಿ ಬೇರೆ ಅಭ್ಯರ್ಥಿಯ ಹೆಸರು ಚಿಹ್ನೆಯನ್ನು ಹೊಂದಿದೆ ಎಂಬುದಾಗಿ ಆಪಾದಿಸಿದ್ದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ತಪ್ಪು ಘೋಷಣೆಯನ್ನು ಮಾಡಿದರೆ ಎದುರಿಸಬೇಕಾದ ಪರಿಣಾಮಗಳ ಕುರಿತಾಗಿ ಮತದಾರನಿಗೆ ಎಚ್ಚರಿಕೆ ನೀಡಿದ ನಂತರ ಅಂತಹ ಆಪಾದನೆ ಕುರಿತಾದ ಲಿಖಿತ ಘೋಷಣೆಯನ್ನು ಆ ಮತದಾರನಿಂದ ಪಡೆಯತಕ್ಕದ್ದು. ಲಿಖಿತ ಘೋಷಣೆಯನ್ನು ಮತದಾರನು ನೀಡಿದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ಆ ಮತದಾರನಿಗೆ ಸಂಬಂಧಿಸಿದಂತೆ ನಮೂನೆ–17ಎ ಯಲ್ಲಿ ಎರಡನೇ ನಮೂದನ್ನು ಮಾಡತಕ್ಕದು ಮತ್ತು ತಮ್ಮ ಸಮ್ಮುಖದಲ್ಲಿ ಹಾಗೂ ಮತಗಟ್ಟೆಯಲ್ಲಿ ಹಾಜರಿರಬಹುದಾದಂತಹ ಅಭ್ಯರ್ಥಿಗಳು ಅಥವಾ ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಮತದಾರನು ಪರೀಕ್ಷಾರ್ಥ ಮತವನ್ನು ಮತಯಂತ್ರದಲ್ಲಿ ಚಲಾಯಿಸುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಮತ್ತು ವಿವಿಪ್ಯಾಟ್ ಮುದ್ರಿಸುವ ಪ್ರಿಂಟರಿನ ಕಾಗದದ ಸ್ಲಿಪ್ ಅನ್ನು ಗಮನಿಸತಕ್ಕದ್ದು. ಆಪಾದನೆಯು ಸರಿಯೆಂಬುದಾಗಿ ಕಂಡುಬಂದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಕೂಡಲೇ ರಿಟರ್ನಿಂಗ್ ಅಧಿಕಾರಿಗೆ ವಾಸ್ತವಾಂಶಗಳನ್ನು ವರದಿ ಮಾಡತಕ್ಕದ್ದು ಮತ್ತು ಆ ಮತಯಂತ್ರದಲ್ಲಿ ಆನಂತರ ಮತಚಲಾಯಿಸುವುದನ್ನು ನಿಲ್ಲಿಸತಕ್ಕದ್ದು ಹಾಗೂ ರಿಟರ್ನಿಂಗ್ ಅಧಿಕಾರಿಯವರು ನೀಡಬಹುದಾದ ನಿರ್ದೇಶನದ ಅನುಸಾರ ಕ್ರಮಕೈಗೊಳ್ಳತಕ್ಕದ್ದು. ಆದಾಗ್ಯೂ, ಆಪಾದನೆಯು ತಪ್ಪು ಎಂಬುದಾಗಿ ಕಂಡುಬಂದಲ್ಲಿ ಮತ್ತು ಹಾಗೆ ಮುದ್ರಿತವಾದ ಕಾಗದದ ಸ್ಲಿಪ್ ಮತದಾರನು ದಾಖಲಿಸಿದ ಪರೀಕ್ಷಾರ್ಥ ಮತದೊಂದಿಗೆ ಹೊಂದಿಕೆಯಾದಲ್ಲಿ, ಆಗ ಪ್ರಿಸೈಡಿಂಗ್ ಅಧಿಕಾರಿಯು:–

ಎ. ಅಂತಹ ಪರೀಕ್ಷಾರ್ಥ ಮತವನ್ನು ಯಾವ ಅಭ್ಯರ್ಥಿಗಾಗಿ ದಾಖಲಿಸಲಾಯಿತೋ ಆ ಅಭ್ಯರ್ಥಿಯ ಕ್ರಮಸಂಖ್ಯೆ ಮತ್ತು ಹೆಸರನ್ನು ನಮೂದಿಸಿ, ನಮೂನೆ 17ಎಯಲ್ಲಿ ಆ ಮತದಾರನಿಗೆ ಸಂಬಂಧಪಟ್ಟ ಎರಡನೇ ನಮೂದಿಗೆ ಪ್ರತಿಯಾಗಿ ಸದರಿ ಅಂಶದ ಷರಾ ಮಾಡತಕ್ಕದ್ದು.

ಬಿ. ಅಂತಹ ಷರಾಗಳಿಗೆ ಪ್ರತಿಯಾಗಿ ಆ ಮತದಾರನ ಸಹಿ ಅಥವಾ ಹೆಬ್ಬೆಟ್ಟು ಮುದ್ರೆಯನ್ನು ಪಡೆಯತಕ್ಕದ್ದು; ಮತ್ತು

ಸಿ. ಅಂತಹ ಪರೀಕ್ಷಾರ್ಥ ಮತಕ್ಕೆ ಸಂಬಂಧಿಸಿದಂತೆ ನಮೂನೆ 17ಸಿಯ ಭಾಗ–1ರಲ್ಲಿನ ಬಾಬು 5ರಲ್ಲಿ ಅಗತ್ಯ ನಮೂದುಗಳನ್ನು ಮಾಡತಕ್ಕದ್ದು.

### 15.55. ಪ್ರಿಸೈಡಿಂಗ್ ಅಧಿಕಾರಿ(ಹಾಗೂ ಇತರೆ ಸಿಬ್ಬಂದಿ) ವೋಟಿಂಗ್ ಕಂಪಾರ್ಟ್‌ಮೆಂಟ್‌ನ ಹತ್ತಿರ ಹೋಗುವುದರ ಮೇಲೆ ನಿರ್ಬಂಧಗಳು

15.55.1. ಕೆಲವೊಮ್ಮೆ, ಪ್ರಿಸೈಡಿಂಗ್ ಅಧಿಕಾರಿಗೆ ವೋಟಿಂಗ್ ಕಂಪಾರ್ಟ್‌ನಲ್ಲಿ ಇಟ್ಟಿರುವ ಬ್ಯಾಲೆಟಿಂಗ್ ಯೂನಿಟ್ (ಗಳು) ಮತ್ತು ವಿವಿಪ್ಯಾಟ್ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಬಗ್ಗೆ ಅಥವಾ ವೋಟಿಂಗ್ ಕಂಪಾರ್ಟ್ ಒಳಗೆ ಹೋದ ಮತದಾರನೊಬ್ಬ ಹೊರಬರದೇ ಹೆಚ್ಚು ಅವಧಿಯ ಕಾಲ ಅಲ್ಲಿಯೇ ಉಳಿದಿರಬಹುದು ಅಥವಾ ಬ್ಯಾಲೆಟಿಂಗ್ ಯೂನಿಟ್ (ಗಳು) ಮತ್ತು ವಿವಿಪ್ಯಾಟ್ ಅನ್ನು ವಿರೂಪಗೊಳಿಸುವುದರಲ್ಲಿ ತೊಡಗಿದ್ದರೂ ಇರಬಹುದು ಎಂಬ ಬಗ್ಗೆ ಸಂಶಯ ಬರಬಹುದು ಅಥವಾ ಆ ರೀತಿ ಸಂಶಯ ಪಡುವುದಕ್ಕೆ ಕಾರಣಗಳೂ ಇರಬಹುದು. ಅಂಥ ಸಂದರ್ಭಗಳಲ್ಲಿ, ಪ್ರಿಸೈಡಿಂಗ್ ಅಧಿಕಾರಿಅವರು ನಿಯಮ 49–ಕ್ಯೂ ಮೇರೆಗೆ ಆಗಾಗ್ಗೆ ಬ್ಯಾಲೆಟಿಂಗ್ ಯೂನಿಟ್ (ಗಳು) ಮತ್ತು ವಿವಿಪ್ಯಾಟ್ ಅನ್ನು ಪರೀಕ್ಷಿಸಲು ಹಾಗೂ ಮತದಾನ ಪ್ರಕ್ರಿಯೆಯು ಸುಗಮವಾಗಿ ಹಾಗೂ ಕ್ರಮಬದ್ಧವಾದ ರೀತಿಯಲ್ಲಿ ನಡೆಯಲು ಅನುವಾಗುವಂತೆ ವೋಟಿಂಗ್ ಕಂಪಾರ್ಟ್‌ಮೆಂಟ್‌ನ ಒಳಗೆ ಪ್ರವೇಶಿಸಬಹುದು. ಆ ರೀತಿಯ ಪರೀಕ್ಷೆಯು ಪೋಲಿಂಗ್ ಏಜೆಂಟರುಗಳ ಸಮ್ಮುಖದಲ್ಲಿ ನಡೆಯಬೇಕು ಹಾಗೂ ವೋಟಿಂಗ್ ಕಂಪಾರ್ಟ್‌ಮೆಂಟ್ ಒಳಗೆ ಯಾವುದೇ ಮತದಾರನು ಇರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

15.55.2. ಯಾರೇ ಮತದಾರನು ಬ್ಯಾಲೆಟಿಂಗ್ ಯೂನಿಟ್ (ಗಳು) ಮತ್ತು ವಿವಿಪ್ಯಾಟ್‌ನಲ್ಲಿನ ಚಿಹ್ನೆ/ಹೆಸರುಗಳು/ ಬ್ಯಾಲೆಟ್ ಬಟನ್ ಮೇಲೆ ಯಾವುದೇ ಪೇಪರ್, ಟೇಪ್ ಇತ್ಯಾದಿಯನ್ನು ಅಂಟಿಸುವ ಮೂಲಕ ಯಾವುದೇ ಹಾನಿಯನ್ನು ಮಾಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ, ಪ್ರಿಸೈಡಿಂಗ್ ಅಧಿಕಾರಿ ಅವರು ಕಾಲಕಾಲಕ್ಕೆ ಬ್ಯಾಲೆಟಿಂಗ್

ಯೂನಿಟ್‌ನ ತಪಾಸಣೆ ಮಾಡಬಹುದು. ಆದರೆ ಈ ರೀತಿ ವಿಧಾನವನ್ನು ಯಾರೇ ಮತದಾರ ಮತದಾನ ಕೊಠಡಿಯಲ್ಲಿ ಇಲ್ಲದಿರುವಾಗ ಪೋಲಿಂಗ್ ಏಜೆಂಟರ ಎದುರಿನಲ್ಲಿ ಮಾಡಬೇಕು.

### 15.56. ಮತದಾನ ಮುಕ್ತಾಯವಾಗುವ ಸಮಯದಲ್ಲಿ ಮತಗಟ್ಟೆಯಲ್ಲಿ ಹಾಜರಿರುವ ವ್ಯಕ್ತಿಗಳಿಂದ ಮತದಾನ

15.56.1. ಪ್ರಿಸೈಡಿಂಗ್ ಅಧಿಕಾರಿ ಅವರು, ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಮತದಾನ ಕೇಂದ್ರವನ್ನು ಮುಕ್ತಾಯಗೊಳಿಸಬೇಕು. ಆನಂತರ ಯಾವುದೇ ಮತದಾರನನ್ನು ಮತಗಟ್ಟೆಯ ಒಳಗೆ ಬಿಡುವಂತಿಲ್ಲ. ಆದರೂ, ಮತದಾನದ ಸಮಯ ಮುಕ್ತಾಯಗೊಳ್ಳುವಾಗ ಮತಗಟ್ಟೆಯಲ್ಲಿ ಹಾಜರಿರುವ ಎಲ್ಲಾ ಮತದಾರರಿಗೂ ಗೊತ್ತುಪಡಿಸಿದ ಸಮಯದ ಮುಕ್ತಾಯದ ನಂತರವೂ ತಮ್ಮ ಮತ ಚಲಾಯಿಸಲು ಅನುಮತಿ ನೀಡಬಹುದು. ಈ ಉದ್ದೇಶಕ್ಕಾಗಿ, ಮತ ಚಲಾಯಿಸಲು ಕಾಯುತ್ತಿರುವ ಮತಗಟ್ಟೆಯ ಪರಿಮಿತಿಗಳೊಳಗಿರುವ ಎಲ್ಲರಿಗೂ ಅವರ ಮತಗಳನ್ನು ದಾಖಲು ಮಾಡಲು ಅವರ ಸರದಿಯ ಪ್ರಕಾರ ಪ್ರಿಸೈಡಿಂಗ್ ಅಧಿಕಾರಿಯು ಕ್ರಮ ಸಂಖ್ಯೆ 1 ರಿಂದ ಪ್ರಾರಂಭಿಸಿ ತನ್ನ ಪೂರ್ಣ ಸಹಿ ಇರುವ ಚೀಟಿಗಳನ್ನು ನೀಡತಕ್ಕದ್ದು. ಅಂತಹ ಮತದಾರರ ಜೊತೆ ಬೇರೆ ಜನರು ಸೇರಿಕೊಳ್ಳದ ಹಾಗೆ ನೋಡಿಕೊಳ್ಳಲು ಸಾಲಿನ ಕೊನೆಯಲ್ಲಿ ನಿಂತಿರುವ ವ್ಯಕ್ತಿಯಿಂದ ಪ್ರಾರಂಭಿಸಿ ಎಲ್ಲಾ ಮತದಾರರಿಗೆ ಸಾಲಿನ ಮುಂದುಗಡೆ ನಿಂತಿರುವ ವ್ಯಕ್ತಿಯವರೆಗೆ ಚೀಟಿಗಳನ್ನು ಕೊಡತಕ್ಕದ್ದು.

### 15.57. ಮತದಾನದ ಮುಕ್ತಾಯ

**15.57.1.** ಇನ್ನು ಮುಂದೆ ಮತಯಂತ್ರದಲ್ಲಿ ಮತಗಳನ್ನು ದಾಖಲಿಸುವುದಕ್ಕೆ ಸಾಧ್ಯವಾಗದಿರುವ ಹಾಗೆ ಕೊನೆಯ ಮತದಾರನು ತನ್ನ ಮತವನ್ನು ದಾಖಲಿಸಿದ ನಂತರ ಪ್ರಿಸೈಡಿಂಗ್ ಅಧಿಕಾರಿಯು ಮತದಾನವನ್ನು ಮುಕ್ತಾಯ ಮಾಡತಕ್ಕದ್ದು ಈ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಮತ್ತಾವುದೇ ಮತವನ್ನು ದಾಖಲಿಸದೇ ಇರುವಂತೆ ನೋಡಿಕೊಳ್ಳಲು ಕಂಟ್ರೋಲ್ ಯೂನಿಟ್‌ನಲ್ಲಿರುವ "ಕ್ಲೋಸ್" ಬಟನ್‌ನ್ನು ಒತ್ತಬೇಕು. ನಂತರ ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಿಂದ ಬ್ಯಾಲೆಟಿಂಗ್ ಯೂನಿಟ್ ಮತ್ತು ವಿವಿಪ್ಯಾಟ್ ಅನ್ನು ಬೇರ್ಪಡಿಸಬೇಕು. ಈ ರೀತಿ ಕ್ಲೋಸ್ ಬಟನ್‌ನ್ನು ಒತ್ತಿದಾಗ, ಕಂಟ್ರೋಲ್ ಯೂನಿಟ್ ಮೇಲಿರುವ ಡಿಸ್‌ಪ್ಲೇ ಪ್ಯಾನಲ್‌ಗಳು "ಮತದಾನ ಮುಕ್ತಾಯಗೊಂಡಿದೆ" ಎಂಬುದನ್ನು ತೋರಿಸುತ್ತದೆ. ಮತಯಂತ್ರವು ಈಗ ಮತ್ತ್ಯಾವುದೇ ಮತಗಳನ್ನು ಅಂಗೀಕರಿಸುವುದಿಲ್ಲ.

15.57.2. ಪ್ರಿಸೈಡಿಂಗ್ ಅಧಿಕಾರಿಯು ನಮೂನೆ 17–C ಯಲ್ಲಿ "ದಾಖಲಿಸಿದ ಮತಗಳ ಲೆಕ್ಕ"ದ ಅಡಿಯಲ್ಲಿ ಕೂಡಲೇ ಇವಿಎಂನಲ್ಲಿ ದಾಖಲಾದ ಮತಗಳ ಸಂಖ್ಯೆಯನ್ನು ಬರೆದು ಇಡಬೇಕು.

### 15.58. ಪ್ರಿಸೈಡಿಂಗ್ ಅಧಿಕಾರಿಯು ದಾಖಲಿಸಿದ ಒಟ್ಟು ಮತಗಳ ಲೆಕ್ಕದ (ನಮೂನೆ 17–Cಯಲ್ಲಿ) ಪ್ರತಿಯನ್ನು ಒದಗಿಸುವುದು

15.58.1. ಮತದಾನದ ಮುಕ್ತಾಯದ ನಂತರ ಪ್ರಿಸೈಡಿಂಗ್ ಅಧಿಕಾರಿಯು ಚುನಾವಣೆ ನಡತೆ ನಿಯಮಗಳು 1961ರ 49–ಎಸ್ ನಿಯಮದ ಪ್ರಕಾರ ಮತಯಂತ್ರದಲ್ಲಿ ದಾಖಲಾದ ಮತಗಳ ಲೆಕ್ಕವನ್ನು ನಿಗದಿತ ನಮೂನೆ 17 'ಸಿ'ರಲ್ಲಿ ಸಿದ್ಧಪಡಿಸಬೇಕು. ಮತದಾನದ ಅಂತ್ಯದಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದ ಪ್ರತಿಯೊಬ್ಬ ಪೋಲಿಂಗ್ ಏಜೆಂಟರಿಗೆ ದಾಖಲಿಸಿದ ಮತಗಳ ಲೆಕ್ಕದ ದೃಢೀಕರಿಸಿದ ಪ್ರತಿಯನ್ನು ಆ ಪೋಲಿಂಗ್ ಏಜೆಂಟರಿಂದ ಸ್ವೀಕೃತಿಯನ್ನು ಪಡೆದು ಒದಗಿಸಬೇಕು. ಅಭ್ಯರ್ಥಿಗಳಿಗೆ 'ದಾಖಲಾದ ಮತಗಳ ಲೆಕ್ಕದ ಅವಶ್ಯಕತೆ ಇರುವುದರಿಂದ **ಪೋಲಿಂಗ್ ಏಜೆಂಟರು** ಪ್ರಿಸೈಡಿಂಗ್ ಅಧಿಕಾರಿಯಿಂದ ಆ ನಮೂನೆಯ ದೃಢೀಕೃತ ಪ್ರತಿಯನ್ನು ಪಡೆದು ಇಟ್ಟುಕೊಳ್ಳಬೇಕು. ಪ್ರಿಸೈಡಿಂಗ್ ಅಧಿಕಾರಿಯು ಚುನಾವಣಾ ಆಯೋಗವು ನಿಗದಿಪಡಿಸಿದ ಘೋಷಣಾ ಪತ್ರದ ಮೇಲೆ **(ಪರಿಶಿಷ್ಟ –26 ಭಾಗ-IIIರಲ್ಲಿ).** ಚುನಾವಣೆ ಮುಕ್ತಾಯದ ನಂತರ, ಯಾವ ಪೋಲಿಂಗ್ ಏಜೆಂಟ್‌ನು ಆ ನಮೂನೆಯನ್ನು ಸ್ವೀಕರಿಸುವನೋ **ಅವನಿಂದ ಸಹಿಯನ್ನು ಪಡೆಯತಕ್ಕದ್ದು**. ಯಾವುದೇ ಪೋಲಿಂಗ್ ಏಜೆಂಟ್‌ನು ಆ ಪ್ರತಿಯನ್ನು ಸ್ವೀಕರಿಸಲು ನಿರಾಕರಿಸುವನೋ ಅವನಿಂದ ಪ್ರಿಸೈಡಿಂಗ್ ಅಧಿಕಾರಿಯು, ಅಂಥ ಪೋಲಿಂಗ್ ಏಜೆಂಟನ ಹೆಸರನ್ನು ಮೇಲೆ ತಿಳಿಸಿದ ನಮೂನೆಯಲ್ಲಿ ನಮೂದು ಮಾಡಿಕೊಳ್ಳಬೇಕು.

### 15.59. ಮತದಾನ ಮುಕ್ತಾಯಗೊಂಡ ನಂತರ ಇವಿಎಂ ಮತ್ತು ವಿವಿಪ್ಯಾಟನ್ನು ಮೊಹರು ಮಾಡುವುದು

15.59.1. ಮತದಾನವು ಪೂರ್ಣಗೊಂಡ ನಂತರ ಮತಯಂತ್ರದಲ್ಲಿ ದಾಖಲಿಸಿದ ಮತಗಳ ಲೆಕ್ಕವನ್ನು ನಮೂನೆ 17–Cಯಲ್ಲಿ ತಯಾರಿಸಿ, ಅದರ ಪ್ರತಿಗಳನ್ನು ಅಲ್ಲಿ ಹಾಜರಿದ್ದ ಪೋಲಿಂಗ್ ಏಜೆಂಟರಿಗೆ ಒದಗಿಸಿದ ನಂತರ ಪ್ರಿಸೈಡಿಂಗ್ ಅಧಿಕಾರಿಯು ಮತಯಂತ್ರವನ್ನು ಮೊಹರು ಮಾಡಬೇಕು ಮತ್ತು ಮತ ಎಣಿಕೆ / ಸಂಗ್ರಹಣಾ ಕೇಂದ್ರಕ್ಕೆ ಕಳುಹಿಸಲು ಭದ್ರಪಡಿಸಬೇಕು.

15.59.2. ಮತಯಂತ್ರವನ್ನು ಮೊಹರು ಮಾಡುವ ಮತ್ತು ಭದ್ರಪಡಿಸುವ ಮೊದಲು, ಕಂಟ್ರೋಲ್ ಯೂನಿಟ್ ನಲ್ಲಿಯ ಪವರ್ ಸ್ವಿಚ್ಚನ್ನು 'ಆಫ್' ಮಾಡಬೇಕು ಮತ್ತು ಬ್ಯಾಲೆಟಿಂಗ್ ಯೂನಿಟ್(ಗಳು), ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್ ಸಂಪರ್ಕವನ್ನು ತಪ್ಪಿಸಬೇಕು. ಬ್ಯಾಲೆಟಿಂಗ್ ಯೂನಿಟ್(ಗಳು), ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್ ಅನ್ನು ಸಂಬಂಧಪಟ್ಟ ಸಾಗಿಸುವ ಪೆಟ್ಟಿಗೆಗಳಲ್ಲಿ ಇಡಬೇಕು. ಪ್ರತಿಯೊಂದು ಸಾಗಿಸುವ ಪೆಟ್ಟಿಗೆಯನ್ನು, ಸಾಗಿಸುವ ಪೆಟ್ಟಿಗೆಯ ಎರಡೂ ಕಡೆಗಳಲ್ಲಿ ಆ ಉದ್ದೇಶಕ್ಕಾಗಿಯೇ ಒದಗಿಸಲಾಗಿರುವ ಎರಡು ತುದಿಗಳಲ್ಲಿ ಮೊಹರು ಮಾಡಿ, ಪ್ರಿಸೈಡಿಂಗ್ ಅಧಿಕಾರಿಯು ಸಹಿಯನ್ನು ಹಾಕಿ, ಚುನಾವಣೆ ಮತ್ತು ಮತಗಟ್ಟೆ ವಿವರಗಳನ್ನು ತೋರಿಸುವ ಸಾಮಾನ್ಯ ಅಡ್ರೆಸ್ ಟ್ಯಾಗ್ ಅನ್ನು ಹಾಕಬೇಕು.

15.59.3. ಅಲ್ಲಿ ಹಾಜರಿರುವ ಅಭ್ಯರ್ಥಿಗಳು ಅಥವಾ ಅವರ ಏಜೆಂಟರುಗಳು ತಮ್ಮ ಮೊಹರುಗಳನ್ನು ಸಾಗಿಸುವ ಪೆಟ್ಟಿಗೆಯ ಮೇಲೆ ಹಾಕಲು ಇಚ್ಛಿಸಿದರೆ ಹಾಗೆ ಮಾಡಲು ಅವರಿಗೆ ಅನುಮತಿ ನೀಡಬೇಕು.

15.59.4. ಬ್ಯಾಲೆಟಿಂಗ್ ಯೂನಿಟ್(ಗಳ), ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟನ್ನು ಸಾಗಿಸುವ ಪೆಟ್ಟಿಗೆಗಳ ಮೇಲಿನ ಅಡ್ರೆಸ್ ಟ್ಯಾಗುಗಳ ಮೇಲೆ ತಮ್ಮ ಮೊಹರುಗಳನ್ನು ಮಾಡುವ ಅಭ್ಯರ್ಥಿಗಳ/ಪೋಲಿಂಗ್ ಏಜೆಂಟರುಗಳ ಹೆಸರುಗಳನ್ನು ಪ್ರಿಸೈಡಿಂಗ್ ಅಧಿಕಾರಿಯು ಪರಿಶಿಷ್ಟ–26ರ ಭಾಗ–ಋಗಿ ರಂತೆ ಮತದಾನದ ಕೊನೆಯಲ್ಲಿ ಮಾಡುವ ಘೋಷಣೆಯಲ್ಲಿ ನಮೂದಿಸಬೇಕು.

**15.60. ಚುನಾವಣಾ ಕಾಗದಪತ್ರಗಳನ್ನು ಪ್ಯಾಕೆಟ್ಟುಗಳಲ್ಲಿಟ್ಟು ಮೊಹರು ಮಾಡುವುದು**

15.60.1. ಮತದಾನ ಪೂರ್ಣಗೊಂಡ ನಂತರ ಪ್ರಿಸೈಡಿಂಗ್ ಅಧಿಕಾರಿಯು ಮತದಾನಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದಪತ್ರಗಳನ್ನು ಪ್ರತ್ಯೇಕ ಪ್ಯಾಕೆಟ್ಟುಗಳಲ್ಲಿಟ್ಟು ಚುನಾವಣಾ ಆಯೋಗದ ನಿಯಮಗಳು ಹಾಗೂ ಸೂಚನೆಗಳ ಅನುಸಾರ ಮೊಹರು ಮಾಡಬೇಕು. ಮತಗಟ್ಟೆಯಲ್ಲಿ ಹಾಜರಿರುವ ಪ್ರತಿಯೊಬ್ಬ ಪೋಲಿಂಗ್ ಏಜೆಂಟರುಗಳು, ಈ ಕೆಳಕಂಡ ದಾಖಲೆಗಳನ್ನು ಒಳಗೊಂಡ ಲಕೋಟೆ ಹಾಗೂ ಪ್ಯಾಕೆಟ್‌ಗಳ ಮೇಲೆ ಪ್ರಿಸೈಡಿಂಗ್ ಅಧಿಕಾರಿಯ ಜೊತೆ ಮೊಹರುಗಳನ್ನು ಹಾಕಲು ಅನುಮತಿಸಬೇಕು, ಎಂದರೆ,–

i. ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿ;

ii. ಮತದಾರರ ರಿಜಿಸ್ಟರ್;

iii. ಮತದಾರರ ಚೀಟಿಗಳು;

iv. ಬಳಸಿದ ಟೆಂಡರ್ಡ್ ಮತಪತ್ರಗಳು ಮತ್ತು ಟೆಂಡರ್ಡ್ ಮತಗಳ ಪಟ್ಟಿ ನಮೂನೆ 17ಬಿರಲ್ಲಿ;

v. ಬಳಸದೆ ಇರುವ ಟೆಂಡರ್ಡ್ ಮತಪತ್ರಗಳು;

vi. ಆಕ್ಷೇಪಿತ ಮತಗಳ ಪಟ್ಟಿ;

vii. ಬಳಸದ ಹಾಗೂ ಹಾನಿಗೊಳಗಾದ ಪೇಪರ್ ಸೀಲ್‌ಗಳು ಯಾವುದಾದರೂ ಇದ್ದರೆ;

viii. ಪೋಲಿಂಗ್ ಏಜೆಂಟರ ನೇಮಕಾತಿ ಪತ್ರಗಳು; ಮತ್ತು

ix. ರಿಟರ್ನಿಂಗ್ ಅಧಿಕಾರಿರವರು ಮೊಹರು ಮಾಡಿದ ಪ್ಯಾಕೆಟ್‌ನಲ್ಲಿ ಇಡಬೇಕೆಂದು ನಿರ್ದೇಶಿಸಿರುವ ಯಾವುದೇ ಇತರ ಕಾಗದ ಪತ್ರಗಳು.

15.60.2. ಈ ಮೇಲಿನ ಎಲ್ಲಾ ಚುನಾವಣಾ ಕಾಗದ ಪತ್ರಗಳ ಮೇಲೆ ತಮ್ಮ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಪೋಲಿಂಗ್ ಏಜೆಂಟನಿಗೆ ತಮ್ಮ ಮೊಹರುಗಳನ್ನು ಹಾಕಲು ತಿಳಿಸಬಹುದು.

## 15.61. ಇವಿಎಂ, ವಿವಿಪ್ಯಾಟ್ ಮತ್ತು ಚುನಾವಣಾ ಕಾಗದ ಪತ್ರಗಳನ್ನು ಸ್ವೀಕಾರ ಕೇಂದ್ರಕ್ಕೆ ಸಾಗಿಸುವುದು

15.61.1. **ಇವಿಎಂ, ವಿವಿಪ್ಯಾಟ್ ಮತ್ತು** ಎಲ್ಲಾ ಚುನಾವಣಾ ಕಾಗದ ಪತ್ರಗಳನ್ನು ಮೊಹರು ಮಾಡಿ ಭದ್ರಪಡಿಸಿದ ನಂತರ ಅವುಗಳನ್ನು ರಿಟರ್ನಿಂಗ್ ಅಧಿಕಾರಿಅವರು ಸ್ವೀಕಾರ ಕೇಂದ್ರಗಳಿಗೆ ಒಪ್ಪಿಸಬೇಕು.

## 15.62. ಮತಯಂತ್ರಗಳನ್ನು ಕೊಂಡೊಯ್ಯುವ ವಾಹನಗಳ ಜೊತೆ ಹೋಗುವುದು

15.62.1. **ಇವಿಎಂ, ವಿವಿಪ್ಯಾಟ್ ಮತ್ತು** ಚುನಾವಣಾ ಕಾಗದ ಪತ್ರಗಳನ್ನು ಸ್ವೀಕಾರ ಕೇಂದ್ರಗಳಿಗೆ ಒಪ್ಪಿಸಲು ತೆಗೆದುಕೊಂಡು ಹೋಗುತ್ತಿರುವ ವಾಹನದ ಜೊತೆ ಪೋಲಿಂಗ್ ಏಜೆಂಟರುಗಳು ತೆರಳಲು ಅನುಮತಿಸಬಹುದು. ಆದರೆ, ಆ ಪೋಲಿಂಗ್ ಏಜೆಂಟರುಗಳು ಪ್ರತ್ಯೇಕ ವಾಹನದಲ್ಲಿ ತೆರಳಬೇಕು. ಅವರುಗಳು **ಇವಿಎಂ, ವಿವಿಪ್ಯಾಟ್ ಮತ್ತು** ಹಾಗೂ ಚುನಾವಣೆ ಕಾಗದಪತ್ರ ಕೊಂಡೊಯ್ಯುವ ವಾಹನದಲ್ಲಿ ಹೋಗುವಂತಿಲ್ಲ.

**15.63. ಇವಿಎಂ, ವಿವಿಪ್ಯಾಟ್ ಮತ್ತು ಇತರೇ ಸಾಮಗ್ರಿಗಳನ್ನು ಸ್ವೀಕರಿಸಲು ಸ್ವೀಕಾರ ಕೇಂದ್ರಗಳಲ್ಲಿ ವ್ಯವಸ್ಥೆಗಳನ್ನು ಮಾಡುವುದು**

**ಇವಿಎಂ, ವಿವಿಪ್ಯಾಟ್‌ಗಳನ್ನು ಮತ್ತು ಸುರಕ್ಷಿತ ಅಭಿರಕ್ಷೆಗೆ ತೆಗೆದುಕೊಳ್ಳುವುದು**

15.63.1. ಮತಕ್ಷೇತ್ರದಲ್ಲಿ ಮತದಾನ ಮುಗಿದ ಬಳಿಕ **ಇವಿಎಂ ಮತ್ತು ವಿವಿಪ್ಯಾಟ್** ಸ್ವೀಕಾರ ಕೇಂದ್ರಗಳಲ್ಲಿ ಸುರಕ್ಷಿತವಾಗಿಡುವ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಅವುಗಳನ್ನು ಮತ ಎಣಿಕೆಗೆ ತೆಗೆದುಕೊಂಡು ಹೋಗುವವರೆಗೂ ಅವುಗಳನ್ನು ನೋಡಿಕೊಳ್ಳಲು ಕಾವಲುಗಾರನನ್ನು ನೇಮಿಸಬೇಕು. ಈ ಕಾರ್ಯಕ್ರಮದ ಬಗ್ಗೆ ರಿಟರ್ನಿಂಗ್ ಅಧಿಕಾರಿ ಮುಂಚಿತವಾಗಿ ಅಭ್ಯರ್ಥಿಗೆ ಮಾಹಿತಿ ನೀಡುವರು. ಮತಗಳನ್ನು ದಾಖಲಿಸಿರುವ ಇವಿಎಂ ಮತ್ತು ವಿವಿಪ್ಯಾಟ್ ಮತಕೇಂದ್ರಗಳಿಂದ ಪಡೆದುಕೊಂಡು ಸುರಕ್ಷಿತ ಸ್ಥಳಗಳಲ್ಲಿ ಒಯ್ಯಲು ಬರುವ ಸಂಗ್ರಹಣಾಧಿಕಾರಿಗಳ (collection parties) ಬಗ್ಗೆಯೂ ನಿಮಗೆ ತಿಳಿಸಲಾಗುವುದು. ಅಭ್ಯರ್ಥಿಯು ಇಚ್ಛಿಸಿದರೆ, ಅವರು ತಮ್ಮ ಏಜೆಂಟರುಗಳನ್ನು ಸಂಗ್ರಹಣಾಧಿಕಾರಿಗಳ ಜೊತೆ ಹೋಗಲು ತಿಳಿಸಬಹುದು. ಆದಾಗ್ಯೂ, ಅವರುಗಳು ಸರ್ಕಾರಿ ವಾಹನದಲ್ಲಿ ಹೋಗುವ ಅವಕಾಶವಿಲ್ಲವಾದ್ದರಿಂದ, ಅಭ್ಯರ್ಥಿಯು ಅವರಿಗೆ ಬೇರೆ ವಾಹನದ ವ್ಯವಸ್ಥೆಯನ್ನು ಮಾಡಬೇಕು. ಅಭ್ಯರ್ಥಿಯು ಇಚ್ಛಿಸಿದಲ್ಲಿ, ಇವಿಎಂ ಮತ್ತು ವಿವಿಪ್ಯಾಟ್ ಇಟ್ಟಿರುವ ಸ್ಥಳದಲ್ಲಿ ನೋಡಿಕೊಳ್ಳಲು ಏಜೆಂಟ್ ಒಬ್ಬನನ್ನು ನೇಮಿಸಬಹುದು. ಇವಿಎಂ ಮತ್ತು ವಿವಿಪ್ಯಾಟ್ ಇಟ್ಟಿರುವ ಕಟ್ಟಡದ ಕಿಟಕಿ ಮತ್ತು ಬಾಗಿಲುಗಳ ಮೇಲೆ ರಿಟರ್ನಿಂಗ್ ಅಧಿಕಾರಿ ಹಾಕಿರುವ ಮೊಹರಿನ ಜೊತೆಗೆ ಏಜೆಂಟ್ ಕೂಡ ತನ್ನ ಮೊಹರನ್ನು ಮಾಡಲು ಅನುಮತಿಸಬಹುದು. ಅಭ್ಯರ್ಥಿಯಾಗಲೀ ಅಥವಾ ಅವರ ಪೋಲಿಂಗ್ ಏಜೆಂಟಾಗಲೀ ಮೊಹರುಗಳನ್ನು ದಾಖಲಿಸದೆ ಹೋದ ಪಕ್ಷದಲ್ಲಿ, ಅಭ್ಯರ್ಥಿಯು ಏಜೆಂಟನ ಗುರುತಿಗಾಗಿ ಅವನ ವಿವರಗಳೆಲ್ಲವನ್ನೂ ನೀಡತಕ್ಕದ್ದು. ಎಲ್ಲಾ ಇವಿಎಂ ಮತ್ತು ವಿವಿಪ್ಯಾಟ್ ಸ್ವೀಕರಿಸಿದ ಮೇಲೆ ಹಾಗೂ ಅವುಗಳನ್ನು ಕೊಠಡಿಯೊಳಗೆ ಭದ್ರಪಡಿಸಿದ ಮೇಲೆ ಆ ಕೊಠಡಿಗೆ ಬೀಗ ಹಾಕಬೇಕು ಮತ್ತು ಮತ ಎಣಿಕೆಯ ದಿನದ ಬೆಳಿಗ್ಗೆಯವರೆಗೂ, ಯಾರೂ ಆ ಕೊಠಡಿಯೊಳಗೆ ಪ್ರವೇಶಿಸುವಂತಿಲ್ಲ. ಮಧ್ಯಂತರ ಅವಧಿಯಲ್ಲಿ ಯಾವುದೋ ಕಾರಣಕ್ಕಾಗಿ ಆ ಕೊಠಡಿಯನ್ನು ತೆರೆಯಬೇಕಾದರೆ, ರಿಟರ್ನಿಂಗ್ ಅಧಿಕಾರಿಯವರು ಸಂಬಂಧಪಟ್ಟ ಅಭ್ಯರ್ಥಿಗಳಿಗೆ ತಿಳಿಸಿ ಹಾಗೆ ಮಾಡಬೇಕು. ಅಭ್ಯರ್ಥಿಗಳ ಉಪಸ್ಥಿತಿಯಲ್ಲಿ ತೆರೆದು, ಕೊಠಡಿಯನ್ನು ತೆರೆದ ಉದ್ದೇಶ ಈಡೇರಿದ ನಂತರ ಅಭ್ಯರ್ಥಿಗಳಿಗೆ ಅಥವಾ ಅವರ ಪ್ರತಿನಿಧಿಗಳಿಗೆ ಪುನಃ ಬಾಗಿಲು ಕಿಟಕಿಗಳ ಮೇಲೆ ಮೊಹರನ್ನು ಮಾಡಲು ಅವಕಾಶ ಕಲ್ಪಿಸಬೇಕು. ಈ ಸಂಬಂಧವಾಗಿ ಲಾಗ್‌ಬುಕ್ ಒಂದನ್ನು ನಿರ್ವಹಿಸಿ, ಅದರಲ್ಲಿ ಕೊಠಡಿಯೊಳಗೆ ಪ್ರವೇಶ ಪಡೆದ ವ್ಯಕ್ತಿಗಳು, ಭೇಟಿಯ ಉದ್ದೇಶ, ಆಗಮನದ ಸಮಯ, ನಿರ್ಗಮನದ ಸಮಯ ಇತ್ಯಾದಿ ವಿವರಗಳ ಸಂಪೂರ್ಣ ದಾಖಲೆಯನ್ನು ಇಡಬೇಕು.

**ದೂರುಗಳು ಬಂದಿರುವ ನಿರ್ದಿಷ್ಟ ಮತದಾನ ಕೇಂದ್ರಗಳಿಂದ ಇವಿಎಂಗಳು ಹಾಗೂ ಇತರೆ ದಾಖಲೆಗಳನ್ನು ಸ್ವೀಕರಿಸುವುದಕ್ಕಾಗಿ ವಿಶೇಷ ಕೌಂಟರ್‌ಗಳನ್ನು ಸ್ಥಾಪಿಸುವುದು**

15.63.2. ಮತದಾನದ ವೇಳೆಯಲ್ಲಿ ದೊಂಬಿ, ಗಲಭೆ, ಚುನಾವಣಾ ಸಿಬ್ಬಂದಿಯೊಂದಿಗೆ ಘರ್ಷಣೆ, ಪೋಲಿಂಗ್ ಏಜೆಂಟರ ನಡುವೆ ಕಲಹ, ಇವಿಎಂ, ವಿವಿಪ್ಯಾಟ್‌ಗಳು ಮತ್ತು ಸ್ಥಗಿತಗೊಂಡು ಬೇರೆ ಮತಯಂತ್ರಗಳ ಸರಬರಾಜು ಇತ್ಯಾದಿ ಬಗ್ಗೆ ರಾಜಕೀಯ ಪಕ್ಷಗಳಿಂದ/ಅಭ್ಯರ್ಥಿಗಳಿಂದ ದೂರುಗಳು ಬಂದಿರುವ ನಿರ್ದಿಷ್ಟ ಮತದಾನ ಕೇಂದ್ರಗಳಿಂದ ಇವಿಎಂ, ವಿವಿಪ್ಯಾಟ್ ಮತ್ತು ಇತರೆ ದಾಖಲೆಗಳನ್ನು ಸ್ವೀಕರಿಸಲು ವಿಶೇಷ ಕೌಂಟರ್‌ಗಳನ್ನು ಸ್ಥಾಪಿಸಬೇಕು. ರಿಟರ್ನಿಂಗ್ ಅಧಿಕಾರಿಯವರು ಅಂತಹ ಮತಗಟ್ಟೆಗಳನ್ನು ಗುರುತಿಸಲು ಒಂದು ಪ್ರತ್ಯೇಕ ರಿಜಿಸ್ಟರ್ ಅನ್ನು ನಿರ್ವಹಿಸಬೇಕು ಹಾಗೂ ಸ್ವೀಕಾರ ಕೇಂದ್ರಗಳಿಗೆ ಅಂತಹ ಮತದಾನದ ಸಿಬ್ಬಂದಿ ಬರುವುದಕ್ಕಿಂತ ಮುಂಚಿತವಾಗಿ ಸೂಚನಾ ಫಲಕದಲ್ಲಿ ವಿಶೇಷ ಕೌಂಟರ್‌ಗಳಿಂದ ನಿರ್ವಹಿಸಲ್ಪಡುವ ಮತಗಟ್ಟೆಗಳ ವಿವರಗಳನ್ನು ನಮೂದಿಸಬೇಕು. ಹೀಗೆ ಮಾಡುವುದರಿಂದ ಮರುಮತದಾನ ಅಗತ್ಯವೆಂದು ನಿರ್ಣಯಿಸಿದಾಗ ಅದಕ್ಕೆ ಅನುಕೂಲವಾಗುವುದು.

## 15.64. ಮುಂದೂಡಿದ ಮತದಾನ

15.64.1. ಮತದಾನ ಕೇಂದ್ರದಲ್ಲಿ ಗಲಾಟೆ/ದೊಂ©ಯಾದಲ್ಲಿ ಅಥವಾ ತೀವ್ರ ಸ್ವರೂಪದ ಬಿರುಗಾಳಿ, ಭಾರಿ ಹಿಮಪಾತ ಅಥವಾ ಇತರೆ ಸಕಾರಣಗಳಿಂದಾಗಿ ಪ್ರಿಸೈಡಿಂಗ್ ಅಧಿಕಾರಿಯು 57ನೇ ಪ್ರಕರಣದ ಉಪ–ಪ್ರಕರಣ (1)ರ ಪ್ರಕಾರ ಮತದಾನವನ್ನು ಮುಂದೂಡಬಹುದು. ಹಿಮಪಾತದಂತಹ ಮಳೆ ಅಥವಾ ಭಾರಿ ಬಿರುಗಾಳಿಯು ಮತದಾನವನ್ನು ಮುಂದೂಡಲು ಕಾರಣಗಳಾಗಬಹುದು. ಆದಾಗ್ಯೂ ಆಯೋಗವು ಮತದಾನ ಪ್ರಾರಂಭಕ್ಕೆ ಗೊತ್ತುಪಡಿಸಿದ ಸಮಯದಿಂದ ಎರಡು ಗಂಟೆಯೊಳಗೆ ಮತದಾನ ಪ್ರಾರಂಭಿಸಲು ವಿಫಲವಾದ ಎಲ್ಲಾ ಮತಗಟ್ಟೆಗಳಲ್ಲಿ ಮತದಾನವನ್ನು ಮುಂದೂಡಲು ಆದೇಶಿಸಬಹುದು. ಚುನಾವಣಾ ಆಯೋಗದ ಪೂರ್ವ ಸಮ್ಮತಿಯೊಂದಿಗೆ ಹಾಗೂ ರಿಟರ್ನಿಂಗ್ ಅಧಿಕಾರಿ ನಿರ್ಧರಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಮುಂದೂಡಿದ ಮತದಾನವು ನಡೆಯಬೇಕು. ಮುಂದೂಡಿದ ಮತದಾನವು ಮುಕ್ತಾಯವಾಗದ ಹೊರತು, ಆ ಕ್ಷೇತ್ರದಲ್ಲಿ ಮತ ಎಣಿಕೆಯನ್ನು ಪ್ರಾರಂಭಿಸುವಂತಿಲ್ಲ.

15.64.2. ಮುಂದೂಡಿದ ಮತದಾನವು ಮುಂಚೆ ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಪುನಃ ಪ್ರಾರಂಭಿಸಬೇಕು. ಅಂದರೆ ಹಾಗೆ ಮುಂದೂಡಲ್ಪಟ್ಟಾಗ ಯಾವ ಮತದಾರರು ತಮ್ಮ ಮತ ಚಲಾಯಿಸಿರಲಿಲ್ಲವೋ ಅಂಥ ಮತದಾರರಿಗೆ ಮಾತ್ರ ಮುಂದೂಡಿದ ಮತದಾನದಲ್ಲಿ ತಮ್ಮ ಮತ ಚಲಾಯಿಸಲು ಅನುಮತಿಸಬೇಕು. ಯಾವ ಮತಗಟ್ಟೆಯಲ್ಲಿ ಹಾಗೆ ಮುಂದೂಡಿದ ಮತದಾನ ನಡೆಯುವುದೋ ಅಂಥ ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಗೆ ಈ ಮೊದಲು ಅದೇ ಮತಗಟೆಯಲ್ಲಿ ಬಳಸಲಾಗಿದ್ದ (i) ಮತದಾರರ ಅಧಿಕೃತ ಗುರುತು ಪಟ್ಟಿ ಮತ್ತು (ii) ಮತದಾರರ ರಿಜಿಸ್ಟರನ್ನು ಒಳಗೊಂಡ ಮೊಹರು ಮಾಡಿದ ಲಕೋಟೆಗಳನ್ನು ಮತ್ತು ಒಂದು ಹೊಸ ಮತ ಯಂತ್ರವನ್ನು ನೀಡಬೇಕು.

15.64.3. ಮುಂದೂಡಿದ ಮತದಾನವನ್ನು ಪುನಃ ಆರಂಭಿಸುವ ಮುಂಚೆ, ಮತದಾರರ ಅಧಿಕೃತ ಪಟ್ಟಿಯ ಪ್ರತಿಯನ್ನು ಮತ್ತು ಮತದಾರರ ರಿಜಿಸ್ಟರನ್ನು ಒಳಗೊಂಡ ಮೊಹರು ಮಾಡಿದ ಲಕೋಟೆಯನ್ನು ಪ್ರಿಸೈಡಿಂಗ್ ಅಧಿಕಾರಿಯು ಮತಗಟ್ಟೆಯಲ್ಲಿ ಹಾಜರಿರುವಂಥ ಸ್ಪರ್ಧಿಸಿರುವ ಅಭ್ಯರ್ಥಿಗಳ ಅಥವಾ ಅವರ ಏಜೆಂಟರ ಸಮ್ಮುಖದಲ್ಲಿ ತೆರೆಯತಕ್ಕದ್ದು ಮತ್ತು ಮತದಾರರ ಅಧಿಕೃತ ಪಟ್ಟಿಯ ಅದೇ ಪ್ರತಿಯನ್ನು ಮುಂದೂಡಿದ ಮತದಾನವನ್ನು ಪೂರ್ಣಗೊಳಿಸುವುದಕ್ಕೆ ಬಳಸಬೇಕು.

15.64.4. ನಿಯಮ 28 ಮತ್ತು 49–ಎ ರಿಂದ 49–ವಿ ಯ ಉಪಬಂಧಗಳು ಮತದಾನ ಮುಂದೂಡುವ ಮುಂಚೆ ಅದಕ್ಕೆ ಯಾವ ರೀತಿ ಅನ್ವಯವಾಗುತ್ತಿದ್ದವೋ ಅದೇ ರೀತಿಯಲ್ಲಿ ಮುಂದೂಡಲ್ಪಟ್ಟ ಮತದಾನವನ್ನು ನಡೆಸುವುದಕ್ಕೂ ಅನ್ವಯವಾಗುತ್ತವೆ.

**15.65. ಹೊಸ ಮತದಾನ**

15.65.1. ಮತಗಟ್ಟೆಯಲ್ಲಿ ಬಳಸಲಾಗುವ ಯಾವುದೇ ಮತಯಂತ್ರವನ್ನು,–

i. ಯಾವುದೇ ಅನಧಿಕೃತ ವ್ಯಕ್ತಿಯು, ಕಾನೂನುಬಾಹಿರವಾಗಿ ತೆಗೆದುಕೊಂಡು ಹೋದರೆ; ಅಥವಾ

ii. ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ಕಳೆದುಹೋದರೆ ಅಥವಾ ಹಾನಿಗೊಳಿಸಿದರೆ ಅಥವಾ ಅದನ್ನು ವಿರೂಪಗೊಳಿಸಿದರೆ ಮತ್ತು ಈ ಕಾರಣದಿಂದಾಗಿ ಆ ಮತಗಟ್ಟೆಯ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಪ್ರಿಸೈಡಿಂಗ್ ಅಧಿಕಾರಿಗೆ ಮನವರಿಕೆಯಾದಾಗ; ಅಥವಾ

iii. ಮತದಾನವನ್ನು ದೋಷಮುಕ್ತಗೊಳಿಸಬಹುದಾದಂಥ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪು ಅಕ್ರಮತೆ ನಡೆದಿರುವುದು ಕಂಡುಬಂದರೆ,

– ರಿಟರ್ನಿಂಗ್ ಅಧಿಕಾರಿ ಅವರು ಈ ಎಲ್ಲಾ ಸಂಗತಿಗಳನ್ನು ಚುನಾವಣಾ ಆಯೋಗಕ್ಕೆ ಮತ್ತು ಮುಖ್ಯ ಚುನಾವಣಾ ಅಧಿಕಾರಿಗಳಿಗೆ ವರದಿ ಮಾಡಬೇಕು.

15.65.2. ಈ ಎಲ್ಲಾ ಪರಿಸ್ಥಿಗಳನ್ನು ಅವಲೋಕಿಸಿದ ನಂತರ ಆಯೋಗವು ಅಗತ್ಯವೆಂದು ಕಂಡುಬಂದರೆ,–

i. ಆ ಮತಗಟ್ಟೆಯಲ್ಲಿ ನಡೆದ ಮತದಾನವನ್ನು ಅಸಿಂಧುವೆಂದು ಘೋಷಿಸಬಹುದು ಹಾಗೂ

ii. ಹೊಸ ಮತದಾನಕ್ಕೆ ದಿನಾಂಕ ಮತ್ತು ಅವಧಿಯನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಬಹುದು.

15.65.3. ಆಯೋಗದಿಂದ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ರಿಟರ್ನಿಂಗ್ ಅಧಿಕಾರಿಯು ಹೊಸ ಮತದಾನ ನಡೆಸುವ ಕುರಿತ ದಿನಾಂಕ, ಸಮಯ ಮತ್ತು ಸ್ಥಳವನ್ನು ಅಭ್ಯರ್ಥಿಗಳಿಗೆ ಅಥವಾ ಅವರ ಚುನಾವಣಾ ಏಜೆಂಟರಿಗೆ ತಿಳಿಸಬೇಕು. ಹಾಗೆ ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಸ್ಥಳವನ್ನು ಲಿಖಿತದಲ್ಲಿ ಸೂಚನಾ ಫಲಕದಲ್ಲಿ ಅಂಟಿಸಬೇಕು ಹಾಗೂ ಮತದಾನ ಪ್ರದೇಶದಲ್ಲಿ ಈ ಬಗ್ಗೆ ಮಾಹಿತಿಯನ್ನು ಪ್ರಕಟಪಡಿಸಬಹುದು.

15.65.4. ಹೊಸ ಮತದಾನವನ್ನು ಈ ಮುಂಚಿನ ಮತದಾನ ನಡೆಸಲು ನಿರ್ದಿಷ್ಟಪಡಿಸಿದ ರೀತಿಯಲ್ಲಿಯೇ ನಡೆಸಬೇಕು.

15.65.5. ಮತಕ್ಷೇತ್ರದ ಉಳಿದ ಭಾಗದಲ್ಲಿನ ಮತ ಎಣಿಕೆಗೆ ಯಾವುದೇ ಕಾನೂನು ತೊಡಕು ಇರುವುದಿಲ್ಲ. ಆದಾಗ್ಯೂ, ರಿಟರ್ನಿಂಗ್ ಅಧಿಕಾರಿಯವರು ಹೊಸ ಮತದಾನದ ಎಣಿಕೆ ಮುಗಿದು, ಅದನ್ನು ಫಲಿತಾಂಶದ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವವರೆಗೆ ಮತ ಎಣಿಕೆಯ ಫಲಿತಾಂಶವನ್ನು ಘೋಷಿಸುವಂತಿಲ್ಲ.

**15.66. ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡಾಗ ಹೊಸ ಮತದಾನ ನಡೆಸುವುದು**

15.66.1. ಪ್ರಕರಣ 58ಎ ಅಡಿಯಲ್ಲಿ, ಮತಗಟ್ಟೆಯನ್ನು ಬಲವಂತವಾಗಿ (ಪ್ರಕರಣ 135–ಎರಲ್ಲಿ ವಿವರಿಸಿದಂತೆ) ವಶಪಡಿಸಿಕೊಂಡರೆ, ಅಂತಹ ಸಂದರ್ಭಗಳಲ್ಲಿ ಆ ಮತಗಟ್ಟೆಯ ಫಲಿತಾಂಶವನ್ನು ನಿರ್ಧರಿಸಲು ಆಗುವುದಿಲ್ಲ. ಆಗ ರಿಟರ್ನಿಂಗ್ ಅಧಿಕಾರಿ ಅವರು ಆ ಕುರಿತ ಯಥಾವತ್ತು ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡಬೇಕು. ರಿಟರ್ನಿಂಗ್ ಅಧಿಕಾರಿಅವರು ನೀಡಿದ ವರದಿಯ ಆಧಾರದ ಮೇಲೆ ಹಾಗೂ ಪರಿಸ್ಥಿತಿಗಳನ್ನು ಅವಲೋಕಿಸಿದ ನಂತರ ಚುನಾವಣಾ ಆಯೋಗವು,–

(i) ಆ ಮತಗಟ್ಟೆಯಲ್ಲಿ ನಡೆದ ಮತದಾನವನ್ನು ಅಸಿಂಧುವೆಂದು ತೀರ್ಮಾನಿಸಿ;

(ii) ಹಲವಾರು ಮತಗಟ್ಟೆಗಳನ್ನು ಬಲವಂತವಾಗಿ ವಶಪಡಿಸಿಕೊಂಡಾಗ ಮತದಾನ ಫಲಿತಾಂಶ ಘೋಷಣೆಗೆ ತೊಂದರೆಯುಂಟಾಗುತ್ತದೆಯೆಂಬ ನಿರ್ಧಾರಕ್ಕೆ ಬಂದು ಹೊಸ ಮತದಾನಕ್ಕೆ ದಿನಾಂಕವನ್ನು ನಿಗದಿಪಡಿಸಬೇಕು.

15.66.2. ಆಯೋಗವು ಹೊಸ ಮತದಾನಕ್ಕೆ ಆದೇಶಿಸಿದರೆ, ರಿಟರ್ನಿಂಗ್ ಅಧಿಕಾರಿ ಅವರು ಹಿಂದಿನ ಪ್ಯಾರಾಗಳಲ್ಲಿ ನೀಡಿದ ಸೂಚನೆಗಳಿಗೆ ಅನುಸಾರವಾಗಿ ಹೊಸ ಮತದಾನ ನಡೆಸಬೇಕು.

15.66.3. ಮತಗಟ್ಟೆಗಳನ್ನು ಬಲವಂತವಾಗಿ ವಶಪಡಿಸಿಕೊಂಡಿದ್ದರಿಂದ ಆಯೋಗವು ಮತದಾನವನ್ನು ರದ್ದು ಮಾಡಿದರೆ, ಆ ಮತದಾನಕ್ಕೆ ಸಂಬಂಧಪಟ್ಟ ಎಲ್ಲಾ ವಿಧಿವಿಧಾನಗಳು ಹೊಸದಾಗಿ ಪ್ರಾರಂಭವಾಗುತ್ತವೆ ಮತ್ತು ಸದ್ಯದಲ್ಲಿಯೇ ಚುನಾವಣೆಗೆ ಯುಕ್ತ ರೀತಿಯಲ್ಲಿ ಹೊಸ ಅಧಿಸೂಚನೆಯನ್ನು ಹೊರಡಿಸಬೇಕು.

### 15.67. ಮತಗಟ್ಟೆಯಲ್ಲಿ ಮತದಾರರ ರಿಜಿಸ್ಟರ್‌ಅನ್ನು (ನಮೂನೆ 17–ಎ) ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿದಾಗ, ವ್ಯತ್ಯಾಸಗಳು ಕಂಡುಬಂದರೆ ಹೊಸ ಮತದಾನ ನಡೆಸುವುದು

15.67.1. ಖೋಟಾ ಮತದಾನದ (ಬೋಗಸ್ ವೋಟಿಂಗ್) ಮೇಲೆ ನಿಯಂತ್ರಣ ಇಡುವ ನಿಟ್ಟಿನಲ್ಲಿ, ಚುನಾವಣಾ ಆಯೋಗವು, ಶೇಕಡಾವಾರು ಮತದಾನದ ಮೇಲೆ ನಿಗಾ ಇಟ್ಟಿರುತ್ತದೆ. ಮತದಾನವು ಮುಗಿದ ನಂತರ ಎಲ್ಲಾ ಮತಗಟ್ಟೆಗಳ ಶೇಕಡಾವಾರು ಮತದಾನಕ್ಕೆ ಸಂಬಂಧಿಸಿದಂತೆ, ಮುಖ್ಯ ಚುನಾವಣಾ ಅಧಿಕಾರಿ/ ರಿಟರ್ನಿಂಗ್ ವೀಕ್ಷಕರ ಮೂಲಕ ವರದಿಯನ್ನು ಸಂಗ್ರಹಿಸಲಾಗುತ್ತದೆ. ಕೆಲವು ಮತಗಟ್ಟೆಗಳಲ್ಲಿ ಮತದಾನವು ನಿರ್ದಿಷ್ಟ ಶೇಕಡಾವಾರನ್ನು ದಾಟಿದರೆ, ಕೆಲವು ಮತಗಟ್ಟೆಗಳಲ್ಲಿ ನಡೆದ ಮತದಾನವು ವಿವರಿಸಲಾಗದಷ್ಟು ಹೆಚ್ಚಾಗಿದೆ ಎಂದು ಕಂಡುಬಂದರೆ, ಆಯೋಗವು, ವಿವಿಧ ದಾಖಲೆಗಳಾದ ರಿಟರ್ನಿಂಗ್ ಅಧಿಕಾರಿದಿನಚರಿ, ವೀಕ್ಷಣಾ ಕಾಗದಗಳು, ಗಸ್ತುಗಾರರ ದಿನಚರಿ, ಸೆಕ್ಟರ್/ ವಿಭಾಗೀಯ ಮ್ಯಾಜಿಸ್ಟ್ರೇಟ್ ಅವರ ದಿನಚರಿಗಳನ್ನು ಹಾಗೂ ನಮೂನೆ 17ಎ ಮತ್ತು 17ಸಿ ಮಂತಾದವನ್ನು ಪರಿಶೀಲಿಸಲು ಚುನಾವಣಾ ಪ್ರಾಧಿಕಾರಿಗಳಿಗೆ ಆದೇಶಿಸಬಹುದು.

15.67.2. ಇಂತಹ ಪ್ರಕರಣಗಳಲ್ಲಿ ರಿಟರ್ನಿಂಗ್ ಅಧಿಕಾರಿಹಾಗೂ ಸಂಬಂಧಪಟ್ಟ ವೀಕ್ಷಕರು ಎಲ್ಲಾ ಮತದಾನ ಹಂತಗಳು ಮುಗಿದ ನಂತರ, ಆಯೋಗವು ನಿಗದಿಪಡಿಸಿದ್ದಕ್ಕಿಂತ ಶೇಕಡಾವಾರು ಮತದಾನವು ಎಲ್ಲಿ ಹೆಚ್ಚಾಗಿದೆಯೋ ಅಲ್ಲಿ ನಮೂನೆ 17–ಎ ಹಾಗೂ ಇತರೇ ದಾಖಲೆಗಳನ್ನು ಪರಿಶೀಲಿಸಬೇಕು. ರಿಟರ್ನಿಂಗ್ ಅಧಿಕಾರಿಹಾಗೂ ವೀಕ್ಷಕರುಗಳು, ನಮೂನೆ 17ರಲ್ಲಿನ ಸಹಿ/ ಹೆಬ್ಬೆಟ್ಟಿನ ಗುರುತು, ಮತಗಳು ಚಲಾವಣೆಗೊಂಡ ವಿಧಾನ (ಕ್ರಮಸಂಖ್ಯೆಗೆ ಅನುಗುಣವಾಗಿ)ದಲ್ಲಿನ ಸಾಮ್ಯತೆಯನ್ನು

ಪರಿಶೀಲಿಸಬೇಕು ಹಾಗೂ ನಮೂನೆ 17–ಎರ ನಮೂದುಗಳು 17–ಸಿ ನಮೂನೆ, ಮತದಾರರ ಪಟ್ಟಿ ಹಾಗೂ 17–ಎ ರಲ್ಲಿನ ಷರಾಗಳ ಬಗ್ಗೆ ಪರಿಶೀಲನೆ ಮಾಡಬೇಕು.

15.67.3. ನಮೂನೆ 17–ಎ ಹಾಗೂ 17–ಸಿ ಮುಂತಾದವುಗಳ ಸ್ವೀಕೃತಿ, ಪರಿಶೀಲನೆ, ಸಂಗ್ರಹಣಾ ಕೇಂದ್ರಗಳ ಕಾರ್ಯ ವಿಧಾನವನ್ನು ಈ ಕೆಳಕಂಡಂತೆ ತಿಳಿಸಲಾಗಿದೆ:–

**ಸ್ವೀಕೃತಿ ಮತ್ತು ಸಂಗ್ರಹ**

1. ಈಗಿರುವ ಸೂಚನೆಗಳ ಪ್ರಕಾರ, ಮತದಾನದ ಮುಕ್ತಾಯದ ಬಳಿಕ ಪ್ರತಿಯೊಬ್ಬ ಪೋಲಿಂಗ್ ಏಜೆಂಟ್‌ಗೂ ಅವರು ಕೇಳದಿದ್ದರೂ ಕೂಡ ನಮೂನೆ 17–ಸಿ (ದಾಖಲಾದ ಮತಗಳ ಲೆಕ್ಕ) ಯ ದೃಢೀಕೃತ ಪ್ರತಿಯನ್ನು ಪ್ರಿಸೈಡಿಂಗ್ ಅಧಿಕಾರಿಯವರು ನೀಡಬೇಕು ಹಾಗೂ ನಮೂನೆ 17ಸಿ ಯ ಎರಡು ಪ್ರತಿಗಳನ್ನು ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಬೇಕು. ಪ್ರತಿಯೊಂದು ಮತಗಟ್ಟೆಯಿಂದ ನಮೂನೆ 17ಸಿಯ ಎರಡು ಪ್ರತಿಗಳನ್ನು ಸ್ವೀಕರಿಸಿದ ನಂತರ, ಒಂದು ಪ್ರತಿಯನ್ನು ಇವಿಎಂ ಮತ್ತು ವಿವಿಪ್ಯಾಟ್ ಜೊತೆ ಹಾಗೂ ಮತ್ತೊಂದನ್ನು ಇತರೇ ಚುನಾವಣಾ ಕಾಗದ ಪತ್ರಗಳ ಜೊತೆ ಇಡಬೇಕು.
2. ಮತದಾನ ಮುಕ್ತಾಯದ ನಂತರ ಆಯೋಗವು ನಿಗದಿಪಡಿಸಿದ ಶೇಕಡಾವಾರು ಮತದಾನಕ್ಕಿಂತ ಹೆಚ್ಚಿನ ಶೇಕಡಾವಾರು ಮತದಾನ ಆಗಿರುವ ಮತಗಟ್ಟೆಗಳ ಸಾಮಗ್ರಿಗಳನ್ನು ಸ್ವೀಕರಿಸಲು ಸ್ವೀಕೃತಿ ಕೇಂದ್ರದಲ್ಲಿ ವಿಶೇಷ ಕೌಂಟರ್ ಅನ್ನು ತೆರೆಯಬೇಕು. ನಿಗದಿಪಡಿಸಿದ ಶೇಕಡಾವಾರು ಮತದಾನಕ್ಕಿಂತ ಹೆಚ್ಚು ಚಲಾವಣೆಗೊಂಡ ಮತಗಟ್ಟೆಗಳ ಪ್ರಿಸೈಡಿಂಗ್ ಅಧಿಕಾರಿಯವರು ತಮ್ಮ ಇವಿಎಂ ಮತ್ತು ವಿವಿಪ್ಯಾಟ್ ಹಾಗೂ ಇತರೆ ಸಾಮಗ್ರಿಗಳನ್ನು ವಾಪಸ್ಸು ನೀಡಲು ಇಂತಹ ಕೌಂಟರ್‌ಗಳಿಗೆ ಹೋಗಲು ಸೂಚಿಸಿರಬೇಕು.
3. ಈಗಿರುವ ಸಂಪ್ರದಾಯದಂತೆ, ಎಷ್ಟೇ ಶೇಕಡಾವಾರು ಮತದಾನ ಆದರೂ ಸಹ, ಎಲ್ಲಾ ಮತಗಟ್ಟೆಗಳ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಹಾಗೂ ಅವುಗಳ ಜೊತೆಗೆ ನಮೂನೆ 17–ಸಿ (ಮತಗಳ ಲೆಕ್ಕ) ವನ್ನು ಭದ್ರತಾ ಕೊಠಡಿಯಲ್ಲಿ ಇಡಬೇಕು.
4. ಈಗಿರುವ ಸಂಪ್ರದಾಯದಂತೆ, ಎಲ್ಲಾ ಮತಗಟ್ಟೆಗಳಿಂದ ಸ್ವೀಕರಿಸಿದ ಇತರೆ ಚುನಾವಣೆ ಕಾಗದ ಪತ್ರಗಳನ್ನು ಒಂದು ಪ್ರತ್ಯೇಕ ಭದ್ರತಾ ಕೋಣೆಯಲ್ಲಿ ಇಡಬೇಕು. (ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಇಟ್ಟಿರುವ ಭದ್ರತಾ ಕೋಣೆಯನ್ನು ಹೊರತುಪಡಿಸಿ). ನಿಗದಿಪಡಿಸಿದ ಶೇಕಡಾವಾರು ಮತದಾನಕ್ಕಿಂತ ಹೆಚ್ಚು ಶೇಕಡಾವಾರು ಮತಗಳು ಚಲಾವಣೆಗೊಂಡಿರುತ್ತವೆಯೋ, ಅಂತಹ ಮತಗಟ್ಟೆಗಳ ದಾಖಲೆಪತ್ರಗಳು ಹಾಗೂ

ನಮೂನೆ 17–ಎನ್ನು ಹೊರಗೆ ತೆಗೆದುಕೊಳ್ಳಲು ಅನುಕೂಲವಾಗಲೆಂದು, ಅವುಗಳನ್ನು ಬೇರೆ ಭದ್ರತಾ ಕೋಣೆಯಲ್ಲಿ ಇಡುವುದು ಸೂಕ್ತ. ಬೇರೆ ಸೂಕ್ತ ಕೊಠಡಿಯ ಲಭ್ಯತೆಯಿಲ್ಲದಿದ್ದರೆ, ಈ ದಾಖಲೆಪತ್ರಗಳನ್ನು ಇತರೆ ಮತಗಟ್ಟೆಗಳ ಚುನಾವಣೆ ಪತ್ರಗಳನ್ನು ಇಟ್ಟಿರುವ ಕೊಠಡಿಗಳಲ್ಲಿಯೇ ಇರಿಸಬಹುದು. ಇಂಥ ಸಂದರ್ಭಗಳಲ್ಲಿ, ಆಯೋಗವು ನಿಗದಿಪಡಿಸಿದ್ದ ಶೇಕಡಾವಾರು ಮತದಾನಕ್ಕಿಂತ ಹೆಚ್ಚಿನ ಶೇಕಡಾವಾರು ಮತದಾನವಾದ ಮತಟ್ಟೆಗಳ ಚುನಾವಣಾ ಪತ್ರಗಳನ್ನು, ಪರಿಶೀಲನೆಯ ವೇಳೆಯಲ್ಲಿ ಅವುಗಳನ್ನು ಹೊರತೆಗೆಯಲು ಸುಲಭವಾಗುವ ದೃಷ್ಟಿಯಿಂದ ಆ ಕೊಠಡಿಯಲ್ಲಿ ಗುರುತು ಮಾಡಲ್ಪಟ್ಟ ಸ್ಥಳದಲ್ಲಿ ಇರಿಸಬೇಕು.

**ಪರಿಶೀಲನೆ**

5. ಆಯೋಗವು ನಿಗದಿಪಡಿಸಿದ್ದ ಶೇಕಡಾವಾರು ಮತದಾನಕ್ಕಿಂತ ಹೆಚ್ಚಿನ ಶೇಕಡಾವಾರು ಮತದಾನವಾದ ಮತಗಟ್ಟೆಗಳಿಗೆ ಸಂಬಂಧಪಟ್ಟ ನಮೂನೆ 17A ಹಾಗೂ ದಾಖಲೆಪತ್ರಗಳು ಹಾಗೂ ಇತರೆ ಸಾಮಗ್ರಿಗಳ ಪರಿಶೀ®ನೆಯನ್ನು ಮತದಾನ ಮುಕ್ತಾಯದ ದಿನದ ಮರುದಿನ ಬೆಳಿಗ್ಗೆ 9.00 ಗಂಟೆಗೆ ಕೈಗೆತ್ತಿಕೊಳ್ಳಬೇಕು. ಆದಾಗ್ಯೂ, ಆ ವೇಳೆಗೆ, ಗಣನೀಯ ಪ್ರಮಾಣದ ಮತದಾನದ ಪಕ್ಷಕಾರರು, ಸರಿ ಸುಮಾರು 10%ರಷ್ಟು ಬಂದಿಲ್ಲದಿದ್ದರೆ, ಪರಿಶೀಲನಾ ಕಾರ್ಯವನ್ನು ಮತದಾನದ ಪಕ್ಷಕಾರರು ಬರುವವರೆಗೂ ಮುಂದೂಡಬಹುದು. ರಿಟರ್ನಿಂಗ್ ಅಧಿಕಾರಿ ಮತ್ತು ವೀಕ್ಷಕರು ಪರಿಶೀಲನಾ ಕಾರ್ಯವನ್ನು ಮೊದಲೇ ನಿಗದಿಪಡಿಸಿದ ಗೊತ್ತಾದ ಸ್ಥಳದಲ್ಲಿ ಭದ್ರತಾ ಕೋಣೆಯ ಹತ್ತಿರವೇ ನಡೆಸಬೇಕು. ಆ ಸ್ಥಳದಲ್ಲಿ ಸೂಕ್ತವಾದ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಬೇಕು. ಸ್ಪರ್ಧಿಸುತ್ತಿರುವ **ಎಲ್ಲಾ ಅಭ್ಯರ್ಥಿಗಳಿಗೆ ಲಿಖಿತದಲ್ಲಿ, 17A, 17C ನಮೂನೆಗಳು ಮತ್ತು ಇತರೆ ದಾಖಲೆ ಪತ್ರಗಳು ಹಾಗೂ ಸಾಮಗ್ರಿಗಳ ಪರಿಶೀಲನೆಯ ಬಗ್ಗೆ ಅಂಥ ಪರಿಶೀಲನೆಯ ಸ್ಥಳ, ದಿನಾಂಕ ಮತ್ತು ಪರಿಶೀಲನೆ ಪ್ರಾರಂಭವಾಗುವ ಸಮಯವನ್ನು ಸೂಚಿಸಿ ಮುಂಗಡ ನೋಟೀಸನ್ನು (ಸಮರ್ಪಕ ತಲುಪೊಪ್ಪಿಗೆ ಪತ್ರದೊಂದಿಗೆ) ನೀಡಬೇಕು. ಅಂಥ ನೋಟೀಸಿನಲ್ಲಿ ಸ್ವತಃ** ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟ್ ಅಥವಾ ಅಭ್ಯರ್ಥಿಯಿಂದ ಯುಕ್ತವಾಗಿ ಅಧಿಕಾರ ಪಡೆದ ಒಬ್ಬ ಪ್ರತಿನಿಧಿಯು ಮತದಾನ ಮುಕ್ತಾಯದ ನಂತರ ಆಯೋಗವು ನಿಗದಿಪಡಿಸಿದ್ದ ಶೇಕಡಾವಾರು ಮತದಾನಕ್ಕಿಂತ ಹೆಚ್ಚಿನ ಶೇಕಡಾವಾರು ಮತದಾನವಾದ ಮತಗಟ್ಟೆಗಳಿಗೆ

ಸಂಬಂಧಿಸಿದಂತೆ ರಿಟರ್ನಿಂಗ್ ಅಧಿಕಾರಿ ಹಾಗೂ ವೀಕ್ಷಕರು ನಮೂನೆ 17–A, ನಮೂನೆ 17–C ಹಾಗೂ ಇತರೆ ಚುನಾವಣಾ ಕಾಗದಪತ್ರಗಳ ಪರಿಶೀಲನೆ ನಡೆಸುತ್ತಿರುವ ನಡಾವಳಿಗಳನ್ನು ವೀಕ್ಷಿಸಲು ಮಾತ್ರ ಹಾಜರಿರಬಹುದು ಎಂದು ತಿಳಿಸಿರತಕ್ಕದ್ದು. ಅಭ್ಯರ್ಥಿಗಳು/ ಏಜೆಂಟರು/ ಪ್ರತಿನಿಧಿಗಳು ಸದರಿ ದಾಖಲೆಗಳ ಪರಿಶೀಲನೆಯ ವೇಳೆಯಲ್ಲಿ ಹಾಜರಿದ್ದು, ಯಾವೊಂದು ದಾಖಲೆಯಲ್ಲಿ ಹಸ್ತಕ್ಷೇಪ (ತಿದ್ದುಪಡಿ) ಮಾಡಿಲ್ಲವೆಂದು ಅವರಿಗೆ ತಿಳಿಸುವುದು ಅಗತ್ಯವಾಗಿರುತ್ತದೆ. ಆದಾಗ್ಯೂ, ಪರಿಶೀಲನೆಯ ವೇಳೆಯಲ್ಲಿ ವೀಕ್ಷಕರು ಹಾಗೂ ರಿಟರ್ನಿಂಗ್ ಅಧಿಕಾರಿ ನಡುವೆ ನಡೆದ ಸಂಭಾಷಣೆಯನ್ನು ಗೌಪ್ಯವಾಗಿ ಇಡಬೇಕು. ಇಂಥ ಸಂದರ್ಭದಲ್ಲಿ ಅಭ್ಯಥಿಗಳಾಗಲಿ, ಚುನಾವಣಾ ಏಜೆಂಟ್ ಆಗಲಿ ಅಥವಾ ಅವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ಪ್ರತಿನಿಧಿಯಾಗಲಿ ಮೊಬೈಲ್ ಫೋನನ್ನು ಬಳಸುವಂತಿಲ್ಲ.

6. ಪರಿಶೀಲನೆ ವೇಳೆಯಲ್ಲಿ ಅಭ್ಯರ್ಥಿಗಳು/ ಅವರ ಚುನಾವಣಾ ಏಜೆಂಟ್‌ಗಳು/ಅವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ಪ್ರತಿನಿಧಿಯು ಅಲ್ಲಿ ನಡೆಯುವ ನಡಾವಳಿಗಳು ಸ್ಪಷ್ಟವಾಗಿ ಕಾಣಬಹುದಾದ ಹಾಗೆ ದೂರದ ಸುರಕ್ಷಿತ ಸ್ಥಳದಲ್ಲಿ ನಿಂತು ನಡಾವಳಿಗಳನ್ನು ಗಮನಿಸಬೇಕು. ಆದರೆ ಅವರುಗಳು ಚುನಾವಣಾ ಪತ್ರಗಳಲ್ಲಿ/ಸಾಮಗ್ರಿಗಳಲ್ಲಿ ಹಾಗೂ ನಡೆವಳಿಗಳಲ್ಲಿ ಹಸ್ತಕ್ಷೇಪ ವಹಿಸುವಂತಿಲ್ಲ. ಇದನ್ನು ತಡೆಗಟ್ಟಲು ಸೂಕ್ತ ಬ್ಯಾರಿಕೇಡ್‌ಗಳನ್ನು ನಿರ್ಮಿಸಬೇಕು. ಯಾವುದೇ ಕಾರಣಕ್ಕೂ ಅಭ್ಯರ್ಥಿಗಳಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ ಆ ಬ್ಯಾರಿಕೇಡ್‌ನ್ನು ದಾಟಿ ಬರದಂತೆ ನೋಡಿಕೊಳ್ಳಬೇಕು.

7. ಚುನಾವಣೆ ದಾಖಲೆಗಳನ್ನು ಸಂರಕ್ಷಣಾ ಕೊಠಡಿಗಳಿಂದ ತೆರೆಯುವ ಹಾಗೂ ಮುಚ್ಚುವ ವೇಳೆಯನ್ನು ಸೂಕ್ತವಾದ ಲಾಗ್–ಪುಸ್ತಕವೊಂದನ್ನು ನಿರ್ವಹಿಸಿ, ಅದರಲ್ಲಿ ದಾಖಲಿಸಬೇಕು. ಆ ಕೊಠಡಿಯನ್ನು ವೀಕ್ಷಕರ ಉಪಸ್ಥಿತಿಯಲ್ಲಿ ಹಾಗೂ ಅಭ್ಯರ್ಥಿಗಳು/ ಮತದಾನ ಏಜೆಂಟ್/ಪ್ರತಿನಿಧಿಗಳ ಸಮ್ಮುಖದಲ್ಲಿ ಆ ಉದ್ದೇಶಕ್ಕಾಗಿ ನಿಗದಿಪಡಿಸಿದ ಸಮಯದಲ್ಲಿ ತೆರೆಯಬೇಕು. ಆದರೆ, ಯಾವುದೇ ಅಭ್ಯರ್ಥಿ/ಮತದಾನ ಏಜೆಂಟ್/ ಪ್ರತಿನಿಧಿಗೆ ಮುಂಚಿತವಾಗಿ ಲಿಖಿತ ನೋಟೀಸ್ ನೀಡಿದ್ದರೂ ಸಹ ಅವರು ನಡೆವಳಿಗೆ ಭಾಗವಹಿಸದೇ ಇದ್ದರೆ, ಆ ಕಾರಣಕ್ಕೆ ಮಾತ್ರವೇ ನಡೆವಳಿಯನ್ನು ಮುಂದೂಡುವುದಾಗಲೀ/ ತಡ ಮಾಡುವುದಾಗಲೀ ಮಾಡದೇ ನಿಗದಿಪಡಿಸಿದ ವೇಳೆಯಲ್ಲಿ ನಡೆವಳಿಯನ್ನು ನಡೆಸಬೇಕು. ನಡೆವಳಿಗಳು ನಡೆಯುತ್ತಿರುವ ವೇಳೆ ಅವರೇನಾದರೂ

ತಡವಾಗಿ ಬಂದಲ್ಲಿ, ತದನಂತರದ ನಡೆವಳಿಯನ್ನು ವೀಕ್ಷಿಸಲು ಅವರಿಗೆ ಅನುಮತಿಸಬಹುದು.

8. ನಮೂನೆ 17–ಸಿರ ಪ್ರತಿಗಳನ್ನು ಮತ್ತು ನಮೂನೆ 17–ಸಿ ಯಲ್ಲಿನ ಪ್ಯಾಕೇಟ್‌ಗಳನ್ನು ಹಾಗೂ ಗುರುತು ಮಾಡಲಾದ ಮತದಾರರ ಪಟ್ಟಿಯನ್ನು ಪರಿಶೀಲನೆಗಾಗಿ ಪಡೆದ ನಂತರ (ಆಯೋಗವು ನಿಗದಿಪಡಿಸಿದ್ದ ಶೇಕಡಾವಾರು ಮತದಾನಕ್ಕಿಂತ ಹೆಚ್ಚಿನ ಶೇಕಡಾವಾರು ಮತದಾನ ನಡೆದ ಮತಗಟ್ಟೆಗಳಿಗೆ ಅನ್ವಯಿಸಿದಂತೆ) ಆ ಬಗ್ಗೆ ಲಾಗ್–ಪುಸ್ತಕದಲ್ಲಿ ನಮೂದನ್ನು ಮಾಡಿ, ಭದ್ರತಾ ಕೊಠಡಿಗೆ ಮೊಹರು ಹಾಕಿ ಸೀಲು ಮಾಡಿ ಅಲ್ಲಿ ಉಪಸ್ಥಿತರಿರುವ ಅಭ್ಯರ್ಥಿಗಳ/ಅವರ ಪ್ರತಿನಿಧಿಗಳ ಸಹಿಯನ್ನು ಪಡೆಯಬೇಕು.

**ಪರಿಶೀಲನಾ – ನಂತರದ ಕಾರ್ಯವಿಧಾನ**

9. ಪರಿಶೀಲನೆಯ ನಂತರ, ಪ್ರತಿಯೊಂದು ಮತಗಟ್ಟೆಗೆ ಸಂಬಂಧಪಟ್ಟ ನಮೂನೆ 17A, 17C ಮತ್ತು ಗುರುತು ಮಾಡಲಾದ ಮತದಾರರ ಪಟ್ಟಿ, ಇತರೆ ದಸ್ತಾವೇಜು ಹಾಗೂ ಸಾಮಗ್ರಿಗಳನ್ನು ರಿಟರ್ನಿಂಗ್ ಅಧಿಕಾರಿಯ ಸೀಲ್‌ನೊಂದಿಗೆ ಮರು–ಮೊಹರು ಮಾಡಬೇಕು. ಅಲ್ಲಿ ಉಪಸ್ಥಿತರಿರುವ ಅಭ್ಯರ್ಥಿಗಳು/ಮತದಾನ ಏಜೆಂಟರು/ಪ್ರತಿನಿಧಿಗಳು ಇಚ್ಛಿಸಿದರೆ ಅವರಿಗೆ ಮೊಹರನ್ನು ಹಾಕಲು ಅಥವಾ ಸಹಿಯನ್ನು ಮಾಡಲು ಅನುಮತಿಸಬಹುದು. ಮೊಹರು ಮಾಡಲಾದ ಲಕೋಟೆಗಳನ್ನು ಯಾವ ಸುರಕ್ಷ ಕೊಠಡಿಯಿಂದ ಹೊರತೆಗೆಯಲಾಗಿತ್ತೋ ಪುನಃ ಅದೇ ಕೊಠಡಿಯಲ್ಲಿ ಇರಿಸಬೇಕು. ಈ ಕಾರ್ಯವನ್ನು ಅಲ್ಲಿ ಉಪಸ್ಥಿತರಿರುವ ಅಭ್ಯರ್ಥಿಗಳು/ಮತದಾನ ಏಜೆಂಟ್/ಪ್ರತಿನಿಧಿಗಳ ಸಮ್ಮುಖದಲ್ಲಿ ಮಾಡಬೇಕು. ಆದಾದ ನಂತರ, ರಿಟರ್ನಿಂಗ್ ಅಧಿಕಾರಿನ ಮೊಹರನ್ನು ಹಾಕಿ ಕೊಠಡಿಯನ್ನು ಭದ್ರಪಡಿಸಬೇಕು. ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳು ಇಚ್ಛಿಸಿದಲ್ಲಿ ಅವರು ತಮ್ಮ ಮೊಹರು/ಸಹಿಯನ್ನು ಹಾಕಬಹುದು.

10. ನಮೂನೆ 17ಎ, 17ಸಿ ಹಾಗೂ ಇತರೆ ದಸ್ತಾವೇಜುಗಳು ಹಾಗೂ ಸಾಮಗ್ರಿಗಳನ್ನು ಪರಿಶೀಲಿಸಿದ ನಂತರ, ರಿಟರ್ನಿಂಗ್ ಅಧಿಕಾರಿ ಮತ್ತು ವೀಕ್ಷಕರು ಮರು ಮತದಾನ ಮಾಡಲು ಮತಗಟ್ಟೆವಾರು ಕಾರಣಗಳನ್ನು ನೀಡಿ ಚುನಾವಣಾ ಆಯೋಗಕ್ಕೆ ಶಿಫಾರಸ್ಸು ಮಾಡಬಹುದು. ಈ ಬಗ್ಗೆ ಭಿನ್ನಾಭಿಪ್ರಾಯಗಳು ಉಂಟಾದರೆ ಅವುಗಳನ್ನು ತಮ್ಮ ವರದಿಗಳಲ್ಲಿ ತಿಳಿಸಬೇಕು.

11. ಪ್ರಿಸೈಡಿಂಗ್ ಅಧಿಕಾರಿಗಳ ದಿನಚರಿಗಳು, ಭೇಟಿ ಪತ್ರ, ಗಸ್ತುಗಾರರ/ ಸೆಕ್ಟರ್/ವಿಭಾಗೀಯ ಮ್ಯಾಜಿಸ್ಟ್ರೇಟ್ ಅವರು ನಿರ್ವಹಿಸಿದ ದಿನಚರಿಗಳು, ಜಿಲ್ಲಾ ನಿಯಂತ್ರಣಾ ಕೊಠಡಿಯಲ್ಲಿ

ನಿರ್ವಹಿಸಿರುವ ದೂರು ರಿಜಿಸ್ಟರ್‌ಗಳು, ಚಿತ್ರಗಳ ಹೇಳಿಕೆಗಳನ್ನು ಈ ವೇಳೆ ಕಟ್ಟುನಿಟ್ಟಾಗಿ ಪರಿಶೀಲಿಸಬೇಕು. ಎಲ್ಲಾ ಮತಗಟ್ಟೆಗಳಲ್ಲಿ ಚಲಾವಣೆಯಾದ ಶೇಕಡಾವಾರು ಫಲಿತಾಂಶ ಹಾಗೂ ಈ ಎಲ್ಲಾ ದಸ್ತಾವೇಜುಗಳ ಪರಿಶೀಲನೆಯಿಂದ ಗೋಚರಿಸಿದ ಅಂಶಗಳಿಂದ ಮರು ಮತದಾನಕ್ಕೆ ಆದೇಶಿಸಬಹುದು.

15.67.4. ಆಯೋಗವು ಯಾವುದೇ ಮತಗಟ್ಟೆಯಲ್ಲಿ ಹೊಸ ಮತದಾನಕ್ಕೆ ನಿರ್ದೇಶಿಸಿದರೆ, ರಿಟರ್ನಿಂಗ್ ಅಧಿಕಾರಿ ಅವರು ಆ ಮತದಾನವನ್ನು ನಡೆಸಲು ಮುಂದಿನ ಕ್ರಮ ಕೈಗೊಳ್ಳಬೇಕು.

15.67.5. ಹೊಸ ಮತದಾನವು ಮೂಲ ಮತದಾನಕ್ಕೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನಡೆಯಬೇಕು.

# 16. ಮತಗಳ ಎಣಿಕೆ

## 16.1 ಪ್ರಾಸ್ತಾವಿಕ

16.1.1. ಚುನಾವಣಾ ಪ್ರಕ್ರಿಯೆಯು ಮುಕ್ತಾಯವಾಗುವಲ್ಲಿ ಮತಗಳ ಎಣಿಕೆಯು ಬಹು ದೊಡ್ಡ ಹೆಜ್ಜೆಯಾಗಿದೆ. ಇದರ ಆಧಾರದ ಮೇಲೆ ಮತದಾರರಿಗೆ ಯಾವ ಅಭ್ಯರ್ಥಿಯ ಮೇಲೆ ಒಲವು ಇದೆಯೆಂದು ತಿಳಿಯಲು ಮತ ಎಣಿಕೆಯು ಸರಿಯಾಗಿರಬೇಕು ಮತ್ತು ಸೂಕ್ತವಾಗಿರಬೇಕು. ಇದರಿಂದ ಅಂಥ ಅಭ್ಯರ್ಥಿಗಳನ್ನು ವಿಜಯಶಾಲಿಯೆಂದು ಘೋಷಿಸಲಾಗುತ್ತದೆ. ಆದ್ದರಿಂದ ಮತ ಎಣಿಕೆ ಪ್ರಕ್ರಿಯೆಯು ಅತ್ಯಂತ ಮಹತ್ವವಾದುದ್ದಾಗಿರುತ್ತದೆ.

16.1.2. ರಿಟರ್ನಿಂಗ್ ಅಧಿಕಾರಿಯ ಮೇಲ್ವಿಚಾರಣೆ ಮತ್ತು ನಿರ್ದೇಶನದಂತೆ, ಕಾನೂನಿನಡಿ ಆಯಾ ಕ್ಷೇತ್ರದ ಅಭ್ಯರ್ಥಿಗಳು ಮತ್ತು ಏಜೆಂಟರುಗಳ ಸಮ್ಮುಖದಲ್ಲಿ ಮತ ಎಣಿಕೆ ನಡೆಸಬೇಕು. ಸಹಾಯಕ ರಿಟರ್ನಿಂಗ್ ಅಧಿಕಾರಿಕೂಡ ಮತ ಎಣಿಕೆಯಲ್ಲಿ ಪಾಲ್ಗೊಳ್ಳಬೇಕೆಂದು ಕಾನೂನು ನಿರ್ದೇಶಿಸುತ್ತದೆ. ಮತ ಎಣಿಕೆಯನ್ನು ಒಂದು ಸ್ಥಳಕ್ಕಿಂತ ಹೆಚ್ಚು ಹಾಗೂ ಅದೇ ಸ್ಥಳದ ಹಲವು ಟೇಬಲ್‌ಗಳ ಮೇಲೆ ನಡೆಸಬಹುದು. ಅಭ್ಯರ್ಥಿಗೆ ಅಥವಾ ಅವರ ಚುನಾವಣಾ ಏಜೆಂಟನಿಗೆ ಅಂಥ ಪ್ರತಿಯೊಂದು ಮತ ಎಣಿಕೆ ಸ್ಥಳ ಅಥವಾ ಟೇಬಲ್‌ಗಳಲ್ಲಿ ಖುದ್ದು ಹಾಜರಿರಲು ಸಾಧ್ಯವಾಗದಿರುವುದರಿಂದ, ಸದರಿ ಪ್ರತಿಯೊಂದು ಮತ ಎಣಿಕೆ ಸ್ಥಳ ಮತ್ತು ಎಣಿಕೆ ಟೇಬಲ್‌ಗಳಲ್ಲಿ ಹಾಜರಿದ್ದು, ತಮ್ಮ ಹಿತಾಸಕ್ತಿಗಳನ್ನು ಗಮನಿಸಬಹುದಾದಂಥ ತಮ್ಮ ಎಣಿಕೆ ಏಜೆಂಟರುಗಳನ್ನು ನೇಮಿಸಿಕೊಳ್ಳಲು ಕಾನೂನು ಅಭ್ಯರ್ಥಿಗೆ ಅವಕಾಶ ಮಾಡಿಕೊಡುತ್ತದೆ.

## 16.2. ಮತಎಣಿಕೆ ಅಧಿಕಾರಿ/ ಸಿಬ್ಬಂದಿಗಳ ನೇಮಕ ಮತ್ತು ಅವರ ಯಾದೃಚ್ಛಿಕ ಬದಲಾವಣೆ

16.2.1. ಮತ ಎಣಿಕೆಯ ಮೇಲ್ವಿಚಾರಕರು ಹಾಗೂ ಎಣಿಕೆದಾರರ ಸಹಾಯಕರ ನೇಮಕಾತಿಯು ಎಷ್ಟು ಯಾದೃಚ್ಛಿಕವಾಗಿರಬೇಕೆಂದರೆ ಎಣಿಕೆ ಸಿಬ್ಬಂದಿಗೆ ನಿಯೋಜಿಸಿದ ವಿಧಾನಸಭಾ ಕ್ಷೇತ್ರ ಮತ್ತು ಅವರಿಗೆ ನಿಯೋಜಿಸಿದ ಟೇಬಲ್ ಯಾವುದು ಎಂಬ ಬಗ್ಗೆ ಅವರು ಮತ ಎಣಿಕೆ ಕೇಂದ್ರಕ್ಕೆ ಮತ ಎಣಿಕೆಯ ದಿನಾಂಕದಂದು ಬಂದಾಗ ಮಾತ್ರ ತಿಳಿಯುವಂತೆ ಮಾಡಬೇಕು.

16.2.2. ಜಿಲ್ಲಾ ಚುನಾವಣಾ ಅಧಿಕಾರಿಗಳು ಎಲ್ಲಾ ಎಣಿಕೆ ಸಿಬ್ಬಂದಿಗೆ ಭಾವಚಿತ್ರವುಳ್ಳ ಗುರುತಿನ ಚೀಟಿಗಳನ್ನು ನೀಡಬೇಕು. ಅವರನ್ನು ಯಾದೃಚ್ಛಿಕವಾಗಿ ನಿಯೋಜಿಸಿದ ಮೇಲೆ ಮೀಸಲು ಸಿಬ್ಬಂದಿಯು ಎಣಿಕೆ ಕೇಂದ್ರದ ಆವರಣದಲ್ಲಿ ಬೇರೆ ಕಡೆ ಇರುವಂತೆ ನೋಡಿಕೊಳ್ಳಬೇಕು.

16.2.3. ಜಿಲ್ಲಾ ಚುನಾವಣಾ ಅಧಿಕಾರಿಯು ಮತ ಎಣಿಕೆಯ ಉದ್ದೇಶಕ್ಕಾಗಿ ಉತ್ತಮ ತರಬೇತಿ ಪಡೆದ ಅಧಿಕಾರಿಗಳ ತಂಡವನ್ನು ಸದಾಕಾಲ ಲಭ್ಯವಿರುವಂತೆ ನೋಡಿಕೊಳ್ಳಬೇಕು

(ಮೀಸಲು ಸಿಬ್ಬಂದಿಯನ್ನು ಒಳಗೊಂಡಂತೆ). ಎಣಿಕೆ ಸಿಬ್ಬಂದಿಯು ಮತ ಎಣಿಕೆಯ ದಿನಾಂಕದಂದು ಎಣಿಕೆಯ ಕೌಂಟರ್‌ಗಳಿಗೆ ಬೆಳಿಗ್ಗೆ 6 ಗಂಟೆಗೆ ಬರಲು ನಿರ್ದೇಶಿಸಬೇಕು. ಮೇಲಿನ ಪ್ಯಾರಾ 1ರಲ್ಲಿ ಈಗಾಗಲೇ ಉಲ್ಲೇಖಿಸಿರುವಂತೆ, ಈ ಅಧಿಕಾರಿಗಳನ್ನು ವಿಧಾನಸಭಾ ಕ್ಷೇತ್ರಗಳಿಗೆ ಅಥವಾ ಟೇಬಲ್ ಸಂಖ್ಯೆಗೆ ಮುಂಚಿತವಾಗಿ ನಿಯೋಜನೆ ಮಾಡಬಾರದು.

16.2.4. ವೀಕ್ಷಕರು ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಯು ಮತ ಎಣಿಕೆಯ ದಿನ ಯಾದೃಚ್ಛಿಕ ನಿಯೋಜನೆಗಾಗಿ ಬೆಳಿಗ್ಗೆ 5 ಗಂಟೆಗೆ ಒಂದು ಸ್ಥಳದಲ್ಲಿ ಸಭೆ ಸೇರಬೇಕು. ಆ ಸ್ಥಳವು NIC ಕೇಂದ್ರ, ಮತ ಎಣಿಕೆ ಕೇಂದ್ರ ಅಥವಾ ಈ ವಿಧಾನವನ್ನು ಸುಗಮವಾಗಿ ನೆರವೇರಿಸಬಹುದಾದ ಯಾವುದಾದರೂ ಕಛೇರಿಯಾಗಿರಬಹುದು. ತರಬೇತಿ ಪಡೆದ ಅಧಿಕಾರಿಗಳ ಪಟ್ಟಿಯನ್ನು ಜಿಲ್ಲಾ ಚುನಾವಣಾ ಅಧಿಕಾರಿಯು ವೀಕ್ಷಕರುಗಳಿಗೆ ಒದಗಿಸಬೇಕು. ಅದರಲ್ಲಿ ಎರಡು ಪಟ್ಟಿಗಳಿದ್ದು, ಎಣಿಕೆ ಮೇಲ್ವಿಚಾರಕರದ್ದು ಒಂದು ಪಟ್ಟಿ ಮತ್ತು ಎಣಿಕಾ ಸಹಾಯಕರದ್ದು ಎರಡನೆಯ ಪಟ್ಟಿ. ಪ್ರತಿ ಎಣಿಕಾ ಸಿಬ್ಬಂದಿಗೆ ವಿಭಿನ್ನವಾದ ಕ್ರಮಸಂಖ್ಯೆ ಅಥವಾ ಕೋಡ್ ನಂಬರ್‌ನ್ನು ನೀಡಬೇಕು. ಇದರಿಂದಾಗಿ, ಅವರುಗಳು ಎಣಿಕಾ ಮೇಲ್ವಿಚಾರಕರೇ ಅಥವಾ ಎಣಿಕಾ ಸಹಾಯಕರೇ ಎಂಬುದನ್ನು ಗೊತ್ತುಪಡಿಸಿಕೊಳ್ಳ ಬಹುದಾಗಿದೆ.

16.2.5. ಯಾದೃಚ್ಛಿಕ ಬದಲಾವಣೆಯನ್ನು ಕಂಪ್ಯೂಟರ್ ಬಳಸುವ ಮೂಲಕ ಇಲ್ಲವೆ ಕೈಯಿಂದ ಹಾಗೆಯೇ ಮಾಡಬಹುದು. ಕೈಯಿಂದ ಬದಲಾವಣೆ ಮಾಡುವ ಸಮಯದಲ್ಲಿ ಅಲ್ಲಿ ಉಪಸ್ಥಿತರಿರುವ ಹಿರಿಯ ವೀಕ್ಷಕರು ಕ್ಷೇತ್ರ ಹಾಗೂ ಟೇಬಲ್ ಸಂಖ್ಯೆಯನ್ನು ಚೀಟಿ ಎತ್ತುವುದರ ಮೂಲಕ ಎಣಿಕಾ ಸಿಬ್ಬಂದಿಯನ್ನು ನಿಯೋಜನೆ ಮಾಡಬೇಕು. ಈ ಕ್ರಿಯೆಯು ಮೇಲ್ಕಾಣಿಸಿದ ಎರಡು ಪಟ್ಟಿಗಳನ್ನು ಬೇರೆಯಾಗಿ ಹಾಗೂ ಸ್ವತಂತ್ರವಾಗಿ ಒಳಗೊಂಡಿರಬೇಕು. ಹೇಗೆಂದರೆ, ಪ್ರತಿಯೊಂದು ಟೇಬಲ್ಲಿಗೂ ಒಬ್ಬ ಎಣಿಕೆ ಮೇಲ್ವಿಚಾರಕ ಹಾಗೂ ಒಬ್ಬ ಎಣಿಕಾ ಸಹಾಯಕನನ್ನು ಸೃಜಿಸುವಂತಿರಬೇಕು. ಯಾದೃಚ್ಛಕತೆ ವಿಧಾನವು ಅತಿ ಬೇಗ ಹಾಗೂ ಸುಗಮವಾಗಿ ನಡೆಯಲು ಜಿಲ್ಲಾ ಚುನಾವಣಾ ಅಧಿಕಾರಿಯು ಪೂರ್ವಭಾವಿಯಾಗಿ ಎಲ್ಲಾ ತಯಾರಿಗಳನ್ನು ಮಾಡಿಕೊಳ್ಳಬೇಕು. ಇದರಲ್ಲಿ ಎಣಿಕಾ ಸಿಬ್ಬಂದಿಗೆ ಮತ್ತು ಕ್ಷೇತ್ರಗಳಿಗೆ/ಟೇಬಲ್ ನಂಬರ್‌ಗಳಿಗೆ ವಿಭಿನ್ನವಾದ ಕ್ರಮಸಂಖ್ಯೆಯನ್ನು ನೀಡುವುದು, ಚೀಟಿ ಎತ್ತುವುದು ಒಳಗೊಂಡಿರಬೇಕು.

16.2.6. ಮೇಲೆ ಹೇಳಿರುವ ಯಾದೃಚ್ಛಿಕ ಬದಲಾವಣೆಗೆ ಪರ್ಯಾಯವಾಗಿ ವೀಕ್ಷಕರ ಸಲಹೆಯನ್ನು ತೆಗೆದುಕೊಂಡು ಜಿಲ್ಲಾ ಚುನಾವಣಾ ಅಧಿಕಾರಿಯು ಕಂಪ್ಯೂಟರ್‌ನ ಸಹಾಯದಿಂದ ನಡೆಸಲು ತಯಾರಿಯನ್ನು ಮಾಡಿಕೊಳ್ಳಬಹುದು. ಆದಾಗ್ಯೂ, ಕಂಪ್ಯೂಟರ್ ಆಧಾರಿತ ವಿಧಾನದ ಬದಲಾವಣೆಯು ವೀಕ್ಷಕರಿಗೆ ಎಲ್ಲಾ ರೀತಿಯಲ್ಲಿಯೂ ದೋಷರಹಿತವಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಡಬೇಕು.

16.2.7. ಜಿಲ್ಲಾ ಚುನಾವಣಾ ಅಧಿಕಾರಿಯು ಯಾದೃಚ್ಛಿಕ ಬದಲಾವಣೆ ವಿಧಾನವನ್ನು ದಾಖಲೆಗಾಗಿ ವೀಡಿಯೋ ಚಿತ್ರೀಕರಣ ಆಗುವಂತೆ ನೋಡಿಕೊಳ್ಳಬೇಕು.

16.2.8. ಇದನ್ನು ಒಂದು ಪ್ರಾಯೋಗಿಕ ಉದಾಹರಣೆ ಮೂಲಕ ಸಾದರಪಡಿಸಬಹದು. ಒಂದು ಜಿಲ್ಲೆಯಲ್ಲಿ 10 ವಿಧಾನಸಭಾ ಕ್ಷೇತ್ರಗಳಿದ್ದು, ಪ್ರತಿಯೊಂದಕ್ಕೂ 14 ಎಣಿಕೆಯ ಟೇಬಲ್‌ಗಳು ಇವೆಯೆಂದು ಭಾವಿಸಿಕೊಳ್ಳೋಣ. ಈ ಜಿಲ್ಲೆಗೆ 154 (10% ಮೀಸಲು ಸಿಬ್ಬಂದಿ ಒಳಗೊಂಡಂತೆ) ಎಣಿಕಾ ಮೇಲ್ವಿಚಾರಕರು ಹಾಗೂ 154 ಎಣಿಕಾ ಸಹಾಯಕರ ಅವಶ್ಯಕತೆ ಇರುತ್ತದೆ. ಈ ಎಲ್ಲಾ ಅಧಿಕಾರಿಗಳಿಗೆ ಈಗಾಗಲೇ ತರಬೇತಿಯನ್ನು ನೀಡಲಾಗಿದ್ದು, ಕರ್ತವ್ಯದ ಆದೇಶ ಪತ್ರಗಳನ್ನು ನೀಡುವಾಗ ಕೋಡ್‌ಗಳನ್ನು ನೀಡಲಾಗುವುದು. ಮತ ಎಣಿಕೆಯ ದಿನಾಂಕದ ಬೆಳಿಗ್ಗೆ 5.00 ಗಂಟೆಗೆ, ಎಣಿಕೆ ಮೇಲ್ವಿಚಾರಕರು ಮತ್ತು ಎಣಿಕೆ ಸಹಾಯಕರಿಗೆ ಸೇರಿದ 154 ಕೋಡ್‌ಗಳನ್ನು, ವೈಯಕ್ತಿಕವಾಗಿ ಬರೆದ ಚೀಟಿಗಳನ್ನು ಎರಡು ವಿಭಿನ್ನ ಬಾಕ್ಸ್‌ಗಳಲ್ಲಿ ಇಡಲಾಗುತ್ತದೆ. ಜಿಲ್ಲಾ ಚುನಾವಣಾ ಅಧಿಕಾರಿಗಳು ಹಾಗೂ ಇತರೇ ವೀಕ್ಷಕರುಗಳ ಉಪಸ್ಥಿತಿಯಲ್ಲಿ ಹಿರಿಯ ವೀಕ್ಷಕರು, ಯಾದೃಚ್ಛಿಕತೆಯ ವಿಧಾನವನ್ನು ಪ್ರಾರಂಭಿಸಿ, ನಿರ್ದಿಷ್ಟ ಮತಕ್ಷೇತ್ರಕ್ಕಾಗಿ ಎರಡೂ ಬಾಕ್ಸ್‌ಗಳಿಂದ ಒಂದು ಎಂಬಂತೆ ಚೀಟಿಯನ್ನು ಆರಿಸಿಕೊಳ್ಳುತ್ತಾರೆ. ಆ ರೀತಿಯಾಗಿ ಮೊದಲ ಡ್ರಾನಲ್ಲಿ ಆರಿಸಿದ ಎಣಿಕೆ ಮೇಲ್ವಿಚಾರಕರು ಮತ್ತು ಎಣಿಕಾ ಸಹಾಯಕರನ್ನು ಆ ಮತಕ್ಷೇತ್ರದ ಟೇಬಲ್ ನಂಬರ್ 1ಕ್ಕೆ ನಿಯೋಜಿಸಲಾಗುವುದು. ಈ ಪ್ರಕ್ರಿಯೆಯು ಎಲ್ಲಾ 14 ಟೇಬಲ್‌ಗಳಿಗೆ ಒಬ್ಬ ಎಣಿಕೆ ಮೇಲ್ವಿಚಾರಕರು ಮತ್ತು ಒಬ್ಬ ಎಣಿಕಾ ಸಹಾಯಕರನ್ನು ನೇಮಕ ಮಾಡುವವರೆಗೆ ಮುಂದುವರೆಯುವುದು. ಇದೇ ವಿಧಾನವನ್ನು ಇತರೇ ವಿಧಾನಸಭಾ ಮತಕ್ಷೇತ್ರಗಳಿಗೂ ಪುನರಾವರ್ತಿಸಬಹುದು. ಈ ವಿಧಾನದ ಕೊನೆಯಲ್ಲಿ ಉಳಿದ ಅಧಿಕಾರಿಗಳನ್ನು ಮೀಸಲು ತಂಡವೆಂದು ಪರಿಗಣಿಸಬೇಕು.

16.2.9. ಒಮ್ಮೆ ಯಾದೃಚ್ಛಿಕ ಬದಲಾವಣೆ ಪ್ರಕ್ರಿಯೆ ಮುಗಿದ ಮೇಲೆ, ಜಿಲ್ಲಾ ಚುನಾವಣಾ ಅಧಿಕಾರಿ ಮತ್ತು ವೀಕ್ಷಕರು ಸಹಿ ಮಾಡಿರುವ ಮತಕ್ಷೇತ್ರಾವಾರು ಪಟ್ಟಿಗಳನ್ನು ತಯಾರಿಸಿ, ಎಣಿಕಾ

ಕೌಂಟರ್‌ಗಳಿಗೆ ವೀಕ್ಷಕರು ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಯು ಸಮಯಕ್ಕೆ ಸರಿಯಾಗಿ ಬಂದು, ಆ ಪಟ್ಟಿಗಳನ್ನು ನಿಯಂತ್ರಣ ಕೊಠಡಿಯ ಸಿಬ್ಬಂದಿಗೆ ಹಾಗೂ ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಗೆ ಬೆಳಿಗ್ಗೆ 6.00 ಗಂಟೆಗೆ ನೀಡಬೇಕು.

16.2.10. ಮತ ಎಣಿಕೆಯ ಸಿಬ್ಬಂದಿಯು ನಿಯಂತ್ರಣ ಕೊಠಡಿಯಲ್ಲಿರುವ ಎಣಿಕಾ ಕೌಂಟರ್‌ಗಳಿಗೆ ತೆರಳಿದಾಗ, ಅವರುಗಳಿಗೆ ಪೋಸ್ಟಿಂಗ್ ವಿವರಗಳನ್ನು ನೀಡಬೇಕು ಹಾಗೂ ಸಂಬಂಧಪಟ್ಟ ಟೇಬಲ್‌ಗೆ ಜೋಡಿಸಲಾದ ನಿರ್ದಿಷ್ಟ ಮತಕ್ಷೇತ್ರದ ಎಣಿಕಾ ಕೋಣೆಗೆ ಹೋಗಲು ನಿರ್ದೇಶಿಸಬೇಕು.

16.2.11. ಮತ ಎಣಿಕಾ ಪ್ರಕ್ರಿಯೆಯು ನಿಗದಿತ ವೇಳೆಗೆ ಪ್ರಾರಂಭವಾಗಿ, ಎಣಿಕಾ ಸಿಬ್ಬಂದಿಯು ಅವರಿಗೆ ನೀಡಲಾದ ಸ್ಥಳಕ್ಕೆ ಸುಲಭವಾಗಿ ಹೋಗಲು ಅನುಕೂಲವಾಗುವ ದೃಷ್ಟಿಯಿಂದ ಯಾದೃಚ್ಛಿಕ ಬದಲಾವಣೆ ಪ್ರಕ್ರಿಯೆಯು ಬೆಳಿಗ್ಗೆ 6.00 ಗಂಟೆಯೊಳಗೆ ಮುಗಿಯುವಂತೆ ನೋಡಿಕೊಳ್ಳಬೇಕು.

**16.3. ಮೀಸಲು ಸಿಬ್ಬಂದಿ**

16.3.1. ಯಾವುದೇ ಮತಕ್ಷೇತ್ರ/ಟೇಬಲ್‌ಗೆ ನಿಯೋಜಿಸದಿರುವ ಅಧಿಕಾರಿಗಳು ಈ ಗುಂಪಿನಲ್ಲಿರುತ್ತಾರೆ.

16.3.2. ಎಣಿಕೆ ಪ್ರಕ್ರಿಯೆಯು ಸಾಮಾನ್ಯವಾಗಿ 6 ರಿಂದ 8 ಗಂಟೆಗಳಿಗಿಂತ ಹೆಚ್ಚಿನ ಸಮಯ ತೆಗೆದುಕೊಳ್ಳದೇ ಇರುವುದರಿಂದ ಅಧಿಕಾರಿಗಳನ್ನು ಪಾಳಿ ಸರದಿಯಲ್ಲಿ ನಿಯೋಜನೆ ಮಾಡುವಂತಿಲ್ಲ. ಆದಾಗ್ಯೂ, ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ತುರ್ತು ಸಂದರ್ಭಗಳಲ್ಲಿ ಈ ಅಧಿಕಾರಿಗಳನ್ನು ಬದಲಾಯಿಸುವ ಸ್ವಾತಂತ್ರ್ಯ ಇದ್ದು, ಆ ಮತಕ್ಷೇತ್ರಕ್ಕೆ ಸಂಬಂಧಪಟ್ಟ ವೀಕ್ಷಕರೊಂದಿಗೆ ಸಮಾಲೋಚಿಸಿ, ಮೀಸಲು ಸಿಬ್ಬಂದಿಯಿಂದ ಈ ಬದಲಾವಣೆಯನ್ನು ಯಾದೃಚ್ಛಿಕವಾಗಿ ಮಾಡಬೇಕು.

**16.4. ವೀಕ್ಷಕರು ಯಾದೃಚ್ಛಿಕವಾಗಿ ಅಡ್ಡ ತಪಾಸಣೆ ಮಾಡುವುದು**

16.4.1. ಈಗಾಗಲೆ ನೀಡಿರುವ ಸೂಚನೆಗಳಂತೆ, ಪ್ರತಿ ಸುತ್ತಿನ ಮತ ಎಣಿಕೆಯ ನಂತರ, ಎಣಿಕಾ ಮೇಲ್ವಿಚಾರಕರು ಟೇಬಲ್‌ವಾರು ನೀಡಿದ ಫಲಿತಾಂಶದ ಆಧಾರದ ಮೇಲೆ, ರಿಟರ್ನಿಂಗ್ ಅಧಿಕಾರಿ ಕೋಷ್ಟಕವನ್ನು ಸಿದ್ಧಪಡಿಸಿ, ಟೇಬಲ್‌ವಾರು ಬಂದ ಫಲಿತಾಂಶವನ್ನು

ರಿಟರ್ನಿಂಗ್ ಅಧಿಕಾರಿ ಘೋಷಣೆ ಮಾಡುವುದಕ್ಕಿಂತ ಮುಂಚೆ ಅದಕ್ಕೆ ವೀಕ್ಷಕರಿಂದ ಕೌಂಟರ್ ಸಹಿಯನ್ನು ಮಾಡಿಸಬೇಕು.

16.4.2. ಈಗ ಇರುವ ಸೂಚನೆಗಳಂತೆ ವ್ಯವಸ್ಥೆಯೊಂದನ್ನು ಪರಿಚಯಿಸಲಾಗುತ್ತಿದ್ದು, ಇದರ ಮೂಲಕ ಎಣಿಕಾ ಅಧಿಕಾರಿಗಳು ಒದಗಿಸಿರುವ ಟೇಬಲ್ ವಾರು ಫಲಿತಾಂಶವನ್ನು ಕೆಳಗೆ ಸೂಚಿಸಿರುವ ವಿಧಾನದಂತೆ ವೀಕ್ಷಕರು ಯಾದೃಚ್ಛಿಕವಾಗಿ ಪರಿಶೀಲಿಸಬೇಕು.

16.4.3. ಎಣಿಕೆ ನಡೆಯುತ್ತಿರುವ ಅವಧಿಯಲ್ಲಿ (ಒಂದು ಸುತ್ತಿಗೆ) ವೀಕ್ಷಕರು ಎಣಿಕೆ ಟೇಬಲ್‌ಗಳ ಮಧ್ಯೆ ಓಡಾಡುತ್ತಾ ಎಣಿಕಾ ವಿಧಾನವನ್ನು ಗಮನಿಸಬೇಕು.

16.4.4. ಪ್ರತಿಸುತ್ತಿನ ಎಣಿಕೆ ಮುಕ್ತಾವಾದ ನಂತರ, ವೀಕ್ಷಕರು ಸಂಬಂಧಪಟ್ಟ ಸುತ್ತಿನ ಎಣಿಕೆಗೆ ಒಳಪಟ್ಟಿರುವ ಎರಡು ಕಂಟ್ರೋಲ್ ಯೂನಿಟ್‌ಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಂಡು, ನಂತರ, ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿ/ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ವಿಶೇಷವಾಗಿ ನೇಮಕ ಮಾಡಲ್ಪಟ್ಟ ಎಣಿಕಾ ಸಿಬ್ಬಂದಿಯನ್ನು ಯಾದೃಚ್ಛಿಕ ಆಯ್ಕೆಯ ಮೂಲಕ ಕಂಟ್ರೋಲ್ ಯೂನಿಟ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಹಾಗೂ ಆ ಯಂತ್ರದ ಮೇಲೆ ನಮೂದಿಸಿರುವ, ಚಲಾವಣೆಗೊಂಡ ಮತಗಳ ವಿವರಗಳನ್ನು ಬರೆದುಕೊಳ್ಳಲು ತಿಳಿಸಬೇಕು. ಈ ವಿವರಗಳನ್ನು, ಅಧಿಕಾರಿಗಳು ನೀಡಿರುವ ವಿವರಗಳೊಂದಿಗೆ ಹೋಲಿಕೆ ಮಾಡಿ, ಎರಡರಲ್ಲಿಯೂ ಏನಾದರೂ ವ್ಯತ್ಯಾಸಗಳು ಇರುವ ಬಗ್ಗೆ ಪರಿಶೀಲಿಸಬೇಕು. ಯಾದೃಚ್ಛಿಕವಾಗಿ ಪರಿಶೀಲಿಸಲು ನೇಮಕಗೊಂಡ ಸಿಬ್ಬಂದಿಗೆ ಟೇಬಲ್‌ವಾರು ಫಲಿತಾಂಶದ ವಿವರಗಳು ಲಭ್ಯವಾಗದಂತೆ ಎಚ್ಚರವಹಿಸಬೇಕು.

16.4.5. ಜಿಲ್ಲಾ ಚುನಾವಣಾ ಅಧಿಕಾರಿ/ರಿಟರ್ನಿಂಗ್ ಅಧಿಕಾರಿಗಳು ಈ ಯಾದೃಚ್ಛಿಕ ಅಡ್ಡ ತಪಾಸಣೆಗಾಗಿ ಅದೇ ಎಣಿಕಾ ಕೋಣೆಯಲ್ಲಿ ಬೇರೆ ಹಾಗೂ ಸಾಕಷ್ಟು ಸ್ಥಳವಕಾಶವನ್ನು ಮೀಸಲಿಡುವಂತೆ, ಇದರಿಂದಾಗಿ, ನಂತರದ ಸುತ್ತುಗಳ ಸಾಮಾನ್ಯ ಎಣಿಕೆಗೆ, ಯಾವುದೇ ಅಡಚಣೆಯಿಲ್ಲದೆ ಸಾಗಲು ಅನುಕೂಲವಾಗುವಂತೆ ನೋಡಿಕೊಳ್ಳಬೇಕು.

16.4.6. ಈ ರೀತಿಯ ಅಡ್ಡ ತಪಾಸಣೆಯಲ್ಲಿ ವೀಕ್ಷಕರಿಗೆ ಸಹಾಯ ಮಾಡುವ ಸಿಬ್ಬಂದಿಯನ್ನು ಮೀಸಲು ಸಿಬ್ಬಂದಿಯಿಂದ ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಳ್ಳಬೇಕು. ಕೆಲವು ಸುತ್ತುಗಳ ಬಳಿಕ, ಅಗತ್ಯವಾದರೆ, ಇದೇ ಮೀಸಲು ತಂಡದ ಹೊಸ ಸಿಬ್ಬಂದಿಯನ್ನು ಈ ಹಿಂದಿನ ಸಿಬ್ಬಂದಿಗೆ ಬದಲಾಯಿಸಬಹುದು.

16.4.7. ಕಂಟ್ರೋಲ್ ಯೂನಿಟ್‌ನಲ್ಲಿ ತೋರಿಸಿದ ಫಲಿತಾಂಶ ಹಾಗೂ ಸುತ್ತುವಾರು ಫಲಿತಾಂಶ ಪಟ್ಟಿ ಹಾಗೂ ನಮೂನೆ 17–ಸಿ ಯನ್ನು ನೋಡಿ ಮನವರಿಕೆಯಾದಾಗ ಮಾತ್ರ ಸುತ್ತುವಾರು ಫಲಿತಾಂಶ ಪಟ್ಟಿಗೆ ವೀಕ್ಷಕರು ಸಹಿಯನ್ನು ಮಾಡಬೇಕು. ಈ ವಿಧಾನವು ಪ್ರತಿ ಸುತ್ತಿಗೂ ಇರುವಂತೆ ವೀಕ್ಷಕರು ನೋಡಿಕೊಳ್ಳಬೇಕು ಮತ್ತು ಎರಡು ಕಂಟ್ರೋಲ್ ಯೂನಿಟ್‌ಗಳ ಆಯ್ಕೆಯು ಸಂಪೂರ್ಣ ಯಾದೃಚ್ಛಿಕವಾಗಿರಬೇಕು.

16.4.8. ವೀಕ್ಷಕರಿಗೆ ಟೇಬಲ್ ಮೂಲಕ ಪಡೆದ ಫಲಿತಾಂಶ ಮತ್ತು ಯಾದೃಚ್ಛಿಕ ತಪಾಸಣೆಯ ಮೂಲಕ ಪಡೆದ ಫಲಿತಾಂಶಕ್ಕೂ ಏನಾದರೂ ವ್ಯತ್ಯಾಸಗಳು ಕಂಡು ಬಂದರೆ, ಆಗ ಅವರು:–

- ಪ್ರತಿ ಟೇಬಲ್‌ಗೂ ಇರುವ ಆ ಸುತ್ತಿನ ಫಲಿತಾಂಶವನ್ನು ಮತಯಂತ್ರಗಳ ಮೂಲಕ ಮರು ಪರಿಶೀಲನೆ ಮಾಡಬೇಕು.
- ಎಣಿಕಾ ಫಲಿತಾಂಶವನ್ನು ತಪ್ಪಾಗಿ ಎಣಿಸಿದ್ದ ಸಿಬ್ಬಂದಿಯನ್ನು ಬದಲಾಯಿಸಿ ಆ ಜಾಗಕ್ಕೆ ಹೊಸ ಸಿಬ್ಬಂದಿಯನ್ನು ನೇಮಿಸಬೇಕು. ತಪ್ಪಾಗಿ ಎಣಿಸಿದ್ದ ಸಿಬ್ಬಂದಿಯ ಮೇಲೆ ತೀವ್ರತರವಾದ ಶಿಸ್ತು ಕ್ರಮವನ್ನು ಜರುಗಿಸಬೇಕು.
- ಹಿಂದಿನ ಸುತ್ತುಗಳಲ್ಲಿ ಈ ರೀತಿಯ ಫಲಿತಾಂಶವನ್ನು ನೀಡಿದ ಅಂತಹ ಸಿಬ್ಬಂದಿಯ ಫಲಿತಾಂಶವನ್ನು ವೀಕ್ಷಕರ ಉಪಸ್ಥಿತಿಯಲ್ಲಿ ಪರಿಶೀಲಿಸಿ, ಅಗತ್ಯವೆನಿಸಿದರೆ ಇನ್ನೊಮ್ಮೆ ಸರಿಯಾದ ಪಟ್ಟಿಯನ್ನು ಸಿದ್ಧಪಡಿಸಬೇಕು.

16.4.9. ಎಣಿಕಾ ಸಿಬ್ಬಂದಿ ಹಾಗೂ ಅಭ್ಯರ್ಥಿಗಳು ಮತ್ತು ಅವರ ಎಣಿಕಾ ಏಜೆಂಟ್‌ಗಳಿಗೆ ಈ ರೀತಿಯಾಗಿ ವೀಕ್ಷಕರು ಯಾದೃಚ್ಛಿಕ ಅಡ್ಡ ಪರಿಶೀಲನೆ ಮಾಡುವ ಬಗ್ಗೆ ತಿಳಿಸಬೇಕು. ಈ ರೀತಿಯಾಗಿ ಯಾದೃಚ್ಛಿಕ ಅಡ್ಡ ತಪಾಸಣೆಯಲ್ಲಿ ಏನಾದರೂ ವ್ಯತ್ಯಾಸಗಳು ಕಂಡುಬಂದರೆ, ಆಯೋಗವು ಇದನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ತೀವ್ರ ಶಿಸ್ತಿನ ಕ್ರಮವನ್ನು ಜರುಗಿಸಿ ಅಂತಹವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ.

16.4.10. ವೀಕ್ಷಕರು ಎಣಿಕಾ ಕೋಣೆಯಲ್ಲಿ ನಿರಂತರವಾಗಿ ಉಪಸ್ಥಿತರಿದ್ದು ಎಣಿಕಾ ಟೇಬಲ್‌ಗಳಲ್ಲಿ ಆಯೋಗವು ನಿಗದಿಪಡಿಸಿದ್ದ ಸೂಚನೆಗಳ ಅನುಸಾರ ಪಾರದರ್ಶಕತೆ ಹಾಗೂ ವ್ಯವಸ್ಥಿತವಾಗಿ ಎಣಿಕೆಯು ನಡೆಯುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

16.4.11. ವೀಕ್ಷಕರುಗಳು, ಎಣಿಕೆ ಮುಗಿದ ನಂತರ ತಮ್ಮ ಅಂತಿಮ ವರದಿಯಲ್ಲಿ ಆಯೋಗವು ನೀಡಿದ ಸೂಚನೆಯಂತೆ, ಸಿಬ್ಬಂದಿಯನ್ನು ಯಾದೃಚ್ಛಿಕ ವಿಧಾನದಲ್ಲಿ ಹಾಗೂ ಕಂಟ್ರೋಲ್ ಯೂನಿಟ್‌ಗಳನ್ನು ಯಾದೃಚ್ಛಿಕ ತಪಾಸಣೆಯಿಂದ ಆರಿಸಿಕೊಳ್ಳಲಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು.

16.4.12. 14 ಟೇಬಲ್‌ಗಳ ಪ್ರತಿಯೊಂದರಲ್ಲಿಯೂ ಒಬ್ಬ ಎಣಿಕಾ ಮೇಲ್ವಿಚಾರಕರು ಮತ್ತು ಎಣಿಕೆ ಸಹಾಯಕರ ಜೊತೆ ಹೆಚ್ಚುವರಿ ಸಿಬ್ಬಂದಿಯಾಗಿ ಮತ್ತೊರ್ವ ವ್ಯಕ್ತಿಯು ಅಲ್ಲಿರಬೇಕು. ಅವರು ಸಾಮಾನ್ಯವಾಗಿ ಕೇಂದ್ರ ಸರ್ಕಾರದ/ ಕೇಂದ್ರ ಸರ್ಕಾರಿ ಸ್ವಾಮ್ಯದ ಅಧಿಕಾರಿಯಾಗಿರಬೇಕು. ಆ ಹೆಚ್ಚುವರಿ ಸಿಬ್ಬಂದಿಯು ಪ್ರತಿ ಸುತ್ತಿನಲ್ಲಿಯೂ ಆ ಟೇಬಲ್ ಮೇಲೆ ಎಣಿಕೆಗೆ ಬರುವ ಮತಯಂತ್ರಗಳ ಮೇಲೆ ಇರುವ ವಿವರಗಳನ್ನು ಬರೆದಿಟ್ಟುಕೊಳ್ಳಬೇಕು. ಈ ಎಲ್ಲಾ ಹೆಚ್ಚುವರಿ ಎಣಿಕಾ ಸಿಬ್ಬಂದಿಗೆ ಈ ಕೆಳಕಂಡ ಅಂಶಗಳನ್ನು ಒಳಗೊಂಡ, ಪೂರ್ವ ಮುದ್ರಿತವಾಗಿರುವ ಹಾಳೆಯೊಂದನ್ನು ನೀಡಬೇಕು. ಅದರಲ್ಲಿ ಕಂಟ್ರೋಲ್ ಯೂನಿಟ್‌ಗಳ ನಂಬರ್, ಸುತ್ತಿನ ನಂಬರ್, ಟೇಬಲ್ ನಂಬರ್, ಮತಗಟ್ಟೆಯ ನಂಬರ್ ಹಾಗೂ ಮತಪತ್ರದಲ್ಲಿರುವ ಎಲ್ಲಾ ಅಭ್ಯರ್ಥಿಗಳ ವಿವರಗಳನ್ನು ಬರೆದುಕೊಳ್ಳಲು ಸ್ಥಳಾವಕಾಶ ಇರಬೇಕು. ಅವರು ತಮ್ಮ ಸಹಿಯನ್ನು ಆ ವಿವರಗಳ ಕೊನೆಯಲ್ಲಿ ದಾಖಲಿಸಿ, ಆ ಹಾಳೆಯನ್ನು ಪ್ರತಿ ಸುತ್ತಿನ ನಂತರ ವೀಕ್ಷಕರ ಕೈಗೆ ಹಸ್ತಾಂತರ ಮಾಡತಕ್ಕದ್ದು.

ಹೆಚ್ಚುವರಿ ಮತ ಎಣಿಕೆ ಸಿಬ್ಬಂದಿಯು ಮತಗಳನ್ನು ದಾಖಲಿಸಿಕೊಳ್ಳುವುದಕ್ಕಾಗಿ, **ನಮೂನೆ**

ಎ.ಸಿ. ಸಂಖ್ಯೆ ಮತ್ತು ಹೆಸರು :
ಸುತ್ತಿನ ಸಂಖ್ಯೆ :
ಟೇಬಲ್ ಸಂಖ್ಯೆ :
ಕಂಟ್ರೋಲ್ ಯೂನಿಟ್ ಸಂಖ್ಯೆ :
ಮತಗಟ್ಟೆಯ ಸಂಖ್ಯೆ :

| **ಕ್ರ.ಸಂ.** | **ಅಭ್ಯರ್ಥಿಗಳ ಹೆಸರು (ಪೂರ್ವ ಮುದ್ರಿತ)** | **ದಾಖಲಾದ ಒಟ್ಟು ಮತಗಳ ಸಂಖ್ಯೆ** |
|---|---|---|
| | | |
| | | |
| | | |
| | | |
| | | |

ದಿನಾಂಕ: ____________ ಹೆಚ್ಚುವರಿ ಎಣಿಕೆ ಸಿಬ್ಬಂದಿಯ ಸಹಿ

(ಪೂರ್ಣ ಹೆಸರಿನೊಂದಿಗೆ)

*ವೀಕ್ಷಕರಿಗೆ ಮಾತ್ರ ಹಸ್ತಾಂತರಿಸಬೇಕು.

16.4.13. ವೀಕ್ಷಕರು/ರಿಟರ್ನಿಂಗ್ ಅಧಿಕಾರಿ ಅವರು ಹೆಚ್ಚುವರಿ ಸಿಬ್ಬಂದಿಯು ಒಪ್ಪಿಸಿರುವ ನಮೂನೆ 17–ಸಿಯ ಭಾಗ IIರಲ್ಲಿನ ಅಂಕಿ ಅಂಶಗಳನ್ನು ಅಡ್ಡ ಪರಿಶೀಲನೆ ಮಾಡಬೇಕು.

16.4.14. ಕೇಂದ್ರ ಸರ್ಕಾರಿ ನೌಕರರ ಸಿಬ್ಬಂದಿಯ ಕೊರತೆ ಕಂಡುಬಂದಲ್ಲಿ, ವಿಭಾಗೀಯ ಕಮೀಷನರ್‌ರವರು ತಮ್ಮ ವಿಭಾಗದ ವ್ಯಾಪ್ತಿಯ ಪಕ್ಕದ ಜಿಲ್ಲೆಗಳಿಂದ ಅಗತ್ಯವಿರುವಷ್ಟು ಸಿಬ್ಬಂದಿಯನ್ನು ಬಳಸಿಕೊಂಡು ಕೊರತೆಯನ್ನು ನೀಗಿಸಿಕೊಳ್ಳಬಹುದು. ಮೇಲ್ಕಂಡ ಎಣಿಕಾ ಕೇಂದ್ರಗಳಿಗೆ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡುವಾಗ, ಆ ಸಿಬ್ಬಂದಿಗೆ ಸೂಕ್ತ ತರಬೇತಿಯನ್ನು ನೀಡಬೇಕು. ಆ ಹೆಚ್ಚುವರಿ ಸಿಬ್ಬಂದಿಗೆ ಜಿಲ್ಲಾ ಚುನಾವಣಾ ಅಧಿಕಾರಿಯು ಗುರುತಿನ ಪತ್ರವನ್ನು ನೀಡಬೇಕು. ವೀಕ್ಷಕರು ಆ ಹೆಚ್ಚುವರಿ ಸಿಬ್ಬಂದಿಯನ್ನು ಮತಕ್ಷೇತ್ರವಾರು ಹಾಗೂ ಟೇಬಲ್‌ವಾರು ಯಾದೃಚ್ಛಿಕವಾಗಿ ಆಯ್ಕೆ ಮಾಡಿ ನಿಯೋಜಿಸಬೇಕು.

## 16.5. ವೀಕ್ಷಕರ ಪಾತ್ರ

16.5.1. ಹೆಚ್ಚು ಮತಗಟ್ಟೆಗಳಲ್ಲಿ ಅಥವಾ ಮತದಾನಕ್ಕೆ ನಿಗದಿಪಡಿಸಿದ್ದ ಸ್ಥಳಗಳಲ್ಲಿ ಬಲವಂತವಾಗಿ ಮತಯಂತ್ರಗಳನ್ನು ವಶಪಡಿಸಿಕೊಂಡಿದೆ ಎಂದು ಮತದಾನಕ್ಕೆ ನಿಗದಿಪಡಿಸಿದ್ದ ಸ್ಥಳದಲ್ಲಿ ಮತಗಳ ಎಣಿಕೆಯನ್ನು ಅಥವಾ ಬಳಸಿದ ಮತಪತ್ರಗಳನ್ನು ರಿಟರ್ನಿಂಗ್ ಅಧಿಕಾರಿನ ವಶದಿಂದ ಕಾನೂನು ಬಾಹಿರವಾಗಿ ತೆಗೆದುಕೊಳ್ಳಲಾಗಿದೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದೆ ಎಂದು ಅಥವಾ ಕಳೆದುಹೋಗಿದೆ ಅಥವಾ ವಿರೂಪಗೊಳಿಸಿದೆ ಎಂದು ಅಥವಾ ಆ ಮತಗಟ್ಟೆಯ ಫಲಿತಾಂಶಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ವೀಕ್ಷಕರು ಅಭಿಪ್ರಾಯಪಟ್ಟಾಗ, ಅವರು, ರಿಟರ್ನಿಂಗ್ ಅಧಿಕಾರಿಗೆ ಅವನು ನಾಮನಿರ್ದೇಶನಗೊಂಡ ಒಂದು ಮತಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅಥವಾ ಹಲವಾರು ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ ಫಲಿತಾಂಶ ಪ್ರಕಟವಾಗುವುದಕ್ಕೆ ಮುಂಚೆ ಯಾವ ಸಮಯದಲ್ಲಾದರೂ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ನಿರ್ದೇಶಿಸುವ ಅಧಿಕಾರವನ್ನು ಹೊಂದಿರುತ್ತಾರೆ.

16.5.2. ವೀಕ್ಷಕರು, ರಿಟರ್ನಿಂಗ್ ಅಧಿಕಾರಿಗೆ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಹಾಗೂ ಫಲಿತಾಂಶವನ್ನು ಘೋಷಣೆ ಮಾಡದಂತೆ ನಿರ್ದೇಶಿಸಿದ ಮೇಲೆ, ಅವರು ಕೂಡಲೇ ಈ ವಿಷಯವನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡಬೇಕು. ಚುನಾವಣಾ ಆಯೋಗವು ಎಲ್ಲಾ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡ ನಂತರ, ಜನಪ್ರತಿನಿಧಿಗಳ ಅಧಿನಿಯಮ 1951ರ 58–ಎ ಅಥವಾ 64–ಎ ಅಥವಾ 66ನೇ ಪ್ರಕರಣದ ಮೇರೆಗೆ ಸೂಕ್ತ ನಿರ್ದೇಶನಗಳನ್ನು ಹೊರಡಿಸುತ್ತದೆ.

### 16.6. ಮತ ಎಣಿಕೆಯ ದಿನಾಂಕ, ಸ್ಥಳ ಮತ್ತು ಸಮಯ

16.6.1. ರಿಟರ್ನಿಂಗ್ ಅಧಿಕಾರಿಯವರು ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟ್‌ಗೆ, ಮತದಾನಕ್ಕೆ ನಿಗದಿಪಡಿಸಿದ್ದ ದಿನಾಂಕಕ್ಕಿಂತ ಒಂದು ವಾರ ಮುಂಚಿತವಾಗಿ ಅಥವಾ ಮೊದಲು ನಿಗದಪಡಿಸಿದ್ದ ದಿನಾಂಕಗಳು, ಸ್ಥಳ, ಮತ ಎಣಿಕೆಗೆ ನಿಗದಿಪಡಿಸಿದ್ದ ದಿನಾಂಕ ಮತ್ತು ಸಮಯವನ್ನು, ಆ ಉದ್ದೇಶಕ್ಕಾಗಿ ಆಯೋಗವು ನಿಗದಿಪಡಿಸಿದ ನಮೂನೆಗಳಲ್ಲಿ, **ಪರಿಶಿಷ್ಟ–29** ಅಥವಾ **ಪರಿಶಿಷ್ಟ–30ಗಳಲ್ಲಿ** ತಿಳಿಸಿದಂತೆ ನೋಟೀಸನ್ನು ನೀಡಬೇಕು. ದೇಶದಾದ್ಯಂತದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಗೆ, ಸಾಮಾನ್ಯವಾಗಿ ಮತಗಳ ಎಣಿಕೆಯ ದಿನಾಂಕವು ಕೊನೆಯ ಮತದಾನ ನಡೆದ ದಿನದ ನಂತರದ ದಿನಾಂಕವಾಗಿರುತ್ತದೆ. ಸಾರ್ವತ್ರಿಕ ಚುನಾವಣೆಯು ಯಾವುದೋ ಒಂದು ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೆ ನಡೆದರೆ, ಮತಗಳ ಎಣಿಕೆಯು ಸಾಮಾನ್ಯವಾಗಿ ಅಲ್ಲಿ ನಡೆಯುವ ಕೊನೆಯ ಮತದಾನ ನಡೆದ ದಿನದ ನಂತರದ ದಿನಾಂಕವಾಗಿರುತ್ತದೆ. ಮರು ಚುನಾವಣೆಯ ಸಂದರ್ಭದಲ್ಲಿ, ಮತಗಳ ಎಣಿಕೆಯು ಸಾಮಾನ್ಯವಾಗಿ ಮತದಾನ ನಡೆದ ದಿನದ ನಂತರದ ದಿನಾಂಕವಾಗಿರುತ್ತದೆ ಅಥವಾ ಮತದಾನ ಕೊನೆಗೊಂಡ ದಿನಾಂಕಗಳು ಅಥವಾ ಮತಕ್ಷೇತ್ರಗಳ ವ್ಯಾಪ್ತಿಯು ವಿಶಾಲವಾಗಿದ್ದರೆ ಮತ್ತು ಮತ ಪೆಟ್ಟಿಗೆಗಳನ್ನು ಭೌತಿಕವಾಗಿ ಸಾಗಿಸಲು ಅಥವಾ ಸಂದರ್ಭಾನುಸಾರ ಮತಯಂತ್ರಗಳನ್ನು ಎಣಿಕೆಗೆ ನಿಗದಿಪಡಿಸಿರುವ ಸ್ಥಳಕ್ಕೆ ತಲುಪಿಸಲು ಅಸಾಧ್ಯವಾದಾಗ ಮತ ಎಣಿಕೆಯನ್ನು ಅದರ ಮುಂದಿನ ದಿನ ನಡೆಸಬೇಕು.

16.6.2. ತಡೆಯಲು ಅಸಾಧ್ಯವಾದ ಯಾವುದೇ ಕಾರಣದಿಂದ ಮತ ಎಣಿಕೆಗೆ ನಿಗದಿಪಡಿಸಿದ್ದ ದಿನಾಂಕದಂದು ಮತ್ತು ಆ ಸಮಯಕ್ಕೆ ಮತ್ತು ಆ ಸ್ಥಳಕ್ಕೆ ತೆರಳಲು ಸಾಧ್ಯವಾಗದಿದ್ದರೆ, ರಿಟರ್ನಿಂಗ್ ಅಧಿಕಾರಿರವರು ಆ ಬಗ್ಗೆ ಮಾಹಿತಿಯನ್ನು ಅಭ್ಯರ್ಥಿಗೆ ತಿಳಿಸಬೇಕು. ನಂತರ ಅವರು ಮತ ಎಣಿಕೆಯನ್ನು ಮುಂದೂಡಿ ಹೊಸ ದಿನಾಂಕ ಮತ್ತು ಸಮಯ ಮತ್ತು ಮತಗಳ

ಎಣಿಕೆಗೆ ಮತ್ತೊಂದು ಸ್ಥಳವನ್ನು ನಿಗದಿಪಡಿಸಬೇಕು. ಈ ರೀತಿ ಆಗುವ ಪ್ರತಿಯೊಂದು ಬದಲಾವಣೆಯನ್ನು ಲಿಖಿತದಲ್ಲಿ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟ್‌ಗೆ ನೀಡಬೇಕು.

**16.7. ಮತ ಎಣಿಕೆಯ ಪ್ರಾರಂಭ**

16.7.1. ಆಯೋಗದ ಸೂಚನೆಗಳ ಪ್ರಕಾರ, ರಿಟರ್ನಿಂಗ್ ಅಧಿಕಾರಿ ಅವರು ಮತದಾನದ ಕುರಿತು ಆಯೋಗವು ಬಹುಮುಖ್ಯವೆಂದು ತಿಳಿಸಿರುವ ವಿಸ್ತೃತವಾದ ವರದಿಗಳನ್ನು ಆಯೋಗಕ್ಕೆ ಸಲ್ಲಿಸಬೇಕು. ಈ ವರದಿಗಳ ಆಧಾರದ ಮೇಲೆ, ಆಯೋಗವು ನಿರ್ದಿಷ್ಟ ಮತಗಟ್ಟೆಗಳಲ್ಲಿ/ಮತಕ್ಷೇತ್ರಗಳಲ್ಲಿ ಮರು ಚುನಾವಣೆಯನ್ನು ನಡೆಸಬೇಕೋ ಅಥವಾ ಬೇಡವೋ ಎಂಬ ಬಗ್ಗೆ ನಿರ್ಧರಿಸುತ್ತದೆ. ಆಯೋಗದಿಂದ ಮರು ಮತದಾನಕ್ಕೆ ಯಾವುದೇ ಆದೇಶಗಳು ಬರದಿದ್ದರೆ, ರಿಟರ್ನಿಂಗ್ ಅಧಿಕಾರಿರವರು ಆಯೋಗದಿಂದ ಯಾವುದೇ ಸ್ಪಷ್ಟನೆ ಬರುವವರೆಗೂ ಕಾಯದೇ ಮತ ಎಣಿಕೆಯನ್ನು ಪ್ರಾರಂಭಿಸಬಹುದು.

16.7.2. ಜನಪ್ರತಿನಿಧಿ ಅಧಿನಿಯಮ 1951ಕ್ಕೆ ಹೊಸದಾಗಿ ಸೇರ್ಪಡೆಗೊಂಡ 20B ಪ್ರಕರಣದ ಮೇರೆಗೆ ಚುನಾವಣಾ ಆಯೋಗವು ಚುನಾವಣೆ ನಡೆಯುವುದನ್ನು ವೀಕ್ಷಿಸಲು ವೀಕ್ಷಕರನ್ನು ನೇಮಿಸಿ, ಹೆಚ್ಚು ಮತದಾನ ಕೇಂದ್ರಗಳಲ್ಲಿ ಅಥವಾ ಮತದಾನಕ್ಕೆ ನಿಗದಿಪಡಿಸಿದ್ದ ಸ್ಥಳಗಳಲ್ಲಿ ಅಥವಾ ಮತಗಳ ಎಣಿಕೆಯಲ್ಲಿ ಮತಪತ್ರಗಳನ್ನು ಅಥವಾ ಮತಕೇಂದ್ರಗಳಲ್ಲಿ ಬಳಸಿರುವ ಮತಯಂತ್ರಗಳನ್ನು ಬಲವಂತವಾಗಿ ವಶಪಡಿಸಿಕೊಳ್ಳಲಾಗಿದೆ ಎಂದು ಅಥವಾ ಮತದಾನಕ್ಕೆ ನಿಗದಿಪಡಿಸಿದ್ದ ಸ್ಥಳವನ್ನು ರಿಟರ್ನಿಂಗ್ ಅಧಿಕಾರಿಅವರಿಂದ ಕಾನೂನುಬಾಹಿರವಾಗಿ ವಶಪಡಿಸಿಕೊಳ್ಳಲಾಗಿದೆ ಎಂದು ಅಥವಾ ಇವುಗಳನ್ನು ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದ್ದು ಅಥವಾ ನಷ್ಟವಾಗಿದ್ದು ಅಥವಾ ಹಾನಿಪಡಿಸಿದ್ದು ಅಥವಾ ವಿರೂಪಗೊಳಿಸಿದ್ದು, ಇದರಿಂದ ಆ ಮತಗಟ್ಟೆಯ ಮತ್ತು ಆ ಸ್ಥಳದಲ್ಲಿನ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಫಲಿತಾಂಶ ಪ್ರಕಟವಾಗವುದಕ್ಕಿಂತ ಮುಂಚೆ ಯಾವ ಸಮಯದಲ್ಲಾದರೂ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಅಥವಾ ಫಲಿತಾಂಶವನ್ನು ಘೋಷಿಸದಂತೆ ರಿಟರ್ನಿಂಗ್ ಅಧಿಕಾರಿಅವರಿಗೆ ನಿರ್ದೇಶಿಸಲು ವೀಕ್ಷಕರಿಗೆ ಅಧಿಕಾರವನ್ನು ನೀಡಿದ್ದು, ವೀಕ್ಷಕರು ಈ ಅಧಿಕಾರಗಳನ್ನು ಹೊಂದಿರತಕ್ಕದ್ದು. ವೀಕ್ಷಕರು ನೀಡಿದ ವರದಿಗಳ ಆಧಾರದ ಮೇಲೆ ಎಲ್ಲಾ ಪರಿಸ್ಥಿತಿಗಳನ್ನು ಅವಲೋಕಿಸಿ ಆಯೋಗವು ನೀಡುವ ನಿರ್ದೇಶನಗಳ ಮೇರೆಗೆ ಚುನಾವಣಾ ನಡೆವಳಿಗಳು ಮುಂದುವರಿಯತಕ್ಕದ್ದು.

**16.8. ಬೇರೆಬೇರೆ ಸ್ಥಳಗಳ ಮತಎಣಿಕೆ**

16.8.1. ಇಡೀ ವಿಧಾನಸಭಾ ಮತಕ್ಷೇತ್ರದ ಮತ ಎಣಿಕೆಯು ಒಂದೇ ಸ್ಥಳದಲ್ಲಿ ನಡೆಯಬೇಕು ಮತ್ತು ಮತ ಎಣಿಕೆಯು ಅದೇ ದಿನದಲ್ಲಿ ಮುಗಿಯುವಂತೆ ಕ್ರಮ ವಹಿಸಬೇಕು. ಈ ಉದ್ದೇಶಕ್ಕಾಗಿ ಮತ ಎಣಿಕೆಯನ್ನು ಮುಂಜಾನೆಯೇ ಪ್ರಾರಂಭಿಸಬೇಕು.

16.8.2. ವಿಧಾನಸಭಾ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತ ಎಣಿಕೆಯು ಒಂದು ಸ್ಥಳದಲ್ಲಿ ನಡೆಯುವಾಗ, ಲೋಕಸಭೆಗೆ ನಡೆದ ಚುನಾವಣೆಯ ಮತ ಎಣಿಕೆಯು ಒಂದಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ನಡೆಸಬಹುದು, ಎಂದರೆ ಒಂದು ಲೋಕಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಧಾನಸಭಾ ಮತಕ್ಷೇತ್ರಗಳಲ್ಲಿ ಮತ ಎಣಿಕೆಗೆ ನಿಗದಿಪಡಿಸಿದ ಸ್ಥಳಗಳು.

16.8.3. ಒಂದು ಲೋಕಸಭಾ ಮತಕ್ಷೇತ್ರದ ಮತಗಳನ್ನು ಒಂದಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ಎಣಿಸುವಂತಿದ್ದರೆ, ಆ ಬಗ್ಗೆ ರಿಟರ್ನಿಂಗ್ ಅಧಿಕಾರಿ ಅವರು ಅಭ್ಯರ್ಥಿ ಅಥವಾ ಅವರ ಮತದಾನ ಏಜೆಂಟ್‌ಗೆ ಅಭ್ಯರ್ಥಿಯು ಅಂತಹ ಸ್ಥಳಗಳಿಗೆ ಬೇರೆ ಮತದಾನ ಏಜೆಂಟ್‌ಗಳನ್ನು ನೇಮಕ ಮಾಡುವ ಹಾಗೆ ಮುಂಚಿತವಾಗಿ ಮಾಹಿತಿಯನ್ನು ನೀಡಬೇಕು.

16.8.4. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗೆ ಏಕಕಾಲಕ್ಕೆ ಚುನಾವಣೆಗಳು ನಡೆದಾಗ ಮತಗಳ ಎಣಿಕೆಯು ವಿಧಾನಸಭಾ ಕ್ಷೇತ್ರವಾರು ಏಕಕಾಲಕ್ಕೆ ನಡೆಯುತ್ತದೆ. ಇಂತಹ ಸನ್ನಿವೇಶದಲ್ಲಿ ಅಭ್ಯರ್ಥಿಗಳಿಗೆ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳ ಮತಕ್ಷೇತ್ರಕ್ಕೆ ಪ್ರತ್ಯೇಕ ಎಣಿಕಾ ಏಜೆಂಟರನ್ನು ನೇಮಕ ಮಾಡಲು ಅನುಮತಿಸಬೇಕು.

**16.9. ಮತ ಎಣಿಕೆ ಸಭಾಂಗಣಕ್ಕೆ ಹೋಗಲು ಅನುಮತಿಸಲ್ಪಟ್ಟ ವ್ಯಕ್ತಿಗಳು**

ಈ ಕೆಳಕಂಡ ವ್ಯಕ್ತಿಗಳಿಗೆ ಮಾತ್ರ ಮತ ಎಣಿಕೆ ಸಭಾಂಗಣಕ್ಕೆ ಪ್ರವೇಶಿಸಲು ಅನುಮತಿಸಬೇಕು:–

- ಎಣಿಕೆ ಮೇಲ್ವಿಚಾರಕರು ಮತ್ತು ಎಣಿಕೆ ಸಹಾಯಕರು;
- ಚುನಾವಣಾ ಆಯೋಗದಿಂದ ಅನುಮತಿಸಲ್ಪಟ್ಟ ವ್ಯಕ್ತಿಗಳು;
- ಚುನಾವಣಾ ಕರ್ತವ್ಯ ನಿರತ ಸಾರ್ವಜನಿಕ ನೌಕರರು
- ಅಭ್ಯರ್ಥಿ, ಅವರ ಚುನಾವಣಾ ಏಜೆಂಟ್ ಹಾಗೂ ಎಣಿಕಾ ಏಜೆಂಟರುಗಳು.

**ವಿ.ಸೂ:** (1) 'ಕರ್ತವ್ಯ ನಿರತ ಸಾರ್ವಜನಿಕ ನೌಕರರು' ಎಂದರೆ ಇದರಲ್ಲಿ ಪೊಲೀಸ್ ಅಧಿಕಾರಿಗಳನ್ನು ಒಳಗೊಳ್ಳುವುದಿಲ್ಲ. ಅವರು ಸಮವಸ್ತ್ರದಲ್ಲಿರಲಿ ಅಥವಾ ಇಲ್ಲದಿರಲಿ (ಕಾನೂನು ಸುವ್ಯವಸ್ಥೆ

ಕಾಪಾಡಲು ಅಥವಾ ಇತರೆ ಕರ್ತವ್ಯವನ್ನು ನಿರ್ವಹಿಸಲು ರಿಟರ್ನಿಂಗ್ ಅಧಿಕಾರಿಅವರಿಂದ ಕರೆ ನೀಡಿದ ಹೊರತು) ಮಂತ್ರಿಗಳು, ರಾಜ್ಯ ಮಂತ್ರಿಗಳು ಮತ್ತು ಕೇಂದ್ರ ಮತ್ತು ರಾಜ್ಯಗಳ ಸಹಾಯಕ ಮಂತ್ರಿಗಳು, ಮತ್ತು ಲೋಕಸಭೆ/ ರಾಜ್ಯಸಭೆ/ ರಾಜ್ಯ ವಿಧಾನಸಭೆ/ ವಿಧಾನ ಪರಿಷತ್ತಿನ ಸಭಾಧ್ಯಕ್ಷರು / ಸಭಾಪತಿಗಳು.

(2) ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟ್‌ನ ಅಥವಾ ಎಣಿಕೆ ಏಜೆಂಟ್‌ನ ಜೊತೆ ಇರುವ ಭದ್ರತಾ ಸಿಬ್ಬಂದಿಯನ್ನು ಮತ ಎಣಿಕೆ ಆವರಣಕ್ಕೆ ಮತ್ತು ಮತ ಎಣಿಕೆ ಸಭಾಂಗಣಕ್ಕೆ ಪ್ರವೇಶಿಸಲು ಅನುಮತಿಸತಕ್ಕದ್ದಲ್ಲ.

**16.10. ಮತ ಎಣಿಕೆಗೆ ನೇಮಕ ಮಾಡಲ್ಪಟ್ಟ ಎಣಿಕಾ ಏಜೆಂಟರ ಸಂಖ್ಯೆ**

16.10.1. ರಿಟರ್ನಿಂಗ್ ಅಧಿಕಾರಿ ಅವರು ಎಷ್ಟು ಟೇಬಲ್‌ಗಳನ್ನು ಆಯೋಜಿಸಿರುತ್ತಾರೋ ಅಷ್ಟು ಟೇಬಲ್‌ಗಳಿಗೆ ಎಣಿಕೆಯನ್ನು ವೀಕ್ಷಿಸಲು ತಲಾ ಒಬ್ಬ ಎಣಿಕೆ ಏಜೆಂಟನ್ನು ನೇಮಕ ಮಾಡಲು ಪ್ರತಿಯೊಬ್ಬ ಅಭ್ಯರ್ಥಿಗೆ ಅನುಮತಿಸಬಹುದು. ಚುನಾವಣಾ ಆಯೋಗದ ಸೂಚನೆಯಂತೆ, ಒಂದು ಮತ ಎಣಿಕೆ ಸಭಾಂಗಣದಲ್ಲಿ ರಿಟರ್ನಿಂಗ್ ಅಧಿಕಾರಿಗೆ ಒದಗಿಸುವ ಒಂದು ಟೇಬಲ್‌ನ ಜೊತೆಗೆ ಇತರೆ 14 ಟೇಬಲ್‌ಗಳನ್ನು ಮಾತ್ರ ಎಣಿಕೆಗೆ ಬಳಸಿಕೊಳ್ಳಬಹುದು. ಅಭ್ಯರ್ಥಿಗಳು ನೇಮಕ ಮಾಡುವ ಎಣಿಕಾ ಏಜೆಂಟ್‌ಗಳ ಸಂಖ್ಯೆಯು ಟೇಬಲ್‌ಗೆ ಒಂದರಂತೆ, ರಿಟರ್ನಿಂಗ್ ಅಧಿಕಾರಿ ಟೇಬಲ್‌ನ್ನು ಒಳಗೊಂಡಂತೆ ಒಟ್ಟು 15 ಏಜೆಂಟರನ್ನು ಮೀರದಂತೆ ನೇಮಕ ಮಾಡಬಹುದು.

16.10.2. ಆದಾಗ್ಯೂ, ಆಯೋಗವು ಕೆಲವು ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳ ಮೇರೆಗೆ ಕೆಲವೊಮ್ಮೆ 15 ಟೇಬಲ್‌ಗಿಂತ ಹೆಚ್ಚಿನ ಟೇಬಲ್‌ಗಳನ್ನು ಒದಗಿಸಬಹುದು. ಇಂಥ ಸಂದರ್ಭಗಳಲ್ಲಿ, ಅಭ್ಯರ್ಥಿಯು ಕೂಡ 15 ಮತದಾನ ಏಜೆಂಟ್‌ಗಳಿಗಿಂತ ಹೆಚ್ಚಿನದಾಗಿ ಹಾಗೂ ರಿಟರ್ನಿಂಗ್ ಅಧಿಕಾರಿ ಒದಗಿಸಿದ ಟೇಬಲ್‌ಗಳಿಗೆ ಅನುಗುಣವಾಗಿ ಏಜೆಂಟರನ್ನು ನೇಮಕ ಮಾಡಬಹುದು.

16.10.3. ಮೇಲೆ ತಿಳಿಸಿರುವಂತೆ, ರಿಟರ್ನಿಂಗ್ ಅಧಿಕಾರಿ ಒಂದು ವಾರ ಮುಂಚಿತವಾಗಿ ಲಿಖಿತದಲ್ಲಿ ಮತ ಎಣಿಕೆ ಸ್ಥಳ, ಸಮಯ, ದಿನಾಂಕವನ್ನು ಅಭ್ಯರ್ಥಿಗಳು ಅಥವಾ ಮತದಾನ ಏಜೆಂಟರಿಗೆ ತಿಳಿಸಬೇಕು. ಆ ಎಣಿಕೆಯ ಕೋಣೆಯಲ್ಲಿ ಎಷ್ಟು ಎಣಿಕೆ ಟೇಬಲ್‌ಗಳನ್ನು ಹಾಕಲಾಗುವುದು ಎಂಬ ಮಾಹಿತಿಯನ್ನು ನೀಡಬೇಕು. ಇದರಿಂದಾಗಿ, ಅಭ್ಯರ್ಥಿಗಳು ಅದಕ್ಕೆ ಎಷ್ಟು ಎಣಿಕೆ ಸಹಾಯಕರು ಬೇಕಾಗುವರೋ ಅಷ್ಟನ್ನು ನಿಯೋಜಿಸಲು ಅನುಕೂಲವಾಗುತ್ತದೆ.

16.10.4. ಮತ ಎಣಿಕೆಯು ಒಂದು ಸ್ಥಳಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ನಡೆದರೆ ಆಗ ಮೇಲೆ ಹೇಳಿರುವ ಗರಿಷ್ಠ ಮಟ್ಟದ ಎಣಿಕಾ ಏಜೆಂಟರುಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಅನ್ವಯಿಸಬೇಕು.

**16.11. ಎಣಿಕಾ ಏಜೆಂಟರ ಅರ್ಹತೆಗಳು**

16.11.1. ಎಣಿಕಾ ಏಜೆಂಟರಾಗಿ ನೇಮಕಾತಿ ಹೊಂದುವ ಅಭ್ಯರ್ಥಿಗಳಿಗೆ ಯಾವುದೇ ನಿರ್ದಿಷ್ಟ ಅರ್ಹತೆಗಳನ್ನು ಕಾನೂನನಲ್ಲಿ ನಿಗದಿಪಡಿಸಿಲ್ಲ. ಆದಾಗ್ಯೂ, ಅಭ್ಯರ್ಥಿಗಳು ತಮ್ಮ ಹಿತಾಸಕ್ತಿಯನ್ನು ಕಾಯುವ ಬುದ್ಧಿವಂತ ಮತ್ತು ವಯಸ್ಕ ವ್ಯಕ್ತಿಗಳನ್ನು ನೇಮಕಾತಿ ಮಾಡಬಹುದು.

16.11.2. ಆದಾಗ್ಯೂ, ಸಚಿವರ/ ಲೋಕಸಭಾ ಸದಸ್ಯರ/ ವಿಧಾನಸಭಾ ಸಭಾ ಸದಸ್ಯರ/ವಿಧಾನ ಪರಿಷತ್ತಿನ ಸದಸ್ಯರ ಅಥವಾ ಇತರ ಯಾರೇ ಎಣಿಕಾ ವ್ಯಕ್ತಿಯ ಭದ್ರತಾ ಸಿಬ್ಬಂದಿಯಾಗಿರುವವರನ್ನು ಏಜೆಂಟರಾಗಿ ನೇಮಕ ಮಾಡತಕ್ಕದ್ದಲ್ಲ. ಹಾಗೂ ಇದರಿಂದಾಗಿ ಈ ಗಣ್ಯರ ಖಾಸಗಿ ಭದ್ರತೆಗೆ ಧಕ್ಕೆ ಉಂಟಾಗುವುದರಿಂದ ಅವರನ್ನು ಎಣಿಕಾ ಏಜೆಂಟರಾಗಿ ನೇಮಿಸುವಂತಿಲ್ಲ. ಎಣಿಕಾ ಆವರಣದೊಳಗೆ ಯಾವುದೇ ಸಂದರ್ಭದಲ್ಲೂ ಭದ್ರತಾ ಸಿಬ್ಬಂದಿಗೆ ಪ್ರವೇಶವಿಲ್ಲವಿರುವುದಿಲ್ಲ. ಹಾಗೂ ಒಬ್ಬ ಅಭ್ಯರ್ಥಿಯ ಎಣಿಕಾ ಏಜೆಂಟಾಗಿ ಕಾರ್ಯ ನಿರ್ವಹಿಸಲು ಯಾರೂ ಕೂಡ ತನ್ನ ಖಾಸಗಿ ಭದ್ರತಾ ಸಿಬ್ಬಂದಿಯನ್ನು ಬೇಡವೆಂದು ಬಿಟ್ಟುಕೊಡುವಂತಿಲ್ಲ.

16.11.3. ಸರ್ಕಾರಿ ನೌಕರನು ಅಭ್ಯರ್ಥಿಗೆ ಎಣಿಕಾ ಏಜೆಂಟ್ ಆಗಿ ಕಾರ್ಯನಿರ್ವಹಿಸುವಂತಿಲ್ಲ. ಒಂದು ಪಕ್ಷ ಹಾಗೇನಾದರೂ ಕಾರ್ಯನಿರ್ವಹಿಸಿದರೆ ಅವನನ್ನು 3 ತಿಂಗಳ ಅಥವಾ ಐದು ತಿಂಗಳ ಕಾರಾವಾಸ ಶಿಕ್ಷೆ ಅಥವಾ ಇವೆರಡೂ ರೀತಿಯ ದಂಡನೀಯ ಶಿಕ್ಷೆಗೆ ಗುರಿಪಡಿಸಲಾಗುವುದು.

**16.12. ಎಣಿಕಾ ಏಜೆಂಟ್‌ಗಳ ನೇಮಕಾತಿ**

16.12.1. ಅಭ್ಯರ್ಥಿಯಾಗಲಿ ಅಥವಾ ಅವರ ಚುನಾವಣಾ ಏಜೆಂಟನಾಗಲೀ ಎಣಿಕಾ ಏಜೆಂಟನ ನೇಮಕಾತಿಯನ್ನು ಮಾಡಬಹುದು. ಇಂಥ ನೇಮಕಾತಿಯನ್ನು ಚುನಾವಣೆ ನಡತೆ ನಿಯಮಗಳು, 1961 **(ಪರಿಶಿಷ್ಟ 31)ರ** ಜೊತೆ ಲಗತ್ತಿಸಲಾದ ನಮೂನೆ 18ರಲ್ಲಿ ಮಾಡಬೇಕು. ಆ ನಮೂನೆಯಲ್ಲಿ ಎಣಿಕಾ ಏಜೆಂಟನ ಹೆಸರು ಮತ್ತು ವಿಳಾಸವನ್ನು ಭರ್ತಿ ಮಾಡಿ ಅಭ್ಯರ್ಥಿಯಾಗಲಿ ಅಥವಾ ಅವರ ಚುನಾವಣಾ ಏಜೆಂಟಾಗಲಿ ವೈಯಕ್ತವಾಗಿ ಆ ನಮೂನೆಯ ಮೇಲೆ ಸಹಿಯನ್ನು ಮಾಡಬೇಕು. ನೇಮಕಾತಿ ಮಾಡಿದ ಸಂಕೇತವಾಗಿ ಎಣಿಕಾ ಏಜೆಂಟ್ ಕೂಡ ಆ ನಮೂನೆಯ ಮೇಲೆ ಸಹಿಯನ್ನು ಮಾಡಬೇಕು. ಎಲ್ಲಾ ಸಂದರ್ಭಗಳಲ್ಲಿಯೂ, ಏಜೆಂಟ್‌ಗಳ ಭಾವಚಿತ್ರದ ಜೊತೆಗೆ ಅಂಥ ನಮೂನೆಗಳ ಎರಡು ಪ್ರತಿಗಳನ್ನು ಸಿದ್ಧಪಡಿಸಿ, ಅವುಗಳಿಗೆ ಸಹಿ ಮಾಡುವುದು. ಒಂದು ಪ್ರತಿಯನ್ನು ನೀವಾಗಲಿ/ನಿಮ್ಮ ಚುನಾವಣಾ ಏಜೆಂಟ್ ಮೂಲಕವಾಗಲಿ ರಿಟರ್ನಿಂಗ್

ಅಧಿಕಾರಿಗೆ ಕಳುಹಿಸಬೇಕು ಹಾಗೂ ಮತ್ತೊಂದನ್ನು ರಿಟರ್ನಿಂಗ್ ಅಧಿಕಾರಿ ಅವರು ಕೇಳಿದಾಗ ತೋರಿಸಲೆಂದು ಎಣಿಕಾ ಏಜೆಂಟ್‌ಗೆ ಕೊಡಬೇಕು.

16.12.2. ನೀವು ಎಲ್ಲಾ ಚುನಾವಣಾ ಏಜೆಂಟರುಗಳ ನೇಮಕಾತಿಯನ್ನು ನಮೂನೆ–18ರಲ್ಲಿಯೇ ಮಾಡಬಹುದು. ಅಂಥ ಸಂದರ್ಭದಲ್ಲಿ, ನೇಮಕಾತಿ ಸ್ವೀಕಾರವಾದ ಸಂಕೇತವಾಗಿ ಎಲ್ಲಾ ಎಣಿಕಾ ಏಜೆಂಟರುಗಳು ಆ ನಮೂನೆದ ಮೇಲೆ ಸಹಿಯನ್ನು ಮಾಡಬೇಕು.

116.12.3. ಅಭ್ಯರ್ಥಿಯ ಸಹಿಯ ಬಗ್ಗೆ ಯಾವುದೇ ಸಂದೇಹವಿಲ್ಲದಿದ್ದರೆ, ಅವರ ನೇಮಕಾತಿ ಪತ್ರದಲ್ಲಿನ ಮಾದರಿ ಸಹಿಯನ್ನು ಸಹ ಅಂಗೀಕರಿಸಬಹುದು.

**16.13. ಎಣಿಕಾ ಏಜೆಂಟರನ್ನು ನೇಮಕ ಮಾಡಲು ಇರುವ ಕಾಲಮಿತಿ**

16.13.1. ಚುನಾವಣಾ ಆಯೋಗವು ಎಲ್ಲಾ ಮತಕ್ಷೇತ್ರಗಳಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವವರಿಗೆ ಎಣಿಕಾ ಏಜೆಂಟರ ಭಾವಚಿತ್ರಗಳನ್ನೊಳಗೊಂಡ ಪಟ್ಟಿಯನ್ನು ಎಣಿಕೆಗೆ ನಿಗದಿಪಡಿಸಿದ ದಿನಾಂಕಕ್ಕೆ ಮೂರು ದಿನ ಮುಂಚಿತವಾಗಿ, 17:00 ಗಂಟೆಯೊಳಗೆ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಲು ನಿರ್ದೇಶಿಸುತ್ತದೆ. ಅದರಂತೆ ರಿಟರ್ನಿಂಗ್ ಅಧಿಕಾರಿಯವರು ಏಜೆಂಟರುಗಳ ಗುರುತಿನ ಪತ್ರಗಳನ್ನು ಸಿದ್ಧಪಡಿಸಿ ಅವುಗಳನ್ನು ಅಭ್ಯರ್ಥಿಗೆ ನೀಡಬೇಕು.

16.13.2. ಎಣಿಕಾ ಏಜೆಂಟರು ಎಣಿಕೆಗೆ ಬಂದಾಗ ತಮಗೆ ನೀಡಿರುವ ನೇಮಕಾತಿ ಆದೇಶ ಪತ್ರ ಮತ್ತು ಗುರುತಿನ ಪತ್ರವನ್ನು ಕಡ್ಡಾಯವಾಗಿ ತೋರಿಸಬೇಕು.

16.13.3. ಎಣಿಕೆ ಏಜೆಂಟರುಗಳು ಮತಗಳ ಎಣಿಕೆಗೆ ನಿಗದಿಪಡಿಸಿದ್ದ ಸಮಯಕ್ಕಿಂತ ಒಂದು ಗಂಟೆ ಮುಂಚೆ ತಮಗೆ ನೀಡಿರುವ ನೇಮಕಾತಿ ಆದೇಶ ಪತ್ರ ಮತ್ತು ಗುರುತಿನ ಪತ್ರವನ್ನು ರಿಟರ್ನಿಂಗ್ ಅಧಿಕಾರಿ ಅವರಿಗೆ ತೋರಿಸಬೇಕು. ಮೇಲ್ಕಾಣಿಸಿದ ಸಮಯದ ನಂತರ ರಿಟರ್ನಿಂಗ್ ಅಧಿಕಾರಿ ಯಾವುದೇ ನೇಮಕಾತಿ ಪತ್ರವನ್ನು ಅಂಗೀಕರಿಸುವಂತಿಲ್ಲ.

**16.14. ಎಣಿಕಾ ಏಜೆಂಟರ ನೇಮಕಾತಿಯನ್ನು ಹಿಂಪಡೆಯುವಿಕೆ.**

16.14.1. ಅಭ್ಯರ್ಥಿಯಾಗಲಿ ಅಥವಾ ಅವರ ಚುನಾವಣಾ ಏಜೆಂಟಾಗಲಿ, ಎಣಿಕಾ ಏಜೆಂಟರ ನೇಮಕಾತಿಯನ್ನು ಹಿಂಪಡೆಯುವಿಕೆಗೆ ಅರ್ಹರಾಗಿರುತ್ತೀರಿ.

16.14.2. ಇಂತಹ ನೇಮಕಾತಿ ಹಿಂಪಡೆಯುವಿಕೆಯನ್ನು ಚುನಾವಣೆ ನಡತೆ ನಿಯಮಗಳು, 1961 **(ಪರಿಶಿಷ್ಟ 32)** ನಮೂನೆ 19ರಲ್ಲಿ ಮಾಡಬಹುದು. ಈ ಹಿಂಪಡೆಯುವಿಕೆಯ ಬಗ್ಗೆ ಅಭ್ಯರ್ಥಿಯು ರಿಟರ್ನಿಂಗ್ ಅಧಿಕಾರಿಗೆ ಮನವಿ ಸಲ್ಲಿಸಿದ ಸಮಯದಿಂದ ಅದು ಚಾಲನೆಗೆ ಬರುತ್ತದೆ. ಇಂತಹ

ಸಂದರ್ಭಗಳಲ್ಲಿ, ಹಿಂಪಡೆದ ಎಣಿಕಾ ಏಜೆಂಟ್‌ನ ಜಾಗಕ್ಕೆ ಮತ್ತೊಬ್ಬ ಏಜೆಂಟ್‌ನನ್ನು ಎಣಿಕೆಯು ಪ್ರಾರಂಭವಾಗುವ ಮುನ್ನ ನೇಮಕಾತಿ ಮಾಡುವ ಅಧಿಕಾರ ಅವರಿಗಿರುತ್ತದೆ. ಒಮ್ಮೆ ಎಣಿಕೆಯು ಪ್ರಾರಂಭವಾದ ನಂತರ ಏಜೆಂಟರ ಯಾವುದೇ ಹೊಸ ನೇಮಕಾತಿಯನ್ನು ಮಾಡುವಂತಿಲ್ಲ.

16.14.3. ಈ ರೀತಿಯಲ್ಲಿ ಹೊಸ ಎಣಿಕಾ ಏಜೆಂಟ್‌ನ ನೇಮಕಾತಿಯನ್ನು ಈ ಮೇಲ್ಕಂಡ ಪ್ಯಾರಾ 8ರಲ್ಲಿ ವಿವರಿಸಿರುವ ವಿಧಾನದಲ್ಲಿ ಮಾಡಬೇಕು.

**16.15. ಎಣಿಕಾ ಕೊಠಡಿಯೊಳಗೆ ಎಣಿಕಾ ಏಜೆಂಟರ ಪ್ರವೇಶ**

16.15.1. ಎಣಿಕಾ ಏಜೆಂಟರು ತಮ್ಮ ನೇಮಕಾತಿ ಪತ್ರ ಹಾಗೂ ಗುರುತಿನ ಪತ್ರವನ್ನು ರಿಟರ್ನಿಂಗ್ ಅಧಿಕಾರಿ ಮುಂದೆ ಹಾಜರುಪಡಿಸಿದ ನಂತರ, ಎಣಿಕಾ ಏಜೆಂಟರು ಮತದಾನದ ಗೋಪ್ಯತೆಯನ್ನು ಕಾಪಾಡಿಕೊಂಡು ಬರುವ ಬಗ್ಗೆ ತಮ್ಮ ನೇಮಕಾತಿ ಪತ್ರದಲ್ಲಿರುವ ಘೋಷಣೆಗೆ ರಿಟರ್ನಿಂಗ್ ಅಧಿಕಾರಿಯವರ ಮುಂದೆ ಸಹಿ ಮಾಡಬೇಕಾಗುತ್ತದೆ. ನೇಮಕಾತಿ ಪತ್ರ, ಗುರುತಿನ ಪತ್ರ ಹಾಗೂ ಘೋಷಣೆಯನ್ನೆಲ್ಲಾ ಪರಿಶೀಲಿಸಿದ ನಂತರ ರಿಟರ್ನಿಂಗ್ ಅಧಿಕಾರಿ ಅವರು ಎಣಿಕಾ ಏಜೆಂಟರಿಗೆ ಎಣಿಕೆ ಕೊಠಡಿಗೆ ಹೋಗಲು ಅನುಮತಿ ನೀಡಬೇಕು.

16.15.2. ರಿಟರ್ನಿಂಗ್ ಅಧಿಕಾರಿ ಅವರು ಯಾರೇ ಎಣಿಕಾ ಏಜೆಂಟನನ್ನು ಎಣಿಕಾ ಕೊಠಡಿಯೊಳಗೆ ಪ್ರವೇಶಿಸುವುದಕ್ಕಿಂತ ಮುಂಚಿತವಾಗಿ ಶೋಧಿಸುವ ಅಧಿಕಾರವನ್ನು ಹೊಂದಿರುತ್ತಾರೆ.

**16.16. ಎಣಿಕಾ ಏಜೆಂಟರುಗಳಿಗೆ ಬ್ಯಾಡ್ಜುಗಳು**

16.16.1. ಪ್ರತಿಯೊಬ್ಬ ಎಣಿಕಾ ಏಜೆಂಟನಿಗೆ ರಿಟರ್ನಿಂಗ್ ಅಧಿಕಾರಿ ಅವರು ಒಂದು ಬ್ಯಾಡ್ಜನ್ನು ನೀಡಬೇಕಾಗಿದ್ದು, ಅದರಲ್ಲಿ ಅವನು ಯಾವ ಅಭ್ಯರ್ಥಿಯ ಪರವಾಗಿ ಏಜೆಂಟಾಗಿದ್ದಾನೆ ಹಾಗೂ ಯಾವ ಕ್ರಮ ಸಂಖ್ಯೆಯ ಟೇಬಲ್ಲಿನಲ್ಲಿ ನಡೆಯುವ ಎಣಿಕೆಯನ್ನು ವೀಕ್ಷಿಸಬೇಕೆಂಬುದನ್ನು ಬರೆದಿರಬೇಕು. ಅವನು ತನಗೆ ಸೂಚಿಸಲಾದ ಟೇಬಲ್‌ನಲ್ಲಿ ಮಾತ್ರವೇ ಕುಳಿತುಕೊಂಡಿರಬೇಕು. ಇಡೀ ಕೋಣೆಯಲ್ಲಿ ಎಲ್ಲೆಂದರಲ್ಲಿ ಓಡಾಡುವಂತಿಲ್ಲ. ಆದಾಗ್ಯೂ, ನೀವು, ನಿಮ್ಮ ಚುನಾವಣಾ ಏಜೆಂಟ್ ಮತ್ತು ಇವರುಗಳ ಅನುಪಸ್ಥಿತಿಯಲ್ಲಿ, ರಿಟರ್ನಿಂಗ್ ಅಧಿಕಾರಿ ಟೇಬಲ್ ಬಳಿ ಕುಳಿತಿರುವ ನಿಮ್ಮ ಪೋಲಿಂಗ್ ಏಜೆಂಟ್‌ನು ಎಲ್ಲಾ ಎಣಿಕಾ ಟೇಬಲ್‌ಗಳ ಬಳಿ ಹೋಗಲು ಅನುಮತಿ ಇರುತ್ತದೆ.

**16.17. ಎಣಿಕಾ ಕೊಠಡಿಯೊಳಗೆ ಶಿಸ್ತು ಮತ್ತು ಸಂಯಮತೆಯನ್ನು ಕಾಪಾಡಿಕೊಳ್ಳುವುದು.**

16.17.1. ಎಣಿಕಾ ಕೊಠಡಿಯೊಳಗೆ ಕಟ್ಟುನಿಟ್ಟಾಗಿ ಶಿಸ್ತು ಮತ್ತು ಸಂಯಮತೆಯನ್ನು ಕಾಪಾಡಲು ಪ್ರತಿಯೊಬ್ಬರು ರಿಟರ್ನಿಂಗ್ ಅಧಿಕಾರಿಗೆ ಸಂಪೂರ್ಣ ಸಹಕಾರ ನೀಡಬೇಕು ಹಾಗೂ ಅವರೆಲ್ಲರೂ ರಿಟರ್ನಿಂಗ್ ಅಧಿಕಾರಿ ನೀಡುವ ಸೂಚನೆಗಳನ್ನೆಲ್ಲಾ ಪಾಲಿಸಬೇಕು. ಯಾವ ವ್ಯಕ್ತಿಯು ರಿಟರ್ನಿಂಗ್ ಅಧಿಕಾರಿಯ ಸೂಚನೆಗಳನ್ನು ಪಾಲಿಸುವುದಿಲ್ಲವೋ ಅಂತಹವನನ್ನು ಎಣಿಕಾ ಕೋಣೆಯಿಂದ ಹೊರ ಹಾಕಲಾಗುವುದು ಎಂಬ ಅಂಶವನ್ನು ಮನಗಾಣಬೇಕು.

16.17.2. ಎಣಿಕಾ ಪ್ರಕ್ರಿಯೆಯು ನಡೆಯುತ್ತಿರುವ ವೇಳೆಯಲ್ಲಿ ಎಣಿಕಾ ಕೊಠಡಿಯಿಂದ ಯಾವ ಎಣಿಕಾ ಏಜೆಂಟ್‌ನನ್ನು ಮತ್ತು ಇತರರನ್ನು ಹೊರಗೆ ಕಳುಹಿಸಲಾಗುವುದಿಲ್ಲ. ಇನ್ನೊಂದು ಅರ್ಥದಲ್ಲಿ, ಎಣಿಕಾ ಏಜೆಂಟರು ಮತ್ತು ಇತರರು ಎಣಿಕಾ ಪ್ರಕ್ರಿಯೆ ವೇಳೆಯಲ್ಲಿ ಎಣಿಕಾ ಕೊಠಡಿಯಲ್ಲಿದ್ದಾಗ, ಅವರುಗಳು ಫಲಿತಾಂಶವು ಘೋಷಣೆಯಾಗುವವರೆಗೆ ಹೊರ ಹೋಗುವಂತಿಲ್ಲ.

16.17.3. ಎಣಿಕಾ ಕೊಠಡಿಯ ಪಕ್ಕದಲ್ಲೆಯೇ ಕುಡಿಯುವ ನೀರು, ಶೌಚಾಲಯ, ಉಪಾಹಾರ– ಇತರೆ ಸೌಲಭ್ಯಗಳನ್ನು ಒದಗಿಸಬೇಕು.

16.17.4. ಎಣಿಕೆ ಕೊಠಡಿಯೊಳಗೆ ಮೊಬೈಲ್ ಪೋನ್‌ಗಳನ್ನು ತೆಗೆದುಕೊಂಡು ಹೋಗಲು ಎಣಿಕಾ ಏಜೆಂಟ್‌ರುಗಳಿಗೆ ಅನುಮತಿ ಇರುವುದಿಲ್ಲ. ಆಯೋಗದ ವೀಕ್ಷಕರುಗಳಿಗೆ ಮೊಬೈಲ್ ಪೋನ್‌ಗಳನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗಿದೆ ಆದರೆ ಅವರು ತಮ್ಮ ಮೊಬೈಲ್‌ನ್ನು ಸೈಲೆಂಟ್ ಮೊಡ್‌ನಲ್ಲಿ ಇಡಬೇಕು.

**16.18. ಎಣಿಕಾ ಆವರಣದಲ್ಲಿ ಮತ್ತು ಎಣಿಕಾ ಕೊಠಡಿಯಲ್ಲಿ ಧೂಮಪಾನ ನಿಷೇಧ.**

16.18.1. ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳು (ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಪೂರೈಕೆ ಮತ್ತು ಸರಬರಾಜುಗಳ ಜಾಹೀರಾತು ಮತ್ತು ನಿಯಂತ್ರಣ ನಿಷೇಧ) ಅಧಿನಿಯಮ, 2003ರ ಪ್ರಕರಣ 4 (2003ರ ಸಂಖ್ಯೆ 34)ರಲ್ಲಿ ತಿಳಿಸಿರುವ "ಯಾವುದೇ ಸಾರ್ವಜನಿಕ ಸ್ಥಳ" ಗಳಲ್ಲಿ ಧೂಮಪಾನವನ್ನು ನಿಷೇಧಿಸಿದೆ ಎಂಬ ಅಂಶದ ಕಡೆಗೆ ಅಭ್ಯರ್ಥಿಯ ಗಮನ ಸೆಳೆಯಲಾಗಿದೆ. ಆದ್ದರಿಂದ, ಚುನಾವಣಾ ಆಯೋಗವು ಯಾವ ವ್ಯಕ್ತಿಯೂ ಕೂಡ ಎಣಿಕೆ ಕೊಠಡಿ ಮತ್ತು ಎಣಿಕಾ ಆವರಣದಲ್ಲಿ ಧೂಮಪಾನವನ್ನು ಮಾಡುವಂತಿಲ್ಲವೆಂದು ನಿರ್ದೇಶಿಸುತ್ತದೆ.

**16.19. ಎಣಿಕಾ ಏಜೆಂಟರುಗಳಿಗೆ ಆಸನದ ವ್ಯವಸ್ಥೆ**

16.19.1. ಎಣಿಕೆಯನ್ನು ಸಾಲಾಗಿ ಜೋಡಿಸಿರುವ ಟೇಬಲ್‌ಗಳಲ್ಲಿ ನಡೆಸಬೇಕು. ಪ್ರತಿ ಸಾಲಿನಲ್ಲಿರುವ ಟೇಬಲ್‌ಗಳಿಗೆ ಕ್ರಮ ಸಂಖ್ಯೆಗಳನ್ನು ನೀಡಬೇಕು.

16.19.2. ಪ್ರತಿಯೊಂದು ಎಣಿಕಾ ಟೇಬಲ್‌ನ ಮಧ್ಯಭಾಗದಲ್ಲಿ ಮತಯಂತ್ರದ ಕಂಟ್ರೋಲ್ ಯೂನಿಟ್‌ನ್ನು ಇಟ್ಟಿರಬೇಕು. ಟೇಬಲ್‌ನ ಒಂದು ಕಡೆಗೆ ಒಬ್ಬ ಎಣಿಕಾ ಮೇಲ್ವಿಚಾರಕರು ಮತ್ತು ಒಬ್ಬ ಎಣಿಕಾ ಸಹಾಯಕರು ಕುಳಿತಿರಬೇಕು. ಎಣಿಕಾ ಏಜೆಂಟರುಗಳು ಟೇಬಲ್‌ನ ಮುಂಭಾಗದಲ್ಲಿ, ಕಂಟ್ರೋಲ್ ಯೂನಿಟ್‌ಗೆ ಅಭಿಮುಖವಾಗಿ ಎಣಿಕಾ ಮೇಲ್ವಿಚಾರಕರು ಕಂಟ್ರೋಲ್ ಯೂನಿಟ್‌ನ ಮೇಲೆ ಜರುಗಿಸುವ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ವೀಕ್ಷಿಸುವ ಹಾಗೆ ಕುಳಿತಿರಬಹುದು.

16.19.3. ಪ್ರತಿಯೊಂದು ಎಣಿಕಾ ಟೇಬಲ್‌ನ ಮೇಲೆ ಈ ಕೆಳಕಂಡ ಆದ್ಯತೆಯ ಮೇರೆಗೆ ಎಣಿಕಾ ಏಜೆಂಟರುಗಳು ಕುಳಿತುಕೊಳ್ಳಲು ಆಸನದ ವ್ಯವಸ್ಥೆಯನ್ನು ಮಾಡಬೇಕು,– ಎಂದರೆ:–

i. ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು;

ii. ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು;

iii. ಮಾನ್ಯತೆ ಪಡೆದ ಹೊರ ರಾಜ್ಯದ ಪಕ್ಷಗಳ ಅಂದರೆ ಯಾವ ಪಕ್ಷಗಳಿಗೆ ತಮ್ಮ ಮೀಸಲು ಚಿಹ್ನೆಗಳನ್ನು ಮತಕ್ಷೇತ್ರಗಳಲ್ಲಿ ಬಳಸಲು ಅನುಮತಿಸಿದೆಯೋ ಅವುಗಳ ಅಭ್ಯರ್ಥಿಗಳು;

iv. ನೋಂದಾಯಿತವಾದ – ನೋಂದಾಯಿತವಾಗದ ಪಕ್ಷಗಳ ಅಭ್ಯರ್ಥಿಗಳು;

v. ಸ್ವತಂತ್ರ ಅಭ್ಯರ್ಥಿಗಳು.

**16.20. ಎಣಿಕಾ ಕೊಠಡಿಗಳ ಮತ್ತು ಅವುಗಳ ಭದ್ರತೆಯ ನಿರ್ವಹಣೆ**

16.20.1. ಎಣಿಕಾ ಕೇಂದ್ರ ಎಂದರೆ, ಮತಗಳ ಎಣಿಕೆಯನ್ನು ಮಾಡಲು ಇರುವ ಒಂದು ಸ್ಥಳ ಅಥವಾ ಒಂದಕ್ಕಿಂತ ಹೆಚ್ಚು ಎಣಿಕಾ ಕೋಣೆಗಳು ಎಂದರ್ಥ.

16.20.2. ಎಣಿಕಾ ಕೊಠಡಿ ಎಂದರೆ ಪ್ರತ್ಯೇಕ ಆಗಮನ ಮತ್ತು ನಿರ್ಗಮನ ಸೌಲಭ್ಯಗಳನ್ನು ಒಳಗೊಂಡ ಸುಸಜ್ಜಿತವಾದ ಕಟ್ಟಡ ಎಂದರ್ಥ.

16.20.3. ಮತಗಳ ಎಣಿಕೆಗಾಗಿ ಪೂರ್ವ ನಿರ್ಮಿತವಾದ ಕಟ್ಟಡದಲ್ಲಿ ಬೇರೆ ಬೇರೆ ಕೋಣೆಗಳ ಲಭ್ಯತೆಯಿಲ್ಲದಿದ್ದರೆ, ಬೇರೆ ಕೊಠಡಿಗಳನ್ನು ಸೃಜಿಸಲು ದೊಡ್ಡ ಕೊಠಡಿಗಳನ್ನು ತಾತ್ಕಾಲಿಕ ಡೇರೆಗಳಿಂದ ಬೇರ್ಪಡಿಸಿ ನಿರ್ಮಿಸಬಹುದು. ಈ ವಿಭಾಗಗಳನ್ನು ಬಲಿಷ್ಠವಾದ ಸಿಜಿಐ ಶೀಟುಗಳಿಂದ ಮಾತ್ರ ನಿರ್ಮಾಣ ಮಾಡಬೇಕು. ಕಟ್ಟಡದ ಮಾಲೀಕರು ಕಟ್ಟಡದಲ್ಲಿ ರಂಧ್ರವನ್ನು

ಮಾಡಲು ಅನುಮತಿ ನೀಡದೇ ತಕರಾರು ಮಾಡಿದರೆ, ಎರಡೂ ಬದಿಯಲ್ಲಿಯೂ ಕಠಿಣವಾದ ಚೌಕಟ್ಟು ನಿರ್ಮಾಣ ಮಾಡಿ, ಸಿಜಿಐ ಶೀಟ್‌ಗಳನ್ನು ಅಳವಡಿಸಬೇಕು. ಕೊಠಡಿಯನ್ನೆಲ್ಲಾ ಕರಾರುವಕ್ಕಾಗಿ ವಿಭಜಿಸಿದ ನಂತರ ಪ್ರತಿಯೊಂದು ಕೋಣೆಯು ಸ್ವತಂತ್ರವಾದ ಕೋಣೆಯಾಗಿ, ನಾಲ್ಕು ಕಡೆ ಗೋಡೆಯುಳ್ಳ ಸುಸಜ್ಜಿತವಾದ ಕಟ್ಟಡವಾಗಿರಬೇಕು. ವಿಭಜನೆಯಾದ ನಂತರ ಆ ಕೋಣೆಯಿಂದ ಯಾರೂ ಹೊರಬಾರದಂತಿರಬೇಕು ಮತ್ತು ಯಾವ ಸಾಮಗ್ರಿಯೂ ಕೂಡ ಹೊರ ಹೋಗುವಂತಿರಬಾರದು. ಆ ವಿಭಜಕಗಳ ಎರಡೂ ಬದಿಗಳಲ್ಲಿ ಯಾವುದೇ ಅಡಚಣೆ ಉಂಟಾಗದಂತೆ ನೋಡಿಕೊಳ್ಳಲು ಕಾವಲುಗಾರರನ್ನು ನೇಮಿಸಬೇಕು.

16.2.4. ಪ್ರತಿ ಎಣಿಕಾ ಕೇಂದ್ರಕ್ಕೂ ವಿಶಿಷ್ಟವಾದ ಸಂಖ್ಯೆ ನೀಡಬೇಕು ಮತ್ತು ಪ್ರತಿ ಎಣಿಕಾ ಕೊಠಡಿಯ ಪ್ರತಿ ಕೇಂದ್ರಕ್ಕೂ ವಿಶಿಷ್ಟವಾದ ಸಂಖ್ಯೆ ನೀಡಬೇಕು.

16.20.5. ಮೇಲೆ ವಿವರಿಸಿರುವಂತೆ, ಪ್ರತಿ ಕೊಠಡಿಯನ್ನು ಒಂದು ಬಾರಿ ಮಾತ್ರ ಒಂದು ವಿಧಾನಸಭಾ ಕ್ಷೇತ್ರದ ಮತ ಎಣಿಕೆಗೆ ಬಳಸಿಕೊಳ್ಳಬೇಕು. ಒಂದು ವಿಧಾನಸಭಾ ಕ್ಷೇತ್ರದ ಮತ ಎಣಿಕೆಯನ್ನು ಹೆಚ್ಚೆಂದರೆ ಎರಡು ಕೊಠಡಿಗಳಲ್ಲಿ ನಡೆಸಬಹುದು. ಒಂದು ಕೋಣೆಯಲ್ಲಿ 8 ಟೇಬಲ್‌ಗಳನ್ನು (ಆರ್‌ಒ/ಎಆರ್‌ಒ ಟೇಬಲ್‌ಗಳನ್ನು ಒಳಗೊಂಡಂತೆ) ಹಾಕುವಷ್ಟು ಸ್ಥಳಾವಕಾಶ ಇಲ್ಲದಿದ್ದರೆ ಎರಡು ಕೋಣೆಗಳನ್ನು ಬಳಸಿಕೊಳ್ಳಬಹುದು. ಕೆಲವು ಪ್ರಕರಣಗಳಲ್ಲಿ ಒಂದು ಮತಕ್ಷೇತ್ರದ ಮತದಾರರ ಸಂಖ್ಯೆ ಹೆಚ್ಚಾಗಿದ್ದು, 15 ಟೇಬಲ್‌ಗಳನ್ನು ಹಾಕಬೇಕಾದಾಗ ಎರಡು ಕೋಣೆಗಳನ್ನು ಉಪಯೋಗಿಸಿಕೊಳ್ಳಬಹುದು. ಇಂಥ ಎಲ್ಲಾ ಪ್ರಕರಣಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ, ಎಣಿಕಾ ಏಜೆಂಟರುಗಳ ಸಂಖ್ಯೆ, ಇತ್ಯಾದಿ ಎಲ್ಲಾ ಯುಕ್ತ ಅಂಶಗಳನ್ನು ಜಿಲ್ಲಾ ಚುನಾವಣಾ ಅಧಿಕಾರಿ ಹಾಗೂ ವೀಕ್ಷಕರುಗಳು ವೈಯಕ್ತಿಕವಾಗಿ ಪರಿಶೀಲಿಸಬೇಕು.

**ಎಣಿಕಾ ಟೇಬಲ್‌ಗಳಿಗೆ ತಡೆಗಟ್ಟುಗಳ ವ್ಯವಸ್ಥೆ ಕಲ್ಪಿಸುವುದು**

16.20.6. ಎಣಿಕಾ ಏಜೆಂಟ್‌ಗಳು ಮತಯಂತ್ರಗಳನ್ನು ಕೊಂಡ್ಯೊಯುವುದನ್ನು ತಡೆಗಟ್ಟುವ ಹಾಗೆ ಪ್ರತಿ ಎಣಿಕಾ ಕೊಠಡಿಯಲ್ಲಿ ಪ್ರತಿ ಎಣಿಕಾ ಟೇಬಲ್‌ಗೂ ತಡೆಗಟ್ಟು ವ್ಯವಸ್ಥೆಯನ್ನು ಕಲ್ಪಿಸಬೇಕು. ಆದಾಗ್ಯೂ, ಎಣಿಕಾ ಟೇಬಲ್‌ನಲ್ಲಿ ನಡೆಯುವ ಸಂಪೂರ್ಣ ಮತ ಎಣಿಕೆ ಕಾರ್ಯವನ್ನು ವೀಕ್ಷಿಸಲು ಎಣಿಕಾ ಏಜೆಂಟರುಗಳಿಗೆ ಎಲ್ಲ ಕನಿಷ್ಠ ಸೌಲಭ್ಯಗಳನ್ನು ಒದಗಿಸಬೇಕು. ರಿಟರ್ನಿಂಗ್ ಅಧಿಕಾರಿ ಅವರು ತಡೆಗಟ್ಟುಗಳು ಪಾರದರ್ಶಕವಾಗಿರುವಂತೆ ಅಥವಾ ಎರಡರ ನಡುವೆ ಇರುವ ಜಾಗ ಅಥವಾ ಬಿದಿರು ಬೊಂಬುಗಳ ಮೇಲೆ ಅಥವಾ ತಡೆಗಟ್ಟುಗಳ ನಿರ್ಮಾಣದಲ್ಲಿ ಬಳಸಿರುವ ಇತರೇ ಸಾಮಗ್ರಿಗಳು ಎಣಿಕಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ವೀಕ್ಷಿಸಲು ಸೂಕ್ತ ಸೌಲಭ್ಯ

ಕಲ್ಪಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು. ತಡೆಗಟ್ಟುಗಳ ನಿರ್ಮಾಣವು ಯಾವ ವಿಧಾನದಲ್ಲಿರಬೇಕು ಎಂಬುದನ್ನು ಹಾಗೂ ಅವುಗಳನ್ನು ಅಳವಡಿಸುವ ವಿಧಾನವು ಯಾವುದೇ ಅನಧಿಕೃತ ವ್ಯಕ್ತಿಯು ಮತಯಂತ್ರಗಳನ್ನು ಕೊಂಡ್ಯೊಯ್ಯಲಾಗದಂತೆ ಅಥವಾ ಎಣಿಕಾ ವಿಧಾನದಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ಮಾಡದಂತೆ ನಿರ್ಮಿಸುವುದನ್ನು ರಿಟರ್ನಿಂಗ್ ಅಧಿಕಾರಿ ಅವರ ವಿವೇಚನೆಯಂತೆ ಮಾಡಬಹುದು.

16.20.7. ಒಂದು ವಿಧಾನಸಭಾ ಮತಕ್ಷೇತ್ರದ ಮತ ಎಣಿಕೆಗಾಗಿ ಎರಡು ಕೊಠಡಿಗಳನ್ನು ಬಳಸಿಕೊಳ್ಳುವಂತಹ ಸಂದರ್ಭದಲ್ಲಿ, ಎರಡು ಕೊಠಡಿಗಳಿಗೂ (ಪ್ರತಿ ಕೋಣೆಯನ್ನು ಅದು ಬೇರೆ ಕೊಠಡಿಯೆಂದು ಪರಿಗಣಿಸಿ) ಈ ಮುಂಚೆಯೇ ಮತಗಟ್ಟೆಯ ಸಂಖ್ಯೆಗಳನ್ನು ನೀಡಬೇಕು.

16.20.8. ವಿಧಾನಸಭಾ ಮತಕ್ಷೇತ್ರಗಳ ವಿಭಾಗಗಳನ್ನು ಆ ಕೊಠಡಿಗಳಿಗೆ ಪೂರ್ವಭಾವಿಯಾಗಿ ಹಂಚಿಕೆ ಮಾಡಬೇಕು ಹಾಗೂ ಈ ಆಯ್ಕೆಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಮುಂಚಿತವಾಗಿ ತಿಳಿಸಬೇಕು.

16.20.9. ಒಂದು ಲೋಕಸಭಾ ಕ್ಷೇತ್ರದಲ್ಲಿ ವಿಧಾನಸಭಾ ಮತಕ್ಷೇತ್ರಗಳ ವಿಭಾಗಗಳಿಗಿಂತ, ಒಟ್ಟು ಕೊಠಡಿಗಳ ಸಂಖ್ಯೆ ಕಡಿಮೆಯಿದ್ದರೆ, ಎಣಿಕೆಯ ಕ್ರಮಾಂಕವು ಎ.ಸಿ ಸಂಖ್ಯೆಗಳ ಏರಿಕೆ ಕ್ರಮದಲ್ಲಿರಬೇಕು. ಆದ್ದರಿಂದ, ಒಂದು ಪಿ.ಸಿ ಯಲ್ಲಿ ಏಳು ಎ.ಸಿ ವಿಭಾಗಗಳಿದ್ದು, ಕೇವಲ ಮೂರು ಕೋಣೆಗಳಿದ್ದರೆ, ಲಭ್ಯವಿರುವ ಮೂರು ಕೋಣೆಗಳಲ್ಲಿ ಕೆಳ ಕ್ರಮಾಂಕದ ಮೂರು ಕ್ರಮಸಂಖ್ಯೆಗಳುಳ್ಳ ವಿಭಾಗಗಳನ್ನು ಎಣಿಕೆಗೆ ತೆಗೆದುಕೊಳ್ಳಬೇಕು. ಒಂದು ವಿಧಾನಸಭಾ ಮತಕ್ಷೇತ್ರದ ಒಂದು ಕೋಣೆಯಲ್ಲಿನ ಎಣಿಕೆಯು ಮುಕ್ತಾಯವಾದ ತಕ್ಷಣ ಮತ್ತು ಆ ಕೋಣೆಯನ್ನೆಲ್ಲಾ ತೆರವುಗೊಳಿಸಿದ ನಂತರ, ಆ ಸ್ಥಳದಲ್ಲಿಯೇ ಪೂರ್ವಯೋಜಿತವಾಗಿ ನಿಯೋಜನೆ ಮಾಡಿರುವ ನಂತರದ ಎ.ಸಿ.ಯ ಮತ ಎಣಿಕೆಯನ್ನು ಪ್ರಾರಂಭಿಸಬಹುದು.

16.20.10. ಯಾವುದೇ ಪರಿಸ್ಥಿತಿಗಳಲ್ಲಿಯೂ, ಒಂದೇ ಕೊಠಡಿಯೊಳಗೆ, ಒಂದಕ್ಕಿಂತ ಹೆಚ್ಚಿನ ಎಸಿ ವಿಭಾಗಗಳಿಗೆ ಸಂಬಂಧಪಟ್ಟ ಎಣಿಕೆಯನ್ನು ಏಕಕಾಲಕ್ಕೆ ನಡೆಸುವಂತಿಲ್ಲ. ಯಾವುದೇ ಪರಿಸ್ಥಿತಿಯಲ್ಲಿಯೂ ಹಾಗೂ ಯಾವುದೇ ಸಮಯದಲ್ಲಿಯೂ ಒಂದು ಕೊಠಡಿಯೊಳಗೆ ಎಣಿಕೆಗಾಗಿ ಒಂದಕ್ಕಿಂತ ಹೆಚ್ಚು ಮತಯಂತ್ರಗಳು (ಅಥವಾ ಮತಪತ್ರಗಳು) ಭೌತಿಕವಾಗಿ ಲಭ್ಯವಿರುವಂತಿರಬಾರದು.

16.20.11. ಆಯೋಗವು ಒಂದು ಕೊಠಡಿಯಲ್ಲಿ ಎಷ್ಟು ಎಣಿಕಾ ಟೇಬಲ್‌ಗಳನ್ನು ಹಾಕಬೇಕೆಂದು ಈಗಾಗಲೇ ನಿರ್ಧರಿಸಿರುತ್ತದೆ. ಒಂದು ಕೊಠಡಿಯಲ್ಲಿ ಎಷ್ಟು ಟೇಬಲ್‌ಗಳನ್ನು ಹಾಕಬೇಕೆಂಬುದು ಮತಗಟ್ಟೆಗಳ ಸಂಖ್ಯೆಗಳು, ಕೊಠಡಿಯ ವಿಸ್ತೀರ್ಣ, ಎಣಿಕಾ ಏಜೆಂಟ್‌ಗಳ ಸಂಖ್ಯೆ, ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ನಿಯೋಜನೆಗೊಂಡ ಮತ ಎಣಿಕೆಯ ಸಿಬ್ಬಂದಿಯ ಒಟ್ಟು ಸಂಖ್ಯೆ ಹಾಗೂ ಭದ್ರತಾ ಅಂಶಗಳನ್ನು ಒಳಗೊಂಡ ಮುಖ್ಯ ಅಂಶಗಳಿಂದ ನಿರ್ಧರಿತವಾಗಿರುತ್ತದೆ.

16.20.12. ಒಂದು ಎಣಿಕಾ ಕೊಠಡಿಯಲ್ಲಿ ಯಾವುದೇ ಪರಿಸ್ಥಿತಿಗಳಲ್ಲಿಯೂ, 15 ಟೇಬಲ್‌ಗಳ ಗರಿಷ್ಠ ಮಿತಿಯನ್ನು (ರಿಟರ್ನಿಂಗ್ ಅಧಿಕಾರಿಯ ಟೇಬಲ್‌ನ್ನೂ ಒಳಗೊಂಡಂತೆ) ಹೆಚ್ಚಳ ಮಾಡುವಂತಿಲ್ಲ. ಇತರೆ ಎಲ್ಲಾ ಸೂಕ್ತ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕನಿಷ್ಠಮಿತಿಯನ್ನು ನಿಗದಿಪಡಿಸಬಹುದು.

16.20.13. ಆಯೋಗದ ವೀಕ್ಷಕರುಗಳು ಎಣಿಕಾ ಕೇಂದ್ರಗಳಿಗೆ ತಮ್ಮ ಭೇಟಿಯ ಸಂದರ್ಭದಲ್ಲಿ ಮೇಲೆ ಹೇಳಿರುವ ಸೂಚನೆಗಳಂತೆ ಎಣಿಕಾ ಕೊಠಡಿಗಳನ್ನೆಲ್ಲಾ ವ್ಯವಸ್ಥಿತವಾಗಿ ಯೋಜಿಸಲಾಗಿದೆಯೆ ಹಾಗೂ ವಿಧಾನಸಭಾ ಮತಕ್ಷೇತ್ರಗಳ ವಿಭಾಗಗಳಿಗೆ ಪೂರ್ವಭಾವಿಯಾಗಿ ಪ್ರತಿಯೊಂದು ಕೊಠಡಿಯನ್ನು ನಿಯೋಜಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅವರುಗಳು ಪ್ರತಿಯೊಂದು ಎಣಿಕಾ ಕೇಂದ್ರಗಳ ಚಿತ್ರಣಗಳನ್ನು ತಮ್ಮ ಅಂತಿಮ ವರದಿ ನೀಡುವಿಕೆಯ ಭಾಗವಾಗಿ ಇಟ್ಟುಕೊಳ್ಳಬೇಕು.

16.20.14. ಯೋಜಿತ ರೂಪದಲ್ಲಿ ವಿಭಾಗ ಮಾಡಿದ ಕೊಠಡಿಗಳೂ ಸೇರಿದಂತೆ ಎಣಿಕಾ ಕೊಠಡಿಗಳನ್ನು ಎಣಿಕೆಗೆ ನಿಗದಿಪಡಿಸಿದ್ದ ದಿನಾಂಕಕ್ಕೆ ಮೂರು ದಿನ ಮುಂಚಿತವಾಗಿ ಸರಿಯಾಗಿ ವ್ಯವಸ್ಥೆ ಮಾಡಬೇಕು. ಈ ಕೊಠಡಿಗಳು ಭದ್ರತಾ ಕೋಣೆಯಿಂದ ಹೊರತೆಗೆದ ಮತ ಚಲಾವಣೆಗೊಂಡ ಮತಯಂತ್ರಗಳು ಹಾಗೂ ಇತರೆ ಕಾಗದಪತ್ರಗಳ ಸುಗಮ ರೀತಿಯ ಚಲನವಲನಕ್ಕೆ ಮತ್ತು ಅಧಿಕಾರೇತರರಿಗೆ ಹಾಗೂ ಮಾಧ್ಯಮದವರಿಗೆ ಅಡ್ಡಿ ಆಗದಂಥ ಸ್ಥಳದಲ್ಲಿರಬೇಕು.

16.20.15. ಎಣಿಕಾ ಕೇಂದ್ರಗಳಿಗೆ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ತಡೆಗಟ್ಟಲು ಎಲ್ಲಾ ಎಣಿಕಾ ಕೇಂದ್ರಗಳಿಗೆ ಮೂರು ಸುತ್ತಿನ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಬೇಕು. ಸರಿಯಾಗಿ ದೃಢೀಕೃತಗೊಂಡಿಲ್ಲದ ಭಾವಚಿತ್ರವಿರುವ ಗುರುತಿನ ಪತ್ರವಿಲ್ಲದ ಎಣಿಕಾ ಏಜೆಂಟನನ್ನು ಮೊದಲನೇ ಸುತ್ತಿನ ಭದ್ರತಾ ವ್ಯವಸ್ಥೆಯನ್ನು ದಾಟಿಹೋಗಲು ಅವಕಾಶ ನೀಡತಕ್ಕದ್ದಲ್ಲ. ಅದೇ ರೀತಿ, ಎಲ್ಲಾ ಅಭ್ಯರ್ಥಿಗಳುಗಳನ್ನು, ಅವರ ಚುನಾವಣಾ ಏಜೆಂಟರುಗಳ ಹಾಗೂ ಎಲ್ಲಾ ಎಣಿಕಾ ಸಿಬ್ಬಂದಿಯ ಗುರುತನ್ನು, ಅವರ ಗುರುತಿನ ಪತ್ರದ ತಪಾಸಣೆಗಾಗಿ ಮೊದಲನೇ ಸುತ್ತಿನ ಭದ್ರತಾ ವ್ಯವಸ್ಥೆಯಲ್ಲಿಯೇ ಪರಿಶೀಲಿಸಬೇಕು. ಪ್ರವೇಶ ನಿಯಂತ್ರಣ ಮಾಡಲು ಹಾಗೂ ಜನಸಂದಣಿಯನ್ನು ತಡೆಯಲು ಹಿರಿಯ ಮ್ಯಾಜಿಸ್ಟ್ರೇಟ್ ಒಬ್ಬರನ್ನು ನೇಮಕ ಮಾಡಬೇಕು.

16.20.16. ಅಭ್ಯರ್ಥಿಗಳು, ಅವರ ಏಜೆಂಟರುಗಳು ಹಾಗೂ ಇತರ ಅಧಿಕಾರಿಗಳ ಗುರುತು ಸಾಬೀತಾಗಿ ಎರಡನೇ ಸುತ್ತಿಗೆ ಕಳುಹಿಸುವ ಮುನ್ನ, ಭದ್ರತಾ ಸಿಬ್ಬಂದಿಯು ಅವರುಗಳನ್ನು ಸರಿಯಾದ ರೀತಿ ತಪಾಸಣೆ ಮಾಡಬೇಕು. ಈ ತಪಾಸಣೆಯನ್ನು ರಾಜ್ಯ ಪೊಲೀಸ್ ಸಿಬ್ಬಂದಿಯು ಮಾತ್ರ ಮಾಡಬೇಕು. ಮಹಿಳೆಯರನ್ನು, ಮಹಿಳಾ ಪೊಲೀಸ್ ಸಿಬ್ಬಂದಿ/ಮಹಿಳಾ ಗೃಹ ರಕ್ಷಕರು (ಹೋಂ

ಗಾರ್ಡ್‌ಗಳು) ಮಾತ್ರ ತಪಾಸಣೆ ಮಾಡಬೇಕು. ಅದಾದ ನಂತರ ಮತ್ತೆ ಹೆಚ್ಚಿನ ತಪಾಸಣೆ ಇರುವುದಿಲ್ಲ.

16.20.17. ಎಣಿಕೆಯು ನಡೆಯುವಂತಹ ಸಂದರ್ಭಗಳಲ್ಲಿ ಅಧಿಕೃತ ಪತ್ರಗಳನ್ನು ಉಳ್ಳಂತಹವರು, ಇಚ್ಛಿಸಿದರೆ ಎಣಿಕಾ ಕೊಠಡಿಗಳಿಂದ ಹೊರಬರಬಹುದು. ಅದೇ ಅಧಿಕೃತ ಪತ್ರಗಳನ್ನು ಇಟ್ಟುಕೊಂಡು ಪುನಃ ಅವರು ಮರಳಿ ಎಣಿಕಾ ಕೊಠಡಿಗಳಿಗೆ ಪ್ರವೇಶಿಸಬಹುದು. ಆದಾಗ್ಯೂ, ಅವರ ಅನೇಕ ವೇಳೆಯ ಪ್ರವೇಶವು, ಅಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಕಾಪಾಡುವಂತೆಯೂ ಹಾಗೂ ಮತ ಎಣಿಕೆಯು ಶಾಂತಿಯಾಗಿ ನಡೆಯುವುದಕ್ಕೆ ಪೂರಕವಾಗಿರಬೇಕು. ಎಣಿಕೆಯ ಉಸ್ತುವಾರಿಯನ್ನು ಹೊಂದಿರುವ ಅಧಿಕಾರಿಗಳು ಕಡಿಮೆ ಅವಧಿಗೆ ಆಡಿಯೋ/ವೀಡಿಯೋ ತೆಗೆಯುವ ಗುಂಪುಗಳಿಗೆ ಅನುಮತಿಯನ್ನು ನೀಡಬಹುದು.

16.20.18. ಎಣಿಕಾ ಕೊಠಡಿಯೊಳಗೆ ಯಾವುದೇ ಸ್ಥಿರ ಚಿತ್ರಣ ಅಥವಾ ವೀಡಿಯೋ ಚಿತ್ರೀಕರಣಕ್ಕೆ ಅವಕಾಶ ನೀಡುವಂತಿಲ್ಲ. ಆದ್ದರಿಂದ ಯಾವುದೇ ಕ್ಯಾಮೆರಾ ಕಂಬವನ್ನು ಎಣಿಕಾ ಕೊಠಡಿಯೊಳಗೆ ತೆಗೆದುಕೊಂಡು ಹೋಗುವಂತಿಲ್ಲ. ಮುಂದುವರೆದು, ಕ್ಯಾಮರಾವನ್ನು ಭುಜದ ಮೇಲಿಟ್ಟುಕೊಂಡು ಅಥವಾ ಕೈಯಲ್ಲಿಟ್ಟುಕೊಂಡು ಆಡಿಯೋ ಮತ್ತು ವೀಡಿಯೋ ಚಿತ್ರೀಕರಣ ಮಾಡುತ್ತಿದ್ದರೆ, ಯಾವುದೇ ಸಂದರ್ಭಗಳಲ್ಲಿಯೂ, ಮತಪತ್ರಗಳ ಮೇಲೆ ದಾಖಲಾದ ಮತಗಳ ಚಿತ್ರವನ್ನಾಗಲಿ, ವೀಡಿಯೋವನ್ನಾಗಲಿ ಚಿತ್ರೀಕರಣ ಮಾಡುವಂತಿಲ್ಲ. ಸ್ಥಿರ ಚಿತ್ರಣ ತೆಗೆಯುವ ಕ್ಯಾಮರಾವೊಂದು ಯಾವ ಗೆರೆಯವರೆಗೆ ಮಾತ್ರ ಚಲಿಸಬೇಕೆಂದು ರಿಟರ್ನಿಂಗ್ ಅಧಿಕಾರಿ ಮುಂಚಿತವಾಗಿ ತಿಳಿಸಬೇಕು ಮತ್ತು ಆ ಸಂಬಂಧವಾಗಿ ಎಲ್ಲಾ ಮಾರ್ಗದರ್ಶನವನ್ನು ನೀಡಿರಬೇಕು.

16.20.19. ಡಿಇಒಗಳು ಮತ್ತು ಆರ್‌ಒಗಳು ಮತ ಎಣಿಕೆ ಆರಂಭವಾಗುವ ಕನಿಷ್ಠ 72 ಗಂಟೆ ಮುಂಚಿತವಾಗಿ, ವಿಸ್ತೃತವಾದ ಯೋಜನೆಗಳನ್ನು ಸಿದ್ಧಪಡಿಸಿ, ಅದರ ಅನುಸಾರವಾಗಿ ಎಲ್ಲಾ ತಯಾರಿಗಳು ಸಕಾಲದಲ್ಲಿ ಆಗುವಂತೆ ನೋಡಿಕೊಳ್ಳಬೇಕು. ಇದರಿಂದಾಗಿ ಎಲ್ಲಾ ವ್ಯವಸ್ಥೆಯು ಸರಿದಾರಿಯಲ್ಲಿ ಸಾಗಿ ಮತ ಎಣಿಕೆಯ ಮಾಹಿತಿಯ ಪ್ರಸರಣಕ್ಕೆ ಅನುಕೂಲವಾಗುತ್ತದೆ.

16.20.20. ಮತ ಎಣಿಕೆ ಫಲಿತಾಂಶದ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ಈ ಕೆಳಗೆ ನೀಡಿರುವ ನಿರ್ದಿಷ್ಟ ನಮೂನೆಯ ರೀತಿ ರಿಟರ್ನಿಂಗ್ ಅಧಿಕಾರಿಯವರು ಸುತ್ತುವಾರು ವಿವರಪಟ್ಟಿ (ಸ್ಟೇಟ್‌ಮೆಂಟನ್ನು) ಸಿದ್ಧಪಡಿಸಬೇಕು. ರಿಟರ್ನಿಂಗ್ ಅಧಿಕಾರಿ ಮತ್ತು ವೀಕ್ಷಕರು ಇಬ್ಬರೂ ಕೂಡ ವೈಯಕ್ತಿಕವಾಗಿ ಪ್ರತಿ ಎಣಿಕೆ ಟೇಬಲ್ ನಲ್ಲಿರುವ ಪ್ರತಿ ಅಭ್ಯರ್ಥಿಯ ಹೆಸರಿನ ಮುಂದೆ ಚಲಾಯಿಸಿದ ಮತಗಳ ಲೆಕ್ಕವು, ಆ ಟೇಬಲ್‌ಗೆ ಸಂಬಂಧಪಟ್ಟ ನಮೂನೆ 17 'ಸಿ' ಭಾಗ IIರಲ್ಲಿನ ಸಂಖ್ಯೆಗೆ ಸಮನಾಗಿದೆಯೋ ಇಲ್ಲವೋ ಎಂದು ತಾಳೆ ಮಾಡಿ ನೋಡಬೇಕು. ಅವರು ಪ್ರತಿ ಟೇಬಲ್‌ನ ಒಟ್ಟು ಮತ ಎಣಿಕೆಯ

ಅಡಿ ತಮ್ಮ ಸಹಿಯನ್ನು ಮಾಡಬೇಕು. ವೀಕ್ಷಕನು ಟೇಬಲ್‌ವಾರು, ಮತಗಟ್ಟೆವಾರು, ಸುತ್ತುವಾರು, ಹಂಚಿಹೋದ ಮತಗಳ ವಿಸ್ತೃತ ವಿವರಗಳನ್ನು ತೋರಿಸುವ ನಮೂನೆಯ ಪ್ರತಿಯನ್ನು ತನ್ನ ಫೋಲ್ಡರ್‌ನಲ್ಲಿ ಇಟ್ಟುಕೊಂಡಿರಬೇಕು.

**ಫಲಿತಾಂಶವನ್ನು ತೋರಿಸುವ ಅನುಬಂಧ**

ವಿಧಾನಸಭಾ ಕ್ಷೇತ್ರದ ಹೆಸರು ಮತ್ತು ಸಂಖ್ಯೆ -------- ಸುತ್ತಿನ ಸಂಖ್ಯೆ ------- ದಿನಾಂಕ---

| ಟೇಬಲ್ ಸಂಖ್ಯೆ | | 1 | 2 | 3 | 4 | 5 | 6 | ಒಟ್ಟು | ಹಿಂದಿನ ಸುತ್ತಿನಿಂದ ಮುಂದುವರಿಸಿದೆ | ಸಮಗ್ರ ಒಟ್ಟು |
|---|---|---|---|---|---|---|---|---|---|---|
| ಮತದಾನದ ಬೂತ್ ಸಂಖ್ಯೆ | | | | | | | | | | |
| ಕ್ರ.ಸಂ. | ಅಭ್ಯರ್ಥಿಯ ಹೆಸರು | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| ತಿರಸ್ಕೃತ ಮತಗಳು | | | | | | | | | | |
| ಒಟ್ಟು ಮತಗಳು | | | | | | | | | | |
| | | ಆರ್‌ಒನ ರುಜು | ಆರ್‌ಒನ ರುಜು | ಆರ್‌ಒನ ರುಜು | ಆರ್‌ಒನ ರುಜು | ಆರ್‌ಒನ ರುಜು | ಆರ್‌ಒನ ರುಜು | ಆರ್‌ಒನ ರುಜು | | |
| | | ವೀಕ್ಷಕರ ರುಜು | ವೀಕ್ಷಕರ ರುಜು | ವೀಕ್ಷಕರ ರುಜು | ವೀಕ್ಷಕರ ರುಜು | ವೀಕ್ಷಕರ ರುಜು | ವೀಕ್ಷಕರ ರುಜು | ವೀಕ್ಷಕರ ರುಜು | | |

**ಪ್ರಮುಖಾಂಶ:** 1. ಎಲ್ಲಾ ತಿದ್ದು ಬರಹವನ್ನು/ ಹೊಡೆದು ಹಾಕಿರುವುದನ್ನು ವೀಕ್ಷಕರು ದೃಢೀಕರಿಸಬೇಕು.

2. ಮತ ಎಣಿಕೆಯಾಗಿರುವ ಮತಕೇಂದ್ರದ ಸಂಖ್ಯೆಯನ್ನು ಕೋಷ್ಟಕ ಸಂಖ್ಯೆಯ ಕೆಳಗೆ ಸೂಚಿಸಬೇಕು.

3. ಇದರ ಪ್ರತಿಯನ್ನು ತರುವಾಯದ ಮರು ಪರಿಶೀಲನೆಗಾಗಿ ಪ್ರತ್ಯೇಕ ಲಕೋಟೆಯಲ್ಲಿರಸಬೇಕು.

ಇದರೊಂದಿಗೆ ಯಾವುದೇ ಕೈ ತಪ್ಪುಗಳನ್ನು ಪುನರ್ ಪರಿಶೀಲಿಸಲು ಎಕ್ಸೆಲ್ ಶೀಟಿನಲ್ಲಿ ಸಮಾಂತರ ಟ್ಯಾಬ್ಯುಲೇಷನ್ ಕಾರ್ಯ ಮಾಡಲು ಎಣಿಕೆ ಸಭಾಂಗಣದಲ್ಲಿ ಗಣಕಯಂತ್ರವನ್ನು ಅಳವಡಿಸಲಾಗುವುದು ಈ ದತ್ತಾಂಶ ನಮೂದನ್ನು ಟೇಬಲ್‌ವಾರು, ಮತಗಟ್ಟೆವಾರು ಮತ್ತು ಸುತ್ತುವಾರು ಸಹ ಮಾಡಲಾಗುವುದು. ಮತಗಳ ಎಣಿಕೆಯ ಅಂತಿಮ ಫಲಿತಾಂಶವನ್ನು ಪಡೆಯುವುದಕ್ಕಾಗಿ ಕೈಯಿಂದ ಮಾಡಲಾಗುವ ಟ್ಯಾಬ್ಯುಲೇಷನ್ ಕೆಲಸಕ್ಕೆ ಕಂಪ್ಯೂಟರ್ ಟ್ಯಾಬ್ಯುಲೇಷನ್ ಪರ್ಯಾಯವಲ್ಲದಿದ್ದರೂ ಕಂಪ್ಯೂಟರ್ ಆಧಾರಿತ ಪರ್ಯಾಯ ಟ್ಯಾಬುಲೇಷನ್/ಲೆಕ್ಕಹಾಕುವಿಕೆಯು ಕೈಯಿಂದ ಮಾಡುವ ಟ್ಯಾಬ್ಯುಲೇಷನ್‌ನ ನಿಖರತೆ ಬಗ್ಗೆ ದ್ವಿ-

ಪರಿಶೀಲನೆಯಾಗಿ ಸಹಾಯಕವಾಗಲಿದೆ. ಸದರಿ ದತ್ತಾಂಶವನ್ನು ಗಣಕಯಂತ್ರದಲ್ಲಿ ಎಕ್ಸೆಲ್ ಹಾಳೆಯಲ್ಲಿ ನಮೂದಿಸಬೇಕು ಮತ್ತು ಅದರ ಪ್ರಿಂಟ್‌ಔಟ್‌ಅನ್ನು ತೆಗೆದು ವೀಕ್ಷಕರು ತಾಳೆ ನೋಡಬೇಕು ಹಾಗೂ ಅಧಿಕಾರಿಯವರಿಂದ ಸಹಿ ಪಡೆಯಬೇಕು.

16.20.21. ಹಿಂದಿನ ಸುತ್ತಿನ ಎಲ್ಲಾ ಮೇಜುಗಳಲ್ಲಿ ಎಣಿಕೆ ಕಾರ್ಯ ಮುಕ್ತಾಯಗೊಂಡು ಮತ್ತು ಅವುಗಳ ಫಲಿತಾಂಶದ ಶೀಟನ್ನು ಎಆರ್‌ಒಗಳು ಸ್ವೀಕರಿಸಿದ ನಂತರ ಮಾತ್ರವೇ ಮುಂದಿನ ಸುತ್ತಿನ ಎಣಿಕೆ ಕಾರ್ಯವನ್ನು ಆರಂಭ ಮಾಡಬೇಕು.

16.20.22. ವೀಕ್ಷಕರು ಮತ್ತು ರಿಟರ್ನಿಂಗ್ ಅಧಿಕಾರಿಯು, ಟೇಬಲ್‌ವಾರು–ಸುತ್ತುವಾರು– ಮತ ಎಣಿಕೆಯ ಫಲಿತಾಂಶಗಳನ್ನು ಮತ ಎಣಿಕೆ ಕೇಂದ್ರದಲ್ಲಿರುವ ನೋಟೀಸ್ ಬೋರ್ಡ್‌ನ ಮೇಲೆ ತಕ್ಷಣ ಪ್ರದರ್ಶಿಸಲಾಗಿದೆ ಎಂಬುದನ್ನು ಖಚಿತಪಡಿಸುತ್ತಾರೆ ಹಾಗೂ ಸಾರ್ವಜನಿಕ ಪ್ರಕಟಣಾ ವ್ಯವಸ್ಥೆ (ಧ್ವನಿವರ್ಧಕದ) ಮೂಲಕವೂ ಸಹ ಇದನ್ನು ಘೋಷಿಸುತ್ತಾರೆ. ಮತ ಎಣಿಕೆ ಕಾರ್ಯ ಪೂರ್ಣಗೊಂಡ ನಂತರ ಮತ್ತು ರಿಟರ್ನಿಂಗ್ ಅಧಿಕಾರಿಯು ಅಂತಿಮ ಫಲಿತಾಂಶ ಶೀಟನ್ನು ಸಂಗ್ರಹಿಸಿಕೊಂಡ ನಂತರ, ವೀಕ್ಷಕರು, ಅಭ್ಯರ್ಥಿಯು ತನ್ನ ಫೋಲ್ಡರಿನಲ್ಲಿ ಇಟ್ಟಿರುವ ಸುತ್ತವಾರು–ಬ್ರೇಕ್‌ಅಪ್‌ನ ವಿವರಗಳೊಂದಿಗೆ ಪಡೆದಿರುವ ಮತಗಳ ಅಂಕಿ–ಅಂಶಗಳನ್ನು ತಾಳೆ ಮಾಡಿ ನೋಡುತ್ತಾರೆ ಮತ್ತು ಈ ಅಂಕಿ–ಅಂಶಗಳು ತಾಳೆಯಾದಾಗ ಮಾತ್ರ ಫಲಿತಾಂಶವನ್ನು ಘೋಷಿಸಲು ಅನುಮತಿ ನೀಡುತ್ತಾರೆ.

16.20.23 GENESIYSನ ಮೂಲಕ ದತ್ತಾಂಶದ ಪ್ರಸಾರಣಕ್ಕೆ ಸಂಬಂಧಿಸಿದಂತೆ ಆಯೋಗವು ವಿವರವಾದ ಸೂಚನೆಗಳನ್ನು ಹೊರಡಿಸಿದೆ. ಈ ಸೂಚನೆಗಳನ್ನು ಎಲ್ಲಾ ರಿಟರ್ನಿಂಗ್ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು.

16.20.24. ಫಲಿತಾಂಶವು ಘೋಷಣೆಯಾದ ಕೂಡಲೆ, ವಿಜೇತ ಅಭ್ಯರ್ಥಿಗೆ ಹಸ್ತಾಂತರಿಸಿರುವಂತಹ ನಮೂನೆ–21ರಲ್ಲಿ ಒಳಗೊಂಡಿರುವಂಥ ದತ್ತಾಂಶವನ್ನು, ಆಯೋಗದ ತುರ್ತು ಸಂವಹನಕ್ಕಾಗಿ ಆಯೋಗವು ನಿರ್ದಿಷ್ಟಪಡಿಸಿರುವಂತೆ ವೀಕ್ಷಕರಿಗೆ ವಹಿಸಿಕೊಡಲಾಗುವುದು.

16.20.25. ಮತ ಎಣಿಕೆ ಕಾರ್ಯ ಮುಕ್ತಾಯವಾದ ಕೂಡಲೇ ಫಲಿತಾಂಶವನ್ನು ಔಪಚಾರಿಕವಾಗಿ ಘೋಷಣೆ ಮಾಡುವ ಮುಂಚೆ ಆದ್ಯಂತವಾಗಿ ಲೆಕ್ಕ ಹಾಕಿ ತಾಳೆ ನೋಡಿದ ಮತ ಎಣಕೆ ದತ್ತಾಂಶವನ್ನು ಸಂಪೂರ್ಣವಾಗಿ ಸರಿ ಹೊಂದಾಣಿಕೆ ಮಾಡುವುದು ಮುಖ್ಯವಾದುದ್ದಾಗಿರುತ್ತದೆ.

16.20.26. ರಿಟರ್ನಿಂಗ್ ಅಧಿಕಾರಿಯು ನಮೂನೆ 21–ಸಿ ಯಲ್ಲಿ ಫಲಿತಾಂಶವನ್ನು ಘೋಷಿಸುವ ಮುಂಚೆ ಮತ್ತು ಸಮುಚಿತ ಕಚೇರಿಗಳಿಗೆ ಅದನ್ನು ಕಳುಹಿಸುವ ಮುಂಚೆ ಅವರ ನಮೂನೆ 20–ಎ ಯಲ್ಲಿ ಅಂತಿಮ ಫಲಿತಾಂಶ ಪಟ್ಟಿಯನ್ನು ಭರ್ತಿ ಮಾಡಿರುತ್ತಾರೆ ಎಂಬುದನ್ನು ವೀಕ್ಷಕರು ಖಚಿತಪಡಿಸಿಕೊಳ್ಳುತ್ತಾರೆ.

ಯುಕ್ತವಾಗಿ ಭರ್ತಿ ಮಾಡಿರುವ ನಮೂನೆ 21–ಎ, 21–ಸಿ ಮತ್ತು 21–ಇ ಇವುಗಳ ಪ್ರತಿಯೊಂದು ಪ್ರತಿಯನ್ನು ವೀಕ್ಷಕರಿಂದ ಸಂಗ್ರಹಿಸಲಾಗುವುದು ಮತ್ತು ಮತ ಎಣಿಕೆಯ ವರದಿಗಳೊಂದಿಗೆ ಲಗತ್ತಿಸಲಾಗುವುದು.

16.20.27. ಎಲ್ಲಾ ವೀಕ್ಷಕರು ಮತ ಎಣಿಕಾ ಪ್ರಕ್ರಿಯೆ ಮತ್ತು ಫಲಿತಾಂಶ ಸಂಕಲನದ ಮೇಲೆ ನಿಕಟವಾಗಿ ನಿಗಾ ಇರಿಸಬೇಕೆಂದು ಆಯೋಗವು ನಿರ್ಧರಿಸಿದೆ. ರಿಟರ್ನಿಂಗ್ ಅಧಿಕಾರಿಯು ಚುನಾವಣಾ ಫಲಿತಾಂಶ ಘೋಷಿಸುವ ಮೊದಲು, ಸಂಬಂಧಪಟ್ಟ ವೀಕ್ಷಕರಿಂದ ಅಪ್ಪಣೆ ಪಡೆದುಕೊಳ್ಳತಕ್ಕದ್ದು. ನ್ಯಾಯ ಸಮ್ಮತಕ್ಕೆ ಮತ್ತು ಫಲಿತಾಂಶ ಸಂಕಲನದ (ಕಂಪಿಲಿಯೇಷನ್) ಪರಿಪೂರ್ಣ ನಿಖರತೆಯ ಕುರಿತಾಗಿ ವೀಕ್ಷಕರು ಸ್ವತಃ ಸಂಪೂರ್ಣವಾಗಿ ಮನವರಿಕೆ ಮಾಡಿಕೊಳ್ಳಬೇಕು. ಹಾಗೆ ಮಾಡಿದ ಬಳಿಕ, ಅವರು ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಗೆ ಫಲಿತಾಂಶ ಘೋಷಣೆಗಾಗಿ ಈ ಕೆಳಗಿನ ನಮೂನೆಗಳಲ್ಲಿ ಅಪ್ಪಣೆ ನೀಡಬೇಕು–

"– – – – – – – – ವಿಧಾನಸಭಾ ಮತ ಕ್ಷೇತ್ರ/ ವಿಧಾನಸಭಾ ವಲಯದ ವೀಕ್ಷಕನಾದ (ವೀಕ್ಷಕ ಸಂಕೇತ ______) ನಾನು ಮತ ಎಣಿಕೆ ಕಾರ್ಯವು ನ್ಯಾಯಸಮ್ಮತವಾಗಿ ನಡೆದಿರುವುದು ಮತ್ತು ನಮೂನೆ–20ರಲ್ಲಿರುವ ಫಲಿತಾಂಶ ಸಂಕಲನವು ಸಂಪೂರ್ಣವಾಗಿ ನಿಖರವಾಗಿರುವುದು ಎಂದು ಮನವರಿಕೆಯಾಗಿರುವುದರಿಂದ ಫಲಿತಾಂಶವನ್ನು ಘೋಷಿಸಲು – – – – – – – ವಿಧಾನಸಭಾ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿಯನ್ನು ಈ ಮೂಲಕ ಅಧಿಕೃತಗೊಳಿಸಲಾಗಿದೆ."

ವೀಕ್ಷಕರ ಸಹಿ – – – – – – – –

ವೀಕ್ಷಕರ ಹೆಸರು – – – – – – – –

ವೀಕ್ಷಕರ ಸಂಕೇತ – – – – – – – –

ವಿಧಾನಸಭಾ ಮತ ಕ್ಷೇತ್ರದ
ಸಂಖ್ಯೆ ಮತ್ತು ಹೆಸರು

16.20.28. ವೀಕ್ಷಕರಿಂದ ಮೇಲ್ಕಂಡ ನಮೂನೆಯಲ್ಲಿ ಅಧಿಕೃತತೆಯನ್ನು ಪಡೆಯದೆ, ಯಾರೇ ರಿಟರ್ನಿಂಗ್ ಅಧಿಕಾರಿಯು ಫಲಿತಾಂಶವನ್ನು ಘೋಷಣೆ ಮಾಡತಕ್ಕದ್ದಲ್ಲ. ಮತ ಎಣಿಕೆಯ ನ್ಯಾಯಸಮ್ಮತತೆ ಮತ್ತು ಫಲಿತಾಂಶ ಸಂಕಲನದ ನಿಖರತೆಯನ್ನು ಖಚಿತಪಡಿಸಿಕೊಳ್ಳುವುದು ವೀಕ್ಷಕರ ಮತ್ತು ರಿಟರ್ನಿಂಗ್ ಅಧಿಕಾರಿಯ ವೈಯಕ್ತಿಕ ಹೊಣೆಗಾರಿಕೆಯಾಗಿರತಕ್ಕದ್ದು.

16.20.29. ಈ ಮೇಲೆ ಸೂಚಿಸಿರುವ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲಾಗಿದೆ ಮತ್ತು ಮತ ಎಣಿಕೆ ಪ್ರಾರಂಭವಾಗುವ ಸಾಕಷ್ಟು ಮುಂಚೆ ಎಲ್ಲಾ ರಿಟರ್ನಿಂಗ್ ಅಧಿಕಾರಿಗಳು, ವೀಕ್ಷಕರು,

ಅಭ್ಯರ್ಥಿಗಳು, ಮತ ಎಣಿಕೆ ಏಜೆಂಟರು ಮುಂತಾದವರ ಗಮನಕ್ಕೆ ತರಲಾಗಿದೆ ಎಂಬುದನ್ನು ಖಚಿತಪಡಿಸುವುದು ಸಂಬಂಧಪಟ್ಟ ಜಿಲ್ಲಾ ಚುನಾವಣಾಧಿಕಾರಿಯ ವೈಯಕ್ತಿಕ ಜವಾಬ್ದಾರಿಯಾಗಿರತಕ್ಕದ್ದು.

**16.21. ಮತದಾನದ ಗೌಪ್ಯತೆಯನ್ನು ಕಾಪಾಡುವುದು**

16.21.1. ಮತ ಎಣಿಕೆ ಕೊಠಡಿಯ ಒಳಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಮತದಾನದ ಗೌಪ್ಯತೆಯನ್ನು ಕಾಪಾಡುವುದನ್ನು ಕಾನೂನಿನ ಮೂಲಕ ಅಗತ್ಯಪಡಿಸಲಾಗಿದೆ ಮತ್ತು ಅಂಥ ಗೌಪ್ಯತೆಯನ್ನು ಉಲ್ಲಂಘಿಸಲು ಉದ್ದೇಶಿಸಿ, ಯಾವುದೇ ಮಾಹಿತಿಯನ್ನು ಯಾರೇ ವ್ಯಕ್ತಿಗೆ ತಿಳಿಸಬಾರದು. ಈ ಸಂಬಂಧದಲ್ಲಿ ಕಾನೂನಿನ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, 3 ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿ ಕಾರಾವಾಸದ ಶಿಕ್ಷೆಗೆ ಅಥವಾ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡಿತನಾಗುತ್ತಾನೆ (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 128)

16.21.2. ಮತಗಳ ಎಣಿಕೆಯು ಪ್ರಾರಂಭವಾಗುವ ಮೊದಲು, ಹಾಜರಿರುವ ಎಲ್ಲರ ಮಾಹಿತಿಗಾಗಿ ಮತ್ತು ಅವರು ಅದನ್ನು ಪಾಲಿಸುವುದಕ್ಕಾಗಿ ಮೇಲೆ ಸೂಚಿಸಿರುವ 128ನೇ ಪ್ರಕರಣದ ಉಪಬಂಧಗಳನ್ನು ರಿಟರ್ನಿಂಗ್ ಅಧಿಕಾರಿಯವರು ಓದುತ್ತಾರೆ ಮತ್ತು ವಿವರಿಸಿ ಹೇಳುತ್ತಾರೆ.

**16.22. ಮತ ಎಣಿಕೆಯು ನಿರಂತರವಾಗಿರಬೇಕು**

16.22.1. ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ, ಮತಗಳ ಎಣಿಕೆಯು ಮುಕ್ತಾಯವಾಗುವವರೆಗೆ ನಿರಂತರವಾಗಿ ಮುಂದುವರಿಯುತ್ತಿರಬೇಕು.

**16.23. ಅಂಚೆ ಮತಪತ್ರಗಳನ್ನು ಮೊದಲು ಎಣಿಕೆ ಮಾಡುವುದು**

ಮತದಾನದ ದಿನದಂದು, ಅಂಚೆ ಮತಪತ್ರದ ಎಣಿಕೆಯನ್ನು ಮೊದಲು ಕೈಗೆತ್ತಿಕೊಳ್ಳುವುದು ಮತ್ತು 30 ನಿಮಿಷಗಳ ಅಂತರದ ನಂತರ ಇವಿಎಂ ಮತ ಎಣಿಕೆಗಳನ್ನು ಸಹ ಪ್ರಾರಂಭಿಸಬಹುದು. ಅಂಚೆ ಮತಪತ್ರಗಳ ಎಣಿಕೆಗಾಗಿ ಪ್ರತ್ಯೇಕ ಟೇಬಲ್ ಮತ್ತು ಪ್ರತ್ಯೇಕ ವ್ಯವಸ್ಥೆ ಇರಬೇಕು. ಪ್ರತಿ 500 ಅಂಚೆ ಮತಪತ್ರಗಳಿಗಾಗಿ, ಮತ ಎಣಿಕೆಗೆ ಹೆಚ್ಚುವರಿ ಟೇಬಲನ್ನು ಬಳಸಬೇಕು. ರಿಟರ್ನಿಂಗ್ ಅಧಿಕಾರಿಯು ತಮ್ಮ ಟೇಬಲ್‌ನಲ್ಲಿ ಅಂಚೆ ಮತಪತ್ರದ ಎಣಿಕೆಗಾಗಿ ಜವಾಬ್ದಾರರಾಗಿರುತ್ತಾರೆ. ಅಂಚೆ ಮತಪತ್ರಗಳ ಎಣಿಕೆಯನ್ನು ನಿರ್ವಹಿಸುವ ಸಲುವಾಗಿಯೇ ಪ್ರತ್ಯೇಕವಾಗಿ ಒಬ್ಬ ಸಹಾಯಕ ರಿಟರ್ನಿಂಗ್ ಅಧಿಕಾರಿಯವರನ್ನು ನಿಯೋಜಿಸಬೇಕು. ವೀಕ್ಷಕರು ಮತ್ತು ರಿಟರ್ನಿಂಗ್ ಅಧಿಕಾರಿಯು ಏಕಕಾಲಕ್ಕೆ ಅಂಚೆ ಮತಪತ್ರದ ಎಣಿಕೆ ಹಾಗೂ ಇವಿಎಂ ಮತಗಳ ಎಣಿಕೆಯಲ್ಲಿ ಆದ ಪ್ರಗತಿಯನ್ನು ನಿಕಟವಾಗಿ

ಮೇಲ್ವಿಚಾರಣೆ ಮಾಡುತ್ತಿರಬೇಕು. ಅಂಚೆ ಮತಪತ್ರಗಳ ಎಣಿಕೆಗಾಗಿಯೇ ಒಬ್ಬ ಪ್ರತ್ಯೇಕ ಎಣಿಕಾ ಏಜೆಂಟರನ್ನು ನಿಯೋಜಿಸುವಂತೆ ಅಭ್ಯರ್ಥಿಗಳಿಗೆ/ಅವರ ಚುನಾವಣಾ ಏಜೆಂಟರುಗಳಿಗೆ ಸೂಚಿಸಬೇಕು ಮತ್ತು ಈ ಎಣಿಕಾ ಏಜೆಂಟನು ಅಂಚೆ ಮತಪತ್ರ ಎಣಿಕೆ ಕಾರ್ಯವನ್ನು ಕೈಗೊಳ್ಳುವ ಟೇಬಲ್ ಬಳಿ ಹಾಜರಿರಬೇಕು.

**(ಎ) ಸೇವಾ ಮತದಾರರಿಗಾಗಿ ವಿದ್ಯುನ್ಮಾನ ವಿಧಾನದಿಂದ ರವಾನಿಸಲಾದ ಅಂಚೆ ಮತ ಪತ್ರ (ಇಟಿಪಿಬಿ)ಗಳ ಎಣಿಕೆ**

16.23.1. ಇತರೆ ಅಂಚೆ ಮತಗಳನ್ನು ಎಣಿಕೆ ಮಾಡುವ ರೀತಿಯಲ್ಲಿಯೇ ಇಟಿಪಿಬಿಗಳ ಎಣಿಕೆಯನ್ನು ಕೂಡ ರಿಟರ್ನಿಂಗ್ ಅಧಿಕಾರಿಗಳ ಮೇಜಿನಲ್ಲಿ ಮಾಡತಕ್ಕದ್ದು. ಎಣಿಕೆ ಆರಂಭಕ್ಕೆ ನಿಗದಿಪಡಿಸಿದ ಗಂಟೆಗೆ ಮುನ್ನ ಸ್ವೀಕೃತವಾದ ಅಂಚೆ ಮತ ಪತ್ರಗಳನ್ನು ಮಾತ್ರ ಎಣಿಕೆ ಮಾಡತಕ್ಕದ್ದು.

16.23.2. ಮೊದಲ ಹಂತ: ನಮೂನೆ 13–ಸಿ ಯ ತೆರೆಯುವಿಕೆ (ಬಾಹ್ಯ ಲಕೋಟೆ) ಸಕಾಲಕ್ಕೆ ಸ್ವೀಕರಿಸಲಾದ ನಮೂನೆ–13ಸಿಯ ಕವರ್‌ಗಳನ್ನು ಪರಿಶೀಲಿಸಿ ಒಂದರ ನಂತರ ಒಂದನ್ನು ತೆರೆಯಬೇಕು. ಕಂಪ್ಯೂಟರ್ ತಂತ್ರಾಂಶ ಮತ್ತು ಕ್ಯೂಆರ್ ಕೋಡ್ ರೀಡರ್ ಅನ್ನು ಬಳಸಿ ಬಾಹ್ಯ ಲಕೋಟೆ ಮೇಲಿನ ಕ್ಯೂ ಆರ್ ಸಂಕೇತವನ್ನು ಸ್ಕ್ಯಾನ್ ಮಾಡಲಾಗುವುದು ಮತ್ತು ಅಗತ್ಯ ಸಿಂಧುತ್ವ(validity) ತಪಾಸಣೆಗಳನ್ನು ನಡೆಸಲಾಗುವುದು. ಬಾಹ್ಯ ಲಕೋಟೆಯನ್ನು ಪರಿಶೀಲಿಸಿದ ನಂತರ, ಗಣಕಯಂತ್ರವು ಒಂದು ವಿಶಿಷ್ಟ ಕ್ರಮ ಸಂಖ್ಯೆಯನ್ನು ನೀಡಲಿದೆ. ಲಕೋಟೆ ಪರಿಶೀಲಿಸಿದ ಬಗ್ಗೆ ಲಕೋಟೆ ಮೇಲೆ ರಿಟರ್ನಿಂಗ್ ಅಧಿಕಾರಿಯು ಈ ಕ್ರಮ ಸಂಖ್ಯೆಯನ್ನು ಸಹ ಕೈಯಿಂದ ಬರೆಯಬೇಕು. ಗಣಕಯಂತ್ರ ತಂತ್ರಾಂಶವು ಸ್ವೀಕರಿಸಲಾದ ಅಂಚೆ ಮತಗಳ ಪಟ್ಟಿಯಲ್ಲಿನ ಯಾವುದೇ ಸಂಭಾವ್ಯ ದ್ವಿ–ನಮೂದುಗಳಿಗೆ ಸಂಬಂಧಿಸಿದಂತೆ, ಕ್ಯೂ ಆರ್ ಸಂಕೇತದಲ್ಲಿನ ನಮೂದನ್ನು ಪರಿಶೀಲಿಸಿ ಅಂತಹ ಪ್ರಕರಣಗಳಿಗೆ ಎಚ್ಚರಿಕೆ ಸಂಕೇತ ನೀಡುತ್ತದೆ. ಗಣಕಯಂತ್ರ ತಂತ್ರಾಂಶವು ಕ್ರಮ ಸಂಖ್ಯೆಗಳ ಪಟ್ಟಿಯನ್ನು ಸಹ ನೀಡಲಿದೆ. ಈ ಸಂಖ್ಯೆಗಳೆಲ್ಲವೂ ನಿರ್ವಹಿಸಲಾದ ಅಂಚೆ ಮತಗಳ ದ್ವಿ–ಪ್ರತಿಗಳಾಗಿರುತ್ತವೆ. ಗಣಕಯಂತ್ರ ತಂತ್ರಾಂಶವು ಸೂಚಿಸಿದ ಅಂತಹ ಎಲ್ಲಾ ದ್ವಿ ಪ್ರತಿ ಲಕೋಟೆಗಳನ್ನು ರಿಟರ್ನಿಂಗ್ ಅಧಿಕಾರಿ ಗುರುತಿಸಿ ಅವುಗಳನ್ನು ಭೌತಿಕವಾಗಿ ಒಟ್ಟಿಗೆ ಇಟ್ಟುಕೊಳ್ಳಬೇಕು ಮತ್ತು ಅಂತಹ ಎಲ್ಲಾ ದ್ವಿ/ಬಹು ಮತಗಳನ್ನು ಅಸಿಂಧುಗೊಳಿಸಬೇಕು. ಅಸಿಂಧು ಎಂದು ಘೋಷಿಸಲಾದ ಅಂತಹ ಎಲ್ಲಾ ಲಕೋಟೆಗಳನ್ನು ಮುಂದಿನ ಪ್ರಕ್ರಿಯೆಗೆ ತೆರೆಯತಕ್ಕದ್ದಲ್ಲ ಮತ್ತು ಅವುಗಳನ್ನು ಪಕ್ಕಕ್ಕೆಇಡಬೇಕು ಹಾಗೂ ಭವಿಷ್ಯದ ಪರಾಮರ್ಶೆಗಾಗಿ ಸಂರಕ್ಷಿಸಿಡಬೇಕು. ಅಂತಹ ದ್ವಿಪ್ರತಿ ಅಂಚೆ ಮತಗಳ ಸಂಖ್ಯೆಯನ್ನು ವಹಿಯಲ್ಲಿ ನಮೂದಿಸತಕ್ಕದ್ದು. ಕವರ್ 'ಬಿ' (ನಮೂನೆ 13ಸಿ)ಯನ್ನು

ತೆರೆಯುತ್ತಿದ್ದಂತೆ, ಒಳಭಾಗದಲ್ಲಿ ಎರಡು ದಸ್ತಾವೇಜುಗಳು ಕಂಡುಬರಬೇಕು. ಮೊದಲನೆಯದು, ನಮೂನೆ–13–ಎ ರಲ್ಲಿ ಮತದಾರನಿಂದ ಮಾಡಲಾದ ಘೋಷಣೆ ಮತ್ತು ಎರಡನೆಯದು, ಒಳಗಿನ ಕವರ್ ಎಂದರೆ, ಅಂಚೆ ಮತಪತ್ರವನ್ನು ಒಳಗೊಂಡಿರುವ ನಮೂನೆ 13–ಬಿ. ಪ್ರತಿಯೊಂದು ಕವರ್ ಅನ್ನು ತೆರೆಯುತ್ತಿದ್ದಂತೆ, ರಿಟರ್ನಿಂಗ್ ಅಧಿಕಾರಿಯವರು ನಮೂನೆ 13–ಎ ನಲ್ಲಿನ ಘೋಷಣೆ ಮತ್ತು ನಮೂನೆ 13–ಬಿ ಯಲ್ಲಿನ ಕವರ್ ಅನ್ನು ಹೊರ ತೆಗೆಯಬೇಕು, ಘೋಷಣೆಯನ್ನು ಸ್ಕ್ಯಾನ್, ತಾಳೆ ಮಾಡಿ ನಂತರ ಸೂಕ್ಷ್ಮವಾಗಿ ಪರಿಶೀಲಿಸಬೇಕು.

16.23.3. ಅಂಚೆ ಮತ ಪತ್ರಗಳನ್ನು ಒಳಗೊಂಡಿರುವ ನಮೂನೆ 13–ಬಿ ಯಲ್ಲಿನ ಕವರ್ ಅನ್ನು ತೆರೆಯುವ ಮುನ್ನ, ರಿಟರ್ನಿಂಗ್ ಅಧಿಕಾರಿಯವರು ನಮೂನೆ 13–ಎ ನಲ್ಲಿನ ಘೋಷಣೆಯನ್ನು ಕಡ್ಡಾಯವಾಗಿ ಪರಿಶೀಲಿಸಬೇಕು ಮತ್ತು ನಮೂನೆ 13ಬಿ ಯನ್ನು ತೆರೆದು ಎಣಿಕೆಗಾಗಿ ಕೈಗೆತ್ತಿಕೊಳ್ಳುವ ಮುನ್ನ, ಅಂತಹ ಎಲ್ಲಾ 13–ಎ ನಮೂನೆಗಳನ್ನು ಪ್ರತ್ಯೇಕವಾಗಿ ಇರಿಸಿ ಮೊಹರು ಮಾಡಬೇಕು. ಈ ಕೆಳಕಂಡ ಸಂದರ್ಭಗಳಲ್ಲಿ, ರಿಟರ್ನಿಂಗ್ ಅಧಿಕಾರಿಯವರು ನಮೂನೆ 13–ಬಿಯಲ್ಲಿನ ಒಳಗಿನ ಕವರ್ ಅನ್ನು ತೆರೆಯದೆ ಅಂಚೆ ಮತವನ್ನು ತಿರಸ್ಕರಿಸುವರು:

- ನಮೂನೆ 13–ಎ ಯಲ್ಲಿರುವ ಘೋಷಣೆಯು ಲಕೋಟೆಯಲ್ಲಿ ಕಂಡುಬರದಿದ್ದ ಪಕ್ಷದಲ್ಲಿ, ಅಥವಾ
- ನಮೂನೆ 13–ಎ ಘೋಷಣೆಯಲ್ಲಿನ ವಿದ್ಯುನ್ಮಾನ ಅಂಚೆ ಮತ ಗುರುತಿನ ಸಂಖ್ಯೆ (ಇ–ಪಿಬಿಐಡಿ)ಯು ವಿತರಿಸಲಾದ ಇ–ಪಿಬಿಐಡಿ ಯೊಂದಿಗೆ ತಾಳೆಯಾಗದಿದ್ದ ಪಕ್ಷದಲ್ಲಿ, ಅಥವಾ
- ಘೋಷಣೆಗೆ ಯುಕ್ತವಾಗಿ ಸಹಿಯಾಗಿರದಿದ್ದಲ್ಲಿ ಮತ್ತು/ ಅಥವಾ ಹಾಗೆ ಮಾಡಬೇಕಾದ ಸಕ್ಷಮ ಅಧಿಕಾರಿಯಿಂದ ದೃಢೀಕರಣವಾಗಿರದಿದ್ದಲ್ಲಿ, ಅಥವಾ ಘೋಷಣೆಯಲ್ಲಿ ಗೋಚರವಾಗುತ್ತಿರುವ ಅಂಚೆ ಮತದ ಇ–ಪಿಬಿಐಡಿಯು ನಮೂನೆ 13–ಬಿ ಲಕೋಟೆಯ ಮೇಲಿನ ಇ–ಪಿಬಿಐಡಿಗಿಂತ ಭಿನ್ನವಾಗಿದ್ದರೆ

16.23.4. ತಿರಸ್ಕರಿಸಲಾದ ಅಂತಹ ಪ್ರತಿ ಕವರ್ ಸೂಕ್ತವಾದ ಹಿಂಬರಹ ಹೊಂದಿರಬೇಕು, ಘೋಷಣೆ ಮತ್ತು ಕವರನ್ನು ನಮೂನೆ 13–ಸಿ (ಬಾಹ್ಯ ಲಕೋಟೆ)ಯ ಒಳಗಡೆ ಇರಿಸತಕ್ಕದ್ದು. ನಮೂನೆ 13–ಸಿಯಲ್ಲಿನ ಅಂತಹ ಎಲ್ಲಾ ಲಕೋಟೆಯನ್ನು ಯುಕ್ತವಾಗಿ ಮೊಹರು ಮಾಡಿದ ಪ್ರತ್ಯೇಕ ಪೊಟ್ಟಣದಲ್ಲಿ ಒಟ್ಟಿಗೆ

ಇಡಬೇಕು ಮತ್ತು ಸುಲಭವಾಗಿ ಪತ್ತೆಹಚ್ಚುವಿಕೆಗಾಗಿ ಅದರ ಮೇಲೆ ಮತಕ್ಷೇತ್ರದ ಹೆಸರು, ಎಣಿಕೆಯ ದಿನಾಂಕ ಮತ್ತು ವಿಷಯದ ಸಂಕ್ಷಿಪ್ತ ವಿವರಣೆಯಂತಹ ಪೂರ್ಣ ವಿವರಗಳನ್ನು ಬರೆದಿರಬೇಕು. ನಮೂನೆ 13–ಎ ನಲ್ಲಿನ ಎಲ್ಲಾ ಘೋಷಣೆಗಳು, ಕ್ರಮವಾಗಿರುವುದಾಗಿ ಕಂಡು ಬಂದರೆ, ಆಗ ಅವುಗಳನ್ನು ಎಣಿಕೆಗಾಗಿ ಪ್ರತ್ಯೇಕವಾಗಿ ಇರಿಸಬೇಕು.

16.23.5. ಮುಂದಿನ ಎಣಿಕೆಗಾಗಿ, ಅಂಚೆ ಮತಪತ್ರದ ಎಣಿಕೆಗಾಗಿ ಇರುವ ಎಲ್ಲಾ ಸೂಚನೆಗಳು ಅನ್ವಯವಾಗತಕ್ಕದ್ದು.

16.23.6. ಕ್ಯೂಆರ್ ಕೋಡ್‌ಗಳ ಸ್ಕ್ಯಾನಿಂಗ್ ಅನ್ನು ತಪ್ಪದೆ ಕ್ರಮಾನುಗತವಾಗಿ ಮಾಡಬೇಕು. ನಮೂನೆ–13ಸಿ ಮೊದಲು ಸ್ಕ್ಯಾನ್ ಮಾಡಬೇಕು. ನಂತರ ನಮೂನೆ 13ಎ ಮೇಲಿನ ಕ್ಯೂ ಆರ್ ಕೋಡ್ ಹಾಗೂ ನಮೂನೆ–13ಬಿ ಮೇಲಿನ ಕ್ಯೂಆರ್ ಕೋಡ್ ಎರಡನ್ನು ಸ್ಕ್ಯಾನ್ ಮಾಡಬೇಕು. ಯಾವುದೇ ಸಂದರ್ಭಗಳಲ್ಲಿಯೂ ಕ್ಯೂಆರ್ ಕೋಡ್ ಸ್ಕ್ಯಾನಿಂಗ್‌ನ ಕ್ರಮಾನುಗತಿಯನ್ನು ಬದಲಿಸಬಾರದು.

16.23.7. ಮತದಾರನಿಂದ ಸ್ವೀಕರಿಸಿರುವ ಪ್ರತಿಯೊಂದು ಅಂಚೆ ಮತಪತ್ರವನ್ನು ನಮೂನೆ–13–ಬಿ ಯಲ್ಲಿರುವ ಒಳ ಲಕೋಟೆಯಲ್ಲಿರಿಸಬೇಕು. ನಮೂನೆ 13–ಎಯಲ್ಲಿರುವ ಮತದಾರನ ಘೋಷಣಾ ಪತ್ರದೊಂದಿಗೆ ರಿಟರ್ನಿಂಗ್ ಅಧಿಕಾರಿಯವರಿಗೆ ಕಳುಹಿಸಿರುವ ನಮೂನೆ 13–ಸಿಯಲ್ಲಿರುವ ದೊಡ್ಡ ಲಕೋಟೆಯಲ್ಲಿ ಅದನ್ನು ಇರಿಸಬೇಕು.

16.23.8. ರಿಟರ್ನಿಂಗ್ ಅಧಿಕಾರಿಯವರು ತಡವಾಗಿ ಅಂದರೆ, ಮತ ಎಣಿಕೆಯ ಪ್ರಾರಂಭಕ್ಕಾಗಿ ನಿಗದಿಪಡಿಸಿರುವ ಸಮಯದ ನಂತರ, ಸ್ವೀಕರಿಸಿದ ಅಂಚೆ ಮತಪತ್ರಗಳನ್ನು ಒಳಗೊಂಡಿರುವ ನಮೂನೆ–13–ಸಿ ಯಲ್ಲಿರುವ ಯಾವುದೇ ಲಕೋಟೆಯನ್ನು ತೆರೆಯುವುದಿಲ್ಲ. ಅವರು ನಮೂನೆ–13–ಸಿ ಯಲ್ಲಿರುವ ಲಕೋಟೆಯ ಹೊರಗಡೆ ಈ ಉದ್ದೇಶಕ್ಕಾಗಿ ಸೂಕ್ತ ಹಿಂಬರಹವನ್ನು ಮಾಡಿರುತ್ತಾರೆ. ಈ ಲಕೋಟೆಗಳಲ್ಲಿ ಒಳಗೊಂಡಿರುವ ಮತಗಳನ್ನು ಎಣಿಕೆ ಮಾಡಲಾಗುವುದಿಲ್ಲ. ಅವರು ಅಂಥ ಎಲ್ಲಾ ಲಕೋಟೆಗಳ ಒಂದು ಪ್ಯಾಕೆಟ್ ಮಾಡಿ ಆ ಪ್ಯಾಕೆಟ್‌ಅನ್ನು ಮೊಹರು ಮಾಡುತ್ತಾರೆ.

16.23.9. ರಿಟರ್ನಿಂಗ್ ಅಧಿಕಾರಿಯು ನಿಗದಿಪಡಿಸಿದ ಸಮಯದೊಳಗೆ ಸ್ವೀಕರಿಸುವ ನಮೂನೆ '13–ಸಿ' ಯಲ್ಲಿರುವ ಅಂಚೆ ಮತಪತ್ರಗಳ ಎಲ್ಲಾ ಲಕೋಟೆಗಳನ್ನು ಒಂದರ ನಂತರ ಮತ್ತೊಂದರಂತೆ ತೆರೆಯುವರು. ಪ್ರತಿಯೊಂದು ಲಕೋಟೆಯ ಒಳಗಡೆ ನಮೂನೆ 13–ಎಯಲ್ಲಿ ಮತದಾರನು ಮಾಡಿದ ಘೋಷಣೆ ಕಾಣುವುದು (ನಮೂನೆ 13–ಸಿ). ಸಮುಚಿತ ಅಂಚೆಪತ್ರವನ್ನು ಒಳಗೊಂಡಿರುವ ಯಾವುದೇ ಒಳ ಲಕೋಟೆಯನ್ನು (ನಮೂನೆ 13–ಬಿ) ತೆರೆಯುವ ಮೊದಲು ಘೋಷಣೆಯನ್ನು

ರಿಟರ್ನಿಂಗ್ ಅಧಿಕಾರಿಯು ಪರಿಶೀಲಿಸುವರು (ನಮೂನೆ 13–ಎ). ಈ ಕೆಳಗಿನ ಯಾವುವೇ ಸಂದರ್ಭಗಳಲ್ಲಿ ಅದರ ಒಳ ಲಕೋಟೆಯನ್ನು (ನಮೂನೆ 13–ಬಿ) ತೆರೆಯದೇ ಅವರು ತಿರಸ್ಕರಿಸುವರು:

ಎ. ನಮೂನೆ 13–ಸಿ ಯ ಲಕೋಟೆಯಲ್ಲಿ ನಮೂನೆ 13–ಬಿಯಲ್ಲಿನ ಘೋಷಣೆ ಕಂಡುಬರದಿರುವುದು:

ಬಿ. ಘೋಷಣೆಗೆ ಮತದಾರನು ವಿಧ್ಯುಕ್ತವಾಗಿ ಸಹಿ ಹಾಕದಿರುವುದು ಅಥವಾ ಸಕ್ಷಮ ಅಧಿಕಾರಿಯಿಂದ ವಿಧ್ಯುಕ್ತವಾಗಿ ದೃಢೀಕರಿಸದಿರುವುದು (ಅಟೆಸ್ಟ್) ಅಥವಾ ಅನ್ಯಥಾ ಪ್ರಮುಖ ಲೋಪವಾಗಿರುವುದು;

ವಿ.ಸೂ. ಘೋಷಣೆಯನ್ನು ದೃಢೀಕರಿಸುವ ಅಧಿಕಾರಿಯು, ತನ್ನ ಮೊಹರನ್ನು ಹಾಕುವುದು ನಿಯಮದ ಮೇರೆಗೆ ಅವಶ್ಯಕತೆಯಿಲ್ಲ ಮತ್ತು ಆದುದರಿಂದ, ಒದಗಿಸಿರುವ ನಮೂನೆಯಲ್ಲಿನ ವಿವರಗಳಿಂದ, ಅಂದರೆ ಅವನ ಹುದ್ದೆ, ವಿಳಾಸ ಇತ್ಯಾದಿಯನ್ನು ಅನ್ಯಥಾ ದೃಢೀಕರಿಸಿದ ಅಧಿಕಾರಿಯನ್ನು ಗುರುತಿಸಿ ತಿಳಿಯಲು ಸಾಧ್ಯವಿರುವಾಗ ಈ ಆಧಾರದ ಮೇಲೆ ಆಕ್ಷೇಪಣೆ ಎತ್ತಬಾರದು.

ಸಿ. ಘೋಷಣೆಯ ಮೇಲೆ ಕಾಣುವ ಮತಪತ್ರದ ಕ್ರಮಸಂಖ್ಯೆಯು ನಮೂನೆ 13–ಬಿಯಲ್ಲಿನ ಒಳ ಲಕೋಟೆಯ ಮೇಲೆ ದಾಖಲಿಸಿರುವ ಕ್ರಮಸಂಖ್ಯೆಗಿಂತ ಭಿನ್ನವಾಗಿರುವುದು.

16.23.10 ತಿರಸ್ಕೃತವಾದ ನಮೂನೆ 13ಬಿ ಯಲ್ಲಿನ ಎಲ್ಲಾ ಲಕೋಟೆಗಳಿಗೆ ರಿಟರ್ನಿಂಗ್ ಅಧಿಕಾರಿಯು ಸೂಕ್ತವಾಗಿ ಹಿಂಬರಹ ಮಾಡಿ, ಆಯಾ ಘೋಷಣೆಯನ್ನು ನಮೂನೆ 13–ಸಿ ಯಲ್ಲಿನ ದೊಡ್ಡ ಲಕೋಟೆಯಲ್ಲಿರಿಸಬೇಕು. ಅಂತಹ ಎಲ್ಲಾ ದೊಡ್ಡ ಲಕೋಟೆಗಳನ್ನು ಪ್ರತ್ಯೇಕ ಪ್ಯಾಕೆಟ್‌ನಲ್ಲಿರಿಸಿ, ರಿಟರ್ನಿಂಗ್ ಅಧಿಕಾರಿಯು ಮೊಹರು ಮಾಡಿ ಪ್ಯಾಕೆಟ್ ಗುರುತಿಸಲು ಪೂರ್ಣ ವಿವರಗಳನ್ನು ಅಂದರೆ ಕ್ಷೇತ್ರದ ಹೆಸರು, ಎಣಿಕೆಯ ದಿನಾಂಕ ಮತ್ತು ಒಳಾಂಶದ ಸಂಕ್ಷಿಪ್ತ ವಿವರವನ್ನು ಬರೆದಿರಬೇಕು.

16.23.11. ತದನಂತರ, ರಿಟರ್ನಿಂಗ್ ಅಧಿಕಾರಿಯು ನಮೂನೆ 13–ಬಿ ಯಲ್ಲಿನ ಮೇಲೆ ಹೇಳಿದಂತಹ ತಿರಸ್ಕೃತವಾದವುಗಳನ್ನು ಹೊರತುಪಡಿಸಿ ಉಳಿದ ಲಕೋಟೆಗಳ ಪರಿಶೀಲನೆಗೆ ಮುಂದಾಗುವರು. ಇಲ್ಲಿ ಅಂಚೆ ಮತಪತ್ರಗಳ ಗೌಪ್ಯತೆಗೆ ಉಲ್ಲಂಘನೆಯಾಗದಿರುವ ಸಲುವಾಗಿ ರಿಟರ್ನಿಂಗ್ ಅಧಿಕಾರಿಯು ನಮೂನೆ 13–ಎ ಯಲ್ಲಿನ ಎಲ್ಲಾ ಘೋಷಣೆಗಳನ್ನು ಹುಡುಕಿ, ಕ್ರಮವಾಗಿ ಪರಿಶೀಲಿಸಿ, ಮೊದಲು ಪ್ರತ್ಯೇಕ ಲಕೋಟೆಯಲ್ಲಿರಿಸಿ ಮೊಹರು ಮಾಡಬೇಕು. ಗುರುತಿಸಲಾಗುವ ವಿವರಗಳನ್ನು ಪ್ಯಾಕೆಟ್ ಮೇಲೆ ಬರೆದಿರಬೇಕು. ನಮೂನೆ 13–ಬಿ ಯಲ್ಲಿನ ಯಾವುದೇ ಸಮುಚಿತ ಮತಪತ್ರಗಳನ್ನು ಹೊರತೆಗೆಯುವ ಮೊದಲು ಮೊಹರು ಮಾಡಿದ ಲಕೋಟೆಯಲ್ಲಿರುವ ಈ ಘೋಷಣೆಗಳನ್ನು ಸಂಬಂಧಿಸಿದ ಆ ಘೋಷಣೆಗಳು ಮತದಾರರ ಹೆಸರು ಸಹಿತ ಅವರಿಗೆ ಸಂಬಂಧಿಸಿದ ಅಂಚೆ

ಮತಪತ್ರಗಳ ಆ ಕ್ರಮಸಂಖ್ಯೆಗಳನ್ನು ಒಳಗೊಂಡಿರುವುದರಿಂದ ಮತಪತ್ರಗಳಿಂದ ದೂರವಿರಿಸುವುದು ಅಗತ್ಯವಾಗಿದೆ.

16.23.12. ಆ ನಂತರ, ನಮೂನೆ 13–ಬಿ ಯಲ್ಲಿನ ಲಕೋಟೆಗಳನ್ನು ಒಂದರ ನಂತರ ಮತ್ತೊಂದನ್ನು ತೆರೆಯಬೇಕು ಅವುಗಳಲ್ಲಿರುವ ಅಂಚೆ ಮತಪತ್ರಗಳನ್ನು ಹೊರ ತೆಗೆಯಬೇಕು. ರಿಟರ್ನಿಂಗ್ ಅಧಿಕಾರಿಯು ಅಂಥ ಪ್ರತಿಯೊಂದು ಅಂಚೆ ಮತ್ರವನ್ನು ಪರಿಶೀಲಿಸಿ ಅವುಗಳ ಸಿಂಧುತ್ವದ ಬಗ್ಗೆ ನಿರ್ಧಾರ ಕೈಗೊಳ್ಳಬೇಕು

16.23.13. ಒಂದು ವೇಳೆ ಅಂಚೆ ಮತಪತ್ರವು,–

ಎ. ಅದರ ಮೇಲೆ ಯಾವುದೇ ಮತ ದಾಖಲಾಗದಿದ್ದರೆ; ಅಥವಾ

ಬಿ. ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಮತ ಚಲಾವಣೆಯಾಗಿದ್ದರೆ; ಅಥವಾ

ಸಿ. ಅದು ಖೋಟಾ ಮತಪತ್ರವಾಗಿದ್ದರೆ; ಅಥವಾ

ಡಿ. ಅದು ನೈಜ ಮತಪತ್ರ ಎಂದು ಗುರುತಿಸುವುದಕ್ಕೆ ಆಗದಂತೆ ಹಾನಿಯಾಗಿದ್ದರೆ ಅಥವಾ ನಿಷ್ಪ್ರಯೋಜಕವಾಗಿದ್ದರೆ; ಅಥವಾ

ಇ. ರಿಟರ್ನಿಂಗ್ ಅಧಿಕಾರಿಯು ಮತದಾರನಿಗೆ ಅದರೊಂದಿಗೆ ಕಳುಹಿಸಿದ್ದ ಲಕೋಟೆಯಲ್ಲಿ ಹಿಂತಿರುಗಿಸಿರದಿದ್ದರೆ; ಅಥವಾ

ಎಫ್. ಮತವನ್ನು ಯಾವ ಅಭ್ಯರ್ಥಿಗೆ ಚಲಾಯಿಸಲಾಗಿದೆ ಎಂಬುದನ್ನು ಪತ್ತೆ ಮಾಡಲು ಸಾಧ್ಯವಾಗದ ರೀತಿಯಲ್ಲಿ ಅನುಮಾನ ಬರುವ ರೀತಿಯಲ್ಲಿ ಮತ ಚಲಾವಣೆ ಮಾಡಿದ್ದರೆ; ಅಥವಾ

ಜಿ. ಅದು, ಮತದಾರನನ್ನು ಗುರುತಿಸಲಾಗುವ ರೀತಿಯಲ್ಲಿ ಯಾವುದೇ ಗುರುತನ್ನು ಅಥವಾ ಲಿಖಿತವನ್ನು ಒಳಗೊಂಡಿದ್ದರೆ

– ಅದನ್ನು ತಿರಸ್ಕರಿಸಲಾಗುವುದು.

16.23.14. ಕಾನೂನಿನಲ್ಲಿ ಮತದಾರನು ಅಂಚೆ ಮತಪತ್ರದ ಮೇಲೆ ತನ್ನ ಮತವನ್ನು ಸೂಚಿಸಲು ಯಾವುದೇ ನಿರ್ದಿಷ್ಟ ಗುರುತು ಮಾಡಬೇಕಾದ ಅಗತ್ಯವಿಲ್ಲ. ಮತದಾರನು ಮತಪತ್ರದಲ್ಲಿ ನಿರ್ದಿಷ್ಟ ಅಭ್ಯರ್ಥಿಗೆ ಮತ ಚಲಾಯಿಸುವ ಉದ್ದೇಶವನ್ನು ಯಾವುದೇ ಯುಕ್ತ ಅನುಮಾನಕ್ಕೆ ಅವಕಾಶ ನೀಡದಂತೆ ಸ್ಪಷ್ಟವಾಗಿ ದಾಖಲಿಸಿರುವ ಮಟ್ಟಿಗೆ ಮತ್ತು ಹಾಗೆ ಇರಿಸಿದಷ್ಟರ ಮಟ್ಟಿಗೆ ಮತ್ತು ಹಾಗೆ ಇರಿಸಿದಷ್ಟರ ಮಟ್ಟಿಗೆ ಯಾವುದೇ ಗುರುತನ್ನು ಸಿಂಧುವಾಗಿದೆ ಎಂದು ಮಾನ್ಯ ಮಾಡಲಾಗುವುದು. ಹಾಗಾಗಿ, ಮತಪತ್ರದಲ್ಲಿ ಅಭ್ಯರ್ಥಿಗೆ ಹಂಚಿಕೆ ಮಾಡಲಾದ ಸ್ಥಳದಲ್ಲಿ ಎಲ್ಲಿಯೇ ಆಗಲಿ ಮಾಡಲಾದ ಗುರುತನ್ನು ಅಭ್ಯರ್ಥಿಗೆ ಚಲಾಯಿಸಲಾದ ಸಿಂಧುವಾದ ಮತವೆಂದೇ ಪರಿಗಣಿಸಲಾಗುವುದು. ಅಂಚೆ ಮತಪತ್ರದ

ಮೇಲೆ ಮತವು ಅಸ್ಪಷ್ಟವಾಗಿರುವಂತೆ ಕಂಡುಬಂದರೆ ಅಥವಾ ಅದೇ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚಿನ ಬಾರಿ ಗುರುತು ಮಾಡಿದ ಕಾರಣಕ್ಕಾಗಿ ಮಾತ್ರ, ಮತಪತ್ರದಲ್ಲಿ ಗುರುತಿಸಿದ ರೀತಿಯಿಂದ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡಲು ಉದ್ದೇಶಿಸಿರುವುದು ಸ್ಪಷ್ಟವಾಗಿ ಕಂಡುಬಂದರೆ, ಅಂಚೆ ಮತಪತ್ರಗಳಲ್ಲಿ ದಾಖಲಾದ ಮತಪತ್ರಗಳನ್ನು ತಿರಸ್ಕರಿಸಲಾಗುವುದಿಲ್ಲ.

16.23.15. ಆ ನಂತರ, ಮಾನ್ಯವಾದ ಮತಗಳನ್ನು ಎಣಿಕೆ ಮಾಡಲಾಗುವುದು ಮತ್ತು ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಮತವನ್ನು ಎಣಿಕೆ ಮಾಡಬೇಕು. ಹಾಗೆ ಎಣಿಕೆ ಮಾಡಲಾದ ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಒಟ್ಟು ಅಂಚೆ ಮತಪತ್ರಗಳ ಸಂಖ್ಯೆಯನ್ನು ನಮೂನೆ 20ರಲ್ಲಿ ಫಲಿತಾಂಶ ಹಾಳೆಯಲ್ಲಿ ನಮೂದಿಸಲಾಗುವುದು ಮತ್ತು ಅಭ್ಯರ್ಥಿಯ/ ಚುನಾವಣಾ ಏಜೆಂಟರ/ ಮತ ಎಣಿಕೆ ಏಜೆಂಟರ ಮಾಹಿತಿಗಾಗಿ ಘೋಷಿಸಲಾಗುವುದು.

16.23.16. ತದನಂತರ, ಎಲ್ಲಾ ಮಾನ್ಯವಾದ ಅಂಚೆ ಮತಪತ್ರಗಳನ್ನು ಮತ್ತು ತಿರಸ್ಕೃತಗೊಂಡ ಅಂಚೆ ಮತಪತ್ರಗಳನ್ನು ಪ್ರತ್ಯೇಕವಾಗಿ ಬಂಡಲ್ ಮಾಡಿ ಒಟ್ಟಿಗೆ ಒಂದು ಪ್ಯಾಕೆಟಿನಲ್ಲಿಡಬೇಕು ಹಾಗೂ ರಿಟರ್ನಿಂಗ್ ಅಧಿಕಾರಿಯ ಮೊಹರಿನೊಂದಿಗೆ ಮೊಹರು ಮಾಡಬೇಕು ಹಾಗೂ ಅಭ್ಯರ್ಥಿಗಳು, ಅವರ ಚುನಾವಣಾ ಏಜೆಂಟರು ಅಥವಾ ಎಣಿಕಾ ಏಜೆಂಟರು, (ಯಾರೇ ಒಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ಇಬ್ಬರನ್ನು ಮೀರದಂತೆ) ಇಚ್ಚಿಸಿದಲ್ಲಿ ಅದರ ಮೇಲೆ ಅವರೂ ಸಹ ಮೊಹರು ಮಾಡಬಹುದು.

16.23.17.ಯಾವುದೇ ಸಂದರ್ಭದಲ್ಲೂ ಅಂಚೆ ಮತಪತ್ರಗಳನ್ನು ಎಣಿಸುವುದಕ್ಕೂ ಮುಂಚೆ ಇವಿಎಂ ಮತಗಳ ಎಲ್ಲಾ ಎಣಿಕೆಯ ಸುತ್ತಗಳ ಫಲಿತಾಂಶವನ್ನು ಘೋಷಿಸತಕ್ಕದ್ದಲ್ಲ.

16.23.18.ಅಂಚೆ ಮತಪತ್ರಗಳ ಎಣಿಕೆಯ ಆಧಾರದ ಮೇಲೆಯೇ ಗೆಲುವನ್ನು ನಿರ್ಧರಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಮರು ಪರಿಶೀಲನೆ ಮಾಡತಕ್ಕದ್ದು. ವೀಕ್ಷಕರು ಮತ್ತು ರಿಟರ್ನಿಂಗ್ ಅಧಿಕಾರಿಯವರ ಉಪಸ್ಥಿತಿಯಲ್ಲಿ ಅಸಿಂಧುವೆಂದು ತಿರಸ್ಕರಿಸಲಾದ ಎಲ್ಲಾ ಅಂಚೆ ಮತಪತ್ರಗಳನ್ನು ಹಾಗೂ ಪ್ರತಿಯೊಬ್ಬ ಅಭ್ಯರ್ಥಿಯ ಲೆಕ್ಕಕ್ಕೆ ತೆಗೆದುಕೊಳ್ಳಲಾದ ಮತಗಳನ್ನು ಮತ್ತೊಮ್ಮೆ ಪರಿಶೀಲಿಸಿ ತಾಳೆ ಮಾಡತಕ್ಕದ್ದು. ವೀಕ್ಷಕರು ಮತ್ತು ರಿಟರ್ನಿಂಗ್ ಅಧಿಕಾರಿಯು ಫಲಿತಾಂಶವನ್ನು ಘೋಷಿಸುವುದಕ್ಕೆ ಮುಂಚೆ ಮರು ಪರಿಶೀಲನೆಯ ಶೋಧನೆಗಳನ್ನು ದಾಖಲಿಸಬೇಕು ಮತ್ತು ಸ್ವತಃ ಅ ಬಗ್ಗೆ ಮನವರಿಕೆ ಮಾಡಿಕೊಡಬೇಕು.

16.23.19. ಅಂಥ ಮರುಪರಿಶೀಲನೆ/ಮರು ಎಣಿಕೆ ಮಾಡಿದಾಗಲೆಲ್ಲಾ ಮತದಾನದ ಗೌಪ್ಯತೆಯ ವಿಷಯದಲ್ಲಿ ಯಾವುದೇ ರಾಜಿ ಇಲ್ಲದೆ ಇಡೀ ಪ್ರಕ್ರಿಯೆಯನ್ನು ವೀಡಿಯೋ ಚಿತ್ರೀಕರಣ ಮಾಡತಕ್ಕದ್ದು ಮತ್ತು

ವೀಡಿಯೋ ಕ್ಯಾಸೆಟ್/ಸಿಡಿಯನ್ನು ಮುಂದಿನ ಪರಾಮರ್ಶೆಗಾಗಿ ಪ್ರತ್ಯೇಕ ಲಕೋಟೆಯಲ್ಲಿಟ್ಟು ಮೊಹರು ಮಾಡತಕ್ಕದ್ದು.

**16.24. ಮತಗಟ್ಟೆಗಳಲ್ಲಿ ಚಲಾಯಿಸಿದ ಮತಗಳ ಎಣಿಕೆ**

16.24.1. ರಿಟರ್ನಿಂಗ್ ಅಧಿಕಾರಿಯು ಅಂಚೆ ಮತಪತ್ರಗಳ ಎಣಿಕೆಯ ಕಾರ್ಯದಲ್ಲಿ ತೊಡಗಿಕೊಂಡಿರುವಾಗ **ಇವಿಎಂಗಳ** ಮೂಲಕ ಮತಗಟ್ಟೆಯಲ್ಲಿ ದಾಖಲಾದ ಮತಗಳ ಎಣಿಕೆಯನ್ನು, ಎಣಿಕೆಯ ಸಭಾಂಗಣದಲ್ಲಿ ಒದಗಿಸಿದ ಇತರ ಟೇಬಲ್‌ಗಳಲ್ಲಿ ಸಹಾಯಕ ರಿಟರ್ನಿಂಗ್ ಅಧಿಕಾರಿ (ಗಳು) ಕೈಗೊಳ್ಳಬಹುದಾಗಿದೆ. ಆ ಉದ್ದೇಶಕ್ಕಾಗಿ, ಮತಗಟ್ಟೆಗಳಿಂದ ಸ್ವೀಕರಿಸಿದ **ಇವಿಎಂಗಳ** ಕಂಟ್ರೋಲ್ ಯೂನಿಟ್‌ಗಳನ್ನು ಮತಗಟ್ಟೆಗಳ ಕ್ರಮಸಂಖ್ಯೆ ರೀತಿಯಲ್ಲಿಯೇ ಎಂದರೇ ಮೊದಲ ಸುತ್ತಿನ ಮತ ಎಣಿಕೆಯಲ್ಲಿ ಮತಗಟ್ಟೆ ಸಂಖ್ಯೆ 1ರಲ್ಲಿ ಬಳಸಲಾದ ಕಂಟ್ರೋಲ್ ಯೂನಿಟ್‌ಅನ್ನು ಸಂಖ್ಯೆ 1ರ ಎಣಿಕೆ ಟೇಬಲ್‌ಗೆ ನೀಡಬೇಕು. ಹಾಗೆಯೇ ಮತಗಟ್ಟೆ ಸಂಖ್ಯೆ 2ನ್ನು ಎಣಿಕೆ ಟೇಬಲ್ ಸಂಖ್ಯೆ 2ಕ್ಕೆ ನೀಡಬೇಕು ಹೀಗೆ ಮುಂದುವರಿಯಬೇಕು. ಪ್ರತಿಯೊಂದು ಎಣಿಕೆ ಟೇಬಲ್‌ನಲ್ಲಿ ಒಂದು ಮತಗಟ್ಟೆಯಲ್ಲಿ ಚಲಾಯಿಸಿದ ಮತಗಳನ್ನು ಒಮ್ಮೆಗೆ ಎಣಿಕೆಗೆ ಕೈಗೆತ್ತಿಕೊಳ್ಳತಕ್ಕದ್ದು ಹೀಗೆ ಎಷ್ಟು ಎಣಿಕೆ ಟೇಬಲ್‌ಗಳಿವೆಯೋ ಅಷ್ಟು ಮತಗಟ್ಟೆಗಳ ಎಣಿಕೆಯನ್ನು ಮೊದಲ ಸುತ್ತಿನಲ್ಲಿ ಒಂದೇ ಬಾರಿಗೆ ಕೈಗೆತ್ತಿಕೊಳ್ಳಬೇಕು. ಎಣಿಕೆ ಟೇಬಲ್‌ಗಳ ಸಂಖ್ಯೆ ಮತ್ತು ಮತಗಟ್ಟೆಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಮತಗಳನ್ನು ಎಣಿಕೆ ಮಾಡಬೇಕು ಮತ್ತು ಅವಶ್ಯವಿರುವಷ್ಟು ಸಂಖ್ಯೆಯ ಸುತ್ತುಗಳಲ್ಲಿ ಎಣಿಕೆಯನ್ನು ಪೂರ್ಣಗೊಳಿಸಬೇಕು. ಹಿಂದಿನ ಸುತ್ತಿನ ಎಣಿಕೆ ಪೂರ್ಣಗೊಳ್ಳದ ಹೊರತು ಎಣಿಕೆ ಟೇಬಲ್‌ಗಳಿಗೆ ಮುಂದಿನ ಸುತ್ತಿನ ಎಣಿಕೆಗಾಗಿ ಕಂಟ್ರೋಲ್ ಯೂನಿಟ್ ತರುವಂತಿಲ್ಲ. ಏಕಕಾಲಕ್ಕೆ ನಡೆಯುವ ಚುನಾವಣೆಗಳ ಸಂದರ್ಭದಲ್ಲಿ ಎಣಿಕೆ ಟೇಬಲ್‌ಗಳ ಒಟ್ಟು ಸಂಖ್ಯೆಯನ್ನು ಸಮಸಂಖ್ಯೆಯ ಟೇಬಲ್‌ಗಳ ಎರಡು ಗುಂಪುಗಳನ್ನಾಗಿ ವಿಂಗಡಿಸಬೇಕು. ಮೊದಲನೇ ಗುಂಪು ವಿಧಾನಸಭೆಗೆ ಚುನಾವಣೆ ಸಂಬಂಧಿಸಿದ ಮತ ಎಣಿಕೆಯನ್ನು ಮತ್ತು ಇನ್ನೊಂದು ಗುಂಪು ಸಂಸದೀಯ ಚುನಾವಣೆಗೆ ಮಾಡಬೇಕು ಉದಾಹರಣೆಗಾಗಿ ಎಣಿಕೆ ಟೇಬಲ್‌ಗಳ "ಒಟ್ಟು ಸಂಖ್ಯೆ"ಯು 14 (ಹದಿನಾಲ್ಕು) ಆಗಿದ್ದರೆ ಮೊದಲ ಸುತ್ತಿನ ಎಣಿಕೆಯಲ್ಲಿ ವಿಧಾನಸಭಾ ಚುನಾವಣೆಗಾಗಿ ಮತಗಟ್ಟೆ 1ರಲ್ಲಿ ಬಳಸಲಾದ ಕಂಟ್ರೋಲ್ ಯೂನಿಟ್‌ಅನ್ನು ಕಡ್ಡಾಯವಾಗಿ ಸಂಖ್ಯೆ 1ರ ಟೇಬಲ್‌ಗೆ ನೀಡಬೇಕು ಮತ್ತು ಲೋಕಸಭೆ ಚುನಾವಣೆಗಾಗಿ ಮತಗಟ್ಟೆ 1ರಲ್ಲಿ ಬಳಸಲಾದ ಕಂಟ್ರೋಲ್ ಯೂನಿಟ್‌ಅನ್ನು ಸಂಖ್ಯೆ 8ರ ಟೇಬಲ್‌ಗೆ ನೀಡಬೇಕು. ಎಂದರೆ, ಲೋಕಸಭಾ ಚುನಾವಣೆಗಳ ಮತಗಳ ಎಣಿಕೆಗಾಗಿ ಮೊದಲ ಟೇಬಲ್‌ಗೆ ಹಾಗೂ ಮತಗಟ್ಟೆ ಸಂಖ್ಯೆ

2ರಲ್ಲಿ ಬಳಸಿದ ವಿಧಾನಸಭಾ ಚುನಾವಣೆಗೆ ಬಳಸಿದ ಕಂಟ್ರೋಲ್ ಯೂನಿಟ್ ಅನ್ನು ಟೇಬಲ್ ಸಂಖ್ಯೆ 2ಕ್ಕೆ ನೀಡಬೇಕು. ಹಾಗೂ ಮತಗಟ್ಟೆ ಸಂಖ್ಯೆ 2ರಲ್ಲಿ ಲೋಕಸಭೆ ಚುನಾವಣೆಗೆ ಬಳಸಿದ ಕಂಟ್ರೋಲ್ ಯೂನಿಟ್‌ಅನ್ನು ಟೇಬಲ್ ಸಂಖ್ಯೆ 9ಕ್ಕೆ ನೀಡಬೇಕು. ಎಂದರೆ, ಲೋಕಸಭೆ ಚುನಾವಣೆಗೆ ಮತಗಳ ಎಣಿಕೆಗಾಗಿ 2ನೇ ಟೇಬಲ್‌ಗೆ ಸಂಬಂಧಿಸಿದಂತೆ ಅಭ್ಯರ್ಥಿ ಅಥವಾ ಅವರ ಎಣಿಕಾ ಏಜೆಂಟ್, ಅವರ ಮಾಹಿತಿಗಾಗಿ ನಿಮ್ಮೊಂದಿಗೆ ಅಂಥ ಹಂಚಿಕೆಯ ಲೆಕ್ಕವನ್ನು ಇಟ್ಟುಕೊಂಡಿರಬೇಕು. ವಿಧಾನಸಭೆ ಮತ್ತು ಲೋಕಸಭೆ ಇವೆರಡಕ್ಕೂ ಏಕಕಾಲದಲ್ಲಿ ನಡೆಯುವ ಚುನಾವಣೆಗಳ ಸಂಬಂಧ ಎಣಿಕೆಯ ಸಂದರ್ಭದಲ್ಲಿ ಮುಂದಿನ ಸುತ್ತಿನ ಎಣಿಕೆಯನ್ನು, ಹಿಂದಿನ ಸುತ್ತಿನ ಎಣಿಕೆ ಪೂರ್ಣಗೊಂಡ ನಂತರ ಮತ್ತು ಪೂರ್ಣಗೊಂಡ ಸುತ್ತಿನಿಂದ ಮತಗಟ್ಟೆಗಳಲ್ಲಿ ಬಳಸಿದ ಕಂಟ್ರೋಲ್ ಯೂನಿಟ್‌ಗಳನ್ನು ಎಣಿಕಾ ಟೇಬಲ್‌ನಿಂದ ತೆಗೆದುಕೊಂಡ ಹೋದ ಬಳಿಕ ಮಾತ್ರವೇ ಕೈಗೆತ್ತಿಗೊಳ್ಳತಕ್ಕದ್ದೆಂದು ಗಮನದಲ್ಲಿರಿಸಿಕೊಳ್ಳಬೇಕು.

16.24.2. ಎಣಿಕೆ ಸಮಯದಲ್ಲಿ, ಮತದಾನದ ಫಲಿತಾಂಶವನ್ನು ತಿಳಿಯಲು ಸಂಬಂಧಪಟ್ಟ ಮತಗಟ್ಟೆಯಲ್ಲಿ ಬಳಸಲಾದ ಇವಿಎಂನ ಕಂಟ್ರೋಲ್ ಯೂನಿಟ್ ಮಾತ್ರ ಅಗತ್ಯವಿರುತ್ತದೆ. ಬ್ಯಾಲೆಟ್ ಯೂನಿಟ್‌ಗಳನ್ನು ಭದ್ರತಾ ಕೊಠಡಿಯಲ್ಲಿ ಇಡಬೇಕು.

16.24.3. ಮತಗಟ್ಟೆಗೆ ಸಂಬಂಧಿಸಿದ ನಮೂನೆ 17–ಸಿಯಲ್ಲಿ ದಾಖಲಾದ ಮತಗಳ ಸುಸಂಗತ ಲೆಕ್ಕವನ್ನೊಳಗೊಂಡಿರುವ ಮೊಹರಾದ ಲಕೋಟೆಯನ್ನು ಸಹ ಮತಗಟ್ಟೆಯಲ್ಲಿ ಬಳಸಲಾದ ಕಂಟ್ರೋಲ್ ಯೂನಿಟ್ ಜೊತೆಗೆ ಎಣಿಕೆ ಸ್ಥಳಕ್ಕೆ ಸರಬರಾಜು ಮಾಡಬೇಕು.

16.24.4. ಪ್ರತಿ ಸುತ್ತಿನ ಮುಕ್ತಾಯದಲ್ಲಿ ವೀಕ್ಷಕರು ಎಣಿಕೆ ಮಾಡಲಾದ ಸಂಬಂಧಪಟ್ಟ ಸುತ್ತಿನ ಕಂಟ್ರೋಲ್ ಯೂನಿಟ್‌ಗಳ ಪೈಕಿ ಯಾದೃಚ್ಛಿಕವಾಗಿ ಯಾವುದೇ 2 ಕಂಟ್ರೋಲ್ ಯೂನಿಟ್‌ಗಳನ್ನು ಆಯ್ಕೆ ಮಾಡುವರು. ನಂತರ ಅವರು ಆಯ್ಕೆ ಮಾಡಲಾದ ಕಂಟ್ರೋಲ್ ಯೂನಿಟ್‌ಗಳಿಂದ ಯಂತ್ರವು ತೋರಿಸಿದಂತೆ ಚಲಾವಣೆಯಾದ ಮತಗಳ ವಿವರವನ್ನು ಪ್ರತ್ಯೇಕವಾಗಿ ಬರೆದಿಟ್ಟುಕೊಳ್ಳುವಂತೆ ರಿಟರ್ನಿಂಗ್ ಅಧಿಕಾರಿ/ಸಹಾಯಕ ರಿಟರ್ನಿಂಗ್ ಅಧಿಕಾರಿಯವರು ಈ ಉದ್ದೇಶಕ್ಕಾಗಿ ಯಾದೃಚ್ಛಿಕ ಆಯ್ಕೆಯ ಮೂಲಕ ನಿರ್ದಿಷ್ಟವಾಗಿ ನಿಯೋಜಿಸಲಾದ ಎಣಿಕಾ ಸಿಬ್ಬಂದಿಗೆ ನಿರ್ದೇಶನ ನೀಡುವರು. ನಂತರ ಅವರು ಈ ವಿವರಗಳನ್ನು ಎರಡರ ನಡುವೆ ಯಾವುದಾದರೂ ವ್ಯತ್ಯಾಸವಿದೆಯೇ ಎಂಬುದನ್ನು ಪರಿಶೀಲಿಸಲು ಟೇಬಲ್ ವಾರು ಫಲಿತಾಂಶದಲ್ಲಿ ಅಧಿಕಾರಿಗಳು ಒದಗಿಸಿದ ವಿವರಗಳ ಜೊತೆ ಇಟ್ಟು ತಾಳೆ ಮಾಡುವರು. ಯಾದೃಚ್ಛಿಕ ತಪಾಸಣೆಗಾಗಿ ನಿಯೋಜಿಸಲಾದ ಸಿಬ್ಬಂದಿಗೆ ಟೇಬಲ್ ವಾರು ಫಲಿತಾಂಶದಲ್ಲಿ ಒದಗಿಸಲಾದ ವಿವರಗಳು ಗೊತ್ತಾಗದಂತೆ ಎಚ್ಚರಿಕೆ ವಹಿಸಬೇಕು.

16.24.5. ಪ್ರತಿ ಎಣಿಕಾ ಟೇಬಲ್‌ಗೆ ಒಬ್ಬರು ಎಣಿಕೆ ಮೇಲ್ವಿಚಾರಕರು, ಒಬ್ಬರು ಎಣಿಕಾ ಸಹಾಯಕರ ಜೊತೆಗೆ ಪ್ರತಿ 14 ಎಣಿಕೆ ಟೇಬಲ್‌ಗಳಿಗೆ ಒಬ್ಬರು ಹೆಚ್ಚುವರಿ ಸಿಬ್ಬಂದಿ ಕುಳಿತಿರುತ್ತಾರೆ. ಹೆಚ್ಚುವರಿ ಸಿಬ್ಬಂದಿಯು ಕಡ್ಡಾಯವಾಗಿ ಕೇಂದ್ರ ಸರ್ಕಾರಿ/ರಾಜ್ಯ ಸರ್ಕಾರಿ/ಸರ್ಕಾರಿ ಸೌಮ್ಯದ ಉದ್ದಿಮೆಯ ನೌಕರರಾಗಿರಬೇಕು. ಈ ಹೆಚ್ಚುವರಿ ಸಿಬ್ಬಂದಿಯು ಆ ಟೇಬಲ್‌ನಲ್ಲಿ ಪ್ರತಿ ಸುತ್ತಿನಲ್ಲಿ ಎಣಿಕೆ ಮಾಡುವ ಇವಿಎಂಗಳಿಂದ ಪ್ರದರ್ಶನಗೊಳ್ಳುವ ಮತಗಳ ವಿವರಗಳನ್ನು ಬರೆದಿಟ್ಟುಕೊಳ್ಳುವರು. ಈ ಹೆಚ್ಚುವರಿ ಎಣಿಕೆ ಸಿಬ್ಬಂದಿಗೆ ಪೂರ್ವ ಮುದ್ರಿತ ತಃಖ್ತೆಯನ್ನು ನೀಡಲಾಗುತ್ತದೆ. ಈ ತಃಖ್ತೆಯಲ್ಲಿ ಕಂಟ್ರೋಲ್ ಯೂನಿಟ್ ಸಂಖ್ಯೆ, ಎಣಿಕೆ ಸುತ್ತಿನ ಸಂಖ್ಯೆ, ಟೇಬಲ್ ಸಂಖ್ಯೆ, ಮತಗಟ್ಟೆ ಸಂಖ್ಯೆ ತದನಂತರ ಮತಪತ್ರದಲ್ಲಿ ಕಂಡುಬರುವಂತೆ ಎಲ್ಲಾ ಸ್ಪರ್ಧಿಸಿರುವ ಅಭ್ಯರ್ಥಿಗಳ ಹೆಸರುಗಳನ್ನು ಹಾಗೂ ನೋಟಾ ಪ್ಯಾನಲ್ ಅನ್ನು ಬರೆದಿಟ್ಟುಕೊಳ್ಳುವುದಕ್ಕಾಗಿ ಸ್ಥಳಾವಕಾಶವಿರುತ್ತದೆ. ಅವರು ತಃಖ್ತೆಯ ಕೊನೆ ಭಾಗದಲ್ಲಿ ತಮ್ಮ ಸಹಿಯನ್ನು ಹಾಕಿ ಪ್ರತಿ ಸುತ್ತಿನ ನಂತರ ತಃಖ್ತೆಯನ್ನು ವೀಕ್ಷಕರಿಗೆ ನೀಡಬೇಕು.

16.24.6. ಸಾಕಷ್ಟು ಸಂಖ್ಯೆಯ ಕೇಂದ್ರ ಸರ್ಕಾರಿ ನೌಕರರು ಲಭ್ಯವಿರದಿರುವ ಸಂದರ್ಭದಲ್ಲಿ ವಿಭಾಗೀಯ ಆಯಕ್ತರು ವಿಭಾಗದೊಳಗಿನ ನೆರೆಯ ಜಿಲ್ಲೆಗಳಿಂದ ಅಗತ್ಯವಿರುವಷ್ಟು ಸಂಖ್ಯೆಯ ಸಿಬ್ಬಂದಿಗಳನ್ನು ಸಜ್ಜುಗೊಳಿಸುವ ಮೂಲಕ ಕೊರತೆಯನ್ನು ಸರಿದೂಗಿಸುವರು. ಮೇಲೆ ಹೇಳಿದಂತೆ ಹೆಚ್ಚುವರಿ ಸಿಬ್ಬಂದಿಗೆ ಮತ ಎಣಿಕೆ ಕೇಂದ್ರಕ್ಕೆ ನಿಯೋಜನೆಗೊಳಿಸುವ ಮುನ್ನ ಒಂದು ಸ್ಥೂಲ ಅಭಿಶಿಕ್ಷಣ ತರಬೇತಿಯನ್ನು ನೀಡಲಾಗುವುದು. ಹೆಚ್ಚುವರಿ ಸಿಬ್ಬಂದಿಗೆ ಜಿಲ್ಲಾ ಚುನಾವಣಾ ಅಧಿಕಾರಿಯು ಗುರುತಿನ ಚೀಟಿಯನ್ನು ಸಹ ನೀಡುವರು. ಅಂಥ ಹೆಚ್ಚುವರಿ ಸಿಬ್ಬಂದಿಯ ಮತಕ್ಷೇತ್ರಾವಾರು ಮತ್ತು ತರವಾಯದ ಟೇಬಲ್‌ವಾರು ನಿಯೋಜನೆಯನ್ನು ಸಹ ವೀಕ್ಷಕರು ಯಾದೃಚ್ಛಿಕವಾಗಿ ಮಾಡಬೇಕು.

## 16.25. ಕಂಟ್ರೋಲ್ ಯೂನಿಟ್‌ಗಳನ್ನು ಒಳಗೊಂಡಿರುವ ಕ್ಯಾರಿಯಿಂಗ್ ಕೇಸ್‌ಗಳನ್ನು ತೆರೆಯುವುದು

16.25.1. ಕಂಟ್ರೋಲ್ ಯೂನಿಟ್‌ನ ಪ್ರತಿಯೊಂದು ಕ್ಯಾರಿಯಿಂಗ್ ಕೇಸ್‌ಅನ್ನು ಎಣಿಕೆ ಟೇಬಲ್‌ಗೆ ತಂದ ಕೂಡಲೇ, ಮತಗಟ್ಟೆಗಳಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಅದರ ಮೇಲೆ ಹಾಕಿದ ಮೊಹರುಗಳನ್ನು ಪರಿಕ್ಷಿಸಬೇಕು. ಒಂದು ವೇಳೆ ಕ್ಯಾರಿಯಿಂಗ್ ಕೇಸ್‌ನ ಮೇಲಿನ ಮೊಹರು ಸರಿಯಾಗಿ ಇಲ್ಲದಿದ್ದರೂ ಅದರಲ್ಲಿ ಇಡಲಾದ ಕಂಟ್ರೋಲ್ ಯೂನಿಟ್ ಮೇಲೆ ಹಾಕಿರುವ ಮೊಹರು, ಹಾಗೂ ವಿಶೇಷವಾಗಿ ಹಸಿರು ಬಣ್ಣದ ಕಾಗದ ಮೊಹರು (ಪೇಪರ್ ಸೀಲ್) ಗಳು ಸರಿಯಾಗಿ ಇದ್ದರೇ ನಂತರ ಕ್ಯಾರಿಯಿಂಗ್ ಕೇಸ್ ತೆರೆದು ಅದರಿಂದ ಕಂಟ್ರೋಲ್ ಯೂನಿಟ್ ಹೊರತೆಗೆಯಬೇಕು ಹಾಗೂ

ಎಣಿಕೆಯ ಟೇಬಲ್ ಬಳಿ ಇರುವ ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಅದರ ಮೇಲೆ ಇರುವ ಮೊಹರುಗಳನ್ನು ತಪಾಸಿಸಲು ಮತ್ತು ಪರಿಶೀಸಲು ಎಣಿಕೆ ಟೇಬಲ್ ಮೇಲೆ ಇರಿಸಬೇಕು.

**16.26. ಕಂಟ್ರೋಲ್ ಯೂನಿಟ್ ಮೇಲಿನ ಮೊಹರನ್ನು ಪರಿಶೀಲಿಸುವುದು**

16.26.1.ಯಾವುದೇ ಮತಯಂತ್ರದ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾದ ಮತಗಳನ್ನು ಎಣಿಕೆ ಮಾಡುವ ಮುನ್ನ, ಎಣಿಕಾ ಕೇಂದ್ರದಲ್ಲಿ ಹಾಜರಿರುವ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟರು ಅಥವಾ ಅವರ ಎಣಿಕಾ ಏಜೆಂಟರಿಗೆ ಕ್ಯಾರಿಯಿಂಗ್ ಕೇಸ್‌ನ ಮೇಲೆ ಅಂಟಿಸಲಾದ ಹೊರ ಸ್ಟ್ರಿಪ್ ಸೀಲ್, ವಿಶೇಷ ಟ್ಯಾಗು, ಕಾಗದ ಮೊಹರು (ಪೇಪರ್ ಸೀಲ್) ಮತ್ತು ಅಂತಹ ಪ್ರಮುಖವೆನಿಸುವಂತಹ ಮೊಹರುಗಳನ್ನು ಮತ್ತು ಕಂಟ್ರೋಲ್ ಯೂನಿಟ್‌ಅನ್ನು ಪರೀಕ್ಷಿಸಲು ಮತ್ತು ಮೊಹರುಗಳು ಸರಿಯಾದ ಕ್ರಮದಲ್ಲಿವೆ ಎಂಬುದನ್ನು ಅವರು ಖಾತ್ರಿಪಡಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು. ಯಾವುದೇ ಮತಯಂತ್ರಗಳು ವಿರೋಪಗೊಳಿಸಲಾಗಿದೆ ಎಂದು ಖಾತ್ರಿಯಾದಲ್ಲಿ ಆ ಮತಯಂತ್ರದೊಳಗೆ ದಾಖಲಾದ ಯಾವುದೇ ಮತವನ್ನು ಎಣಿಸತಕ್ಕದ್ದಲ್ಲ ಮತ್ತು ವಿಷಯವನ್ನು ಆಯೋಗದ ನಿರ್ದೇಶನಗಳನ್ನು ಪಡೆಯುವುದಕ್ಕಾಗಿ ಅದಕ್ಕೆ ವರದಿ ಮಾಡತಕ್ಕದ್ದು.

**16.27. ಕಂಟ್ರೋಲ್ ಯೂನಿಟ್ ಮೇಲಿನ ಮೊಹರುಗಳನ್ನು ಮತ್ತು ಗುರುತು ಚಿಹ್ನೆಗಳನ್ನು ಪರಿಶೀಲಿಸುವುದು**

16.27.1. ಕ್ಯಾರಿಯಿಂಗ್ ಕೇಸ್‌ನಿಂದ ಪ್ರತಿಯೊಂದು ಕಂಟ್ರೋಲ್ ಯೂನಿಟ್‌ನ್ನು ಹೊರ ತೆಗೆಯುತ್ತಿದ್ದಂತೆ, ಮತಗಟ್ಟೆಗಳಲ್ಲಿ ಬಳಸಲು ಪ್ರಿಸೈಡಿಂಗ್ ಅಧಿಕಾರಿಗೆ ಪೂರೈಕೆ ಮಾಡಲಾದ ಕಂಟ್ರೋಲ್ ಯೂನಿಟ್ ಅದೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಅದರ ಕ್ರಮಸಂಖ್ಯೆಯನ್ನು ಪರಿಶೀಲಿಸಲಾಗುತ್ತದೆ. ಆ ನಂತರ, ಮತಗಟ್ಟೆಗೆ ಮತಯಂತ್ರ ಪೂರೈಸುವ ಮೊದಲು, ರಿಟರ್ನಿಂಗ್ ಅಧಿಕಾರಿಯು ಕ್ಯಾಂಡಿಡೇಟ್ ಸೆಟ್ ಸೆಕ್ಷನ್ ಮೇಲೆ ಹಾಕಿರುವ ಮೊಹರನ್ನು ಮತ್ತು ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಹಾಕಿರುವ ರಿಸಲ್ಟ್ ಸೆಕ್ಷನ್‌ದ ಹೊರ ಕವಚದ ಮೇಲೆ ಹಾಕಿರುವ ಮೊಹರನ್ನು ಪರಿಶೀಲಿಸಲಾಗುವುದು. ಈ ಮೇಲಿನ ಯಾವುದೇ ಮೊಹರು ಅಸ್ತವ್ಯಸ್ತವಾಗಿದ್ದರೂ ಕೂಡ, ಫಲಿತಾಂಶ ವಿಭಾಗದ ಒಳಗಿನ ಕಾಗದದ ಮೊಹರು (ಪೇಪರ್ ಸೀಲ್)ಗಳು ದೃಢವಾಗಿದ್ದರೆ ಕಂಟ್ರೋಲ್ ಯೂನಿಟ್‌ಅನ್ನು ವಿರೂಪಗೊಳಿಸಲಾಗುವುದಿಲ್ಲ.

**16.28. ಕಾಗದದ ಮೊಹರಿನ (ಪೇಪರ್ ಸೀಲ್) ಮೇಲಿನ ಕ್ರಮ ಸಂಖ್ಯೆಯನ್ನು ತಾಳೆ ನೋಡುವುದು**

16.28.1. ರಿಸಲ್ಟ್ ಸೆಕ್ಷನ್ ಬಾಹ್ಯ ಕವರನ್ನು ಹೊರ ತೆಗೆಯುತ್ತಿದ್ದಂತೆ, ನೀವು ವಿಶೇಷ ಟ್ಯಾಗಿನೊಂದಿಗೆ ಮೊಹರು ಮಾಡಲಾದ ಒಳಗಿನ ಕವರ್ ಅನ್ನು ಮತ್ತು ಪ್ರಿಸೈಡಿಂಗ್ ಅಧಿಕಾರಿಯ ಮೊಹರನ್ನು ಕಾಣುವಿರಿ. ಈ ಮೊಹರು ಸರಿಯಾದ ಕ್ರಮದಲ್ಲಿರದಿದ್ದರೂ, ಸಹ ಹಸಿರು ಬಣ್ಣದ ಕಾಗದದ ಮೊಹರು ಭದ್ರವಾಗಿದ್ದರೆ, ಕಂಟ್ರೋಲ್ ಯೂನಿಟ್ ವಿರೂಪವಾಗಿರುವುದಿಲ್ಲ. ರಿಸಲ್ಟ್ ಸೆಕ್ಷನ್ ಒಳ ಭಾಗದಲ್ಲಿ ಹಸಿರು ಬಣ್ಣದ ಕಾಗದದ ಮೊಹರು (ಪೇಪರ್ ಸೀಲ್) ಇರುತ್ತದೆ. ಬೆಂಗಳೂರಿನ ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನಿಂದ 2006ರ ಮುನ್ನ ತಯಾರಿಸಲಾದ ಯಂತ್ರಗಳ ಸಂದರ್ಭದಲ್ಲಿ (ಎರಡು ಹಸಿರು ಕಾಗದದ ಮೊಹರುಗಳು ಇರುತ್ತವೆ) ಹಸಿರು ಕಾಗದದ ಮೊಹರುಗಳನ್ನು (ಪೇಪರ್ ಸೀಲ್) ರಿಸಲ್ಟ್ ಬಟನ್ ಇರುವಂತಹ ಒಳ ಕಂಪಾರ್ಟಮೆಂಟ್ ಬದಿಗಳಿಂದ ಕಾಗದದ ಮೊಹರಿನ ಎರಡು ತುದಿಗಳು ಮೇಲ್ಭಾಗದಿಂದ ಸುತ್ತಿ ಅಂಟಿಸಿರುವ ರೀತಿಯಲ್ಲಿ ಅಳವಡಿಸಲಾಗಿರುತ್ತದೆ. ಅಂತಹ ಒಂದು ಕಾಗದದ ಮೊಹರಿನ ಒಂದು ತುದಿಯು ಆ ಮೊಹರಿನ ಮುದ್ರಿತ ಕ್ರಮಸಂಖ್ಯೆಯನ್ನು ಹೊಂದಿರುತ್ತದೆ. ಆ ಕಾಗದದ ಮೊಹರಿನ ಮೇಲಿನ ಕ್ರಮಸಂಖ್ಯೆಯನ್ನು ಕಡ್ಡಾಯವಾಗಿ ನಮೂನೆ 17–ಸಿ ಯ ಭಾಗ 1ರ 9ನೇ ಬಾಬುವಿನಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಸಿದ್ಧಪಡಿಸಿದ ಕಾಗದದ ಮೊಹರಿನ ಲೆಕ್ಕದಲ್ಲಿ ನೀಡಲಾದ ಕ್ರಮಸಂಖ್ಯೆಯೊಂದಿಗೆ ತಾಳೆ ನೋಡಬೇಕು. ಎಣಿಕೆ ಟೇಬಲ್ ಬಳಿ ಹಾಜರಿರುವ ಎಣಿಕೆ ಏಜೆಂಟರಿಗೆ ಮತಗಟ್ಟೆಗಳಲ್ಲಿ ಮತದಾನ ಆರಂಭವಾಗುವ ಮುನ್ನ ಪ್ರಿಸೈಡಿಂಗ್ ಅಧಿಕಾರಿಯು ಅಳವಡಿಸಿರುವಂತಹ ಕಾಗದ ಮೊಹರು ಮತ್ತು ವಿಶೇಷ ಟ್ಯಾಗ್ ಗಳ ಕ್ರಮಸಂಖ್ಯೆ ಒಂದೇ ಆಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ತಾಳೆ ನೋಡಲು ಅವಕಾಶ ಮಾಡಿಕೊಡಬೇಕು.

16.28.2. ಕಂಟ್ರೋಲ್ ಯೂನಿಟ್‌ನಲ್ಲಿ ವಾಸ್ತವವಾಗಿ ಬಳಸಲಾದ ಕಾಗದದ ಮೊಹರಿನ ಕ್ರಮಸಂಖ್ಯೆಯು ಪ್ರಿಸೈಡಿಂಗ್ ಅಧಿಕಾರಿಯು ತೋರಿಸಿರುವಂತಹ ಕಾಗದದ ಮೊಹರಿನ ಲೆಕ್ಕದಲ್ಲಿನ ಕ್ರಮಸಂಖ್ಯೆಗೂ ತಾಳೆಯಾಗದಿದ್ದಲ್ಲಿ, ಬಹುಶಃ ಕಾಗದ ಮೊಹರಿನ ಲೆಕ್ಕವು ತಪ್ಪಾಗಿರಬಹುದು ಅಥವಾ ಮೇಲ್ನೋಟಕ್ಕೆ ಮತಯಂತ್ರಕ್ಕೆ ಸಂಬಂಧಿಸಿದಂತೆ ವಿರೂಪಗೊಂಡಿರಬಹುದೆಂಬ ಅನುಮಾನ ಉಂಟಾಗುತ್ತದೆ. ಪ್ರಿಸೈಡಿಂಗ್ ಅಧಿಕಾರಿಯು ಹಿಂತಿರುಗಿಸಿದ ಬಳಕೆ ಮಾಡಿರದ ಕಾಗದದ ಮೊಹರುಗಳ ಕ್ರಮಸಂಖ್ಯೆಯನ್ನು ಪರಿಶೀಲಿಸಿ ಅಥವಾ ಮತಗಟ್ಟೆಗಳಲ್ಲಿ ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಮಾಡಿರಬಹುದಾದ ದೂರು ಮೊದಲಾದ ಇನ್ನಿತರ ಸೂಕ್ತ ಸಂದರ್ಭಗಳನ್ನು ಆಧರಿಸಿ ವಿವಾದವನ್ನು ನಿರ್ಣಯಿಸಿ ಇದು ಲಿಪಿಕ ದೋಷವೆಂದು ನಿಮಗೆ ಕಂಡುಬಂದಲ್ಲಿ ವ್ಯತ್ಯಾಸವನ್ನು ಅಲಕ್ಷಿಸಿ.

**16.29. ಕಂಟ್ರೋಲ್ ಯೂನಿಟ್ ವಿರೂಪಗೊಂಡಿರುವುದು ಕಂಡುಬಂದಲ್ಲಿ ಅದನ್ನು ಪ್ರತ್ಯೇಕವಾಗಿಡಬೇಕು**

16.29.1. ಮತ್ತೊಂದೆಡೆ ಮತಯಂತ್ರವು ವಿರೂಪಗೊಂಡಿದೆ ಅಥವಾ ನಿರ್ದಿಷ್ಟ ಮತಗಟ್ಟೆಗೆ ಪೂರೈಸಲಾದ ಮತಯಂತ್ರ ಅಲ್ಲವೆಂದು ರಿಟರ್ನಿಂಗ್ ಅಧಿಕಾರಿಗೆ ಮನವರಿಕೆಯಾದಲ್ಲಿ, ಆ ಯಂತ್ರವನ್ನು ಪ್ರತ್ಯೇಕವಾಗಿಡಬೇಕು ಮತ್ತು ಅದರಲ್ಲಿ ದಾಖಲಾದ ಮತಗಳನ್ನು ಎಣಿಕೆ ಮಾಡಬಾರದು. ಅವರು ಚುನಾವಣಾ ಆಯೋಗಕ್ಕೆ ಈ ವಿಷಯವನ್ನು ವರದಿ ಮಾಡಬೇಕು. ಮತಯಂತ್ರವು ವಿರೂಪಗೊಂಡಿದೆ ಎಂದು ರಿಟರ್ನಿಂಗ್ ಅಧಿಕಾರಿಯವರಿಗೆ ಕಂಡುಬಂದಲ್ಲಿ, ಕಾನೂನಿನ ಮೇರೆಗೆ ಸಮಗ್ರ ಎಣಿಕೆ ಪ್ರಕ್ರಿಯೆಯನ್ನು ಮುಂದೂಡುವ ಅಗತ್ಯವಿಲ್ಲ. ಆದ್ದರಿಂದ  ರಿಟರ್ನಿಂಗ್ ಅಧಿಕಾರಿಯು ಬೇರೆ ಮತಗಟ್ಟೆಗಳಿಗೆ ಸಂಬಂಧಪಟ್ಟಂತೆ ಎಣಿಕೆಯನ್ನು ಮುಂದುವರೆಸುವರು.

**16.30. ಫಲಿತಾಂಶವನ್ನು ಖಚಿತಪಡಿಸುವುದು**


16.30.1. ಕಾಗದದ ಮೊಹರು (ಪೇಪರ್ ಸೀಲ್) ಸರಿಯಾಗಿದೆ, ಕಂಟ್ರೋಲ್ ಯೂನಿಟ್ ಮತಗಟ್ಟೆಗೆ ಪೂರೈಸಲಾದ ಕಂಟ್ರೋಲ್ ಯೂನಿಟ್ಟೇ ಆಗಿದೆ ಮತ್ತು ಅದನ್ನು ಯಾವುದೇ ರೀತಿಯಲ್ಲಿ ವಿರೂಪಗೊಳಿಸಿರುವುದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡ ನಂತರ ಅದರಲ್ಲಿ ದಾಖಲಾದ ಮತಗಳನ್ನು ಎಣಿಕೆ ಮಾಡಬೇಕು. ಯಂತ್ರಗಳಲ್ಲಿ ದಾಖಲಾದ ಮತಗಳನ್ನು ಎಣಿಕೆ ಮಾಡಲು ಈ ಕೆಳಕಂಡ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು:–

i. ಕಂಟ್ರೋಲ್ ಯೂನಿಟ್‌ನ ಹಿಂಭಾಗದ ಕಂಪಾರ್ಟ್‌ಮೆಂಟ್‌ನಲ್ಲಿ ಒದಗಿಸಲಾದ ವಿದ್ಯುತ್ ಪವರ್ ಸ್ವಿಚ್‌ಅನ್ನು 'ಆನ್' ಮಾಡುವ ಮೂಲಕ ಸಕ್ರಿಯಗೊಳಿಸಲಾಗುವುದು. ನಂತರ ಕಂಟ್ರೋಲ್ ಯೂನಿಟ್‌ನ 'ಡಿಸ್‌ಪ್ಲೇ ಸೆಕ್ಷನ್'ನಲ್ಲಿನ 'ಆನ್' ದೀಪವು ಹಸಿರು ಬಣ್ಣದಲ್ಲಿ ಪ್ರಕಾಶಿಸುತ್ತದೆ;

ii. ರಿಸಲ್ಟ್ ಸೆಕ್ಷನನ ಒಳ ಭಾಗದ ಮೇಲ್ಭಾಗದ ರಂಧ್ರದಲ್ಲಿ ಕೆಳಗೆ ಒದಗಿಸಲಾದ 'ರಿಸಲ್ಟ್' ಬಟನ್ನಿನ ಮೇಲ್ಭಾಗದಲ್ಲಿನ ಕಾಗದದ ಮೊಹರನ್ನು ಹರಿಯುವುದು;

iii. ನಂತರ 'ರಿಸಲ್ಟ್'ಬಟನ್ ಅನ್ನು ಒತ್ತುವುದು;

iv. 'ರಿಸಲ್ಟ್' ಬಟನ್ ಅನ್ನು ಹಾಗೇ ಒತ್ತುತ್ತಿದ್ದಂತೆಯೇ, ಮತಗಟ್ಟೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೆ ದಾಖಲಾದ ಮತಗಳ ಒಟ್ಟು ಸಂಖ್ಯೆಯನ್ನು ಹಾಗೂ ನೋಟಾ ಮತಗಳ ಒಟ್ಟು ಸಂಖ್ಯೆಯನ್ನು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್ ಸ್ವಯಂಚಾಲಿತವಾಗಿ ಪ್ರದರ್ಶಿಸುತ್ತದೆ.




v. ಅಭ್ಯರ್ಥಿವಾರು ಕ್ರಮವಾಗಿ ಪ್ರದರ್ಶಿಸಿದ ಮೇಲಿನ ಫಲಿತಾಂಶವನ್ನು 17–ಸಿ ಯ ಭಾಗ II– ಎಣಿಕೆ ಫಲಿತಾಂಶ ಇದರಲ್ಲಿ ಎಣಿಕೆ ಮೇಲ್ವಿಚಾರಕನು ಬರೆದಿಟ್ಟುಕೊಳ್ಳತಕ್ಕದ್ದು.

16.30.2. ಅಗತ್ಯವಿದ್ದಲ್ಲಿ, ಮೇಲಿನ ಫಲಿತಾಂಶ ಬರೆದಿಟ್ಟುಕೊಳ್ಳುಲು ಅಭ್ಯರ್ಥಿಗಳು ಮತ್ತು /ಅಥವಾ ಅವರ ಏಜೆಂಟರುಗಳಿಗೆ ಸಾಧ್ಯವಾಗಿಸಲು 'ರಿಸಲ್ಟ್ 1' ಬಟನ್ ಅನ್ನು ಪುನಃ ಒತ್ತಬಹುದು.

16.30.3. ಫಲಿತಾಂಶವನ್ನು ಬರೆದಿಟ್ಟುಕೊಂಡ ನಂತರ, ರಿಸಲ್ಟ್ ಸೆಕ್ಷನ್ ಕವರ್‌ಅನ್ನು ಮುಚ್ಚಬೇಕು ಮತ್ತು ಕಂಟ್ರೋಲ್ ಯೂನಿಟ್‌ಅನ್ನು ಸ್ವಿಚ್ ಆಫ್ ಮಾಡುವುದು.

16.30.4. ಪ್ರತಿಯೊಂದು ಸುತ್ತಿನ ಮತ ಎಣಿಕೆ ಸಂದರ್ಭದಲ್ಲೂ ಎಣಿಕಾ ಕೇಂದ್ರದ ಮೇಲ್ವಿಚಾರಕರು, ಇವಿಎಂನ ಕಂಟ್ರೋಲ್ ಯೂನಿಟ್‌ನ ಫಲಿತಾಂಶದ ಬಟನ್ ಅನ್ನು ಒತ್ತುವಾಗ, ಎಲ್ಲಾ ಅಭ್ಯರ್ಥಿಗಳ ಎಣಿಕಾ ಎಜೆಂಟರ ಸಮಾಧಾನಕ್ಕಾಗಿ ಪ್ರತಿಯೊಬ್ಬ ಅಭ್ಯರ್ಥಿಯ ಪರವಾಗಿ ಚಲಾವಣೆಯಾದ ಮತಗಳನ್ನು ಬರೆದುಕೊಳ್ಳುವ ಸಲುವಾಗಿ ಕಂಟ್ರೋಲ್ ಯೂನಿಟ್ ಪ್ರದರ್ಶನ ಫಲಕವನ್ನು ನೋಡಲು ಅವಕಾಶ ನೀಡಿದ ಬಗ್ಗೆ ಖಾತ್ರಿಪಡಿಸಬೇಕು ಎಂದು ಆಯೋಗವು ನಿರ್ದೇಶನ ನೀಡಿದೆ. ಈ ಉದ್ದೇಶಕ್ಕಾಗಿ, ಅಗತ್ಯವಿದ್ದಲ್ಲಿ, ಎಣಿಕೆ ಮೇಜಿನಲ್ಲಿ ಕುಳಿತಿರುವ ಎಣಿಕೆ ಮೇಲ್ವಿಚಾರಕರು, ಎರಡನೆಯ ಎಣಿಕೆ ಸಹಾಯಕ ಮತ್ತು ಸೂಕ್ಷ್ಮ ವೀಕ್ಷಕರು ಹಾಗೂ ತಂತಿಬಲೆ/ ಬೇಲಿಯ ಅಡ್ಡದಲ್ಲಿರುವ ಅಭ್ಯರ್ಥಿಗಳ ಎಣಿಕಾ ಏಜೆಂಟರಿಗೆ ಸ್ಪಷ್ಟವಾಗಿ ಕಾಣುವಂತೆ ಮಾಡಲು ಎಣಿಕಾ ಸಹಾಯಕರಲ್ಲೊಬ್ಬರ ಸಹಾಯದಿಂದ ಕಂಟ್ರೋಲ್ ಯೂನಿಟ್ ಅನ್ನು ಎತ್ತಿತೋರಿಸಬಹುದು.

ಯಾರೇ ಎಣಿಕಾ ಏಜೆಂಟನು ಇ.ವಿ.ಎಂ.ನ ಫಲಕದಲ್ಲಿ ಬಂದಂತಹ ಫಲಿತಾಂಶವನ್ನು ಒಂದಕ್ಕಿಂತ ಹೆಚ್ಚು ಬಾರಿ ನೋಡಲು ಬಯಸಿದ್ದಲ್ಲಿ, ಎಣಿಕೆ ಏಜೆಂಟರ ಸಮಾಧಾನಕ್ಕಾಗಿ ಎಣಿಕಾ ಮೇಲ್ವಿಚಾರಕರು ಅದನ್ನು ಮಾಡತಕ್ಕದ್ದು.

16.30.5. ಫಲಿತಾಂಶ ಹಾಳೆಯ ನಮೂದುಗಳ ಘೋಷಣೆಯ ನಂತರ, ಯಾರೇ ಅಭ್ಯರ್ಥಿ, ಅವರ ಚುನಾವಣಾ ಏಜೆಂಟ್ ಅಥವಾ ಅವರ ಎಣಿಕಾ ಏಜೆಂಟರುಗಳು ಯಾವುದೇ ಅಥವಾ ಎಲ್ಲಾ ಮತದಾನ ಕೇಂದ್ರಗಳಲ್ಲಿನ ಮುದ್ರಿತVVPAT Paper Slipಗಳನ್ನು ಎಣಿಕೆ ಮಾಡುವಂತೆ ರಿಟರ್ನಿಂಗ್ ಅಧಿಕಾರಿಗೆ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಅಂತಹ ಅರ್ಜಿಯನ್ನು ಸಲ್ಲಿಸಿದ್ದರೆ, ರಿಟರ್ನಿಂಗ್ ಅಧಿಕಾರಿಯು VVPAT Paper Slipಗಳನ್ನು ಎಣಿಕೆ ಮಾಡಬೇಕೇ ಎಂಬ ಬಗ್ಗೆ ಆದೇಶವನ್ನು ಮಾಡತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಯಾವುದೇ ಅಥವಾ ಎಲ್ಲಾ ಮತದಾನ ಕೇಂದ್ರಗಳ VVPAT Paper Slipಗಳನ್ನು ಎಣಿಕೆ ಮಾಡುವುದಕ್ಕೆ ಅನುಮತಿಸಲು ನಿರ್ಧರಿಸಿದರೆ, ರಿಟರ್ನಿಂಗ್ ಅಧಿಕಾರಿಯ ಅಂತಹ ನಿರ್ಧಾರವನ್ನು ಅದರ ಕಾರಣಗಳೊಂದಿಗೆ ಲಿಖಿತದಲ್ಲಿ ದಾಖಲಿಸಬೇಕು. ರಿಟರ್ನಿಂಗ್ ಅಧಿಕಾರಿಯು ಈ ಕೆಳಕಂಡವುಗಳ ಬಗ್ಗೆ ಯುಕ್ತ ಗಮನವನ್ನು ಕೊಡತಕ್ಕದ್ದು:

**1.** ಆ ಮತದಾನ ಕೇಂದ್ರದಲ್ಲಿ ಚಲಾವಣೆಯಾದ ಒಟ್ಟು ಮತಗಳ ಸಂಖ್ಯೆಯು, ವಿಜೇತ ಅಭ್ಯರ್ಥಿ ಮತ್ತು ಅರ್ಜಿಯನ್ನು ಸಲ್ಲಿಸುತ್ತಿರುವ ಅಭ್ಯರ್ಥಿಯ ನಡುವಿನ ಮತಗಳ ಅಂತರವು ಹೆಚ್ಚು ಅಥವಾ ಕಡಿಮೆಯಾಗಿದೆಯೇ.

2. ಮತದಾನದ ಅವಧಿಯಲ್ಲಿ ಆ ಮತದಾನ ಕೇಂದ್ರದಲ್ಲಿ ಇವಿಎಂನ ಸಮಸ್ಯೆ ಇತ್ತೇ? ಮತ್ತು ಇವಿಎಂನ್ನು ಬದಲಾಗಿಸಲಾಗಿತ್ತೇ?

3. ಮತದಾನದ ಅವಧಿಯಲ್ಲಿ ಆ ಮತದಾನ ಕೇಂದ್ರದಲ್ಲಿ ವಿವಿಪ್ಯಾಟ್‌ನಲ್ಲಿ ಮುದ್ರಣವಾಗದಿರುವ ಬಗ್ಗೆ ಅಥವಾ ವಿವಿಪ್ಯಾಟ್‌ನಲ್ಲಿ ದೋಷಗಳಿರುವ ಬಗ್ಗೆ ನಿಯಮ 49ಎಂಎ ಅಡಿ ಯಾರೇ ಮತದಾರನಿಂದ ದೂರು ಸ್ವೀಕರಿಸಲಾಗಿತ್ತೇ

16.30.6. ಯಾವುದೇ ಮತದಾನ ಕೇಂದ್ರದ(ಗಳ) ಮತಗಳನ್ನು ಮರುಎಣಿಕೆ ಮಾಡುವಂತೆ ಕೋರಿ ಸಲ್ಲಿಸಿದ ಮನವಿಯ ಮೇರೆಗೆ ಯಾವುದೇ ಮತದಾನ ಕೇಂದ್ರದ(ಗಳ) ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡಲು ರಿಟರ್ನಿಂಗ್ ಅಧಿಕಾರಿಯು ನಿರ್ಧರಿಸಿದರೆ, ಈ ಮುಂದಿನ ಕಾರ್ಯವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು:

- **ಹಂತ:–1**

1. ವಿವಿಪ್ಯಾಟ್‌ನ Drop Box ನಿಂದ ಹೊರತೆಗೆದ ಪೇಪರ್ ಸ್ಲಿಪ್‌ಗಳನ್ನು ಇಡುವುದಕ್ಕಾಗಿ 14 ಇಂಚು X 10 ಇಂಚು X 5 ಇಂಚಿನ(ಉದ್ದ X ಅಗಲ X ಎತ್ತರ)ಮುಚ್ಚಳವಿರುವ ಸಾಕಷ್ಟು ಗಾತ್ರದ ಕಂಟೈನರ್‌ನ್ನು ಸುಮಾರು 1400 ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಸುಲಭವಾಗಿ ಇಡುವ ಹಾಗೆ ವಿಸಿಬಿ (ವಿವಿಪ್ಯಾಟ್ ಕೌಂಟಿಂಗ್ ಬೂತ್) ಮೇಜಿನ ಮೇಲೆ ಇಡತಕ್ಕದ್ದು. ಈ ಕಂಟೈನರ್‌ನ್ನು ಪ್ಲಾಸ್ಟಿಕ್‌ನಂತಹ ದಪ್ಪವಾದ ಪಾರದರ್ಶಕ ಸಾಮಗ್ರಿಯಿಂದ ಮಾಡಿರತಕ್ಕದ್ದು.
2. ಆಯಾಯ ಅಭ್ಯರ್ಥಿಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಇಡುವ ಸಲುವಾಗಿ,"NOTA" ನೋಟವನ್ನು ಒಳಗೊಂಡಂತೆ ಅಭ್ಯರ್ಥಿಗಳ ಸಂಖ್ಯೆಗಳಿಗೆ ಅನುಸಾರವಾಗಿ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ಗಳ ಸ್ವ–ಪರೀಕ್ಷಾ ಸ್ಲಿಪ್‌ಗಳನ್ನು ಇಡುವುದಕ್ಕಾಗಿ ಒಂದು ಹೆಚ್ಚುವರಿ ಖಾನೆ (pigeonhole) ಸಹಿತ ಖಾನೆಗಳುಳ್ಳ (pigeonhole) ಒಂದು ಚೌಕಟ್ಟನ್ನು ಮುಂಚಿತವಾಗಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ವಿಸಿಬಿ ಮೇಜಿನ ಮೇಲೆ ಇಡತಕ್ಕದ್ದು. ಚೌಕಟ್ಟಿನಲ್ಲಿನ ಖಾನೆಗಳ(pigeonholes)ಕನಿಷ್ಠ ಸಂಖ್ಯೆಯು ಅಭ್ಯರ್ಥಿಗಳ ಸಂಖ್ಯೆ+2ಗೆ (ಎರಡು) ಸಮನಾಗಿರತಕ್ಕದ್ದು. ಪ್ರತಿಯೊಂದು ಕಂಪಾರ್ಟ್‌ಮೆಂಟಿನ (pigeonhole) ಗಾತ್ರವು ಕನಿಷ್ಠ 6 ಇಂಚು X 4 ಇಂಚು X 4 ಇಂಚು ಇರಬೇಕು. ಯಾವುದೇ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳು ಕೆಳಗೆ ಬೀಳದಂತೆ ತಡೆಯಲು ಜೋಡಿಸಿರುವ ತಳವನ್ನು ಹೊಂದಿರುವ ಖಾನೆಯ(pigeonhole)ನ ರಚನೆಯನ್ನು ಪ್ಲಾಸ್ಟಿಕ್‌ನಂತಹ ಸ್ಥೂಲ ಪಾರದರ್ಶಕ ಸಾಮಗ್ರಿಯಿಂದ ಮಾಡಿರತಕ್ಕದ್ದು. ಮತಪತ್ರದ ಪ್ರಕಾರ, ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಯ ಚಿಹ್ನೆಯನ್ನು, ನಿರ್ದಿಷ್ಟ ಅಭ್ಯರ್ಥಿಗಳಿಗೆ ಹಂಚಿಕೆಯಾದ ಖಾನೆಯ(pigeonhole) ಪಾರ್ಶ್ವದ ಮೇಲೆ ಅಂಟಿಸತಕ್ಕದ್ದು. ಚಿಹ್ನೆಯು ಕನಿಷ್ಠ 4 ಇಂಚು X 3 ಇಂಚು ಗಾತ್ರದ ಸಾದಾ ಹಾಳೆಯ ಮೇಲೆ ಕಪ್ಪು ಮತ್ತು ಬಿಳಿ ಬಣ್ಣದಲ್ಲಿ ಮುದ್ರಿತವಾಗಿರಬೇಕು.
3. 25 ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಬಂಡಲ್(ಕಟ್ಟು)ಗಳನ್ನು ಮಾಡುವುದಕ್ಕಾಗಿ ಕನಿಷ್ಠ ಪಕ್ಷ 100 ರಬ್ಬರ್ ಬ್ಯಾಂಡ್‌ಗಳಿರಬೇಕು.

□ **ಹಂತ 2:**

1. ಸಂಬಂಧಪಟ್ಟ ಮತದಾನ ಕೇಂದ್ರದ(ಗಳ) ವಿವಿಪ್ಯಾಟ್‌ನ ಯೂನಿಟ್(ಗಳ)ನ್ನು ಸಂದರ್ಭಾನುಸಾರ ಒಂದೊಂದಾಗಿ ವಿಸಿಬಿಗೆ ತರತಕ್ಕದ್ದು.
2. ಆ ಮತದಾನ ಕೇಂದ್ರದಲ್ಲಿ ಮತದಾನ ಅವಧಿಯಲ್ಲಿ ವಿವಿಪ್ಯಾಟ್ ಯೂನಿಟ್ ಅನ್ನು ಬದಲಾಯಿಸಿದ್ದ ಸಂದರ್ಭದಲ್ಲಿ, ಆ ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಎಲ್ಲಾ ವಿವಿಪ್ಯಾಟ್ ಯೂನಿಟ್‌ಗಳನ್ನು ವಿಸಿಬಿಗೆ ತರಬೇಕು.

□ **ಹಂತ 3:**

1. ಯಾವುದೇ ಮತದಾನ ಕೇಂದ್ರದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯನ್ನು ಪ್ರಾರಂಭಿಸುವುದಕ್ಕೂ ಮುಂಚೆ, ಆ ಮತದಾನ ಕೇಂದ್ರದಲ್ಲಿ ಉಪಯೋಗಿಸಲಾದ ಎಲ್ಲಾ ವಿವಿಪ್ಯಾಟ್‌ಗಳಿಂದ ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಹೊರ ತೆಗೆಯತಕ್ಕದ್ದು.
2. Drop Box ನಿಂದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಹೊರಗೆ ತೆಗೆಯುವ ಮುನ್ನ, ಆ ವಿವಿಪ್ಯಾಟ್ ಸಂಬಂಧಪಟ್ಟ ಮತದಾನ ಕೇಂದ್ರಕ್ಕೆ ಸಂಬಂಧಿಸಿದ್ದೆಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಲು Drop Boxನ ಅಡ್ರೆಸ್ ಟ್ಯಾಗ್(ಗಳ)ನ್ನು ಪರಿಶೀಲನೆ ಮಾಡಿ ನೋಡತಕ್ಕದ್ದು.
3. ವಿವಿಪ್ಯಾಟ್‌ನ Drop Box ನಿಂದ ಹೊರ ತೆಗೆದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಮೊದಲು ಹಂತ–1(1)ರಲ್ಲಿನ ನಿರ್ದಿಷ್ಟ ವಿವರಣೆ ಪ್ರಕಾರ ಕಂಟೇನರ್‌ನಲ್ಲಿ ಇಡತಕ್ಕದ್ದು.
4. Drop Box ನಿಂದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಹೊರ ತೆಗೆದ ನಂತರ, ಎಣಿಕಾ ಮೇಲ್ವಿಚಾರಕನು ವಿವಿಪ್ಯಾಟ್ Drop Box ನ ಒಳಗಡೆ ಯಾವುದೇ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳು ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಎಣಿಕೆ ಏಜೆಂಟರುಗಳಿಗೆ ಖಾಲಿ Drop Boxನ್ನು ತೋರಿಸತಕ್ಕದ್ದು.
5. ವಿವಿಪ್ಯಾಟ್ ಯೂನಿಟ್‌ನ್ನು ಬದಲಾಯಿಸಿದ ಸಂದರ್ಭದಲ್ಲಿ, ಪೂರ್ಣವಾಗಿ ಅಥವಾ ಭಾಗಶಃವಾಗಿ ಕತ್ತರಿಸಲ್ಪಡದ ವಿವಿಪ್ಯಾಟ್ ಪೇಪರ್ ಸ್ಲಿಪ್ ನೇತಾಡುತ್ತಿದ್ದು, ಕತ್ತರಿಸಿಕೊಂಡು ಡ್ರಾಪ್ ಬಾಕ್ಸ್‌ನೊಳಗೆ ಬಿದ್ದಿರಬಹುದಾದ ಮತ್ತು ಇನ್ನೂ ಪೇಪರ್ ರೋಲ್ ಜೊತೆ ಸಂಪರ್ಕ ಹೊಂದಿರಬಹುದಾದ ಸಾಧ್ಯತೆ ಇರುತ್ತದೆ. ಈ ಕತ್ತರಿಸದ ವಿವಿಪ್ಯಾಟ್ ಪೇಪರ್ ಸ್ಲಿಪ್‌ನ್ನು ಹರಿಯಬಾರದು ಮತ್ತು ಎಣಿಕೆ ಮಾಡಬಾರದು, ಏಕೆಂದರೆ ವಿವಿಪ್ಯಾಟ್, ಪೇಪರ್ ಸ್ಲಿಪ್‌ನ್ನು ಕತ್ತರಿಸದ ಹೊರತು ಕಂಟ್ರೋಲ್

ಯೂನಿಟ್‌ನಲ್ಲಿ ಮತವು ವಿದ್ಯುನ್ಮಾನವಾಗಿ ದಾಖಲಾಗಿರುವುದಿಲ್ಲ. ಅಂತಹ ಸಂದರ್ಭದಲ್ಲಿ, ಯಾವ ಮತದಾರನ ವಿವಿಪ್ಯಾಟ್ ಪೇಪರ್ ಸ್ಲಿಪ್ ಕತ್ತರಿಸಿಕೊಂಡು ಡ್ರಾಪ್ ಬಾಕ್ಸ್‌ನಲ್ಲಿ ಬಿದ್ದಿರುವುದಿಲ್ಲವೊ ಆ ಕೊನೆಯ ಮತದಾರನಿಗೆ ವಿವಿಪ್ಯಾಟ್‌ನ್ನು ಬದಲಾಯಿಸಿದ ನಂತರ ತನ್ನ ಮತವನ್ನು ಚಲಾಯಿಸಲು ಅವಕಾಶವನ್ನು ನೀಡಬಹುದಾಗಿದ್ದು ಮತ್ತು ಅವನು ಚಲಾಯಿಸಿದ ಮತದ ವಿವಿಪ್ಯಾಟ್ ಪೇಪರ್ ಸ್ಲಿಪ್ ಆ ಮತದಾನ ಕೇಂದ್ರದಲ್ಲಿ ಬಳಸಿದ ನಂತರದ ವಿವಿಪ್ಯಾಟ್‌ನಲ್ಲಿ ಇರುತ್ತದೆ.

6. ವಿವಿಪ್ಯಾಟ್‌ನ Drop Box, ಸ್ವ-ಪರೀಕ್ಷಾ ವರದಿಯ ವಿವಿಪ್ಯಾಟ್ ಸ್ಲಿಪ್‌ಗಳನ್ನು ಕೂಡ ಹೊಂದಿರುತ್ತವೆ. ಇವುಗಳು ಅಭ್ಯರ್ಥಿಯ ಹೆಸರು ಅಥವಾ ಚಿಹ್ನೆ ಹೊಂದಿರದಿರುವುದರಿಂದ ಇವುಗಳನ್ನು ಸುಲಭವಾಗಿ ಗುರುತಿಸಬಹುದು. ಈ ಸ್ವ-ಪರೀಕ್ಷಾ ವರದಿಯ ಸ್ಲಿಪ್‌ಗಳನ್ನು ದಾಖಲೆಯ ಭಾಗವಾಗಿ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳೊಂದಿಗೆ ಸಂರಕ್ಷಿಸಿಡಬೇಕು, ಆದರೆ ಅವುಗಳನ್ನು ಎಣಿಕೆ ಮಾಡಬಾರದು.

- **ಹಂತ 4:**

1. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಒಂದೊಂದಾಗಿ ಪ್ರತ್ಯೇಕಿಸಬೇಕು ಮತ್ತು ಎಣಿಕಾ ಏಜೆಂಟರುಗಳಿಗೆ ಪ್ರತಿಯೊಂದು ಸ್ಲಿಪ್‌ನ್ನು ತೋರಿಸಿದ ನಂತರ ಸಂಬಂಧಪಟ್ಟ ಖಾನೆಗಳಲ್ಲಿ ಅವುಗಳನ್ನು ಇಡಬೇಕು. ಸ್ವ-ಪರೀಕ್ಷಾ ವರದಿಯನ್ನು ಹೊಂದಿರುವ ಪೇಪರ್ ಸ್ಲಿಪ್‌ಗಳನ್ನು ಸಹ ಪ್ರತ್ಯೇಕಿಸಬೇಕು ಮತ್ತು ಈ ಉದ್ದೇಶಕ್ಕಾಗಿ ಒದಗಿಸಲಾದ ಒಂದು ಪ್ರತ್ಯೇಕ ಖಾನೆಯಲ್ಲಿ ಅವುಗಳನ್ನು ಇಡಬೇಕು.
2. ಆಯಾಯ ಅಭ್ಯರ್ಥಿಗಳ 25 ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಬಂಡಲ್‌ಗಳನ್ನು (ಕಟ್ಟುಗಳನ್ನು) ಎಣಿಕೆ ಉದ್ದೇಶಕ್ಕಾಗಿ ಸಿದ್ಧಪಡಿಸತಕ್ಕದ್ದು.
3. ನಂತರ, ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಸಿಬ್ಬಂದಿಯು ಎಣಿಕೆ ಮಾಡತಕ್ಕದ್ದು.
4. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯ ಫಲಿತಾಂಶವನ್ನು ಅನುಬಂಧ – VIIರಲ್ಲಿರುವ ಪ್ರಪತ್ರದಲ್ಲಿ ಸಿದ್ಧಪಡಿಸಿ,ನಮೂನೆ 17–ಸಿ ಯ ಭಾಗ–IIಕ್ಕೆ ಲಗತ್ತಿಸತಕ್ಕದ್ದು.
5. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯ ಫಲಿತಾಂಶವನ್ನು ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 56 ಡಿ(ಬಿ)ಯ ಅನುಸಾರವಾಗಿ ಎಣಿಕೆಯ

ಕೊಠಡಿಯಲ್ಲಿ ಗಟ್ಟಿಧ್ವನಿಯಲ್ಲಿ ಘೋಷಣೆ ಮಾಡತಕ್ಕದ್ದು ಮತ್ತು ಎಣಿಕೆ ಏಜೆಂಟರುಗಳಿಗೆ ತೋರಿಸತಕ್ಕದ್ದು, ಇವಿಎಂ ಎಣಿಕೆ ಮತ್ತು ಪೇಪರ್ ಸ್ಲಿಪ್ ಎಣಿಕೆ ನಡುವೆ ಯಾವುದಾದರೂ ವ್ಯತ್ಯಾಸವಿದ್ದಲ್ಲಿ, ಪೇಪರ್ ಸ್ಲಿಪ್‌ನ ಎಣಿಕೆಗೆ ಮಾನ್ಯತೆ ನೀಡತಕ್ಕದ್ದು. ಆದ್ದರಿಂದ, ಆಯಾ ಮತದಾನ ಕೇಂದ್ರಕ್ಕೆ ಸಂಬಂಧಿಸಿದ ಕಂಟ್ರೋಲ್ ಯೂನಿಟ್‌ನಲ್ಲಿ ಡಿಸ್‌ಪ್ಲೇ ಆದ ಮತಗಳ ಲೆಕ್ಕ ಮತ್ತು ಮುದ್ರಿತ ಪೇಪರ್ ಸ್ಲಿಪ್‌ಗಳ ಲೆಕ್ಕದ ನಡುವೆ ವ್ಯತ್ಯಾಸವಿದ್ದಲ್ಲಿ, ಫಲಿತಾಂಶದ ಹಾಳೆಯನ್ನು ಮುದ್ರಿತ ಪೇಪರ್ ಸ್ಲಿಪ್‌ಗಳ ಲೆಕ್ಕದ ಅನ್ವಯ ತಿದ್ದುಪಡಿ ಮಾಡುವುದು.

 **ಹಂತ 5:**

1. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆ ಮುಗಿದ ನಂತರ, ಎಲ್ಲ ವಿವಿಪ್ಯಾಟ್ ಪೇಪರ್ ಸ್ಲಿಪ್ ಬಂಡಲ್‌ಗಳನ್ನು ಆಯಾ ವಿವಿಪ್ಯಾಟ್‌ಗಳ ಡ್ರಾಪ್ ಬಾಕ್ಸ್‌ನಲ್ಲಿಯೇ ಇಡತಕ್ಕದ್ದು ಮತ್ತು ಅಡ್ರಸ್ ಟ್ಯಾಗ್‌ಗಳನ್ನು ಬಳಸಿಕೊಂಡು ಡ್ರಾಪ್ ಬಾಕ್ಸ್‌ನ ಬಾಗಿಲುಗಳನ್ನು ಮೊಹರು ಮಾಡತಕ್ಕದ್ದು.
2. ಅಭ್ಯರ್ಥಿ(ಗಳು)/ಅವರ ಏಜೆಂಟ್‌ಗಳಿಗೆ ಅಡ್ರಸ್ ಟ್ಯಾಗ್‌ಗಳ ಮೇಲೆ ಪಕ್ಷದ ಸಂಕೇತಾಕ್ಷರಗಳೊಂದಿಗೆ ತಮ್ಮ ಸಹಿಯನ್ನು ಹಾಕಲು ಸಹ ಅನುಮತಿಸಬಹುದು.

**16.30.7.** ಕಂಟ್ರೋಲ್ ಯೂನಿಟ್‌ನಿಂದ ಫಲಿತಾಂಶ ಪ್ರದರ್ಶನವಾಗದ ಕಾರಣದಿಂದ ಅಥವಾ ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 56(ಡಿ)ಯ ಅಡಿ ಯಾವ ಮತದಾನ ಕೇಂದ್ರದ(ಗಳ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು, ಈಗಾಗಲೇ ಎಣಿಕೆ ಮಾಡಲಾಗಿದೆಯೋ ಆ ಮತದಾನ ಕೇಂದ್ರವನ್ನು(ಗಳನ್ನು) ಸಹ ಯಾದೃಚ್ಛಿಕೀಕರಣಕ್ಕಾಗಿ ಒಳಪಡಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ

**1.** ಒಂದಕ್ಕಿಂತ ಹೆಚ್ಚು ವಿವಿಪ್ಯಾಟ್‌ಗಳನ್ನು ಬಳಸಲಾದ ಮತದಾನ ಕೇಂದ್ರಗಳಿಗೆ ಸಂಬಂಧಿಸಿದಂತೆ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಮತಗಳ ಎಣಿಕೆಯನ್ನು ಮಾಡಬೇಕಾದ ಸಂದರ್ಭದಲ್ಲಿ ಪ್ರತಿಯೊಂದು ವಿವಿಪ್ಯಾಟ್‌ನ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಒಂದೊಂದಾಗಿ ಪ್ರತ್ಯೇಕವಾಗಿ ಎಣಿಸಬೇಕು ಮತ್ತು ಪ್ರತಿಯೊಂದು ವಿವಿಪ್ಯಾಟ್‌ನ ಫಲಿತಾಂಶವನ್ನು ನಮೂನೆ–17ಸಿ ಗೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಬೇಕು. ತದನಂತರ, ಆ ನಿರ್ದಿಷ್ಟ ಮತದಾನ ಕೇಂದ್ರದ ಎಲ್ಲಾ ಫಲಿತಾಂಶಗಳನ್ನು ಒಟ್ಟುಗೂಡಿಸುವ

ಮೂಲಕ ಒಂದು ಅಂತಿಮ ಫಲಿತಾಂಶ ಹಾಳೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ನಮೂನೆ 17ಸಿ ಗೆ ಸಹ ಲಗತ್ತಿಸತಕ್ಕದ್ದು.

2. ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಪ್ರತಿ ವಿಧಾನಸಭೆ ಮತಕ್ಷೇತ್ರದ ಒಂದು ಮತದಾನ ಕೇಂದ್ರ/ಲೋಕಸಭಾ ಮತಕ್ಷೇತ್ರದ ಪ್ರತಿ ವಿಧಾನಸಭಾ ಕ್ಷೇತ್ರದ ಒಂದು ಮತದಾನ ಕೇಂದ್ರದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನೆಗಾಗಿ, ಕಂಟ್ರೋಲ್ ಯೂನಿಟ್‌ನಿಂದ ಫಲಿತಾಂಶ ಪ್ರದರ್ಶನವಾಗದ ಕಾರಣದಿಂದ ಅಥವಾ ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 56(ಡಿ) ಅಡಿಯಲ್ಲಿ ಅಥವಾ ಇತರೆ ಕಾರಣದಿಂದಾಗಿ ಯಾವ ಮತದಾನ ಕೇಂದ್ರದ(ಗಳ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಈಗಾಗಲೇ ಎಣಿಕೆ ಮಾಡಲಾಗಿದೆಯೋ ಆ ಮತದಾನ ಕೇಂದ್ರದ(ಗಳ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಆ ಉದ್ದೇಶಕ್ಕಾಗಿ ಯಾದೃಚ್ಛಿಕೀಕರಣಕ್ಕೆ ಒಳಪಡಿಸಬಾರದು.

**16.31. ನಮೂನೆ 17–ಸಿ.ಯ "ಭಾಗ–II –ಎಣಿಕೆ ಫಲಿತಾಂಶ" ಅಂಕಣವನ್ನು ಭರ್ತಿಮಾಡುವುದು**

**16.31.1.** ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಮತಗಳು ಹಾಗೂ ನೋಟಾ ಮತಗಳು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಪ್ರದರ್ಶನಗೊಳ್ಳುವುದರಿಂದ, ಎಣಿಕೆ ಮೇಲ್ವಿಚಾರಕರು ಮೇಲೆ ಹೇಳಿದಂತೆ ನಮೂನೆ 17–ಸಿ ಯ 'ಭಾಗ–II ಎಣಿಕೆ ಫಲಿತಾಂಶ' ವಿಭಾಗದಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತಹ ಮತಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ದಾಖಲಿಸಿಕೊಳ್ಳಬೇಕು. ಆ ಭಾಗದಲ್ಲಿ ತೋರಿಸಿದಂಥ ಒಟ್ಟು ಮತಗಳ ಸಂಖ್ಯೆಯು ಆ ನಮೂನೆಯ ಭಾಗ–Iರ 6ನೇ ಬಾಬಿನ ಎದುರಿಗೆ ತೋರಿಸಲಾದ ಒಟ್ಟು ಮತಗಳ ಸಂಖ್ಯೆಯೊಂದಿಗೆ ತಾಳೆಯಾಗುತ್ತದೆಯೇ ಅಥವಾ ಈ ಎರಡು ಒಟ್ಟು ಮೊತ್ತಗಳ ನಡುವೆ ಯಾವುದೇ ವ್ಯತ್ಯಾಸ ಕಂಡುಬಂದಿದೆಯೇ ಎಂಬುದನ್ನು ಅವರು ಸದರಿ ನಮೂನೆ–17–ಸಿಯ ಭಾಗ II ರಲ್ಲಿ ನಮೂದಿಸಬೇಕು. ಎಲ್ಲಾ ದೃಷ್ಟಿಯಿಂದಲೂ ಆ ನಮೂನೆಯನ್ನು ಭರ್ತಿ ಮಾಡಿದ ನಂತರ, ಎಣಿಕೆ ಮೇಲ್ವಿಚಾರಕರು ಅದಕ್ಕೆ ಸಹಿ ಮಾಡಬೇಕು. ಹಾಗೆಯೇ, ಅವರು ಎಣಿಕೆ ಟೇಬಲ್‌ನಲ್ಲಿ ಹಾಜರಿರುವ ಅಭ್ಯರ್ಥಿ ಅಥವಾ ಅವರ ಏಜೆಂಟರ ಸಹಿಯನ್ನು ಸಹ ಪಡೆಯಬೇಕು.

16.31.2. ಸ್ಪರ್ಧಿಸುತ್ತಿರುವ ಎಲ್ಲಾ ಅಭ್ಯರ್ಥಿಗಳ ಹೆಸರುಗಳನ್ನು ಮತ್ತು ಕೊನೆಯ ಅಭ್ಯರ್ಥಿಯ ಹೆಸರಿನ ಕೆಳಗೆ "ನೋಟಾ" (NOTA) ಅನ್ನು ಹೊಂದಿರುವ ನಮೂನೆ 17–ಸಿ ಯ ಭಾಗ –II (ಎಣಿಕಾ ಫಲಿತಾಂಶ) ಅನ್ನು ಸಾಕಷ್ಟು ಸಂಖ್ಯೆಯಲ್ಲಿ ಮೊದಲೇ ಮುದ್ರಣ ಮಾಡಿಕೊಂಡಿರತಕ್ಕದ್ದು. ಕಾರ್ಬನ್ ಹಾಳೆಯನ್ನು ಬಳಸಿಕೊಂಡು ನಮೂನೆ–17ಸಿ ಯ ಭಾಗ– II ಅನ್ನು ದ್ವಿಪ್ರತಿಯಲ್ಲಿ

ಸಿದ್ಧಪಡಿಸತಕ್ಕದ್ದೆಂದು ಆಯೋಗವು ನಿರ್ದೇಶನ ನೀಡಿರುತ್ತದೆ ಹಾಗೂ ಎರಡೂ ಪ್ರತಿಗಳಿಗೆ ಹಾಜರಿರುವ ಎಣಿಕೆ ಏಜೆಂಟರುಗಳಿಂದ ಸಹಿಯನ್ನು ತೆಗೆದುಕೊಳ್ಳಬೇಕು. ಮತಗಳ ಸುತ್ತುವಾರು ತಾಳೆಯನ್ನು ಲೆಕ್ಕಹಾಕಲು ನಮೂನೆ–17ಸಿ ಯ ಭಾಗ– II ರ ಒಂದು ಪ್ರತಿಯನ್ನು ರಿಟರ್ನಿಂಗ್ ಅಧಿಕಾರಿ/ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಹಸ್ತಾಂತರಿಸಲಾಗುತ್ತದೆ. ಭಾಗ– II ರ ಮತ್ತೊಂದು ಪ್ರತಿಯನ್ನು ರಿಟರ್ನಿಂಗ್ ಅಧಿಕಾರಿಯವರಿಂದ ವಿಶೇಷವಾಗಿ ನೇಮಿಸಲ್ಪಟ್ಟಿರುವ ಅಧಿಕಾರಿಯು ಪ್ರತಿ ಎಣಿಕೆ ಮೇಜಿನಿಂದ ಸಂಗ್ರಹಿಸುತ್ತಾನೆ. ಮತ ಎಣಿಕೆ ಏಜೆಂಟರ ದಾಖಲೆ ಮತ್ತು ಪರಿಶೀಲನೆಗಾಗಿ ಆಯಾ ಎಣಿಕೆ ಮೇಜುಗಳಲ್ಲಿ ಹಾಜರಿರುವ ಮತ ಎಣಿಕೆ ಏಜೆಂಟರುಗಳಿಗೆ ಹಂಚುವುದಕ್ಕಾಗಿ ಆ ಅಧಿಕಾರಿಯು ಅವುಗಳ ಛಾಯಾಪ್ರತಿಗಳನ್ನು ಮಾಡುತ್ತಾನೆ. ಮುಂದಿನ ಸುತ್ತಿನ ಎಣಿಕೆ ಕಾರ್ಯವನ್ನು ಪ್ರಾರಂಭಿಸಲಿಕ್ಕೆ ಈ ಪ್ರತಿಗಳ ಹಂಚಿಕೆ ಕಾರ್ಯವು ಮುಕ್ತಾಯವಾಗುವವರೆಗೆ ಕಾಯುವ ಅಗತ್ಯವಿರುವುದಿಲ್ಲ. ಈ ಪ್ರಕ್ರಿಯೆಯು ಏಕಕಾಲದಲ್ಲಿ ನಡೆಯಬಹುದು. ಆದ್ದರಿಂದ, ಛಾಯಾಪ್ರತಿಗಳನ್ನು ಮಾಡಲು ಅಗತ್ಯ ವ್ಯವಸ್ಥೆಗಳನ್ನು ಪ್ರತಿಯೊಂದು ಎಣಿಕೆ ಕೋಣೆಯಲ್ಲಿ ಮಾಡಿರತಕ್ಕದ್ದು. ದ್ವಿಪ್ರತಿಯ ಮೂಲ ಪ್ರತಿಯನ್ನು ಆಯಾ ಎಣಿಕೆ ಮೇಜುಗಳ ಎಣಿಕೆ ಮೇಲ್ವಿಚಾರಕರಿಗೆ ಹಿಂದಿರುಗಿಸಬೇಕು. ಪ್ರತಿ ಸುತ್ತಿನ ಇವಿಎಮ್‌ಗಳ ಎಣಿಕೆಯ ಪ್ರತಿಯನ್ನು ಅವರು ಇರಿಸಿಕೊಳ್ಳಬೇಕು ಮತ್ತು ಎಣಿಕೆ ಕಾರ್ಯದ ಅಂತ್ಯದಲ್ಲಿ ನಮೂನೆ"17–ಸಿ ಭಾಗ– II ರಲ್ಲಿ ಎಣಿಕೆಯ ಫಲಿತಾಂಶದ ದ್ವಿಪ್ರತಿ" ಎಂದು ಹೊರಭಾಗದಲ್ಲಿ ಬರೆದಿರುವ ಲಕೋಟೆಯೊಳಗೆ ಅವುಗಳನ್ನು ಇರಿಸಬೇಕು ಮತ್ತು ಅದರ ಮೇಲೆ ಮೇಜಿನ ಸಂಖ್ಯೆ, ಎಣಿಸಿದ ಸುತ್ತುಗಳ ಒಟ್ಟು ಸಂಖ್ಯೆ ಮತ್ತು ಎಣಿಕೆ ಮೇಲ್ವಿಚಾರಕರ ಹೆಸರುಗಳನ್ನು ನಮೂದಿಸಿ ಎಣಿಕೆ ಕಾರ್ಯವು ಮುಕ್ತಯಗೊಂಡ ನಂತರ ರಿಟರ್ನಿಂಗ್ ಅಧಿಕಾರಿ/ಸಹಾಯಕ ರಿಟರ್ನಿಂಗ್ ಅಧಿಕಾರಿಯವರಿಗೆ ಆ ಲಕೋಟೆಯನ್ನು ಖುದ್ದಾಗಿ ಹಸ್ತಾಂತರಿಸತಕ್ಕದ್ದು. ಈ ಪ್ಯಾಕೆಟ್ ಅನ್ನು ರಿಟರ್ನಿಂಗ್ ಅಧಿಕಾರಿಯವರು ಮೊಹರು ಮಾಡಿ ಇತರೆ ದಸ್ತಾವೇಜುಗಳೊಂದಿಗೆ ಪ್ರತ್ಯೇಕವಾಗಿ ಇಡಬೇಕು.

16.31.3. ಪ್ರತಿ ಮತಗಟ್ಟೆಯ ಕೋಷ್ಟಕ (ಟ್ಯಾಬ್ಯುಲೇಷನ್) ಹಾಳೆ (ನಮೂನೆ–17ಸಿ) ಯನ್ನು ರಿಟರ್ನಿಂಗ್ ಅಧಿಕಾರಿಯವರ ಟೇಬಲ್ ಮೇಲೆ ಸ್ವೀಕರಿಸಿದಾಗ ಅದನ್ನು ಅಭ್ಯರ್ಥಿಗಳಿಗೆ/ಅವರ ಚುನಾವಣಾ ಏಜೆಂಟರಿಗೆ/ ರಿಟರ್ನಿಂಗ್ ಅಧಿಕಾರಿಯವರ ಮೇಜಿನ ಮೇಲೆ ಕುಳಿತಿರುವ ಮತ ಎಣಿಕೆ ಏಜೆಂಟರುಗಳಿಗೆ ಅವರು ಪ್ರತಿಯೊಂದು ಮತದಾನ ಕೇಂದ್ರದ ಪ್ರತಿ ಅಭ್ಯರ್ಥಿಯ ಫಲಿತಾಂಶವನ್ನು ಟಿಪ್ಪಣಿ ಮಾಡಿಕೊಳ್ಳಲು ಸಾಧ್ಯವಾಗುವಂತೆ ತೋರಿಸುವುದು ರಿಟರ್ನಿಂಗ್ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ ಎಂದೂ ಸಹ ಆಯೋಗವು ನಿರ್ದೇಶಿಸಿದೆ. ರಿಟರ್ನಿಂಗ್ ಅಧಿಕಾರಿಯು ನಮೂನೆಯನ್ನು ಸ್ವತಃ ಸರಿಯಾಗಿ ಭರ್ತಿ ಮಾಡಲಾಗಿದೆ ಮತ್ತು ಎಲ್ಲಾ ವಿಧದಲ್ಲಿಯೂ

ಪೂರ್ಣಗೊಂಡಿದೆ ಎಂದು ಖಚಿತಪಡಿಸಿಕೊಂಡ ನಂತರ ಆ ನಮೂನೆಯ ಮೇಲೆ ಮೇಲು ರುಜು ಮಾಡಬೇಕು. ರಿಟರ್ನಿಂಗ್ ಅಧಿಕಾರಿಯವರಿಂದ ಹಾಗೆ ಮೇಲು ರುಜು ಮಾಡಲ್ಪಟ್ಟ ನಮೂನೆಯನ್ನು ಅಂತಿಮ ಫಲಿತಾಂಶವನ್ನು ಸಂಕಲಿಸುವ ಮತ್ತು ನಮೂನೆ–20ರಲ್ಲಿ ಅಂತಿಮ ಫಲಿತಾಂಶದ ಹಾಳೆಯನ್ನು ಸಿದ್ಧಪಡಿಸುವ ಅಧಿಕಾರಿಗೆ ಕಳುಹಿಸಬೇಕು.

16.31.4. ಮುಂದುವರೆದು, ರಿಟರ್ನಿಂಗ್ ಅಧಿಕಾರಿಯು ಮತಗಟ್ಟೆವಾರು ಪ್ರತಿಯೊಬ್ಬ ಅಭ್ಯರ್ಥಿಗೆ ಚಲಾವಣೆಯಾದ ಮತಗಳನ್ನು ಘೋಷಿಸಬೇಕು ಅಥವಾ ಎದ್ದು ಕಾಣುವ ಹಾಗೆ ನೇತು ಹಾಕಲಾದ ಕನಿಷ್ಠ 6 x 9 ಅಡಿ ಅಳತೆಯ ಪ್ರದರ್ಶಕ ಫಲಕದ ಮೇಲೆ ನಮೂದುಗಳನ್ನು ಪ್ರತಿಯೊಬ್ಬ ಎಣಿಕೆ ಏಜೆಂಟನು ನೋಡಬಹುದಾದ ಮತ್ತು ಬರೆದುಕೊಳ್ಳಬಹುದಾದ / ಮರು ಪರಿಶೀಲಿಸಬಹುದಾದ ಹಾಗೆ ಬರೆಯಬೇಕು ಮತ್ತು ಸಾರ್ವಜನಿಕ ಪ್ರಕಟಣಾ ವ್ಯವಸ್ಥೆಯ ಮೂಲಕ ಪ್ರಕಟಿಸಬೇಕು. ಇತರ ಮತಗಟ್ಟೆಗಳಲ್ಲಿನ ಮತ ಎಣಿಕೆಯನ್ನು ಯಾವುದೇ ಅಡಚಣೆಯಿಲ್ಲದೆ ಮುಂದುವರಿಸಲು ಇದು ನಿಮಗೆ ನೆರವಾಗುತ್ತದೆ.

16.31.5. ಇನ್ನು ಮುಂದೆ, ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ನ ಮೇಲೆ ಫಲಿತಾಂಶ ಪ್ರದರ್ಶನವಾಗದಿದ್ದ ಸಂದರ್ಭದಲ್ಲಿ ಈ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಯೋಗವು ನಿರ್ದೇಶನ ನೀಡಿದೆ:

1. ಯಾವುದೇ ಕಂಟ್ರೋಲ್ ಯೂನಿಟ್ ಫಲಿತಾಂಶವನ್ನು ಪ್ರಕಟಿಸದಿರುವ ಸಂದರ್ಭದಲ್ಲಿ, ಅದನ್ನು ಮರಳಿ ಅದರ ಕ್ಯಾರಿಯಿಂಗ್ ಕೇಸ್‌ನ ಒಳಗೆ ಇರಿಸಬೇಕು ನಂತರ ಅದನ್ನು ಎಣಿಕೆ ಕೋಣೆಯಲ್ಲಿ ರಿಟರ್ನಿಂಗ್ ಅಧಿಕಾರಿಯವರ ವಶದಲ್ಲಿ ಇಟ್ಟುಕೊಳ್ಳಬೇಕು. ಬೇರೆ ಯಂತ್ರಗಳಲ್ಲಿನ ಮತಗಳ ಎಣಿಕೆಯನ್ನು ಯಥಾ ಪ್ರಕಾರ ಮುಂದುವರಿಸಬೇಕು.
2. ಅಂತಹ ಕಂಟ್ರೋಲ್ ಯೂನಿಟ್(ಗಳ)ನಿಂದ ಫಲಿತಾಂಶವನ್ನು ಆಕ್ಸಿಲರಿ ಡಿಸ್‌ಪ್ಲೇ ಯೂನಿಟ್ ಅಥವಾ ಪ್ರಿಂಟರ್ ಅನ್ನು ಬಳಸಿ ಪುನ: ಪಡೆಯಲಿಕ್ಕಾಗುವುದಿಲ್ಲ.
3. ಎಲ್ಲಾ ಕಂಟ್ರೋಲ್ ಯೂನಿಟ್‌ಗಳಿಂದ ಮತಗಳ ಎಣಿಕೆಯನ್ನು ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ವಿವಿಪ್ಯಾಟ್‌ನ ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಆಯೋಗವು ನಿಗದಿಪಡಿಸಿರುವ ಎಣಿಕೆ ಪ್ರಕ್ರಿಯೆಯ ಪ್ರಕಾರ ಎಣಿಕೆ ಮಾಡತಕ್ಕದ್ದು.
4. ತದನಂತರ, ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 56ಡಿ ಅಡಿ ವಿವಿಪ್ಯಾಟ್(ಗಳ)ನ ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆ ಯಾವುದಾದರೂ ಇದ್ದಲ್ಲಿ ಅದನ್ನು ಕೈಗೊಳ್ಳಬೇಕು.

16.31.6. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಗೆ ಸಂಬಂಧಪಟ್ಟ ವರದಿಯನ್ನು ಮುಖ್ಯ ಚುನಾವಣಾ ಅಧಿಕಾರಿಯವರ ಮೂಲಕ ನಿಗದಿತ ನಮೂನೆಯಲ್ಲಿ ಆಯೋಗಕ್ಕೆ ಕಳುಹಿಸಬೇಕು.

**16.32. ಅಂತಿಮ ಫಲಿತಾಂಶ ಶೀಟ್**

16.32.1. ನಮೂನೆ 20ರಲ್ಲಿ **(ಪರಿಶಿಷ್ಟ –33)** ಅಂತಿಮ ಫಲಿತಾಂಶವನ್ನು ಸಂಕಲಿಸುವ ಮತ್ತು ಅಂತಿಮ ಫಲಿತಾಂಶ ಶೀಟ್‌ಅನ್ನು ಸಿದ್ಧಪಡಿಸುವ ಪ್ರಭಾರ ಹೊಂದಿರುವ ಅಧಿಕಾರಿಯು, ಪ್ರತಿಯೊಂದು ಮತಗಟ್ಟೆಗೆ ಸಂಬಂಧಿಸಿದಂತೆ ನಮೂನೆ 17–ಸಿಯ 'ಭಾಗ II- ಎಣಿಕೆ ಫಲಿತಾಂಶ' ವಿಭಾಗದಲ್ಲಿ ಮಾಡಲಾದ ನಮೂದುಗಳಿಗೆ ಅನುಸಾರವಾಗಿ ಕಡ್ಡಾಯವಾಗಿ ಮತಗಟ್ಟೆವಾರು ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಮತಗಳನ್ನು ತೋರಿಸಿ ಆ ನಮೂನೆಯಲ್ಲಿ ನಮೂದುಗಳನ್ನು ಮಾಡಬೇಕು. ನೋಟಾಗೆ ಸಂಬಂಧಿಸಿದಂತೆ ಕೂಡ ಅಂಥ ಮತಗಳ ಸಂಖ್ಯೆಯನ್ನು ನಮೂನೆ 17ಸಿಯ ಭಾಗ IIರಲ್ಲಿ ಪ್ರತ್ಯೇಕವಾಗಿ ನಮೂದಿಸಿಬೇಕು. ವಿವಿ ಪ್ಯಾಟ್‌ನಲ್ಲಿನ ಪರೀಕ್ಷಾರ್ಥ ಮತಗಳ ಸಂಖ್ಯೆಯನ್ನು ಮತ್ತು ಮತಗಟ್ಟೆಯಲ್ಲಿ ಯಾವುದಾದರೂ ಟೆಂಡರ್ಡ್ ಮತಗಳನ್ನು ಚಲಾಯಿಸಿದ್ದಲ್ಲಿ, ಅವುಗಳ ಸಂಖ್ಯೆಯನ್ನು ಸಹ ಸಂಬಂಧಪಟ್ಟ ಮತಗಟ್ಟೆಯ ಎದುರಿಗೆ ನಮೂನೆ– 20ರಲ್ಲಿ ಸಮುಚಿತ ಅಂಕಣದಲ್ಲಿ ಬರೆಯಬೇಕು.

16.32.2. ಪ್ರತಿಯೊಂದು ಮತಗಟ್ಟೆಗೆ ಸಂಬಂಧಿಸಿದಂತೆ ನಮೂನೆ– 20ರಲ್ಲಿ ಹಾಗೆ ಮಾಡಿದ ನಮೂದುಗಳನ್ನು, ಪ್ರತಿಯೊಂದು ಮತಗಟ್ಟೆಗೆ ಸಂಬಂಧಿಸಿದಂತೆ ಎಣಿಕೆ ಫಲಿತಾಂಶವನ್ನು ಅಭ್ಯರ್ಥಿಗಳು ಮತ್ತು ಅವರ ಏಜೆಂಟರು ಬರೆದುಕೊಳ್ಳಬಹುದಾಗಿದೆ. ಪರ್ಯಾಯವಾಗಿ ರಿಟರ್ನಿಂಗ್ ಅಧಿಕಾರಿಯು ನಮೂನೆ–20ರಲ್ಲಿ ಮಾಡಿರುವ ನಮೂದುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವಂತೆ ಮಾಡಬಹುದು. ಇದರಿಂದ ಎಣಿಕೆ ಏಜೆಂಟರಿಗೆ ಇತರ ಮತಗಟ್ಟೆಗಳಲ್ಲಿನ ಮತ ಎಣಿಕೆಯನ್ನು ಅಡೆತಡೆಯಿಲ್ಲದಂತೆ ಮುಂದುವರಿಸಲು ಸಾಧ್ಯವಾಗುವುದು.

**16.33. ಒಂದು ಮತದಾನ ಕೇಂದ್ರದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನೆ**

16.33.1. ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಮತಗಟ್ಟೆಯೊಂದರ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನೆಯನ್ನು, ಇವಿಎಂಗಳಲ್ಲಿ ದಾಖಲಿಸಿದ ಮತಗಳ ಎಣಿಕೆಯ ಕೊನೆಯ ಸುತ್ತು ಪೂರ್ಣಗೊಂಡ ನಂತರ ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 56ಡಿ ಯ ಉಪಬಂಧಗಳ ಜೊಡಣೆ ನಡೆಸತಕ್ಕದ್ದು. ರಾಜ್ಯ ವಿಧಾನಸಭೆಗಳ ಸಾರ್ವತ್ರಿಕ ಮತ್ತು ಉಪಚುನಾವಣೆಯ ಸಂದರ್ಭದಲ್ಲಿ ಪ್ರತಿಯೊಂದು ವಿಧಾನಸಭಾ ಚುನಾವಣಾ ಕ್ಷೇತ್ರದಲ್ಲಿ

ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಒಂದು ಮತದಾನ ಕೇಂದ್ರದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಕಡ್ಡಾಯವಾಗಿ ಪರಿಶೀಲಿಸುವುದು. ಲೋಕಸಭೆಯ ಸಾರ್ವತ್ರಿಕ ಮತ್ತು ಉಪಚುನಾವಣೆಯ ಸಂದರ್ಭದಲ್ಲಿ, ಸಂಬಂಧಪಟ್ಟ ಲೋಕಸಭಾ ಕ್ಷೇತ್ರದ ಪ್ರತಿಯೊಂದು ವಿಧಾನಸಭೆ ಕ್ಷೇತ್ರದ ವಿಭಾಗದ ಒಂದು ಮತದಾನ ಕೇಂದ್ರದಲ್ಲಿ ಅಥವಾ ಆಯೋಗವು ನಿರ್ದೇಶಿಸಿದಂತೆ ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಪರಿಶೀಲಿಸುವುದು.

16.33.2. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಈ ಕಡ್ಡಾಯ ಪರಿಶೀಲನೆಗಾಗಿ ಈ ಕೆಳಕಂಡ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

1. ಪ್ರತಿಯೊಂದು ವಿಧಾನಸಭಾ ಚುನಾವಣಾ ಕ್ಷೇತ್ರ/ವಿಭಾಗಕ್ಕಾಗಿ ಯಾದೃಚ್ಛಿಕವಾಗಿ ಆಯ್ಕೆಯಾದ ಒಂದು ಮತದಾನ ಕೇಂದ್ರದ VVPAT paper slipಗಳ ಪರಿಶೀಲನೆಯನ್ನು ಇವಿಎಂಗಳಲ್ಲಿ ದಾಖಲಿಸಿದ ಮತಗಳ ಎಣಿಕೆಯ ಕೊನೆಯ ಸುತ್ತು ಪೂರ್ಣಗೊಂಡ ನಂತರ ಕೈಗೊಳ್ಳತಕ್ಕದ್ದು.
2. ಆ ಮತಕ್ಷೇತ್ರದ ಅಭ್ಯರ್ಥಿಗಳ/ಅವರ ಏಜೆಂಟರ ಮತ್ತು ಆಯೋಗದಿಂದ ನೇಮಕವಾದ ಸಾಮಾನ್ಯ ವೀಕ್ಷಕರ ಉಪಸ್ಥಿತಿಯಲ್ಲಿ ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಯು ಪ್ರತಿ ವಿಧಾನಸಭಾ ಕ್ಷೇತ್ರ/ ವಿಭಾಗದ ಒಂದು ಮತದಾನ ಕೇಂದ್ರವನ್ನು ಲಾಟರಿ ಎತ್ತುವ ಮೂಲಕ ಯಾದೃಚ್ಛಿಕವಾಗಿ ಆಯ್ಕೆ ಮಾಡತಕ್ಕದ್ದು.
3. ನಿರ್ದಿಷ್ಟ ವಿಧಾನಸಭಾಕ್ಷೇತ್ರ/ವಿಧಾನಸಭಾ ವಿಭಾಗಕ್ಕಾಗಿ ಗೊತ್ತುಪಡಿಸಲಾದ ಎಣಿಕೆ ಕೊಠಡಿಯಲ್ಲಿ ಇವಿಎಂಗಳ (ಕಂಟ್ರೋಲ್ ಯೂನಿಟ್‌ಗಳು)ಲ್ಲಿ ದಾಖಲಿಸಿದ ಮತಗಳ ಎಣಿಕೆಯ ಕೊನೆಯ ಸುತ್ತು ಪೂರ್ಣಗೊಂಡ ನಂತರ ಕೂಡಲೇ ಚೀಟಿ ಎತ್ತುವಿಕೆಯನ್ನು ನಡೆಸತಕ್ಕದ್ದು.
4. VVPAT paper slipಗಳ ಪರಿಶೀಲನೆಗಾಗಿ ಒಂದು ಮತದಾನ ಕೇಂದ್ರದ ಯಾದೃಚ್ಛಿಕ ಆಯ್ಕೆಗಾಗಿ ಚೀಟಿ (ಲಾಟರಿ) ಎತ್ತುವಿಕೆ ಪ್ರಕ್ರಿಯೆ ನಡೆಸುವ ಕುರಿತು ಲಿಖಿತ ಮಾಹಿತಿಯನ್ನು ಅಭ್ಯರ್ಥಿಗಳಿಗೆ/ಅವರ ಚುನಾವಣಾ ಏಜೆಂಟರುಗಳಿಗೆ ರಿಟರ್ನಿಂಗ್ ಅಧಿಕಾರಿಯು ಮುಂಚಿತವಾಗಿ ನೀಡತಕ್ಕದ್ದು.
5. ಚೀಟಿ ಎತ್ತುವಿಕೆ ಪ್ರಕ್ರಿಯೆಯನ್ನು ನಡೆಸುವುದಕ್ಕಾಗಿ ಈ ಮುಂದಿನ ಕಾರ್ಯವಿಧಾನಗಳನ್ನು ಅನುಸರಿಸತಕ್ಕದ್ದು:
    ಎ. ಅಂಚೆ ಚೀಟಿ ಅಳತೆಯ ಬಿಳಿ ಬಣ್ಣದ ಪೇಪರ್ ಕಾರ್ಡ್‌ಗಳನ್ನು ಚೀಟಿ ಎತ್ತುವ ಪ್ರಕ್ರಿಯೆಯನ್ನು ನಡೆಸುವುದಕ್ಕಾಗಿ ಬಳಸತಕ್ಕದ್ದು.

ಬಿ. ಅಂತಹ ಪೇಪರ್ ಕಾರ್ಡ್‌ಗಳ ಒಟ್ಟು ಸಂಖ್ಯೆಯು ವಿಧಾನಸಭಾಕ್ಷೇತ್ರ/ವಿಧಾನಸಭಾ ವಿಭಾಗದಲ್ಲಿನ ಮತದಾನ ಕೇಂದ್ರಗಳ ಒಟ್ಟು ಸಂಖ್ಯೆಗೆ ಸಮನಾಗಿರತಕ್ಕದ್ದು.

ಸಿ. ಪೇಪರ್ ಕಾರ್ಡ್‌ಗಳು ಪೂರ್ವಮುದ್ರಿತ ವಿಧಾನಸಭಾಕ್ಷೇತ್ರ/ವಿಧಾನಸಭಾ ವಿಭಾಗದ ಸಂಖ್ಯೆ, ವಿಧಾನಸಭಾ ಕ್ಷೇತ್ರ/ವಿಧಾನ ಸಭಾ ವಿಭಾಗದ ಹೆಸರು ಮತ್ತು ಮತದಾನದ ದಿನಾಂಕವನ್ನು ಮೇಲ್ಭಾಗದಲ್ಲಿಯೂ ಮತ್ತು ಮತದಾನ ಕೇಂದ್ರದ ಸಂಖ್ಯೆಯನ್ನು ಮಧ್ಯಭಾಗದಲ್ಲೂ ಹೊಂದಿರತಕ್ಕದ್ದು. ಮತದಾನ ಕೇಂದ್ರದ ಸಂಖ್ಯೆಯ ಪ್ರತಿಯೊಂದು ಅಂಕಿಯು ಕನಿಷ್ಠ ಪಕ್ಷ 1" X 1" (ಒಂದು ಇಂಚು ಉದ್ದ ಒಂಚು ಇಂಚು ಅಗಲ) ಗಾತ್ರ ಇರತಕ್ಕದ್ದು ಮತ್ತು ಕಪ್ಪು ಬಣ್ಣದಲ್ಲಿ ಮುದ್ರಿತವಾಗಿರತಕ್ಕದ್ದು.

ಡಿ. ಲಾಟರಿ ಎತ್ತುವ ಸಲುವಾಗಿ ಬಳಸಲಾಗುವ ಪೇಪರ್ ಕಾರ್ಡಗಳನ್ನು ಮತದಾನ ಕೇಂದ್ರದ ಸಂಖ್ಯೆಯು ಕಾಣಿಸದಿರುವಂತಹ ರೀತಿಯಲ್ಲಿ 4 ಭಾಗವಾಗಿ ಮಡಿಚತಕ್ಕದ್ದು.

ಇ. ಪ್ರತಿಯೊಂದು ಪೇಪರ್ ಕಾರ್ಡನ್ನು ಮಡಚಿ ಪೆಟ್ಟಿಗೆ(ಕಂಟೇನರ್)ಯೊಳಗೆ ಹಾಕುವ ಮುನ್ನ ಅಭ್ಯರ್ಥಿಗಳಿಗೆ/ಅವರ ಏಜೆಂಟರುಗಳಿಗೆ ತೋರಿಸತಕ್ಕದ್ದು.

ಎಫ್. ಪೇಪರ್ ಕಾರ್ಡ ಅನ್ನು ದೊಡ್ಡ ಪೆಟ್ಟಿಗೆಯಲ್ಲಿ (ಕಂಟೇನರ್‌ನಲ್ಲಿ) ಇಡತಕ್ಕದ್ದು ಮತ್ತು ರಿಟರ್ನಿಂಗ್ ಅಧಿಕಾರಿಯು ಕಂಟೈನರ್‌ನಿಂದ ಒಂದು ಸ್ಲಿಪ್ಪನ್ನು (ಚೀಟಿ) ಎತ್ತಿಕೊಳ್ಳುವ ಮುನ್ನ ಕಂಟೈನರ್ ಅನ್ನು ಕುಲಕಬೇಕು.

16.33.3. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪರಿಶೀಲನೆಯನ್ನು ಮತ ಎಣಿಕೆಯ ಕೊಠಡಿ ಒಳಗೆ ಈ ಉದ್ದೇಶಕ್ಕಾಗಿ ವಿಶೇಷವಾಗಿ ಸಿದ್ಧಪಡಿಸಿದ "ವಿವಿಪ್ಯಾಟ್ ಮತ ಎಣಿಕೆ ಬೂತ್"ನಲ್ಲಿ ಮಾಡತಕ್ಕದ್ದು. ಯಾವುದೇ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ನ್ನು ಯಾರೇ ಅನಧಿಕೃತ ವ್ಯಕ್ತಿಯು ನೋಡಲಿಕ್ಕೆ ಅವಕಾಶವಿರದ ಹಾಗೆ ಬ್ಯಾಂಕ್ ಕ್ಯಾಶಿಯರ್ ಕ್ಯಾಬಿನ್ ಮಾದರಿಯಲ್ಲಿ ತಂತಿ ಜಾಲರಿಯಿಂದ ಬೂತ್‌ಗೆ ಆವರಣ ನಿರ್ಮಿಸತಕ್ಕದ್ದು. ಸುತ್ತುವಾರು ಇವಿಎಂ ಮತಗಳ ಎಣಿಕೆ ಪೂರ್ಣಗೊಂಡ ನಂತರ ಯಾದೃಚ್ಛಿಕ ಆಯ್ಕೆಗೆ ಅನುಸಾರವಾಗಿ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಸುವ ಮುಂಚೆ ಮತ ಎಣಿಕೆಯ ಕೊಠಡಿಯಲ್ಲಿನ ಮತ ಎಣಿಕೆಯ ಟೇಬಲೊಂದನ್ನು ವಿವಿಪ್ಯಾಟ್ ಎಣಿಕೆಯ ಬೂತ್ ಅನ್ನಾಗಿ ಪರಿವರ್ತಿಸಬಹುದು ಮತ್ತು ಸುತ್ತುವಾರು ಇವಿಎಂ ಮತಗಳ ಸಾಮಾನ್ಯ ಎಣಿಕೆಗಾಗಿ ಬಳಸಬಹುದು.

16.33.4. ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಒಂದು ಮತಗಟ್ಟೆಯ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪರಿಶೀಲನಾ ಎಣಿಕೆಯನ್ನು, ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆಗೆ ಸಂಬಂಧಿಸಿದ ಆಯೋಗದ ಸೂಚನೆಗಳಿಗೆ ಅನುಸಾರವಾಗಿ ಕಟ್ಟುನಿಟ್ಟಾಗಿ ನಡೆಸತಕ್ಕದ್ದು.

16.33.5. ರಿಟರ್ನಿಂಗ್ ಅಧಿಕಾರಿ ಮತ್ತು ಸಂದರ್ಭಾನುಸಾರ ಸಹಾಯಕ ರಿಟರ್ನಿಂಗ್ ಅಧಿಕಾರಿಯು, ಈ ಬೂತ್‌ನಲ್ಲಿನ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯನ್ನು ಖುದ್ದಾಗಿ ಮೇಲ್ವಿಚಾರಣೆ ಮಾಡತಕ್ಕದ್ದು. ಸಾಮಾನ್ಯ ವೀಕ್ಷಕನು ಇಡೀ ಚಟುವಟಿಕೆಯ ನಿಕಟ ಹಾಗೂ ಜಾಗರೂಕತೆಯ ವೀಕ್ಷಣೆಯನ್ನು ಖಚಿತಪಡಿಸತಕ್ಕದ್ದು ಮತ್ತು ಆಯೋಗದ ಸೂಚನೆಗಳ ಅನುಸರಣೆಯನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

16.33.6. ಮೇಲಿನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ವೀಡಿಯೋಚಿತ್ರೀಕರಣ ಮಾಡತಕ್ಕದ್ದು.

16.33.7. ಮೇಲ್ಕಂಡ ಪ್ರಕ್ರಿಯೆ ಪೂರ್ಣಗೊಂಡ ನಂತರ, ರಿಟರ್ನಿಂಗ್ ಅಧಿಕಾರಿಯು ಈ ಕೆಳಗೆ ನೀಡಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು:

## ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಮತಗಟ್ಟೆಯೊಂದರ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ಗಳ ಪರಿಶೀಲನೆ

**ರಾಜ್ಯದ ಹೆಸರು:**
ವಿಧಾನ ಸಭಾ/ಲೋಕಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು:
ವಿಧಾನ ಸಭೆ ವಿಭಾಗದ (ಲೋಕಸಭಾ ಚುನಾವಣಾ ಕ್ಷೇತ್ರದ ಸಂದರ್ಭದಲ್ಲಿ) ಸಂಖ್ಯೆ ಮತ್ತು ಹೆಸರು:
ಮತಗಟ್ಟೆಯ ಸಂಖ್ಯೆ ಮತ್ತು ಹೆಸರು:
ಕಂಟ್ರೋಲ್ ಯೂನಿಟ್‌ನ ವಿಶಿಷ್ಟ ಗುರುತಿನ ಸಂಖ್ಯೆ:
ವಿವಿಪ್ಯಾಟ್‌ನ ವಿಶಿಷ್ಟ ಗುರುತಿನ ಸಂಖ್ಯೆ:

**ಚುನಾವಣಾ ಆಯೋಗದ ಸೂಚನೆಗಳ ಅನುಸಾರವಾಗಿ ಯಾದೃಚ್ಛಿಕವಾಗಿ ಆಯ್ಕೆಯಾದ ಮತಗಟ್ಟೆಯೊಂದರಲ್ಲಿ ನಡೆಸಲಾದ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ನ ಎಣಿಕೆ ಕಾರ್ಯದ ಪ್ರಾಯೋಗಿಕ ಪರೀಕ್ಷೆಯನ್ನು ದೃಢೀಕರಿಸಲಾಗಿದೆ.**

| ಅಭ್ಯರ್ಥಿಯ ಹೆಸರು | ಚಲಾಯಿಸಿದ ಒಟ್ಟು ಮತಗಳು | | ಯಾವುದಾದರೂ ವ್ಯತ್ಯಾಸವಿದ್ದಲ್ಲಿ |
|---|---|---|---|
| | ಇವಿಎಂ ನಲ್ಲಿರುವಂತೆ | ಪೇಪರ್ ಸ್ಲಿಪ್‌ಗಳಲ್ಲಿರುವಂತೆ | |
| 1. | | | |
| 2. | | | |
| 3. | | | |
| . . . | | | |
| . . . | | | |
| ನೋಟಾ (ಓಔಖಂ) | | | |
| ಒಟ್ಟು ಮತಗಳು | | | |

**ಎಣಿಕೆ ಏಜೆಂಟರುಗಳ ಸಹಿ**
1.
2.
3.
**ಎಣಿಕಾ ಮೇಲ್ವಿಚಾರಕರ ಸಹಿ** **ರಿಟರ್ನಿಂಗ್ ಅಧಿಕಾರಿಯ ಸಹಿ**

**ಸಾಮಾನ್ಯ ವೀಕ್ಷಕರ ಸಹಿ**

### 16.34. ಮರು ಎಣಿಕೆ

16.34.1. ಸಾಮಾನ್ಯವಾಗಿ ಮತಯಂತ್ರಗಳಲ್ಲಿ ದಾಖಲಾಗಿರುವ ಮತಗಳ ಮರು ಎಣಿಕೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಮತಯಂತ್ರದಲ್ಲಿ ದಾಖಲಾಗಿರುವ ಪ್ರತಿಯೊಂದು ಮತವು ಸಿಂಧುವಾದ ಮತವಾಗಿದ್ದು, ಅದರ ಸಿಂಧುತ್ವ ಅಥವಾ ಇತರೆ ಕಾರಣಗಳಿಗಾಗಿ ಯಾವುದೇ ತಕರಾರು ಉಂಟಾಗಲಾರದು. ಅತಿ ಹೆಚ್ಚೆಂದರೆ, ಕೆಲವು ಅಭ್ಯರ್ಥಿಗಳು ಅಥವಾ ಅವರ ಏಜೆಂಟರು, ಯಾವುದೇ ನಿರ್ದಿಷ್ಟ ಮತಗಟ್ಟೆಯಲ್ಲಿ ಮತದಾನದ ಫಲಿತಾಂಶದ ಮಾಹಿತಿಯನ್ನು ಕಂಟ್ರೋಲ್ ಯೂನಿಟ್

ಪ್ರದರ್ಶಿಸುವ ಕಾಲಕ್ಕೆ ಸರಿಯಾಗಿ ಅದನ್ನು ಬರೆದುಕೊಳ್ಳದೇ ಇರಬಹುದು. ಮರು ಪರಿಶೀಲನೆಯ ಅಗತ್ಯ ಕಂಡುಬಂದರೆ, 'ರಿಸಲ್ಟ್ I' ಬಟನ್ ಅನ್ನು ಒತ್ತುವ ಮೂಲಕ ಅದನ್ನು ಮಾಡಬಹುದು. ಅದರಲ್ಲಿ ಆ ಮತಗಟ್ಟೆಯ ಮತದಾನದ ಫಲಿತಾಂಶವು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ಗಳಲ್ಲಿ ಪುನಃ ಪ್ರದರ್ಶನಗೊಳ್ಳುವುದು.

16.34.2. ಮತಯಂತ್ರಗಳನ್ನು ಬಳಕೆ ಮಾಡುವುದರಿಂದ, ಮರು–ಎಣಿಕೆಯ ಅಗತ್ಯತೆಯನ್ನು ಒಟ್ಟಾರೆ ನಿವಾರಿಸಿಕೊಳ್ಳಬಹುದಾಗಿದ್ದಾಗ್ಯೂ, ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 63ರಲ್ಲಿ ಒಳಗೊಂಡಿರುವ ಮರು–ಎಣಿಕೆಗೆ ಸಂಬಂಧಿಸಿದ ಉಪಬಂಧಗಳು, ಎಲ್ಲಾ ಮತಕ್ಷೇತ್ರಗಳಿಗೂ ಅನ್ವಯಿಸುತ್ತವೆ.

16.34.3. ಅಂತೆಯೇ, ಇಡೀ ಎಣಿಕೆಯು ಮುಕ್ತಾಯವಾದ ಬಳಿಕ ರಿಟರ್ನಿಂಗ್ ಅಧಿಕಾರಿಯು ಅಂತಿಮ ಫಲಿತಾಂಶ ಶೀಟಿನಲ್ಲಿ (ನಮೂನೆ 20) ದಾಖಲಾದಂತೆ ಪ್ರತಿಯೊಬ್ಬ ಅಭ್ಯರ್ಥಿಗೆ ಚಲಾಯಿತವಾದ ಒಟ್ಟು ಮತಗಳ ಸಂಖ್ಯೆಯನ್ನು ನೀಡಿ, ಫಲಿತಾಂಶವನ್ನು ಘೋಷಿಸುವರು ಹಾಗೆ ಘೋಷಿಸಿದ ನಂತರ, ಅಭ್ಯರ್ಥಿ ಅಥವಾ ಅವರ ಏಜೆಂಟ್ ಅಥವಾ ಅವರ ಯಾರೇ ಎಣಿಕಾ ಏಜೆಂಟರು, ಯಾವುದೇ ಅಥವಾ ಎಲ್ಲಾ ಮತಕೇಂದ್ರಗಳಲ್ಲಿ ದಾಖಲಾದ ಮತಗಳ ಮರು ಎಣಿಕೆಗೆ ಲಿಖಿತವಾಗಿ, ಯಾವ ಆಧಾರದ ಮೇಲೆ ಅಂತಹ ಮರುಎಣಿಕೆಯನ್ನು ಆಗ್ರಹಿಸಲಾಗಿದೆಯೆಂದು ತಿಳಿಸಿ, ಅರ್ಜಿ ಹಾಕಬಹುದಾಗಿದೆ. ಈ ಉದ್ದೇಶಕ್ಕಾಗಿ ಮರುಎಣಿಕೆಗಾಗಿ ಲಿಖಿತ ಅರ್ಜಿಯನ್ನು ಸ್ವೀಕರಿಸಲು ರಿಟರ್ನಿಂಗ್ ಅಧಿಕಾರಿಯು ಎಷ್ಟು ಗಂಟೆ ಮತ್ತು ನಿಮಿಷದವರೆಗೆ ಕಾಯುವರೆಂದು ನಿಖರವಾಗಿ ಘೋಷಿಸಬೇಕು. ಮರುಎಣಿಕೆಗಾಗಿ ಅಂತಹ ಅರ್ಜಿಯನ್ನು ಸ್ವೀಕರಿಸಿದ ಬಳಿಕ ಮರು ಎಣಿಕೆಗಾಗಿ ಒತ್ತಾಯಿಸಿದ ಆಧಾರಗಳನ್ನು ಪರಿಗಣಿಸಿ, ರಿಟರ್ನಿಂಗ್ ಅಧಿಕಾರಿಯು ನಿರ್ಧಾರವನ್ನು ತೆಗೆದುಕೊಳ್ಳುವರು. ಅದು ಯುಕ್ತವಾಗಿದ್ದರೆ, ಅವರು ಅರ್ಜಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಬಹುದು ಅಥವಾ ಒಂದು ವೇಳೆ ಅದು ಕ್ಷುಲ್ಲಕ ಅಥವಾ ಅನುಚಿತವಾಗಿದ್ದರೆ ಅದನ್ನು ಸಾರಾಸಗಟಾಗಿ ತಿರಸ್ಕರಿಸಬಹುದು. ಈ ವಿಷಯದಲ್ಲಿ ರಿಟರ್ನಿಂಗ್ ಅಧಿಕಾರಿಯ ನಿರ್ಧಾರವೇ ಅಂತಿಮವಾಗಿರುವುದು. ಯಾವುದೇ ಸಂದರ್ಭದಲ್ಲಿ, ಮರು ಎಣಿಕೆಯ ಅರ್ಜಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಿದ್ದರೆ, ಮತಗಳನ್ನು ಪುನಃ ಎಣಿಸಲು ರಿಟರ್ನಿಂಗ್ ಅಧಿಕಾರಿಯು ನಿರ್ದೇಶಿಸಬೇಕು. ಅಂಚೆ ಮತಪತ್ರಗಳನ್ನು ಮರು ಎಣಿಸಲು ಕೋರಿದಲ್ಲಿ ಮತ್ತು ಅಂಥ ಕೋರಿಕೆಯನ್ನು ರಿಟರ್ನಿಂಗ್ ಅಧಿಕಾರಿಯು ಅಂಗೀಕರಿಸಿದ್ದಲ್ಲಿ, ಮರು ಎಣಿಕೆ ಮಾಡಬಹುದು. ಅಂತಹ ಮರು ಎಣಿಕೆ ಮುಕ್ತಾಯವಾದ ನಂತರ ಅಗತ್ಯವಿರುವಷ್ಟರಮಟ್ಟಿಗೆ ಫಲಿತಾಂಶ ಹಾಳೆಯನ್ನು ತಿದ್ದುಪಡಿ ಮಾಡಲಾಗುವುದು ಮತ್ತು ಹಾಗೆ ಮಾಡಿದ ತಿದ್ದುಪಡಿಗಳನ್ನು ಘೋಷಿಸಬೇಕು.

ಪ್ರತಿಯೊಬ್ಬ ಅಭ್ಯರ್ಥಿಗೆ ಚಲಾಯಿತವಾದ ಒಟ್ಟು ಮತಗಳನ್ನು ಘೋಷಿಸಿದ ನಂತರ ಫಲಿತಾಂಶ ಹಾಳೆ ಪೂರ್ಣಗೊಳ್ಳುವುದು ಮತ್ತು ಅದಕ್ಕೆ ಸಹಿ ಹಾಕಲಾಗುವುದು.

16.34.4. ರಿಟರ್ನಿಂಗ್ ಅಧಿಕಾರಿಯ ಫಲಿತಾಂಶ ಹಾಳೆಯನ್ನು ಪೂರ್ಣಗೊಳಿಸಿ ಸಹಿ ಹಾಕಿದ ನಂತರ ಮರು ಎಣಿಕೆಗೆ ಆಗ್ರಹಿಸುವ ಹಕ್ಕು ಇರುವುದಿಲ್ಲ ಎನ್ನುವುದನ್ನು ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟರು ಅಥವಾ ಅವರ ಎಣಿಕಾ ಏಜೆಂಟರು ಗಮನದಲ್ಲಿರಿಸಿಕೊಳ್ಳಬೇಕು. ಫಲಿತಾಂಶ ಹಾಳೆಯನ್ನು ಪೂರ್ಣಗೊಳಿಸಿ ಸಹಿ ಹಾಕಿದ ನಂತರ ಮತಗಳ ಮರು–ಎಣಿಕೆಗೆ ಮಾಡುವ ಯಾವುದೇ ಬೇಡಿಕೆಯನ್ನು ತಿರಸ್ಕರಿಸಲಾಗುವುದು.

**16.34.5**. ಪೇಪರ್ ಟ್ರಯಲ್‌ಗಾಗಿ ಪ್ರಿಂಟರ್‌ಅನ್ನು ಉಪಯೋಗಿಸಿರುವಲ್ಲಿ, ಯಾವುದೇ ಅಭ್ಯರ್ಥಿ ಅಥವಾ ಆತನ ಅನುಪಸ್ಥಿತಿಯಲ್ಲಿ ಆತನ ಚುನಾವಣಾ ಏಜೆಂಟ್ ಅಥವಾ ಆತನ ಯಾರೇ ಎಣಿಕೆ ಏಜೆಂಟರು ಫಲಿತಾಂಶದ ಹಾಳೆಯಲ್ಲಿ ಮಾಡಿದ ನಮೂದುಗಳನ್ನು ಪ್ರಕಟಿಸಿದ ನಂತರ ಯಾವುದೇ ಮತದಾನ ಕೇಂದ್ರ ಅಥವಾ ಮತದಾನ ಕೇಂದ್ರಗಳಿಗೆ ಸಂಬಂಧಿಸಿದಂತೆ ಪ್ರಿಂಟರ್‌ನ ಡ್ರಾಪ್ ಬಾಕ್ಸ್‌ನಲಿರುವ ಮುದ್ರಿತ ಕಾಗದದ ಸ್ಲಿಪ್‌ಗಳ ಎಣಿಕೆ ಕೋರಿ ರಿಟರ್ನಿಂಗ್ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು. ಅಂಥ ಅರ್ಜಿಯನ್ನು ಸ್ವೀಕರಿಸಿದರೆ ರಿಟರ್ನಿಂಗ್ ಅಧಿಕಾರಿಯು ಭಾರತ ಚುನಾವಣಾ ಆಯೋಗವು ಹೊರಡಿಸಿರಬಹುದಾದಂತಹ ಸಾಮಾನ್ಯ ಅಥವಾ ವಿಶೇಷ ಮಾರ್ಗಸೂಚಿಗಳಿಗೆ ಒಳಪಟ್ಟು, ಈ ವಿಷಯದ ಬಗ್ಗೆ ತೀರ್ಮಾನಿಸಿ ಪೂರ್ಣವಾಗಿ ಅಥವಾ ಭಾಗಶಃವಾಗಿ ಅನುಮತಿಸಬಹುದು ಅಥವಾ ಅದು ಅವನಿಗೆ ಕ್ಷುಲ್ಲಕ ಅಥವಾ ಸಕಾರಣಯುಕ್ತವಾಗಿಲ್ಲವೆಂದು ಕಂಡುಬಂದರೆ ಪೂರ್ಣವಾಗಿ ತಿರಸ್ಕರಿಸಬಹುದು. ರಿಟರ್ನಿಂಗ್ ಅಧಿಕಾರಿಯು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವು ಲಿಖಿತರೂಪದಲ್ಲಿರತಕ್ಕದ್ದು ಮತ್ತು ಸಕಾರಣಗಳನ್ನು ಒಳಗೊಂಡಿರತಕ್ಕದ್ದು. ಸಂಪೂರ್ಣವಾಗಿ ಅಥವಾ ಭಾಗ ಅಥವಾ ಭಾಗಗಳಲ್ಲಿ ಕಾಗದದ ಸ್ಲಿಪ್‌ಗಳ ಎಣಿಕೆ ಮಾಡುವುದೆಂದು ಚುನಾವಣಾಧಿಕಾರಿಯು ನಿರ್ಧರಿಸಿದರೆ ಆಗ ಆತ–

ಎ. ಆಯೋಗವು ನಿರ್ದೇಶಿಸಬಹುದಾದಂತಹ ರೀತಿಯಲ್ಲಿ ಎಣಿಕೆ ಕಾರ್ಯವನ್ನು ಕೈಗೊಳ್ಳಬಹುದು,

ಬಿ. ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶನಗೊಳ್ಳುವ ಮತಗಳು ಮತ್ತು ಕಾಗದ ಸ್ಲಿಪ್‌ಗಳ ಎಣಿಕೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ, ಕಾಗದ ಸ್ಲಿಪ್‌ಗಳ ಎಣಿಕೆಯ ಪ್ರಕಾರ ನಮೂನೆ 20ರಲ್ಲಿರುವ ಫಲಿತಾಂಶ ಹಾಳೆಯಲ್ಲಿ ತಿದ್ದುಪಡಿ ಮಾಡುವುದು.

ಸಿ. ಹಾಗೆ ಮಾಡಿದ ತಿದ್ದುಪಡಿಯನ್ನು ಪ್ರಕಟಿಸುವುದು

ಡಿ. ಫಲಿತಾಂಶ ಹಾಳೆಯನ್ನು ಪೂರ್ಣಗೊಳಿಸಿ ಸಹಿ ಮಾಡುವುದು.

16.34.6. ಚುನಾವಣೆ ನಡೆಸುವ ನಿಯಮಗಳು, 1961ರ 65ನೇ ನಿಯಮದ ಮೇರೆಗೆ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಸಂಸದೀಯ ಮತಕ್ಷೇತ್ರದ ಮತಗಳನ್ನು ಎಣಿಕೆ ಮಾಡುವುದಿದ್ದರೆ, ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ಕೊನೆಯ ಸ್ಥಳದಲ್ಲಿ ಎಣಿಕೆ ಕೊನೆಗೊಂಡ ನಂತರ ಮಾತ್ರವೇ ಮತಗಳ ಮರು–ಎಣಿಕೆಗಾಗಿನ ಬೇಡಿಕೆಯನ್ನು ಸಲ್ಲಿಸಬಹುದು. ಅಂತಹ ಕೊನೆಯ ಸ್ಥಳವು ಸಾಮಾನ್ಯವಾಗಿ ರಿಟರ್ನಿಂಗ್ ಅಧಿಕಾರಿಯು ಅಲ್ಲಿ ಅವರು ಆ ಸಂಸದೀಯ ಮತಕ್ಷೇತ್ರವು ಒಳಗೊಂಡ ವಿವಿಧ ವಿಧಾನಸಭಾ ವಿಭಾಗಗಳ ಫಲಿತಾಂಶವನ್ನು ತಾಳೆ ನೋಡಿ ಕ್ರೋಢೀಕರಿಸುವ ಕೇಂದ್ರ ಕಚೇರಿಯಾಗಿರುವುದು.

**16.35. ಮರುಮತದಾನಕ್ಕೆ ಘೋಷಿಸಿದಾಗ ಎಣಿಕೆಯನ್ನು ಮುಂದೂಡುವುದು:–**

16.35.1. ಯಾವುದೇ ಮತಯಂತ್ರ ವಿರೂಪಗೊಂಡಿರುವುದು ಕಂಡುಬಂದ ಬಗ್ಗೆ ರಿಟರ್ನಿಂಗ್ ಅಧಿಕಾರಿಯು ಚುನಾವಣಾ ಆಯೋಗಕ್ಕೆ ವರದಿ ಮಾಡಿದ್ದರೆ ಚುನಾವಣಾ ಆಯೋಗದ ನಿರ್ದೇಶನಕ್ಕೆ ಕಾಯಬೇಕು. ಬಾಧಿತ ಮತಗಟ್ಟೆಗಳಲ್ಲಿ ಮರುಮತದಾನ ನಡೆಸಬೇಕೆಂದು ಆಯೋಗವು ನಿರ್ದೇಶಿಸಿದಲ್ಲಿ, ಇತರೆ ಎಲ್ಲಾ ಮತಗಟ್ಟೆಗಳ ಎಣಿಕೆ ಕಾರ್ಯವು ಪೂರ್ಣಗೊಂಡ ಬಳಿಕ ಎಣಿಕೆಯನ್ನು ಮುಂದೂಡಬೇಕು. ಅಂತಹ ಸಂದರ್ಭದಲ್ಲಿ ಎಲ್ಲಾ ಇವಿಎಂಗಳು, ವಿವಿಪ್ಯಾಟ್‌ಗಳು ಮತ್ತು ಚುನಾವಣೆಗೆ ಸಂಬಂಧಿಸಿದ ಇತರೆ ಎಲ್ಲಾ ಕಾಗದ ಪತ್ರಗಳಿಗೆ ರಿಟರ್ನಿಂಗ್ ಅಧಿಕಾರಿಯು ಮೊಹರು ಹಾಕಬೇಕು. ಪ್ರತಿಯೊಬ್ಬ ಅಭ್ಯರ್ಥಿ ಅಥವಾ ಅವರ ಏಜೆಂಟರು ಪ್ರತಿಯೊಂದು ಮತಯಂತ್ರ ಮತ್ತು ಕಾಗದ ಪತ್ರಗಳನ್ನಿರಿಸಿದ ಪ್ಯಾಕೆಟ್ ಮುಂತಾದವುಗಳ ಮೇಲೆ ಅವರು ಅಪೇಕ್ಷಿಸಿದಲ್ಲಿ ತಮ್ಮ ಮೊಹರನ್ನು ಹಾಕಬಹುದು. ಮರು ಮತದಾನವಾದ ಬಳಿಕ, ಈ ನಿಟ್ಟಿನಲ್ಲಿ ರಿಟರ್ನಿಂಗ್ ಅಧಿಕಾರಿಯು ನಿಗದಿಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಹಾಗೆ ಮುಂದೂಡಿದ ಎಣಿಕೆಯನ್ನು ಕೈಗೆತ್ತಿಕೊಂಡು ಮೇಲೆ ನಿರೂಪಿಸಿರುವ ಕಾರ್ಯವಿಧಾನದ ಅನುಸಾರ ಪೂರ್ಣಗೊಳಿಸತಕ್ಕದ್ದು.

**16.36. ಎಣಿಕೆ ನಂತರ ಮತಯಂತ್ರಗಳನ್ನು ಬಿಡುಗಡೆಗೊಳಿಸುವುದು:**

16.36.1. ನಿಯಂತ್ರಣ ಘಟಕದಲ್ಲಿ ದಾಖಲಾದ ಮತಗಳ ಫಲಿತಾಂಶವನ್ನು ಅಭ್ಯರ್ಥಿವಾರು ಖಚಿತಪಡಿಸಿಕೊಂಡು ನಮೂನೆ 17–ಸಿ ಯ 'ಭಾಗ–IIರ ಎಣಿಕೆ ಫಲಿತಾಂಶ' ಮತ್ತು ನಮೂನೆ 20ರ ಅಂತಿಮ ಫಲಿತಾಂಶ ಹಾಳೆಯಲ್ಲಿ ದಾಖಲಿಸಿದ ಬಳಿಕ, ರಿಟರ್ನಿಂಗ್ ಅಧಿಕಾರಿಯ ಮೊಹರು, ಆಯೋಗದ ಗೌಪ್ಯ ಮೊಹರು ಹಾಗೂ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟ್‌ರು

ಅದರ ಮೇಲೆ ತಮ್ಮ ಮೊಹರುಗಳನ್ನು ಹಾಕಲು ಇಚ್ಛಿಸಿದಲ್ಲಿ ಆ ಮೊಹರುಗಳನ್ನು ಹಾಕಿ ಕಂಟ್ರೋಲ್ ಯೂನಿಟ್ ಅನ್ನು ಮರು ಮೊಹರು ಮಾಡಬೇಕು. ಕಂಟ್ರೋಲ್ ಯೂನಿಟ್ ನಲ್ಲಿ ದಾಖಲಾದ ಮತದಾನದ ಫಲಿತಾಂಶವನ್ನು ಅಳಿಸಿ ಹಾಕದೆ ಅಥವಾ ತೊಡೆದು ಹಾಕದೆ ಹಾಗೆಯೇ ಬಿಡುಗಡೆಗೊಳಿಸಲಾಗುವುದು ಮತ್ತು ಕಂಟ್ರೋಲ್ ಯೂನಿಟ್ ಅಂತಹ ಫಲಿತಾಂಶದ ಸ್ಮರಣೆ (memory)ಯನ್ನು ಉಳಿಸಿಕೊಳ್ಳುತ್ತದೆ.

**16.37. ಸಮಾನ ಮತಗಳು**

16.37.1 ಸಮಾನ ಮತಗಳು ದಾಖಲಾದ (ಟೈ ಆದ) ಸಂದರ್ಭದಲ್ಲಿ ಫಲಿತಾಂಶವನ್ನು ಲಾಟರಿ (ಲಾಟ್) ಮೂಲಕ ನಿರ್ಧರಿಸಲಾಗುವುದು. ಉದಾಹರಣೆ: ಕ್ಷೇತ್ರವೊಂದರಲ್ಲಿ ಎ, ಬಿ, ಸಿ ಮತ್ತು ಡಿ ಅಭ್ಯರ್ಥಿಗಳು ಸ್ಪರ್ಧಿಸಿ, ಅವರು ಪಡೆದಿರುವ ಒಟ್ಟು ಮತಗಳು ಈ ಕೆಳಗಿನಂತಿದ್ದಲ್ಲಿ – ಎ – 12, 703, ಬಿ – 17, 567, ಸಿ – 17, 567, ಡಿ – 16, 394. ಅತ್ಯಂತ ಹೆಚ್ಚು ಮತಗಳು ಚಲಾಯಿತವಾಗಿರುವ (ಸಮಾನ) ಬಿ ಮತ್ತು ಸಿ ನಡುವೆ ಲಾಟರಿಯನ್ನು ಡ್ರಾ ಮಾಡಿ, ಡ್ರಾದಲ್ಲಿ ಬಂದಂತಹ ಹೆಸರಿನ ವ್ಯಕ್ತಿಗೆ ಒಂದು ಹೆಚ್ಚುವರಿ ಮತ ಚಲಾಯಿಸಲಾಗಿದೆಯೆಂದು ಪರಿಭಾವಿಸಲಾಗುವುದು. ತರುವಾಯ, ರಿಟರ್ನಿಂಗ್ ಅಧಿಕಾರಿಯು ಫಲಿತಾಂಶ ಹಾಳೆಯನ್ನು ಪೂರ್ಣಗೊಳಿಸಿ ಸಹಿ ಹಾಕುವರು.

**16.38. ಚುನಾವಣಾ ಫಲಿತಾಂಶದ ಘೋಷಣೆ**

16.38.1. ಸಕಲ ದೃಷ್ಟಿಯಿಂದ ಎಣಿಕೆ ಕಾರ್ಯವು ಪೂರ್ಣಗೊಂಡ ನಂತರ ರಿಟನಿಂಗ್ ಅಧಿಕಾರಿಯು ಅಂತಿಮ ಫಲಿತಾಂಶವನ್ನು ಪೂರ್ಣಗೊಳಿಸಿ ಸಹಿ ಹಾಕಿದ ಬಳಿಕ ಇದಕ್ಕೆ ವ್ಯತಿರಿಕ್ತವಾಗಿ ಆಯೋಗದ ಯಾವುದೇ ನಿರ್ದೇಶನವಿಲ್ಲದಿರುವಾಗ, ಚುನಾವಣೆಯ ಫಲಿತಾಂಶವನ್ನು ಔಪಚಾರಿಕವಾಗಿ ಘೋಷಿಸಲು ಅವರು ಮುಂದಾಗುವರು. ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ನಮೂನೆ 21–ಸಿ ಯಲ್ಲಿ ಮತ್ತು ಉಪಚುನಾವಣೆಯ ಸಂದರ್ಭದಲ್ಲಿ ನಮೂನೆ 21–ಡಿ ಯಲ್ಲಿ ಅವರು ಫಲಿತಾಂಶವನ್ನು ಘೋಷಿಸಬೇಕು.

16.38.2. ಒಂದು ವೇಳೆ ಯಾವುದೇ ಮತಕ್ಷೇತ್ರದ ಫಲಿತಾಂಶ ಘೋಷಣೆಯನ್ನು, ತನ್ನ ಮುಂದಿನ ನಿರ್ದೇಶನದವರೆಗೆ ತಡೆಹಿಡಿಯಬೇಕೆಂದು ಯಾವುದೇ ನಿರ್ದೇಶನವನ್ನು ಆಯೋಗವು ನೀಡಿದ್ದಲ್ಲಿ, ಅಂತಹ ನಿರ್ದೇಶನವನ್ನು ಉಲ್ಲಂಘಿಸಿ, ರಿಟನಿಂಗ್ ಅಧಿಕಾರಿಯು ಮಾಡುವ ಫಲಿತಾಂಶದ ಯಾವುದೇ ಘೋಷಣೆಯು, ನಗಣ್ಯ ಮತ್ತು ಆರಂಭದಿಂದಲೇ ಶೂನ್ಯವಾಗುವುದು.

**16.39. ಚುನಾವಣಾ ಪ್ರಮಾಣಪತ್ರ**

16.39.1. ರಿಟರ್ನಿಂಗ್ ಅಧಿಕಾರಿಯು ಚುನಾವಣಾ ಫಲಿತಾಂಶವನ್ನು ಘೋಷಣೆ ಮಾಡಿದ ಕೂಡಲೇ, ವಿಜೇತ ಅಭ್ಯರ್ಥಿಗೆ ನಮೂನೆ 22ರಲ್ಲಿರುವ ಚುನಾವಣಾ ಪ್ರಮಾಣಪತ್ರವನ್ನು ನೀಡಿ, ಆತನಿಂದ ಯುಕ್ತವಾಗಿ ಸಹಿ ಮಾಡಲ್ಪಟ್ಟ ಸ್ವೀಕೃತಿಯನ್ನು ಪಡೆಯುವರು. ಫಲಿತಾಂಶ ಘೋಷಿಸುವ ಸಮಯದಲ್ಲಿ ಅಭ್ಯರ್ಥಿಯು ಹಾಜರಿಲ್ಲದಿದ್ದಲ್ಲಿ, ಆತನು ಕೂಡಲೇ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಿ ಚುನಾವಣಾ ಪ್ರಮಾಣಪತ್ರವನ್ನು ಪಡೆದುಕೊಳ್ಳಬೇಕು.

ಈ ಸಂಬಂಧವಾಗಿ ಆಯೋಗವು ಈ ಮುಂದಿನಂತೆ ನಿರ್ಧರಿಸಿದೆ:–

(1) ಸಂಸತ್ತು ಮತ್ತು ರಾಜ್ಯ ವಿಧಾನಮಂಡಲಗಳಿಗೆ ನಡೆಯುವ ಚುನಾವಣೆಗಳಿಗೆ ಸಂಬಂಧಪಟ್ಟ ಪ್ರಮಾಣಪತ್ರವನ್ನು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ನೀಡತಕ್ಕದ್ದು. ಆದರೆ, ಆಯ್ಕೆಗೊಂಡ ಅಭ್ಯರ್ಥಿಯು ತಾನು ಬಯಸುವ ಯಾವುದೇ ಭಾಷೆಯಲ್ಲಿ ಸ್ವೀಕೃತಿಗೆ ಸಹಿ ಮಾಡಲು ಸ್ವತಂತ್ರನಾಗಿರತಕ್ಕದ್ದು.

(2) ಚುನಾಯಿತ ಅಭ್ಯರ್ಥಿಯು ಎಣಿಕೆ ಸ್ಥಳದಲ್ಲಿ ಉಪಸ್ಥಿತನಿರದಿದ್ದಲ್ಲಿ ಅಥವಾ ತದನಂತರ ಕೂಡಲೇ ಸ್ಥಳಕ್ಕೆ ಭೇಟಿ ನೀಡದ ಸಂದರ್ಭದಲ್ಲಿ, ಪ್ರಮಾಣಪತ್ರವನ್ನು ಅಭ್ಯರ್ಥಿಯು ಈ ಸಂಬಂಧ ಯುಕ್ತವಾಗಿ ಅಧಿಕೃತಗೊಳಿಸಿರುವ ಮತ್ತು ರಿಟರ್ನಿಂಗ್ ಅಧಿಕಾರಿಗೆ ಖುದ್ದು ಪರಿಚಯವಿರುವಂಥ ವ್ಯಕ್ತಿಗೆ ಹಸ್ತಾಂತರಿಸಿ, ಸ್ವೀಕೃತಿಯನ್ನು (ಅಭ್ಯರ್ಥಿಯು ಯುಕ್ತವಾಗಿ ಸಹಿ ಮಾಡಿರುವ) ಸಹ ಅದೇ ವ್ಯಕ್ತಿಯಿಂದ ಪಡೆದುಕೊಳ್ಳಬಹುದಾಗಿದೆ.

ಸ್ವೀಕೃತಿಯು ಈ ಕೆಳಗಿನ ನಮೂನೆಯಲ್ಲಿರತಕ್ಕದ್ದು:

––––––––––––––––– ಎಂಬ ಹೆಸರಿನ ನಾನು––––––––––––––––ದಂದು ಘೋಷಣೆಯಾದ –––––––––––––– ಮತಕ್ಷೇತ್ರದಿಂದ ––––––––––––––––– ನನ್ನ ಚುನಾವಣೆಗೆ ಸಂಬಂಧಪಟ್ಟಂತೆ ನಮೂನೆ 22ರಲ್ಲಿ ಚುನಾವಣಾ ಪ್ರಮಾಣಪತ್ರದ ಸ್ವೀಕೃತಿಯನ್ನು ನೀಡಿರುತ್ತೇನೆ.

ದಿನಾಂಕ: ––––––––––– ಚುನಾಯಿತ ಅಭ್ಯರ್ಥಿಯ ಸಹಿ.

ದೃಢೀಕರಿಸಿ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡಲಾಗಿದೆ.

––––––––––––––––––––

ರಿಟರ್ನಿಂಗ್ ಅಧಿಕಾರಿ.

16.39.2. ಚುನಾಯಿತ ಅಭ್ಯರ್ಥಿಯು, ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಳ್ಳುವ ಮೊದಲು ಪ್ರಮಾಣ ವಚನವನ್ನು ಸ್ವೀಕರಿಸುವ ಮತ್ತು ರುಜು ಮಾಡುವ ಸಮಯದಲ್ಲಿ ಆತನ ಗುರುತನ್ನು ಪರಿಶೀಲಿಸುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಸ್ವೀಕೃತಿಗಳು ಅಗತ್ಯವಾಗಿವೆ.

# 17. ಬಹು ಚುನಾವಣೆಗಳು

## 17.1 ಸಂಸತ್ತಿನ ಎರಡೂ ಸದನಗಳಿಗೆ ಚುನಾವಣೆ

17.1.1 ಅಭ್ಯರ್ಥಿಯು, ಸಂಸತ್ತಿನ ಎರಡೂ ಸದನಗಳ ಸದಸ್ಯನಾಗಲು ಸಾಧ್ಯವಿಲ್ಲ (ಸಂವಿಧಾನದ ಅನುಚ್ಛೇದ 101 (1) (ಪರಿಶಿಷ್ಟ–34).

17.1.2 ಅಭ್ಯರ್ಥಿಯು, ಸಂಸತ್ತಿನ ಉಭಯ ಸದನಗಳಿಗೂ ಚುನಾಯಿತರಾಗಿದ್ದು, ಆದರೆ ಯಾವ ಸದನದಲ್ಲೂ ಇನ್ನೂ ತನ್ನ ಸ್ಥಾನವನ್ನು ವಹಿಸಿಕೊಂಡಿರದಿದ್ದರೆ, ಅವರು ಲಿಖಿತವಾಗಿ, ಸಹಿ ಮಾಡಿದ ನೋಟೀಸ್ ಒಂದನ್ನು ಆ ದಿನಾಂಕದಿಂದ ಹತ್ತು ದಿನದ ಒಳಗಾಗಿ ಚುನಾವಣಾ ಆಯೋಗದ ಕಾರ್ಯದರ್ಶಿಗೆ ತಲುಪುವಂತೆ ಸಲ್ಲಿಸಬೇಕು ಅಥವಾ ಅಂಥ ಚುನಾವಣೆಯ ನಂತರದ ದಿನಗಳಲ್ಲಿ, ಅವರು ಯಾವ ಸದನದಲ್ಲಿ ಸೇವೆ ಸಲ್ಲಿಸಲು ಇಚ್ಛಿಸುತ್ತಾರೆ ಎಂಬುದನ್ನು ತಿಳಿಸಬೇಕು. ಹಾಗಾದಾಗ ಮಾತ್ರ ಮತ್ತೊಂದು ಸದನದಲ್ಲಿ ಆತ/ಆಕೆಯ ಸ್ಥಾನವನ್ನು ಖಾಲಿ ಎಂದು ಪರಿಗಣಿಸಲಾಗುತ್ತದೆ.

17.1.3 ಆ ಕಾಲಮಿತಿಯೊಳಗೆ ಅಂಥ ಮಾಹಿತಿಯನ್ನು ಕಳುಹಿಸಿಕೊಡಲು ಅಭ್ಯರ್ಥಿಯು ವಿಫಲನಾದರೆ, ರಾಜ್ಯಸಭೆಯಲ್ಲಿನ ಅವರ ಸ್ಥಾನವು ತಂತಾನೇ ಖಾಲಿಯಾಗಿದೆ ಎಂದು ಪರಿಗಣಿಸಲಾಗುತ್ತದೆ.

17.1.4 ಆ ರೀತಿಯಾಗಿ ಅಭ್ಯರ್ಥಿಯು ಕಳುಹಿಸಿದ ಯಾವುದೇ ಅಂಥ ಮಾಹಿತಿಯು ಅಂತಿಮವಾಗಿರುತ್ತದೆ ಹಾಗೂ ಅದನ್ನು ಮಾರ್ಪಡಿಸಲಾಗುವುದಿಲ್ಲ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 68) (ಪರಿಶಿಷ್ಟ– 35).

17.1.5 ಈ ಉದ್ದೇಶಕ್ಕಾಗಿ, ಸಂಸತ್ತಿನ ಯಾವುದೇ ಸದನಕ್ಕೂ ಅಭ್ಯರ್ಥಿಯ ಆಯ್ಕೆಯ ದಿನಾಂಕವು ರಿಟರ್ನಿಂಗ್ ಅಧಿಕಾರಿಯು ಅವರನ್ನು ಚುನಾಯಿತ ಎಂದು ಘೋಷಿಸಿದ ದಿನಾಂಕವಾಗಿರುತ್ತದೆ.

## 17.2. ರಾಜ್ಯಸಭೆಗೆ ಚುನಾಯಿತಗೊಂಡ ಲೋಕಸಭೆಯ ಸದಸ್ಯ:

17.2.1 ಅಭ್ಯರ್ಥಿಯು, ಈಗಾಗಲೇ ಲೋಕಸಭೆಯ ಸದಸ್ಯನಾಗಿದ್ದು, ಆ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿದ್ದು, ಆದರೆ ತರುವಾಯದಲ್ಲಿ ರಾಜ್ಯಸಭೆಗೆ ಆಯ್ಕೆ ಆಗಿದ್ದರೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 67ಎ ಪ್ರಕರಣದಲ್ಲಿ ಪರಿಭಾಷಿಸಲಾದಂತೆ, ಅವರು ರಾಜ್ಯಸಭೆಗೆ ಆಯ್ಕೆಗೊಂಡ ದಿನಾಂಕದಿಂದ ಲೋಕಸಭೆಯಲ್ಲಿ ಅವರ ಸ್ಥಾನವು ಖಾಲಿ ಉಳಿಯುತ್ತದೆ. [ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 69(1)ರಂತೆ].

## 17.3. ರಾಜ್ಯಸಭೆಯ ಸದಸ್ಯ ಲೋಕಸಭೆಗೆ ಆಯ್ಕೆಯಾಗುವುದು:

17.3.1. ಅಭ್ಯರ್ಥಿಯು, ಈಗಾಗಲೇ ರಾಜ್ಯಸಭೆಯ ಸದಸ್ಯರಾಗಿದ್ದು ಹಾಗೂ ಆ ಸದನದಲ್ಲಿ ತಮ್ಮ ಸ್ಥಾನವನ್ನು ವಹಿಸಿಕೊಂಡಿದ್ದು, ತರುವಾಯದಲ್ಲಿ ಆತ/ಆಕೆಯು ಲೋಕಸಭೆಗೆ ಆಯ್ಕೆಯಾದರೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 67ಎ ಪ್ರಕರಣ ಪರಿಭಾಷಿಸಲಾದಂತೆ ಅವರು ಲೋಕಸಭೆಗೆ ಆಯ್ಕೆಗೊಂಡ ದಿನಾಂಕದಿಂದ ರಾಜ್ಯಸಭೆಯಲ್ಲಿ ಅವರ ಸ್ಥಾನವು ಖಾಲಿ ಉಳಿಯುತ್ತದೆ [ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 69(2)].

## 17.4 ಸಂಸತ್ತಿನ ಉಭಯ ಸದನಗಳ ಪೈಕಿ, ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನಮಂಡಲದ ಒಂದು ಸದನದಲ್ಲಿ ಅಥವಾ ಎರಡು ಸದನಗಳ ಪೈಕಿ ಯಾವುದೇ ಸದನದಲ್ಲಿನ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಗೊಳ್ಳುವುದು

17.4.1 ಲೋಕಸಭೆಯಲ್ಲಿ ಅಭ್ಯರ್ಥಿಯು ಒಂದು ಸ್ಥಾನಕ್ಕಿಂತ ಹೆಚ್ಚಿನ ಸ್ಥಾನಗಳಿಗೆ ಆಯ್ಕೆಯಾಗಿರಬಹುದು ಅಥವಾ ರಾಜ್ಯ ವಿಧಾನಮಂಡಲದ ಒಂದು ಸದನದಲ್ಲಿ ಅಥವಾ ಉಭಯ ಸದನಗಳಿಗೂ ಆಯ್ಕೆಯಾಗಿರಬಹುದು. ಅಂಥ ಸಂದರ್ಭದಲ್ಲಿ, ಆಯ್ಕೆಗೊಂಡ 14 ದಿನಗಳ ಒಳಗಾಗಿ ಅವರ ಚುನಾವಣೆಯ ದಿನಾಂಕಗಳು ಬೇರೆ ಬೇರೆ ಸ್ಥಾನಗಳ ಸಂಬಂಧದಲ್ಲಿ ಬೇರೆ ಬೇರೆ ಆಗಿದ್ದಲ್ಲಿ, ಆ ದಿನಾಂಕಗಳಲ್ಲಿ ಕೊನೆಯ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗಾಗಿ ಒಂದು ಸ್ಥಾನವನ್ನು ಬಿಟ್ಟು ಉಳಿದ ಎಲ್ಲಾ ಸ್ಥಾನಗಳಿಗೆ ರಾಜೀನಾಮೆಯನ್ನು ಸಲ್ಲಿಸಬೇಕು. ಅಂಥ ರಾಜೀನಾಮೆಯನ್ನು ಅವರು ಲಿಖಿತವಾಗಿ ತಿಳಿಸಬೇಕು ಮತ್ತು ಅದಕ್ಕೆ ಸಹಿ ಮಾಡಿರಬೇಕು. ಈ ರಾಜೀನಾಮೆಯನ್ನು ಸಂಬಂಧಪಟ್ಟ ಸದನದ ಸಭಾಧ್ಯಕ್ಷ ಅಥವಾ ಸಭಾಪತಿಗೆ ಸಲ್ಲಿಸಬೇಕು ಅಥವಾ ಅವಶ್ಯವಿದ್ದರೆ ಸದನದ ಉಪಸಭಾಧ್ಯಕ್ಷ ಅಥವಾ ಉಪ–ಸಭಾಪತಿಗೆ ಸಲ್ಲಿಸಬೇಕು ಅಥವಾ ಇದಕ್ಕೆ ವಿಫಲವಾದಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಅಭ್ಯರ್ಥಿಯು ಹಾಗೆ ಸಲ್ಲಿಸಲು ವಿಫಲವಾದರೆ, ಅವರ ಎಲ್ಲಾ ಸ್ಥಾನಗಳು ತೆರವಾಗುತ್ತವೆ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 70 ಹಾಗೂ ಚುನಾವಣೆ ನಡೆಸುವ ನಿಯಮಗಳು, 1961 ನಿಯಮ 91) (ಪರಿಶಿಷ್ಟ–36).

## 17.5 ಸಂಸತ್ತಿನ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳಿಗೆ ಚುನಾವಣೆ:

17.5.1 ಅಭ್ಯರ್ಥಿಯು, ಏಕಕಾಲಕ್ಕೆ ಸಂಸತ್ತಿನ ಉಭಯ ಸದನಗಳ ಅಥವಾ ರಾಜ್ಯ ವಿಧಾನಮಂಡಲದ ಉಭಯ ಸದನಗಳಿಗೆ ಸದಸ್ಯರಾಗಲು ಸಾಧ್ಯವಿಲ್ಲ. ಅಭ್ಯರ್ಥಿಯು ಸಂಸತ್ತಿನ ಉಭಯ ಸದನಗಳಿಗೆ ಅಥವಾ ರಾಜ್ಯದ ಎರಡೂ ಸದನಗಳಿಗೆ ಆಯ್ಕೆಯಾದರೆ, ಈ ವಿಷಯ ಭಾರತದ ರಾಜ್ಯಪತ್ರದಲ್ಲಿ ಅಥವಾ ರಾಜ್ಯದ ರಾಜ್ಯಪತ್ರದಲ್ಲಿ ಅವರು ಆಯ್ಕೆ ಆಗಿದ್ದಾರೆಂಬ ಘೋಷಣೆಯು ಯಾವುದರಲ್ಲಿ

ಆನಂತರ ಪ್ರಕಟವಾಗುವುದೋ, ಆ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗಾಗಿ ಯಾವುದಾದರೂ ಒಂದು ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಬೇಕು. ಅಭ್ಯರ್ಥಿಯು ಹಾಗೆ ಮಾಡಲು ವಿಫಲರಾದರೆ ಸ್ಥಾನವು ತೆರವಾಗುವುದು. [(ಸಂವಿಧಾನದ ಅನುಚ್ಛೇದ 101 (2) ಮತ್ತು ಏಕಕಾಲಕ್ಕೆ ಹಲವು ಸದಸ್ಯತ್ವ ನಿಷೇಧ ನಿಯಮಗಳು, 1950ರ ನಿಯಮ 2 (ಪರಿಶಿಷ್ಟ–37)].

ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 91

91. ಸದನದಲ್ಲಿ ಒಂದು ಸ್ಥಾನಕ್ಕಿಂತ ಹೆಚ್ಚಿನ ಸ್ಥಾನಗಳಿಗೆ ಆಯ್ಕೆಯಾದ ಸಂದರ್ಭದಲ್ಲಿ ಆ ಸ್ಥಾನಗಳಿಗೆ ರಾಜೀನಾಮೆಯನ್ನು ಸಲ್ಲಿಸುವುದು:

(1) ಒಬ್ಬ ವ್ಯಕ್ತಿಯು, ಸಂಸತ್ತಿನ ಯಾವುದೇ ಸದನಕ್ಕೆ ಅಥವಾ ರಾಜ್ಯ ವಿಧಾನಮಂಡಲದ ಒಂದು ಸದನಕ್ಕೆ ಅಥವಾ ಯಾವುದೇ ಸದನಕ್ಕೆ ಆಯ್ಕೆಗೊಂಡು, ಯಾವುದಾದರೂ ಒಂದು ಸ್ಥಾನವನ್ನು ಬಿಟ್ಟು, ಉಳಿದ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಬೇಕಾದ ಕಾಲಾವಧಿಯು:–

(ಎ) 67ಎ ಪ್ರಕರಣದ ಅಡಿಯಲ್ಲಿ, ಆತನು ಚುನಾಯಿತನಾದ ದಿನಾಂಕದಿಂದ 14 ದಿನಗಳಾಗಿರತಕ್ಕದ್ದು; ಅಥವಾ

(ಬಿ) ಆತನ ಬೇರೆಬೇರೆ ಸ್ಥಾನಗಳಿಗೆ ಚುನಾವಣೆಯ ದಿನಾಂಕಗಳು ಬೇರೆಬೇರೆಯಾಗಿದ್ದಲ್ಲಿ, ಆ ದಿನಾಂಕಗಳ ಪೈಕಿ, ಕೊನೆಯ ದಿನಾಂಕದಿಂದ ಹದಿನಾಲ್ಕು ದಿನಗಳಾಗಿರತಕ್ಕದ್ದು.

(2) ಅಂತಹ ರಾಜೀನಾಮೆಯನ್ನು –

(ಎ) ಸಂಬಂಧಪಟ್ಟ ಸದನದ ಸಭಾಧ್ಯಕ್ಷ ಅಥವಾ ಸಭಾಪತಿಗೆ ಸಲ್ಲಿಸತಕ್ಕದ್ದು; ಅಥವಾ

(ಬಿ) ಸಭಾಧ್ಯಕ್ಷ ಅಥವಾ ಸಭಾಪತಿಯ ಹುದ್ದೆಯು ತತ್ಕಾಲದಲ್ಲಿ ಖಾಲಿ ಇದ್ದರೆ, ಅಥವಾ ತಡೆಹಿಡಿದ ಸ್ಥಿತಿಯಲ್ಲಿದ್ದರೆ ಅಥವಾ ಹಾಗೆಂದು ಭಾವಿಸಲಾಗಿದ್ದಲ್ಲಿ, ಸಂಬಂಧಪಟ್ಟ ಸದನದ ಉಪಸಭಾಧ್ಯಕ್ಷ ಅಥವಾ ಉಪ–ಸಭಾಪತಿಗೆ ಸಲ್ಲಿಸತಕ್ಕದ್ದು; ಅಥವಾ

(ಸಿ) ಉಪಸಭಾಧ್ಯಕ್ಷ ಅಥವಾ ಉಪಸಭಾಪತಿಯ ಸ್ಥಾನವೂ ಸಹ ತತ್ಕಾಲದಲ್ಲಿ ತಡೆಹಿಡಿದ ಸ್ಥಿತಿಯಲ್ಲಿದ್ದರೆ ಅಥವಾ ಹಾಗೆಯೇ ಭಾವಿಸಲಾಗಿದ್ದಲ್ಲಿ, ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.

(3) ಚುನಾವಣಾ ಆಯೋಗದ (2)ನೇ ಉಪನಿಯಮದ ಮೇರೆಗೆ, ಚುನಾವಣಾ ಆಯೋಗಕ್ಕೆ ರಾಜೀನಾಮೆಯನ್ನು ಕಳುಹಿಸಿದಲ್ಲಿ, ರಾಜೀನಾಮೆಯನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗನೆ ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ಸದನದ ಕಾರ್ಯದರ್ಶಿಗೆ ಕಳುಹಿಸತಕ್ಕದ್ದು.

ಸಂವಿಧಾನದ ಅನುಚ್ಛೇದ 101(2)

(2) ಯಾರೇ ಒಬ್ಬ ವ್ಯಕ್ತಿಯು, ಸಂಸತ್ತು ಮತ್ತು ಒಂದು ರಾಜ್ಯದ ವಿಧಾನಮಂಡಲ ಎರಡಕ್ಕೂ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಸಂಸತ್ತು ಮತ್ತು ಒಂದು ರಾಜ್ಯದ ವಿಧಾನಮಂಡಲದ ಯಾವುದೇ ಸದನ– ಈ ಎರಡರ ಸದಸ್ಯನಾಗಿ ಆಯ್ಕೆಯಾದಲ್ಲಿ, ಆಗ, ರಾಷ್ಟ್ರಪತಿಯು ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಅವನು ಆ ರಾಜ್ಯದ ವಿಧಾನಮಂಡಲದಲ್ಲಿನ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರದಿದ್ದರೆ, ಆ ಅವಧಿಯು ಮುಕ್ತಾಯವಾದ ಮೇಲೆ ಸಂಸತ್ತಿನಲ್ಲಿನ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**17.6. ರಾಜ್ಯ ವಿಧಾನಮಂಡಲದ ಎರಡೂ ಸದನಗಳಿಗೆ ಚುನಾವಣೆ:**

17.6.1 ಅಭ್ಯರ್ಥಿಯು, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಸದಸ್ಯನಾಗಿರಲು ಸಾಧ್ಯವಿಲ್ಲ. ಅವರು ಎರಡೂ ಸದನಗಳಿಗೆ ಆಯ್ಕೆಯಾದಲ್ಲಿ, ಯಾವುದೇ ಸದನದಲ್ಲಿ ತಮ್ಮ ಸ್ಥಾನವನ್ನು ಬಿಟ್ಟುಕೊಡುವುದು ಹೇಗೆ ಎಂಬುದನ್ನು ದೃಢಪಡಿಸಿಕೊಳ್ಳುವ ಸಲುವಾಗಿ ತಕ್ಷಣವೇ ಸದನಗಳ ಕಾರ್ಯದರ್ಶಿಗಳನ್ನು ಭೇಟಿ ಮಾಡಬೇಕು. ಈ ಸಂಬಂಧವಾಗಿ, ಸಂವಿಧಾನದ ಅನುಚ್ಛೇದ **190(1)ರ** ಮೇರೆಗೆ ರಚಿಸಿದ ಉಪಬಂಧಗಳಿಗನುಸಾರವಾಗಿ ಅವರು ಎರಡೂ ಸದನಗಳಲ್ಲಿ ಯಾವುದಾದರೂ ಒಂದು ಸದನಕ್ಕೆ ರಾಜೀನಾಮೆಯನ್ನು ಸಲ್ಲಿಸಬೇಕು.

ಭಾರತ ಸಂವಿಧಾನದ (ಇಲ್ಲಿ ಇನ್ನು ಮುಂದೆ "ಸಂವಿಧಾನ" ಎಂದು ಉಲ್ಲೇಖಿಸಲಾಗುವುದು) ಮೊದಲನೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಸಂಸತ್ತು ಮತ್ತು ರಾಜ್ಯ ವಿಧಾನಮಂಡಲದ ಸದನ ಎರಡಕ್ಕೂ ಸದಸ್ಯನಾಗಿ ಆಯ್ಕೆಯಾಗಿರುವ ಯಾರೇ ವ್ಯಕ್ತಿಯ ಸಂಸತ್ತಿನ ಸ್ಥಾನವು ಕೊನೆಗೊಳ್ಳುವ ಅವಧಿಯಲ್ಲಿ ಅಂಥ ರಾಜ್ಯ ವಿಧಾನಮಂಡಲದಲ್ಲಿನ ಆತನ ಸ್ಥಾನಕ್ಕೆ ಮುಂಚಿತವಾಗಿ ರಾಜೀನಾಮೆ ನೀಡಿದ ಪಕ್ಷದಲ್ಲಿ ಅದು ಖಾಲಿಯಾಗತಕ್ಕದ್ದು. ಈ ವಿಷಯ ಭಾರತದ ರಾಜ್ಯಪತ್ರದಲ್ಲಿ ಅಥವಾ ರಾಜ್ಯದ ರಾಜ್ಯಪತ್ರದಲ್ಲಿ ಆತ/ಆಕೆಯು ಆಯ್ಕೆ ಆಗಿದ್ದಾರೆಂಬ ಘೋಷಣೆಯು ಯಾವುದರಲ್ಲಿ ಆನಂತರ ಪ್ರಕಟವಾಗುವುದೋ, ಆ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗಾಗಿ ಯಾವುದಾದರೂ ಒಂದು ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಬೇಕು.

ಸಂವಿಧಾನ ಅನುಚ್ಛೇದ 190– ಸ್ಥಾನಗಳನ್ನು ತೆರವುಗೊಳಿಸುವಿಕೆ:

(1) ಯಾರೇ ವ್ಯಕ್ತಿಯು, ಒಂದು ರಾಜ್ಯದ ವಿಧಾನಮಂಡಲದ ಉಭಯ ಸದನಗಳ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಉಭಯ ಸದನಗಳ ಸದಸ್ಯನಾಗಿ ಆಯ್ಕೆಯಾದರೆ, ಯಾರೇ ವ್ಯಕ್ತಿಯು ಅವನು ಉಭಯ ಸದನಗಳಲ್ಲಿ ಯಾವುದಾದರೂ ಒಂದು ಸದನದ ತನ್ನ ಸ್ಥಾನವನ್ನು ತೆರವುಗೊಳಿಸುವಂತೆ ಆ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಉಪಬಂಧವನ್ನು ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯು, ಮೊದಲನೆಯ ಅನುಸೂಚಿಯಲ್ಲಿ ಉಲ್ಲೇಖಿತವಾಗಿರುವ ಎರಡು ಅಥವಾ ಹೆಚ್ಚು ರಾಜ್ಯಗಳ ವಿಧಾನಮಂಡಲಗಳ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಅಂಥ ಎರಡು ಅಥವಾ ಹೆಚ್ಚು ರಾಜ್ಯಗಳ ವಿಧಾನಮಂಡಲಗಳ ಸದಸ್ಯನಾಗಿ ಆಯ್ಕೆಯಾದರೆ, ಆಗ ರಾಷ್ಟ್ರಪತಿಯು ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯು ಮುಕ್ತಾಯವಾಗುವುದಕ್ಕಿಂತ ಮುಂಚಿತವಾಗಿ ಅವನು ಆ ರಾಜ್ಯಗಳಲ್ಲಿ ಒಂದು ರಾಜ್ಯದ ಹೊರತು ಉಳಿದ ರಾಜ್ಯಗಳ ವಿಧಾನಮಂಡಲಗಳಲ್ಲಿನ ತನ್ನ ಸ್ಥಾನಕ್ಕೆ ಆ ಮೊದಲೇ ರಾಜೀನಾಮೆ ಕೊಟ್ಟಿರದಿದ್ದರೆ ಆ ಅವಧಿಯು ಮುಕ್ತಾಯವಾದ ಮೇಲೆ ಆ ಎಲ್ಲ ರಾಜ್ಯಗಳ ವಿಧಾನಮಂಡಲಗಳಲ್ಲಿ ಅವನ ಸ್ಥಾನವು ಖಾಲಿಯಾಗತಕ್ಕದ್ದು.

ದಿನಾಂಕ: 26.01.1950ರ ಎಮ್/ಲಾ ಅಧಿಸೂಚನೆ ಸಂ.ಎಫ್ 46/50.ಸಿ ಮೂಲಕ ಪ್ರಕಟವಾದ ಏಕಕಾಲೀನ ಸದಸ್ಯತ್ವ ನಿಷೇಧ ನಿಯಮಗಳು, 1950.

ಈ ಅವಧಿಯು, ಆತನು ಹಾಗೆ ಆಯ್ಕೆಯಾಗಿದ್ದಾನೆಂದು ಘೋಷಿಸಿದಂಥ ರಾಜ್ಯಗಳ ಸರ್ಕಾರಿ ರಾಜ್ಯಪತ್ರಗಳಲ್ಲಿ ಪ್ರಕಟಣೆಯಾದ ಕೊನೆಯ ದಿನಾಂಕಗಳಿಂದ ಅಥವಾ ಸಂದರ್ಭಾನುಸಾರ ಆ ದಿನಾಂಕಗಳಲ್ಲಿ ಅತ್ಯಂತ ಕೊನೆಯ ದಿನಾಂಕದಿಂದ ಹತ್ತು ದಿನಗಳಾಗಿರತಕ್ಕದ್ದು.

# 18. ಚುನಾವಣಾ ವೆಚ್ಚಗಳ ಹಾಗೂ ಅಭ್ಯರ್ಥಿಗಳ ಲೆಕ್ಕಪತ್ರಗಳ ಮೇಲ್ವಿಚಾರಣೆ

## 18.1. ಕಾನೂನು ಉಪಬಂಧಗಳು

18.1.1 ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಪ್ರಕರಣದ ಮೇರೆಗೆ, ಲೋಕಸಭಾ ಅಥವಾ ರಾಜ್ಯ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಸ್ವತಃ ಅಥವಾ ತನ್ನ ಚುನಾವಣಾ ಏಜೆಂಟ್‌ನ ಮೂಲಕ ಅವನನ್ನು ನಾಮನಿರ್ದೇಶನ ಮಾಡಲಾಗಿರುವ ದಿನಾಂಕ ಮತ್ತು ಚುನಾವಣಾ ಫಲಿತಾಂಶ ಘೋಷಣೆಯ ದಿನಾಂಕ ಇವೆರಡೂ ದಿನಾಂಕಗಳು ಸೇರಿದಂತೆ ಈ ನಡುವಿನ ಅವಧಿಯಲ್ಲಿ ಅಥವಾ ಚುನಾವಣೆಯ ಸಂಬಂಧದಲ್ಲಿ ಅವನು ಅಥವಾ ಅವನ ಚುನಾವಣಾ ಏಜೆಂಟ್‌ನು ಭರಿಸಿದ ಅಥವಾ ತಾನು ಅಧಿಕೃತಗೊಳಿಸಿದ ಎಲ್ಲಾ ವೆಚ್ಚದ ಲೆಕ್ಕವನ್ನು ಪ್ರತ್ಯೇಕವಾಗಿ ಮತ್ತು ಸರಿಯಾದ ಲೆಕ್ಕವನ್ನು ಇಟ್ಟುಕೊಳ್ಳುವುದು ಅಗತ್ಯವಾಗಿದೆ. ಸದರಿ ವೆಚ್ಚದ ಒಟ್ಟು ಮೊತ್ತವು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77(3)ನೇ ಪ್ರಕರಣದ ಅಡಿಯಲ್ಲಿ ನಿರೂಪಿಸಬಹುದಾದಂತಹ ಮೊತ್ತವನ್ನು ಮೀರತಕ್ಕದ್ದಲ್ಲ. ಚುನಾವಣೆಗಳನ್ನು ನಡೆಸುವ ನಿಯಮಗಳು 1961ರ ನಿಯಮ 90 ಇದು, ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚುನಾವಣೆಯ ವೆಚ್ಚದ ಭಿನ್ನ ಮಿತಿಗಳನ್ನು ನಿರ್ದಿಷ್ಟಪಡಿಸುತ್ತದೆ. ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ವೆಚ್ಚ ಮಿತಿಗಳಿಗಿಂತ ಹೆಚ್ಚಾಗಿ ಖರ್ಚು ಮಾಡುವುದು ಅಥವಾ ಅದನ್ನು ಅಧಿಕೃತಗೊಳಿಸುವುದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 123ರ ಅಡಿಯಲ್ಲಿ ಭ್ರಷ್ಟಾಚಾರವಾಗಿದೆ.

18.1.2 ಸದರಿ ಅಧಿನಿಯಮದ 78ನೇ ಪ್ರಕರಣದ ಅನುಸಾರವಾಗಿ, ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಚುನಾವಣಾ ಫಲಿತಾಂಶ ಘೋಷಣೆಯಾದ 30 ದಿನಗಳೊಳಗೆ ಸದರಿ ಲೆಕ್ಕದ ಯಥಾ ಪ್ರತಿಯೊಂದನ್ನು (True copy) ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜಿಲ್ಲಾ ಚುನಾವಣಾ ಅಧಿಕಾರಿಗೆ (ಡಿಇಒ) ಸಲ್ಲಿಸಬೇಕು. ಕಾನೂನಿನ ಮೂಲಕ ನಿರ್ದಿಷ್ಟಪಡಿಸಿದ ಕಾಲಾವಧಿಯೊಳಗೆ ಹಾಗೂ ವಿಧಾನದಲ್ಲಿ ಸರಿಯಾದ ಸಮರ್ಥನೆ ಇಲ್ಲದೆ ಚುನಾವಣಾ ವೆಚ್ಚಗಳ ಲೆಕ್ಕವನ್ನು ಒಪ್ಪಿಸುವುದಕ್ಕೆ ವಿಫಲರಾದರೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 10ಎ ಅಡಿಯಲ್ಲಿ ಸಂಬಂಧಪಟ್ಟ ಅಭ್ಯರ್ಥಿಯನ್ನು ಅನರ್ಹಗೊಳಿಸಬಹುದು.

18.1.3 ಎಲ್ಲಾ ಅಭ್ಯರ್ಥಿಗಳು ಕಾನೂನಿನ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಮತ್ತು ಅಗತ್ಯಪಡಿಸಿದಂತಹ ಕಾಲಾವಧಿಯೊಳಗೆ, ಚುನಾವಣಾ ವೆಚ್ಚಗಳ ಲೆಕ್ಕಗಳು ಮತ್ತು ಚುನಾವಣಾ ವೆಚ್ಚಗಳ ಸಲ್ಲಿಕೆಗಳಿಗೆ ಸಂಬಂಧಿಸಿದಂತೆ ಕಾನೂನಿನ ಅಗತ್ಯತೆಗಳನ್ನು ಪಾಲಿಸಿರುವುದನ್ನು ಖಚಿತಪಡಿಸುವ ದೃಷ್ಟಿಯಿಂದ ಲಿಖಿತ ರೂಪದಲ್ಲಿ ರಿಟರ್ನಿಂಗ್ ಅಧಿಕಾರಿಯು ಕಾನೂನಿನ ಉಪಬಂಧಗಳ ಅನುಸಾರವಾಗಿ

ಪ್ರತಿಯೊಬ್ಬ ಅಭ್ಯರ್ಥಿಯ ಗಮನವನ್ನು ಸೆಳೆಯತಕ್ಕದ್ದು. ಅಭ್ಯರ್ಥಿಯು ತನ್ನ ನಾಮಪತ್ರವನ್ನು ಸಲ್ಲಿಸಿದ ಕೂಡಲೆ **(ಪರಿಶಿಷ್ಟ– 42)ರಲ್ಲಿ** ಇರುವಂತೆ ಪ್ರತಿಯೊಬ್ಬ ಅಭ್ಯರ್ಥಿಗೂ ಪತ್ರವನ್ನು ಬರೆಯುವ ಮೂಲಕ ಆತನು ಈ ಕಾರ್ಯವನ್ನು ಮಾಡತಕ್ಕದ್ದು.

18.1.4 ಪ್ರತಿಯೊಬ್ಬ ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚಗಳ ಲೆಕ್ಕಗಳನ್ನು ನಿರ್ದಿಷ್ಟಪಡಿಸಿರುವ ನಮೂನೆ/ವೆಚ್ಚ ರಿಜಿಸ್ಟರಿನಲ್ಲಿ (ಪರಿಶಿಷ್ಟ 41) ಸಲ್ಲಿಸಬೇಕಿರುತ್ತದೆ. ಅಂಥ ಲೆಕ್ಕದ ವಿವರಗಳು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 77(2)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

18.1.5 ಅಭ್ಯರ್ಥಿಯು,–

(i) ತಾನು ಸ್ಥಾಪಿಸಿರುವ ರಾಜಕೀಯ ಪಕ್ಷ ಮತ್ತು

(ii) ಆತನಿಗೆ ಬೆಂಬಲ ನೀಡುತ್ತಿರುವ ಇತರೆ ಯಾವುದೇ ರಾಜಕೀಯ ಪಕ್ಷ

(iii) ಆತನಿಗೆ ಬೆಂಬಲ ನೀಡುತ್ತಿರುವ ಇತರ ಯಾವುದೇ ಸಂಘ/ ಸಂಸ್ಥೆ/ ನಿಕಾಯ ಮತ್ತು

(iv) ಆತನಿಗೆ ಬೆಂಬಲ ನೀಡುತ್ತಿರುವ ಇತರ ಯಾರೇ ವ್ಯಕ್ತಿಯು ಭರಿಸಿದ/ ಅಧಿಕೃತಗೊಳಿಸಿದ ವೆಚ್ಚದ ವಿವರಗಳನ್ನು ನೀಡುವ ಒಂದು ರಿಜಿಸ್ಟರಿನಲ್ಲಿ ಚುನಾವಣಾ ವೆಚ್ಚಗಳ ದೈನಂದಿನ ಲೆಕ್ಕಗಳನ್ನು ನಿರ್ವಹಿಸುವುದು ಅಗತ್ಯವಾಗಿದೆ.

ದೈನಂದಿನ ಲೆಕ್ಕಗಳ ನಿರ್ವಹಣೆಗೆ ಸಂಬಂಧಿಸಿದ ರಿಜಿಸ್ಟರಿನ ಮಾದರಿ ನಮೂನೆಯನ್ನು ಮತ್ತು ಸಂಕ್ಷಿಪ್ತ ವಿವರಣಾ ಪಟ್ಟಿಯನ್ನು ಪರಿಶಿಷ್ಟ –41ರಲ್ಲಿ ನೀಡಲಾಗಿದೆ. ಅಭ್ಯರ್ಥಿಗಳು ದೈನಂದಿನ ವೆಚ್ಚ ರಿಜಿಸ್ಟರ್ + ನಗದು ರಿಜಿಸ್ಟರ್, ಬ್ಯಾಂಕ್ ರಿಜಿಸ್ಟರ್+ ಸಂಕ್ಷಿಪ್ತ ವಿವರಣಾ ಪಟ್ಟಿ+ 1 ರಿಂದ 9 ಅನುಸೂಚಿಗಳ ಸ್ವೀಕೃತಿಯನ್ನು ಒಪ್ಪಿಸುವಂತೆ ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಯವರಿಗೆ ಪರಿಶಿಷ್ಟ 41ರಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಿದ ನಂತರ ಜಿಲ್ಲಾ ಚುನಾವಣಾ ಅಧಿಕಾರಿಯಿಂದ ಸ್ವೀಕೃತಿ ಪಡೆಯುವಂತೆ ಸೂಚಿಸಲಾಗಿದೆ.

18.1.6 ಅಭ್ಯರ್ಥಿಗಳು ತಮ್ಮ ಚುನಾವಣಾ ವೆಚ್ಚದ ಲೆಕ್ಕಗಳ ರಿಜಿಸ್ಟರನ್ನು ನಿರ್ವಹಿಸುವಾಗ, ಚುನಾವಣೆಗೆ ಸಂಬಂಧಪಟ್ಟಂತೆ ನಾಮ ನಿರ್ದೇಶನದ ಆ ನಂತರದ ಅವಧಿಯಲ್ಲಿ ವಾಸ್ತವದಲ್ಲಿ ಬಳಸಲಾಗುವಂತಹ ಚುನಾವಣಾ ಪ್ರಚಾರ ಪರಿಕರಗಳು ಇತ್ಯಾದಿಗಳ ಸಿದ್ಧತೆಗಾಗಿ ನಾಮಪತ್ರ ಸಲ್ಲಿಕೆಯ ದಿನಾಂಕಕ್ಕಿಂತ ಮೊದಲೇ ಮಾಡಲಾದಂತಹ ಎಲ್ಲಾ ವೆಚ್ಚಗಳ ಲೆಕ್ಕಗಳನ್ನು ಸಹ ಸಲ್ಲಿಸಬೇಕಾಗುತ್ತದೆ.

**18.2 ತಾರಾಪ್ರಚಾರಕರ ಮೇಲೆ ಭರಿಸಲಾದ ಚುನಾವಣಾ ವೆಚ್ಚ**

18.2.1 77(1)ನೇ ಪ್ರಕರಣದ ಮೇರೆಗೆ ಸೇರಿಸಲಾದ 1 ಮತ್ತು 2ನೇ ಹೊಸ ವಿವರಣೆಗಳ ಪ್ರಕಾರ, ವಿವರಣೆ 2ರ ಅಡಿಯಲ್ಲಿ ಸೇರಿಸಲಾದ ರಾಜಕೀಯ ಪಕ್ಷಗಳ ತಾರಾಪ್ರಚಾರಕರ 'ಮುಖಂಡರ' ಪ್ರಯಾಣಕ್ಕಾಗಿ ಮಾಡಲಾಗುವ ವೆಚ್ಚಗಳನ್ನು ಮಾತ್ರ ಅಭ್ಯರ್ಥಿಯ ಚುನಾವಣಾ ವೆಚ್ಚಗಳ ಲೆಕ್ಕದಲ್ಲಿ ಸೇರಿಸುವುದರಿಂದ ವಿನಾಯಿತಿ ನೀಡಲಾಗಿದೆ. ಈ ಉದ್ದೇಶಕ್ಕಾಗಿ ರಾಜಕೀಯ ಪಕ್ಷಗಳು, ಇತರ ಸಂಘ–ಸಂಸ್ಥೆಗಳು, ವ್ಯಕ್ತಿಗಳ ನಿಕಾಯ, ವ್ಯಕ್ತಿಗಳು ಭರಿಸಿದ/ ಅಧಿಕೃತಗೊಳಿಸಿದ ಇತರ ಎಲ್ಲಾ ವೆಚ್ಚಗಳನ್ನು ಅಭ್ಯರ್ಥಿಯ ಲೆಕ್ಕದ್ದಲ್ಲಿ ಸೇರಿಸುವುದು ಅಗತ್ಯವಾಗಿದೆ. ಪ್ರಕರಣ 77(1)ರ 2ನೇ ವಿವರಣೆ ಪ್ರಕಾರ, ಸಂಬಂಧಪಟ್ಟ ರಾಜಕೀಯ ಪಕ್ಷಗಳ ನಾಯಕರ ಪಟ್ಟಿಯನ್ನು (ಮಾನ್ಯತೆ ಪಡೆದಿರುವ ಪಕ್ಷಗಳ ಸಂದರ್ಭದಲ್ಲಿ 40 ಮತ್ತು ಮಾನ್ಯತೆ ಪಡೆಯದ ಆದರೆ ನೋಂದಾಯಿತ ಪಕ್ಷಗಳ ಸಂದರ್ಭದಲ್ಲಿ 20) ಆಯೋಗವು ಅಧಿಸೂಚನೆ ಹೊರಡಿಸಿದ 7 ದಿನಗಳ ಒಳಗಾಗಿ ಸಂಬಂಧಪಟ್ಟ ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳಿಗೆ ವಿವರಣೆಯ ಖಂಡ(ಎ)ಯ ಪ್ರಯೋಜನಗಳನ್ನು ಪಡೆಯುವ ಸಲುವಾಗಿ ಸಲ್ಲಿಸುವುದು ಅಗತ್ಯ. ಮುಖ್ಯ ಚುನಾವಣಾ ಅಧಿಕಾರಿಯವರು ಮತ್ತು ಆಯೋಗವು  ಅಂತಹ ರಾಜಕೀಯ ನಾಯಕರುಗಳ ಹೆಸರುಗಳನ್ನು ರಿಟರ್ನಿಂಗ್ ಅಧಿಕಾರಿಗೆ ತಿಳಿಸುತ್ತವೆ. ರಿಟರ್ನಿಂಗ್ ಅಧಿಕಾರಿಯು ಅಂತಹ ಯಾವುದೇ ಪಟ್ಟಿಯನ್ನು ಯಾವುದೇ ರಾಜಕೀಯ ಪಕ್ಷದಿಂದ ನೇರವಾಗಿ ಸ್ವೀಕರಿಸುವಂತಿಲ್ಲ.

18.2.2 ಅಂಥ ಮುಖಂಡನು ಸ್ವತಃ ಅಭ್ಯರ್ಥಿಯಾಗಿ ತನ್ನ ಸ್ವಂತ ಚುನಾವಣಾ ಭವಿಷ್ಯದ ಮುಂದುವರಿಕೆಗಾಗಿ ತನ್ನ ಕ್ಷೇತ್ರದಲ್ಲಿ ಚುನಾವಣೆ ಪ್ರಚಾರಕ್ಕಾಗಿ ಪ್ರಯಾಣ ಕೈಗೊಂಡಾಗ ಪ್ರಯಾಣದ ಸಂಬಂಧದಲ್ಲಿ ಭರಿಸಿದ ವೆಚ್ಚಗಳನ್ನು ಆತನ ಚುನಾವಣಾ ವೆಚ್ಚದ ಭಾಗವಾಗಿ ಪರಿಗಣಿಸಬೇಕಾಗುತ್ತದೆ ಮತ್ತು ಅದನ್ನು ಆ ವ್ಯಕ್ತಿಯ ಚುನಾವಣಾ ವೆಚ್ಚದ ಲೆಕ್ಕದಿಂದ ವಿನಾಯಿತಿಗೊಳಿಸಲು ಸಾಧ್ಯವಿಲ್ಲ.

18.2.3 ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77(1)ನೇ ಪ್ರಕರಣದ 1 ಮತ್ತು 2ನೇ ವಿವರಣೆಗಳ ಉದ್ದೇಶಗಳಿಗಾಗಿ, ಒಂದು ರಾಜಕೀಯ ಪಕ್ಷವು ಅದರ ಮುಖಂಡರಾಗಿ ಆ ಪಕ್ಷದ ಸದಸ್ಯರಾಗಿರುವಂಥ ವ್ಯಕ್ತಿಗಳನ್ನು ಮಾತ್ರವೇ ನಾಮನಿರ್ದೇಶನ ಮಾಡಬಹುದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪಕ್ಷದ ಸದಸ್ಯನಲ್ಲದ ಯಾರೇ ವ್ಯಕ್ತಿಯನ್ನು, ಆ ಅಧಿನಿಯಮದ 77(1)ನೇ ಪ್ರಕರಣದ ಉದ್ದೇಶಗಳಿಗಾಗಿ ಪಕ್ಷದ 'ಮುಖಂಡ'ರೆಂದು ನಾಮನಿರ್ದೇಶನ ಮಾಡುವಂತಿಲ್ಲ.

18.2.4. (ಎ) ಭದ್ರತಾ ಪಡೆ, ಮೆಡಿಕಲ್ ಅಟೆಂಡೆಂಟ್ ಒಳಗೊಂಡಂತೆ ಯಾರೇ ಅಟೆಂಡೆಂಟ್, ಅಥವಾ ಸಂಬಂಧಪಟ್ಟ ಚುನಾವಣಾ ಕ್ಷೇತ್ರದಲ್ಲಿ ಅಭ್ಯರ್ಥಿಯಾಗಿರದಂಥ, ಪಕ್ಷದ ಯಾರೇ ಸದಸ್ಯ ಸೇರಿದಂತೆ ಯಾರೇ ಇತರ ವ್ಯಕ್ತಿ, ಅಥವಾ ವಿದ್ಯುನ್ಮಾನ ಅಥವಾ ಮುದ್ರಣ ಮಾಧ್ಯಮದ ಯಾರೇ ಪ್ರತಿನಿಧಿಯು ರಾಜಕೀಯ ಪಕ್ಷದ ಮುಖಂಡ (ತಾರಾ ಪ್ರಚಾರಕ) ನೊಂದಿಗೆ ಆತನ ವಾಹನ/ವಿಮಾನ/ಹೆಲಿಕಾಪ್ಟರ್ ಇತ್ಯಾದಿಯಲ್ಲಿ ಪ್ರಯಾಣಿಸಿದರೆ, ಆಗ ಅಂಥ ಮುಖಂಡನ ಪ್ರಯಾಣ ವೆಚ್ಚಗಳನ್ನು ಸಂಪೂರ್ಣವಾಗಿ ರಾಜಕೀಯ ಪಕ್ಷದ ಲೆಕ್ಕಕ್ಕೆ ಸೇರಿಸತಕ್ಕದ್ದು. ಆದರೆ ಆ ಮುಖಂಡ (ತಾರಾ ಪ್ರಚಾರಕ)ನೊಂದಿಗೆ ಸಾರಿಗೆ ಸೌಲಭ್ಯವನ್ನು ಹಂಚಿಕೊಂಡಿರುವ ಅಂಥ ವ್ಯಕ್ತಿಯು ಅಭ್ಯರ್ಥಿಯ ಚುನಾವಣಾ ಪ್ರಚಾರದಲ್ಲಿ ಯಾವುದೇ ರೀತಿಯಲ್ಲಿ ಯಾವುದೇ ಪಾತ್ರವಹಿಸಿರಬಾರದು. ಆದರೂ ಮುಖಂಡನೊಂದಿಗೆ ವಾಹನವನ್ನು ಹಂಚಿಕೊಳ್ಳುವ ಅಂಥ ಯಾರೇ ವ್ಯಕ್ತಿ (ಗಳು) ಅಭ್ಯರ್ಥಿಗಾಗಿ ಚುನಾವಣಾ ಪ್ರಚಾರದಲ್ಲಿ ಯಾವುದೇ ಪಾತ್ರವನ್ನು ಯಾವುದೇ ರೀತಿಯಲ್ಲಿ ವಹಿಸಿದರೆ ಮುಖಂಡನ ಪ್ರಯಾಣ ವೆಚ್ಚದ ಶೇಕಡಾ 50ರಷ್ಟನ್ನು ಅಂಥ ಅಭ್ಯರ್ಥಿ (ಗಳು) ಹಂಚಿಕೊಳ್ಳತಕ್ಕದ್ದು.

(ಬಿ) ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77 (1)ನೇ ಪ್ರಕರಣದ ವಿವರಣೆ 2ರಲ್ಲಿ ಪರಿಭಾಷಿಸಲಾದ ರಾಜಕೀಯ ಪಕ್ಷದ ನಾಯಕರ (ತಾರಾ ಪ್ರಚಾರಕರ) ಹೆಸರುಗಳನ್ನು, ಅಂಥ ಚುನಾವಣೆಗಾಗಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಏಳು ದಿನಗಳ ಅವಧಿಯೊಳಗಾಗಿ, ರಾಜಕೀಯ ಪಕ್ಷವು ಭಾರತ ಚುನಾವಣಾ ಆಯೋಗಕ್ಕೆ ಅಥವಾ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ತಿಳಿಸಬೇಕು ಮತ್ತು ಅಂಥ ನಾಯಕರ ಹೆಸರು ಸೇರ್ಪಡೆಯಾಗಿರುವ ಪಟ್ಟಿಯನ್ನು ಭಾರತ ಚುನಾವಣಾ ಆಯೋಗವು ಅಥವಾ ಸಂಬಂಧಪಟ್ಟ ರಾಜ್ಯದ ಮುಖ್ಯ ಚುನಾವಣಾಧಿಕಾರಿಯು ಸ್ವೀಕರಿಸಿದ ದಿನಾಂಕದಿಂದ ಅವರು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಪ್ರಕರಣದ ಮೇರೆಗೆ ಕಲ್ಪಿಸಲಾಗಿರುವ ಸೌಲಭ್ಯಗಳನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.

(ಸಿ) ಮುಖಂಡನು (ತಾರಾ ಪ್ರಚಾರಕ) ತನ್ನ ಚುನಾವಣಾ ಕ್ಷೇತ್ರದ ಹೊರಗೆ ಸಂಘಟಿಸಲಾಗಿರುವ ಯಾವುದೇ ರ್‍ಯಾಲಿಯ ಒಂದು ಭಾಗವಾಗಿರುವಲ್ಲಿ, ಅವನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77(1)ನೇ ಪ್ರಕರಣದ ವಿವರಣೆ 1 ರ ಅಡಿಯಲ್ಲಿ ಕಲ್ಪಿಸಿರುವ ವಿನಾಯಿತಿ ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು. ಆದಾಗ್ಯೂ, ಆ ಮುಖಂಡನು (ತಾರಾ ಪ್ರಚಾರಕ) ಯಾವುದೇ ಕ್ಷೇತ್ರದಲ್ಲಿ ಚುನಾವಣೆಯಲ್ಲಿಯೂ ಸಹ ಸ್ಪರ್ಧಿಸುತ್ತಿರುವಲ್ಲಿ, ಆಗ ಆತನು ತನ್ನ ಸ್ವಂತ ಕ್ಷೇತ್ರದಲ್ಲಿ ಮಾಡಿದ ಪ್ರಯಾಣಗಳಿಗಾಗಿ ಮಾಡಿದ ವೆಚ್ಚಗಳ ಸಂಬಂಧದಲ್ಲಿ ಸದರಿ ಅಧಿನಿಯಮದ

77ನೇ ಪ್ರಕರಣದ ಮೇರೆಗೆ ಯಾವುದೇ ಪ್ರಯೋಜನ ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಮತ್ತು ಪ್ರಯಾಣ ವೆಚ್ಚಗಳೂ ಸೇರಿದಂತೆ ಆತ ತನ್ನ ಕ್ಷೇತ್ರದಲ್ಲಿ ಸಂಘಟಿಸಿದ ಸಭೆ ಅಥವಾ ರ್‍ಯಾಲಿಗೆ ತಗಲುವ ವೆಚ್ಚಗಳನ್ನು ಆತನ ಚುನಾವಣಾ ವೆಚ್ಚದ ಲೆಕ್ಕಕ್ಕೆ ಸೇರಿಸಬೇಕು.

(ಡಿ) ರ್‍ಯಾಲಿಯನ್ನು/ಸಭೆಯನ್ನು ಮುಖಂಡನ (ತಾರಾ ಪ್ರಚಾರಕನ) ಚುನಾವಣಾ ಕ್ಷೇತ್ರದಲ್ಲಿ ಆಯೋಜಿಸಿದ್ದು, ಆ ನಾಯಕನು ಸ್ಪರ್ಧಿಸಿರುವ ಇತರ ಅಭ್ಯರ್ಥಿಗಳೊಂದಿಗೆ ವೇದಿಕೆಯನ್ನು ಹಂಚಿಕೊಂಡಿದ್ದರೆ, ಆಗ, ಸಭೆಯ ಖರ್ಚನ್ನು ಆ ನಾಯಕನ ಮತ್ತು ಅಂಥ ಎಲ್ಲ ಅಭ್ಯರ್ಥಿಗಳ ಚುನಾವಣಾ ವೆಚ್ಚಕ್ಕೆ ಹಂಚಿಕೆ ಮಾಡತಕ್ಕದ್ದು. ಆದಾಗ್ಯೂ, ಆತ (ತಾರಾ ಪ್ರಚಾರಕನು) ತನ್ನ ಕ್ಷೇತ್ರದ ಹೊರಗೆ ತನ್ನ ಪಕ್ಷದ ವತಿಯಿಂದ ಸ್ಪರ್ಧಿಸಿರುವ ಇತರ ಅಭ್ಯರ್ಥಿಗಳ ಜೊತೆಗೆ ರ್‍ಯಾಲಿಯಲ್ಲಿ/ ಸಭೆಯಲ್ಲಿ ಪಾಲ್ಗೊಂಡರೆ, ಆಗ ಆ ಸಭೆಯ ವೆಚ್ಚವನ್ನು ಅಂಥ ರ್‍ಯಾಲಿ/ ಸಭೆಯನ್ನು ಯಾರ ಚುನಾವಣಾ ಪ್ರಚಾರಕ್ಕಾಗಿ ಆಯೋಜಿಸಲಾಗಿದೆಯೋ ಅಂಥ ಎಲ್ಲ ಅಭ್ಯರ್ಥಿಗಳ ಚುನಾವಣಾ ವೆಚ್ಚಕ್ಕೆ ಹಂಚಿಕೆ ಮಾಡತಕ್ಕದ್ದು ಮತ್ತು ಅವನ ಚುನಾವಣಾ ಕ್ಷೇತ್ರದ ಹೊರಗೆ ಆಯೋಜಿಸಿದಂತಹ ಅಂಥ ರ್‍ಯಾಲಿ/ ಸಭೆಯ ವೆಚ್ಚದ ಯಾವುದೇ ಭಾಗವನ್ನು ಆ ಮುಖಂಡನ (ತಾರಾ ಪ್ರಚಾರಕ) ಚುನಾವಣಾ ವೆಚ್ಚಕ್ಕೆ ಸೇರಿಸತಕ್ಕದ್ದಲ್ಲ

(ಇ) ಮತ್ತೊಂದು ರಾಜಕೀಯ ಪಕ್ಷದ/ಅಭ್ಯರ್ಥಿಯ ಪಕ್ಷದೊಂದಿಗೆ ಮೈತ್ರಿಮಾಡಿಕೊಂಡಿರುವ ಪಕ್ಷದ ತಾರಾ ಪ್ರಚಾರಕನು ರ್‍ಯಾಲಿಯಲ್ಲಿ ಭಾಗವಹಿಸಿ ಅಭ್ಯರ್ಥಿಯ ಹೆಸರನ್ನು ಬಳಸಿದರೆ ಅಥವಾ ಅಭ್ಯರ್ಥಿಯೊಂದಿಗೆ ವೇದಿಕೆಯನ್ನು ಹಂಚಿಕೊಂಡರೆ, ಆಗ ಆ ಮೈತ್ರಿ ಪಕ್ಷದ ಪ್ರಚಾರಕನ ಪ್ರಯಾಣ ವೆಚ್ಚಕ್ಕೆ ಆ ಚುನಾವಣಾ ಕ್ಷೇತ್ರದ ಮಟ್ಟಿಗೆ ವಿನಾಯಿತಿ ಇರುವುದಿಲ್ಲ ಮತ್ತು ಅದನ್ನು ಅಭ್ಯರ್ಥಿಯ ವೆಚ್ಚಗಳಿಗೆ ಸೇರಿಸತಕ್ಕದ್ದು (ಇಸಿಐ) ಸಂಖ್ಯೆ. 437/6/1/2008 – ಸಿಸಿ ಮತ್ತು ಬಿಇ ದಿನಾಂಕ: 24–10–08)

(ಎಫ್) ತಾರಾ ಪ್ರಚಾರಕರು ಯಾರೇ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡುವ ಚುನಾವಣಾ ಕ್ಷೇತ್ರದಲ್ಲಿ ಅವರ ವಸತಿ (ಲಾಡ್ಜಿಂಗ್) ಮತ್ತು ಊಟದ (ಬೋರ್ಡಿಂಗ್) ಖರ್ಚುಗಳು ಸೇರಿದಂತೆ ಎಲ್ಲ ವೆಚ್ಚವನ್ನು ಆ ನಿರ್ದಿಷ್ಟ ಅಭ್ಯರ್ಥಿಯ ವೆಚ್ಚದ ಲೆಕ್ಕದಲ್ಲಿ ಸೇರಿಸತಕ್ಕದ್ದು, ಪರಂತು,–

ಎ) ತಾರಾ ಪ್ರಚಾರಕರು/ ಪ್ರಚಾರಕರು ವಾಸ್ತವವಾಗಿ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡಿರಬೇಕು; ಮತ್ತು

ಬಿ) ಅಂಥ ಅಭ್ಯರ್ಥಿಯಿಂದ ಹಣ ಪಾವತಿ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬ ಸಂಗತಿಯನ್ನು ಗಣನೆಗೆ ತೆಗೆದುಕೊಳ್ಳದೆ, ತಾರಾ ಪ್ರಚಾರಕರು/ ಪ್ರಚಾರಕರು ಅಭ್ಯರ್ಥಿಯ

ಚುನಾವಣಾ ಪ್ರಚಾರದ ಉದ್ದೇಶಕ್ಕಾಗಿ ವಾಣಿಜ್ಯ ಹೋಟೆಲ್ ಅಥವಾ ಲಾಡ್ಜ್‌ನಲ್ಲಿ ಉಳಿದುಕೊಂಡ ಸಂದರ್ಭದಲ್ಲಿ ಊಟ ಮತ್ತು ವಸತಿ ವೆಚ್ಚವನ್ನು ಭರಿಸಿರಬೇಕು.

ಊಟ (ಬೋರ್ಡಿಂಗ್) ಮತ್ತು ವಸತಿ (ಲಾಡ್ಜಿಂಗ್) ಸೌಲಭ್ಯವನ್ನು ಗೌರವಪೂರ್ವಕವಾಗಿ ಒದಗಿಸಲಾಗಿದ್ದರೂ ಸಹ, ಅಂಥ ವಾಣಿಜ್ಯಿಕ ಊಟ (ಬೋರ್ಡಿಂಗ್) ಮತ್ತು ವಸತಿಯ (ಲಾಡ್ಜಿಂಗ್) ಮಾರುಕಟ್ಟೆ ಮೌಲ್ಯವನ್ನು, ಅಭ್ಯರ್ಥಿಯ ಚುನಾವಣಾ ವೆಚ್ಚಕ್ಕೆ ಲೆಕ್ಕಹಾಕಬೇಕಾಗುತ್ತದೆ. ತಾರಾ ಪ್ರಚಾರಕನು, ಒಂದು ಕ್ಷೇತ್ರದಲ್ಲಿ, ಊಟ (ಬೋರ್ಡಿಂಗ್) ಮತ್ತು ವಸತಿ (ಲಾಡ್ಜಿಂಗ್) ಸೌಲಭ್ಯವನ್ನು ಪಡೆದುಕೊಂಡಿರುವಾಗ ಬೇರೆ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಲು ಮತ್ತೊಂದು ಕ್ಷೇತ್ರಕ್ಕೆ ಪ್ರಯಾಣಿಸಿದಲ್ಲಿ, ಆಗ ವಸತಿ (ಲಾಡ್ಜಿಂಗ್) ಮತ್ತು ಊಟದ (ಬೋರ್ಡಿಂಗ್) ವೆಚ್ಚವನ್ನು ಆ ಅಭ್ಯರ್ಥಿಗಳ ಖರ್ಚನ್ನಾಗಿ ಪ್ರಮಾಣಾನುಸಾರವಾಗಿ ಹಂಚಿಕೆ ಮಾಡುವುದು.

## 18.3. ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ರಿಟರ್ನಿಂಗ್ ಅಧಿಕಾರಿಯವರ ಪಾತ್ರ

18.3.1. ಅಭ್ಯರ್ಥಿಯು ತನ್ನ ನಾಮಪತ್ರವನ್ನು ಸಲ್ಲಿಸಿದ ಕೂಡಲೇ, ಅಲ್ಲಿ ದೈನಂದಿನ ವೆಚ್ಚ ರಿಜಿಸ್ಟರ್ + ನಗದು ರಿಜಿಸ್ಟರು + ಬ್ಯಾಂಕ್ ರಿಜಿಸ್ಟರು + ಸಂಕ್ಷಿಪ್ತ ವಿವರಣಾ ಪಟ್ಟಿ + ಅನುಸೂಚಿಗಳು 1 ರಿಂದ 9 + ಪ್ರಮಾಣಕ ಪ್ರೊಫಾರ್ಮ (ಪರಿಶಿಷ್ಟ 41) ಅನ್ನು ರಿಟರ್ನಿಂಗ್ ಅಧಿಕಾರಿಯವರು ಮಾದರಿ ನಮೂನೆ ಪತ್ರ (ಪರಿಶಿಷ್ಟ 42) ದೊಂದಿಗೆ ಅಭ್ಯರ್ಥಿಗೆ ಅಥವಾ ಅವನ ಅಧಿಕೃತ ಏಜೆಂಟನಿಗೆ ಅದರ ಸೂಕ್ತ ಸ್ವೀಕೃತಿಯನ್ನು ಪಡೆದು ನೀಡತಕ್ಕದ್ದು ಎಂದು ಚುನಾವಣಾ ಆಯೋಗವು ಅದರ ದಿನಾಂಕ 24ನೇ ಅಕ್ಟೋಬರ್ 2003ರ ಆದೇಶದಲ್ಲಿ ನಿರ್ದೇಶಿಸಿದೆ. ಪ್ರತಿಯೊಂದು ರಿಜಿಸ್ಟರ್‌ಗೂ ಸೂಕ್ತ ಸಂಖ್ಯೆಯನ್ನು ನೀಡಿ, ಅದನ್ನು ಜಿಲ್ಲಾ ಚುನಾವಣಾ ಅಧಿಕಾರಿಯು ದೃಢೀಕರಿಸಬೇಕಾಗುತ್ತದೆ. ಪ್ರತಿ ಅಭ್ಯರ್ಥಿಯು ತನ್ನ ಪ್ರತಿದಿನದ ಚುನಾವಣಾ ವೆಚ್ಚದ ಲೆಕ್ಕವನ್ನು ಬೇರೆ ಯಾವುದೇ ದಾಖಲೆಯಲ್ಲಿ ನಮೂದು ಮಾಡಿಕೊಳ್ಳದೇ ಇದೇ ರಿಜಿಸ್ಟರ್‌ನಲ್ಲಿ ನಿರ್ವಹಿಸಬೇಕು. ಕಾನೂನಿನಡಿಯಲ್ಲಿ ಅಗತ್ಯಪಡಿಸಲಾದಂತೆ, ತನ್ನ ಲೆಕ್ಕವನ್ನು ಒಳಗೊಂಡ ರಿಜಿಸ್ಟರನ್ನೇ ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚದ ಲೆಕ್ಕವೆಂದು ಚುನಾವಣಾ ಫಲಿತಾಂಶ ಘೋಷಣೆಯಾದ 30 ದಿನಗಳ ಒಳಗಾಗಿ ಜಿಲ್ಲಾ ಚುನಾವಣಾ ಅಧಿಕಾರಿಗೆ ಸಲ್ಲಿಸಬೇಕು. ದಿನನಿತ್ಯದ ಲೆಕ್ಕದ ರಿಜಿಸ್ಟರ್‌ನ ಜೊತೆಗೆ, ವೆಚ್ಚದ ವಿವರಗಳ ಒಂದು ಸಂಕ್ಷಿಪ್ತ ವಿವರಣಾಪಟ್ಟಿಯನ್ನು ನಿಗದಿತ ನಮೂನೆಯ 1 ರಿಂದ 9 ಅನುಸೂಚಿಗಳಲ್ಲಿ ಲಗತ್ತಿಸತಕ್ಕದ್ದು.

18.3.2 ಚುನಾವಣೆಗೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಯು ಲೆಕ್ಕದ ಜೊತೆಗೆ ನಿಗದಿತ ನಮೂನೆಯಲ್ಲಿ ಅಫಿಡವಿಟ್ ಅನ್ನು ಸಲ್ಲಿಸಬೇಕಾದುದು ಸಹ ಅಗತ್ಯವಾಗಿದೆ.

18.3.3 ಅಭ್ಯರ್ಥಿಯು ಸದರಿ ಪತ್ರ ಮತ್ತು ಅದರ ಲಗತ್ತುಗಳ ಜೊತೆಗೆ ಮೇಲೆ ಹೇಳಿರುವ ರಿಜಿಸ್ಟರ್ ಅನ್ನು ಅಲ್ಲಿಯೇ ಮತ್ತು ಆಗಲೇ ಪಡೆದಿದ್ದಕ್ಕೆ ಸ್ವೀಕೃತಿಯನ್ನು ಕೇಳಬೇಕು.

18.3.4 ಅಭ್ಯರ್ಥಿಗಳಿಂದ ಪಡೆದ ಎಲ್ಲ ಸ್ವೀಕೃತಿಗಳನ್ನು, ಉಮೇದುವಾರಿಕೆಯನ್ನು ಹಿಂಪಡೆಯಲು ನಿಗದಿಪಡಿಸಿರುವ ಅಂತಿಮ ದಿನಾಂಕವು ಮುಕ್ತಾಯಗೊಳ್ಳುವ ಒಂದು ವಾರದೊಳಗೆ ಜಿಲ್ಲಾ ಚುನಾವಣಾ ಅಧಿಕಾರಿಯ ದಾಖಲೆಗಾಗಿ ರಿಟರ್ನಿಂಗ್ ಅಧಿಕಾರಿಯು ಕಳುಹಿಸಿಕೊಡತಕ್ಕದ್ದು. ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಮಾತ್ರವೇ ಲೆಕ್ಕಗಳನ್ನು ಸಲ್ಲಿಸಬೇಕು.

## 18.4 ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಮಾತ್ರವೇ ಲೆಕ್ಕಗಳನ್ನು ಸಲ್ಲಿಸಬೇಕು

18.4.1 ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ ಪ್ರಕರಣ 77ರ ಮೇರೆಗೆ ಪ್ರತಿಯೊಬ್ಬ ಅಭ್ಯರ್ಥಿಯು ಮೇಲೆ ಹೇಳಿದಂತೆ ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಇಡುವುದು ಅಗತ್ಯವಾಗಿದ್ದಾಗ್ಯೂ, ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 78ನೇ ಪ್ರಕರಣದ ಮೇರೆಗೆ, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಮಾತ್ರ ತಮ್ಮ ಚುನಾವಣಾ ವೆಚ್ಚಗಳ ಲೆಕ್ಕಗಳನ್ನು ಸಲ್ಲಿಸುವುದು ಅಗತ್ಯವಾಗಿದೆ.

## 18.5. ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿಗೆ ಸ್ಪರ್ಧೆ

18.5.1 ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಮತಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದ್ದರೆ, ಆತನು ತಾನು ಸ್ಪರ್ಧಿಸುತ್ತಿರುವ ಪ್ರತಿಯೊಂದು ಮತಕ್ಷೇತ್ರಕ್ಕೂ ಸಂಬಂಧಪಟ್ಟಂತೆ ತನ್ನ ಚುನಾವಣಾ ವೆಚ್ಚಗಳ ಪ್ರತ್ಯೇಕ ಲೆಕ್ಕವನ್ನಿಡುವುದು ಅಗತ್ಯವಾಗಿದೆ ಮತ್ತು ಅವುಗಳ ಒಂದು ಪ್ರತ್ಯೇಕ ವರದಿ (ರಿಟರ್ನ್)ಯನ್ನು ಸಲ್ಲಿಸಬೇಕು.

## 18.6. ಅಭ್ಯರ್ಥಿಗಳು ಲೆಕ್ಕಗಳನ್ನು ಸಲ್ಲಿಸಬೇಕಾಗಿರುವ ಪ್ರಾಧಿಕಾರ

18.6.1 ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ, ಸ್ಪರ್ಧಿಸುತ್ತಿರುವ ಅಭ್ಯರ್ಥಿಯು, ತಾನು ಸ್ಪರ್ಧಿಸುತ್ತಿರುವ ಮತಕ್ಷೇತ್ರದ ವ್ಯಾಪ್ತಿಯ ಮತಕ್ಷೇತ್ರವಿರುವ ಜಿಲ್ಲೆಯ ಜಿಲ್ಲಾ ಚುನಾವಣಾ ಅಧಿಕಾರಿಗೆ ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಬೇಕು.

18.6.2 ಕೆಲವು ರಾಜ್ಯಗಳ ಕೆಲವು ವಿಧಾನಸಭಾ ಮತ್ತು ಸಂಸತ್ ಮತಕ್ಷೇತ್ರಗಳು ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳ ವ್ಯಾಪ್ತಿಗೊಳಪಟ್ಟಿರುವುದರಿಂದ, ಅಂಥ ಸಂದರ್ಭಗಳಲ್ಲಿ ಅಭ್ಯರ್ಥಿಯು ಸಲ್ಲಿಸುವ ಲೆಕ್ಕಪತ್ರಗಳನ್ನು ಸ್ವೀಕರಿಸುವ ಜಿಲ್ಲಾ ಚುನಾವಣಾ ಅಧಿಕಾರಿ ಯಾರೆಂಬ ಪ್ರಶ್ನೆ ಉದ್ಭವವಾಗಬಹುದು. ಅಂಥ ಸಂದರ್ಭಗಳಲ್ಲಿ, ಮತಕ್ಷೇತ್ರಕ್ಕೆ ಮತಗಟ್ಟೆಗಳನ್ನು ಒದಗಿಸಿದ ಜಿಲ್ಲೆಯ ಜಿಲ್ಲಾ ಚುನಾವಣಾ ಅಧಿಕಾರಿಗೇ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸತಕ್ಕದ್ದೆಂದು ಸ್ಪಷ್ಟೀಕರಿಸಲಾಗಿದೆ. ಅಭ್ಯರ್ಥಿಗಳ

ಮಾಹಿತಿಗಾಗಿ, ಸಂಬಂಧಪಟ್ಟ ಜಿಲ್ಲಾ ಚುನಾವಣಾ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು, ಜಿಲ್ಲಾ ಚುನಾವಣಾ ಅಧಿಕಾರಿಯು ಯಾವ ಮತ ಕ್ಷೇತ್ರಗಳಿಗೆ ಸಂಬಂಧಪಡುವ ಲೆಕ್ಕಪತ್ರಗಳನ್ನು ಸ್ವೀಕರಿಸುವರೋ ಆ ಮತಕ್ಷೇತ್ರಗಳ ಹೆಸರನ್ನು ಸೂಚಿಸಿ ಸ್ಥಳೀಯವಾಗಿ ಪ್ರಕಟಿಸತಕ್ಕದ್ದು.

18.6.3 ಸ್ಪರ್ಧಿಸುತ್ತಿರುವ ಎಲ್ಲಾ ಅಭ್ಯರ್ಥಿಗಳ ಅನುಕೂಲಕ್ಕಾಗಿ, ಜಿಲ್ಲಾ ಚುನಾವಣಾ ಅಧಿಕಾರಿಯು, ಚುನಾವಣೆ ಮುಕ್ತಾಯಗೊಂಡ ಮೂರು ದಿನಗಳ ಒಳಗಾಗಿ, ಪ್ರತಿ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿರುವ ಎಲ್ಲಾ ಅಭ್ಯರ್ಥಿಗಳಿಗಾಗಿ, ತಮ್ಮ ಲೆಕ್ಕಗಳನ್ನು ಸಲ್ಲಿಸಬೇಕಾದ ಜಿಲ್ಲಾ ಚುನಾವಣೆ ಅಧಿಕಾರಿಯ ಹೆಸರು ಮತ್ತು ಹುದ್ದೆಯನ್ನು ಹಾಗೂ ಅವರನ್ನು ತಲುಪಬೇಕಾದ ಕೊನೆಯ ದಿನಾಂಕವನ್ನು ತಿಳಿಸಲಾಗುತ್ತದೆ.

## 18.7. ಅಭ್ಯರ್ಥಿಗಳಿಂದ ಲೆಕ್ಕಗಳು ಮತ್ತು ಚುನಾವಣಾ ವೆಚ್ಚದ ರಿಜಿಸ್ಟರುಗಳ ನಿರ್ವಹಣೆ

**18.7.1** ಪ್ರತಿಯೊಬ್ಬ ಅಭ್ಯರ್ಥಿಯು ನಾಮಪತ್ರಗಳನ್ನು ಸಲ್ಲಿಸುವಾಗ ರಿಟರ್ನಿಂಗ್ ಅಧಿಕಾರಿಯು ಆತನಿಗೆ ನೀಡುವ ಒಂದು ರಿಜಿಸ್ಟರ್‌ನಲ್ಲಿ (ಅನುಬಂಧ– 52) ಆತನ ಚುನಾವಣಾ ವೆಚ್ಚದ ದೈನಂದಿನ ಲೆಕ್ಕವನ್ನು ನಿರ್ವಹಿಸುವುದು ಅಗತ್ಯವಾಗಿರುತ್ತದೆ: ಈ ರಿಜಿಸ್ಟರ್ ಮೂರು ಭಾಗಗಳನ್ನು ಒಳಗೊಂಡಿರುತ್ತದೆ: ಎಂದರೆ,–

- ರಿಜಿಸ್ಟರ್‌ನ 'ಎ' ಭಾಗದ ಬಿಳಿ ಹಾಳೆಯ ಪುಟಗಳಲ್ಲಿ ದೈನಂದಿನ ಲೆಕ್ಕಪತ್ರಗಳು;
- ರಿಜಿಸ್ಟರ್‌ನ 'ಬಿ' ಭಾಗದ ಗುಲಾಬಿ ಬಣ್ಣದ ಹಾಳೆಗಳ ಪುಟಗಳಲ್ಲಿ ನಗದು ಲೆಕ್ಕಗಳು; ಮತ್ತು
- ರಿಜಿಸ್ಟರ್‌ನ 'ಸಿ' ಭಾಗದ ಹಳದಿ ಬಣ್ಣದ ಹಾಳೆಗಳ ಪುಟಗಳಲ್ಲಿ ಬ್ಯಾಂಕ್‌ನ ವಹಿವಾಟುಗಳು.

18.7.2. ಅರ್ಭ್ಯರ್ಥಿಯು, ಚುನಾವಣಾ ಪ್ರಚಾರದ ಅವಧಿಯಲ್ಲಿ ಕನಿಷ್ಠಪಕ್ಷ ಮೂರು ಬಾರಿ ವೆಚ್ಚದ ವೀಕ್ಷಕರ ಪರಿಶೀಲನೆಗಾಗಿ ಈ ಮೇಲೆ ತಿಳಿಸಿದ ರಿಜಿಸ್ಟರ್ ಅನ್ನು ಸಲ್ಲಿಸಬೇಕು. ರಿಜಿಸ್ಟರಿನ ಪ್ರತಿಯೊಂದು ಪುಟವು ಸಂಖ್ಯೆಯನ್ನು ಹೊಂದಿರಬೇಕು ಮತ್ತು ರಿಜಿಸ್ಟರಿನಲ್ಲಿ ಇರುವ ಒಟ್ಟು ಪುಟಗಳ ಸಂಖ್ಯೆಯ ಬಗ್ಗೆ ರಿಜಿಸ್ಟರಿನ ಮೊದಲ ಮತ್ತು ಕೊನೆಯ ಪುಟದಲ್ಲಿ ನೀವು ಕಡ್ಡಾಯವಾಗಿ ಪ್ರಮಾಣೀಕರಿಸಿರಬೇಕು. ಈ ರಿಜಿಸ್ಟರ್ ಇಡೀ ಚುನಾವಣಾ ಪ್ರಚಾರದ ಅವಧಿಗೆ ಸಂಬಂಧಿಸಿದಂತೆ ಸಾಕಷ್ಟು ಸಂಖ್ಯೆಯ ಪುಟಗಳನ್ನು ಹೊಂದಿರಬೇಕು. ಆದಾಗ್ಯೂ ಈ ಮುಂಚೆಯೇ ನೀಡಿದ ರಿಜಿಸ್ಟರ್ ಭರ್ತಿಯಾಗಿದ್ದಲ್ಲಿ, ಅಭ್ಯರ್ಥಿಯು ಪೂರಕ ರಿಜಿಸ್ಟರ್ ಅನ್ನು ಕೇಳಬಹುದು ಮತ್ತು ರಿಟರ್ನಿಂಗ್ ಅಧಿಕಾರಿಯು, ಈ ಹಿಂದಿನ ನಮೂನೆಯಲ್ಲಿ ಅವರಿಗೆ ಪೂರಕ ರಿಜಿಸ್ಟರ್ ಅನ್ನು ನೀಡತಕ್ಕದ್ದು. ಅಭ್ಯರ್ಥಿಯು ಈ ರಿಜಿಸ್ಟರ್‌ನ್ನು ಸ್ವೀಕರಿಸಿದ್ದಕ್ಕಾಗಿ ಒಂದು

ಸ್ವೀಕೃತಿಯನ್ನು ನೀಡತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಗಳಿಗೆ ನೀಡಿದ ರಿಜಿಸ್ಟರುಗಳ ಸ್ವೀಕೃತಿಗಳೊಂದಿಗೆ ಅವುಗಳನ್ನು ಜಿಲ್ಲಾ ಚುನಾವಣಾಧಿಕಾರಿಗೆ ನೀಡಬೇಕು.

**18.7.3 ಚುನಾವಣಾ ವೆಚ್ಚದ ದೈನಂದಿನ ಲೆಕ್ಕಗಳ ನಿರ್ವಹಣೆ**

1. ಅಭ್ಯರ್ಥಿಯು ತನ್ನ ಸ್ವಂತ ನಿಧಿಯಿಂದಾಗಲೀ ಅಥವಾ ರಾಜಕೀಯ ಪಕ್ಷದಿಂದ ಅಥವಾ ಇತರ ಯಾರೇ ವ್ಯಕ್ತಿಯಿಂದ, ಮಂಡಳಿ, ಸಂಸ್ಥೆ ಅಥವಾ ಕಂಪನಿಯಿಂದ, ಸ್ವೀಕರಿಸಿದ ಎಲ್ಲಾ ನಗದು, ಚಕ್ ಅಥವಾ ಡ್ರಾಫ್ಟ್ ಅಥವಾ ಪೇ ಅರ್ಡರ್‌ನ್ನು ಚುನಾವಣಾ ವೆಚ್ಚದ ಉದ್ದೇಶಕ್ಕಾಗಿ ಅಭ್ಯರ್ಥಿಯು ತೆರೆದ ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಡಬೇಕಾಗುತ್ತದೆ.
2. ಅಭ್ಯರ್ಥಿಯು, ತನ್ನ ಸ್ವಂತ ನಗದನ್ನು ತಂದರೆ, ತಾನು ಚುನಾವಣಾ ವೆಚ್ಚಗಳಿಗಾಗಿ ತೆರೆಯಲಾದ ಬ್ಯಾಂಕ್ ಖಾತೆಯಲ್ಲಿ ಆ ನಗದನ್ನು ಠೇವಣಿಯಿಡಬೇಕಾಗುತ್ತದೆ. ಮತ್ತು ಬ್ಯಾಂಕ್ ರಿಜಿಸ್ಟರ್‌ನಲ್ಲಿ ನಮೂದು ಮಾಡತಕ್ಕದ್ದು. ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚಕ್ಕಾಗಿ ಯಾರೇ ಇತರ ವ್ಯಕ್ತಿ/ ಪಕ್ಷದಿಂದ ನಗದನ್ನು ಸ್ವೀಕರಿಸಿದಲ್ಲಿ, ಆ ಮೊತ್ತವನ್ನು, ಸ್ವೀಕೃತಿ ಭಾಗದ ಮೇಲೆ ನಗದು ರಿಜಿಸ್ಟರ್‌ನಲ್ಲಿ ನಮೂದಿಸಬೇಕಾಗುತ್ತದೆ. ನಗದು ರಿಜಿಸ್ಟರ್‌ನಲ್ಲಿ ನಮೂದು ಮಾಡಿದ ತರುವಾಯ, ಆ ಮೊತ್ತವನ್ನು, ಚುನಾವಣಾ ವೆಚ್ಚಗಳಿಗಾಗಿ ತೆರೆಯಲಾದ ಬ್ಯಾಂಕ್ ಖಾತೆಯಲ್ಲಿ ಠೇವಣಿಯಿಡತಕ್ಕದ್ದು. ಆ ನಗದನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟ ನಂತರ ಬ್ಯಾಂಕ್ ರಿಜಿಸ್ಟರ್‌ನಲ್ಲಿ (ಭಾಗ–ಸಿ) ಆಗಿಂದಾಗ್ಗೆ ಅದನ್ನು ನಮೂದಿಸಲಾಗುವುದು.
3. ಅಭ್ಯರ್ಥಿಯು ಯಾರೇ ವ್ಯಕ್ತಿ/ ಪಕ್ಷ ಇತ್ಯಾದಿಗಳಿಂದ ತನ್ನ ಚುನಾವಣಾ ವೆಚ್ಚದ ಉದ್ದೇಶಕ್ಕಾಗಿ ಚೆಕ್/ ಡ್ರಾಫ್ಟ್/ ಪೇಅರ್ಡರ್‌ನ್ನು ಸ್ವೀಕರಿಸಿದರೆ ಅಥವಾ ತನ್ನ ಸ್ವಂತ ಬ್ಯಾಂಕ್ ಖಾತೆಯಿಂದ ಚೆಕ್ ಅಥವಾ ಡ್ರಾಫ್ಟ್ ನೀಡಿದರೆ, ಆತನು, ಚುನಾವಣಾ ವೆಚ್ಚಕ್ಕಾಗಿ ತೆರೆಯಲಾದ ಸದರಿ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಡಬೇಕಾಗುತ್ತದೆ. ಅಭ್ಯರ್ಥಿಯು ತನ್ನ ಸ್ವಂತ ಬ್ಯಾಂಕ್ ಖಾತೆಯಿಂದ ಚೆಕ್ ನೀಡಿದ್ದಲ್ಲಿ, ಬ್ಯಾಂಕ್ ರಿಜಿಸ್ಟರ್‌ನಲ್ಲಿ "ಅಭ್ಯರ್ಥಿಗಳ ಸ್ವಂತ ನಿಧಿ" ಎಂದು ನಮೂದಿಸಬೇಕಾಗುತ್ತದೆ.
4. ಯಾರೇ ವ್ಯಕ್ತಿ, ಪಕ್ಷ/ ಮಂಡಳಿ/ ಸಂಘಗಳು, ಅಭ್ಯರ್ಥಿಯ ಚುನಾವಣಾ ಪ್ರಚಾರಕ್ಕಾಗಿ ಕೆಲವೊಂದು ಸರಕುಗಳನ್ನು ಅಥವಾ ವಸ್ತುವಿನ ರೂಪದಲ್ಲಿ ಸೇವೆಗಳನ್ನು ಒದಗಿಸಿದರೆ, ಈ ವಸ್ತುಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಯ ದೈನಂದಿನ ಲೆಕ್ಕಗಳ ರಿಜಿಸ್ಟರ್‌ನಲ್ಲಿ ಅಗತ್ಯ ನಮೂದುಗಳನ್ನು ಮಾಡತಕ್ಕದ್ದು. ಇದಲ್ಲದೇ, ಯಾವುದೇ ರಾಜಕೀಯ ಪಕ್ಷ ಅಥವಾ ಯಾರೇ ವ್ಯಕ್ತಿ ಅಥವಾ ಸಂಘವು ಕೆಲವು ಬಾಬುಗಳನ್ನು ವಸ್ತುಗಳ ರೂಪದಲ್ಲಿ, ನೀಡಲಾದ ವಸ್ತುಗಳ

ಒಟ್ಟು ಮೌಲ್ಯ ಮತ್ತು ರಾಜಕೀಯ ಪಕ್ಷ/ ವ್ಯಕ್ತಿ/ ಸಂಘದ ಹೆಸರು ಹಾಗೂ ವಿಳಾಸವನ್ನು ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು.

5. ಅಂದರೆ, ಎಲ್ಲಾ ಚುನಾವಣಾ ವೆಚ್ಚವನ್ನು ದೈನಂದಿನ ಲೆಕ್ಕಗಳ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು. ಆ ಮೊತ್ತವನ್ನು ಅಭ್ಯರ್ಥಿ/ ರಾಜಕೀಯ ಪಕ್ಷ/ ವ್ಯಕ್ತಿಯು ಪಾವತಿಸಿದರೆ, ಸಂದಾಯ ಮಾಡಿದಂತಹ ವ್ಯಕ್ತಿಗಳ ಹೆಸರು ಮತ್ತು ವಿಳಾಸದ ವಿವರಗಳೊಂದಿಗೆ ರಿಜಿಸ್ಟರ್‌ನಲ್ಲಿ ಸಮುಚಿತ ಅಂಕಣಗಳಲ್ಲಿ ಆ ಮೊತ್ತ ಮತ್ತು ಇತರ ವಸ್ತುಗಳನ್ನು ವೆಚ್ಚಗಳಿಗೆ ಸಂಬಂಧಿಸಿದ ಎಲ್ಲಾ ಸಂದಾಯಗಳನ್ನು (ಇಡೀ ಚುನಾವಣಾ ಪ್ರಕ್ರಿಯೆಗಳ ಅವಧಿಯಲ್ಲಿ ಒಂದೇ ಪಕ್ಷಕ್ಕೆ ತಗುಲಿದ 10,000/– ರೂಗಳ ವರೆಗಿನ (ಹತ್ತು ಸಾವಿರ ರೂಪಾಯಿಗಳವರೆಗೆ) – ಸಣ್ಣಪುಟ್ಟ ವೆಚ್ಚಗಳು ಹೊರತುಪಡಿಸಿ) ಅಕೌಂಟ್ ಪೇಯೀ ಚೆಕ್‌ಗಳ ಮೂಲಕ ಮಾತ್ರ ನೀಡಬೇಕಾಗುತ್ತದೆ. ಇಡೀ ಚುನಾವಣಾ ಪ್ರಚಾರದ ಅವಧಿಯಲ್ಲಿ ಒಬ್ಬ ವ್ಯಕ್ತಿಗೆ ಸಂದಾಯ ಮಾಡಿದ ಒಟ್ಟು ಮೊತ್ತವು 10,000/– ರೂ.ಗಳನ್ನು ಮೀರದಿದ್ದಾಗ ಮಾತ್ರ ಸಣ್ಣಪುಟ್ಟ ವೆಚ್ಚಗಳ ಸಂದಾಯವನ್ನು ನಗದು ರೂಪದಲ್ಲಿ ಮಾಡಬಹುದು. ಸಣ್ಣಪುಟ್ಟ ವೆಚ್ಚಗಳಿಗೆ ಸಂದಾಯ ಮಾಡಿದ ನಂತರ, ಅಂಥ ವೆಚ್ಚಗಳನ್ನು ದೈನಂದಿನ ಲೆಕ್ಕಗಳ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು.

**18.7.4. ಚುನಾವಣಾ ಪ್ರಚಾರದ ಉದ್ದೇಶಕ್ಕಾಗಿ ಅಭ್ಯರ್ಥಿಗಳು ದೇಣಿಗೆ ಇತ್ಯಾದಿಗಳನ್ನು ಸ್ವೀಕರಿಸುವುದು.**

**ಚಾಲ್ತಿಯಲ್ಲಿರುವ ಸೂಚನೆಗಳ ಮೇರೆಗೆ, ಅಭ್ಯರ್ಥಿಗಳು, ಚುನಾವಣಾ ಪ್ರಕ್ರಿಯೆಯ ಅವಧಿಯಲ್ಲಿ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯಿಂದ ರೂ. 10,000/– ಗಳನ್ನು ಮೀರಿದ ಯಾವುದೇ ದೇಣಿಗೆ ಅಥವಾ ನಗದಿನಲ್ಲಿ ಸಾಲವನ್ನು ಸಹ ಸ್ವೀಕರಿಸತಕ್ಕದ್ದಲ್ಲ. ಆದಾಗ್ಯೂ, ರಾಜಕೀಯ ಪಕ್ಷಗಳ ಸಂದರ್ಭದಲ್ಲಿ, ಅವುಗಳು ಸ್ವೀಕರಿಸುವ ದೇಣಿಗೆಗಳು/ ಕೊಡುಗೆಗಳನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 29ಸಿ ಯ ಪ್ರಸ್ತುತ ಉಪಬಂಧಗಳ ಮೂಲಕ ನಿರ್ವಹಿಸತಕ್ಕದ್ದು.**

**18.7.5. ಅಭ್ಯರ್ಥಿಗಳು ನಗದು ರೂಪದಲ್ಲಿ ವೆಚ್ಚ ಮಾಡುವುದು.**

1. ಚುನಾವಣಾ ವೆಚ್ಚದ ತಮ್ಮ ಲೆಕ್ಕಗಳ ರಿಜಿಸ್ಟರ್‌ನ್ನು ನಿರ್ವಹಿಸುವಾಗ, ಎಲ್ಲಾ ಅಭ್ಯರ್ಥಿಗಳು, ನಾಮಪತ್ರವನ್ನು ಸಲ್ಲಿಸಿದ ದಿನದಂದು ಮೊದಲನೇ ದಿನದಿಂದಲೇ ಭರಿಸಿದ ಮತ್ತು ನಾಮಪತ್ರ ಸಲ್ಲಿಸಿದ ನಂತರದ ಅವಧಿಯಲ್ಲಿ ಬಳಸಿದಂತಹ ವೆಚ್ಚಗಳಿಗಾಗಿ ಲೆಕ್ಕ ಕೊಡತಕ್ಕದ್ದು. ಪ್ರಚಾರ ಚುನಾವಣಾ ಸಾಮಾಗ್ರಿಗಳ ಮೇಲೆ ಭರಿಸಿದ ವೆಚ್ಚಗಳಂತಹ ವೆಚ್ಚವನ್ನು ನಾಮಪತ್ರ ಸಲ್ಲಿಸಿದ ದಿನಾಂಕಕ್ಕೆ ಮುಂಚೆಯೇ ಭರಿಸಿದಂತಹ ಎಲ್ಲ ವೆಚ್ಚಗಳಿಗೆ ಲೆಕ್ಕಗಳನ್ನು ಇಡತಕ್ಕದ್ದು.

ನಾಮಪತ್ರವನ್ನು ಸಲ್ಲಿಸುವಾಗ ಆಯೋಜಿಸಿದ ರ್‍ಯಾಲಿ ಅಥವಾ ಮೆರವಣಿಗೆಗೆ ಸಂಬಂಧಿಸಿದ ಎಲ್ಲಾ ವೆಚ್ಚಗಳನ್ನು ಅಭ್ಯರ್ಥಿಗಳ ಲೆಕ್ಕಗಳಲ್ಲಿ ಸೇರಿಸಬೇಕು.

2 ಸಾರ್ವಜನಿಕರು, ಯಾರಿಂದಲೂ ಯಾವುದೇ ಹಣವನ್ನು ಸ್ವೀಕರಿಸದೆ ಅಥವಾ ಮರುಭರ್ತಿ ಮಾಡಿಕೊಳ್ಳದೆ, ತಮ್ಮ ಸ್ವಂತ ವೈಯಕ್ತಿಕ ವಾಹನವನ್ನು ಬಳಸಿಕೊಳ್ಳುವ ಮೂಲಕ ಅಭ್ಯರ್ಥಿ(ಗಳ) ಸಾರ್ವಜನಿಕ ರ್‍ಯಾಲಿ/ ಮೆರವಣಿಗೆ/ ಸಾರ್ವಜನಿಕ ಸಭೆಗೆ ಹಾಜರಾದಾಗ, ಅದನ್ನು ಅಭ್ಯರ್ಥಿಯ ವೆಚ್ಚದಲ್ಲಿ ಸೇರಿಸತಕ್ಕದ್ದಲ್ಲ. ಆದಾಗ್ಯೂ, ಯಾರೇ ಅಭ್ಯರ್ಥಿಗಳ ಉಪಯೋಗಕ್ಕಾಗಿ ಧ್ವಜಗಳು ಅಥವಾ ಬ್ಯಾನರ್‌ಗಳು ಅಥವಾ ಪೋಸ್ಟರ್‌ಗಳನ್ನು ಹಾಕಿಕೊಂಡು ಪ್ರಚಾರದ ಉದ್ದೇಶಕ್ಕಾಗಿ ರ್‍ಯಾಲಿ ಅಥವಾ ಸಾರ್ವಜನಿಕ ಸಭೆಯಲ್ಲಿ ಬಳಸಿದ ವೈಯಕ್ತಿಕ ವಾಹನಗಳನ್ನು ಅಭ್ಯರ್ಥಿಯ(ಗಳ) ವೆಚ್ಚದಲ್ಲಿ ಸೇರಿಸತಕ್ಕದ್ದು. ವಾಣಿಜ್ಯ ನೋಂದಣಿ ಸಂಖ್ಯೆ ಹೊಂದಿದ ವಾಣಿಜ್ಯ ಉದ್ದೇಶದ ವಾಹನಗಳನ್ನು, ಯಾವುದೇ ಅಭ್ಯರ್ಥಿಗಳ ರ್‍ಯಾಲಿ ಅಥವಾ ಸಾರ್ವಜನಿಕ ಸಭೆಗಾಗಿ ಬಳಸಿಕೊಂಡರೆ, ಅಂಥ ವಾಹನಗಳ ಮೇಲಿನ ವೆಚ್ಚವನ್ನು ಅಭ್ಯರ್ಥಿ(ಗಳ) ಲೆಕ್ಕದಲ್ಲಿ ಸೇರಿಸತಕ್ಕದ್ದು.

3. ಚುನಾವಣಾ ಉದ್ದೇಶಕಾಗಿ ಅಭ್ಯರ್ಥಿಯು ಹೊಂದಿರುವ ಮತ್ತು ಬಳಸಿದ ಒಂದು ವೈಯಕ್ತಿಕ ವಾಹನವನ್ನು ಚುನಾವಣಾ ಪ್ರಚಾರದ ವಾಹನವೆಂದು ಪರಿಗಣಿಸಿ, ಮಾರುಕಟ್ಟೆ ದರದ ಪ್ರಕಾರ ಇಂಧನ ಮತ್ತು ಚಾಲಕನ ವೇತನದ ಮೇಲೆ ತಗಲುವ ಕಾಲ್ಪನಿಕ ವೆಚ್ಚವನ್ನು ಅಭ್ಯರ್ಥಿಗಳ ಲೆಕ್ಕದಲ್ಲಿ ಸೇರಿಸತಕ್ಕದ್ದು. ಅಭ್ಯರ್ಥಿಯು ಹೊಂದಿರುವ ಇತರ ವಾಹನಗಳನ್ನು ಚುನಾವಣಾ ವೆಚ್ಚಕ್ಕೆ ಬಳಸಿದರೆ, ಅಂಥ ವಾಹನಗಳ ಬಾಡಿಗೆಗೆ ಸಂಬಂಧಿಸಿದಂತೆ ಅಧಿಸೂಚಿಸಲಾದ ದರದ ಪ್ರಕಾರ ಕಾಲ್ಪನಿಕ ವೆಚ್ಚಗಳನ್ನು ಅಭ್ಯರ್ಥಿ(ಗಳು) ಲೆಕ್ಕ ಹಾಕತಕ್ಕದ್ದು.

4. ಚುನಾವಣಾ ಪ್ರಚಾರಕ್ಕಾಗಿ ಜಿಲ್ಲೆಯೊಳಗಿನ ಅನೇಕ ವಿಧಾನಸಭಾ ಕ್ಷೇತ್ರಗಳಿಗೆ ಜಿಲ್ಲಾ ಮಟ್ಟ ಪಕ್ಷದ ಪದಾಧಿಕಾರಿಗಳು/ ಮುಖಂಡರು ಭೇಟಿ ನೀಡುವ ಉದ್ದೇಶಕ್ಕಾಗಿ (ತಾರಾ ಪ್ರಚಾರಕರನ್ನು ಹೊರತುಪಡಿಸಿ) ವಾಹನದ ಮೇಲಿನ ವೆಚ್ಚವನ್ನು ಅಭ್ಯರ್ಥಿಗಳ ಲೆಕ್ಕದಲ್ಲಿ ಸೇರಿಸತಕ್ಕದ್ದಲ್ಲ. ಜಿಲ್ಲಾ ಕಾರ್ಯಕರ್ತನು ಸ್ವತಃ ಅದೇ ಜಿಲ್ಲೆಯಿಂದ ಸ್ಪರ್ಧಿಸಿರುವ ಕಾರ್ಯಕರ್ತನಾಗಿದ್ದರೆ ಮತ್ತು ಆತ ಸ್ಪರ್ಧಿಸುವ ಚುನಾವಣಾ ಕ್ಷೇತ್ರದಲ್ಲಿ ತನ್ನ ಓಡಾಟಕ್ಕಾಗಿ ಅಂಥ ವಾಹನವನ್ನು ಬಳಸುತ್ತಿದ್ದರೆ ಮತ್ತು ಯಾರೇ ನಿರ್ದಿಷ್ಟ ಅಭ್ಯರ್ಥಿಗಳ ಚುನಾವಣಾ ಪ್ರಚಾರಕ್ಕಾಗಿ ಅಂಥ ವಾಹನವನ್ನು ಬಳಸುತ್ತಿದ್ದರೆ, ಅಂಥ ವಾಹನದ ಬಾಡಿಗೆ ವೆಚ್ಚಗಳನ್ನು ಚುನಾವಣಾ ಪ್ರಚಾರಕ್ಕಾಗಿ ವಾಹನವನ್ನು ಬಳಸುವ ಅಭ್ಯರ್ಥಿಗಳ ಲೆಕ್ಕದಲ್ಲಿ ಸೇರಿಸತಕ್ಕದ್ದು.

5. ಪಕ್ಷದ ಚಿಹ್ನೆ ಹೊಂದಿರುವ ಧ್ವಜಗಳು, ಮಫ್ಲರ್‌ಗಳು ಅಥವಾ ಟೋಪಿಗಳಂತಹ ವಸ್ತುಗಳ ಮೇಲಿನ ವೆಚ್ಚವನ್ನು ತನ್ನ ಸಂಬಂಧಪಟ್ಟ ಪಕ್ಷವು ಪಕ್ಷಕಾರನ ತನ್ನ ಚುನಾವಣಾ ವೆಚ್ಚವೆಂದು ಪರಿಗಣೀಸತಕ್ಕದ್ದು. ಅಂಥ ವಸ್ತುಗಳ ಮೇಲೆ ಅಭ್ಯರ್ಥಿ(ಗಳ), ಹೆಸರು(ಗಳು) ಅಥವಾ ಭಾವಚಿತ್ರ(ಗಳನ್ನು) ಗಳಿದ್ದರೆ ಅದನ್ನು ಅಭ್ಯರ್ಥಿಯ ಲೆಕ್ಕಕ್ಕೆ ಸೇರಿಸತಕ್ಕದ್ದು. ಆದಾಗ್ಯೂ, ಪಕ್ಷ/ ಅಭ್ಯರ್ಥಿಯು ಸೀರೆ, ಶರ್ಟು, ಟೀ ಶರ್ಟ್, ಧೋತಿ ಮುಂತಾದಂತಹ ಪ್ರಧಾನ ವಸ್ತುಗಳನ್ನು ಪೂರೈಸುವುದನ್ನು ಮತ್ತು ವಿತರಣೆ ಮಾಡುವುದನ್ನು ಮತದಾರರಿಗೆ ನೀಡಲಾಗುವ ಲಂಚವೆಂದು ಪರಿಗಣೀಸಲಾಗಿರುವುದರಿಂದ ಅವುಗಳನ್ನು ಪೂರೈಸಲು ಅಥವಾ ವಿತರಣೆ ಮಾಡಲು ಅನುಮತಿ ನೀಡಲಾಗುವುದಿಲ್ಲ.
6. ತಪಾಸಣೆಯ ಅವಧಿಯಲ್ಲಿ, ಜಪ್ತಿ ಮಾಡಲಾದ ನಗದು ಅಥವಾ ಇತರ ವಸ್ತುಗಳು ಅಭ್ಯರ್ಥಿಗೆ ಸಂಬಂಧಿಸಿವೆಯೆಂದು ಕಂಡುಬಂದಲ್ಲಿ, ರಿಟರ್ನಿಂಗ್ ಅಧಿಕಾರಿ ಅಥವಾ ಅವರು ಅಧಿಕೃತಗೊಳಿಸುವ ಯಾರೇ ಇತರೆ ಅಧಿಕಾರಿಯು ದೂರು/ ಎಫ್‌ಐಆರ್ ನ್ನು ದಾಖಲಿಸಬೇಕು. ದೂರು/ ಎಫ್‌ಐಆರ್ ಪ್ರತಿಯನ್ನು ವೆಚ್ಚ ವೀಕ್ಷಕರು/ ಸಹಾಯಕ ವಚ್ಚದ ವೀಕ್ಷಕರಿಗೆ ರವಾನಿಸತಕ್ಕದ್ದು. ಪ್ರತಿಯಾಗಿ ವೆಚ್ಚ ವೀಕ್ಷಕ/ ಸಹಾಯಕ ವೆಚ್ಚ ವೀಕ್ಷಕರು ಅದನ್ನು ರಹಸ್ಯ (ಛಾಯಾ) ವೀಕ್ಷಣಾ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು. ಆದಾಗ್ಯೂ, ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಕರಣವು ಅಂತಿಮವಾಗಿ ಇತ್ಯರ್ಥವಾಗುವವರೆಗೆ ಜಪ್ತಿಮಾಡಲಾದ ಮೊತ್ತವನ್ನು ಚುನಾವಣಾ ವೆಚ್ಚವೆಂಬುದಾಗಿ ಪರಿಗಣಿಸತಕ್ಕದ್ದಲ್ಲ ಮತ್ತು ಅಂಥ ಸಮಯವನ್ನು ರಹಸ್ಯ (ಛಾಯಾ) ವೀಕ್ಷಣಾ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದಲ್ಲ. ದೂರು/ ಎಫ್‌ಐಆರ್ ಪ್ರತಿಯನ್ನು ಸಾಕ್ಷ್ಯದ ಫೋಲ್ಡರಿನಲ್ಲಿ ಇರಿಸತಕ್ಕದ್ದು.
7. ಭರಿಸಿದ ಅಥವಾ ಅಧಿಕೃಗೊಳಿಸಿದ ವೆಚ್ಚಗಳಿಗೆ ಸಮರ್ಥನೆಯಾಗಿ ವೋಚರ್‌ಗಳು, ರಸೀದಿಗಳು, ಸ್ವೀಕೃತಿಗಳು ಮೊದಲಾದಂಥ ಎಲ್ಲ ದಸ್ತಾವೇಜುಗಳನ್ನು ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂದು ಅನುದಿನವೂ ಪಡೆಯತಕ್ಕದ್ದು ಮತ್ತು ದೈನಂದಿನ ಲೆಕ್ಕವನ್ನು ತೋರುವ ಈ ಹಿಂದೆ ಹೇಳಲಾದ ರಿಜಿಸ್ಟರ್‌ನಲ್ಲಿ ಸರಿಯಾದ ಕಾಲಾನುಕ್ರಮಣಿಕೆ ಪ್ರಕಾರ (chronological order) ನಿರ್ವಹಿಸತಕ್ಕದ್ದು.

1) ಸದರಿ ಅಧಿನಿಯಮದ ಪ್ರಕರಣ 77ರ ಅಡಿಯಲ್ಲಿ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನು ಇಡಬೇಕಾದ ಚುನಾವಣಾ ವೆಚ್ಚಗಳ ಲೆಕ್ಕವು ದೈನಂದಿನ ವೆಚ್ಚದ ಪ್ರತಿಯೊಂದು ಬಾಬ್ತಿಗೆ ಸಂಬಂಧಪಟ್ಟಂತೆ ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಅವುಗಳೆಂದರೆ:–

(ಎ) ವೆಚ್ಚವನ್ನು ಭರಿಸಿದ ಅಥವಾ ಅಧಿಕೃತಗೊಳಿಸಿದ ದಿನಾಂಕ;

(ಬಿ) ವೆಚ್ಚದ ಸ್ವರೂಪ (ಉದಾಹರಣೆಗೆ ಪ್ರಯಾಣ, ಅಂಚೆ ಅಥವಾ ಮುದ್ರಣ ಮತ್ತು ಅಂತಹ ಇನ್ನಿತರ ವೆಚ್ಚಗಳು);

(ಸಿ) ವೆಚ್ಚದ ಮೊತ್ತ–

(i) ಸಂದಾಯ ಮಾಡಿದ ಮೊತ್ತ;

(ii) ಬಾಕಿ ಇರುವ ಮೊತ್ತ;

(ಡಿ) ಸಂದಾಯದ ದಿನಾಂಕ;

(ಇ) ಸ್ವೀಕರ್ತನ ಹೆಸರು ಮತ್ತು ವಿಳಾಸ;

(ಎಫ್) ಹಣವನ್ನು ಸಂದಾಯ ಮಾಡಿದ ಸಂದರ್ಭದಲ್ಲಿ, ವೋಚರುಗಳ ಕ್ರಮ ಸಂಖ್ಯೆ;

(ಜಿ) ಮೊತ್ತವು ಬಾಕಿ ಇದ್ದ ಸಂದರ್ಭದಲ್ಲಿ, ಬಿಲ್ಲುಗಳು ಯಾವುವಾದರೂ ಇದ್ದರೆ, ಅವುಗಳ ಕ್ರಮಸಂಖ್ಯೆ;

(ಎಚ್) ಬಾಕಿ ಇರುವ ಮೊತ್ತವನ್ನು ಸಂದಾಯ ಮಾಡಬೇಕಾಗಿರುವ ವ್ಯಕ್ತಿಯ ಹೆಸರು ಮತ್ತು ವಿಳಾಸ.

2) ವೋಚರನ್ನು ಪಡೆಯಲು ಕಾರ್ಯಸಾಧ್ಯವಿಲ್ಲದ ಎಂದರೆ ಅಂಚೆ, ರೈಲ್ವೆ ಪ್ರಯಾಣ ಮತ್ತು ಅಂತಹ ಇನ್ನಿತರ ಸಾಂದರ್ಭಿಕ ಸ್ವರೂಪದ ವೆಚ್ಚಗಳನ್ನು ಹೊರತುಪಡಿಸಿ, ಮಾಡಿದ ವೆಚ್ಚದ ಪ್ರತಿಯೊಂದು ಬಾಬ್ತಿಗೂ ವೋಚರನ್ನು ಪಡೆದುಕೊಳ್ಳತಕ್ಕದ್ದು.

3) ಎಲ್ಲ ವೋಚರುಗಳನ್ನು, ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಸಂದಾಯ ಮಾಡಿದ ದಿನಾಂಕ ಮತ್ತು ಅವುಗಳ ಕ್ರಮ ಸಂಖ್ಯೆಗಳಿಗೆ ಅನುಗುಣವಾಗಿ ಜೋಡಿಸಿ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳ ಸಮೇತ ಸಲ್ಲಿಸತಕ್ಕದ್ದು ಮತ್ತು ಅಂಥ ಅನುಕ್ರಮ ಸಂಖ್ಯೆಗಳನ್ನು (1)ನೇ ಉಪ ಪ್ರಕರಣದ (ಎಫ್) ಬಾಬ್ತಿನಡಿಯ ಲೆಕ್ಕದಲ್ಲಿ ನಮೂದಿಸತಕ್ಕದ್ದು.

4) (2)ನೇ ಉಪ–ನಿಯಮದ ಮೇರೆಗೆ ವೋಚರುಗಳನ್ನು ಪಡೆಯದಿರುವ ವೆಚ್ಚದ ಬಾಬ್ತುಗಳ ಸಂಬಂಧದಲ್ಲಿ (1)ನೇ ಉಪ–ನಿಯಮದ (ಇ) ಬಾಬಿನಲ್ಲಿ ನಮೂದಿಸಿದ ವಿವರಗಳನ್ನು ನೀಡುವುದು ಅವಶ್ಯಕವಾಗಿರತಕ್ಕದ್ದಲ್ಲ.

**18.8. ಅಭ್ಯರ್ಥಿಯು ತನ್ನ ಲೆಕ್ಕಪತ್ರಗಳನ್ನು ತಪಾಸಣೆಗೆ ಹಾಗೂ ಪ್ರದರ್ಶನಕ್ಕೆ ಲಭ್ಯವಾಗುವಂತೆ ಮಾಡುವುದು**

18.8.1. ಅಭ್ಯರ್ಥಿಯು ಪೂರಕ ದಾಖಲೆಗಳೊಂದಿಗೆ ಈ ಹಿಂದೆ ಹೇಳಲಾದ ರಿಜಿಸ್ಟರ್‌ನಲ್ಲಿ ನಿರ್ವಹಿಸಿರುವ ದೈನಂದಿನ ಲೆಕ್ಕವನ್ನು, ಆಯೋಗವು ನೇಮಕ ಮಾಡಿದ ರಿಟರ್ನಿಂಗ್ ಅಧಿಕಾರಿ/ ಚುನಾವಣಾ

ವೀಕ್ಷಕ ಅಥವಾ ಈ ಉದ್ದೇಶಕ್ಕಾಗಿ ನೇಮಕ ಮಾಡಿರುವ ಇತರ ಯಾರೇ ಅಧಿಕಾರಿಗೆ, ಉಮೇದುವಾರಿಕೆಯನ್ನು ಅಂತಿಮಗೊಳಿಸುವ ಮತ್ತು ಮತದಾನದ ನಡುವಿನ ಈ ಚುನಾವಣಾ ಪ್ರಕ್ರಿಯೆಯ ಅವಧಿಯಲ್ಲಿ ಕಡೇ ಪಕ್ಷ ಮೂರು ಬಾರಿಯಾದರೂ ತಪಾಸಣೆಗೆ ಲಭ್ಯವಾಗುವಂತೆ ಮಾಡತಕ್ಕದ್ದೆಂದು ಆಯೋಗವು ನಿರ್ದೇಶಿಸಿದೆ.

18.8.2. ರಿಟರ್ನಿಂಗ್ ಅಧಿಕಾರಿಯು, ವೆಚ್ಚ ವೀಕ್ಷಕರೊಂದಿಗೆ ಸಮಾಲೋಚಿಸುವ ಮೂಲಕ ವೆಚ್ಚ ವೀಕ್ಷಕರು ಅಥವಾ ಆರ್.ಓ. ಅವರು ನಿಯೋಜಿಸಿದ ಹಿರಿಯ ಅಧಿಕಾರಿಯೊಬ್ಬರು ಪ್ರತಿಯೊಬ್ಬ ಅಭ್ಯರ್ಥಿಯ ಲೆಕ್ಕಪತ್ರ ರಿಜಿಸ್ಟರನ್ನು ತಪಾಸಣೆ ಮಾಡುವುದಕ್ಕಾಗಿ ವೇಳಾಪಟ್ಟಿಯನ್ನು ಸಿದ್ಧಪಡಿಸತಕ್ಕದು. ಅಭ್ಯರ್ಥಿಯು ತಮ್ಮ ಚುನಾವಣಾ ಪ್ರಚಾರದ ಅವಧಿಯಲ್ಲಿ ಕನಿಷ್ಠ ಮೂರು ಬಾರಿ ರಿಜಿಸ್ಟರನ್ನು ತಪಾಸಣೆಯನ್ನು ಮಾಡಿಸುವುದಕ್ಕಾಗಿ ವೆಚ್ಚ ವೀಕ್ಷಕರು/ನಿಯೋಜಿತ ಅಧಿಕಾರಿಯವರ ಎದುರು ಖುದ್ದಾಗಿ ಅಥವಾ ತಮ್ಮ ಚುನಾವಣಾ ಏಜೆಂಟರ ಮೂಲಕ ಅಥವಾ ತಾವು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯ ಮೂಲಕ ಹಾಜರುಪಡಿಸಬೇಕಿರುತ್ತದೆ.

18.8.3. ಎರಡು ಪರಿಶೀಲನೆ ಪ್ರಕ್ರಿಯೆಗಳ ನಡುವೆ ಕನಿಷ್ಟಪಕ್ಷ ಮೂರು ದಿನಗಳ ಅಂತರವಿರಬೇಕು. ಈ ವೇಳಾಪಟ್ಟಿಗೆ ಪತ್ರಿಕೆಯ ಮೂಲಕ ವ್ಯಾಪಕ ಪ್ರಚಾರವನ್ನು ನೀಡತಕ್ಕದ್ದು. ಅನುಕೂಲತೆಯ ದೃಷ್ಟಿಯಿಂದ ಪ್ರತಿಯೊಬ್ಬ ಅಭ್ಯರ್ಥಿಗೆ ಪರಿಶೀಲನೆಯ ಸಮಯವನ್ನು ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ನಿಗದಿಪಡಿಸಬಹುದು. ಸಮಯ ನಿಗದಿಪಡಿಸುವಾಗ ಆ ಕಾರ್ಯ 7 ಗಂಟೆಗೆ ಮೊದಲು ಮುಗಿಯುವ ಹಾಗೆ ನಿಗದಿಪಡಿಸತಕ್ಕದ್ದು. ಪರಿಶೀಲನೆಯನ್ನು ಅಭ್ಯರ್ಥಿಯ ಕಚೇರಿಯ ಕೊಠಡಿಯಲ್ಲಾಗಲಿ ಅಥವಾ ಯಾವುದೇ ಇತರ ಸಮ್ಮೇಳನ ಸಭಾಂಗಣದಲ್ಲಾಗಲೀ ಅಥವಾ ಕಚೇರಿ ಚೆಂಬರ್‌ನಲ್ಲಾಗಲಿ ನಡೆಸತಕ್ಕದ್ದು. ಕೊನೆಯ ಪರಿಶೀಲನೆಯನ್ನು ಮತದಾನದ ದಿನದಿಂದ 3 ದಿನಗಳ ಮುಂಚೆ ಇಲ್ಲದಹಾಗೆ ನಿಗದಿಪಡಿಸಬೇಕು. ಪ್ರತಿಯೊಂದು ಪರಿಶೀಲನೆಯ ತರುವಾಯ, ಚುನಾವಣಾ ಪ್ರಕ್ರಿಯೆಯ ಅವಧಿಯಲ್ಲಿ, ಅಭ್ಯರ್ಥಿಯ ದಿನನಿತ್ಯದ ಚುನಾವಣಾ ಲೆಕ್ಕಪತ್ರಗಳ ರಿಜಿಸ್ಟರ್‌ನ್ನು ಪರಿಶೀಲನೆ ಮಾಡುವ ದಿನಾಂಕದವರೆಗೂ ಸ್ಕ್ಯಾನ್ ಮಾಡಿ ರಿಟರ್ನಿಂಗ್ ಅಧಿಕಾರಿ ಕಚೇರಿಯ ಸೂಚನಾ ಫಲಕದಲ್ಲಿ ಒಂದು ಛಾಯಾ ಪ್ರತಿಯನ್ನು ಪ್ರದರ್ಶಿಸುವುದರ ಜೊತೆಗೆ ಮುಖ್ಯ ಚುನಾವಣಾ ಅಧಿಕಾರಿಗಳ (ಸಿಇಓ) ವೆಬ್‌ಸೈಟ್‌ಗೆ ಒದಗಿಸಲಾದ ಲಿಂಕ್‌ನೊಂದಿಗೆ ಜಿಲ್ಲಾ ಚುನಾವಣಾಧಿಕಾರಿಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

18.8.4. ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟನು, ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ದಿನಾಂಕದಂದು ಪರಿಶೀಲನೆಗಾಗಿ ಅವರ ಚುನಾವಣಾ ವೆಚ್ಚಗಳ ರಿಜಿಸ್ಟರ್‌ನ್ನು ಸಲ್ಲಿಸದಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿ, ಅಭ್ಯರ್ಥಿಯು ನೋಟೀಸಿನಲ್ಲಿ ನಿಗದಿಪಡಿಸಿದ ದಿನದಂದು ಪರಿಶೀಲನೆಗಾಗಿ

ರಿಜಿಸ್ಟರ್‌ನ್ನು ಸಲ್ಲಿಸುವುದಕ್ಕೆ ಮತ್ತೊಮ್ಮೆ ವಿಫಲನಾದರೆ, ಜನಪ್ರತಿನಿಧಿ ಅಧಿನಿಯಮ, 1951ರ 77ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಚುನಾವಣಾ ವಎಚ್ಚದ ದೈನಂದಿನ ಲೆಕ್ಕಪತ್ರವನ್ನು ನಿರ್ವಹಿಸುವುದಕ್ಕೆ ವಿಫಲನಾಗಿದ್ದಾರೆಂದು ಭಾವಿಸಲಾಗುವುದೆಂಬುದನ್ನು ಲಿಖಿತದಲ್ಲಿ ಸೂಚಿಸಿ ಆತನಿಗೆ ನೋಟೀಸನ್ನು ನೀಡತಕ್ಕದ್ದು. ಈ ನೋಟೀಸ್‌ಗೆ ಸಾಧ್ಯವಾದಷ್ಟು ವ್ಯಾಪಕ ಪ್ರಚಾರವನ್ನು ನೀಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ನಿಮ್ಮ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು. ನೋಟೀಸನ್ನು ನೀಡಿದಾಗ್ಯೂ, ಅಭ್ಯರ್ಥಿಯ ಪರಿಶೀಲನೆಗಾಗಿ ಚುನಾವಣಾ ವೆಚ್ಚಗಳ ರಿಜಿಸ್ಟರ್‌ನ್ನು ಸಲ್ಲಿಸುವುದಕ್ಕೆ ವಿಫಲನಾದರೆ, ಸಕ್ಷಮ ನ್ಯಾಯಾಲಯದಲ್ಲಿ, ಭಾರತ ದಂಡ ಸಂಹಿತೆ 171–I ನೇ ಪ್ರಕರಣದ ಅಡಿಯಲ್ಲಿ ಒಂದು ದೂರನ್ನು ದಾಖಲಿಸತಕ್ಕದ್ದು. ಇದಲ್ಲದೆ, ಅಭ್ಯರ್ಥಿಯು, ನೋಟೀಸನ್ನು ನೀಡಿದ ಮೂರು ದಿನಗಳ ನಂತರವೂ ರಿಜಿಸ್ಟರ್‌ನ್ನು ಸಲ್ಲಿಸದಿದ್ದಲ್ಲಿ, ಚುನಾವಣೆಯ ಅವಧಿಯಲ್ಲಿ ವಾಹನಗಳನ್ನು ಉಪಯೋಗಿಸುವುದಕ್ಕಾಗಿ ಅಭ್ಯರ್ಥಿಗೆ ನೀಡಿದ ಅನುಮತಿಯನ್ನು ಹಿಂತೆಗೆದುಕೊಳ್ಳಬೇಕು. ವಾಹನಗಳನ್ನು ಉಪಯೋಗಿಸುವುದಕ್ಕಾಗಿ ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡ ಬಗ್ಗೆ ಎಲ್ಲ ಕಣ್ಗಾವಲು ತಂಡಗಳು ಮತ್ತು ಕ್ಷಿಪ್ರ ಸಂಚಾರಿ ದಳಗಳಿಗೆ ತಿಳಿಸಬೇಕು ಮತ್ತು ಇದನ್ನು ರಿಟರ್ನಿಂಗ್ ಅಧಿಕಾರಿ ಕಚೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು.

18.8.5. ನಿಗದಿತ ತಪಾಸಣಾ ವೇಳಾಪಟ್ಟಿಯ ಪ್ರಕಾರ ಅಭ್ಯರ್ಥಿಗಳ ಲೆಕ್ಕಪತ್ರಗಳ ತಪಾಸಣಾ ಕಾರ್ಯವನ್ನು ಕೈಗೊಂಡಾಗ, ರಿಜಿಸ್ಟರ್‌ನ ಸಂಬಂಧಪಟ್ಟ ಪುಟಗಳ ಎರಡು ಛಾಯಪ್ರತಿಗಳು ತಪಾಸಣಾ ಅಧಿಕಾರಿಯ ಬಳಿ ಇರುವುದನ್ನು ರಿಟರ್ನಿಂಗ್ ಅಧಿಕಾರಿಯು ಖಚಿತಪಡಿಸಿಕೊಳ್ಳಬೇಕು. ಸಂಬಂಧಪಟ್ಟ ಪುಟಗಳ ಒಂದು ಪ್ರತಿಯನ್ನು ರಿಟರ್ನಿಂಗ್ ಅಧಿಕಾರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು ಮತ್ತು ಮತ್ತೊಂದು ಪ್ರತಿಯನ್ನು ದಾಖಲೆಗೆ ಪುರಾವೆಯಾಗಿ ಮತ ಕ್ಷೇತ್ರವಾರು ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕಡತದಲ್ಲಿಟ್ಟು, ಚುನಾವಣಾ ಪ್ರಕ್ರಿಯೆಯು ಪೂರ್ಣಗೊಂಡ ತರುವಾಯ ಜಿಲ್ಲಾ ಚುನಾವಣಾ ಅಧಿಕಾರಿಗೆ ಸಲ್ಲಿಸತಕ್ಕದ್ದು. ಈ ಕಾರ್ಯದಲ್ಲಿ ತಪಾಸಣೆಯು ಅಭ್ಯರ್ಥಿಯ ಕಾನೂನುಬದ್ಧ ಹಕ್ಕಾದ ತಾನು ಚುನಾವಣೆಯಲ್ಲಿ ತೊಡಗುವ ಪ್ರಕ್ರಿಯೆಯಲ್ಲಿ ಬಾಧಕ ಉಂಟು ಮಾಡುವ ಕಿರುಕುಳಕಾರಿ/ ಪೀಡಕ ಪ್ರವೃತ್ತಿಯ ಮೂಲವಾಗಿಲ್ಲ ಎಂಬುದನ್ನು ರಿಟರ್ನಿಂಗ್ ಅಧಿಕಾರಿಯು ಖಚಿತಪಡಿಸಿಕೊಳ್ಳತಕ್ಕದ್ದು.

18.8.6. ವೆಚ್ಚ ರಿಜಿಸ್ಟರ್‌ಗಳು/ ಲೆಕ್ಕಪತ್ರಗಳ ಪರಿಶೀಲನೆ ಅವಧಿಯಲ್ಲಿ ಸಾರ್ವಜನಿಕರು ಹಾಜರಿರಬಹುದೆಂದು ಮತ್ತು ಯಾರೇ ಆಗಲಿ ಪ್ರತಿ ಪುಟಕ್ಕೆ 1/–ರೂ. ಪಾವತಿಸಿ ರಿಟರ್ನಿಂಗ್ ಅಧಿಕಾರಿಯಿಂದ ಯಾರೇ ಅಭ್ಯರ್ಥಿಯ ವೆಚ್ಚದ ರಿಜಿಸ್ಟರ್‌ನ ಒಂದು ಪ್ರತಿಯನ್ನು ಪಡೆದುಕೊಳ್ಳಬಹುದು ಎಂದು ಸಹ ಪ್ರಚಾರ ನೀಡಬೇಕು. ರಿಜಿಸ್ಟರ್‌ಗಳ ಪರಿಶೀಲನೆಯನ್ನು ವೆಚ್ಚ ಪರಿವೀಕ್ಷಕರು ಮಾತ್ರ ಸಾಧ್ಯವಾದಷ್ಟುಮಟ್ಟಿಗೆ

ಪರಿಶೀಲಿಸತಕ್ಕದ್ದು. ರಿಜಿಸ್ಟರ್‌ನ ಪರಿಶೀಲನೆಯನ್ನು ಕೆಲವು ಅನಿವಾರ್ಯಕಾರಣಗಳಿಗಾಗಿ ವೆಚ್ಚ ವೀಕ್ಷಕರ ಬದಲಾಗಿ ನಿಯೋಜಿತ ಅಧಿಕಾರಿಯು ನಡೆಸಿದ್ದಲ್ಲಿ, ಪ್ರತಿಯೊಂದು ಅಂಥ ಪರಿಶೀಲನೆ ಫಲಕಗಳನ್ನು ಮತ್ತು ಯಾರೇ ಇತರ ಅಧಿಕಾರಿಯು ಅಂಥ ಪರಿಶೀಲನೆ ನಡೆಸಿದ್ದಕ್ಕೆ ಕಾರಣಗಳನ್ನು ವೆಚ್ಚ ವೀಕ್ಷಕನಿಗೆ ತಿಳಿಸಬೇಕು.

18.8.7. ಚುನಾವಣಾ ಪ್ರಕ್ರಿಯೆಗಳನ್ನು ನಿಷ್ಕಳಂಕವಾಗಿ ನಿರ್ವಹಿಸುವುದಕ್ಕಾಗಿ, ಭಾರತ ಚುನಾವಣಾ ಆಯೋಗವು ಈ ಮೂಲಕ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ:

1. ರಿಟರ್ನಿಂಗ್ ಅಧಿಕಾರಿ ಅಥವಾ ಜಿಲ್ಲಾ ಚುನಾವಣಾಧಿಕಾರಿ/ ರಿಟರ್ನಿಂಗ್ ಅಧಿಕಾರಿಯು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಯಾರೇ ಅಭ್ಯರ್ಥಿಯು, ನಿರ್ದಿಷ್ಟ ಚುನಾವಣಾ ವೆಚ್ಚವನ್ನು ಭರಿಸಿದ್ದಾನೆಂದು ಅಥವಾ ಅನುಮತಿಸಿದ್ದಾನೆಂದು ಮತ್ತು ಅದನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ 77(1) ನೇ ಪ್ರಕರಣದ ಮೇರೆಗೆ ತಾನು ನಿರ್ವಹಿಸಿದ ಚುನಾವಣಾ ವೆಚ್ಚದ ದೈನಂದಿನ ಲೆಕ್ಕದಲ್ಲಿ ಆ ವೆಚ್ಚದ ಭಾಗಶಃ ಭಾಗವನ್ನಾಗಲೀ ಅಥವಾ ಪೂರ್ಣಭಾಗವನ್ನಾಗಲೀ ತೋರಿಸಿಲ್ಲವೆಂದು ಅಥವಾ ಸದರಿ ಲೆಕ್ಕಗಳನ್ನು ಅಧಿಕೃತ ಅಧಿಕಾರಿ ಅಥವಾ ವೆಚ್ಚ ವೀಕ್ಷಕರ ಮುಂದೆ ನಿಗದಿತ ದಿನಾಂಕದಂದು ಪರಿಶೀಲನೆಗಾಗಿ ಸಲ್ಲಿಸಿಲ್ಲವೆಂದು ಚುನಾವಣಾ ಪ್ರಕ್ರಿಯೆ ನಡೆಯುವ ಅವಧಿಯಲ್ಲಿ ಮಾಹಿತಿಯನ್ನು ಸ್ವೀಕರಿಸಿದರೆ, ಆಗ ರಿಟರ್ನಿಂಗ್ ಅಧಿಕಾರಿಯು ಮಾಹಿತಿ ಸ್ವೀಕರಿಸಿದ ಅಥವಾ ದೈನಂದಿನ ಲೆಕ್ಕಗಳಲ್ಲಿ ಸರಿಯಾಗಿ ತೋರಿಸಿರದ ವೆಚ್ಚದ ವಿವರಗಳನ್ನು ನಮೂದಿಸಿರುವ ಲೆಕ್ಕಗಳನ್ನು ಪರಿಶೀಲಿಸಿದ ತರುವಾಯ ಅಥವಾ ಸಂದರ್ಭಾನುಸಾರ, ಅಭ್ಯರ್ಥಿಯು ತನ್ನ ಲೆಕ್ಕಗಳನ್ನು ಸಲ್ಲಿಸಲು ವಿಫಲವಾಗಿದ್ದಾನೆಂದು ಸೂಚಿಸಿದ ಮಾಹಿತಿಯನ್ನು ಸ್ವೀಕರಿಸಿದ 24 ಗಂಟೆಯೊಳಗೆ ಅಭ್ಯರ್ಥಿಗೆ ಅದರ ಸಾಕ್ಷ್ಯ ಸಮೇತ ನೋಟೀಸನ್ನು ನೀಡತಕ್ಕದ್ದು. ಆದಾಗ್ಯೂ ಅನುಮಾನಸ್ಪದ ಕಾಸಿಗಾಗಿ ಸುದ್ಧಿಯ ಸಂದರ್ಭದಲ್ಲಿ, ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಸಮಿತಿ (ಎಮ್‌ಸಿಎಮ್‌ಸಿ) ಯ ಶಿಫಾರಸ್ಸಿನಂತೆ ರಿಟರ್ನಿಂಗ್ ಅಧಿಕಾರಿಯು ನೋಟಿಸನ್ನು ಹೊರಡಿಸಿದ್ದರೆ ಅಥವಾ ಹೊರಡಿಸಲಾಗುತ್ತಿದ್ದರೆ ಅಂತಹ ವಿಷಯಗಳನ್ನು ಈ ನೋಟಿಸಿನಲ್ಲಿ ಸೇರಿಸತಕ್ಕದ್ದಲ್ಲ.
2. ಅಂತಹ ಅಭ್ಯರ್ಥಿಯು, ತನ್ನ ಗಮನಕ್ಕೆ ತರಲಾಗಿರುವ ತಪ್ಪು ಕಾರ್ಯಕ್ಕೆ ಕಾರಣಗಳನ್ನು ವಿವರಿಸಿ 48 ಗಂಟೆಗಳೊಳಗಾಗಿ ನೋಟೀಸಿಗೆ ಉತ್ತರಿಸಬಹುದು. ನೋಟಿಸಿನಲ್ಲಿ ನಮೂದಿಸಲಾದ ವೆಚ್ಚಗಳನ್ನು ಮುಚ್ಚಿಟ್ಟಿರುವ ವಿಷಯವನ್ನು ಅಭ್ಯರ್ಥಿಯು ಒಪ್ಪಿಕೊಂಡರೆ, ಅದನ್ನು ಅವರ ಚುನಾವಣಾ ವೆಚ್ಚಗಳಿಗೆ ಸೇರಿಸತಕ್ಕದ್ದು.

3. ಅಭ್ಯರ್ಥಿಯು ತನ್ನ ದೈನಂದಿನ ಲೆಕ್ಕಗಳನ್ನು ಪರಿಶೀಲನೆಗೆ ಸಲ್ಲಿಸುವಲ್ಲಿ ವಿಫಲನಾದರೆ ಮತ್ತು ನೋಟಿಸನ್ನು ನೀಡಿದ್ದರೂ, ಲೆಕ್ಕಗಳನ್ನು ಸಲ್ಲಿಸದಿದ್ದಲ್ಲಿ, ಅಂಥ ನೋಟಿಸು ನೀಡಿದ 48 ಗಂಟೆಗಳ ತರುವಾಯ, ಭಾರತ ದಂಡ ಸಂಹಿತೆಯ 171 (I) ಪ್ರಕರಣದ ಮೇರೆಗೆ ಎಫ್ಐಆರ್‌ನ್ನು ದಾಖಲಿಸಬೇಕು ಮತ್ತು ಚುನಾವಣೆ ಪ್ರಚಾರಕ್ಕಾಗಿ ಅಭ್ಯರ್ಥಿಯು ವಾಹನ ಇತ್ಯಾದಿಗಳನ್ನು ಬಳಸುವುದಕ್ಕೆ ನೀಡಲಾದ ಅನುಮತಿಯನ್ನು ಹಿಂಪಡೆಯತಕ್ಕದ್ದು.
4. ನೋಟಿಸನ್ನು ಸ್ವೀಕರಿಸಿದ 48 ಗಂಟೆಗಳೊಳಗೆ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟನು ಉತ್ತರವನ್ನು ಸಲ್ಲಿಸದಿದ್ದರೆ, ಅಭ್ಯರ್ಥಿಯು ನೋಟಿಸಿನಲ್ಲಿ ನಮೂದಿಸಲಾದ ಮೊತ್ತವನ್ನು ಮುಚ್ಚಿಟ್ಟಿರುವ ಸಂಗತಿಯನ್ನು ಒಪ್ಪಿಕೊಂಡಿದ್ದಾನೆಂದು ಭಾವಿಸತಕ್ಕದ್ದು ಮತ್ತು ಅದನ್ನು ಅಂತಹ ಅಭ್ಯರ್ಥಿಯ ಚುನಾವಣಾ ವೆಚ್ಚಗಳಿಗೆ ಸೇರಿಸತಕ್ಕದ್ದು.
5. ಅಭ್ಯರ್ಥಿಯಾಗಲಿ ಅಥವಾ ಆತನ ಚುನಾವಣಾ ಏಜೆಂಟ್‌ನಾಗಲಿ, ನೋಟಿಸಿನಲ್ಲಿ ನಮೂದಿಸಲಾದ ಮುಚ್ಚಿಟ್ಟ ಹಣದ ಬಗ್ಗೆ ತಕರಾರನ್ನು ತೆಗೆದರೆ, ಅದನ್ನು ಒಪ್ಪದಿರುವುದಕ್ಕೆ ಕಾರಣಗಳನ್ನು ನಮೂದಿಸಿ ಉತ್ತರವನ್ನು ಸಲ್ಲಿಸತಕ್ಕದ್ದು ಮತ್ತು ಅದನ್ನು, ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಜಿಲ್ಲಾ ವೆಚ್ಚ ಮೇಲ್ವಿಚಾರಣಾ ಸಮಿತಿ (ಡಿಇಎಂಸಿ) ಗೆ ರವಾನಿಸತಕ್ಕದ್ದು:
    ಎ. ಚುನಾವಣಾ ಕ್ಷೇತ್ರದ ಪ್ರಭಾರದಲ್ಲಿನ ವೆಚ್ಚ ವೀಕ್ಷಕರು.
    ಬಿ. ಜಿಲ್ಲಾ ಚುನಾವಣಾಧಿಕಾರಿ.
    ಸಿ. ಜಿಲ್ಲಾ ವೆಚ್ಚಗಳ ಮೇಲ್ವಿಚಾರಣಾ ಪ್ರಭಾರದಲ್ಲಿರುವ ಉಪ ಜಿಲ್ಲಾ ಚುನಾವಣಾಧಿಕಾರಿ/ಅಧಿಕಾರಿ
6. ಜಿಲ್ಲಾ ವೆಚ್ಚ ಮೇಲ್ವಿಚಾರಣಾ ಸಮಿತಿ (ಡಿಇಎಂಸಿ)ಯು ಅಭ್ಯರ್ಥಿಯಿಂದ ನೋಟಿಸಿಗೆ ಉತ್ತರವನ್ನು ಪಡೆದ ದಿನಾಂಕದಿಂದ 72 ಗಂಟೆಗಳೊಳಗಾಗಿ ನೋಟೀಸಿನಲ್ಲಿ ನಮೂದಿಸಿದ ಸಾಕ್ಷ್ಯವನ್ನು ಮತ್ತು ಅದಕ್ಕೆ ಅಭ್ಯರ್ಥಿ ನೀಡಿದ ಉತ್ತರವನ್ನು ಪರಿಶೀಲಿಸಿದ ನಂತರ, ಆ ಹಣವನ್ನು ಅಭ್ಯರ್ಥಿಯ ಚುನಾವಣಾ ವೆಚ್ಚಗಳ ಲೆಕ್ಕಕ್ಕೆ ಸೇರಿಸಬೇಕೆ ಅಥವಾ ಬೇಡವೇ ಎಂಬುದನ್ನು ನಿರ್ಧರಿಸತಕ್ಕದ್ದು.
7. ಸದರಿ ಹಣ ಯಾವುದಾದರೂ ಇದ್ದರೆ, ಅದನ್ನು ಚುನಾವಣೆ ಫಲಿತಾಂಶ ಘೋಷಣೆಯ 26ನೆಯ ದಿನದಂದು ಜಿಲ್ಲಾ ಚುನಾವಣಾಧಿಕಾರಿಯು ನಡೆಸುವ ಲೆಕ್ಕ ಸಮನ್ವಯ ಸಮಿತಿಯಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲು ಅಭ್ಯರ್ಥಿಗೆ ಅವಕಾಶವನ್ನು ನೀಡತಕ್ಕದ್ದು.

## 18.9. ದರಪಟ್ಟಿಗಳನ್ನು ಸಿದ್ಧಪಡಿಸುವಿಕೆ

18.9.1ಆಯೋಗವು, ಚುನಾವಣಾ ವೀಕ್ಷಕರು ಮತ ಕ್ಷೇತ್ರವನ್ನು ತಲುಪಿದ ಕೂಡಲೇ, ಅವರಿಗೆ ಈ ಕೆಳಗೆ ನಮೂದಿಸಿರುವ ಬಾಬುಗಳ ದರಗಳು ಲಭ್ಯವಾಗುವಂತೆ ಮಾಡುವ ಸಂಬಂಧ ಎಲ್ಲಾ ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಈ ಬಾಬುಗಳ ಪಟ್ಟಿಯು ಕರಾರುವಕ್ಕಾಗಿರದೆ ನಿದರ್ಶನಾತ್ಮಕವಾಗಿದ್ದು ಈ ಮುಂದಿನಂತಿದೆ:–

1 ಆಂಪ್ಲಿಫೈಯರ್ ಮತ್ತು ಮೈಕ್ರೊಫೋನ್ ಸಹಿತ ಧ್ವನಿವರ್ಧಕದ ಬಾಡಿಗೆ ದರ,

2 ವೇದಿಕೆ/ ಪೆಂಡಾಲ್ ನಿರ್ಮಾಣ (4–5 ವ್ಯಕ್ತಿಗಳು ಆಸೀನರಾಗುವ ಪ್ರಮಾಣಬದ್ಧ ಅಳತೆ),

3 ಬಟ್ಟೆ ಬ್ಯಾನರ್

4 ಬಟ್ಟೆ ಬಾವುಟಗಳು

5 ಪ್ಲಾಸ್ಟಿಕ್ ಬಾವುಟಗಳು,

6 ಕರ ಪತ್ರಗಳು (ಲೆಕ್ಕ ಹಾಕಬೇಕಾದ ವೆಚ್ಚ ಮತ್ತು ಮುದ್ರಕರನ್ನು ಕೇಳಿ ವಿಚಾರಿಸಿ ದೃಢಪಡಿಸಿಕೊಂಡ ಮುದ್ರಣಾ ಕೋರಿಕೆ (ಆರ್ಡರ್) – ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 127ಎ ಪ್ರಕರಣವನ್ನು ಪರಾಮರ್ಶಿಸಿ)

7 ಭಿತ್ತಿ ಪತ್ರ (ಪೋಸ್ಟರ್)ಗಳು

8 ಹೋರ್ಡಿಂಗ್‌ಗಳು

9 ಕಟೌಟ್‌ಗಳು (ಮರದ್ದು)

10 ಕಟೌಟ್‌ಗಳು (ಬಟ್ಟೆ/ ಪ್ಲಾಸ್ಟಿಕ್)

11 ವಿಡಿಯೋ ಕ್ಯಾಸೆಟ್‌ಗಳು

12 ಆಡಿಯೋ ಕ್ಯಾಸೆಟ್‌ಗಳು

13 ಗೇಟುಗಳ ನಿರ್ಮಾಣ

14 ಕಮಾನುಗಳ ನಿರ್ಮಾಣ

15 ವಾಹನಗಳ ದೈನಿಕ ಬಾಡಿಗೆ ವೆಚ್ಚಗಳು

(i) ಜೀಪು/ ಟೆಂಪೋ/ ಟ್ರಾಕ್ಟರ್ (trucker), ಇತ್ಯಾದಿ

(ii) ಸುಮೋ/ ಕ್ವಾಲಿಸ್

(iii) ಕಾರುಗಳು

(iv) ತ್ರಿಚಕ್ರ ವಾಹನಗಳು

(v) ಸೈಕಲ್ ರಿಕ್ಷಾ

16 ಹೋಟೆಲ್ ಕೊಠಡಿಗಳು/ ಅತಿಥಿ ಗೃಹಗಳ ಬಾಡಿಗೆ ವೆಚ್ಚಗಳು

17 ಚಾಲಕರ ಸಂಬಳ ವೆಚ್ಚಗಳು.

18 ಪೀಠೋಪಕರಣ (ಕುರ್ಚಿಗಳು, ಸೋಫಾ ಇತ್ಯಾದಿ) ಮತ್ತು ಜೋಡಣೆಗಳ ಬಾಡಿಗೆ ವೆಚ್ಚಗಳು

19 ಪುರಸಭಾ ಪ್ರಾಧಿಕಾರಗಳಿಂದ ಪಡೆದ ಹೋರ್ಡಿಂಗ್ ಸ್ಥಳಗಳ ಬಾಡಿಗೆ ವೆಚ್ಚಗಳು

20 ಜಿಲ್ಲೆಯಲ್ಲಿ ಸಾಮಾನ್ಯವಾಗಿ ಬಳಸಲಾದ ಇತರೆ ಬಾಬುಗಳು.

## 18.10. ಬ್ಯಾರಿಕೇಡುಗಳು ಮತ್ತು ವೇದಿಕೆಗಳು ಮೊದಲಾದವುಗಳಿಗೆ ತಗಲುವ ಖರ್ಚು

18.10.1. ಬ್ಯಾರಿಕೇಡುಗಳು/ ವೇದಿಕೆಗಳು ಮುಂತಾದವುಗಳ ನಿರ್ಮಾಣದ ಮೇಲಿನ ವೆಚ್ಚಗಳನ್ನು, ಪಕ್ಷದ ಸಂಘಟಕರ ಪರವಾಗಿ ಭದ್ರತಾ ಕಾರಣದ ಸಂಬಂಧದಲ್ಲಿ ಸರ್ಕಾರಿ ಏಜೆನ್ಸಿಗಳು ಪ್ರಾರಂಭದಲ್ಲಿ ಮಾಡಿದಾಗ, ಸದರಿ ಸಭೆಗಳು ಯಾರ ಮತ ಕ್ಷೇತ್ರದಲ್ಲಿ ನಡೆದವೋ ಆ ಅಭ್ಯರ್ಥಿಯ ಅಥವಾ ಅಂಥ ಸಭೆಯನ್ನುದ್ದೇಶಿಸಿ ರಾಜಕೀಯ ಪಕ್ಷದ ನಾಯಕರು ಮಾತನಾಡುವ ಸಮಯದಲ್ಲಿ ಹಾಜರಿದ್ದ ಅಭ್ಯರ್ಥಿಗಳ ಗುಂಪಿನ ವೆಚ್ಚವಾಗಿ ಸೇರಿಸಬೇಕಾಗುತ್ತದೆ. "ಮುಖಂಡ" ನ ಸದರಿ ಸಭೆಯ ಸಮಯದಲ್ಲಿ ರಾಜಕೀಯ ಪಕ್ಷದ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಹಾಜರಿದ್ದ ಸಂದರ್ಭಗಳಲ್ಲಿ, ವೆಚ್ಚವನ್ನು ಎಲ್ಲರಿಗೂ ಸರಿ ಸಮಾನವಾಗಿ ಹಂಚಿಕೆ ಮಾಡಲಾಗುವುದು ಮತ್ತು ಅಂಥ ಸಭೆಯು ನಡೆಯುವ ಜಿಲ್ಲೆಯ ಜಿಲ್ಲಾ ಚುನಾವಣಾ ಅಧಿಕಾರಿಯು ಘಟನೆ ನಡೆದ ಮೂರು ದಿನಗಳ ಒಳಗಾಗಿ ಸಂಬಂಧಪಟ್ಟ ಸರ್ಕಾರಿ ಏಜೆನ್ಸಿಗಳಿಂದ ಅಂತಿಮ ವೆಚ್ಚಗಳನ್ನು ಪಡೆದುಕೊಳ್ಳತಕ್ಕದ್ದು ಮತ್ತು ಅಭ್ಯರ್ಥಿಗಳಿಗೆ ಅವರವರ ಪಾಲಿಗೆ ಬರುವ ವೆಚ್ಚದ ಬಗ್ಗೆ ತಿಳಿಸತಕ್ಕದ್ದು. ಈ ಮಾಹಿತಿಯನ್ನು ಇತರ ಅಭ್ಯರ್ಥಿಗಳು ಸೇರಿರುವಂಥ ಮತಕ್ಷೇತ್ರದ/ ಜಿಲ್ಲೆಯ ರಿಟರ್ನಿಂಗ್ ಅಧಿಕಾರಿಗೆ/ ಜಿಲ್ಲಾ ಚುನಾವಣಾ ಅಧಿಕಾರಿಗೆ ಸಹ ತಿಳಿಸತಕ್ಕದ್ದು.

18.10.2. ಅಭ್ಯರ್ಥಿ(ಗಳು) ಅಥವಾ ರಾಜಕೀಯ ಪಕ್ಷ ಅಥವಾ ಸಂಘಟಕರು ತಮ್ಮ ಸ್ವಂತ ನಿಧಿಯಿಂದ ಭದ್ರತಾ ಕಾರಣಗಳಿಗಾಗಿ ವೇದಿಕೆಗಳು/ ಬ್ಯಾರಿಕೇಡುಗಳಂತಹ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದೇ ಆದಲ್ಲಿ, ಮೊತ್ತವು ಸಂಬಂಧಪಟ್ಟ ಅಭ್ಯರ್ಥಿಯ ಅಥವಾ "ಮುಖಂಡ"ನ ಸಭೆಯಲ್ಲಿ ಉಪಸ್ಥಿತರಿರುವ ಅಭ್ಯರ್ಥಿಗಳ ಗುಂಪಿನ ಲೆಕ್ಕಪತ್ರಗಳಲ್ಲಿ ಬಿಂಬಿತವಾಗಬೇಕು. ಈ ಲೆಕ್ಕಗಳನ್ನು ವೆಚ್ಚ

ವೀಕ್ಷಕ ಅಥವಾ ಲೆಕ್ಕಗಳ ಪರಿಷ್ಕರಣೆಗಾಗಿ ನೇಮಕಗೊಂಡ ನಿಯೋಜಿತ ಅಧಿಕಾರಿಯು ಯುಕ್ತವಾಗಿ ಪರಿಶೀಲಿಸಬೇಕು.

18.10.3.ಸರ್ಕಾರಿ ಏಜೆನ್ಸಿಗಳು ಬ್ಯಾರಿಕೇಡುಗಳನ್ನು/ ವೇದಿಕೆಗಳನ್ನು ನಿರ್ಮಾಣ ಮಾಡುವ ಎಲ್ಲ ಸಂದರ್ಭಗಳಲ್ಲಿ ಅಭ್ಯರ್ಥಿ/ ರಾಜಕೀಯ ಪಕ್ಷ/ ಸಂಘಟಕನು ಅವುಗಳ ಅಂದಾಜು ವೆಚ್ಚವನ್ನು ಮುಂಚಿತವಾಗಿ ಠೇವಣಿ ಇಡಬೇಕು.

## 18.11. ಲೆಕ್ಕವನ್ನು ಸಲ್ಲಿಸುವ ವಿಧಾನ:

18.11.1. ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಇಡಲು ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಬ್ಬ ಅಭ್ಯರ್ಥಿಗೆ ಒದಗಿಸುವ ರಿಜಿಸ್ಟರ್‌ನ್ನು, ಅಭ್ಯರ್ಥಿಯು ಕಾನೂನಿನ ಮೇರೆಗೆ ಅಗತ್ಯಪಡಿಸಲಾದಂತೆ ಚುನಾವಣಾ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ತನ್ನ ಚುನಾವಣಾ ಲೆಕ್ಕವಾಗಿ ಜಿಲ್ಲಾ ಚುನಾವಣಾ ಅಧಿಕಾರಿಗೆ ಸಲ್ಲಿಸತಕ್ಕದ್ದು.

18.11.2. ಅಲ್ಲದೆ, ಅಭ್ಯರ್ಥಿಯು ಸದರಿ ರಿಜಿಸ್ಟರ್(ಗಳು)ನೊಂದಿಗೆ ರಿಟರ್ನಿಂಗ್ ಅಧಿಕಾರಿಯು ಆತನಿಗೆ ನೀಡಿರುವ ನಮೂನೆಯ Iರಿಂದ VIರವರೆಗಿನ ಭಾಗಗಳಲ್ಲಿರುವ ಸಂಕ್ಷಿಪ್ತ ವಿವರಪಟ್ಟಿಯನ್ನು ಒದಗಿಸುವುದು ಸಹ ಅಗತ್ಯವಾಗಿದೆ. ರಿಜಿಸ್ಟರ್(ಗಳು)ನಲ್ಲಿರುವ ಅಥವಾ ನಮೂನೆಯ ಸಂಕ್ಷಿಪ್ತ ವಿವರಪಟ್ಟಿಯಲ್ಲಿರುವ ಯಾವುದೇ ಅಂಕಣವನ್ನು ಖಾಲಿ ಬಿಡುವಂತಿಲ್ಲ. ಅದರಲ್ಲಿ ಪಟ್ಟಿ ಮಾಡಿದ ಯಾವುದೇ ಬಾಬಿನ ಮೇಲೆ ಯಾವುದೇ ವೆಚ್ಚವನ್ನು ಭರಿಸಿಲ್ಲವಾದರೆ ಅಥವಾ ಅಧಿಕೃತಗೊಳಿಸಿಲ್ಲವಾದರೆ, ಸಮುಚಿತ ಅಂಕಣದಲ್ಲಿ 'ಇಲ್ಲ' ಎಂದು ನಮೂದು ಮಾಡತಕ್ಕದ್ದು.

18.11.3. ಇದಲ್ಲದೆ, ಪ್ರತಿಯೊಬ್ಬ ಅಭ್ಯರ್ಥಿಯು, ನಿಗದಿ ಪಡಿಸಿದ ನಮೂನೆಯಲ್ಲಿ ತನ್ನ ಚುನಾವಣಾ ವೆಚ್ಚದ ವರದಿಯನ್ನು ಸಲ್ಲಿಸುವಾಗ, ತನ್ನ ಚುನಾವಣಾ ವೆಚ್ಚಗಳ ಲೆಕ್ಕಕ್ಕೆ ಸಮರ್ಥನೆಯಾಗಿ ಪ್ರಮಾಣಿತ ಅಫಿಡವಿಟ್‌ಅನ್ನು ಸಹ ಸಲ್ಲಿಸತಕ್ಕದ್ದು. ಪ್ರತಿಯೊಬ್ಬ ಅಭ್ಯರ್ಥಿಯು ಸಲ್ಲಿಸಬೇಕಾದ ಅಫಿಡವಿಟ್ ನಮೂನೆಯು ಮೇಲೆ ನಮೂದಿಸಿದ ಮಾದರಿ ನಮೂನೆಯ ಒಂದು ಭಾಗವಾಗಿದೆ.

18.11.4. ಸಲ್ಲಿಸಿರುವ ಲೆಕ್ಕವು, ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್ ಇಟ್ಟಿರುವ ನೈಜ ಮತ್ತು ಪರಿಪೂರ್ಣ ಲೆಕ್ಕವಾಗಿರತಕ್ಕದ್ದು ಮತ್ತು ಸ್ವತಃ ಅಭ್ಯರ್ಥಿಯು ಹಾಗೆಂದು ಪ್ರಮಾಣೀಕರಿಸತಕ್ಕದ್ದು. ಅಭ್ಯರ್ಥಿಯ ಚುನಾವಣಾ ಏಜೆಂಟ್ ಪ್ರಮಾಣೀಕರಿಸಿದರಷ್ಟೇ ಸಾಲದು ಮತ್ತು ಚುನಾವಣಾ ಏಜೆಂಟ್‌ನು ಲೆಕ್ಕವನ್ನು ಪ್ರಮಾಣೀಕರಿಸಿದರೂ ಕೂಡ ಅದನ್ನು ಅಭ್ಯರ್ಥಿಯು ಸ್ವತಃ ಮತ್ತೊಮ್ಮೆ ಪ್ರಮಾಣೀಕರಿಸತಕ್ಕದ್ದು.

## 18.12. ಲೆಕ್ಕಗಳೊಂದಿಗೆ ಸಲ್ಲಿಸಬೇಕಾಗಿರುವ ವೋಚರ್‌ಗಳು:

18.12.1. ಪ್ರತಿಯೊಬ್ಬ ಅಭ್ಯರ್ಥಿಯು ವೋಚರ್‌ನ್ನು ಪಡೆಯುವುದು ಕಾರ್ಯಸಾಧ್ಯವಾಗದಂತಹ ಉದಾ: ಅಂಚೆ, ರೈಲ್ವೆ ಪ್ರಯಾಣ ಮತ್ತಿತರ ಅಂಥದ್ದೇ ಸ್ವರೂಪದ ಪ್ರಕರಣಗಳನ್ನು ಹೊರತುಪಡಿಸಿ ಪ್ರತಿಯೊಂದು ಬಾಬು ಅಥವಾ ವೆಚ್ಚದ ಲೆಕ್ಕದೊಂದಿಗೆ ವೋಚರ್‌ನ್ನು ಸಲ್ಲಿಸತಕ್ಕದ್ದು. ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನು, ಎಲ್ಲ ವೋಚರುಗಳಿಗೆ ಕ್ರಮ ಸಂಖ್ಯೆಯನ್ನು ನೀಡಿರತಕ್ಕದ್ದು.

## 18.13. ವೋಚರುಗಳಿಗೆ ಸಹಿ ಮಾಡಬೇಕು

18.13.1. ಸಂಕ್ಷಿಪ್ತ ವಿವರಣಾಪಟ್ಟಿ ಮತ್ತು ಅಫಿಡವಿಟ್‌ನ ಭಾಗ–1 –4ಕ್ಕೆ ಅಭ್ಯರ್ಥಿಯು ತನ್ನ ಪೂರ್ಣ ಸಹಿ ಹಾಕಿರಬೇಕು. ಬಿಲ್ಲುಗಳು, ವೋಚರ್‌ಗಳು, ಬ್ಯಾಂಕ್ ಸ್ಟೇಟ್‌ಮೆಂಟ್‌ನ ಪ್ರಮಾಣೀಕೃತ ಪ್ರತಿಗಳಿಗೆ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನು ಪೂರ್ಣ ಸಹಿಯನ್ನು ಮಾಡತಕ್ಕದ್ದು.

## 18.14. ಲೆಕ್ಕವನ್ನು ಸಲ್ಲಿಸಲು ಕೊನೆಯ ದಿನ

18.14.1 ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 78ನೇ ಪ್ರಕರಣದ ಮೇರೆಗೆ ಚುನಾಯಿತ ಅಭ್ಯರ್ಥಿಯು ಚುನಾವಣೆ ದಿನದಿಂದ 30 ದಿನಗಳ ಅವಧಿಯೊಳಗೆ ಲೆಕ್ಕವನ್ನು ಸಲ್ಲಿಸತಕ್ಕದ್ದು.

[**ವಿ.ಸೂ.**(i) 30ದಿನಗಳ ಅವಧಿಯನ್ನು ಲೆಕ್ಕ ಹಾಕುವಾಗ, ಚುನಾಯಿತ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ರಿಟರ್ನಿಂಗ್ ಅಧಿಕಾರಿಯು ಘೋಷಣೆ ಮಾಡುವ ದಿನವನ್ನು ಹೊರತುಪಡಿಸತಕ್ಕದ್ದು.

(ii) ಹಾಗೆ ಲೆಕ್ಕ ಹಾಕಿದ 30ನೇ ದಿನವು ಭಾನುವಾರ ಅಥವಾ ಇತರ ರಜಾ ದಿನವಾಗಿದ್ದು, ಆ ದಿನ **ಡಿಇಓ ಅವರ ಕಛೇರಿ** ತೆರೆದಿಲ್ಲವಾದರೆ, **ಡಿಇಓರವರ ಕಛೇರಿಯು** ತೆರೆಯುವ ದಿನದಂದು ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಬಹುದು. ಅಂತಹ ಒಂದು ಸಂದರ್ಭದಲ್ಲಿ ಲೆಕ್ಕವನ್ನು ಸಕಾಲದಲ್ಲಿ ಸಲ್ಲಿಸಲಾಗಿದೆಯೆಂದು ಭಾವಿಸಲಾಗುವುದು.]

## 18.15. ಚುನಾವಣಾ ದಿನದ ಅರ್ಥ

18.15.1. ಚುನಾಯಿತ ಅಭ್ಯರ್ಥಿಯ 'ಚುನಾವಣಾ ದಿನ' ಎಂದರೆ ಚುನಾವಣೆಯು ಸ್ಪರ್ಧಾತ್ಮಕವಾಗಿರಲಿ ಅಥವಾ ಸ್ಪರ್ಧಾತ್ಮಕವಲ್ಲದ್ದಾಗಿರಲಿ, ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಯು ಚುನಾಯಿತನಾಗಿರುವನೆಂದು ಘೋಷಿಸುವ ದಿನಾಂಕವಾಗಿದೆ.

**18.16. ಲೆಕ್ಕವನ್ನು ಸ್ವೀಕರಿಸಿದ್ದರ ಕುರುಹಾಗಿ ಸ್ವೀಕೃತಿಯನ್ನು ನೀಡುವುದು:**

18.16.1. ಅಭ್ಯರ್ಥಿಯು ಚುನಾವಣಾ ವೆಚ್ಚಗಳ ಲೆಕ್ಕವನ್ನು ಜಿಲ್ಲಾ ಚುನಾವಣಾ ಅಧಿಕಾರಿಗೆ ಸಲ್ಲಿಸಿದ ಕೂಡಲೇ, ಆತನು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಅದರ ಸ್ವೀಕೃತಿಯನ್ನು ನೀಡತಕ್ಕದ್ದು. ಲೆಕ್ಕವನ್ನು ಅಂಚೆ ಮೂಲಕ ಸ್ವೀಕರಿಸಿದರೆ, ಕೂಡಲೆ ಅಂಚೆ ಮೂಲಕವೇ ಸ್ವೀಕೃತಿಯನ್ನು ಕಳುಹಿಸತಕ್ಕದ್ದು. ಸ್ವೀಕೃತಿಯ ಒಂದು ಪ್ರತಿಯನ್ನು, ಜಿಲ್ಲಾ ಚುನಾವಣಾ ಅಧಿಕಾರಿ/ ಲೆಕ್ಕಗಳನ್ನು ಸ್ವೀಕರಿಸುವ ನಿಯೋಜಿತ ಅಧಿಕಾರಿಯು ಇಟ್ಟುಕೊಳ್ಳತಕ್ಕದ್ದು.

**18.17. ಲೆಕ್ಕ ಸಲ್ಲಿಕೆಯ ನೋಟೀಸು:**

18.17.1. ಅಭ್ಯರ್ಥಿಯು, ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಿದ ದಿನಾಂಕದಿಂದ ಎರಡು ದಿನಗಳೊಳಗೆ, ಈ ಮುಂದಿನ ವಿವರಗಳನ್ನು ನಿರ್ದಿಷ್ಟಪಡಿಸಿ, ಜಿಲ್ಲಾ ಚುನಾವಣಾ ಅಧಿಕಾರಿಯು, ತಮ್ಮ ಸೂಚನಾ ಫಲಕದಲ್ಲಿ ಒಂದು ನೋಟೀಸನ್ನು ಅಂಟಿಸಬೇಕು:–

(i) ಲೆಕ್ಕಪತ್ರವನ್ನು ಸಲ್ಲಿಸಿದ ದಿನಾಂಕ:

(ii) ಅಭ್ಯರ್ಥಿಯ ಹೆಸರು: ಮತ್ತು

(iii) ಲೆಕ್ಕವನ್ನು ತಪಾಸಿಸುವ ಸಮಯ ಮತ್ತು ಸ್ಥಳ.

**18.18. ಲೆಕ್ಕ ತಪಾಸಣೆ ಮತ್ತು ಪ್ರತಿಗಳು:**

18.18.1. ಅಭ್ಯರ್ಥಿಯು ಜಿಲ್ಲಾ ಚುನಾವಣಾ ಅಧಿಕಾರಿಗೆ ಸಲ್ಲಿಸುವ ಲೆಕ್ಕವನ್ನು ತಪಾಸಿಸಬಯಸುವ ಯಾರೇ ವ್ಯಕ್ತಿಯು ಒಂದು ರೂಪಾಯಿ ಶುಲ್ಕವನ್ನು ಪಾವತಿಸಿ ಪರಿಶೀಲಿಸಬಹುದು. ಚುನಾವಣೆಗಳನ್ನು ನಡೆಸುವ ನಿಯಮಗಳು 1961ರ 88ನೇ ನಿಯಮದ ಪ್ರಕಾರ, ಆಯೋಗವು, ಚುನಾವಣಾ ವೆಚ್ಚಗಳ ಲೆಕ್ಕದ ದೃಢೀಕೃತ ಪ್ರತಿಗಳನ್ನು ಅಥವಾ ಅದರ ಯಾವುದೇ ಭಾಗವನ್ನು ಪೂರೈಸಲು ಪ್ರತಿ ಪುಟಕ್ಕೆ ಅಥವಾ ಅದರ ಭಾಗಕ್ಕೆ 1 ರೂ. ದರವನ್ನು ನಿಗದಿಪಡಿಸಿದೆ.

18.18.2. ಚುನಾವಣಾ ವೆಚ್ಚಗಳ ಲೆಕ್ಕ ತಪಾಸಣೆಗಾಗಿ ಲೆಕ್ಕವನ್ನು ಚುನಾವಣಾ ಆಯೋಗಕ್ಕೆ ಕಳುಹಿಸಿರುವ ಅವಧಿಯ ಯಾವುದೇ ಸಮಯದಲ್ಲಿ ಅರ್ಜಿ ಸಲ್ಲಿಸಿದರೆ, ಲೆಕ್ಕವನ್ನು ಆಯೋಗದಿಂದ ಹಿಂಪಡೆಯುವವರೆಗೂ ಅರ್ಜಿಯನ್ನು ಬಾಕಿ ಇಟ್ಟು, ಲೆಕ್ಕವನ್ನು ಹಿಂಪಡೆದ ತರುವಾಯ ತಪಾಸಣೆ ಮಾಡುವ ಅವಕಾಶವನ್ನು ಅರ್ಜಿದಾರನಿಗೆ ಕಲ್ಪಿಸತಕ್ಕದ್ದು.

## 18.19. ಆಯೋಗಕ್ಕೆ ವರದಿ ಮಾಡುವುದು:

**18.19.1** ಜಿಲ್ಲಾ ಚುನಾವಣಾ ಅಧಿಕಾರಿಯವರು ವೆಚ್ಚ ಮೇಲ್ವಿಚಾರಣಾ ಕೋಶದ ಸಹಾಯ ಮತ್ತು ಚುನಾವಣಾ ವೀಕ್ಷಕರ ಸಹಕಾರ ಮತ್ತು ನೆರವು ಪಡೆದು ಫಲಿತಾಂಶಗಳ ಘೋಷಣೆಯ ತರುವಾಯ ಪ್ರತಿಯೊಬ್ಬ ಅಭ್ಯರ್ಥಿಯು ಸಲ್ಲಿಸಿದ ಚುನಾವಣಾ ವೆಚ್ಚದ ಲೆಕ್ಕಪತ್ರಗಳ ತ:ಖ್ತೆಯನ್ನು ಪರಿಷ್ಕರಿಸತಕ್ಕದ್ದು ಮತ್ತು ಸಂಕ್ಷಿಪ್ತ ವರದಿಯೊಂದಿಗೆ ನಿಗದಿತ ನಮೂನೆಯಲ್ಲಿ ಫಲಿತಾಂಶಗಳ ಘೋಷಣೆಯ 45 ದಿನಗಳೊಳಗೆ ಸಿಇಒ ಮುಖಾಂತರ ಆಯೋಗಕ್ಕೆ ವರದಿಯೊಂದನ್ನು ಸಲ್ಲಿಸತಕ್ಕದ್ದು. ಜಿಲ್ಲಾ ಚುನಾವಣಾಧಿಕಾರಿಯವರ ವರದಿಯಲ್ಲಿ ವೆಚ್ಚ ವೀಕ್ಷಕರ ಟಿಪ್ಪಣಿಗಳನ್ನು ಸಹ ಪರಿಗಣನೆಗೆ ತೆಗೆದುಕೊಂಡಿರತಕ್ಕದ್ದು. ಅಭ್ಯರ್ಥಿಗಳ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಪರಿಶೀಲನಾ ವರದಿ ಮತ್ತು ಸಂಕ್ಷಿಪ್ತ ವರದಿ ಸಿದ್ಧಪಡಿಸುವಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನವನ್ನು ಇಸಿಐ ಸಂಖ್ಯೆ:76/ಸೂಚನೆಗಳು/2015/ಇಇಪಿಎಸ್/ಸಂ:XIV ದಿನಾಂಕ: 2ನೇ ಜೂನ್, 2016ರಲ್ಲಿ ವಿವರಿಸಲಾಗಿದೆ.

18.19.2 ಚುನಾವಣಾ ಅವಧಿಯಲ್ಲಿ, ರಿಟರ್ನಿಂಗ್ ಅಧಿಕಾರಿ ಜಾರಿ ಮಾಡಿರುವ ಎಲ್ಲ ನೋಟೀಸುಗಳು ಯಾವುವಾದರೂ ಇದ್ದರೆ ಮತ್ತು ಅವುಗಳಿಗೆ ನೀಡಿರುವ ಉತ್ತರಗಳ ಪ್ರತಿಯೊಂದಿಗೆ ಎಲ್ಲ ಅಭ್ಯರ್ಥಿಗಳ ಸಂಕ್ಷಿಪ್ತ ವಿವರಣೆ ತಃಖ್ತೆಯ (ಭಾಗ– I ರಿಂದ ಭಾಗ– VI) ಸ್ಕ್ಯಾನ್ ಮಾಡಿದ ಪ್ರತಿಯ ಜಿಲ್ಲಾ ಚುನಾವಣಾಧಿಕಾರಿಯವರ ವರದಿಯನ್ನು ಅತ್ಯಂತ ಜಾಗರೂಕತೆಯಿಂದ ಸಿದ್ಧಪಡಿಸಿ, ಎಲ್ಲ ಸಾರ್ವಜನಿಕರಿಗೆ ಮಾಹಿತಿಯನ್ನು ವ್ಯಾಪಕ ಪ್ರಸಾರ ಮಾಡುವ ಸಲುವಾಗಿ ಅಭ್ಯರ್ಥಿಯು ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲು ಮಾಡಿದ ಮೂರು ದಿನಗಳ ಅವಧಿಯೊಳಗೆ ನಿಶ್ಚಿತವಾಗಿ ಮುಖ್ಯ ಚುನಾವಣಾಧಿಕಾರಿಯವರ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

18.19.3 ಜಿಲ್ಲಾ ಚುನಾವಣಾಧಿಕಾರಿಗಳ, ಪರಿಶೀಲನಾ ವರದಿಯನ್ನು ಅದನ್ನು ಅಂತಿಮಗೊಳಿಸಿದ ಮೂರು ದಿನಗಳೊಳಗೆ **ಇಇಎಂಸಿ** ತಂತ್ರಾಂಶದಲ್ಲಿ ನಮೂದಿಸಬೇಕಾಗುತ್ತದೆ.

## 18.20. ಪ್ರತಿಯೊಂದು ಮತ ಕ್ಷೇತ್ರಕ್ಕೆ ಪ್ರತ್ಯೇಕ ವರದಿ:

18.20.1 ಡಿಇಒ ರವರುಪ್ರತಿಯೊಂದು ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಪ್ರತ್ಯೇಕ ವರದಿಯನ್ನು ಕಳುಹಿಸಬೇಕು. ಅಂತಹ ಪ್ರತಿಯೊಂದು ವರದಿಯು, ಅಭ್ಯರ್ಥಿಯು ಚುನಾವಣೆಯಲ್ಲಿ ಚುನಾಯಿತರಾಗಿರಲಿ ಅಥವಾ ಪರಾಭವಗೊಂಡಿರಲಿ, ಚುನಾವಣಾ ಕಣದಲ್ಲಿರುವ ಎಲ್ಲ ಅಭ್ಯರ್ಥಿಗಳನ್ನು ಒಳಗೊಂಡಿರತಕ್ಕದ್ದು.

**18.21. ಲೆಕ್ಕಪತ್ರಗಳನ್ನು ತಡವಾಗಿ ಸಲ್ಲಿಸುವುದು:**

18.21.1 ಡಿಇಒ ರವರು ತಮ್ಮ ವರದಿಯನ್ನು ಆಯೋಗಕ್ಕೆ ಸಲ್ಲಿಸಿದ ತರುವಾಯ ಸ್ಪರ್ಧಿಸಿರುವ ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಿದರೆ, ಆಗ ಡಿಇಒರವರು ಆ ಅಭ್ಯರ್ಥಿಗೆ ಸಂಬಂಧಿಸಿದಂತೆ ಅದೇ ನಮೂನೆಯಲ್ಲಿ ಪೂರಕ ವರದಿಯನ್ನು ಕಳುಹಿಸುವುದು ಅಗತ್ಯವಾಗಿದೆ.

**18.22. ಪರಿಶೀಲನೆಯ ಸ್ವರೂಪ**

18.22.1. ಅಭ್ಯರ್ಥಿಯು ಸಲ್ಲಿಸಿರುವ ಚುನಾವಣಾ ವೆಚ್ಚದ ವರದಿಯು 'ಎಲ್ಲ' ಚುನಾವಣಾ ವೆಚ್ಚಗಳ "ಸರಿಯಾದ" ಲೆಕ್ಕವನ್ನು ಬಿಂಬಿಸುವುದರಿಂದ, ಜಿಲ್ಲಾ ಚುನಾವಣಾ ಅಧಿಕಾರಿಯು, ನಿಯಮಿಸಲಾದ ರೀತಿಗನುಸಾರವಾಗಿ ಇರುವಂತಹ ಅಭ್ಯರ್ಥಿಯ ಲೆಕ್ಕವನ್ನು ಅಂಗೀಕರಿಸುವ ಮೊದಲು, ತಾನು ಅಗತ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಚುನಾವಣೆಗಳನ್ನು ನಡೆಸುವ ನಿಯಮಗಳು 1961ರ 89ನೇ ನಿಯಮದ ಮೇರೆಗೆ ಅಗತ್ಯಪಡಿಸಲಾದಂತೆ ಆಯೋಗಕ್ಕೆ ತನ್ನ ವರದಿಯನ್ನು ಕಳುಹಿಸುವ ಸಮಯದಲ್ಲಿ ತನ್ನ ಮುಂದೆ ಸಲ್ಲಿಸಲಾಗಿರುವ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಮತ್ತು ಸೂಕ್ತ ವಿಚಾರಣೆಯ ಮೂಲಕ ಆತನು ಪರಿಶೀಲಿಸಿದಂತೆ ಲೆಕ್ಕ ವಿವರಪಟ್ಟಿಯು ನಿಯಮಿಸಲಾದ ರೀತಿಯಲ್ಲಿದೆಯೆಂದು ಆಯೋಗಕ್ಕೆ ಪ್ರಮಾಣೀಕರಿಸತಕ್ಕದ್ದು.

**18.23. ವರದಿಯ ಪ್ರಕಟಣೆ**

18.23.1 ಆಯೋಗಕ್ಕೆ ಕಳುಹಿಸುವ ಪ್ರತಿಯೊಂದು ವರದಿಯ ಒಂದು ಪ್ರತಿಯನ್ನು ಡಿಇಒ ಅವರ ಸೂಚನಾ ಫಲಕದಲ್ಲಿ ಅಂಟಿಸುವ ಮೂಲಕ ಪ್ರಕಟಪಡಿಸತಕ್ಕದ್ದು.

**18.24. ವರದಿ ಕುರಿತಂತೆ ಆಯೋಗದ ತೀರ್ಮಾನ:**

18.24.1. ಆಯೋಗವು ವರದಿಯನ್ನು ಪರಿಗಣಿಸಿ, ಸ್ಪರ್ಧಿಸಿರುವ ಯಾರೇ ಅಭ್ಯರ್ಥಿಯು ಕಾನೂನಿನ ಮೂಲಕ ಅಗತ್ಯಪಡಿಸಿದ ಸಮಯದೊಳಗೆ ಮತ್ತು ರೀತಿಯಲ್ಲಿ ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲನಾಗಿರುವನೇ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ. ಅಂಥ ಸಂದರ್ಭದಲ್ಲಿ ಆಯೋಗವು ಅಭ್ಯರ್ಥಿಯನ್ನು ಏಕೆ ಅನರ್ಹಗೊಳಿಸಬಾರದು ಎಂಬ ಬಗ್ಗೆ ಕಾರಣ ಕೇಳಿ ಆತನಿಗೆ ಒಂದು ನೋಟೀಸನ್ನು ಜಾರಿ ಮಾಡುತ್ತದೆ.

## 18.25. ಅಭ್ಯರ್ಥಿಗಳಿಗೆ ಆಯೋಗದ ನೋಟೀಸನ್ನು ರವಾನಿಸುವುದು:

18.25.1. ಆಯೋಗವು ಜಾರಿ ಮಾಡಿದ ನೋಟೀಸುಗಳನ್ನು ತಪ್ಪಿತ ಅಭ್ಯರ್ಥಿಗಳಿಗೆ ತ್ವರಿತಗತಿಯಲ್ಲಿ ಜಾರಿ ಮಾಡಲಾಗಿದೆ ಮತ್ತು ಅವರ ಪ್ರಕರಣಗಳನ್ನು ಅತ್ಯಲ್ಪ ಅವಧಿಯಲ್ಲಿ ಇತ್ಯರ್ಥ ಪಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಆಯೋಗವು, ಸದರಿ ನೋಟೀಸುಗಳನ್ನು ಸಂಬಂಧಪಟ್ಟ ಅಭ್ಯರ್ಥಿಗಳಿಗೆ ರವಾನಿಸಿ ಕಾರಣ ಕೇಳುವಂತೆ ಜಿಲ್ಲಾ ಚುನಾವಣಾ ಅಧಿಕಾರಿಗೆ ಕಳುಹಿಸಿಕೊಡುತ್ತದೆ. ಡಿ.ಇ.ಓ ಕಚೇರಿಯಲ್ಲಿ ಆಯೋಗದಿಂದ ನೋಟೀಸನ್ನು ಸ್ವೀಕರಿಸಿದ ಮೂರು ದಿನಗಳೊಳಗೆ ಅದನ್ನು ಸಂಬಂಧಪಟ್ಟ ಅಭ್ಯರ್ಥಿಗೆ ತಲುಪಿಸುವ ನಿಟ್ಟಿನಲ್ಲಿ ಅವರು ಪ್ರತಿಯೊಂದು ಪ್ರಯತ್ನವನ್ನು ಮಾಡತಕ್ಕದ್ದು.

18.25.2. ನೋಟೀಸನ್ನು ಸ್ವೀಕರಿಸಿರುವುದರ ದ್ಯೋತಕವಾಗಿ ಸಂಬಂಧಪಟ್ಟ ಅಭ್ಯರ್ಥಿಯಿಂದ ಸೂಕ್ತ ಸ್ವೀಕೃತಿ ಪಡೆದು ಆತನಿಗೆ ನೋಟೀಸನ್ನು ನೀಡತಕ್ಕದ್ದು.

18.25.3. ಅಭ್ಯರ್ಥಿಯು ನೀಡಿದ ವಿಳಾಸದಲ್ಲಿ ಆತನು ಲಭ್ಯನಿರದಿದ್ದರೆ ಮತ್ತು ಆತನ ಕುಟುಂಬದ ಸದಸ್ಯರು ನೋಟೀಸನ್ನು ಪಡೆಯಲು ನಿರಾಕರಿಸಿದರೆ, ಸದರಿ ನೋಟೀಸನ್ನು ಸಾಮಾನ್ಯವಾಗಿ ಇಬ್ಬರು ಸ್ಥಳೀಯ ಸಾಕ್ಷಿದಾರರ ಸಮ್ಮುಖದಲ್ಲಿ ಅಭ್ಯರ್ಥಿಯ ನಿವಾಸದ ಗೋಡೆಗೆ/ ಬಾಗಿಲಿಗೆ ಅಂಟಿಸಲಾಗುವುದು. ಈ ಕಾರ್ಯವಿಧಾನವನ್ನು ಸ್ಥಳದಲ್ಲೇ ದಾಖಲು ಮಾಡಿ ಅದರ ಮೇಲೆ ಸಾಕ್ಷಿದಾರರ ವಿಳಾಸದೊಂದಿಗೆ ಸಹಿಯನ್ನು ಪಡೆಯತಕ್ಕದ್ದು.

## 18.26. ತಪ್ಪಿತಸ್ಥ ಅಭ್ಯರ್ಥಿಯ ಮನವಿ:

18.26.1. ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಿ ಕರೆಸಿಕೊಳ್ಳಲಾಗುವ ಯಾರೇ ಸ್ಪರ್ಧಿಸಿರುವ ಅಭ್ಯರ್ಥಿಯು ಅಂತಹ ನೋಟೀಸನ್ನು ಸ್ವೀಕರಿಸಿದ ಇಪ್ಪತ್ತು ದಿನಗಳೊಳಗೆ ಚುನಾವಣಾ ಆಯೋಗಕ್ಕೆ ಲಿಖಿತ ಮನವಿಯನ್ನು ಸಲ್ಲಿಸಬಹುದು ಮತ್ತು ಅದೇ ವೇಳೆ, ತನ್ನ ಚುನಾವಣಾ ವೆಚ್ಚಗಳ ಪೂರ್ಣ ಲೆಕ್ಕವನ್ನು ಈಗಾಗಲೇ ಒದಗಿಸದೇ ಇದ್ದಲ್ಲಿ ಅಂತಹ ಲೆಕ್ಕದೊಂದಿಗೆ ತನ್ನ ಮನವಿಯ ಪ್ರತಿಯೊಂದನ್ನು ಜಿಲ್ಲಾ ಚುನಾವಣಾ ಅಧಿಕಾರಿಗೆ ಕಳುಹಿಸತಕ್ಕದ್ದು.

## 18.27. ಜಿಲ್ಲಾ ಚುನಾವಣಾಧಿಕಾರಿಯ ಪೂರಕ ವರದಿ:

18.27.1.ಅಭ್ಯರ್ಥಿಯು ಆಯೋಗದಿಂದ, ನೋಟೀಸನ್ನು ಸ್ವೀಕರಿಸಿರುವುದರ ದ್ಯೋತಕವಾಗಿ ಅಭ್ಯರ್ಥಿಯಿಂದ ಪಡೆದ ಸ್ವೀಕೃತಿಯೊಂದಿಗೆ ಕೂಡಲೆ, ಅಭ್ಯರ್ಥಿಯ ಲೆಕ್ಕಗಳು ಯಾವುವಾದರು ಇದ್ದರೆ, ಅವುಗಳೊಂದಿಗೆ ಆತನ ಮನವಿಯನ್ನು ಸಲ್ಲಿಸುವಂತೆ ಆಯೋಗವು ಅಭ್ಯರ್ಥಿಗೆ ನಿರ್ದೇಶಿಸಿದ

ಅವಧಿ ಮುಕ್ತಾಯಗೊಂಡ ನಂತರ ಯಾವುದೇ ಸಂದರ್ಭದಲ್ಲೂ ಒಂದು ವಾರದೊಳಗೆ ಆಯೋಗಕ್ಕೆ ಜಿಲ್ಲಾ ಚುನಾವಣಾ ಅಧಿಕಾರಿಯು ಪೂರಕ ವರದಿಯನ್ನು ಸಲ್ಲಿಸಬೇಕು.

18.27.2. ಅಭ್ಯರ್ಥಿಯು ಯಾವುದೇ ಮನವಿಯನ್ನು ಸಲ್ಲಿಸದಿದ್ದರೂ ಕೂಡ ಪೂರಕ ವರದಿಯನ್ನು ಕಳುಹಿಸಬೇಕು.

## 18.28. ಆಯೋಗದ ಅಂತಿಮ ಆದೇಶ:

18.28.1. ಅಭ್ಯರ್ಥಿಯು ಸಲ್ಲಿಸಿದ ಮನವಿ ಮತ್ತು ಜಿಲ್ಲಾ ಚುನಾವಣಾ ಅಧಿಕಾರಿಯು ಮಾಡಿರುವ ಟೀಕೆ ಟಿಪ್ಪಣಿಗಳು ಯಾವುದಾದರೂ ಇದ್ದರೆ ಅವುಗಳನ್ನು ಪರಿಶೀಲಿಸಿದ ತರುವಾಯ ಮತ್ತು ಆಯೋಗವು ಯುಕ್ತವೆಂದು ಭಾವಿಸಿದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅದು ಕಾನೂನಿನ ಮೂಲಕ ಅಗತ್ಯಪಡಿಸಿದ ಸಮಯ ಮತ್ತು ರೀತಿಯಲ್ಲಿ ಅಭ್ಯರ್ಥಿಯು ಲೆಕ್ಕವನ್ನು ಸಲ್ಲಿಸಲು ವಿಫಲನಾಗಲು ಆತನಿಗೆ ಯಾವುದೇ ಸಮಂಜಸ ಕಾರಣ ಅಥವಾ ಸಮರ್ಥನೆ ಇರಲಿಲ್ಲವೆಂದು ಆಯೋಗವು ಮನವರಿಕೆ ಮಾಡಿಕೊಂಡು, ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗಾಗಿ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ಎ ಪ್ರಕರಣದ ಮೇರೆಗೆ ಆತನನ್ನು ಅನರ್ಹಗೊಳಿಸಲಾಗಿದೆ ಎಂದು ಆಯೋಗವು ಘೋಷಿಸತಕ್ಕದ್ದು.

## 18.29. ಅನರ್ಹತೆಯನ್ನು ತೆಗೆದುಹಾಕುವುದು

18.29.1. ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 11ನೇ ಪ್ರಕರಣದ ಮೇರೆಗೆ, ಚುನಾವಣಾ ಆಯೋಗವು ದಾಖಲಿಸಬಹುದಾದ ಕಾರಣಗಳಿಗಾಗಿ ಅಂಥ ಯಾವುದೇ ಅನರ್ಹತೆಯನ್ನು ತೆಗೆದು ಹಾಕಬಹುದು ಅಥವಾ ಅದರ ಅವಧಿಯನ್ನು ಕಡಿಮೆ ಮಾಡಬಹುದು.

## 18.30. ಕಾಲಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು:

18.30.1 ಆಯೋಗಕ್ಕೆ ವರದಿಗಳನ್ನು ಸಲ್ಲಿಸಲು, ಲೆಕ್ಕ ಸಲ್ಲಿಸಲು ತಪ್ಪುವ ಅಭ್ಯರ್ಥಿಗಳಿಗೆ ನೋಟಿಸನ್ನು ಜಾರಿ ಮಾಡಲು, ಅವರ ಮನವಿಗಳನ್ನು ಜಿಲ್ಲಾ ಚುನಾವಣಾ ಅಧಿಕಾರಿಯ ಟಿಪ್ಪಣಿಗಳೊಂದಿಗೆ ಆಯೋಗಕ್ಕೆ ಕಳುಹಿಸಿಕೊಡಲು, ಮುಂತಾದವುಗಳಿಗೆ ಸಂಬಂಧಪಟ್ಟಂತೆ ಈ ಹಿಂದಿನ ಕಂಡಿಕೆ (ಪ್ಯಾರಾಗ್ರಾಫ್)ಗಳಲ್ಲಿ ವಿಭಿನ್ನ ಕಾಲಮಿತಿಗಳನ್ನು ನಿರ್ದಿಷ್ಟಪಡಿಸಲಾಗಿದೆ, ಅಂಥ ಎಲ್ಲ ಕಾಲಮಿತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ಆಯೋಗವು ಯಾವುದೇ ಅಂಥ ಲೋಪಗಳಿಗೆ ಸಂಬಂಧಿಸಿದಂತೆ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸುವುದು.

## 18.31. ಗರಿಷ್ಠ ಚುನಾವಣಾ ವೆಚ್ಚಗಳು:

18.31.1. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 77 ರ ಅಡಿಯಲ್ಲಿ ಲೆಕ್ಕಪತ್ರ ಸಲ್ಲಿಸಬೇಕಾದಂಥ ಒಟ್ಟು ವೆಚ್ಚವು ಮತ್ತು ಈ ಕೆಳಗಿನ ಕೋಷ್ಟಕದ ಕಲಮು 1 ರಲ್ಲಿ ನಮೂದಿಸಲಾದಂತೆ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಚುನಾವಣೆಗೆ ಸಂಬಂಧಿಸಿದಂತೆ ಉಂಟಾದ ಅಥವಾ ಅಧಿಕೃತಗೊಳಿಸಲಾದಂಥ ವೆಚ್ಚವು–

ಎ. ಆಯಾ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಯಾವುದೇ ಒಂದು ಲೋಕಸಭಾ ಚುನಾವಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಸದರಿ ಕೋಷ್ಟಕದ ಕಲಮು 2ರಲ್ಲಿ ನಿರ್ದಿಷ್ಟಪಡಿಸಿದ, ಮತ್ತು,

ಬಿ. ಆಯಾ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಯಾವುದೇ ಒಂದು ಲೋಕಸಭಾ ಚುನಾವಣಾ ಕ್ಷೇತ್ರಕ್ಕೆ (ಇದ್ದಲ್ಲಿ) ಸಂಬಂಧಿಸಿದಂತೆ, ಸದರಿ ಕೋಷ್ಟಕದ ಕಲಮು 3ರಲ್ಲಿ ನಿರ್ದಿಷ್ಟಪಡಿಸಿದ– ವೆಚ್ಚವನ್ನು ಮೀರತಕ್ಕದ್ದಲ್ಲ.

**ಕೋಷ್ಟಕ**

| ಕ್ರ. ಸಂ. | ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಹೆಸರು | | ಯಾವುದೇ ಒಂದು ಕ್ಷೇತ್ರದಲ್ಲಿ ವ್ಯಯಿಸಬಹುದಾದ ಗರಿಷ್ಠ ಚುನಾವಣಾ ವೆಚ್ಚಗಳು (ರೂ.ಗಳಲ್ಲಿ) | |
|---|---|---|---|---|
| | | | ಸಂಸದೀಯ ಕ್ಷೇತ್ರ | ವಿಧಾನಸಭಾ ಕ್ಷೇತ್ರ |
| | 1 | | 2 | 3 |
| | | I. ರಾಜ್ಯ | | |
| 1 | | ಆಂಧ್ರಪ್ರದೇಶ ... | 70,00,000 | 28,00,000 |
| 2 | | ಅರುಣಾಚಲ ಪ್ರದೇಶ ... | 54,00,000 | 20,00,00 |
| 3 | | ಅಸ್ಸಾಂ ... | 70,00,000 | 28,00,000 |
| 4 | | ಬಿಹಾರ ... | 70,00,000 | 28,00,000 |
| 5 | | ಗೋವಾ ... | 54,00,000 | 20,00,00 |
| 6 | | ಗುಜರಾತ್ ... | 70,00,000 | 28,00,000 |
| 7 | | ಹರಿಯಾಣ ... | 70,00,000 | 28,00,000 |
| 8 | | ಹಿಮಾಚಲ ಪ್ರದೇಶ ... | 70,00,000 | 28,00,000 |
| 9 | | ಜಮ್ಮು ಮತ್ತುಕಾಶ್ಮೀರ | 70,00,000 | --- |
| 10 | | ಕರ್ನಾಟಕ | 70,00,000 | 28,00,000 |
| 11 | | ಕೇರಳ | 70,00,000 | 28,00,000 |
| 12 | | ಮಧ್ಯಪ್ರದೇಶ | 70,00,000 | 28,00,000 |
| 13 | | ಮಹಾರಾಷ್ಟ್ರ | 70,00,000 | 28,00,000 |
| 14 | | ಮಣಿಪುರ | 70,00,000 | 20,00,000 |

| | | | | |
|---|---|---|---|---|
| 15 | | ಮೇಘಾಲಯ | 70,00,000 | 20,00,000 |
| 16 | | ಮಿಜೋರಾಂ | 70,00,000 | 20,00,000 |
| 17 | | ನಾಗಾಲ್ಯಾಂಡ್ | 70,00,000 | 20,00,000 |
| 18 | | ಒರಿಸ್ಸಾ | 70,00,000 | 28,00,000 |
| 19 | | ಪಂಜಾಬ್ | 70,00,000 | 28,00,000 |
| 20 | | ರಾಜಸ್ಥಾನ | 70,00,000 | 28,00,000 |
| 21 | | ಸಿಕ್ಕಿಂ | 54,00,000 | 20,00,000 |
| 22 | | ತಮಿಳುನಾಡು | 70,00,000 | 28,00,000 |
| 23 | | ತ್ರಿಪುರ | 70,00,000 | 20,00,000 |
| 24 | | ಉತ್ತರ ಪ್ರದೇಶ | 70,00,000 | 28,00,000 |
| 25 | | ಪಶ್ಚಿಮ ಬಂಗಾಳ | 70,00,000 | 28,00,000 |
| 26 | | ಛತ್ತೀಸ್‌ಗಡ್ | 70,00,000 | 28,00,000 |
| 27 | | ಉತ್ತರಾಂಚಲ | 70,00,000 | 28,00,000 |
| 28 | | ಜಾರ್ಖಂಡ್ | 70,00,000 | 28,00,000 |
| 29 | | ತೆಲಂಗಾಣ | 70,00,000 | 28,00,000 |
| **II** | | **ಕೇಂದ್ರಾಡಳಿತ ಪ್ರದೇಶಗಳು** | | |
| 1 | | ಅಂಡಮಾನ್ ಮತ್ತು ನಿಕೋಬಾರ್ | 54,00,000 | – |
| 2 | | ಚಂಡೀಗಡ್ | 54,00,000 | – |
| 3 | | ದಾದ್ರ ಮತ್ತು ನಗರ್‌ಹವೇಲಿ | 54,00,000 | – |
| 4 | | ದಮನ್ ಮತ್ತು ದಿಯು | 54,00,000 | – |
| 5 | | ದೆಹಲಿ ರಾಷ್ಟ್ರೀಯ ರಾಜಧಾನಿ ಕ್ಷೇತ್ರ | 70,00,000 | 28,00,000 |
| 6 | | ಲಕ್ಷದ್ವೀಪ | 54,00,000 | – |
| 7 | | ಪುದುಚೇರಿ | 54,00,000 | 20,00,00 |

**18.32. ಹಣಬಲದ ಭ್ರಷ್ಟ ಪ್ರಭಾವವನ್ನು ನಿಯಂತ್ರಣ ಮಾಡುವ ಕ್ರಮ:**

18.32.1. ಚುನಾವಣೆಗಳಲ್ಲಿ ಹಣಬಲದ ಪ್ರಭಾವವು ಹೆಚ್ಚಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದ್ದು, ಇದೊಂದು ರೋಗವಾಗಿದ್ದು, ಕೆಲವೊಮ್ಮೆ ಚುನಾವಣೆ ಪ್ರಕ್ರಿಯೆಯನ್ನು ಕೇವಲ ಒಂದು ಪ್ರಹಸನದ ಮಟ್ಟಕ್ಕೆ ಇಳಿಸಿ, ಇತರ ಅಭ್ಯರ್ಥಿಗಳಿಗೆ ಹೋಲಿಸಿದಾಗ ಹಣಕಾಸು ಸಂಪನ್ಮೂಲಗಳನ್ನು ಉಳ್ಳ ಕೆಲವು ಅನುಕೂಲ ಅಭ್ಯರ್ಥಿಗಳಿಗೆ ವಿಶೇಷ ಪ್ರಯೋಜನಗಳನ್ನು ದೊರಕಿಸಿಕೊಡುವ ಒಂದು ಉಪದ್ರವವಾಗಿದೆ. ಅಂಥ ಚುನಾವಣೆ ಫಲಿತಾಂಶವು ಜನರ ನಿಜವಾದ ಆಯ್ಕೆಯನ್ನು ಬಿಂಬಿಸುವುದಿಲ್ಲ. ಈ ವ್ಯವಸ್ಥೆಯು ಹಲವು ವೇಳೆ ಅರ್ಹ ಹಾಗೂ ಸಮರ್ಥ ವ್ಯಕ್ತಿಗಳು ಜನರನ್ನು ಪ್ರತಿನಿಧಿಸುವ ವಿಶೇಷತೆಯನ್ನು ಸಹ ದಮನ ಮಾಡುತ್ತದೆ.

18.32.2 ಸಾಮಾನ್ಯವಾಗಿ ಮೇಲೆ ಉಲ್ಲೇಖಿಸಿರುವ ಕಾನೂನಿನ ಉಪಬಂಧಗಳು ವಾಸ್ತವದಲ್ಲಿ ಭ್ರಷ್ಟಾಚಾರಕ್ಕೆಡೆ ಮಾಡಿಕೊಡುವ ಹಣ ಬಲದ ಪ್ರಭಾವವನ್ನು ತಡೆಗಟ್ಟುವಲ್ಲಿ ಅಸಮರ್ಪಕವಾಗಿವೆ ಎಂಬ ಗ್ರಹಿಕೆಗೆ ಕಾರಣವಾಗಿವೆ.

18.32.3. ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪನ್ನು (ಗಡಖ್ ಯಶ್ವಂತ್‌ರಾವ್ ಕಂಕರ್‌ರಾವ್:ವಿರುದ್ಧ:ಇ.ವಿ ಅಲಿಯಾಸ್ ಬಾಬಾಸಾಹೇಬ್ ವಿಖೆ ಪಾಟೀಲ್ ಮತ್ತು ಇತರರು ಎಐಆರ್ 1994 ಎಸ್‌ಸಿ 678)ಇಲ್ಲಿ ಉಲ್ಲೇಖಿಸುವುದು ಸುಸಂಗತವಾಗಿದೆ:

"ಈಗ ಅಸ್ತಿತ್ವದಲ್ಲಿರುವ ಕಾನೂನು, ಪ್ರಸ್ತುತ ಸನ್ನಿವೇಶದ ವಾಸ್ತವಾಂಶಗಳನ್ನು ಅಂದಾಜು ಮಾಡುತ್ತಿಲ್ಲ. ಅಭ್ಯರ್ಥಿಯು ಸ್ವತಃ ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚದ ಮೇಲಿನ ಪ್ರಸ್ತುತ ಪರಿಮಿತಿಯು ಪಕ್ಷವು ಅಥವಾ ಆತನ ಚುನಾವಣಾ ಪ್ರಚಾರಕ್ಕಾಗಿ ಬೇರೊಬ್ಬ ವ್ಯಕ್ತಿಯು ಮಾಡಿರಬಹುದಾದ ವೆಚ್ಚವನ್ನು ಕಾನೂನಿನ ವ್ಯಾಪ್ತಿಯಿಂದ ಸುರಕ್ಷಿತವಾಗಿ ಹೊರಗಿಡುತ್ತಿದೆ. ಈ ಉಪಬಂಧದ ಉದ್ದೇಶವು ಈಡೇರದೆ, ಕಾನೂನಿನಿಂದ ತಪ್ಪಿಸಿಕೊಳ್ಳುವ ಮಾರ್ಗವಾಗಿ ಉಲ್ಲಂಘನೆಗೆ ಒಳಗಾಗುತ್ತದೆ. ಒಬ್ಬ ಅಭ್ಯರ್ಥಿಯ ವೆಚ್ಚದ ಮೇಲಿನ ಪರಿಮಿತಿಯ ಕಟ್ಟಳೆಯು ಕೇವಲ ಕಣ್ಣೊರೆಸುವ ತಂತ್ರವಾಗಿದೆಯೇ ಹೊರತು, ಅರ್ಥಪೂರ್ಣ ಪ್ರಜಾಪ್ರಭುತ್ವದ ಗುರಿಯನ್ನು ಸಾಧಿಸಲು ಅಧಿನಿಯಮಿತಗೊಳಿಸಲಾಗಿರುವ ಚುನಾವಣಾ ವೆಚ್ಚದ ಮೇಲಿನ ನೈಜ ತಡೆಯಾಗಿರುವುದಿಲ್ಲ. ಆದಾಗ್ಯೂ, ಸಂಸತ್ತಿಗೆ ಸಂಬಂಧಿಸಿದಂತೆ ಇರುವ ಈ ಕಾನೂನಿನ ಲೋಪವು, ಸರ್ವರ ಅನುಕೂಲಕ್ಕಾಗಿದ್ದು, ಅದನ್ನು ಉಳಿಸಿಕೊಳ್ಳುವುದು ಎಚ್ಚರಿಕೆಯಿಂದ ತೀರ್ಮಾನಿಸಿರುವುದೇ ಎಂಬ ಅಭಿಪ್ರಾಯದ ಮೇಲಿನ ಶಂಕೆಯನ್ನು ಬಲಪಡಿಸುತ್ತದೆ. ಇದು ಕಾರ್ಯಸಾಧ್ಯವಲ್ಲದ ಉಪಬಂಧವಾಗಿದ್ದರೆ, ಚುನಾವಣೆಗಳಲ್ಲಿ ಹಣಬಲದ ಪಾತ್ರವನ್ನು ಯಾವುದೇ ಅಳುಕಿಲ್ಲದೆ ಒಪ್ಪಿಕೊಂಡು, ಕಾನೂನಿನಿಂದ ನುಣುಚಿಕೊಳ್ಳಲು ಮತ್ತು ಅದರ ಉದ್ದೇಶವನ್ನು ಬುಡಮೇಲು ಗೊಳಿಸಲು, ಪರೋಕ್ಷ ವಿಧಾನಗಳನ್ನು ಆಶ್ರಮಿಸುವುದನ್ನು ತಡೆಯಲು ವಿಫಲವಾಗಿರುವ ಈ ಉಪಬಂಧವನ್ನು ಬಿಟ್ಟುಬಿಡಲು ಸಲಹೆ ನೀಡಬಹುದಾಗಿದೆ. ಈ ಉಪಬಂಧವು ವಾಸ್ತವವನ್ನು ಮರೆಮಾಚುವ ಮುಸುಕಾಗಿರುವುದನ್ನು ಅಂತ್ಯಗೊಳಿಸಬೇಕಿದೆ.

18.32.4. ಮುಂದುವರಿದು, ಮಾನ್ಯ ನ್ಯಾಯಾಲಯವು, ಮೇಲೆ ಉಲ್ಲೇಖಿಸಿದ ತೀರ್ಪಿನಲ್ಲಿ: "ಎಲ್ಲಾ ರಾಜಕೀಯ ಪಕ್ಷಗಳಲ್ಲಿನ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಯಕತ್ವದ ಉನ್ನತ ಹಂತವು ಕೆಳಹಂತಗಳಿಗೆ ಅದು ವ್ಯಾಪಿಸುವಂತಾಗಲು ಹಾಗೂ ಮುಕ್ತ ಮತ್ತು ನ್ಯಾಯಯುತ ಚುನಾವಣೆಗೆ ಅನುಗುಣವಾದ ವಾತಾವರಣವನ್ನು ಒದಗಿಸಲು, ಅಪೇಕ್ಷಣೀಯ ಮಾನದಂಡಗಳನ್ನು

ಅಳವಡಿಸಿಕೊಳ್ಳುವ ಮೂಲಕ, ಮತದಾರರಿಗೆ ಅವಶ್ಯಕ ಮಾಹಿತಿ ನೀಡುವ ಒಂದು ಮಾದರಿಯನ್ನು ಸೃಜಿಸುವುದು ಅದರ ಕರ್ತವ್ಯವಾಗಿದೆ" ಎಂಬ ಹುಚ್ಚು/ಮುಗ್ಧ ನಿರೀಕ್ಷೆಯನ್ನು ವ್ಯಕ್ತಪಡಿಸಿದೆ.

18.32.5. ಆಯೋಗವು ಚುನಾವಣೆಗಳನ್ನು ಪರಿಣಾಮಕಾರಿಯನ್ನಾಗಿ ಮತ್ತು ಅರ್ಥಪೂರ್ಣವಾಗಿ ಮಾಡಲು ಚುನಾವಣಾ ವೆಚ್ಚಗಳಿಗೆ ಸಂಬಂಧಿಸಿದಂತೆ, ಕಾನೂನಿನ ಮೇಲೆ ಹೇಳಿರುವ ಉಪಬಂಧಗಳಿಗೆ ಹಲವು ತಿದ್ದುಪಡಿಗಳನ್ನು ತರಲು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಆದಾಗ್ಯೂ, ಆಯೋಗವು ಮಾಡಿರುವ ಶಿಫಾರಸ್ಸುಗಳಿಗೆ ಅನುಗುಣವಾಗಿ ಕಾನೂನನ್ನು ತಿದ್ದುಪಡಿ ಮಾಡುವುದಿಲ್ಲ.

18.32.6. ಈ ನಡುವೇ ಆಯೋಗವು, ಸ್ವಲ್ಪವೇ ತಪ್ಪೆಂದು ಮತ್ತು ಪ್ರಸ್ತುತದಲ್ಲಿ ಅದು ಇರುವಂತೆಯೇ ಕಾನೂನಿನ ಪರಿಮಿತಿಗಳ ಒಳಗೆ ಸಾಧ್ಯವಿದ್ದಷ್ಟು ನೈಜತೆಗೆ ಹತ್ತಿರ ಇದೆಯೆಂದು ಅಭ್ಯರ್ಥಿಗಳು ಸಲ್ಲಿಸಿರುವ ಚುನಾವಣಾ ವೆಚ್ಚದ ಲೆಕ್ಕಗಳನ್ನು ಕಲ್ಪಿಸುವ ಮಾರ್ಗೋಪಾಯಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದೆ.

### 18.33. ಚುನಾವಣಾ ವೀಕ್ಷಕರ ನೇಮಕಾತಿ:

18.33.1. ಆಯೋಗವು ನೇಮಕ ಮಾಡಿದ ವೀಕ್ಷಕರು, ಮಾದರಿ ಚುನಾವಣೆ ನೀತಿ ಸಂಹಿತೆಯ ಉಪಬಂಧಗಳು ಪಾಲಿಸಲಾಗಿದೆಯೇ ಎಂಬುದನ್ನು ನಿಕಟವಾಗಿ ಗಮನಿಸುವುದು ಮತ್ತು ಅಭ್ಯರ್ಥಿಯು ಭರಿಸಿದ ವೆಚ್ಚವನ್ನು ಸಹ ಮೌಲ್ಯಮಾಪನ ಮಾಡುವರು ಹಾಗೂ ಮತದಾರರ ಮನಸ್ಸನ್ನು ಓಲೈಸಲು ಬಳಸುವ ಹಣ ಬಲದ ದುರ್ಬಳಕೆಯ ನಿದರ್ಶನಗಳನ್ನು ಆಯೋಗಕ್ಕೆ ವರದಿ ಮಾಡುವರು. ಈ ವೀಕ್ಷಕರು ನೀಡಿದ ವರದಿಯ ಹಿನ್ನಲೆಯಲ್ಲಿ ಆಯೋಗವು ಚುನಾವಣಾ ವೆಚ್ಚದ ಪ್ರಮಾಣವನ್ನು ಸಹ ನಿರ್ಧರಿಸುವರು.

### 18.34 ಚುನಾವಣೆಗೆ ಸ್ಪರ್ಧಿಸಿರುವ ಯಾರೇ ಅಭ್ಯರ್ಥಿಗೆ ಲೆಕ್ಕವನ್ನು ಸಲ್ಲಿಕೆಯಿಂದ ವಿನಾಯಿತಿ ನೀಡುವಂತಿಲ್ಲ

18.34.1. ಆಯೋಗವು ನೇಮಿಸಿದ ವೀಕ್ಷಕರು ಮಾದರಿ ನೀತಿ ಸಂಹಿತೆಯ ಉಪಬಂಧಗಳನ್ನು ಅನುಸರಿಸಲಾಗುತ್ತಿದೆಯೇ ಎಂಬುದನ್ನು ನಿಕಟವಾಗಿ ಗಮನಿಸುವರು ಮತ್ತು ಪ್ರತಿಯೊಬ್ಬ ಅಭ್ಯರ್ಥಿಯು ಮಾಡಿದ ವೆಚ್ಚಗಳನ್ನು ಸಹ ವಿಶ್ಲೇಷಿಸುವರು ಹಾಗೂ ಮತದಾರರನ್ನು ಪ್ರಚೋದಿಸುವುದಕ್ಕಾಗಿ ಹಣಬಲದ ದುರ್ಬಳಕೆ ಮಾಡಿಕೊಂಡಿರಬಹುದಾದ ಘಟನೆಗಳನ್ನು ಆಯೋಗಕ್ಕೆ ವರದಿ ಮಾಡುವರು. ಆಯೋಗವು ಈ ವೀಕ್ಷಕರು ನೀಡಿದ ವರದಿಯ ಹಿನ್ನೆಲೆಯಲ್ಲಿ ಚುನಾವಣಾ ವೆಚ್ಚದ ಪ್ರಮಾಣವನ್ನು ನಿರ್ಣಯಿಸುತ್ತದೆ.

**18.35. ಸುಸಂಗತ ಕಾನೂನು ಉಪಬಂಧಗಳು:**

18.35.1. ಪರಾಮರ್ಶನೆಯ ಅನುಕೂಲಕ್ಕಾಗಿ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರಲ್ಲಿ ಮತ್ತು ಚುನಾವಣೆ ನಡೆಸುವ ನಿಯಮಗಳು, 1961ರಲ್ಲಿ ಇರುವ ಚುನಾವಣಾ ವೆಚ್ಚಗಳ ಲೆಕ್ಕಕ್ಕೆ ಸಂಬಂಧಪಟ್ಟ ಸುಸಂಗತ ಉಪಬಂಧಗಳನ್ನು **ಪರಿಶಿಷ್ಟ–38** ರಲ್ಲಿ ನೀಡಲಾಗಿದೆ.

# 19. ಇತರೆ

## 19.1. ಅನಕ್ಷರಸ್ಥ ವ್ಯಕ್ತಿಗಳಿಂದ ಸಹಿ ಪಡೆಯುವುದು:

19.1.1. ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 2ನೇ ನಿಯಮದ (2)(ಎ) ಉಪ–ನಿಯಮಲ್ಲಿ ತಿಳಿಸಿರುವಂತೆ ತನ್ನ ಹೆಸರನ್ನು ಬರೆಯಲು ಅಸಮರ್ಥನಾದ ವ್ಯಕ್ತಿಯು, ಈ ನಿಯಮಗಳಲ್ಲಿ ವ್ಯಕ್ತವಾಗಿ ಉಪಬಂಧಿಸಿರುವುದನ್ನು ಹೊರತುಪಡಿಸಿ, ಆತನು, ಚುನಾವಣಾ ಆಯೋಗವು ಇದರ ಬಗ್ಗೆ ನಿದಿಷ್ಟಪಡಿಸಬಹುದಾದಂಥ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿ ಅಥವಾ ಇತರ ಅಧಿಕಾರಿಗಳ ಸಮ್ಮುಖದಲ್ಲಿ ಲಿಖಿತ ಪತ್ರ ಅಥವಾ ಇತರ ಪತ್ರದ ಮೇಲೆ ಗುರುತನ್ನು ಮಾಡಿದ್ದರೆ, ಅಂಥ ಲಿಖಿತ ಪತ್ರ ಅಥವಾ ಪತ್ರದಲ್ಲಿ ಸಹಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು. ಆಯೋಗವು, ಯಾರ ಸಮ್ಮುಖದಲ್ಲಿ ಗುರುತನ್ನು ಹಾಕಬಹುದಾಗಿದೆಯೋ, ಆ ಉಪ–ವಿಭಾಗಾಧಿಕಾರಿ ಶ್ರೇಣಿಗಿಂತ ಕಡಿಮೆಯಲ್ಲದ ಅಧಿಕಾರಿಯಾಗಿ ಆಡಳಿತ ಸೇವೆಗೆ ಸೇರಿರುವ ಪ್ರತಿಯೊಬ್ಬ ಅಧಿಕಾರಿಯನ್ನು ತದನುಸಾರವಾಗಿ ನಿರ್ದಿಷ್ಟಪಡಿಸುತ್ತದೆ.

## 19.2. ಕೈ ಬರಹದ, ಬೆರಳಚ್ಚಿನ, ಕೊರೆಯಚ್ಚಿನ ಅಥವಾ ಖಾಸಗಿಯಾಗಿ ಮುದ್ರಿತವಾದ ನಮೂನೆಗಳು

19.2.1. ಮೇಲೆ ನಮೂದಿಸಿರುವ ನಿಯಮಗಳಲ್ಲಿನ 2(1)(ಜೆ) ನಿಯಮವು “ನಮೂನೆ” ಬಗ್ಗೆ ಪರಿಭಾಷಿಸುತ್ತದೆ. ರಾಜ್ಯದ ಯಾವುದೇ ಚುನಾವಣೆಗೆ ಸಂಬಂಧಿಸಿದ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ಕ್ಕೆ ಸೇರಿಸಿದ ನಮೂನೆಯು, ಆ ರಾಜ್ಯದ ಅಧಿಕೃತ ಉದ್ದೇಶಗಳಿಗಾಗಿ ಬಳಸಿದ ಯಾವುದೇ ಭಾಷೆಯಲ್ಲಿ ಅದರ ಭಾಷಾಂತರವನ್ನು ಒಳಗೊಂಡಿರುತ್ತದೆ. ನಿಯಮಗಳ ಮೇರೆಗೆ ನಿಯಮಿಸಲಾಗಿರುವ ನಮೂನೆಯನ್ನು ಅಭ್ಯರ್ಥಿಯು ಬಳಸುವಾಗ, ಆ ನಮೂನೆಯನ್ನು ಅವರು ಅಳವಡಿಸಿಕೊಳ್ಳಲೇಬೇಕು. ರಾಜ್ಯವು ನಮೂನೆಗಳನ್ನು ಮುದ್ರಿಸಿದ್ದರೆ ಅವರು ಅಂಥ ಮುದ್ರಿತ ನಮೂನೆಯನ್ನು ಪಡೆಯತಕ್ಕದ್ದು. ಅದು ಲಭ್ಯವಿಲ್ಲದಿದ್ದರೆ, ಖಾಸಗಿಯಾಗಿ ಮುದ್ರಿಸಿರುವ, ಕೊರೆಯಚ್ಚಿನ, ಬೆರಳಚ್ಚು ಮಾಡಿದ ಅಥವಾ ಕೈ ಬರಹದಲ್ಲಿರುವ ನಮೂನೆಯನ್ನು ಸಹ ಅವರು ಬಳಸಬಹುದಾಗಿದ್ದು, ಅದನ್ನು ಅಂಗೀಕರಿಸಲಾಗುತ್ತದೆ. ಆದಾಗ್ಯೂ, ಅವರು ಬಳಸಿದ ನಮೂನೆಯಲ್ಲಿ, ನಿಯಮಿಸಲಾದ ನಮೂನೆಯ ಪಠ್ಯವನ್ನು ಸರಿಯಾಗಿ ಪ್ರತಿ ಮಾಡಲಾಗಿದೆ ಎಂದು ಹಾಗೂ ಇತರ ಯಾವುದೇ ವ್ಯತ್ಯಾಸ ಇಲ್ಲವೆಂದು ಖಚಿತಪಡಿಸಲು ನೀವು ಜಾಗರೂಕರಾಗಿರತಕ್ಕದ್ದು.

## 19.3. ಚುನಾವಣಾ ಕಾಗದಪತ್ರಗಳ ತಯಾರಿಕೆ ಹಾಗೂ ತಪಾಸಣೆ:

19.3.1 ಚುನಾವಣೆಗೆ ಸಂಬಂಧಿಸಿರುವ ಎಲ್ಲಾ ಪತ್ರಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿಡುವುದು, ಮತಕ್ಷೇತ್ರದ ಅಧಿಕಾರ ವ್ಯಾಪ್ತಿಯಲ್ಲಿ ಇರುವ ಜಿಲ್ಲಾ ಚುನಾವಣಾ ಅಧಿಕಾರಿ (ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿ)ಯ ಕರ್ತವ್ಯವಾಗಿರುತ್ತದೆ ಎಂದು ಚುನಾವಣೆಗಳನ್ನು ನಡೆಸುವ ನಿಯಮಗಳ 1961ರ 92ನೇ ನಿಯಮವು ಉಪಬಂಧಿಸುತ್ತದೆ.

19.3.2 ಸದರಿ ನಿಯಮಗಳ 93(1) ನೇ ನಿಯಮದ ಮೇರೆಗೆ, ಮೊಹರು ಮಾಡಿದ ಮತಯಂತ್ರಗಳು, ಮೊಹರು ಮಾಡಿದ ಮತದಾರರ ರಿಜಿಸ್ಟರ್‌ಗಳ ಪಾಕೆಟ್‌ಗಳು, ಬಳಸಿರದ ಮತಪತ್ರಗಳು ಹಾಗೂ ಅದಕ್ಕೆ ಸೇರಿಸಿರುವ ಪಕ್ಕ ಪ್ರತಿಗಳನ್ನು ಒಳಗೊಂಡಿರುವ, ಬಳಸಿರುವ ಮತಪತ್ರಗಳು (ಸಿಂಧುವಾದುದಾಗಿರಲಿ, ಟೆಂಡರ್ಡ್ ಆಗಿರಲಿ ಅಥವಾ ತಿರಸ್ಕೃತವಾಗಿರಲಿ) ಬಳಸಿರುವ ಮತಪತ್ರಗಳ ಪಕ್ಕಾ ಪ್ರತಿಗಳ ಪ್ಯಾಕೆಟ್‌ಗಳು, ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಗಳು, ಅಂಚೆಯ ಮೂಲಕ ಮತ ಹಾಕಲು ಹಕ್ಕುಳ್ಳ ಮತದಾರರು ಮಾಡಿದ ಘೋಷಣಾ ಪತ್ರಗಳು ಮತ್ತು ಅವರ ಸಹಿಯನ್ನು ದೃಢೀಕರಿಸಿರುವ ಪತ್ರಗಳನ್ನು ತೆರೆಯತಕ್ಕದ್ದಲ್ಲ ಹಾಗೂ ಅದರ ಒಳಾಂಶಗಳನ್ನು ಸಕ್ಷಮ ನ್ಯಾಯಾಲಯದ ಆದೇಶದ ಮೇರೆಗೆ ಹೊರತುಪಡಿಸಿ, ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರವು ಪರಿಶೀಲಿಸತಕ್ಕದ್ದಲ್ಲ ಅಥವಾ ಅವರ ಮುಂದೆ ಹಾಜರುಪಡಿಸತಕ್ಕದ್ದಲ್ಲ.

19.3.3 ಆಯೋಗದ ಸೂಚನೆಗಳ ಮೇರೆಗೆ ಮತದಾನ ಕೇಂದ್ರಗಳ ಒಳಗೆ ನೀಡಲಾಗುವ ಮತಚೀಟಿಗಳ ಮೋಹರು ಮಾಡಲಾದ ಪ್ಯಾಕೆಟ್‌ಗಳನ್ನು ಸಹಾ ಅದೇ ಪ್ರಕಾರವಾಗಿ ಆದೇಶ ಅಥವಾ ಸಕ್ಷಮ ನ್ಯಾಯಾಲಯದ ಮೇರೆಗೆ ಹೊರತುಪಡಿಸಿ, ಬಹಿರಂಗ ಪರಿಶೀಲನೆಗೆ ಸಹ ತೆರೆಯತಕ್ಕದಲ್ಲ ಎಂಬುದನ್ನು ಆಯೋಗ ನಿರ್ದೇಶಿಸಿದೆ.

19.3.4 ಇತರ ಎಲ್ಲಾ ಚುನಾವಣಾ ಪತ್ರಗಳನ್ನು ಪರಿಶೀಲಿಸತಕ್ಕದ್ದು ಹಾಗೂ ಅಗತ್ಯ ಶುಲ್ಕವನ್ನು ಸಂದಾಯ ಮಾಡುವುದರ ಮೂಲಕ ಯಾರೇ ವ್ಯಕ್ತಿಯು ಅದರ ಪ್ರಮಾಣಿತ ಪ್ರತಿಗಳನ್ನು ಪಡೆಯತಕ್ಕದ್ದು.

## 19.4. ಇನ್ನಿತರ ಚುನಾವಣಾ ಕಾಗದಪತ್ರಗಳ ತಯಾರಿಕೆ ಹಾಗೂ ತಪಾಸಣೆ

19.4.1 ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 93ನೇ ನಿಯಮದ (2)ನೇ ಉಪ–ನಿಯಮವು, ಅದರ (1)ನೇ ಉಪ–ನಿಯಮದಲ್ಲಿ ಉಲ್ಲೇಖಿಸಲಾದವುಗಳನ್ನು ಹೊರತುಪಡಿಸಿ, ಚುನಾವಣೆಗೆ ಸಂಬಂಧಿಸಿರುವ ಎಲ್ಲಾ ಪತ್ರಗಳನ್ನು ಅಂಥ ಷರತ್ತುಗಳಿಗೆ ಒಳಪಟ್ಟು ಸಾರ್ವಜನಿಕ

ಪರಿಶೀಲನೆಗೆ ಮುಕ್ತವಾಗಿರತಕ್ಕದ್ದೆಂದು ಮತ್ತು ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಬಹಿರಂಗ ಪರಿಶೀಲನೆಗೆ ಮತ್ತು ಅಂಥ ಶುಲ್ಕ ಯಾವುದಾದರೂ ಅದನ್ನು ಸಂದಾಯ ಮಾಡಬೇಕೆಂದು ಉಪಬಂಧ ಕಲ್ಪಿಸಿದೆ.

19.4.2 ಭಾರತೀಯ ಸಾಕ್ಷ್ಯ ಅಧಿನಿಯಮ, 1972ರ 76ನೇ ಪ್ರಕರಣದೊಂದಿಗೆ ಓದಲಾದ ಸದರಿ ಉಪ– ನಿಯಮದ ಅನುಸರಣೆಯಲ್ಲಿ ಆಯೋಗವು ಈ ಮುಂದಿನ ನಿರ್ದೇಶನಗಳನ್ನು ಹೊರಡಿಸಿದೆ:

**(1) ತಪಾಸಣೆ**

(ಎ) ಸದರಿ ದಾಖಲೆಗಳ (ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಹೊರತುಪಡಿಸಿ) ಪರಿಶೀಲನೆಗಾಗಿ ಪ್ರತಿಯೊಂದು ಅರ್ಜಿಯನ್ನು ಲಿಖಿತದಲ್ಲಿ ರಚಿಸತಕ್ಕದ್ದು ಹಾಗೂ ಯಾವುದರ ಪರಿಶೀಲನೆಯು ಅಗತ್ಯವಾಗಿದೆಯೋ ಆ ದಾಖಲೆಗೆ ಸಂಬಂಧಿಸಿರುವ ವಿವರಣೆಗಳನ್ನು ಒಳಗೊಂಡಿರತಕ್ಕದ್ದು.

(ಬಿ) ಪರಿಶೀಲನೆಯ ಅಥವಾ ಅದರ ಭಾಗದ ಪ್ರತಿ ಗಂಟೆಗೆ 10/– ರೂ. ಆಗಿರತಕ್ಕ ಸಂದರ್ಭದಲ್ಲಿ, ಪರಿಶೀಲನೆಯು ಶೀಘ್ರವಾಗಿ ಆಗಬೇಕೆಂದು ಅಗತ್ಯಪಡಿಸಿದ ಹೊರತು ದಾಖಲೆಗಳ ಪರಿಶೀಲನೆಯು, ಪರಿಶೀಲನೆ ಅಥವಾ ಅದರ ಭಾಗದ ಪ್ರತಿ ಗಂಟೆಗೆ 5/– ರೂ ಶುಲ್ಕದ ಸಂದಾಯದ ಆಧಾರದ ಮೇಲೆ ಹಾಗೆಯೇ ಕೋರುವ ಯಾರೇ ವ್ಯಕ್ತಿಗೆ ಅವಕಾಶಮಾಡಿಕೊಡತಕ್ಕದ್ದು.

(ಸಿ) ಸಾಮಾನ್ಯ ಅರ್ಜಿಯ ಮೇಲಿನ ಪರಿಶೀಲನೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಿದ ಅಥವಾ ತರುವಾಯದ ದಿನದ ಈ ಮುಂದಿನ ದಿನಾಂಕದ ದಿನದಂದು ಅವಕಾಶ ಮಾಡಿಕೊಡತಕ್ಕದ್ದು ಹಾಗೂ ತುರ್ತು ಅರ್ಜಿಯ ಪರಿಶೀಲನೆಗೆ ಅದೇ ದಿನದಂದು ಅವಕಾಶ ಮಾಡಿಕೊಡತಕ್ಕದ್ದು. ಚುನಾವಣಾ ವೆಚ್ಚಗಳ ಲೆಕ್ಕಗಳ ತಪಾಸಣೆಗಾಗಿನ ಮತ್ತು ಅವುಗಳ ಪ್ರತಿಗಳಿಗಾಗಿನ ಸೂಚನೆಗಳನ್ನು ಹಿಂದಿನ ಅಧ್ಯಾಯದಲ್ಲಿ ನೀಡಲಾಗಿದೆ.

**(2) ದೃಢೀಕೃತ ಪ್ರತಿ** – ಸದರಿ ಯಾವುದೇ ದಾಖಲೆಗಳ ದೃಢೀಕರಿಸಿದ ಪ್ರತಿಗಳನ್ನು (ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಹೊರತುಪಡಿಸಿ) ಕಂದಾಯ ಇಲಾಖೆಯ ಆದೇಶ ಪತ್ರದ ಪ್ರತಿಗೆ ವಿಧಿಸಿರುವ ದರದಷ್ಟೇ ಶುಲ್ಕವನ್ನು ಸಂದಾಯ ಮಾಡಿ ಕೋರಿರುವ ಯಾರೇ ವ್ಯಕ್ತಿಗೆ ನೀಡತಕ್ಕದ್ದು. ಅರ್ಜಿಗೆ ಸಂಬಂಧಿಸಿ ಅನುಸರಿಸಬೇಕಾದ ಕಾರ್ಯವಿಧಾನವನ್ನು ರೆವಿನ್ಯೂ

ಅಧಿಕಾರಿಯು ನಿರ್ವಹಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಅದೇ ರೀತಿಯ ಅರ್ಜಿಗೆ ಆ ಕಾರ್ಯವಿಧಾನವೇ ಆಗಿರತಕ್ಕದ್ದು.

(3) ಅರ್ಜಿಯು, ದಾಖಲೆಗಳ ದೃಢೀಕೃತ ಪ್ರತಿಗಳನ್ನು ಪರಿಶೀಲಿಸುವುದಕ್ಕಾಗಿ ಅಥವಾ ನೀಡುವುದಕ್ಕಾಗಿ ಅರ್ಜಿದಾರನ ಹಕ್ಕನ್ನು ದೃಢೀಕರಿಸತಕ್ಕದ್ದು ಹಾಗೂ ಆ ಉದ್ದೇಶವು, ಅರ್ಜಿದಾರನು ಅಂಥ ದಾಖಲೆ ಅಥವಾ ದಾಖಲೆಗಳಲ್ಲಿ ನೇರ ಮತ್ತು ವಾಸ್ತವ ಹಿತಾಸಕ್ತಿಯನ್ನು ಹಾಗೂ ಅಂಥ ಹಿತಾಸಕ್ತಿಯ ಸ್ವರೂಪವನ್ನು ಹೊಂದಿರುವನೆಂದು ಸ್ಪಷ್ಟವಾಗಿ ತಿಳಿಯಪಡಿಸತಕ್ಕದ್ದು.

(4) ಅಧಿಕೃತ ಉದ್ದೇಶಕ್ಕಾಗಿ ಪರಿಶೀಲನೆ ಮಾಡುವಾಗ ಅಥವಾ ದಾಖಲೆಗಳ ದೃಢೀಕೃತ ಪ್ರತಿಯನ್ನು ಅಗತ್ಯಪಡಿಸುವಾಗ ಶುಲ್ಕವನ್ನು ವಿಧಿಸತಕ್ಕದ್ದಲ್ಲ.

## 19.5. ಫಲಿತಾಂಶ ಪತ್ರಗಳು ಹಾಗೂ ಚುನಾವಣಾ ವಿವರ ಪಟ್ಟಿಕೆಗಳ ಪ್ರತಿಗಳನ್ನು ಒದಗಿಸುವುದು

19.5.1. ನೀವು ಹಾಗೆ ಅಪೇಕ್ಷೆಪಟ್ಟರೆ, ನಮೂನೆ–20 ರಲ್ಲಿ ಫಲಿತಾಂಶ ಪತ್ರದ ಪ್ರತಿಗಳನ್ನು, ಇತರ ಚುನಾವಣಾ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಒದಗಿಸುವುದಕ್ಕಾಗಿ ವಿಧಿಸಲಾದ ಶುಲ್ಕ ಸಂದಾಯ ಮಾಡಿ ನೀವು ಪಡೆಯಬಹುದಾಗಿದೆ.

19.5.2 ನಮೂನೆ 21–ಇ ಯಲ್ಲಿ ಚುನಾವಣಾ ವಿವರ ಪಟ್ಟಿಕೆಯ ಪ್ರತಿಗಳನ್ನು, ರಿಟರ್ನಿಂಗ್ ಅಧಿಕಾರಿಯಿಂದ ಜಿಲ್ಲಾ ಚುನಾವಣಾ ಅಧಿಕಾರಿಯಿಂದ, ಮುಖ್ಯ ಚುನಾವಣಾ ಅಧಿಕಾರಿ ಅಥವಾ ಚುನಾವಣಾ ಆಯೋಗದಿಂದ, ಚುನಾವಣೆಗಳನ್ನು ನಡೆಸುವ ನಿಯಮಗಳು 1961ರ ನಿಯಮ 93ರ ಉಪನಿಯಮ (3)ರ ಅಡಿಯಲ್ಲಿ ಪ್ರತಿಯೊಂದು ಪ್ರತಿಗೆ 2/– ರೂ. ಗಳನ್ನು ಸಂದಾಯ ಮಾಡುವ ಮೂಲಕ ನೀವು ಸಹ ಪಡೆಯಬಹುದು.

## 19.6. ಠೇವಣಿಯ ಮರುಪಾವತಿಗಾಗಿ ನಮೂನೆ

19.6.1. ಅಭ್ಯರ್ಥಿಗಳು ಹಾಗೂ ರಿಟರ್ನಿಂಗ್ ಅಧಿಕಾರಿಗಳ ಅನುಕೂಲತೆಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ನಮೂನೆಗಳು: ಭದ್ರತಾ ಠೇವಣಿಗಾಗಿ ಅರ್ಜಿಗಳ ನಮೂನೆಗಳನ್ನು ಪರಿಶಿಷ್ಟ –39 ರಲ್ಲಿ ನೀಡಲಾಗಿದೆ. ಮರುಪಾವತಿಗಾಗಿ ಪ್ರತಿಯೊಂದು ಅರ್ಜಿಯನ್ನು ನೀವೇ ಸಲ್ಲಿಸತಕ್ಕದ್ದು ಅಥವಾ ಸೂಕ್ತವೆನಿಸಬಹುದಾದಂತೆ ನಮೂನೆಗಳಲ್ಲಿ ನಿಮ್ಮ ಪರವಾಗಿ ಠೇವಣಿ ಇಟ್ಟಿರುವ ವ್ಯಕ್ತಿಯು ಪಡೆಯಬಹುದು. ಅಭ್ಯರ್ಥಿಯನ್ನು ಹೊರತುಪಡಿಸಿ, ವ್ಯಕ್ತಿಯು ಠೇವಣಿ ಮಾಡಿದಾಗ, ಅಭ್ಯರ್ಥಿಯು ಅರ್ಜಿಯನ್ನು ಪರಿಶೀಲಿಸತಕ್ಕದ್ದು. ಅಭ್ಯರ್ಥಿಯು ಮೃತಪಟ್ಟರೆ, ಆತನ

ಕಾನೂನುಸಮ್ಮತ ಪ್ರತಿನಿಧಿಯು, ಸೂಕ್ತ ನಮೂನೆಯಲ್ಲಿ ಮರುಪಾವತಿಗಾಗಿ ಅರ್ಜಿಯನ್ನು ಸಲ್ಲಿಸಬಹುದು.

**19.7. ಯಾವಾಗ ಮರುಪಾವತಿಸಬೇಕು?**

19.7.1. ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಕಂಡುಬರದಿದ್ದರೆ ಅಥವಾ ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ ಆತನು ಮೃತಪಟ್ಟರೆ, ಆತನು ಅಥವಾ ಆತನ ಪರವಾಗಿ ಇಡಲಾದ ಠೇವಣಿಯನ್ನು ಕಾರ್ಯಸಾಧ್ಯವಾದಷ್ಟು ಬೇಗನೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ ನಂತರ ಅಥವಾ ಸಂದರ್ಭಾನುಸಾರ ಆತನು ಮರಣ ಹೊಂದಿದ ನಂತರ ಮರುಪಾವತಿ ಮಾಡಲಾಗುತ್ತದೆ. ಕೆಲವು ಅಭ್ಯರ್ಥಿಗಳು ಎರಡನೆ ಮತ್ತು ಆ ನಂತರ ನಾಮಪತ್ರಗಳೊಂದಿಗೆ ಭದ್ರತಾ ಠೇವಣಿಗಳನ್ನು ಇಟ್ಟಿರಬಹುದು. ಸಾಧ್ಯವಾದಷ್ಟು ಮಟ್ಟಿಗೆ ಅಂಥ ಎರಡನೆ ಮತ್ತು ಆ ನಂತರದ ಠೇವಣಿಗಳನ್ನು ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ ನಂತರ ಹಿಂದಿರುಗಿಸಬೇಕು. ಎಲ್ಲಾ ಇತರ ಸಂದರ್ಭಗಳಲ್ಲಿ ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ನಂತರ, ಕಾರ್ಯಸಾಧ್ಯವಾದಷ್ಟು ಬೇಗನೆ ಠೇವಣಿಯನ್ನು ಮರುಪಾವತಿಸಲಾಗುತ್ತದೆ.

**19.8. ಒಂದು ಮತಕ್ಷೇತ್ರದಲ್ಲಿ ಮಾತ್ರ ಹಿಂದಿರುಗಿಸಬಹುದಾದ ಠೇವಣಿ:**

19.8.1 ಅಭ್ಯರ್ಥಿಯು, ಒಂದಕ್ಕಿಂತ ಹೆಚ್ಚಿನ ಲೋಕಸಭಾ ಅಥವಾ ವಿಧಾನಸಭಾ ಕ್ಷೇತ್ರದಲ್ಲಿ ಸಂಸತ್ತಿಗೆ ಅಥವಾ ರಾಜ್ಯ ವಿಧಾನಮಂಡಲಕ್ಕೆ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಯಾಗಿದ್ದರೆ, ಆತನು ಅಥವಾ ಆತನ ಪರವಾಗಿ ಇಡಲಾದ ಒಂದಕ್ಕಿಂತ ಹೆಚ್ಚಿನ ಠೇವಣಿಯ ಮರುಪಾವತಿಯನ್ನು ಪಡೆಯಲು ಸಾಧ್ಯವಿಲ್ಲ ಎಂಬುದನ್ನು ಗಮನಿಸುವುದು. ಆತನು ಅಥವಾ ಆತನ ಪರವಾಗಿ ಇಡಲಾದ ಇತರ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು.

19.8.2. ಲೋಕಸಭೆಗೆ ಹಾಗೂ ರಾಜ್ಯ ವಿಧಾನಸಭೆಗೆ ಏಕಕಾಲದಲ್ಲಿ ನಡೆಯುವ ಚುನಾವಣೆಗೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಯು ಅಂಥ ಮರುಪಾವತಿಗೆ ಹಕ್ಕನ್ನು ಹೊಂದಿದ್ದರೆ, ಪ್ರತ್ಯೇಕವಾದ ಎರಡು ಚುನಾವಣೆಗಳಂತೆ ಅಂಥ ಎರಡು ಮತಕ್ಷೇತ್ರಗಳಲ್ಲಿ ಇಟ್ಟಿರುವ ಠೇವಣಿಗಳು ಮರುಪಾವತಿಗೆ ಹಕ್ಕುಳ್ಳವನಾಗಿರುವನು.

**19.9. ಠೇವಣಿಯ ಮರುಪಾವತಿಗಾಗಿ ಷರತ್ತಗಳು:**

19.9.1. ಈ ಮುಂದಿನ ಷರತ್ತುಗಳನ್ನು ಪೂರೈಸಿದ ನಂತರವೇ ಅಭ್ಯರ್ಥಿ ಇಟ್ಟಿರುವ ಠೇವಣಿಯನ್ನು ಹಿಂದಿರುಗಿಸತಕ್ಕದ್ದು:–

i. ಅಭ್ಯರ್ಥಿಯ ಹೆಸರನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ತೋರಿಸದಿದ್ದಲ್ಲಿ ಅಂದರೆ, ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಲಾಗಿದ್ದರೆ, ಅಥವಾ ನಾಮಪತ್ರವು ಅಂಗೀಕಾರಗೊಂಡ ತರುವಾಯ ಅಭ್ಯರ್ಥಿ ತನ್ನ ಉಮೇದುವಾರಿಕೆಯನ್ನು ಹಿಂಪಡೆದಿದ್ದರೆ.

ii. ಮತದಾನ ಪ್ರಾರಂಭವಾಗುವ ಮೊದಲೇ ಆತ ಮೃತಪಟ್ಟಿರುವುದು; ಅಥವಾ

iii. ಆತ ಚುನಾಯಿತನಾಗಿರುವುದು; ಅಥವಾ

iv. ಆತ ಚುನಾಯಿತನಾಗದಿದ್ದರೂ ಚುನಾವಣೆಯಲ್ಲಿ ಎಲ್ಲ ಅಭ್ಯರ್ಥಿಗಳ ಪರವಾಗಿ ಚಲಾವಣೆಯಾಗಿರುವ ಸಿಂಧುವಾದ ಒಟ್ಟು ಮತಗಳ ಪೈಕಿ $^{1}/_{6}$ಭಾಗಕ್ಕಿಂತ ಹೆಚ್ಚು ಮತಗಳನ್ನು ಪಡೆದಿದ್ದಲ್ಲಿ.

**ವಿ.ಸೂ.** (i) ಅಭ್ಯರ್ಥಿಯು, ಚಲಾವಣೆಯಾದ ಸಿಂಧುವಾದ ಮತಗಳ ಸಂಖ್ಯೆಗೆ ಖಚಿತವಾಗಿ ಆರನೇ ಒಂದು ಭಾಗದಷ್ಟು ಮತಗಳನ್ನು ಪಡೆಯದಿದ್ದರೆ, ಠೇವಣಿಯನ್ನು ಮರುಪಾವತಿ ಮಾಡತಕ್ಕದ್ದಲ್ಲ.

(ii) ಅಭ್ಯರ್ಥಿಯು ಚುನಾಯಿತನಾಗಿದ್ದರೆ, ಸಿಂಧುವಾದ ಮತಗಳ ಆರನೇ ಒಂದು ಭಾಗಕ್ಕಿಂತ ಹೆಚ್ಚು ಮತ ಪಡೆಯದಿದ್ದರೂ ಕೂಡ ಠೇವಣಿಯನ್ನು ಮರುಪಾವತಿಸತಕ್ಕದ್ದು.

**19.10. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮರುಪಾವತಿ**

ಅಭ್ಯರ್ಥಿಯು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿರುವ ಅಭ್ಯರ್ಥಿಯಾಗಿದ್ದು, ಸಾರ್ವತ್ರಿಕ ಮತಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದರೆ, 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ 34ನೇ ಪ್ರಕರಣದ ಮೇರೆಗೆ ಸಂಸದೀಯ ಮತಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿ 25,000/– ರೂಪಾಯಿಗಳಿಗೆ ಬದಲಾಗಿ 12,500/– ರೂ.ಗಳನ್ನು ಹಾಗೂ ವಿಧಾನಸಭೆ ಅಥವಾ ವಿಧಾನ ಸಭಾ ಕ್ಷೇತ್ರ ಚುನಾವಣೆಗೆ ಸ್ಪರ್ಧಿಸಿರುವ ಸಂದರ್ಭದಲ್ಲಿ 10,000/– ರೂಪಾಯಿಗಳಿಗೆ ಬದಲಾಗಿ 5000/– ರೂಪಾಯಿಗಳ ಠೇವಣಿಯನ್ನು ಇಡಲು ಅಗತ್ಯಪಡಿಸಲಾಗಿದೆ. ತಪ್ಪು ಗ್ರಹಿಯಿಂದಾಗಿ ಅಥವಾ ಅನ್ಯಥಾ, ಮೇಲೆ

ತಿಳಿಸಲಾದಂತೆ, ಠೇವಣಿ ಮಾಡಬೇಕೆಂದು ಸಂದರ್ಭಾನುಸಾರ ವಾಸ್ತವವಾಗಿ ಅಗತ್ಯಪಡಿಸಿರುವುದಕ್ಕೆ ಬದಲಾಗಿ, 25,000/– ರೂಪಾಯಿಗಳು ಅಥವಾ 10,000/– ರೂಪಾಯಿಗಳ ಪೂರ್ತಿ ಹಣವನ್ನು ನೀವು ಠೇವಣಿ ಮಾಡಿದ್ದರೆ, ನೀವು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡದ ಸದಸ್ಯರೆಂದು ರಿಟರ್ನಿಂಗ್ ಅಧಿಕಾರಿಯು ನಿಮ್ಮನ್ನು ಮನವರಿಕೆ ಮಾಡಿರುವುದಕ್ಕೆ ಒಳಪಟ್ಟು ವಾಸ್ತವವಾಗಿ ಠೇವಣಿ ಮಾಡಲಾದ ಹೆಚ್ಚುವರಿ ಹಣದ ಮರುಪಾವತಿಯನ್ನು ಯಾವಾಗಲೂ ಪಡೆಯಲು ನೀವು ಹಕ್ಕುಳ್ಳವರಾಗಿರುತ್ತೀರಿ.

## 19.11. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಷೇಧ

19.11.1 ಅಭ್ಯರ್ಥಿಯ ಅನುಕೂಲತೆಗಾಗಿ, ಭಾರತ ಸಂವಿಧಾನದಲ್ಲಿ ಒಳಗೊಂಡಿರುವ ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯದ ಹಸ್ತಕ್ಷೇಪಕ್ಕೆ ಸಂಬಂಧಿಸಿರುವ ಸಂಬಂಧಪಟ್ಟ ಉಪಬಂಧಗಳನ್ನು ಕೆಳಗೆ ಯಥಾವತ್ತಾಗಿ ನಿರೂಪಿಸಿದೆ:

"329. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಷೇಧ:–

ಈ ಸಂವಿಧಾನದಲ್ಲಿ ಏನೇ ಒಳಗೊಂಡಿದ್ದಾಗ್ಯೂ,

(ಎ) ಮತಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಅಥವಾ ಅಂಥ ಮತಕ್ಷೇತ್ರಗಳಿಗೆ ಸ್ಥಾನಗಳನ್ನು ಹಂಚುವುದಕ್ಕೆ ಸಂಬಂಧಪಟ್ಟಂತೆ, 327ನೇ ಅನುಚ್ಛೇದದ ಅಥವಾ 328ನೇ ಅನುಚ್ಛೇದದ ಮೇರೆಗೆ ಮಾಡಿದ ಅಥವಾ ಮಾಡಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾನೂನಿನ ಸಿಂಧುತ್ವವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(ಬಿ) ಸಂಸತ್ತು ಅಥವಾ ಸದನಗಳಿಗೆ ಅಥವಾ ರಾಜ್ಯದ ವಿಧಾನ ಮಂಡಲದ ಸದನಕ್ಕೆ ಅಥವಾ ಎರಡೂ ಸದನಗಳಿಗೆ ನಡೆದ ಯಾವುದೇ ಚುನಾವಣೆಯನ್ನು ಸಮುಚಿತ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ನಿಗದಿಪಡಿಸಬಹುದಾದಂಥ ಪ್ರಾಧಿಕಾರಿಗೆ ಹಾಜರುಪಡಿಸಿದ ಚುನಾವಣಾ ಅರ್ಜಿಯನ್ನು ಹೊರತುಪಡಿಸಿ ಮತ್ತು ನಿಗದಿಪಡಿಸಬಹುದಾದಂಥ ರೀತಿಯಲ್ಲಿ ಪ್ರಶ್ನಿಸತಕ್ಕದ್ದಲ್ಲ.

19.11.2 ಸರ್ವೋಚ್ಚ ನ್ಯಾಯಾಲಯವು, ಮೇಲಿನ ಸಂವಿಧಾನದ 329(ಬಿ) ಅನುಚ್ಛೇದದಲ್ಲಿ ಬಳಸಿರುವ 'ಚುನಾವಣೆ' ಎಂಬ ಪದವು, ಚುನಾವಣೆಯನ್ನು ನಡೆಸಲು ಅಧಿಸೂಚನೆಯನ್ನು ಹೊರಡಿಸುವುದರೊಂದಿಗೆ ಪ್ರಾರಂಭವಾಗುವ ಹಾಗೂ ಚುನಾವಣಾ ಫಲಿತಾಂಶವನ್ನು ಘೋಷಿಸುವಲ್ಲಿ ಅಂತ್ಯಗೊಳ್ಳುವ (ಮುಂದಿನ ಪ್ಯಾರಾವನ್ನು ನೋಡಿ.) ಪೊನುಸ್ವಾಮಿ–ವಿರುದ್ಧ–

ರಿಟರ್ನಿಂಗ್ ಅಧಿಕಾರಿ ನಮಕ್ಕಲ್ ಮತ್ತು ಇತರರು (ಎಐಆರ್ 1952 ಎಸ್‌ಸಿ 64), ಮೊಹಿಂದರ್ ಸಿಂಗ್ ಗಿಲ್ – ವಿರುದ್ಧ – ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರರು (ಎಐಆರ್ 1978 ಎಸ್‌ಸಿ 851, ಲಕ್ಷ್ಮಿ ಚರಣ್ ಸೇನ್ ಮತ್ತು ಇತರರು – ವಿರುದ್ಧ – ಭಾರತ ಸರ್ಕಾರ ಮತ್ತು ಇತರರು (ಎಐಆರ್ 1985 ಎಸ್‌ಸಿ 1233), ಚುನಾವಣಾ ಆಯೋಗ – ವಿರುದ್ಧ – ಶಿವಾಜಿ (ಎಐಆರ್ 1988 ಎಸ್‌ಸಿ 61) ಮೊದಲಾದ ಇಡೀ ಚುನಾವಣಾ ಕಾರ್ಯವಿಧಾನಗಳನ್ನು ಬಿಂಬಿಸುತ್ತದೆ ಎಂದು ತೀರ್ಮಾನಗಳ ಶ್ರೇಣಿಯನ್ನು ನಿರ್ಧರಿಸಿದೆ. ಮತದಾನದ ಹಂತದಲ್ಲಿನ ಯಾವುದೇ ಮಧ್ಯಂತರ ಹಂತದಲ್ಲಿ ಸಂವಿಧಾನದ ಅನುಚ್ಛೇದ 329(ಬಿ)ಯ ಮೇರೆಗೆ, ಅನಿವಾರ್ಯವಾಗಿ ಹಸ್ತಕ್ಷೇಪ ಮಾಡಲು ಅಥವಾ ನಿಷೇಧಿಸಲು ಎಲ್ಲಾ ನ್ಯಾಯಾಲಯಗಳು ಪ್ರತಿಷೇಧಿತವಾಗಿರುತ್ತವೆ.

19.11.3 ಚುನಾವಣೆಗೆ ಸಂಬಂಧಿಸಿದ ಎಲ್ಲಾ ಸಂದೇಹ ಹಾಗೂ ವಿವಾದಗಳನ್ನು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಭಾಗ–VI ರ ಉಪಬಂಧಗಳಿಗನುಸಾರವಾಗಿ ಚುನಾವಣೆಯಾದ ನಂತರ ಸಂಬಂಧಪಟ್ಟ ರಾಜ್ಯ/ ಕೇಂದ್ರಾಡಳಿತ ಪ್ರದೇಶದ ನ್ಯಾಯಾಲಯಕ್ಕೆ ಸಲ್ಲಿಸಿರುವ ಚುನಾವಣಾ ಅರ್ಜಿಯಲ್ಲಿ ಮಾತ್ರ ಪ್ರಶ್ನಿಸತಕ್ಕದ್ದು ಅಲ್ಲದೆ ಇನ್ನಾವುದೇ ರೀತಿಯಿಂದಲ್ಲ.

## 19.12 ಮಕ್ಕಳ ದುಡಿಮೆ

19.12.1 ಆಯೋಗವು ವಿವಿಧ ಚುನಾವಣಾ ಚಟುವಟಿಕೆಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದಕ್ಕೆ ಬಲವಾಗಿ ಪ್ರತಿರೋಧಿಸುತ್ತದೆ ಮತ್ತು ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಕಾರ್ಯದಲ್ಲಿ ಮಕ್ಕಳ ಹಕ್ಕಿನ ಉಲ್ಲಂಘನೆಯನ್ನು ಆಯೋಗವು ಅನುಮೋದಿಸುವುದಿಲ್ಲವೆಂದೂ ಹಾಗೂ ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದೆಂದು ನಿರ್ದೇಶನವನ್ನು ನೀಡಿದೆ.

## 20. ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು

**20.1 ಚುನಾವಣೆಗೆ ಯಾರು ಸ್ಪರ್ಧಿಸಬಹುದು?**

**ಪ್ರಶ್ನೆ. 1. ಲೋಕಸಭೆ ಅಥವಾ ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಕನಿಷ್ಠ ವಯಸ್ಸು ಎಷ್ಟು?**

ಉತ್ತರ. ನಾಮಪತ್ರಗಳ ಪರಿಶೀಲನೆ ಮಾಡುವ ದಿನಾಂಕದಂದು ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆ ಇರಬಾರದು.

[ಭಾರತ ಸಂವಿಧಾನದ ಅನುಚ್ಛೇದ 84(ಬಿ) ಹಾಗೂ ಜನತಾ ಪ್ರಾತಿನಿಧ್ಯ ಅಧಿನಿಯಮದ 1951ರ 36(2)ನೇ ಪ್ರಕರಣದೊಂದಿಗೆ ಓದಲಾದ ಸಂವಿಧಾನದ ಅನುಚ್ಛೇದ 173(ಬಿ) ಅನ್ನು ನೋಡಿ].

**ಪ್ರಶ್ನೆ.2 ನಾನು ಯಾವುದೇ ಮತಕ್ಷೇತ್ರದಲ್ಲಿ ಮತದಾರನಾಗಿ ನೋಂದಣಿ ಮಾಡಿಸಿರುವುದಿಲ್ಲ. ನಾನು ಚುನಾವಣೆಗೆ ಸ್ಪರ್ಧಿಸಬಹುದೆ?**

ಉತ್ತರ. ಇಲ್ಲ. ಅಭ್ಯರ್ಥಿಯು ಚುನಾವಣೆಗೆ ಸ್ಪರ್ಧಿಸಲು ಚಾಲ್ತಿಯಲ್ಲಿರುವ ಚುನಾವಣಾ ಮತದಾರರ ಪಟ್ಟಿಯಲ್ಲಿ ಮತದಾರನಾಗಿ ನೋಂದಣಿ ಮಾಡಬೇಕು. (ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 4(ಡಿ) ಮತ್ತು ಪ್ರಕರಣ 5(ಸಿ).

**ಪ್ರಶ್ನೆ.3. ನಾನು, ನಿರ್ದಿಷ್ಟ ರಾಜ್ಯದಲ್ಲಿ ಮತದಾರನಾಗಿ ನೋಂದಾಯಿತನಾಗಿದ್ದೇನೆ. ನಾನು ಆ ರಾಜ್ಯದ ಹೊರಗಡೆಯಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಬಹುದೆ?**

ಉತ್ತರ. ಹೌದು. ಅಸ್ಸಾಂ, ಲಕ್ಷದ್ವೀಪ ಹಾಗೂ ಸಿಕ್ಕಿಂನ ಸ್ವಾಯತ್ತ ಜಿಲ್ಲೆಗಳನ್ನು ಹೊರತುಪಡಿಸಿ, ದೇಶದಲ್ಲಿನ ಯಾವುದೇ ಮತಕ್ಷೇತ್ರದಿಂದ ಅಭ್ಯರ್ಥಿಯು ಚುನಾವಣೆಗೆ ಸ್ಪರ್ಧಿಸಬಹುದು.

(ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 4).

**ಪ್ರಶ್ನೆ.4 ವ್ಯಕ್ತಿಯು ನಿರ್ದಿಷ್ಟ ರಾಜ್ಯದಲ್ಲಿ ಅನುಸೂಚಿತ ಜಾತಿಯ ಸದಸ್ಯನಾಗಿದ್ದು, ಅನುಸೂಚಿತ ಜಾತಿಗಳಿಗಾಗಿ ಮೀಸಲಿರಿಸಿರುವ ಸ್ಥಾನದಿಂದ ಲೋಕಸಭೆಗಾಗಿ ಯಾವುದೇ ಇತರ ರಾಜ್ಯದಿಂದ ಚುನಾವಣೆಗೆ ಸ್ಪರ್ಧಿಸಬಹುದೆ?**

ಉತ್ತರ. ಹೌದು. ಅನುಸೂಚಿತ ಜಾತಿಗಳಿಗಾಗಿ ಮೀಸಲಿರಿಸಿದ ಸ್ಥಾನದಿಂದ ಯಾವುದೇ ಇತರ ರಾಜ್ಯದಿಂದ ಆತನು ಚುನಾವಣೆಗೆ ಸ್ಪರ್ಧಿಸಬಹುದು.

(ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 4).

**ಪ್ರಶ್ನೆ.5. ವ್ಯಕ್ತಿಯು ನಿರ್ದಿಷ್ಟ ರಾಜ್ಯದಲ್ಲಿ ಅನುಸೂಚಿತ ಪಂಗಡಗಳಿಗಾಗಿ ಮೀಸಲಿರಿಸಿರುವ ಸ್ಥಾನದಿಂದ ಲೋಕಸಭೆಗಾಗಿ ಯಾವುದೇ ಇತರ ರಾಜ್ಯದಿಂದ ಚುನಾವಣೆಗೆ ಸ್ಪರ್ಧಿಸಬಹುದೆ ?**

ಉತ್ತರ. ಹೌದು. ಲಕ್ಷದ್ವೀಪ ಪ್ರದೇಶವನ್ನು ಹೊರತುಪಡಿಸಿ, ಅಸ್ಸಾಂನ ಸ್ವಾಯತ್ತ ಜಿಲ್ಲೆಗಳನ್ನು ಹೊರತುಪಡಿಸಿ ಹಾಗೂ ಅಸ್ಸಾಂನ ಬುಡಕಟ್ಟು ಪ್ರದೇಶಗಳನ್ನು ಹೊರತುಪಡಿಸಿ ಅನುಸೂಚಿತ ಪಂಗಡಗಳಿಗಾಗಿ ಮೀಸಲಿರಿಸಿದ ಸ್ಥಾನಗಳಿಂದ ಆತನು ಯಾವುದೇ ರಾಜ್ಯದಿಂದ, ಸ್ಪರ್ಧಿಸಬಹುದು.

(ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 4).

**ಪ್ರಶ್ನೆ. 6 ವ್ಯಕ್ತಿಯು ನಿರ್ದಿಷ್ಟ ರಾಜ್ಯದಲ್ಲಿ ಮತದಾರನಾಗಿದ್ದು, ಯಾವುದೇ ಇತರ ರಾಜ್ಯದ ವಿಧಾನಸಭೆಯಲ್ಲಿನ ಸ್ಥಾನಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಬಹುದೆ ?**

ಉತ್ತರ. ಇಲ್ಲ. (ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 5).

**ಪ್ರಶ್ನೆ. 7 ವ್ಯಕ್ತಿಯು ನಿರ್ದಿಷ್ಟ ರಾಜ್ಯದಲ್ಲಿ ಮತದಾರನಾಗಿ ನೋಂದಾಯಿತನಾಗಿದ್ದು, ಆದರೆ, ಆತನು ಇತರ ರಾಜ್ಯದ ಅನುಸೂಚಿತ ಜಾತಿಯ ಸದಸ್ಯನಾಗಿದ್ದು, ಆತನು ಮತದಾರನಾಗಿರುವ ವಿಧಾನಸಭೆಗಾಗಿ ಅನೂಸೂಚಿತ ಜಾತಿಗಳಿಗಾಗಿ ಮೀಸಲಿರಿಸಿರುವ ಸ್ಥಾನದಿಂದ ಚುನಾವಣೆಗೆ ಸ್ಪರ್ಧಿಸಬಹುದೆ?**

ಉತ್ತರ. ಇಲ್ಲ. (ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 5).

**ಪ್ರಶ್ನೆ. 8. ವ್ಯಕ್ತಿಯು ನಿರ್ದಿಷ್ಟ ರಾಜ್ಯದಲ್ಲಿ ಮತದಾರನಾಗಿ ನೋಂದಾಯಿತನಾಗಿದ್ದು, ಆದರೆ, ಆತನು ಇತರ ರಾಜ್ಯದ ಅನುಸೂಚಿತ ಪಂಗಡದ ಸದಸ್ಯನಾಗಿದ್ದು, ಆತನು ಮತದಾರನಾಗಿರುವ ವಿಧಾನಸಭೆಗಾಗಿ ಅನುಸೂಚಿತ ಪಂಗಡಗಳಿಗಾಗಿ ಮೀಸಲಿರಿಸಿರುವ ಸ್ಥಾನದಿಂದ ಚುನಾವಣೆಗೆ ಸ್ಪರ್ಧಿಸಬಹುದೆ ?**

ಉತ್ತರ. ಇಲ್ಲ. (ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 5).

**ಪ್ರಶ್ನೆ. 9. ವ್ಯಕ್ತಿಯು, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳ ಸಮುದಾಯದ ಸದಸ್ಯನಾಗಿದ್ದು, ಆತನು ಸಾರ್ವತ್ರಿಕ ಮತಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಬಹುದೆ ?**

ಉತ್ತರ. ಹೌದು. (ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 5).

**ಪ್ರಶ್ನೆ. 10. ವ್ಯಕ್ತಿಯು ಕೆಲವು ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದು ಹಾಗೂ 2 ವರ್ಷಗಳ ಕಾರಾವಾಸಕ್ಕೆ ಗುರಿಯಾಗಿದ್ದು ಆತನು ಚುನಾವಣೆಗಳಿಗೆ ಸ್ಪರ್ಧಿಸಬಹುದೆ ?**

ಉತ್ತರ. ಇಲ್ಲ. (ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 8(3)).

**ಪ್ರಶ್ನೆ. 11 ಅಂಥ ವ್ಯಕ್ತಿಯು ಜಾಮೀನು ಪಡೆದಿದ್ದು ತನ್ನ ಅಪೀಲು ವಿಲೇವಾರಿ ಇತ್ಯರ್ಥದಲ್ಲಿರುವಾಗ ಆತನು ಚುನಾವಣೆಗೆ ಸ್ಪರ್ಧಿಸಬಹುದೆ ?**

ಉತ್ತರ. ಇಲ್ಲ. ವ್ಯಕ್ತಿಯು ಜಾಮೀನಿನ ಮೇಲಿದ್ದರೆ ಅಪರಾಧಿ ಎಂದು ನಿರ್ಣೀತವಾದ ನಂತರ ಆತನ ಅಪೀಲು ವಿಲೆಗಾಗಿ ಇತ್ಯರ್ಥದಲ್ಲಿದ್ದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರ

ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗಿರುವನು. ಆದರೆ, ಆತನ ಅಪರಾಧ ನಿರ್ಣಯವನ್ನು ತಡೆಹಿಡಿಯಲಾಗಿದ್ದರೆ, ಆಗ ಆತನು ಸ್ಪರ್ಧಿಸಬಹುದು.

ಪ್ರಶ್ನೆ. 12. **ಜೈಲಿನಲ್ಲಿ ಬಂಧಿತನಾಗಿರುವ ವ್ಯಕ್ತಿಯು ಚುನಾವಣೆಗೆ ಸ್ಪರ್ಧಿಸಬಹುದೆ** ?

ಉತ್ತರ. ಇಲ್ಲ. ಕಾರಾವಾಸದಲ್ಲಿ ಬಂಧಿತನಾಗಿದ್ದರೆ ಅಥವಾ ಗಡಿಪಾರು ಅಥವಾ ಅನ್ಯಥಾ ಶಿಕ್ಷೆಗೆ ಗುರಿಯಾಗಿರುವಾಗ ಆಗಲಿ ಅಥವಾ ಪೊಲೀಸರ ಕಾನೂನುಬದ್ಧ ಅಭಿರಕ್ಷೆಯಲ್ಲಿರುವಾಗ ಆಗಲಿ ಅಂಥ ವ್ಯಕ್ತಿಯ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಲು ಸಾಧ್ಯವಿಲ್ಲ. (ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 62(5)ನೇ ಪ್ರಕರಣ).

ಪ್ರಶ್ನೆ. 13 **ಚುನಾವಣೆಯಲ್ಲಿ ಮತ ಚಲಾಯಿಸಲು ಹಕ್ಕುಳ್ಳ ಯಾವುದೇ ಕಾನೂನಿನ ಮೇರೆಗೆ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟ ವ್ಯಕ್ತಿಯೇ**?

ಉತ್ತರ. ಹೌದು. ಆತನು ಅಂಚೆ ಮತ ಪತ್ರದ ಮೂಲಕ ಮತ ಹಾಕಲು ಹಕ್ಕುಳ್ಳವನು.
(ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 62(5) ನೇ ಪ್ರಕರಣದ ಪರಂತುಕ ಮತ್ತು ಚುನಾವಣೆಗಳನ್ನು ನಡೆಸುವ ನಿಯಮಗಳು 1961ರ ನಿಯಮ 18(ಎ)(iv)).

ಪ್ರಶ್ನೆ 14– **ಸಾಗರೋತ್ತರ ಮತದಾರನು ಚುನಾವಣೆಯಲ್ಲಿ ಸ್ಪರ್ಧಿಸಬಹುದೇ**?

**ಉತ್ತರ:** ಹೌದು. ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲಾಗಿರುವಂತಹ ಸಾಗರೋತ್ತರ ಮತದಾರನು ಕಾನೂನಿನ ಅಗತ್ಯತೆಗಳನ್ನು ಪೂರೈಸುವುದಕ್ಕೆ ಒಳಪಟ್ಟು ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕನ್ನು ಹೊಂದಿರುತ್ತಾನೆ. ಕಾನೂನಿನ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಅತ್ಯಾವಶ್ಯಕ ಅರ್ಹತೆಗಳಲ್ಲಿ ಒಂದೆಂದರೆ, ಆಯೋಗವು ಅದರ ಪರವಾಗಿ ಅಧಿಕೃತಗೊಳಿಸಿದಂತಹ ವ್ಯಕ್ತಿಯ ಎದುರು ಅಭ್ಯರ್ಥಿಯು ನಿರ್ದಿಷ್ಟ ನಮೂನೆಯಲ್ಲಿ ಪ್ರಮಾಣ ಅಥವಾ ದೃಢೀಕರಣವನ್ನು ಮಾಡಬೇಕಾಗಿರುವುದು ಮತ್ತು ಒಪ್ಪಿಗೆ ನೀಡಬೇಕಾಗಿರುವುದು.

## 20.2 ಭದ್ರತಾ ಠೇವಣಿ

ಪ್ರಶ್ನೆ. 1 **ಪ್ರತಿಯೊಬ್ಬ ಅಭ್ಯರ್ಥಿಯು ಭದ್ರತಾ ಠೇವಣಿಯನ್ನು ಇಡುವ ಅಗತ್ಯವಿದೆ. ಲೋಕಸಭೆ ಚುನಾವಣೆಗಾಗಿ ಎಷ್ಟು ಭದ್ರತಾ ಠೇವಣಿಯನ್ನು ಇಡಬೇಕು**?

ಉತ್ತರ: ಇಪ್ಪತ್ತೈದು ಸಾವಿರ ರೂಪಾಯಿಗಳು [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34(1) (ಎ) ನ ಪ್ರಕರಣ]

ಪ್ರಶ್ನೆ. 2 **ಲೋಕಸಭೆ ಚುನಾವಣೆಗಾಗಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಅಭ್ಯರ್ಥಿಗಾಗಿ ಭದ್ರತೆ ಠೇವಣಿಯಲ್ಲಿ ಯಾವುದಾದರೂ ರಿಯಾಯಿತಿ ಇದೆಯೇ**?

ಉತ್ತರ. ಹೌದು. ಹನ್ನೆರಡು ಸಾವಿರದ ಐದುನೂರು ರೂಪಾಯಿಗಳು [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34(1) (ಎ) ನ ಪ್ರಕರಣ]

**ಪ್ರಶ್ನೆ. 3 ವಿಧಾನಸಭೆಯ ಚುನಾವಣೆಗಾಗಿ ಎಷ್ಟು ಭದ್ರತಾ ಠೇವಣಿಯನ್ನು ಇಡಬೇಕು?**

ಉತ್ತರ. ಹತ್ತು ಸಾವಿರ ರೂಪಾಯಿಗಳು. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34(1) (ಬಿ) ನ ಪ್ರಕರಣ]

**ಪ್ರಶ್ನೆ.4 ವಿಧಾನಸಭಾ ಚುನಾವಣೆಗಾಗಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಅಭ್ಯರ್ಥಿಗಾಗಿ ಭದ್ರತಾ ಠೇವಣಿಯಲ್ಲಿ ಯಾವುದಾದರೂ ರಿಯಾಯಿತಿ ಇದೆಯೇ?**

ಉತ್ತರ. ಹೌದು. ಐದು ಸಾವಿರ ರೂಪಾಯಿಗಳು [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34(1) (ಬಿ) ನ ಪ್ರಕರಣ]

**ಪ್ರಶ್ನೆ. 5 ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಸದಸ್ಯನಾಗಿರುವ ವ್ಯಕ್ತಿ ಸಾಮಾನ್ಯ ಮತಕ್ಷೇತ್ರದಿಂದ ಸ್ಪರ್ಧಿಸಿದರೆ, ಲೋಕಸಭೆ/ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಆತನು ಎಷ್ಟು ಭದ್ರತಾ ಠೇವಣಿ ಇಡುವ ಅಗತ್ಯವಿದೆ?**

ಉತ್ತರ. ಲೋಕಸಭೆಗಾಗಿ ಹನ್ನೆರಡು ಸಾವಿರದ ಐನೂರು ರೂಪಾಯಿಗಳು / ವಿಧಾನಸಭೆಗಾಗಿ ಐದು ಸಾವಿರ ರೂಪಾಯಿಗಳು [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34(1) (ಎ) (ಬಿ) ನ ಪ್ರಕರಣ]

**ಪ್ರಶ್ನೆ. 6 ಯಾವ ಅಭ್ಯರ್ಥಿಗಳು ಠೇವಣಿಯನ್ನು ಕಳೆದುಕೊಳ್ಳುವರು?**

ಉತ್ತರ. ಮತಕ್ಷೇತ್ರದಲ್ಲಿ ಚಲಾಯಿಸಲಾದ ಸಿಂಧುವಾದ ಮತಗಳ $^1/_6$ ಕ್ಕಿಂತ ಹೆಚ್ಚು ಮತಗಳನ್ನು ಪಡೆಯಲು ವಿಫಲರಾಗಿ ಪರಾಭವಗೊಂಡ ಅಭ್ಯರ್ಥಿಯು ಆತನ ಅಭ್ಯರ್ಥಿ ಠೇವಣಿಯನ್ನು ಕಳೆದುಕೊಳ್ಳುವನು. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 158(4) ನೇ ಪ್ರಕರಣ]

## 20.3 ನಾಮನಿರ್ದೇಶನಗಳು:

**ಪ್ರಶ್ನೆ. 1 ಒಂದು ವೇಳೆ, ನಾನು ಮಾನ್ಯತೆ ಪಡೆದ ರಾಷ್ಟ್ರೀಯ ಅಥವಾ ರಾಜ್ಯದ ಪಕ್ಷದ ಅಭ್ಯರ್ಥಿಯಾಗಿದ್ದರೆ, ನಾನು ನನ್ನ ನಾಮನಿರ್ದೇಶನಕ್ಕಾಗಿ ಎಷ್ಟು ಜನ ಸೂಚಕರ ಅಗತ್ಯವಿದೆ?**

ಉತ್ತರ. ಒಬ್ಬರು ಮಾತ್ರ. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 33(1) ನೇ ಪ್ರಕರಣ]

**ಪ್ರಶ್ನೆ. 2 ನಾನು ಸ್ವತಂತ್ರ ಅಭ್ಯರ್ಥಿ ಅಥವಾ ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷದ ಅಭ್ಯರ್ಥಿಯಾಗಿದ್ದರೆ, ನಾಮನಿರ್ದೇಶನಕ್ಕಾಗಿ ಎಷ್ಟು ಜನ ಸೂಚಕರ ಅಗತ್ಯವಿದೆ?**

ಉತ್ತರ. ಹತ್ತು. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34(1) ನೇ ಪ್ರಕರಣದ ಪರಂತುಕ]

**ಪ್ರಶ್ನೆ. 3 ಒಬ್ಬ ವ್ಯಕ್ತಿ ಲೋಕಸಭೆ/ ವಿಧಾನಸಭೆಯ ಚುನಾವಣೆಗಾಗಿ ಹಲವಾರು ಮತಕ್ಷೇತ್ರಗಳಿಂದ ಆತನಿಗೆ ಇಷ್ಟಬಂದಂತೆ ಸ್ಪರ್ಧಿಸಬಹುದೇ?**

ಉತ್ತರ. ಇಲ್ಲ. ಒಬ್ಬ ವ್ಯಕ್ತಿ ಲೋಕಸಭೆ/ ವಿಧಾನಸಭೆಗಾಗಿ ಸಾರ್ವತ್ರಿಕ ಚುನಾವಣೆಯಲ್ಲಿ ಎರಡಕ್ಕಿಂತ ಹೆಚ್ಚು ಮತಕ್ಷೇತ್ರದಿಂದ ಸ್ಪರ್ಧಿಸುವಂತಿಲ್ಲ. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 33(7) ನೇ ಪ್ರಕರಣ]

**ಪ್ರಶ್ನೆ. 4 ಯಾವುದೇ ಸಭೆಗೆ ಏಕಕಾಲಿಕವಾಗಿ ನಡೆದ ಉಪ-ಚುನಾವಣೆಗಳ ಸಂಬಂಧದಲ್ಲಿ ಅವೇ ನಿರ್ಬಂಧಗಳು ಅನ್ವಯಿಸುತ್ತದೆಯೇ?**

ಉತ್ತರ. ಹೌದು. ಚುನಾವಣಾ ಆಯೋಗವು ಏಕಕಾಲಿಕವಾಗಿ ನಡೆಸಿರದಿದ್ದರೆ ಅಭ್ಯರ್ಥಿಯು ಅದೇ (House) ಸಭೆಗೆ ಎರಡಕ್ಕಿಂತ ಹೆಚ್ಚು ಉಪ-ಚುನಾವಣೆಗಳಲ್ಲಿ ಸ್ಪರ್ಧಿಸಬಾರದು. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 33(7) ನೇ ಪ್ರಕರಣ]

**ಪ್ರಶ್ನೆ. 5 ಅದೇ ಮತಕ್ಷೇತ್ರದಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಎಷ್ಟು ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸಬಹುದು?**

ಉತ್ತರ. ನಾಲ್ಕು. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 33(6) ನೇ ಪ್ರಕರಣ ಪರಂತುಕ]

**ಪ್ರಶ್ನೆ. 6 ಮೆರವಣಿಗೆಯೊಂದಿಗೆ ನಾಮನಿರ್ದೇಶನ ಪತ್ರ ಸಲ್ಲಿಸಲು ರಿಟರ್ನಿಂಗ್ ಅಧಿಕಾರಿಯ ಕಛೇರಿಗೆ ನಾನು ಹೋಗಬಹುದೇ?**

ಉತ್ತರ. ಇಲ್ಲ. ರಿಟರ್ನಿಂಗ್ ಅಧಿಕಾರಿಗಳ ಕಛೇರಿಯ ನೂರು ಮೀಟರ್‌ನ ಪರಿಮಿತಿ/ ಪರಿಧಿಯೊಳಗೆ ಬರಲು ಅನುಮತಿ ನೀಡಲಾಗಿದೆ ಎಂದು ವಾಹನಗಳ ಗರಿಷ್ಠ ಸಂಖ್ಯೆ 3 ಕ್ಕೆ ನಿರ್ಬಂಧಿಸಲಾಗಿದೆ ಮತ್ತು ರಿಟರ್ನಿಂಗ್ ಅಧಿಕಾರಿಯ ಕಛೇರಿಯನ್ನು ಪ್ರವೇಶಿಸಲು ಅನುಮತಿಸಲಾಗಿದೆಯೆಂದು ವ್ಯಕ್ತಿಗಳ ಗರಿಷ್ಠ ಸಂಖ್ಯೆಯನ್ನು 5ಕ್ಕೆ ಪರಿಮಿತಿಗೊಳಿಸಲಾಗಿದೆ (ಅಭ್ಯರ್ಥಿಯನ್ನು ಒಳಗೊಂಡಂತೆ].

**ಪ್ರಶ್ನೆ. 7 ನಾಮನಿರ್ದೇಶನ ಪತ್ರಗಳನ್ನು ರಿಟರ್ನಿಂಗ್ ಅಧಿಕಾರಿಯು ಪರಿಶೀಲಿಸುವ ಸಮಯದಲ್ಲಿ ಎಷ್ಟು ವ್ಯಕ್ತಿಗಳಿಗೆ ಅನುಮತಿ ನೀಡಬಹುದು?**

ಉತ್ತರ. ಅಭ್ಯರ್ಥಿ, ಅವನ ಚುನಾವಣಾ ಏಜೆಂಟ್, ಒಬ್ಬ ಸೂಚಕ ಮತ್ತು ಅಭ್ಯರ್ಥಿಯಿಂದ ಲಿಖಿತದಲ್ಲಿ ಕ್ರಮಬದ್ಧವಾಗಿ ಅಧಿಕೃತಗೊಳಿಸಲಾದ (ನ್ಯಾಯವಾದಿಯಾಗಿರುವ) ಇತರೆ ಒಬ್ಬ

ವ್ಯಕ್ತಿ, ಆದರೆ, ರಿಟರ್ನಿಂಗ್ ಅಧಿಕಾರಿಯಿಂದ ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಿದ ಸಮಯದಲ್ಲಿ ಇತರ ವ್ಯಕ್ತಿ ಹಾಜರಾಗಬಾರದು.

[ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 36(1) ನೇ ಪ್ರಕರಣ]

**ಪ್ರಶ್ನೆ. 8** **ಅಭ್ಯರ್ಥಿಯು, ನಾಮನಿರ್ದೇಶನ ಪತ್ರಕ್ಕೆ ಎತ್ತಲಾದ ಆಕ್ಷೇಪಣೆಗಳಿದ್ದರೆ, ಅಂಥ ಆಕ್ಷೇಪಣೆಗಳನ್ನು ಖಂಡಿಸುವುದಕ್ಕೆ ಸಮಯವು ಅನ್ವಯಿಸುತ್ತದೆಯೇ, ಅಂಥ ಅಭ್ಯರ್ಥಿಗೆ ರಿಟರ್ನಿಂಗ್ ಅಧಿಕಾರಿಯು ಸಮಯವನ್ನು ಕೊಡಬಹುದೇ?**

ಉತ್ತರ. ಹೌದು. ರಿಟರ್ನಿಂಗ್ ಅಧಿಕಾರಿಯು, ಆಕ್ಷೇಪಣೆಗಳ ಅಹವಾಲನ್ನು ಕೇಳಲು ಮುಂದಿನ ದಿನ ಅಥವಾ ಆ ದಿನದ ತರುವಾಯದ ವರೆಗೆ ಮೂಂದೂಡಬಹುದು. ಆದರೆ ಆ ದಿನ ಬೆಳಿಗ್ಗೆ 11.00 ಗಂಟೆ ಮೀರಬಾರದು, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದನ್ನು ನಿಗದಿಪಡಿಸಿದ ದಿನದಂದು ಮಧ್ಯಾಹ್ನ 3 ಗಂಟೆಗೆ ಮುಂಚೆ ಸರಿಯಾಗಿ ರಿಟರ್ನಿಂಗ್ ಅಧಿಕಾರಿ ಯಾವುದೇ ಪ್ರಕರಣ ಅಹವಾಲನ್ನು ಪೂರ್ಣಗೊಳಿಸಬೇಕು.

## 20.4 ಪ್ರಮಾಣ ಅಥವಾ ದೃಢೀಕರಣ:

**ಪ್ರಶ್ನೆ. 1** **ಚುನಾವಣಾ ಆಯೋಗದಿಂದ ಅಧಿಕೃತಗೊಳಿಸಿದ ಅಧಿಕಾರಿಯ ಮುಂದೆ ಪ್ರಮಾಣ ಅಥವಾ ಶಪಥ ಮಾಡಲು ಮತ್ತು ರುಜು ಮಾಡುವುದಕ್ಕೆ ಅಭ್ಯರ್ಥಿಗೆ ಅಗತ್ಯಪಡಿಸಲಾಗಿದೆಯೇ?**

ಉತ್ತರ. ಹೌದು. [ಉಲ್ಲೇಖ: ಸರ್ಕಾರದ ಕೇಂದ್ರಾಡಳಿತ ಪ್ರದೇಶದ ಅಧಿನಿಯಮ, 1963ರ 4(ಎ)ನ ಪ್ರಕರಣದ, ಸಂವಿಧಾನದ ಅನುಚ್ಛೇದ 84(ಎ) ಅಥವಾ ಅನುಚ್ಛೇದ 173 (ಎ) ಅಥವಾ ದೆಹಲಿ ಸರ್ಕಾರದ ರಾಷ್ಟ್ರೀಯ ಕೇಂದ್ರಾಡಳಿತ ಪ್ರದೇಶದ ಅಧಿನಿಯಮ, 1991ರ 4 (ಎ) ಪ್ರಕರಣ)

**ಪ್ರಶ್ನೆ. 2** **ಚುನಾವಣಾ ಆಯೋಗದಿಂದ ಪ್ರಮಾಣ ಅಥವಾ ದೃಢೀಕರಣ ಮಾಡಲು ಮತ್ತು ರುಜುಮಾಡುವುದಕ್ಕೆ ಅಧಿಕೃತ ವ್ಯಕ್ತಿಗಳು ಯಾರು?**

ಉತ್ತರ. ಯಾವುದೇ ನಿರ್ದಿಷ್ಟ ಚುನಾವಣೆಗಾಗಿ, ಮತಕ್ಷೇತ್ರಕ್ಕಾಗಿ ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ಮುಖ್ಯವಾಗಿ ಅಧಿಕೃತ ವ್ಯಕ್ತಿಗಳು, ಸೆರೆಮನೆ ಅಥವಾ ಪ್ರತಿಬಂಧಕ ಬಂಧನದ ಮೇರೆಗೆ ಸೀಮಿತಗೊಳಿಸಿದ ಅಭ್ಯರ್ಥಿಯ ಸಂದರ್ಭದಲ್ಲಿ, ಸೆರೆಮನೆಯ ಅಧೀಕ್ಷರು ಅಥವಾ ಕಮಾಂಡೆಂಟ್ ಅಥವಾ ಅಂಥ ಬಂಧಿಸಿದ ಆತನನ್ನು ಸೀಮಿತಗೊಳಿಸಿದ ಸ್ಥಳದಲ್ಲಿ ಪ್ರಮಾಣವನ್ನು ಮಾಡಲು ಪರಿಮಿತಿಗೊಳಿಸಬೇಕು ಮತ್ತು ಅಭ್ಯರ್ಥಿಯ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಅಥವಾ ಬೇರೊಂದು ಜಾಗದಲ್ಲಿ ಅನಾರೋಗ್ಯ ನಿಮಿತ್ತ ಅಥವಾ ಯಾವುದೇ ಇತರ ಕಾರಣಗಳಿಗಾಗಿ ಆಸ್ಪತ್ರೆಯಲ್ಲಿ ಇದ್ದಲೇ ಇದ್ದರೆ,

ಆಸ್ಪತ್ರೆಯ ಪ್ರಭಾರದಲ್ಲಿರುವ ವೈದ್ಯಕೀಯ ಅಧೀಕ್ಷಕ ಅಥವಾ ವೈದ್ಯಕೀಯ ವೃತ್ತಿಗ ಆತನ ಬಗ್ಗೆ ಅದೇ ರೀತಿಯಲ್ಲಿ ಅಧಿಕೃತಗೊಳಿಸುವುದು. ಅಭ್ಯರ್ಥಿಯು ಭಾರತದ ಹೊರಗಿದ್ದರೆ, ಭಾರತದ ರಾಯಭಾರಿ ಅಥವಾ ಹೈಕಮೀಷನರ್ ಅವರಿಂದ ಅಥವಾ ಆತನಿಂದ ಅಧಿಕೃತಗೊಳಿಸಿದ ರಾಜತಾಂತ್ರಿಕ ಕೌನ್ಸಲರ ಸಹ ಪ್ರಮಾಣವಚನ/ ದೃಡಿಕರಣವನ್ನು ಮಾಡುವುದು. ಆಯುಕ್ತರು ಅಥವಾ ಆತನಿಂದ ಅಧಿಕೃತಗೊಳಿಸಿದ ರಾಜತಾಂತ್ರಿಕ ಕೌನ್ಸಲರ್ ಪ್ರಮಾಣವಚನ ಶಪಥವನ್ನು ಸಹ ಮಾಡಬಹುದು.

**ಪ್ರಶ್ನೆ. 3 ಅಭ್ಯರ್ಥಿಯು ಪ್ರಮಾಣ ಅಥವಾ ಶಫಥ ಮಾಡುವಾಗ ಹಾಗೆ ಮಾಡಬೇಕೆಂದು ಅಗತ್ಯಪಡಿಸಲಾಗಿದೆಯೇ?**

ಉತ್ತರ. ಅಭ್ಯರ್ಥಿಯು, ಖುದ್ದಾಗಿ ಅವನ ನಾಮನಿರ್ದೇಶನ ಪತ್ರಗಳನ್ನು ಹಾಜರುಪಡಿಸಿದ ನಂತರ ಕೂಡಲೇ ಪ್ರಮಾಣ ಅಥವಾ ಶಪಥವನ್ನು ಮಾಡಲು ಅಗತ್ಯಪಡಿಸಲಾಗಿದೆ ಮತ್ತು ಯಾವುದೇ ಸಂದರ್ಭದಲ್ಲಿ ಪರಿಶೀಲನೆಯ ದಿನಾಂಕದ ಹಿಂದಿನ ದಿನ ತಡವಾಗಬಾರದು.

## 20.5 ಚುನಾವಣಾ ಚಿಹ್ನೆಗಳ ಹಂಚಿಕೆ

**ಪ್ರಶ್ನೆ. 1 ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಯಾರು ಹಂಚುತ್ತಾರೆ?**

ಉತ್ತರ. ರಿಟರ್ನಿಂಗ್ ಅಧಿಕಾರಿ. [ಉಲ್ಲೇಖ: ಚುನಾವಣಾ ಚಿಹ್ನೆಗಳ (ಮೀಸಲು ಮತ್ತು ಹಂಚಿಕೆ) ಆದೇಶ, 1968]

**ಪ್ರಶ್ನೆ. 2 ನೋಂದಾಯಿತ ರಾಷ್ಟ್ರೀಯ ಅಥವಾ ರಾಜ್ಯ ಪಕ್ಷದ ಅಭ್ಯರ್ಥಿಗೆ ಮೀಸಲಿರಿಸಲಾದ ಚುನಾವಣಾ ಚಿಹ್ನೆಯನ್ನು ಹೇಗೆ ಹಂಚಲಾಗಿದೆ?**

ಉತ್ತರ. ಮೀಸಲಿರಿಸಿದ ಚಿಹ್ನೆಯ ಹಂಚಿಕೆಗಾಗಿ, ಅಭ್ಯರ್ಥಿಯು ಸಂಬಂಧಪಟ್ಟ ನೋಂದಾಯಿತ ಪಕ್ಷದಿಂದ ರಚನೆಯಾಗಿ ಆ ನಮೂನೆಯನ್ನು ಅವನ ನಾಮನಿರ್ದೇಶನದಲ್ಲಿ ಘೋಷಿಸುವುದು ಮತ್ತು ಆ ಪಕ್ಷದಿಂದ ಗುರುತಿಸಿದ ಅವನ ಅಭಿಪ್ರಾಯದಂತೆ ಪಕ್ಷದ ಅಧಿಕೃತ ಪದಾಧಿಕಾರಿಯಿಂದ ನಮೂನೆ ಬಿ ಯಲ್ಲಿ ನಿಗದಿತ ಘೋಷಣೆಯನ್ನು ಸಲ್ಲಿಸುವುದು. ನಮೂನೆ 'ಬಿ' ಯ ಘೋಷಣೆಯು ಮಾದರಿ ಹಸ್ತಾಕ್ಷರವಿರುವ ಪಕ್ಷದ ಪದಾಧಿಕಾರಿಯಿಂದ ಕ್ರಮಬದ್ಧವಾಗಿ ಸಹಿಯನ್ನು ಹೊಂದಿರಬೇಕು. ಆ ಎರಡು ನಮೂನೆಗಳು ಷರತ್ತಿಗೊಳಪಟ್ಟು ನಮೂನೆ–ಎ ಯಲ್ಲಿ ತಿಳಿಸಿರಬೇಕು. ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ ಮತ್ತು ರಿಟರ್ನಿಂಗ್ ಅಧಿಕಾರಿಗೆ ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕದಂದು ಅಪರಾಹ್ನ 3 ಗಂಟೆಗೆ ಮುಂಚೆ ತಲುಪಿಸಬೇಕು.

[ಉಲ್ಲೇಖ: ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ 8 ಮತ್ತು 13ನೇ ಪ್ಯಾರಾಗಳು]

**ಪ್ರಶ್ನೆ. 3** **ರಾಜಕೀಯ ಪಕ್ಷದ ಪದಾಧಿಕಾರಿಯ ಹಸ್ತಾಕ್ಷರ ಪಡಿಯಚ್ಚು ಅಥವಾ ರಬ್ಬರ್ ಮುದ್ರೆ ಮುಂತಾದ ಸಾಧನಗಳ ಸಹಿಯೊಂದಿಗೆ ನಮೂನೆ ಎ ಮತ್ತು ನಮೂನೆ ಬಿ ಯಲ್ಲಿ ಅಭ್ಯರ್ಥಿಯು ಘೋಷಣೆಯನ್ನು ಒಪ್ಪಿಸಬಹುದೇ?**

ಉತ್ತರ. ಇಲ್ಲ. ನಮೂನೆ ಎ ಮತ್ತು ನಮೂನೆ ಬಿ ಗಳಲ್ಲಿ ರಾಜಕೀಯ ಪಕ್ಷ ಅಧಿಕೃತಗೊಳಿಸಿದ ಪದಾಧಿಕಾರಿಯು ಶಾಯಿಯಲ್ಲಿ ಸಹಿಗಳನ್ನು ಮಾಡಬೇಕು. [ಉಲ್ಲೇಖ: ಚುನಾವಣಾ ಚಿಹ್ನೆಗಳು (ಮೀಸಲು ಮತ್ತು ಹಂಚಿಕೆ) ಆದೇಶ, 1968ರ 13ನೇ ಪ್ಯಾರಾ]

**ಪ್ರಶ್ನೆ. 4** **ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷದಿಂದ ಪರಿಷ್ಕೃತಗೊಂಡ ಅಭ್ಯರ್ಥಿ ಅಥವಾ ಸ್ವತಂತ್ರವಾಗಿ ಸ್ಪರ್ಧಿಸುವ ಅಭ್ಯರ್ಥಿಯು ಮುಕ್ತ ಚಿಹ್ನೆಗಳ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದಾದರೂ ಒಂದು ಮುಕ್ತ ಚಿಹ್ನೆಗಳನ್ನು ಆಯ್ಕೆ ಮಾಡಿಕೊಳ್ಳಬಹುದೇ?**

ಉತ್ತರ. ಹೌದು. [ಉಲ್ಲೇಖ: ಚುನಾವಣಾ ಚಿಹ್ನೆಗಳು (ಮೀಸಲು ಮತ್ತು ಹಂಚಿಕೆ) ಆದೇಶ, 1968ರ 12ನೇ ಪ್ಯಾರಾ]

**ಪ್ರಶ್ನೆ. 5** **ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷದಿಂದ ಪರಿಷ್ಕೃತಗೊಂಡ ಅಭ್ಯರ್ಥಿಯಾಗಿ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ ಮತ್ತು ರಿಟರ್ನಿಂಗ್ ಅಧಿಕಾರಿಗೆ ನಮೂನೆ 3 ಮತ್ತು ನಮೂನೆ ಬಿ ಗಳಲ್ಲಿ ಸಲ್ಲಿಸುವುದಕ್ಕೆ ಅವಶ್ಯಕತೆ ಇದೆಯೇ?**

ಉತ್ತರ. ಹೌದು. [ಉಲ್ಲೇಖ: ಚುನಾವಣಾ ಚಿಹ್ನೆಗಳು (ಮೀಸಲು ಮತ್ತು ಹಂಚಿಕೆ) ಆದೇಶ, 1968ರ 13ನೇ ಪ್ಯಾರಾ]

## 20.6 ಚುನಾವಣಾ ಏಜೆಂಟ್

**ಪ್ರಶ್ನೆ. 1** **ಅಭ್ಯರ್ಥಿಯಾಗಿ, ಚುನಾವಣಾ ಏಜೆಂಟರನ್ನು ನಾನು ನೇಮಕ ಮಾಡಬಹುದೇ?**

ಉತ್ತರ: ಹೌದು. [ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 40ನೇ ಪ್ರಕರಣ]

**ಪ್ರಶ್ನೆ. 2** **ಚುನಾವಣಾ ಏಜೆಂಟರ ಪ್ರಕಾರ್ಯಗಳು ಏನು?**

ಉತ್ತರ. ಚುನಾವಣಾ ಏಜೆಂಟನು, ಕಾನೂನಿನ ಮೇರೆಗೆ ಅಭ್ಯರ್ಥಿಯಿಂದ ಅಧಿಕೃತಗೊಳಿಸಿದಂತೆ ಚುನಾವಣಾ ಸಂಬಂಧದಲ್ಲಿ ಅಂಥ ಪ್ರಕಾರ್ಯಗಳನ್ನು ನೆರವೇರಿಸಬಹುದು.

[ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 45ನೇ ಪ್ರಕರಣ]

**ಪ್ರಶ್ನೆ. 3** **ಸಚಿವರು/ ಸಂಸತ್ ಸದಸ್ಯ (ಎಂ.ಪಿ)/ ಎಂ.ಎಲ್.ಎ (ವಿಧಾನಸಭಾ ಸದಸ್ಯ)/ ಎಂ.ಎಲ್.ಸಿ. (ವಿಧಾನ ಪರಿಷತ್ ಸದಸ್ಯ) ಅಥವಾ ಚುನಾವಣಾ ಏಜೆಂಟ್‌ನಾಗಿ/ ಪೋಲಿಂಗ್**

**ಏಜೆಂಟ್‌ನಾಗಿ/ ಮತ ಏಣಿಕೆ ಏಜೆಂಟನಾಗಿ ಭದ್ರತಾ ರಕ್ಷಣೆಯಡಿ ಇರುವ ಯಾವುದೇ ಇತರೆ ವ್ಯಕ್ತಿಯನ್ನು ನೇಮಕಾತಿ ಮಾಡಲು ಯಾವುದಾದರೂ ನಿರ್ಬಂಧಗಳಿವೆಯೇ?**

ಉತ್ತರ. ಹೌದು. ಸಚಿವರು/ ಎಂ.ಪಿ/ ಎಂಎಲ್‌ಎ/ ಎಂಎಲ್‌ಸಿ ಅಥವಾ ಭದ್ರತಾ ರಕ್ಷಣೆಯ ಮೇರೆಗೆ ಇರುವ ಯಾವುದೇ ಇತರೆ ವ್ಯಕ್ತಿಯನ್ನು ಚುನಾವಣಾ/ ಪೋಲಿಂಗ್ ಏಜೆಂಟ್/ ಮತ ಎಣಿಕೆ ಏಜೆಂಟನಾಗಿ ಅಭ್ಯರ್ಥಿಯು ನೇಮಕ ಮಾಡಬಾರದು, ತನ್ನ ವೈಯಕ್ತಿಕ ಭದ್ರತೆಗಾಗಿ ಅಂಥ ನೇಮಕಾತಿಯೊಂದಿಗೆ ಒಳಪಡಿಸತಕ್ಕದ್ದು, ಏಕೆಂದರೆ, ಆತನ ಭದ್ರತಾ ಸಿಬ್ಬಂದಿಯು "ಮತದಾನ ಕೇಂದ್ರದ ಸುತ್ತಮುತ್ತ" ಎಂಬುದರಲ್ಲಿ ವಿವರಿಸಲಾದ ಮತದಾನ ಕೇಂದ್ರಗಳ ಪರಿಧಿಯ 100 ಮೀಟರ್ ಒಳಗೆ, ಯಾವುದೇ ಸಂದರ್ಭಗಳಲ್ಲಿ ಮತ್ತು ಮತಗಟ್ಟೆಯೊಳಗೆ ಮತ್ತು ಮತ ಎಣಿಕೆ ಕೇಂದ್ರದ ಆವರಣ ಮತ್ತು ಮತ ಎಣಿಕೆ ಕೇಂದ್ರದೊಳಗೆ ಅನುಮತಿಸಬಾರದು. ಭದ್ರತೆ ರಕ್ಷಣೆಯಿರುವ ಯಾರೇ ವ್ಯಕ್ತಿಯನ್ನು ಸಹ, ಅಂಥ ಅಭ್ಯರ್ಥಿಯ ಏಜೆಂಟ್‌ನಾಗಿ ಭದ್ರತಾ ಕಾರ್ಯ ನಿರ್ವಹಿಸುವಂತೆ ಅವನು ಬಿಟ್ಟುಕೊಡುವುದಕ್ಕೆ ಅನುಮತಿಸುವುದಿಲ್ಲ.

**ಪ್ರಶ್ನೆ 4– ಅಭ್ಯರ್ಥಿಯಾಗಿರುವ ನಾನು ಹೆಚ್ಚುವರಿ ಚುನಾವಣಾ ಏಜೆಂಟನನ್ನು ನೇಮಕ ಮಾಡಬಹುದೇ?**

ಉತ್ತರ ಹೌದು, ಪ್ರತಿಯೊಬ್ಬ ಅಭ್ಯರ್ಥಿಯು ವಿವಿಧ ಖರ್ಚು–ವೆಚ್ಚ ಸಂಬಂಧಿತ ವಿಷಯಗಳಲ್ಲಿ ಅವರಿಗೆ ನೆರವು ನೀಡುವುದಕ್ಕಾಗಿ ಹೆಚ್ಚುವರಿಯಾಗಿ ಒಬ್ಬರು ಚುನಾವಣಾ ಏಜೆಂಟರನ್ನು ನೇಮಿಸಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆ ಹೆಚ್ಚುವರಿ ಏಜೆಂಟನನ್ನು ವೆಚ್ಚ ಮೇಲ್ವಿಚಾರಣಾ ವಿಷಯಗಳಿಗೆ ಸಂಬಂಧಿಸಿದ ಶಾಸನಬದ್ಧವಲ್ಲದ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶದಿಂದ ಮಾತ್ರ ನೇಮಿಸಿಕೊಳ್ಳಬಹುದಾಗಿರುತ್ತದೆ. ಅಭ್ಯರ್ಥಿಯ ಪರವಾಗಿ ಅಧಿಕೃತವಾಗಿ ನಿರ್ವಹಿಸಬೇಕಾದಂತಹ ಶಾಸನಬದ್ಧ ಕರ್ತವ್ಯಗಳನ್ನು ಚುನಾವಣಾ ಏಜೆಂಟನು ಮಾತ್ರವೇ ನಿರ್ವಹಿಸಬಹುದು.

## 20.7 ಪೋಲಿಂಗ್ ಏಜೆಂಟ್

**ಪ್ರಶ್ನೆ. 1 ಅಭ್ಯರ್ಥಿಯಾಗಿ, ಎಲ್ಲಿಂದಲಾದರೂ ಪೋಲಿಂಗ್ ಏಜೆಂಟ್‌ರಾಗಿ ವ್ಯಕ್ತಿಗಳನ್ನು ನಾನು ನೇಮಕ ಮಾಡಬಹುದೇ?**

ಉತ್ತರ. ಇಲ್ಲ. ಪೋಲಿಂಗ್ ಏಜೆಂಟರಾಗಿ ನಿಮ್ಮಿಂದ ನೇಮಕಗೊಂಡ ಅಂಥ ವ್ಯಕ್ತಿಯು ಸಾಮಾನ್ಯ ನಿವಾಸಿಯಾಗಿರಬೇಕು ಮತ್ತು ಸಂಬಂಧಪಟ್ಟ ಮತದಾನ ಕ್ಷೇತ್ರದ ಪ್ರದೇಶದ ಮತದಾರ ಮಾತ್ರವಾಗಿರಬೇಕು ಮತ್ತು ಸಂಬಂಧಪಟ್ಟ ಮತದಾನ ಕ್ಷೇತ್ರದ ಹೊರಗಿನವನಾಗಿರಬಾರದು.

ಅಂಥ ವ್ಯಕ್ತಿಯು ಭಾವಚಿತ್ರವಿರುವ ಚುನಾವಣಾ ಗುರುತಿನ ಚೀಟಿಯನ್ನು ಸಹ ಹೊಂದಿರಲೇಬೇಕು.

**ಪ್ರಶ್ನೆ. 2** **ಪ್ರತಿ ಮತ್ತು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಪೋಲಿಂಗ್ ಏಜೆಂಟರ್‌ಗಳನ್ನು ನೇಮಕ ಮಾಡುವುದಕ್ಕೆ ಅಭ್ಯರ್ಥಿಯಾಗಿ ನನಗೆ ಅವಶ್ಯಕತೆ ಇದೆಯೇ?**

ಉತ್ತರ. ಅಭ್ಯರ್ಥಿಯು ಹಿತಾಸಕ್ತಿಯನುಸಾರ ಪ್ರತಿಯೊಂದು ಮತದಾನ ಕೇಂದ್ರಕ್ಕೆ ಅವರ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುವುದಕ್ಕೆ ಮೂವರು ಪೋಲಿಂಗ್ ಏಜೆಂಟರನ್ನು ನೇಮಕ ಮಾಡುವುದಕ್ಕೆ ಅವರಿಗೆ ಕಾನೂನು ಅವಕಾಶ ನೀಡಿದೆ. ಆದರೆ ನೀಡಿದ ನಿರ್ದಿಷ್ಟ ಸಮಯದಲ್ಲಿ ಮಾತ್ರ ಅಂಥ ಒಬ್ಬ ಏಜೆಂಟ್ ಮಾತ್ರ ಮತದಾನ ಕೇಂದ್ರದ ಒಳಗೆ ಉಳಿದಿರಬಹುದು.

**ಪ್ರಶ್ನೆ. 3** **ಪೋಲಿಂಗ್ ಏಜೆಂಟ್‌ರ ಕರ್ತವ್ಯಗಳು ಏನು?**

ಉತ್ತರ. ಪೋಲಿಂಗ್ ಏಜೆಂಟ್‌ಗಳ ಮುಖ್ಯ ಕರ್ತವ್ಯವೆಂದರೆ, ಅವರನ್ನು ನೇಮಕ ಮಾಡಿದ ಅಭ್ಯರ್ಥಿಗಳ ಹಿತಾಸಕ್ತಿಗಳನ್ನು ನೋಡಿಕೊಳ್ಳುವುದಾಗಿದೆ. ನೇಮಕಗೊಂಡ ನೈಜ ಮತದಾರನೆಂದು ಸಂದೇಹ ಉಂಟಾದಾಗ ಅಂಥವರನ್ನು ಗುರುತಿಸಿ ಸವಾಲಿನ ವ್ಯಕ್ತಿಗಳಿಂದ ಮತದಾರರೆಂದು ಸೋಗುಹಾಕುವವರನ್ನು ಪತ್ತೆ ಮಾಡುವುದಕ್ಕೆ ಮತ್ತು ತಡೆಹಿಡಿಯುವುದಕ್ಕೆ ಪ್ರಿಸೈಡಿಂಗ್ ಅಧಿಕಾರಿಯ ಸಹಾಯದಿಂದ ಮತದಾನ ಕೇಂದ್ರಗಳನ್ನು ರಕ್ಷಿಸುವುದಾಗಿದೆ ಮತ್ತು ಮತದಾನದ ಮುಕ್ತಾಯಕ್ಕೆ ಮುಂಚೆ, ಮತದಾನ ನಡೆಯುವಾಗ ಮತ್ತು ನಂತರ ಇವಿಎಂ ಮತ್ತು ವಿವಿಪ್ಯಾಟ್ ಅನ್ನು ಸೂಕ್ತ ರೀತಿಯಲ್ಲಿ ಭದ್ರತೆ ಮಾಡಿದೆ, ಮೊಹರು ಮಾಡಲಾಗಿದೆ ಎಂಬುದನ್ನು ನೋಡುವುದು ಮತ್ತು ಚುನಾವಣಾ ಆಯೋಗ ಹೇಳಲಾದ ಪ್ರಕ್ರಿಯೆಗಳ ಅನುಸಾರವಾಗಿ ಆತನ ಸಮ್ಮುಖದಲ್ಲಿ ಅಣುಕು ಮತದಾನ ನಡೆಸಲಾಗಿದೆ ಎಂದು ಮತ್ತು ಮತದಾನ ಪ್ರಕ್ರಿಯೆಗಳನ್ನು ನಡೆಸಲಾಗಿದೆ ಎಂದು ನೋಡಿಕೊಳ್ಳುವುದು.

**ಪ್ರಶ್ನೆ. 4** **ಸಾಮಾನ್ಯವಾಗಿ ಪೋಲಿಂಗ್ ಏಜಂಟರನ್ನು ಮತದಾನ ಕೇಂದ್ರಗಳಿಗೆ ತಲುಪಿಸಲು ಯಾವಾಗ ಅಗತ್ಯಪಡಿಸಲಾಗಿದೆ?**

ಉತ್ತರ. ಇವಿಎಂ ಮತ್ತು ಅಣಕು ಮತದಾನದ ನಿರ್ವಹಣೆ ಇತ್ಯಾದಿಯ ಸಿದ್ಧತೆಯ ಸಮಯದಲ್ಲಿ ಅವರು ಅಲ್ಲಿ ಹಾಜರಿದ್ದು ಮತದಾನ ಪ್ರಾರಂಭಿಸಲು ನಿಗದಿಪಡಿಸಿದ ಸಮಯಕ್ಕೆ ಕನಿಷ್ಠ ಒಂದು ಗಂಟೆ ಮುಂಚಿತವಾಗಿ ಮತದಾನ ಕೇಂದ್ರಗಳಲ್ಲಿ ಅಭ್ಯರ್ಥಿಯ ಪೋಲಿಂಗ್ ಏಜೆಂಟರನ್ನು ನಿಯೋಜಿಸಲು ಅವರಿಗೆ ತಿಳಿಸಿದೆ.

**ಪ್ರಶ್ನೆ. 5** **ಯಾವುದೇ ಸಮಯದಲ್ಲಿ ಅವನ ಏಜೆಂಟರನ್ನು ಬಿಡುಗಡೆಗೊಳಿಸುವುದರ ಮೂಲಕ ಬದಲಿ ಏಜೆಂಟರನ್ನು ನೇಮಕ ಮಾಡುವುದಕ್ಕೆ ಅವಕಾಶವಿದೆಯೇ?**

ಉತ್ತರ. ಹೌದು. ಆದರೆ ಅಂಥ ಬದಲಿ ಪೋಲಿಂಗ್ ಏಜೆಂಟ್‌ನ್ನು ಮತದಾನ ಮುಕ್ತಾಯದ ಎರಡು ಗಂಟೆಗಳ ಮುಂಚೆ ಅನುಮತಿಸಲಾಗುವುದಿಲ್ಲ.

## 20.8 ಮತದಾನ ಸಿಬ್ಬಂದಿ

**ಪ್ರಶ್ನೆ. 1** **ಪೋಲಿಂಗ್ ಪಕ್ಷಕಾರರು ರಚನೆಗಾಗಿ ಮತದಾನ ಸಿಬ್ಬಂದಿಯನ್ನು ಆಯ್ಕೆ ಮಾಡುವುದು ಹೇಗೆ?**

ಉತ್ತರ: ಎಲ್ಲಾ ಅರ್ಹ ಸರ್ಕಾರಿ ನೌಕರರು (ಕೇಂದ್ರ/ ರಾಜ್ಯ) ಜಿಲ್ಲಾ ಡೇಟಾಬೇಸನ್ನು ಜಿಲ್ಲೆಯಲ್ಲಿ, ಜಿಲ್ಲಾ ಚುನಾವಣಾ ಅಧಿಕಾರಿಯಿಂದ ಎಲೆಕ್ಟ್ರಾನಿಕ್ ನಮೂನೆಯಲ್ಲಿ ನಿರ್ವಹಿಸಲಾಗಿದೆ ಮತ್ತು ಕಂಪ್ಯೂಟರ್‌ನ ನೆರವಿನಿಂದ ಯಾದೃಚ್ಛಿಕವಾಗಿ (Randomisation) ಮತ್ತು ಯುಕ್ತವಾಗಿ ಮತದಾನ ಪಕ್ಷಗಳನ್ನು ರೂಪಿಸುವ ಸಮಯದಲ್ಲಿ ವಿವಿಧ ಕಛೇರಿಗಳಿಂದ ಪಡೆದ ವಿವಿಧ ನೌಕರರನ್ನು ಸೇರಿಸಿ ನಿರ್ವಹಿಸಲಾಗಿದೆ. ಸಾಮಾನ್ಯವಾಗಿ ಅವನು ಕಾರ್ಯನಿರ್ವಹಿಸುತ್ತಿರುವ ಅವನನ್ನು ಸ್ಥಳ ನಿಯುಕ್ತಿಗೊಳಿಸಲಾದ ಅಥವಾ ಅವನು ವಾಸಿಸುತ್ತಿರುವ ಮತಕ್ಷೇತ್ರದಲ್ಲಿ ಅಥವಾ ಅವನ ಸ್ವಂತ ಮತಕ್ಷೇತ್ರವಾಗಿರುವ ವಿಧಾನಸಭೆ ಮತಕ್ಷೇತ್ರದಲ್ಲಿ ಮತದಾನ ಕರ್ತವ್ಯಗಳನ್ನು ನಿರ್ವಹಿಸಲು ನಿಯೋಜಿಸಬಾರದು.

**ಪ್ರಶ್ನೆ. 2** **ಅವರಿಗೆ ಗೊತ್ತು ಮಾಡಲಾದ ಮತದಾನದ ಕೇಂದ್ರದ ನಿರ್ದಿಷ್ಟ ಸಂಖ್ಯೆ ಮತ್ತು ಹೆಸರಿನ ಬಗ್ಗೆ ಪೋಲಿಂಗ್ ಸಿಬ್ಬಂದಿಗೆ ಯಾವಾಗ ತಿಳಿಸುವುದು?**

ಉತ್ತರ. ಮತದಾನ ಕೇಂದ್ರದ ವಾಸ್ತವಿಕ ಸಂಖ್ಯೆ ಮತ್ತು ಹೆಸರನ್ನು ಕೇಂದ್ರದಲ್ಲಿ ಕರ್ತವ್ಯಕ್ಕೆ ವಿತರಣೆ ಕೇಂದ್ರಕ್ಕೆ ಬಂದಾಗ ಪೋಲೀಂಗ್ ಸಿಬ್ಬಂದಿಗಳಿಗೆ ಬಹಿರಂಗಪಡಿಸುವುದು.

**ಪ್ರಶ್ನೆ. 3** **ಮತದಾನ ಕೇಂದ್ರದಲ್ಲಿ ಮತದಾನ ಸಿಬ್ಬಂದಿ/ ಎಣಿಕೆ ಸಿಬ್ಬಂದಿಯಾಗಿ ನೇಮಕಗೊಂಡಿದ್ದರೆ ಆ ವ್ಯಕ್ತಿಯನ್ನು ಹೇಗೆ ಗುರುತಿಸಬಹುದು?**

ಉತ್ತರ. ಮತದಾನ ಸಿಬ್ಬಂದಿಯಾಗಿ ನೇಮಕಗೊಂಡಿರುವ ಸರ್ಕಾರಿ ನೌಕರರು ಜಿಲ್ಲಾ ಚುನಾವಣಾ ಅಧಿಕಾರಿ/ ರಿಟರ್ನಿಂಗ್ ಅಧಿಕಾರಿಯ ಮೂಲಕ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಗಳಿಂದ ಅವರನ್ನು ಸುಲಭವಾಗಿ ಗುರುತಿಸಬಹುದು.

**ಪ್ರಶ್ನೆ–4** **ಮಹಿಳಾ ಪೋಲಿಂಗ್ ಸಿಬ್ಬಂದಿಗೆ ಯಾವುದೇ ವಿನಾಯಿತಿ ಇರುತ್ತದೆಯೇ?**

ಉತ್ತರ: ಹೌದು, ಮಹಿಳಾ ಪೋಲಿಂಗ್ ಸಿಬ್ಬಂದಿಯನ್ನು ಗಣಕಯಂತ್ರ ಯಾದೃಚ್ಛೀಕರಣ ಪ್ರಕ್ರಿಯೆಯ ಆಧಾರದ ಮೇಲೆ ಕರ್ತವ್ಯಕ್ಕೆ ನಿಯೋಜಿಸುವಂತಿಲ್ಲ. ಅವರನ್ನು ವೀಕ್ಷಕರು ಭೌತಿಕ ಯಾದೃಚ್ಛೀಕರಣ ಪ್ರಕ್ರಿಯೆಯ ಮೂಲಕ ಸುತ್ತಮುತ್ತಲಿನ ಮತಕೇಂದ್ರಗಳ ಕರ್ತವ್ಯಕ್ಕೆ

ನಿಯೋಜಿಸಬಹುದು. ಇದರಿಂದ ಅವರು ಮತದಾನದ ದಿನದಂದೇ ಮುಂಜಾನೆ ಕರ್ತವ್ಯಗಳಿಗೆ ಹೋಗಬಹುದು.

**20.9 ಚುನಾವಣಾ ಪ್ರಚಾರ**

**ಪ್ರಶ್ನೆ. 1 ಚುನಾವಣಾ ಉದ್ದೇಶಗಳಿಗಾಗಿ ವಾಹನಗಳು ಚಲಿಸಲು ಯಾವುದೇ ನಿರ್ಭಂದವಿದೆಯೇ?**

ಉತ್ತರ. ಹೌದು, ಈ ಉದ್ದೇಶಕ್ಕಾಗಿ ಅಭ್ಯರ್ಥಿಯು ಯಾವುದೇ ಸಂಖ್ಯೆಯ ವಾಹನಗಳನ್ನು ಚಲಿಸಬಹುದು. (ಎಲ್ಲಾ ಯಾಂತ್ರಿಕೃತ/ ದ್ವಿಚಕ್ರ ವಾಹನಗಳನ್ನೊಳಗೊಂಡು ಮೋಟಾರು ವಾಹನಗಳು) ಆದರೆ ಅಂಥ ವಾಹನಗಳನ್ನು ಚಲಿಸುವುದಕ್ಕಾಗಿ ರಿಟರ್ನಿಂಗ್ ಅಧಿಕಾರಿಯ ಪೂರ್ವಾನುಮೋದನೆಯನ್ನು ಅವರು ಕೋರಿರಬೇಕು ಮತ್ತು ವಾಹನದ ವಿಂಡ್‌ಸ್ಕ್ರೀನ್ ಮೇಲೆ ಎದ್ದು ಕಾಣುವ (ಭಾವಚಿತ್ರವಲ್ಲದ) ಮೂಲ ಪ್ರತಿಯಲ್ಲಿ ರಿಟರ್ನಿಂಗ್ ಅಧಿಕಾರಿಯು ನೀಡಿದ ಪರವಾನಿಗೆಯನ್ನು ಪ್ರದರ್ಶಿಸಬೇಕು. ಪರವಾನಿಗೆಯು ವಾಹನದ ಸಂಖ್ಯೆ ಮತ್ತು ಇವರ ಹೆಸರಿನಲ್ಲಿ ನೀಡಿರುವ ಅಭ್ಯರ್ಥಿಯ ಹೆಸರು ಹೊಂದಿರಲೇಬೇಕು. ಇದಕ್ಕೆ ಸಂಬಂಧಿಸಿದಂತೆ ಭರಿಸಿದ ವೆಚ್ಚವನ್ನು ಪ್ರತಿಯಾಗಿ ಅಭ್ಯರ್ಥಿಯು ಬುಕ್ ಮಾಡತಕ್ಕದ್ದು.

**ಪ್ರಶ್ನೆ. 2 ಜಿಲ್ಲಾ ಚುನಾವಣಾ ಅಧಿಕಾರಿ/ ರಿಟರ್ನಿಂಗ್ ಅಧಿಕಾರಿಯಿಂದ ಅನುಮತಿ ಪಡೆಯದೆ ಚುನಾವಣಾ ಉದ್ದೇಶಗಳಿಗಾಗಿ ವಾಹನಗಳನ್ನು ಬಳಬಹುದೇ?**

ಉತ್ತರ. ಇಲ್ಲ. ಅಂಥ ವಾಹನವನ್ನು ಅಭ್ಯರ್ಥಿಗೆ ಪ್ರಚಾರಕ್ಕಾಗಿ ಅಧಿಕೃತಗೊಳಿಸಿದೆ ಎಂದು ಭಾವಿಸತಕ್ಕದ್ದು ಮತ್ತು ಭಾರತ ದಂಡ ಸಂಹಿತೆ ಅಧ್ಯಾಯ–**IX**ಎ ಉಪಬಂಧಗಳ ದಂಡವು ಅನ್ವಯವಾಗುವುದು ಮತ್ತು ಆದ್ದರಿಂದ ತಕ್ಷಣವೇ ಪ್ರಚಾರ ಕಾರ್ಯದಿಂದ ಹೊರ ಹೋಗತಕ್ಕದ್ದು.

**ಪ್ರಶ್ನೆ. 3(ಎ) ಸಾರ್ವಜನಿಕ ಸ್ವತ್ತಿನ ಮೇಲೆ ಸಂಬಂಧಪಟ್ಟ ಪಕ್ಷದ ಅಥವಾ ಅಭ್ಯರ್ಥಿಯ ಪೋಸ್ಟರ್, ಪ್ಲೇಕಾರ್ಡ್, ಬ್ಯಾನರ್, ಫ್ಲಾಗ್ ಇತ್ಯಾದಿಗಳು ಪ್ರದರ್ಶಿಸಲು ಯಾವುದೇ ನಿರ್ಭಂದವಿದೇಯೇ?**

ಉತ್ತರ. ಸ್ಥಳೀಯ ಕಾನೂನು ಮತ್ತು ನಿಷೇಧಾಜ್ಞೆ ಜಾರಿಯಲ್ಲಿರುವ ಉಪಬಂಧಗಳಿಗೆ ಒಳಪಟ್ಟು ಸಾರ್ವಜನಿಕ ಸ್ವತ್ತಿನ ಮೇಲೆ ಸಂಬಂಧಪಟ್ಟ ಪಕ್ಷ ಅಥವಾ ಅಭ್ಯರ್ಥಿಯು, ಪೋಸ್ಟರ್, ಪ್ಲೇಕಾರ್ಡ್, ಬ್ಯಾನರ್, ಫ್ಲಾಗ್ ಇತ್ಯಾದಿಗಳನ್ನು ಪ್ರದರ್ಶಿಸಬಹುದು.

**ಪ್ರಶ್ನೆ. 3(ಬಿ) ಖಾಸಗಿ ಸ್ಥಳಗಳು/ ಸ್ವತ್ತುಗಳ ಮೇಲೆ ಗೋಡೆ ಬರಹಗಳು, ಭಿತ್ತಿಪತ್ರಗಳು, ಅಂಟಿಸುವಿಕೆ ಫಲಕಗಳನ್ನು ನಿಲ್ಲಿಸುವುದು ಮುಂತಾದವುಗಳನ್ನು ಮಾಡಲು ಸ್ಥಳೀಯ ಕಾನೂನು/ ಉಪವಿಧಿಗಳು ಅನುಮತಿ ನೀಡಿದರೆ, ಸ್ಥಳಗಳು/ ಸ್ವತ್ತುಗಳು ಮಾಲೀಕರಿಂದ ಪೂರ್ವಲಿಖಿತ ಅನುಮೋದನೆ ಪಡೆಯುವುದು ಅಗತ್ಯವಿದೆಯೇ?**

ಉತ್ತರ. ಹೌದು.

ಅಭ್ಯರ್ಥಿಯು ಸ್ವತ್ತುಗಳು/ ಸ್ಥಳಗಳ ಮಾಲೀಕರಿಂದ ಪೂರ್ವ ಲಿಖಿತ ಅನುಮೋದನೆ ಪಡೆಯುವುದು ಅಗತ್ಯವಾಗಿದೆ ಮತ್ತು ಅಂಥ ಅನುಮತಿಯ (ಫೋಟೋಕಾಫಿ) 3 ದಿನಗಳ ಒಳಗಡೆ ರಿಟರ್ನಿಂಗ್ ಅಧಿಕಾರಿ ಅಥವಾ ಆ ಉದ್ದೇಶಕ್ಕಾಗಿ ಅವನು ಗೊತ್ತುಪಡಿಸಿದ ಅಧಿಕಾರಿಗೆ ಸಲ್ಲಿಸತಕ್ಕದ್ದು.

**ಪ್ರಶ್ನೆ. 3(ಸಿ) ಮೆರವಣಿಗೆ ಅವಧಿಯಲ್ಲಿ ವಾಹನಗಳ ಮೇಲೆ ಸಂಬಂಧಪಟ್ಟ ಪಕ್ಷ ಅಥವಾ ಅಭ್ಯರ್ಥಿಗಳು ಪೋಸ್ಟರ್/ ಭಿತ್ತಿಚಿತ್ರ/ ಬ್ಯಾನರ್/ ಫ್ಲಾಗ್‌ಗಳನ್ನು ಪ್ರದರ್ಶಿಸುವುದಕ್ಕಾಗಿ ಯಾವುದಾದರೂ ನಿರ್ಬಂಧವಿದೆಯೇ?**

ಉತ್ತರ. ಮೋಟಾರು ವಾಹನ ಅಧಿನಿಯಮ ಮತ್ತು ಯಾವುದೇ ಇತರ ಸ್ಥಳೀಯ ಕಾನೂನುಗಳು/ ಉಪವಿಧಿಗಳ ಉಪಬಂಧಗಳನುಸಾರ ಅನುರೂಪಕ್ಕೆ ಒಳಪಟ್ಟು ಮೆರವಣಿಗೆಯ ಅವಧಿಯಲ್ಲಿ ಅಭ್ಯರ್ಥಿಯ ಪಕ್ಷಕಾರರ ಅಥವಾ ಅವರ ಸ್ವಂತ ವಾಹನದ ಮೇಲೆ ಒಂದು ಪೋಸ್ಟರ್/ ಭಿತ್ತಿಚಿತ್ರ/ ಬ್ಯಾನರ್/ ಫ್ಲಾಗ್/ ಗಳನ್ನು ಅವರು ಪ್ರದರ್ಶಿಸಬಹುದು.

**ಪ್ರಶ್ನೆ. 3(ಡಿ) ರಾಜಕೀಯ ಪ್ರಚಾರಕ್ಕೆ ಮತ್ತು ರ್‍ಯಾಲಿಗಳಿಗಾಗಿ (ಸರ್ಕಾರಿ ಅನುದಾನಿತ, ಖಾಸಗಿ ಅಥವಾ ಸರ್ಕಾರವಾಗಲಿ) ಶೈಕ್ಷಣಿಕ ಸಂಸ್ಥೆಗಳು ಸೇರಿದಂತೆ ಅವುಗಳ ಮೈದಾನವನ್ನು ಉಪಯೋಗಿಸುವುದಕ್ಕಾಗಿ ಯಾವುದಾದರೂ ನಿರ್ಬಂಧವಿದೆಯೇ?**

ಉತ್ತರ. ರಾಜಕೀಯ ಪ್ರಚಾರಗಳು ಮತ್ತು ರ್‍ಯಾಲಿಗಳಿಗಾಗಿ (ಸರ್ಕಾರಿ ಅನುದಾನಿತ, ಖಾಸಗಿ ಅಥವಾ ಸರ್ಕಾರದ ಮೈದಾನವಾಗಲಿ) ಶೈಕ್ಷಣಿಕ ಸಂಸ್ಥೆಗಳು ಸೇರಿದಂತೆ ಅವುಗಳ ಮೈದಾನವನ್ನು ಬಳಕೆ ಮಾಡುವುದಕ್ಕೆ ಅನುಮತಿ ನೀಡುವುದಿಲ್ಲ.

**ಪ್ರಶ್ನೆ. 4 ಪ್ರಚಾರಕ್ಕಾಗಿ ಬಳಸಿದ ವಾಹನಗಳಲ್ಲಿ ಬಾಹ್ಯ ಜೋಡಣೆ/ ಮಾರ್ಪಾಡಿಸಲು ಅನುಮತಿಸಲಾಗಿದೆಯೇ?**

ಉತ್ತರ. ಧ್ವನಿವರ್ಧಕ ಜೋಡಣೆಯು ಸೇರಿದಂತೆ ವಾಹನಗಳ ಬಾಹ್ಯ ಮಾರ್ಪಾಡು ಮಾಡುವುದು. ಮೋಟಾರು ವಾಹನಗಳ ಅಧಿನಿಯಮ/ ನಿಯಮಗಳು ಹಾಗೂ ಯಾವುದೇ ಇತರ ಸ್ಥಳೀಯ ಅಧಿನಿಯಮ/ ನಿಯಮಗಳ ಉಪಬಂಧಗಳಿಗೆ ಒಳಪಟ್ಟಿರಬೇಕು. ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರದಿಂದ ಅವಶ್ಯಕವಾಗಿ ಅನುಮತಿ ಪಡೆದ ತರುವಾಯ ಮಾತ್ರವೇ ಬಳಸುವುದು.

**ಪ್ರಶ್ನೆ. 5 ಪಕ್ಷ ಅಥವಾ ಅಭ್ಯರ್ಥಿಗಳಿಂದ ತಾತ್ಕಾಲಿಕ ಕಛೇರಿಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಮತ್ತು ನಿರ್ವಹಣೆಗಾಗಿ ಷರತ್ತುಗಳು/ ಮಾರ್ಗಸೂಚಿಗಳಿವಿಯೇ?**

ಉತ್ತರ. ಹೌದು. ಅಸ್ತಿತ್ವದಲ್ಲಿರುವ ಮತ ಕೇಂದ್ರದ 200 ಮೀಟರ್ ಒಳಗಡೆ ಯಾವುದೇ ಶೈಕ್ಷಣಿಕ ಸಂಸ್ಥೆಗಳಿಗೆ/ ಆಸ್ಪತ್ರೆಗಳಿಗೆ ಹೊಂದಿಕೊಂಡಿರುವ ಯಾವುದೇ ಧಾರ್ಮಿಕ ಸ್ಥಳಗಳಲ್ಲಿ ಅಥವಾ ಅಂಥ ಧಾರ್ಮಿಕ ಸ್ಥಳಗಳು/ ಅದಕ್ಕೆ ಹೊಂದಿಕೊಂಡಿರುವ ಕ್ಯಾಂಪಸ್‌ನಲ್ಲಿ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತುಗಳಾಗಿರಲಿ ಒತ್ತುವರಿಯಾಗಿರುವ ಯಾವುದೇ ಜಾಗದಲ್ಲಿ ಅಂಥ ಕಛೇರಿಗಳನ್ನು ತೆರೆಯತಕ್ಕದ್ದಲ್ಲ. ಅಲ್ಲದೆ, ಅಂಥ ಕಚೇರಿಗಳಲ್ಲಿ ಪಕ್ಷದ ಚಿಹ್ನೆ/ ಭಾವಚಿತ್ರಗಳೊಂದಿಗೆ ಒಂದು ಪಕ್ಷದ ಬಾವುಟ ಮತ್ತು ಬ್ಯಾನರ್ ಮಾತ್ರ ಪ್ರದರ್ಶಿಶಬಹುದು ಮತ್ತು ಮುಂದಿನ ಷರತ್ತುಗಳಿಗೆ ಒಳಪಟ್ಟು ಅಂಥ ಕಚೇರಿಗಳಲ್ಲಿ ಬಳಸಿದ ಬ್ಯಾನರ್‌ನ ಗಾತ್ರವು 4 ಅಡಿ X 8 ಅಡಿಗಳನ್ನು ಮೀರತಕ್ಕದ್ದಲ್ಲ. ಅಲ್ಲದೆ, ಸ್ಥಳೀಯ ಕಾನೂನುಗಳು ಬ್ಯಾನರ್/ ಪ್ರಕಟಣಾ ಫಲಕವು ಇತ್ಯಾದಿಗಳಿಗಾಗಿ ಕಡಿಮೆ ಗಾತ್ರವನ್ನು ನಿಗದಿಪಡಿಸಿದ್ದರೆ, ಆಗ ಸ್ಥಳೀಯ ಕಾನೂನು ಮೂಲಕ ನಿಗದಿಪಡಿಸಿದ ಕಡಿಮೆ ಗಾತ್ರವು ಚಾಲ್ತಿಯಲ್ಲಿರತಕ್ಕದ್ದು.

**ಪ್ರಶ್ನೆ. 6 ಸಾರ್ವಜನಿಕ ಸಭೆಗಳು ಮತ್ತು ಮೆರವಣಿಗೆಗಳು ನಡೆಯದೆ ಇದ್ದರು ಅವುಗಳಿಗೆ ಅಂತಿಮ ಗಡುವು ಇದೆಯೇ?**

ಉತ್ತರ. ಸಾರ್ವಜನಿಕ ಸಭೆಗಳನ್ನು ರಾತ್ರಿ 10 ಗಂಟೆಯ ನಂತರ ಹಾಗೂ ಬೆಳಿಗ್ಗೆ 6.00 ಗಂಟೆಯ ಮುಂಚಿತವಾಗಿ ನಡೆಸತಕ್ಕದ್ದಲ್ಲ. ಅಲ್ಲದೆ, ಅಭ್ಯರ್ಥಿಯು ಮತದಾನ ಮುಕ್ತಾಯವಾಗಲು ನಿಗದಿಪಡಿಸಿದ 48 ಗಂಟೆಗಳ ಅವಧಿಯಲ್ಲಿ ಕೊನೆಗೊಳ್ಳುವ ಅವಧಿಯಲ್ಲಿ, ಸಾರ್ವಜನಿಕ ಸಭೆಗಳು ಮತ್ತು ಮೆರವಣಿಗಳನ್ನು ನಡೆಸಬಾರದು. ಒಂದು ವೇಳೆ ಮತದಾನ ದಿನವು 7ನೇ ಡಿಸೆಂಬರ್ 2018 (ಶುಕ್ರವಾರ) ಮತ್ತು ಮತದಾನದ ಗಂಟೆಗಳು (ಅವಧಿ) ಬೆಳಿಗ್ಗೆ 8.00 ರಿಂದ ಸಂಜೆ. 8.00 ರ ವರೆಗೆ ಸಾರ್ವಜನಿಕ ಸಭೆಗಳು ಮತ್ತು ಮೆರವಣಿಗೆಗಳನ್ನು 5ನೇ ಡಿಸೆಂಬರ್ 2018 (ಬುದುವಾರ) ಸಂಜೆ 5.00 ಗಂಟೆಗೆ ಮುಕ್ತಾಯ ಮಾಡತಕ್ಕದ್ದು.

(ಉಲ್ಲೇಖ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕಟಣೆ 126ನ್ನು ನೋಡಿ).

**ಪ್ರಶ್ನೆ. 7 ಪ್ರಚಾರ ಅವಧಿ ಮುಗಿದ ನಂತರ ಮತಕ್ಷೇತ್ರದಲ್ಲಿ ರಾಜಕೀಯ ಚಟುವಟಿಕೆಗಳಿಗೆ ಬಾಗಿಯಾಗಿ ಸಂಬಂಧಿಸಿದಂತೆ ಯಾವುದೇ ನಿರ್ಬಂಧವಿದೆಯೇ?**

ಉತ್ತರ. ಚುನಾವಣಾ ಪ್ರಚಾರ ಅವಧಿ ಮುಗಿದ ನಂತರ (48 ಗಂಟೆಯಿಂದ ಪ್ರಾರಂಭವಾಗಿ ಮತದಾನ ಮುಗಿಯುವ ಮುಂಚೆ ಮತಕ್ಷೇತ್ರದ ಹೊರಗಿನಿಂದ ಬಂದಿರುವಂಥ ರಾಜಕೀಯ ಚಟುವಟಿಕೆಗಳು ಇತ್ಯಾದಿಗಳಿಗೆ ಹಾಜರಾಗಿ ಮತ್ತು ಮತಕ್ಷೇತ್ರದಲ್ಲಿ ಮತದಾರರಲ್ಲದಂಥ ವ್ಯಕ್ತಿಗಳು ಮತಕ್ಷೇತ್ರದಲ್ಲಿ ಇದ್ದು ಮುಂದುವರೆಯತಕ್ಕದ್ದಲ್ಲ. ಪ್ರಚಾರ ಅವಧಿ ಮುಗಿದ ನಂತರ ಅಂಥ ಕಾರ್ಯಕರ್ತರು ತಕ್ಷಣ ಮತಕ್ಷೇತ್ರವನ್ನು ಬಿಡಬೇಕು.

**ಪ್ರಶ್ನೆ. 8** **ರಾಜ್ಯದಲ್ಲಿ ರಾಜಕೀಯ ಪಕ್ಷದ ಚುನಾವಣೆಯ ಉಸ್ತುವಾರಿ ಹೊಂದಿರುವಂಥ ಪದಾಧಿಕಾರಿ ಸಂದರ್ಭಗಳಲ್ಲಿ ಅಂತಹ ನಿರ್ಬಂಧವು ಅನ್ವಯವಾಗುವುದೇ?**

ಉತ್ತರ. ಹೌದು. ಆದಾಗ್ಯೂ ಚುನಾವಣಾ ಅವಧಿಯಲ್ಲಿ ರಾಜ್ಯದ ಪ್ರಭಾರದಲ್ಲಿರುವಂಥ ಪದಾಧಿಕಾರಿಗೆ ಸಂಬಂಧಿಸಿದಂತೆ ಮಾತ್ರ ಲೋಕಸಭಾ/ ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆಗಳ ಅವಧಿಯಲ್ಲಿ ಅಂಥ ನಿರ್ಬಂಧಗಳು ಸಂಗತವಾಗುವುದಿಲ್ಲ. ಅಂಥ ಪದಾಧಿಕಾರಿ ರಾಜ್ಯ ಕೇಂದ್ರ ಸ್ಥಳದಲ್ಲಿ ಅವನು ಉಳಿದಿರುವ ಸ್ಥಳವನ್ನು ಘೋಷಿಸಬೇಕು ಮತ್ತು ಪ್ರಶ್ನಿತ ಅವಧಿಯಲ್ಲಿ ಅವನ ಚಲನವಲನವು ತನ್ನ ಪಕ್ಷದ ಕಚೇರಿ ಮತ್ತು ಅವನು ಉಳಿದುಕೊಂಡಿರುವ ಸ್ಥಳ ನಡುವೆ ಸಾಮಾನ್ಯವಾಗಿ ಸ್ಥಿರೀಕರಿಸುವಂತೆ ಇರತಕ್ಕದ್ದು. ಮೇಲಿನ ಎಲ್ಲ ನಿರ್ಬಂಧಗಳು ಎಲ್ಲಾ ಚುನಾವಣೆಗಳಲ್ಲಿ ಎಲ್ಲ ಇತರ ಕಾರ್ಯಕರ್ತರಿಗೆ ಅನ್ವಯವಾಗುವವು.

**ಪ್ರಶ್ನೆ. 9** **ಚುನಾವಣಾ ಪ್ರಕ್ರಿಯೆಯ ಅವಧಿಯ ಸಂಧಿಗ್ಧ ಸಂದರ್ಭಗಳಲ್ಲಿ ವಿಡಿಯೋ ಮಾಡಲು ಯಾವುದೇ ಏರ್ಪಾಡುಗಳನ್ನು ಮಾಡಿರುವುದೇ?**

ಉತ್ತರ. ಹೌದು. ಪಕ್ಷಗಳ ರಾಷ್ಟ್ರ/ ರಾಜ್ಯ ಮಟ್ಟದ ರಾಜಕೀಯ ಪಕ್ಷಗಳ ಮುಖಂಡರು ಸಭೆಗಳಲ್ಲಿ ಭಾಷಾಣ ಮಾಡಿದ/ ಭಾಗವಹಿಸಿದ ಹಿಂಸಾತ್ಮಕ ಘಟನೆಗಳನ್ನು ಸಂಧಿಗ್ಧ ಸಂದರ್ಭಗಳನ್ನು ಚುನಾವಣೆ ಕ್ಷೇತ್ರದಲ್ಲಿ ಧ್ವನಿಮುದ್ರಣ ಮಾಡಲು ಮತ್ತು ವಿಡಿಯೋ ಮಾಡಲು ವಿಡಿಯೋ ತಂಡಗಳನ್ನು ರಚಿಸುವುದು.

**ಪ್ರಶ್ನೆ. 10** **ಪ್ರಚಾರ ಅವಧಿಯಲ್ಲಿ ಅನುಮತಿಸಲಾದ ಕ್ಯಾಪ್, ಮಾಸ್ಕ್ (ಮುಖವಾಡ) ಸ್ಕಾರ್ಫ್ ಮುಂತಾದ ವಿಶೇಷ ಸಾಮಗ್ರಿಗಳನ್ನು ಧರಿಸಬಹುದೇ?**

ಉತ್ತರ. ಹೌದು. ಸಂಬಂಧಪಟ್ಟ ಅಭ್ಯರ್ಥಿಯ ಚುನಾವಣಾ ವೆಚ್ಚಗಳಲ್ಲಿ ಅವರಿಗೆ ಒದಗಿಸಿದ ಲೆಕ್ಕವಾಗಿರುವುದು. ಆದಾಗ್ಯೂ, ಪಕ್ಷ/ ಅಭ್ಯರ್ಥಿಯು ಮುಖ್ಯ ಪರಿಕರಗಳಾದ ಸೀರೆ, ಅಂಗಿ ಇತ್ಯಾದಿಗಳ ಪೂರೈಕೆ ಮತ್ತು ಹಂಚಿಕೆಯು ಮತದಾರರಿಗೆ ಲಂಚದ ಮೊತ್ತವೆಂಬಂತೆ ಅನುಮತಿಸಬಾರದು.

**ಪ್ರಶ್ನೆ. 11** **ಕರಪತ್ರಗಳು, ಪೋಸ್ಟರ್‌ಗಳು ಮುಂತಾದವುಗಳ ಮುದ್ರಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧಗಳೀವೆಯೇ?**

ಉತ್ತರ. ಹೌದು, ಮುದ್ರಕರು ಮತ್ತು ಅದರ ಪ್ರಕಟಣಕಾರರ ಮುಖ ಮತ್ತು ವಿಳಾಸಗಳು ಹೊಂದದೆ ಇರುವ ಯಾವುದೇ ಚುನಾವಣೆ ಕರಪತ್ರ ಅಥವಾ ಪೋಸ್ಟ್‌ರ್‌ಗಳಲ್ಲಿ ಹೆಸರನ್ನು ನೀವು ಮುದ್ರಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಅಥವಾ

ಪ್ರಕಟಿಸುವಂತೆ ಮಾಡತಕ್ಕದ್ದಲ್ಲ. [ಉಲ್ಲೇಖ; ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 127ಎ ಪ್ರಕರಣ]

**ಪ್ರಶ್ನೆ 12** **ಆರಾಧನಾ ಸ್ಥಳಗಳನ್ನು ಚುನಾವಣಾ ಪ್ರಚಾರದ ವೇದಿಕೆಯಾಗಿ ಬಳಸಿಕೊಳ್ಳುವುದಕ್ಕೆ ಯಾವುದಾದರೂ ನಿರ್ಬಂಧವಿದೆಯೇ?**

ಉತ್ತರ ಹೌದು, ಆರಾಧನಾ ಸ್ಥಳಗಳನ್ನು ಚುನಾವಣಾ ಪ್ರಚಾರದ ವೇದಿಕೆಯಾಗಿ ಯಾವುದೇ ರೀತಿಯಲ್ಲಿ ಬಳಸಿಕೊಳ್ಳುವುದಕ್ಕೆ ಮಾದರಿ ನೀತಿಸಂಹಿತೆಯ ಉಪಬಂಧಗಳು ನಿಷೇಧಿಸುತ್ತವೆ. ಧಾರ್ಮಿಕ ಸಂಸ್ಥೆಗಳ (ದುರ್ಬಳಕೆಯ ಪ್ರತಿಬಂಧ) ಅಧಿನಿಯಮ, 1988, ಇದು ಯಾವುದೇ ರಾಜಕೀಯ ಆಲೋಚನೆಗಳ ಅಥವಾ ರಾಜಕೀಯ ಚಟುವಟಿಕೆಯ ಉತ್ತೇಜನ ಅಥವಾ ಪ್ರಚಾರಕ್ಕಾಗಿ ಅಥವಾ ಯಾವುದೇ ರಾಜಕೀಯ ಪಕ್ಷದ ಪ್ರಯೋಜನಕ್ಕಾಗಿ ಧಾರ್ಮಿಕ ಸಂಸ್ಥೆಗಳನ್ನು ಅಥವಾ ಧಾರ್ಮಿಕ ಸಂಸ್ಥೆಗಳ ನಿಧಿಗಳನ್ನು ಬಳಸಿಕೊಳ್ಳುವುದನ್ನು ನಿಷೇಧಿಸುತ್ತದೆ.

## 20.10 ಮತದಾನದ ದಿನ

**ಪ್ರಶ್ನೆ.1** **ಮತದಾನದ ದಿನದಂದು ಮತಗಟ್ಟೆ ಸಮೀಪ ಅಭ್ಯರ್ಥಿ/ರಾಜಕೀಯ ಪಕ್ಷಗಳು ಮತಗಟ್ಟೆ ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಮಾರ್ಗಸೂಚಿಗಳಿವೆಯೇ?**

ಉತ್ತರ: ಮತಗಟ್ಟೆಗಳಿಂದ 200 ಮೀಟರ್ ಮೀರಿದ ಅಂತರದಲ್ಲಿ ಒಂದು ಚುನಾವಣಾ ಕಟ್ಟೆಯನ್ನು ಸ್ಥಾಪಿಸಬಹುದಾಗಿದ್ದು ಅಲ್ಲಿ ಕೇವಲ ಒಂದು ಮೇಜು ಮತ್ತು ಎರಡು ಕುರ್ಚಿ ಹಾಗೂ ಅಲ್ಲಿ ಇರುವ ಇಬ್ಬರು ವ್ಯಕ್ತಿಗಳ ಸಂರಕ್ಷಣೆಗೆ ಒಂದು ಛತ್ರಿ ಅಥವಾ ಒಂದು ತುಂಡು ಟಾರ್ಪಲೀನ್ ಬಟ್ಟೆ ಜೊತೆಗೆ ಆ ಕಟ್ಟೆಯಲ್ಲಿ ಅಭ್ಯರ್ಥಿ/ಪಕ್ಷ/ಚುನಾವಣಾ ಚಿಹ್ನೆಯನ್ನು ತೋರಿಸುವ 3 X 4.5 ಅಡಿ ಅಳತೆಯ ಒಂದು ಬ್ಯಾನರ್ ಇರುತ್ತದೆ. ಅಲ್ಲಿ ಯಾವುದೇ ಗುಂಪು ಸೇರಲು ಅವಕಾಶವಿರುವುದಿಲ್ಲ.

**ಪ್ರಶ್ನೆ:2** **ಮತಗಟ್ಟೆಯನ್ನು ಸ್ಥಾಪಿಸುವುದಕ್ಕಾಗಿ ಸಂಬಂಧಪಟ್ಟ ಸರ್ಕಾರಿ ಪ್ರಾಧಿಕಾರಗಳ ಅಥವಾ ಸ್ಥಳೀಯ ಪ್ರಾಧಿಕಾರಗಳ ಲಿಖಿತ ಅನುಮತಿಯನ್ನು ಪಡೆದುಕೊಳ್ಳುವ ಅಗತ್ಯವಿದೆಯೇ?**

ಉತ್ತರ: ಹೌದು. ಅಂಥ ಚುನಾವಣಾ ಕಟ್ಟೆಗಳನ್ನು ಸ್ಥಾಪಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸರ್ಕಾರಿ ಪ್ರಾಧಿಕಾರಗಳ ಅಥವಾ ಸ್ಥಳೀಯ ಪ್ರಾಧಿಕಾರಗಳ ಲಿಖಿತ ಅನುಮತಿಯನ್ನು ಪಡೆದುಕೊಳ್ಳುವುದು ಅಗತ್ಯವಾಗಿರುತ್ತದೆ. ಪೊಲೀಸ್/ಸಂಬಂಧಪಟ್ಟ ಚುನಾವಣಾ

ಅಧಿಕಾರಿಗಳು ಕೇಳಿದಾಗ ಅವರ ಮುಂದೆ ಹಾಜರುಪಡಿಸುವುದಕ್ಕಾಗಿ ಈ ಚುನಾವಣಾ ಕಟ್ಟೆಯನ್ನು ನಿರ್ವಹಿಸುವವರಿಗೆ ಲಿಖಿತ ಅನುಮತಿಯು ಲಭ್ಯವಾಗುವಂತೆ ಮಾಡಬೇಕು.

**ಪ್ರಶ್ನೆ:3** **ಒಂದು ರಾಜಕೀಯ ಪಕ್ಷವು ಒಂದು ಪ್ರದೇಶದಲ್ಲಿ ಮತಗಟ್ಟೆಯನ್ನು ಸ್ಥಾಪಿಸಲು ಸಾಧ್ಯವಿಲ್ಲದಿದ್ದರೆ ಅಥವಾ ಸ್ಥಾಪಿಸಲು ಇಚ್ಛೆ ಇಲ್ಲದಿದ್ದರೆ ಮತದಾರರು ತಮ್ಮ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಗುರುತಿಸುವುದಕ್ಕಾಗಿ ಯಾವುದೇ ಸೌಲಭ್ಯವನ್ನು ಒದಗಿಸಲಾಗಿದೆಯೇ?**

ಉತ್ತರ: ಹೌದು. ಮತದಾರರು, ಮತದಾರರ ಪಟ್ಟಿಯಲ್ಲಿ ಅಥವಾ ಮತಗಟ್ಟೆಗಳಲ್ಲಿ ಅವರ ಕ್ರಮಸಂಖ್ಯೆಯನ್ನು ಗುರುತಿಸುವುದಕ್ಕಾಗಿ ಅವರಿಗೆ ನೆರವು ನೀಡಲು ಅಕಾರಾದಿ ಕ್ರಮದಲ್ಲಿ ಮತದಾರರ ಪಟ್ಟಿಗಳನ್ನು ಒದಗಿಸಲಾಗಿರುವ ಅಧಿಕಾರಿಗಳ ತಂಡವು ನಿರ್ವಹಿಸುವ ಯುಕ್ತ ಚಿಹ್ನೆಗಳನ್ನು ನೆಲೆಗೊಳಿಸಿದ ಮೂರು ಅಥವಾ ಹೆಚ್ಚಿನ ಮತಗಟ್ಟೆಗಳ ಆವರಣಗಳ/ಕಟ್ಟಡಗಳ ಸ್ಥಳದಲ್ಲಿ "ಮತದಾರರ ಸಹಾಯ ಚುನಾವಣಾ ಕಟ್ಟೆ"ಯನ್ನು ಸ್ಥಾಪಿಸಲಾಗಿದೆ. ರಾಜಕೀಯ ಪಕ್ಷಗಳು ಮುಂಚಿತವಾಗಿ ತಮ್ಮ ಅಸಮರ್ಥತೆಯನ್ನು ತಿಳಿಸಿದರೆ, ಜಿಲ್ಲಾ ಚುನಾವಣಾ ಅಧಿಕಾರಿಯು, ಇತರ ಪ್ರದೇಶಗಳಲ್ಲಿಯೂ ಸಹ ಅಂಥ ಏರ್ಪಾಟುಗಳನ್ನು ಮಾಡುವ ಬಗ್ಗೆ ಪರಿಗಣಿಸಬಹುದು.

**ಪ್ರಶ್ನೆ:4** **ಮತಗಟ್ಟೆಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಚುನಾವಣಾ ಪ್ರಚಾರದ ಮೇಲೆ ಯಾವುದೇ ನಿರ್ಬಂಧವಿದೆಯೇ?**

ಉತ್ತರ: ಹೌದು. ಮತಗಟ್ಟೆಯ ಒಂದು ನೂರು ಮೀಟರ್‌ಗಳ ಅಂತರದೊಳಗೆ ಮತ ಮುಂತಾದವುಗಳಿಗಾಗಿ ಚುನಾವಣಾ ಪ್ರಚಾರ ಮಾಡುವುದು ಮತದಾನದ ದಿನದಂದು ನಿಷೇಧಿಸಲಾಗಿದೆ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 130ನೇ ಪ್ರಕರಣವನ್ನು ನೋಡಿ).

**ಪ್ರಶ್ನೆ:5** **ಮತಗಟ್ಟೆಗೆ ಅಥವಾ ಸಮೀಪಕ್ಕೆ ಆಯುಧಗಳೊಂದಿಗೆ ಹೋಗುವುದಕ್ಕೆ ಯಾವುದೇ ನಿರ್ಬಂಧವಿದೆಯೇ?**

ಉತ್ತರ: ಹೌದು. ಶಸ್ತ್ರಾಸ್ತ್ರಗಳ ಅಧಿನಿಯಮ, 1959ರಲ್ಲಿ ಪರಿಭಾಷಿಸಿರುವಂತೆ ಮತದಾನದ ದಿನದಂದು ಮತಗಟ್ಟೆಯ ನೆರೆಹೊರೆಯೊಳಗೆ ಯಾರೇ ವ್ಯಕ್ತಿಯು ಆಯುಧಗಳೊಂದಿಗೆ ಹೋಗಲು ಅವಕಾಶವಿರುವುದಿಲ್ಲ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 134ಬಿಪ್ರಕರಣವನ್ನು ನೋಡಿ).

**ಪ್ರಶ್ನೆ6** **ಒಬ್ಬ ಅಭ್ಯರ್ಥಿಯು ಮತದಾನ ದಿನದಂದು ಎಷ್ಟು ವಾಹನಗಳನ್ನು ಹೊಂದಲು ಹಕ್ಕುಳ್ಳವನಾಗಿರುತ್ತಾನೆ?**

ಉತ್ತರ: (I) ಲೋಕಸಭೆಗೆ ನಡೆಯುವ ಒಂದು ಚುನಾವಣೆಗೆ **ಅಭ್ಯರ್ಥಿಯು** ಕೆಳಕಂಡಂತವುಗಳಿಗೆ ಹಕ್ಕುಳ್ಳವರಾಗಿರುತ್ತಾರೆ:

(ಎ) ಇಡೀ ಮತಕ್ಷೇತ್ರದ ಸಂಬಂಧದಲ್ಲಿ ಅವರ ಸ್ವಂತ ಬಳಕೆಗಾಗಿ ಒಂದು ವಾಹನ.

(ಬಿ) ಇಡೀ ಮತಕ್ಷೇತ್ರಕ್ಕೆ **ಅವರ** ಚುನಾವಣಾ ಏಜೆಂಟ್‌ನ ಬಳಕೆಗಾಗಿ ಒಂದು ವಾಹನ.

(ಸಿ) ಇದರ ಜೊತೆಗೆ, ಲೋಕಸಭೆ ಮತಕ್ಷೇತ್ರದಲ್ಲಿ ಒಳಗೊಂಡಿರುವ ಪ್ರತಿಯೊಂದು ವಿಧಾನಸಭಾ ವಲಯದಲ್ಲಿ ಸಂದರ್ಭಾನುಸಾರ ನಿಮ್ಮ ಕಾರ್ಯಕರ್ತರ ಅಥವಾ ಪಕ್ಷದ ಕಾರ್ಯಕರ್ತರ ಬಳಕೆಗಾಗಿ ಒಂದು ವಾಹನ.

(II) ಒಂದು ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ, ಅಭ್ಯರ್ಥಿಯು ಮುಂದಿನವುಗಳಿಗೆ ಹಕ್ಕುಳ್ಳವರಾಗಿರುತ್ತಾರೆ:

(ಎ) **ಅವರ** ಸ್ವಂತ ಬಳಕೆಗಾಗಿ ಒಂದು ವಾಹನ

(ಬಿ) **ಅವರ** ಚುನಾವಣಾ ಏಜೆಂಟ್‌ನ ಬಳಕೆಗಾಗಿ ಒಂದು ವಾಹನ

(ಸಿ) ಇದರ ಜೊತೆಗೆ, **ಅವರ** ಕಾರ್ಯಕರ್ತರು ಅಥವಾ ಪಕ್ಷದ ಕಾರ್ಯಕರ್ತರ ಬಳಕೆಗಾಗಿ ಒಂದು ವಾಹನ.

**ಪ್ರಶ್ನೆ:7** **ಅಭ್ಯರ್ಥಿಯು ಮತದಾನದ ದಿನದಂದು ಮತಕ್ಷೇತ್ರದಿಂದ ಗೈರುಹಾಜರಾದರೆ, ಆತನ ಹೆಸರಿನಲ್ಲಿ ಹಂಚಿಕೆ ಮಾಡಿದ ವಾಹನವನ್ನು ಯಾರೇ ಇತರ ವ್ಯಕ್ತಿಯು ಬಳಸಬಹುದೇ?**

ಉತ್ತರ: ಇಲ್ಲ, ಅಭ್ಯರ್ಥಿಗೆ ಹಂಚಿಕೆ ಮಾಡಿದ ವಾಹನವನ್ನು ಯಾರೇ ಇತರ ವ್ಯಕ್ತಿಯು ಬಳಸಲು ಅವಕಾಶವಿರುವುದಿಲ್ಲ.

**ಪ್ರಶ್ನೆ 8** **ಮತದಾನ ದಿನದಂದು ಪರಿಮಿತಿಯೊಳಗೆ ಯಾವುದೇ ವಿಧದ ವಾಹನವನ್ನು ಬಳಸಬಹುದೇ?**

ಉತ್ತರ: ಇಲ್ಲ, ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಪಕ್ಷದ ಕಾರ್ಯಕರ್ತರು ಅಥವಾ ಕಾರ್ಯಕರ್ತರು ನಾಲ್ಕು/ಮೂರು/ದ್ವಿಚಕ್ರದ ವಾಹನಗಳನ್ನು ಮಾತ್ರ ಅಂದರೆ (ಎಲ್ಲಾ ವಿಧಗಳ) ಕಾರುಗಳು, ಟ್ಯಾಕ್ಸಿಗಳು, ಅಟೋರೀಕ್ಷಾಗಳು, ರೀಕ್ಷಾಗಳು ಮತ್ತು ದ್ವಿಚಕ್ರ ವಾಹನಗಳನ್ನು ಬಳಸಲು ಅವಕಾಶನೀಡಲಾಗುವುದು. ಮತದಾನ ದಿನದಂದು ಈ ವಾಹನಗಳಲ್ಲಿ ಸಂಚರಿಸಲು ಚಾಲಕರು ಸೇರಿದಂತೆ ಐದು ಮಂದಿಗಿಂತ ಹೆಚ್ಚಲ್ಲದ ವ್ಯಕ್ತಿಗಳಿಗೆ ಅವಕಾಶನೀಡಲಾಗುವುದು.

**ಪ್ರಶ್ನೆ 9** **ಚುನಾವಣಾ ಪ್ರಾಧಿಕಾರದ ಮೂಲಕ ಮತದಾನ ವ್ಯವಹರಣೆಗಳ ಮೇಲ್ವಿಚಾರಣೆ ಮಾಡಲು ಮತಗಟ್ಟೆಗಳೊಳಗೆ ದೃಶ್ಯಚಿತ್ರೀಕರಣ ಅಥವಾ ಛಾಯಾಚಿತ್ರೀಕರಣವನ್ನು ಮಾಡಲಾಗುತ್ತದೆಯೇ?**

ಉತ್ತರ: ಸರ್ವೋಚ್ಚ ನ್ಯಾಯಾಲಯವು 2003ರ ಸಿವಿಲ್ ಅಪೀಲು ಸಂಖ್ಯೆ 9228 (ಜನಕ ಬಿಂಗ್‌ಹ್ಯಾಮ್ – ವಿರುದ್ಧ – ದಾಸ್‌ರೈ ಮತ್ತು ಇತರರು)ರಲ್ಲಿ ದಿನಾಂಕ 11ರ ಜನವರಿ 2005ರ ಅದರ ತೀರ್ಪಿನಲ್ಲಿ ನೀಡಿರುವ ಸೂಚನೆಗಳ ಮನ್ನಣೆಯಲ್ಲಿ, ಅಧಿಕೃತ ದೃಶ್ಯಚಿತ್ರಗ್ರಾಹಕನು ಹಲವಾರು ಸಂದಿಗ್ಧ ಸಂಗತಿಗಳು ಕುರಿತಂತೆ ನಿರ್ಧರಿಸಲಾದ ಕೆಲವು ಗುರುತಿಸಲ್ಪಟ್ಟ ಮತಗಟ್ಟೆಗಳಲ್ಲಿ ಮತದಾನದ ಗೋಪ್ಯತೆ ಬಗ್ಗೆ ರಾಜೀ ಮಾಡಿಕೊಳ್ಳದೆಯೇ ಮತದಾರರ ಚಿತ್ರೀಕರಣ ಹಾಗೂ ಮತದಾನದ ವ್ಯವಹರಣೆಗಳ ವರದಿ ಕಾರ್ಯವನ್ನು ನಿರ್ವಹಿಸಲು ಅವಕಾಶ ನೀಡಲಾಗಿದೆ.

**ಪ್ರಶ್ನೆ 10** **ಪ್ರಿಸೈಡಿಂಗ್ ಅಧಿಕಾರಿ ಅಥವಾ ಯಾರೇ ಇತರೆ ಪೋಲಿಂಗ್ ಅಧಿಕಾರಿಯು ಯಾವುದೇ ಕಾಲದಲ್ಲಿ "ವೋಟಿಂಗ್ ಕಂಪಾರ್ಟ್‌ಮೆಂಟನ್ನು" ತಪಾಸಣೆ ಮಾಡಬಹುದೇ?**

ಉತ್ತರ ಹೌದು. ಪ್ರಿಸೈಡಿಂಗ್ ಅಧಿಕಾರಿ ಮತ್ತು ಇತರ ಪೋಲಿಂಗ್ ಅಧಿಕಾರಿಯು, ಯಾರೇ ಮತದಾರನು ಚಿಹ್ನೆ/ಹೆಸರುಗಳು/ಬ್ಯಾಲೆಟ್ ಬಟನ್‌ಗಳ ಮೇಲೆ ಯಾವುದೇ ಕಾಗದ, ಟೇಪ್ ಮುಂತಾದವುಗಳನ್ನು ಅಂಟಿಸುವ ಮೂಲಕ ಯಾವುದೇ ಹಾನಿಯನ್ನು ಮಾಡಿರದಿದ್ದು ಆದರೆ ಆತನು ಇದನ್ನು ಪೋಲಿಂಗ್ ಏಜೆಂಟರ ಪ್ರತ್ಯಕ್ಷ ಉಪಸ್ಥಿತಿಯಲ್ಲಿ ತನ್ನ ಇಚ್ಛಾನುಸಾರ ಮತದಾನ ಮಾಡಿದ್ದಾನೆಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಮತದಾನ ಕಂಪಾರ್ಟ್‌ಮೆಂಟಿಗೆ ಭೇಟಿ ಮಾಡುವಂತಿರುತ್ತದೆ.

**ಪ್ರಶ್ನೆ 11** **ಅಂಚೆ ಮತಪತ್ರಗಳ ಬಣ್ಣಗಳು ಯಾವುವು?**

ಉತ್ತರ ಯಾವುದೇ ವಿಶೇಷ ಸಂದರ್ಭದಲ್ಲಿ, ಚುನಾವಣಾ ಆಯೋಗವು ನಿರ್ದೇಶಿಸಿದ ಹೊರತು, ಅಂಚೆ ಮತಪತ್ರಗಳನ್ನು ಸಂಸದೀಯ ಚುನಾವಣೆಗಳಿಗಾಗಿ ಬಿಳಿ ಬಣ್ಣದ ಕಾಗದದಲ್ಲಿ ಮತ್ತು ವಿಧಾನಸಭಾ ಚುನಾವಣೆಗಳಿಗಾಗಿ ಗುಲಾಬಿ ಬಣ್ಣದ ಕಾಗದಲ್ಲಿ ಮುದ್ರಿಸಬೇಕು.

ಪ್ರಶ್ನೆ 12 (ಎ) ಯಾವುದೇ ಅಭ್ಯರ್ಥಿಗಳಿಗೆ ಮತ ನೀಡದಿರಲು ಮತದಾರನಿಗೆ ಯಾವುದಾದರೂ ಆಯ್ಕೆಗಳಿದೆಯೇ?

(ಬಿ) ನೋಟಾದ ಅರ್ಥವೇನು?

ಯಾರೇ ಅಭ್ಯರ್ಥಿಗೆ ಮತ ಚಲಾಯಿಸಲು ಅಭ್ಯರ್ಥಿಗಳು ಇಚ್ಚಿಸದಿದ್ದಲ್ಲಿ, ಅವರ ನಿರ್ಧಾರ ಗೌಪ್ಯತೆಯನ್ನು ಉಲ್ಲಂಘಿಸದ ಹಾಗೆ ಯಾರೇ ಅಭ್ಯರ್ಥಿಗೆ ಮತ ಚಲಾಯಿಸದಿರುವ ತಮ್ಮ

ಹಕ್ಕನ್ನು ಚಲಾಯಿಸಬಹುದು. ಮತಪತ್ರದಲ್ಲಿ ಕೊನೆಯ ಅಭ್ಯರ್ಥಿಯ ಹೆಸರು ಮತ್ತು ವಿವರಗಳನ್ನು ಒಳಗೊಂಡ ಪ್ಯಾನಲ್‌ನ ನಂತರ, ಕೊನೆಯ ಪ್ಯಾನಲ್‌ನ ಕೆಳಗೆ, ಕಣದಲ್ಲಿರುವ ಯಾರೇ ಅಭ್ಯರ್ಥಿಗೂ ಮತಹಾಕದಿರುವ ಆಯ್ಕೆಯನ್ನು ಚಲಾಯಿಸಲು ಇಚ್ಛಿಸುವ ಮತದಾರರ ಅನುಕೂಲಕ್ಕಾಗಿ 'ಮೇಲಿನ ಯಾರಿಗೂ ಅಲ್ಲ–ನೋಟಾ 'ಎಂಬ ಪದಗಳನ್ನು ಬರೆದಿರುವ ಒಂದು ಪ್ಯಾನಲ್ ಇರತಕ್ಕದ್ದು.

**ಪ್ರಶ್ನೆ 13** **ಮಹಿಳಾ ಮತದಾರರಿಗೆ ಯಾವುದೇ ರೀತಿಯ ಪ್ರಾಶಸ್ತ್ಯವಿದೆಯೇ?**

ಉತ್ತರ: ಸಾಮಾನ್ಯವಾಗಿ, ಪುರುಷ ಹಾಗೂ ಮಹಿಳಾ ಮತದಾರರಿಗಾಗಿ ಪ್ರತ್ಯೇಕ ಸಾಲುಗಳಿರುತ್ತವೆ. ವಾಸ್ತವವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಮತಗಟ್ಟೆಗಳಿಗೆ ಮತ ಚಲಾಯಿಸುವುದಕ್ಕಾಗಿ ಬರುವ ಮಹಿಳಾ ಮತದಾರರು ಹಲವು ಗೃಹಕೃತ್ಯಗಳನ್ನು ಸಹ ಮಾಡಬೇಕಾಗುತ್ತದಾದ್ದರಿಂದ, ಮತಗಟ್ಟೆಯೊಳಗೆ ಒಬ್ಬ ಪುರುಷ ಮತದಾರನಿಗೆ ಪ್ರವೇಶ ಕಲ್ಪಿಸಿದ ನಂತರ, ಇಬ್ಬರು ಮಹಿಳಾ ಮತದಾರರ ಪ್ರವೇಶಕ್ಕೆ ಅವಕಾಶ ಮಾಡಿಕೊಡಬಹುದು.

**ಪ್ರಶ್ನೆ 14 (ಎ)** **ಮತದಾರನು ಅವನು ಯಾರಿಗೆ ಮತಚಲಾಯಿಸಿರುವನೆಂದು ತಿಳಿಯುವುದಕ್ಕೆ ಸಾಧ್ಯವಿದೆಯೇ? (ಬಿ) ವಿವಿಪ್ಯಾಟ್ ಎಂದರೇನು?**

ಭಾರತ ಚುನಾವಣಾ ಆಯೋಗವು ಅನುಮೋದಿಸಬಹುದಾದಂತಹ ವಿನ್ಯಾಸದ ಡ್ರಾಪ್ ಬಾಕ್ಸ್‌ವುಳ್ಳ ಪ್ರಿಂಟರನ್ನು ಭಾರತ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಮತಕ್ಷೇತ್ರಕ್ಕೆ ಅಥವಾ ಮತಕ್ಷೇತ್ರಗಳಿಗೆ ಅಥವಾ ಅವುಗಳ ಭಾಗಗಳಲ್ಲಿ ಮತದ ಪೇಪರ್ ಟ್ರೇಲ್ ಅನ್ನು ಮುದ್ರಿಸುವುದಕ್ಕಾಗಿ ಮತಯಂತ್ರಕ್ಕೆ ಜೋಡಿಸಬಹುದಾಗಿದೆ. ಪೇಪರ್ ಟ್ರೇಲ್‌ಗಾಗಿ ಪ್ರಿಂಟರ್ ಅನ್ನು ಬಳಸಲಾಗುವ ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಬ್ಯಾಲೆಟಿಂಗ್ ಬಟನ್ ಅನ್ನು ಒತ್ತುವುದರ ಮೂಲಕ, ಮತದಾರನು, ತಾನು ಯಾರಿಗೆ ಮತ ಚಲಾಯಿಸಿದ್ದಾನೆಯೋ ಆ ಅಭ್ಯರ್ಥಿಯ ಕ್ರಮ ಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನು ತೋರಿಸುವ ಮುದ್ರಿತ ಪೇಪರ್ ಸ್ಲಿಪ್ ಅನ್ನು ನೋಡಲು ಸಾಧ್ಯವಾಗುವುದು. ಆ ಸ್ಲಿಪ್ ಕತ್ತರಿಸಿ ವಿವಿಪ್ಯಾಟ್‌ನ ಡ್ರಾಪ್ ಬಾಕ್ಸ್‌ನಲ್ಲಿ ಬೀಳುವ ಮುಂಚೆ, ವಿವಿಪ್ಯಾಟ್‌ನ ಪಾರದರ್ಶಕ ಡಿಸ್‌ಪ್ಲೇ ಕಿಟಕಿಯ ಮೂಲಕ 7 ಸೆಕೆಂಡುಗಳವರೆಗೆ ಕಾಣಿಸಿಕೊಳ್ಳುತ್ತದೆ.

## 20.11 ಸೂಕ್ಷ್ಮ ವೀಕ್ಷಕರು

**ಪ್ರಶ್ನೆ:1** **ಸೂಕ್ಷ್ಮ ವೀಕ್ಷಕನ ಪರಿಕಲ್ಪನೆ ಏನು:**

ಉತ್ತರ: ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಕೇಂದ್ರ ಸರ್ಕಾರದ / ಕೇಂದ್ರ ಸರ್ಕಾರದ ಸಾರ್ವಜನಿಕ ವಲಯ ಉದ್ಯಮಗಳ ಒಬ್ಬ ಅಧಿಕಾರಿಯನ್ನು/ನೌಕರನನ್ನು ಒಂದು ಆವರಣದ ಕಟ್ಟಡದಲ್ಲಿ ಇರುವ ಮತದಾನ ಕೇಂದ್ರದಲ್ಲಿ ಅಥವಾ ಗುಂಪು ಪೋಲಿಂಗ್ ಸ್ಟೇಷನ್‌ಗಳಲ್ಲಿ ಸೂಕ್ಷ್ಮ ವೀಕ್ಷಕನನ್ನಾಗಿ ನಿಯೋಜಿಸಲಾಗಿದ್ದು ಅವರು ನೇರವಾಗಿ ಭಾರತದ ಚುನಾವಣಾ ಆಯೋಗದ ವೀಕ್ಷಕನ ನಿಯಂತ್ರಣ ಹಾಗೂ ಮೇಲ್ವಿಚಾರಣೆಯಡಿ ಕೆಲಸ ಮಾಡುತ್ತಾರೆ.

**ಪ್ರಶ್ನೆ:2 ಸೂಕ್ಷ್ಮ ವೀಕ್ಷಕರ ನಿಯೋಜನೆಗೆ ಇರುವ ಮಾನದಂಡ ಯಾವುದು?**

ಉತ್ತರ: ಮತದಾರರ ದುರ್ಬಲತೆಗೆ ಕಾರಣವಾಗುವ ವಿವಿಧ ಅಂಶಗಳ ಆಧಾರದ ಮೇಲೆ ಈ ಉದ್ದೇಶಕ್ಕಾಗಿ ಮತದಾನ ಕೇಂದ್ರಗಳ ಆಯ್ದುಪಟ್ಟಿಯನ್ನು ಮಾಡಲಾಗಿದೆ.

**ಪ್ರಶ್ನೆ:3 ಮತದಾನದ ದಿನದಂದು ಸೂಕ್ಷ್ಮ ವೀಕ್ಷಕನ ಕರ್ತವ್ಯಗಳೇನು?**

ಉತ್ತರ: ಮುಖ್ಯವಾಗಿ ಈ ಕೆಳಕಂಡ ವಿಷಯಗಳನ್ನು ವೀಕ್ಷಿಸುವುದು ಸೂಕ್ಷ್ಮ ವೀಕ್ಷಕನ ಕರ್ತವ್ಯವಾಗಿದೆ.

(i) ಅಣಕು ಮತದಾನದ ಕಾರ್ಯವಿಧಾನಗಳು.

(ii) ಪೋಲಿಂಗ್ ಏಜೆಂಟರ ಉಪಸ್ಥಿತಿ ಮತ್ತು ಅವರಿಗೆ ಸಂಬಂಧಿಸಿದ ಭಾರತ ಚುನಾವಣಾ ಆಯೋಗ ಸೂಚನೆಗಳ ಆಚರಣೆ.

(iii) ಪ್ರವೇಶ ಪಾಸ್ ವ್ಯವಸ್ಥೆಯ ಮತ್ತು ಮತಗಟ್ಟೆ ಪ್ರವೇಶವಕಾಶ ಅನುಸರಣೆ.

(iv) ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳಿಗನುಸಾರವಾಗಿ ಮತದಾರರನ್ನು ಸರಿಯಾಗಿ ಗುರುತಿಸುವುದು.

(v) ಗೈರು ಹಾಜರಾದವ, ಸ್ಥಳಾಂತರದ ಹಾಗೂ ನಕಲಿ ಮತದಾರರ ಪಟ್ಟಿ (ಎಎಸ್‌ಡಿ ಪಟ್ಟಿ) ಯನ್ನು ಏನಾದರೂ ಮಾಡಿರುವಾಗ, ಅದಕ್ಕೆ ಸಂಬಂಧಿಸಿದ ಕಾರ್ಯವಿಧಾನಗಳನ್ನು ಗುರುತಿಸುವುದು ಹಾಗೂ ದಾಖಲಿಸುವುದು.

(vi) ಅಳಿಸಲಾಗದ ಶಾಯಿಯನ್ನು ಹಾಕುವುದು.

(vii) ಮತದಾರರ ಫಾರ್ಮ್ 17ಎ ರಿಜಿಸ್ಟರನಲ್ಲಿದ್ದ ನಿರ್ದಿಷ್ಟತೆಯನ್ನು ಬರೆದುಕೊಳ್ಳುವುದು.

viii) ಮತದಾನದ ಗೋಪ್ಯತೆಯನ್ನು ಕಾಪಾಡುವುದು.

(ix) ಮತದಾನ ಏಜೆಂಟರ ನಡತೆ, ಅವರ ದೂರುಗಳು.

ಸೂಕ್ಷ್ಮ ಪರಿವೀಕ್ಷಕನು, ಯಾವುದೇ ಕಾರಣಕ್ಕಾಗಿ ಮತದಾನವನ್ನು ದುರ್ಬಲಗೊಳಿಸಲಾಗುತ್ತಿರುವುದಾಗಿ ಭಾವಿಸಿದರೆ ಅತನು ಕೂಡಲೇ ಪರಿಹಾರಾತ್ಮಕ ಕ್ರಮವನ್ನು ಕೈಗೊಳ್ಳುವುದಕ್ಕಾಗಿ ಮತಕ್ಷೇತ್ರದ ಪರಿವೀಕ್ಷಕನ ಗಮನಕ್ಕೆ ತರಬೇಕು.

## 20.12 ಮತಗಳ ಎಣಿಕೆ

ಪ್ರಶ್ನೆ:1 **ಮತಗಳ ಎಣಿಕೆಗಾಗಿ ಮತ್ತು ಚುನಾವಣೆಯ ಫಲಿತಾಂಶದ ಘೋಷಣೆಗಾಗಿ ಯಾರು ಜವಾಬ್ದಾರರಾಗಿತ್ತಾರೆ?**

ಉತ್ತರ: ರಿಟರ್ನಿಂಗ್ ಅಧಿಕಾರಿ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 64ನೇ ಮತ್ತು 66ನೇ ಪ್ರಕರಣಗಳನ್ನು ನೋಡಿ).

ಪ್ರಶ್ನೆ:2 **ಮತ ಎಣಿಕೆ ಪ್ರಕ್ರಿಯೆಯ ಮೇಲ್ವಿಚಾರಣೆ/ಉಸ್ತುವಾರಿ ಮಾಡಲು ರಿಟರ್ನಿಂಗ್ ಅಧಿಕಾರಿ ಅಲ್ಲದೆ ಯಾರೇ ಇತರ ಹಿರಿಯ ಅಧಿಕಾರಿಯನ್ನು ಮತಎಣಿಕೆ ಕೇಂದ್ರದಲ್ಲಿ ನಿಯೋಜಿಸಲಾಗುವುದೇ?**

ಉತ್ತರ: ಹೌದು. ಭಾರತ ಚುನಾವಣಾ ಆಯೋಗವು, ಹಿರಿಯ ಅಧಿಕಾರಿಯನ್ನು ಮತ ಎಣಿಕೆ ಕೇಂದ್ರಗಳಲ್ಲಿ ನಡೆಯುವ ಮತಎಣಿಕೆ ಪ್ರಕ್ರಿಯೆಯ ಉಸ್ತುವಾರಿಯನ್ನು ನೋಡಿಕೊಳ್ಳಲು ನಿಯೋಜಿಸುತ್ತದೆ. ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಸಾರ್ವಜನಿಕವಲಯ ಉದ್ಯಮಗಳ ಅಧಿಕಾರಿಯನ್ನೂ ಸಹ ಪ್ರತಿಯೊಂದು ಮತಎಣಿಕೆ ಮೇಜಿಗೆ ನೇಮಕ ಮಾಡಲಾಗುವುದು.

ಪ್ರಶ್ನೆ:3 **ಮತಎಣಿಕೆ ದಿನದಂದು ಭಾರತ ಚುನಾವಣಾ ಆಯೋಗದ ವೀಕ್ಷಕನ ಅಧಿಕಾರಗಳು ಯಾವುವು?**

ಉತ್ತರ: ವೀಕ್ಷಕನು, ಮತ ಎಣಿಕೆಯನ್ನು ಕಾನೂನಿನನುಸಾರವಾಗಿ ಹಾಗೂ ಆಯೋಗದ ಸೂಚನೆಗಳನುಸಾರವಾಗಿ ಕಟ್ಟುನಿಟ್ಟಾಗಿ ನಡೆಸಲಾಗುತ್ತಿದ್ದೇಯೆ ಎಂಬುದನ್ನು ಎಡೆ ಬಿಡದೆ ಗಮನಿಸಬೇಕು. ಮತ ಎಣಿಕೆ ಏಜೆಂಟರು ಎದುರುಬದುರಾಗಿ ಇಡೀ ಮತ ಎಣಿಕೆ ಪ್ರಕ್ರಿಯೆಯನ್ನು ಎಡಬಿಡದೆ ಗಮನಿಸಲು ಅವಕಾಶವನ್ನು ನೀಡಲಾಗಿರುತ್ತದೆ, ಫಲಿತಾಂಶಗಳನ್ನು ಸರದಿಯಾಗಿ ಘೋಷಣೆ ಮಾಡಲಾಗಿದೆ ಹಾಗೂ ಮತಗಳ ಒಟ್ಟು ಗೂಡುವಿಕೆಯನ್ನು ಕೈಯಿಂದ ಮಾಡುವ ಮೂಲಕ ಹಾಗೂ ಗಣಕಯಂತ್ರದ ಮುಖಾಂತರ ತಪ್ಪು ಇಲ್ಲದೆ ಮಾಡಲಾಗಿದೆ ಎಂಬುದನ್ನು ಆತನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ವೀಕ್ಷಕನು, ಇಡೀ ಮತ ಎಣಿಕೆ ಪ್ರಕ್ರಿಯೆಯು ಮುಕ್ತವಾಗಿ ಮತ್ತು ನ್ಯಾಯ ಯುತವಾಗಿ ಹಾಗೂ ತಪ್ಪು ಇಲ್ಲದೆ ನಡೆದಿರುತ್ತದೆ ಎಂದು ಮನದಟ್ಟು

ಮಾಡಿಕೊಂಡ ಹೊರತು ಆತನು ರಿಟರ್ನಿಂಗ್ ಅಧಿಕಾರಿಯು ಮಾಡಿದ ಫಲಿತಾಂಶದ ಘೋಷಣೆಯನ್ನು ತಡೆಹಿಡಿಯಲು ಅಧಿಕಾರವನ್ನು ಹೊಂದಿರುವುದಿಲ್ಲ.

**ಪ್ರಶ್ನೆ:4** **ಮತ ಎಣಿಕೆಯ ಕೇಂದ್ರಗಳಲ್ಲಿ ಮತ ಎಣಿಕೆ ಸಿಬ್ಬಂದಿಯನ್ನು ನಿಯೋಜಿಸುವುದಕ್ಕೆ ಮುಂಚೆ ಅವರಿಗೆ ಎಲ್ಲಕ್ಕೂ ಸಮಾನಾವಕಾಶ ಕೊಡುವ ಯಾವುದೇ ವ್ಯವಸ್ಥೆ ಇದೆಯೇ?**

ಉತ್ತರ: ಹೌದು. ಮತ ಎಣಿಕೆ ಅಧಿಕಾರಿಗಳು ವಿಧಾನಸಭಾ ಮತಕ್ಷೇತ್ರದ ಬಗ್ಗೆ ತಿಳಿದುಕೊಂಡಿದ್ದು ಹಾಗೂ ಮತಎಣಿಕೆ ದಿನದಂದು ಮತ ಎಣಿಕೆ ಕೇಂದ್ರಕ್ಕೆ ಅವರ ಆಗಮನವಾಗುವ ಕಾಲದಲ್ಲಿ ಮಾತ್ರ ಅವರಿಗೆ ಆ ಮೇಜನ್ನು ವಹಿಸಿಕೊಡುವಂಥ ರೀತಿಯಲ್ಲಿ ಮತ ಎಣಿಕೆ ಮೇಲ್ವಿಚಾರಕರು ಹಾಗೂ ಮತ ಎಣಿಕೆ ಸಹಾಯಕರ ನಿಯೋಜನೆಯನ್ನು, ಅವರಿಗೆ ಎಲ್ಲಕ್ಕೂ ಸಮಾನಾವಕಾಶವನ್ನು ಮಾಡಿಕೊಡುವ ಹಾಗೆ (ರ್‍ಯಾಂಡಮ್‌ಲೀ) ಮಾಡಲಾಗುತ್ತದೆ.

**ಪ್ರಶ್ನೆ 5** **ಮತ ಎಣಿಕೆಗೆ ನೇಮಿಸಿದ ಸೂಕ್ಷ್ಮ ವೀಕ್ಷಕರನ್ನು ಮತದಾನದ ಸಂದರ್ಭದಲ್ಲಿಯೂ ಸಹ ನೇಮಕ ಮಾಡಲಾಗುತ್ತದೆಯೇ?**

ಉತ್ತರ: ಹೌದು. ಒಬ್ಬ ಮತ ಎಣಿಕೆ ಮೇಲ್ವಿಚಾರಕ ಮತ್ತು ಮತ ಎಣಿಕೆ ಸಹಾಯಕನು ಅಲ್ಲದೆ, ಪ್ರತಿಯೊಂದು ಮತ ಎಣಿಕೆ ಟೇಬಲ್‌ಗಾಗಿ ನೇಮಿಸಿದ ಕೇಂದ್ರ ಸರ್ಕಾರದ/ಕೇಂದ್ರ ಸರ್ಕಾರದ ಸಾರ್ವಜನಿಕ ವಲಯ ಉದ್ಯಮದ ಒಬ್ಬ ಹೆಚ್ಚುವರಿ ಅಧಿಕಾರಿಯನ್ನು ಪ್ರತಿಯೊಂದು ಸುತ್ತಿನಲ್ಲಿ ಎಣಿಕೆ ಮಾಡಲಾಗಿದ್ದು ಇವಿಎಂಗಳ ಮೂಲಕ ಮತಗಳ ವಿವರಗಳನ್ನು ಬರೆದುಕೊಳ್ಳಲು ಮತ್ತು ಆಯೋಗದ ವೀಕ್ಷಕನಿಗೆ ವಿವರಗಳನ್ನು ಹಸ್ತಾಂತರಿಸಲು ಪ್ರತಿಯೊಂದು ಮತ ಎಣಿಕೆ ಮೇಜಿಗೆ ನಿಯೋಜಿಸಲಾಗಿದೆ.

**ಪ್ರಶ್ನೆ 6** **ಮತ ಎಣಿಕೆಯ ಸಭಾಂಗಣದಲ್ಲಿ ಪ್ರವೇಶಿಸಲು ಯಾವ್ಯಾವ ವ್ಯಕ್ತಿಗಳಿಗೆ ಅವಕಾಶ ನೀಡಲಾಗುವುದು?**

ಉತ್ತರ: ಮತ ಎಣಿಕೆ ಮೇಲ್ವಿಚಾರಕರು/ಸಹಾಯಕರು/ಸೂಕ್ಷ್ಮ ವೀಕ್ಷಕರು, ಚುನಾವಣಾ ಆಯೋಗವು ಅಧಿಕಾರ ನೀಡಿದ ವ್ಯಕ್ತಿಗಳು, ಚುನಾವಣೆ ಸಂಬಂಧದಲ್ಲಿ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರ, ಅಭ್ಯರ್ಥಿ ಮತ್ತು ಆತನ ಚುನಾವಣಾ ಏಜೆಂಟ್/ಮತ ಎಣಿಕೆಯ ಏಜೆಂಟರಿಗೆ ಮಾತ್ರ ಅವಕಾಶವಿರುತ್ತದೆ.

**ಪ್ರಶ್ನೆ:7** **ಅಭ್ಯರ್ಥಿಯು ಆತನ ಜೊತೆಯಲ್ಲಿರುವ ಭದ್ರತಾ ಸಿಬ್ಬಂದಿಯೊಂದಿಗೆ ಮತ ಎಣಿಕೆ ಆವರಣದಲ್ಲಿ ಮತ್ತು ಮತ ಎಣಿಕೆ ಸಭಾಂಗಣದಲ್ಲಿ ಪ್ರವೇಶಿಸಬಹುದೇ?**

ಉತ್ತರ: ಇಲ್ಲ. ಆತನು ಅಭ್ಯರ್ಥಿಯಾಗುವುದಾದರೆ, ಬಚ್ಚಿಡಲಾದ ಪಿಸ್ತೂಲುನೊಂದಿಗೆ ಒಬ್ಬ ಪಿಎಸ್‌ಓ ಸಹಿತ ಎಸ್‌ಪಿಜಿ ಸಂರಕ್ಷಣೆ ಪಡೆದವನನ್ನು ಮಾತ್ರ ಸಂರಕ್ಷಣೆ ಪಡೆದವನ ಜೊತೆಯಲ್ಲಿ ಇರಲು ಅವಕಾಶ ನೀಡಲಾಗಿದ್ದು ಸಂರಕ್ಷಣೆ ಪಡೆದವನಿಗೆ ಅಗತ್ಯಪಡಿಸಿದ ರಕ್ಷಣೆಯನ್ನು ಒದಗಿಸಲು ಸಮರ್ಥನಾಗಿರುವಂಥ ರೀತಿಯಲ್ಲಿ ಸ್ವತಃ ಆತನ ಸ್ಥಾನವು ವ್ಯವಹರಣೆಗಳ ಬಗ್ಗೆ ಮಧ್ಯಪ್ರವೇಶ ಮಾಡದೆಯೇ ಅನ್ಯಥಾ ಅತ್ಯಾವಶ್ಯಕವಾಗಿರುತ್ತದೆ.

**ಪ್ರಶ್ನೆ:8 ರಾಜ್ಯವು ಭದ್ರತಾ ರಕ್ಷಣೆಯನ್ನು ಒದಗಿಸಲಾಗಿರುವ ವ್ಯಕ್ತಿಗಳನ್ನು ಮತ ಎಣಿಕೆ ಏಜೆಂಟ್‌ರಾಗಿ ನೇಮಕ ಮಾಡುವುದಕ್ಕಾಗಿ ಯಾವುದೇ ನಿರ್ಬಂಧವಿದೆಯೇ?**

ಉತ್ತರ: ಹೌದು. ಭದ್ರತಾ ರಕ್ಷಣೆಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಭದ್ರತಾ ಸಿಬ್ಬಂದಿಯು ಆತನ ಜೊತೆಯಲ್ಲಿರುವುದರಿಂದ ಮತ ಎಣಿಕೆ ಕೇಂದ್ರದ ಆವರಣವನ್ನು ಪ್ರವೇಶಿಸಲು ಅವಕಾಶ ನೀಡುವಂತಿರುವುದಿಲ್ಲ, ಹಾಗೂ ಅಂಥ ವ್ಯಕ್ತಿಯನ್ನು, ಅತನು ಮತ ಎಣಿಕೆ ಏಜೆಂಟ್‌ನಾಗುವಂತೆ ಸಾಧ್ಯವಾಗಿಸಿಕೊಳ್ಳಲು ಭದ್ರತಾ ರಕ್ಷಣೆಯ ಸಿಬ್ಬಂದಿಯನ್ನು ಒಪ್ಪಿಸಲು ಸಹ ಅವಕಾಶ ನೀಡುವುದಿಲ್ಲ.

**ಪ್ರಶ್ನೆ:9 ಮತ ಎಣಿಕೆ ಕೇಂದ್ರದ ಆವರಣದ ಭದ್ರತೆಯನ್ನು ಹೇಗೆ ಖಚಿತ ಪಡಿಸುವಿರಿ?**

ಉತ್ತರ: ಮತ ಎಣಿಕೆ ಕೇಂದ್ರದೊಳಗೆ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ತಡೆಗಟ್ಟಲು ಮತ ಎಣಿಕೆ ಕೇಂದ್ರದಲ್ಲಿ ಮೂರು ಹಂತದ ರಕ್ಷಾವರಣ ವ್ಯವಸ್ಥೆಯನ್ನು ರಚಿಸಲಾಗಿದೆ.

**ಪ್ರಶ್ನೆ:10 ಅಭ್ಯರ್ಥಿಯು ಎಷ್ಟು ಮಂದಿ ಮತ ಎಣಿಕೆ ಏಜೆಂಟರನ್ನು ನೇಮಕ ಮಾಡಬಹುದು:**

ಉತ್ತರ: ಪ್ರತಿಯೊಬ್ಬ ಅಭ್ಯರ್ಥಿಯು ಮತ ಎಣಿಕೆ ಮೇಜುಗಳಿರುವಷ್ಟು ಸಂಖ್ಯೆಯ ಮಂದಿಯನ್ನು ಹಾಗೂ ರಿಟರ್ನಿಂಗ್ ಅಧಿಕಾರಿಯ ಮೇಜನ್ನು ಗಮನಿಸಲು ಇನ್ನೊಬ್ಬನನ್ನು ಮತ ಎಣಿಕೆ ಏಜೆಂಟ್‌ರಾಗಿ ನೇಮಕ ಮಾಡಲು ಅವಕಾಶ ನೀಡಲಾಗಿದೆ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 47ನೇ ಪ್ರಕರಣವನ್ನು ನೋಡಿ).

**ಪ್ರಶ್ನೆ:11 ಮತ ಎಣಿಕೆ ಏಜೆಂಟರನ್ನು ನೇಮಕ ಮಾಡುವುದಕ್ಕಾಗಿ ಯಾವುದೇ ಗೊತ್ತುಪಡಿಸಿದ ನಮೂನೆ ಇದೆಯೇ?**

ಉತ್ತರ: ಹೌದು. ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನು ಇತ್ತೀಚಿನವುಗಳನ್ನು ನಮೂನೆ–18ರಲ್ಲಿ ಅವರ ಭಾವಚಿತ್ರಗಳೊಂದಿಗೆ ಮತಎಣಿಕೆ ಏಜೆಂಟರ ಪಟ್ಟಿಯನ್ನು ರಿಟರ್ನಿಂಗ್ ಅಧಿಕಾರಿಗೆ ಮತ ಎಣಿಕೆಯ ದಿನಾಂಕಕ್ಕಿಂತ 3 ದಿನಗಳ ಮುಂಚೆ 1700 ಗಂಟೆಗಳ ಒಳಗಾಗಿ ಸಲ್ಲಿಸಬೇಕಾಗುತ್ತದೆ. ರಿಟರ್ನಿಂಗ್ ಅಧಿಕಾರಿಯು ಅಂಥ ಏಜೆಂಟರಿಗಾಗಿ ಗುರುತಿನ ಚೀಟಿಗಳನ್ನು ಸಿದ್ಧಪಡಿಸಿ ಅದನ್ನು ಅಭ್ಯರ್ಥಿಗೆ ನೀಡಬೇಕು

(ಚುನಾವಣೆ ನಡೆಸುವ  ನಿಯಮಗಳು, 1961ರ ನಿಯಮ 52(2)ನ್ನು ನೋಡಿ)

**ಪ್ರಶ್ನೆ:12** **ರಿಟರ್ನಿಂಗ್ ಅಧಿಕಾರಿಯು ಮತ ಎಣಿಕೆ ಕೇಂದ್ರದಲ್ಲಿ ಮತ ಎಣಿಕೆ ಏಜೆಂಟರನ್ನು ಹೇಗೆ ನಿಯೋಜಿಸುತ್ತಾರೆ?**

ಉತ್ತರ: ಪ್ರತಿ ಮತ ಎಣಿಕೆ ಏಜೆಂಟ್‌ನಿಗೆ ಆತನು ಯಾರ ಏಜೆಂಟ್‌ನಾಗಿದ್ದಾನೆ ಎಂಬುದನ್ನು ಹಾಗೂ ಆತನು ಯಾವ ಮೇಜಿನಲ್ಲಿ ಮತ ಎಣಿಕೆಯನ್ನು ನೋಡಬಹುದಾಗಿದೆಯೋ ಆ ಮೇಜಿನ  ಸಂಖ್ಯೆಯನ್ನು ತೋರಿಸಿರುವ ಬ್ಯಾಡ್ಜ್ ಅನ್ನು ನೀಡಲಾಗುವುದು ಹಾಗೂ ಆತನು ಸಭಾಂಗಣದಲ್ಲಿ ಎಲ್ಲಾ ಕಡೆ ಓಡಾಡಲು ಅವಕಾಶ ನೀಡುವುದಿಲ್ಲ.

**ಪ್ರಶ್ನೆ:13** **ಮತ ಎಣಿಕೆ ಸಭಾಂಗಣದೊಳಗೆ ಇಡಬಹುದಾಗಿರುವ ಮತ ಎಣಿಕೆಯ ಮೇಜುಗಳ ಸಂಖ್ಯೆಗೆ ಯಾವುದೇ ಮೇಲಣ ಮಿತಿಯನ್ನು ಗೊತ್ತುಪಡಿಸಲಾಗಿದೆಯೇ?**

ಉತ್ತರ: ಸಾಮಾನ್ಯವಾಗಿ, ರಿಟರ್ನಿಂಗ್ ಅಧಿಕಾರಿಯ ಮೇಜು ಸೇರಿದಂತೆ  ಮೇಲಣ ಮಿತಿಯು 15 ಟೇಬಲ್‌ಗಳು ಇರುತ್ತವೆ.

**ಪ್ರಶ್ನೆ:14** **ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳನ್ನು ನಿರ್ವಹಿಸಲು ಮತ ಎಣಿಕೆ ಏಜೆಂಟ್‌ರಿಗೆ ಅವಕಾಶವಿದೆಯೇ?**

ಉತ್ತರ: ಇಲ್ಲ. ಪ್ರತಿಯೊಂದು ಎಣಿಕೆ ಸಭಾಂಗಣದಲ್ಲಿ, ಮತ ಎಣಿಕೆ ಏಜೆಂಟ್‌ರು ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ನಿರ್ವಹಿಸದಿರುವ ಹಾಗೆ ಪ್ರತಿಯೊಂದು ಮತ ಎಣಿಕೆ ಮೇಜಿಗೆ  ಅಡ್ಡುಗಟ್ಟುಗಳನ್ನು ನಿರ್ಮಿಸಲಾಗಿರುತ್ತದೆ. ಮತ ಎಣಿಕೆ ಮೇಜುಗಳಲ್ಲಿ ಇಡೀ ಮತ ಎಣಿಕೆ ಪ್ರಕ್ರಿಯೆಯನ್ನು ನೋಡಲು ಏಜೆಂಟ್‌ರಿಗೆ ಎಲ್ಲ ಸಮುಚಿತ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

**ಪ್ರಶ್ನೆ:15** **ಇವಿಎಂನ ಕಂಟ್ರೋಲ್ ಯೂನಿಟ್ ಅನ್ನು ಅಕ್ರಮವಾಗಿ ತಿದ್ದಲಾಗಿದೆ (ಟ್ಯಾಂಪರ್) ಎಂಬುದನ್ನು ಹೇಗೆ ಖಚಿತಪಡಿಸುವುದು?**

ಉತ್ತರ: ಇವಿಎಂನಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡುವುದಕ್ಕೆ ಮುಂಚೆ ಇವಿಎಂನ ಕ್ಯಾರಿಯಿಂಗ್ ಕೇಸ್ ಮತ್ತು ಕಂಟ್ರೋಲ್ ಯೂನಿಟ್‌ಗಳನ್ನು ಮತ ಎಣಿಕೆ ಮೇಜಿನ ಬಳಿ ಹಾಜರಿರುವ ಅಭ್ಯರ್ಥಿಗಳು ಅಥವಾ ಅವರ ಏಜೆಂಟ್‌ರು ಅದರ ಮೇಲೆ ಹಾಕಲಾದ ಮೊಹರುಗಳನ್ನು ಪರಿಶೀಲಿಸಲು ಹಾಗೂ ತಪಾಸಣೆ ಮಾಡಲು ಮತ ಎಣಿಕೆ ಮೇಜಿನ ಮೇಲೆ ಇರಿಸಲಾಗಿರುತ್ತದೆ. ಕಂಟ್ರೋಲ್ ಯೂನಿಟ್ ಅನ್ನು ಅಕ್ರಮವಾಗಿ ತಿದ್ದಲಾಗಿದೆ (ಟ್ಯಾಂಪರ್) ಎಂದು ಕಂಡುಬಂದರೆ ಆ ಯಂತ್ರದಲ್ಲಿ ದಾಖಲಾದ ಮತಗಳನ್ನು ಎಣಿಕೆ

ಮಾಡಲಾಗುವುದಿಲ್ಲ ಮತ್ತು ಆ ವಿಷಯವನ್ನು ಆಯೋಗಕ್ಕೆ ಮುಂದಿನ ನಿರ್ದೇಶನಕ್ಕಾಗಿ ವರದಿ ಮಾಡಲಾಗುವುದು.

**ಪ್ರಶ್ನೆ:16** **ಯಾವ ಹಂತದಲ್ಲಿ, ಅಂಚೆ ಗುಪ್ತ ಮತಪತ್ರಗಳನ್ನು ಎಣಿಕೆ ಮಾಡಲಾಗುತ್ತದೆ?**

ಉತ್ತರ: ಅಂಚೆ ಗುಪ್ತ ಮತಪತ್ರಗಳನ್ನು ಮೊದಲು ರಿಟರ್ನಿಂಗ್ ಅಧಿಕಾರಿಯ ಮೇಜಿನಲ್ಲಿ ಎಣಿಕೆ ಮಾಡಲಾಗುತ್ತದೆ. (ಚುನಾವಣೆಗಳನ್ನು ನಡೆಸುವ ನಿಯಮ, 1961ರ 54ಎ ನಿಯಮವನ್ನು ನೋಡಿ)

**ಪ್ರಶ್ನೆ:17** **ಅಭ್ಯರ್ಥಿಯು ಮರುಎಣಿಕೆ ಮಾಡಲು ಕೇಳಬಹುದೇ?**

ಉತ್ತರ: ಹೌದು. ಯಾವ ಆಧಾರದ ಮೇಲೆ ಮರುಎಣಿಕೆ ಮಾಡುವಂತೆ ಕೇಳಲಾಗಿದೆಯೋ ಆ ಆಧಾರಗಳನ್ನು ಹೇಳಿರುವ ಲಿಖಿತದಲ್ಲಿನ ಅರ್ಜಿಯ ಮೂಲಕ ಕೇಳಬಹುದು. ಅಂಥ ಅರ್ಜಿಯನ್ನು ಅಂತಿಮ ಫಲಿತಾಂಶ ಶೀಟ್ (ಫಾರ್ಮ್–20) ಅನ್ನು ಸಿದ್ಧಪಡಿಸುವ ಮತ್ತು ಸಹಿ ಹಾಕುವ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಬಹುದು.

## 20.13 ಚುನಾವಣಾ ವೆಚ್ಚ

**ಪ್ರಶ್ನೆ:1** **ಅಭ್ಯರ್ಥಿಯು ಆತನ ಚುನಾವಣೆಯಲ್ಲಿ ಆತನು ಬಯಸುವಷ್ಟು ಖರ್ಚು ಮಾಡಲು ಸ್ವತಂತ್ರನಾಗಿರುವನೇ?**

ಉತ್ತರ: ಇಲ್ಲ. ಅಭ್ಯರ್ಥಿಯು, ಆತನ ಚುನಾವಣೆಯಲ್ಲಿ ಬಯಸುವಷ್ಟು ಖರ್ಚು ಮಾಡಲು ಸ್ವತಂತ್ರನಾಗಿರುವುದಿಲ್ಲ. ಒಟ್ಟು ಚುನಾವಣಾ ವೆಚ್ಚವು ಸಂಬಂಧಿಸಿದ ಮತಕ್ಷೇತ್ರಕ್ಕೆ ಗೊತ್ತುಪಡಿಸಲಾದ ಗರಿಷ್ಠ ಮಿತಿಯನ್ನು ಮೀರತಕ್ಕದ್ದಲ್ಲ ಎಂಬುದಾಗಿ ಕಾನೂನಿನಲ್ಲಿ ನಿಗದಿ ಮಾಡಲಾಗಿದೆ. (ಚುನಾವಣೆಯನ್ನು ನಡೆಸುವ ನಿಯಮಗಳು, 1961ರ ನಿಯಮ 90 ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 123(6)ನ್ನು ನೋಡಿ)

**ಪ್ರಶ್ನೆ:2** **ಉತ್ತರಪ್ರದೇಶ, ಬಿಹಾರ, ಆಂಧ್ರಪ್ರದೇಶ, ಮಧ್ಯಪ್ರದೇಶಗಳಂಥ ದೊಡ್ಡ ರಾಜ್ಯಲ್ಲಿರುವ ಸಂಸದೀಯ ಮತಕ್ಷೇತ್ರದಲ್ಲಿ ಚುನಾವಣಾ ವೆಚ್ಚಕ್ಕೆ ಇರುವ ಮಿತಿ ಏನು?**

ಉತ್ತರ: ಚುನಾವಣಾ ವೆಚ್ಚದ ಮಿತಿಯನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತದೆ. ಪ್ರಸ್ತುತ, ಉತ್ತರ ಪ್ರದೇಶ, ಬಿಹಾರ, ಆಂಧ್ರಪ್ರದೇಶ, ಮಧ್ಯಪ್ರದೇಶ ಅಂತಹ ದೊಡ್ಡ ರಾಜ್ಯಗಳಲ್ಲಿನ ಸಂಸದೀಯ ಮತಕ್ಷೇತ್ರಕ್ಕೆ ಇರುವ ವೆಚ್ಚದ ಮಿತಿಯು 70 ಲಕ್ಷ ರೂಪಾಯಿಗಳು (ಚುನಾವಣೆಯನ್ನು ನಡೆಸುವ ನಿಯಮಗಳು, 1961ರ ನಿಯಮ 90ನ್ನು ನೋಡಿ)

**ಪ್ರಶ್ನೆ:3** **ಈ ದೊಡ್ಡ ರಾಜ್ಯಗಳಲ್ಲಿನ ಒಂದು ವಿಧಾನಸಭಾ ಮತಕ್ಷೇತ್ರಕ್ಕೆ ಇರುವಂಥ ಖರ್ಚಿನ ಮಿತಿ ಏನು?**

ಉತ್ತರ: ಪ್ರಸ್ತುತ, ಮೇಲಿನ ದೊಡ್ಡ ರಾಜ್ಯಗಳಲ್ಲಿನ ವಿಧಾನಸಭಾ ಕ್ಷೇತ್ರದ ಚುನಾವಣಾ ವೆಚ್ಚದ ಮಿತಿಯು 28 ಲಕ್ಷ ರೂ.ಗಳು. (ಚುನಾವಣೆಯನ್ನು ನಡೆಸುವ ನಿಯಮಗಳು, 1961ರ ನಿಯಮ 9ನ್ನು ನೋಡಿ)

**ಪ್ರಶ್ನೆ:4 ಈ ಮಿತಿಗಳು ಎಲ್ಲಾ ರಾಜ್ಯಗಳಿಗೆ ಸಂಬಂಧಿಸಿದಂತೆ ಏಕರೂಪದಲ್ಲಿದೆಯೇ? ಇಲ್ಲದಿದ್ದರೆ, ಪ್ರಸ್ತುತದಲ್ಲಿ ಸಂಸದೀಯ ಚುನವಣಾ ಕ್ಷೇತ್ರಕ್ಕೆ ಇರುವ ಅತ್ಯಂತ ಕಡಿಮೆ ಮಿತಿ ಬಗ್ಗೆ ನೀವು ತಿಳಿಸುವಿರಾ?**

ಉತ್ತರ: ಇಲ್ಲ. ಚುನಾವಣಾ ವೆಚ್ಚದ ಗರಿಷ್ಠ ಮಿತಿಯು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ. ದಾದ್ರಾ ಮತ್ತು ನಗರ ಹವೇಲಿ, ದಾಮನ್ ಮತ್ತು ಡಿಯು ಹಾಗೂ ಲಕ್ಷದ್ವೀಪ ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಸದೀಯ ಮತಕ್ಷೇತ್ರಕ್ಕೆ ಪ್ರಸ್ತುತ ಇರುವ ಅತ್ಯಂತ ಕಡಿಮೆ ಮಿತಿ 54 ಲಕ್ಷ ರೂ.ಗಳು (ಚುನಾವಣೆಯನ್ನು ನಡೆಸುವ ನಿಯಮಗಳು, 1961ರ ನಿಯಮ 90ನ್ನು ನೋಡಿ).

**ಪ್ರಶ್ನೆ:5 ಅಭ್ಯರ್ಥಿಗಳು ಚುನಾವಣಾ ವೆಚ್ಚಗಳ ಯಾವುದೇ ಲೆಕ್ಕವನ್ನು ದಾಖಲು ಮಾಡುವ ಅಗತ್ಯವಿದೆಯೇ?**

ಉತ್ತರ: ಹೌದು. ಪ್ರತಿಯೊಬ್ಬ ಅಭ್ಯರ್ಥಿಯು, ಲೋಕಸಭೆ ಅಥವಾ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ವತಃ ತಾನಾಗಲೀ ಅಥವಾ ಆತನ ಚುನಾವಣಾ ಏಜೆಂಟ್‌ನ ಮೂಲಕ ಆಗಲೀ ಯಾವ ದಿನಾಂಕದಂದು ಆತನ ನಾಮನಿರ್ದೇಶನ ಮಾಡಲಾಗಿದೆಯೇ ಆ ದಿನಾಂಕ ಹಾಗೂ ಫಲಿತಾಂಶದ ಘೋಷಣೆಯ ದಿನಾಂಕದ ನಡುವೆ, ಎರಡೂ ದಿನಾಂಕಗಳು ಸೇರಿದಂತೆ ಆತನು ಅಥವಾ ಆತನ ಚುನಾವಣಾ ಏಜೆಂಟನು ವಹಿಸಿದ ಅಥವಾ ಅಧಿಕಾರ ನೀಡಿದ ಚುನಾವಣೆ ಸಂಬಂಧದಲ್ಲಿನ ಎಲ್ಲ ವೆಚ್ಚಗಳ ಪ್ರತ್ಯೇಕವಾದ ಹಾಗೂ ಸರಿಯಾದ ಲೆಕ್ಕವನ್ನು ಇಡುವುದು ಅಗತ್ಯವಾಗಿದೆ. ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು, ಸದರಿ ಲೆಕ್ಕದ ಯಥಾ ಪ್ರತಿಯನ್ನು ಚುನಾವಣೆಯ ಫಲಿತಾಂಶದ 30 ದಿನಗಳೊಳಗೆ ಸಲ್ಲಿಸಬೇಕಾಗುತ್ತದೆ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಮತ್ತು 78ನೇ ಪ್ರಕರಣಗಳನ್ನು ನೋಡಿ).

**ಪ್ರಶ್ನೆ:6 ಯಾವ ಅಧಿಕಾರಿ ಮುಂದೆ ಅಂಥ ಲೆಕ್ಕವನ್ನು ಸಲ್ಲಿಸಬೇಲಾಗಿದೆಯೋ ಆ ಅಧಿಕಾರಿ ಯಾರು?**

ಉತ್ತರ: ಸ್ಪರ್ಧಿಸುವ ಅಭ್ಯರ್ಥಿಯು, ಆತನು ಯಾವ ಜಿಲ್ಲೆಯ ಮತಕ್ಷೇತ್ರದಿಂದ ಸ್ಪರ್ಧಿಸುತ್ತಿರುವನೋ ಆ ಮತಕ್ಷೇತ್ರವು ಇರುವ ಜಿಲ್ಲೆಯ ಜಿಲ್ಲಾ ಚುನಾವಣಾ ಅಧಿಕಾರಿಗೆ

ಚುನಾವಣಾ ವೆಚ್ಚದ ಲೆಕ್ಕವನ್ನು ಸಲ್ಲಿಸತಕ್ಕದ್ದು. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 78ನೇ ಪ್ರಕರಣವನ್ನು ನೋಡಿ).

**ಪ್ರಶ್ನೆ:7** **ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಮತಕ್ಷೇತ್ರಗಳಿಂದ ಸ್ಪರ್ಧಿಸುತ್ತಿದ್ದರೆ ಆತನು ಪ್ರತ್ಯೇಕವಾದ ಲೆಕ್ಕಪತ್ರಗಳನ್ನು ಅಥವಾ ಒಂದೇ ಒಂದು ಕ್ರೋಢಿಕೃತ ಲೆಕ್ಕವನ್ನು ಮಾತ್ರ ಸಲ್ಲಿಸುವ ಅಗತ್ಯವಿದೆಯೇ?**

ಉತ್ತರ: ಒಬ್ಬ ಅಭ್ಯರ್ಥಿಯು, ಒಂದಕ್ಕಿಂತ ಹೆಚ್ಚು ಮತಕ್ಷೇತ್ರಗಳಿಂದ ಸ್ಪರ್ಧಿಸುತ್ತಿದ್ದರೆ ಆತನು ಸ್ಪರ್ಧಿಸಿರುವ ಪ್ರತಿಯೊಂದು ಚುನಾವಣೆಗಾಗಿ ಮಾಡಿದ ವೆಚ್ಚಗಳ ಪ್ರತ್ಯೇಕವಾದ ಲೆಕ್ಕವನ್ನು ಸಲ್ಲಿಸಬೇಕಾಗುತ್ತದೆ. ಪ್ರತಿಯೊಂದು ಮತಕ್ಷೇತ್ರದ ಚುನಾವಣೆಯು ಪ್ರತ್ಯೇಕವಾದ ಚುನಾವಣೆಯಾಗಿರುತ್ತದೆ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 77ನ್ನು ನೋಡಿ).

**ಪ್ರಶ್ನೆ:8** **ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸದಿದ್ದರೆ ಅದಕ್ಕೆ ದಂಡ ಏನು?**

ಉತ್ತರ: ಚುನಾವಣಾ ಆಯೋಗವು, ವ್ಯಕ್ತಿಯು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಮೂಲಕ ಅಥವಾ ಅದರಡಿ ಅಗತ್ಯಪಡಿಸಲಾದ ಕಾಲದೊಳಗೆ ಮತ್ತು ವಿಧಾನದಲ್ಲಿ ಚುನಾವಣೆ ವೆಚ್ಚಗಳ ಒಂದು ಲೆಕ್ಕವನ್ನು ಸಲ್ಲಿಸಲು ವಿಫಲನಾಗಿದ್ದು ಹಾಗೂ ಆತನು ಈ ವಿಫಲತೆಗಾಗಿ ಯಾವುದೇ ಒಳ್ಳೆಯ ಕಾರಣವನ್ನು ಅಥವಾ ಸಮರ್ಥನೆಯನ್ನು ಹೊಂದಿರುವುದಿಲ್ಲವೆಂದು ಮನದಟ್ಟು ಮಾಡಿಕೊಂಡರೆ, ಅದು ಆತನನ್ನು ಸಂಸತ್ತಿನ ಯಾವುದೇ ಸದನದ ಅಥವಾ ರಾಜ್ಯದ ವಿಧಾನಸಭೆ ಅಥವಾ ವಿಧಾನ ಪರಿಷತ್‌ನ ಸದಸ್ಯನನ್ನಾಗಿ ಆಯ್ಕೆ ಮಾಡಬೇಕಾಗಿರುವುದಕ್ಕಾಗಿ ಹಾಗೂ ಆತನು ಸದಸ್ಯನಾಗಿರುವುದನ್ನು 3 ವರ್ಷಗಳ ಅವಧಿಯವರೆಗೆ ಅನರ್ಹಗೊಳಿಸುವ ಅಧಿಕಾರವನ್ನು ಹೊಂದಿರುತ್ತಾನೆ.

**ಪ್ರಶ್ನೆ:9** **ರಾಜಕೀಯ ಪಕ್ಷದ ತಾರಾ ವರ್ಚಸ್ಸಿನ ಪ್ರಚಾರಕರು (ನಾಯಕರು) ಆ ಪಕ್ಷದ ಪ್ರಚಾರ ಕಾರ್ಯಕ್ಕಾಗಿ ವಹಿಸಿದ ಪ್ರಯಾಣದ ವೆಚ್ಚವನ್ನು, ಆ ಪಕ್ಷದ ಅಭ್ಯರ್ಥಿಯು ವಹಿಸಿದ/ ಅಧಿಕಾರ ನೀಡಿದ ವೆಚ್ಚ ಎಂದು ಪರಿಗಣಿಸಬಹುದೇ? ಹಾಗಿದ್ದರೆ, ಷರತ್ತುಗಳು ಯಾವುವು?**

ಉತ್ತರ: ಚುನಾವಣಾ ಆಯೋಗಕ್ಕೆ ಹಾಗೂ ಸಂಬಂಧಪಟ್ಟ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗೆ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕಾಗಿ, ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ 7 ದಿನಗಳೊಳಗೆ ಅಂಥ ನಾಯಕರ (ರಾಷ್ಟ್ರೀಯ ಹಾಗೂ ರಾಜ್ಯದ ಪಕ್ಷಗಳ ಸಂದರ್ಭದಲ್ಲಿ 40 ಹಾಗೂ ಮನ್ನಣೆ ಪಡೆಯದ ನೋಂದಾಯಿತ ಪಕ್ಷದ ಸಂದರ್ಭದಲ್ಲಿ 20) ಪಟ್ಟಿಯನ್ನು ಒಪ್ಪಿಸಲಾಗಿರುವ ರಾಜಕೀಯ ಪಕ್ಷದ ತಾರಾ

ವರ್ಚಸ್ಸಿನ ಪ್ರಚಾರಕರ (ನಾಯಕರ) ಸಂದರ್ಭದಲ್ಲಿ ಪ್ರಯಾಣದ ಮೇರೆಗೆ ವಹಿಸಿದ ವೆಚ್ಚದ ಸಂದರ್ಭದಲ್ಲಿ ಮಾತ್ರ ವಿನಾಯಿತಿ ನೀಡಲಾಗಿದ್ದು, ಇದಕ್ಕೆ ತಪ್ಪಿದ್ದಲ್ಲಿ ಅಂಥ ವೆಚ್ಚವನ್ನು ಆ ಪಕ್ಷದ ಸಂಬಂಧಪಟ್ಟ ಅಭ್ಯರ್ಥಿಯು ವಹಿಸಿದ/ಅಧಿಕಾರ ನೀಡಿದ ವೆಚ್ಚವನ್ನಾಗಿ ಪರಿಗಣಿಸತಕ್ಕದ್ದು. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಪ್ರಕರಣದ ವಿವರಣೆ 1ರ (ಎ) ಖಂಡವನ್ನು ನೋಡಿ).

**ಪ್ರಶ್ನೆ:10** **ಪಕ್ಷದ ಸದಸ್ಯರಲ್ಲದಿರುವ ವ್ಯಕ್ತಿಯನ್ನು ಆ ಉದ್ದೇಶಕ್ಕಾಗಿ ಪಕ್ಷದ ತಾರಾ ವರ್ಚಸ್ಸಿನ ಪ್ರಚಾರಕರಾಗಿ ನಾಮನಿರ್ದೇಶನ ಮಾಡುವಂತಿದೆಯೇ?**

ಉತ್ತರ: ಇಲ್ಲ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77(1)ನೇ ಪ್ರಕರಣವನ್ನು ನೋಡಿ).

**ಪ್ರಶ್ನೆ:11** **ಆಯೋಗಕ್ಕೆ ತಾರಾ ವರ್ಚಸ್ಸಿನ ಪ್ರಚಾರಕರ (ನಾಯಕರ) ಪಟ್ಟಿಯನ್ನು ಒಪ್ಪಿಸಿದ ನಂತರ ಅದರಿಂದ ತಾರಾ ವರ್ಚಸ್ಸಿನ ಪ್ರಚಾರಕನ(ರ) ಹೆಸರನ್ನು ಬದಲಿಯಾಗಿ ಸೇರಿಸಲು ಅವಕಾಶವಿದೆಯೇ?**

ಉತ್ತರ: ಇಲ್ಲ. ಪಟ್ಟಿಯಲ್ಲಿ ಹೇಳಲಾದ ಯಾರೇ ವ್ಯಕ್ತಿಯು ಮರಣಿಸಿರುವಲ್ಲಿ ಅಥವಾ ಸಂಬಂಧಪಟ್ಟ ರಾಜಕೀಯ ಪಕ್ಷದ ಸದಸ್ಯನಾಗಿರುವುದು ನಿಂತು ಹೋಗಿರುವಲ್ಲಿ ಅಥವಾ ಅನ್ಯಥಾವಾಗಿ ಮಾತ್ರ ಕಾನೂನಿನಡಿ ಪಟ್ಟಿಯಿಂದ ಹೆಸರನ್ನು ಬದಲಿಯಾಗಿ ಸೇರಿಸಲು ಅನುಮತಿ ನೀಡಿದೆ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77(1)ನೇ ಪ್ರಕರಣದ 2ನೇ ವಿವರಣೆಯನ್ನು ನೋಡಿ).

**ಪ್ರಶ್ನೆ:12** **ರಾಜಕೀಯ ಪಕ್ಷದಿಂದ ತಾರಾ ವರ್ಚಸ್ಸಿನ ಪ್ರಚಾರಕ (ನಾಯಕ)ನನ್ನಾಗಿ ಘೋಷಿಸಲಾಗಿರುವ ಅಭ್ಯರ್ಥಿಯನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77(1)ನೇ ಪ್ರಕರಣದ ವಿವರಣೆಯ ಉದ್ದೇಶಕ್ಕಾಗಿ, ಆತನು ಯಾವ ಮತಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುತ್ತಿರುವನೋ ಆ ಸ್ವಂತ ಮತಕ್ಷೇತ್ರದಿಂದ ತನ್ನ ರಾಜಕೀಯ ಪಕ್ಷದ ತಾರಾ ವರ್ಚಸ್ಸಿನ ಪ್ರಚಾರಕ(ನಾಯಕ)ನನ್ನಾಗಿ ಪರಿಗಣಿಸುವಂತಿದೆಯೇ?**

ಉತ್ತರ: ಇಲ್ಲ. ಅಂಥ ನಾಯಕನನ್ನು ಆತನ ಸ್ವಂತ ಮತಕ್ಷೇತ್ರದಲ್ಲಿ ಆತನ ರಾಜಕೀಯ ಪಕ್ಷದ ತಾರಾ ವರ್ಚಸ್ಸಿನ ಪ್ರಚಾರಕ (ನಾಯಕ)ನೆಂದು ಪರಿಗಣಿಸುವಂತಿಲ್ಲ. ಆತನ ಸ್ವಂತ ಮತಕ್ಷೇತ್ರದಲ್ಲಿ ಆತನು ಮೊದಲು ಅಭ್ಯರ್ಥಿಯಾಗಿರುತ್ತಾನೆ. ಆತನ ಮತಕ್ಷೇತ್ರದೊಳಗೆ ಆತನು ವಹಿಸಿದ ವೆಚ್ಚವನ್ನು ಆತನ ಚುನಾವಣಾ ವೆಚ್ಚದ ಎದುರಿಗೆ ಸೇರಿಸಬೇಕಾಗುತ್ತದೆ.

**ಪ್ರಶ್ನೆ:13** **ಅಭ್ಯರ್ಥಿಯ ಸ್ನೇಹಿತನು ಅಭ್ಯರ್ಥಿಯ ಅನುಮೋದನೆ ಇಲ್ಲದೆ ಆತನ ಚುನಾವಣೆಗೆ ಸಹಾಯ ಮಾಡುವುದಕ್ಕಾಗಿ ವೆಚ್ಚವನ್ನು ವಹಿಸಬಹುದೇ?**

ಉತ್ತರ: ಅಭ್ಯರ್ಥಿಯ ಅನುಮೋದನೆ ಇಲ್ಲದೆ ಚುನಾವಣೆಗೆ ಸಹಾಯ ಮಾಡುವುದಕ್ಕಾಗಿ ವಹಿಸಿದ ವೆಚ್ಚವು 10/– ರೂ.ಗಳ ಮೊಬಲಗನ್ನು ಮೀರಿದರೆ ಅದು ದಂಡನೀಯವಾಗಿರುತ್ತದೆ. (ಭಾರತ ದಂಡ ಸಂಹಿತೆಯ 171 ಎಚ್ ಪ್ರಕರಣವನ್ನು ನೋಡಿ).

**ಪ್ರಶ್ನೆ:14 ಅಭ್ಯರ್ಥಿಯ ಚುನಾವಣೆಗೆ ಸಹಾಯ ಮಾಡುವುದಕ್ಕಾಗಿ ಆತನ ಅನುಮೋದನೆಯೊಂದಿಗೆ ಸ್ನೇಹಿತನು ವೆಚ್ಚವನ್ನು ವಹಿಸಿದ ಪಕ್ಷದಲ್ಲಿ, ಅಂಥ ವೆಚ್ಚವನ್ನು ಅಭ್ಯರ್ಥಿಯ ಲೆಕ್ಕದ ಎದುರಿಗೆ ಸೇರಬೇಕಾಗುತ್ತದೆಯೇ?**

ಉತ್ತರ: ಹೌದು. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಪ್ರಕರಣವನ್ನು ನೋಡಿ)

**ಪ್ರಶ್ನೆ: 15 ಅಭ್ಯರ್ಥಿಯು ತಾರಾ ಪ್ರಚಾರಕನ ಜೊತೆಯಲ್ಲಿ ಒಂದೇ ವಾಹನದಲ್ಲಿ ಪ್ರಯಾಣಿಸಿದ್ದಲ್ಲಿ ಆ ವಾಹನದ ವೆಚ್ಚವನ್ನು ಅಭ್ಯರ್ಥಿಗಳ ಚುನಾವಣಾ ವೆಚ್ಚಗಳ ಲೆಕ್ಕಗಳಿಗೆ ಸೇರಿಸಲಾಗುತ್ತದೆಯೇ?**

ಉತ್ತರ: ಜನತಾಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 77(1)ಕ್ಕೆ ನೀಡಲಾದ ವಿವರಣೆ–2ರ ಅಡಿಯಲ್ಲಿ ಒಳಗೊಳ್ಳಲಾದ ರಾಜಕೀಯ ಪಕ್ಷದ ನಾಯಕ (ತಾರಾ ಪ್ರಚಾರಕ)ರು ಪ್ರಯಾಣಿಸುವಂಥ ವಾಹನದಲ್ಲಿ, ಅಭ್ಯರ್ಥಿಯಾಗಲಿ ಅಥವಾ ಪಕ್ಷದ/ ಅಭ್ಯರ್ಥಿಯ ಇತರ ಕಾರ್ಯಕರ್ತರು ಸಹ ಪ್ರಯಾಣಿಸಿದರೆ, ವಾಹನಕ್ಕೆ ತಗಲುವ 50% ವೆಚ್ಚವನ್ನು ಸಂಬಂಧಪಟ್ಟ ಅಭ್ಯರ್ಥಿ(ಗಳ) ಚುನಾವಣಾ ವೆಚ್ಚ ಖಾತೆಗೆ ಸೇರಿಸಲಾಗುತ್ತದೆ. (ಎಂದರೆ, ಯಾವ ಸಂಭಾವ್ಯ ಅಭ್ಯರ್ಥಿ(ಗಳ) ಚುನಾವಣಾ ಪ್ರಚಾರಕ್ಕಾಗಿ ನಾಯಕನು ಪ್ರಯಾಣಿಸುತ್ತಿರುತ್ತಾನೋ ಅಂಥ ಅಭ್ಯರ್ಥಿ(ಗಳು)) ವಾಹನ ಎಂಬುದು ನಾಯಕನು ಪ್ರಯಾಣಕ್ಕಾಗಿ ಬಳಸುವಂಥ ವಿಮಾನ/ ಹೆಲಿಕಾಪ್ಟರ್ ಅಥವಾ ಯಾವುದೇ ಇತರ ಸಾರಿಗೆ ವಾಹನವನ್ನು ಒಳಗೊಳ್ಳುತ್ತದೆ.

**ಪ್ರಶ್ನೆ 16: ಜಿಲ್ಲಾ ಮಟ್ಟದ ಪದಾಧಿಕಾರಿಗಳು/ ನಾಯಕರು ಜಿಲ್ಲೆಯ ಒಳಗೆ ಸಂಚರಿಸಿದಾಗ ಉಂಟಾಗುವ ವೆಚ್ಚವನ್ನು ಪಕ್ಷದ ಅಭ್ಯರ್ಥಿಗಳ ಚುನಾವಣಾ ವೆಚ್ಚದಲ್ಲಿ ಸೇರಿಸಲಾಗುತ್ತದೆಯೇ?**

ಉತ್ತರ: ಇಲ್ಲ, ಯಾವುದೇ ರಾಜಕೀಯ ಪಕ್ಷವು ಅದರ ಜಿಲ್ಲಾ ಮಟ್ಟದ ಪದಾಧಿಕಾರಿಗಳು/ ನಾಯಕರು (ತಾರಾ ಪ್ರಚಾರಕರನ್ನು ಹೊರತುಪಡಿಸಿ) ಚುನಾವಣಾ ಪ್ರಚಾರದ ಉದ್ದೇಶಗಳಿಗಾಗಿ ಜಿಲ್ಲೆಯ ಒಳಗಿನ ಹಲವು ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಲು ಬಳಸಲಿರುವ ವಾಹನಗಳಿಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರೆ, ಅದರ ಅಗತ್ಯ ಅನುಮತಿಯನ್ನು ಸಂಬಂಧಪಟ್ಟ ಜಿಲ್ಲೆಯ ಡಿಇಓ ಅವರು ನೀಡಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ, ಅನುಮತಿಯು ವ್ಯಕ್ತಿಯ ಹೆಸರಿನಲ್ಲಿರತಕ್ಕದ್ದು ಮತ್ತು ವಾಹನದ ನೋಂದಣಿ ಸಂಖ್ಯೆಯನ್ನು ಸಹ ನಮೂದಿಸಿರಬೇಕು. ಈ ವಾಹನದ ಮೇಲಿನ ವೆಚ್ಚವನ್ನು

ರಾಜಕೀಯ ಪಕ್ಷವು ಭರಿಸತಕ್ಕದ್ದೇ ವಿನಃ ಅಭ್ಯರ್ಥಿಗಳಲ್ಲ. ಈ ಪರವಾನಗಿಯನ್ನು ಇತರ ಜಿಲ್ಲೆಗಳಲ್ಲಿ ಪ್ರಯಾಣಿಸುವುದಕ್ಕಾಗಿ ಬಳಸುವಂತಿಲ್ಲ. ಮಾನ್ಯತೆ ಹೊಂದಿರುವ ಒಂದು ರಾಷ್ಟ್ರೀಯ ಅಥವಾ ರಾಜ್ಯ ರಾಜಕೀಯ ಪಕ್ಷಕ್ಕಾಗಿ ಒಂದು ನಿರ್ದಿಷ್ಟ ಜಿಲ್ಲೆಗೆ ಒಂದು ಪರವಾನಗಿಯನ್ನು ಮಾತ್ರ ನೀಡಬಹುದು ಮತ್ತು ಅಂಥ ಪರವಾನಗಿಯು ರಾಜಕೀಯ ನಾಯಕನ ಹೆಸರು, ವಾಹನದ ಸಂಖ್ಯೆ ಮತ್ತು ಪರವಾನಗಿ ಅವಧಿಯ ವಿವರವನ್ನು ಸಹ ಒಳಗೊಂಡಿರಬೇಕಾಗುತ್ತದೆ. ಅಭ್ಯರ್ಥಿಗಳಿಗೆ ಮತ್ತು ತಾರಾ ಪ್ರಚಾರಕರಿಗೆ ನೀಡಲಾಗುವ ಪರವಾನಗಿಗಳಿಗೆ ಬಳಸುವ ಬಣ್ಣದ ಕಾಗದಗಳಿಂದ ಭಿನ್ನವಾದ ಬಣ್ಣದ ಕಾಗದದ ಮೇಲೆ ಪರವಾನಗಿಯನ್ನು ನೀಡಬಹುದು. ಇದರಿಂದ, ಇಂಥ ವ್ಯತ್ಯಾಸವನ್ನು ಸುಲಭವಾಗಿ ಗುರುತಿಸಬಹುದು. ಪರವಾನಗಿಯ ದೃಢೀಕೃತ ಪ್ರತಿಯನ್ನು ವಾಹನದ ಕಿಟಕಿ ಪರದೆಯ ಮೇಲೆ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು ಮತ್ತು ಅದರ ಮೂಲ ಪ್ರತಿಯನ್ನು ಪೊಲೀಸರು ಅಥವಾ ಇನ್ನಾರೇ ಪ್ರಾಧಿಕಾರಿಗಳ ತಪಾಸಣೆ ದೃಷ್ಟಿಯಿಂದ, ಪರವಾನಗಿ ನೀಡಲ್ಪಟ್ಟ ವ್ಯಕ್ತಿಯು ಇಟ್ಟುಕೊಂಡಿರಬೇಕು.

**ಪ್ರಶ್ನೆ 17:** **ನಾಮನಿರ್ದೇಶನ ದಿನಾಂಕಕ್ಕಿಂತ ಮೊದಲು, ಪ್ರಚಾರ ಸಾಮಗ್ರಿಗಳ ಸಿದ್ಧತೆಗಾಗಿ ಮಾಡಲಾದ ವೆಚ್ಚವನ್ನು ಚುನಾವಣಾ ವೆಚ್ಚದಲ್ಲಿ ಸೇರಿಸಲಾಗುತ್ತದೆಯೇ?**

ಉತ್ತರ ಹೌದು, ಅಭ್ಯರ್ಥಿಗಳು ತಮ್ಮ ಚುನಾವಣಾ ವೆಚ್ಚದ ಲೆಕ್ಕಗಳ ರಿಜಿಸ್ಟರ್ ಅನ್ನು ನಿರ್ವಹಿಸುವಾಗ, ನಾಮನಿರ್ದೇಶನ ಆನಂತರ ಅವಧಿಯಲ್ಲಿ/ ಚುನಾವಣೆ ಸಂಬಂಧದಲ್ಲಿ ವಾಸ್ತವಿಕವಾಗಿ ಬಳಸುವಂತಹ ಪ್ರಚಾರ ಸಾಮಗ್ರಿಗಳು ಇತ್ಯಾದಿಯ ಸಿದ್ಧತೆಗಾಗಿ ನಾಮನಿರ್ದೇಶನ ದಿನಾಂಕಕ್ಕಿಂತ ಮೊದಲೇ ಮಾಡಲಾದ ವೆಚ್ಚಗಳು ಸೇರಿದಂತೆ ಎಲ್ಲಾ ವೆಚ್ಚಗಳನ್ನು ಸಹ ಲೆಕ್ಕ ಮಾಡಬೇಕು.

**ಪ್ರಶ್ನೆ 18:** **ರಾಜಕೀಯ ಪಕ್ಷವು ಜಾಹೀರಾತುಗಳ ಮೇಲೆ ವ್ಯಯಿಸುವಂಥ ವೆಚ್ಚವನ್ನು ಅಭ್ಯರ್ಥಿಗಳ ಲೆಕ್ಕದಲ್ಲಿ ಸೇರಿಸಲಾಗುತ್ತದೆಯೇ?**

ಉತ್ತರ ಹೌದು, ರಾಜಕೀಯ ಪಕ್ಷವು ಯಾವುದೇ ಚುನಾವಣೆಯ ಸಂಬಂಧವಾಗಿ ಜಾಹೀರಾತುಗಳ ಮೇಲೆ ಮಾಡುವಂಥ ವೆಚ್ಚವನ್ನು ಈ ಮುಂದಿನ ಪ್ರವರ್ಗಗಳಾಗಿ ವಿಂಗಡಿಸಬಹುದು.(i) ಸಾಮಾನ್ಯವಾಗಿ ಒಂದು ಪಕ್ಷಕ್ಕೆ ಹಾಗೂ ಅದರ ಅಭ್ಯರ್ಥಿಗಳಿಗೆ, ಆದರೆ ಯಾರೇ ಒಬ್ಬ ನಿರ್ದಿಷ್ಟ ಅಭ್ಯರ್ಥಿ ಅಥವಾ ಯಾರೇ ನಿರ್ದಿಷ್ಟ ಅಭ್ಯರ್ಥಿ ವರ್ಗ/ ಸಮೂಹವನ್ನು ಉಲ್ಲೇಖಿಸಿದಂತೆ ಬೆಂಬಲವನ್ನು ಕೋರಿ ಸಾಮಾನ್ಯ ಪಕ್ಷವು ಪ್ರಚಾರ

ಮಾಡುವಾಗ ಉಂಟಾಗುವ ವೆಚ್ಚ; (ii) ರಾಜಕೀಯ ಪಕ್ಷವು ನೇರವಾಗಿ ಯಾರೇ ನಿರ್ದಿಷ್ಟ ಅಭ್ಯರ್ಥಿಗೆ ಅಥವಾ ಅಭ್ಯರ್ಥಿ ಸಮೂಹಕ್ಕೆ ಬೆಂಬಲ ನೀಡುವಂತೆ ಹಾಗೂ/ ಅಥವಾ ಮತಹಾಕುವಂತೆ ಕೋರಿ ಜಾಹೀರಾತುಗಳು ಇತ್ಯಾದಿಗಳಿಗೆ ಮಾಡುವ ವೆಚ್ಚ; (iii) ರಾಜಕೀಯ ಪಕ್ಷವು ಯಾರೇ ನಿರ್ದಿಷ್ಟ ಅಭ್ಯರ್ಥಿ ಅಥವಾ ಅಭ್ಯರ್ಥಿ ಸಮೂಹದ ಸಂಭಾವ್ಯ ಅಭ್ಯರ್ಥಿಗಳನ್ನು ಬೆಂಬಲಿಸುವ ಸಂಬಂಧವಾಗಿ ಮಾಡುವ ಯಾವುದೇ ವೆಚ್ಚ. ರಾಜಕೀಯ ಪಕ್ಷಗಳು ಮುದ್ರಿತ ಅಥವಾ ವಿದ್ಯುನ್ಮಾನಿತ ಅಥವಾ ಇತರ ಯಾವುದೇ ಮಾಧ್ಯಮದಲ್ಲಿ ಯಾವುದೇ ಜಾಹೀರಾತು ಪ್ರಕಟಿಸುವಿಕೆಯು ಮೇಲಿನ (i)ರ ಪ್ರವರ್ಗಕ್ಕೆ ಬರುವ ಸಂದರ್ಭದಲ್ಲಿ, ಆದರೆ ಅದು ಯಾರೇ ನಿರ್ದಿಷ್ಟ ಅಭ್ಯರ್ಥಿ ಅಥವಾ ಅಭ್ಯರ್ಥಿ ಸಮೂಹದ ಚುನಾವಣೆಗೆ ಸಂಬಂಧಪಡದಿದ್ದಲ್ಲಿ, ಆ ವೆಚ್ಚವನ್ನು ರಾಜಕೀಯ ಪಕ್ಷದ ಸಾಮಾನ್ಯ ಪ್ರಚಾರ ವೆಚ್ಚ ಎಂಬುದಾಗಿ ಪರಿಗಣಿಸಬಹುದು. ವೆಚ್ಚವು ಮೇಲಿನ (ii) ಮತ್ತು (iii) ಪ್ರವರ್ಗಕ್ಕೆ ಬರುವ ಸಂದರ್ಭದಲ್ಲಿ, ಎಂದರೆ ಅದು ಯಾರೇ ನಿರ್ದಿಷ್ಟ ಅಭ್ಯರ್ಥಿ ಅಥವಾ ಅಭ್ಯರ್ಥಿ ಸಮೂಹದ ಚುನಾವಣೆಗೆ ಸಂಬಂಧಪಟ್ಟಿರುವಲ್ಲಿ, ಆ ವೆಚ್ಚವನ್ನು ಸಂಬಂಧಪಟ್ಟ ಅಭ್ಯರ್ಥಿಗಳು ಅಧಿಕೃತಗೊಳಿಸಿದ ವೆಚ್ಚ ಎಂಬುದಾಗಿ ಪರಿಗಣಿಸತಕ್ಕದ್ದು ಮತ್ತು ಅಂಥ ವೆಚ್ಚವನ್ನು ಸಂಬಂಧಪಟ್ಟ ಅಭ್ಯರ್ಥಿಗಳ ಚುನಾವಣಾ ವೆಚ್ಚ ಲೆಕ್ಕಗಳಲ್ಲಿ ಸೇರಿಸತಕ್ಕದ್ದು. ಒಂದು ನಿರ್ದಿಷ್ಟ ಅಭ್ಯರ್ಥಿಗಳ ಪ್ರಯೋಜನಕ್ಕಾಗಿ ಪಕ್ಷವು ಖರ್ಚು ಮಾಡುವ ಸಂದರ್ಭದಲ್ಲಿ ವೆಚ್ಚವನ್ನು ಅಭ್ಯರ್ಥಿಗಳು ಸಮಾನವಾಗಿ ಭರಿಸಬೇಕಿರುತ್ತದೆ.

**ಪ್ರಶ್ನೆ 19:** **ರಾಜಕೀಯ ಪಕ್ಷಗಳು ಪ್ರಚಾರ ಸಾಮಗ್ರಿಗಳ ಹಂಚಿಕೆಗಾಗಿ ಮಾಡುವ ವೆಚ್ಚವನ್ನು ಅಭ್ಯರ್ಥಿಗಳ ಚುನಾವಣಾ ವೆಚ್ಚಕ್ಕೆ ಸೇರಿಸಲಾಗುತ್ತದೆಯೇ?**

ಉತ್ತರ ಇಲ್ಲ, ಯಾವುದೇ ರಾಜಕೀಯ ಪಕ್ಷವು ತಮ್ಮ ಪ್ರಚಾರ ಸಾಮಗ್ರಿಗಳನ್ನು ರಾಜ್ಯದಲ್ಲಿನ ಪಕ್ಷದ ವಿವಿಧ ಕಚೇರಿಗಳಿಗೆ ಹಂಚಿಕೆ ಮಾಡುವುದಕ್ಕಾಗಿ ವಾಹನ ಬಳಸಲು ಅನುಮತಿ ನೀಡುವಂತೆ ಮುಖ್ಯ ಚುನಾವಣಾಧಿಕಾರಿಗೆ ಕೋರಿಕೆ ಸಲ್ಲಿಸಿದರೆ, ಮುಖ್ಯ ಚುನಾವಣಾಧಿಕಾರಿಯು ಒಂದು ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷ (ರಾಷ್ಟ್ರೀಯ ಅಥವಾ ರಾಜ್ಯ ಪಕ್ಷವಾಗಿರಲಿ)ಕ್ಕೆ ಒಂದು ವಾಹನ ಬಳಸಲು ಅನುಮತಿ ಮಂಜೂರು ಮಾಡಬಹುದು. ಸಂಬಂಧಪಟ್ಟ ರಾಜಕೀಯ ಪಕ್ಷ (ಅರ್ಜಿದಾರ)ವು ಜಿಲ್ಲೆಯ ಹೆಸರು, ಮಾರ್ಗ ನಕ್ಷೆ ಮತ್ತು ಮೇಲಿನ ಉದ್ದೇಶಕ್ಕಾಗಿ ವಾಹನ ಅಗತ್ಯವಾಗಿರುವ ದಿನಾಂಕಗಳನ್ನು ನಮೂದಿಸಬೇಕು. ಅಂಥ ವಾಹನಗಳಿಗೆ, ಮುಖ್ಯ ಚುನಾವಣಾಧಿಕಾರಿಯು ಅನುಮತಿ

ನೀಡತಕ್ಕದ್ದು. ಆದರೆ ಅಂಥ ವಾಹನಗಳು ಸಾಮಾನ್ಯ ತಪಾಸಣೆಗಳಿಗೆ ಸಹ ಒಳಪಡಬೇಕಾಗುವುದನ್ನು ಮತ್ತು ಚುನಾವಣಾ ಪ್ರಚಾರಕ್ಕಾಗಿ ಬಳಸಲಾಗದಿರುವುದನ್ನು ಅವರು ಖಚಿತಪಡಿಸಿಕೊಳ್ಳಬೇಕು. ಅಂಥ ವಾಹನದ ಮೇಲಿನ ವೆಚ್ಚವನ್ನು ಸಂಬಂಧಪಟ್ಟ ರಾಜಕೀಯ ಪಕ್ಷವು ಭರಿಸಬೇಕೇ ವಿನಃ ಅಭ್ಯರ್ಥಿಗಳಲ್ಲ.

## 20.14 ವಿದ್ಯುನ್ಮಾನ ಮತಯಂತ್ರಗಳು

**ಪ್ರಶ್ನೆ:1 ವಿದ್ಯುನ್ಮಾನ ಮತಯಂತ್ರ ಎಂದರೇನು? ಅದರ ಕಾರ್ಯವಿಧಾನವು ಸಾಂಪ್ರದಾಯಿಕ ಮತದಾನ ವಿಧಾನದಿಂದ ಹೇಗೆ ಭಿನ್ನವಾಗಿದೆ?**

ಉತ್ತರ: ಒಂದು ವಿದ್ಯುನ್ಮಾನ ಮತಯಂತ್ರವು ಮೂರು ಮೀಟರ್ ಕೇಬಲ್‌ನಿಂದ ಜೋಡಿಸಲಾದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್ ಎಂಬ ಎರಡು ಯೂನಿಟ್‌ಗಳನ್ನು ಒಳಗೊಂಡಿರುತ್ತದೆ.ಕಂಟ್ರೋಲ್ ಯೂನಿಟ್ ಅನ್ನು ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಯ ಬಳಿ ಮತ್ತು ಬ್ಯಾಲೆಟ್ ಯೂನಿಟ್ ಅನ್ನು ವೋಟಿಂಗ್ ಕಂಪಾರ್ಟ್‌ಮೆಂಟ್ ಒಳಗೆ ಇಡಲಾಗಿರುತ್ತದೆ. ಮತಪತ್ರವನ್ನು ನೀಡುವ ಬದಲು, ಕಂಟ್ರೋಲ್ ಯೂನಿಟ್‌ನ ಪ್ರಭಾರಿ ಪೋಲಿಂಗ್ ಅಧಿಕಾರಿಯು ಬ್ಯಾಲೆಟ್ ಬಟನ್ ಅನ್ನು ಒತ್ತುವರು. ಇದರಿಂದಾಗಿ ಮತದಾರನು ಅಭ್ಯರ್ಥಿ ಹಾಗೂ ಆತನ ಆಯ್ಕೆಯ ಚಿಹ್ನೆ ಎದುರಿರುವ ನೀಲಿ ಬಟನ್ ಅನ್ನು ಒತ್ತುವುದರ ಮೂಲಕ ತನ್ನ ಮತವನ್ನು ಚಲಾಯಿಸಲು ಸಾಧ್ಯವಾಗುತ್ತದೆ.

**ಪ್ರಶ್ನೆ:2 ವಿದ್ಯುನ್ಮಾನ ಮತಯಂತ್ರಗಳನ್ನು ಯಾರು ರೂಪಿಸಿದರು?**

ಉತ್ತರ: ವಿದ್ಯುನ್ಮಾನ ಮತಯಂತ್ರಗಳನ್ನು, ಚುನಾವಣಾ ಆಯೋಗವು, ಸರಣಿ ಸಭೆಗಳು, ಮೂಲ ಮಾದರಿಗಳ ಪರೀಕ್ಷಾ ತಪಾಸಣೆ ಹಾಗೂ ವ್ಯಾಪಕವಾದ ಕ್ಷೇತ್ರ ಪರೀಕ್ಷೆಗಳನ್ನು ನಡೆಸಿದ ನಂತರ, ಎರಡು ಕೇಂದ್ರ ಸರ್ಕಾರದ ಸಾರ್ವಜನಿಕ ವಲಯ ಉದ್ಯಮಗಳ, ಅಂದರೆ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಬೆಂಗಳೂರು ಹಾಗೂ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಹೈದರಾಬಾದ್ ಇವುಗಳ ಸಹಯೋಗದೊಂದಿಗೆ ರೂಪಿಸಿ ವಿನ್ಯಾಸಗೊಳಿಸಿದೆ.

**ಪ್ರಶ್ನೆ:3 ಭಾರತದ ಚುನಾವಣಾ ಆಯೋಗಕ್ಕೆ ಯಾರು ವಿದ್ಯುನ್ಮಾನ ಮತಯಂತ್ರಗಳನ್ನು ತಯಾರಿಸಿ ಮತ್ತು ಪೂರೈಕೆ ಮಾಡುವರು?**

ಉತ್ತರ: ಎರಡು ಕೇಂದ್ರ ಸರ್ಕಾರದ ಉದ್ಯಮಗಳು ಅಂದರೆ, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಬೆಂಗಳೂರು ಮತ್ತು ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಹೈದರಾಬಾದ್ ಇವುಗಳು ಮಾತ್ರ ತಯಾರಕರಾಗಿದ್ದು, ಇವುಗಳಿಂದ ಭಾರತದ ಚುನಾವಣಾ ಆಯೋಗವು ವಿದ್ಯುನ್ಮಾನ ಮತಯಂತ್ರಗಳನ್ನು ಸಂಗ್ರಹಿಸುತ್ತದೆ.

**ಪ್ರಶ್ನೆ:4 ವಿದ್ಯುನ್ಮಾನ ಮತ ಯಂತ್ರಗಳ ವಿಶಿಷ್ಟ ಲಕ್ಷಣಗಳೇನು?**

ಉತ್ತರ: ಇದೊಂದು ಸರಳವಾದ ಯಂತ್ರವಾಗಿದ್ದು, ಇದನ್ನು ಮತಗಟ್ಟೆ ಸಿಬ್ಬಂದಿ ಮತ್ತು ಮತದಾರರು ಸುಲಭವಾಗಿ ನಿರ್ವಹಿಸಬಹುದಾಗಿರುತ್ತದೆ. ಒರಟಾದ ನಿರ್ವಹಣೆ ಮತ್ತು ಬದಲಾಗುವ ಹವಾಮಾನ ಪರಿಸ್ಥಿತಿಯನ್ನು ತಡೆದುಕೊಳ್ಳುವಷ್ಟು ಗಟ್ಟಿಮುಟ್ಟಾಗಿರುತ್ತದೆ. ಯಾವುದೇ ನೆಟ್‌ವರ್ಕ್ ಸಂಪರ್ಕವಿಲ್ಲದೆಯೇ ಸ್ಟ್ಯಾಂಡ್ ಅಲೋನ್ ಆಗಿರುವ ಯಂತ್ರವಾಗಿದ್ದರೂ, ಯಾರೊಬ್ಬರು ಅದರ ಪ್ರೊಗ್ರಾಮ್‌ನಲ್ಲಿ ಹಸ್ತಕ್ಷೇಪ ಮಾಡಲು ಮತ್ತು ಫಲಿತಾಂಶವನ್ನು ದುರುಪಯೋಗಪಡಿಸಿಕೊಳ್ಳಲು ಆಗುವುದಿಲ್ಲ.

**ಪ್ರಶ್ನೆ:5 ಕಂಟ್ರೋಲ್ ಯೂನಿಟ್‌ನ ಲಕ್ಷಣಗಳೇನು?**

ಉತ್ತರ: ಕಂಟ್ರೋಲ್ ಯೂನಿಟ್ ಒಂದು ಪ್ರಮುಖ ಘಟಕವಾಗಿದ್ದು, ಇದರಲ್ಲಿ ಎಲ್ಲಾ ದತ್ತಾಂಶವು ಸಂಗ್ರಹವಾಗಿದ್ದು ವಿದ್ಯುನ್ಮಾನ ಮತಯಂತ್ರದ ಕಾರ್ಯವಿಧಾನವನ್ನು ನಿಯಂತ್ರಿಸುತ್ತದೆ. ಕಂಟ್ರೋಲ್ ಯೂನಿಟ್‌ನ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುವ ಪ್ರೋಗ್ರಾಮ್ ಅನ್ನು "ಏಕ ಕಾಲದ ಪ್ರೋಗ್ರಾಮೇಬಲ್ ಆಧಾರ"ದ ಮೇಲೆ ಸೂಕ್ಷ್ಮ ಚಿಪ್‌ನನ್ನಾಗಿ ಅಚ್ಚಳಿಯದಂತೆ ಮುದ್ರೆ ಒತ್ತಲಾಗುವುದು (ಬರ್ನ್ಟ್) ಒಮ್ಮೆ ಅಚ್ಚಳಿಯದಂತೆ ಮುದ್ರೆ ಒತ್ತಿರುವಾಗ ಅದನ್ನು ಓದಲು, ನಕಲು ಮಾಡಲು ಅಥವಾ ಬದಲಾಯಿಸಲು ಸಾಧ್ಯವಿಲ್ಲ. ವಿದ್ಯುನ್ಮಾನ ಮತಯಂತ್ರಗಳು, ಬ್ಯಾಲೆಟ್ ಯೂನಿಟ್‌ನಿಂದ ಕಂಟ್ರೋಲ್ ಯೂನಿಟ್‌ಗೆ ಡೇಟಾದ ಭದ್ರತೆಯನ್ನು ಹೆಚ್ಚಿಸಲು ಡೈನಾಮಿಕ್ ಕೋಡಿಂಗ್ ಅನ್ನು ಬಳಸುತ್ತವೆ. ವಿದ್ಯುನ್ಮಾನ ಮತಯಂತ್ರಗಳು ರಿಯಲ್ ಟೈಮ್ ಕ್ಲಾಕ್ ಮತ್ತು ಡೇಟ್ ಟೈಮ್ ಸ್ಟ್ಯಾಂಪಿಂಗ್ ಸೌಲಭ್ಯವನ್ನು ಸಹ ಹೊಂದಿದ್ದು, ಇದರಿಂದಾಗಿ, ಕೀಯನ್ನು ಒತ್ತಿದಾಗ ಕರಾರುವಾಕ್ಕಾದ ಸಮಯ ಮತ್ತು ದಿನಾಂಕವನ್ನು ದಾಖಲಿಸಲು ಸಾಧ್ಯವಾಗಿಸುತ್ತದೆ. ಮತದಾನ ಕಾರ್ಯವು ಮುಗಿದಿದ್ದು ಮತ್ತು ಕ್ಲೋಸ್ ಬಟನ್ ಅನ್ನು ಒತ್ತಿದ ನಂತರ, ಯಂತ್ರವು ಯಾವುದೇ ಡೇಟಾವನ್ನು ಸ್ವೀಕರಿಸುವುದಿಲ್ಲ ಅಥವಾ ಯಾವುದೇ ಮತವನ್ನು ದಾಖಲಿಸುವುದಿಲ್ಲ. "ಟೋಟಲ್" ಬಟನ್ ಅನ್ನು ಒತ್ತುವ ಮುಖಾಂತರ, ಕಂಟ್ರೋಲ್ ಯೂನಿಟ್ ಆ ಕಾಲದವರೆಗೆ ಚಲಾಯಿಸಲಾದ ಒಟ್ಟು ಮತಗಳ ಸಂಖ್ಯೆಯನ್ನು ತೋರಿಸಬಹುದಾಗಿದ್ದು

ಇದನ್ನು ನಮೂನೆ–17ಎಯಲ್ಲಿ ಮತದಾರರ ರಿಜಿಸ್ಟರ್‌ನೊಂದಿಗೆ ಹೋಲಿಸಿ ನೋಡಬಹುದಾಗಿದೆ. ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಸಿಸ್ಟಮ್ ಮತಗಟ್ಟೆಯಲ್ಲಿ ಚಲಾಯಿಸಲಾದ ಒಟ್ಟು ಮತಗಳ ಸಂಖ್ಯೆಯನ್ನು ಹಾಗೂ ಮತ ಎಣಿಕೆ ಕೇಂದ್ರದಲ್ಲಿ ಮತ ಎಣಿಕೆ ಏಜೆಂಟ್‌ರ ಹಾಜರಿಯಲ್ಲಿ ಮತ ಎಣಿಕೆ ಸಿಬ್ಬಂದಿಯು 'ರಿಸಲ್ಟ್' ಬಟನ್ ಅನ್ನು ಒತ್ತಿದಾಗ ಮತಯಂತ್ರದಲ್ಲಿ ಚಲಾಯಿಸಲಾದ ಅಭ್ಯರ್ಥಿವಾರು ಮತಗಳನ್ನು ತೋರಿಸುತ್ತದೆ. ಕಂಟ್ರೋಲ್ ಯೂನಿಟ್ ಕನೆಕ್ಟಿಂಗ್ ಕೇಬಲ್‌ನಲ್ಲಿ ಭೌತಿಕವಾಗಿ ಬೇಕಾದಂತೆ ಮಾಡಿದ ಯಾವುದೇ ಬದಲಾವಣೆಯನ್ನು ಸಹ ಪತ್ತೆ ಹಚ್ಚುತ್ತದೆ.

**ಪ್ರಶ್ನೆ:6 ಬ್ಯಾಲೆಟ್ ಯೂನಿಟ್‌ನ ಲಕ್ಷಣಗಳೇನು?**

ಉತ್ತರ: ಇದು ಅಭ್ಯರ್ಥಿಗಳ ಹೆಸರುಗಳನ್ನು ಮತ್ತು ಚಿಹ್ನೆಗಳನ್ನು ಒಳಗೊಂಡಿರುವ ಮತಪತ್ರವನ್ನು ಹೊಂದಿರುತ್ತದೆ. ಅದನ್ನು ಒತ್ತಿದಾಗ, ಬ್ಯಾಲೆಟ್ ಯೂನಿಟ್ ಮೇಲಿರುವ ಕ್ಯಾಂಡಿಡೇಟ್ ಬಟನ್ ಕಂಟ್ರೋಲ್ ಯೂನಿಟ್‌ಗೆ ಸಂಕೇತವನ್ನು ಕಳುಹಿಸುತ್ತದೆ, ಅಲ್ಲಿ ಅದು ನಾನ್ – ವೊಲಾಟೈಲ್ ಮೆಮರಿಯಲ್ಲಿ ದಾಖಲಾಗಿ ಬ್ಯಾಟರಿ ಬ್ಯಾಕಪ್ ಇಲ್ಲದೆಯೇ ಕೂಡ ಅನಿರ್ದಿಷ್ಟವಾಗಿ ಮತದಾನ ಡೇಟಾವನ್ನು ಸಂಗ್ರಹಿಸಬಲ್ಲದು.

**ಪ್ರಶ್ನೆ:7 ಮತದಾರರು ಇವಿಎಂಗಳನ್ನು ಬಳಸಿಕೊಂಡು ಅವರ ಮತವನ್ನು ಹೇಗೆ ಚಲಾಯಿಸುತ್ತಾರೆ?**

ಉತ್ತರ: ಇವಿಎಂನ ಬ್ಯಾಲೆಟಿಂಗ್ ಯೂನಿಟ್ ಅದರ ಮೇಲೆ ಅವರ ಚಿಹ್ನೆಗಳೊಂದಿಗೆ ಅಭ್ಯರ್ಥಿಗಳ ಹೆಸರನ್ನು ತೋರಿಸುವ ಮತಪತ್ರವನ್ನು ಭದ್ರವಾಗಿ ಹಿಡಿದಿರುತ್ತದೆ. ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಪ್ರಿಸೈಡಿಂಗ್/ಪೋಲಿಂಗ್ ಅಧಿಕಾರಿಯು, ಮತದಾರರು ಮತದಾನ ಕೋಣೆಯನ್ನು ಪ್ರವೇಶಿಸುವುದಕ್ಕೆ ಮುಂಚೆ ಬ್ಯಾಲೆಟ್ ಬಟನನ್ನು ಒತ್ತುತ್ತಾರೆ. ಕಂಟ್ರೋಲ್ ಯೂನಿಟ್‌ನ ಮೇಲಿರುವ ಬ್ಯಾಲೆಟ್ ಬಟನ್ ಅನ್ನು ಒತ್ತಿದಾಗ ಬ್ಯಾಲೆಟಿಂಗ್ ಯೂನಿಟ್ ಮತವನ್ನು ದಾಖಲಿಸಲು ಸಿದ್ಧವಾಗಿದ್ದು ಅದರಲ್ಲಿ ಬ್ಯಾಲೆಟಿಂಗ್ ಯೂನಿಟ್‌ನ ಮೇಲಿರುವ ರೆಡಿ ಲ್ಯಾಂಪ್ ಸಿದ್ಧವಾಗಿರುವುದನ್ನು ಸೂಚಿಸುತ್ತದೆ. ಈ ಮತದಾರನು ತನ್ನ ಆಯ್ಕೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯ ಎದುರಿಗೆ ಇರುವ ಬ್ಯಾಲೆಟಿಂಗ್ ಯೂನಿಟ್‌ನ ಮೇಲಿರುವ ನೀಲಿ ಕ್ಯಾಂಡಿಡೇಟ್ ಬಟನ್ ಅನ್ನು ಒತ್ತಬೇಕಾಗುತ್ತದೆ.

**ಪ್ರಶ್ನೆ:8 ವಿದ್ಯುಚ್ಛಕ್ತಿ ಇಲ್ಲದಿರುವ ಪ್ರದೇಶಗಳಲ್ಲಿ ಇವಿಎಂಗಳನ್ನು ಹೇಗೆ ಬಳಸುವಂತಿರುತ್ತದೆ?**

ಉತ್ತರ: ಇವಿಎಂಗಳು ಸಾಮಾನ್ಯ ಬ್ಯಾಟರಿಯಲ್ಲಿ ಕೆಲಸ ಮಾಡುತ್ತವೆ ಇದು ವಿದ್ಯುಚ್ಛಕ್ತಿಯ ಮೇಲೆ ಅವಲಂಬಿಸಿರುವುದಿಲ್ಲ.

**ಪ್ರಶ್ನೆ:9 ಇವಿಎಂಗಳಲ್ಲಿ ಚಲಾಯಿಸುವಂತಿರುವ ಗರಿಷ್ಠ ಮತಗಳ ಸಂಖ್ಯೆ ಎಷ್ಟು?**

ಉತ್ತರ: ಇವಿಎಂಗಳಲ್ಲಿ ಗರಿಷ್ಠ 2000 ಮತಗಳನ್ನು ದಾಖಲಿಸಬಹುದು. ಸಾಮಾನ್ಯವಾಗಿ ಮತಗಟ್ಟೆಗಳಲ್ಲಿನ ಒಟ್ಟು ಮತದಾರರ ಸಂಖ್ಯೆಯು 1400ರನ್ನು ಮೀರುವುದಿಲ್ಲ. ಇವಿಎಂಗಳ ಸಾಮರ್ಥ್ಯವು ಸಾಕಷ್ಟು ಹೆಚ್ಚು ಇರುತ್ತದೆ.

**ಪ್ರಶ್ನೆ:10 ಇವಿಎಂಗಳು ಒದಗಿಸಬಹುದಾಗಿರುವ ಅಭ್ಯರ್ಥಿಗಳ ಗರಿಷ್ಠ ಸಂಖ್ಯೆ ಎಷ್ಟು?**

ಉತ್ತರ: ಎಂ2 ಇವಿಎಂಗಳು ಗರಿಷ್ಠ 64 ಅಭ್ಯರ್ಥಿಗಳನ್ನು (ನೋಟಾ ಸೇರಿದಂತೆ) ಒದಗಿಸುತ್ತವೆ ಮತ್ತು ಎಂ3 ಇವಿಎಂಗಳು ಗರಿಷ್ಠ 384 ಅಭ್ಯರ್ಥಿಗಳನ್ನು (ನೋಟಾ ಸೇರಿದಂತೆ) ಒದಗಿಸುತ್ತವೆ. ಬ್ಯಾಲೆಟ್ ಯೂನಿಟ್‌ನಲ್ಲಿ 16 ಅಭ್ಯರ್ಥಿಗಳಿಗೆ ಅವಕಾಶ ಒದಗಿಸುವುದು. ಅಭ್ಯರ್ಥಿಗಳ ಒಟ್ಟು ಸಂಖ್ಯೆಯು 16ನ್ನು ಮೀರಿದರೆ, ಎರಡನೆಯ ಬ್ಯಾಲೆಟಿಂಗ್ ಯುನಿಟ್ ಅನ್ನು ಮೊದಲನೇ ಬ್ಯಾಲೆಟಿಂಗ್ ಯೂನಿಟ್‌ಗೆ ಪರ್ಯಾಯವಾಗಿ ಸಂಪರ್ಕಗೊಳಿಸಬಹುದಾಗಿರುತ್ತದೆ. ಅದೇರೀತಿಯಾಗಿ, ಅಭ್ಯರ್ಥಿಗಳ ಒಟ್ಟು ಸಂಖ್ಯೆ 32ನ್ನು ಮೀರಿದ್ದರೆ, ಮೂರನೆಯ ಬ್ಯಾಲೆಟಿಂಗ್ ಯೂನಿಟ್ ಅನ್ನು ಜೋಡಿಸಬಹುದು ಮತ್ತು ಅಭ್ಯರ್ಥಿಗಳ ಒಟ್ಟು ಸಂಖ್ಯೆ 48ನ್ನು ಮೀರಿದರೆ, ನಾಲ್ಕನೇ ಬ್ಯಾಲೆಟಿಂಗ್ ಯೂನಿಟ್ ಅನ್ನು ಗರಿಷ್ಠ 64 ಅಭ್ಯರ್ಥಿಗಳನ್ನು ಒದಗಿಸಲು (ನೋಟಾ ಸೇರಿದಂತೆ) ಜೋಡಿಸಬಹುದಾಗಿರುತ್ತದೆ. ಆದರೆ, ನಾಲ್ಕು ಬ್ಯಾಲೆಟಿಂಗ್ ಯೂನಿಟ್‌ಗಳಿಗೂ ಕೂಡ ಒಂದು ಕಂಟ್ರೋಲ್ ಯೂನಿಟ್ ಮಾತ್ರ ಅಗತ್ಯವಿರುತ್ತದೆ. ಎಂ3 ಇವಿಎಂ ಸಂದರ್ಭದಲ್ಲಿ, ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಗರಿಷ್ಠ 384 ಅಭ್ಯರ್ಥಿಗಳನ್ನು (ನೋಟಾ ಸೇರಿದಂತೆ) ಅಳವಡಿಸುವುದಕ್ಕೆ ಅನುವಾಗುವಂತೆ ವರ್ಗಾಯಿಸಬಹುದಾಗಿದೆ.

**ಪ್ರಶ್ನೆ:11 ಮತಕ್ಷೇತ್ರದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆ 384ನ್ನು ಮೀರಿದರೆ ಏನಾಗುತ್ತದೆ?**

ಉತ್ತರ: ಯಾವುದೇ ಮತಕ್ಷೇತ್ರದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 384ನ್ನು (ನೋಟಾ ಸೇರಿದಂತೆ) ಮೀರಿದ ಸಂದರ್ಭದಲ್ಲಿ, ಅಂಥ ಮತಕ್ಷೇತ್ರಗಳಲ್ಲಿ ಇವಿಎಂಗಳನ್ನು ಬಳಸುವಂತಿಲ್ಲ. ಅಂಥ ಮತಕ್ಷೇತ್ರಗಳಲ್ಲಿ ಮತಪೆಟ್ಟಿಗೆ ಮತ್ತು ಮತಪತ್ರಗಳ ಮೂಲಕ ಸಾಂಪ್ರದಾಯಿಕ ಮತದಾನ ವಿಧಾನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

**ಪ್ರಶ್ನೆ:12 ಮತದಾರನ್ನು ವಿದ್ಯುನ್ಮಾನ ಮತಯಂತ್ರದಲ್ಲಿ ಆತನ ಮತವು ದಾಖಲಿಸಲಾಗಿದೆಯೇ ಎಂಬುದನ್ನು ಹೇಗೆ ತಿಳಿಯಬೇಕು?**

ಉತ್ತರ: ಮತದಾರನನ್ನು ಮತದಾನ ಕಂಪಾರ್ಟ್‌ಮೆಂಟ್‌ನಲ್ಲಿ ಇಟ್ಟಿರುವ ಬ್ಯಾಲೆಟ್ ಯೂನಿಟ್‌ಗೆ ಹೋಗುವಂತೆ ಹೇಳಲಾಗುತ್ತದೆ. ಮತಯಂತ್ರದ ಮೇಲ್ಭಾಗದಲ್ಲಿರುವ ಗ್ರೀನ್ ಲೈಟ್ ಮತ ಯಂತ್ರವು ಮತದಾನಕ್ಕೆ ಸಿದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ. ಮತದಾರನು

ಬ್ಯಾಲೆಟಿಂಗ್ ಯೂನಿಟ್ ಮೇಲಿರುವ ಆತನ ಅಭ್ಯರ್ಥಿಯ ಹೆಸರನ್ನು ಗುರುತಿಸಬೇಕಾಗುತ್ತದೆ ಹಾಗೂ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆ ಇರುವ ಬಲಭಾಗದ ಮೇಲಿನ ಬ್ಲ್ಯೂ ಬಟನ್ ಅನ್ನು ಒತ್ತಬೇಕು. ಒಮ್ಮೆ ಬ್ಲ್ಯೂ ಬಟನ್ ಅನ್ನು ಒತ್ತಿದಾಗ ಬೀಪ್ ಶಬ್ದ ಬರುತ್ತದೆ ಮತ್ತು ಅಭ್ಯರ್ಥಿಯ ಚಿಹ್ನೆಯ ಮುಂದಿನ ಇಂಡಿಕೇಟರ್‌ನ ಬಣ್ಣವು ಕೆಂಪು ಬಣ್ಣಕ್ಕೆ ತಿರುಗುತ್ತದೆ, ಅಂದರೆ ಸಂಬಂಧಪಟ್ಟ ಅಭ್ಯರ್ಥಿಗೆ ಮತದಾರನು ಮತವನ್ನು ಹಾಕಿದ್ದಾನೆ ಎಂದರ್ಥ. ಜೊತೆಗೆ ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನುಳ್ಳ ಬ್ಯಾಲಟ್ ಸ್ಲಿಪ್ ಅನ್ನು ವಿವಿಪ್ಯಾಟ್ ಪ್ರಿಂಟರ್ ಮುದ್ರಿಸುತ್ತದೆ ಹಾಗೂ ಅದು ಪಾರದರ್ಶಕ ಕಿಟಕಿಯ ಮೂಲಕ ಏಳು ಸೆಕೆಂಡ್‌ಗಳವರೆಗೆ ಕಾಣಿಸುತ್ತದೆ. ಆನಂತರ ಈ ಮುದ್ರಿತ ಸ್ಲಿಪ್ ಸ್ವಯಂಚಾಲಿತವಾಗಿ ಕತ್ತರಿಸಿಕೊಂಡು ವಿವಿಪ್ಯಾಟ್‌ನ ಸೀಲ್ಡ್ ಡ್ರಾಪ್ ಬಾಕ್ಸ್‌ನಲ್ಲಿ ಬೀಳುತ್ತದೆ.

**ಪ್ರಶ್ನೆ:13** **ನಿರ್ದಿಷ್ಟ ಮತಗಟ್ಟೆಯಲ್ಲಿ ವಿದ್ಯುನ್ಮಾನ ಮತಯಂತ್ರವು ಕೆಟ್ಟು ನಿಂತರೆ ಏನಾಗುತ್ತದೆ?**

ಉತ್ತರ: ಮತದಾನದ ದಿನದಂದು ಕೆಲವು ಮತಗಟ್ಟೆಗಳನ್ನು ನೋಡಿಕೊಳ್ಳಲು ಒಬ್ಬ ಅಧಿಕಾರಿಯನ್ನು ಹಾಕಲಾಗುವುದು. ಆತನು ಹೆಚ್ಚುವರಿ ವಿದ್ಯುನ್ಮಾನ ಮತಯಂತ್ರವನ್ನು ಒಯ್ಯುತ್ತಾನೆ ಹಾಗೂ ಕೆಟ್ಟು ಹೋದ ವಿದ್ಯುನ್ಮಾನ ಮತಯಂತ್ರದ ಬದಲಾಗಿ ಹೊಸದನ್ನು ಬದಲಿಯಾಗಿ ಇಡುವಂತಿರುತ್ತದೆ. ವಿದ್ಯುನ್ಮಾನ ಮತಯಂತ್ರವು ಕೆಟ್ಟುನಿಂತು ಹೋಗುವ ಹಂತದವರೆಗೆ ದಾಖಲಾದ ಮತಗಳು ಕಂಟ್ರೋಲ್ ಯೂನಿಟ್‌ನ ಮೆಮರಿಯಲ್ಲಿ ಸುರಕ್ಷಿತವಾಗಿರುತ್ತದೆ ಹಾಗೂ ಇದು ಹಿಂದಿನ ವಿದ್ಯುನ್ಮಾನ ಮತಯಂತ್ರವು ಕೆಟ್ಟು ಹೋಗಿ ನಿಂತ ತರುವಾಯ ಹೊಸ ವಿದ್ಯುನ್ಮಾನ ಮತಯಂತ್ರದಲ್ಲಿ, ಮತದಾನವನ್ನು ಮುಂದುವರಿಸಲು ಸಮರ್ಥವಾಗಿರುತ್ತದೆ. ಮತದಾನವನ್ನು ಮೊದಲಿನಿಂದ ಪ್ರಾರಂಭಿಸುವ ಅಗತ್ಯವಿಲ್ಲ.

**ಪ್ರಶ್ನೆ:14** **ನಮ್ಮ ದೇಶದಲ್ಲಿ, ಹೆಚ್ಚು ಪ್ರಮಾಣದ ಜನರು ಅನಕ್ಷರಸ್ಥರಾಗಿದ್ದು ಇದರಿಂದಾಗಿ ಅನಕ್ಷರಸ್ಥ ಮತದಾರರಿಗೆ ಸಮಸ್ಯೆ ಉಂಟಾಗುವುದಿಲ್ಲವೇ?**

ಉತ್ತರ: ವಾಸ್ತವವಾಗಿ ವಿದ್ಯುನ್ಮಾನ ಮತಯಂತ್ರಗಳ ಮೂಲಕ ಮತದಾನ ಮಾಡುವುದು ಸಾಂಪ್ರಾಯಿಕ ವಿಧಾನಕ್ಕೆ ಹೋಲಿಸಿದರೆ ಸರಳವಾಗಿದ್ದು, ಅಲ್ಲಿ ಒಬ್ಬ ಮತದಾರನು ತನ್ನ ಆಯ್ಕೆಯ ಅಭ್ಯರ್ಥಿಯ ಚಿಹ್ನೆಯ ಮೇಲೆ ಅಥವಾ ಅದರ ಹತ್ತಿರ ಮತದಾನದ ಗುರುತನ್ನು ಹಾಕಿ ಅದನ್ನು ಮೊದಲು ಲಂಬವಾಗಿ ಮತ್ತು ನಂತರ ಅಡ್ಡಲಾಗಿ ಮಡಚಿ ಅದರ ನಂತರ ಅದನ್ನು ಮತ ಪೆಟ್ಟಿಗೆಯಲ್ಲಿ ಹಾಕಬೇಕಾಗುತ್ತದೆ. ಇವಿಎಂಗಳಲ್ಲಿ

ಮತದಾರನು ತನ್ನ ಆಯ್ಕೆಯ ಅಭ್ಯರ್ಥಿಯ ಹೆಸರು, ಭಾವಚಿತ್ರ ಮತ್ತು ಚಿಹ್ನೆಯ ಎದುರಿಗಿರುವ ನೀಲಿ ಬಟನ್ ಅನ್ನು ಸುಲಭವಾಗಿ ಒತ್ತಬೇಕಾಗಿದ್ದು ಮತವು ದಾಖಲಾಗುತ್ತದೆ. ಗ್ರಾಮೀಣ ಮತ್ತು ಅನಕ್ಷರಸ್ಥ ಜನರಿಗೆ ಅವರ ಮತಗಳನ್ನು ಚಲಾಯಿಸುವಲ್ಲಿ ಯಾವುದೇ ತೊಂದರೆ ಇರುವುದಿಲ್ಲ ಮತ್ತು ವಾಸ್ತವವಾಗಿ ಅವರು ಇವಿಎಂಗಳ ಬಳಕೆಯನ್ನು ಸ್ವಾಗತಿಸಿದ್ದಾರೆ.

ಪ್ರಶ್ನೆ:15 **ಮತದಾರರಲ್ಲಿ ಮತಯಂತ್ರದ ಬಗ್ಗೆ ಅರಿವು ಮೂಡಿಸಲು ಭಾರತ ಚುನಾವಣಾ ಆಯೋಗವು ಯಾವ ಕ್ರಮಗಳನ್ನು ತೆಗೆದುಕೊಂಡಿದೆ?**

ಉತ್ತರ: ಚುನಾವಣಾ ಆಯೋಗವು ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮುಖಾಂತರ ಜಾಹೀರಾತುಗಳು, ಓದುವ ವಿಷಯಕಗಳ ಮೂಲಕ ಜಾಗೃತಿ ಪ್ರಚಾರವನ್ನು ಮಾಡುತ್ತದೆ. ರಾಜಕೀಯ ಪಕ್ಷಗಳ ಕಾರ್ಯಕರ್ತರ ಮತ್ತು ಮತದಾರರ ಅನುಕೂಲಕ್ಕಾಗಿ ವಿವಿಧ ಸ್ಥಳಗಳಲ್ಲಿ ಚುನಾವಣಾ ಅಧಿಕಾರಿಗಳು ಇವಿಎಂಗಳು ಕುರಿತಂತೆ ವಾಸ್ತವಿಕ ಪ್ರಾತ್ಯಕ್ಷಿಕೆಯನ್ನು ನಡೆಸುತ್ತಾರೆ. ಆಯೋಗವು ಮತದಾರರಿಗಾಗಿ ಜಾಗೃತಿ ಮೂಡಿಸುವ ಪ್ರಚಾರ ಕಾರ್ಯವನ್ನು ಪ್ರಾರಂಭಿಸುವಂತೆ ಹಲವಾರು ಸರ್ಕಾರೇತರ ಸಂಘ ಸಂಸ್ಥೆಗಳು ಮುಂಚಿತವಾಗಿಯೇ ಗಮನ ಸೆಳೆಯುತ್ತವೆ.

ಪ್ರಶ್ನೆ:16 **ಮತದಾರನು ವಿದ್ಯುನ್ಮಾನ ಮತಯಂತ್ರದಲ್ಲಿ ಮತವನ್ನು ಹೇಗೆ ಚಲಾಯಿಸಬೇಕು ಎಂಬುದರ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿಯಿಂದ ಸಹಾಯವನ್ನು ಕೇಳಬಹುದೇ?**

ಉತ್ತರ: ಹೌದು

ಮತದಾರನು ಪೋಲಿಂಗ್ ಏಜೆಂಟರ ಉಪಸ್ಥಿತಿಯಲ್ಲಿ ಮಾತ್ರ ಅರ್ಥ ಮಾಡಿಕೊಳ್ಳಲು ಸಮರ್ಥನಾಗಿರುತ್ತಾನೆ ಆದರೆ ಮತದಾನ ಕಂಪಾರ್ಟ್‌ಮೆಂಟ್‌ನಲ್ಲಿ ಅಲ್ಲ ಎಂಬಂಥ ರೀತಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಮತದಾರನಿಗೆ ವಿದ್ಯುನ್ಮಾನ ಮತಯಂತ್ರದ (ಇದನ್ನು ಮತಗಟ್ಟೆಯಲ್ಲಿ ಒದಗಿಸಲಾಗಿರುತ್ತದೆ) ಬ್ಯಾಲೆಟ್ ಯೂನಿಟ್‌ನ ಕಾರ್ಡ್‌ಬೋರ್ಡ್ ಮಾಡೆಲ್ ಅನ್ನು (ರಿಪ್ಲಿಕ) ಬಳಸುವ ಮೂಲಕ ಮತದಾನದ ಕಾರ್ಯವಿಧಾನವನ್ನು ವಿವರಿಸಬಹುದು.

ಪ್ರಶ್ನೆ:17 **ಅಭ್ಯರ್ಥಿಯು ತನ್ನ ಸ್ವಂತ ಹೆಸರು ಮತ್ತು ಚಿಹ್ನೆಗಳನ್ನು ಉಪಯೋಗಿಸಿ ಮತ್ತು ಮತದಾರರನ್ನು ತರಬೇತುಗೊಳಿಸಲು ಪ್ರಚಾರ ಸಾಮಗ್ರಿಗಳನ್ನು ಎದ್ದು ಕಾಣುವ ಹಾಗೆ ಹಾಕುವ ಸ್ಥಳಗಳನ್ನು ಸೂಚಿಸಿ ಡಮ್ಮಿ ಮತಪತ್ರಗಳನ್ನು ಮುದ್ರಿಸಬಹುದೇ?**

ಉತ್ತರ: ಹೌದು. ಅಂಥ ಡಮ್ಮಿ ಮತಪತ್ರಗಳನ್ನು ಯಾವುದೇ ಬಣ್ಣದಲ್ಲಿ ಮುದ್ರಿಸಬಹುದು, ಆದರೆ ಗುಲಾಬಿ ಮತ್ತು ಬಿಳಿ ಬಣ್ಣದಲ್ಲಿ ಅಲ್ಲ ಹಾಗೂ ಇತರ ಅಭ್ಯರ್ಥಿಗಳ ಹೆಸರುಗಳು ಮತ್ತು ಚಿಹ್ನೆಗಳನ್ನು ತೋರಿಸುವಂತಿಲ್ಲ.

**ಪ್ರಶ್ನೆ:18 ವಿದ್ಯುನ್ಮಾನ ಮತಯಂತ್ರಗಳನ್ನು ಬಳಸುವ ಮೂಲಕ ಮತಗಟ್ಟೆ ವಶಪಡಿಸಿಕೊಳ್ಳುವುದನ್ನು (ಬೂತ್ ಕ್ಯಾಪ್ಚರಿಂಗ್) ತಡೆಗಟ್ಟಬಹುದೇ?**

ಉತ್ತರ: ಒಂದು ಮಾರ್ಗದಿಂದ, ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಮೂಲಕ ಮತಪೆಟ್ಟಿಗೆಗಳು ಅಥವಾ ಮತಪತ್ರಗಳನ್ನು ತೆಗೆದುಕೊಂಡು ಹೋದರೆ ಅಥವಾ ಹಾನಿಗೊಳಿಸಿದರೆ, ವಿದ್ಯುನ್ಮಾನ ಮತಯಂತ್ರಗಳನ್ನು ಸಹ ಕಿಡಿಗೇಡಿಗಳು ಬಲವಂತವಾಗಿ ತೆಗೆದುಕೊಂಡು ಹೋಗುವುದರಿಂದ ಅಥವಾ ಹಾನಿಮಾಡುವುದರಿಂದ ಈ ಪಿಡುಗನ್ನು ವಿದ್ಯುನ್ಮಾನ ಮತಯಂತ್ರಗಳನ್ನು ಬಳಸುವ ಮೂಲಕ ತಡೆಗಟ್ಟಲು ಸಾಧ್ಯವಿಲ್ಲ. ಆದರೆ, ಕಿಡಿಗೇಡಿಗಳು ಪೋಲಿಂಗ್ ಸಿಬ್ಬಂದಿಯನ್ನು ಬೆದರಿಸುವ ಮೂಲಕ ಮತ್ತು ಚಿಹ್ನೆಯ ಮೇಲೆ ಮತಪತ್ರಗಳನ್ನು ಅಂಟಿಸುವ ಮೂಲಕ ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದನ್ನು ಯಾರೇ ಆಗಲಿ ನೋಡಿದರೆ ಇದನ್ನು ವಿದ್ಯುನ್ಮಾನ ಮತಯಂತ್ರವನ್ನು ಬಳಸುವ ಮೂಲಕ ತಡೆಗಟ್ಟಬಹುದು. ವಿದ್ಯುನ್ಮಾನ ಮತಯಂತ್ರಗಳು ಒಂದು ನಿಮಿಷದಲ್ಲಿ ಐದು ಮಂದಿ ಮತದಾರರ ಮತವನ್ನು ಮಾತ್ರ ದಾಖಲಿಸಿಕೊಳ್ಳುವಂಥ ರೀತಿಯಲ್ಲಿ ಈ ಯಂತ್ರದಲ್ಲಿ ಕಾರ್ಯಕ್ರಮವನ್ನು ಸಿದ್ಧಪಡಿಸಲಾಗಿರುತ್ತದೆ. ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟಿಂಗ್ ಯೂನಿಟ್‌ನ ಮುಖಾಂತರವಾಗಿ ಮತಗಳು ಅಗತ್ಯವಾಗಿ ದಾಖಲಾಗಬೇಕಾಗಿರುವುದರಿಂದ, ಕಿಡಿಗೇಡಿಗಳು ಎಷ್ಟೇ ಸಂಖ್ಯೆಯಲ್ಲಿರಲಿ ಅವರು ಪ್ರತಿ ನಿಮಿಷಕ್ಕೆ 5ರ ಪ್ರಮಾಣದಲ್ಲಿ ಮಾತ್ರ ಮತವನ್ನು ಚಲಾಯಿಸುವಂತಿರುತ್ತದೆ. ಮತಪತ್ರಗಳ ಸಂದರ್ಭದಲ್ಲಿ, ಕಿಡಿಗೇಡಿಗಳು, ಮತಗಟ್ಟೆಗೆ ವಹಿಸಿರುವ ಎಲ್ಲ 1000 ಕ್ರಮವಿಲ್ಲದ ಮತಪತ್ರಗಳನ್ನು ವಿತರಿಸಿ, ಅವುಗಳ ಪೈಕಿ ಕೆಲವಕ್ಕೆ ಮೊಹರು ಹಾಕಿ, ಅವನ್ನು ಕೆಲವೇ ನಿಮಿಷಗಳಲ್ಲಿ ಮತಪೆಟ್ಟಿಗೆಯೊಳಕ್ಕೆ ಹಾಕಿ ನಂತರ ಪೋಲಿಸ್ ಬಲವರ್ಧನೆ ದಳವು ತಲುಪುವುದಕ್ಕೆ ಮುಂಚೆ ಪಲಾಯನ ಮಾಡಬಹುದಾಗಿರುತ್ತದೆ. ವಿದ್ಯುನ್ಮಾನ ಮತಯಂತ್ರಗಳಲ್ಲಿ, ಅರ್ಧಗಂಟೆಯಲ್ಲಿ, ಕಿಡಿಗೇಡಿಗಳು ಗರಿಷ್ಠ 150 ಮತಗಳನ್ನು ಮಾತ್ರ ಚಲಾಯಿಸುವಂತಿದ್ದು, ಈ ಸಮಯದಲ್ಲಿ ಪೋಲಿಸ್ ಬಲವರ್ಧನೆ ದಳವು ತಲುಪಬಹುದಾದ ಸಾಧ್ಯತೆ ಇರುತ್ತದೆ. ಅಲ್ಲದೆ, ಪ್ರಿಸೈಡಿಂಗ್ ಅಧಿಕಾರಿ ಅಥವಾ ಯಾರೇ ಒಬ್ಬ ಪೋಲಿಂಗ್ ಅಧಿಕಾರಿಯು ಯಾವಾಗಲೂ ಮತಗಟ್ಟೆ ಒಳಗಡೆ ಕೆಲವು ಕರೆಯದೆ

ನುಗ್ಗುವ ವ್ಯಕ್ತಿಗಳನ್ನು ನೋಡಿದ ಕೂಡಲೇ 'ಕ್ಲೋಸ್' ಬಟನ್ ಅನ್ನು ಒತ್ತಬಹುದಾಗಿರುತ್ತದೆ. ಒಮ್ಮೆ ಕ್ಲೋಸ್ ಬಟನ್ ಅನ್ನು ಒತ್ತಿದರೆ ಯಾವುದೇ ಮತವನ್ನು ಚಲಾಯಿಸಲು ಸಾಧ್ಯವಾಗುವುದಿಲ್ಲ ಹಾಗೂ ಇದರಿಂದಾಗಿ ಮತಗಟ್ಟೆಯನ್ನು ವಶಪಡಿಸಿಕೊಳ್ಳುವವರ ಪ್ರಯತ್ನವು ನಿಷ್ಫಲಗೊಳ್ಳುತ್ತದೆ.

**ಪ್ರಶ್ನೆ:19** **ಸಂಸದೀಯ ಮತ್ತು ರಾಜ್ಯ ವಿಧಾನಸಭೆಗೆ ಏಕಕಾಲಿಕವಾಗಿ ನಡೆಯುವ ಚುನಾವಣೆಗಳಿಗೆ ಇವಿಎಂಗಳನ್ನು ಬಳಸಲು ಸಾಧ್ಯವೇ?**

ಉತ್ತರ: ಇಲ್ಲ. ಸಂಸದೀಯ ಮತ್ತು ರಾಜ್ಯ ವಿಧಾನಸಭೆಗೆ ಏಕಕಾಲಿಕವಾಗಿ ನಡೆಯುವ ಚುನಾವಣೆಗಳಿಗೆ ಎರಡು ಪ್ರತ್ಯೇಕ ಇವಿಎಂಗಳು ಅಗತ್ಯವಾಗಿರುತ್ತವೆ.

**ಪ್ರಶ್ನೆ:20** **ವಿದ್ಯುನ್ಮಾನ ಮತಯಂತ್ರಗಳನ್ನು ಬಳಸುವಲ್ಲಿ ಇರುವ ಅನುಕೂಲಗಳೇನು?**

ಉತ್ತರ: ಇದರಿಂದ ಅತ್ಯಂತ ಪ್ರಮುಖವಾದ ಅನುಕೂಲವೇನೆಂದರೆ, ಪ್ರತಿಯೊಬ್ಬ ಮತದಾರನಿಗೆ ಒಂದು ಮತಪತ್ರದ ಬದಲಿಗೆ ಪ್ರತಿಯೊಂದು ಮತಗಟ್ಟೆಯಲ್ಲಿ ಬ್ಯಾಲೆಟ್ ಯೂನಿಟ್‌ನ ಮೇಲೆ ಒಂದು ಮತಪತ್ರವನ್ನು ಮಾತ್ರ ಹೊಂದಿಸುವ ಅಗತ್ಯವಿರುವುದರಿಂದ, ದಶಲಕ್ಷಗಟ್ಟಲೆ ಮತಪತ್ರಗಳ ಮುದ್ರಣದ ಅವಶ್ಯಕತೆಯನ್ನು ಇಲ್ಲವಾಗಿಸಬಹುದು. ಇದರ ಪರಿಣಾಮವಾಗಿ, ಮೊದಲನೆಯದಾಗಿ ಕಾಗದ, ಮುದ್ರಣ, ದಾಸ್ತಾನು ಹಾಗೂ ವಿತರಣೆಯ ವೆಚ್ಚದ ಮೂಲಕ ಭಾರಿ ಉಳಿತಾಯವಾಗುತ್ತದೆ. ಎರಡನೆಯದಾಗಿ, ಸಾಂಪ್ರದಾಯಿಕ ವ್ಯವಸ್ಥೆಯಡಿ, ಸರಾಸರಿಯಾಗಿ 30–40 ಗಂಟೆಗಳಿಗೆ ಹೋಲಿಸಿದರೆ ಮತ ಎಣಿಕೆಯನ್ನು ತುಂಬಾ ಶೀಘ್ರವಾಗಿ ನಡೆಸಿ 2 ರಿಂದ 3 ಗಂಟೆಗಳೊಳಗೆ ಫಲಿತಾಂಶವನ್ನು ಘೋಷಿಸುವಂತಿರುತ್ತದೆ. ಮೂರನೆಯದಾಗಿ, ವಿದ್ಯುನ್ಮಾನ ಮತಯಂತ್ರಗಳ ಮೂಲಕ ನಡೆಸುವ ಮತದಾನ ವ್ಯವಸ್ಥೆಯಲ್ಲಿ ಯಾವುದೇ ಅಸಿಂಧುವಾದ ಮತಗಳಿರುವುದಿಲ್ಲ, ಈ ಹಿಂದೆ, ಅನೇಕ ಸಂದರ್ಭಗಳಲ್ಲಿ, ಅಸಂಖ್ಯಾತ ಮತಕ್ಷೇತ್ರಗಳಲ್ಲಿ, ಅಸಿಂಧುವಾದ ಮತಗಳ ಸಂಖ್ಯೆಯು, ಅಭ್ಯರ್ಥಿ ಮತ್ತು ಎರಡನೆಯ ಅಭ್ಯರ್ಥಿ ನಡುವಣ ಗೆಲುವಿನ ಅಂತರಕ್ಕಿಂತಲೂ ಹೆಚ್ಚಾಗಿರುತ್ತಿತ್ತು ಎಂಬುದನ್ನು ನೆನಪು ಮಾಡಿಕೊಂಡರೆ ಇದರ ಮಹತ್ವವು ತುಂಬಾ ಶ್ಲಾಘನೀಯವಾಗಿರುತ್ತದೆ. ಇಷ್ಟರ ಮಟ್ಟಿಗೆ, ಮತದಾರ ಸಮೂದಾಯದ ಆಯ್ಕೆಯು, ಇವಿಎಂಗಳನ್ನು ಬಳಸಿದಾಗ ಹೆಚ್ಚು ಸಮರ್ಪಕವಾಗಿ ಪ್ರಕಟಗೊಳ್ಳುತ್ತದೆ.

**ಪ್ರಶ್ನೆ:21** **ಇವಿಎಂಗಳ ಬಳಕೆಯು ಮತದಾನದ ವೇಗದ ಗತಿಯನ್ನು ನಿಧಾನಗೊಳಿಸುತ್ತದೆಯೇ?**

ಉತ್ತರ: ಇಲ್ಲ

ವಾಸ್ತವಿಕವಾಗಿ, ಮತದಾರನು ಮೊದಲು ನಾಮಪತ್ರವನ್ನು ತೆರೆದು, ಆತನ ಆದ್ಯತೆಯನ್ನು ಗುರುತು ಮಾಡಿ, ಅದನ್ನು ಪುನಃ ಮಡಚಿ ಮತಪಟ್ಟಿಗೆಯನ್ನು ಇಟ್ಟಿರುವ ಸ್ಥಳಕ್ಕೆ ಹೋಗಿ ನಂತರ ಅದನ್ನು ಪೆಟ್ಟಿಗೆಯೊಳಗೆ ಹಾಕಬೇಕಾಗಿರುವ ಅವಶ್ಯಕತೆ ಇಲ್ಲದಿರುವುದರಿಂದ, ಇವಿಎಂ ಅನ್ನು ಬಳಸುವ ಮೂಲಕ ಮತದಾನದ ಕಾರ್ಯವು ವೇಗವಾಗಿ ನಡೆಯುವಂತೆ ಮಾಡಬಹುದು. ಆತನು ಇವಿಎಂ ವ್ಯವಸ್ಥೆ ಮೂಲಕ ತನ್ನ ಆಯ್ಕೆಯ ಅಭ್ಯರ್ಥಿ ಹಾಗೂ ಚಿಹ್ನೆಯ ಹತ್ತಿರವಿರುವ ಬಟನ್ ಅನ್ನು ಸುಲಭವಾಗಿ ಒತ್ತುವುದಷ್ಟೇ ಆತನು ಮಾಡಬೇಕಾಗಿರುವ ಕೆಲಸವಾಗಿದೆ.

**ಪ್ರಶ್ನೆ:22** **ಮತಪೆಟ್ಟಿಗೆಗಳಲ್ಲಿನ ಮತಪತ್ರಗಳನ್ನು ಬೆರೆಸಿದ ನಂತರ ಮತ ಎಣಿಕೆಯನ್ನು ಮಾಡಲಾಗುವುದು. ಇದನ್ನು ಇವಿಎಂಗಳನ್ನು ಬಳಸಿದಾಗ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಸಾಧ್ಯವೇ?**

ಉತ್ತರ: ಮತಗಟ್ಟೆವಾರು ಮತ ಎಣಿಕೆ ಮಾಡುವುದು ಸಾಮಾನ್ಯ ನಿಯಮವಾಗಿದ್ದು ಇದನ್ನು ಪ್ರತಿಯೊಂದು ಮತಗಟ್ಟೆಯಲ್ಲಿ ಇವಿಎಂ ಅನ್ನು ಬಳಸಿದಾಗಲೂ ಮಾಡಬಹುದಾಗಿರುತ್ತದೆ. ಚುನಾವಣಾ ಆಯೋಗವು ವಿಶೇಷವಾಗಿ ಅಧಿಸೂಚಿಸಿರುವಂತಹ ಮತಕ್ಷೇತ್ರಗಳಲ್ಲಿ ಮಾತ್ರ ಎಣಿಕೆ ಮಿಶ್ರಣ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಅಂಥ ಸಂದರ್ಭಗಳಲ್ಲಿ, ಅನೇಕ ಸಂಖ್ಯೆಯ ಮತಗಟ್ಟೆಗಳಲ್ಲಿ ಬಳಸಲಾದ ಇವಿಎಂಗಳನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾದ "ಟೋಟಲೈಸರ್"ಗೆ ಜೋಡಿಸಬಹುದಾಗಿದ್ದು ನಂತರ ಒಂದು ವಿಧಾನಸಭಾ ಮತಕ್ಷೇತ್ರದ ಒಟ್ಟು ಫಲಿತಾಂಶವನ್ನು ತಿಳಿದುಕೊಳ್ಳಲಾಗುವುದು ಹೊರತು ಪ್ರತಿಯೊಂದು ಮತಗಟ್ಟೆಯಲ್ಲಿನ ಫಲಿತಾಂಶವನ್ನಲ್ಲ.

**ಪ್ರಶ್ನೆ:23** **ಎಷ್ಟು ಕಾಲದವರೆಗೆ ಕಂಟ್ರೋಲ್ ಯೂನಿಟ್ ಅದರ ಮೆಮೊರಿಯಲ್ಲಿ ಫಲಿತಾಂಶವನ್ನು ಸಂಗ್ರಹಿಸಿಡುತ್ತದೆ?**

ಉತ್ತರ: ಕಂಟ್ರೋಲ್ ಯೂನಿಟ್ ಫಲಿತಾಂಶವನ್ನು ಅದರ ಮೆಮೊರಿಯಲ್ಲಿ 10 ಮತ್ತು ಅದಕ್ಕಿಂತ ಹೆಚ್ಚು ವರ್ಷಗಳವರೆಗೆ ಸಂಗ್ರಹಿಸಿ ಇಡಬಲ್ಲದು.

**ಪ್ರಶ್ನೆ:24** **ಒಂದು ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿರುವಲ್ಲಿ, ಚುನಾವಣೆಯ ಫಲಿತಾಂಶವು ಅರ್ಜಿಯ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ನ್ಯಾಯಾಲಯಗಳು, ಸಮುಚಿತ ಪ್ರಕರಣಗಳಲ್ಲಿ, ಮತಗಳ ಮರುಎಣಿಕೆಗೆ ಆದೇಶಿಸಬಹುದು. ಇವಿಎಂಗಳನ್ನು ಅಂಥ ದೀರ್ಘಕಾಲದವರೆಗೆ ಸಂಗ್ರಹಿಸಿ ಇಡಬಹುದೇ ಮತ್ತು ನ್ಯಾಯಾಲವು ಅಧಿಕೃತಗೊಳಿಸಿದ**

**ಅಧಿಕಾರಿಗಳ ಉಪಸ್ಥಿತಿಯಲ್ಲಿ ಫಲಿತಾಂಶವನ್ನು ಪಡೆದುಕೊಳ್ಳಬಹುದೇ? ಬ್ಯಾಟರಿ ಲೀಕ್ ಅಥವಾ ಅನ್ಯಥಾವಾಗಿ ಇವಿಎಂಗಳಿಗೆ ಹಾನಿಯಾಗುವುದಿಲ್ಲವೇ?**

ಉತ್ತರ: ಮತದಾನ ಮತ್ತು ಮತ ಎಣಿಕೆಯ ಕಾಲದಲ್ಲಿ ಇವಿಎಂಗಳನ್ನು ಸಕ್ರಿಯಗೊಳಿಸಲು ಮಾತ್ರ ಬ್ಯಾಟರಿಯ ಅಗತ್ಯವಿದೆ. ಮತದಾನವು ಮುಗಿದ ಕೂಡಲೇ ಬ್ಯಾಟರಿಯನ್ನು ಸ್ವಿಚ್ ಆಫ್ ಮಾಡಬಹುದು ಮತ್ತು ಇದನ್ನು ಮತ ಎಣಿಕೆ ಕಾಲದಲ್ಲಿ ಮಾತ್ರ ಸ್ವಿಚ್ ಆನ್ ಮಾಡಬೇಕಾದ ಅಗತ್ಯವಿರುತ್ತದೆ. ಫಲಿತಾಂಶವನ್ನು ಪಡೆದುಕೊಂಡ ಕೂಡಲೇ ಬ್ಯಾಟರಿಯನ್ನು ಸಹ ಹೊರ ತೆಗೆಯಬಹುದು ಮತ್ತು ಪ್ರತ್ಯೇಕವಾಗಿ ಇಡಬಹುದಾಗಿದೆ. ಆದ್ದರಿಂದ ಬ್ಯಾಟರಿಯು ಸೋರಿಕೆಯಾಗುವ ಅಥವಾ ಇವಿಎಂಗೆ ಹಾನಿಯಾಗುವ ಪ್ರಶ್ನೆಯೇ ಇರುವುದಿಲ್ಲ. ಬ್ಯಾಟರಿಯನ್ನು ಹೊರತೆಗೆದಾಗಲೂ ಕೂಡ ಸೂಕ್ಷ್ಮಚಿಪ್ಪಿನಲ್ಲಿರುವ ಮೆಮೊರಿಯು ಕುಂದಿಲ್ಲದೆ ಉಳಿದಿರುತ್ತದೆ. ನ್ಯಾಯಾಲಯವು ಮರು ಮತ ಎಣಿಕೆಗೆ ಆದೇಶಿಸಿದರೆ, ಕಂಟ್ರೋಲ್ ಯೂನಿಟ್ ಅನ್ನು ಬ್ಯಾಟರಿಯನ್ನು ಅಳವಡಿಸುವ ಮೂಲಕ ಪುನಃ ಸಕ್ರಿಯಗೊಳಿಸಬಹುದು ಮತ್ತು ಇದು ಮೆಮೊರಿಯಲ್ಲಿ ಸಂಗ್ರಹಿಸಲಾದ ಫಲಿತಾಂಶವನ್ನು ಪ್ರದರ್ಶಿಸುತ್ತದೆ.

**ಪ್ರಶ್ನೆ:25 ಬಟನ್ ಅನ್ನು ಮತ್ತೆ ಮತ್ತೆ ಒತ್ತುವ ಮೂಲಕ ಒಂದಕ್ಕಿಂತ ಹೆಚ್ಚು ಬಾರಿ ಮತದಾನ ಮಾಡಲು ಸಾಧ್ಯವಿದೆಯೇ?**

ಉತ್ತರ: ಇಲ್ಲ. ಬ್ಯಾಲೆಟ್ ಯೂನಿಟ್ ಮೇಲಿರುವ ನಿರ್ದಿಷ್ಟ ಅಭ್ಯರ್ಥಿಗಳ ಬಟನ್ ಅನ್ನು ಒತ್ತಿದ ಕೂಡಲೇ ಮತವು ನಿರ್ದಿಷ್ಟ ಅಭ್ಯರ್ಥಿ ಪರವಾಗಿ ದಾಖಲಾಗುತ್ತದೆ ಮತ್ತು ಯಂತ್ರವು ಲಾಕ್ ಆಗುತ್ತದೆ. ಯಾರೇ ಒಬ್ಬನು ಮತ್ತೆ ಆ ಬಟನ್ ಅನ್ನು ಅಥವಾ ಯಾವುದೇ ಇತರ ಬಟನ್ ಅನ್ನು ಒತ್ತಿದರೂ ಕೂಡ ಮತ್ತೆ ಮತವು ದಾಖಲಾಗುವುದಿಲ್ಲ. ಈ ರೀತಿ ಇವಿಎಂಗಳು "ಒಬ್ಬ ವ್ಯಕ್ತಿ, ಒಂದು ಮತ", ಎಂಬ ತತ್ವವನ್ನು ಖಚಿತ ಪಡಿಸುತ್ತದೆ.

**ಪ್ರಶ್ನೆ:26 ಕೆಲವು ವೇಳೆ ಶಾರ್ಟ್–ಸರ್ಕ್ಯೂಟ್ ಅಥವಾ ಇತರ ಕಾರಣದಿಂದಾಗಿ ಮತದಾರನು ನೀಲಿ ಬಟನ್ ಅನ್ನು ಒತ್ತಿದಾಗ ಎಲೆಕ್ಟ್ರಿಕ್ ಶಾಖ್ ಹೊಡೆಯುವ ಸಂಭವವಿದೆ ಎಂಬುದು ನಿಜವೇ?**

ಉತ್ತರ: ಇಲ್ಲ. ಇವಿಎಂಗಳು ಬ್ಯಾಟರಿಯಿಂದ ಕೆಲಸ ಮಾಡುತ್ತಿದ್ದು ನೀಲಿ ಬಟನ್ ಅನ್ನು ಒತ್ತುವ ಕಾಲದಲ್ಲಿ ಅಥವಾ ಬ್ಯಾಲೆಟ್ ಯೂನಿಟ್ ಅನ್ನು ನಿರ್ವಹಿಸುವ ಕಾಲದಲ್ಲಿ ಯಾರೇ ಮತದಾರನಿಗೆ ಎಲೆಕ್ಟ್ರಿಕ್ ಶಾಖ್ ಹೊಡೆಯುವ ಅವಕಾಶವೇ ಇಲ್ಲ.

**ಪ್ರಶ್ನೆ:27 ಪ್ರಾರಂಭಿಕವಾಗಿ ಅಂದರೆ 100 ಮತಗಳವರೆಗೆ ನೀಲಿ ಬಟನ್ ಅನ್ನು ಒತ್ತುವ ರೀತಿಯಲ್ಲಿಯೇ ನಿಖರವಾಗಿ ಮತಗಳನ್ನು ದಾಖಲಿಸುವಂಥ ಆದರೆ ಅದರ ತರುವಾಯ ಅಭ್ಯರ್ಥಿ ಅಥವಾ**

**ಯಾರೇ ಇತರ ಅಭ್ಯರ್ಥಿ ಎದುರಿಗಿನ 'ನೀಲಿ ಬಟನ್' ಅನ್ನು ಒತ್ತಿರುವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಒಬ್ಬ ನಿರ್ದಿಷ್ಟ ಅಭ್ಯರ್ಥಿ ಪರವಾಗಿ ಮಾತ್ರ ಮತವನ್ನು ದಾಖಲಿಸುವಂಥ ರೀತಿಯಲ್ಲಿ ಇವಿಎಂಗಳನ್ನು ಯೋಜಿಸಲು ಸಾಧ್ಯವೇ?**

ಉತ್ತರ: ಇವಿಎಂಗಳಲ್ಲಿ ಬಳಸಲಾದ ಸೂಕ್ಷ್ಮಚಿಪ್ ಅನ್ನು ತಯಾರಿಸುವ ಕಾಲದಲ್ಲಿ ರೊಬಟ್‌ಗಳಿಂದ ಶಾಶ್ವಥವಾಗಿ ಮೊಹರು ಮಾಡಲಾಗಿರುತ್ತದೆ. ಇದನ್ನು ತೆರೆಯಲು ಸಾಧ್ಯವಿಲ್ಲ ಮತ್ತು ಚಿಪ್‌ಗೆ ಹಾನಿಯಾಗದಂತೆ ಪ್ರೋಗ್ರಾಮ್ ಅನ್ನು ಬದಲಾಯಿಸಿ ಬರೆಯಲು ಯಾರೊಬ್ಬರಿಂದಲೂ ಸಾಧ್ಯವಿಲ್ಲ. ಆದ್ದರಿಂದ, ಯಾರೇ ನಿರ್ದಿಷ್ಟ ಅಭ್ಯರ್ಥಿ ಅಥವಾ ರಾಜಕೀಯ ಪಕ್ಷವನ್ನು ಆಯ್ಕೆ ಮಾಡುವಂತಹ ನಿರ್ದಿಷ್ಟ ರೀತಿಯಲ್ಲಿ ಇವಿಎಂಗಳನ್ನು ಯೋಜಿಸುವ ಅವಕಾಶವೇ ಇರುವುದಿಲ್ಲ.

**ಪ್ರಶ್ನೆ:28 ಮತಗಟ್ಟೆಗಳಿಗೆ ಇವಿಎಂಗಳನ್ನು ಸಾಗಿಸಲು ಕಷ್ಟವಾಗುವುದಿಲ್ಲವೇ?**

ಉತ್ತರ: ಇಲ್ಲ. ಇವಿಎಂಗಳು ಹಗುರ, ಸಾಗಿಸಲು ಸುಲಭ ಮತ್ತು ಪಾಲಿಪ್ರೊಪಿಲೀನ್ ಕ್ಯಾರಿಯಿಂಗ್ ಕೇಸಗಳೊಂದಿಗೆ ಬಂದಿರುವುದರಿಂದ ಮತಪೆಟ್ಟಿಗೆಗಳಿಗೆ ಹೋಲಿಸಿದರೆ ಇವಿಎಂಗಳನ್ನು ಸಾಗಿಸುವುದು ಹೆಚ್ಚು ಸುಲಭವಾಗಿರುತ್ತದೆ.

**ಪ್ರಶ್ನೆ:29 ದೇಶದ ಅನೇಕ ಪ್ರದೇಶಗಳಲ್ಲಿ, ವಿದ್ಯುತ್ ಸಂಪರ್ಕ ಇಲ್ಲದಿದ್ದು ಹಾಗೂ ಅಂತಹ ಸ್ಥಳಗಳಲ್ಲಿ ವಿದ್ಯುತ್ ಸಂಪರ್ಕ ಇದ್ದರೂ ಕೂಡ ವಿದ್ಯುತ್ ಸರಬರಾಜು ಅನಿಯತವಾಗಿರುತ್ತದೆ. ಈ ಸನ್ನಿವೇಶದಲ್ಲಿ ಹವಾ ನಿಯಂತ್ರಣವಿಲ್ಲದೆಯೇ ಯಂತ್ರಗಳನ್ನು ಸಂಗ್ರಹಿಸಿಡುವಲ್ಲಿ ಅದು ಸಮಸ್ಯೆಯನ್ನು ಉಂಟು ಮಾಡುವುದಿಲ್ಲವೇ?**

ಉತ್ತರ: ಇವಿಎಂಗಳನ್ನು ಸಂಗ್ರಹಿಸಿಟ್ಟಿರುವ ಕೊಠಡಿ/ಹಾಲ್‌ಗೆ ಹವಾ ನಿಯಂತ್ರಣದ ಅಗತ್ಯವಿರುವುದಿಲ್ಲ. ಮತಪೆಟ್ಟಿಗೆಗಳ ಸಂದರ್ಭದಲ್ಲಿದಂತೆಯೇ ಕೊಠಡಿ/ಹಾಲ್ ಅನ್ನು ಧೂಳು, ತೇವಾಂಶ ಮತ್ತು ದಂಶಕಗಳಿಂದ ಮುಕ್ತವಾಗಿರಿಸುವುದು ಮಾತ್ರ ಅಗತ್ಯವಾಗಿರುತ್ತದೆ.

**ಪ್ರಶ್ನೆ:30 ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಯಾವುದೇ ನಿರ್ದಿಷ್ಟ ಕಾಲಾಂಶದಲ್ಲಿ ಚಲಾವಣೆಯಾದ ಮತಗಳ ಒಟ್ಟು ಸಂಖ್ಯೆಯನ್ನು ತಿಳಿದುಕೊಳ್ಳಲು ಸಾಧ್ಯವಿರುತ್ತದೆಯೇ. ಇವಿಎಂಗಳ 'ರಿಸಲ್ಟ್'ಭಾಗದಲ್ಲಿ ಮೊಹರು ಮಾಡಿದ್ದು ಮತ ಎಣಿಕೆ ಕಾಲದಲ್ಲಿ ಮಾತ್ರ ತೆರೆಯಲಾಗುತ್ತದೆ. ಚಲಾವಣೆ ಒಟ್ಟು ಮತಗಳನ್ನು ಮತದಾನದ ದಿನಾಂಕದಂದು ಹೇಗೆ ತಿಳಿದುಕೊಳ್ಳಬಹುದು?**

ಉತ್ತರ: 'ರಿಸಲ್ಟ್' ಬಟನ್ ಜೊತೆಗೆ ಇವಿಎಂಗಳ ಮೇಲೆ 'ಟೋಟಲ್' ಬಟನ್ ಇರುತ್ತದೆ. ಯಾವುದೇ ಕಾಲದಲ್ಲಿ ಈ ಬಟನ್ ಅನ್ನು ಒತ್ತುವ ಮೂಲಕ ಬಟನ್ ಅನ್ನು ಒತ್ತುವ ಕಾಲದವರೆಗೂ ಚಲಾವಣೆಯಾದ ಒಟ್ಟು ಮತಗಳು ಅಭ್ಯರ್ಥಿವಾರು ವಿಯೋಜನೆಯನ್ನು (ಬ್ರೇಕ್‌ಅಪ್) ಸೂಚಿಸದೆಯೇ ಪ್ರದರ್ಶಿತವಾಗುತ್ತದೆ.

**ಪ್ರಶ್ನೆ:31 ಬ್ಯಾಲೆಟ್ ಯೂನಿಟ್‌ನಲ್ಲಿ 16 ಅಭ್ಯರ್ಥಿಗಳಿಗೆ ಅವಕಾಶವನ್ನು ಹೊಂದಿರುತ್ತದೆ. ಒಂದು ಮತಕ್ಷೇತ್ರದಲ್ಲಿ 10 ಅಭ್ಯರ್ಥಿಗಳು (ನೋಟಾ ಸೇರಿದಂತೆ) ಮಾತ್ರ ಇರುತ್ತಾರೆ. ಮತದಾರರು 11 ರಿಂದ 16ರ ವರೆಗಿನ ಯಾವುದೇ ಬಟನ್ ಅನ್ನು ಒತ್ತಬಹುದು. ಈ ಮತಗಳು ವ್ಯರ್ಥವಾಗುವುದಿಲ್ಲವೇ?**

ಉತ್ತರ: ಇಲ್ಲ. ಅಭ್ಯರ್ಥಿಗಳ ಸಂಖ್ಯೆ 11 ರಿಂದ 16ರ ವರೆಗಿನ ಪ್ಯಾನಲ್‌ಗಳನ್ನು ಅದನ್ನು ಬಳಸುವುದಕ್ಕೆ ಮುಂಚೆ ಮುಸುಕು ಹಾಕಲಾಗುವುದು. ಅಲ್ಲದೆ, 11 ರಿಂದ 16ರವರೆಗಿನ ಅಭ್ಯರ್ಥಿಗಳ ಪರವಾಗಿ ಬಿದ್ದ ಮತಗಳ ದಾಖಲಿಕರಣವು ಸಹ, ಅಭ್ಯರ್ಥಿಗಳ ಸ್ವಿಚ್ ಅನ್ನು 10ರ ಮೇಲೆ ಸ್ಥಾಪಿಸಿರುವುದರಿಂದ, ಎಲಾಕ್ಟ್ರಾನಿಕಲಿ ಬ್ಲಾಂಕ್ಡ್ ಆಫ್ ಆಗಿರುತ್ತದೆ. ಆದ್ದರಿಂದ, ಯಾರೇ ಮತದಾರನು 11 ರಿಂದ 16 ಇರುವ ಅಭ್ಯರ್ಥಿಗಳ ಯಾವುದೇ ಬಟನ್ ಅನ್ನು ಅಥವಾ ಇವಿಎಂಗಳಲ್ಲಿ ದಾಖಲಾದ ಈ ಅಭ್ಯರ್ಥಿಗಳ ಪರ ಮತಗಳನ್ನು ಒತ್ತುವ ಪ್ರಶ್ನೆಯೇ ಇಲ್ಲ.

**ಪ್ರಶ್ನೆ:32 ಇವಿಎಂಗಳನ್ನು ಬಳಸಿದಾಗ ಟೆಂಡರ್ಡ್ ಮತಪತ್ರಗಳ ನೀಡಿಕೆಗೆ ಯಾವುದೇ ಅವಕಾಶವಿದೆಯೇ?**

ಉತ್ತರ: ಹೌದು.

ಇವಿಎಂ ವ್ಯವಸ್ಥೆಯಡಿ ಸಹ ಟೆಂಡರ್ಡ್ ಮತಪತ್ರಗಳ ನೀಡಿಕೆಗೆ ಅವಕಾಶವಿರುತ್ತದೆ. ಆದರೆ, ಅಂಥ ಪರಿಸ್ಥಿತಿಯು ಉದ್ಭವಿಸಿರುವಾಗ, ಸಂಬಂಧಪಟ್ಟ ಮತದಾರನಿಗೆ ಸಾಮಾನ್ಯ ಮತಪತ್ರವನ್ನು ನೀಡಲಾಗುತ್ತದೆ. ಪೂರೈಸಲಾದ ಬಾಣದ ಕ್ರಾಸ್ ಮಾರ್ಕ್ ರಬ್ಬರ್ ಸ್ಟಾಂಪ್‌ನಿಂದ ಮತಪತ್ರದಲ್ಲಿ ಗುರುತು ಮಾಡಿದ ನಂತರ, ಈ ಉದ್ದೇಶಕ್ಕಾಗಿ ವಿಶೇಷವಾಗಿ ಒದಗಿಸಲಾದ ಲಕೋಟೆಯೊಳಗೆ ಇಟ್ಟು ಪ್ರಿಸೈಡಿಂಗ್ ಅಧಿಕಾರಿಯು ಮೊಹರು ಮಾಡಿ ತಮ್ಮಲ್ಲಿ ಇಟ್ಟುಕೊಳ್ಳುತ್ತಾರೆ.

**ಪ್ರಶ್ನೆ:33 ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಮತದಾನವು ಪ್ರಾರಂಭವಾಗುವುದಕ್ಕೆ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯು ಹಾಜರಿರುವ ಪೋಲಿಂಗ್ ಏಜೆಂಟರಿಗೆ ಮತಗಟ್ಟೆಯಲ್ಲಿ ಬಳಸಬೇಕಾದ ಮತಗಟ್ಟಿಗೆಯು ಖಾಲಿಯಿದೆ ಎಂಬುದನ್ನು ತೋರಿಸುತ್ತಾನೆ. ಇವಿಎಂಗಳಲ್ಲಿ ಈಗಾಗಲೇ**

**ದಾಖಲಾದ ಯಾವುದೇ ಗುಪ್ತ ಮತಗಳಿಲ್ಲವೆಂದು ಪೋಲಿಂಗ್ ಏಜೆಂಟರಿಗೆ ಮನದಟ್ಟು ಮಾಡಿಕೊಡುವಂಥ ಯಾವುದೇ ಅವಕಾಶವಿದೆಯೇ?**

ಉತ್ತರ: ಹೌದು.

ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ, ಮೊದಲು, ಪ್ರಿಸೈಡಿಂಗ್ ಅಧಿಕಾರಿಯು ಹಾಜರಿರುವ ಪೋಲಿಂಗ್ ಏಜೆಂಟರಿಗೆ, ರಿಸಲ್ಟ್ ಬಟನ್ ಅನ್ನು ಒತ್ತುವ ಮೂಲಕ ಯಂತ್ರದಲ್ಲಿ ಈಗಾಗಲೇ ಯಾವುವೇ ಗುಪ್ತ ಮತಗಳು ದಾಖಲಾಗಿರುವುದಿಲ್ಲವೆಂದು ಪ್ರಾತ್ಯಕ್ಷಿಕೆ ಮೂಲಕ ತೋರಿಸುತ್ತಾರೆ. ಅದರ ನಂತರ ಅವರು ಪೋಲಿಂಗ್ ಏಜೆಂಟರು ತಮ್ಮ ಮತಗಳನ್ನು ಚಲಾಯಿಸುವಂತೆ ಹಾಗೂ ತೋರಿಸಲಾದ ಫಲಿತಾಂಶವು ಕಟ್ಟುನಿಟ್ಟಾಗಿ ಅವರು ಚಲಾಯಿಸಿದ ಆಯ್ಕೆಗಳನುಸಾರವಾಗಿದೆ ಎಂಬುದಾಗಿ ಮನದಟ್ಟುಮಾಡಲು ಫಲಿತಾಂಶವನ್ನು ಪಡೆದುಕೊಳ್ಳುವಂತೆ ಕೇಳುವ ಮೂಲಕ ಅಣಕು ಮತದಾನ ನಡೆಸುತ್ತಾರೆ. ಅದರ ನಂತರ, ಪ್ರಿಸೈಡಿಂಗ್ ಅಧಿಕಾರಿಯು ವಾಸ್ತವಿಕ ಮತದಾನವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಅಣಕು ಮತದಾನದ ಫಲಿತಾಂಶವನ್ನು ತೆಗೆದುಹಾಕಲು 'ಕ್ಲಿಯರ್' ಬಟನ್‌ನ್ನು ಒತ್ತುವರು. ಪ್ರಿಸೈಡಿಂಗ್ ಅಧಿಕಾರಿಯು, ಅಣಕು ಮತದಾನವನ್ನು ನಡೆಸಲಾಗಿದೆ ಹಾಗೂ ಮೆಮೊರಿಯನ್ನು ತೆಗೆದು ಹಾಕಲಾಗಿದೆ ಮತ್ತು ಇವಿಎಂನ ಮೆಮೊರಿಯನ್ನು ತೆಗೆದು ಹಾಕಿದ ನಂತರ ಚಲಾಯಿಸಲಾದ ಒಟ್ಟು ಮತಗಳು '0' ಎಂದು ತೋರಿಸಲಾಗಿದೆ ಎಂಬುದಾಗಿ ಹೇಳುವ ಮೂಲಕ ಹಾಜರಿರುವ ಪೋಲಿಂಗ್ ಏಜೆಂಟರು ಕ್ರಮವಾಗಿ ಸಹಿ ಮಾಡಿರುವ ಪ್ರಮಾಣ ಪತ್ರವನ್ನು ಒದಗಿಸುತ್ತಾರೆ.

**ಪ್ರಶ್ನೆ:34 ಮತದಾನವು ಮುಕ್ತಾಯವಾಗುವುದಕ್ಕೆ ಮುಂಚೆ ಮತ್ತು ಮತ ಎಣಿಕೆಯು ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಆಸಕ್ತ ಪಕ್ಷಕಾರರು ಅಧಿಕವಾದ ಮತಗಳನ್ನು ಚಲಾಯಿಸುವ ಸಾಧ್ಯತೆಯನ್ನು ಹೇಗೆ ತಳ್ಳಿಹಾಕುವಂತಿರುತ್ತದೆ?**

ಉತ್ತರ: ಕಡೆಯ ಮತದಾರನು ಮತವನ್ನು ಚಲಾಯಿಸಿದ ಕೂಡಲೇ ಕಂಟ್ರೋಲ್ ಯೂನಿಟ್ ಪ್ರಭಾರದಲ್ಲಿರುವ ಪೋಲಿಂಗ್ ಅಧಿಕಾರಿಯು, 'ಕ್ಲೋಸ್' ಬಟನ್ ಅನ್ನು ಒತ್ತುತ್ತಾರೆ. ಅದರ ನಂತರ, ಇವಿಎಂ ಯಾವುದೇ ಮತವನ್ನು ಸ್ವೀಕರಿಸುವುದಿಲ್ಲ. ಅದೂ ಅಲ್ಲದೆ ಮತದಾನವು ಮುಕ್ತಾಯವಾದ ನಂತರ, ಬ್ಯಾಲೆಟ್ ಯೂನಿಟ್ ಅನ್ನು ಕಂಟ್ರೋಲ್ ಯೂನಿಟ್‌ನಿಂದ ಸಂಪರ್ಕವನ್ನು ತಪ್ಪಿಸದ ನಂತರ ಪ್ರತ್ಯೇಕವಾಗಿ ಇಡಲಾಗುವುದು. ಮತದಾನವನ್ನು ಬ್ಯಾಲೆಟಿಂಗ್ ಯೂನಿಟ್‌ನ ಮುಖಾಂತರವಾಗಿ ಚಲಾಯಿಸುವಂತಿರುತ್ತದೆ. ಪುನಃ ಪ್ರಿಸೈಡಿಂಗ್ ಅಧಿಕಾರಿಯು ಮತದಾನದ

ಮುಕ್ತಾಯದಲ್ಲಿ, ಚಲಾಯಿಸಲ್ಪಟ್ಟ ಮತಗಳ ಒಂದು ಲೆಕ್ಕವನ್ನು ಹಾಜರಿರುವ ಪ್ರತಿಯೊಬ್ಬ ಪೋಲಿಂಗ್ ಏಜೆಂಟರಿಗೆ ಹಸ್ತಾಂತರಿಸುತ್ತಾರೆ. ಮತ ಎಣಿಕೆ ಕಾಲದಲ್ಲಿ, ಈ ಲೆಕ್ಕದೊಂದಿಗೆ ಒಟ್ಟು ಮತವನ್ನು ತಾಳೆ ನೋಡಲಾಗುತ್ತದೆ ಮತ್ತು ಯಾವುದೇ ವ್ಯತ್ಯಾಸವಿದ್ದರೆ, ಇದನ್ನು ಕೌಂಟಿಂಗ್ ಏಜೆಂಟರು ತೋರಿಸುತ್ತಾರೆ.

**ಪ್ರಶ್ನೆ:35** **ಇವಿಎಂಗಳನ್ನು ಸಂಬಂಧಪಟ್ಟ ಮತಗಟ್ಟೆಗಳಿಗೆ ಹಂಚಿಕೆ ಮಾಡುವುದಕ್ಕೆ ಮುಂಚೆ ಅವುಗಳ "ಯಾದೃಚ್ಛಿಕೀಕರಣ"(ರ್‍ಯಾಂಡ್‌ಮೈಸೇಷನ್)ದ ಯಾವುದೇ ವ್ಯವಸ್ಥೆ ಇದೆಯೇ?**

ಉತ್ತರ: ಹೌದು.

ಮನ್ನಣೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಯ ಮಟ್ಟದಲ್ಲಿ ಮೊದಲು ಇವಿಎಂಗಳನ್ನು ನೇರವಾಗಿ ಪರೀಕ್ಷಿಸಲಾಗುವುದು ಮತ್ತು ಯಾದೃಚ್ಛಿಕರಿಸಲಾಗುವುದು '(randomize)' ಅದರ ನಂತರ ಪ್ರತಿಯೊಂದು ಮತಕ್ಷೇತ್ರಕ್ಕೆ ಹಂಚಿಕೆ ಮಾಡಲಾದ ಇವಿಎಂಗಳ 'ಯಾದೃಚ್ಛೀಕೃತ' (randomized) ಪಟ್ಟಿಯನ್ನು ಅಂಥ ಪಕ್ಷಗಳ ಪ್ರತಿನಿಧಿಗಳಿಗೆ ನೀಡಲಾಗುತ್ತದೆ ಹಾಗೂ ಪಕ್ಷದ ಪ್ರತಿನಿಧಿಯು ಲಭ್ಯವಿಲ್ಲದಿದ್ದರೆ, ಇನ್ನು ಅಂಥ ಪಟ್ಟಿಯನ್ನು ಅಂಥ ಪಕ್ಷದ ಕಛೇರಿಗೆ ಕಳುಹಿಸಲಾಗುತ್ತದೆ. ನಿರ್ದಿಷ್ಟ ಮತಗಟ್ಟೆಗಳಿಗೆ ಹಂಚಿಕೆ ಮಾಡುವುದಕ್ಕಾಗಿ ವೀಕ್ಷಕ ಹಾಗೂ ಅಭ್ಯರ್ಥಿಗಳ ಪ್ರತಿನಿಧಿಗಳ ಹಾಜರಿಯಲ್ಲಿ ರಿಟರ್ನಿಂಗ್ ಅಧಿಕಾರಿಯು ಇವಿಎಂಗಳ ಎರಡನೆಯ ಯಾದೃಚ್ಛಿಕೀಕರಣ ('randomization') ವನ್ನು ಮಾಡುತ್ತಾರೆ. ಪ್ರತಿಯೊಂದು ಮತಗಟ್ಟೆಗೆ ಹಂಚಿಕೆ ಮಾಡಲಾದ ಯಂತ್ರದ ಸಂಖ್ಯೆಯನ್ನು ಸೂಚಿಸುವ ಮೂಲಕ ಅಂಥ ಇವಿಎಂಗಳ ಪಟ್ಟಿಯನ್ನು ಅಭ್ಯರ್ಥಿಗಳ ಪ್ರತಿನಿಧಿಗಳಿಗೆ ನೀಡಲಾಗುವುದು.

**ಪ್ರಶ್ನೆ:36** **ಇವಿಎಂ ಅನ್ನು ಮತದಾನಕ್ಕೆ ಬಳಸುವುದಕ್ಕೆ ಮುಂಚೆ ಅದಕ್ಕೆ ಮೊಹರು ಮಾಡಲು ಯಾವುದೇ ಕಾರ್ಯ ವಿಧಾನವಿದೆಯೇ?**

ಉತ್ತರ: ಮತದಾನದ ವಿವಿಧ ಪ್ರಕ್ರಿಯೆಗಳನ್ನು ನಿಯಂತ್ರಿಸುವ ಬಟನ್‌ಗಳಿಗೆ ಪ್ರವೇಶವನ್ನು ತಡೆಗಟ್ಟಲು ಒಂದು ಇವಿಎಂನ ಬೇರೆ ಬೇರೆ ಸೆಗ್‌ಮೆಂಟ್‌ಗಳ ಫಿಜಿಕಲ್ ಸೀಲಿಂಗ್ ಅನ್ನು ಮಾಡಲಾಗುತ್ತದೆ. ಇದನ್ನು ಹಲವಾರು ಹಂತಗಳಲ್ಲಿ ಮಾಡಲಾಗುತ್ತದೆ. ಮತಪತ್ರದ ಪಂಕ್ತಿಕರಣವನ್ನು ಕೆಡಿಸುವುದನ್ನು ಹಾಗೂ ನಿರ್ದಿಷ್ಟ ಮತದಾನಕ್ಕೆ ವಾಸ್ತವಿಕವಾಗಿ ಅಗತ್ಯವಾದಂತಹ ಕ್ಯಾಂಡಿಡೇಟ್ ಬಟನ್‌ಗಳಲ್ಲಿ ಬೇಡವಾದ ಬದಲಾವಣೆಗಳನ್ನು ಮಾಡುವುದನ್ನು ತಡೆಗಟ್ಟಲು ಅಭ್ಯರ್ಥಿಗಳು ಅಥವಾ ಅವರ ಏಜೆಂಟರ ಹಾಜರಿಯಲ್ಲಿ

ರಿಟರ್ನಿಂಗ್ ಅಧಿಕಾರಿಯ ಮೇಲ್ವಿಚಾರಣೆಯಡಿ ಬ್ಯಾಲೆಟಿಂಗ್ ಯೂನಿಟ್‌ನ ಬ್ಯಾಲೆಟ್ ಸ್ಕ್ರೀನ್‌ನ ಹಾಗೂ ಕಂಟ್ರೋಲ್ ಯೂನಿಟ್‌ನ ಕ್ಯಾಂಡಿಡೇಟ್ ಸೆಟ್ ಸೆಕ್ಷನ್‌ನ ಸೀಲಿಂಗ್ ಮಾಡಲಾಗುವುದು. ಅದೇ ರೀತಿಯಾಗಿ, ನಿರ್ದಿಷ್ಟಪಡಿಸಿದ ದಿನಾಂಕದಂದು ಮತ ಎಣಿಕೆ ಕೇಂದ್ರಗಳಲ್ಲಿ ಮತ ಎಣಿಕೆ ಕಾರ್ಯವನ್ನು ಕೈಗೊಳ್ಳುವುದಕ್ಕೆ ಮುಂಚೆ ನಿರ್ದಿಷ್ಟ ಮತಗಟ್ಟೆಯ ಫಲಿತಾಂಶವನ್ನು ಯಾರೊಬ್ಬನು ನೋಡುವಂತಿಲ್ಲದಿರುವ ಹಾಗೆ ಮಾಡಲು ಅಣಕು ಮತದಾನದ ನಂತರ ಯಾವುದೇ ಮತಗಟ್ಟೆಯಲ್ಲಿನ 'ರಿಸಲ್ಟ್ ಸೆಕ್ಷನ್' ಅನ್ನು ಮೊಹರು ಮಾಡಲಾಗುವುದು. ರಿಟರ್ನಿಂಗ್/ಪ್ರಿಸೈಡಿಂಗ್ ಅಧಿಕಾರಿಯ ಮೊಹರುಗಳೊಂದಿಗೆ ಟ್ಯಾಗ್‌ಗಳು/ಪೇಪರ್ ಸೀಲ್‌ಗಳ ಮೇಲೆ ಅಭ್ಯರ್ಥಿಗಳು ಅಥವಾ ಅವರ ಏಜೆಂಟರ ಸಹಿಗಳನ್ನು ಹಾಕಲು ಅವರನ್ನು ಚುನಾವಣಾ ಅಧಿಕಾರಿಗಳು ಆಮಂತ್ರಿಸುತ್ತಾರೆ.

**ಪ್ರಶ್ನೆ:37 ಮತದಾನದ ನಂತರ, ಇವಿಎಂಗಳನ್ನು ಮತ ಎಣಿಕಿಯವರೆಗೆ ಎಲ್ಲಿ ಇರಿಸಲಾಗುತ್ತದೆ?**

ಉತ್ತರ: ಮತದಾನವಾದ ಇವಿಎಂಗಳನ್ನು ಸಾಮಾನ್ಯವಾಗಿ ಮತಕ್ಷೇತ್ರದಲ್ಲಿನ ಸುರಕ್ಷಿತ ಸಂಗ್ರಹಣ ಕೇಂದ್ರದಲ್ಲಿ ಶೇಖರಿಸಿಡಲಾಗುತ್ತದೆ. ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳು ಎಚ್ಚರಿಕೆಯಿಂದ ನೋಡಿಕೊಳ್ಳುವಂತಹ ಸ್ಥಳದ ಹತ್ತಿರದಲ್ಲಿ ಸಂಗ್ರಹಿಸಿಡಲಾಗುವುದು. ಬಹುಮಟ್ಟಿಗೆ ಇದು ಮತ ಎಣಿಕೆ ಕಾರ್ಯವನ್ನು ನಡೆಸುವಂತಹ ಅದೇ ಸ್ಥಳವೇ ಆಗಿರುತ್ತದೆ.

**ಪ್ರಶ್ನೆ:38 ಮತ ಎಣಿಕೆ ಕಾಲದಲ್ಲಿ ಇವಿಎಂಗಳ ಡಿಸ್‌ಪ್ಲೇ ಫಲಿತಾಂಶವನ್ನು ತೋರಿಸದಿರುವ ಪಕ್ಷದಲ್ಲಿ ಅಂಥ ಸಂದರ್ಭದಲ್ಲಿ ಫಲಿತಾಂಶವನ್ನು ಹೇಗೆ ಪರಿಶೀಲಿಸುವಂತಿರುತ್ತದೆ?**

ಉತ್ತರ: ಇವಿಎಂಗಳ ತಯಾರಕರು "ಆಗ್ ಸ್ಲಿಲ್ಯರಿ ಡಿಸ್‌ಪ್ಲೇ ಯೂನಿಟ್" ಅನ್ನು ("ಸಹಾಯಕ ಪ್ರದರ್ಶನ ಘಟಕ") ಅಭಿವೃದ್ಧಿಪಡಿಸಿರುತ್ತಾರೆ. ಈ ಎಡಿಯು ಅನ್ನು ಉಪಯೋಗಿಸುವುದರೊಂದಿಗೆ ಕಂಟ್ರೋಲ್ ಯೂನಿಟ್‌ನ ಮೇಲಿರುವ ಒರಿಜಿನಲ್ ಡಿಸ್‌ಪ್ಲೇ ವಿಫಲವಾದಾಗಿನ ಬಹು ಹೆಚ್ಚಿನ ಸಮಯಗಳಲ್ಲಿ ಫಲಿತಾಂಶಗಳನ್ನು ಹುಡುಕಿತರುವಂತಿರುತ್ತದೆ.

**ಪ್ರಶ್ನೆ:39 ಇವಿಎಂಗಳಲ್ಲಿ ಮತಗಳನ್ನು ಹೇಗೆ ಎಣಿಕೆ ಮಾಡಲಾಗುತ್ತದೆ?**

ಉತ್ತರ: ಮತ ಎಣಿಕೆ ಕೇಂದ್ರದಲ್ಲಿ ಇವಿಎಂಗಳನ್ನು ಬಹಳಷ್ಟು ಸಂಖ್ಯೆಯ ಮತ ಎಣಿಕೆ ಮೇಜುಗಳ ಮೇಲೆ ಇಡಲಾಗುವುದಾಗಿದ್ದು ಅವುಗಳ ಸಂಖ್ಯೆಯು ಸಾಮಾನ್ಯವಾಗಿ 14ನ್ನು ಮೀರುವುದಿಲ್ಲ. ಕೌಂಟಿಂಗ್ ಏಜೆಂಟರು ಇವಿಎಂಗಳನ್ನು ಹಾಗೂ ಅದರ ಡಿಸ್‌ಪ್ಲೇ ಅನ್ನು

ಸ್ಪಷ್ಟವಾಗಿ ನೋಡಬಹುದಾಗಿರುವಂಥ ರೀತಿಯಲ್ಲಿ ಅವರಿಗೆ ಆಸನಗಳ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಒಂದು ಇವಿಎಂನ ಕಂಟ್ರೋಲ್ ಯೂನಿಟ್‌ನ ಮೇಲಿರುವ 'ರಿಸಲ್ಟ್' ಬಟನನ್ನು ಒತ್ತಿದಾಗ, ಅದರ ಡಿಸ್‌ಪ್ಲೇ ಸೆಗ್‌ಮೆಂಟ್ ನಿರ್ದಿಷ್ಟ ಮತಗಟ್ಟೆಯಲ್ಲಿ ಚಲಾಯಿಸಲಾದ ಮತಗಳ ಒಟ್ಟು ಸಂಖ್ಯೆಯನ್ನು ಸೂಚಿಸುತ್ತದೆ ಹಾಗೂ ನಂತರ ಪ್ರತಿ ಅಭ್ಯರ್ಥಿಗೆ ಚಲಾವಣೆಯಾದ ಮತಗಳನ್ನು ಕ್ರಮಾದೇಶವಾಗಿ ತೋರಿಸುತ್ತದೆ. ಮತ ಎಣಿಕೆ ಸಿಬ್ಬಂದಿ ಜೊತೆಗೆ ಇವುಗಳನ್ನು ಕೌಂಟಿಂಗ್ ಏಜೆಂಟ್‌ರು ಸಹ ಗಮನಿಸುತ್ತಾರೆ. ಪ್ರತಿ ಸುತ್ತಿನ ಕೊನೆಯಲ್ಲಿ, ಆ ಸುತ್ತಿನ ಫಲಿತಾಂಶವನ್ನು ಮತ್ತು ಪ್ರಗತಿಯಲ್ಲಿರುವ ಮೊತ್ತವನ್ನು ಘೋಷಿಸಲಾಗುತ್ತದೆ. ಫಲಿತಾಂಶವು ಸುತ್ತುವಾರು ಮೊತ್ತಗಳನ್ನು ಸಂಗ್ರಹಿಸುವ ಮೂಲಕ ಒಟ್ಟುಗೂಡಿಸಲಾಗುತ್ತದೆ.

# ಪರಿಶಿಷ್ಟ-1
## (ಅಧ್ಯಾಯ-1, ಪ್ಯಾರಾ 1.18.1)
## ಭಾರತದ ಸಂವಿಧಾನದಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ

**326. ಲೋಕಸಭೆಯ ಮತ್ತು ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳು ವಯಸ್ಕ ಮತಾಧಿಕಾರದ ಆಧಾರದ ಮೇಲೆ ನಡೆಯುವುದು**

ಲೋಕಸಭೆಗೆ ಮತ್ತು ಪ್ರತಿಯೊಂದು ರಾಜ್ಯದ ವಿಧಾನಸಭೆಗೆ ಚುನಾವಣೆಗಳು ವಯಸ್ಕ ಮತಾಧಿಕಾರದ ಆಧಾರದ ಮೇಲೆ ನಡೆಯತಕ್ಕದ್ದು ಎಂದರೆ ಭಾರತದ ನಾಗರಿಕನಾಗಿರುವ ಮತ್ತು ಸಮುಚಿತ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಗದಿಪಡಿಸಬಹುದಾದಂಥ ದಿನಾಂಕದಂದು ಹದಿನೆಂಟು ವರ್ಷ ವಯಸ್ಸಿಗೆ ಕಡಿಮೆ ಇಲ್ಲದವನಾಗಿರುವ ಮತ್ತು ಈ ಸಂವಿಧಾನದ ಅಥವಾ ಸಮುಚಿತ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಮೇರೆಗೆ, ಅನಿವಾಸ, ಅಸ್ವಸ್ಥಚಿತ್ತತೆ, ಅಪರಾಧ ಅಥವಾ ಭ್ರಷ್ಟಾಚಾರ ಅಥವಾ ಕಾನೂನು ಬಾಹಿರ ಆಚರಣೆಯ ಕಾರಣದ ಮೇಲೆ ಅನ್ಯಥಾ ಅನರ್ಹನಾಗಿಲ್ಲದಿರುವ ಪ್ರತಿಯೊಬ್ಬ ವ್ಯಕ್ತಿಯೂ, ಅಂಥ ಯಾವುದೇ ಚುನಾವಣೆಯಲ್ಲಿ ಮತದಾರನಾಗಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ**

14. (ಎ) "ಮತಕ್ಷೇತ್ರ" ಎಂದರೆ, ವಿಧಾನಸಭಾ ಮತಕ್ಷೇತ್ರ ಎಂದರ್ಥ;

(ಬಿ) ಈ ಭಾಗದ ಮೇರೆಗೆ ಪ್ರತಿಯೊಂದು ಮತದಾರರ ಪಟ್ಟಿಯ ಸಿದ್ಧತೆಗೆ ಅಥವಾ ಪರಿಷ್ಕರಣೆಗೆ ಸಂಬಂಧಿಸಿದಂತೆ "ಅರ್ಹತಾ ದಿನಾಂಕ", ಎಂದರೆ, ಯಾವ ವರ್ಷದಲ್ಲಿ ಇದನ್ನು ಸಿದ್ಧಪಡಿಸಲಾಗಿರುವುದೋ ಅಥವಾ ಪರಿಷ್ಕರಿಸಲಾಗಿರುವುದೋ ಆ ವರ್ಷದ (ಜನವರಿ 1ನೇ ದಿನ)

(ಪರಂತು, 1989ನೇ ವರ್ಷದಲ್ಲಿ ಈ ಭಾಗದ ಮೇರೆಗೆ ಪ್ರತಿಯೊಂದು ಮತದಾರರ ಪಟ್ಟಿಯ ಸಿದ್ಧತೆಗೆ ಅಥವಾ ಪರಿಷ್ಕರಣೆಗೆ ಸಂಬಂಧಿಸಿದಂತೆ "ಅರ್ಹತಾ ದಿನಾಂಕವು" ಏಪ್ರಿಲ್, 1989ರ 1ನೇ ದಿನವಾಗಿರತಕ್ಕದ್ದು).

15. ಪ್ರತಿಯೊಂದು ಮತಕ್ಷೇತ್ರಕ್ಕಾಗಿ ಮತದಾರರ ಪಟ್ಟಿ,

ಪ್ರತಿಯೊಂದು ಮತಕ್ಷೇತ್ರಕ್ಕಾಗಿ ಒಂದು ಮತದಾರರ ಪಟ್ಟಿ ಇರತಕ್ಕದ್ದು ಮತ್ತು ಅದನ್ನು ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಹಾಗೂ ನಿಯಂತ್ರಣದಡಿ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸಿದ್ಧಪಡಿಸತಕ್ಕದ್ದು.

**16. ಒಂದು ಮತದಾರರ ಪಟ್ಟಿಯಲ್ಲಿ ನೋಂದಣಿಗಾಗಿ ಅನರ್ಹತೆ**

ಯಾರೇ ವ್ಯಕ್ತಿ, ಆತನು – (1)–ಒಬ್ಬ ವ್ಯಕ್ತಿಯು ಚುನಾವಣಾ ರೋಲ್ನಲ್ಲಿ ನೋಂದಣಿಗಾಗಿ ಅನರ್ಹಗೊಳಿಸಿದ್ದರೆ,

(ಎ) ಭಾರತದ ನಾಗರಿಕನಾಗಿಲ್ಲದಿದ್ದರೆ; ಅಥವಾ

(ಬಿ) ಅಸ್ವಸ್ಥ ಮನಸ್ಸಿವನಾಗಿದ್ದು ಮತ್ತು ಸಕ್ಷಮ ನ್ಯಾಯಾಲಯವು ಹಾಗೆ ಘೋಷಿಸಿದ್ದರೆ; ಅಥವಾ

(ಸಿ) ತತ್ಕಾಲದಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಭ್ರಷ್ಟ ಆಚಾರ ಹಾಗೂ ಇತರ ಅಪರಾಧಗಳ ಸಂಬಂಧದಲ್ಲಿ ಯಾವುದೇ ಕಾನೂನಿನ ಉಪಬಂಧಗಳಡಿ ಮುತದಾನ ಮಾಡುವುದರಿಂದ ಅನರ್ಹಗೊಳಿಸಲಾಗಿದ್ದರೆ

– ಒಂದು ಮತದಾರರ ಪಟ್ಟಿಯಲ್ಲಿ ನೋಂದಣಿಗಾಗಿ ಅನರ್ಹನಾಗಿರತಕ್ಕದ್ದು.

(2) ನೋಂದಣಿ ನಂತರ ಹಾಗೆ ಅನರ್ಹನಾಗಿರುವ ಯಾರೇ ವ್ಯಕ್ತಿಯ ಹೆಸರನ್ನು ಯಾವ ಮತದಾರರ ಪಟ್ಟಿಯಲ್ಲಿ ಇದನ್ನು ಸೇರಿಸಲಾಗಿರುವುದೋ ಆ ಮತದಾರರ ಪಟ್ಟಿಯಿಂದ ತತ್‌ಕ್ಷಣವೇ ಹೊಡೆದು ಹಾಕತಕ್ಕದ್ದು. ಪರಂತು, 1ನೇ ಉಪ–ನಿಯಮದ ಖಂಡ(ಸಿ) ಅಡಿ ಅನರ್ಹಗೊಳಿಸಲಾಗಿರುವ ಕಾರಣದಿಂದ ಮತಕ್ಷೇತ್ರದ ಮತದಾರರ ಪಟ್ಟಿಯಿಂದ ಹೊಡೆದು ಹಾಕಿರುವ ಯಾರೇ ವ್ಯಕ್ತಿಯ ಹೆಸರನ್ನು, ಅಂಥ ಪಟ್ಟಿಯು ಜಾರಿಯಲ್ಲಿರುವ ಅವಧಿಯಲ್ಲಿ, ಅಂಥ ಅನರ್ಹತೆಯನ್ನು ಅಂಥ ತೆಗೆದುಹಾಕುವಿಕೆಯನ್ನು ಅಧಿಕೃತಗೊಳಿಸಿರುವ ಯಾವುದೇ ಕಾನೂನಿನ ಮೇರೆಗೆ ತೆಗೆದು ಹಾಕಿದ್ದರೆ ತತ್‌ಕ್ಷಣವೇ ಆ ಪಟ್ಟಿಯಲ್ಲಿ ಪುನಃ ಸ್ಥಾಪಿಸತಕ್ಕದ್ದು.

**17. ಯಾರೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಮತಕ್ಷೇತ್ರದಲ್ಲಿ ನೋಂದಾಯಿಸತಕ್ಕುದ್ದಲ್ಲ.**
ಯಾರೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಅರ್ಹರಾಗಿರತಕ್ಕುದ್ದಲ್ಲ.

**18. ಯಾರೇ ವ್ಯಕ್ತಿಯು ಯಾವುದೇ ಮತಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ನೋಂದಾಯಿಸತಕ್ಕುದ್ದಲ್ಲ.**
ಯಾರೇ ವ್ಯಕ್ತಿಯು ಯಾವುದೇ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದ್ದಲ್ಲ.

**19. ನೋಂದಣಿಯ ಷರತ್ತುಗಳು**
ಈ ಭಾಗದ ಈ ಹಿಂದಿನ ಉಪಬಂಧಗಳಿಗೊಳಪಟ್ಟು,
(ಎ) ಅರ್ಹತಾ ದಿನಾಂಕದಂದು ಹದಿನೆಂಟು ವರ್ಷಗಳಿಗಿಂತ ಕಡಿಮೆಯಲ್ಲದ ವಯಸ್ಸಿನವನಾಗಿರುವ; ಮತ್ತು
(ಬಿ) ಮತಕ್ಷೇತ್ರದಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿರುವ,
–ಯಾರೇ ವ್ಯಕ್ತಿಯು ಆ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರಿಂದ ತೆಗೆದುಕೊಳ್ಳಲಾದ ಉದ್ಧೃತಭಾಗಗಳು**

11ಎ. ಅಪರಾಧ ನಿರ್ಣಯ ಮತ್ತು ಭ್ರಷ್ಟ ಆಚರಣೆಗಳಿಂದ ಉದ್ಭವಿಸುವ ಅನರ್ಹತೆ:–(1) ಈ ಅಧಿನಿಯಮದ ಪ್ರಾರಂಭದ ತರುವಾಯ ಯಾವನೇ ವ್ಯಕ್ತಿಯು,–

(1) ಭಾರತ ದಂಡ ಸಂಹಿತೆ (1860ರ 45)ಯ 171ಇ ಪ್ರಕರಣ ಅಥವಾ 171ಎಫ್ ಪ್ರಕರಣದ ಮೇರೆಗೆ, ಅಥವಾ ಈ ಅಧಿನಿಯಮದ 125ನೇ ಪ್ರಕರಣದ ಅಥವಾ 135ನೇ ಪ್ರಕರಣದ ಅಥವಾ 136ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ, ಅವನು, ಅಪರಾಧ ನಿರ್ಣಯದ ದಿನಾಂಕದಿಂದ ಅಥವಾ ಆದೇಶವು ಜಾರಿಗೆ ಬರುವ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಲು ಅನರ್ಹಗೊಳ್ಳತಕ್ಕುದು.

(2) ಯಾವುದೇ ಅವಧಿಯವರೆಗೆ 8ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರಪತಿಯ ತೀರ್ಮಾನದ ಮೂಲಕ ಅನರ್ಹಗೊಳಿಸಲಾದ ಯಾವನೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಲು ಅದೇ ಅವಧಿಯವರೆಗೆ ಅನರ್ಹನಾಗಿರತಕ್ಕುದು.

(3) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಳ್ಳುವ ಮತ್ತು ಸದಸ್ಯನಾಗಿ ಇರುವ ಬಗೆಗಿನ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ 8(ಎ) ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗಿನ ರಾಷ್ಟ್ರಪತಿಯ ತೀರ್ಮಾನವು ಸಾಧ್ಯವಾದಷ್ಟು ಮಟ್ಟಿಗೆ, ಚುನಾವಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1975 (1975ರ 40) ರ ನಿಕಟ ಪ್ರಾರಂಭಕ್ಕೆ ಮುಂಚೆ ಈ ಅಧಿನಿಯಮವು ಇದ್ದಂತೆ, ಅದರ 11ಎ ಪ್ರಕರಣದ (1)ನೆಯ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕಾಗಿ ಅವನು ಒಳಗಾಗಿರುವ ಅನರ್ಹತೆಯ ಸಂಬಂಧದಲ್ಲಿ ಅಂಥ ತೀರ್ಮಾನವು ಮತದಾನ ಮಾಡುವುದಕ್ಕಾಗಿನ ಸದರಿ ಅನರ್ಹತೆಗೆ ಸಂಬಂಧಿಸಿದ ತೀರ್ಮಾನವಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

**62. ಮತ ನೀಡುವ ಹಕ್ಕು**

(1) ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತತ್ಕಾಲದಲ್ಲಿ ನಮೂದಾಗಿರದ ಯಾವನೇ ವ್ಯಕ್ತಿಯು ಆ ಮತಕ್ಷೇತ್ರದಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕುದಲ್ಲ ಮತ್ತು ಈ ಅಧಿನಿಯಮದಮೂಲಕ ವ್ಯಕ್ತವಾಗಿ ಉಪಬಂಧಿಸಿರುವ ಹೊರತು, ಹಾಗೆ ನಮೂದಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಹಾಗೆ ಮತ ನೀಡಲು ಹಕ್ಕುಳ್ಳವನಾಗಿರತಕ್ಕುದು.

(2) ಯಾವನೇ ವ್ಯಕ್ತಿ ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 16ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಅನರ್ಹತೆಗೆ ಒಳಪಟ್ಟಿದ್ದರೆ, ಅವನು ಯಾವುದೇ ಮತಕ್ಷೇತ್ರದಲ್ಲಿನ ಚುನಾವಣೆಯಲ್ಲಿ ಮತ ನೀಡತಕ್ಕುದಲ್ಲ.

(3) ಯಾವನೇ ವ್ಯಕ್ತಿಯು ಸಾರ್ವತ್ರಿಕ ಚುನಾವಣೆಯಲ್ಲಿ ಒಂದೇ ವರ್ಗದ ಒಂದಕ್ಕಿಂತ ಹೆಚ್ಚು ಮತಕ್ಷೇತ್ರಗಳಲ್ಲಿ ಮತ ನೀಡತಕ್ಕುದಲ್ಲ ಮತ್ತು ಒಬ್ಬ ವ್ಯಕ್ತಿಯು ಅಂಥ ಒಂದಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಲ್ಲಿ ಮತ ನೀಡಿದರೆ ಅಂಥ ಎಲ್ಲ ಮತಕ್ಷೇತ್ರಗಳಲ್ಲಿನ ಅವನ ಮತಗಳು ಶೂನ್ಯವಾಗತಕ್ಕುದು.

(4) ಯಾವನೇ ವ್ಯಕ್ತಿಯ ಹೆಸರು ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಸಲ ನೋಂದಾಯಿತವಾಗಿರಬಹುದಾದಾಗ್ಯೂ ಅವನು ಯಾವುದೇ ಚುನಾವಣೆಯಲ್ಲಿ ಅದೇ ಮತಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಸಲ ಮತ ನೀಡತಕ್ಕುದಲ್ಲ ಮತ್ತು ಅವನು ಹಾಗೆ ಮತ ನೀಡಿದ್ದೇ ಆದರೆ ಆ ಕ್ಷೇತ್ರದಲ್ಲಿನ ಅವನ ಎಲ್ಲಾ ಮತಗಳು ಶೂನ್ಯವಾಗತಕ್ಕುದು.

(5) ಯಾವನೇ ವ್ಯಕ್ತಿಯು ಕಾರಾವಾಸದ ಅಥವಾ ಗಡಿಪಾರು ಶಿಕ್ಷೆಯ ಮೇರೆಗೆ ಅಥವಾ ಅನ್ಯಥಾ ಕಾರಾಗೃಹದಲ್ಲಿ ಬಂಧಿತನಾಗಿದ್ದರೆ ಅಥವಾ ಪೊಲೀಸರ ಕಾನೂನು ಸಮ್ಮತ ಅಭಿರಕ್ಷೆಯಲ್ಲಿದ್ದರೆ ಅವನು ಯಾವುದೇ ಚುನಾವಣೆಯಲ್ಲಿ ಮತ ನೀಡತಕ್ಕುದಲ್ಲ :

ಪರಂತು, ಈ ಉಪ–ಪ್ರಕರಣದಲ್ಲಿರುವುದು ಯಾವುದೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

ಮತ್ತೂ ಪರಂತು, ಮತದಾರರ ಪಟ್ಟಿಯಲ್ಲಿ ನಮೂದಿಸಲಾಗಿರುವ ಹೆಸರಿನ ವ್ಯಕ್ತಿಯನ್ನು ಈ ಉಪ ಪ್ರಕರಣದ ಮೇರೆಗೆ ಮತ ಹಾಕಲು ನಿಷೇಧವಿರುವ ಕಾರಣದಿಂದ ಮತದಾರನನ್ನು ವಶಪಡಿಸಿಕೊಳ್ಳತಕ್ಕದ್ದಲ್ಲ.

ಒಬ್ಬ ಮತದಾರನಿಗೆ ಪ್ರತಿನಿಧಿಯಾಗಿ ಅವನು ಮತಗಳನ್ನು ಚಲಾಯಿಸುವಷ್ಟರಮಟ್ಟಿಗೆ ಈ ಅಧಿನಿಯಮದಲ್ಲಿ ಒಬ್ಬ ಮತದಾರನಿಗೆ ಪ್ರತಿನಿಧಿಯಾಗಿ ಮತ ಚಲಾಯಿಸಲು ಅಧಿಕೃತಗೊಳಿಸಿರುವಂತಹ ಒಬ್ಬ ವ್ಯಕ್ತಿಗೆ ಉಪ–ಪ್ರಕರಣದ (3) ಹಾಗೂ (4)ರಲ್ಲಿ ಒಳಗೊಂಡಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

## ಪರಿಶಿಷ್ಟ–2

(ಅಧ್ಯಾಯ– **I,** ಪ್ಯಾರಾ 1.21.1)

**ಜನತಾ ಪ್ರಾತಿನಿಧ್ಯ ಅಧಿನಿಯಮ, 1950 ರಿಂದ ಆಯ್ದುಕೊಳ್ಳಲಾದ ಉದ್ಧೃತ ಭಾಗಗಳು**

**22. ಮತದಾರರ ಪಟ್ಟಿಗಳಲ್ಲಿ ನಮೂದುಗಳ ತಿದ್ದುಪಡಿ**

ಮತಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿಯು ಆತನಿಗೆ ಅರ್ಜಿಯನ್ನು ಸಲ್ಲಿಸಿರುವುದರ ಮೇಲೆ ಅಥವಾ ತನ್ನ ಸ್ವಪ್ರೇರಣೆಯಿಂದ, ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿನ ಯಾವುದೇ ನಮೂದು,

(ಎ) ಯಾವುದೇ ವಿವರದಲ್ಲಿ ತಪ್ಪಾಗಿದೆ ಅಥವಾ ದೋಷಪೂರಿತವಾಗಿದೆ

(ಬಿ) ಸಂಬಂಧಪಟ್ಟ ವ್ಯಕ್ತಿಯು ಮತಕ್ಷೇತ್ರದೊಳಗಿನ ತನ್ನ ಸಾಮಾನ್ಯ ನಿವಾಸದ ಸ್ಥಳವನ್ನು ಬದಲಾಯಿಸಿದ್ದಾನೆಂಬ ಆಧಾರದ ಮೇಲೆ ಪಟ್ಟಿಯಲ್ಲಿನ ಇನ್ನೊಂದು ಸ್ಥಳಕ್ಕೆ ಬದಲಾಯಿಸಬೇಕು, ಅಥವಾ

(ಸಿ) ಸಂಬಂಧಪಟ್ಟ ವ್ಯಕ್ತಿಯು ಮರಣ ಹೊಂದಿದ್ದಾನೆ ಅಥವಾ ಮತಕ್ಷೇತ್ರದಲ್ಲಿ ಸಾಮಾನ್ಯ ನಿವಾಸಿಯಾಗಿರುವುದು ನಿಂತು ಹೋಗಿದೆ ಅಥವಾ ಅನ್ಯಥಾವಾಗಿ ಆ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿಲ್ಲ ಎಂಬುದಾಗಿ ಆತನು ಯೋಗ್ಯವೆಂದು ಭಾವಿಸುವಂಥ ವಿಚಾರಣೆ ನಂತರ ಮನದಟ್ಟು ಮಾಡಿಕೊಂಡರೆ, ಮತದಾರರ ನೋಂದಣಿ ಅಧಿಕಾರಿಯು, ಇದರ ಪರವಾಗಿ ಚುನಾವಣಾ ಆಯೋಗವು ಹಾಗೆ ನೀಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳು ಏನಾದರೂ ಇದ್ದರೆ ಅವುಗಳಿಗೊಳಪಟ್ಟು ನಮೂದನ್ನು ತಿದ್ದುಪಡಿ ಮಾಡತಕ್ಕದ್ದು, ಬದಲಾಯಿಸತಕ್ಕದ್ದು ಅಥವಾ ಬಿಟ್ಟುಬಿಡತಕ್ಕದ್ದು.

ಪರಂತು, ಖಂಡ (ಎ) ಅಥವಾ ಖಂಡ (ಬಿ) ಮೇರೆಗೆ ಯಾವುದೇ ಆಧಾರದ ಮೇಲೆ ಯಾವುದೇ ಕ್ರಮವನ್ನು ಅಥವಾ ಸಂಬಂಧಪಟ್ಟ ವ್ಯಕ್ತಿಯು ಮತಕ್ಷೇತ್ರದಲ್ಲಿ ಸಾಮಾನ್ಯ ನಿವಾಸಿಯಾಗಿರುವುದು ನಿಂತು ಹೋಗಿದೆ ಎಂಬ ಅಥವಾ ಅನ್ಯಥಾವಾಗಿ ಆ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರುವುದಿಲ್ಲ ಎಂಬ ಆಧಾರದ ಮೇಲೆ ಖಂಡ (ಸಿ) ಮೇರೆಗೆ ಯಾವುದೇ ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚೆ ಮತದಾರರ ನೋಂದಣಿ ಕಚೇರಿಯು ಸಂಬಂಧಪಟ್ಟ ವ್ಯಕ್ತಿಗೆ, ಆತನ ಸಂಬಂಧದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮದ ಸಂಬಂಧದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ನೀಡತಕ್ಕದ್ದು.

**23. ಮತದಾರರ ಪಟ್ಟಿಯಲ್ಲಿ ಹೆಸರುಗಳ ಸೇರ್ಪಡೆ**

(1) ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಿಲ್ಲದಿರುವ ಯಾರೇ ವ್ಯಕ್ತಿಯು ಆ ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಲು ಚುನಾಯಿತ ನೋಂದಣಿ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು.

(2) ಮತದಾರರ ನೋಂದಣಿ ಅಧಿಕಾರಿಯು, ಅರ್ಜಿದಾರನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿದ್ದಾನೆಂದು ಮನದಟ್ಟು ಮಾಡಿಕೊಂಡರೆ ಆತನ ಹೆಸರನ್ನು ಅದರಲ್ಲಿ ಸೇರಿಸತಕ್ಕದ್ದು; ಪರಂತು, ಅರ್ಜಿದಾರನು, ಯಾವುದೇ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿದ್ದರೆ, ಮತದಾರರ ನೋಂದಣಿ ಅಧಿಕಾರಿಯು ಇತರ ಮತಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿಗೆ ತಿಳಿಸತಕ್ಕದ್ದು

ಮತ್ತು ಆ ಅಧಿಕಾರಿಯು ಆ ಮಾಹಿತಿಯನ್ನು ಪಡೆದುಕೊಂಡ ನಂತರ ಆ ಮತದಾರರ ಪಟ್ಟಿಯಿಂದ ಅರ್ಜಿದಾರನ ಹೆಸರನ್ನು ತೆಗೆದುಹಾಕತಕ್ಕದ್ದು.

(3) ಯಾವುದೇ ನಮೂದಿನ ಯಾವುದೇ ತಿದ್ದುಪಡಿ, ಬದಲಾವಣೆ ಅಥವಾ ತೆಗೆದು ಹಾಕುವುದನ್ನು 22ನೇ ಪ್ರಕರಣದ ಅಡಿಯಲ್ಲಿ ಮಾಡತಕ್ಕುದ್ದಲ್ಲ ಮತ್ತು ಆ ಮತಕ್ಷೇತ್ರದಲ್ಲಿ ಅಥವಾ ಆ ಮತಕ್ಷೇತ್ರವು ಇರುವ ಸಂಸದೀಯ ಮತಕ್ಷೇತ್ರದಲ್ಲಿ ನಡೆಯುವ ಒಂದು ಚುನಾವಣೆಗೆ ನಾಮಪತ್ರವನ್ನು ಸಲ್ಲಿಸುವುದಕ್ಕಾಗಿನ ಕಡೆಯ ದಿನಾಂಕದ ನಂತರ ಹಾಗೂ ಆ ಚುನಾವಣೆಯ ಮುಕ್ತಾಯಕ್ಕೆ ಮುಂಚೆ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿನ ಹೆಸರಿನ ಸೇರ್ಪಡೆಗಾಗಿ ಯಾವುದೇ ನಿರ್ದೇಶನವನ್ನು ನೀಡತಕ್ಕುದ್ದಲ್ಲ.

**ಮತದಾರರ ನೋಂದಣಿ ನಿಯಮಗಳು, 1960ರಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗಗಳು**

26. ಮತದಾರರ ಪಟ್ಟಿಗಳಲ್ಲಿ ನಮೂದುಗಳ ತಿದ್ದುಪಡಿ ಮತ್ತು ಹೆಸರುಗಳ ಸೇರ್ಪಡೆ:–

(1) ಪ್ರಕರಣ 22 ಅಥವಾ ಪ್ರಕರಣ 23ರ ಉಪ–ಪ್ರಕರಣ (1)ರ ಮೇರೆಗೆ ಪ್ರತಿಯೊಂದು ಅರ್ಜಿಯನ್ನು ನಮೂನೆಗಳು 6, 8, 8–ಎ ಮತ್ತು 8–ಬಿ ಇವುಗಳಲ್ಲಿ ಸಮುಚಿತವಾಗಬಹುದಾದಂಥ ಒಂದು ನಮೂನೆಯಲ್ಲಿ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.

ಪರಂತು, ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಯ ನಂತರ ಸೇವಾ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳಿಂದ ಸ್ವೀಕರಿಸಿದ 2, 2–ಎ ಮತ್ತು 3ರಲ್ಲಿನ ಹೇಳಿಕೆಯನ್ನು ಪ್ರಕರಣ 22 ಮತ್ತು 23ರ ಮೇರೆಗೆ ಅರ್ಜಿ ಎಂಬುದಾಗಿ ಭಾವಿಸತಕ್ಕದ್ದು, ಹಾಗೂ ಪ್ರಕರಣ 25ರ ಮೇರೆಗೆ ಅಂಥ ಅರ್ಜಿಗಳಿಗೆ ಯಾವುದೇ ಶುಲ್ಕವನ್ನು ಗೊತ್ತುಪಡಿಸಲಾಗಿರುವುದಿಲ್ಲ ಎಂಬುದಾಗಿ ಭಾವಿಸತಕ್ಕದ್ದು.

(1ಎ) ಉಪ–ನಿಯಮ (1)ರಲ್ಲಿ ಉಲ್ಲೇಖಿಸಲಾದಂಥ ಪ್ರತಿಯೊಂದು ಅರ್ಜಿಯನ್ನು, ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ವಿಧಾನದಲ್ಲಿ ಮತದಾರರ ನೋಂದಣಿ ಅಧಿಕಾರಿಗೆ ಸಲ್ಲಿಸತಕ್ಕದ್ದು.

(3) ಮತದಾರರ ನೋಂದಣಿ ಅಧಿಕಾರಿಯು ಅಂಥ ಅರ್ಜಿಯನ್ನು ಸ್ವೀಕರಿಸಿದ ನಂತರ, ಕೂಡಲೇ ಅದರ ಒಂದು ಪ್ರತಿಯನ್ನು, ಅಂಥ ಅಂಟಿಸುವ ದಿನಾಂಕದಿಂದ ಏಳು ದಿನಗಳೊಳಗೆ ಅಂಥ ಅರ್ಜಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಿರುವ ನೋಟೀಸಿನೊಂದಿಗೆ ಆತನ ಕಚೇರಿಯಲ್ಲಿನ ಕೆಲವು ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ನಿರ್ದೇಶಿಸತಕ್ಕದ್ದು.

(4) ಮತದಾರರ ನೋಂದಣಿ ಅಧಿಕಾರಿಯು ಉಪ–ನಿಯಮ 3ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ನಂತರ ಕೂಡಲೇ ಅರ್ಜಿಯನ್ನು ಹಾಗೂ ಆತನಿಂದ ಆಕ್ಷೇಪಣೆಗಳನ್ನು ಏನಾದರೂ ಸ್ವೀಕರಿಸಿದ್ದರೆ ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು ಹಾಗೂ ಮನದಟ್ಟಾದರೆ, ಅಗತ್ಯವಾಗಬಹುದಾದಂತೆ, ಪಟ್ಟಿಯಲ್ಲಿ ಸೇರ್ಪಡೆ, ಬಿಟ್ಟುಬಿಡುವುದು, ತಿದ್ದುಪಡಿ ಅಥವಾ ಬದಲಾಯಿಸುವುದಕ್ಕೆ ನಿರ್ದೇಶಿಸತಕ್ಕದ್ದು;

ಪರಂತು, ಮತದಾರರ ನೋಂದಣಿ ಅಧಿಕಾರಿಯು ಒಂದು ಅರ್ಜಿಯನ್ನು ತಿರಸ್ಕರಿಸಿರುವಾಗ, ಆತನು ಅಂಥ ತಿರಸ್ಕರಣೆಗೆ ತನ್ನ ಸಂಕ್ಷಿಪ್ತ ಹೇಳಿಕೆಯನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು".

**27. ಅಧಿನಿಯಮದ ಪ್ರಕರಣದ 24ರ ಮೇರೆಗಿನ ಅಪೀಲುಗಳು**

(1) ಅಧಿನಿಯಮದ ಪ್ರಕರಣ 24ರ ಖಂಡ (ಎ) ಮೇರೆಗಿನ ಪ್ರತಿಯೊಂದು ಅಪೀಲು,-

(ಎ) ಅಪೀಲುದಾರನು ಸಹಿ ಮಾಡಿದ ವಿವರಣ ಪತ್ರದ ರೂಪದಲ್ಲಿರತಕ್ಕದ್ದು;

(ಬಿ) ಅಪೀಲನ್ನು ಸಲ್ಲಿಸಿದುದರ ಮೇಲಿನ ಆದೇಶದ ಒಂದು ಪ್ರತಿಯ ಜೊತೆಯಲ್ಲಿರತಕ್ಕದ್ದು; ಹಾಗೂ

(ಸಿ) ಅಪೀಲನ್ನು ಸಲ್ಲಿಸಿದುದರ ಮೇಲಿನ ಆದೇಶದ ದಿನಾಂಕದಿಂದ ಹದಿನೈದು ದಿವಸಗಳ ಅವಧಿಯೊಳಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಅಪರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಕಲೆಕ್ಟರ್ ಅಥವಾ ಚುನಾವಣಾ ಆಯೋಗವು ಸರ್ಕಾರಿ ರಾಜ್ಯಪತ್ರದಲ್ಲಿ ಗುರುತಿಸಬಹುದಾದಂತಹ ಸಮಾನ ದರ್ಜೆಯ ಒಬ್ಬ ಅಧಿಕಾರಿಗೆ ಸಲ್ಲಿಸತಕ್ಕದ್ದು ಅಥವಾ ಆ ಅವಧಿಯೊಳಗೆ ಅವರಿಗೆ ತಲುಪುವಂತೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು.

ಪರಂತು, ಅಂಥ ಮ್ಯಾಜಿಸ್ಟ್ರೇಟ್, ಕಲೆಕ್ಟರ್ ಅಥವಾ ಅಧಿಕಾರಿಯು ಅಪೀಲುದಾರನು ಗೊತ್ತುಪಡಿಸಲಾದ ಅವಧಿಯೊಳಗೆ ಅದನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವನ್ನು ಹೊಂದಿದ್ದಾನೆಂದು ಮನವರಿಕೆ ಮಾಡಿಕೊಂಡಲ್ಲಿ ಆತನಿಗೆ ಅಪೀಲನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬಕ್ಕೆ ಮಾಫಿಯನ್ನು ಮಾಡಬಹುದು.

(2) ಅಧಿನಿಯಮದ ಪ್ರಕರಣ 24ರ ಖಂಡ (ಬಿ) ಮೇರೆಗಿನ ಪ್ರತಿಯೊಂದು ಅಪೀಲು,-

(ಎ) ಅಪೀಲುದಾರನು ಸಹಿ ಮಾಡಿದ ವಿವರಣ ಪತ್ರದ ರೂಪದಲ್ಲಿರತಕ್ಕದ್ದು;

(ಬಿ) ಅಪೀಲನ್ನು ಸಲ್ಲಿಸಿದುದರ ಮೇಲಿನ ಆದೇಶದ ಒಂದು ಪ್ರತಿಯ ಜೊತೆಯಲ್ಲಿರತಕ್ಕದ್ದು; ಹಾಗೂ

(ಸಿ) ಅಪೀಲನ್ನು ಸಲ್ಲಿಸಿದುದರ ಮೇಲಿನ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಮುಖ್ಯ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು ಅಥವಾ ಆ ಅವಧಿಯೊಳಗೆ ಆತನಿಗೆ ತಲುಪುವಂತೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು, ಪರಂತು ಮುಖ್ಯ ಚುನಾವಣಾಧಿಕಾರಿಯು, ಅಪೀಲುದಾರನು ಗೊತ್ತುಪಡಿಸಲಾದ ಕಾಲದೊಳಗೆ ಅದನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವನ್ನು ಹೊಂದಿದ್ದಾನೆಂದು ಮನದಟ್ಟು ಮಾಡಿಕೊಂಡರೆ ಆತನಿಗೆ ಅಪೀಲನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಮಾಫಿಯನ್ನು ಮಾಡಬಹುದು.

(3) (1)ನೇ ಉಪನಿಯಮ ಮತ್ತು (2)ನೇ ಉಪನಿಯಮದ ಉದ್ದೇಶಕ್ಕಾಗಿ ಒಂದು ಅಪೀಲನ್ನು ಸಂಬಂಧಪಟ್ಟ ಮ್ಯಾಜಿಸ್ಟ್ರೇಟ್, ಕಲೆಕ್ಟರ್, ಅಧಿಕಾರಿ ಅಥವಾ ಸಂದರ್ಭಾನುಸಾರ ಸಂಬಂಧಪಟ್ಟ ಮುಖ್ಯ ಚುನಾವಣಾಧಿಕಾರಿ ಅಥವಾ ಇದರ ಪರವಾಗಿ ಅವರಿಂದ ನೇಮಕಗೊಂಡ ಯಾರೇ ಇತರ ಅಧಿಕಾರಿಗೆ ಅಭ್ಯರ್ಥಿ ಅಥವಾ ಆತನ ಪರವಾಗಿ ಅಪೀಲಿನ ವಿವರಣ ಪತ್ರವನ್ನು ತಲುಪಿಸಿರುವಾಗ, ಅಪೀಲನ್ನು ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು.

## ಪರಿಶಿಷ್ಟ–3

(ಅಧ್ಯಾಯ – II, ಪ್ಯಾರಾ 2.3.2)

**ಭಾರತದ ಸಂವಿಧಾನದಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ**

**84. ಸಂಸತ್ತಿನ ಸದಸ್ಯತ್ವಕ್ಕೆ ಅರ್ಹತೆ:–** ಯಾರೇ ವ್ಯಕ್ತಿಯು,–

(ಎ) ಭಾರತದ ನಾಗರಿಕನಾಗಿರುವ ಹೊರತು ಮತ್ತು ಚುನಾವಣಾ ಆಯೋಗವು ಆ ಬಗ್ಗೆ ಅಧಿಕೃತಗೊಳಿಸಿರುವ ಯಾರೇ ವ್ಯಕ್ತಿಯ ಮುಂದೆ ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಯಲ್ಲಿ ಪ್ರಮಾಣ ವಚನ ಅಥವಾ ದೃಢೀಕರಣವನ್ನು ಮಾಡಿರುವ ಹೊರತು ಹಾಗೂ ಅದಕ್ಕೆ ರುಜು ಹಾಕಿರುವ ಹೊರತು;

(ಬಿ) ರಾಜ್ಯ ಸಭೆಯ ಸ್ಥಾನದ ಸಂದರ್ಭದಲ್ಲಿ ಮೂವತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿನವನಾಗಿರುವ ಹೊರತು ಮತ್ತು ಲೋಕಸಭೆಯ ಸ್ಥಾನದ ಸಂದರ್ಭದಲ್ಲಿ ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿವನಾಗಿರುವ ಹೊರತು; ಮತ್ತು

(ಸಿ) ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಇತರ ಅರ್ಹತೆಗಳನ್ನು ಹೊಂದಿರುವ ಹೊರತು

– ಸಂಸತ್ತಿನ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಆಯ್ಕೆ ಹೊಂದಲು ಅವನು ಅರ್ಹನಾಗಿರತಕ್ಕದ್ದಲ್ಲ.

**173. ರಾಜ್ಯ ವಿಧಾನ ಮಂಡಲದ ಸದಸ್ಯತ್ವಕ್ಕೆ ಅರ್ಹತೆ:–**

ಯಾರೇ ವ್ಯಕ್ತಿಯು:–

(ಎ) ಭಾರತದ ನಾಗರಿಕನಾಗಿರುವ ಹೊರತು ಮತ್ತು ಚುನಾವಣಾ ಆಯೋಗವು ಆ ಬಗ್ಗೆ ಅಧಿಕೃತಗೊಳಿಸಿರುವ ಯಾರೇ ವ್ಯಕ್ತಿಯ ಮುಂದೆ ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಯಲ್ಲಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಅದಕ್ಕೆ ರುಜು ಮಾಡಿರುವ ಹೊರತು;

(ಬಿ) ವಿಧಾನ ಸಭೆಯ ಸ್ಥಾನದ ಸಂದರ್ಭದಲ್ಲಿ ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿವನಾಗಿರುವ ಹೊರತು ಮತ್ತು ವಿಧಾನ ಪರಿಷತ್ತಿನ ಸ್ಥಾನದ ಸಂದರ್ಭದಲ್ಲಿ ಮೂವತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿವನಾಗಿರುವ ಹೊರತು, ಮತ್ತು

(ಸಿ) ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಇತರ ಅರ್ಹತೆಗಳನ್ನು ಹೊಂದಿದ್ದ ಹೊರತು ರಾಜ್ಯ ವಿಧಾನ ಮಂಡಲದಲ್ಲಿನ ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಆಯ್ಕೆಯಾಗಲು ಅರ್ಹನಾಗಿರತಕ್ಕದ್ದಲ್ಲ.

## ಪರಿಶಿಷ್ಟ–4
(ಅಧ್ಯಾಯ–2, ಪ್ಯಾರಾ 2.5.1)

## ಪ್ರಮಾಣ ವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ
[ಭಾರತದ ಸಂವಿಧಾನ ಅನುಚ್ಛೇದ 84(ಎ)]
(ಸಂಸತ್ತಿನ ಚುನಾವಣೆಗಾಗಿ ನಿಲ್ಲುವ ಅಭ್ಯರ್ಥಿಯು ಮಾಡಬೇಕಾದುದು)

------------- ಎಂಬ ಹೆಸರಿನ ನಾನು ರಾಜ್ಯ ಸಭೆಯಲ್ಲಿನ (*ಲೋಕಸಭೆಯಲ್ಲಿನ) ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಒಬ್ಬ ಅಭ್ಯರ್ಥಿ ಎಂದು ನಾಮ ನಿರ್ದೇಶನ ಹೊಂದಿದವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನಕ್ಕೆ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೆನೆಂದೂ ದೇವರ ಹೆಸರಲ್ಲಿ ಪ್ರಮಾಣ ಮಾಡುತ್ತೇನೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ.

ಅಭ್ಯರ್ಥಿಯ ಸಹಿ ಮತ್ತು ಹೆಸರು
ದಪ್ಪ ಅಕ್ಷರಗಳಲ್ಲಿ

ಶ್ರೀ/ಶ್ರೀಮತಿ ಇವರು------------- ದಿನಾಂಕದಂದು-------------(ಸ್ಥಳ) ------------ ಇಲ್ಲಿ ------------- (ಗಂಟೆಯಲ್ಲಿ) 200 ಇಸವಿಯ -------------ದಿನದಂದು ನನ್ನ ಮುಂದೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿದ್ದಾರೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡಿರುತ್ತಾರೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು ಪದನಾಮ
ಮತ್ತು ಮೊಹರು

---

**(ಪ್ರಮಾಣವಚನ ಮಾಡಿರುವ ಬಗ್ಗೆ ಪ್ರಮಾಣಪತ್ರ)**
**(ಅಧಿಕೃತ ವ್ಯಕ್ತಿಯು ಅಭ್ಯರ್ಥಿಗೆ ಕೊಡಬೇಕು)**

ಭಾರತದ ಸಂವಿಧಾನದಲ್ಲಿ ಅಗತ್ಯಪಡಿಸಿರುವಂತೆ ರಾಜ್ಯಸಭೆಗೆ (*ಅಥವಾ ಲೋಕಸಭೆಗೆ) ನಡೆಯುವ ಚುನಾವಣೆಗಾಗಿ ಅಭ್ಯರ್ಥಿಯಾಗಿರುವ ------------- (ಹೆಸರಿನ) ಇವರು ನನ್ನ ಕಛೇರಿಯಲ್ಲಿ ------------- (ಗಂಟೆ) ------------- (ದಿನಾಂಕದಂದು) ನನ್ನ ಮುಂದೆ ಪ್ರಮಾಣ ವಚನ/ಪ್ರತಿಜ್ಞಾ ವಚನವನ್ನು ಮಾಡಿರುತ್ತಾರೆಂದು ಮತ್ತು ಸಹಿ ಮಾಡಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು
ಪದನಾಮ ಮತ್ತು ಮೊಹರು

ದಿನಾಂಕ --------

---

* ಅನ್ವಯವಾಗದಿರುವುದನ್ನು ಹೊಡೆದುಹಾಕಿ

**ವಿಶೇಷ ಸೂಚನೆ:** ಈ ನಮೂನೆಯನ್ನು ಇಂಗ್ಲೀಷಿನಲ್ಲಿ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶದ ಅಧಿಕೃತ ಭಾಷೆಗಳಲ್ಲಿ ಎರಡರಲ್ಲೂ ಅಭ್ಯರ್ಥಿಗಳಿಗೆ ಒದಗಿಸತಕ್ಕದ್ದು.

**ಪ್ರಮಾಣವಚನದ ಅಥವಾ ಪ್ರತಿಜ್ಞಾವಚನದ ನಮೂನೆ**

[ಭಾರತದ ಸಂವಿಧಾನ ಅನುಚ್ಛೇದ 173(ಎ)]

(ರಾಜ್ಯ ವಿಧಾನಮಂಡಲದ ಚುನಾವಣೆಗಾಗಿ ನಿಲ್ಲುವ ಅಭ್ಯರ್ಥಿಯು ಮಾಡಬೇಕಾದುದು)

-------- ಎಂಬ ಹೆಸರಿನ ನಾನು ವಿಧಾನಸಭೆಯಲ್ಲಿನ (*ಅಥವಾ ವಿಧಾನಪರಿಷತ್ತಿನಲ್ಲಿನ) ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಒಬ್ಬ ಅಭ್ಯರ್ಥಿ ಎಂದು ನಾಮನಿರ್ದೇಶನ ಹೊಂದಿದವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನಕ್ಕೆ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ.

ಅಭ್ಯರ್ಥಿಯ ಸಹಿ ಮತ್ತು ಹೆಸರು
ದಪ್ಪ ಅಕ್ಷರಗಳಲ್ಲಿ

ಶ್ರೀ/ಶ್ರೀಮತಿ -------- ಇವರು -------- ದಿನಾಂಕದಂದು -------- (ಸ್ಥಳ) ಇಲ್ಲಿ -------- (ಗಂಟೆ)ಯಲ್ಲಿ 20-------- ನೇ ಇಸವಿಯ -------- ದಿನದಂದು ನನ್ನ ಮುಂದೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿದ್ದಾರೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡಿರುತ್ತಾರೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು
ಪದನಾಮ ಮತ್ತು ಮೊಹರು

---

**(ಪ್ರಮಾಣವಚನ ಮಾಡಿರುವ ಬಗ್ಗೆ ಪ್ರಮಾಣಪತ್ರ)**

(ಅಧಿಕೃತ ವ್ಯಕ್ತಿಯವರಿಂದ ಅಭ್ಯರ್ಥಿಗಳಿಗೆ ಕೊಡಬೇಕು)

ಭಾರತದ ಸಂವಿಧಾನದಲ್ಲಿ ಅಗತ್ಯಪಡಿಸಿರುವಂತೆ ವಿಧಾನಸಭೆಗೆ (*ಅಥವಾ ವಿಧಾನಪರಿಷತ್ತಿಗೆ) ನಡೆಯುವ ಚುನಾವಣೆಗಾಗಿ ಅಭ್ಯರ್ಥಿಯಾಗಿರುವ --------(ಹೆಸರಿನ) ಇವರು ನನ್ನ ಕಛೇರಿಯಲ್ಲಿ -------- (ಗಂಟೆ)ಯಲ್ಲಿ-------- ದಿನಾಂಕದಂದು ನನ್ನ ಮುಂದೆ ಪ್ರಮಾಣವಚನ/ಪ್ರತಿಜ್ಞಾ ವಚನವನ್ನು ಮಾಡಿರುತ್ತಾರೆಂದು ಮತ್ತು ಸಹಿ ಮಾಡಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು
ಪದನಾಮ ಮತ್ತು ಮೊಹರು

ದಿನಾಂಕ -------------

---

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ.

**ವಿ.ಸೂ:** ಈ ನಮೂನೆಯನ್ನು ಇಂಗ್ಲಿಷಿನಲ್ಲಿ ಮತ್ತು ರಾಜ್ಯದ ಅಧಿಕೃತ ಭಾಷೆಯಲ್ಲಿ ಎರಡರಲ್ಲೂ ಅಭ್ಯರ್ಥಿಗಳಿಗೆ ಒದಗಿಸತಕ್ಕದ್ದು.

**ಪ್ರಮಾಣವಚನದ ಅಥವಾ ಪ್ರತಿಜ್ಞಾವಚನದ ನಮೂನೆ**
**ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯ ಕ್ಷೇತ್ರದ ಸರ್ಕಾರದ ಅಧಿನಿಯಮ 1991**
**(1992ರ ಸಂಖ್ಯೆ 1) ರ ಪ್ರಕರಣ 4(ಎ)**

(ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ವಿಧಾನಸಭೆಯ ಚುನಾವಣೆಗಾಗಿ ನಿಲ್ಲುವ ಅಭ್ಯರ್ಥಿಯು ಮಾಡಬೇಕಾದುದು)

"------------ಎಂಬ ಹೆಸರಿನ ನಾನು ವಿಧಾನಸಭೆಯಲ್ಲಿನ ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಒಬ್ಬ ಅಭ್ಯರ್ಥಿ ಎಂದು ನಾಮ ನಿರ್ದೇಶನ ಹೊಂದಿದವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನಕ್ಕೆ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ."

ಅಭ್ಯರ್ಥಿಯ ಸಹಿ ಮತ್ತು ಹೆಸರು
ದಪ್ಪ ಅಕ್ಷರಗಳಲ್ಲಿ

ಶ್ರೀ/ಶ್ರೀಮತಿ ------------ ಇವರು ------------ ದಿನಾಂಕದಂದು ---------- (ಸ್ಥಳ) ಇಲ್ಲಿ ------------ (ಗಂಟೆ)ಯಲ್ಲಿ 20---------- ನೇ ಇಸವಿಯ ---------- ದಿನದಂದು ನನ್ನ ಮುಂದೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿದ್ದಾರೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡಿರುತ್ತಾರೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು
ಪದನಾಮ ಮತ್ತು ಮೊಹರು

---

**(ಪ್ರಮಾಣವಚನ ಮಾಡಿರುವ ಬಗ್ಗೆ ಪ್ರಮಾಣಪತ್ರ)**
(ಅಧಿಕೃತ ವ್ಯಕ್ತಿಯು ಅಭ್ಯರ್ಥಿಗೆ ಕೊಡಬೇಕು)

ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ಸರ್ಕಾರದ ಅಧಿನಿಯಮ, 1991ರ ಮೂಲಕ ಅಗತ್ಯಪಡಿಸಿರುವಂತೆ ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ವಿಧಾನಸಭೆಗೆ ನಡೆಯುವ ಚುನಾವಣೆಗಾಗಿ ಅಭ್ಯರ್ಥಿಯಾಗಿರುವ------------- (ಹೆಸರಿನ) ಇವರು ನನ್ನ ಕಛೇರಿಯಲ್ಲಿ ---- -------- (ಗಂಟೆ)ಯಲ್ಲಿ------------ (ದಿನಾಂಕದಂದು) ನನ್ನ ಮುಂದೆ ಪ್ರಮಾಣವಚನ/ಪ್ರತಿಜ್ಞಾ ವಚನವನ್ನು ಮಾಡಿರುತ್ತಾರೆಂದು ಮತ್ತು ಸಹಿ ಮಾಡಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು
ಪದನಾಮ ಮತ್ತು ಮೊಹರು

**ವಿ.ಸೂ.** ಈ ನಮೂನೆಯನ್ನು ಇಂಗ್ಲೀಷ್‌ನಲ್ಲಿ ಮತ್ತು ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯದ ಅಧಿಕೃತ ಭಾಷೆಯಲ್ಲಿ ಎರಡರಲ್ಲೂ ಅಭ್ಯರ್ಥಿಗಳಿಗೆ ಒದಗಿಸತಕ್ಕದ್ದು.

**ಪ್ರಮಾಣವಚನದ ಅಥವಾ ಪ್ರತಿಜ್ಞಾವಚನದ ನಮೂನೆ**
**ಕೇಂದ್ರಾಡಳಿತ ಪ್ರದೇಶದ ಸರ್ಕಾರದ ಅಧಿನಿಯಮ, 1963 (1963ರ ಸಂಖ್ಯೆ. 20) ಪ್ರಕರಣ 4(ಎ)**
(ಪುದುಚೇರಿ ಕೇಂದ್ರಾಡಳಿತ ಪ್ರದೇಶ ವಿಧಾನಸಭೆಯ ಚುನಾವಣೆಗಾಗಿ ನಿಲ್ಲುವ ಅಭ್ಯರ್ಥಿಯು ಮಾಡಬೇಕಾದುದು)

"------------ ಎಂಬ ಹೆಸರಿನ ನಾನು ಪುದುಚೇರಿ ವಿಧಾನಸಭೆಯಲ್ಲಿನ ಒಂದು ಸ್ಥಾನವನ್ನು ಭರ್ತಿಮಾಡುವುದಕ್ಕಾಗಿ ಒಬ್ಬ ಅಭ್ಯರ್ಥಿ ಎಂದು ನಾಮ ನಿರ್ದೇಶನ ಹೊಂದಿದವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನಕ್ಕೆ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ."

ಅಭ್ಯರ್ಥಿಯ ಸಹಿ ಮತ್ತು ಹೆಸರು
ದಪ್ಪ ಅಕ್ಷರಗಳಲ್ಲಿ

ಶ್ರೀ/ಶ್ರೀಮತಿ ----------- ಇವರು ----------- ದಿನಾಂಕದಂದು --------- (ಸ್ಥಳ) ಇಲ್ಲಿ ----------- (ಗಂಟೆ)ಯಲ್ಲಿ 20 -------- ನೇ ಇಸವಿಯ ---------- ದಿನದಂದು ನನ್ನ ಮುಂದೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿದ್ದಾರೆ/ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡಿರುತ್ತಾರೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು ಪದನಾಮ
ಮತ್ತು ಮೊಹರು

ದಿನಾಂಕ -----------

---

**(ಪ್ರಮಾಣವಚನ ಮಾಡಿರುವ ಬಗ್ಗೆ ಪ್ರಮಾಣಪತ್ರ)**
(ಅಧಿಕೃತ ವ್ಯಕ್ತಿಯು ಅಭ್ಯರ್ಥಿಗೆ ಕೊಡಬೇಕು)

ಕೇಂದ್ರ ರಾಜ್ಯಕ್ಷೇತ್ರದ ಸರ್ಕಾರದ ಅಧಿನಿಯಮ 1963 ರ ಮೂಲಕ ಅಗತ್ಯಪಡಿಸಿರುವಂತೆ ಪಾಂಡಿಚೇರಿ ವಿಧಾನಸಭೆಯ ಚುನಾವಣೆಗೆ ನಿಲ್ಲುವ ಅಭ್ಯರ್ಥಿಯಾಗಿರುವ ----------- (ಹೆಸರಿನ) ಇವರು ನನ್ನ ಕಛೇರಿಯಲ್ಲಿ ----------- (ಗಂಟೆ)ಯಲ್ಲಿ----------- (ದಿನಾಂಕದಂದು) ನನ್ನ ಮುಂದೆ ಪ್ರಮಾಣವಚನ/ಪ್ರತಿಜ್ಞಾ ವಚನವನ್ನು ಮಾಡಿರುತ್ತಾರೆಂದು ಮತ್ತು ಸಹಿ ಮಾಡಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

ಅಧಿಕೃತ ವ್ಯಕ್ತಿಯ ಸಹಿ ಹೆಸರು
ಪದನಾಮ ಮತ್ತು ಮೊಹರು

ದಿನಾಂಕ -----------

**ವಿ.ಸೂ:** ಈ ನಮೂನೆಯನ್ನು ಇಂಗ್ಲೀಷ್‌ನಲ್ಲಿ ಮತ್ತು ಕೇಂದ್ರ ರಾಜ್ಯಕ್ಷೇತ್ರದ ಅಧಿಕೃತ ಭಾಷೆಯಲ್ಲಿ ಎರಡರಲ್ಲೂ ಅಭ್ಯರ್ಥಿಗಳಿಗೆ ಒದಗಿಸತಕ್ಕದ್ದು.

**ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಅಧಿನಿಯಮ, 1963 ರಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ**

**4. ವಿಧಾನ ಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು**

ಒಬ್ಬ ವ್ಯಕ್ತಿಯು, ಆತನು–

(ಎ) ಭಾರತದ ನಾಗರಿಕನಾಗಿದ್ದು ಮತ್ತು ಈ ಉದ್ದೇಶಕ್ಕಾಗಿ ಮೊದಲನೆಯ ಅನುಸೂಚಿಯಲ್ಲಿ ರೂಪಿಸಲಾದ ನಮೂನೆಗನುಸಾರವಾಗಿ ಇದರ ಪರವಾಗಿ ಚುನಾವಣಾ ಆಯೋಗವು ಅಧಿಕೃತಗೊಳಿಸಿದ ಕೆಲವು ವ್ಯಕ್ತಿಗಳ ಮುಂದೆ ಒಂದು ಪ್ರಮಾಣ ವಚನವನ್ನು ಅಥವಾ ದೃಢೀಕರಣವನ್ನು ಮಾಡಿದ್ದು ಹಾಗೂ ಅದಕ್ಕೆ ಸಹಿ ಹಾಕಲಾಗಿರುವ ಹೊರತು

(ಬಿ) ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆಯಲ್ಲದ ವಯಸ್ಸಿನವನಾಗಿರುವ ಹೊರತು, ಮತ್ತು

(ಸಿ) ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಇದರ ಪರವಾಗಿ ಹಾಗೆ ಗೊತ್ತುಪಡಿಸಬಹುದಾದಂಥ ಇತರ ಅರ್ಹತೆಗಳನ್ನು ಹೊಂದಿರುವ ಹೊರತು,–

– ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯಲ್ಲಿನ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗಿರತಕ್ಕುದ್ದಲ್ಲ.

**ವಿಧಾನಸಭೆ ಚುನಾವಣೆಗಾಗಿ ಅಭ್ಯರ್ಥಿಯು ಮಾಡಬೇಕಾದ ಪ್ರಮಾಣವಚನ ಅಥವಾ ದೃಢೀಕರಣದ ನಮೂನೆ**

-------- ವಿಧಾನ ಸಭೆಯಲ್ಲಿನ ಸ್ಥಾನವನ್ನು ತುಂಬಲು ನಾಮನಿರ್ದೇಶಿತನಾಗಿರುವ ಎ.ಬಿ. ನಾನು ಸ್ಥಾಪಿತವಾದ ಕಾನೂನಿನ ಮೂಲಕವಾಗಿ ಭಾರತದ ಸಂವಿಧಾನದಲ್ಲಿ ನಿಜವಾದ ನಂಬಿಕೆ ಮತ್ತು ನಿಷ್ಠೆಯನ್ನು ಹೊಂದಿದ್ದೇನೆಂದು ಮತ್ತು ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುತ್ತೇನೆಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ.

**ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ**

**4. ಲೋಕಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು:–** ಒಬ್ಬ ವ್ಯಕ್ತಿಯು,–

(ಎ) ಯಾವುದೇ ರಾಜ್ಯದಲ್ಲಿ ಅನುಸೂಚಿತ ಜಾತಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ, ಆ ರಾಜ್ಯದ ಅಥವಾ ಯಾವುದೇ ಇತರ ರಾಜ್ಯದ ಯಾವುದೇ ಅನುಸೂಚಿತ ಜಾತಿಯ ಸದಸ್ಯನಾಗಿರುವ ಮತ್ತು ಯಾವುದೇ ಸಂಸದೀಯ ಮತಕ್ಷೇತ್ರದಲ್ಲಿ ಮತದಾರನಾಗಿರುವ ಹೊರತು;

(ಬಿ) ಯಾವುದೇ ರಾಜ್ಯದಲ್ಲಿ (ಅಸ್ಸಾಂನ ಸ್ವಾಯತ್ತ ಜಿಲ್ಲೆಗಳನ್ನು ಹೊರತುಪಡಿಸಿ) ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ ಅವನು ಈ ರಾಜ್ಯದಲ್ಲಾಗಲಿ ಅಥವಾ ಯಾವುದೇ ಇತರ ರಾಜ್ಯದಲ್ಲಾಗಲಿ (ಅಸ್ಸಾಂನ ಬುಡಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ಯಾವುದೇ ಅನುಸೂಚಿತ ಬುಡಕಟ್ಟುಗಳ ಸದಸ್ಯನಾಗಿರುವ, ಮತ್ತು ಯಾವುದೇ ಸಂಸದೀಯ ಮತಕ್ಷೇತ್ರದ ಮತದಾರನಾಗಿರುವ ಹೊರತು;

(ಸಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಳಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಅಂಥ ಅನುಸೂಚಿತ ಬುಡಕಟ್ಟುಗಳ ಪೈಕಿ ಯಾವುದೇ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಅಂಥ ಸ್ಥಾನವನ್ನು ಮೀಸಲಿಟ್ಟಿರುವ ಸಂಸದೀಯ ಮತಕ್ಷೇತ್ರದ ಅಥವಾ ಅಂಥ ಯಾವುದೇ ಸ್ವಾಯತ್ತ ಜಿಲ್ಲೆಯನ್ನೊಳಗೊಳ್ಳುವ ಯಾವುದೇ ಇತರ ಸಂಸದೀಯ ಮತಕ್ಷೇತ್ರದ ಮತದಾರನಾಗಿರುವ ಹೊರತು;

(ಸಿಸಿ) ಲಕ್ಷದ್ವೀಪ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಯಾವುದೇ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಈ ಒಕ್ಕೂಟ ರಾಜ್ಯ ಕ್ಷೇತ್ರದ ಸಂಸದೀಯ ಮತಕ್ಷೇತ್ರದ ಮತದಾರನಾಗಿರುವ ಹೊರತು;

(ಸಿಸಿಸಿ) ಸಿಕ್ಕಿಂ ರಾಜ್ಯಕ್ಕೆ ಹಂಚಿಕೆ ಮಾಡಿರುವ ಸ್ಥಾನದ ಸಂದರ್ಭದಲ್ಲಿ ಅವನು ಸಿಕ್ಕಿಂನ ಸಂಸದೀಯ ಮತಕ್ಷೇತ್ರದ ಮತದಾರನಾಗಿರುವ ಹೊರತು,-

(ಡಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ ಅವನು ಯಾವುದೇ ಸಂಸದೀಯ ಮತಕ್ಷೇತ್ರದ ಮತದಾರನಾಗಿರುವ ಹೊರತು

– ಲೋಕಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಯಾಗಲು ಅರ್ಹನಾಗತಕ್ಕುದಲ್ಲ.

**5. ವಿಧಾನಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು:-** ಯಾರೇ ವ್ಯಕ್ತಿಯು –

(ಎ) ಒಂದು ರಾಜ್ಯದ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಸಂದರ್ಭಾನುಸಾರ ಆ ಯಾವುದೇ ಜಾತಿಯ ಅಥವಾ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಆ ರಾಜ್ಯದಲ್ಲಿನ ಯಾವುದೇ ವಿಧಾನಸಭಾ ಮತಕ್ಷೇತ್ರದ ಮತದಾರನಾಗಿರುವ ಹೊರತು;

(ಬಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಯಾವುದೇ ಸ್ವಾಯತ್ತ ಜಿಲ್ಲೆಯ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಆ ಜಿಲ್ಲೆಗಾಗಿ ಯಾವ ವಿಧಾನಸಭಾ ಮತಕ್ಷೇತ್ರದಲ್ಲಿ ಅಂಥ ಸ್ಥಾನ ಅಥವಾ ಯಾವುದೇ ಇತರ ಸ್ಥಾನಗಳನ್ನು ಮೀಸಲಿಡಲಾಗಿದೆಯೋ ಆ ವಿಧಾನ ಸಭಾ ಮತಕ್ಷೇತ್ರದ ಮತದಾರನಾಗಿರುವ ಹೊರತು; ಮತ್ತು

(ಸಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ, ಅವನು ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಮತಕ್ಷೇತ್ರದ ಮತದಾರನಾಗಿರುವ ಹೊರತು

– ಅಂಥ ರಾಜ್ಯದ ವಿಧಾನ ಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ:

ಪರಂತು, 371ಎ ಅನುಚ್ಛೇದದ (2)ನೇ ಖಂಡದಲ್ಲಿ ಉಲ್ಲೇಖಿಸಿರುವ ಅವಧಿಗಾಗಿ ಒಬ್ಬ ವ್ಯಕ್ತಿಯು ನಾಗಾಲ್ಯಾಂಡ್ ವಿಧಾನ ಸಭೆಯಲ್ಲಿ ತ್ಯೂನ್‌ಸಾಂಗ್ ಜಿಲ್ಲೆಗೆ ಹಂಚಿಕೆ ಮಾಡಿರುವ ಯಾವುದೇ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅವನು ಆ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ಪ್ರಾದೇಶಿಕ ಪರಿಷತ್‌ನ ಸದಸ್ಯನಾಗಿರುವ ಹೊರತು ಅರ್ಹನಾಗತಕ್ಕುದಲ್ಲ.

**7. ಪರಿಭಾಷೆಗಳು :-** ಈ ಅಧ್ಯಾಯದಲ್ಲಿ,-

(ಎ) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರುವುದಕ್ಕೆ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ "ಸಮುಚಿತ ಸರ್ಕಾರ" ಎಂದರೆ ಕೇಂದ್ರ ಸರ್ಕಾರ, ಮತ್ತು ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರುವುದಕ್ಕೆ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ಆ ರಾಜ್ಯ ಸರ್ಕಾರ;

(ಬಿ) "ಅನರ್ಹಗೊಳಿಸಲಾದ" ಎಂದರೆ ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಮತ್ತು ಸದಸ್ಯನಾಗಿರುವುದಕ್ಕೆ ಅನರ್ಹಗೊಳಿಸಲಾದ ವ್ಯಕ್ತಿ.

**8. ಕೆಲವು ಅಪರಾಧಗಳ ಬಗ್ಗೆ ಅಪರಾಧ ನಿರ್ಣಯವಾದ ಮೇಲೆ ಅನರ್ಹತೆ :-** (1) ಒಬ್ಬ ವ್ಯಕ್ತಿಯು,-

(ಎ) ಭಾರತ ದಂಡ ಸಂಹಿತೆ, 1860 (1860ರ 45)ರ 153ಎ ಪ್ರಕರಣ (ಮತ, ಮೂಲ ವಂಶ, ಜನ್ಮಸ್ಥಳ, ನಿವಾಸ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ಮಧ್ಯೆ ದ್ವೇಷವನ್ನು ಹೆಚ್ಚಿಸುವ ಅಪರಾಧ, ಮತ್ತು ಸೌಹಾರ್ದತೆಗೆ ಬಾಧಕವಾಗುವ ಕೃತ್ಯಗಳನ್ನು ಮಾಡುವುದು) ಅಥವಾ 171ಇ ಪ್ರಕರಣ (ಲಂಚಗುಳಿತನದ ಅಪರಾಧ) ಅಥವಾ 171ಎಫ್

ಪ್ರಕರಣ (ಚುನಾವಣೆಯಲ್ಲಿ ಅನುಚಿತ ಪ್ರಭಾವ ಅಥವಾ ಇನ್ನೊಬ್ಬನಂತೆ ನಟಿಸುವ ಅಪರಾಧ) ಅಥವಾ 376ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣ ಅಥವಾ 376ಎ ಪ್ರಕರಣ ಅಥವಾ 376ಬಿ ಪ್ರಕರಣ ಅಥವಾ 376ಸಿ ಪ್ರಕರಣ ಅಥವಾ 376ಡಿ ಪ್ರಕರಣ (ಬಲಾತ್ ಸಂಭೋಗಕ್ಕೆ ಸಂಬಂಧಿಸಿದ ಅಪರಾಧಗಳು) ಅಥವಾ 498ಎ ಪ್ರಕರಣ (ಗಂಡ ಅಥವಾ ಗಂಡನ ಸಂಬಂಧಿಕರಿಂದ ಸ್ತ್ರೀಗೆ ಉಂಟು ಮಾಡುವ ಕ್ರೌರ್ಯದ ಅಪರಾಧ) ಅಥವಾ 505ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ (ವರ್ಗಗಳ ನಡುವೆ ವೈರ, ದ್ವೇಷ ಅಥವಾ ವೈಮನಸ್ಯವನ್ನು ಉಂಟು ಮಾಡುವ ಅಥವಾ ಬೆಳೆಸುವ ಹೇಳಿಕೆಯನ್ನು ಕೊಡುವ ಅಪರಾಧ ಅಥವಾ ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಮತೀಯ ಪೂಜೆಯಲ್ಲಿ ಅಥವಾ ಮತೀಯ ಕರ್ಮಗಳಲ್ಲಿ ತೊಡಗಿದ ಯಾವುದೇ ಕೂಟದಲ್ಲಿ ಕೊಡುವ ಅಂಥ ಹೇಳಿಕೆಗೆ ಸಂಬಂಧಿಸಿದ ಅಪರಾಧ) ಮೇರೆಗೆ ; ಅಥವಾ

(ಬಿ) "ಅಸ್ಪೃಶ್ಯತೆ"ಯ ಬೋಧನೆ ಮತ್ತು ಆಚರಣೆಗಾಗಿ ಶಿಕ್ಷೆಯನ್ನು ಮತ್ತು ಅದರಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯ ಜಾರಿಯನ್ನು ಉಪಬಂಧಿಸುವ ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955ರ (1955ರ 22) ಮೇರೆಗೆ; ಅಥವಾ

(ಸಿ) ಸೀಮಾ ಸುಂಕ ಅಧಿನಿಯಮ, 1962 (1962ರ 52)ರ 11ನೇ ಪ್ರಕರಣದ (ನಿಷೇಧಿತ ಸರಕುಗಳನ್ನು ಆಮದು ಮಾಡುವ ಅಥವಾ ರಫ್ತು ಮಾಡುವ ಅಪರಾಧ) ಮೇರೆಗೆ ; ಅಥವಾ

(ಡಿ) ಕಾನೂನು ಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967 (1967ರ 37)ರ 10 ರಿಂದ 12ರ ವರೆಗಿನ ಪ್ರಕರಣಗಳ (ಕಾನೂನು ಬಾಹಿರವೆಂದು ಘೋಷಿಸಲಾಗಿರುವ ಸಂಘದ ಸದಸ್ಯನಾಗಿರುವ ಅಪರಾಧ, ಕಾನೂನು ಬಾಹಿರ ಸಂಘದ ನಿಧಿಗಳೊಂದಿಗೆ ವ್ಯವಹರಿಸುವುದಕ್ಕೆ ಸಂಬಂಧಪಟ್ಟ ಅಪರಾಧ ಅಥವಾ ಅಧಿಸೂಚಿತ ಸ್ಥಳಕ್ಕೆ ಸಂಬಂಧಿಸಿದಂತೆ ಮಾಡಿದ ಆದೇಶದ ಉಲ್ಲಂಘನೆಗೆ ಸಂಬಂಧಪಟ್ಟ ಅಪರಾಧ) ಮೇರೆಗೆ ; ಅಥವಾ

(ಇ) ವಿದೇಶಿ ವಿನಿಮಯ (ನಿಯಂತ್ರಣ) ಅಧಿನಿಯಮ, 1973ರ (1973ರ 46) ಮೇರೆಗೆ; ಅಥವಾ

(ಎಫ್) ನಿದ್ರಾಜನಕ ಔಷಧಗಳು ಮತ್ತು ಮನಃಪ್ರಭಾವಿ ಪದಾರ್ಥಗಳ ಅಧಿನಿಯಮ, 1985 (1985ರ 61)ರ ಮೇರೆಗೆ ; ಅಥವಾ

(ಜಿ) ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1987ರ (1987ರ 28) 3ನೇ ಪ್ರಕರಣದ (ಭಯೋತ್ಪಾದಕ ಕಾರ್ಯಗಳನ್ನು ಮಾಡುವ ಅಪರಾಧ) ಅಥವಾ 4ನೇ ಪ್ರಕರಣದ (ವಿಚ್ಛಿದ್ರಕಾರಕ ಚಟುವಟಿಕೆಗಳನ್ನು ಮಾಡುವ ಅಪರಾಧ) ಮೇರೆಗೆ ; ಅಥವಾ

(ಹೆಚ್) ಧಾರ್ಮಿಕ ಸಂಸ್ಥೆಗಳ (ದುರುಪಯೋಗದ ಪ್ರತಿಬಂಧ) ಅಧಿನಿಯಮ, 1988ರ (1988ರ 41) 7ನೇ ಪ್ರಕರಣದ (3 ರಿಂದ 6ರ ವರೆಗಿನ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುವ ಅಪರಾಧ) ಮೇರೆಗೆ; ಅಥವಾ

(ಐ) ಈ ಅಧಿನಿಯಮದ 125ನೇ ಪ್ರಕರಣದ (ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರವನ್ನು ಬೆಳೆಸುವ ಅಪರಾಧ) ಅಥವಾ 135ನೇ ಪ್ರಕರಣದ (ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವ ಅಪರಾಧ) ಅಥವಾ 135ಎ ಪ್ರಕರಣ (ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ) ಅಥವಾ 136ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ (ಯಾವುದೇ ನಾಮನಿರ್ದೇಶನ ಮತಪತ್ರಗಳನ್ನು

ಮೋಸದಿಂದ ವಿರೂಪಗೊಳಿಸುವ ಅಥವಾ ಮೋಸದಿಂದ ನಾಶಪಡಿಸುವ ಅಪರಾಧ) ; ಅಥವಾ

(ಜೆ) ಪೂಜಾ ಸ್ಥಳಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1991ರ 6ನೇ ಪ್ರಕರಣದ (ಪೂಜಾ ಸ್ಥಳವನ್ನು ಪರಿವರ್ತಿಸುವ ಅಪರಾಧ); ಅಥವಾ

(ಕೆ) ರಾಷ್ಟ್ರಗೌರವ ಅಪಮಾನ ಪ್ರತಿಬಂಧಕ ಅಧಿನಿಯಮ, 1971 (1971 ರ 69) ರ 2 ನೇ ಪ್ರಕರಣ (ಭಾರತದ ರಾಷ್ಟ್ರಧ್ವಜಕ್ಕೆ ಅಥವಾ ಭಾರತ ಸಂವಿಧಾನಕ್ಕೆ ಅಪಮಾನ ಮಾಡುವ ಅಪರಾಧ) ಅಥವಾ 3ನೇ ಪ್ರಕರಣ (ರಾಷ್ಟ್ರಗೀತೆ ಹಾಡುವುದನ್ನು ಪ್ರತಿಬಂಧಿಸುವ ಅಪರಾಧ); ಅಥವಾ

(ಎಲ್) ಸತಿ ಸಹಗಮನ (ನಿಷೇಧ) ಅಧಿನಿಯಮ, 1987 (1988ರ 3); ಅಥವಾ

(ಎಮ್) ಭ್ರಷ್ಟಾಚಾರ ನಿಷೇಧ ಅಧಿನಿಯಮ, 1988 (1988ರ 3); ಅಥವಾ

(ಎನ್) ಭಯೋತ್ಪಾದನೆ ನಿಗ್ರಹ ಅಧಿನಿಯಮ, 2002 (2002ರ 15),

– ಅಡಿಯಲ್ಲಿ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯು,

(i) ಅಪರಾಧ ನಿರ್ಣಯದ ದಿನಾಂಕದಿಂದ ಆರು ವರ್ಷದ ಅವಧಿಗೆ ಜುಲ್ಮಾನೆ ಶಿಕ್ಷೆಗೆ ಮಾತ್ರ ಗುರಿಯಾಗಿರುವಲ್ಲಿ;

(ii) ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಕಾರಾಗೃಹ ಶಿಕ್ಷೆಗೆ ಗುರಿಯಾಗಿರುವಲ್ಲಿ; ಅಂಥ ಅಪರಾಧ ನಿರ್ಣೀತ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದು ಹಾಗೂ ಆತನು ಬಿಡುಗಡೆಯಾದಂನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕದ್ದು.

(2) ಅಪರಾಧಿಯೆಂದು ನಿರ್ಣೀತನಾಗಿರುವ ವ್ಯಕ್ತಿಯು,–

(ಎ) ದಾಸ್ತಾನು ಮಾಡುವುದನ್ನು ಅಥವಾ ಲಾಭ ಬಡುಕತನವನ್ನು ಪ್ರತಿಬಂಧಿಸುವ ಬಗ್ಗೆ ಉಪಬಂಧಿಸುವ ಯಾವುದೇ ಕಾನೂನನ್ನು ; ಅಥವಾ

(ಬಿ) ಆಹಾರ ಅಥವಾ ಔಷಧಗಳ ಕಲಬೆರಕೆಗೆ ಸಂಬಂಧಿಸಿದ ಯಾವುದೇ ಕಾನೂನನ್ನು; ಅಥವಾ

(ಸಿ) ವಧು – ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961ರ 28)ರ ಯಾವುವೇ ಉಪಬಂಧಗಳನ್ನು

– ಉಲ್ಲಂಘಿಸಿರುವುದಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ಮತ್ತು ಆರು ತಿಂಗಳುಗಳಿಗೆ ಕಡಿಮೆ ಇಲ್ಲದ ಕಾರಾವಾಸ ಶಿಕ್ಷೆಗೆ ಗುರಿಯಾದ ಒಬ್ಬ ವ್ಯಕ್ತಿಯು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕುದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮಂದುವರೆಯತಕ್ಕುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಪರಾಧವಲ್ಲದ ಯಾವುದೇ ಇತರ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿರುವ ಮತ್ತು ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಕಾರಾವಾಸದ ಶಿಕ್ಷೆಗೆ ಗುರಿಯಾಗಿರುವ ಒಬ್ಬ ವ್ಯಕ್ತಿಯು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕುದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕುದು.

**ವಿವರಣೆ :– ಈ ಪ್ರಕರಣದಲ್ಲಿ,–**

(ಎ) "ದಾಸ್ತಾನು ಮಾಡುವುದನ್ನು ಅಥವಾ ಲಾಭ ಬಡುಕತನವನ್ನು ಪ್ರತಿಬಂಧಿಸುವ ಬಗ್ಗೆ ಉಪಬಂಧಿಸುವ ಕಾನೂನು" ಎಂದರೆ,–

(i) ಯಾವುದೇ ಅತ್ಯಾವಶ್ಯಕ ವಸ್ತುವಿನ ಉತ್ಪಾದನೆ ಅಥವಾ ತಯಾರಿಕೆಯ ನಿಯಂತ್ರಣಕ್ಕಾಗಿ;

(ii) ಯಾವುದೇ ಅತ್ಯಾವಶ್ಯಕ ವಸ್ತುವನ್ನು ಯಾವ ಬೆಲೆಗೆ ಕೊಳ್ಳಬಹುದೋ ಅಥವಾ ಮಾರಬಹುದೋ ಆ ಬೆಲೆಯ ನಿಯಂತ್ರಣಕ್ಕಾಗಿ ;

(iii) ಯಾವುದೇ ಅತ್ಯಾವಶ್ಯಕ ವಸ್ತುವಿನ ಆರ್ಜನೆ, ಸ್ವಾಧೀನ, ದಾಸ್ತಾನು, ಸಾಗಣೆ, ವಿತರಣೆ, ವಿಲೆ, ಉಪಯೋಗ ಅಥವಾ ಬಳಕೆಯ ನಿಯಂತ್ರಣಕ್ಕಾಗಿ ;

(iv) ಸಾಮಾನ್ಯವಾಗಿ ಮಾರಾಟಕ್ಕೆ ಇಟ್ಟ ಯಾವುದೇ ಅತ್ಯಾವಶ್ಯಕ ವಸ್ತುವಿನ ಮಾರಾಟವನ್ನು ತಡೆಹಿಡಿಯುವುದರ ನಿಷೇಧಕ್ಕಾಗಿ

– ಉಪಬಂಧಿಸುವ ಯಾವುದೇ ಕಾನೂನು ಅಥವಾ ಯಾವುದೇ ಆದೇಶ, ನಿಯಮ ಅಥವಾ ಕಾನೂನಿನ ಬಲವುಳ್ಳ ಯಾವುದೇ ಅಧಿಸೂಚನೆ ;

(ಬಿ) "ಔಷಧ" ಎಂಬುದಕ್ಕೆ ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, 1940 (1940ರ 23) ರಲ್ಲಿ ಇದಕ್ಕೆ ಗೊತ್ತುಪಡಿಸಿರುವ ಅರ್ಥವೇ ಇರುತ್ತದೆ ;

(ಸಿ) "ಅತ್ಯಾವಶ್ಯಕ ವಸ್ತು" ಎಂಬುದಕ್ಕೆ ಅತ್ಯಾವಶ್ಯಕ ವಸ್ತುಗಳ ಅಧಿನಿಯಮ, 1955 (1955ರ 10) ರಲ್ಲಿ ಅದಕ್ಕೆ ಗೊತ್ತುಪಡಿಸಿರುವ ಅರ್ಥವೇ ಇರುತ್ತದೆ ;

(ಡಿ) "ಆಹಾರ" ಎಂಬುದಕ್ಕೆ ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, 1954 (1954ರ 37) ರಲ್ಲಿ ಅದಕ್ಕೆ ಗೊತ್ತುಪಡಿಸಿರುವ ಅರ್ಥವೇ ಇರುತ್ತದೆ.

**8ಎ. ಭ್ರಷ್ಟಾಚಾರಗಳ ಆಧಾರದ ಮೇಲೆ ಅನರ್ಹತೆ.**

(1) 99ನೇ ಪ್ರಕರಣದ ಮೇರೆಗೆ ಆದೇಶದ ಮೂಲಕ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದ ಪ್ರತಿಯೊಬ್ಬ ವ್ಯಕ್ತಿಯ ಪ್ರಕರಣವನ್ನು ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರವು ಅಂಥ ಆದೇಶವು ಜಾರಿಗೆ ಬಂದ ತರುವಾಯ ಆದಷ್ಟು ಬೇಗನೆ, ಅಂಥ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದೇ ಮತ್ತು ಹಾಗಿದ್ದರೆ ಎಷ್ಟು ಅವಧಿಯವರೆಗೆ ಎಂಬ ಪ್ರಶ್ನೆಯನ್ನು ನಿರ್ಧರಿಸಲು ರಾಷ್ಟ್ರಪತಿಗಳಿಗೆ ಒಪ್ಪಿಸತಕ್ಕುದು :

ಪರಂತು, ಈ ಉಪಪ್ರಕರಣದ ಮೇರೆಗೆ ಯಾವ ಅವಧಿಯವರೆಗೆ ಯಾವನೇ ವ್ಯಕ್ತಿಯನ್ನು ಅನರ್ಹಗೊಳಿಸಬಹುದೋ ಆ ಅವಧಿಯು, 99ನೇ ಪ್ರಕರಣದ ಮೇರೆಗೆ ಅವನಿಗೆ ಸಂಬಂಧಪಟ್ಟಂತೆ ಮಾಡಿರುವ ಆದೇಶವು ಜಾರಿಗೆ ಬಂದ ದಿನಾಂಕದಿಂದ ಆರು ವರ್ಷಗಳ ಅವಧಿಯನ್ನು ಯಾವ ಸಂದರ್ಭದಲ್ಲೂ ಮೀರತಕ್ಕುದಲ್ಲ.

(2) ಚುನಾವಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1975 (1975ರ 40)ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಈ ಅಧಿನಿಯಮವು ಇದ್ದಂತೆ, ಅದರ 8ಎ ಪ್ರಕರಣದ ಮೇರೆಗೆ ಅನರ್ಹಗೊಂಡಿರುವ ಯಾವನೇ ವ್ಯಕ್ತಿಯು ಇಂಥ ಅನರ್ಹತೆಯ ಅವಧಿಯು ಮುಕ್ತಾಯವಾಗಿರದಿದ್ದರೆ, ಸದರಿ ಅವಧಿಯ ಮುಕ್ತಾಯಗೊಳ್ಳದ ಭಾಗಕ್ಕಾಗಿ ಅಂಥ ಅನರ್ಹತೆಯನ್ನು ತೆಗೆದುಹಾಕುವುದಕ್ಕಾಗಿ ರಾಷ್ಟ್ರಪತಿಗೆ ಅರ್ಜಿಯನ್ನು ಸಲ್ಲಿಸಬಹುದು.

(3) (1)ನೇ ಉಪ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಪ್ರಶ್ನೆಯ ಬಗ್ಗೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಲಾದ ಯಾವುದೇ ಅರ್ಜಿಯ ಬಗ್ಗೆ ರಾಷ್ಟ್ರಪತಿಯು ತನ್ನ ತೀರ್ಮಾನವನ್ನು ಕೊಡುವುದಕ್ಕೆ ಮುಂಚೆ ಅವನು ಅಂಥ ಪ್ರಶ್ನೆಯ ಅಥವಾ ಅರ್ಜಿಯ ಬಗ್ಗೆ ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದುಕೊಳ್ಳತಕ್ಕುದು ಮತ್ತು ಅಂಥ ಅಭಿಪ್ರಾಯಕ್ಕೆ ಅನುಸಾರವಾಗಿ ವರ್ತಿಸತಕ್ಕುದು.

**9. ಭ್ರಷ್ಟಾಚಾರ ಅಥವಾ ದ್ರೋಹದ ಸಲುವಾಗಿ ವಜಾ ಮಾಡಿದ್ದಕ್ಕಾಗಿ ಅನರ್ಹತೆ :-**

(1) ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿದ್ದು ಭ್ರಷ್ಟಾಚಾರ ಅಥವಾ ದೇಶ ದ್ರೋಹಕ್ಕಾಗಿ ವಜಾ ಆಗಿರುವ ಒಬ್ಬ ವ್ಯಕ್ತಿಯನ್ನು, ಹಾಗೆ ವಜಾ ಆದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅನರ್ಹಗೊಳಿಸತಕ್ಕುದು.

(2) (1)ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ, ಭಾರತ ಸರ್ಕಾರದ ಅಧೀನದಲ್ಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿರುವ ವ್ಯಕ್ತಿಯನ್ನು ಭ್ರಷ್ಟಾಚಾರ ಅಥವಾ ದೇಶ ದ್ರೋಹಕ್ಕಾಗಿ ವಜಾ ಮಾಡಲಾಗಿದೆ ಅಥವಾ ಮಾಡಲಾಗಿಲ್ಲ ಎಂಬುದಾಗಿ ಚುನಾವಣಾ ಆಯೋಗವು ನೀಡಿದ ಪ್ರಮಾಣಪತ್ರವು ಆ ಸಂಗತಿಯ ಬಗ್ಗೆ ನಿರ್ಣಾಯಕ ರುಜುವಾತು ಆಗಿರತಕ್ಕುದು :

ಪರಂತು, ಒಬ್ಬ ವ್ಯಕ್ತಿಯನ್ನು ಭ್ರಷ್ಟಾಚಾರಕ್ಕಾಗಿ ಅಥವಾ ದೇಶ ದ್ರೋಹಕ್ಕಾಗಿ ವಜಾ ಮಾಡಲಾಗಿದೆ ಎಂಬ ಪ್ರಮಾಣಪತ್ರವನ್ನು, ಸದರಿ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರತು ನೀಡತಕ್ಕುದಲ್ಲ.

**9ಎ. ಸರ್ಕಾರಿ ಕರಾರುಗಳು, ಇತ್ಯಾದಿಗಳಿಗಾಗಿ ಅನರ್ಹತೆ**

ಒಬ್ಬ ವ್ಯಕ್ತಿಯು ಸಮುಚಿತ ಸರ್ಕಾರಕ್ಕೆ ಸರಕುಗಳ ಸರಬರಾಜಿಗಾಗಿ ಅಥವಾ ಅದು ಕೈಗೊಂಡಿರುವ ಯಾವುದೇ ಕಾಮಗಾರಿಗಳ ನಿರ್ವಹಣೆಗಾಗಿ ಆ ಸರ್ಕಾರದೊಂದಿಗೆ ತನ್ನ ವೃತ್ತಿ ಅಥವಾ ವ್ಯವಹಾರದ ಕ್ರಮದಲ್ಲಿ ತಾನು ಮಾಡಿಕೊಂಡಿರುವ ಕರಾರು ಅಸ್ತಿತ್ವದಲ್ಲಿದ್ದರೆ ಮತ್ತು ಹಾಗೆ ಇರುವವರೆಗೆ ಅನರ್ಹಗೊಳ್ಳತಕ್ಕುದು.

**ವಿವರಣೆ :-** ಈ ಪ್ರಕರಣದ ಉದ್ದೇಶಗಳಿಗಾಗಿ, ಸಮುಚಿತ ಸರ್ಕಾರದೊಂದಿಗೆ ಕರಾರು ಮಾಡಿಕೊಂಡಿರುವ ವ್ಯಕ್ತಿಯು ಅದನ್ನು ಪೂರ್ಣವಾಗಿ ಪಾಲಿಸಿರುವಲ್ಲಿ, ಸರ್ಕಾರವು ಪೂರ್ಣವಾಗಿ ಅಥವಾ ಭಾಗಶಃ ಆ ಕರಾರಿನ ತನ್ನ ಭಾಗವನ್ನು ಪಾಲಿಸಿಲ್ಲವೆಂಬ ಸಂಗತಿಯ ಕಾರಣ ಮಾತ್ರದಿಂದಲೇ ಆ ಕರಾರು ಅಸ್ತಿತ್ವದಲ್ಲಿದೆ ಎಂದು ಭಾವಿಸತಕ್ಕುದಲ್ಲ.

**10. ಸರ್ಕಾರಿ ಕಂಪನಿಯ ಅಧೀನದಲ್ಲಿನ ಹುದ್ದೆಗಾಗಿ ಅನರ್ಹತೆ**

ಒಬ್ಬ ವ್ಯಕ್ತಿಯು, (ಸಹಕಾರ ಸಂಘವಲ್ಲದ) ಯಾವ ಕಂಪನಿ ಅಥವಾ ನಿಗಮದ ಬಂಡವಾಳದಲ್ಲಿ ಸಮುಚಿತ ಸರ್ಕಾರವು ಶೇ. 25 ಕ್ಕಿಂತ ಕಡಿಮೆ ಇಲ್ಲದಷ್ಟು ಷೇರನ್ನು ಹೊಂದಿದೆಯೋ ಆ ಯಾವುದೇ ಕಂಪನಿಯ ಅಥವಾ ನಿಗಮದ ವ್ಯವಸ್ಥಾಪಕ, ಏಜೆಂಟ್, ವ್ಯವಸ್ಥಾಪಕ ಅಥವಾ ಕಾರ್ಯದರ್ಶಿಯು ಆಗಿದ್ದರೆ ಮತ್ತು ಹಾಗೆ ಆಗಿರುವವರೆಗೆ ಅವನು ಅನರ್ಹನಾಗಿರತಕ್ಕುದು.

**10ಎ. ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲು ಮಾಡಲು ತಪ್ಪಿದ್ದಕ್ಕಾಗಿ ಅನರ್ಹತೆ**

ಒಬ್ಬ ವ್ಯಕ್ತಿಯು,-

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಗತ್ಯಪಡಿಸಿದ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲ್ಮಾಡಲು ತಪ್ಪಿದ್ದಾನೆ ಎಂದು; ಮತ್ತು

(ಬಿ) ಹಾಗೆ ತಪ್ಪಿರುವುದಕ್ಕೆ ಯಾವುದೇ ಸರಿಯಾದ ಕಾರಣ ಅಥವಾ ಸಮರ್ಥನೆಯನ್ನು ಅವನು ಹೊಂದಿಲ್ಲ ಎಂದು ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ಚುನಾವಣಾ ಆಯೋಗವು ರಾಜಪತ್ರದಲ್ಲಿ ಪ್ರಕಟವಾದ ಆದೇಶದ ಮೂಲಕ ಅವನು ಅನರ್ಹನಾಗಿದ್ದಾನೆಂದು ಘೋಷಿಸತಕ್ಕುದು ಮತ್ತು ಅಂಥ ವ್ಯಕ್ತಿಯನ್ನು ಆ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸತಕ್ಕುದು.

**ರಾಷ್ಟ್ರೀಯ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ ಅಧಿನಿಯಮ, 1991 (1991ರ ಸಂ.1) ರಿಂದ ತೆಗೆದುಕೊಳ್ಳಲಾದ ಉದ್ಧೃತ ಭಾಗ**

4. ಒಬ್ಬ ವ್ಯಕ್ತಿಯು,

(ಎ) ಭಾರತದ ನಾಗರಿಕನಾಗಿದ್ದು ಈ ಉದ್ದೇಶಕ್ಕಾಗಿ ಅನುಸೂಚಿಯಲ್ಲಿ ರೂಪಿಸಲಾದ ನಮೂನೆಯನುಸಾರವಾಗಿ ಚುನಾವಣಾ ಆಯೋಗವು ಇದರ ಪರವಾಗಿ ಅಧಿಕೃತಗೊಳಿಸಿದ ಕೆಲವು ವ್ಯಕ್ತಿಗಳ ಮುಂದೆ ಪ್ರಮಾಣ ವಚನವನ್ನು ಅಥವಾ ದೃಢೀಕರಣವನ್ನು ಮಾಡಿದ್ದು ಅದಕ್ಕೆ ಸಹಿ ಹಾಕಿರುವ ಹೊರತು;

(ಬಿ) ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆಯಲ್ಲದ ವಯಸ್ಸಿನವನಾಗಿರುವ ಹೊರತು; ಮತ್ತು

(ಸಿ) ಸಂಸತ್ತಿನ ಮೂಲಕ ಮಾಡಲಾದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಇದರ ಪರವಾಗಿ ಗೊತ್ತುಪಡಿಸಬಹುದಾದಂಥ ಇತರ ಅರ್ಹತೆಗಳನ್ನು ಹೊಂದಿರುವ ಹೊರತು,

– ವಿಧಾನಸಭೆಯಲ್ಲಿನ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆ ಮಾಡಲು ಅರ್ಹನಾಗಿರತಕ್ಕುದ್ದಲ್ಲ.

15. (1) ಯಾರೇ ವ್ಯಕ್ತಿಯು:–

(ಎ) ಆತನು, ಸಂಸತ್ತಿನ ಮೂಲಕ ಅಥವಾ ಯಾವುದೇ ರಾಜ್ಯದ ವಿಧಾನ ಮಂಡಲದ ಮೂಲಕ ಅಥವಾ ರಾಜಧಾನಿಯ ಅಥವಾ ಯಾವುದೇ ಇತರ ಕೇಂದ್ರಾಡಳಿತ ಪ್ರದೇಶದ ವಿಧಾನ ಸಭೆಯ ಮೂಲಕ ಮಾಡಲಾದ ಕಾನೂನಿನ ಮೂಲಕ ಅದರ ಧಾರಕನನ್ನು ಅನರ್ಹಗೊಳಿಸದಿರುವಂತೆ ಘೋಷಿಸಲಾದ ಒಂದು ಹುದ್ದೆ ಹೊರತು ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶ ಸರ್ಕಾರದಡಿ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿದ್ದರೆ; ಅಥವಾ

(ಬಿ) ಆತನು, ಅನುಚ್ಛೇದ 102 ರ (1)ನೇ ಖಂಡದ ಉಪಖಂಡ(ಬಿ) ಉಪಖಂಡ (ಸಿ) ಅಥವಾ ಉಪ–ಖಂಡ (ಡಿ)ಯ ಉಪಬಂಧಗಳು ಅಥವಾ ಆ ಅನುಚ್ಛೇದದ ಅನುಸರಣೆಯಲ್ಲಿ ಮಾಡಲಾದ ಯಾವುದೇ ಕಾನೂನಿನಡಿ ಸಂಸತ್ತಿನ ಉಭಯ ಸದನಗಳ ಸದಸ್ಯನನ್ನಾಗಿ ಆಯ್ಕೆ ಮಾಡುವುದಕ್ಕಾಗಿ ಅಥವಾ ಸದಸ್ಯನಾಗಿರುವುದಕ್ಕಾಗಿ ತತ್ಕಾಲದಲ್ಲಿ ಅನರ್ಹಗೊಂಡಿದ್ದರೆ–

– ವಿಧಾನಸಭೆಯ ಸದಸ್ಯನನ್ನಾಗಿ ಆಯ್ಕೆ ಮಾಡುವುದಕ್ಕಾಗಿ ಅಥವಾ ಸದಸ್ಯನಾಗಿರುವುದಕ್ಕಾಗಿ ಅನರ್ಹನಾಗಿರತಕ್ಕದ್ದು.

(2) ಈ ಪ್ರಕರಣದ ಉದ್ದೇಶಕ್ಕಾಗಿ ವ್ಯಕ್ತಿಯು, ಆತನು ಕೇಂದ್ರ ಸರ್ಕಾರದ ಅಥವಾ ಅಂಥ ರಾಜ್ಯಕ್ಕೆ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಮಂತ್ರಿಯಾಗಿರುತ್ತಾನೆ ಎಂಬ ಕಾರಣ ಮಾತ್ರದಿಂದ ಭಾರತ ಸರ್ಕಾರದ ಯಾವುದೇ ರಾಜ್ಯ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶ ಸರ್ಕಾರದ ಮೇರೆಗೆ ಒಂದು ಲಾಭದಾಯಕ ಹುದ್ದೆಯನ್ನು ಹೊಂದಿರುವುದಾಗಿ ಭಾವಿಸತಕ್ಕುದ್ದಲ್ಲ.

(3) ವಿಧಾನಸಭೆಯ ಸದಸ್ಯನು, (1)ನೇ ಉಪ-ಪ್ರಕರಣದ ಉಪಬಂಧದಡಿ ಅಂಥ ಸದಸ್ಯನಾಗಿರುವುದಕ್ಕಾಗಿ ಅನರ್ಹನಾಗಿದ್ದಾನೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಆ ಪ್ರಶ್ನೆಯನ್ನು ರಾಷ್ಟ್ರಪತಿಯ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು ಹಾಗೂ

(4) ಆತನ ತೀರ್ಮಾನವೇ ಅಂತಿಮವಾಗಿರತಕ್ಕದ್ದು. ಯಾವುದೇ ಪ್ರಶ್ನೆ ಕುರಿತಂತೆ ಯಾವುದೇ ತೀರ್ಮಾನವನ್ನು ನೀಡುವುದಕ್ಕೆ ಮುಂಚೆ ರಾಷ್ಟ್ರಪತಿಯು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದುಕೊಳ್ಳತಕ್ಕದ್ದು ಮತ್ತು ಅಂಥ ಅಭಿಪ್ರಾಯದನುಸಾರ ಪ್ರವರ್ತಿಸತಕ್ಕದ್ದು.

## ಪರಿಶಿಷ್ಟ–5
## (ಅಧ್ಯಾಯ 2, ಪ್ಯಾರಾ–2.5.1)
## ಅಧಿಸೂಚನೆಗಳು

**ಅಧಿಸೂಚನೆ 01: ವಿಧಾನಪರಿಷತ್ತನ್ನು ಹೊಂದಿರುವ ರಾಜ್ಯಸಭೆ ಅಥವಾ ಲೋಕಸಭೆಯಲ್ಲಿ ಅಥವಾ ರಾಜ್ಯದ ವಿಧಾನಸಭೆಯಲ್ಲಿ (ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ) ಅಥವಾ ರಾಜ್ಯದ ವಿಧಾನಪರಿಷತ್ (ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ)ಗಾಗಿ,–**

ದಿನಾಂಕ 18ನೇ ಮಾರ್ಚ್ 1968

**ಅಧಿಸೂಚನೆ**

**ಸಂಖ್ಯೆ: 3/6/68/(1) –** ಭಾರತ ಸಂವಿಧಾನದ 84ನೇ ಅನುಚ್ಛೇದ (ಎ) ಖಂಡಕ್ಕೆ ಮತ್ತು 173ನೇ ಅನುಚ್ಛೇದ (ಎ) ಖಂಡಕ್ಕೆ ಅನುಸಾರವಾಗಿ ಮತ್ತು 1967 ರ ಏಪ್ರಿಲ್ 25ನೇ ದಿನಾಂಕದ ಅಧಿಸೂಚನೆ ಸಂಖ್ಯೆ: 3/3/66ನ್ನು ರದ್ದುಪಡಿಸಿ, ಚುನಾವಣಾ ಆಯೋಗವು, ಆಯಾ (i) ರಿಟರ್ನಿಂಗ್ ಅಧಿಕಾರಿಯನ್ನು ಮತ್ತು ಅವರಿಗೆ ಅಧೀನರಾಗಿರುವ ಎಲ್ಲಾ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು (ii) ಎಲ್ಲಾ ಪ್ರಥಮ ದರ್ಜೆ ಸ್ಟೈಪೆಂಡರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರುಗಳನ್ನು ಹಾಗೂ (iii) ಎಲ್ಲಾ ಜಿಲ್ಲಾ ನ್ಯಾಯಾಧೀಶರುಗಳನ್ನು ಮತ್ತು ಜಿಲ್ಲಾ ನ್ಯಾಯಾಧೀಶರುಗಳನ್ನು ಹೊರತುಪಡಿಸಿ ರಾಜ್ಯದ ನ್ಯಾಯಾಂಗ ಸೇವೆಯಲ್ಲಿರುವ ಎಲ್ಲಾ ವ್ಯಕ್ತಿಗಳನ್ನು, ಈ ಯಾರಾದರೊಬ್ಬರ ಮುಂದೆ ವಿಧಾನಪರಿಷತ್ತನ್ನು ಹೊಂದಿರುವ ರಾಜ್ಯಸಭೆಯಲ್ಲಿನ ಅಥವಾ ಲೋಕಸಭೆಯಲ್ಲಿನ ಅಥವಾ ರಾಜ್ಯದ ವಿಧಾನಸಭೆಯಲ್ಲಿನ (ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ) ಅಥವಾರಾಜ್ಯದ ವಿಧಾನಪರಿಷತ್ತಿನಲ್ಲಿನ ಸ್ಥಾನವನ್ನು ತುಂಬಲು ಚುನಾವಣೆಗೆ ಅಭ್ಯರ್ಥಿಯಾಗಿ ("ಇದರಲ್ಲಿ ಇನ್ನು ಮುಂದೆ ಅಭ್ಯರ್ಥಿ ಎಂದು ಉಲ್ಲೇಖಿಸಲಾಗಿದೆ") ನಿಲ್ಲುವ ವ್ಯಕ್ತಿಯು, ಭಾರತ ಸಂವಿಧಾನದ 3ನೇ ಅನುಸೂಚಿಯಲ್ಲಿ ಪ್ರಮಾಣವಚನದ ಅಥವಾ ಪ್ರತಿಜ್ಞೆ ಉದ್ದೇಶಕ್ಕಾಗಿ ರೂಪಿಸಿರುವ ನಮೂನೆಯಲ್ಲಿ ಪ್ರತಿಜ್ಞೆ ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜುಹಾಕುವ ಸಲುವಾಗಿ ಅಧಿಕೃತಗೊಳಿಸಿದೆ.

2. ಮೇಲಿನ ಪ್ಯಾರ 1ರಲ್ಲಿ ಏನೇ ಒಳಗೊಂಡಿದ್ದರೂ ಸದರಿ 84ನೇ ಅನುಚ್ಛೇದದ (ಎ) ಖಂಡಕ್ಕೆ ಮತ್ತು ಸದರಿ 173ನೇ ಅನುಚ್ಛೇದದ (ಎ) ಖಂಡಕ್ಕೆ ಅನುಸಾರವಾಗಿ ಚುನಾವಣಾ ಆಯೋಗವು,–

(ಎ) ಅಭ್ಯರ್ಥಿಯು ಕಾರಾವಾಸದಲ್ಲಿ ಬಂಧನದಲ್ಲಿದ್ದರೆ ಕಾರಾವಾಸದ ಅಧೀಕ್ಷಕರನ್ನು,

(ಬಿ) ಅಭ್ಯರ್ಥಿಯು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿದ್ದರೆ ಸ್ಥಾನಬದ್ಧತೆ ಕ್ಯಾಂಪಿನ ಕಮಾಂಡೆಂಟರನ್ನು,

(ಸಿ) ಅಭ್ಯರ್ಥಿಯು ಆಸ್ಪತ್ರೆಯಲ್ಲಿ ರೋಗಿಯಾಗಿ ಹಾಸಿಗೆಯಲ್ಲಿದ್ದರೆ ಅಥವಾ ಅನಾರೋಗ್ಯದ ನಿಮಿತ್ತ ಅಥವಾ ಯಾವುದೇ ಇತರ ಕಾರಣಕ್ಕಾಗಿ ಬೇರೆ ಎಲ್ಲಿಯಾದರೂ ಇದ್ದರೆ ಆಸ್ಪತ್ರೆಯ ಪ್ರಭಾರದಲ್ಲಿರುವ ವೈದ್ಯಕೀಯ ಅಧೀಕ್ಷಕರನ್ನು ಅಥವಾ ಆ ವ್ಯಕ್ತಿಗೆ ಚಿಕಿತ್ಸೆ ನೀಡುತ್ತಿರುವ ಮೆಡಿಕಲ್ ಪ್ರಾಕ್ಟಿಷನರ್‌ನ್ನು,

(ಡಿ) ಅಭ್ಯರ್ಥಿಯು ದೇಶದ ಹೊರಗಡೆ ಇದ್ದರೆ ಅಭ್ಯರ್ಥಿಯು ಇರುವ ದೇಶದಲ್ಲಿ ಭಾರತದ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯನ್ನು ಅಥವಾ ಅಂಥ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯಿಂದ ಅಧಿಕೃತಗೊಂಡಿರುವ ಯಾರೇ ವ್ಯಕ್ತಿಯನ್ನು,

(ಇ) ಅಭ್ಯರ್ಥಿಯು ಯಾವುದೇ ಕಾರಣಕ್ಕಾಗಿ ರಿಟರ್ನಿಂಗ್ ಅಧಿಕಾರಿಯ ಮುಂದೆ ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿ ಮುಂದೆ ಮೇಲೆ ಹೇಳಿದಂತೆ ಹಾಜರಾಗಲು ಸಾಧ್ಯವಾಗದಿದ್ದರೆ ಅಥವಾ ಅಭ್ಯರ್ಥಿಯು ಹಾಜರಾಗದಂತೆ ತಡೆದಿದ್ದರೆ ಈ ಬಗ್ಗೆ

ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದಾಗ ಚುನಾವಣಾ ಆಯೋಗವು ನಿರ್ದೇಶನ ಮಾಡಿದ ಯಾರೇ ಇತರ ವ್ಯಕ್ತಿಯನ್ನು, ಈ ಯಾರಾದರೂ ಒಬ್ಬರ ಮುಂದೆಅಭ್ಯರ್ಥಿಯು ಸದರಿ ಪ್ರಮಾಣಪತ್ರವನ್ನು ಅಥವಾ ಪ್ರತಿಜ್ಞಾ ವಚನವನ್ನು ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜು ಹಾಕುವ ಸಲುವಾಗಿ ಸಹ ಅಧಿಕೃತಗೊಳಿಸಿದೆ.

**ವಿವರಣೆ:** ಈ ಅಧಿಸೂಚನೆಯಲ್ಲಿ–

(1) "ಆಯಾ ರಿಟರ್ನಿಂಗ್ ಅಧಿಕಾರಿ" ಎಂದರೆ –

(ಎ) ಸಂಸದೀಯ ಚುನಾವಣಾ ಕ್ಷೇತ್ರದಿಂದ ಲೋಕಸಭೆಯಲ್ಲಿನ ಸ್ಥಾನವನ್ನು ಅಥವಾ ವಿಧಾನಸಭೆ ಚುನಾವಣಾ ಕ್ಷೇತ್ರದಿಂದ ರಾಜ್ಯದ ವಿಧಾನಸಭೆಯಲ್ಲಿ ಸ್ಥಾನವನ್ನು ಅಥವಾ ರಾಜ್ಯದ ವಿಧಾನಪರಿಷತ್ತು ಚುನಾವಣಾ ಕ್ಷೇತ್ರದಿಂದ ಚುನಾವಣಾ ಪರಿಷತ್ತಿನಲ್ಲಿ ಸ್ಥಾನವನ್ನು ತುಂಬಲುಯಾವ ವ್ಯಕ್ತಿಯ ನಾಮನಿರ್ದೇಶನ ಆಗಿದೆಯೋ ಆ ವ್ಯಕ್ತಿಗೆ ಸಂಬಂಧಿಸಿದ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ.

(ಬಿ) ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಯಲ್ಲಿನ ಸ್ಥಾನವನ್ನು ತುಂಬಲು ಯಾವ ಅರ್ಭ್ಯರ್ಥಿಯ ನಾಮನಿರ್ದೇಶನ ಆಗಿದೆಯೋ ಆ ವ್ಯಕ್ತಿಗೆ ಸಂಬಂಧಪಟ್ಟಂತೆ ಆ ಚುನಾವಣೆಯ ರಿಟರ್ನಿಂಗ್ ಅಧಿಕಾರಿ.

(ಸಿ) ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರು ಆ ರಾಜ್ಯದ ವಿಧಾನಪರಿಷತ್ತಿನಲ್ಲಿನ ಸ್ಥಾನವನ್ನು ತುಂಬಲು ಯಾವ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿರುವರೋ ಆ ವ್ಯಕ್ತಿಗೆ ಸಂಬಂಧಪಟ್ಟಂತೆ ಆ ಚುನಾವಣೆಯ ರಿಟರ್ನಿಂಗ್ ಅಧಿಕಾರಿ.

(1–ಎ) 'ಜಿಲ್ಲಾ ನ್ಯಾಯಾಧೀಶರು' ಮತ್ತು 'ನ್ಯಾಯಾಂಗ ಸೇವೆ' ಪದಗಳಿಗೆ ಭಾರತ ಸಂವಿಧಾನದ 236ನೇ ಅನುಚ್ಛೇದದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

(2) "ಲೋಕಸಭೆ", "ವಿಧಾನಸಭೆ" ಮತ್ತು "ರಾಜ್ಯಸಭೆ" ಪದಗಳಿಗೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43ರ) ರಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

**ಭಾರತ ಚುನಾವಣಾ ಆಯೋಗದ**
**ಕಾರ್ಯದರ್ಶಿಯವರ ಆದೇಶದ ಮೇರೆಗೆ**

## ಅಧಿಸೂಚನೆ 2: ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಾಗಿ

ದಿನಾಂಕ: 18ನೇ ಮಾರ್ಚ್ 1968

### ಅಧಿಸೂಚನೆ

**ಸಂಖ್ಯೆ: 3/6/68/(2)**–ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಅಧಿನಿಯಮ, 1963 ರ (1963 ರ ಸಂಖ್ಯೆ 20ರ) 4ನೆಯ ಪ್ರಕರಣದ (ಎ) ಖಂಡಕ್ಕೆ ಅನುಸಾರವಾಗಿ ಮತ್ತು 1967 ರ ಮೇ 2ನೇ ದಿನಾಂಕದ ಅಧಿಸೂಚನೆ ಸಂಖ್ಯೆ: 3/3/66ನ್ನು ರದ್ದುಪಡಿಸಿ, ಚುನಾವಣಾ ಆಯೋಗವು, (i) ಆಯಾ ರಿಟರ್ನಿಂಗ್ ಅಧಿಕಾರಿಯನ್ನು ಮತ್ತು ಅವರಿಗೆ ಅಧೀನರಾಗಿರುವ ಎಲ್ಲಾ ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಗಳನ್ನು (ii) ಎಲ್ಲಾ ಪ್ರಥಮ ದರ್ಜೆ ಸ್ಟೈಪೆಂಡರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರುಗಳನ್ನು ಹಾಗೂ (iii) ಎಲ್ಲಾ ಜಿಲ್ಲಾ ನ್ಯಾಯಾಧೀಶರುಗಳನ್ನು ಮತ್ತು ಜಿಲ್ಲಾ ನ್ಯಾಯಾಧೀಶರುಗಳನ್ನು ಹೊರತುಪಡಿಸಿ, ರಾಜ್ಯದ ನ್ಯಾಯಾಂಗ ಸೇವೆಯಲ್ಲಿರುವ ಎಲ್ಲಾ ವ್ಯಕ್ತಿಗಳನ್ನು, ಈ ಯಾರಾದರೊಬ್ಬರ ಮುಂದೆ, ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯಲ್ಲಿನ ಸ್ಥಾನವನ್ನು ತುಂಬಲು ಚುನಾವಣೆಗೆ ಅಭ್ಯರ್ಥಿಯಾಗಿ ("ಇದರಲ್ಲಿ ಇನ್ನು ಮುಂದೆ ಅಭ್ಯರ್ಥಿ ಎಂದು ಉಲ್ಲೇಖಿಸಲಾಗಿದೆ") ನಿಲ್ಲುವ ವ್ಯಕ್ತಿಯು, ಸದರಿ ಅಧಿನಿಯಮದ ಮೊದಲನೇ ಅನುಸೂಚಿಯಲ್ಲಿ ಪ್ರಮಾಣವಚನದ ಅಥವಾ ಪ್ರತಿಜ್ಞೆ ಉದ್ದೇಶಕ್ಕಾಗಿ ರೂಪಿಸಿರುವ ನಮೂನೆಯಲ್ಲಿ ಪ್ರತಿಜ್ಞೆ ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜುಹಾಕುವ ಸಲುವಾಗಿ ಅಧಿಕೃತಗೊಳಿಸಿದೆ.

2. ಮೇಲಿನ ಪ್ಯಾರ 1ರಲ್ಲಿ ಏನೇ ಒಳಗೊಂಡಿದ್ದರೂ ಸದರಿ ಪ್ರಕರಣದ (ಎ) ಖಂಡಕ್ಕೆ ಅನುಸಾರವಾಗಿ ಚುನಾವಣಾ ಆಯೋಗವು,–

(ಎ) ಅಭ್ಯರ್ಥಿಯು ಕಾರಾವಾಸದಲ್ಲಿ ಬಂಧನದಲ್ಲಿದ್ದರೆ ಕಾರಾವಾಸದ ಅಧೀಕ್ಷಕರನ್ನು,

(ಬಿ) ಅಭ್ಯರ್ಥಿಯು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿದ್ದರೆ ಸ್ಥಾನಬದ್ಧತೆ ಕ್ಯಾಂಪಿನ ಕಮಾಂಡೆಂಟರನ್ನು,

(ಸಿ) ಅಭ್ಯರ್ಥಿಯು ಆಸ್ಪತ್ರೆಯಲ್ಲಿ ರೋಗಿಯಾಗಿ ಹಾಸಿಗೆಯಲ್ಲಿದ್ದರೆ ಅಥವಾ ಅನಾರೋಗ್ಯದ ನಿಮಿತ್ತ ಅಥವಾ ಯಾವುದೇ ಇತರ ಕಾರಣಕ್ಕಾಗಿ ಬೇರೆ ಎಲ್ಲಿಯಾದರೂ ಇದ್ದರೆ ಆಸ್ಪತ್ರೆಯ ಪ್ರಭಾರದಲ್ಲಿರುವ ವೈದ್ಯಕೀಯ ಅಧೀಕ್ಷಕರನ್ನು ಅಥವಾ ಆ ವ್ಯಕ್ತಿಗೆ ಚಿಕಿತ್ಸೆ ನೀಡುತ್ತಿರುವ ಮೆಡಿಕಲ್ ಪ್ರಾಕ್ಟಿಷನರ್‌ನನ್ನು,

(ಡಿ) ಅಭ್ಯರ್ಥಿಯು ದೇಶದ ಹೊರಗಡೆ ಇದ್ದರೆ ಅಭ್ಯರ್ಥಿಯು ಇರುವ ದೇಶದಲ್ಲಿ ಭಾರತದ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯನ್ನು ಅಥವಾ ಅಂಥ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯಿಂದ ಅಧಿಕೃತಗೊಂಡಿರುವ ಯಾರೇ ವ್ಯಕ್ತಿಯನ್ನು,

(ಇ) ಅಭ್ಯರ್ಥಿಯು ಯಾವುದೇ ಕಾರಣಕ್ಕಾಗಿ ರಿಟರ್ನಿಂಗ್ ಅಧಿಕಾರಿಯ ಮುಂದೆ ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಯ ಮುಂದೆ ಮೇಲೆ ಹೇಳಿದಂತೆ ಹಾಜರಾಗಲು ಸಾಧ್ಯವಾಗದಿದ್ದರೆ ಅಥವಾ ಅಭ್ಯರ್ಥಿಯು ಹಾಜರಾಗದಂತೆ ತಡೆದಿದ್ದರೆ ಈ ಬಗ್ಗೆ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದಾಗ ಚುನಾವಣಾ ಆಯೋಗವು ನಿರ್ದೇಶನ ಮಾಡಿದ ಯಾರೇ ಇತರ ವ್ಯಕ್ತಿಯನ್ನು ಈ ಯಾರಾದರೊಬ್ಬರ ಮುಂದೆವ್ಯಕ್ತಿಯನ್ನು, ಸದರಿ ಪ್ರಮಾಣಪತ್ರವನ್ನು ಅಥವಾ ಪ್ರತಿಜ್ಞಾ ವಚನವನ್ನು ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜು ಹಾಕುವ ಸಲುವಾಗಿ ಅಧಿಕೃತಗೊಳಿಸಿದೆ.

**ವಿವರಣೆ**: ಈ ಅಧಿಸೂಚನೆಯಲ್ಲಿ–

(1) ಆಯಾ ರಿಟರ್ನಿಂಗ್ ಅಧಿಕಾರಿ ಎಂದರೆ,–
ವಿಧಾನಸಭೆಯಲ್ಲಿನ ಸ್ಥಾನವನ್ನು ತುಂಬಲು ಯಾವ ವ್ಯಕ್ತಿಯ ನಾಮನಿರ್ದೇಶನ ಆಗಿದೆಯೋ ಆ ವ್ಯಕ್ತಿಗೆ ಸಂಬಂಧಿಸಿದ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ.

(1–ಎ) 'ಜಿಲ್ಲಾ ನ್ಯಾಯಾಧೀಶರು' ಮತ್ತು 'ನ್ಯಾಯಾಂಗ ಸೇವೆ' ಪದಗಳಿಗೆ ಭಾರತ ಸಂವಿಧಾನದ 236ನೇ ಅನುಚ್ಛೇದದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

(2) **"ವಿಧಾನಸಭೆ"** ಚುನಾವಣಾ ಕ್ಷೇತ್ರ ಪದಗಳಿಗೆ ಕೇಂದ್ರಾಡಳಿತ ಪ್ರದೇಶದ ಸರ್ಕಾರ ಅಧಿನಿಯಮ, 1963ರ (1963ರ 20ರ) 2ನೇ ಪ್ರಕರಣದ (1)ನೆಯ ಉಪ–ಪ್ರಕರಣದ (ಸಿ) ಖಂಡದಲ್ಲಿ– ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

**ಭಾರತ ಚುನಾವಣಾ ಆಯೋಗದ**
**ಕಾರ್ಯದರ್ಶಿಯವರ ಆದೇಶದ ಮೇರೆಗೆ**

## ಅಧಿಸೂಚನೆ 3: ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ವಿಧಾನ ಸಭೆ

ದಿನಾಂಕ: 18ನೇ ಮಾರ್ಚ್ 1968

### ಅಧಿಸೂಚನೆ

**ಸಂಖ್ಯೆ: 3/6/68/(3)**–*ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರ ಸರ್ಕಾರ ಅಧಿನಿಯಮದ (1992ರ ಸಂಖ್ಯೆ 1ರ) 4ನೆಯ ಪ್ರಕರಣದ (ಎ) ಖಂಡಕ್ಕೆ ಅನುಸಾರವಾಗಿ ಮತ್ತು 1967 ರ ಮೇ 2ನೇ ದಿನಾಂಕದ ಅಧಿಸೂಚನೆ ಸಂಖ್ಯೆ: 3/3/66(1)ನ್ನು ರದ್ದುಪಡಿಸಿ, ಚುನಾವಣಾ ಆಯೋಗವು, (i) ಆಯಾ ರಿಟರ್ನಿಂಗ್ ಅಧಿಕಾರಿಯನ್ನು ಮತ್ತು ಅವರಿಗೆ ಅಧೀನರಾಗಿರುವ ಎಲ್ಲಾ ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಗಳನ್ನು (ii) ಎಲ್ಲಾ ಸ್ಟೈಪೆಂಡರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರುಗಳನ್ನು ಹಾಗೂ ಎಲ್ಲಾ ಪ್ರಥಮ ದರ್ಜೆ ಸ್ಟೈಪೆಂಡರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರುಗಳನ್ನು ಹಾಗೂ ಎಲ್ಲಾ ಜಿಲ್ಲಾ ನ್ಯಾಯಾಧೀಶರುಗಳನ್ನು ಮತ್ತು ಜಿಲ್ಲಾ ನ್ಯಾಯಾಧೀಶರುಗಳನ್ನು ಹೊರತುಪಡಿಸಿ ರಾಜ್ಯದ ನ್ಯಾಯಾಂಗ ಸೇವೆಯಲ್ಲಿರುವ ಎಲ್ಲಾ ವ್ಯಕ್ತಿಗಳನ್ನು, ಈ ಯಾರಾದರೊಬ್ಬರ ಮುಂದೆ, *ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ವಿಧಾನಸಭೆಯಲ್ಲಿನ ಸ್ಥಾನವನ್ನು ತುಂಬಲು ಚುನಾವಣೆಗೆ ಅಭ್ಯರ್ಥಿಯಾಗಿ ("ಇದರಲ್ಲಿ ಇನ್ನು ಮುಂದೆ ಅಭ್ಯರ್ಥಿ ಎಂದು ಉಲ್ಲೇಖಿಸಲಾಗಿದೆ") ನಿಲ್ಲುವ ವ್ಯಕ್ತಿಯು, ಸದರಿ ಅಧಿನಿಯಮದ ಅನುಸೂಚಿಯಲ್ಲಿ ಪ್ರಮಾಣವಚನದ ಅಥವಾ ಪ್ರತಿಜ್ಞೆ ಉದ್ದೇಶಕ್ಕಾಗಿ ರೂಪಿಸಿರುವ ನಮೂನೆಯಲ್ಲಿ ಪ್ರತಿಜ್ಞೆ ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜುಹಾಕುವ ಸಲುವಾಗಿ ಅಧಿಕೃತಗೊಳಿಸಿದೆ.

2. ಮೇಲಿನ ಪ್ಯಾರ 1ರಲ್ಲಿ ಏನೇ ಒಳಗೊಂಡಿದ್ದರೂ ಸದರಿ ಅಧಿನಿಯಮದ 4ನೆಯ ಪ್ರಕರಣದ (ಎ) ಖಂಡಕ್ಕೆ ಅನುಸಾರವಾಗಿ ಚುನಾವಣಾ ಆಯೋಗವು,–
   (ಎ) ಅಭ್ಯರ್ಥಿಯು ಕಾರಾವಾಸದಲ್ಲಿ ಬಂಧನದಲ್ಲಿದ್ದರೆ ಕಾರಾವಾಸದ ಅಧೀಕ್ಷಕರನ್ನು;
   (ಬಿ) ಅಭ್ಯರ್ಥಿಯು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿದ್ದರೆ ಸ್ಥಾನಬದ್ಧತೆ ಕ್ಯಾಂಪಿನ ಕಮಾಂಡೆಂಟರನ್ನು;
   (ಸಿ) ಅಭ್ಯರ್ಥಿಯು ಆಸ್ಪತ್ರೆಯಲ್ಲಿ ರೋಗಿಯಾಗಿ ಹಾಸಿಗೆಯಲ್ಲಿದ್ದರೆ ಅಥವಾ ಅನಾರೋಗ್ಯದ ನಿಮಿತ್ತ ಅಥವಾ ಯಾವುದೇ ಇತರ ಕಾರಣಕ್ಕಾಗಿ ಬೇರೆ ಎಲ್ಲಿಯಾದರೂ ಇದ್ದರೆ ಆಸ್ಪತ್ರೆಯ ಪ್ರಭಾರದಲ್ಲಿರುವ ವೈದ್ಯಕೀಯ ಅಧೀಕ್ಷಕರನ್ನು ಅಥವಾ ಆ ವ್ಯಕ್ತಿಗೆ ಚಿಕಿತ್ಸೆ ನೀಡುತ್ತಿರುವ ಮೆಡಿಕಲ್ ಪ್ರಾಕ್ಟಿಷನರ್‌ನನ್ನು;
   (ಡಿ) ಅಭ್ಯರ್ಥಿಯು ದೇಶದ ಹೊರಗಡೆ ಇದ್ದರೆ ಅಭ್ಯರ್ಥಿಯು ಇರುವ ದೇಶದಲ್ಲಿ ಭಾರತದ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯನ್ನು ಅಥವಾ ಅಂಥ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯಿಂದ ಅಧಿಕೃತಗೊಂಡಿರುವ ಯಾರೇ ವ್ಯಕ್ತಿಯನ್ನು;
   (ಇ) ಅಭ್ಯರ್ಥಿಯು ಯಾವುದೇ ಕಾರಣಕ್ಕಾಗಿ ರಿಟರ್ನಿಂಗ್ ಅಧಿಕಾರಿಯ ಮುಂದೆ ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಯ ಮುಂದೆ ಮೇಲೆ ಹೇಳಿದಂತೆ ಹಾಜರಾಗಲು ಸಾಧ್ಯವಾಗದಿದ್ದರೆ ಅಥವಾ ಅಭ್ಯರ್ಥಿಯು ಹಾಜರಾಗದಂತೆ ತಡೆದಿದ್ದರೆ ಈ ಬಗ್ಗೆ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದಾಗ ಚುನಾವಣಾ ಆಯೋಗವು ನಿರ್ದೇಶನ ಮಾಡಿದ ಯಾರೇ ಇತರ ವ್ಯಕ್ತಿಯನ್ನು ಈ ಯಾರಾದರೂ ಒಬ್ಬರ ಮುಂದೆವ್ಯಕ್ತಿಯನ್ನು ಸದರಿ ಪ್ರಮಾಣಪತ್ರವನ್ನು ಅಥವಾ ಪ್ರತಿಜ್ಞಾ ವಚನವನ್ನು ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜು ಹಾಕಲು ಸಲುವಾಗಿ ಅಧಿಕೃತಗೊಳಿಸಿದೆ.

ವಿವರಣೆ: ಈ ಅಧಿಸೂಚನೆಯಲ್ಲಿ–

(1) ಆಯಾ ರಿಟರ್ನಿಂಗ್ ಅಧಿಕಾರಿ ಎಂದರೆ,–

ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ವಿಧಾನಸಭೆಯಲ್ಲಿನ ಸ್ಥಾನವನ್ನು ತುಂಬಲು ಯಾವ ವ್ಯಕ್ತಿಯ ನಾಮ ನಿರ್ದೇಶನ ಆಗಿದೆಯೋ ಆ ವ್ಯಕ್ತಿಗೆ ಸಂಬಂಧಿಸಿದ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ.

(1–ಎ) 'ಜಿಲ್ಲಾ ನ್ಯಾಯಾಧೀಶರು' ಮತ್ತು 'ನ್ಯಾಯಾಂಗ ಸೇವೆ' ಪದಗಳಿಗೆ ಭಾರತ ಸಂವಿಧಾನದ 236ನೇ ಅನುಚ್ಛೇದದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

(2) "ವಿಧಾನಸಭೆ ಚುನಾವಣಾ ಕ್ಷೇತ್ರ" ಪದಗಳಿಗೆ ದೆಹಲಿ ರಾಷ್ಟ್ರೀಯ ರಾಜಧಾನಿ ಸರ್ಕಾರ ಅಧಿನಿಯಮ 1991 ರ 2ನೆಯ ಪ್ರಕರಣದ (ಬಿ) ಖಂಡದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

**ಭಾರತ ಚುನಾವಣಾ ಆಯೋಗದ**
**ಕಾರ್ಯದರ್ಶಿಯವರ ಆದೇಶದ ಮೇರೆಗೆ**

## ಅಧಿಸೂಚನೆ 4: ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಸಭೆ ಅಥವಾ ಪರಿಷತ್ತಿಗಾಗಿ

ದಿನಾಂಕ: 18ನೇ ಮಾರ್ಚ್ 1968

**ಅಧಿಸೂಚನೆ**

**ಸಂಖ್ಯೆ: 3/4/ಜೆ&ಕೆ/68**– ಜಮ್ಮು ಮತ್ತು ಕಾಶ್ಮೀರ ಸಂವಿಧಾನದ 51ನೇ ಪ್ರಕರಣ (ಎ) ಖಂಡಕ್ಕೆ ಅನುಸಾರವಾಗಿ ಮತ್ತು 1965 ರ ಮೇ 14ನೇ ದಿನಾಂಕದ ಅಧಿಸೂಚನೆ ಸಂಖ್ಯೆ: 3/4/ಜೆ&ಕೆ/65ನ್ನು ರದ್ದುಪಡಿಸಿ, ಚುನಾವಣಾ ಆಯೋಗವು,–

(i) ಆಯಾ ರಿಟರ್ನಿಂಗ್ ಅಧಿಕಾರಿಯನ್ನು ಮತ್ತು ಅವರಿಗೆ ಅಧೀನರಾಗಿರುವ ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಗಳನ್ನು;

(ii) ಎಲ್ಲಾ ಸ್ಟೈಪೆಂಡರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರುಗಳನ್ನು ಮತ್ತು ಎಲ್ಲ ಪ್ರಥಮ ದರ್ಜೆ ಸ್ಟೈಪೆಂಡರಿ ಮ್ಯಾಜಿಸ್ಟ್ರೇಟರುಗಳನ್ನು;

(iii) ಎಲ್ಲಾ ಜಿಲ್ಲಾ ನ್ಯಾಯಾಧೀಶರುಗಳನ್ನು ಮತ್ತು ರಾಜ್ಯದ ನ್ಯಾಯಾಂಗ ಸೇವೆಯಲ್ಲಿರುವ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಮತ್ತು ಜಿಲ್ಲಾ ನ್ಯಾಯಾಧೀಶರುಗಳನ್ನು ಹೊರತುಪಡಿಸಿ ಎಲ್ಲಾ ವ್ಯಕ್ತಿಗಳನ್ನು, ಈ ಯಾರಾದರೊಬ್ಬರ ಮುಂದೆ, ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಸಭೆಯಲ್ಲಿನ ಅಥವಾ ವಿಧಾನ ಪರಿಷತ್ತಿನಲ್ಲಿನ ಸ್ಥಾನವನ್ನು ತುಂಬಲು ಚುನಾವಣೆಗೆ ಅಭ್ಯರ್ಥಿಯಾಗಿ ("ಇದರಲ್ಲಿ ಇನ್ನು ಮುಂದೆ ಅಭ್ಯರ್ಥಿ ಎಂದು ಉಲ್ಲೇಖಿಸಲಾಗಿದೆ") ನಿಲ್ಲುವ ವ್ಯಕ್ತಿಯು, ಸದರಿ ಸಂವಿಧಾನದ ಮೊದಲನೇ ಅನುಸೂಚಿಯಲ್ಲಿ ಪ್ರಮಾಣವಚನದ ಅಥವಾ ಪ್ರತಿಜ್ಞೆ ಉದ್ದೇಶಕ್ಕಾಗಿ ರೂಪಿಸಿರುವ ನಮೂನೆಯಲ್ಲಿ ಪ್ರತಿಜ್ಞೆ ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜುಹಾಕುವ ಸಲುವಾಗಿ ಅಧಿಕೃತಗೊಳಿಸಿದೆ.

2. ಮೇಲಿನ ಪ್ಯಾರ 1ರಲ್ಲಿ ಏನೇ ಒಳಗೊಂಡಿದ್ದರೂ ಸದರಿ 51ನೇ ಪ್ರಕರಣದ (ಎ) ಖಂಡಕ್ಕೆ ಅನುಸಾರವಾಗಿ ಚುನಾವಣಾ ಆಯೋಗವು,–

(ಎ) ಅಭ್ಯರ್ಥಿಯು ಕಾರಾವಾಸದಲ್ಲಿ ಬಂಧನದಲ್ಲಿದ್ದರೆ ಕಾರಾವಾಸದ ಅಧೀಕ್ಷಕರನ್ನು;

(ಬಿ) ಅಭ್ಯರ್ಥಿಯು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿದ್ದರೆ ಸ್ಥಾನಬದ್ಧತೆ ಕ್ಯಾಂಪಿನ ಕಮಾಂಡೆಂಟರನ್ನು;

(ಸಿ) ಅಭ್ಯರ್ಥಿಯು ಆಸ್ಪತ್ರೆಯಲ್ಲಿ ರೋಗಿಯಾಗಿ ಹಾಸಿಗೆಯಲ್ಲಿದ್ದರೆ ಅಥವಾ ಅನಾರೋಗ್ಯದ ನಿಮಿತ್ತ ಅಥವಾ ಯಾವುದೇ ಇತರ ಕಾರಣಕ್ಕಾಗಿ ಬೇರೆ ಎಲ್ಲಿಯಾದರೂ ಇದ್ದರೆ ಆಸ್ಪತ್ರೆಯ ಪ್ರಭಾರದಲ್ಲಿರುವ ವೈದ್ಯಕೀಯ ಅಧೀಕ್ಷಕರನ್ನು ಅಥವಾ ಆ ವ್ಯಕ್ತಿಗೆ ಚಿಕಿತ್ಸೆ ನೀಡುತ್ತಿರುವಮೆಡಿಕಲ್ ಪ್ರಾಕ್ಟಿಷನರ್‌ನನ್ನು;

(ಡಿ) ಅಭ್ಯರ್ಥಿಯು ದೇಶದ ಹೊರಗಡೆ ಇದ್ದರೆ ಅಭ್ಯರ್ಥಿಯು ಇರುವ ದೇಶದಲ್ಲಿ ಭಾರತದ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯನ್ನು ಅಥವಾ ಅಂಥ ರಾಜತಾಂತ್ರಿಕ ಅಥವಾ ಕಾನ್ಸುಲರ್ ಪ್ರತಿನಿಧಿಯಿಂದ ಅಧಿಕೃತಗೊಂಡಿರುವ ಯಾರೇ ವ್ಯಕ್ತಿಯನ್ನು;

(ಇ) ಅಭ್ಯರ್ಥಿಯು ಯಾವುದೇ ಕಾರಣಕ್ಕಾಗಿ ರಿಟರ್ನಿಂಗ್ ಅಧಿಕಾರಿಯ ಮುಂದೆ ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಯ ಮುಂದೆ ಮೇಲೆ ಹೇಳಿದಂತೆ ಹಾಜರಾಗಲು ಸಾಧ್ಯವಾಗದಿದ್ದರೆ ಅಥವಾ ಅಭ್ಯರ್ಥಿಯು ಹಾಜರಾಗದಂತೆ ತಡೆದಿದ್ದರೆ ಈ ಬಗ್ಗೆ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದಾಗ ಚುನಾವಣಾ ಆಯೋಗವು ನಿರ್ದೇಶನ ಮಾಡಿದ ಯಾರೇ ಇತರ ವ್ಯಕ್ತಿಯನ್ನು ಈ ಯಾರಾದರೂ ಒಬ್ಬವ್ಯಕ್ತಿಯ ಮುಂದೆ ಸದರಿ ಪ್ರಮಾಣಪತ್ರವನ್ನು ಅಥವಾ ಪ್ರತಿಜ್ಞಾ ವಚನವನ್ನು ಮಾಡುವ ಸಲುವಾಗಿ ಮತ್ತು ಅದಕ್ಕೆ ರುಜು ಹಾಕುವ ಸಲುವಾಗಿ ಅಧಿಕೃತಗೊಳಿಸಿದೆ.

ವಿವರಣೆ: ಈ ಅಧಿಸೂಚನೆಯಲ್ಲಿ–

(1) ಆಯಾ ರಿಟರ್ನಿಂಗ್ ಅಧಿಕಾರಿ ಎಂದರೆ –

(ಎ) ವಿಧಾನಸಭೆಯಲ್ಲಿನ ಅಥವಾ ವಿಧಾನಪರಿಷತ್ತಿನಲ್ಲಿ ಸ್ಥಾನವನ್ನು ತುಂಬಲು ಯಾವ ವ್ಯಕ್ತಿಯ ನಾಮನಿರ್ದೇಶನ ಆಗಿದೆಯೋ ಆ ವ್ಯಕ್ತಿಗೆ ಸಂಬಂಧಿಸಿದ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ.

(ಬಿ) ರಾಜ್ಯದ ವಿಧಾನಸಭೆಯಲ್ಲಿನ ಸ್ಥಾನವನ್ನು ತುಂಬಲು ಯಾವ ಅಭ್ಯರ್ಥಿಯ ನಾಮ ನಿರ್ದೇಶನ ಆಗಿದೆಯೋ ಆ ವ್ಯಕ್ತಿಗೆ ಸಂಬಂಧಪಟ್ಟಂತೆ ಆ ಚುನಾವಣೆಯ ರಿಟರ್ನಿಂಗ್ ಅಧಿಕಾರಿ.

(1–ಎ) 'ಜಿಲ್ಲಾ ನ್ಯಾಯಾಧೀಶರು' ಮತ್ತು 'ನ್ಯಾಯಾಂಗ ಸೇವೆ' ಪದಗಳಿಗೆ ಜಮ್ಮು ಮತ್ತು ಕಾಶ್ಮೀರ ಸಂವಿಧಾನದ 112ನೇ ಪ್ರಕರಣದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

(2) "ವಿಧಾನಸಭಾ ಚುನಾವಣಾ ಕ್ಷೇತ್ರ" ಮತ್ತು "ವಿಧಾನ ಪರಿಷತ್ ಚುನಾವಣೆ ಕ್ಷೇತ್ರ" ಪದಗಳಿಗೆ ಜಮ್ಮು ಮತ್ತು ಕಾಶ್ಮೀರ ಜನತಾ ಪ್ರಾತಿನಿಧ್ಯ ಅಧಿನಿಯಮ, 1957 ರಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

**ಭಾರತ ಚುನಾವಣಾ ಆಯೋಗದ**
**ಕಾರ್ಯದರ್ಶಿಯವರ ಆದೇಶದ ಮೇರೆಗೆ**

**ಪರಿಶಿಷ್ಟ–6**

**(ಅಧ್ಯಾಯ–3, ಪ್ಯಾರಾ 3.3.1)**

**ನಮೂನೆ –2ಎ**
**(4ನೇ ನಿಯಮವನ್ನು ನೋಡಿ)**
**ನಾಮಪತ್ರ**
ಲೋಕಸಭೆಗೆ ಚುನಾವಣೆ

| |
|---|
| ಬಿಳಿ/ಮಾಸಲು ಬಿಳಿ ಹಿನ್ನೆಲೆಯಲ್ಲಿ ಪೂರ್ಣವಾಗಿ ಮುಖವು ಕಾಣುವಂತೆ ಇರುವ ಇತ್ತೀಚಿನ ಸ್ಟಾಂಪ್ ಅಳತೆಯ (2 ಸೆಂ.ಮೀ x 2.5 ಸೆಂ.ಮೀ) ಭಾವಚಿತ್ರವನ್ನು ಲಗತ್ತಿಸಬೇಕು. |

**ಕೆಳಕಂಡ ಯಾವುದಾದರೂ ಅನ್ವಯವಾಗದಿರುವಂಥ ಭಾಗ –I ಅಥವಾ ಭಾಗ –II ನ್ನು ಹೊಡೆದುಹಾಕುವುದು**

**ಭಾಗ –I**

(ಮಾನ್ಯತೆ ಪಡೆದ ರಾಜಕೀಯ ಪಕ್ಷದ ಅಭ್ಯರ್ಥಿಯು ಬಳಸಬೇಕಾದುದು)

ನಾನು -------------- ಲೋಕಸಭಾ ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ಅಭ್ಯರ್ಥಿಯಾಗಿ ನಾಮಪತ್ರವನ್ನು ಸಲ್ಲಿಸಿದ್ದೇನೆ.

ಅಭ್ಯರ್ಥಿಯ ಹೆಸರು ------------ ತಂದೆ/ ತಾಯಿ/ ಪತಿಯ ಹೆಸರು----------- ಅಭ್ಯರ್ಥಿಯ ಅಂಚೆ ವಿಳಾಸ ----------------------------------------ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ --------- ವಿಧಾನಸಭಾ ಕ್ಷೇತ್ರಕ್ಕೆ *(ವ್ಯಾಪ್ತಿಯಲ್ಲಿರುವ ವಿಧಾನಸಭಾ ಚುನಾವಣಾ ಕ್ಷೇತ್ರ) -------------- ಮತದಾರರ ಪಟ್ಟಿಗಳ ಭಾಗ ಸಂ.ಯಲ್ಲಿನ -------- ಕ್ರ.ಸಂ. -----------ಯಲ್ಲಿ ಅದನ್ನು ನಮೂದಿಸಲಾಗಿದೆ.

ನನ್ನ ಹೆಸರು ----------------- ಆಗಿದ್ದು ಮತ್ತು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ --------- ವಿಧಾನಸಭಾ ಕ್ಷೇತ್ರಕ್ಕೆ *(ವ್ಯಾಪ್ತಿಯಲ್ಲಿರುವ ವಿಧಾನಸಭಾ ಚುನಾವಣಾ ಕ್ಷೇತ್ರ) --- ----------- ಮತದಾರರ ಪಟ್ಟಿಗಳ ಭಾಗ ಸಂ.ಯಲ್ಲಿನ -------- ಕ್ರ.ಸಂ. ------------ಯಲ್ಲಿ ಅದನ್ನು ನಮೂದಿಸಲಾಗಿದೆ.

ದಿನಾಂಕ: -------------------                                  -------------
-

(ಸೂಚಕರ ಸಹಿ)

## ಭಾಗ –II
### (ಮಾನ್ಯತೆ ಪಡೆದ ರಾಜಕೀಯ ಪಕ್ಷಕ್ಕೆ ಸೇರಿರದ ಅಭ್ಯರ್ಥಿಯು ಬಳಸಬೇಕಾದುದು)

ನಾನು -------------- ಲೋಕಸಭಾ ಸಂಸತ್ತಿನ ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ಅಭ್ಯರ್ಥಿಯಾಗಿ ಈ ಮೂಲಕ ನಾಮಪತ್ರವನ್ನು ಸಲ್ಲಿಸಿದ್ದೇನೆ.

ಅಭ್ಯರ್ಥಿಯ ಹೆಸರು ------------ ತಂದೆ/ ತಾಯಿ/ ಪತಿಯ ಹೆಸರು----------- ಅಭ್ಯರ್ಥಿಯ ಅಂಚೆ ವಿಳಾಸ ----------------------------------------ಲೋಕಸಭಾ ಕ್ಷೇತ್ರದ --------- + (ವ್ಯಾಪ್ತಿಯಲ್ಲಿರುವ ವಿಧಾನಸಭಾ ಕ್ಷೇತ್ರಕ್ಕೆ) -------------- ಮತದಾರರ ಪಟ್ಟಿಗಳ ಭಾಗ ಸಂ.ಯಲ್ಲಿನ -------- ಕ್ರ.ಸಂ. -------- ಯಲ್ಲಿ ಅದನ್ನು ನಮೂದಿಸಲಾಗಿದೆ.

ಮೇಲ್ಕಂಡ ಲೋಕಸಭಾ ಕ್ಷೇತ್ರದ ಮತದಾರರೆಂದು ಮತ್ತು ಆ ಲೋಕಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನಮ್ಮ ಹೆಸರುಗಳನ್ನು ಕೆಳಗೆ ಸೂಚಿಸಿದಂತೆ ನಮೂದಿಸಲಾಗಿದೆ ಎಂಬುದಾಗಿ ಘೋಷಿಸಿದ್ದೇವೆ ಮತ್ತು ಈ ನಾಮಪತ್ರಕ್ಕೆ ರುಜುಮಾಡುವ ಗುರುತಾಗಿ ನಮ್ಮ ಸಹಿಗಳನ್ನು ಈ ಕೆಳಗೆ ಸೇರಿಸಿದ್ದೇವೆ:–

**ಪ್ರಸ್ತಾಪ ಮಾಡುವವರ ವಿವರಗಳು ಮತ್ತು ಅವರ ಸಹಿ**

| ಕ್ರ.ಸಂ. | ವಿಧಾನಸಭಾ ಕ್ಷೇತ್ರದ ಭಾಗದ ಹೆಸರು | ಪ್ರಸ್ತಾಪಿತರ ಮತದಾರ ಪಟ್ಟಿಸಂ. | | ಪೂರ್ಣಹೆಸರು | ಸಹಿ | ದಿನಾಂಕ |
|---|---|---|---|---|---|---|
| | | ಮತದಾರರ ಪಟ್ಟಿಯ ಭಾಗ ಸಂ. | ಆ ಭಾಗದಲ್ಲಿನ ಕ್ರ.ಸಂ. | | | |
| 1 | 2 | 3 | 4 | 5 | 6 | 7 |
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |
| 6 | | | | | | |
| 7 | | | | | | |
| 8 | | | | | | |
| 9 | | | | | | |
| 10 | | | | | | |

**ವಿ.ಸೂ.:** ಕ್ಷೇತ್ರದ ಹತ್ತು ಮತದಾರರು ಸೂಚಕರಾಗಿರಬೇಕು.

## ಭಾಗ –III

ಅಭ್ಯರ್ಥಿಯಾಗಿರುವ ನಾನು, ಭಾಗ–I/ ಭಾಗ–IIರಲ್ಲಿನ (ಅನ್ವಯವಾಗದಿರುವುಗಳನ್ನು ಹೊಡೆದುಹಾಕಿ) ನಾಮಪತ್ರಕ್ಕೆ ಒಪ್ಪಿದ್ದೇನೆ ಮತ್ತು ಈ ಮೂಲಕ ಘೋಷಿಸುವುದೇನೆಂದರೆ:–

(ಎ) ನಾನು ಭಾರತೀಯ ನಾಗರಿಕನಾಗಿದ್ದೇನೆ ಮತ್ತು ಯಾವುದೇ ವಿದೇಶದ ನಾಗರಿಕತ್ವವನ್ನು ಪಡೆದುಕೊಂಡಿಲ್ಲ.

(ಬಿ) ನಾನು –––––– ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದ್ದೇನೆ;

**[ಸಿ(i) ಅಥವಾ ಸಿ(ii)- ಇವುಗಳಲ್ಲಿ ಅನ್ವಯವಾಗದಿರುವವುಗಳನ್ನು ಹೊಡೆದುಹಾಕಿ]**

(ಸಿ) (i) ರಾಜ್ಯದಲ್ಲಿ ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷ/ ರಾಜ್ಯ ಪಕ್ಷವಾದ –––––– ರಾಜಕೀಯ ಪಕ್ಷದಿಂದ ನಾನು ಈ ಚುನಾವಣೆಗೆ ನಿಲ್ಲುತ್ತಿದ್ದೇನೆ ಮತ್ತು ಮೇಲಿನ ಪಕ್ಷಕ್ಕಾಗಿ ಮೀಸಲಿರಿಸಿದ ಚಿಹ್ನೆಯು ನನಗೆ ಹಂಚಿಕೆಯಾಗಿದೆ.

**ಅಥವಾ**

(ಸಿ) (ii) ನೋಂದಾಯಿತ– ಮಾನ್ಯತೆ ಪಡೆಯದ ರಾಜಕೀಯ ಪಕ್ಷವಾದ ––––––– ದಿಂದ ನಾನು ಈ ಚುನಾವಣೆಗೆ ನಿಲ್ಲುತ್ತಿದ್ದೇನೆ/ ನಾನು ಪಕ್ಷೇತರ ಅಭ್ಯರ್ಥಿಯಾಗಿ ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ. (ಅನ್ವಯವಾಗದಿರುವವುಗಳನ್ನು ಹೊಡೆದುಹಾಕಿ) ಮತ್ತು ಆದ್ಯತೆಯ ಕ್ರಮವಾಗಿ ನಾನು ಚಿಹ್ನೆಗಳನ್ನು ಆಯ್ಕೆಮಾಡಿಕೊಂಡಿದ್ದೇನೆ. ಅವು,–

(i) ........................ (ii) ............................ (iii) ................................

(ಡಿ) ಮೇಲೆ –––– ರಲ್ಲಿ (ಭಾಷೆಯ ಹೆಸರು) ನನ್ನ ಹೆಸರು ಮತ್ತು ನನ್ನ ತಂದೆ/ತಾಯಿ/ ಪತಿಯ ಹೆಸರನ್ನು ಸ್ಪಷ್ಟವಾಗಿ ಉಚ್ಚರಿಸಲಾಗಿದೆ;

(ಇ) ನನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಿಗೆ, ಲೋಕಸಭೆಯಲ್ಲಿ ಸ್ಥಾನವನ್ನು ಭರ್ತಿಮಾಡಲು ಆಯ್ಕೆ ಮಾಡಿಕೊಳ್ಳುವುದಕ್ಕಾಗಿ ನಾನು ಅರ್ಹನಾಗಿದ್ದೇನೆ ಮತ್ತು ಅನರ್ಹಗೊಂಡಿಲ್ಲವೆಂದು ಸಹ ಘೋಷಿಸುತ್ತೇನೆ.

*ನಾನು –––––––– ರಾಜ್ಯದಲ್ಲಿನ –––––––– (ಪ್ರದೇಶ)ಕ್ಕೆ ಸಂಬಂಧಿಸಿದಂತೆ ಆ ರಾಜ್ಯದ ಪರಿಶಿಷ್ಟ **ಜಾತಿ/ ಪಂಗಡವಾಗಿರುವಂಥ ––––––– **ಜಾತಿ/ ಪಂಗಡದ ಸದಸ್ಯನಾಗಿದ್ದೇನೆಂದು ಸಹ ಘೋಷಿಸುತ್ತೇನೆ.

ನಾನು ಎರಡಕ್ಕಿಂತ ಹೆಚ್ಚಿನ ಲೋಕಸಭಾ ಕ್ಷೇತ್ರಗಳಿಂದ ಲೋಕಸಭೆಗೆ ಏಕಕಾಲಕ್ಕೆ **ಸಾರ್ವತ್ರಿಕ ಚುನಾವಣೆ/ ಉಪ–ಚುನಾವಣೆಗಳಲ್ಲಿ ಅಭ್ಯರ್ಥಿಯಾಗಿ ಪ್ರಸ್ತುತ ನಾಮಪತ್ರವನ್ನು ಸಲ್ಲಿಸಿಲ್ಲ ಮತ್ತು ಸಲ್ಲಿಸುವುದಿಲ್ಲವೆಂದೂ ನಾನು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ...........................                                        ಅಭ್ಯರ್ಥಿಯ ಸಹಿ ............

+ ಜಮ್ಮು ಮತ್ತು ಕಾಶ್ಮೀರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಚಂಡೀಗಢ, ದಾದ್ರಾ ಮತ್ತು ನಗರ್ ಹವೇಲಿ, ಡಮನ್ ಮತ್ತು ಡಿಯು ಮತ್ತು ಲಕ್ಷದ್ವೀಪದ ಸಂದರ್ಭದಲ್ಲಿ "…. ವ್ಯಾಪ್ತಿಯೊಳಗೆ ಸೇರಿರುವ ವಿಧಾನಸಭಾ ಕ್ಷೇತ್ರ" ಎಂಬ ಪದಗಳನ್ನು ಗೆರೆಹಾಕಿ ಹೊಡೆದುಹಾಕುವುದು.

* ಅನ್ವಯವಾಗದಿದ್ದಲ್ಲಿ, ಈ ಕಂಡಿಕೆಯನ್ನು ಹೊಡೆದುಹಾಕುವುದು
** ಅನ್ವಯವಾಗದಿರುವ ಪದಗಳನ್ನು ಹೊಡೆದುಹಾಕುವುದು.

**ವಿ.ಸೂ.:** "ಮಾನ್ಯತೆ ಪಡೆದ ರಾಜಕೀಯ ಪಕ್ಷ" ಎಂದರೆ ಸಂಬಂಧಪಟ್ಟ ರಾಜ್ಯದಲ್ಲಿ ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ ಮೇರೆಗೆ ಚುನಾವಣಾ ಆಯೋಗವು ಮಾನ್ಯತೆ ನೀಡಿದ ರಾಜಕೀಯ ಪಕ್ಷ.

## ಭಾಗ – IIIಎ
## (ಅಭ್ಯರ್ಥಿಯು ಭರ್ತಿಮಾಡಬೇಕಾದುದು)

ಅಭ್ಯರ್ಥಿಯು –

(i) ಅಪರಾಧಿಯೆಂದು ನಿರ್ಣಯಿತನಾಗಿರುವನೇ–

(ಎ) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧ(ಗಳ); ಅಥವಾ

(ಬಿ) ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43) ರ 8ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾನೂನನ್ನು ಉಲ್ಲಂಘಿಸಿರುವುದಕ್ಕಾಗಿ; ಅಥವಾ

ಹೌದು/ ಇಲ್ಲ

(ii) ಯಾವುದೇ ಇತರ ಅಪರಾಧಗಳಿಗೆ ಎರಡು ವರ್ಷಗಳು ಅಥವಾ ಹೆಚ್ಚಿನ ಅವಧಿಯ ಕಾರಾವಾಸ ಶಿಕ್ಷೆಗೆ ಗುರಿಯಾಗಿರುವುದಕ್ಕಾಗಿ ಅಪರಾಧಿಯೆಂದು ನಿರ್ಣಯಿತನಾಗಿರುವುದು.

ಉತ್ತರ "ಹೌದು" ಎಂದಾದಲ್ಲಿ, ಅಭ್ಯರ್ಥಿಯು ಈ ಮುಂದಿನ ಮಾಹಿತಿಯನ್ನು ಒದಗಿಸತಕ್ಕದ್ದು:

(i) ಪ್ರಕರಣ/ ಪ್ರಥಮ ಮಾಹಿತಿ ವರದಿ ಸಂ./ ಸಂಖ್ಯೆಗಳು............

(ii) ಪೊಲೀಸ್ ಠಾಣೆ (ಗಳು) ............ಜಿಲ್ಲೆ (ಗಳು) ............ ರಾಜ್ಯ (ಗಳು) ...........

(iii) ಆತ ಅಪರಾಧಿಯೆಂದು ನಿರ್ಣೀತನಾಗಿರುವುದಕ್ಕಾಗಿ ಸಂಬಂಧಪಟ್ಟ ಅಧಿನಿಯಮ(ಗಳ)ದ ಪ್ರಕರಣ (ಗಳು) ಮತ್ತು ಅಪರಾಧ(ಗಳ) ಸಂಕ್ಷಿಪ್ತ ವಿವರ............

(iv) ಅಪರಾಧ(ಗಳ) ದಿನಾಂಕ(ಗಳು) ............

(v) ಅಭ್ಯರ್ಥಿಯನ್ನು ಅಪರಾಧಿ ಎಂದು ನಿರ್ಣಯಿಸಿದ ನ್ಯಾಯಾಲಯ(ಗಳು)............

(vi) ವಿಧಿಸಲಾದ ಶಿಕ್ಷೆ(ಗಳು) [ಕಾರಾವಾಸ ಶಿಕ್ಷೆ (ಗಳ) ಯ ಅವಧಿ ಮತ್ತು/ ಅಥವಾ ನಿರ್ಣಯಿಸಿದ ಪ್ರಮಾಣ(ಗಳ)ನ್ನು ಸೂಚಿಸುವುದು............

(vii) ಕಾರಾಗೃಹದಿಂದ ಬಿಡುಗಡೆಯಾದ ದಿನಾಂಕ(ಗಳು)............

(viii) ಮೇಲಿನ ಅಪರಾಧ ನಿರ್ಣಯ(ಗಳು)ದ ವಿರುದ್ಧ ಯಾವುದೇ ಅಪೀಲು(ಗಳು)/ ಪುನರೀಕ್ಷಣೆ (ಗಳು) ಅನ್ನು ದಾಖಲಿಸಲಾಗಿತ್ತೇ/ಲಾಗಿವೆಯೇ

(ix) ಪುನರೀಕ್ಷಣೆಗಾಗಿ ದಾಖಲಿಸಿದ ಅಪೀಲು(ಗಳು)/ ಅರ್ಜಿ(ಗಳು)ಯ ದಿನಾಂಕ ಮತ್ತು ವಿವರಗಳು............

(x) ಪುನರೀಕ್ಷಣೆಗಾಗಿ ಅಪೀಲು(ಗಳು)/ ಅರ್ಜಿಗಳನ್ನು ದಾಖಲಿಸಿದ ನ್ಯಾಯಾಲಯ(ಗಳ) ಹೆಸರು............

(xi) ಪುನರೀಕ್ಷಣೆಗಾಗಿ ದಾಖಲಿಸಿದ ಸದರಿ ಅಪೀಲು(ಗಳು)/ ಅರ್ಜಿ(ಗಳ)ನ್ನು ವಿಲೆ ಮಾಡಲಾಗಿದೆಯೇ ಅಥವಾ ಇತ್ಯರ್ಥದಲ್ಲಿದೆಯೇ........... ಹೌದು/ ಇಲ್ಲ

(xii) ಪುನರೀಕ್ಷಣೆಗಾಗಿ ದಾಖಲಿಸಿದ ಸದರಿ ಅಪೀಲು(ಗಳು)/ ಅರ್ಜಿ(ಗಳ)ನ್ನು ವಿಲೆ ಮಾಡಿದ್ದಲ್ಲಿ

ಎ. ವಿಲೆಯ ದಿನಾಂಕ(ಗಳು)...........

ಬಿ. ಅಂಗೀಕರಿಸಿದ ಆದೇಶದ ಸ್ವರೂಪ...........

(2) ಅಭ್ಯರ್ಥಿಯು ಭಾರತ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಯಾವುದೇ ಲಾಭಧಾಯಕ ಹುದ್ದೆಯನ್ನು ಹೊಂದಿದ್ದಾರೆಯೇ? ------------- (ಹೌದು/ ಇಲ್ಲ)
- ಹೌದು ಎಂದಾದರೆ, ಹೊಂದಿರುವ ಹುದ್ದೆಯ ವಿವರ-------------

(3) ಅಭ್ಯರ್ಥಿಯನ್ನು ಯಾವುದೇ ನ್ಯಾಯಾಲಯದಿಂದ ದಿವಾಳಿಯೆಂದು ಘೋಷಿಸಲಾಗಿದೆಯೇ? ----------- (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ------ ದಿಂದ ದಿವಾಳಿಯಾಗಿದ್ದಾನೆ

(4) ಅಭ್ಯರ್ಥಿಯು ಯಾವುದೇ ವಿದೇಶಕ್ಕೆ ನಿಷ್ಠೆ ಅಥವಾ ಬದ್ಧತೆಯನ್ನು ಹೊಂದಿರುವನೇ? ಹೌದು/ ಇಲ್ಲ)
- ಹೌದು ಎಂದಾದಲ್ಲಿ, ವಿವರಗಳನ್ನು ನೀಡಿರಿ----------------
-

(5) ಅಭ್ಯರ್ಥಿಯು ಸದರಿ ಅಧಿನಿಯಮದ 8ಎ ಪ್ರಕರಣದ ಅಡಿಯಲ್ಲಿ ರಾಷ್ಟ್ರಪತಿಯವರ ಆದೇಶದ ಮೂಲಕ ಅನರ್ಹಗೊಂಡಿರುವನೇ? ----------- (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ಅನರ್ಹನಾಗಿದ್ದಂಥ ಅವಧಿ.

(6) ಅಭ್ಯರ್ಥಿಯು ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಅಡಿಯಲ್ಲಿ ಯಾವುದೇ ಹುದ್ದೆಯಲ್ಲಿದ್ದಾಗ ಭ್ರಷ್ಟಾಚಾರ ಅಥವಾ ಅವಿಧೇಯತೆಯ ಕಾರಣಕ್ಕಾಗಿ ವಜಾಗೊಂಡಿದ್ದನೆ? ----------- (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ಹಾಗೆ ವಜಾಗೊಂಡ ದಿನಾಂಕ -----------

(7) ಅಭ್ಯರ್ಥಿಯು ಸರ್ಕಾರಕ್ಕೆ ಯಾವುದೇ ಸರಕುಗಳನ್ನು ಪೂರೈಸುವುದಕ್ಕಾಗಿ ಅಥವಾ ಸರ್ಕಾರವು ಕೈಗೊಳ್ಳುವಂಥ ಕಾಮಗಾರಿಗಳ ಅನುಷ್ಠಾನಕ್ಕಾಗಿ ತನಗೆ ಪಾಲು ಬರುವಂತೆ ಅಂಥ ಸರ್ಕಾರದೊಂದಿಗೆ ವ್ಯಕ್ತಿಗತವಾಗಿ ಇಲ್ಲವೇ ಟ್ರಸ್ಟ್ ಮೂಲಕ ಅಥವಾ ಪಾಲುದಾರನಾಗಿ ಪ್ರಸ್ತುತದಲ್ಲಿ ಯಾವುದೇ ಕರಾರನ್ನು (ಗಳನ್ನು) ಮಾಡಿಕೊಂಡಿದ್ದಾನೆಯೇ ------ (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ಯಾವ ಸರ್ಕಾರದೊಂದಿಗೆ ಮತ್ತು ಚಾಲ್ತಿಯಲ್ಲಿರುವ ಕರಾರಿನ (ಗಳನ್ನು) ವಿವರಗಳು ------------

(8) ಅಭ್ಯರ್ಥಿಯು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಷೇರನ್ನು ಹೊಂದಿರುವ ಯಾವುದೇ ಕಂಪನಿ ಅಥವಾ ನಿಗಮದ (ಸಹಕಾರ ಸಂಘವನ್ನು

ಹೊರತುಪಡಿಸಿ) ವ್ಯವಸ್ಥಾಪಕ ಏಜೆಂಟ್ ಅಥವಾ ವ್ಯವಸ್ಥಾಪಕ ಅಥವಾ ಕಾರ್ಯದರ್ಶಿಯಾಗಿದ್ದಾನೆಯೇ-------------- (ಹೌದು/ ಇಲ್ಲ)

– ಹೌದು ಎಂದಾದಲ್ಲಿ, ಯಾವ ಸರ್ಕಾರದೊಂದಿಗೆ ಮತ್ತು ಅದರ ವಿವರಗಳು –

(9) ಅಭ್ಯರ್ಥಿಯು ಸದರಿ ಅಧಿನಿಯಮದ 10ಎ ಪ್ರಕರಣದ ಅಡಿಯಲ್ಲಿ ಆಯೋಗದಿಂದ ಅನರ್ಹಗೊಂಡಿದ್ದಾನೆ? -------------- (ಹೌದು/ ಇಲ್ಲ)

– ಹೌದು ಎಂದಾದಲ್ಲಿ, ಹಾಗೆ ಅನರ್ಹಗೊಂಡ ದಿನಾಂಕ --------------

ಸ್ಥಳ: -------------

ದಿನಾಂಕ: -------------- ಅಭ್ಯರ್ಥಿಯ ಸಹಿ

## ಭಾಗ– IV

(ರಿಟರ್ನಿಂಗ್ ಅಧಿಕಾರಿಯವರು ಭರ್ತಿ ಮಾಡಬೇಕು)

ನಾಮಪತ್ರದ ಕ್ರಮಸಂಖ್ಯೆ ____________________

ಈ ನಾಮಪತ್ರವನ್ನು *ಅಭ್ಯರ್ಥಿ/ ಸೂಚಕರು (ಸೂಚಕರ ಹೆಸರು) ____________ (ದಿನಾಂಕ)ದಂದು __________ (ಗಂಟೆ)ಗೆ ನನ್ನ ಕಚೇರಿಯಲ್ಲಿ ನನಗೆ ತಲುಪಿಸಿದ್ದಾರೆ.

ದಿನಾಂಕ__________________

ರಿಟರ್ನಿಂಗ್ ಅಧಿಕಾರಿ

## ಭಾಗ–V

**ನಾಮಪತ್ರವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಬಗ್ಗೆ ರಿಟರ್ನಿಂಗ್ ಅಧಿಕಾರಿಯವರ ತೀರ್ಮಾನ**

ನಾನು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 36ನೇ ಪ್ರಕರಣದ (1951ರ 43) ಅನುಸಾರವಾಗಿ ಈ ನಾಮಪತ್ರವನ್ನು ಪರಿಶೀಲಿಸಿದ್ದೇನೆ ಮತ್ತು ಈ ಮುಂದಿನಂತೆ ತೀರ್ಮಾನಿಸಿದ್ದೇನೆ---------.

ದಿನಾಂಕ__________________

ರಿಟರ್ನಿಂಗ್ ಅಧಿಕಾರಿ

(ರಂಧ್ರೀಕರಣ/Perforation) ________________________________

## ಭಾಗ–VI

**ನಾಮಪತ್ರದ ಸ್ವೀಕೃತಿ ಮತ್ತು ಪರಿಶೀಲನೆಯ ನೋಟೀಸು**
(ನಾಮಪತ್ರವನ್ನು ಸಲ್ಲಿಸುವ ವ್ಯಕ್ತಿಗೆ ನೀಡಬೇಕಾದುದು)

ನಾಮಪತ್ರದ ಕ್ರಮಸಂಖ್ಯೆ____________________________________

__________________ ಲೋಕಸಭಾ ಕ್ಷೇತ್ರದಿಂದ ಚುನಾವಣೆಯ ಅಭ್ಯರ್ಥಿಯಾದ __________ ಇವರ ನಾಮಪತ್ರವನ್ನು ________________ (ದಿನಾಂಕ)ದಂದು __________ (ಗಂಟೆ)ಗೆ ನನ್ನ ಕಚೇರಿಯಲ್ಲಿ ಅಭ್ಯರ್ಥಿ/ಸೂಚಕರು ನನಗೆ ಒಪ್ಪಿಸಿದ್ದಾರೆ. ಎಲ್ಲಾ ನಾಮಪತ್ರಗಳನ್ನು ________ ದಲ್ಲಿ (ಸ್ಥಳ)_____________ರಂದು (ದಿನಾಂಕ) __________ (ಗಂಟೆ)ಗೆ ಪರಿಶೀಲನೆಗಾಗಿ ತೆಗೆದುಕೊಳ್ಳಲಾಗುವುದು.

ದಿನಾಂಕ____________________

ರಿಟರ್ನಿಂಗ್ ಅಧಿಕಾರಿ

* ಸೂಕ್ತವಲ್ಲದ ಪದವನ್ನು ಹೊಡೆದುಹಾಕಿ.

**ಪರಿಶಿಷ್ಟ 7**

**(ಅಧ್ಯಾಯ–3, ಪ್ಯಾರಾ 3.3.1)**
**ನಮೂನೆ –2ಬಿ**
**(4ನೇ ನಿಯಮವನ್ನು ನೋಡಿ)**
**ನಾಮಪತ್ರ**

---------- (ರಾಜ್ಯ)ದ ವಿಧಾನಸಭೆಗೆ ಚುನಾವಣೆ

| |
|---|
| ಬಿಳಿ/ಮಾಸಲು ಬಿಳಿ ಹಿನ್ನೆಲೆಯಲ್ಲಿ ಪೂರ್ಣವಾಗಿ ಮುಖವು ಕಾಣುವಂತೆ ಇರುವ ಇತ್ತೀಚಿನ ಸ್ಟಾಂಪ್ ಅಳತೆಯ (2 ಸೆಂ.ಮೀ x 2.5 ಸೆಂ.ಮೀ) ಭಾವಚಿತ್ರವನ್ನು ಲಗತ್ತಿಸಬೇಕು. |

**ಕೆಳಕಂಡ ಯಾವುದಾದರೂ ಅನ್ವಯವಾಗದಿರುವಂಥ ಭಾಗ –Iಅಥವಾ ಭಾಗ –II ನ್ನು ಹೊಡೆದುಹಾಕುವುದು**

**ಭಾಗ –I**
**(ಮಾನ್ಯತೆ ಪಡೆದ ರಾಜಕೀಯ ಪಕ್ಷದ ಅಭ್ಯರ್ಥಿಯು ಬಳಸಬೇಕಾದುದು)**

ನಾನು -------------- ವಿಧಾನಸಭಾ ಕ್ಷೇತ್ರದಿಂದ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಯಾಗಿ ನಾಮಪತ್ರವನ್ನು ಸಲ್ಲಿಸಿದ್ದೇನೆ.

ಅಭ್ಯರ್ಥಿಯ ಹೆಸರು ------------ ತಂದೆ/ ತಾಯಿ/ ಪತಿಯ ಹೆಸರು----------- ಅಭ್ಯರ್ಥಿಯ ಅಂಚೆ ವಿಳಾಸ -----------------------------------------

ಆತನ ಹೆಸರು -------- ಆಗಿದ್ದು, ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ --------- ವಿಧಾನಸಭಾ ಕ್ಷೇತ್ರದ -------------- ಮತದಾರರ ಪಟ್ಟಿಯಭಾಗ ಸಂ.ಯಲ್ಲಿನ -------- ಕ್ರ.ಸಂ.ಯಲ್ಲಿ ಅದನ್ನು ನಮೂದಿಸಲಾಗಿದೆ.

ನನ್ನ ಹೆಸರು -------- ಆಗಿದ್ದು, ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ --------- ವಿಧಾನಸಭಾ ಕ್ಷೇತ್ರದ -------------- ಮತದಾರರ ಪಟ್ಟಿಯಭಾಗ ಸಂ.ಯಲ್ಲಿನ -------- ಕ್ರ.ಸಂ.ಯಲ್ಲಿ ಅದನ್ನು ನಮೂದಿಸಲಾಗಿದೆ.

ದಿನಾಂಕ: -------------------                                                  (ಸೂಚಕರ ಸಹಿ)

## ಭಾಗ –II
**(ಮಾನ್ಯತೆ ಪಡೆದ ರಾಜಕೀಯ ಪಕ್ಷಕ್ಕೆ ಸೇರಿರದ ಅಭ್ಯರ್ಥಿಯು ಬಳಸಬೇಕಾದುದು)**

ನಾನು -------------- ವಿಧಾನಸಭಾ ಕ್ಷೇತ್ರದಿಂದ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಯಾಗಿ ನಾಮಪತ್ರವನ್ನು ಸಲ್ಲಿಸಿದ್ದೇನೆ.

ಅಭ್ಯರ್ಥಿಯ ಹೆಸರು ------------ ತಂದೆ/ ತಾಯಿ/ ಪತಿಯ ಹೆಸರು----------- ಅಭ್ಯರ್ಥಿಯ ಅಂಚೆ ವಿಳಾಸ ------------------------------------------

ಆತನ ಹೆಸರು -------- ಆಗಿದ್ದು, ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ --------- ವಿಧಾನಸಭಾ ಕ್ಷೇತ್ರದ -------------- ಮತದಾರರ ಪಟ್ಟಿಯ ----------- ಭಾಗ ಸಂ.ಯಲ್ಲಿನ ------- ಕ್ರ.ಸಂ.ಯಲ್ಲಿ ಅದನ್ನು ನಮೂದಿಸಲಾಗಿದೆ.

ಮೇಲ್ಕಂಡ ವಿಧಾನಸಭಾ ಕ್ಷೇತ್ರದ ಮತದಾರರೆಂದು ಮತ್ತು ಕೆಳಗೆ ಸೂಚಿಸಿದಂತೆ ವಿಧಾನಸಭಾ ಕ್ಷೇತ್ರಕ್ಕೆ ಮತದಾರರ ಪಟ್ಟಿಯಲ್ಲಿ ನಮ್ಮ ಹೆಸರುಗಳನ್ನು ನಮೂದಿಸಲಾಗಿದೆ ಎಂಬುದಾಗಿ ಘೋಷಿಸಿದ್ದೇವೆ ಮತ್ತು ಈ ನಾಮನಿರ್ದೇಶನ ಪತ್ರಕ್ಕೆ ರುಜುಮಾಡುವ ಗುರುತಾಗಿ ನಮ್ಮ ಸಹಿಗಳನ್ನು ಈ ಕೆಳಗೆ ಸೇರಿಸಿದ್ದೇವೆ:–

**ಸೂಚಕರ ವಿವರಗಳು ಮತ್ತು ಅವರ ಸಹಿ**

| ಕ್ರ.ಸಂ. | ಪ್ರಸ್ತಾಪಿತರ ಮತದಾರ ಪಟ್ಟಿ ಸಂ. | | ಪೂರ್ಣ ಹೆಸರು | ಸಹಿ | ದಿನಾಂಕ |
|---|---|---|---|---|---|
| | ಮತದಾರರ ಪಟ್ಟಿಯ ಭಾಗ ಸಂ. | ಆ ಭಾಗದಲ್ಲಿನ ಕ್ರ.ಸಂ. | | | |
| **1** | **2** | **3** | **4** | **5** | **6** |
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |
| 6 | | | | | |
| 7 | | | | | |
| 8 | | | | | |
| 9 | | | | | |
| 10 | | | | | |

**ವಿ.ಸೂ.:** ಕ್ಷೇತ್ರದ ಹತ್ತು ಮತದಾರರು ಸೂಚಕರಾಗಿರಬೇಕು.

## ಭಾಗ –III

ಅಭ್ಯರ್ಥಿಯಾದ ನಾನು, ಭಾಗ I/ ಭಾಗ IIರಲ್ಲಿನ (ಅನ್ವಯವಾಗದಿರುವವುಗಳನ್ನು ಹೊಡೆದುಹಾಕಿ) ನಾಮಪತ್ರಕ್ಕೆ ಒಪ್ಪಿದ್ದೇನೆ ಮತ್ತು ಈ ಮೂಲಕ ಘೋಷಿಸುವುದೇನೆಂದರೆ:–

(ಎ) ನಾನು ಭಾರತೀಯ ನಾಗರಿಕನಾಗಿದ್ದೇನೆ ಮತ್ತು ಯಾವುದೇ ವಿದೇಶದ ನಾಗರಿಕತ್ವವನ್ನು ಪಡೆದುಕೊಂಡಿಲ್ಲ.

(ಬಿ) ನಾನು –––––– ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದ್ದೇನೆ;

**[ಸಿ(i) ಅಥವಾ ಸಿ(ii)- ಇವುಗಳಲ್ಲಿ ಅನ್ವಯವಾಗದಿರುವವುಗಳನ್ನು ಹೊಡೆದುಹಾಕಿ]**

(ಸಿ) (i) ರಾಜ್ಯದಲ್ಲಿ ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷ/ ರಾಜ್ಯ ಪಕ್ಷವಾದ –––––– ರಾಜಕೀಯ ಪಕ್ಷದಿಂದ ನಾನು ಈ ಚುನಾವಣೆಗೆ ನಿಲ್ಲುತ್ತಿದ್ದೇನೆ ಮತ್ತು ಮೇಲಿನ ಪಕ್ಷಕ್ಕಾಗಿ ಮೀಸಲಿರಿಸಿದ ಚಿಹ್ನೆಯು ನನಗೆ ಹಂಚಿಕೆಯಾಗಿದೆ.

**ಅಥವಾ**

(ಸಿ) (ii) ನೋಂದಾಯಿತ–ಮಾನ್ಯತೆ ಪಡೆಯದ ರಾಜಕೀಯ ಪಕ್ಷವಾದ ––––––– ದಿಂದ ನಾನು ಈ ಚುನಾವಣೆಗೆ ನಿಲ್ಲುತ್ತಿದ್ದೇನೆ/ ನಾನು ಪಕ್ಷೇತರ ಅಭ್ಯರ್ಥಿಯಾಗಿ ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ. (ಅನ್ವಯವಾಗದಿರುವವುಗಳನ್ನು ಹೊಡೆದುಹಾಕಿ) ಮತ್ತು ಆದ್ಯತೆಯ ಕ್ರಮವಾಗಿ ನಾನು ಚಿಹ್ನೆಗಳನ್ನು ಆಯ್ಕೆಮಾಡಿಕೊಂಡಿದ್ದೇನೆ. ಅವು,–

(i) ...................... (ii) .......................... (iii) ..............................

(ಡಿ) ಮೇಲೆ –––– ರಲ್ಲಿ (ಭಾಷೆಯ ಹೆಸರು) ನನ್ನ ಹೆಸರು ಮತ್ತು ನನ್ನ ತಂದೆ/ತಾಯಿ/ ಪತಿಯ ಹೆಸರನ್ನು ಸ್ಪಷ್ಟವಾಗಿ ಉಚ್ಚರಿಸಲಾಗಿದೆ;

(ಇ) ನನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಿಗೆ, ಈ ರಾಜ್ಯದ ವಿಧಾನಸಭೆಯಲ್ಲಿ ಸ್ಥಾನವನ್ನು ಭರ್ತಿಮಾಡಲು ಆಯ್ಕೆ ಮಾಡಿಕೊಳ್ಳುವುದಕ್ಕಾಗಿ ನಾನು ಅರ್ಹನಾಗಿದ್ದೇನೆ ಮತ್ತು ಅನರ್ಹಗೊಂಡಿಲ್ಲವೆಂದು ಸಹ ಘೋಷಿಸುತ್ತೇನೆ.

*ನಾನು ––––––––– ರಾಜ್ಯದಲ್ಲಿನ ––––––––– (ಪ್ರದೇಶ)ಕ್ಕೆ ಸಂಬಂಧಿಸಿದಂತೆ ಆ ರಾಜ್ಯದ ಪರಿಶಿಷ್ಟ **ಜಾತಿ/ ಪಂಗಡವಾಗಿರುವಂಥ ––––––– **ಜಾತಿ/ ಪಂಗಡದ ಸದಸ್ಯನಾಗಿದ್ದೇನೆಂದು ಸಹ ಘೋಷಿಸುತ್ತೇನೆ.

ನಾನು ಎರಡಕ್ಕಿಂತ ಹೆಚ್ಚಿನ ವಿಧಾನಸಭಾ ಚುನಾವಣಾ ಕ್ಷೇತ್ರಗಳಿಂದ ––––– (ರಾಜ್ಯ) ವಿಧಾನಸಭೆಗೆ ಏಕಕಾಲಕ್ಕೆ **ಸಾರ್ವತ್ರಿಕ ಚುನಾವಣೆ/ ಉಪ–ಚುನಾವಣೆಗಳಲ್ಲಿ ಅಭ್ಯರ್ಥಿಯಾಗಿ ಪ್ರಸ್ತುತ ನಾಮಪತ್ರವನ್ನು ಸಲ್ಲಿಸಿಲ್ಲ ಮತ್ತು ಸಲ್ಲಿಸುವುದಿಲ್ಲವೆಂದೂ ನಾನು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ........................... ಅಭ್ಯರ್ಥಿಯ ಸಹಿ ............

*ಅನ್ವಯವಾಗದಿದ್ದಲ್ಲಿ, ಈ ಕಂಡಿಕೆಯನ್ನು ಹೊಡೆದುಹಾಕುವುದು

** ಅನ್ವಯವಾಗದಿರುವ ಪದಗಳನ್ನು ಹೊಡೆದುಹಾಕುವುದು.

**ವಿ.ಸೂ.:** "ಮಾನ್ಯತೆ ಪಡೆದ ರಾಜಕೀಯ ಪಕ್ಷ" ಎಂದರೆ ಸಂಬಂಧಪಟ್ಟ ರಾಜ್ಯದಲ್ಲಿ ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ ಮೇರೆಗೆ ಚುನಾವಣಾ ಆಯೋಗವು ಮಾನ್ಯತೆ ನೀಡಿದ ರಾಜಕೀಯ ಪಕ್ಷ.

## ಭಾಗ – IIIಎ
## (ಅಭ್ಯರ್ಥಿಯು ಭರ್ತಿಮಾಡಬೇಕಾದುದು)

ಅಭ್ಯರ್ಥಿಯು –

(i) ಅಪರಾಧಿಯೆಂದು ನಿರ್ಣಯಿತನಾಗಿರುವನೇ–

(ಎ) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧ(ಗಳ); ಅಥವಾ

(ಬಿ) ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43) ರ 8ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾನೂನನ್ನು ಉಲ್ಲಂಘಿಸಿರುವುದಕ್ಕಾಗಿ; ಅಥವಾ ಹೌದು/ ಇಲ್ಲ

(ii) ಯಾವುದೇ ಇತರ ಅಪರಾಧಗಳಿಗೆ ಎರಡು ವರ್ಷಗಳು ಅಥವಾ ಹೆಚ್ಚಿನ ಅವಧಿಯ ಕಾರಾವಾಸ ಶಿಕ್ಷೆಗೆ ಗುರಿಯಾಗಿರುವುದಕ್ಕಾಗಿ ಅಪರಾಧಿಯೆಂದು ನಿರ್ಣಯಿತನಾಗಿರುವುದು.

ಉತ್ತರ "ಹೌದು" ಎಂದಾದಲ್ಲಿ, ಅಭ್ಯರ್ಥಿಯು ಈ ಮುಂದಿನ ಮಾಹಿತಿಯನ್ನು ಒದಗಿಸತಕ್ಕದ್ದು:

(i) ಪ್ರಕರಣ/ ಪ್ರಥಮ ಮಾಹಿತಿ ವರದಿ ಸಂ./ ಸಂಖ್ಯೆಗಳು

(ii) ಪೊಲೀಸ್ ಠಾಣೆ (ಗಳು) ............ ಜಿಲ್ಲೆ (ಗಳು) ......... ರಾಜ್ಯ (ಗಳು) ...........

(iii) ಆತ ಅಪರಾಧಿಯೆಂದು ನಿರ್ಣೀತನಾಗಿರುವುದಕ್ಕಾಗಿ ಸಂಬಂಧಪಟ್ಟ ಅಧಿನಿಯಮ(ಗಳ)ದ ಪ್ರಕರಣ (ಗಳು) ಮತ್ತು ಅಪರಾಧ(ಗಳ) ಸಂಕ್ಷಿಪ್ತ ವಿವರ

(iv) ಅಪರಾಧ(ಗಳ) ದಿನಾಂಕ(ಗಳು) ______

(v) ಅಭ್ಯರ್ಥಿಯನ್ನು ಅಪರಾಧಿ ಎಂದು ನಿರ್ಣಯಿಸಿದ ನ್ಯಾಯಾಲಯ(ಗಳು)

(vi) ವಿಧಿಸಲಾದ ಶಿಕ್ಷೆ(ಗಳು) [ಕಾರಾವಾಸ ಶಿಕ್ಷೆ (ಗಳ) ಯ ಅವಧಿ ಮತ್ತು/ ಅಥವಾ ನಿರ್ಣಯಿಸಿದ ಪ್ರಮಾಣ(ಗಳ)ನ್ನು ಸೂಚಿಸುವುದು ______

(vii) ಕಾರಾಗೃಹದಿಂದ ಬಿಡುಗಡೆಯಾದ ದಿನಾಂಕ(ಗಳು)

(viii) ಮೇಲಿನ ಅಪರಾಧ ನಿರ್ಣಯ(ಗಳು)ದ ವಿರುದ್ಧ ಯಾವುದೇ ಅಪೀಲು(ಗಳು)/ ಪುನರೀಕ್ಷಣೆ (ಗಳು)ಯನ್ನು ದಾಖಲಿಸಲಾಗಿತ್ತೇ/ಲಾಗಿವೆಯೇ ______

(ix) ಪುನರೀಕ್ಷಣೆಗಾಗಿ ದಾಖಲಿಸಿದ ಅಪೀಲು(ಗಳು)/ ಅರ್ಜಿ(ಗಳು)ಯ ದಿನಾಂಕ ಮತ್ತು ವಿವರಗಳು

(x) ಪುನರೀಕ್ಷಣೆಗಾಗಿ ಅಪೀಲು(ಗಳು)/ ಅರ್ಜಿಗಳನ್ನು ದಾಖಲಿಸಿದ ನ್ಯಾಯಾಲಯ(ಗಳ) ಹೆಸರು

(xi) ಪುನರೀಕ್ಷಣೆಗಾಗಿ ದಾಖಲಿಸಿದ ಸದರಿ ಅಪೀಲು(ಗಳು)/ ಅರ್ಜಿ(ಗಳ)ನ್ನು ವಿಲೆ ಮಾಡಲಾಗಿದೆಯೇ ಅಥವಾ ಇತ್ಯರ್ಥದಲ್ಲಿದೆಯೇ ______

(xii) ಪುನರೀಕ್ಷಣೆಗಾಗಿ ದಾಖಲಿಸಿದ ಸದರಿ ಅಪೀಲು(ಗಳು)/ ಅರ್ಜಿ(ಗಳ)ನ್ನು ವಿಲೆ ಮಾಡಿದ್ದಲ್ಲಿ ______

ಎ. ವಿಲೆಯ ದಿನಾಂಕ(ಗಳು)

ಬಿ. ಅಂಗೀಕರಿಸಿದ ಆದೇಶದ ಸ್ವರೂಪ

(2) ಅಭ್ಯರ್ಥಿಯು ಭಾರತ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಯಾವುದೇ ಲಾಭಧಾಯಕ ಹುದ್ದೆಯನ್ನು ಹೊಂದಿದ್ದಾರೆಯೇ? ------------- (ಹೌದು/ ಇಲ್ಲ)
- ಹೌದು ಎಂದಾದಲ್ಲಿ ಹೊಂದಿರುವ ಹುದ್ದೆಯ ವಿವರ-------------

(3) ಅಭ್ಯರ್ಥಿಯನ್ನು ಯಾವುದೇ ನ್ಯಾಯಾಲಯವು ದಿವಾಳಿಯೆಂದು ಘೋಷಿಸಿದೆಯೇ? ---- (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ------ ಯಿಂದ ದಿವಾಳಿಯಾಗಿದ್ದಾನೆ

(4) ಅಭ್ಯರ್ಥಿಯು ಯಾವುದೇ ವಿದೇಶಕ್ಕೆ ನಿಷ್ಠೆ ಅಥವಾ ಬದ್ಧತೆಯನ್ನು ಹೊಂದಿರುವನೇ? (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ವಿವರಗಳನ್ನು ನೀಡಿರಿ----------------

(5) ಅಭ್ಯರ್ಥಿಯು ಸದರಿ ಅಧಿನಿಯಮದ 8ಎ ಪ್ರಕರಣದ ಅಡಿಯಲ್ಲಿ ರಾಷ್ಟ್ರಪತಿಯವರ ಆದೇಶದ ಮೂಲಕ ಅನರ್ಹಗೊಂಡಿರುವನೇ? ----------- (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ಅನರ್ಹನಾಗಿದ್ದಂಥ ಅವಧಿ.

(6) ಅಭ್ಯರ್ಥಿಯು ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಅಡಿಯಲ್ಲಿ ಯಾವುದೇ ಹುದ್ದೆಯಲ್ಲಿದ್ದಾಗ ಭ್ರಷ್ಟಾಚಾರ ಅಥವಾ ಅವಿಧೇಯತೆಯ ಕಾರಣಕ್ಕಾಗಿ ವಜಾಗೊಂಡಿದ್ದನೆ? ----------- (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ಹಾಗೆ ವಜಾಗೊಂಡ ದಿನಾಂಕ -----------

(7) ಅಭ್ಯರ್ಥಿಯು ಸರ್ಕಾರಕ್ಕೆ ಯಾವುದೇ ಸರಕುಗಳನ್ನು ಪೂರೈಸುವುದಕ್ಕಾಗಿ ಅಥವಾ ಸರ್ಕಾರವು ಕೈಗೊಳ್ಳುವಂಥ ಕಾಮಗಾರಿಗಳ ಅನುಷ್ಠಾನಕ್ಕಾಗಿ ತನಗೆ ಪಾಲು ಬರುವಂತೆ ಅಂಥ ಸರ್ಕಾರದೊಂದಿಗೆ ವ್ಯಕ್ತಿಗತವಾಗಿ ಇಲ್ಲವೇ ಟ್ರಸ್ಟ್ ಮೂಲಕ ಅಥವಾ ಪಾಲುದಾರನಾಗಿ ಪ್ರಸ್ತುತ ಯಾವುದೇ ಕರಾರನ್ನು (ಗಳನ್ನು) ಮಾಡಿಕೊಂಡಿದ್ದಾನೆಯೇ ------ (ಹೌದು/ ಇಲ್ಲ)
- ಹೌದು ಎಂದಾದಲ್ಲಿ, ಯಾವ ಸರ್ಕಾರದೊಂದಿಗೆ ಮತ್ತು ಚಾಲ್ತಿಯಲ್ಲಿರುವ ಕರಾರಿನ (ಗಳನ್ನು) ವಿವರಗಳು ------------

(8) ಅಭ್ಯರ್ಥಿಯು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಷೇರನ್ನು ಹೊಂದಿರುವ ಯಾವುದೇ ಕಂಪನಿ ಅಥವಾ ನಿಗಮದ (ಸಹಕಾರ ಸಂಘವನ್ನು

ಹೊರತುಪಡಿಸಿ) ವ್ಯವಸ್ಥಾಪಕ ಏಜೆಂಟ್ ಅಥವಾ ವ್ಯವಸ್ಥಾಪಕ ಅಥವಾ ಕಾರ್ಯದರ್ಶಿಯಾಗಿದ್ದಾನೆಯೇ------------- (ಹೌದು/ ಇಲ್ಲ)

– ಹೌದು ಎಂದಾದಲ್ಲಿ, ಯಾವ ಸರ್ಕಾರದೊಂದಿಗೆ ಮತ್ತು ಅದರ ವಿವರಗಳು –

(9) ಅಭ್ಯರ್ಥಿಯು ಸದರಿ ಅಧಿನಿಯಮ 10ಎ ಪ್ರಕರಣದ ಅಡಿಯಲ್ಲಿ ಆಯೋಗದಿಂದ ಅನರ್ಹಗೊಂಡಿದ್ದಾನೆ? ------------- (ಹೌದು/ ಇಲ್ಲ)

– ಹೌದು ಎಂದಾದಲ್ಲಿ, ಹಾಗೆ ಅನರ್ಹಗೊಂಡ ದಿನಾಂಕ -------------

ಸ್ಥಳ: ------------

ದಿನಾಂಕ: ------------- ಅಭ್ಯರ್ಥಿಯ ಸಹಿ

## ಭಾಗ IV

(ರಿಟರ್ನಿಂಗ್ ಅಧಿಕಾರಿಯವರು ಭರ್ತಿ ಮಾಡಬೇಕು)

ನಾಮಪತ್ರದ ಕ್ರಮಸಂಖ್ಯೆ ____________________

ಈ ನಾಮಪತ್ರವನ್ನು *ಅಭ್ಯರ್ಥಿ/ ಸೂಚಕರು (ಸೂಚಕರ ಹೆಸರು) _______________ (ದಿನಾಂಕ)ದಂದು _________ (ಗಂಟೆ)ಗೆ ನನ್ನ ಕಚೇರಿಯಲ್ಲಿ ನನಗೆ ತಲುಪಿಸಿದ್ದಾರೆ.

ದಿನಾಂಕ_________________ ರಿಟರ್ನಿಂಗ್ ಅಧಿಕಾರಿ

* ಅನ್ವಯಿಸದ ಪದವನ್ನು ಹೊಡೆದುಹಾಕಿ.

## ಭಾಗ V

**ನಾಮಪತ್ರವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಬಗ್ಗೆ ರಿಟರ್ನಿಂಗ್ ಅಧಿಕಾರಿಯವರ ತೀರ್ಮಾನ**

ನಾನು, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 36ನೇ ಪ್ರಕರಣದ (1951ರ 43) ಅನುಸಾರವಾಗಿ ಈ ನಾಮಪತ್ರವನ್ನು ಪರಿಶೀಲಿಸಿದ್ದೇನೆ ಮತ್ತು ಈ ಮುಂದಿನಂತೆ ತೀರ್ಮಾನಿಸಿದ್ದೇನೆ---------.

ದಿನಾಂಕ_________________

ರಿಟರ್ನಿಂಗ್ ಅಧಿಕಾರಿ

(ರಂಧ್ರೀಕರಣ/Perforation) ____________________________________

## ಭಾಗ VI

**ನಾಮಪತ್ರದ ಸ್ವೀಕೃತಿ ಮತ್ತು ಪರಿಶೀಲನೆಯ ನೋಟೀಸು**
(ನಾಮಪತ್ರವನ್ನು ಸಲ್ಲಿಸುವ ವ್ಯಕ್ತಿಗೆ ನೀಡಬೇಕಾದುದು)

ನಾಮಪತ್ರದ ಕ್ರಮಸಂಖ್ಯೆ______________________________

________________ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಯ ಅಭ್ಯರ್ಥಿಯಾದ __________ ಇವರ ನಾಮಪತ್ರವನ್ನು ______________ (ದಿನಾಂಕ)ದಂದು ________ (ಗಂಟೆ)ಗೆ ನನ್ನ ಕಚೇರಿಯಲ್ಲಿ ಅಭ್ಯರ್ಥಿ/ಸೂಚಕರು ನನಗೆ ಒಪ್ಪಿಸಿದ್ದಾರೆ.ಎಲ್ಲಾ ನಾಮಪತ್ರಗಳನ್ನು ________ ದಲ್ಲಿ (ಸ್ಥಳ)____________ರಂದು (ದಿನಾಂಕ) _________ ಗಂಟೆಗೆ ಪರಿಶೀಲನೆಗಾಗಿ ತೆಗೆದುಕೊಳ್ಳಲಾಗುವುದು.

ದಿನಾಂಕ__________________

ರಿಟರ್ನಿಂಗ್ ಅಧಿಕಾರಿ

* ಅನ್ವಯಿಸದ ಪದವನ್ನು ಹೊಡೆದುಹಾಕಿ.

**ಪರಿಶಿಷ್ಟ 8**
**(ಅಧ್ಯಾಯ 3, ಪ್ಯಾರಾ 3.8.1)**

**ನಮೂನೆ 26**
**(ನಿಯಮ 4ಎ ನೋಡಿ)**

| |
|---|
| ದಯಮಾಡಿ ನಿಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಇಲ್ಲಿ ಅಂಟಿಸಿರಿ |

**________________________ ಚುನಾವಣಾ ಕ್ಷೇತ್ರದಿಂದ (ಚುನಾವಣಾ ಕ್ಷೇತ್ರದ ಹೆಸರು) ____________________ಗೆ (ಸದನದ ಹೆಸರು) ನಡೆಯುವ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿಯ ಮುಂದೆ ಅಭ್ಯರ್ಥಿಯು ನಾಮಪತ್ರದ ಜೊತೆಗೆ ಸಲ್ಲಿಸಬೇಕಾದ ಅಫಿಡಾವಿಟ್**

**ಭಾಗ–ಎ**

______________ ಸ್ಥಳದ (ಪೂರ್ಣ ಅಂಚೆ ವಿಳಾಸ ನಮೂದಿಸುವುದು) ನಿವಾಸಿಯಾಗಿರುವ ________________________ ವಯಸ್ಸಿನವನಾದ, ______________ ಇವರ **ಮಗ/ಮಗಳು/ಪತ್ನಿಯಾದ________________ ಎಂಬ ನಾನು ಮೇಲ್ಕಂಡ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿದ್ದು, ಈ ಮೂಲಕ ಈ ಕೆಳಕಂಡಂತೆ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಪ್ರಮಾಣ ಮಾಡುತ್ತೇನೆ:–

(1) ನಾನು __________________ ಪಕ್ಷದ (**ರಾಜಕೀಯ ಪಕ್ಷದ ಹೆಸರು) ವತಿಯಿಂದ ಒಬ್ಬ ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ / ಒಬ್ಬ (**ಪಕ್ಷೇತರ ಅಭ್ಯರ್ಥಿಯಾಗಿ) ಸ್ಪರ್ಧಿಸಿರುತ್ತೇನೆ. (** ಅನ್ವಯವಾಗದಿರುವುದನ್ನು ಹೊಡೆದುಹಾಕಿ)

(2) ನನ್ನ ಹೆಸರು ____________________(ಚುನಾವಣಾ ಕ್ಷೇತ್ರದ ಮತ್ತು ರಾಜ್ಯದ ಹೆಸರು)ದ ಮತದಾರರ ಪಟ್ಟಿಯ ಭಾಗ ಸಂ: ____________ ರ ಕ್ರಮ ಸಂ:____________ರಲ್ಲಿ ಸೇರ್ಪಡೆಯಾಗಿದೆ.

(3) ನನ್ನನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ(ಗಳು)____________________ ಮತ್ತು ನನ್ನ ಇ–ಮೇಲ್ ಐಡಿ (ಇದ್ದರೆ)______________ ಹಾಗೂ ನನ್ನ ಸೋಷಿಯಲ್ ಮೀಡಿಯಾ ಖಾತೆ (ಗಳು) (ಯಾವುದಾದರೂ ಇದ್ದಲ್ಲಿ) -------------

(i) ------------

(ii) -------------

(iii) ------------

(4) ಪ್ಯಾನ್ (**PAN** ) ವಿವರಗಳು ಮತ್ತು ಆದಾಯ ತೆರಿಗೆ ವಿವರಪಟ್ಟಿ ಸಲ್ಲಿಕೆಯ ಸ್ಥಿತಿಗತಿ:

| ಕ್ರ. ಸಂ. | ಹೆಸರುಗಳು | ಪ್ಯಾನ್ | ಹಿಂದೆ ಆದಾಯ ತೆರಿಗೆ ವಿವರಪಟ್ಟಿ ಸಲ್ಲಿಸಿದ ಹಣಕಾಸು ವರ್ಷ | ಪೂರ್ಣಗೊಂಡ ಕಳೆದ ಐದು ಆರ್ಥಿಕ ವರ್ಷಗಳ (31ನೇ ಮಾರ್ಚ್ ರಲ್ಲಿದ್ದಂತೆ) ಆದಾಯ ತೆರಿಗೆ ವಿವರಪಟ್ಟಿಯಲ್ಲಿ ತೋರಿಸಲಾದ ಒಟ್ಟು ಆದಾಯ (ರೂ. ಗಳಲ್ಲಿ) | |
|---|---|---|---|---|---|
| 1 | ಸ್ವತಃ ಅಭ್ಯರ್ಥಿ | | | (i) | |
| | | | | (ii) | |
| | | | | (iii) | |
| | | | | (iv) | |
| | | | | (v) | |
| 2 | ಪತಿ/ಪತ್ನಿ | | | (i) | |
| | | | | (ii) | |
| | | | | (iii) | |
| | | | | (iv) | |
| | | | | (v) | |
| 3 | ಹಿಂದು ಅವಿಭಕ್ತ ಕುಟುಂಬ (ಎಚ್‌ಯುಎಫ್) (ಅಭ್ಯರ್ಥಿಯು ಕರ್ತ/ ಸಮಪಾಲುದಾರನಾಗಿದ್ದಲ್ಲಿ) | | | (i) | |
| | | | | (ii) | |
| | | | | (iii) | |
| | | | | (iv) | |
| | | | | (v) | |
| 4 | ಅವಲಂಬಿತ 1 | | | (i) | |
| | | | | (ii) | |
| | | | | (iii) | |
| | | | | (iv) | |
| | | | | (v) | |
| 5 | ಅವಲಂಬಿತ 2 | | | (i) | |
| | | | | (ii) | |
| | | | | (iii) | |

| | | | | | |
|---|---|---|---|---|---|
| | | | | (iv) | |
| | | | | (v) | |
| 6 | ಅವಲಂಬಿತ 3...... | | | (i) | |
| | | | | (ii) | |
| | | | | (iii) | |
| | | | | (iv) | |
| | | | | (v) | |

**ಸೂಚನೆ:** ಪ್ಯಾನ್ ಹೊಂದಿರುವ ಅಭ್ಯರ್ಥಿಯು, ಪ್ಯಾನ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯವಾಗಿದೆ. ಪ್ಯಾನ್ ಹೊಂದಿರದಿದ್ದ ಸಂದರ್ಭದಲ್ಲಿ, "ಪ್ಯಾನ್ ಸಂಖ್ಯೆ ಹಂಚಿಕೆಯಾಗಿಲ್ಲ" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

**(5) ಬಾಕಿ ಇರುವ ಅಪರಾಧ ಪ್ರಕರಣಗಳು**

(i) ನನ್ನ ವಿರುದ್ಧ ಯಾವುದೇ ಅಪರಾಧ ಪ್ರಕರಣಗಳು ಬಾಕಿ ಇರುವುದಿಲ್ಲವೆಂದು ನಾನು ಘೋಷಿಸುತ್ತೇನೆ (ಅಭ್ಯರ್ಥಿಗೆ ವಿರುದ್ಧವಾಗಿ ಯಾವುದೇ ಅಪರಾಧ ಪ್ರಕರಣವು ಬಾಕಿ ಇರದ ಸಂದರ್ಭದಲ್ಲಿ ಈ ಆಯ್ಕೆಯನ್ನು ಗುರುತು ಮಾಡಿ ಹಾಗೂ ಕೆಳಗಿನ (ii)ನೇ ಆಯ್ಕೆಗೆ ಪ್ರತಿಯಾಗಿ 'ಅನ್ವಯವಾಗುವುದಿಲ್ಲ' ಎಂದು ಬರೆಯಿರಿ)

**ಅಥವಾ**

(ii) ಮುಂದಿನ ಅಪರಾಧ ಪ್ರಕರಣಗಳು ನನ್ನ ವಿರುದ್ಧ ಬಾಕಿ ಇವೆ:

(ಅಭ್ಯರ್ಥಿಗೆ ವಿರುದ್ಧಯಾವುದೇ ಅಪರಾಧ ಪ್ರಕರಣವು ಬಾಕಿ ಇರುವ ಸಂದರ್ಭದಲ್ಲಿ ಈ ಆಯ್ಕೆಯನ್ನು ಗುರುತು ಮಾಡಿ ಹಾಗೂ ಮೇಲಿನ (i)ನೇ ಆಯ್ಕೆಯನ್ನು ಹೊಡೆದುಹಾಕಿ ಮತ್ತು ಈ ಕೆಳಗಿನ ಕೋಷ್ಟಕದಲ್ಲಿ ಎಲ್ಲ ಬಾಕಿ ಪ್ರಕರಣಗಳ ವಿವರಗಳನ್ನು ನೀಡಿರಿ)

**ಕೋಷ್ಟಕ**

| | | | | |
|---|---|---|---|---|
| (ಎ) | ಸಂಬಂಧಪಟ್ಟ ಪೊಲೀಸ್ ಠಾಣೆಯ ಹೆಸರು ಮತ್ತು ವಿಳಾಸದೊಂದಿಗೆ ಎಫ್ಐಆರ್ ಸಂಖ್ಯೆ | | | |
| (ಬಿ) | ನ್ಯಾಯಾಲಯದ ಹೆಸರಿನೊಂದಿಗೆ ಪ್ರಕರಣದ ಸಂಖ್ಯೆ | | | |
| (ಸಿ) | ಇದಕ್ಕೆ ಸಂಬಂಧಪಟ್ಟ ಅಧಿನಿಯಮಗಳು/ ಸಂಹಿತೆಗಳು ಪ್ರಕರಣಗಳು. (ಪ್ರಕರಣದ ಸಂಖ್ಯೆಯನ್ನು ನೀಡಿರಿ, ಉದಾಹರಣೆಗೆ ಐಪಿಸಿಯ ------- ಪ್ರಕರಣ, ಇತ್ಯಾದಿ) | | | |
| (ಡಿ) | ಅಪರಾಧದ ಸಂಕ್ಷಿಪ್ತ ವಿವರಣೆ | | | |
| (ಇ) | ಆರೋಪಪಟ್ಟಿ ಸಲ್ಲಿಸಲಾಗಿದೆಯೇ? (ಹೌದು ಅಥವಾ ಇಲ್ಲವೆಂದು ಸೂಚಿಸಿ) | | | |

| | | | | |
|---|---|---|---|---|
| (ಎಫ್) | ಮೇಲಿನ (ಇ)ಗೆ ಉತ್ತರವು 'ಹೌದು' ಎಂದಾದಲ್ಲಿ ಆರೋಪಪಟ್ಟಿ ಸಲ್ಲಿಸಿದ ದಿನಾಂಕ ನೀಡಿರಿ | | | |
| (ಜಿ) | ನಡಾವಳಿಗಳಿಗೆ ಪ್ರತಿಯಾಗಿ ಯಾವುದೇ ಅಪೀಲು/ ಪರಿಷ್ಕರಣೆಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೇ (ಹೌದು ಅಥವಾ ಇಲ್ಲ ಎಂಬುದನ್ನು ಸೂಚಿಸಿ) | | | |

**(6) ಅಪರಾಧ ರುಜುವಾತಾದ ಪ್ರಕರಣಗಳು**

(i) ನಾನು, ಯಾವುದೇ ಅಪರಾಧಿಕ ಅಪರಾಧದ ಸಿದ್ಧದೋಷಿಯಾಗಿರುವುದಿಲ್ಲ ಎಂದು ಘೋಷಿಸುತ್ತೇನೆ (ಅಭ್ಯರ್ಥಿಯು ಸಿದ್ಧದೋಷಿಯಾಗಿಲ್ಲದ ಸಂದರ್ಭದಲ್ಲಿ ಈ ಆಯ್ಕೆಯನ್ನು ಗುರುತು ಮಾಡಿ ಹಾಗೂ ಕೆಳಗಿನ (ii)ನೇ ಆಯ್ಕೆಗೆ ಪ್ರತಿಯಾಗಿ 'ಅನ್ವಯವಾಗುವುದಿಲ್ಲ' ಎಂದು ಬರೆಯಿರಿ)

**ಅಥವಾ**

(ii) ನಾನು ಈ ಕೆಳಗೆ ನಮೂದಿಸಿದ ಅಪರಾಧಗಳಿಗಾಗಿ ಸಿದ್ಧದೋಷಿಯಾಗಿದ್ದೇನೆ: (ಅಭ್ಯರ್ಥಿಯು ಸಿದ್ಧದೋಷಿಯಾಗಿದ್ದ ಸಂದರ್ಭದಲ್ಲಿ) ಈ ಆಯ್ಕೆಯನ್ನು ಗುರುತು ಮಾಡಿ ಹಾಗೂ ಮೇಲಿನ (i)ನೇ ಆಯ್ಕೆಯನ್ನು ಹೊಡೆದುಹಾಕಿ ಮತ್ತು ಈ ಕೆಳಗಿನ ಕೋಷ್ಠಕದಲ್ಲಿ ಎಲ್ಲ ಬಾಕಿ ಪ್ರಕರಣಗಳ ವಿವರಗಳನ್ನು ನೀಡಿರಿ)

**ಕೋಷ್ಠಕ**

| | | | | |
|---|---|---|---|---|
| (ಎ) | ಪ್ರಕರಣ ಸಂಖ್ಯೆ | | | |
| (ಬಿ) | ನ್ಯಾಯಾಲಯದ ಹೆಸರು | | | |
| (ಸಿ) | ಇದಕ್ಕೆ ಸಂಬಂಧಪಟ್ಟ ಅಧಿನಿಯಮಗಳು/ ಸಂಹಿತೆಗಳು (ಪ್ರಕರಣದ ಸಂಖ್ಯೆ ನೀಡಿರಿ. ಉದಾಹರಣೆಗೆ ಐಪಿಸಿ ------ ಪ್ರಕರಣ, ಇತ್ಯಾದಿ) | | | |
| (ಡಿ) | ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಸಿದ್ಧದೋಷಿಯಾಗಿದ್ದನೋ ಆ ಅಪರಾಧದ ಸಂಕ್ಷಿಪ್ತ ವಿವರಣೆ | | | |
| (ಇ) | ಅಪರಾಧ ನಿರ್ಣಯದ ಆದೇಶಗಳ ದಿನಾಂಕ | | | |
| (ಎಫ್) | ವಿಧಿಸಲಾದ ಶಿಕ್ಷೆ | | | |
| (ಜಿ) | ನಡಾವಳಿಗಳಿಗೆ ಪ್ರತಿಯಾಗಿ ಯಾವುದೇ ಅಪೀಲನ್ನು ಅಪರಾಧ ನಿರ್ಣಯದ ಆದೇಶಕ್ಕೆ ವಿರುದ್ಧವಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೇ (ಹೌದು ಅಥವಾ ಇಲ್ಲ ಎಂಬುದನ್ನು ಸೂಚಿಸಿ) | | | |
| (ಎಚ್) | (ಜಿ)ಗೆ ಉತ್ತರವು ಹೌದು ಎಂದಾದಲ್ಲಿ, ಅಪೀಲಿನ ವಿವರಗಳು ಮತ್ತು ಪ್ರಸ್ತುತ ಸ್ಥಿತಿಗತಿಯನ್ನು ತಿಳಿಸಿ | | | |

(6ಎ) ನಾನು, ಕಂಡಿಕೆ (5) ಮತ್ತು (6)ರಲ್ಲಿ ನೀಡಲಾಗಿರುವಂತೆ, ನನಗೆ ವಿರುದ್ಧವಾಗಿ ಬಾಕಿಯಿರುವ ಎಲ್ಲ ಅಪರಾಧ ಪ್ರಕರಣಗಳ ಬಗೆಗೆ ಮತ್ತು ನಾನು ದೋಷಿಯೆಂದು ರುಜುವಾತಾಗಿರುವ ಎಲ್ಲ ಪ್ರಕರಣಗಳ ಬಗೆಗೆ ನನ್ನ ರಾಜಕೀಯ ಪಕ್ಷಕಕ್ಕೆ ಪೂರ್ಣವಾದ ಮತ್ತು ಇಂದಿನವರೆಗಿನ ಮಾಹಿತಿಯನ್ನು ನೀಡಿದ್ದೇನೆ.

[ಈ ಅಂಶವು ಅನ್ವಯಿಸದಿರುವಂಥ ಅಭ್ಯರ್ಥಿಗಳು ಮೇಲಿನ 5(i) ಮತ್ತು 6(i)ರಲ್ಲಿನ ನಮೂದುಗಳಿಗೆ ಸಂಬಂಧಿಸಿದಂತೆ 'ಅನ್ವಯವಾಗುವುದಿಲ್ಲ' ಎಂದು ಸ್ಪಷ್ಟವಾಗಿ ಬರೆಯಬೇಕು]

**ಸೂಚನೆ:**

1. **ವಿವರಗಳನ್ನು ಸ್ಪಷ್ಟವಾಗಿ ಮತ್ತು ಸ್ಫುಟವಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸಬೇಕು.**
2. **ಪ್ರತಿ ಪ್ರಕರಣಕ್ಕೆ ಸಂಬಂಧಪಟ್ಟ ವಿವರಗಳನ್ನು ಪ್ರತಿ ಬಾಬಿಗೆ ವಿವಿಧ ಕಾಲಂಗಳ ಅಡಿಯಲ್ಲಿ ಪ್ರತ್ಯೇಕವಾಗಿ ನೀಡಬೇಕು.**
3. **ಈ ವಿವರಗಳನ್ನು ವಿರುದ್ಧ ಕಾಲಕ್ರಮದಲ್ಲಿ ನೀಡಬೇಕು ಎಂದರೆ, ತೀರಾ ಇತ್ತೀಚಿನ ಪ್ರಕರಣವನ್ನು ಮೊದಲು ನಮೂದಿಸಬೇಕು ಮತ್ತು ಇತರ ಪ್ರಕರಣಗಳನ್ನು ಅವುಗಳ ದಿನಾಂಕಗಳಿಗೆ ಅನುಕ್ರಮವಾಗಿ ಹಿಮ್ಮುಖವಾಗಿ ನಮೂದಿಸಬೇಕು.**
4. **ಅಗತ್ಯವಿದ್ದಲ್ಲಿ, ಹೆಚ್ಚುವರಿ ಪುಟವನ್ನು ಸಹ ಸೇರಿಸಬಹುದು.**
5. **ಮಾನ್ಯ ಸರ್ವೋಚ್ಚ ನ್ಯಾಯಾಲಯವು 2011ರ ಡಬ್ಲ್ಯೂಪಿ (ಸಿ) ಸಂಖ್ಯೆ 536ರಲ್ಲಿ ನೀಡಿದ ತೀರ್ಪಿಗನುಸಾರವಾಗಿ ಎಲ್ಲ ಮಾಹಿತಿಯನ್ನು ನೀಡುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.**

(7) ನಾನು ಇದರಲ್ಲಿ ಈ ಕೆಳಗೆ ನನ್ನ, ನನ್ನ ಹೆಂಡತಿ/ಗಂಡನ ಮತ್ತು ನನ್ನ ಎಲ್ಲ ಅವಲಂಬಿತರ ಆಸ್ತಿಗಳ (ಚರ ಮತ್ತು ಸ್ಥಿರ ಇತ್ಯಾದಿ) ವಿವರಗಳನ್ನು ನೀಡಿದ್ದೇನೆ:

**ಎ. ಚರಾಸ್ತಿಗಳ ವಿವರಗಳು:**

ಸೂಚನೆ 1: ಜಂಟಿ ಮಾಲೀಕತ್ವದ ಪ್ರಮಾಣವನ್ನು ಸೂಚಿಸುವಂಥ ಜಂಟಿ ಹೆಸರಿನಲ್ಲಿರುವ ಆಸ್ತಿಗಳ ವಿವರಗಳನ್ನು ಸಹ ನೀಡಬೇಕು.

ಸೂಚನೆ 2: ಠೇವಣಿ/ ಹಣ ಹೂಡಿಕೆಯ ಸಂದರ್ಭದಲ್ಲಿ, ಠೇವಣಿಯ ಕ್ರಮಸಂಖ್ಯೆ, ಮೊಬಲಗು, ಠೇವಣಿ ದಿನಾಂಕ, ಯೋಜನೆ, ಬ್ಯಾಂಕ್‌ನ/ ಸಂಸ್ಥೆಯ ಮತ್ತು ಶಾಖೆಯ ಹೆಸರುಗಳೂ ಸೇರಿದಂತೆ ವಿವರಗಳನ್ನು ನೀಡಬೇಕು.

ಸೂಚನೆ 3: ಪಟ್ಟಿಯಲ್ಲಿರುವ (ಲಿಸ್ಟೆಡ್) ಕಂಪನಿಗಳ ಸಂಬಂಧದಲ್ಲಿ ಷೇರು ವಿನಿಮಯ ಕೇಂದ್ರದಲ್ಲಿನ ಪ್ರಸಕ್ತ ಮಾರುಕಟ್ಟೆ ಮೌಲ್ಯಗನುಸಾರ ಹಾಗೂ ಪಟ್ಟಿಯಲ್ಲಿಲ್ಲದ (non-listed) ಕಂಪನಿಗಳ ಸಂಬಂಧದಲ್ಲಿ ಬುಕ್‌ಗಳಿಗನುಸಾರ ಬಾಂಡ್‌ಗಳು/ಷೇರು, ಡಿಬೆಂಚರುಗಳ ಮೌಲ್ಯ.

ಸೂಚನೆ 4: ಇಲ್ಲಿರುವ 'ಅವಲಂಬಿತ' ಎಂದರೆ, ಅಭ್ಯರ್ಥಿಯ ಪೋಷಕರು, ಮಗ, ಮಗಳು ಅಥವಾ ಪತಿ/ಪತ್ನಿ ಹಾಗೂ ರಕ್ತ ಸಂಬಂಧದಿಂದ ಅಥವಾ ವಿವಾಹ ಸಂಬಂಧದಿಂದ ಅಭ್ಯರ್ಥಿಗೆ

ಸಂಬಂಧಪಟ್ಟ ಪ್ರತ್ಯೇಕ ಆದಾಯದ ಮೂಲವನ್ನು ಹೊಂದಿರದೇ, ಜೀವನೋಪಾಯಕ್ಕಾಗಿ ಅಭ್ಯರ್ಥಿಯನ್ನು ಅವಲಂಬಿತರಾಗಿರುವ ಯಾರೇ ಇತರೆ ವ್ಯಕ್ತಿ.

ಸೂಚನೆ 5: ಪ್ರತಿ ಹೂಡಿಕೆಯ ಸಂಬಂಧದಲ್ಲಿ, ಹಣದ ಮೊತ್ತವೂ ಸೇರಿದಂತೆ ವಿವರಗಳನ್ನು ಪ್ರತ್ಯೇಕವಾಗಿ ನೀಡಬೇಕು.

ಸೂಚನೆ 6: ವಿವರಗಳು ವಿದೇಶದಲ್ಲಿನ ಸ್ವತ್ತುಗಳಲ್ಲಿನ ಹಿತಾಸಕ್ತಿ ಅಥವಾ ಅದರ ಮಾಲೀಕತ್ವವನ್ನು ಒಳಗೊಂಡಿರಬೇಕು.

**ವಿವರಣೆ:** ಈ ನಮೂನೆಯ ಉದ್ದೇಶಕ್ಕಾಗಿ, "ವಿದೇಶದಲ್ಲಿನ ಸ್ವತ್ತುಗಳು", ಎಂಬ ಪದವು, ವಿದೇಶಿ ಬ್ಯಾಂಕುಗಳು ಮತ್ತು ವಿದೇಶದ ಯಾವುದೇ ಇತರ ನಿಕಾಯ ಅಥವಾ ಸಂಸ್ಥೆಗಳಲ್ಲಿ ಇರುವ ಎಲ್ಲಾ ಠೇವಣಿಗಳು ಅಥವಾ ಹೂಡಿಕೆಗಳ ವಿವರಗಳನ್ನು ಮತ್ತು ವಿದೇಶಿ ರಾಷ್ಟ್ರಗಳಲ್ಲಿ ಇರುವ ಎಲ್ಲಾ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ವಿವಿರಗಳನ್ನು ಒಳಗೊಂಡಿರುತ್ತದೆ.

| **ಕ್ರಸಂ** | **ವಿವರಣೆ** | **ಸ್ವತ:** | **ಪತಿ/ ಪತ್ನಿ** | **ಹಿಂದೂ ಅವಿಭಕ್ತ ಕುಟುಂಬ (ಎಚ್‌ಯುಎಫ್)** | **ಅವಲಂಬಿತ–1** | **ಅವಲಂಬಿತ–2** | **ಅವಲಂಬಿತ–3** |
|---|---|---|---|---|---|---|---|
| (i) | ಕೈಯಲ್ಲಿರುವ ನಗದು | | | | | | |
| (ii) | ಬ್ಯಾಂಕ್ ಖಾತೆಗಳಲ್ಲಿರುವ ಠೇವಣಿ (ಎಫ್‌ಡಿಆರ್‌ಗಳು, ಸಾವಧಿ ಠೇವಣಿಗಳು ಮತ್ತು ಉಳಿತಾಯ ಖಾತೆಗಳೂ ಸೇರಿದಂತೆ ಇತರ ಎಲ್ಲಾ ಬಗೆಯ ಠೇವಣಿಗಳು), ವಿವರಗಳು, ಹಣಕಾಸು ಸಂಸ್ಥೆಗಳು ಬ್ಯಾಂಕೇತರ ಹಣಕಾಸು ಕಂಪನಿಗಳಲ್ಲಿ ಮತ್ತು ಸಹಕಾರ ಸಂಘಗಳಲ್ಲಿರುವ ಠೇವಣಿಗಳ ವಿವರಗಳು ಹಾಗೂ ಅಂಥ ಪ್ರತಿಯೊಂದು ಠೇವಣಿಯಲ್ಲಿರುವ ಮೊತ್ತ | | | | | | |
| (iii) | ಕಂಪನಿಗಳು/ಮ್ಯೂಚುಯಲ್ ಫಂಡ್‌ಗಳು ಮುಂತಾದವುಗಳಲ್ಲಿರುವ ಬಾಂಡ್‌ಗಳು, ಡಿಬೆಂಚರುಗಳು/ ಷೇರುಗಳು ಮತ್ತು ಯೂನಿಟ್‌ಗಳಲ್ಲಿ ಮಾಡಿರುವ ಹೂಡಿಕೆಯ ವಿವರಗಳು ಮತ್ತು ಹಣದ ಮೊತ್ತ | | | | | | |

| | | | | | | | |
|---|---|---|---|---|---|---|---|
| (iv) | ಅಂಚೆ ಕಚೇರಿಯಲ್ಲಿ ಅಥವಾ ವಿಮಾ ಕಂಪನಿಯಲ್ಲಿ ಎನ್‌ಎಸ್‌ಎಸ್, ಪೋಸ್ಟಲ್ ಸೇವಿಂಗ್, ವಿಮಾ ಪಾಲಿಸಿಗಳು ಮತ್ತು ಯಾವುದೇ ಇತರ ಹಣಕಾಸು ಲಿಖಿತಗಳಲ್ಲಿನ ಹಣ ಹೂಡಿಕೆಯ ವಿವರಗಳು ಮತ್ತು ಹಣದ ಮೊತ್ತ | | | | | | |
| (v) | ಫರ್ಮು, ಕಂಪನಿ, ನ್ಯಾಸ ಮುಂತಾದವುಗಳೂ ಸೇರಿದಂತೆ ಯಾರೇ ವ್ಯಕ್ತಿಗೆ ಅಥವಾ ಸಂಸ್ಥೆಗೆ ನೀಡಿದ ವೈಯಕ್ತಿಕ ಸಾಲುಗಳು/ ಮುಂಗಡ ಮತ್ತು ಸಾಲಗಾರರಿಂದ ಬರಬೇಕಾದ ಇತರ ಸ್ವೀಕೃತಿಗಳು ಮತ್ತು ಅವುಗಳ ಮೊತ್ತ | | | | | | |
| (vi) | ಮೋಟಾರು ವಾಹನಗಳು/ ಏರ್‌ಕ್ರಾಫ್ಟ್‌ಗಳು/ ದೋಣಿಗಳು/ ಹಡಗುಗಳು (ನಿರ್ಮಾಣ, ನೋಂದಣಿ ಸಂಖ್ಯೆ, ಇತ್ಯಾದಿ ವಿವರಗಳು, ಖರೀದಿಸಿದ ವರ್ಷ ಮತ್ತು ಅದರ ಮೊತ್ತ) | | | | | | |
| (vii) | ಆಭರಣ, ಬೆಳ್ಳಿ–ಬಂಗಾರ ಮತ್ತು ಬೆಲೆಬಾಳುವ ವಸ್ತು(ಗಳು) (ಅವುಗಳ ತೂಕ ಮತ್ತು ಮೌಲ್ಯದ ವಿವರಗಳನ್ನು ನೀಡಿ) | | | | | | |
| (viii) | ಕ್ಲೇಮುಗಳು/ ಹಿತಾಸಕ್ತಿಯ ಮೌಲ್ಯದಂತಹ ಯಾವುದೇ ಇತರ ಸ್ವತ್ತುಗಳು | | | | | | |
| **(ix)** | **ಒಟ್ಟು ಮೌಲ್ಯ** | | | | | | |

**ಬಿ. ಸ್ಥಿರಾಸ್ತಿಗಳ ವಿವರಗಳು:**

ಸೂಚನೆ 1: ಜಂಟಿ ಒಡೆತನದ ಪ್ರಮಾಣವನ್ನು ಸೂಚಿಸಿ ಜಂಟಿ ಒಡೆತನದಲ್ಲಿರುವ ಸ್ವತ್ತುಗಳ ವಿವರಗಳನ್ನು ಸಹ ತೋರಿಸಬೇಕಾಗುತ್ತದೆ.

ಸೂಚನೆ 2: ಪ್ರತಿಯೊಂದು ಭೂಮಿ ಅಥವಾ ಕಟ್ಟಡ ಅಥವಾ ಅಪಾರ್ಟ್‌ಮೆಂಟಿನ ವಿವರವನ್ನು ಈ ನಮೂನೆಯಲ್ಲಿ ಪ್ರತ್ಯೇಕವಾಗಿ ನಮೂದಿಸಬೇಕು.

ಸೂಚನೆ 3: ವಿವರಗಳು ವಿದೇಶದಲ್ಲಿನ ಸ್ವತ್ತುಗಳಲ್ಲಿನ ಹಿತಾಸಕ್ತಿ ಅಥವಾ ಅದರ ಮಾಲೀಕತ್ವವನ್ನು ಒಳಗೊಂಡಿರಬೇಕು.

| ಕ್ರ. ಸಂ | ವಿವರಣೆ | ಸ್ವತ: ಅಭ್ಯರ್ಥಿ | ಪತಿ/ಪತ್ನಿ | ಹಿಂದೂ ಅವಿಭಕ್ತ ಕುಟುಂಬ (ಎಚ್‌ಯುಎಫ್) | ಅವಲಂಬಿತ–1 | ಅವಲಂಬಿತ–2 | ಅವಲಂಬಿತ–3 |
|---|---|---|---|---|---|---|---|
| (i) | **ಕೃಷಿ ಭೂಮಿ:**<br>ಸ್ಥಳ (ಗಳು)<br>ಸರ್ವೆ ನಂಬರು(ಗಳು) | | | | | | |
| | ವಿಸ್ತೀರ್ಣ (ಒಟ್ಟು ಅಳತೆ– ಎಕರೆಗಳಲ್ಲಿ) | | | | | | |
| | ಸ್ವತ್ತು ಪಿತ್ರಾರ್ಜಿತವೇ<br>(ಹೌದು ಅಥವಾ ಇಲ್ಲ) | | | | | | |
| | ಸ್ವಯಾರ್ಜಿತ ಸ್ವತ್ತಿನ ಸಂದರ್ಭದಲ್ಲಿ ಖರೀದಿ ದಿನಾಂಕ | | | | | | |
| | ಖರೀದಿಸಿದ ಸಮಯದಲ್ಲಿ ಭೂಮಿಯ ಬೆಲೆ (ಖರೀದಿಸಿದ್ದ ಪಕ್ಷದಲ್ಲಿ) | | | | | | |
| | ಅಭಿವೃದ್ಧಿ, ನಿರ್ಮಾಣ ಇತ್ಯಾದಿ ರೂಪದಲ್ಲಿ ಭೂಮಿಯ ಮೇಲೆ ವಿನಿಯೋಗಿಸಿದ ಯಾವುದೇ ಹಣ ಹೂಡಿಕೆ | | | | | | |
| | ಅಂದಾಜು ಪ್ರಸ್ತುತ ಮಾರುಕಟ್ಟೆ ಮೌಲ್ಯ | | | | | | |
| (ii) | **ಕೃಷೀಯೇತರ ಭೂಮಿ:**<br>ಸ್ಥಳ(ಗಳು)<br>ಸರ್ವೆ ನಂಬರು (ಗಳು) | | | | | | |
| | ವಿಸ್ತೀರ್ಣ (ಒಟ್ಟು ಅಳತೆ– ಚದರ ಅಡಿಗಳಲ್ಲಿ) | | | | | | |
| | ಸ್ವತ್ತು ಪಿತ್ರಾರ್ಜಿತವೇ<br>(ಹೌದು ಅಥವಾ ಇಲ್ಲ) | | | | | | |

| | | | | | | | |
|---|---|---|---|---|---|---|---|
| | ಸ್ವಯಾರ್ಜಿತ ಸ್ವತ್ತಿನ ಸಂದರ್ಭದಲ್ಲಿ ಖರೀದಿ ದಿನಾಂಕ | | | | | | |
| | ಖರೀದಿಸಿದ ಸಮಯದಲ್ಲಿ ಭೂಮಿಯ ಬೆಲೆ (ಖರೀದಿಸಿದ್ದ ಪಕ್ಷದಲ್ಲಿ) | | | | | | |
| | ಅಭಿವೃದ್ಧಿ, ನಿರ್ಮಾಣ ಇತ್ಯಾದಿ ರೂಪದಲ್ಲಿ ಭೂಮಿಯ ಮೇಲೆ ಯಾವುದೇ ಬಗೆಯ ಹಣ ಹೂಡಿಕೆ | | | | | | |
| | ಅಂದಾಜು ಪ್ರಸಕ್ತ ಮಾರುಕಟ್ಟೆ ಮೌಲ್ಯ | | | | | | |
| (iii) | **ವಾಣಿಜ್ಯ ಕಟ್ಟಡಗಳು**<br>(ಅಪಾರ್ಟ್‌ಮೆಂಟ್‌ಗಳೂ ಒಳಗೊಂಡಂತೆ)<br>– ಸ್ಥಳ (ಗಳು)<br>– ಸರ್ವೆ ನಂಬರ್ (ಗಳು) | | | | | | |
| | ವಿಸ್ತೀರ್ಣ (ಒಟ್ಟು ಅಳತೆ– ಚದರಡಿಗಳಲ್ಲಿ) | | | | | | |
| | ನಿರ್ಮಿತ ಪ್ರದೇಶ (ಒಟ್ಟು ಅಳತೆ ಚದರಡಿಗಳಲ್ಲಿ) | | | | | | |
| | ಸ್ವತ್ತು ಪಿತ್ರಾರ್ಜಿತವೇ<br>(ಹೌದು ಅಥವಾ ಇಲ್ಲ) | | | | | | |
| | ಸ್ವಯಾರ್ಜಿತ ಸ್ವತ್ತಿನ ಸಂದರ್ಭದಲ್ಲಿ ಖರೀದಿ ದಿನಾಂಕ | | | | | | |
| | ಖರೀದಿ ಸಮಯದಲ್ಲಿ ಸ್ವತ್ತಿನ ಬೆಲೆ (ಖರೀದಿಸಿದ್ದ ಪಕ್ಷದಲ್ಲಿ) | | | | | | |
| | ಅಭಿವೃದ್ಧಿ, ನಿರ್ಮಾಣ ಇತ್ಯಾದಿ ರೂಪದಲ್ಲಿ ಸ್ವತ್ತಿನ ಮೇಲೆ ವಿನಿಯೋಗಿಸಿದ ಯಾವುದೇ ಹಣ ಹೂಡಿಕೆ | | | | | | |

| | | | | | | | |
|---|---|---|---|---|---|---|---|
| | ಅಂದಾಜು ಪ್ರಸಕ್ತ ಮಾರುಕಟ್ಟೆ ಮೌಲ್ಯ | | | | | | |
| (iv) | **ವಸತಿ ಕಟ್ಟಡಗಳು**<br>(ಅಪಾರ್ಟ್‌ಮೆಂಟ್‌ಗಳೂ ಸೇರಿದಂತೆ)<br>ಸ್ಥಳ (ಗಳು)<br>ಸರ್ವೆ ನಂಬರು(ಗಳು) | | | | | | |
| | ವಿಸ್ತೀರ್ಣ (ಒಟ್ಟು ಅಳತೆ– ಚದರಡಿಗಳಲ್ಲಿ) | | | | | | |
| | ನಿರ್ಮಿತ ಪ್ರದೇಶ (ಒಟ್ಟು ಅಳತೆ ಚದರಡಿಗಳಲ್ಲಿ) | | | | | | |
| | ಸ್ವತ್ತು ಪಿತ್ರಾರ್ಜಿತವೇ (ಹೌದು ಅಥವಾ ಇಲ್ಲ) | | | | | | |
| | ಸ್ವಯಾರ್ಜಿತ ಸ್ವತ್ತಿನ ಸಂದರ್ಭದಲ್ಲಿ ಖರೀದಿ ದಿನಾಂಕ | | | | | | |
| | ಖರೀದಿ ಸಮಯದಲ್ಲಿ ಸ್ವತ್ತಿನ ಬೆಲೆ (ಖರೀದಿಸಿದ್ದ ಪಕ್ಷದಲ್ಲಿ) | | | | | | |
| | ಅಭಿವೃದ್ಧಿ,ನಿರ್ಮಾಣ ಇತ್ಯಾದಿ ರೂಪದಲ್ಲಿ ಸ್ವತ್ತಿನ ಮೇಲೆ ವಿನಿಯೋಗಿಸಿದ ಯಾವುದೇ ಹಣ ಹೂಡಿಕೆ | | | | | | |
| | ಅಂದಾಜು ಪ್ರಸಕ್ತ ಮಾರುಕಟ್ಟೆ ಮೌಲ್ಯ | | | | | | |
| (v) | **ಇತರೆ** (ಸ್ವತ್ತಿನಲ್ಲಿನ ಹಿತಾಸಕ್ತಿಗೆ ಸಂಬಂಧಿಸಿದಂತಹವು) | | | | | | |
| (vi) | **ಮೇಲ್ಕಂಡ** (i)ರಿಂದ (v)ರವರೆಗಿನ ಬಾಬುಗಳ ಒಟ್ಟು ಪ್ರಸಕ್ತ ಮಾರುಕಟ್ಟೆ ಮೌಲ್ಯ | | | | | | |

(8) ನಾನು, ಇಲ್ಲಿ ಈ ಕೆಳಗೆ, ಸಾರ್ವಜನಿಕ ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರಕ್ಕೆ ತೀರಿಸಬೇಕಾಗಿರುವ ಹೊಣೆಗಾರಿಕೆಗಳು/ ಬಾಕಿಗಳ ವಿವರಗಳನ್ನು ನೀಡುತ್ತೇನೆ:–

(**ಸೂಚನೆ**: ದಯವಿಟ್ಟು ಪ್ರತಿ ಬಾಬಿನ ಮುಂದೆ ಬ್ಯಾಂಕು, ಸಂಸ್ಥೆ, ಎಂಟಿಟಿ ಅಥವಾ ವ್ಯಕ್ತಿಯ ಹೆಸರು ಮತ್ತು ಮೊತ್ತದ ವಿವರಗಳನ್ನು ಪ್ರತ್ಯೇಕವಾಗಿ ನೀಡಿ)

| **ಕ್ರ. ಸಂ.** | **ವಿವರಣೆ** | **ಸ್ವತ: ಅಭ್ಯರ್ಥಿ** | **ಪತಿ/ ಪತ್ನಿ** | **ಹಿಂದೂ ಅವಿಭಕ್ತ ಕುಟುಂಬ (ಎಚ್‌ಯುಎಫ್)** | **ಅವಲಂಬಿತ–1** | **ಅವಲಂಬಿತ–2** | **ಅವಲಂಬಿತ–3** |
|---|---|---|---|---|---|---|---|
| (i) | **ಬ್ಯಾಂಕು/ ಹಣಕಾಸು ಸಂಸ್ಥೆಗೆ (ಗಳಿಗೆ) ಪಾವತಿಸಬೇಕಾದ ಸಾಲ ಅಥವಾ ಬಾಕಿಗಳು**<br>ಬ್ಯಾಂಕಿನ ಅಥವಾ ಹಣಕಾಸು ಸಂಸ್ಥೆಯ ಹೆಸರು ಬಾಕಿ ಉಳಿದಿರುವ ಸಾಲದ ಮೊತ್ತ, ಸಾಲದ ಸ್ವರೂಪ | | | | | | |
| | **ಮೇಲೆ ಹೇಳಲಾಗಿರುವವುಗಳನ್ನು ಬಿಟ್ಟು ಯಾರೇ ಇತರೆವ್ಯಕ್ತಿಗಳಿಗೆ/ ಸಂಸ್ಥೆಗೆ ಪಾವತಿಸಬೇಕಾದ ಸಾಲ ಅಥವಾ ಬಾಕಿಗಳು**<br>ಹೆಸರು(ಗಳು)<br>ಬಾಕಿ ಉಳಿದಿರುವ ಸಾಲದ ಮೊತ್ತ, ಸಾಲದ ಸ್ವರೂಪ | | | | | | |
| | **ಯಾವುದೇ ಇತರ ಹೊಣೆಗಾರಿಕೆ** | | | | | | |
| | **ಹೊಣೆಗಾರಿಕೆಗಳ ಒಟ್ಟು ಜುಮ್ಲಾ** | | | | | | |
| (ii) | **ಸರ್ಕಾರಿ ಬಾಕಿಗಳು:**<br>ಸರ್ಕಾರಿ ವಸತಿಗೆ ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಬೇಕಾದ ಬಾಕಿಗಳು | (ಎ) ವಾಜ್ಮೂಲಕಾರನು ಪ್ರಸಕ್ತ ಚುನಾವಣೆಯ ಅಧಿಸೂಚನೆಯ ದಿನಾಂಕಕ್ಕಿಂತ ಮೊದಲಿನ, ಕಳೆದ ಹತ್ತು ವರ್ಷಗಳಲ್ಲಿ ಯಾವಾಗಲಾದರೂ, ಸರ್ಕಾರವು ಒದಗಿಸಿದ ವಸತಿಗೃಹದಲ್ಲಿ ವಾಸವಾಗಿರುವನೇ?<br>(ಬಿ) ಮೇಲಿನ (ಎ)ಗೆ ಉತ್ತರವು ‘ಹೌದು’ಎಂದಾದಲ್ಲಿ, ಈ ಕೆಳಗಿನಂತೆ ಘೋಷಣೆಯನ್ನು ಸಲ್ಲಿಸಬಹುದಾಗಿರುತ್ತದೆ:<br>(i) ಸರ್ಕಾರಿ ವಸತಿಗೃಹದ ವಿಳಾಸದ – ---------------------------------------------------------------------------------------------------<br>(ii) ಮೇಲೆ ಹೆಸರಿಸಿದ ಸರ್ಕಾರಿ ವಸತಿಗೃಹಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದೇ ಪಾವತಿಗಳನ್ನು ಬಾಕಿ ಉಳಿಸಿಕೊಂಡಿರುವುದಿಲ್ಲ:<br>(ಎ) ಬಾಡಿಗೆ;<br>(ಬಿ) ವಿದ್ಯುಚ್ಛಕ್ತಿ ಶುಲ್ಕಗಳು;<br>(ಸಿ) ನೀರಿನ ಶುಲ್ಕಗಳು; ಮತ್ತು | | | | | ಹೌದು/ಇಲ್ಲ<br>(ಸೂಕ್ತವಾದ ಆಯ್ಕೆಯನ್ನು ಗುರುತು ಮಾಡಿ) |

| | | | |
|---|---|---|---|
| | | (ಡಿ) ----- (ದಿನಾಂಕ) ದಂತೆ ದೂರವಾಣಿ ಶುಲ್ಕಗಳು [ದಿನಾಂಕವು ಚುನಾವಣೆಯನ್ನು ಅಧಿಸೂಚಿಸಲಾಗಿರುವ ದಿನಾಂಕಕ್ಕಿಂತ ಮೊದಲಿನ ಮೂರು ತಿಂಗಳ ಕಡೆಯ ದಿನಾಂಕ ಅಥವ ಆನಂತರದ ಯಾವುದೇ ದಿನಾಂಕವಾಗಿರಬೇಕು]<br><br>ಸೂಚನೆ: ಮೇಲೆ ಹೆಸರಿಸಿದ ಸರ್ಕಾರಿ ವಸತಿಯ ಬಾಡಿಗೆ, ವಿದ್ಯುಚ್ಛಕ್ತಿ ಶುಲ್ಕ, ನೀರಿನ ಶುಲ್ಕ ಮತ್ತು ದೂರವಾಣಿ ಶುಲ್ಕಗಳಿಗೆ ಸಂಬಂಧಿಸಿದಂತೆ ಏಜೆನ್ಸಿಗಳಿಂದ ಬೇಬಾಕಿ 'ಪ್ರಮಾಣಪತ್ರ'ವನ್ನು ಸಲ್ಲಿಸಬೇಕು. | |
| (iii) | ಸರ್ಕಾರಿ ಸಾರಿಗೆಯ ಸಂಪರ್ಕ ಒದಗಿಸಿದ ಇಲಾಖೆಗೆ ಪಾವತಿಸಬೇಕಾದ ಬಾಕಿಗಳು (ವಿಮಾನಗಳು ಮತ್ತು ಹೆಲಿಕ್ಯಾಪ್ಟರ್‌ಗಳು ಒಳಗೊಂಡಂತೆ) | | |

| ಕ್ರ.ಸಂ | ವಿವರಗಳು | ಸ್ವಯಂ | ಪತಿ/ಪತ್ನಿ | ಹಿಂದೂ ಅವಿಭಕ್ತ ಕುಟುಂಬ (ಎಚ್‌ಯುಎಫ್) | ಅವಲಂಬಿತ-1 | ಅವಲಂಬಿತ-2 | ಅವಲಂಬಿತ-3 |
|---|---|---|---|---|---|---|---|
| (iv) | ಆದಾಯ ತೆರಿಗೆ ಬಾಕಿಗಳು | | | | | | |
| (v) | ಜಿಎಸ್‌ಟಿ ಬಾಕಿಗಳು | | | | | | |
| (vi) | ಮುನಿಪಲ್/ ಸ್ವತ್ತಿನ ತೆರಿಗೆ ಬಾಕಿಗಳು | | | | | | |
| (vii) | ಇತರೆ ಯಾವುದೇ ಬಾಕಿಗಳು | | | | | | |
| (viii) | ಎಲ್ಲಾ ಸರ್ಕಾರಿ ಬಾಕಿಗಳ ಒಟ್ಟು ಮೊತ್ತ | | | | | | |
| (ix) | ಯಾವುದಾದರೂ ಇತರ ಹೊಣೆಗಾರಿಕೆಗಳು, ವಿವಾದದಲ್ಲಿವೆಯೇ, ಹಾಗಿದ್ದರೆ, ಅವುಗಳಲ್ಲಿ ಒಳಗೊಂಡ ಮೊತ್ತವನ್ನು ಮತ್ತು ಅವು ಯಾವ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿವೆಯೆಂಬುದನ್ನು ನಮೂದಿಸಿ. | | | | | | |

**(9) ವೃತ್ತಿ ಅಥವಾ ಉದ್ಯೋಗದ ವಿವರಗಳು:**

ಎ. ಸ್ವಯಂ ____________

ಬಿ. ಪತಿ/ ಪತ್ನಿ ____________

(9ಎ) ಆದಾಯದ ಮೂಲದ (ಗಳ) ವಿವರಗಳು:

ಎ. ಸ್ವಯಂ ____________

ಬಿ. ಪತಿ/ ಪತ್ನಿ ______________

ಸಿ. ಅವಲಂಬಿತರ ಆದಾಯದ ಮೂಲ, ಏನಾದರು ಇದ್ದರೆ, ______________

(9ಬಿ) ಸಮುಚಿತ ಸರ್ಕಾರ ಮತ್ತು ಯಾವುದೇ ಸಾರ್ವಜನಿಕ ಕಂಪನಿ ಅಥವಾ ಕಂಪನಿಗಳೊಂದಿಗೆ ಹೊಂದಿರುವ ಕರಾರುಗಳು

(ಎ) ಅಭ್ಯರ್ಥಿಗಳು ಮಾಡಿಕೊಂಡಿರುವ ಕರಾರುಗಳ ವಿವರಗಳು --------------

(ಬಿ) ಅಭ್ಯರ್ಥಿಗಳ ಸಂಗಾತಿ ಮಾಡಿಕೊಂಡಿರುವ ಕರಾರುಗಳ ವಿವರಗಳು -------------

(ಸಿ) ಅಭ್ಯರ್ಥಿಗಳ ಅವಲಂಬಿತರು ಮಾಡಿಕೊಂಡಿರುವ ಕರಾರುಗಳ ವಿವರಗಳು ---------

(ಡಿ) ಅಭ್ಯರ್ಥಿ ಅಥವಾ ಆತನ ಸಂಗಾತಿ ಅಥವಾ ಆತನ ಅವಲಂಬಿತರು ಹಿತಾಸಕ್ತಿಯನ್ನು ಹೊಂದಿರುವಂತಹ ಹಿಂದೂ ಅವಿಭಾಜ್ಯ ಕುಟುಂಬ ಅಥವಾ ಟ್ರಸ್ಟ್ ಮಾಡಿಕೊಂಡಿರುವ ಕರಾರುಗಳ ವಿವರಗಳು -----------

(ಇ) ಅಭ್ಯರ್ಥಿ ಅಥವಾ ಆತನ ಸಂಗಾತಿ ಅಥವಾ ಆತನ ಅವಲಂಬಿತರು ಪಾಲುದಾರರಾಗಿರುವಂಥ ಪಾಲುದಾರ ಸಂಸ್ಥೆಗಳು ಮಾಡಿಕೊಂಡಿರುವ ಕರಾರುಗಳು ವಿವರಗಳು ------------------

(ಎಫ್) ಅಭ್ಯರ್ಥಿ ಅಥವಾ ಆತನ ಸಂಗಾತಿ ಅಥವಾ ಆತನ ಅವಲಂಬಿತರು ಪಾಲು ಹಂಚಿಕೆ ಹೊಂದಿರುವಂಥ ಖಾಸಗಿ ಕಂಪನಿಗಳು ಮಾಡಿಕೊಂಡಿರುವ ಕರಾರುಗಳ ವಿವರಗಳು---

**(10) ನನ್ನ ಶೈಕ್ಷಣಿಕ ವಿದ್ಯಾರ್ಹತೆಯು ಈ ಮುಂದಿನಂತಿವೆ:**

----------------------------------------------------------

(ಪ್ರಮಾಣಪತ್ರ/ ಡಿಪ್ಲೋಮಾ/ ಪದವಿ ಕೋರ್ಸ್‌ನ ಪೂರ್ಣ ಸ್ವರೂಪವನ್ನು, ಶಾಲೆ/ ಕಾಲೇಜು/ ವಿಶ್ವವಿದ್ಯಾನಿಲಯದ ಹೆಸರನ್ನು ಮತ್ತು ಕೋರ್ಸ್‌ನ್ನು ಪೂರ್ಣಗೊಳಿಸಿದ ವರ್ಷವನ್ನು ನಮೂದಿಸಿ ತಾವು ಪಡೆದ ಗರಿಷ್ಠ ಶಾಲಾ/ ಕಾಲೇಜು/ ವಿಶ್ವವಿದ್ಯಾಲಯ ಶಿಕ್ಷಣದ ವಿವರಗಳನ್ನು ನೀಡಿ).

## ಭಾಗ–ಬಿ

**(11) (ಎ) ಭಾಗದ (1) ರಿಂದ 10ರ ವರೆಗಿನ ಬಾಬುಗಳಲ್ಲಿ ನೀಡಲಾದ ವಿವರಗಳ ಸಾರಾಂಶ:**

| 1 | **ಅಭ್ಯರ್ಥಿಗಳ ಹೆಸರು** | | **ಶ್ರೀ/ ಶ್ರೀಮತಿ / ಕುಮಾರಿ** | |
|---|---|---|---|---|
| **2** | ಸಂಪೂರ್ಣ ಅಂಚೆ ವಿಳಾಸ | | | |
| **3** | ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು ಹಾಗೂ ರಾಜ್ಯ | | | |
| **4** | ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸಿರುವ ರಾಜಕೀಯ ಪಕ್ಷದ ಹೆಸರು (ಇಲ್ಲದಿದ್ದರೆ ಪಕ್ಷೇತರ ಎಂದು ಬರೆಯಿರಿ) | | | |
| **5** | ಒಟ್ಟು ಬಾಕಿಯಿರುವ ಅಪರಾಧಿಕ ಪ್ರಕರಣಗಳ ಸಂಖ್ಯೆ | | | |
| **6** | ಅಪರಾಧ ನಿರ್ಣೀತವಾದ ಒಟ್ಟು ಪ್ರಕರಣಗಳ ಸಂಖ್ಯೆ | | | |
| **7** | | **ಪ್ಯಾನ್ ಸಂಖ್ಯೆ** | **ಹಿಂದಿನ ಆದಾಯ ತೆರಿಗೆ ವಿವರಪಟ್ಟಿಯನ್ನು ಸಲ್ಲಿಸಿದ ವರ್ಷ** | **ತೋರಿಸಲಾದ ಒಟ್ಟು ಆದಾಯ** |
| | (ಎ) ಅಭ್ಯರ್ಥಿ | | | |
| | (ಬಿ) ಪತಿ/ ಪತ್ನಿ | | | |
| | (ಸಿ) ಹಿಂದು ಅವಿಭಕ್ತ ಕುಟುಂಬ | | | |
| | (ಡಿ) ಅವಲಂಬಿತರು | | | |

| 8. ಆಸ್ತಿಗಳು ಮತ್ತು ಹೊಣೆಗಾರಿಕೆಗಳ (ವಿದೇಶದಲ್ಲಿನ ಸ್ವತ್ತನ್ನು ಒಳಗೊಂಡಂತೆ) ವಿವರಗಳು – ರೂಪಾಯಿಗಳಲ್ಲಿ | | | | | | | | |
|---|---|---|---|---|---|---|---|---|
| | ವಿವರಣೆ | | ಸ್ವಯಂ | ಪತಿ/ ಪತ್ನಿ | ಹಿಂದೂ ಅವಿಭಕ್ತ ಕುಟುಂಬ (ಎಚ್‌ಯುಎಫ್) | ಅವಲಂಬಿತ 1 | ಅವಲಂಬಿತ 2 | ಅವಲಂಬಿತ 3 |
| ಎ | ಚರಾಸ್ತಿಗಳು (ಒಟ್ಟು ಮೌಲ್ಯ) | | ಸ್ವಯಂ | | | | | |
| ಬಿ | ಸ್ಥಿರಾಸ್ತಿಗಳು | | | | | | | |
| | I | ಸ್ವಯಾರ್ಜಿತವಾದ ಸ್ಥಿರಾಸ್ತಿಯ ಖರೀದಿ ಬೆಲೆ | | | | | | |
| | II | ಖರೀದಿಯ ನಂತರ ಸ್ಥಿರಾಸ್ತಿಯ ಅಭಿವೃದ್ಧಿ/ ನಿರ್ಮಾಣ ವೆಚ್ಚ (ಅನ್ವಯವಾಗುತ್ತಿದ್ದರೆ) | | | | | | |
| | III | ಪ್ರಸಕ್ತ ಅಂದಾಜು ಮಾರುಕಟ್ಟೆ ಬೆಲೆ | | | | | | |
| | | **(ಎ)ಸ್ವಯಾರ್ಜಿತ ಸ್ವತ್ತುಗಳು (ಒಟ್ಟು ಮೌಲ್ಯ)** | | | | | | |
| | | **(ಬಿ)ಪಿತ್ರಾರ್ಜಿತ ಸ್ವತ್ತುಗಳು (ಒಟ್ಟು ಮೌಲ್ಯ)** | | | | | | |
| **9** | **ಹೊಣೆಗಾರಿಕೆಗಳು** | | | | | | | |
| | (i) | ಸರ್ಕಾರದ ಬಾಕಿಗಳು (ಒಟ್ಟು) | | | | | | |
| | (ii) | ಬ್ಯಾಂಕು, ಹಣಕಾಸು ಸಂಸ್ಥೆಗಳು ಮತ್ತು ಇತರರಿಂದ ಸಾಲಗಳು (ಒಟ್ಟು) | | | | | | |
| **10** | **ವಿವಾದದಲ್ಲಿರುವ ಹೊಣೆಗಾರಿಕೆಗಳು** | | | | | | | |
| | (i) | ಸರ್ಕಾರದ ಬಾಕಿಗಳು (ಒಟ್ಟು) | | | | | | |
| | (ii) | ಬ್ಯಾಂಕು, ಹಣಕಾಸು ಸಂಸ್ಥೆಗಳು ಮತ್ತು ಇತರರಿಂದ ಸಾಲಗಳು (ಒಟ್ಟು) | | | | | | |

**11 ಗರಿಷ್ಠ ಶೈಕ್ಷಣಿಕ ವಿದ್ಯಾರ್ಹತೆ:**

(ಪ್ರಮಾಣಪತ್ರ/ ಡಿಪ್ಲೊಮಾ/ ಪದವಿ ಕೋರ್ಸ್‌ನ ಪೂರ್ಣ ಸ್ವರೂಪವನ್ನು ಶಾಲೆ/ ಕಾಲೇಜು/ ವಿಶ್ವವಿದ್ಯಾನಿಲಯದ ಹೆಸರನ್ನು ಮತ್ತು ಕೋರ್ಸನ್ನು ಪೂರ್ಣಗೊಳಿಸಿದ ವರ್ಷವನ್ನು ನಮೂದಿಸಿ, ತಾವು ಪಡೆದ ಗರಿಷ್ಠ ಶಾಲಾ/ ವಿಶ್ವವಿದ್ಯಾನಿಲಯ ಶಿಕ್ಷಣದ ವಿವರಗಳನ್ನು ನೀಡಿ).

**ದೃಢೀಕರಣ**

ಮೇಲ್ಕಂಡ ಹೆಸರಿನ ಹೇಳಿಕೆದಾರನಾದ ನಾನು, ಈ ಅಫಿಡೇವಿಟ್‌ನ ಒಳಾಂಶಗಳು ನನ್ನ ತಿಳಿವಳಿಕೆ ಮತ್ತು ನಂಬಿಕೆಯ ಮಟ್ಟಿಗೆ ಸತ್ಯವಾಗಿವೆ ಮತ್ತು ಸರಿಯಾಗಿವೆ ಎಂದು ಮತ್ತು ಇದರಲ್ಲಿನ ಯಾವ ಭಾಗವೂ ಸುಳ್ಳಲ್ಲವೆಂದು ಮತ್ತು ಇದರಿಂದ ಯಾವ ಮುಖ್ಯ ವಿಷಯವನ್ನೂ ಮರೆಮಾಚಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ ಹಾಗೂ ಘೋಷಿಸುತ್ತೇನೆ. ಅಷ್ಟೇ ಅಲ್ಲದೆ ನಾನು:–

(ಎ) ಮೇಲ್ಕಂಡ ಭಾಗ ಎ ಮತ್ತು ಬಿ ಯಲ್ಲಿನ 5 ಮತ್ತು 6ನೇ ಬಾಬುಗಳಲ್ಲಿ ನಮೂದಿಸಿದವುಗಳನ್ನು ಹೊರತುಪಡಿಸಿ, ನನ್ನ ವಿರುದ್ಧ ಯಾವುದೇ,

ಅಪರಾಧ ನಿರ್ಣೀತವಾಗಿರುವ ಪ್ರಕರಣಗಳು ಇರುವುದಿಲ್ಲ ಅಥವಾ ಯಾವುದೇ ಪ್ರಕರಣ ಇತ್ಯರ್ಥವಾಗದೆ ಬಾಕಿ ಇರುವುದಿಲ್ಲ.

(ಬಿ) ನಾನು, ನನ್ನ ಪತಿ/ಪತ್ನಿ ಅಥವಾ ನನ್ನ ಅವಲಂಬಿತರು, ಮೇಲ್ಕಂಡ ಭಾಗ ಎ ಯಲ್ಲಿನ 7 ಮತ್ತು 8ನೇ ಬಾಬುಗಳಲ್ಲಿ ಹಾಗೂ ಭಾಗ ಬಿ ಯಲ್ಲಿನ 8,9 ಮತ್ತು 10ನೇ ಬಾಬುಗಳಲ್ಲಿ ನಮೂದಿಸಿರುವಂಥವುಗಳನ್ನು ಹೊರತುಪಡಿಸಿ, ಯಾವುದೇ ಇತರ ಆಸ್ತಿ ಅಥವಾ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ ಎಂದು ಘೋಷಿಸುತ್ತೇನೆ.

––––––––––––––– ದಿನದಂದು ಇದನ್ನು –––––––––––––ದಲ್ಲಿ (ಸ್ಥಳ) ದೃಢೀಕರಿಸಲಾಗಿದೆ.

**ಹೇಳಿಕೆದಾರ**

––––––––––––––––––––––––––––––––––––––––––––––––––––––––––––––––

ಸೂಚನೆ 1: ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನದಂದು ಮಧ್ಯಾಹ್ನ 3.00 ಗಂಟೆಯೊಳಗಾಗಿ ಅಫಿಡೇವಿಟ್ ಸಲ್ಲಿಸತಕ್ಕದ್ದು.

ಸೂಚನೆ 2: ಅಫಿಡಾವಿಟ್‌ನ್ನು ಪ್ರಮಾಣವಚನ ಭೋದಿಸುವ ಕಮಿಷನರ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಅಥವಾ ನೋಟರಿ ಪಬ್ಲಿಕ್ ಅವರ ಸಮ್ಮುಖದಲ್ಲಿ ಪ್ರಮಾಣ ಮಾಡತಕ್ಕದ್ದು.

ಸೂಚನೆ 3: ಎಲ್ಲಾ ಅಂಕಣಗಳನ್ನು ಭರ್ತಿ ಮಾಡತಕ್ಕದ್ದು ಮತ್ತು ಯಾವುದೇ ಅಂಕಣವನ್ನು ಖಾಲಿ ಬಿಡತಕ್ಕದ್ದಲ್ಲ.ಯಾವುದೇ ಬಾಬಿಗೆ ಸಂಬಂಧಿಸಿದಂತೆ ಒದಗಿಸಲು ಯಾವುದೇ ಮಾಹಿತಿ ಇಲ್ಲದಿದ್ದಲ್ಲಿ, ಸಂದರ್ಭಾನುಸಾರ "ಇಲ್ಲ"ವೆಂದಾಗಲೀ ಅಥವಾ "ಅನ್ವಯಿಸುವುದಿಲ್ಲ"ವೆಂದಾಗಲೀ ನಮೂದಿಸತಕ್ಕದ್ದು.

ಸೂಚನೆ 4: ಅಫಿಡೇವಿಟ್ ಅನ್ನು ಬೆರಳಚ್ಚು ಮಾಡಿರತಕ್ಕದ್ದು ಅಥವಾ ಸ್ಫುಟವಾಗಿ ಮತ್ತು ಅಚ್ಚುಕಟ್ಟಾಗಿ ಬರೆದಿರತಕ್ಕದ್ದು.

ಸೂಚನೆ 5: ಅಫಿಡವಿಟ್‌ನ ಪ್ರತಿ ಪುಟದಲ್ಲಿ ಹೇಳಿಕೆದಾರರು ಸಹಿಯನ್ನು ಮಾಡಿರಬೇಕು ಮತ್ತು ಅಫಿಡವಿಟ್‌ನ ಪ್ರತಿ ಪುಟದ ಮೇಲೆ ಯಾರ ಸಮ್ಮುಖದಲ್ಲಿ ಪ್ರಮಾಣ ಮಾಡಲಾಗಿದೆಯೋ ಆ ನೋಟರಿ ಅಥವಾ ಪ್ರಮಾಣವಚನ ಬೋಧಿಸುವ ಕಮಿಷನರ್ ಅಥವಾ ಮ್ಯಾಜಿಸ್ಟ್ರೇಟ್‌ರ ಸಹಿ ಮತ್ತು ಮೊಹರನ್ನು ಹೊಂದಿರತಕ್ಕದ್ದು.

## ಪರಿಶಿಷ್ಟ 9

### (ಅಧ್ಯಾಯ 5, ಪ್ಯಾರಾ 5.7.5)
### ವಿಧಾನಸಭಾ ಕ್ಷೇತ್ರಗಳಲ್ಲಿನ ರಾಜ್ಯಗಳು ಮತ್ತು ಭಾಷೆಗಳು

ನಿರ್ದೇಶನ ಸಂಖ್ಯೆ. 3/4/2018/ಎಸ್‌ಡಿಆರ್, ದಿನಾಂಕ 31ನೇ ಅಕ್ಟೋಬರ್ 2018 ಮತ್ತು ನಿರ್ದೇಶನ ಸಂಖ್ಯೆ. 3/4/2008/ಜೆ.ಎಸ್–II, ದಿನಾಂಕ 16ನೇ ಸೆಪ್ಟೆಂಬರ್, 2008 ಹಾಗೂ ಚುನಾವಣೆಗಳನ್ನು ನಡೆಸುವ ನಿಯಮಗಳು, 1961 ರ 10ನೇ ನಿಯಮದ (1)ನೇ ಮತ್ತು (3)ನೇ ಉಪನಿಯಮಗಳಿಗೆ ಅನುಸಾರವಾಗಿ ಚುನಾವಣಾ ಆಯೋಗವು ಕೆಳಗಿನ ಕೋಷ್ಠಕದ (1)ನೇ ಕಾಲಂನಲ್ಲಿ ನಮೂದಿಸಲಾದ ರಾಜ್ಯದ/ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿಕೋಷ್ಠಕದ (2)ನೇ ಕಾಲಂನಲ್ಲಿ ನಮೂದಿಸಲಾದ ವಿಧಾನಸಭೆ ಮತಕ್ಷೇತ್ರಗಳಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ನಮೂನೆ 7ಎಯಲ್ಲಿ, ಸದರಿ ಕೋಷ್ಠಕದ (3) ನೇ ಕಾಲಂನಲ್ಲಿ ಮತಕ್ಷೇತ್ರದ ಎದುರಿಗೆ ನಿರ್ದಿಷ್ಟಪಡಿಸಿದ ಭಾಷೆಯಲ್ಲಿ ಅಥವಾ ಭಾಷೆಗಳಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಒಂದಕ್ಕಿಂತ ಹೆಚ್ಚಿನ ಭಾಷೆಗಳಲ್ಲಿ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿದ್ದರೆ, ಅಭ್ಯರ್ಥಿಗಳ ಹೆಸರನ್ನು (3)ನೇ ಕಾಲಂನಲ್ಲಿ ಮೊದಲುನಿರ್ದಿಷ್ಟಪಡಿಸಿದಭಾಷೆಯ ಲಿಪಿಯಲ್ಲಿ ಅಕಾರಾದಿಯಗಿ ಸಿದ್ಧಪಡಿಸತಕ್ಕದೆಂದು ನಿರ್ದೇಶಿಸಿದೆ:–

ಚುನಾವಣಾ ಆಯೋಗಕ್ಕೆ ಅಂತಹ ಯಾವುದೇ ಪಟ್ಟಿಯನ್ನು ಕಳುಹಿಸುವಾಗ, ಅದು ಇಂಗ್ಲೀಷ್‌ನಲ್ಲಿ ಇರದಿದ್ದರೆ, ಅದರ ಇಂಗ್ಲೀಷ್ ಭಾಷಾಂತರದ ಜೊತೆಗೆ ಕಳುಹಿಸತಕ್ಕದ್ದು.

**ಕೋಷ್ಠಕ**

| ಕ್ರ. ಸಂ. | ರಾಜ್ಯ/ಕೇಂದ್ರಾಡಳಿತ ಪ್ರದೇಶ | ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಮತ್ತು ಹೆಸರು | ರಾಜ್ಯ/ಕೇಂದ್ರಾಡಳಿತ ಪ್ರದೇಶ |
|---|---|---|---|
| | 1 | 2 | 3 |
| 1. | ಆಂಧ್ರ ಪ್ರದೇಶ | ಎಲ್ಲಾ ವಿಧಾನಸಭಾ ಕ್ಷೇತ್ರಗಳು | ತೆಲುಗು |
| 2. | ಅರುಣಾಚಲ ಪ್ರದೇಶ | ಎಲ್ಲಾ ವಿಧಾನಸಭಾ ಕ್ಷೇತ್ರಗಳು | ಇಂಗ್ಲೀಷ್ |
| 3. | ಅಸ್ಸಾಂ | 1– ರತಬಾರಿ (ಎಸ್‌ಸಿ) | ಬೆಂಗಾಲಿ |
| | | 2– ಪಥರ್‌ಖಂಡಿ | |
| | | 3– ಕರಿಮ್‌ಗಂಜ್ ಉತ್ತರ | |
| | | 4– ಕರಿಮ್‌ಗಂಜ್ ದಕ್ಷಿಣ | |
| | | 5– ಬದರ್‌ಪುರ | |
| | | 6– ಹೈಲಖಂಡಿ | |
| | | 7– ಕಟ್ಲಿಚೇರಾ | |
| | | 8– ಅಲ್ಗಪುರ | |

| | | | |
|---|---|---|---|
| | | 9– ಸಿಲ್‌ಚಾರ್ | |
| | | 10– ಸೋನಾಯ್ | |
| | | 11– ಧೊಲಾಯ್ (ಪರಿಶಿಷ್ಟ ಜಾತಿ) | |
| | | 12– ಉಧರ್‌ಬಾಂದ್ | |
| | | 13–ಲಖಿಪುರ | |
| | | 14– ಬಾರ್‌ಕೋಲಾ ಮತ್ತು | |
| | | 15–ಕಾಟಿಗೊರ | |
| | | 16–ಹಾಫ್‌ಲಾಂಗ್ (ಎಸ್‌ಟಿ) | ಇಂಗ್ಲೀಷ್ |
| | | ಎಲ್ಲಾ ಇತರೆ ವಿಧಾನಸಭಾ ಮತಕ್ಷೇತ್ರಗಳು | ಅಸ್ಸಾಮಿ |
| 4. | ಬಿಹಾರ್ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 5. | ಛತ್ತೀಸ್‌ಗಡ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 6. | ಗೋವ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಇಂಗ್ಲೀಷ್ ಮತ್ತು ಕೊಂಕಣಿ/ದೇವನಾಗರಿ ಲಿಪಿಯಲ್ಲಿ ಮರಾಠಿ |
| 7. | ಗುಜರಾತ್ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಗುಜರಾತಿ |
| 8. | ಹರಿಯಾಣ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 9. | ಹಿಮಾಚಲ ಪ್ರದೇಶ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 10. | ಜಾರ್ಖಂಡ್ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 11. | ಕರ್ನಾಟಕ | 1–ನಿಪ್ಪಾಣಿ | ಕನ್ನಡ ಮತ್ತು ಮರಾಠಿ |
| | | 2–ಚಿಕ್ಕೋಡಿ–ಸದಲಗ | |
| | | 11–ಬೆಳಗಾಂ ಉತ್ತರ | |
| | | 12–ಬೆಳಗಾಂ ದಕ್ಷಿಣ | |
| | | 13–ಬೆಳಗಾಂ ಗ್ರಾಮಾಂತರ | |
| | | 14–ಖಾನಪುರ | |
| | | 47–ಬಸವಕಲ್ಯಾಣ | |
| | | 51–ಬಾಲ್ಕಿ | |

| | | | |
|---|---|---|---|
| | | 52–ಔರಾದ್ (ಪರಿಶಿಷ್ಟ ಜಾತಿ) | |
| | | 76– ಕಾರವಾರ | |
| | | 44–ಗುಲ್ಬರ್ಗಾ ದಕ್ಷಿಣ | |
| | | 45– ಗುಲ್ಬರ್ಗಾ ಉತ್ತರ | ಕನ್ನಡ ಮತ್ತು ಉರ್ದು |
| | | 146–ಕೋಲಾರ ಗೋಲ್ಡ್ ಫೀಲ್ಡ್ (ಪರಿಶಿಷ್ಟ ಜಾತಿ) | ಕನ್ನಡ ಮತ್ತು ಇಂಗ್ಲೀಷ್ |
| | | 154–ರಾಜರಾಜೇಶ್ವರಿ ನಗರ | |
| | | 156–ಮಹಾಲಕ್ಷ್ಮಿ ಲೇಔಟ್ | |
| | | 157–ಮಲ್ಲೇಶ್ವರಂ | |
| | | 159–ಪುಲಕೇಶಿ ನಗರ (ಪರಿಶಿಷ್ಟ ಜಾತಿ) | |
| | | 160–ಸರ್ವಜ್ಞ ನಗರ | |
| | | 161–ಸಿ.ವಿ.ರಾಮನ್ ನಗರ (ಪರಿಶಿಷ್ಟ ಜಾತಿ) | |
| | | 162–ಶಿವಾಜಿನಗರ | |
| | | 163–ಶಾಂತಿನಗರ | |
| | | 164–ಗಾಂಧಿನಗರ | |
| | | 165–ರಾಜಾಜಿನಗರ | |
| | | 166–ಗೋವಿಂದರಾಜನಗರ | |
| | | 167–ವಿಜಯನಗರ | |
| | | 168–ಚಾಮರಾಜಪೇಟೆ | |
| | | 169–ಚಿಕ್ಕಪೇಟೆ | |
| | | 170–ಬಸವನಗುಡಿ | |
| | | 173–ಜಯನಗರ | |
| | | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಕನ್ನಡ |
| 12 | ಕೇರಳ | 1–ಮಂಜೇಶ್ವರ | ಮಲಯಾಳಂ ಮತ್ತು ಕನ್ನಡ |

| | | | |
|---|---|---|---|
| | | 2–ಕಾಸರಗೋಡು | |
| | | 88–ದೇವಿಕುಳಂ (ಪರಿಶಿಷ್ಟ ಜಾತಿ) | ಮಲಯಾಳಂ ಮತ್ತು ತಮಿಳು |
| | | ಎಲ್ಲಾ ಇತರೆ ವಿಧಾನಸಭಾ ಮತಕ್ಷೇತ್ರಗಳು | ಮಲಯಾಳಂ |
| 13 | ಮಧ್ಯಪ್ರದೇಶ | 150–ಭೋಪಾಲ್ ಉತ್ತರ, | ಹಿಂದಿ ಮತ್ತು ಉರ್ದು |
| | | 151–ನರೇಲ, | |
| | | 152– ಭೋಪಾಲ್ ದಕ್ಷಿಣ–ಪಶ್ಚಿಮ್, | |
| | | 153– ಭೋಪಾಲ್ ಮಧ್ಯ | |
| | | 180– ಭುರಹಾನ್‌ಪುರ್ | |
| | | ಎಲ್ಲಾ ಇತರ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 14 | ಮಹಾರಾಷ್ಟ್ರ | 52–ನಾಗ್‌ಪುರ ದಕ್ಷಿಣ ಪಶ್ಚಿಮ, | ಮರಾಠಿ ಮತ್ತು ಇಂಗ್ಲೀಷ್ |
| | | 53–ನಾಗ್‌ಪುರ ದಕ್ಷಿಣ, | |
| | | 54–ನಾಗ್‌ಪುರ ಪೂರ್ವ, | |
| | | 55–ನಾಗ್‌ಪುರ ಕೇಂದ್ರ | |
| | | 56–ನಾಗ್‌ಪುರ ಪಶ್ಚಿಮ, | |
| | | 57–ನಾಗ್‌ಪುರ ಉತ್ತರ (ಪರಿಶಿಷ್ಟ ಜಾತಿ) | |
| | | 146–ಓವಲಾ ಮಾಜಿವಾಡ | |
| | | 147–ಕೊಪ್ರಿ ಪಚ್ಛಖಡಿ | |
| | | 148–ಥಾಣೆ | |
| | | 149–ಮುಂಬ್ರ ಕಲ್ವ | |
| | | 150–ಐರೋಳಿ | |
| | | 151–ಬೆಲಾಪುರ್ | |
| | | 152–ಬೊರಿವಾಲಿ | |
| | | 153–ದಹಿಸರ್ | |
| | | 154–ಮಘಥಾಣೆ | |
| | | 155–ಮುಲುಂದು | |

| | | | |
|---|---|---|---|
| | | 156–ವಿಕ್ರೋಲಿ | |
| | | 157–ಬಂಡೂಪ್ ಪಶ್ಚಿಮ | |
| | | 158–ಜೋಗೇಶ್ವರಿ ಪೂರ್ವ | |
| | | 159–ದಿಂಡೋಷಿ | |
| | | 160– ಖಾಂಡಿವಲಿ ಪೂರ್ವ | |
| | | 161–ಚಾರ್ಕಿಪ್ | |
| | | 162–ಮಲದ್ ಪಶ್ಚಿಮ | |
| | | 163–ಗೊರೆಗಾಂವ್ | |
| | | 164–ವೆರ್ಸೊವ | |
| | | 165–ಅಂಧೇರಿ ಪಶ್ಚಿಮ | |
| | | 166–ಅಂಧೇರಿ ಪೂರ್ವ | |
| | | 167–ವಿಲೆಪಾರ್ಲೆ | |
| | | 168–ಚಾಂದ್‌ವಲಿ | |
| | | 169–ಘಾಟ್‌ಕೋಪರ್ ಪಶ್ಚಿಮ | |
| | | 170–ಘಾಟ್‌ಕೋಪರ್ ಪೂರ್ವ | |
| | | 171–ನಾನ್‌ಖುರ್ದ್ ಶಿವಾಜಿನಗರ | |
| | | 209–ಶಿವಾಜಿನಗರ, | |
| | | 210–ಕೊತ್ರುದ್ | |
| | | 211–ಖಡಕ್‌ವಾಸ್ಲ | |
| | | 212–ಪರ್ವಟಿ | |
| | | 213–ಹಡಪ್ಸರ | |
| | | 214–ಪುಣೆ ಕಂಟೋನ್‌ಮೆಂಟ್ (ಪರಿಶಿಷ್ಟ ಜಾತಿ) | |
| | | 215–ಕಸಬಾಪೇಟ್ | |
| | | 86–ನಾಂದೇಡ್ ಉತ್ತರ | ಮರಾಠಿ ಮತ್ತು ಉರ್ದು |

| | | | |
|---|---|---|---|
| | | 87–ನಾಂದೇಡ್ ದಕ್ಷಿಣ | |
| | | 106–ಫೂಲಾಂಬರಿ | |
| | | 107–ಔರಂಗಬಾದ್ ಕೇಂದ್ರ (ಸೆಂಟ್ರಲ್) | |
| | | 108–ಔರಂಗಬಾದ್ ಪಶ್ಚಿಮ (ಪರಿಶಿಷ್ಟ ಜಾತಿ) | |
| | | 109–ಔರಂಗಬಾದ್ ಪೂರ್ವ | |
| | | 114–ಮಲೆಗಾಂವ್ ಕೇಂದ್ರ (ಸೆಂಟ್ರಲ್) | |
| | | 115–ಮಲೆಗಾಂವ್ ಔಟರ್ | |
| | | 136–ಭಿವಂಡಿ ಪಶ್ಚಿಮ ಮತ್ತು | |
| | | 137–ಭಿವಂಡಿ ಪೂರ್ವ | |
| | | 174– ಕುರ್ಲಾ (ಪರಿಶಿಷ್ಟ ಜಾತಿ) | ಮರಾಠಿ, ಇಂಗ್ಲೀಷ್ ಮತ್ತು ಉರ್ದು |
| | | 175–ಕಲಿನಾ | |
| | | 181–ಮಹೀಂ | |
| | | 184–ಬೈಕುಲ್ಲ, ಮತ್ತು | |
| | | 186–ಮುಂಬದೇವಿ | |
| | | 250–ಅಕ್ಕಲ ಕೋಟೆ | ಮರಾಠಿ ಮತ್ತು ಕನ್ನಡ |
| | | 251–ಸೋಲಾಪುರ ದಕ್ಷಿಣ | |
| | | 271–ಚಾಂದ್‌ಗಡ | |
| | | 280–ಶಿರೋಳ್, ಮತ್ತು | |
| | | 288–ಜಾಟ್ | |
| | | ಎಲ್ಲಾ ಇತರೆ ವಿಧಾನಸಭಾ ಕ್ಷೇತ್ರಗಳು | ಮರಾಠಿ |
| 15 | ಮಣಿಪುರ | 41–ಚಂದೇಲ್ (ಪರಿಶಿಷ್ಟ ಜಾತಿ) | ಇಂಗ್ಲೀಷ್ |
| | | 42– ಟೆಂಗ್‌ನೌಪಲ್ (ಪರಿಶಿಷ್ಟ ಜಾತಿ) | |
| | | 43–ಘುನ್‌ಯಾರ್ (ಪರಿಶಿಷ್ಟ ಜಾತಿ) | |

| | | | |
|---|---|---|---|
| | | 44–ಉಖ್ರುಲ್ (ಪರಿಶಿಷ್ಟ ಜಾತಿ) | |
| | | 45–ಚಿಂಗಾಯ್ (ಪರಿಶಿಷ್ಟ ಜಾತಿ) | |
| | | 46–ಸೈಕೂಲ್ (ಪರಿಶಿಷ್ಟ ಜಾತಿ) | |
| | | 47–ಕರೊಂಗ್ (ಪರಿಶಿಷ್ಟ ಜಾತಿ) | |
| | | 48–ಮಾವೊ (ಪರಿಶಿಷ್ಟ ಜಾತಿ) | |
| | | 49–ತಡುಬಿ (ಪರಿಶಿಷ್ಟ ಜಾತಿ) | |
| | | 50–ಕನ್ಪೋಕ್ಪಿ | |
| | | 51–ಸೈತೂ | |
| | | 52–ತಮ್ಮೈ (ಪರಿಶಿಷ್ಟ ಜಾತಿ) | |
| | | 53–ತೆಮೊಂಗ್ಲೊಂಗ್ (ಪರಿಶಿಷ್ಟ ಜಾತಿ) | |
| | | 54–ನುಂಗ್‌ಬ (ಪರಿಶಿಷ್ಟ ಜಾತಿ) | |
| | | 55–ತಿಪಾಯ್ ಮುಖ್ (ಪರಿಶಿಷ್ಟ ಜಾತಿ) | |
| | | 56–ಥಾನ್ಲೋನ್ (ಪರಿಶಿಷ್ಟ ಜಾತಿ) | |
| | | 57–ಹೇಂಗ್ಲೇಪ್ (ಪರಿಶಿಷ್ಟ ಜಾತಿ) | |
| | | 58–ಚುರಾಚಂದ್ ಪುರ (ಪರಿಶಿಷ್ಟ ಜಾತಿ) | |
| | | 59–ಸೈಕೋಟ್ (ಪರಿಶಿಷ್ಟ ಜಾತಿ) | |
| | | 60–ಸಿಂಘಾಟ್ (ಪರಿಶಿಷ್ಟ ಜಾತಿ) | |
| | | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಮನಿಪುರಿ |
| 16 | ಮೇಘಾಲಯ | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಇಂಗ್ಲೀಷ್ |
| 17 | ಮಿಜೋರಾಂ | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಇಂಗ್ಲೀಷ್ |
| 18 | ನಾಗಾಲ್ಯಾಂಡ್ | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಇಂಗ್ಲೀಷ್ |
| 19 | ಓರಿಸ್ಸಾ | 127–ಛತ್ರಪುರ್ (ಪರಿಶಿಷ್ಟ ಜಾತಿ) | ಓರಿಯಾ ಮತ್ತು ತೆಲುಗು |
| | | 133–ಬೆಹ್ರಾಂಪುರ, | |
| | | 137–ಪರಲಖೇಮುಂಡಿ, | |
| | | 138–ಗುನಪುರ್ (ಪರಿಶಿಷ್ಟ ಜಾತಿ) ಮತ್ತು | |

| | | | |
|---|---|---|---|
| | | 140–ರಾಯಗಡ (ಪರಿಶಿಷ್ಟ ಜಾತಿ) | |
| | | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಓರಿಯಾ |
| 20 | ಪಂಜಾಬ್ | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಪಂಜಾಬಿ |
| 21 | ರಾಜಸ್ಥಾನ್ | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಹಿಂದಿ |
| 22 | ಸಿಕ್ಕಿಂ | ಎಲ್ಲಾ ಇತರೆ ವಿಧಾನಸಭೆ ಮತ ಕ್ಷೇತ್ರಗಳು | ಇಂಗ್ಲೀಷ್ |
| 23 | ತಮಿಳುನಾಡು | 3–ತಿರುತ್ತಣಿ | ತಮಿಳು ಮತ್ತು ತೆಲುಗು |
| | | 11–ಡಾ॥ ರಾಧಕೃಷ್ಣನ್ ನಗರ | ತಮಿಳು ಮತ್ತು ಇಂಗ್ಲೀಷ್ |
| | | 12–ಪೆರಂಬೂರು | |
| | | 13–ಕೊಲತ್ತೂರು | |
| | | 14–ವಿಲ್ಲಿವಾಕಂ | |
| | | 15–ತಿರು–ವೈ–ಕ–ನಗರ (ಪರಿಶಿಷ್ಟ ಜಾತಿ) | |
| | | 16–ಎಗ್‌ಮೋರ್ (ಪರಿಶಿಷ್ಟ ಜಾತಿ) | |
| | | 17–ರೊಯಪುರಂ | |
| | | 18–ಹಾರ್ಬರ್ | |
| | | 19–ಚೆಪಾಕ್ ತಿರುವಲ್ಲಿಕೇಣಿ | |
| | | 20–ಥೌಸಂಡ್ ಲೈಟ್ಸ್ (ಸಾವಿರ ದೀಪಗಳು) | |
| | | 21–ಅಣ್ಣಾ ನಗರ | |
| | | 22–ವಿರುಗುಂಪಾಕಂ | |
| | | 23–ಸೈದಾಪೇಟ್ | |
| | | 24–ತಿಯಗರಾಯನಗರ | |
| | | 25–ಮೈಲಾಪುರ್ | |
| | | 26–ವೆಲಚೆರಿ | |
| | | 54–ವೆಪ್ಪನಹಳ್ಳಿ | |

| | | | |
|---|---|---|---|
| | | 55–ಹೊಸೂರು | ತಮಿಳು, ತೆಲುಗು ಮತ್ತು ಕನ್ನಡ |
| | | 56–ಥಲ್ಲಿ | |
| | | 109–ಗುಡಲೂರು (ಪರಿಶಿಷ್ಟ ಜಾತಿ) | ತಮಿಳು ಮತ್ತು ಮಲಯಾಳಂ |
| | | 232–ಪದ್ಮಾನಭಾಪುರಂ | |
| | | 233–ವಿಲವಾಂಕೊಡೆ | |
| | | 234–ಕಿಳ್ಳಿಯಾರ್ | |
| | | ಎಲ್ಲಾ ಇತರೆ ವಿಧಾನಸಭೆ ಮತಕ್ಷೇತ್ರಗಳು | ತಮಿಳು |
| 24 | ತೆಲಂಗಾಣ | 8– ಬೋತ್ (ಪರಿಶಿಷ್ಟ ಪಂಗಡ) | ತೆಲುಗು ಮತ್ತು ಮರಾಠಿ |
| | | 10– ಮುದೋಲೆ | |
| | | 13– ಜುಕ್ಕಲ್ (ಪರಿಶಿಷ್ಟ ಜಾತಿ) | |
| | | 17– ನಿಜಾಮಬಾದ್ (ಗ್ರಾಮೀಣ) | ತೆಲುಗು ಮತ್ತು ಉರ್ದು |
| | | 57– ಮುಶೀರಾಬಾದ್ | ತೆಲುಗು, ಇಂಗ್ಲೀಷ್ ಮತ್ತು ಉರ್ದು |
| | | 58– ಮಾಲಕ್‌ಪೇಟ್ | |
| | | 59– ಅಂಬೇರ್‌ಪೇಟ್ | |
| | | 60– ಕೈರಟಾಬಾದ್ | |
| | | 61– ಜುಬಿಲೀ ಹಿಲ್ಸ್ | |
| | | 62– ಸನತ್‌ನಗರ | |
| | | 63–ನಾಮ್‌ಪಲ್ಲಿ | |
| | | 64–ಕರ್‌ವಾನ್ | |
| | | 65– ಗೋಶಮಹಲ್ | |
| | | 66–ಚಾರ್‌ಮಿನಾರ್ | |
| | | 67–ಚಂದ್ರಾಯನಗುಟ್ಟ | |
| | | 68– ಯಾಕುಟ್‌ಪುರ | |
| | | 69– ಬಹದೂರ್‌ಪುರ | |

| | | | |
|---|---|---|---|
| | | 70– ಸಿಕಿಂದ್ರಬಾದ್ | |
| | | 71– ಸಿಕಿಂದ್ರಬಾದ್ ಕಂಟೋನ್‌ಮೆಂಟ್ (ಪರಿಶಿಷ್ಟ ಜಾತಿ) | |
| | | ಎಲ್ಲಾ ಇತರೆ ವಿಧಾನಸಭೆ ಮತಕ್ಷೇತ್ರಗಳು | ತೆಲುಗು |
| 25 | ತ್ರಿಪುರ | ಎಲ್ಲಾ ಇತರೆ ವಿಧಾನಸಭೆ ಮತಕ್ಷೇತ್ರಗಳು | ಬೆಂಗಾಲಿ |
| 26 | ಉತ್ತರ ಪ್ರದೇಶ | 3–ಸಹರಾನ್ ಪುರ್ ನಗರ | ಹಿಂದಿ ಮತ್ತು ಉರ್ದು |
| | | 4–ಸಹರಾನ್ ಪುರ್ | |
| | | 7–ಗ್ಯಾಂಗೋಹ್ | |
| | | 8–ಕೈರಾಣ | |
| | | 14–ಮುಝಾಫರ್ ನಗರ | |
| | | 17–ನಜಿಬಬಾದ್ | |
| | | 18–ನಗಿನಾ (ಪರಿಶಿಷ್ಟ ಜಾತಿ) | |
| | | 19–ಬರ್‌ಹಪುರ್ | |
| | | 20–ಧಾಂಪುರ್ | |
| | | 21–ನೆಹತೌರ್ (ಪರಿಶಿಷ್ಟ ಜಾತಿ) | |
| | | 22–ಬಿಜ್‌ನೋರ್ | |
| | | 23–ಚಾಂದ್‌ಪುರ್ | |
| | | 24–ನಣರ್ ಪುರ್ | |
| | | 26–ಠಾಕೂರ್ ದ್ವಾರ | |
| | | 27–ಮೊರ್ದಾಬಾದ್ (ಗ್ರಾಮಾಂತರ) | |
| | | 28–ಮೊರ್ದಾಬಾದ್ (ನಗರ) | |
| | | 29–ಕುಂದರ್ಕಿ | |
| | | 30–ಬಿಲಾರಿ | |

| | | | |
|---|---|---|---|
| | | 31–ಚಾಂದೌಸಿ (ಪರಿಶಿಷ್ಟ ಜಾತಿ) | |
| | | 32–ಆಸ್‌ಮೊಳಿ | |
| | | 33–ಸಂಭಾಲ್ | |
| | | 34–ಸುಸ್ವರ್ | |
| | | 35–ಚಂರೌವ | |
| | | 37–ರಾಂಪುರ್ | |
| | | 40–ನೌಗಾವಾನ್ ಸಾದತ್ | |
| | | 41–ಅಮ್ರೋಹ | |
| | | 47–ಮೀರತ್ ಕಂಟೋನ್‌ಮೆಂಟ್ | |
| | | 48–ಮೀರತ್ | |
| | | 49–ಮೀರತ್ ದಕ್ಷಿಣ | |
| | | 60–ಗರ್‌ಹ್ ಮುಕ್ತೇಶ್ವರ್ | |
| | | 75–ಕೊಯಲ್ | |
| | | 76–ಅಲಿಘರ್ | |
| | | 97–ಫಿರೋಜಾಬಾದ್ | |
| | | 115–ಬದೌನ್ | |
| | | 124–ಬರೇಲಿ | |
| | | 125–ಬರೇಲಿ ಕಂಟೋನ್ ಮೆಂಟ್ | |
| | | 127–ಪಿಲಿಭಿಟ್ | |
| | | 135–ಷಹಜಾನ್ ಪುರ್ | |
| | | 171–ಲಕ್ನೊ ಪಶ್ಚಿಮ | |
| | | 174–ಲಕ್ನೊ ಸೆಂಟ್ರಲ್ (ಕೇಂದ್ರ) | |
| | | 213–ಶಿಷಾಮಾಂವ್ | |
| | | 214–ಆರ್ಯನಗರ | |
| | | 278–ಟಂಡಾ | |

| | | | |
|---|---|---|---|
| | | 286–ಬಹ್ರೈತ್ | |
| | | 313–ಖಲೀಲಬಾದ್ ಮತ್ತು | |
| | | 356–ಮೌ | |
| | | ಎಲ್ಲಾ ಇತರೆ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 27 | ಉತ್ತರಖಂಡ್ | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಹಿಂದಿ |
| 28 | ಪಶ್ಚಿಮ ಬಂಗಾಳ | 22–ಕಾಲಿಂಪಾಂಗ್ | ಬೆಂಗಾಳಿ ಮತ್ತು ನೇಪಾಳಿ |
| | | 23–ಡಾರ್ಜಿಲಿಂಗ್ | |
| | | 24–ಕುರ್ಸೆಯೊಂಗ್ | |
| | | 25–ಮಟಿಗರ ನಕ್ಸಲ್ ಬಾರಿ (ಪರಿಶಿಷ್ಟ ಜಾತಿ) | |
| | | 26–ಸಿಲಿಗುರಿ | |
| | | 27–ಫಾನ್ಸಿಡೆವ (ಪರಿಶಿಷ್ಟ ಪಂಗಡ) | |
| | | 29–ಇಸ್ಲಾಂಪುರ್ | ಬೆಂಗಾಳಿ ಮತ್ತು ಹಿಂದಿ |
| | | 30–ಗೋಲ್ಪೊಖರ್ | |
| | | 31–ಚಕುಲಿಯ | |
| | | 115–ರಜರ್‌ಹತ್ ನ್ಯೂ ಟೌನ್ | ಇಂಗ್ಲೀಷ್ |
| | | 116– ಭಿದನ್ನಾಗರ್ | |
| | | 149 ಕಸ್ಬ | |
| | | 153–ಬೆಹಲ ಪೂರ್ವ | |
| | | 154–ಬೆಹಲ ಪಶ್ಚಿಮ | |
| | | 157–ಮೆಟಿಯ ಬುರಾಜ್ | |
| | | 158–ಕೋಲ್ಕತ್ತಾ ಕೋಟೆ (ಪೋರ್ಟ್) | |
| | | 159–ಭಾಬನಿಪುರ | |
| | | 160–ರಾಸ್ ಬಿಹಾರಿ | |
| | | 161–ಬಲ್ಲಿಗುಂಗ್ | |

| | | | |
|---|---|---|---|
| | | 162–ಚೌರಂಘೀ | |
| | | 163–ಎಂತ್ಯಾಲಿ | |
| | | 164–ಬೆಲೆಘಾಟ | |
| | | 165–ಚೋರಾಸಂಕೋ | |
| | | 166–ಶ್ಯಾಂಪುಕುರ್ | |
| | | 167–ಮಣಿಕ್‌ತಾಲ | |
| | | 168–ಕಾಶೀಪುರಭೇಲ್‌ಗಚಿಯ | |
| | | 224 – ಖರಗ್‌ಪುರ್ ಸದರ್ | ಬೆಂಗಾಳಿ ಮತ್ತು ಇಂಗ್ಲೀಷ್ |
| | | ಎಲ್ಲಾ ವಿಧಾನಸಭಾ ಮತಕ್ಷೇತ್ರಗಳು | ಬೆಂಗಾಳಿ |
| 29 | ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರ | 20–ಚಾಂದಿನಿ ಚೌಕ್, | ಹಿಂದಿ, ಉರ್ದು ಮತ್ತು ಇಂಗ್ಲೀಷ್ |
| | | 21–ಮತಿಯ ಮಹಲ್ | |
| | | 22–ಬಲ್ಲಿಮರನ್ | |
| | | 54–ಓಕ್ಲಾ | |
| | | 63–ಸೀಮಾಪುರಿ (ಪರಿಶಿಷ್ಟ ಜಾತಿ) | |
| | | 65–ಸೀಲಾಂಪುರ ಮತ್ತು | |
| | | 69–ಮುಸ್ತಫಬಾದ್ | |
| | | ಎಲ್ಲಾ ಇತರೆ ವಿಧಾನಸಭಾ ಮತ ಕ್ಷೇತ್ರಗಳು | ಹಿಂದಿ ಮತ್ತು ಇಂಗ್ಲೀಷ್ |
| 30 | ಪುದುಚೇರಿ | 29–ಮಾಹೆ | ಮಲೆಯಾಳಂ |
| | | 30–ಯಾಣಂ | ತೆಲುಗು |
| | | ಎಲ್ಲಾ ಇತರೆ ವಿಧಾನಸಭಾ ಮತ ಕ್ಷೇತ್ರಗಳು | ತಮಿಳು |

# ಪರಿಶಿಷ್ಟ 9ಎ

## (ಅಧ್ಯಾಯ 5, ಪ್ಯಾರಾ 5.7.5)
## ರಾಜ್ಯಗಳು ಮತ್ತು ಲೋಕಸಭಾ ಕ್ಷೇತ್ರದಲ್ಲಿನ ಭಾಷೆಗಳು

ನಿರ್ದೇಶನ ಸಂಖ್ಯೆ. 3/4/2018/ಎಸ್‌ಡಿಆರ್, ದಿನಾಂಕ: 31ನೇ ಅಕ್ಟೋಬರ್ 2018 ಮತ್ತು ನಿರ್ದೇಶನ ಸಂಖ್ಯೆ 3/4/2008/ಜೆಎಸ್. II, ದಿನಾಂಕ: 6ನೇ ಫೆಬ್ರವರಿ 2009ರ ನಿರ್ದೇಶನಕ್ಕೆ ಅನುಸಾರವಾಗಿ ಮತ್ತು ಚುನಾವಣೆಗಳನ್ನು ನಡೆಸುವ ನಿಯಮಗಳು1961 ರ 10ನೇ ನಿಯಮದ (1)ನೇ ಮತ್ತು (3)ನೇ ಉಪನಿಯಮಗಳಿಗೆ ಅನುಸಾರವಾಗಿ ಭಾರತ ಚುನಾವಣಾ ಆಯೋಗವು ಕೆಳಗಿನ ಕೋಷ್ಟಕದ (2)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸಂಸತ್ ಚುನಾವಣಾ ಕ್ಷೇತ್ರದಿಂದ ನಡೆಯುವ ಚುನಾವಣೆಯಲ್ಲಿ, ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ನಮೂನೆ 7ಎಯಲ್ಲಿ, ಕೋಷ್ಟಕದ (3)ನೇ ಕಾಲಂನಲ್ಲಿಆ ಚುನಾವಣಾಕ್ಷೇತ್ರದ ಎದುರಿಗೆ ನಿರ್ದಿಷ್ಟಪಡಿಸಿದ ಭಾಷೆಗಳಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಒಂದಕ್ಕಿಂತ ಹೆಚ್ಚಿನ ಭಾಷೆಗಳಲ್ಲಿ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿದ್ದರೆ, ಅಭ್ಯರ್ಥಿಗಳ ಹೆಸರನ್ನು ಆ ಕಾಲಂನಲ್ಲಿ ಮೊದಲುನಿರ್ದಿಷ್ಟಪಡಿಸಿದಭಾಷೆಯ ಲಿಪಿಯಲ್ಲಿ ಅಕಾರಾದಿಯಾಗಿ ಸಿದ್ಧಪಡಿಸತಕ್ಕದ್ದೆಂದು ನಿರ್ದೇಶಿಸಿದೆ:–

ಚುನಾವಣಾ ಆಯೋಗಕ್ಕೆ ಅಂತಹ ಯಾವುದೇ ಪಟ್ಟಿಯನ್ನು ಕಳುಹಿಸುವಾಗ, ಅದು ಇಂಗ್ಲೀಷ್‌ನಲ್ಲಿ ಇರದಿದ್ದರೆ, ಅದರ ಇಂಗ್ಲೀಷ್ ಭಾಷಾಂತರದ ಜೊತೆಗೆ ಕಳುಹಿಸತಕ್ಕದ್ದು.

| ಕ್ರಮ ಸಂಖ್ಯೆ | ರಾಜ್ಯ/ಕೇಂದ್ರಾಡಳಿತ ಪ್ರದೇಶ | ಲೋಕಸಭಾ ಚುನಾವಣಾ ಕ್ಷೇತ್ರ | ಭಾಷೆ/ಭಾಷೆಗಳು |
|---|---|---|---|
| 1 | ಆಂಧ್ರಪ್ರದೇಶ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ತೆಲುಗು |
| 2 | ಅರುಣಾಚಲ ಪ್ರದೇಶ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಇಂಗ್ಲೀಷ್ |
| 3 | ಅಸ್ಸಾಂ | 1– ಕರೀಂಗಂಜ್ (ಪರಿಶಿಷ್ಟ ಜಾತಿ) | ಬೆಂಗಾಳಿ |
| | | 2– ಸಿಲ್‌ಚಾರ್ | |
| | | 3– ಸ್ವಾಯತ್ತ ಜಿಲ್ಲೆ (ಪರಿಶಿಷ್ಟ ಪಂಗಡ) | ಅಸ್ಸಾಮಿ ಮತ್ತು ಇಂಗ್ಲೀಷ್ |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಅಸ್ಸಾಮಿ |
| 4 | ಬಿಹಾರ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ |
| 5 | ಛತ್ತಿಸ್‌ಘಡ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ |
| 6 | ಗೋವ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ದೇವನಾಗರಿ ಲಿಪಿಯಲ್ಲಿನ ಕೊಂಕಣಿ, ಮರಾಠಿ ಮತ್ತು ಇಂಗ್ಲೀಷ್ |
| 7 | ಗುಜರಾತ್ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಗುಜರಾತಿ |
| 8 | ಹರಿಯಾಣ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ |

| | | | |
|---|---|---|---|
| 9 | ಹಿಮಾಚಲಪ್ರದೇಶ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ |
| 10 | ಜಮ್ಮು ಮತ್ತು ಕಾಶ್ಮೀರ | 5– ಉಧಮ್‌ಪುರ | ಉರ್ದು ಮತ್ತು ಹಿಂದಿ |
| | | 6– ಜಮ್ಮು | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಉರ್ದು |
| 11 | ಜಾರ್ಖಂಡ್ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ |
| 12 | ಕರ್ನಾಟಕ | 1– ಚಿಕ್ಕೋಡಿ | ಕನ್ನಡ ಮತ್ತು ಮರಾಠಿ |
| | | 2– ಬೆಳಗಾಂ | |
| | | 7– ಬೀದರ್ | |
| | | 12– ಉತ್ತರ ಕನ್ನಡ | |
| | | 23– ಬೆಂಗಳೂರು (ಗ್ರಾಮಾಂತರ) | ಕನ್ನಡ ಮತ್ತು ಇಂಗ್ಲೀಷ್ |
| | | 24– ಬೆಂಗಳೂರು ಉತ್ತರ | |
| | | 25– ಬೆಂಗಳೂರು ಮಧ್ಯ (ಸೆಂಟ್ರಲ್) (ಕೇಂದ್ರ) | |
| | | 26– ಬೆಂಗಳೂರು ದಕ್ಷಿಣ | |
| | | 28– ಕೋಲಾರ (ಪರಿಶಿಷ್ಟ ಜಾತಿ) | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಕನ್ನಡ |
| 13 | ಕೇರಳ | 1– ಕಾಸರಗೋಡು | ಮಲಯಾಳಂ ಮತ್ತು ಕನ್ನಡ |
| | | 14– ಇಡುಕ್ಕಿ | ಮಲಯಾಳಂ ಮತ್ತು ತಮಿಳು |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಮಲಯಾಳಂ |
| 14 | ಮಧ್ಯಪ್ರದೇಶ | 19– ಭೋಪಾಲ್ | ಹಿಂದಿ ಮತ್ತು ಉರ್ದು |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಹಿಂದಿ |
| 15 | ಮಹಾರಾಷ್ಟ್ರ | 10–ನಾಗಪುರ್ | ಮರಾಠಿ ಮತ್ತುಇಂಗ್ಲೀಷ್ |
| | | 25– ಥಾಣೆ | |
| | | 26–ಮುಂಬೈ ಉತ್ತರ | |

| | | | |
|---|---|---|---|
| | | 27– ಮುಂಬೈ ವಾಯುವ್ಯ | |
| | | 28– ಮುಂಬೈ ಈಶಾನ್ಯ | |
| | | 29– ಮುಂಬೈ ಉತ್ತರ –ಸೆಂಟ್ರಲ್ | |
| | | 30– ಮುಂಬೈ ದಕ್ಷಿಣ –ಸೆಂಟ್ರಲ್ | |
| | | 31– ಮುಂಬೈ ದಕ್ಷಿಣ | |
| | | 34– ಪುಣೆ | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಮರಾಠಿ |
| 16 | ಮಣಿಪುರ | 1– ಒಳ ಮಣಿಪುರ | ಮಣಿಪುರಿ |
| | | 2– ಹೊರ ಮಣಿಪುರ (ಪರಿಶಿಷ್ಟ ಪಂಗಡ) | ಮಣಿಪುರಿ ಮತ್ತು ಇಂಗ್ಲೀಷ್ |
| 17 | ಮೇಘಾಲಯ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಇಂಗ್ಲೀಷ್ |
| 18 | ಮಿಜೋರಾಂ | ಸಮಗ್ರ ಲೋಕಸಭಾ ಮತಕ್ಷೇತ್ರ | ಇಂಗ್ಲೀಷ್ |
| 19 | ನಾಗಲ್ಯಾಂಡ್ | ಸಮಗ್ರ ಲೋಕಸಭಾ ಮತಕ್ಷೇತ್ರ | ಇಂಗ್ಲೀಷ್ |
| 20 | ಒರಿಸ್ಸಾ | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಒರಿಯಾ |
| 21 | ಪಂಜಾಬ್ | 1– ಗುರುದಾಸ್‌ಪುರ | ಪಂಜಾಬಿ ಮತ್ತು ಹಿಂದಿ |
| | | 2– ಅಮೃತಸರ | |
| | | 4– ಜಲಾಂಧರ್ | |
| | | 6– ಹೊಶಿಯಾರ್‌ಪುರ | |
| | | 8– ಪಟಿಯಾಲ | |
| | | 9– ಲೂಧಿಯಾನ | |
| | | 13– ಫಿರೋಜ್‌ಪುರ | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಪಂಜಾಬಿ |
| 22 | ರಾಜಸ್ಥಾನ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ |
| 23 | ಸಿಕ್ಕಿಂ | ಸಮಗ್ರ ಲೋಕಸಭಾ ಮತಕ್ಷೇತ್ರ | ಇಂಗ್ಲೀಷ್ |
| 24 | ತಮಿಳುನಾಡು | 2– ಚೆನ್ನೈ ಉತ್ತರ | ತಮಿಳು ಮತ್ತು |

| | | | |
|---|---|---|---|
| | | 3– ಚೆನ್ನೈ ದಕ್ಷಿಣ | |
| | | 4– ಚೆನ್ನೈ ಸೆಂಟ್ರಲ್ | |
| | | 7– ಅರಕೋಣಂ | ತಮಿಳು ಮತ್ತು ತೆಲುಗು |
| | | 9– ಕೃಷ್ಣಗಿರಿ | ತಮಿಳು, ತೆಲುಗು ಮತ್ತು ಕನ್ನಡ |
| | | 19– ನೀಲಗಿರಿ (ಪರಿಶಿಷ್ಟ ಜಾತಿ) | ತಮಿಳು ಮತ್ತು ಮಲಯಾಳಂ |
| | | 39– ಕನ್ಯಾಕುಮಾರಿ | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ತಮಿಳು |
| 25 | ತೆಲಂಗಾಣ | 1– ಅದಿಲಾಬಾದ್ (ಪರಿಶಿಷ್ಟ ಜಾತಿ) | ತೆಲುಗು ಮತ್ತು ಮರಾಠಿ |
| | | 5– ಜಹಿರಾಬಾದ್ | |
| | | 4– ನಿಜಾಮಬಾದ್ | ತೆಲುಗು, ಇಂಗ್ಲೀಷ್ ಮತ್ತು ಉರ್ದು |
| | | 7–ಮಲ್ಕಜ್‌ಗಿರಿ | |
| | | 8–ಸಿಕಿಂದ್ರಬಾದ್ | |
| | | 9–ಹೈದ್ರಾಬಾದ್ | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ತೆಲುಗು |
| 26 | ತ್ರಿಪುರ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಇಂಗ್ಲೀಷ್ |
| 27 | ಉತ್ತರ ಪ್ರದೇಶ | 1– ಸಹರಾನ್‌ಪುರ | ಹಿಂದಿ ಮತ್ತು ಉರ್ದು |
| | | 4– ಬಿಜ್‌ನೂರ್ | |
| | | 5– ನಗಿನಾ (ಪರಿಶಿಷ್ಟ ಜಾತಿ) | |
| | | 6– ಮೊರಾದಾಬಾದ್ | |
| | | 7– ರಾಂಪುರ | |
| | | 8– ಸಾಂಭಾಳ್ | |
| | | 9–ಅಮ್ರೋಹ | |
| | | 10– ಮೀರತ್ | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಹಿಂದಿ |

| | | | |
|---|---|---|---|
| 28 | ಉತ್ತರಾಖಾಂಡ್ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ |
| 29 | ಪಶ್ಚಿಮ ಬಂಗಾಳ | 4– ಡಾರ್ಜಿಲಿಂಗ್ | ಬಂಗಾಳಿಮತ್ತು ನೇಪಾಳಿ |
| | | 5– ರಾಯ್‌ಗಂಜ್ | ಬಂಗಾಳಿಮತ್ತು ಹಿಂದಿ |
| | | 17– ಬಾರಸತ್ | ಬಂಗಾಳಿಮತ್ತುಇಂಗ್ಲೀಷ್ |
| | | 21– ಡೈಮಾಂಡ್ | |
| | | 34– ಮೇದಿನಿಪುರ | |
| | | 23– ಕೋಲ್ಕತ್ತಾ ದಕ್ಷಿಣ | ಇಂಗ್ಲೀಷ್ |
| | | 24– ಕೊಲ್ಕತ್ತಾ ಉತ್ತರ | |
| | | ಎಲ್ಲಾ ಇತರೆ ಲೋಕಸಭಾ ಮತಕ್ಷೇತ್ರಗಳು | ಬಂಗಾಳಿ |
| 30 | ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಪ್ರದೇಶ | ಸಮಗ್ರ ಲೋಕಸಭಾ ಮತಕ್ಷೇತ್ರಗಳು | ಹಿಂದಿ ಮತ್ತು ಇಂಗ್ಲೀಷ್ |
| 31 | ಚಂಢೀಗಡ | ಸಮಗ್ರ ಲೋಕಸಭಾ ಮತಕ್ಷೇತ್ರಗಳು | ಹಿಂದಿ ಮತ್ತು ಪಂಜಾಬಿ |
| 32 | ದಾದ್ರ ಮತ್ತು ನಾಗರ್ ಹವೇಲಿ | ಸಮಗ್ರ ಲೋಕಸಭಾ ಮತಕ್ಷೇತ್ರಗಳು | ಗುಜರಾತಿ, ಮರಾಠಿ ಮತ್ತು ಇಂಗ್ಲೀಷ್ |
| 33 | ಡಾಮನ್ ಮತ್ತು ದೀಯು | ಸಮಗ್ರ ಲೋಕಸಭಾ ಮತಕ್ಷೇತ್ರಗಳು | ಗುಜರಾತಿ |
| 34 | ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರ | ಎಲ್ಲಾ ಲೋಕಸಭಾ ಮತಕ್ಷೇತ್ರಗಳು | ಹಿಂದಿ ಮತ್ತು ಇಂಗ್ಲೀಷ್ |
| 35 | ಲಕ್ಷದ್ವೀಪ | ಸಮಗ್ರ ಲೋಕಸಭಾ ಮತಕ್ಷೇತ್ರಗಳು | ಮಲಯಾಳಂ |
| 36 | ಪುದುಚೇರಿ | ಸಮಗ್ರ ಲೋಕಸಭಾ ಮತಕ್ಷೇತ್ರಗಳು | ತಮಿಳು, ತೆಲುಗು ಮತ್ತು ಮಲಯಾಳಂ |

## ಪರಿಶಿಷ್ಟ–10

### ನಮೂನೆ – ಎ

ಮನ್ನಣೆ ಪಡೆದ ರಾಷ್ಟ್ರೀಯ ಅಥವಾ ರಾಜ್ಯ ರಾಜಕೀಯ ಪಕ್ಷವು ಅಥವಾ ನೋಂದಣಿಯಾಗಿರುವ, ಆದರೆ, ಮನ್ನಣೆ ಪಡೆಯದ ರಾಜಕೀಯ ಪಕ್ಷದಿಂದ ನಿಲ್ಲುವ ಅಭ್ಯರ್ಥಿಗಳ ಹೆಸರುಗಳನ್ನು ತಿಳಿಸುವ ಸಲುವಾಗಿ ಅಧಿಕೃತ ವ್ಯಕ್ತಿಗಳಿಗೆ ತಿಳಿವಳಿಕೆ.

ಇವರಿಗೆ,

1. ಮುಖ್ಯ ಚುನಾವಣಾಧಿಕಾರಿ,
   ---------- (ರಾಜ್ಯ / ಕೇಂದ್ರಾಡಳಿತ ಪ್ರದೇಶ)
2. ------------- ಮತಕ್ಷೇತ್ರದ
   ರಿಟರ್ನಿಂಗ್ ಅಧಿಕಾರಿ

**ವಿಷಯ:** ----- ರಿಂದ ------------ ಗೆ (ರಾಜ್ಯ / ಕೇಂದ್ರಾಡಳಿತ ಪ್ರದೇಶ) ಸಾರ್ವತ್ರಿಕ ಚುನಾವಣೆಗಳು –ಚಿಹ್ನೆಗಳ ಹಂಚಿಕೆ – ಅಭ್ಯರ್ಥಿಗಳ ಹೆಸರುಗಳನ್ನು ತಿಳಿಸಲು ವ್ಯಕ್ತಿಗಳನ್ನು ಅಧಿಕೃತಗೊಳಿಸುವುದು.

**ಮಾನ್ಯರೆ,**

ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶ 1968ರಪ್ಯಾರಾ 13 (ಸಿ), (ಡಿ) ಮತ್ತು (ಇ)ಗೆ ಅನುಸಾರವಾಗಿ, ಪಕ್ಷವು ಎಂದರೆ, ರಾಷ್ಟ್ರೀಯ ಪಕ್ಷ ------------ ರಾಜ್ಯದಲ್ಲಿನ ರಾಜ್ಯಪಕ್ಷ ನೋಂದಾಯಿತ, ಮನ್ನಣೆ ಪಡೆಯದ ಪಕ್ಷವು ಮೇಲೆ ಹೇಳಿದ ಚುನಾವಣೆಯಲ್ಲಿ ಚುನಾವಣೆಗೆ ಪಕ್ಷದಿಂದ ನಿಲ್ಲಿಸಲು ಉದ್ದೇಶಿಸಿರುವ ಅಭ್ಯರ್ಥಿಗಳ ಹೆಸರುಗಳನ್ನು ತಿಳಿಸಲು ಈ ಕೆಳಗೆ ಹೇಳಿರುವ ವ್ಯಕ್ತಿಯನ್ನು / ವ್ಯಕ್ತಿಗಳನ್ನು ಅಧಿಕೃತಗೊಳಿಸಿದೆಯೆಂದು ಈ ಮೂಲಕ ನಾನು ತಿಳಿಸುತ್ತಿದ್ದೇನೆ:

| **ಯಾರಿಗೆ ನೋಟೀಸು ಕಳುಹಿಸಬೇಕಾಗಿದೆಯೋ ಆ ಅಧಿಕೃತ ವ್ಯಕ್ತಿಯ ಹೆಸರು** | **ಪಕ್ಷದಲ್ಲಿ ಹೊಂದಿರುವ ಸ್ಥಾನದಹೆಸರು** | **ಯಾವುದಕ್ಕೆ ಸಂಬಂಧಿಸಿದಂತೆ ಅವನು ಅಧಿಕೃತಗೊಂಡಿರುವನೋ ಆ ಜಿಲ್ಲೆ / ಜಿಲ್ಲೆಗಳು / ಪ್ರದೇಶ (ಗಳು) ಮತಕ್ಷೇತ್ರ/ ಮತಕ್ಷೇತ್ರಗಳು** |
|---|---|---|
| 1 | 2 | 3 |
| 1. | | |
| 2. | | |
| 3. | | |
| 4. | | |

2. ಮೇಲಿನಂತೆ ಅಧಿಕೃತಗೊಳಿಸಿದ, ಮೇಲೆ ನಮೂದಿಸಿದ ವ್ಯಕ್ತಿಗಳ ಮಾದರಿ ಸಹಿಗಳನ್ನು ಈ ಕೆಳಗೆ ಕೊಡಲಾಗಿದೆ.

1. ಶ್ರೀ ---------------- ಇವರ ಮಾದರಿ ಸಹಿಗಳು
   (i) ----------------
   (ii) ----------------
   (iii) ----------------

2. ಶ್ರೀ ---------------- ಇವರ ಮಾದರಿ ಸಹಿಗಳು
   (i) ----------------
   (ii) ----------------
   (iii) ----------------

3. ಶ್ರೀ ---------------- ಇವರ ಮಾದರಿ ಸಹಿಗಳು
   (i) ----------------
   (ii) ----------------
   (iii) ----------------

ತಮ್ಮ ವಿಶ್ವಾಸಿ,

ಅಧ್ಯಕ್ಷರು / ಕಾರ್ಯದರ್ಶಿ,
ಪಕ್ಷದ ಹೆಸರು
(ಪಕ್ಷದ ಮೊಹರು)

ಸ್ಥಳ -------------
ದಿನಾಂಕ -----------

**ವಿಶೇಷ ಸೂಚನೆ:**

1. ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದಂದು 3 ಗಂಟೆಯೊಳಗೆ ಮುಖ್ಯ ಚುನಾವಣಾಧಿಕಾರಿಗೆ ಅಥವಾ ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸತಕ್ಕದ್ದು.
2. ನಮೂನೆಗೆ ಮೇಲೆ ಹೇಳಿರುವ ಪದಾಧಿಕಾರಿಯು (ಗಳು) ಶಾಯಿಯಲ್ಲಿ ಸಹಿ ಮಾಡಿರತಕ್ಕದ್ದು. ಯಾರೇ ಪದಾಧಿಕಾರಿಯ ಯಾವುದೇ ತದ್ರೂಪಿನ ಅಥವಾ ರಬ್ಬರ್ ಸ್ಟಾಂಪ್ ಇತ್ಯಾದಿ. ಸಾಧನಗಳಿಂದ ರೂಪಿಸಿರುವ ಸಹಿಯನ್ನು ಒಪ್ಪಿಕೊಳ್ಳುವುದಿಲ್ಲ.
3. ಫ್ಯಾಕ್ಸ್ ಮೂಲಕ ರವಾನಿಸಿದ ಯಾವುದೇ ನಮೂನೆಯನ್ನು ಒಪ್ಪಿಕೊಳ್ಳುವುದಿಲ್ಲ.

## ಭಾಗ –III

## ನಮೂನೆ– ಬಿ

## ರಾಜಕೀಯ ಪಕ್ಷವು ನಿಲ್ಲಿಸಿರುವ ಅಭ್ಯರ್ಥಿಯ ಹೆಸರಿಗೆ ಸಂಬಂಧಿಸಿದಂತೆ ತಿಳುವಳಿಕೆ

(ಚುನಾವಣೆ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ 1968ರ ಪ್ಯಾರಾಗ್ರಾಫ್ 13 (ಬಿ) (ಸಿ) ಮತ್ತು (ಇ) ಮತ್ತು 13 ಎ ನೋಡಿ)

ಇವರಿಗೆ,

ರಿಟರ್ನಿಂಗ್ ಅಧಿಕಾರಿ,

--------------- ಚುನಾವಣಾ ಕ್ಷೇತ್ರ

**ವಿಷಯ:** --------- (ರಾಜ್ಯದಲ್ಲಿನ / ಕೇಂದ್ರಾಡಳಿತ ಪ್ರದೇಶದಲ್ಲಿನ) ------------- ಚುನಾವಣಾ ಕ್ಷೇತ್ರದಿಂದ ------------- ಗೆ ಸಾರ್ವತ್ರಿಕ ಚುನಾವಣೆ / ಉಪ ಚುನಾವಣೆಗೆ ಅಭ್ಯರ್ಥಿಯನ್ನು ನಿಲ್ಲಿಸಿರುವ ಬಗ್ಗೆ.

-------

**ಮಾನ್ಯರೆ,**

ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ, ಪ್ಯಾರಾ 13 (ಬಿ), (ಸಿ) ಮತ್ತು (ಇ) ಹಾಗೂ 13ಎ ಪ್ಯಾರಾಗಳಿಗೆ ಅನುಸಾರವಾಗಿ ನಾನು --------------- ಪಕ್ಷದ ಪರವಾಗಿ

(i) ಈ ಕೆಳಗೆ (2) ರಿಂದ (4) ರವರೆಗಿನ ಕಾಲಂಗಳಲ್ಲಿ ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ವಿವರಗಳನ್ನು ಕೊಡಲಾಗಿದೆಯೋ ಆ ವ್ಯಕ್ತಿಯು ಪಕ್ಷದ ಅನುಮೋದಿತ ಅಭ್ಯರ್ಥಿಯೆಂದು; ಮತ್ತು

(ii) ಈ ಕೆಳಗೆ (5) ರಿಂದ (7) ರವರೆಗಿನ ಕಾಲಂಗಳಲ್ಲಿ ಯಾವ ವ್ಯಕ್ತಿಯ ಬಗ್ಗೆ ವಿವರಗಳನ್ನು ಕೊಡಲಾಗಿದೆಯೋ ಆ ವ್ಯಕ್ತಿಯು ಪಕ್ಷದ ಬದಲಿ ಅಭ್ಯರ್ಥಿಯೆಂದು ಎಂದರೆ, ಅನುಮೋದಿತ ಅಭ್ಯರ್ಥಿಯ ನಾಮಪತ್ರವು ಪರಿಶೀಲನೆಯಾದಾಗ ತಿರಸ್ಕೃತವಾದರೆ ಅಥವಾ ಬದಲಿ ಅಭ್ಯರ್ಥಿಯು ಇನ್ನೂ ಸ್ಪರ್ಧೆಯಲ್ಲಿರುವ ಅಭ್ಯರ್ಥಿಯಾಗಿದ್ದರೆ ಅವನು ಸ್ಪರ್ಧೆಯಿಂದ ಹಿಂದೆ ಸರಿದಾಗ ಚುನಾವಣೆಗೆ ನಿಲ್ಲುವ ವ್ಯಕ್ತಿಯೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

| ಚುನಾವಣಾ ಕ್ಷೇತ್ರದ ಹೆಸರು | ಅನುಮೋದಿತ ಅಭ್ಯರ್ಥಿಯ ಹೆಸರು | ಅನುಮೋದಿತ ಅಭ್ಯರ್ಥಿಯ ತಂದೆಯ / ತಾಯಿಯ / ಗಂಡನ ಹೆಸರು | ಅನುಮೋದಿತ ಅಭ್ಯರ್ಥಿಯ ಅಂಚೆ ವಿಳಾಸ | ಅನುಮೋದಿತ ಅಭ್ಯರ್ಥಿಯ ನಾಮಪತ್ರವು ಪರಿಶೀಲನೆಯಲ್ಲಿ ತಿರಸ್ಕೃತಗೊಂಡಾಗ ಬದಲಿ ಅಭ್ಯರ್ಥಿಯು ಇನ್ನೂ ಸ್ಪರ್ಧೆಯಲ್ಲಿರುವ ಅಭ್ಯರ್ಥಿಯಾಗಿದ್ದರೆ ಅವನು ಸ್ಪರ್ಧೆಯಿಂದ ಹಿಂದೆ ಸರಿದರೆ ಚುನಾವಣೆಗೆ ನಿಲ್ಲುವ ಅಭ್ಯರ್ಥಿಯ ಹೆಸರು | ಬದಲಿ ಅಭ್ಯರ್ಥಿಯ ತಂದೆಯ/ ತಾಯಿಯ/ ಗಂಡನ ಹೆಸರು | ಬದಲಿ ಅಭ್ಯರ್ಥಿಯ ಅಂಚೆ ವಿಳಾಸ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

* 2. ಪಕ್ಷದ ಅನುಮೋದಿತ ಅಭ್ಯರ್ಥಿಯಾಗಿ ಶ್ರೀ / ಶ್ರೀಮತಿ / --------(ಸುಶ್ರೀ) / ---------------------- ರವರಿಗೆ ನೋಟೀಸನ್ನು, ಈ ಮುಂಚೆಯೇ ನಮೂನೆ 'ಬಿ'ಯಲ್ಲಿ ಕೊಡಲಾಗಿತ್ತು. ಶ್ರೀ / ಶ್ರೀಮತಿ / -------- (ಸುಶ್ರೀ) / -------------------- ರವರು ಬದಲಿ ಅಭ್ಯರ್ಥಿಯಾಗಿರುವುದನ್ನು ರದ್ದುಪಡಿಸಲಾಗಿದೆ.

3. ಮೇಲೆ ಹೆಸರಿಸಿದ ಅಭ್ಯರ್ಥಿಗಳಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯು ರಾಜಕೀಯ ಪಕ್ಷದ ಸದಸ್ಯರೆಂದೂ, ಈ ಪಕ್ಷದ ಸದಸ್ಯರುಗಳ ಹೆಸರುಪಟ್ಟಿಯಲ್ಲಿ ಅವರ ಹೆಸರು ಇದೆಯೆಂದು ಪ್ರಮಾಣೀಕರಿಸಲಾಗಿದೆ.

ತಮ್ಮ ವಿಶ್ವಾಸಿ<br>
(ಪಕ್ಷದ ಅಧಿಕೃತ ವ್ಯಕ್ತಿಯ<br>
ಹೆಸರು ಮತ್ತು ಸಹಿ)<br>
(ಪಕ್ಷದ ಮೊಹರು)

ಸ್ಥಳ -------------------<br>
ದಿನಾಂಕ ----------------

* ಅನ್ವಯಿಸದಿರುವುದನ್ನು ಬಿಟ್ಟುಬಿಡಿ

**ವಿಶೇಷ ಸೂಚನೆ**

1. ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದಂದು 3 ಗಂಟೆಯೊಳಗೆ ಮುಖ್ಯ ಚುನಾವಣಾಧಿಕಾರಿಗೆ ಅಥವಾ ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸತಕ್ಕದ್ದು.
2. ನಮೂನೆಗೆ ಮೇಲೆ ಹೇಳಿರುವ ಪದಾಧಿಕಾರಿಯು (ಗಳು) ಶಾಯಿಯಲ್ಲಿ ಸಹಿ ಮಾಡಿರತಕ್ಕದ್ದು. ಯಾರೇ ಪದಾಧಿಕಾರಿಯು ಯಾವುದೇ ತದ್ರೂಪಿನ ಅಥವಾ ರಬ್ಬರ್ ಸ್ಟಾಂಪ್ ಇತ್ಯಾದಿ ಸಾಧನಗಳಿಂದ ರೂಪಿಸಿರುವ ಸಹಿಯನ್ನು ಒಪ್ಪಿಕೊಳ್ಳುವುದಿಲ್ಲ.
3. ಫ್ಯಾಕ್ಸ್ ಮೂಲಕ ರವಾನಿಸಿದ ಯಾವುದೇ ನಮೂನೆಯನ್ನು ಒಪ್ಪಿಕೊಳ್ಳುವುದಿಲ್ಲ.
4. ಅನ್ವಯಿಸುವುದನ್ನು ಸರಿಯಾಗಿ ತುಂಬತಕ್ಕದ್ದು ಅಥವಾ ಪ್ಯಾರಾ 2ರ ನಮೂನೆ ಅನ್ವಯಿಸದಿರುವುದನ್ನು ಬಿಟ್ಟುಬಿಡತಕ್ಕದ್ದು.

## ಪರಿಶಿಷ್ಟ–11

(ಅಧ್ಯಾಯ 4, ಪ್ಯಾರಾ 4.10.1)

**ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ**
**ಮಾಡಬೇಕಾದದ್ದು ಮತ್ತು ಮಾಡದಿರುವುದು**

**ಮಾಡಬೇಕಾದುದು:**

1. ಚುನಾವಣೆಗೆ ಸಂಬಂಧಿಸಿದಂತೆ ಸಂವಿಧಾನದ ಹಾಗೂ ಕಾನೂನಿನ ಉಪಬಂಧಗಳ ಬಗ್ಗೆ ನಿಮಗೆ ತಿಳಿವಳಿಕೆಯಿರಬೇಕು.
2. ನಿಮ್ಮ ಚುನಾವಣಾ ಕ್ಷೇತ್ರಕ್ಕೆ ಸಂಬಂಧಿಸಿದ ಇತ್ತೀಚಿನ ಸೀಮಾನಿರ್ಣಯ ಆದೇಶವನ್ನು ಪರಿಶೀಲಿಸಬೇಕು.
3. ನಿಮ್ಮ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಪಡೆದುಕೊಂಡು ಗುರುತು ಹಾಕಿಕೊಳ್ಳಬೇಕು ಮತ್ತು ಅದನ್ನು ಪರಿಶೀಲಿಸಬೇಕು.
4. ಚುನಾವಣೆಗೆ ನಿಲ್ಲಲು ನಿರ್ಧರಿಸುವ ಮುಂಚೆ ಹಾಲಿ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಮತ್ತು ವಿವರಗಳನ್ನು ಪರಿಶೀಲಿಸಬೇಕು.
5. ಚುನಾವಣೆಗೆ ನಿಲ್ಲಲು ನೀವು ಅರ್ಹರಾಗಿರುವಿರಿ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು.
6. ಚುನಾವಣೆಗೆ ನಿಲ್ಲಲು ನಿಮ್ಮನ್ನು ಅನರ್ಹತೆಗೊಳಿಸಿಲ್ಲವೆಂಬುದನ್ನು ಪರಿಶೀಲಿಸಿಕೊಳ್ಳಬೇಕು.
7. ನಾಮಪತ್ರದ ನಮೂನೆಯು ಗೊತ್ತುಪಡಿಸಿದ (ನಮೂನೆಗಳ 2ಎ ಅಥವಾ 2ಬಿ) ನಮೂನೆಯಾಗಿದೆಯೆಂಬುದನ್ನು ಪರಿಶೀಲಿಸಿಕೊಳ್ಳಬೇಕು.
8. ನಾಮಪತ್ರದ ನಮೂನೆಯನ್ನು ಖುದ್ದಾಗಿ ಅಥವಾ ಪ್ರಸ್ತಾಪಕನ ಮೂಲಕ ಕಳುಹಿಸಬೇಕು.
9. ನೀವು ಚುನಾವಣೆಗೆ ನಿಲ್ಲಲು ಬಯಸುವ ಚುನಾವಣಾ ಕ್ಷೇತ್ರದಲ್ಲಿ ಪ್ರಸ್ತಾಪಕನು ಮತದಾರನಾಗಿರವನೆಂಬುದನ್ನು ಪರಿಶೀಲಿಸಿಕೊಳ್ಳಬೇಕು.
10. ನೀವು ಬೇರೆ ಚುನಾವಣಾ ಕ್ಷೇತ್ರದ ಅಭ್ಯರ್ಥಿಯಾಗಿದ್ದರೆ, ನಿಮ್ಮ ಹೆಸರನ್ನು ಒಳಗೊಂಡ ಮತದಾರರ ಪಟ್ಟಿಯ ಪ್ರಮಾಣಿತ ಪ್ರತಿಯನ್ನು ಸಲ್ಲಿಸಬೇಕು.
11. ನಾಮಪತ್ರದ ರಸೀದಿಯನ್ನು ಪಡೆದುಕೊಳ್ಳಬೇಕು.
12. ನಾಮಪತ್ರಗಳ ಪರಿಷ್ಕರಣೆಯನ್ನು ಖುದ್ದಾಗಿ ಪರಿಶೀಲಿಸಲಾಗಿದೆಯೆಂಬುದನ್ನು ತಿಳಿದುಕೊಳ್ಳಬೇಕು.
13. ನಿಮ್ಮ ನಾಮಪತ್ರ ಅಂಗೀಕೃತವಾಗಿದ್ದರೆ ಸಿಂಧುವಾದ ನಾಮಪತ್ರಗಳ ಪಟ್ಟಿಯಲ್ಲಿ ನಿಮ್ಮ ಹೆಸರು ಇದೆ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು.
14. ಸಿಂಧುವಾದ ನಾಮನಿರ್ದೇಶಿತ ಅಭ್ಯರ್ಥಿಗಳ ಪಟ್ಟಿಯಲ್ಲಿ ನಿಮ್ಮ ಹೆಸರನ್ನು ಸರಿಯಾಗಿ ನಮೂದಿಸಲಾಗಿದೆ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು.
15. ನೀವು ಉಮೇದುವಾರಿಕೆಯನ್ನು ಹಿಂಪಡೆದುಕೊಂಡಿಲ್ಲದಿದ್ದರೆ, ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ನಿಮ್ಮ ಹೆಸರು ಮತ್ತು ವಿವರಗಳನ್ನು ಪರಿಶೀಲಿಸಿಕೊಳ್ಳಬೇಕು.
16. ಅಧಿಸೂಚಿಸಿದ ಮತದಾನದ ಸಮಯವನ್ನು ತಿಳಿದುಕೊಳ್ಳಬೇಕು.
17. ಚುನಾವಣಾ ಏಜಂಟ್‌ನನ್ನು ಯುಕ್ತ ನಮೂನೆಯಲ್ಲಿ ಮತ್ತು ಸೂಕ್ತ ಸಮಯದಲ್ಲಿ ನೇಮಕ ಮಾಡಬೇಕು.
18. ನಿಮ್ಮ ಚುನಾವಣಾ ಏಜಂಟನು ಚುನಾವಣೆಯಲ್ಲಿ ಮತ ಚಲಾಯಿಸುವುದಕ್ಕಾಗಿ ಅಥವಾ ಸಂಸತ್ತು ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯನಾಗುವುದಕ್ಕಾಗಿ ಅನರ್ಹನಾಗಿರುವುದಿಲ್ಲವೆಂಬುದನ್ನು ಪರಿಶೀಲಿಸಿಕೊಳ್ಳಬೇಕು.
19. ಮತಕೇಂದ್ರಗಳ ಪಟ್ಟಿಯ ಪ್ರತಿಯನ್ನು ಪಡೆದುಕೊಳ್ಳಬೇಕು ಮತ್ತು ಅದನ್ನು ಪರಿಶೀಲಿಸಬೇಕು.
20. ಪ್ರತಿಯೊಂದು ಮತಕೇಂದ್ರಕ್ಕೆ ಸೂಕ್ತ ಸಮಯದಲ್ಲಿ, ಸೂಕ್ತ ನಮೂನೆಯಲ್ಲಿ ಮತದಾನದ ಏಜೆಂಟರನ್ನು ನೇಮಕ ಮಾಡಬೇಕು.

21. ನಿಮ್ಮ ಮತದಾನ ಏಜೆಂಟರಿಗೆ ಮತದಾರರ ಪಟ್ಟಿಯ ಪ್ರತಿಗಳನ್ನು ಒದಗಿಸಬೇಕು.
22. ಪ್ರತಿಯೊಂದು ಮತ ಎಣಿಕೆ ಟೇಬಲ್‌ಗಾಗಿ ಸೂಕ್ತ ಸಮಯದಲ್ಲಿ ಮತ ಎಣಿಕೆ ಏಜೆಂಟರನ್ನು ಮತ್ತು ಒಬ್ಬ ಹೆಚ್ಚುವರಿ ಏಜೆಂಟನನ್ನು ಯುಕ್ತ ನಮೂನೆಯಲ್ಲಿ ನೇಮಕ ಮಾಡಬೇಕು.
23 ಮತ ಎಣಿಕೆ ಸಮಯದಲ್ಲಿ ಖುದ್ದಾಗಿ ಹಾಜರಾಗಲು ವ್ಯವಸ್ಥೆ ಮಾಡಿಕೊಳ್ಳಬೇಕು.
24. ಮೇಲೆ ಅಗತ್ಯಪಡಿಸಿದ ಕಾನೂನನ್ನು ಉಲ್ಲಂಘಿಸಿ ಚುನಾವಣಾ ಭಿತ್ತಿಪತ್ರಗಳು ಮತ್ತು ಪೋಸ್ಟರ್‌ಗಳನ್ನು ಪ್ರಕಟಿಸಿರುವ ಬಗ್ಗೆ ನೀವು ಗಮನಿಸಿದ ನಿರ್ದೇಶನಗಳನ್ನು ಕೂಡಲೇ ಮೇಲಿನ ಪ್ರಾಧಿಕಾರಿಗಳು ಅಥವಾ ಚುನಾವಣಾ ಅಧಿಕಾರಿಗೆ ವರದಿ ಮಾಡಬೇಕು.
25. ಚುನಾವಣಾ ಆಯೋಗವು ಸೂಚಿಸಿದಂತೆ ರಾಜಕೀಯ ಪಕ್ಷಗಳ ಮತ್ತು ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಮಾದರಿ ನೀತಿ ಸಂಹಿತೆಯನ್ನು ಪಾಲಿಸುವ ಸಂಬಂಧದಲ್ಲಿ ರಿಟರ್ನಿಂಗ್ ಅಧಿಕಾರಿಯ ನೇತೃತ್ವದಲ್ಲಿ ರಚಿಸಿದ ಚುನಾವಣಾ ಕ್ಷೇತ್ರದ ಸಮಿತಿಯ ಸಭೆಗಳಿಗೆ ಹಾಜರಾಗಬೇಕು.
26. ಮೇಲೆ ಹೇಳಿದ ಮಾದರಿ ನೀತಿ ಸಂಹಿತೆ ಉಲ್ಲಂಘನೆಯ ಘಟನೆಗಳು ನಿಮ್ಮ ಗಮನಕ್ಕೆ ಬಂದರೆ ಅಗತ್ಯ ಪರಿಹಾರ ಮತ್ತು ಸೂಕ್ತ ಕ್ರಮಕೈಗೊಳ್ಳುವುದಕ್ಕಾಗಿ ವರದಿ ಮಾಡಬೇಕು.
27. ಅಭ್ಯರ್ಥಿಯಾಗಿ ನೀವು ನಾಮಪತ್ರ ಸಲ್ಲಿಸಿದ ದಿನಾಂಕದಿಂದ ಚುನಾವಣೆಯ ದಿನಾಂಕದವರೆಗೆ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ನಿರ್ವಹಣೆ ಮಾಡುವುದಕ್ಕಾಗಿ ರಿಟರ್ನಿಂಗ್ ಅಧಿಕಾರಿಯು ಒದಗಿಸಿದ ನಿರ್ದಿಷ್ಟ ರಿಜಿಸ್ಟರಿನಲ್ಲಿ ಚುನಾವಣೆಯ ಲೆಕ್ಕಪತ್ರಗಳನ್ನು ನಿರ್ವಹಣೆ ಮಾಡಬೇಕು.
28. ಚುನಾವಣಾ ಅಧಿಕಾರಿಯು ಏರ್ಪಾಡು ಮಾಡಿದ ತರಬೇತಿಗಳಿಗೆ ನಿಮ್ಮ ಚುನಾವಣಾ ಏಜೆಂಟರೊಂದಿಗೆ ಹಾಜರಾಗಬೇಕು.
29. ಆರ್‌ಓ ಅವರು ಇವಿಎಂಗಳನ್ನು ಪ್ರಾರಂಭಿಸುವ ಸಮಯದಲ್ಲಿ ಅವರೇ ಸ್ವತಃ ಅಥವಾ ಅವರ ಅಧಿಕೃತ ಪ್ರತಿನಿಧಿಯೊಬ್ಬರು ಹಾಜರಿರಬೇಕು.

**ಮಾಡಬಾರದು.**

1. ನಿಮ್ಮ ಯಾರೇ ಪ್ರತಿನಿಧಿ ಅಥವಾ ಪ್ರಸ್ತಾಪಕರ ಮೂಲಕ ನಾಮಪತ್ರವನ್ನು ಸಲ್ಲಿಸಬಾರದು.
2. ಸಾರ್ವಜನಿಕ ರಜಾ ದಿನಗಳಂದು ನಾಮ ಪತ್ರಗಳನ್ನು ಸಲ್ಲಿಸಬಾರದು.
3. ನಾಮಪತ್ರ ಸಲ್ಲಿಸುವ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಸಮಯಕ್ಕೆ ಮುಂಚೆ ಅಥವಾ ತರುವಾಯ ನಾಮಪತ್ರವನು ಸಲ್ಲಿಸಬಾರದು.
4. ನಾಲ್ಕಕ್ಕಿಂತ ಹೆಚ್ಚಿನ ನಾಮ ಪತ್ರವನ್ನು ಸಲ್ಲಿಸಬಾರದು.
5. ರಿಟರ್ನ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನ್ನಿಂಗ್ ಅಧಿಕಾರಿ (ಈ ಬಗ್ಗೆ ಅಧಿಕೃತ ಗೊಳಿಸಿದ) ಯನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಗೆ ನಾಮಪತ್ರವನ್ನು ಸಲ್ಲಿಸಬಾರದು.
6. ಗೊತ್ತುಪಡಿಸಿದ ಠೇವಣಿಯನ್ನು ಭಾರತ ರಿಸರ್ವ್ ಬ್ಯಾಂಕಿನಲ್ಲಿ ಅಥವಾ ಸರ್ಕಾರದ ಖಜಾನೆಯಲ್ಲಿ ಅಥವಾ ರಿಟರ್ನ್ನಿಂಗ್ ಅಧಿಕಾರಿಯಲ್ಲಿ ನಗದು ರೂಪದಲ್ಲಿ ಇಡಲು ಮರೆಯಬಾರದು.
7. ನಾಮಪತ್ರವನ್ನು ಸ್ವೀಕರಿಸುವ ಕೊನೆಯ ದಿನಾಂಕದ ಒಳಗೊಳಗಾಗಿ ಪ್ರಮಾಣವಚನ ಸ್ವೀಕರಿಸುವುದು ಮತ್ತು ದೃಡೀಕರಿಸುವುದನ್ನು ಮರೆಯಬಾರದು ಮತ್ತು ಪ್ರಮಾಣವಚನ ಸ್ವೀಕರಿಸಿದ ಅಥವಾ ದೃಡೀಕರಿಸಿದರ ಸಾಂಕೇತಕವಾಗಿ ರಸೀದಿಯನ್ನು ಪಡೆಯಬೇಕು.
8. ನಿಮ್ಮ ಹೆಸರುಯಿರುವ ಅಥವಾ ನಿಮ್ಮ ಚಿಹ್ನೆಯಿರುವ ಅಥವಾ ನಿಮ್ಮ ಪಕ್ಷದ ಹೆಸರು ಇರುವ ಅಥವಾ ನಿಮಗೆ ಅಥವಾ ನಿಮ್ಮ ಪಕ್ಷದ ಪರವಾಗಿ ಮತ ಚಲಾಯಿಸುವಂತೆ ಹೇಳಿಕೆಯನ್ನು ಒಳಗೊಂಡಿರುವ ಯಾವುದೇ ಗುರುತಿನ ಚೀಟಿಗಳನ್ನು ನೀಡಬಾರದು.
9. ಯಾವುದೇ ಅಭ್ಯರ್ಥಿಗೆ ಚುನಾವಣೆಗೆ ನಿಂತುಕೊಳ್ಳಲು ಅಥವಾ ಚುನಾವಣೆಗೆ ನಿಲ್ಲಬಾರದೆಂದು ಅಥವಾ ಚುನಾವಣೆಯಿಂದ ಹಿಂದೆ ಸರಿಯಲು ಅಥವಾ ನಾಮಪತ್ರ ಹಿಂಪಡೆಯಲು ಯಾವುದೇ ಕಾಣಿಕೆ ಅಥವಾ ಆಫರ್ ಅಥವಾ ಭರವಸೆಯನ್ನು ನೀಡಬಾರದು ಅಥವಾ ಮತದಾನ ಮಾಡದಂತೆ ತಡೆಹಿಡಿಯಲು ಅಥವಾ ಅವನ ಉಮೇದುವಾರಿಕೆ ಮತ್ತು ಹಿಂಪಡೆಯಲು ಅಥವಾ

ಹಿಂಪಡೆಯದಿರಲು ಅಥವಾ ಮತದಾನ ಮಾಡುವಂತೆ ಅಥವಾ ಮತದಾನ ಮಾಡದಂತೆ ಮಾಡಬಾರದು.

10. ಯಾವುದೇ ವ್ಯಕ್ತಿಯು ಮುಕ್ತವಾಗಿ ಮತ ಚಲಾಯಿಸುವ ಹಕ್ಕು ಹೊಂದಿದ್ದು, ಅದರಲ್ಲಿ ಪ್ರತ್ಯೇಕ್ಷವಾಗಿ ಅಥವಾ ಪರೋಕ್ಷವಾಗಿ ಮಧ್ಯಪ್ರವೇಶ ಮಾಡಬಾರದು ಅಥವಾ ಮಧ್ಯಪ್ರವೇಶ ಮಾಡುವುದಕ್ಕೆ ಕಾರಣವಾಗಬಾರದು.

11. ಧರ್ಮ, ಜನಾಂಗ, ಜಾತಿ ಅಥವಾ ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಮತ ಚಲಾಯಿಸಲು ಅಥವಾ ಮತದಾನ ಮಾಡದಂತೆ ಮನವಿ ಮಾಡಬಾರದು.

12. ಧಾರ್ಮಿಕ ಚಿಹ್ನೆಗಳು ಅಥವಾ ರಾಷ್ಟ್ರೀಯ ಚಿಹ್ನೆಗಳನ್ನು ಬಳಸಬಾರದು ಅಥವಾ ಬಳಸುವಂತೆ ಮನವಿ ಮಾಡಬಾರದು.

13. ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ವಿವಿಧ ವರ್ಗದ ನಾಗರಿಕರ ಮಧ್ಯೆ ವೈರತ್ವ ಅಥವಾ ಅಸೂಯೆ ಭಾವನೆ ಉತ್ತೇಜಿಸಬಾರದು ಅಥವಾ ಅದಕ್ಕೆ ಕಾರಣವಾಗಬಾರದು.

14. ಯಾವುದೇ ಅಭ್ಯರ್ಥಿಯ ವೈಯಕ್ತಿಕ ಗುಣ ಅಥವಾ ನಡತೆಗೆ ಸಂಬಂಧಿಸಿದಂತೆ ಅಥವಾ ಉಮೇದುವಾರಿಕೆ ಅಥವಾ ಅಭ್ಯರ್ಥಿಯ ಹಿಂದೆ ಸರಿಯುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸುಳ್ಳು ಹೇಳಿಕೆಗಳನ್ನು ಪ್ರಸಾರ ಮಾಡಬಾರದು.

15. ಮತದಾನ ಕೇಂದ್ರಕ್ಕೆ ಅಥವಾ ಮತದಾನ ಕೇಂದ್ರದಿಂದ ಮತದಾರರನ್ನು ಸಾಗಿಸುವುದಕ್ಕಾಗಿ ವಾಹನಗಳನ್ನು ಬಾಡಿಗೆ ಅಥವಾ ಗುತ್ತಿಗೆಗೆ ಪಡೆಯಬಾರದು.

16. ನಿಮ್ಮ ಚುನಾವಣೆಗಾಗಿ ಗೊತ್ತುಪಡಿಸಿದ ಗರಿಷ್ಠ ಮಿತಿಯನ್ನು ಮೀರಿ ಚುನಾವಣಾ ವೆಚ್ಚಗಳನ್ನು ಭರಿಸಬಾರದು ಅಥವಾ ಅಧಿಕೃತಗೊಳಿಸಬಾರದು.

17. ಸರ್ಕಾರಿ ನೌಕರರ ಬೆಂಬಲ ಪಡೆಯಬಾರದು.

18. ಮತದಾನ ಕೇಂದ್ರಗಳಲ್ಲಿ ದುರ್ನಡತೆ ತೋರಬಾರದು.

19. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರದಲ್ಲಿ ಅನುಚಿತವಾಗಿ ನಡೆದುಕೊಳ್ಳಬಾರದು.

20. ಚುನಾವಣೆ ಮುಕ್ತಾಯಕ್ಕೆ ನಿಗದಿಪಡಿಸಿದ ಸಮಯಕ್ಕೆ ಮುಂಚೆ ನಲವತ್ತೆಂಟು ಗಂಟೆಗಳ ಯಾವುದೇ ಸಮಯದಲ್ಲಿ ಮತದಾನದ ಪ್ರದೇಶದಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಬಾರದು.

21. ಚುನಾವಣೆ ಸಭೆಗಳಿಗೆ ಅಡ್ಡಿಯುಂಟುಮಾಡಬಾರದು.

22. ಚುನಾವಣೆಯ ದಿನಾಂಕದಂದು ಅಥವಾ ದಿನಾಂಕಗಳಂದು ಮತದಾನ ಕೇಂದ್ರಗಳಲ್ಲಿ ಅಥವಾ ಹತ್ತಿರದಲ್ಲಿ ಚುನಾವಣಾ ಪ್ರಚಾರ ಮಾಡಬಾರದು.

23. ಮುದ್ರಕರ ಅಥವಾ ಪ್ರಕಾಶಕರ ವಿವರಗಳನ್ನು ನೀಡದೆ ಮತ್ತು ಮುದ್ರಕರ ಮತ್ತು ಪ್ರಕಾಶಕರ ಗುರುತನ್ನು ಘೋಷಿಸದೆ ಚುನಾವಣೆ ಭಿತ್ತಿ ಪತ್ರಗಳನ್ನು ಥವಾ ಪೋಸ್ಟರ್‌ಗಳನ್ನು ಮುದ್ರಿಸಬಾರದು ಅಥವಾ ಪ್ರಕಟಿಸಬಾರದು ಮತ್ತು ರಾಜ್ಯದ ರಾಜಧಾನಿಯಲ್ಲಿ ಮುದ್ರಣ ಮಾಡಿದ್ದರೆ ಮುಖ್ಯ ಚುನಾವಣಾ ಅಧಿಕಾರಿಗೆ ಹಾಗೂ ಇತರೆಡೆ ಮುದ್ರಣ ಮಾಡಿರುವ ಸಂದರ್ಭದಲ್ಲಿ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಘೋಷಣೆಯ ಪ್ರತಿಗಳನ್ನು ಕಳುಹಿಸುವುದು.

24. ಯಾವುದೇ ನಾಮಪತ್ರ ಅಥವಾ ಯಾವುದೇ ಪಟ್ಟಿಯನ್ನು, ರಿಟರ್ನಿಂಗ್ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಮೂಲಕ ಅಥವಾ ಅವರ ಮೇರೆಗೆ ಅಂಟಿಸಿದ ಯಾವುದೇ ನೋಟಿಸು ಅಥವಾ ದಸ್ತಾವೇಜುಗಳನ್ನು ನಾಶಗೊಳಿಸಬಾರದು.

25. ಯಾವುದೇ ಮತಪತ್ರ ಅಥವಾ ಮತಪತ್ರದ ಮೇಲಿನ ಯಾವುದೇ ಅಧಿಕೃತ ಷರಾ ಅಥವಾ ಗುರುತಿನ ಯಾವುದೇ ಘೋಷಣೆಯನ್ನು ನಾಶಗೊಳಿಸಬಾರದು; ನಿಮ್ಮ ಮತಪತ್ರವನ್ನು ಹೊರತುಪಡಿಸಿ ಯಾವುದೇ ಇತರ ವಸ್ತುವನ್ನು ಮತಪಟ್ಟಿಗೆಗೆ ಹಾಕಬಾರದು.

26. ಇವಿಎಂಗಳು ಅಥವಾ ಬ್ಯಾಲೆಟ್ ಪೇಪರ್ ಗೆ ಹಸ್ತಕ್ಷೇಪ ಮಾಡುವುದಕ್ಕೆ ಸಮನಾದ ಯಾವುದೇ ಚಟುವಟಿಕೆಯನ್ನು ಮಾಡಬಾರದು.

27. ಯಾವುದೇ ವ್ಯಕ್ತಿಯ ನಡತೆಗೆ ಅಥವಾ ಗುಣಕ್ಕೆ ಸಂಬಂಧಿಸಿದಂತೆ ಅಥವಾ ಉಮೇದುವಾರಿಕೆಗೆ ಸಂಬಂದಿಸಿದಂತೆ ಅಥವಾ ಅಭ್ಯರ್ಥಿಯ ಹಿಂಪಡೆಯುವಿಕೆಗೆ ಸಂಬಂದಿಸಿದಂತೆ ಆ ಚುನಾವಣೆಯಲ್ಲಿ ಆ ಅಭ್ಯರ್ಥಿಯ ಭವಿಷ್ಯಕ್ಕೆ ಪ್ರತಿಕೂಲವಾಗುವ ಸುಳ್ಳು ಅಥವಾ ಸುಳಾಗಿದೆಯೆಂದು ನಂಬಲು ಕಾರಣವಿರುವ ಹೇಳಿಕೆಯನ್ನು ನಿಮ್ಮ ಸಮ್ಮತಿ ಅಥವಾ ನಿಮ್ಮ ಏಜೆಂಟನ ಸಮ್ಮತಿಯೊಂದಿಗೆ ಪ್ರಕಟಿಸಬಾರದು.

28. ಯಾವುದೇ ಜಾತಿ ಅಥವಾ ಸಮುದಾಯದಿಂದ ಸಾಮಾಜಿಕ ಬಹಿಷ್ಕಾರ ಮತ್ತು ಸಂಪರ್ಕ ಕಡಿದುಕೊಳ್ಳುವುದು ಅಥವಾ ಹೊರಹಾಕುವುದು ಒಳಗೊಂಡಂತೆ ಯಾವುದೇ ರೀತಿಯ ಕೃತ್ಯದಿಂದ ಯಾವುದೇ ಅಭ್ಯರ್ಥಿ ಅಥವಾ ಯಾವುದೇ ಮತದಾರ ಅಥವಾ ಯಾವುದೇ ವ್ಯಕ್ತಿಗೆ ಬೆದರಿಕೆ ಹಾಕಬಾರದು.

29. ಯಾವುದೇ ಅಭ್ಯರ್ಥಿ ಅಥವಾ ಮತದಾರರನ್ನು ಪ್ರಚೋದಿಸಬಾರದು ಅಥವಾ ಪ್ರಚೋದಿಸಲು ಪ್ರಯತ್ನಿಸಬಾರದು, ಅವನು ಆಸಕ್ತಿ ಹೊಂದಿರುವ ಅಥವಾ ಆಚರಿಸುತ್ತಿರುವ ದೈವಭಕ್ತಿಯನ್ನು ಅಥವಾ ಆಧ್ಯಾತ್ಮಿಕ ಶಕ್ತಿಯನ್ನು ಖಂಡಿಸಬಾರದು.

30. ಚುನಾವಣೆಯಲ್ಲಿ ವ್ಯಕ್ತಿಗತ ಅಪರಾಧವನ್ನು ಪ್ರಚೋದಿಸಬಾರದು.

31. ನೀವು ಚುನಾವಣೆಯಲ್ಲಿ ಚುನಾಯಿತರಾಗಿರಲಿ ಅಥವಾ ಇಲ್ಲದಿರಲಿ ಅಥವಾ ನೀವು ಚುನಾವಣೆಯಲ್ಲಿ ಗಂಭೀರವಾಗಿ ಸ್ಪರ್ಧಿಸಿರಲಿ ಅಥವಾ ಇಲ್ಲದಿರಲಿ ಚುನಾವಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಜಿಲ್ಲಾ ಚುನಾವಣಾ ಅಧಿಕಾರಿಯವರಿಗೆ ಚುನಾವಣೆಯ ಲೆಕ್ಕಪತ್ರವನ್ನು ಸಲ್ಲಿಸಲು ಮರೆಯಬಾರದು.

32. ಕಾನೂನಿನ ಉಪಬಂಧಗಳು ಮತ್ತು ಆಯೋಗದ ನಿರ್ದೇಶನಗಳನ್ನು ಉಲ್ಲಂಘಿಸುವಂತೆ ಯಾವುದೇ ಆಸ್ತಿಯನ್ನು ವಿರೂಪಗೊಳಿಸುವುದರಲ್ಲಿ ಅಥವಾ ಯಾವುದೇ ಪ್ರಚಾರ ಕಾರ್ಯ ಕೈಗೊಳ್ಳುವುದರಲ್ಲಿ ತೊಡಗಬಾರದು.

33. ಆಯೋಗವು ನೇಮಿಸಿದ ಸಮಿತಿಯ ಪೂರ್ವ–ಪ್ರಮಾಣೀಕರಣವಿಲ್ಲದೆ ಟಿವಿ ಚಾನಲ್, ಕೇಬಲ್ ಟಿವಿ ಅಥವಾ ರೇಡಿಯೋ ದಲ್ಲಿ ಯಾವುದೇ ರಾಜಕೀಯ ಜಾಹಿರಾತನ್ನು ಪ್ರಕಟಿಸಬಾರದು. ಅಂಥ ಜಾಹಿರಾತುಗಳನ್ನು ಕೊನೆಯ 48 ಗಂಟೆಗಳಲ್ಲಿ ಮುದ್ರಣ ಮಾಧ್ಯಮದಲ್ಲಿ ಪ್ರಕಟಿಸುವುದಕ್ಕೆ ಸಮಿತಿಯ ಪ್ರಮಾಣೀಕರಣ ಹೊಂದಿರತಕ್ಕದ್ದು.

# ಪರಿಶಿಷ್ಟ 12

(ಅಧ್ಯಾಯ 4, ಪ್ಯಾರಾ 4.11.1)

## ಚುನಾವಣೆ ಘೋಷಣೆ ಆದ ದಿನಾಂಕದಿಂದ ಮತ್ತು ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗುವವರೆಗೆ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ಅನುಸರಿಸಬೇಕಾದ ಮಾರ್ಗಸೂಚಿ.

## ನೀತಿ ಸಂಹಿತೆ – ಮಾಡಬೇಕಾದುದು ಮತ್ತು ಮಾಡದಿರುವುದು

**ಕಲ್ಯಾಣ ಯೋಜನೆಗಳು ಮತ್ತು ಸರ್ಕಾರದ ಕಾಮಗಾರಿಗಳ ಬಗ್ಗೆ**

1. ಹೊಸ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ವಿನಾಯಿತಿಗಳು ಅಥವಾ ಯಾವುದೇ ರೀತಿಯ ಹಣಕಾಸಿನ ಅನುದಾನಗಳು ಅಥವಾ ಆ ಬಗ್ಗೆ ಭರವಸೆಗಳು ಅಥವಾ ಅಡಿಗಲ್ಲು ಕಾರ್ಯಕ್ರಮ ಮುಂತಾದವುಗಳು, ಅಧಿಕಾರದಲ್ಲಿರುವ ಪಕ್ಷದ ಪರವಾಗಿ ಮತದಾರರ ಮೇಲೆ ಪ್ರಭಾವ ಭಿರುವುದರಿಂದ ಅವುಗಳ ಘೋಷಣೆಯನ್ನು ನಿಷೇಧಿಸಲಾಗಿದೆ.
2. ಈ ನಿರ್ಬಂಧಗಳು ಹೊಸ ಯೋಜನೆಗಳಿಗೆ ಹಾಗೂ ಮುಂದುವರಿಯುತ್ತಿರುವ ಯೋಜನೆಗಳಿಗೂ ಸಹ ಅನ್ವಯವಾಗುತ್ತದೆ. ರಾಷ್ಟ್ರೀಯ, ಪ್ರಾದೇಶಿಕ ಮತ್ತು ರಾಜ್ಯದ ಪ್ರಯೋಜನಾತ್ಮಕ ಯೋಜನೆಗಳ ಸಂದರ್ಭದಲ್ಲಿ, ಅವು ಈಗಾಗಲೇ ಮುಕ್ತಾಯದ ಹಂತ ತಲುಪಿರುವಾಗ, ಸಾರ್ವಜನಿಕ ಹಿತಾಸಕ್ತಿಯಿಂದ ಅವುಗಳ ಬಳಕೆಯನ್ನು ಅಥವಾ ಕಾರ್ಯಪ್ರಗತಿಯನ್ನು ನಿಲ್ಲಿಸಬೇಕು ಅಥವಾ ವಿಳಂಬ ಮಾಡಬೇಕು ಎಂಬುದು ಇದರ ಅರ್ಥವಲ್ಲ. ಚುನಾವಣಾ ನೀತಿ ಸಂಹಿತೆಯು ಜಾರಿಗೆ ಬಂದಿರುವುದರಿಂದ ಅಂಥ ಯೋಜನೆಗಳನ್ನು ಪ್ರಾರಂಭಿಸದಿರುವುದಕ್ಕಾಗಿ ಅಥವಾ ಅವುಗಳನ್ನು ಮುಂದುವರೆಸದಿರುವುದಕ್ಕಾಗಿ ಯಾವುದೇ ವಿನಾಯಿತಿ ಇರುವುದಿಲ್ಲ. ಅದೇ ರೀತಿ, ಅಂಥ ಯೋಜನೆಗಳನ್ನು ಸಿವಿಲ್ ಪ್ರಾಧಿಕಾರವು ಪ್ರಾರಂಭಿಸಿದೆ ಎಂಬುದನ್ನು ಮತ್ತು ಯಾವುದೇ ರಾಜಕೀಯ ಕಾರ್ಯಕರ್ತರು ಅದರಲ್ಲಿ ಒಳಗೊಂಡಿಲ್ಲ ಎಂಬುದನ್ನು ಮತ್ತು ಯಾವುದೇ ರಾಜಕೀಯ ಅಭಿಮಾನಿಗಳು ಅಥವಾ ಸಮಾರಂಭಗಳಿಗೆ ಮಾಡುತ್ತಿಲ್ಲವೆಂಬುದನ್ನು, ಹಾಗೆ ಆಡಳಿತ ಪಕ್ಷದ ಪರವಾಗಿ ಚುನಾವಣೆಯ ಮೇಲೆ ಪ್ರಭಾವ ಭೀರುವ ದೃಷ್ಟಿಯಿಂದ ಅಂಥ ಉದ್ಘಾಟನೆ ಮಾಡುವ ಮೂಲಕ ಯಾವುದೇ ಪ್ರಭಾವ ಭೀರುತ್ತಿಲ್ಲವೆಂಬುದನ್ನು ಖಚಿತಪಡಿಸಕೊಳ್ಳತಕ್ಕದ್ದು. ಏನಾದರೂ ಸಂದೇಹವಿದ್ದರೆ, ಮುಖ್ಯ ಚುನಾವಣಾ ಅಧಿಕಾರಿ/ ಭಾರತ ಚುನಾವಣಾ ಆಯೋಗದಿಂದ ಸ್ಪಷ್ಟೀಕರಣ ಪಡೆಯತಕ್ಕದ್ದು.
3. ಯಾವುದೇ ನಿರ್ದಿಷ್ಟ ಯೋಜನೆಗಾಗಿ ಆಯವ್ಯಯ ಉಪಬಂಧ ಕಲ್ಪಿಸಿರುವಾಗ ಅಥವಾ ಈ ಮುಂಚೆ ಯೋಜನೆಯನ್ನು ಮಂಜೂರು ಮಾಡಿರುವಾಗ ಅಥವಾ ರಾಜ್ಯಪಾಲರ ಭಾಷಣದಲ್ಲಿ ಅಥವಾ ಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಈ ಯೋಜನೆಗಳ ಬಗ್ಗೆ ಉಲ್ಲೇಖಿಸಿದ್ದರೆ, ಅವು ಮತದಾರರ ಮೇಲೆ ಪರಿಣಾಮ ಭೀರುವುದರಿಂದ ಆ ಯೋಜನೆಗಳನ್ನು ಘೋಷಣೆ ಮಾಡಬಹುದು ಅಥವಾ ಉದ್ಘಾಟಿಸಬಹುದು ಅಥವಾ ಚುನಾವಣೆಯನ್ನು ಘೋಷಣೆ ಮಾಡಿದ ತರುವಾಯ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಕೈಗೊಳ್ಳಬೇಕೆಂದು ಅರ್ಥವಲ್ಲವೆಂದು ಸ್ಪಷ್ಟೀಕರಿಸಲಾಗಿದೆ. ಅಂಥ ಕ್ರಮಗಳನ್ನು ಕೈಗೊಂಡಿದ್ದರೆ, ಅದನ್ನು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯೆಂದು ಪರಿಗಣಿಸಬೇಕು.
4. ಯಾವುದೇ ಸರ್ಕಾರಿ ಯೋಜನೆಗಳಿಗಾಗಿ ಹೊಸ ಮಂಜೂರಾತಿಯನ್ನು ಮಾಡತಕ್ಕದ್ದಲ್ಲ. ರಾಜಕೀಯ ಮುಖಂಡರು (ಸಚಿವರು ಮುಂತಾದವರು) ಪರಿಶೀಲಿಸುವ ಮತ್ತು ಫಲಾನುಭವಿ ಆಧಾರಿತ ಯೋಜನೆಗಳ ಪರಿಷ್ಕರಣೆಯನ್ನು, ಅವು ಮುಂದುವರಿಯುತ್ತಿರುವ ಯೋಜನೆಗಳಾಗಿದ್ದರೂ ಸಹ ಚುನಾವಣೆಗಳು ಮುಗಿಯುವವರೆಗೆ ನಿಲ್ಲಿಸತಕ್ಕದ್ದು. ಕಲ್ಯಾಣ ಯೋಜನೆಗಳಿಗೆ ಯಾವುದೇ ಹೊಸ ಅನುದಾನ ಬಿಡುಗಡೆ ನಡೆಸತಕ್ಕದ್ದಲ್ಲ ಮತ್ತು ಚುನಾವಣಾ ಆಯೋಗದ ಪೂರ್ವ ಮಂಜೂರಾತಿ ಇಲ್ಲದೇ ಚುನಾವಣೆ ನಡೆಯುತ್ತಿರುವ ರಾಜ್ಯದ ಯಾವುದೇ ಭಾಗದಲ್ಲಿ ಕಾಮಗಾರಿಗಳನ್ನು ನಡೆಸತಕ್ಕದ್ದಲ್ಲ ಅಥವಾ ಕಾಮಗಾರಿಗಳಿಗೆ ಗುತ್ತಿಗೆ ನೀಡತಕ್ಕದ್ದಲ್ಲ.

ಸಂಸತ್ ಸದಸ್ಯರು (ರಾಜ್ಯ ಸಭಾ ಸದಸ್ಯರು ಸೇರಿದಂತೆ) ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಅಥವಾ ಎಂಎಲ್ಎ/ ಎಂಎಲ್‌ಸಿ ಗಳ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯ ಅಡಿಯಲ್ಲಿ ಕೈಗೊಳ್ಳಲಾಗುವ, ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಯೋಜನೆಗಳು ಒಳಗೊಳ್ಳುತ್ತವೆ.

5. ನೀತಿ ಸಂಹಿತೆಯು ಜಾರಿಗೆ ಬರುವ ಮುಂಚೆ ಕಾರ್ಯಾದೇಶ ನೀಡಲಾಗಿದ್ದರೂ, ವಾಸ್ತವವಾಗಿ ಕಾಮಗಾರಿಗಳನ್ನು ಪ್ರಾರಂಭಿಸದಿದ್ದರೆ, ಆ ಸಂಬಂಧದಲ್ಲಿ ಯಾವುದೇ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದಲ್ಲ. ಈ ಕಾಮಗಾರಿಗಳನ್ನು ಚುನಾವಣಾ ಪ್ರಕ್ರಿಯೆ ಮುಗಿದ ತರುವಾಯ ಮಾತ್ರ ಪ್ರಾರಂಭಿಸಬೇಕು. ಅಲ್ಲದೆ, ಕಾಮಗಾರಿ ಈಗಾಗಲೇ ಪ್ರಾರಂಭವಾಗಿದ್ದರೆ ಅದನ್ನು ಮುಂದುವರಿಸಬಹುದು.

6. ಸಂಬಂಧಪಟ್ಟ ಅಧಿಕಾರಿಗಳ ಮನವರಿಕೆಗೆ ಒಳಪಟ್ಟು ಪೂರ್ಣಗೊಂಡ ಕಾಮಗಾರಿಗಳಿಗಾಗಿ ಹಣಕಾಸು ಬಿಡುಗಡೆ ಮಾಡಲು ಯಾವುದೇ ನಿರ್ಬಂಧವಿರುವುದಿಲ್ಲ.

7. ತುರ್ತು ಸಂದರ್ಭಗಳಲ್ಲಿ ಅಥವಾ ಬರಗಾಲ, ಮಹಾಪೂರ, ರೋಗರುಜಿನಗಳು, ಇತರ ನೈಸರ್ಗಿಕ ವಿಕೋಪಗಳು ಅಥವಾ ವೃದ್ಧರು, ಅಶಕ್ತರು ಮುಂತಾದವರಿಗಾಗಿ ಕೈಗೊಂಡ ಕಲ್ಯಾಣ ಕ್ರಮಗಳಿಗೆ ಪರಿಹಾರ ಒದಗಿಸುವಂಥ ಆಕಸ್ಮಿಕ ಸಂದರ್ಭಗಳನ್ನು ನಿಭಾಯಿಸುವುದಕ್ಕಾಗಿ ಕೈಗೊಳ್ಳುವ ಯೋಜನೆಗಳಿಗಾಗಿ ಆಯೋಗವು ಅನುಮೋದನೆಯನ್ನು ನಿರಾಕರಿಸಬಾರದು. ಅಲ್ಲದೆ, ಈ ವಿಷಯಗಳಿಗೆ ಸಂಬಂಧಿಸಿದಂತೆ ಆಯೋಗದ ಪೂರ್ವಾನುಮೋದನೆ ಪಡೆದುಕೊಳ್ಳತಕ್ಕದ್ದು ಮತ್ತು ಎಲ್ಲ ಅಡಂಬರದ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ನಿಷೇಧಿಸಬೇಕು ಮತ್ತು ಆ ಕಲ್ಯಾಣ ಕಾರ್ಯಕ್ರಮಗಳು ಅಥವಾ ಪರಿಹಾರ ಮತ್ತು ಅಧಿಕಾರದಲ್ಲಿರುವ ರಾಜಕೀಯ ಪಕ್ಷಗಳ ಹೆಸರಿನಲ್ಲಿ ಮತದಾರರ ಮೇಲೆ ಪ್ರಭಾವ ಭೀರುವಂತೆ ಸರ್ಕಾರ ಕೈಗೊಳ್ಳುತ್ತಿರುವ ಪುನರ್‌ವಸತಿ ಕಾಮಗಾರಿಗಳು ಇತರ ಪಕ್ಷಗಳ ಮೇಲೆ ಪ್ರತಿಕೂಲ ಪರಿಣಾಮ ಭಿರುವಂತಿದಿದ್ದರೆ, ಅವುಗಳಿಗೆ ಅವಕಾಶ ಮಾಡಿಕೊಡಬಾರದು.

**ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆಗಳ ಬಗ್ಗೆ;–** ಚುನಾವಣೆ ನಡೆಸುವ ಸಂಬಂಧದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಅಧಿಕಾರಿಗಳು ಅಥವಾ ಪದಾಧಿಕಾರಿಗಳ ವರ್ಗಾವಣೆಯನ್ನು ನಿಷೇಧಿಸತಕ್ಕದ್ದೆಂದು ಚುನಾವಣಾ ಆಯೋಗವು ನಿರ್ದೇಶನ ನೀಡಿದೆ. ಇದರಲ್ಲಿ ಒಳಗೊಂಡಿರುವ ಆದರೆ ನಿರ್ಬಂಧಸದೆ ಇರುವವು ಈ ಮುಂದಿನಂತಿವೆ:

(i) ಮುಖ್ಯ ಚುನಾವಣಾ ಅಧಿಕಾರಿ ಮತ್ತು ಅಪರ, ಜಂಟಿ/ ಉಪ ಮುಖ್ಯ ಚುನಾವಣಾ ಅಧಿಕಾರಿಗಳು;

(ii) ಜಿಲ್ಲಾಧಿಕಾರಿಗಳು;

(iii) ಜಿಲ್ಲಾ ಚುನಾವಣಾ ಅಧಿಕಾರಿಗಳು, ರಿಟರ್ನಿಂಗ್ ಅಧಿಕಾರಿಗಳು, ಸಹಾಯಕ ರಿಟರ್ನಿಂಗ್ ಅಧಿಕಾರಿಗಳು ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ನಿಯೋಜಿತರಾಗಿರುವ ಇತರ ಕಂದಾಯ ಅಧಿಕಾರಿಗಳು;

(iv) ಚುನಾವಣೆಗಳನ್ನು ನಿರ್ವಹಣೆ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಪೋಲಿಸ್ ಇಲಾಖೆಯ ಅಧಿಕಾರಿಗಳಾದ ಐಜಿ ಗಳು ಮತ್ತು ಡಿಐಜಿ ಗಳು, ಹಿರಿಯ ಪೋಲಿಸ್ ಅಧಿಕ್ಷಕರುಗಳು ಮತ್ತು ಪೋಲಿಸ್ ಅಧೀಕ್ಷಕರುಗಳು, ಉಪ ವಿಭಾಗೀಯ ಮಟ್ಟದ ಪೋಲಿಸ್ ಅಧಿಕಾರಿಗಳಾದಂತ ಡಿವೈಎಸ್‌ಪಿ ಗಳು ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 28ಎ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ನಿಯೋಜಿಸಲಾಗಿರುವ ಇತರ ಪೊಲೀಸ್ ಅಧಿಕಾರಿಗಳು;

(v) ಚುನಾವಣಾ ಕಾಮಗಾರಿಗಳಿಗಾಗಿ ಗೊತ್ತುಪಡಿಸಿದ ಇತರ ಅಧಿಕಾರಿಗಳಾದ ವಿಭಾಗೀಯ ಮತ್ತು ವಲಯ ಅಧಿಕಾರಿಗಳು, ಸಾರಿಗೆ ವಿಭಾಗ, ಇವಿಎಂ ಕೋಶ, ಮತದಾನ ಸಾಮಾಗ್ರಿಗಳ ಸಂಗ್ರಹಣೆ ಮತ್ತು ವಿತರಣೆ ಕೋಶ, ತರಬೇತಿ ಕೋಶ, ಮುದ್ರಣ ಕೋಶ, ಮುಂತಾದವುಗಳು. ರಾಜ್ಯದಲ್ಲಿ ಚುನಾವಣೆ ನಿರ್ವಹಣೆ ಪಾತ್ರವನ್ನು ವಹಿಸುತ್ತಿರುವ ಹಿರಿಯ ಅಧಿಕಾರಿಗಳು ಸಹ ಈ ನಿರ್ದೇಶನದಲ್ಲಿ ಒಳಗೊಳ್ಳುತ್ತಾರೆ.

(vi) ಚುನಾವಣೆ ದಿನಾಂಕ ಘೋಷಣೆಯಾಗುವ ಮುಂಚೆ ಆದರೆ ನೀತಿ ಸಂಹಿತೆಯು ಜಾರಿಯಾಗುವವರೆಗೆ ಮೇಲಿನ ವರ್ಗದ ಅಧಿಕಾರಿಗಳ ಸಂಬಂಧದಲ್ಲಿ ನೀಡಲಾದ ವರ್ಗಾವಣೆ ಆದೇಶಗಳನ್ನು, ಚುನಾವಣಾ ಆಯೋಗದ ನಿರ್ದಿಷ್ಟ ಅನುಮೋದನೆ ಪಡೆಯದೆ ಜಾರಿಗೆ ಕೊಡತಕ್ಕದ್ದಲ್ಲ.

(vii) ಈ ನಿಷೇಧವು ಚುನಾವಣೆ ಪ್ರಕ್ರಿಯೆಗಳು ಮುಗಿಯುವವರೆಗೆ ಜಾರಿಯಲ್ಲಿರತಕ್ಕದ್ದು;

(viii) ಆಡಳಿತಾತ್ಮಕ ಕಾರಣದಿಂದ ಆ ಅಧಿಕಾರಿಗಳ ವರ್ಗಾವಣೆಯು ಅವಶ್ಯವೆಂದು ಪರಿಗಣಿಸಿದರೆ, ರಾಜ್ಯ ಸರ್ಕಾರವು ಸಮರ್ಥನೆಯೊಂದಿಗೆ ಚುನಾವಣಾ ಆಯೋಗದ ಪೂರ್ವಾನುಮೋದನೆಗಾಗಿ ಕಳುಹಿಸಬಹುದು.

(ix) ಚುನಾವಣಾ ಆಯೋಗದ ಪೂರ್ವಾ ಮಂಜೂರಾತಿಯಿಲ್ಲದೆ ಈ ಅವಧಿಯಲ್ಲಿ ಸರ್ಕಾರದ/ ಸಾರ್ವಜನಿಕ ಉದ್ಯಮಗಳ ಯಾವುದೇ ನೇಮಕಾತಿಗಳು ಅಥವಾ ಬಡ್ತಿಗಳನ್ನು ಮಾಡತಕ್ಕದ್ದಲ್ಲ.

**ಆಡಳಿತ ಯಂತ್ರದ ದುರುಪಯೋಗದ ಬಗ್ಗೆ**

1. ಚುನಾವಣೆ ಕಾರ್ಯಗಳಿಗಾಗಿ ಕಚೇರಿಯ ವಾಹನಗಳನ್ನು ಬಳಸಬಾರದು. ಕಚೇರಿಯ ವಾಹನಗಳು ಎಂದರೆ,– ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾರ್ವಜನಿಕ ಉದ್ಯಮಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ವಲಯದ ಉದ್ಯಮಗಳು, ಮಾರುಕಟ್ಟೆ ಮಂಡಳಿಗಳು (ಯಾವುದೇ ಹೆಸರಿರಲಿ), ಸಹಕಾರ ಸಂಘಗಳು, ಜಿಲ್ಲಾ ಸ್ವಾಯತ್ತ ಮಂಡಳಿಗಳು; ಅಥವಾ ಸಾರ್ವಜನಿಕ ನಿಧಿಗಳಿರುವ ಸಣ್ಣ ಪ್ರಮಾಣದ ಹೂಡಿಕೆಯಿರುವ ಮತ್ತು ಇತರೇ ಯಾವುದೇ ನಿಕಾಯಗಳು, ರಕ್ಷಣಾ ಮಂತ್ರಾಲಯಕ್ಕೆ ಮತ್ತು ಗ್ರಹ ವ್ಯವಹಾರಗಳ ಮಂತ್ರಾಲಯದ ಅಡಿಯಲ್ಲಿನ ಕೇಂದ್ರ ಪೊಲೀಸ್ ಸಂಸ್ಥೆಗಳು ಮತ್ತು ರಾಜ್ಯಸರ್ಕಾರಗಳಿಗೆ ಸೇರಿದ ವಾಹನಗಳು.

2. ಕೇಂದ್ರ ಸಚಿವರು ಅಥವಾ ರಾಜ್ಯ ಸಚಿವರು ಖಾಸಗಿ ಭೇಟಿಗಾಗಿ ತಮ್ಮ ಅಥವಾ ತನ್ನ ಖಾಸಗಿ ವಾಹನಗಳನ್ನು ಬಳಸುವುದಕ್ಕೆ ಮುಕ್ತ ಅವಕಾಶವಿದೆ. ಅಂಥ ಖಾಸಗಿ ಭೇಟಿಗಳಿಗಾಗಿ ತಮ್ಮ ಅಧಿಕೃತ ಸಿಬ್ಬಂದಿಯನ್ನು ಸಚಿವರು ತಮ್ಮೊಂದಿಗೆ ಕರೆದುಕೊಂಡು ಹೋಗತಕ್ಕದ್ದಲ್ಲ. ಅಲ್ಲದೆ, ಸಚಿವರು ಕೆಲವು ತುರ್ತು ಸಂದರ್ಭಗಳಲ್ಲಿ ತಮ್ಮ ಅಧಿಕೃತ ಕೆಲಸಕಾರ್ಯಗಳಿಗಾಗಿ ಕೇಂದ್ರ ಸ್ಥಾನದಿಂದ ಹೊರಹೋಗುವುದನ್ನು ಸಾರ್ವಜನಿಕ ಹಿತಾಸಕ್ತಿಯಿಂದ ತಪ್ಪಿಸುವಂತಿಲ್ಲ. ಸಚಿವರು ಭೇಟಿ ನೀಡಲು ಉದ್ದೇಶಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಯಿಂದ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಒಂದು ಪ್ರಮಾಣಪತ್ರವನ್ನು ಕಳುಹಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಚುನಾವಣಾ ಆಯೋಗಕ್ಕೆ ಕಳುಹಿಸಬೇಕು. ಅಂಥ ಪ್ರವಾಸದ ಅವಧಿಯಲ್ಲಿ ಅವರ ಅಧಿಕೃತ ಪ್ರವಾಸಕ್ಕಾಗಿ ಮುಖ್ಯ ಕಾರ್ಯದರ್ಶಿಯವರು ಸಚಿವರಿಗೆ ಸರ್ಕಾರದ ವಾಹನವನ್ನು ಮತ್ತು ವಸತಿ ಸೌಲಭ್ಯವನ್ನು ಮತ್ತು ಇತರ ಆತಿಥ್ಯಗಳನ್ನು ಕಲ್ಪಿಸಬಹುದು. ಅಲ್ಲದೆ, ಅಂಥ ಅಧಿಕೃತ ಪ್ರವಾಸದ ನಿಕಟ ಪೂರ್ವದಲ್ಲಿ ಅಥವಾ ಪ್ರವಾಸದ ಅವಧಿಯಲ್ಲಿ ಅಥವಾ ಪ್ರವಾಸ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಯಾರೇ ಸಚಿವರು ಯಾವುದೇ ಚುನಾವಣಾ

ಪ್ರಚಾರ ಅಥವಾ ರಾಜಕೀಯ ಚಟುವಟಿಕೆಯನ್ನು ನಡೆಸಬಾರದು ಅಥವಾ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಾರದು. ಚುನಾವಣಾ ಆಯೋಗವು ಮುಖ್ಯ ಚುನಾವಣಾ ಅಧಿಕಾರಿಗಳೊಂದಿಗೆ ಸಮಲೋಚಿಸಿ ಅಂಥ ಏರ್ಪಾಟುಗಳ ಮೇಲೆ ಸೂಕ್ತ ನಿಗಾ ವಹಿಸಬೇಕು.

3. ಯಾರೇ ಕೇಂದ್ರ ಅಥವಾ ರಾಜ್ಯ ಸಚಿವರು ಚುನಾವಣಾ ಕ್ಷೇತ್ರದ ಅಥವಾ ರಾಜ್ಯದ ಚುನಾವಣಾ ಘೋಷಣೆಯಾದ ತರುವಾಯ ಚುನಾವಣೆಯ ಅವಧಿಯಲ್ಲಿ ಯಾವುದೇ ಅಧಿಕೃತ ಚರ್ಚೆಗಾಗಿ ಚುನಾವಣೆಗೆ ಸಂಬಂಧಿಸಿದ ಅಧಿಕಾರಿಯನ್ನು ಕರೆಯಬಾರದು. ಸಂಬಂಧಪಟ್ಟ ಇಲಾಖೆಯ ಉಸ್ತುವಾರಿಯ ಸಾಮರ್ಥ್ಯದಿಂದ ಮಾತ್ರ ಸಚಿವರು ಅಥವಾ ಮುಖ್ಯಮಂತ್ರಿಗಳು ಸುವ್ಯವಸ್ಥೆಯ ವಿಫಲತೆಯ ಸಂದರ್ಭದಲ್ಲಿ ಅಥವಾ ನೈಸರ್ಗಿಕ ವಿಕೋಪ ಅಥವಾ ಯಾವುದೇ ತುರ್ತು ಅಂಥ ಸಂದರ್ಭದಲ್ಲಿ ವಿಚಾರಣೆ ಮಾಡುವ ದೃಷ್ಟಿಯಿಂದ/ ಸಂರಕ್ಷಣೆ/ ಪರಿಹಾರ ಮತ್ತು ಅಂಥ ಇತರ ಉದ್ದೇಶಗಳಿಗಾಗಿ ಚುನಾವಣಾ ಕ್ಷೇತ್ರಕ್ಕೆ ಸಚಿವರು/ ಮುಖ್ಯಮಂತ್ರಿಗಳು ಅಧಿಕೃತ ಭೇಟಿ ನೀಡಬೇಕಾದಂಥ ತುರ್ತು ಸಂದರ್ಭಗಳಲ್ಲಿ ವಿನಾಯಿತಿಯಿದೆ.

4. ಸಚಿವರು ತಮ್ಮ ಕಚೇರಿಯಿಂದ ಮನೆಗೆ, ಮನೆಯಿಂದ ಕಚೇರಿಗೆ ಅಧಿಕೃತ ಕೆಲಸಕ್ಕಾಗಿ ತಮ್ಮ ವಾಹನಗಳನ್ನು ಬಳಸಲು ಹಕ್ಕುಳ್ಳವರಾಗಿರುತ್ತಾರೆ, ಪರಂತು, ಅಂಥ ಸಂಚಾರವು ಯಾವುದೇ ಚುನಾವಣೆಗೆ ಅಥವಾ ಯಾವುದೇ ರಾಜಕೀಯ ಚಟುವಟಿಕೆಗೆ ಸಂಬಂಧಿಸಿರಬಾರದು.

5. ಕೇಂದ್ರ ಅಥವಾ ರಾಜ್ಯ ಸಚಿವರು ಚುನಾವಣಾ ಕಾರ್ಯನಿಮಿತ್ತ ತಮ್ಮ ಅಧಿಕೃತ ಪ್ರವಾಸವನ್ನು ಕೈಗೊಳ್ಳತಕ್ಕದ್ದಲ್ಲ.

6. ರಾಜ್ಯದ ಆಡಳಿತವು ಅವರಿಗೆ ಸಶಸ್ತ್ರ ಸಜ್ಜಿತ ಗಾರ್ಡ್‌ಗಳನ್ನು ಅಂಥ ಭೇಟಿಯ ಸಂದರ್ಭದಲ್ಲಿ ಒದಗಿಸಿದ್ದರು ಸಹ ಅಂಥ ಖಾಸಗಿ ಅಥವಾ ಅಧಿಕೃತ ಭೇಟಿಯ ಸಮಯದಲ್ಲಿ ಯಾವುದೇ ರೀತಿಯ ಸೈರನ್‌ನ್ನು ಅಳವಡಿಸಿದ ಯಾವುದೇ ಬಣ್ಣದ ದೀಪ ಸ್ತಂಭ ಹೊಂದಿರುವ ಪೈಲ್‌ಟ್ ಕಾರು ಅಥವಾ ಕಾರುಗಳನ್ನು ಬಳಸತಕ್ಕದ್ದಲ್ಲ. ಸರ್ಕಾರಿ ವಾಹನ ಅಥವಾ ಖಾಸಗಿ ವಾಹನಕ್ಕೂ ಇದು ಅನ್ವಯಿಸುತ್ತದೆ.

7. ಚುನಾವಣೆ ನಡೆಯುವ ಸಂದರ್ಭದಲ್ಲಿ ಚುನಾವಣಾ ಕ್ಷೇತ್ರಕ್ಕೆ ಭೇಟಿ ನೀಡುವ ಯಾವುದೇ ಅಧಿಕಾರಿಯು, ಸಚಿವರಿಗೆ ಭೇಟಿ ಮಾಡುವುದು ಸಂಬಂಧಪಟ್ಟ ಸೇವಾ ನಿಯಮಗಳ ಮೇರೆಗೆ, ದುರ್ನಡತೆಯೆಂದು ಪರಿಗಣಿಸತಕ್ಕದ್ದು ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣದ 129(1) ರಲ್ಲಿ ಉಲ್ಲೇಖಿಸಿದ ಒಬ್ಬ ಅಧಿಕಾರಿಯಾಗಿದ್ದರೆ, ಅವನನ್ನು ಸಹ ಆ ಪ್ರಕರಣದ ಶಾಸನಾತ್ಮಕ ಉಪಬಂಧಗಳನ್ನು ಉಲ್ಲಂಘಿಸಿರುವನೆಂದು ಪರಿಗಣಿಸತಕ್ಕದ್ದು ಮತ್ತು ಆ ಉಪಬಂಧಗಳಲ್ಲಿ ಉಪಬಂಧಿಸಿದ ದಂಡನೆಗೆ ಗುರಿಪಡಿಸತಕ್ಕದ್ದು.

**ಚುನಾವಣೆ ಘೋಷಣೆಯಾದಾಗಿನಿಂದ ಮತ್ತು ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಯಾವುದೇ ಅಭ್ಯರ್ಥಿ ಮತ್ತು ರಾಜಕೀಯ ಪಕ್ಷಗಳು ಅನುಸರಿಸಬೇಕಾದ ಮಾರ್ಗಸೂಚಿಗಳು – ಮಾಡಬೇಕಾದ ಮತ್ತು ಮಾಡದಿರುವುದು**

ಚುನಾವಣಾ ಆಯೋಗವು, ಚುನಾವಣೆಗಳು ಘೋಷಣೆಯಾದ ತರುವಾಯ ಮತ್ತು ಚುನಾವಣಾ ಪ್ರಕ್ರಿಯೆಗಳು ಮುಗಿಯವವರೆಗೆ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ಅನುಸರಿಸಬೇಕಾದ, ಮಾಡಬೇಕಾದ ಮತ್ತು ಮಾಡದಿರುವುಗಳ ಪಟ್ಟಿಯನ್ನು ರೂಪಿಸಿದೆ, ರಾಜ್ಯದ ಅಧಿಕೃತ ಭಾಷೆಯಲ್ಲಿ ಇದಕ್ಕೆ ವ್ಯಾಪಕ ಪ್ರಚಾರ ಕೊಡಬೇಕೆಂದು ಮತ್ತು ಇದನ್ನು ಎಲ್ಲಾ ಅಭ್ಯರ್ಥಿಗಳ ಮತ್ತು ರಾಜಕೀಯ

ಪಕ್ಷಗಳ ಗಮನಕ್ಕೆ ತರಬೇಕೆಂದು ಆಯೋಗವು ನಿರ್ದೇಶನ ನೀಡಿದೆ. ಮಾಡಬೇಕಾದ ಮತ್ತು ಮಾಡದಿರುವ ಪಟ್ಟಿಗಳು ಕೇವಲ ದೃಷ್ಟಾಂತವಾಗಿವೆ ಮತ್ತು ಸಂಪೂರ್ಣವಾಗಿರುವುದಿಲ್ಲವೆಂದು ಅಭ್ಯರ್ಥಿಗಳಿಗೆ ಮತ್ತು ರಾಜಕಿಯ ಪಕ್ಷಗಳಿಗೆ ಗಮನಕ್ಕೆ ತರತಕ್ಕದ್ದು ಮತ್ತು ಮೇಲಿನ ವಿಷಯಗಳ ಸಂಬಂಧಿಸಿದಂತೆ ನೀಡಲಾದ ನಿರ್ದೇಶನಗಳು/ ಸೂಚನೆಗಳು ಬದಲಿಸುವ ಉದ್ದೇಶದಿಂದ ಅಥವಾ ಮಾರ್ಪಾಡು ಮಾಡುವ ಉದ್ದೇಶದಿಂದ ಮಾಡಿರುವುದಿಲ್ಲ, ಅವುಗಳನ್ನು ಕಟ್ಟುನಿಟ್ಟಾನಿ ಪಾಲಿಸಬೇಕು ಮತ್ತು ಅನುಸರಿಸಬೇಕು.

**ಮಾಡಬೇಕಾದುದು**

(1) ಚುನಾವಣೆಗಳು ಘೋಷಣೆಯಾಗುವ ಮುಂಚೆ ಆ ಕ್ಷೇತ್ರದಲ್ಲಿ ಕೈಗೊಳ್ಳಲಾಗುತ್ತಿರುವ ಯೋಜನೆಗಳನ್ನು ಮುಂದುವರಿಸಬಹುದು.

(2) ಪ್ರವಾಹಗಳು, ಬರಗಾಲ, ರೋಗರುಜನಿಗಳು ಮತ್ತು ಇತರ ನೈಸರ್ಗಿಕ ವಿಕೋಪಗಳಿಂದ ಬಾದಿತರಾಗಿರುವ ವ್ಯಕ್ತಿಗಳಿಗೆ ಪರಿಹಾರ ಮತ್ತು ಪುನರ್ ವಸತಿ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಮುಂದುವರಿಸಬಹುದು.

(3) ಭಾಗಶಃ ಅಥವಾ ಗಂಭೀರ ಕಾಯಿಲೆಗಳನ್ನು ಹೊಂದಿರುವ ವ್ಯಕ್ತಿಗಳಿಗೆ ನಗದು ಅಥವಾ ವೈದ್ಯಕೀಯ ಸೌಲಭ್ಯಗಳನ್ನು ಸೂಕ್ತ ಅನುಮೋದನೆಯೊಂದಿಗೆ ಮಂಜೂರು ಮಾಡಬಹುದು.

(4) ಸಾರ್ವಜನಿಕ ಸ್ಥಳಗಳಾದ ಮೈದಾನಗಳನ್ನು ಎಲ್ಲಾ ಪಕ್ಷಗಳಿಗೆ/ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕಾಗಿ ಯಾವುದೇ ತಾರತಮ್ಯವಿಲ್ಲದೆ ಒದಗಿಸಬೇಕು. ಎಲ್ಲ ರಾಜಕೀಯ ಪಕ್ಷಗಳು ಮತ್ತು ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಯಾವುದೇ ತಾರತಮ್ಯವಿಲ್ಲದೆ ಹೆಲಿಪ್ಯಾಡ್ ಸೌಲಭ್ಯವನ್ನು ಒದಗಿಸಬೇಕು.

(5) ಇತರ ರಾಜಕೀಯ ಪಕ್ಷಗಳನ್ನು ಮತ್ತು ಅಭ್ಯರ್ಥಿಗಳನ್ನು ಕುರಿತ ಟೀಕೆಯು, ಅವರ ಕಾರ್ಯನೀತಿಗಳು, ಕಾರ್ಯಕ್ರಮಗಳು, ಹಿಂದಿನ ದಾಖಲೆ ಮತ್ತು ಕಾರ್ಯಗಳಿಗೆ ಮಾತ್ರ ಸಂಬಂಧಿಸಿರಬೇಕು.

(6) ಶಾಂತಿಯುತವಾಗಿ ಮತ್ತು ಯಾವುದೇ ತೊಂದರೆಯಿಲ್ಲದಂತೆ ಬದುಕುವ ಪ್ರತಿಯೊಬ್ಬರ ಹಕ್ಕನ್ನು ರಕ್ಷಿಸುವುದು ಅವಶ್ಯಕ.

(7) ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಪ್ರಸ್ತಾವಿತ ಸಭೆಗಳ ಸ್ಥಳ ಮತ್ತು ಸಮಯವನ್ನು ಸಾಕಷ್ಟು ಮುಂಚಿತವಾಗಿ ತಿಳಿಸಬೇಕು ಮತ್ತು ಎಲ್ಲ ಅಗತ್ಯ ಅನುಮತಿಗಳನ್ನು ಪಡೆದುಕೊಂಡಿರಬೇಕು.

(8) ಪ್ರಸ್ತಾವಿತ ಸಭೆಯ ಸ್ಥಳದಲ್ಲಿ ಯಾವುದೇ ನಿರ್ಬಂಧ ಅಥವಾ ನಿಷೇಧಾಜ್ಞೆಯಿದ್ದರೆ ಅದನ್ನು ಗೌರವಿಸತಕ್ಕದ್ದು. ಅವಶ್ಯವಿದ್ದರೆ, ಸಾಕಷ್ಟು ಮುಂಚೆ ವಿನಾಯಿತಿಗಾಗಿ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದುಕೊಳ್ಳಬೇಕು.

(9) ಸಭೆಗಳ ಉದ್ದೇಶಕ್ಕಾಗಿ ಧ್ವನಿವರ್ಧಕಗಳನ್ನು ಅಥವಾ ಯಾವುದೇ ಇತರ ಅಂಥ ಸೌಲಭ್ಯಗಳನ್ನು ಬಳಸಿಕೊಳ್ಳುವುದಕ್ಕಾಗಿ ಅನುಮತಿ ಪಡೆಯಬೇಕು.

(10) ಸಭೆಗಳಿಗೆ ತೊಂದರೆಯುಂಟು ಮಾಡುವ ಅಥವಾ ಸಮಸ್ಯೆಗಳನ್ನು ಸೃಷ್ಟಿಸುವಂತ ವ್ಯಕ್ತಿಗಳನ್ನು ನಿರ್ಬಂಧಿಸುವ ಸಲುವಾಗಿ ಪೊಲೀಸ್ ಸಹಾಯವನ್ನು ಪಡೆದುಕೊಳ್ಳಬೇಕು.

(11) ಯಾವುದೇ ಮೆರವಣಿಗೆಯನ್ನು ಕೈಗೊಳ್ಳುವ ಸಮಯ ಮತ್ತು ಸ್ಥಳವನ್ನು, ಹಾದುಹೋಗುವ ಮಾರ್ಗ ಮತ್ತು ಸಮಯ ಹಾಗೂ ಮೆರವಣಿಗೆ ಮುಕ್ತಾಯಗೊಳಿಸುವ ಸ್ಥಳವನ್ನು ಮುಂಚಿತವಾಗಿ ನಿರ್ಧರಿಸತಕ್ಕದ್ದು ಹಾಗೂ ಪೋಲಿಸ್ ಅಧಿಕಾರಿಗಳಿಂದ ಮುಂಚಿತವಾಗಿ ಅನುಮತಿಯನ್ನು ಪಡೆಯಬೇಕು.

(12) ಮೆರವಣಿಗೆ ಹಾದುಹೋಗುವ ಸ್ಥಳದಲ್ಲಿ ಯಾವುದೇ ನಿರ್ಬಂಧಕಾಜ್ಞೆಯಿದ್ದರೆ ಅದನ್ನು ಪಾಲಿಸತಕ್ಕದ್ದು ಹಾಗೂ ಎಲ್ಲ ಸಂಚಾರ ನಿಯಮಗಳನ್ನು ಹಾಗೂ ನಿರ್ಬಂಧಗಳನ್ನು ಪಾಲಿಸಬೇಕು.

(13) ಮೆರವಣಿಗೆಯ ಮಾರ್ಗದಲ್ಲಿ ಸಂಚಾರಕ್ಕೆ ಯಾವುದೇ ತೊಂದರೆಯಾಗಬಾರದು.

(14) ಶಾಂತಿಯುತ ಮತ್ತು ಸುವ್ಯವಸ್ಥಿತ ಮತದಾನ ನಡೆಸಲು ಎಲ್ಲ ಸಮಯದಲ್ಲಿ ಎಲ್ಲ ಚುನಾವಣಾ ಅಧಿಕಾರಿಗಳಿಗೆ ಸಹಕಾರ ನೀಡಬೇಕು.

(15) ಎಲ್ಲ ಕಾರ್ಯಕರ್ತರು ಬ್ಯಾಡ್ಜ್‌ಗಳನ್ನು ಹಾಗೂ ಗುರುತಿನ ಚೀಟಿಗಳನ್ನು ಪ್ರದರ್ಶಿಸಬೇಕು.

(16) ಮತದಾರರಿಗೆ ನೀಡಲಾದ ಅನಧಿಕೃತ ಗುರುತಿನ ಚೀಟಿಗಳು ಬಿಳಿ ಕಾಗದದಲ್ಲಿ ಇರತಕ್ಕದ್ದು ಮತ್ತು ಯಾವುದೇ ಚಿಹ್ನೆ, ಅಭ್ಯರ್ಥಿಯ ಹೆಸರು ಅಥವಾ ಪಕ್ಷದ ಹೆಸರನ್ನು ಹೊಂದಿರಬಾರದು.

(17) ಚುನಾವಣಾ ಪ್ರಚಾರದ ಅವಧಿಯಲ್ಲಿ ಮತ್ತು ಚುನಾವಣೆಯ ದಿನಾಂಕದಂದು ವಾಹನಗಳ ಸಂಚಾರದ ಮೇಲಿನ ನಿರ್ಬಂಧವನ್ನು ಸಂಪೂರ್ಣವಾಗಿ ಪಾಲಿಸಬೇಕು.

(18) ಚುನಾವಣಾ ಆಯೋಗದಿಂದ ಅಧಿಕೃತ ಪತ್ರವನ್ನು ಹೊಂದಿರುವ ವ್ಯಕ್ತಿಗಳು ಮಾತ್ರ ಯಾವುದೇ ಮತಗಟ್ಟೆಯನ್ನು ಪ್ರವೇಶಿಸಬಹುದು (ಮತದಾರರು, ಅಭ್ಯರ್ಥಿಗಳು ಮತ್ತು ಅವರ ಚುನಾವಣಾ/ ಮತದಾನದ ಏಜೆಂಟರನ್ನು ಹೊರತುಪಡಿಸಿ). ಆದರೆ ಉನ್ನತ ಸ್ಥಾನದಲ್ಲಿರುವವರಿಗೆ (ಉದಾ: ಮುಖ್ಯಮಂತ್ರಿ, ಸಚಿವರು, ಲೋಕಸಭಾ ಸದಸ್ಯರು ಅಥವಾ ವಿಧಾನಸಭಾ ಸದಸ್ಯರು, ಮುಂತಾದವರು) ಇದರಿಂದ ವಿನಾಯಿತಿ ನೀಡಲಾಗಿದೆ.

(19) ಚುನಾವಣೆ ನಡೆಸುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ದೂರು ಅಥವಾ ಸಮಸ್ಯೆಯಿದ್ದರೆ ಭಾರತ ಚುನಾವಣಾ ಆಯೋಗವು ನೇಮಕ ಮಾಡಿದ ಆಯುಕ್ತರು/ ಚುನಾವಣಾ ಅಧಿಕಾರಿ/ ವಲಯ/ ಸೆಕ್ಟರ್ ಮ್ಯಾಜಿಸ್ಟ್ರೇಟ್/ ವೀಕ್ಷಕರ ಗಮನಕ್ಕೆ ತರಬೇಕು.

(20) ಚುನಾವಣಾ ಆಯೋಗ, ಚುನಾವಣಾ ಅಧಿಕಾರಿ ಮತ್ತು ಜಿಲ್ಲಾ ಚುನಾವಣಾ ಅಧಿಕಾರಿಯ ನಿರ್ದೇಶನಗಳು/ ಆದೇಶಗಳನ್ನು/ ಸೂಚನೆಗಳನ್ನು ಚುನಾವಣೆಯ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಸಬೇಕು.

(21) ನೀವು ಮತದಾರ ಅಥವಾ ಅಭ್ಯರ್ಥಿ ಅಥವಾ ಚುನಾವಣಾ ಕ್ಷೇತ್ರದ ಅಭ್ಯರ್ಥಿಯ ಏಜೆಂಟನಾಗಿದ್ದರೆ ಚುನಾವಣೆಯ ಅವಧಿ ಮುಗಿದ ತರುವಾಯ ಚುನಾವಣಾ ಕ್ಷೇತ್ರವನ್ನು ಬಿಡತಕ್ಕದ್ದು.

**ಮಾಡಬಾರದು**

(1) ಅಧಿಕಾರದಲ್ಲಿರುವ ಪಕ್ಷ ಅಥವಾ ಸರ್ಕಾರದ ಸಾಧನೆಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ಹಣದಲ್ಲಿ ಯಾವುದೇ ಅಥವಾ ಎಲ್ಲ ಜಾಹೀರಾತುಗಳನ್ನು ನೀಡುವುದನ್ನು ನಿಷೇಧಿಸಿದೆ.

(2) ಯಾರೇ ಸಚಿವರು, ಅವನು ಅಥವಾ ಅವಳು ಅಭ್ಯರ್ಥಿ ಅಥವಾ ಮತದಾನದ ಮತದಾರನಾಗಿರದ ಹೊರತು ಯಾವುದೇ ಮತದಾನ ಕೇಂದ್ರ ಅಥವಾ ಮತ ಎಣಿಕೆ ಸ್ಥಳಕ್ಕೆ ಪ್ರವೇಶಿಸತಕ್ಕದ್ದಲ್ಲ.

(3) ಚುನಾವಣಾ ಪ್ರಚಾರ/ ಚುನಾವಣಾ ಕಾರ್ಯದೊಂದಿಗೆ ಕಚೇರಿ ಕೆಲಸವನ್ನು ಮಿಶ್ರಗೊಳಿಸತಕ್ಕದ್ದಲ್ಲ.

(4) ಮತದಾರನಿಗೆ ಯಾವುದೇ ಪ್ರಚೋದನೆ, ಹಣಕಾಸು ಅಥವಾ ಅನ್ಯಥಾ ಆಮಿಷ ಒಡ್ಡತಕ್ಕದ್ದಲ್ಲ.

(5) ಮತದಾರರ ಜಾತಿ/ ಸಮುದಾಯದ ಭಾವನೆಗಳ ಮೂಲಕ ಮನವಿ ಮಾಡತಕ್ಕದ್ದಲ್ಲ.

(6) ಬೇರೆಬೇರೆ ಜಾತಿಗಳು, ಸಮುದಾಯಗಳು ಅಥವಾ ಧರ್ಮಗಳು ಅಥವಾ ಭಾಷಿಕ ಗುಂಪುಗಳ ನಡುವೆ ದ್ವೇಷ ಭಾವನೆ ಅಥವಾ ಪರಸ್ಪರ ಅಸೂಯೆ ಅಥವಾ ಉದ್ವೇಗ ಉಂಟು ಮಾಡುವಂಥ ಯಾವುದೇ ಚಟುವಟಿಕೆ ನಡೆಸತಕ್ಕದ್ದಲ್ಲ.

(7) ಇತರ ರಾಜಕೀಯ ಪಕ್ಷಗಳ ಮುಖಂಡರುಗಳ ಅಥವಾ ಕಾರ್ಯಕರ್ತರ ಸಾರ್ವಜನಿಕ ಚಟುವಟಿಕೆಗಳಿಗೆ ಸಂಬಂಧಿಸಿರದ ಯಾವುದೇ ಖಾಸಗಿ ಜೀವನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಟೀಕೆ ಮಾಡುವುದಕ್ಕೆ ಅವಕಾಶ ಕೊಡತಕ್ಕದ್ದಲ್ಲ.

(8) ಇತರ ಪಕ್ಷಗಳು ಅಥವಾ ಅವರ ಕಾರ್ಯಕರ್ತರು ಅನವಶ್ಯಕ ಆರೋಪಗಳನ್ನು ಅಥವಾ ಟೀಕೆಗಳನ್ನು ಮಾಡತಕ್ಕದ್ದಲ್ಲ.

(9) ದೇವಸ್ಥಾನಗಳು, ಮಸೀದಿಗಳು, ಚರ್ಚಗಳು, ಗುರುದ್ವಾರಗಳು ಅಥವಾ ಯಾವುದೇ ಪೂಜಾ ಸ್ಥಳವನ್ನು, ಚುನಾವಣಾ ಪ್ರಚಾರಕ್ಕಾಗಿ, ಭಾಷಣ, ಪೋಸ್ಟರ್‌ಗಳನ್ನು ಅಂಟಿಸುವಿಕೆ, ಸಂಗೀತ ಮುಂತಾದ ಚುನಾವಣೆಗೆ ಸಂಬಂಧಿಸಿದ ಕಾರ್ಯಗಳಿಗಾಗಿ ಬಳಸತಕ್ಕದ್ದಲ್ಲ.

(10) ಲಂಚ, ಅನುಚಿತ ಪ್ರಭಾವ, ಮತದಾರರಲ್ಲಿ ಮಧ್ಯಸ್ಥಿಕೆ ವಹಿಸುವಿಕೆ, ವ್ಯಕ್ತಿಗತ ಟೀಕೆ, ಮತಗಟ್ಟೆಯ ನೂರು ಮೀಟರ್ ಹಂತರದೊಳಗೆ ಚುನಾವಣಾ ಪ್ರಚಾರ, ಮುಂತಾದ ಭ್ರಷ್ಟಚಾರಗಳು ಅಥವಾ ಮತದಾನದ ಅಪರಾಧಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು, ಮತದಾನ ಮುಕ್ತಯವಾಗವುದಕ್ಕೆ ನಿಗದಿಪಡಿಸಿದ ಸಮಯವು ಮುಗಿಯುವ 48 ಗಂಟೆ ಅವಧಿಯೊಳಗೆ ಸಾರ್ವಜನಿಕ ಸಭೆಗಳನ್ನು ನಡೆಸುವುದು ಮತ್ತು ಮತದಾರರನ್ನು ಕರೆತರುವುದು ಮತ್ತು ಮತದಾನ ಕೇಂದ್ರದ ಕೊರದ್ಯೊಯುವುದನ್ನು ನಿಷೇಧಿಸಲಾಗಿದೆ.

(11) ತಮ್ಮ ಅಭಿಪ್ರಾಯ ಅಥವಾ ಕಾರ್ಯಚಟುವಟಿಕೆಗಳ ವಿರುದ್ಧ ಪ್ರತಿಭಟನೆಯ ಮೂಲಕ ವ್ಯಕ್ತಿಗಳ ಮನೆಯ ಮುಂದೆ ಧರಣಿ ನಡೆಸುವುದು ಅಥವಾ ಕಾವಲಿಡುವುದಕ್ಕೆ ಆಶ್ರಯ ನೀಡತಕ್ಕದ್ದಲ್ಲ.

(12) ಸ್ಥಳೀಯ ಕಾನೂನಿಗೆ ಒಳಪಟ್ಟು ಯಾವುದೇ ವ್ಯಕ್ತಿಯ ಜಮೀನು, ಕಟ್ಟಡ, ಕಾಂಪೌಂಡು ಗೋಡೆ, ವಾಹನಗಳು, ಮುಂತಾದವುಗಳನ್ನು ಚುನಾವಣಾ ಧ್ವಜಗಳನ್ನು ನಿಲ್ಲಿಸುವುದಕ್ಕಾಗಿ, ಬ್ಯಾನರ್‌ಗಳನ್ನು ಕಟ್ಟುವುದಕ್ಕಾಗಿ, ಸೂಚನಾ ಪತ್ರಗಳನ್ನು ಅಂಟಿಸುವುದಕ್ಕಾಗಿ ಅಥವಾ ಚುನಾವಣಾ ಘೋಷಣೆಗಳನ್ನು ಬರೆಯುವುದು ಮುಂತಾದ ಚಟುವಟಿಕೆಗಳಿಗೆ ಮಾಲೀಕನ ನಿರ್ದಿಷ್ಟ ಅನುಮತಿಯಿಲ್ಲದೆ (ಜಿಲ್ಲಾ ಚುನಾವಣಾ ಅಧಿಕಾರಿಯ ಗಮನಕ್ಕೆ ತರದೆ ಮತ್ತು ಅವರಿಗೆ ತಿಳಿಸಿದೆ) ಉಪಯೋಗಿಸುವಂತಿಲ್ಲ.

(13) ಇತರ ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಸಂಘಟಿಸುವ ಸಾರ್ವಜನಿಕ ಸಭೆಗಳು ಅಥವಾ ಮೆರವಣಿಗೆಗಳಲ್ಲಿ ಯಾವುದೇ ಅಡೆತಡೆಯನ್ನು ಉಂಟು ಮಾಡತಕ್ಕದ್ದಲ್ಲ.

(14) ಬೇರೆ ಪಕ್ಷವು ಸಭೆಗಳನ್ನು ನಡೆಸುವ ಸ್ಥಳದಲ್ಲಿ ಮೆರವಣಿಗೆಗಳನ್ನು ನಡೆಸತಕ್ಕದ್ದಲ್ಲ.

(15) ಕ್ಷಿಪಣಿಗಳನ್ನು ಅಥವಾ ಸಶಾಸ್ತ್ರಗಳನ್ನು ದುರುಪಯೋಗ ಪಡಿಸಿಕೊಳ್ಳುವ ಕಾರಣದಿಂದ ಅಂಥ ಯಾವುದೇ ವಸ್ತುಗಳನ್ನು ಮೆರವಣಿಗೆ ನಡೆಸುವವರು ತೆಗೆದುಕೊಂಡು ಹೋಗತಕ್ಕದ್ದಲ್ಲ.

(16) ಇತರ ಪಕ್ಷಗಳು ಮತ್ತು ಅಭ್ಯರ್ಥಿಗಳು ನೀಡಿರುವ ಪೋಸ್ಟರ್‌ಗಳನ್ನು ತೆಗೆದು ಹಾಕುವುದು ಅಥವಾ ವಿರೂಪಗೊಳಿಸುವುದನ್ನು ಮಾಡತಕ್ಕದ್ದಲ್ಲ.

(17) ಗುರುತಿನ ಚೀಟಿಗಳನ್ನು ಹಂಚುವುದಕ್ಕಾಗಿ ಚುನಾವಣೆಯ ದಿನದಂದು ಉಪಯೋಗಿಸುವ ಸ್ಥಳದಲ್ಲಿ ಅಥವಾ ಮತದಾನದ ಕೇಂದ್ರದ ಹತ್ತಿರ ಪೋಸ್ಟರ್‌ಗಳು, ಧ್ವಜಗಳು, ಚಿಹ್ನೆಗಳು ಅಥವಾ ಯಾವುದೇ ಇತರ ಪ್ರಚಾರದ ಸಾಮಾಗ್ರಿಗಳನ್ನು ಪ್ರದರ್ಶಿಸತಕ್ಕದ್ದಲ್ಲ.

(18) ಬೆಳಿಗ್ಗೆ 6 ಗಂಟೆಗೆ ಮುಂಚೆ ಅಥವಾ 10 ಗಂಟೆಗೆ ಮುಂಚೆ ಸಂಬಂಧಪಟ್ಟ ಪ್ರಾಧಿಕಾರದ ಪೂರ್ವಾನುಮೋದನೆಯಿಲ್ಲದೆ ವಾಹನಗಳ ಮೇಲೆ ಧ್ವನಿವರ್ಧಕಗಳನ್ನು ಬಳಸತಕ್ಕದ್ದಲ್ಲ.

(19) ಸಂಬಂಧಪಟ್ಟ ಪ್ರಾಧಿಕಾರಗಳ ಲಿಖಿತ ಅನುಮತಿಯಿಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಧ್ವನಿವರ್ಧಕಗಳನ್ನು ಬಳಸತಕ್ಕದ್ದಲ್ಲ ಮತ್ತು ಮೆರವಣಿಗೆಗಳನ್ನು ನಡೆಸತಕ್ಕದ್ದಲ್ಲ. ಅಂಥ ಸಭೆಗಳನ್ನು/ ಮೆರವಣಿಗೆಗಳನ್ನು ರಾತ್ರಿ 10 ಗಂಟೆ ಮೀರಿ ನಡೆಸಲು ಸಾಮಾನ್ಯವಾಗಿ ಅನುಮತಿಸತಕ್ಕದ್ದಲ್ಲ ಮತ್ತು ಸ್ಥಳೀಯ ಕಾನೂನುಗಳು, ಕ್ಷೇತ್ರದ ಭದ್ರತೆ ಮತ್ತು ಹವಾಮಾನ, ಹಬ್ಬ, ಉತ್ಸವಗಳು, ಪರೀಕ್ಷೆಯ ಸಮಯ ಮುಂತಾದುವುಗಳಿಗೆ ಒಳಗೊಳ್ಳತಕ್ಕದ್ದು.

(20) ಚುನಾವಣೆಗಳ ಅವಧಿಯಲ್ಲಿ ಮದ್ಯಪಾನವನ್ನು ವಿತರಿಸತಕ್ಕದಲ್ಲ.

(21) ಮತದಾನದ ದಿನಾಂಕದಂದು ಯಾವುದೇ ವ್ಯಕ್ತಿ ಭದ್ರತೆ ಬೆದರಿಕೆಯನ್ನು ಎದುರಿಸುತ್ತಿರುವ ಕಾರಣದಿಂದ ಮತ್ತು ಅಧಿಕೃತ ಭದ್ರತೆಯನ್ನು ನೀಡಬೇಕಾಗಿರುವ ಕಾರಣದಿಂದ ತನ್ನ ಭದ್ರತಾ ಸಿಬ್ಬಂದಿಯೊಂದಿಗೆ ಮತದಾನ ಆವರಣದ (100 ಮೀಟರೊಳಗೆ) ಪ್ರದೇಶಕ್ಕೆ ಪ್ರವೇಶಿಸತಕ್ಕದಲ್ಲ. ಅಲ್ಲದೆ, ಮತದಾನದ ದಿನಾಂದಂದು ಅಂಥ ಯಾವುದೇ ವ್ಯಕ್ತಿಯು ತನ್ನ ಭದ್ರತಾ ಸಿಬ್ಬಂದಿಯೊಂದಿಗೆ ಚುನಾವಣಾ ಕ್ಷೇತ್ರದಲ್ಲಿ ಸಂಚರಿಸತಕ್ಕದ್ದಲ್ಲ. ಅಧಿಕೃತ ಭದ್ರತೆಯನ್ನು ಒದಗಿಸಿರುವ ವ್ಯಕ್ತಿಯು ಮತದಾರನಾಗಿದ್ದರೆ, ಮತದಾನಕ್ಕಾಗಿ ಮಾತ್ರ ಭದ್ರತಾ ಸಿಬ್ಬಂದಿ ಒಳಗೊಂಡ ಅವನ/ ಅವಳ ಚಲನೆಯನ್ನು ನಿರ್ಬಂಧಿಸತಕ್ಕದ್ದಲ್ಲ.

(22) ಯಾರೇ ವ್ಯಕ್ತಿಯು ಭದ್ರತಾ ಬೆದರಿಕೆ ಎದುರಿಸುತ್ತಿದ್ದರೆ ಮತ್ತು ಅವನಿಗೆ ಅಧಿಕೃತ ಭದ್ರತೆ ಒದಗಿಸಲಾಗಿದ್ದರೆ ಅಥವಾ ಅವನು ಖಾಸಗಿ ಭದ್ರತಾ ಸಿಬ್ಬಂದಿಯನ್ನು ಹೊಂದಿದ್ದರೆ, ಅವನನ್ನು ಚುನಾವಣಾ ಏಜೆಂಟನೆಂದು ಅಥವಾ ಮತಗಟ್ಟೆಯ ಏಜೆಂಟನೆಂದು ಅಥವಾ ಮತ ಎಣಿಕೆ ಏಜೆಂಟನೆಂದು ನೇಮಕ ಮಾಡತಕ್ಕದಲ್ಲ.

**ಸೂಚನೆ**:ಮೇಲೆ ಹೇಳಲಾದ ಮಾಡಬೇಕಾದ ಮತ್ತು ಮಾಡದಿರುವ ಪಟ್ಟಿಯು ಕೇವಲ ದೃಷ್ಟಾಂತವೇ ಹೊರತು ಪರಿಪೂರ್ಣವಲ್ಲ ಮತ್ತು ಅದು ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಇತರ ವಿವರಣಾತ್ಮಕ ಆದೇಶಗಳನ್ನು/ ನಿರ್ದೇಶನಗಳನ್ನು/ ಸೂಚನೆಗಳನ್ನು ಬದಲಿಸುವ ಉದ್ದೇಶ ಹೊಂದಿರುವುದಿಲ್ಲ. ಅದನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಮತ್ತು ಪಾಲಿಸಬೇಕು.

## ಪರಿಶಿಷ್ಟ 13
## (ಅಧ್ಯಾಯ 5, ಪ್ಯಾರಾ 5.2.1)

### ನಮೂನೆ 5– ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಸೂಚನೆ
**(9(1)ನೇ ನಿಯಮವನ್ನು ನೋಡಿ)**
**ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಸೂಚನೆ**

---------------------------------- *ಗೆ ಚುನಾವಣೆ

ರಿಟರ್ನಿಂಗ್ ಅಧಿಕಾರಿ,

ಮೇಲಿನ ಚುನಾವಣೆಯಲ್ಲಿ 1[ಸಿಂಧುತ್ವಗೊಂಡ ನಾಮನಿರ್ದೇಶಿತ ಅಭ್ಯರ್ಥಿ] --------- ಹೆಸರಿನ ನಾನು ನನ್ನ ಉಮೇದುವಾರಿಕೆಯನ್ನು ವಾಪಸ್ ಪಡೆಯುತ್ತಿದ್ದೇನೆಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇನೆ.

ಸ್ಥಳ ------------
ದಿನಾಂಕ ----------

ಸಿಂಧುತ್ವಗೊಂಡ ನಾಮನಿರ್ದೇಶಿತ ಅಭ್ಯರ್ಥಿಯ ಸಹಿ

ಈ ಸೂಚನೆಯನ್ನು ------- + ಆಗಿರುವ ------ ರವರಿಂದ (ಹೆಸರು) ------ ರಂದು (ದಿನಾಂಕ) ------ ಸಮಯದಲ್ಲಿ (ಗಂಟೆ) ನನ್ನ ಕಚೇರಿಯಲ್ಲಿ ನನಗೆ ರವಾನಿಸಲಾಯಿತು.

ದಿನಾಂಕ --------------- ರಿಟರ್ನಿಂಗ್ ಅಧಿಕಾರಿ

---

**ನಾಮಪತ್ರವನ್ನು ಹಿಂತೆಗೆದುಕೊಳ್ಳುವ ನೋಟೀಸಿಗೆ ಸ್ವೀಕೃತಿ**

(ಸೂಚನೆಯನ್ನು ಒಪ್ಪಿಸುವ ವ್ಯಕ್ತಿಗೆ ಒಪ್ಪಿಸಬೇಕಾದುದು)

------- *ಗೆ ನಡೆಯುವ ಚುನಾವಣೆಯಲ್ಲಿ --------- ಅಭ್ಯರ್ಥಿಯು 1[ಸಿಂಧುತ್ವಗೊಂಡ ನಾಮನಿರ್ದೇಶಿತ ಅಭ್ಯರ್ಥಿ] ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಸೂಚನೆಯು ------ ರಂದು (ದಿನಾಂಕ) ------ ಸಮಯದಲ್ಲಿ (ಗಂಟೆ) ನನ್ನ ಕಚೇರಿಯಲ್ಲಿ ------ ರವರ ಮೂಲಕ + ನನಗೆ ರವಾನಿತವಾಗಿದೆ.

ರಿಟರ್ನಿಂಗ್ ಅಧಿಕಾರಿ.

* ಇಲ್ಲಿ ಸೂಕ್ತವೆನಿಸಬಹುದಾದ ಮುಂದಿನ ಪರ್ಯಾಯಗಳಲ್ಲಿ ಒಂದನ್ನು ಸೇರಿಸಲಾಗಿದೆ.

1) ------- ಚುನಾವಣಾ ಕ್ಷೇತ್ರದಿಂದ ಲೋಕಸಭೆ
2) ------- ಚುನಾವಣಾ ಕ್ಷೇತ್ರದಿಂದ ವಿಧಾನಸಭೆ
3) ------- (ರಾಜ್ಯ)ದ ವಿಧಾನಸಭೆಯ ಚುನಾಯಿತ ಸದಸ್ಯರ ಮೂಲಕ ರಾಜ್ಯಸಭೆಗಳು
4) ---------- (ಕೇಂದ್ರಾಡಳಿತ ಪ್ರದೇಶ)ದ ಮತದಾರರ ಗಣದ ಚುನಾಯಿತ ಸದಸ್ಯರ ಮೂಲಕ ರಾಜ್ಯಸಭೆಗಳು
5) ವಿಧಾನಸಭೆಯ ಸದಸ್ಯರಿಂದ ವಿಧಾನ ಪರಿಷತ್ತು
6) ------- ಚುನಾವಣಾ ಕ್ಷೇತ್ರದಿಂದ ವಿಧಾನ ಪರಿಷತ್ತು

\+ ಸೂಕ್ತವೆನಿಸಬಹುದಾದಂತೆ ಈ ಕೆಳಗಿನವುಗಳಲ್ಲಿ ಒಂದನ್ನು ಇಲ್ಲಿ ಸೇರಿಸುವುದು
(1) ಅಭ್ಯರ್ಥಿ
(2) ಅಭ್ಯರ್ಥಿಯು ಅದನ್ನು ಒಪ್ಪಿಸಲು ಲಿಖಿತದಲ್ಲಿ ಅಧಿಕೃತಗೊಳಿಸಿದ ಅಭ್ಯರ್ಥಿಯ ಪ್ರಸ್ತಾಪಕ
(3) ಅಭ್ಯರ್ಥಿಯು ಅದನ್ನು ಒಪ್ಪಿಸಲು ಲಿಖಿತದಲ್ಲಿ ಅಧಿಕೃತಗೊಳಿಸಿದ ಅಭ್ಯರ್ಥಿಯ ಏಜೆಂಟ್.

## ಪರಿಶಿಷ್ಟ 14
**(ಅಧ್ಯಾಯ 6, ಪ್ಯಾರಾ 6.1.1)**

## ನಮೂನೆ 8
**ಚುನಾವಣಾ ಏಜೆಂಟನ ನೇಮಕ**
**(ನಿಯಮ 12(1) ನ್ನು ನೋಡಿ)**

------------ ಚುನಾವಣೆಗೆ

ಇವರಿಗೆ,
ರಿಟರ್ನಿಂಗ್ ಅಧಿಕಾರಿ,

----------- ಹೆಸರಿನ ----------- ಚುನಾವಣಾ ಕ್ಷೇತ್ರದ ಅಭ್ಯರ್ಥಿಯಾದ ನಾನು, ಮೇಲಿನ ಚುನಾವಣೆಯಲ್ಲಿ ---------- ರವರನ್ನು ಈ ದಿನಾಂಕದಿಂದ ಮೇಲಿನ ಚುನಾವಣೆಯಲ್ಲಿ ---- ಕ್ಷೇತ್ರದ ನನ್ನ ಚುನಾವಣಾ ಏಜೆಂಟ್‌ನನ್ನಾಗಿ ನೇಮಕ ಮಾಡಿರುತ್ತೇನೆ.

ಸ್ಥಳ:
ದಿನಾಂಕ: ಅಭ್ಯರ್ಥಿಯ ಸಹಿ.

ಮೇಲಿನ ನೇಮಕವನ್ನು ನಾನು ಅಂಗೀಕರಿಸಿರುತ್ತೇನೆ.
ದಿನಾಂಕ: ಚುನಾವಣಾ ಏಜೆಂಟ್‌ರ ಸಹಿ.
ಸ್ಥಳ

ಅನುಮೋದಿಸಲಾಗಿದೆ

ರಿಟರ್ನಿಂಗ್ ಅಧಿಕಾರಿಯ ಸಹಿ ಮತ್ತು ಮೊಹರು

* ಈ ಮುಂದಿನವುಗಳಲ್ಲಿ ಸೂಕ್ತವೆನಿಸಬಹುದಾದ ಒಂದನ್ನು ಸೇರಿಸಿ

1) -------- ಚುನಾವಣಾ ಕ್ಷೇತ್ರದಿಂದ ಲೋಕಸಭೆಗೆ
2) -------- ಚುನಾವಣಾ ಕ್ಷೇತ್ರದಿಂದ ವಿಧಾನ ಸಭೆಗೆ
3) -------- (ರಾಜ್ಯ) ವಿಧಾನಸಭಾ ಕ್ಷೇತ್ರದ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ
4) --------- (ಕೇಂದ್ರಾಡಳಿತ ಪ್ರದೇಶ) ಮತದಾರರ ಗಣದ ಸದಸ್ಯರಿಂದ ರಾಜ್ಯಸಭೆಗೆ
5) ವಿಧಾನಸಭಾ ಕ್ಷೇತ್ರದ ಸದಸ್ಯರಿಂದ ವಿಧಾನ ಪರಿಷತ್‌ಗೆ
**6)** --------- ಚುನಾವಣಾ ಕ್ಷೇತ್ರದಂದ ವಿಧಾನ ಪರಿಷತ್‌ಗೆ

# ಪರಿಶಿಷ್ಟ 15

**(ಅಧ್ಯಾಯ 6, ಪ್ಯಾರಾ 6.1.4)**

**ನಮೂನೆ 9– ಚುನಾವಣಾ ಏಜೆಂಟನ ನೇಮಕವನ್ನು ರದ್ದುಗೊಳಿಸುವುದು**

ನಮೂನೆ 9

**ಚುನಾವಣಾ ಏಜೆಂಟನ ನೇಮಕವನ್ನು ರದ್ದುಗೊಳಿಸುವುದು**

(ನಿಯಮ 12(2) ನ್ನು ನೋಡಿ)

--------- ಚುನಾವಣೆಗೆ

ಇವರಿಗೆ,

ರಿಟರ್ನಿಂಗ್ ಅಧಿಕಾರಿ,

ಮೇಲಿನ ಚುನಾವಣೆಯಲ್ಲಿ--------ಹೆಸರಿನ ಅಭ್ಯರ್ಥಿಯಾದ ನಾನು, ಈ ಮೂಲಕ ನನ್ನ ಚುನಾವಣಾ ಏಜೆಂಟನಾದ --------- ರ ನೇಮಕವನ್ನು ರದ್ದುಪಡಿಸಿರುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ.

---

* ಈ ಮುಂದಿನವುಗಳಲ್ಲಿ ಸೂಕ್ತವೆನಿಸಬಹುದಾದ ಒಂದನ್ನು ಸೇರಿಸಿ:

1) ------------ ಚುನಾವಣಾ ಕ್ಷೇತ್ರದಿಂದ ಲೋಕಸಭೆಗೆ

2) ------------ ಚುನಾವಣಾ ಕ್ಷೇತ್ರದಂದ ವಿಧಾನ ಸಭೆಗೆ

3) ------------ (ರಾಜ್ಯ) ವಿಧಾನಸಭಾ ಕ್ಷೇತ್ರದ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ

4) ------------ (ಕೇಂದ್ರಾಡಳಿತ ಪ್ರದೇಶ) ಮತದಾರರ ಗಣದ ಸದಸ್ಯರಿಂದ ರಾಜ್ಯಸಭೆಗೆ

5) ವಿಧಾನಸಭಾ ಕ್ಷೇತ್ರದ ಸದಸ್ಯರಿಂದ ವಿಧಾನ ಪರಿಷತ್‌ಗೆ

**6)** ------------- ಚುನಾವಣಾ ಕ್ಷೇತ್ರದಂದ ವಿಧಾನ ಪರಿಷತ್‌ಗೆ

# ಪರಿಶಿಷ್ಟ 16

**(ಅಧ್ಯಾಯ 7, ಪ್ಯಾರಾ 7.2.1)**
**(ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಉದ್ಧೃತ ಭಾಗ)**

## ಭಾಗ–VII

**[ಭ್ರಷ್ಟಾಚಾರ ಮತ್ತು ಚುನಾವಣಾ ಅಪರಾಧಗಳು]**

**[ಅಧ್ಯಾಯ–I, ಭ್ರಷ್ಟಾಚಾರಗಳು]**

**123.** **ಭ್ರಷ್ಟಾಚಾರಗಳು:–** ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕುದು:–

[(1) "ಲಂಚಗುಳಿತನ" ಎಂದರೆ,–

ಎ. ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಯಾವನೇ ವ್ಯಕ್ತಿಗಾಗಲೀ–

(ಎ) ಚುನಾವಣೆಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅಥವಾ ನಿಲ್ಲದಿರಲು ಅಥವಾ ಅಭ್ಯರ್ಥಿಯಾಗಿ ಇರುವುದನ್ನು ಹಿಂದಕ್ಕೆ ತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಒಬ್ಬ ವ್ಯಕ್ತಿಯನ್ನು, ಅಥವಾ

(ಬಿ) ಚುನಾವಣೆಲ್ಲಿ ಮತದಾನ ಮಾಡಲು ಅಥವಾ ಮತದಾನ ಮಾಡದೇ ಇರಲು, ಅಥವಾ

(i) ಹಾಗೆ ನಿಂತಿರುವುದಕ್ಕಾಗಿ ಅಥವಾ ನಿಲ್ಲದಿರುವುದಕ್ಕಾಗಿ ಅಥವಾ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿರುವುದಕ್ಕಾಗಿ ಅಥವಾ ಹಿಂತೆಗೆದುಕೊಳ್ಳದಿರುವುದಕ್ಕಾಗಿ ಒಬ್ಬ ವ್ಯಕ್ತಿಗೆ; ಅಥವಾ

(ii) ಮತದಾನ ಮಾಡಿರುವುದಕ್ಕಾಗಿ ಅಥವಾ ಮಾಡದೇ ಇರುವುದಕ್ಕಾಗಿ, ಒಬ್ಬ ಮತದಾರನಿಗೆ ಬಹುಮಾನವೆಂದು, ಒಬ್ಬ ಮತದಾರನನನ್ನು, ಪರೋಕ್ಷವಾಗಿ ಅಥವಾ ಅಪರೋಕ್ಷವಾಗಿ ಪ್ರೇರಿಸುವ ಉದ್ದೇಶದಿಂದ ಕೊಡುವ ಯಾವುದೇ ಪರಿತೋಷದ ಯಾವುದೇ ದಾನ, ಅದನ್ನು ಕೊಡುವುದಾಗಿ ಹೇಳುವುದು ಅಥವಾ ಅದರ ಯಾವುದೇ ಆಶ್ವಾಸನೆ:

ಬಿ. ಪ್ರೇರಣೆಯ ರೂಪದಲ್ಲಾಗಲಿ, ಬಹುಮಾನದ ರೂಪದಲ್ಲಾಗಲಿ –

(ಎ) ಒಬ್ಬ ಅಭ್ಯರ್ಥಿಯಾಗಿ ನಿಲ್ಲಲು ಅಥವಾ ನಿಲ್ಲದೆ ಇರಲು ಅಥವಾ ಅಭ್ಯರ್ಥಿಯಾಗಿ ಇರುವುದನ್ನು ಹಿಂತೆಗೆದುಕೊಳ್ಳಲು ಅಥವಾ ಹಿಂತೆಗೆದು ಕೊಳ್ಳದಿರಲು ಒಬ್ಬ ವ್ಯಕ್ತಿಯು ; ಅಥವಾ

(ಬಿ) ಮತದಾನ ಮಾಡುವುದಕ್ಕಾಗಿ ಅಥವಾ ಮತದಾನ ಮಾಡದೆ ಇರುವುದಕ್ಕಾಗಿ, ಅಥವಾ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಯಾವನೇ ಮತದಾರನನ್ನು ಪ್ರೇರಿಸಲು ಅಥವಾ ಪ್ರೇರಿಸುವಂತೆ ಪ್ರಯತ್ನಿಸಲು, ಅಥವಾ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಯಾವನೇ ಅಭ್ಯರ್ಥಿಯನ್ನು ಪ್ರೇರಿಸಲು ಅಥವಾ ಪ್ರೇರಿಸುವಂತೆ ಪ್ರಯತ್ನಿಸಲು ತನಗೋಸ್ಕರ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಯಾವೊಬ್ಬ ವ್ಯಕ್ತಿಯು

– ಯಾವುದೇ ಪರಿತೋಷವನ್ನು ಸೀಕರಿಸುವುದು ಅಥವಾ ಸ್ವೀಕರಿಸಲು ಒಪ್ಪಿಕೊಳ್ಳುವುದು.

[**ವಿವರಣೆ**:– ಈ ಖಂಡದ ಉದ್ದೇಶಗಳಿಗಾಗಿ 'ಪರಿತೋಷ' ಎಂಬ ಪದವು, ಆರ್ಥಿಕ ಪರಿತೋಷಗಳು ಅಥವಾ ಹಣದ ರೂಪದಲ್ಲಿ ಅಂದಾಜು ಮಾಡಬಹುದಾದ ಪರಿತೋಷಗಳಿಗೆ ಪರಿಮಿತವಾಗಿರುವುದಿಲ್ಲ ಮತ್ತು ಅದು ಬಹುಮಾನಕ್ಕಾಗಿ ಮನರಂಜನೆಯ ಎಲ್ಲ ಬಗೆಗಳನ್ನು ಮತ್ತು ನಿಯೋಜನೆಯ ಎಲ್ಲ ಬಗೆಗಳನ್ನು ಒಳಗೊಳ್ಳುತ್ತದೆ. ಆದರೆ ಯಾವುದೇ ಚುನಾವಣೆಯಲ್ಲಿ ಅಥವಾ ಅದರ ಉದ್ದೇಶಕ್ಕಾಗಿ ವಾಸ್ತವವಾಗಿ ಮಾಡಿರುವ ಮತ್ತು 78ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಚುನಾವಣಾ ವೆಚ್ಚಗಳ ಲೆಕ್ಕದಲ್ಲಿ ಕ್ರಮಬದ್ಧವಾಗಿ ನಮೂದು ಮಾಡಿದ ಯಾವುವೇ ವೆಚ್ಚಗಳ ಸಂದಾಯವನ್ನು ಒಳಗೊಳ್ಳುವುದಿಲ್ಲ.

(2) ಅನುಚಿತ ಪ್ರಭಾವ, ಎಂದರೆ ಅಭ್ಯರ್ಥಿಯ ಅಥವಾ ಅವನ ಏಜೆಂಟನ, ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರೆ ವ್ಯಕ್ತಿಯ ಕಡೆಯಿಂದ ಯಾವುದೇ ಚುನಾವಣಾ ಹಕ್ಕಿನ ಅನಿರ್ಬಂಧಿತ ಚುನಾವಣೆಯಲ್ಲಿ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಹಸ್ತಕ್ಷೇಪ ಅಥವಾ ಹಸ್ತಕ್ಷೇಪಿಸಲು ಪ್ರಯತ್ನ:

ಪರಂತು,–

(ಎ) ಈ ಖಂಡದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅದರಲ್ಲಿ ಉಲ್ಲೇಖಿಸಲಾದ ಅಂಥ ಯಾವ ವ್ಯಕ್ತಿಯು –

(i) ಯಾವನೇ ಅಭ್ಯರ್ಥಿಗೆ ಅಥವಾ ಯಾವನೇ ಮತದಾರನಿಗೆ, ಅಥವಾ ಅಭ್ಯರ್ಥಿಯು ಅಥವಾ ಮತದಾರನು ಹಿತಾಸಕ್ತನಾಗಿರುವ ಯಾವನೇ ವ್ಯಕ್ತಿಗೆ ಸಾಮಾಜಿಕ ಬಹಿಷ್ಕಾರ ಮತ್ತು ಜಾತಿ ಬಹಿಷ್ಕಾರ ಅಥವಾ ಯಾವುದೇ ಜಾತಿ ಅಥವಾ ಸಮುದಾಯದಿಂದ ಹೊರದೂಡುವುದು – ಇವುಗಳನ್ನು ಒಳಗೊಂಡು ಯಾವುದೇ ಬಗೆಯ ಕ್ಷತಿ ಉಂಟು ಮಾಡುವ ಬೆದರಿಕೆ ಹಾಕುತ್ತಾನೋ; ಅಥವಾ

(ii) ಒಬ್ಬ ಅಭ್ಯರ್ಥಿಗೆ ಅಥವಾ ಮತದಾರನಿಗೆ ಅವನು ಅಥವಾ ಅವನು ಆಸಕ್ತನಾಗಿರುವ ಯಾವನೇ ವ್ಯಕ್ತಿಯು ದೈವಾಗ್ರಹಕ್ಕೆ ಅಥವಾ ದೈವಿಕ ಆಕ್ಷೇಪಣೆಗೆ ಗುರಿಯಾಗುವನೆಂದು ಅಥವಾ ಗುರಿಪಡಿಸುವಂತೆ ಮಾಡಲಾಗುವುದು ಎಂದು ನಂಬುವಂತೆ ಪ್ರೇರಿಸುತ್ತಾನೋ ಅಥವಾ ಪ್ರೇರಿಸಲು ಪ್ರಯತ್ನಿಸುತ್ತಾನೋ ಆ ವ್ಯಕ್ತಿಯು

– ಈ ಖಂಡದ ಅರ್ಥ ವ್ಯಾಪ್ತಿಯೊಳಗೆ ಅಂಥ ಅಭ್ಯರ್ಥಿಯ ಅಥವಾ ಮತದಾರನ ಚುನಾವಣಾ ಹಕ್ಕಿನ ಅನಿರ್ಬಂಧಿತ ಚುನಾವಣೆಯಲ್ಲಿ ಹಸ್ತಕ್ಷೇಪಿಸುತ್ತಾನೆಂದು ಭಾವಿಸತಕ್ಕುದು.

(ಬಿ) ಸಾರ್ವಜನಿಕ ಕಾರ್ಯ ನೀತಿಯ ಘೋಷಣೆ ಅಥವಾ ಸಾರ್ವಜನಿಕ ಕ್ರಮದ ಆಶ್ವಾಸನೆ ಅಥವಾ ಚುನಾವಣಾ ಹಕ್ಕಿನಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶ ಇಲ್ಲದೆ ಕಾನೂನು ಸಮ್ಮತ ಹಕ್ಕನ್ನು ಮಾತ್ರ ಚಲಾಯಿಸುವುದು ಈ ಖಂಡದ ಅರ್ಥ ವ್ಯಾಪ್ತಿಯೊಳಗೆ ಹಸ್ತಕ್ಷೇಪ ಮಾಡಿಲ್ಲವೆಂದು ಭಾವಿಸತಕ್ಕುದಲ್ಲ.

(3) ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಯಾವನೇ ವ್ಯಕ್ತಿಯ ಧರ್ಮ, ಮೂಲ ವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಆ ವ್ಯಕ್ತಿಗಾಗಿ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಮಾಡಿಕೊಳ್ಳುವ ಮನವಿ, ಅಥವಾ ಧಾರ್ಮಿಕ ಚಿಹ್ನೆಗಳ ಉಪಯೋಗ

ಅಥವಾ ಅವುಗಳತ್ತ ಮನಸೆಳೆಯುವಿಕೆ, ಅಥವಾ ರಾಷ್ಟ್ರೀಯ ಧ್ವಜ ಅಥವಾ ರಾಷ್ಟ್ರೀ ಯ ಲಾಂಛನ ಮುಂತಾದ ರಾಷ್ಟ್ರೀಯ ಚಿಹ್ನೆಗಳ ಬಳಕೆ ಅಥವಾ ಅವುಗಳತ್ತ ಮನಸೆಳೆಯುವುದು :

(ಪರಂತು, ಈ ಅಧಿನಿಯಮದ ಮೇರೆಗೆ ಒಬ್ಬ ಅಭ್ಯರ್ಥಿಗೆ ಹಂಚಿಕೆ ಮಾಡಲಾದ ಚಿಹ್ನೆಯನ್ನು ಈ ಖಂಡದ ಉದ್ದೇಶಗಳಿಗಾಗಿ ಧಾರ್ಮಿಕ ಚಿಹ್ನೆ ಅಥವಾ ರಾಷ್ಟ್ರೀಯ ಚಿಹ್ನೆ ಎಂದು ಭಾವಿಸತಕ್ಕುದಲ್ಲ.)

(3ಎ) ಒಬ್ಬ ಅಭ್ಯರ್ಥಿಯ ಚುನಾವಣಾ ಭವಿತ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಬ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಭೀರುವುದಕ್ಕಾಗಿ, ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರಗಳ ಮೇಲೆ ಆ ವ್ಯಕ್ತಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು, ಭಾರತದ ನಾಗರಿಕರ ಭಿನ್ನ ಭಿನ್ನ ವರ್ಗಗಳ ನಡುವೆ ಹಗೆತನದ ಅಥವಾ ದ್ವೇಷದ ಭಾವನೆಗಳನ್ನು ಬೆಳೆಸುವುದು ಅಥವಾ ಬೆಳೆಸಲು ಪ್ರಯತ್ನಿಸುವುದು.)

(3ಬಿ) ಒಬ್ಬ ಅಭ್ಯರ್ಥಿಯ ಚುನಾವಣಾ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಭೀರುವುದಕ್ಕಾಗಿ, ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಸತಿ ಆಚರಣೆ ಅಥವಾ ಸತಿ ಹೋಗುವಿಕೆಯನ್ನು ಅಥವಾ ಅದರ ವೈಭವೀಕರಣವನ್ನು ಪ್ರಸಾರಗೊಳಿಸುವುದು.

(ವಿವರಣೆ:– ಈ ಖಂಡದ ಉದ್ದೇಶಗಳಿಗಾಗಿ ಸತಿಗೆ ಸಂಬಂಧಿಸಿದಂತೆ "ಸತಿ" ಮತ್ತು "ವೈಭವೀಕರಣ" ಎಂಬವುಗಳು, ಸತಿ ಸಹಗಮನ (ಪ್ರತಿಬಂಧ) ಅಧಿನಿಯಮ, 1987 1988ರ ಅಧಿನಿಯಮ ಸಂಖ್ಯೆ 3)ರಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಿರುವ ಅರ್ಥಗಳನ್ನೇ ಹೊಂದಿರತಕ್ಕುದು.)

(4) ಯಾವನೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ನಡವಳಿಕೆಯ ಸಂಬಂಧದಲ್ಲಿ ಅಥವಾ ಯಾವನೇ ಅಭ್ಯರ್ಥಿಯ ಉಮೇದುವಾರಿಕೆ ಅಥವಾ ಹಿಂತೆಗೆದುಕೊಳ್ಳುವಿಕೆಯ ಸಂಬಂಧದಲ್ಲಿ ಸುಳ್ಳಾದ ಅಥವಾ ಅದು ಸುಳ್ಳು ಎಂದು ತಾನು ನಂಬುವ ಅಥವಾ ಅದು ನಿಜವೆಂದು ತಾನು ನಂಬದಿರುವ ಮತ್ತು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಮೇಲೆ ಪ್ರತಿಕೂಲ ಪ್ರಭಾವ ಬೀರಲು ಯುಕ್ತವಾಗಿ ಉದ್ದೇಶಿಸಿರುವ ಸಂಗತಿಯ ಯಾವುದೇ ನಿರೂಪಣೆನ್ನು ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಪ್ರಕಟಿಸುವುದು.

(5) ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು, 25ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಿದ ಯಾವುದೇ ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಸ್ಥಳಕ್ಕೆ (ಸ್ವತಃ ಅಭ್ಯರ್ಥಿ, ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟ್ ಇವರನ್ನು ಹೊರತು ಪಡಿಸಿ) ಯಾವನೇ ಮತದಾರನನ್ನು ಉಚಿತವಾಗಿ ಕರೆದೊಯ್ಯಲು ಅಥವಾ ಅಲ್ಲಿಂದ ಕರೆತರಲು ಯಾವುದೇ ವಾಹನ ಅಥವಾ ದೋಣಿಯನ್ನು ಹಣ ಸಂದಾಯದ ಮೇಲೆ ಅಥವಾ ಅನ್ಯಥಾ ಬಾಡಿಗೆಗೆ ತೆಗೆದುಕೊಳ್ಳುವುದು ಅಥವಾ ಪಡೆದುಕೊಳ್ಳುವುದು ಅಥವಾ ಅಂಥ ವಾಹನ ಅಥವಾ ದೋಣಿಯನ್ನು ಬಳಸುವುದು:

ಪರಂತು, ಯಾವುದೇ ಅಂಥ ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಕರೆದೊಯ್ಯುವ ಮತ್ತು ಅಲ್ಲಿಂದ ಕರೆತರು ವ ಉದ್ದೇಶಕ್ಕಾಗಿ ಒಬ್ಬ ಮತದಾರನು ಅಥವಾ ಅನೇಕ ಮತದಾರರು ಅವರ ಒಟ್ಟು ಖರ್ಚಿನಲ್ಲಿ ಒಂದು ವಾಹನವನ್ನು ಅಥವಾ ದೋಣಿಯನ್ನು ಬಾಡಿಗೆಗೆ ಪಡೆಯುವುದು, ಹಾಗೆ ಬಾಡಿಗೆ ಪಡೆದ ವಾಹನವು ಅಥವಾ ದೋಣಿಯು ಯಂತ್ರಚಾಲಿತ ವಾಹನ ಅಥವಾ ದೋಣಿ ಆಗಿರದಿದ್ದರೆ, ಈ ಖಂಡದ ಮೇರೆಗೆ ಭ್ರಷ್ಟಾಚಾರವಾಗಿರುವುದೆಂದು ಭಾವಿಸತಕ್ಕುದಲ್ಲ:

ಮತ್ತೂ ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗುವುದು ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಯಾವನೇ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ, ವಾಹನ ಅಥವಾ ದೋಣಿ ಅಥವಾ ಯಾವುದೇ ಟ್ರಾಮ್‌ಕಾರನ್ನು ಅಥವಾ ರೈಲು ಬೋಗಿಯನ್ನು ಉಪಯೋಗಿಸುವುದನ್ನು ಈ ಖಂಡದ ಮೇರೆಗೆ ಭ್ರಷ್ಟಚಾರವೆಂದು ಭಾವಿಸತಕ್ಕುದಲ್ಲ.

**ವಿವರಣೆ**:– ಈ ಖಂಡದಲ್ಲಿ "ವಾಹನ" ಎಂಬ ಪದಕ್ಕೆ, ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ ಎಂದು ಅರ್ಥ; ಆ ವಾಹನವು ಯಂತ್ರ ಚಾಲಿತ ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು ; ಮತ್ತು ಅದು ಇತರ ವಾಹನಗಳನ್ನು ಎಳೆಯಲು ಅಥವಾ ಅನ್ಯಥಾ ಉಪಯೋಗಿಸುವಂತಹದಾಗಿರಬಹುದು.

(6) 77ನೇ ಪ್ರಕರಣವನ್ನು ಉಲ್ಲಂಘಿಸಿ ವೆಚ್ಚವನ್ನು ವಹಿಸಿಕೊಳ್ಳುವುದು ಅಥವಾ ಅಧಿಕೃತಗೊಳಿಸುವುದು.

(7) ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು, ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಹಮತಿಯಿಂದ ಯಾವನೇ ಇತರೆ ವ್ಯಕ್ತಿಯು ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಗಾಗಿ ಸರ್ಕಾರಿ ಸೇವೆಯಲ್ಲಿರುವ ಮತ್ತು ಈ ಕೆಳಕಂಡ ಯಾವುದೇ ವರ್ಗಕ್ಕೆ ಸೇರಿದ ಯಾವನೇ ವ್ಯಕ್ತಿಯಿಂದ (ಮತ ನೀಡುವುದನ್ನು ಹೊರತುಪಡಿಸಿ) ಯಾವುದೇ ಸಹಾಯವನ್ನು ಪಡೆದುಕೊಳ್ಳುವುದು ಅಥವಾ ದೊರಕಿಸಿಕೊಳ್ಳುವುದು ಅಥವಾ ಪಡೆದುಕೊಳ್ಳಲು ಅಥವಾ ದೊರಕಿಸಿಕೊಳ್ಳಲು ದುಷ್ಪ್ರೇರಿಸುವುದು ಅಥವಾ ಪ್ರಯತ್ನಿಸುವುದು, ಎಂದರೆ :–

(ಎ) ಗೆಜೆಟೆಡ್ ಅಧಿಕಾರಿಗಳು ;

(ಬಿ) ಸ್ಟೈಪಂಡರಿ ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟರು ;

(ಸಿ) ಒಕೂಟ್ಟ ಸಶಸ್ತ್ರ ಬಲಗಳ ಸದಸ್ಯರು ;

(ಡಿ) ಪೊಲೀಸ್ ಪಡೆಗಳ ಸದಸ್ಯರು ;

(ಇ) ಅಬ್ಕಾರಿ ಅಧಿಕಾರಿಗಳು ;

(ಎಫ್) ಭೂಕಂದಾಯವನ್ನು ಸಂಗ್ರಹಿಸುವುದು ಯಾರ ಕರ್ತವ್ಯವಾಗಿದೆಯೋ ಮತ್ತು ಅವರು ಸಂಗ್ರಹಿಸಿರುವ ಭೂ ಕಂದಾಯದ ಮೊಬಲಗಿನಲ್ಲಿ ಪಾಲು ಪಡೆಯುವ ಮೂಲಕ ಅಥವಾ ಅದರ ಮೇಲೆ ಕಮೀಷನ್ ಪಡೆಯುವ ಮೂಲಕ ಯಾರಿಗೆ ಪರಿಶ್ರಮ ಧನವನ್ನು ಕೊಡಲಾಗುತ್ತಿದೆಯೋ ಆದರೆ ಯಾರು ಯಾವುವೇ ಪೊಲೀಸ್ ಪ್ರಕಾರ್ಯಗಳನ್ನು ನಿರ್ವಹಿಸುತ್ತಿಲ್ಲವೋ ಮತ್ತು ಲಂಬಾರ್‌ದಾರರು; ಮಾಲ್‌ಗುಜಾರರು, ಪಟೇಲರು, ದೇಶಮುಖರು ಅಥವಾ ಇತರ ಯಾವುದೇ ಹೆಸರಿನಿಂದ ಯಾರನ್ನು ಕರೆಯಲಾಗುತ್ತಿದೆಯೋ ಆ ಗ್ರಾಮ ಕಂದಾಯ ಅಧಿಕಾರಿಗಳನ್ನು ಹೊರತುಪಡಿಸಿದ ಕಂದಾಯ ಅಧಿಕಾರಿಗಳು ;

(ಜಿ) ನಿಯಮಿಸಬಹುದಾದಂಥ ಸರ್ಕಾರದ ಸೇವೆಯಲ್ಲಿರುವ ಇತರ ವರ್ಗದ ವ್ಯಕ್ತಿಗಳು:

(ಪರಂತು, ಸರ್ಕಾರದ ಸೇವೆಯಲ್ಲಿರುವ ಮತ್ತು ಮೇಲೆ ಹೇಳಿದ ಯಾವುದೇ ವರ್ಗಕ್ಕೆ ಸೇರಿದ ಯಾವನೇ ವ್ಯಕ್ತಿಯು ತನ್ನ ಪದೀಯ ಕರ್ತವ್ಯದ ನಿರ್ವಹಣೆಲ್ಲಿ ಅಥವಾ ಹಾಗೆ ನಿರ್ವಹಿಸುವುದಾಗಿ ತಾತ್ಪರ್ಯವಾಗುವಲ್ಲಿ ಯಾವನೇ ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಹಮತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಇತರೆ ವ್ಯಕ್ತಿ ಇವರಿಗಾಗಿ, ಇವರಿಗೆ ಅಥವಾ ಅವರ ಸಂಬಂಧದಲ್ಲಿ (ಆ ಅಭ್ಯರ್ಥಿಯು ಧಾರಣ ಮಾಡಿದ ಪದದ ಕಾರಣದಿಂದಾಗಿ ಅಥವಾ ಯಾವುದೇ ಇತರ ಕಾರಣಕ್ಕಾಗಿ) ಯಾವುವೇ ಏರ್ಪಾಟುಗಳನ್ನು ಮಾಡುವಲ್ಲಿ ಅಥವಾ ಯಾವುವೇ ಸೌಲಭ್ಯಗಳನ್ನು ಒದಗಿಸುವಲ್ಲಿ ಅಥವಾ ಯಾವುದೇ ಇತರ ಕಾರ್ಯ ಅಥವಾ ಕೃತ್ಯವನ್ನು ಮಾಡುವಲ್ಲಿ ಅಂಥ ಏರ್ಪಾಟುಗಳು, ಸೌಲಭ್ಯಗಳು ಅಥವಾ ಕಾರ್ಯ ಅಥವಾ ಕೃತ್ಯವನ್ನು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಗಾಗಿ ಮಾಡಿದ ಸಹಾಯವೆಂದು ಭಾವಿಸತಕ್ಕುದಲ್ಲ.)

(ಎಚ್)ಸ್ಥಳೀಯ ಪ್ರಾಧಿಕಾರ, ವಿಶ್ವವಿದ್ಯಾಲಯ,ಸರ್ಕಾರಿ ಕಂಪನಿ ಅಥವಾ ಸಂಸ್ಥೆ ಅಥವಾ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ, ಚುನಾವಣಾ ಆಯೋಗವು ನೇಮಿಸಿದ ಅಥವಾ ನಿಯೋಜಿಸಿದ ಸಂಸ್ಥೆಯಲ್ಲಿ ಸೇವೆಯಲ್ಲಿರುವ ವ್ಯಕ್ತಿಗಳ ವರ್ಗ.

(8) ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಇತರ ವ್ಯಕ್ತಿಯು ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು.

**ವಿವರಣೆ:–** (1) ಈ ಪ್ರಕರಣದಲ್ಲಿ 'ಏಜೆಂಟ್' ಎಂಬ ಪದವು, ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಮತ್ತು ಅಭ್ಯರ್ಥಿಯ ಸಮ್ಮತಿಯಿಂದ ಚುನಾವಣೆಯ ಸಂಬಂಧದಲ್ಲಿ ಏಜೆಂಟನೆಂದು ಕಾರ್ಯ ನಿರ್ವಹಿಸಿರುವುದಾಗಿ ತೀರ್ಮಾನಿಸಲಾಗಿರುವ ಯಾವನೇ ವ್ಯಕ್ತಿ - ಇವರನ್ನು ಒಳಗೊಳ್ಳುತ್ತದೆ.

(2) (7)ನೇ ಖಂಡದ ಉದೇಶಗಳಿಗಾಗಿ ಒಬ್ಬ ವ್ಯಕ್ತಿಯು ಒಬ್ಬ ಅಭ್ಯರ್ಥಿಯ ಚುನಾವಣಾ ಏಜೆಂಟನೆಂದು ಕಾರ್ಯ ನಿರ್ವಹಿಸಿದರೆ, ಅವನು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಯಲ್ಲಿ ಸಹಾಯ ಮಾಡುವನೆಂದು ಭಾವಿಸತಕ್ಕುದು.

(3) (7)ನೇ ಖಂಡದ ಉದೇಶಗಳಿಗಾಗಿ, ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರದ (ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತದ ಸಂಬಂಧದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯೂ ಸೇರಿದಂತೆ) ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು ಇವುಗಳ ಬಗ್ಗೆ ರಾಜಪತ್ರದಲ್ಲಿನ ಪ್ರಕಟಣೆಯು –

(i) ಸಂದರ್ಭಾನುಸಾರ ಅಂಥ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದು ಹಾಕುವುದು ಇವುಗಳ ಬಗ್ಗೆ ಮತ್ತು ;

(ii) ಸಂದರ್ಭಾನುಸಾರ ಅಂಥ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು, ಇವು ಜಾರಿಗೆ ಬರುವ ದಿನಾಂಕವನ್ನು

ಅಂಥ ಪ್ರಕಟಣೆಯ ನಿರೂಪಿಸುವಲ್ಲಿ ಅಂಥ ವ್ಯಕ್ತಿಯನ್ನು ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದ್ದಿತು, ಅಥವಾ ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು ಈ ಸಂದರ್ಭದಲ್ಲಿ ಅಂಥ ವ್ಯಕ್ತಿಯು ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ಅಂಥ ಸಭೆಯಲ್ಲಿ ಇರುವುದು ಮುಕ್ತಾಯಗೊಂಡಿದ್ದಿತು ಎಂಬ ಸಂಗತಿಯ ಬಗ್ಗೆ ಸಹ –

– ನಿರ್ಣಾಯಕ ರುಜುವಾತಾಗಿರತಕ್ಕುದು.

(4) 8ನೇ ಖಂಡದ ಉದ್ದೇಶಗಳಿಗಾಗಿ, "ಮತಗಟ್ಟೆ ವಶಪಡಿಸಿಕೊಳ್ಳುವುದು" ಎಂಬುದು 135ಎ ಪ್ರಕರಣದಲ್ಲಿ ಇರುವಂಥದೇ ಅರ್ಥವನ್ನು ಹೊಂದಿರತಕ್ಕುದು.

## ಅಧ್ಯಾಯ III– ಚುನಾವಣಾ ಅಪರಾಧಗಳು

**125. ಚುನಾವಣಾ ಸಂಬಂಧದಲ್ಲಿ ವರ್ಗಗಳ ನಡುವೆ ಹಗೆತನವನ್ನು ಬೆಳೆಸುವುದು:–** ಈ ಅಧಿನಿಯಮದ ಮೇರೆಗೆ ಚುನಾವಣೆಯ ಸಂಬಂಧದಲ್ಲಿ ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆ ಇವುಗಳ ಆಧಾರದ ಮೇಲೆ ಭಾರತದ ನಾಗರಿಕರ ಭಿನ್ನ ಭಿನ್ನ ವರ್ಗಗಳ ನಡುವೆ ಹಗೆತನ ಅಥವಾ ದ್ವೇಷ ಭಾವನೆಗಳನ್ನು ಬೆಳೆಸುವ ಅಥವಾ ಬೆಳೆಸಲು ಪ್ರಯತ್ನಿಸುವ ಯಾರೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**125(ಎ) ಸುಳ್ಳು ಅಫಿಡಾವಿಟ್, ಇತ್ಯಾದಿ ಸಲ್ಲಿಸಿದ್ದಕ್ಕಾಗಿ ಜುಲ್ಮಾನೆ.–** ಒಂದು ಚುನಾವಣೆಯಲ್ಲಿ ಗೆಲ್ಲಲೇಬೇಕು ಎಂಬ ಇಚ್ಛೆಯೊಂದಿಗೆ, ಸ್ವತಃ ಅಭ್ಯರ್ಥಿಯಾಗಲೀ ಅಥವಾ ಆತನ ಸೂಚಕನಾಗಲಿ–
ಪ್ರಕರಣ–33ರ ಉಪ–ಪ್ರಕರಣ 1ರ ಅಡಿಯಲ್ಲಿ ಸಲ್ಲಿಸಲಾದ ಆತನ ನಾಮಪತ್ರದಲ್ಲಿ ಅಥವ ಪ್ರಕರಣ 33ಎದ ಉಪ ಪ್ರಕರಣ 2ರ ಅಡಿಯಲ್ಲಿ ಸಲ್ಲಿಸಲು ಅಗತ್ಯವಿರುವಂಥ ಆತನ ಅಫಿಡಾವಿಟ್‌ನಲ್ಲಿ;

(i) ಪ್ರಕರಣ–33ರ ಉಪ–ಪ್ರಕರಣ 1ಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುವಲ್ಲಿ ವಿಫಲತೆಗಳು;

(ii) ಆತನಿಗೆ ಗೊತ್ತಿದ್ದರೂ ಸುಳ್ಳು ಮಾಹಿತಿ ನೀಡಿರುವುದು ಅಥವಾ ನೀಡಲಾಗಿರುವ ಸುಳ್ಳು ಮಾಹಿತಿಗೆ ಕಾರಣ ನೀಡುವುದು.

(iii) ಯಾವುದೇ ಮಾಹಿತಿ ರಹಸ್ಯವಾಗಿಟ್ಟಿರುವುದು, ಮಾಡಿದ್ದಲ್ಲಿ, ಸಂದರ್ಭಾನುಸಾರ ಯಾವುದೇ ಇನ್ನಿತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಆ ಸಮಯದಿಂದಲೇ ಜಾರಿಗೆ ಬರುವಂತೆ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

**126. ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಸಾರ್ವಜನಿಕ ಸಭೆಗಳ ನಿಷೇಧ:–**

**(1)** ಯಾರೇ ವ್ಯಕ್ತಿಯು–
ಯಾವುದೇ ಮತದಾನ ಪ್ರದೇಶದಲ್ಲಿನ ಯಾವುದೇ ಚುನಾವಣೆಗಾಗಿ ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯವು ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಯಾವುದೇ ಮತದಾನದ ಪ್ರದೇಶದಲ್ಲಿ–

(ಎ) ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಸಾರ್ವಜನಿಕ ಸಭೆಯನ್ನು ಅಥವಾ ಮೆರವಣಿಗೆಯನ್ನು ಕರೆಯತಕ್ಕದ್ದಲ್ಲ, ನಡೆಸತಕ್ಕದ್ದಲ್ಲ, ಅದರಲ್ಲಿ ಭಾಗವಹಿಸಿತಕ್ಕದ್ದಲ್ಲ ಅಥವಾ ಸೇರತಕ್ಕದ್ದಲ್ಲ ಅಥವಾ ಅದನ್ನು ಉದ್ದೇಶಿಸಿ ಭಾಷಣ ಮಾಡತಕ್ಕದ್ದಲ್ಲ; ಅಥವಾ

(ಬಿ) ಚಲನಚಿತ್ರ ದರ್ಶಕ, ದೂರದರ್ಶನ ಅಥವಾ ಅಂಥದ್ದೇ ಇತರ ಪರಿಕರಗಳ ಮೂಲಕ ಸಾರ್ವಜನಿಕರಿಗೆ ಯಾವುದೇ ಚುನಾವಣಾ ವಿಷಯವನ್ನು ಪ್ರದರ್ಶಿಸತಕ್ಕದ್ದಲ್ಲ; ಅಥವಾ

(ಸಿ) ಚುನಾವಣಾ ವಿಷಯದ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆಯುವ ದೃಷ್ಟಿಯಿಂದ ಯಾವುದೇ ಸಂಗೀತ ಗೋಷ್ಠಿಯನ್ನು ಅಥವಾ ಯಾವುದೇ ನಾಟಕ ಪ್ರದರ್ಶನವನ್ನು ಅಥವಾ ಯಾವುದೇ ಇತರ ಮನರಂಜನೆ ಅಥವಾ ವಿನೋದ ಕಾರ್ಯಕ್ರಮವನ್ನು ನಡೆಸುವ

ಮೂಲಕ ಅಥವಾ ನಡೆಯುವಂತೆ ವ್ಯವಸ್ಥೆ ಮಾಡುವ ಮೂಲಕ ಸಾರ್ವಜನಿಕರಿಗೆ ಯಾವುದೇ ಚುನಾವಣಾ ವಿಷಯವನ್ನು ಪ್ರಚಾರ ಮಾಡತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಈ ಪ್ರಕರಣದಲ್ಲಿ "ಚುನಾವಣಾ ವಿಷಯ" ಎಂಬ ಪದಾವಳಿಗೆ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಭೀರುವ ಅಥವಾ ಪರಿಣಾಮ ಉಂಟು ಮಾಡುವ ಆಶಯವಿರುವ ಅಥವಾ ಉದ್ದೇಶವಿರುವ ಯಾವುದೇ ವಿಷಯ ಎಂದು ಅರ್ಥ.

**126ಎ. ಮತದಾನೋತ್ತರ ಸಮೀಕ್ಷೆ ಇತ್ಯಾದಿಯ ಫಲಿತಾಂಶದ ಪ್ರಕಟಣೆ ಮತ್ತು ಪ್ರಸಾರದ ಬಗ್ಗೆ ನಿರ್ಬಂಧ.–**

(1) ಯಾರೇ ವ್ಯಕ್ತಿಯು, ಚುನಾವಣಾ ಆಯೋಗವು ಈ ಸಂಬಂಧ ಸೂಚಿಸಬಹುದಾದಂಥ ಅವಧಿಯಲ್ಲಿ ಯಾವುದೇ ಮತದಾನೋತ್ತರ ಸಮೀಕ್ಷೆ ನಡೆಸತಕ್ಕದ್ದಲ್ಲ ಮತ್ತು ಯಾವುದೇ ಮತದಾನೋತ್ತರದ ಸಮೀಕ್ಷಾ ಫಲಿತಾಂಶವನ್ನು ಮುದ್ರಣ ಅಥವ ವಿದ್ಯುನ್ಮಾನ ಮಾಧ್ಯಮದ ಮೂಲಕ ಪ್ರಕಟಣೆ ಮಾಡತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲೂ ಅದನ್ನು ಪ್ರಸಾರ ಮಾಡತಕ್ಕದ್ದಲ್ಲ.

(2) 1ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ, ಚುನಾವಣಾ ಆಯೋಗವು ಸಾಮಾನ್ಯ ಆದೇಶದ ಮೂಲಕ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ದಿನಾಂಕ ಮತ್ತು ಸಮಯವನ್ನು ಅಧಿಸೂಚಿಸತಕ್ಕದ್ದು. ಆ ಅಂಶಗಳೆಂದರೆ,–

(ಎ) ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಆ ಅವಧಿಯು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾನದ ಮೊದಲ ದಿನದಂದು ಮತದಾನಕ್ಕಾಗಿ ನಿಗದಿಪಡಿಸಿದ ಸಮಯದಿಂದ ಪ್ರಾರಂಭವಾಗಿ, ಮತದಾನ ಮುಕ್ತಾಯವಾದ ನಂತರದ ಅರ್ಧ ಗಂಟೆಯವರೆಗೂ ಮುಂದುವರೆಯತಕ್ಕದ್ದು.

(ಬಿ) ಉಪ–ಚುನಾವಣೆ ಸಂದರ್ಭದಲ್ಲಿ ಅಥವಾ ಕೆಲವು ಉಪ ಚುನಾವಣೆಗಳು ಒಟ್ಟಿಗೆ ನಡೆದ ಸಂದರ್ಭದಲ್ಲಿ ಆ ಅವಧಿಯು ಮತದಾನದ ಮೊದಲ ದಿನದಂದು ಮತದಾನಕ್ಕಾಗಿ ನಿಗದಿಪಡಿಸಿದ ಸಮಯದಿಂದ ಪ್ರಾರಂಭವಾಗಿ ಮತದಾನ ಮುಕ್ತಾಯವಾದ ನಂತರದ ಅರ್ಧ ಗಂಟೆಯವರೆಗೂ ಮುಂದುವರೆಯತಕ್ಕದ್ದು.

ಪರಂತು, ಬೇರೆ ಬೇರೆ ದಿನಗಳಂದು ಒಟ್ಟಿಗೆ ನಡೆದ ಹಲವು ಉಪ ಚುನಾವಣೆಗಳ ಸಂದರ್ಭದಲ್ಲಿ, ಸಮಯವನ್ನು ಮತದಾನದ ಮೊದಲನೇ ದಿನದಂದು ಮತದಾನಕ್ಕಾಗಿ ನಿಗದಿಪಡಿಸಿದ ಪ್ರಾರಂಭದ ಸಮಯದಿಂದ ಆರಂಭವಾಗಿ ಮತ್ತು ಅಂತಿಮ ಮತದಾನ ಮುಕ್ತಾಯದ ನಂತರದ ಅರ್ಧಗಂಟೆಯವರೆಗೂ ಮುಂದುವರೆಯತಕ್ಕದ್ದು.

(3) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದಂಥ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಮತದಾನೋತ್ತರ ಸಮೀಕ್ಷೆ' ಎಂದರೆ, ಚುನಾವಣೆಯಲ್ಲಿ ಮತದಾರರು ತಮ್ಮ ಮತವನ್ನು ಚಲಾಯಿಸುವಲ್ಲಿ ಹೇಗೆ ಪ್ರತಿಕ್ರಿಯಿಸಿದರು ಅಥವಾ ಚುನಾವಣೆಯಲ್ಲಿ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯನ್ನು ಗುರುತಿಸುವುದಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವಲ್ಲಿ ಎಲ್ಲಾ ಮತದಾರರು ಹೇಗೆ ಪ್ರತಿಕ್ರಿಯಿಸಿದರೆಂಬ ಯಾವುದೇ ಅಭಿಪ್ರಾಯದ ಸಮೀಕ್ಷೆ ಎಂದರ್ಥ;

(ಬಿ) 'ವಿದ್ಯುನ್ಮಾನ ಮಾಧ್ಯಮ'ವು ಸ್ವಂತ ಸರ್ಕಾರದ್ದಾಗಿರಲಿ ಅಥವಾ ಖಾಸಗಿ ವ್ಯಕ್ತಿಯದ್ದಾಗಿರಲಿ ಅಥವಾ ಇಬ್ಬರದ್ದೂ ಆಗಿರಲಿ, ಇದು ಇಂಟರ್‌ನೆಟ್, ರೇಡಿಯೋ, ಇಂಟರ್‌ನೆಟ್ ಹೊಂದಿರುವ ದೂರದರ್ಶನ, ಪ್ರೋಟೋಕಾಲ್ ದೂರದರ್ಶನ, ಸ್ಯಾಟಲೈಟ್, ಟೆರೆಸ್ಟ್ರಿಯಲ್ ಅಥವಾ ಕೇಬಲ್ ಚಾನಲ್‌ಗಳು, ಮೊಬೈಲ್ ಮತ್ತು ಅಂಥ ಇತರೆ ಮಾಧ್ಯಮ ಒಳಗೊಂಡಿರುತ್ತದೆ;

(ಸಿ) 'ಪ್ರಿಂಟ್ ಮಾಧ್ಯಮ'ವು, ಯಾವುದೇ ವಾರ್ತಾಪತ್ರಿಕೆ, ವಾರಪತ್ರಿಕೆ ಅಥವಾ ನಿಯತಕಾಲಿಕೆ, ಪೋಸ್ಟರ್, ಕರಪತ್ರವಾಗಿ ಪ್ರಕಟಿಸಿದ ಯಾವುದೇ ಪ್ರಕಟಣೆ ಅಥವಾ ಯಾವುದೇ ಇತರೆ ದಸ್ತಾವೇಜು ಒಳಗೊಂಡಿರುತ್ತದೆ;

(ಡಿ) 'ಪ್ರಸರಣ'ವು ಯಾವುದೇ 'ಪ್ರಿಂಟ್ ಮಾಧ್ಯಮ'ದಲ್ಲಿನ ಪ್ರಕಟಣೆ ಅಥವಾ ಯಾವುದೇ ವಿದ್ಯುನ್ಮಾನ ಮಾಧ್ಯಮದ ಮೇಲೆ ಪ್ರಸಾರ ಅಥವಾ ಪ್ರದರ್ಶನ ಒಳಗೊಂಡಿರುತ್ತದೆ.

**126ಬಿ. ಕಂಪನಿಗಳ ಅಪರಾಧಗಳು.–**

(1) ಒಂದು ಕಂಪನಿಯು 126ಎ ಪ್ರಕರಣ, (2)ನೇ ಉಪ ಪ್ರಕರಣದ ಅಡಿಯಲ್ಲಿ ಅಪರಾಧ ಎಸಗಿದ್ದಲ್ಲಿ, ಆ ಅಪರಾಧ ನಡೆದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿರುವಂಥ ಹಾಗೂ ಕಂಪನಿಯ ವ್ಯವಹಾರವನ್ನು ನೋಡಿಕೊಳ್ಳುವುದಕ್ಕಾಗಿ ಜವಾಬ್ದಾರರಾಗಿರುವಂಥ ಪ್ರತಿಯೊಬ್ಬ ವ್ಯಕ್ತಿಯು ಹಾಗೂ ಕಂಪನಿಯು, ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಹಾಗೂ ಅದರ ವಿರುದ್ಧ ದಾವೆ ಹೂಡತಕ್ಕದ್ದು ಮತ್ತು ಶಿಕ್ಷೆಗೆ ಗುರಿಪಡಿಸತಕ್ಕದ್ದು.

ಪರಂತು, ಆ ವ್ಯಕ್ತಿಯು, ಈ ಅಪರಾಧ ತನಗೆ ಅರಿವಿಲ್ಲದೆ ನಡೆದದ್ದು ಎಂದು ಹಾಗೂ ಆ ಅಪರಾಧವನ್ನು ತಡೆಯಲು ಎಲ್ಲಾ ಯುಕ್ತ ಜಾಗರೂಕತೆ ವಹಿಸಿದ್ದೇನೆಂದು ಆತನು ಸಾಬೀತು ಪಡಿಸಿದ್ದಲ್ಲಿ, ಈ ಅಧಿನಿಯಮದಲ್ಲಿ ನೀಡಿರುವ ಯಾವುದೇ ದಂಡನೆಗೆ ಬದ್ಧನಾಗಬಹುದಾದ ಕ್ರಮದಿಂದ ಅಂಥ ವ್ಯಕ್ತಗೆ ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿ ಕಂಪನಿಯು ಅಪರಾಧವನ್ನು ಮಾಡಿದ್ದಲ್ಲಿ, ಹಾಗೂ ಈ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕರು, ವ್ಯವಸ್ಥಾಪಕರು, ಕಾರ್ಯದರ್ಶಿ ಅಥವಾ ಕಂಪನಿಯ ಯಾರೇ ಇತರೆ ಅಧಿಕಾರಿಯ ಸಮ್ಮತಿಯಿಂದ ಅಥವಾ ಒಪ್ಪಿಗೆಯಿಂದ ಅಥವಾ ಅವರ ನಿರ್ಲಕ್ಷ್ಯದಿಂದ ಆಗಿದ್ದು ಎಂದು ಸಾಬೀತಾದಲ್ಲಿ, ಅಂಥ ನಿರ್ದೇಶಕರು, ವ್ಯವಸ್ಥಾಪಕರು, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯನ್ನು ತಪ್ಪಿತಸ್ಥರೆಂದು ಸಹ ಭಾವಿಸತಕ್ಕದ್ದು ಮತ್ತು ಅವರ ವಿರುದ್ಧ ದಾವೆಯನ್ನು ಹೂಡಿ, ತದನುಸಾರ ಅವರನ್ನು ಶಿಕ್ಷೆಗೆ ಗುರಿಪಡಿಸತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) 'ಕಂಪನಿ' ಎಂದರೆ, ಒಂದು ನಿಗಮವಾಗಿದ್ದು, ಅದು ಒಂದು ಫರ್ಮ್ ಅಥವಾ ವ್ಯಕ್ತಿಗಳ ಸಂಸ್ಥೆಯನ್ನು ಒಳಗೊಂಡಿರುತ್ತದೆ; ಹಾಗೂ

(ಬಿ) 'ನಿರ್ದೇಶಕರು' ಎಂದರೆ, ಒಂದು ಫರ್ಮ್‌ನ ಸಂಬಂಧದಲ್ಲಿ, ಎಂದರೆ, ಆ ಫರ್ಮ್‌ನಲ್ಲಿ ಒಬ್ಬ ಪಾಲುದಾರ ಎಂದರ್ಥ.

**127. ಚುನಾವಣಾ ಸಭೆಗಳಲ್ಲಿ ಗಲಭೆ:–**

(1) ಈ ಪ್ರಕರಣವು ಅನ್ವಯಿಸುವ ಸಾರ್ವಜನಿಕ ಸಭೆಯಲ್ಲಿ, ಆ ಸಭೆಯನ್ನು ಯಾವ ಕಾರ್ಯ ನಿರ್ವಹಣೆಗಾಗಿ ಕರೆಯಲಾಗಿದ್ದಿತೋ ಅದನ್ನು ತಡೆಯುವ ಉದ್ದೇಶಕ್ಕಾಗಿ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸುವ ಅಥವಾ ವರ್ತಿಸುವಂತೆ ಇತರರನ್ನು ಚಿತಾವಣೆ ಮಾಡುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

"(1ಎ)(1)ನೇ ಉಪ– ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು".

(2) ಒಬ್ಬ ಸದಸ್ಯ ಅಥವಾ ಸದಸ್ಯರನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರಕ್ಕೆ ಕರೆನೀಡಿ ಈ ಅಧಿನಿಯಮ ಮೇರೆಗೆ ಹೊರಡಿಸಿರುವ ಅಧಿಸೂಚನೆಯ ದಿನಾಂಕ ಮತ್ತು ಅಂಥ ಚುನಾವಣೆಯನ್ನು ನಡೆಸಲಾಗುವ ದಿನಾಂಕ ಇವುಗಳ ನಡುವಿನ ಅವಧಿಯಲ್ಲಿ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ನಡೆಯುವ ರಾಜಕೀಯ ಸ್ವರೂಪದ ಯಾವುದೇ ಸಾರ್ವಜನಿಕ ಸಭೆಗೆ ಈ ಪ್ರಕರಣವು ಅನ್ವಯಿಸುತ್ತದೆ.

(3) (1)ನೇ ಉಪ–ಪ್ರಕರಣದ ಮೇರೆಗೆ ಅಪರಾಧವನ್ನು ಮಾಡುತ್ತಿದ್ದಾನೆಂದು ಯಾವನೇ ವ್ಯಕ್ತಿಯ ಬಗ್ಗೆ ಯಾವನೇ ಪೊಲೀಸ್ ಅಧಿಕಾರಿಯು ಯುಕ್ತವಾಗಿ ಸಂದೇಹಪಟ್ಟರೆ ಆ ಪೊಲೀಸ್ ಅಧಿಕಾರಿಯು, ಸಭೆಯ ಅಧ್ಯಕ್ಷನು ಹಾಗೆ ಮಾಡಲು ಕೋರಿದರೆ, ಕೂಡಲೇ ಅವನ ಹೆಸರು ಮತ್ತು ವಿಳಾಸವನ್ನು ತನ್ನ ಮುಂದೆ ಘೋಷಿಸುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಮತ್ತು ಆ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ಹಾಗೆ ಘೋಷಿಸಲು ತಿರಸ್ಕರಿಸಿದರೆ ಅಥವಾ ತಪ್ಪಿದರೆ, ಅಥವಾ ಸುಳ್ಳು ಹೆಸರು ಅಥವಾ ವಿಳಾಸವನ್ನು ನೀಡಿದ್ದಾನೆಂದು ಅವನ ಬಗ್ಗೆ ಆ ಪೊಲೀಸ್ ಅಧಿಕಾರಿಗೆ ಯುಕ್ತವಾಗಿ ಸಂದೇಹಪಟ್ಟರೆ, ಆ ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ಅವನನ್ನು ದಸ್ತಗಿರಿ ಮಾಡಬಹುದು.

**127ಎ. ಕರಪತ್ರಗಳು, ಭಿತ್ತಿಪತ್ರಗಳು, ಮುಂತಾದವುಗಳ ಮುದ್ರಣದ ಮೇಲೆ ನಿರ್ಬಂಧಗಳು:–**

(1) ಯಾವ ಚುನಾವಣಾ ಕರಪತ್ರ ಅಥವಾ ಭಿತ್ತಿಪತ್ರದ ಮೇಲೆ ಅದರ ಮುದ್ರಕ ಮತ್ತು ಪ್ರಕಾಶಕನ ಹೆಸರು ಮತ್ತು ವಿಳಾಸಗಳು ಇರುವುದಿಲ್ಲವೋ ಅವುಗಳನ್ನು ಯಾವನೇ ವ್ಯಕ್ತಿಯು ಮುದ್ರಿಸತಕ್ಕುದಲ್ಲ ಅಥವಾ ಪ್ರಕಟಿಸತಕ್ಕುದಲ್ಲ, ಅಥವಾ ಮುದ್ರಿಸುವಂತೆ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು –

(ಎ) ಯಾವುದೇ ಚುನಾವಣಾ ಕರಪತ್ರ ಅಥವಾ ಭಿತ್ತಿಪತ್ರದ ಪ್ರಕಾಶಕನ ಗುರುತಿನ ಬಗ್ಗೆ ಅವನು ಸಹಿ ಹಾಕಿದ ಮತ್ತು ಅವನಿಗೆ ವೈಯಕ್ತಿಕವಾಗಿ ಗೊತ್ತಿರುವ ಇಬ್ಬರು ವ್ಯಕ್ತಿಗಳು ಅನುಪ್ರಮಾಣಿಸಿದ ಘೋಷಣೆಯನ್ನು ಅವನು ದ್ವಿಪ್ರತಿಯಲ್ಲಿ ಮುದ್ರಕನಿಗೆ ಕೊಟ್ಟಿರುವ ಹೊರತು; ಮತ್ತು

(ಬಿ) ಆ ದಸ್ತಾವೇಜನ್ನು ಮುದ್ರಿಸಿದ ತರುವಾಯ ಯುಕ್ತ ಕಾಲದೊಳಗೆ ಮುದ್ರಕನು, ಘೋಷಣೆಯ ಒಂದು ಪ್ರತಿಯನ್ನು, ದಸ್ತಾವೇಜಿನ ಒಂದು ಪ್ರತಿಯೊಂದಿಗೆ,–

(i) ಅದು ರಾಜ್ಯದ ರಾಜಧಾನಿಯಲ್ಲಿ ಮುದ್ರಿತವಾಗಿರುವಲ್ಲಿ, ಮುಖ್ಯ ಚುನಾವಣಾ ಅಧಿಕಾರಿಗೆ, ಮತ್ತು

(ii) ಇತರೆ ಯಾವುದೇ ಸಂದರ್ಭದಲ್ಲಿ, ಅದು ಯಾವ ಜಿಲ್ಲೆಯಲ್ಲಿ ಮುದ್ರಿತವಾಗಿರುತ್ತದೋ, ಆ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿರುವ ಹೊರತು, ಯಾವುದೇ ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿಪತ್ರವನ್ನು ಮುದ್ರಿಸತಕ್ಕುದಲ್ಲ ಅಥವಾ ಮುದ್ರಿಸುವಂತೆ ಮಾಡತಕ್ಕದ್ದಲ್ಲ.

(3) ಈ ಪ್ರಕರಣದ ಉದ್ದೇಶಗಳಿಗಾಗಿ, -

(ಎ) ದಸ್ತಾವೇಜನ್ನು ಕೈಯಿಂದ ಪ್ರತಿ ಮಾಡುವುದನ್ನು ಹೊರತುಪಡಿಸಿ, ಅದರ ಬಹುಪ್ರತಿಗಳನ್ನು ತೆಗೆಯುವ ಯಾವುದೇ ಕಾರ್ಯ ವಿಧಾನವನ್ನು ಮುದ್ರಣವೆಂದು ಭಾವಿಸತಕ್ಕದ್ದು ಮತ್ತು "ಮುದ್ರಕ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು; ಮತ್ತು

(ಬಿ) "ಚುನಾವಣೆ ಕರಪತ್ರ ಅಥವಾ ಭಿತ್ತಿಪತ್ರ " ಎಂದರೆ ಒಬ್ಬ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಗುಂಪಿನ ಚುನಾವಣೆಯನ್ನು ಅಭಿವೃದ್ಧಿಗೊಳಿಸುವ ಅಥವಾ ಅದರ ಮೇಲೆ ಪ್ರತಿಕೂಲ ಪ್ರಭಾವ ಭೀರುವ ಉದ್ದೇಶಕ್ಕಾಗಿ ಹಂಚಲಾದ ಯಾವುದೇ ಮುದ್ರಿತ ಕಿರುಹೊತ್ತಿಗೆ, ಕರಪತ್ರ ಅಥವಾ ಇತರ ದಸ್ತಾವೇಜು ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಪ್ರಕಟಣೆ ಪತ್ರ ಅಥವಾ ಭಿತ್ತಿಪತ್ರ, ಆದರೆ ಅದು ಒಂದು ಚುನಾವಣಾ ಸಭೆಯ ದಿನಾಂಕ, ಕಾಲ, ಸ್ಥಳ ಮತ್ತು ಇತರ ವಿವರಗಳನ್ನು ಅಥವಾ ಚುನಾವಣಾ ಏಜೆಂಟರು ಅಥವಾ ಕಾರ್ಯಕರ್ತರಿಗೆ ನೀಡುವ ಮಾಮೂಲು ಅನುದೇಶಗಳನ್ನು ಮಾತ್ರವೇ ಪ್ರಕಟಿಸುವ ಯಾವುದೇ ಕರಪತ್ರ , ಪ್ರಕಟಣ ಪತ್ರ ಅಥವಾ ಭಿತ್ರಿಪತ್ರಗಳನ್ನು ಒಳಗೊಳ್ಳುವುದಿಲ್ಲ.

(4) (1)ನೇ ಉಪಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**128. ಮತದಾನದ ರಹಸ್ಯವನ್ನು ಕಾಪಾಡುವುದು:–**

(1) ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಹಾಗೆ ಕಾಪಾಡುವಲ್ಲಿ ನೆರವಾಗತಕ್ಕದ್ದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸಲು ಉದ್ದೇಶಿಸುವ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ:

ಪರಂತು, ಈ ಉಪ ಪ್ರಕರಣದಲ್ಲಿನ ಉಪಬಂಧಗಳು ರಾಜ್ಯಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ತುಂಬುವುದಕ್ಕಾಗಿ ನಡೆಯುವ ಚುನಾವಣೆಯಲ್ಲಿನ ಯಾವುದೇ ಕರ್ತವ್ಯವನ್ನು ನಿರ್ವಹಿಸುವಂತಹ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಗೆ ಅನ್ವಯಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**129. ಅಧಿಕಾರಿಗಳು, ಮುಂತಾದವರು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಪರವಾಗಿ ಕಾರ್ಯ ನಿರ್ವಹಿಸ ಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಭೀರಕೂಡದು:–**

(1) ಜಿಲ್ಲಾ ಚುನಾವಣಾಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿ ಅಥವಾ ಮತದಾನ ಅಧಿಕಾರಿ ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯ ನಿರ್ವಹಿಸಲು ಚುನಾವಣಾಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯಿಂದ ನೇಮಕಗೊಂಡಿರುವ ಒಬ್ಬ ಅಧಿಕಾರಿ ಅಥವಾ ಗುಮಾಸ್ತನಾಗಿರುವ ಯಾವನೇ ವ್ಯಕ್ತಿಯು ಚುನಾವಣೆ ನಡೆಸುವಲ್ಲಿ ಅಥವಾ ಅವರ ವ್ಯವಸ್ಥೆಯಲ್ಲಿ ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ (ಮತ ನೀಡುವುದರ ಹೊರತಾಗಿ) ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ.

(2) ಮೇಲೆ ಹೇಳಲಾದಂಥ ಯಾವನೇ ವ್ಯಕ್ತಿಯು, ಮತ್ತು ಪೊಲೀಸ್ ಪಡೆಯ ಯಾವನೇ ಸದಸ್ಯನು –

(ಎ) ಚುನಾವಣೆಯಲ್ಲಿ ತನ್ನ ಮತವನ್ನು ನೀಡುವಂತೆ ಯಾವನೇ ವ್ಯಕ್ತಿಯನ್ನು ಪ್ರೇರೇಪಿಸಲು; ಅಥವಾ

(ಬಿ) ಚುನಾವಣೆಯಲ್ಲಿ ತನ್ನ ಮತವನ್ನು ನೀಡದಿರುವಂತೆ ಯಾವನೇ ವ್ಯಕ್ತಿಯನ್ನು ವಿಮುಖಗೊಳಿಸಲು; ಅಥವಾ

(ಸಿ) ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಿ ಯಾವನೇ ವ್ಯಕ್ತಿಯ ಮತದಾನದ ಮೇಲೆ ಪ್ರಭಾವ ಭೀರಲು – ಪ್ರಯತ್ನಿಸತಕ್ಕುದಲ್ಲ.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**130. ಮತದಾನಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಮತಕೋರಿಕೆಯ ನಿಷೇಧ :–**

(1) ಯಾವುವೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಂದು ಯಾವನೇ ವ್ಯಕ್ತಿಯು ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದ ಒಂದು ನೂರು ಮೀಟರ್ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಕೆಳಕಂಡ ಯಾವುದೇ ಕಾರ್ಯಗಳನ್ನು ಮಾಡತಕ್ಕುದಲ್ಲ, ಎಂದರೆ,–

(ಎ) ಮತಗಳ ಕೋರಿಕೆ; ಅಥವಾ

(ಬಿ) ಯಾವನೇ ಮತದಾರನ ಮತವನ್ನುಯಾಚಿಸುವುದು; ಅಥವಾ

(ಸಿ) ಯಾವನೇ ನಿರ್ದಿಷ್ಟ ಅಭ್ಯರ್ಥಿಗೆ ಮತನೀಡದಂತೆ ಯಾವನೇ ಮತದಾರನನ್ನು ಪ್ರೇರಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತನೀಡದಂತೆ ಯಾವನೇ ಮತದಾರನನ್ನು ಪ್ರೇರಿಸುವುದ ; ಅಥವಾ

(ಇ) ಚುನಾವಣೆಗೆ ಸಂಬಂಧಿಸಿದ (ಅಧಿಕೃತ ನೋಟೀಸಿನ ಹೊರತು) ಯಾವುದೇ ನೋಟೀಸು ಅಥವಾ ಚಿಹ್ನೆಯನ್ನು ಪ್ರದರ್ಶಿಸುವುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**131. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ:-**

(1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳಂದು ಯಾವನೇ ವ್ಯಕ್ತಿಯು,-

(ಎ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾನವ ಧ್ವನಿಯನ್ನು ವರ್ಧಿಸುವುದಕ್ಕಾಗಿ ಅಥವಾ ಪುನರುಚ್ಚರಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂತಹ ಯಾವುದೇ ಸಲಕರಣೆಯನ್ನು ಬಳಸತಕ್ಕುದಲ್ಲ ಅಥವಾ ನಡೆಸತಕ್ಕುದಲ್ಲ; ಅಥವಾ

(ಬಿ) ಮತದಾನಕ್ಕಾಗಿ ಮತಗಟ್ಟೆಗೆ ಬರುವ ಯಾರೇ ವ್ಯಕ್ತಿಗೆ ಕಿರುಕುಳವಾಗುವ ಹಾಗೆ ಅಥವಾ ಮತಗಟ್ಟೆಯಲ್ಲಿ ಕರ್ತವ್ಯದ ಮೇಲಿರುವ ಅಧಿಕಾರಿಗಳ ಅಥವಾ ಇತರ ವ್ಯಕ್ತಿಗಳ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುವ ಹಾಗೆ ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೂಗತಕ್ಕುದಲ್ಲ ಅಥವಾ ಅನ್ಯಥಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅಂಥ ಉಲ್ಲಂಘನೆಗೆ ಉದ್ದೇಶ ಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು ದುಷ್ಪ್ರೇರಣೆ ಮಾಡುವ ಯಾವನೇ ವ್ಯಕ್ತಿಯು, ಮೂರು ತಿಂಗಳ ವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಯಾವನೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿದ್ದಾನೆ ಅಥವಾ ಮಾಡಿದ್ದಾನೆ ಎಂದು ನಂಬಲು ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಯು ಕಾರಣವನ್ನು ಹೊಂದಿದ್ದರೆ ಅಂಥವ್ಯಕ್ತಿಯನ್ನು ದಸ್ತಗಿರಿ ಮಾಡಲು ಅವನು ಯಾವನೇ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅನಂತರ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದ್ದು.

(4) ಯಾವನೇ ಪೊಲೀಸ್ ಅಧಿಕಾರಿಯು (1)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವೆನಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂಥಬಲವನ್ನು ಉಪಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಬಳಸಿದ ಯಾವುದೇ ಸಲಕರಣೆಯನ್ನು ಅಭಿಗ್ರಹಿಸಬಹುದು.

**132. ಮತದಾನಕೇಂದ್ರದಲ್ಲಿ ದುರ್ನಡತೆಗಾಗಿ ದಂಡ:-**

(1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕೆ ನಿಗದಿಪಡಿಸಲಾದ ಸಮಯದಲ್ಲಿ ಸ್ವತಃ ದುರ್ವರ್ತಿಸುವ ಅಥವಾ ಪ್ರಿಸೈಡಿಂಗ್ ಅಧಿಕಾರಿಯ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ಯಾವನೇ ವ್ಯಕ್ತಿಯನ್ನು ಪ್ರಿಸೈಡಿಂಗ್ ಅಧಿಕಾರಿಯು ಅಥವಾ ಕರ್ತವ್ಯ ನಿರತ

ಯಾವನೇ ಪೊಲೀಸ್ ಅಧಿಕಾರಿಯು ಅಥವಾ ಈ ಬಗ್ಗೆ ಅಂಥ ಪ್ರಿಸೈಡಿಂಗ್ ಅಧಿಕಾರಿಯು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಹಾಕಬಹುದು.

(2) (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಮತದಾನ ಕೇಂದ್ರದಲ್ಲಿ ಮತದಾನ ಮಾಡಲು ಅನ್ಯಥಾ ಹಕ್ಕುಳ್ಳ ಯಾವನೇ ಮತದಾರನಿಗೆ ಆ ಕೇಂದ್ರದಲ್ಲಿ ಮತದಾನ ಮಾಡುವ ಅವಕಾಶವಿಲ್ಲದ ಹಾಗೆ ಅವನನ್ನು ತಡೆಗಟ್ಟುವಂತೆ ಚಲಾಯಿಸತಕ್ಕುದಲ್ಲ .

(3) ಒಂದು ಮತದಾನ ಕೇಂದ್ರದಿಂದ ಹಾಗೆ ಹೊರ ಹಾಕಲಾದ ಯಾವನೇ ವ್ಯಕ್ತಿಯು, ಪ್ರಿಸೈಡಿಂಗ್ ಅಧಿಕಾರಿಯ ಅನುಮತಿ ಇಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**132ಎ. ಮತದಾನದ ಪ್ರಕ್ರಿಯೆಯನ್ನು ಪಾಲಿಸದಿರುವುದಕ್ಕೆ ದಂಡ:–**

ಯಾವ ಮತದಾರನಿಗೆ ಮತಪತ್ರವನ್ನು ನೀಡಲಾಗಿದೆಯೋ ಆ ಯಾವನೇ ಮತದಾರನು ಮತದಾನಕ್ಕಾಗಿ ನಿಯಮಿಸಲಾಗಿರುವ ಪ್ರಕ್ರಿಯೆಯನ್ನು ಪಾಲಿಸಲು ನಿರಾಕರಿಸಿದರೆ, ಅವನಿಗೆ ನೀಡಿದ ಮತಪತ್ರವು ರದ್ದಿಯಾತಿಗೆ ಗುರಿಯಾಗತಕ್ಕದ್ದು.

**133. ಚುನಾವಣೆಗಳಲ್ಲಿ ವಾಹನಗಳನ್ನು ಕಾನೂನು ಬಾಹಿರವಾಗಿ ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಅಥವಾ ದೊರಕಿಸಿಕೊಳ್ಳುವುದಕ್ಕೆ ದಂಡ:–**

ಯಾರೇ ವ್ಯಕ್ತಿಯು ಚುನಾವಣೆಯಲ್ಲಿ ಅಥವಾ ಅದರ ಸಂಬಂಧದಲ್ಲಿ 123ನೇ ಪ್ರಕರಣದ (5)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವಂಥ ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು.

**134. ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲ್ಲಂಘನೆಗಳು :–**

(1) ಈ ಪ್ರಕರಣವು ಅನ್ವಯವಾಗುವ ಯಾವನೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ತನ್ನ ಪದೀಯ ಕರ್ತವ್ಯದ ಉಲ್ಲಂಘನೆಯಲ್ಲಿ ಯಾವುದೇ ಕಾರ್ಯ ಅಥವಾ ಲೋಪದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(1ಎ) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

(2) ಮೇಲೆ ಹೇಳಿರುವ ಯಾವುದೇ ಅಂಥಕೃತ್ಯ ಅಥವಾ ಲೋಪದ ಸಂಬಂಧದಲ್ಲಿ ಹಾನಿ ಪರಿಹಾರಕ್ಕಾಗಿ ಯಾವನೇ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ .

(3) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ ಜಿಲ್ಲಾ ಚುನಾವಣಾ ಅಧಿಕಾರಿಗಳು, ರಿಟರ್ನಿಂಗ್ ಅಧಿಕಾರಿಗಳು, ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ಪ್ರಿಸೈಡಿಂಗ್ ಅಧಿಕಾರಿಗಳು, ಮತದಾನ ಅಧಿಕಾರಿಗಳು ಮತ್ತು ನಾಮನಿರ್ದೇಶನ ಪತ್ರಗಳ ಸ್ವೀಕಾರ ಅಥವಾ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವುದು, ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಅಥವಾ ಎಣಿಕೆ ಮಾಡುವುದು ಇವುಗಳಿಗೆ ಸಂಬಂಧಿಸಿದಂತೆ

ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡಿರುವ ಯಾವನೇ ಇತರ ವ್ಯಕ್ತಿ; ಮತ್ತು "ಪದೀಯ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ತದನುಸಾರವಾಗಿ ಅರ್ಥೈಸತಕ್ಕದ್ದು, ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಕರ್ತವ್ಯಗಳನ್ನು ಒಳಗೊಂಡಿರತಕ್ಕುದಲ್ಲ.

**134ಎ. ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಎಂದು ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರಿಗೆ ದಂಡ:–**

ಸರ್ಕಾರದ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯ ಚುನಾವಣಾ ಏಜೆಂಟ್ ಅಥವಾ ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಎಂದು ಕಾರ್ಯ ನಿರ್ವಹಿಸಿದರೆ ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**134ಬಿ. ಮತದಾನ ಕೇಂದ್ರಕ್ಕೆ ಅಥವಾ ಅದರ ಸಮೀಪಕ್ಕೆ ಆಯುಧ ಸಮೇತ ಹೋಗುವುದರ ನಿಷೇಧ :–**

(1) ರಿಟರ್ನಿಂಗ್ ಅಧಿಕಾರಿ, ಪ್ರಿಸೈಡಿಂಗ್ ಆಫೀಸರ್, ಮತದಾನ ಕೇಂದ್ರದಲ್ಲಿ ಕರ್ತವ್ಯದ ಮೇಲಿರುವ ಯಾರೇ ಪೊಲೀಸ್ ಅಧಿಕಾರಿ ಅಥವಾ ಆ ಮತದಾನ ಕೇಂದ್ರದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ನೇಮಕಗೊಂಡ ಯಾರೇ ಇತರ ವ್ಯಕ್ತಿಯ ಹೊರತು ಯಾರೇ ಇತರ ವ್ಯಕ್ತಿಯು ಮತದಾನದ ದಿನದಂದು ಆಯುಧಗಳ ಅಧಿನಿಯಮ, 1959 (1959 ರ 54) – ಇದರಲ್ಲಿ ಪರಿಭಾಷಿಸಲಾದ ಯಾವುದೇ ವಿಧದ ಆಯುಧಗಳೊಂದಿಗೆ ಮತದಾನ ಕೇಂದ್ರದ ಸುತ್ತಮುತ್ತ ಹೋಗತಕ್ಕದ್ದಲ್ಲ .

(2) ಯಾರೇ ವ್ಯಕ್ತಿಯು (1)ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಆಯುಧಗಳ ಅಧಿನಿಯಮ, 1959 (1959 ರ54)ರಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ, ಸದರಿ ಅಧಿನಿಯಮದಲ್ಲಿ ಪರಿಭಾಷಿಸಲಾಗಿರುವ ಆಯುಧಗಳು ಅವನ ಸ್ವಾಧೀನದಲ್ಲಿರುವುದು ಕಂಡುಬಂದರೆ ಅವು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಅಂಥ ಆಯುಧಗಳಿಗೆ ಸಂಬಂಧಪಟ್ಟಂತೆ ನೀಡಲಾದ ಲೈಸೆನ್ಸನ್ನು ಆ ಅಧಿನಿಯಮದ 17ನೇ ಪ್ರಕರಣದ ಮೇರೆಗೆ ರದ್ದುಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(4) (2)ನೇ ಉಪ–ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**135. ಮತದಾನ ಕೇಂದ್ರದಿಂದ ಮತಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ :–**

(1) ಯಾವುದೇ ಚುನಾವಣೆಯಲ್ಲಿ ಮತದಾನ ಕೇಂದ್ರದಿಂದ ಮತಪತ್ರವನ್ನು ಅನಧಿಕೃತವಾಗಿ ತೆಗೆದುಕೊಂಡು ಹೋಗುವ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸುವ ಯಾವುದೇ ಅಂಥಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು ದುಷ್ಪ್ರೇರಣೆ ಮಾಡುವ ಯಾವನೇ ವ್ಯಕ್ತಿಯು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಮತದಾನಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಯಾವನೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವನ್ನು ಹೊಂದಿದ್ದರೆ, ಅಂಥ ಅಧಿಕಾರಿಯು, ಅಂಥವ್ಯಕ್ತಿಯು ಆ ಮತದಾನಕೇಂದ್ರವನ್ನು ಬಿಡುವ ಮೊದಲು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಅವನನ್ನು ಪೊಲೀಸ್ ಅಧಿಕಾರಿಯು ಶೋಧನೆ ಮಾಡುವಂತೆ ಮಾಡಬಹುದು: ಪರಂತು, ಒಬ್ಬ ಮಹಿಳೆಯನ್ನು ಶೋಧನೆ ಮಾಡುವುದು ಅವಶ್ಯವಿರುವಾಗ ಮತ್ತೊಬ್ಬ ಮಹಿಳೆಯಿಂದ ಶೋಧನೆಯನ್ನು ಕಟ್ಟುನಿಟ್ಟಾಗಿ ಸಭ್ಯತೆಯಿಂದ ನಡೆಸತಕ್ಕದ್ದು.

(3) ಶೋಧನೆಯ ಬಳಿಕ ದಸ್ತಗಿರಿಯಾದ ವ್ಯಕ್ತಿಯ ಬಳಿ ಕಂಡುಬಂದ ಯಾವುದೇ ಮತಪತ್ರವನ್ನು, ಪ್ರಿಸೈಡಿಂಗ್ ಅಧಿಕಾರಿಯು ಒಬ್ಬ ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿರುವಾಗ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**135ಎ. ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ :-**

(1) ಯಾವನೇ ವ್ಯಕ್ತಿಯು ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧವನ್ನು ಮಾಡಿದ್ದರೆ, ಅವನು ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ, ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಮತ್ತು ಅಂಥ ಅಪರಾಧವನ್ನು ಸರ್ಕಾರಿ ಸೇವೆಯಲ್ಲಿರುವ ಒಬ್ಬ ವ್ಯಕ್ತಿಯು ಮಾಡಿದರೆ, ಅವನು ಮೂರು ವರ್ಷಗಳಿಗೆ ಕಡಿಮೆ ಇಲ್ಲದ, ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**ವಿವರಣೆ** :– ಈ ಉಪಪ್ರಕರಣದ ಮತ್ತು 20ಬಿ ಪ್ರಕರಣದ ಉದ್ದೇಶಗಳಿಗಾಗಿ "ಮತಗಟ್ಟೆ ವಶಪಡಿಸಿಕೊಳ್ಳುವುದು" ಎಂಬುದು, ಇತರ ವಿಷಯಗಳ ಜೊತೆಗೆ, ಈ ಕೆಳಕಂಡ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ, ಎಂದರೆ:–

(ಎ) ಮತದಾನ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಿಟ್ಟುಕೊಡುವಂತೆ ಮಾಡಿ, ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಚುನಾವಣೆಗಳನ್ನು ಕ್ರಮಬದ್ಧವಾಗಿ ನಡೆಸುವುದರ ಮೇಲೆ ಪರಿಣಾಮ ಭೀರುವ ಯಾವುದೇ ಇತರ ಕಾರ್ಯ ಮಾಡುವುದು;

(ಬಿ) ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಸ್ವಂತ ಬೆಂಬಲಿಗರು ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸುವುದು ಮತ್ತು ಇತರರು ತಮ್ಮ ಮತದಾನದ ಹಕ್ಕನ್ನು ಮುಕ್ತವಾಗಿ ಚಲಾಯಿಸದಂತೆ ತಡೆಯುವುದು;

(ಸಿ) ಯಾವನೇ ಮತದಾರನನ್ನು ಬಲಪ್ರಯೋಗಿಸುವುದು ಅಥವಾ ಭಯ ಹುಟ್ಟಿಸುವುದು ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆದರಿಸುವುದು ಮತ್ತು ಅವನು ತನ್ನ ಮತ

ಚಲಾಯಿಸಲು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು;

(ಡಿ) ಎಣಿಕೆ ಪ್ರಾಧಿಕಾರಿಗಳು ಮತ ಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಿಟ್ಟು ಕೊಡುವಂತೆ ಮಾಡಿ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆಯ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಮತಗಳನ್ನು ಕ್ರಮಬದ್ಧವಾಗಿ ಎಣಿಸುವುದರ ಮೇಲೆ ಪರಿಣಾಮ ಬೀರುವ ಯಾವುದೇ ಕಾರ್ಯವನ್ನು ಮಾಡುವುದು;

(ಇ) ಸರ್ಕಾರಿ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು, ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯದ ಅಭಿವೃದ್ಧಿಗಾಗಿ ಮೇಲೆ ಹೇಳಿದ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಮಾಡುವುದು ಅಥವಾ ಯಾವುವೇ ಅಂಥ ಚಟುವಟಿಕೆಗೆ ನೆರವು ನೀಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

(2) (1) ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**135ಬಿ. ಮತದಾನದ ದಿನದಂದು ನೌಕರರಿಗೆ ಸಂಬಳ ಸಹಿತ ರಜೆ ನೀಡುವುದು :-**

(1) ಯಾವುದೇ ವ್ಯವಹಾರ, ವ್ಯಾಪಾರ, ಕೈಗಾರಿಕೋದ್ಯಮ ಅಥವಾ ಯಾವುದೇ ಇತರ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ ಮತ್ತು ಲೋಕಸಭೆಗೆ ಅಥವಾ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಮತಹಾಕಲು ಹಕ್ಕು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ ಮತದಾನದ ದಿನದಂದು ರಜೆ ನೀಡತಕ್ಕದ್ದು.

(2) (1) ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ ಒಂದು ದಿನದ ರಜೆಯನ್ನು ಮಂಜೂರು ಮಾಡಿರುವ ಕಾರಣ ಅಂಥ ಯಾರೇ ವ್ಯಕ್ತಿಯ ಮಜೂರಿಯಲ್ಲಿ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ ಅಥವಾ ಅದನ್ನು ನಿಲ್ಲಿಸತಕ್ಕದ್ದಲ್ಲ ಮತ್ತು ಅಂಥ ದಿನಕ್ಕಾಗಿ ಅವನು ಸಾಮಾನ್ಯವಾಗಿ ಮಜೂರಿ ಪಡೆಯುವುದಿಲ್ಲ ಎಂಬ ಆಧಾರದ ಮೇಲೆ ಅಂಥ ವ್ಯಕ್ತಿಯನ್ನು ನಿಯೋಜಿಸಿಕೊಂಡಿದ್ದಾಗ್ಯೂ, ಅವನಿಗೆ ಆ ದಿವಸ ಒಂದು ದಿನದ ರಜೆಯನ್ನು ಮಂಜೂರು ಮಾಡಿರದಿದ್ದರೆ ಅವನು ಪಡೆಯಬಹುದಾಗಿದ್ದ ಮಜೂರಿಯನ್ನು ಅವನಿಗೆ ಸಂದಾಯ ಮಾಡತಕ್ಕದ್ದು .

(3) ನಿಯೋಜಕನು (1) ನೇ ಉಪ-ಪ್ರಕರಣದ ಅಥವಾ (2) ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅಂಥ ನಿಯೋಜಕನು ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(4) ಮತದಾರನು ನಿರತನಾಗಿರುವಂಥ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಅವನ ಗೈರು ಹಾಜರಿಯಿಂದ ಅಪಾಯ ಅಥವಾ ಗಣನೀಯ ನಷ್ಟ ಉಂಟಾಗುವ ಸಂಭವವಿದ್ದರೆ ಅಂಥ ಯಾರೇ ಮತದಾರನಿಗೆ ಈ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.

**135ಸಿ. ಮತದಾನದ ದಿನದಂದು ಮದ್ಯವನ್ನು ಮಾರಾಟ ಮಾಡದಿರುವುದು, ನೀಡದಿರುವುದು ಅಥವಾ ವಿತರಿಸದಿರುವುದು :-**

(1) ಯಾವುದೇ ಮದ್ಯಸಾರಯುಕ್ತವಾದ, ಹುಳಿ ಹಿಡಿಸಿದ ಅಥವಾ ಮಾದಕ ಪಾನೀಯಗಳನ್ನು ಅಥವಾ ಅಂಥದೇ ಸ್ವರೂಪದ ಇತರ ದ್ರವ್ಯಗಳನ್ನು ಮತದಾನ ಪ್ರದೇಶದಲ್ಲಿನ ಯಾವುದೇ ಚುನಾವಣೆಗಾಗಿ ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯವು ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಆ ಮತದಾನ ಪ್ರದೇಶದಲ್ಲಿನ ಹೋಟೆಲು, ಆಹಾರಸೇವನಾ ಗೃಹಗಳು, ತಿಂಡಿ ತೀರ್ಥದ ಅಂಗಡಿ ಅಥವಾ ಯಾವುದೇ ಇತರ

ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾರಾಟ ಮಾಡತಕ್ಕದ್ದಲ್ಲ, ನೀಡತಕ್ಕದ್ದಲ್ಲ ಅಥವಾ ವಿತರಿಸತಕ್ಕದ್ದಲ್ಲ .

(2) (1) ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡುಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು .

(3) ಒಬ್ಬ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ನಿರ್ಣೀತ ಅಪರಾಧಿಯಾಗಿರುವಲ್ಲಿ, ಅವನ ಸ್ವಾಧೀನದಲ್ಲಿ ಕಂಡುಬಂದ ಮದ್ಯಸಾರಯುಕ್ತವಾದ, ಹುಳಿ ಬರಿಸಿದ ಅಥವಾ ಮಾದಕ ಪಾನೀಯಗಳು ಅಥವಾ ಅಂಥದ್ದೇ ಸ್ವರೂಪದ ಇತರ ದ್ರವ್ಯಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಅವುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೆಮಾಡತಕ್ಕದ್ದು.

**136. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು :-**

(1) ಯಾವುದೇ ಚುನಾವಣೆಯಲ್ಲಿ ಒಬ್ಬ ವ್ಯಕ್ತಿಯು,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ಒಬ್ಬ ರಿಟರ್ನಿಂಗ್ ಅಧಿಕಾರಿಯು ಪ್ರಾಧಿಕಾರದ ಮೂಲಕ ಅಥವಾ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ನೋಟೀಸು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ ಮತಪತ್ರ ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತಚಿಹ್ನೆ ಅಥವಾ ಗುರುತಿನ ಯಾವುದೇ ಘೋಷಣೆ ಅಥವಾ ಅಂಚೆ ಮತ ಪತ್ರದ ಮೂಲಕ ಮತದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಉಪಯೋಗಿಸಿರುವ ಅಧಿಕೃತ ಲಕೋಟೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಡಿ) ಯುಕ್ತ ಪ್ರಾಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಯಿಂದ ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೆ ; ಅಥವಾ

(ಇ) ಕಾನೂನಿನ ಮೂಲಕ ತಾನು ಹಾಗೆ ಹಾಕಲು ಅಧಿಕೃತನಾಗಿರುವ ಮತ ಪತ್ರವನ್ನು ಹೊರತುಪಡಿಸಿ ಇತರ ಯಾವುದೇ ವಸ್ತುವನ್ನು ಯಾವುದೇ ಮತಪೆಟ್ಟಿಗೆಯಲ್ಲಿ ಮೋಸದಿಂದ ಹಾಕಿದರೆ; ಅಥವಾ

(ಎಫ್) ಚುನಾವಣಾ ಉದ್ದೇಶಗಳಿಗಾಗಿ ಆಗ ಬಳಕೆಯಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ಯುಕ್ತ ಪ್ರಾಧಿಕಾರವಿಲ್ಲದೆ ನಾಶಪಡಿಸಿದರೆ, ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ ಮೋಸದಿಂದ ಅಥವಾ ಯುಕ್ತ ಪ್ರಾಧಿಕಾರವಿಲ್ಲದೆ ಮೇಲೆ ಹೇಳಿದ ಯಾವುದೇ ಕೃತ್ಯಗಳನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುವೇ ಅಂಥ ಕೃತ್ಯಗಳನ್ನು ಮಾಡಲು ಉದ್ದೇಶ ಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ಅದನ್ನು ದುಷ್ಪ್ರೇರಿಸಿದರೆ - ಅವನು ಚುನಾವಣಾ ಅಪರಾಧದ ಬಗ್ಗೆ ತಪ್ಪಿತಸ್ಥನಾಗತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಚುನಾವಣಾ ಅಪರಾಧದ ಬಗ್ಗೆ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು,-

(ಎ) ಮತದಾನಕೇಂದ್ರದಲ್ಲಿ ರಿಟರ್ನಿಂಗ್ ಅಧಿಕಾರಿ, ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿ ಅಥವಾ ಚುನಾವಣೆಗೆ ಸಂಬಂಧಿಸಿದ ಪದೀಯ ಕರ್ತವ್ಯದ

ಮೇಲೆ ನಿಯೋಜಿತನಾಗಿರುವ ಯಾವನೇ ಇತರ ಅಧಿಕಾರಿ ಅಥವಾ ಗುಮಾಸ್ತನಾಗಿದ್ದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ;

(ಬಿ) ಯಾವನೇ ಇತರ ವ್ಯಕ್ತಿಯಾಗಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ ಮತಗಳ ಎಣಿಕೆಯೂ ಸೇರಿದಂತೆ ಚುನಾವಣೆ ನಡೆಸುವುದರಲ್ಲಿ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಭಾಗವಹಿಸುವುದು ಒಬ್ಬ ವ್ಯಕ್ತಿಯ ಕರ್ತವ್ಯವಾಗಿದ್ದರೆ, ಅವನು ಪದೀಯ ಕರ್ತವ್ಯದ ಮೇಲಿರುವನೆಂದು ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಪಯೋಗಿಸಿದ್ದ ಮತಪತ್ರಗಳು ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯ ಜವಾಬ್ದಾರನಾಗಿರುವನೆಂದು ಭಾವಿಸತಕ್ಕದ್ದು, ಆದರೆ "ಪದೀಯ ಕರ್ತವ್ಯ" ಎಂಬ ಪದಾವಳಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಯಾವುದೇ ಕರ್ತವ್ಯವನ್ನು ಒಳಗೊಂಡಿರತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಸಂಸತ್ತಿನ ಅಧಿನಿಯಮಗಳು**
**ಭಾರತ ದಂಡ ಸಂಹಿತೆಯ ಉದ್ಧೃತ ಭಾಗಗಳು**
**(1860ರ 45ನೇ ಅಧಿನಿಯಮ)**

**153.ಎ ವಿವಿಧ ಗುಂಪುಗಳ ಮಧ್ಯೆ, ಮತ್ತು ಮೂಲವಂಶ, ಜನ್ಮಸ್ಥಳ, ನಿವಾಸ, ಭಾಷೆ, ಇತ್ಯಾದಿಗಳ ಆಧಾರದ ಮೇಲೆ ದ್ವೇಷವನ್ನು ಉಂಟು ಮಾಡುವುದು ಮತ್ತು ಸೌಹಾರ್ದತೆಗೆ ಬಾಧಕವಾಗುವ ಕೃತ್ಯಗಳನ್ನು ಮಾಡುವುದು:**

**(1)** ಯಾರೇ ವ್ಯಕ್ತಿಯು–

(ಎ) ಆಡಿದ ಮಾತುಗಳಿಂದ ಇಲ್ಲವೆ ಬರೆದ ಶಬ್ದಗಳಿಂದ ಅಥವಾ ಸಂಜ್ಞೆಗಳಿಂದ ಅಥವಾ ದೃಶ್ಯ ನಿರೂಪಣೆಗಳಿಂದ ಅಥವಾ ಬೇರೆ ರೀತಿಯಲ್ಲಿ ಮತ, ಮೂಲವಂಶ, ಜನ್ಮಸ್ಥಳ, ನಿವಾಸ, ಭಾಷೆ, ಜಾತಿ ಅಥವಾ ಕೋಮು ಅಥವಾ ಇತರ ಯಾವುದೇ ಆಧಾರದ ಮೇಲೆ ವಿವಿಧ ಮತೀಯ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪುಗಳ ನಡುವೆ ಅಥವಾ ಜಾತಿಗಳ ಅಥವಾ ಕೋಮುಗಳ ನಡುವೆ ಅಸೌಹಾರ್ದವನ್ನು ಅಥವಾ ವೈರ, ದ್ವೇಷ ಅಥವಾ ವೈಮನಸ್ಯದ ಭಾವನೆಗಳನ್ನು ಹೆಚ್ಚಿಸಿದರೆ ಅಥವಾ ಹೆಚ್ಚಿಸಲು ಪ್ರಯತ್ನಿಸಿದರೆ: ಅಥವಾ

(ಬಿ) ವಿವಿಧ ಮತೀಯ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪುಗಳ ನಡುವಣ ಅಥವಾ ಜಾತಿ ಅಥವಾ ಕೋಮುಗಳ ನಡುವಣ ಸೌಹಾರ್ದಕ್ಕೆ ಬಾಧಕವಾಗುವ ಯಾವುದೇ ಕೃತ್ಯವನ್ನು ಮಾಡಿದರೆ, ಮತ್ತು ಅದರಿಂದ ಸಾರ್ವಜನಿಕ ನೆಮ್ಮದಿಯು ಕದಡಿದರೆ ಅಥವಾ ಕದಡುವ ಸಂಭವವಿದ್ದರೆ; ಅಥವಾ

(ಸಿ) ಯಾವುದೇ ಅಂಗಸಾಧನೆಯನ್ನು, ಚಲನವಲನವನ್ನು ಅಥವಾ ಕವಾಯತನ್ನು ಅಥವಾ ಅಂಥದೇ ಇತರ ಚಟುವಟಿಕೆಯನ್ನು, ಅಂಥ ಚಟುವಟಿಕೆಯಲ್ಲಿ ಭಾಗವಹಿಸುವವರು ಯಾವುದೇ ಮತೀಯ, ಮೂಲ ವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪಿನ ವಿರುದ್ಧ ಅಥವಾ ಜಾತಿಯ ಅಥವಾ ಕೋಮಿನ ವಿರುದ್ಧ ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸತಕ್ಕದ್ದು ಅಥವಾ ಪ್ರಯೋಗಿಸಲು ತರಬೇತಿ ಪಡೆಯತಕ್ಕದ್ದು ಎಂಬ ಉದ್ದೇಶದಿಂದ ಅಥವಾ ಅಂಥ ಚಟುವಟಿಕೆಯಲ್ಲಿ ಭಾಗವಹಿಸುವವರು ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸುವ ಅಥವಾ ಪ್ರಯೋಗಿಸಲು ತರಬೇತಿ ಪಡೆಯುವ ಸಂಭವವಿದೆಯೆಂದು ತಿಳಿದೂ ಸಂಘಟಿಸಿದರೆ ಅಥವಾ ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸುವ ಉದ್ದೇಶದಿಂದ ಅಂಥ ಚಟುವಟಿಕೆಗಳಲ್ಲಿ ಭಾಗವಹಿಸುವವರು ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸುವ ಸಂಭವವಿದೆಯೆಂದು ತಿಳಿದೂ ಅಂಥ ಚಟುವಟಿಕೆಯಲ್ಲಿ ಭಾಗವಹಿಸಿದರೆ ಮತ್ತು ಅಂಥ ಚಟುವಟಿಕೆಯು ಯಾವುದೇ ಕಾರಣಕ್ಕಾಗಿ, ಅಂಥ ಮತೀಯ, ಮೂಲವಂಶೀಯ, ಭಾಷೀಕ ಅಥವಾ ಪ್ರಾದೇಶಿಕ ಗುಂಪಿನವರಲ್ಲಿ ಅಥವಾ ಜಾತಿ ಅಥವಾ ಕೋಮಿನ ಜನರಲ್ಲಿ ಭಯವನ್ನು ಅಥವಾ ಗಾಬರಿಯನ್ನು ಅಥವಾ ಅಭದ್ರತೆಯ ಭಾವನೆಯನ್ನು ಉಂಟು ಮಾಡಿದರೆ ಅಥವಾ ಉಂಟು ಮಾಡುವ ಸಂಭವಿದ್ದರೆ, ಅವನು ಮೂರು ವರ್ಷಗಳ ಅವಧಿಯವರೆಗಿನ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ಪೂಜಾಸ್ಥಳ ಮುಂತಾದ ಎಡೆಗಳಲ್ಲಿ ಮಾಡಲಾದ ಅಪರಾಧ:–**

(2) ಯಾರೇ ವ್ಯಕ್ತಿಯು ಯಾವುದೇ ಪೂಜಾಸ್ಥಳದಲ್ಲಿ ಅಥವಾ ಮತೀಯ ಪೂಜೆಯನ್ನು ಅಥವಾ ಮತೀಯ ಕರ್ಮಗಳನ್ನು ನಡೆಸುವುದರಲ್ಲಿ ನಿರತವಾದ ಯಾವುದೇ ಕೂಟದಲ್ಲಿ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧವನ್ನು ಮಾಡಿದರೆ, ಅವನು ಐದು ವರ್ಷಗಳ ಅವಧಿಯವರೆಗಿನ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು.

**153ಬಿ. ರಾಷ್ಟ್ರೀಯ ಸಮಗ್ರತೆಗೆ ಬಾಧಕವಾಗುವ ಆರೋಪಣೆಗಳು, ಒತ್ತು ಹೇಳಿಕೆಗಳು:–**

(1) ಯಾರೇ ವ್ಯಕ್ತಿಯು, ಆಡಿದ ಮಾತು ಅಥವಾ ಬರೆದ ಶಬ್ದಗಳಿಂದ ಅಥವಾ ಸಂಜ್ಞೆಗಳಿಂದ ಅಥವಾ ದೃಶ್ಯ ನಿರೂಪಣೆಗಳಿಂದ ಅಥವಾ ಬೇರೆ ರೀತಿಯಲ್ಲಿ,–––

(ಎ) ಯಾರೇ ವ್ಯಕ್ತಿಗಳ ವರ್ಗವು, ಯಾವುದೇ ಮತೀಯ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪಿಗೆ ಅಥವಾ ಜಾತಿಗೆ ಅಥವಾ ಕೋಮಿಗೆ ಸೇರಿರುವ ಕಾರಣದಿಂದ ವಿಧಿ ಪ್ರಕಾರ ಸ್ಥಾಪಿಸಲಾದ ಭಾರತ ಸಂವಿಧಾನದ ಬಗ್ಗೆ ನಿಜವಾದ ಶ್ರದ್ಧೆಯನ್ನು ಮತ್ತು ನಿಷ್ಠೆಯನ್ನು ಹೊಂದಿರಲಾರದು ಎಂದಾಗಲಿ ಅಥವಾ ಭಾರತ ಸಾರ್ವಭೌಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ರಕ್ಷಿಸಲಾರದು ಎಂದಾಗಲಿ ಯಾವುದೇ ಆರೋಪಣೆಯನ್ನು ಮಾಡಿದರೆ ಅಥವಾ ಪ್ರಕಟಿಸಿದರೆ; ಅಥವಾ

(ಬಿ) ಯಾವುದೇ ವ್ಯಕ್ತಿಗಳ ವರ್ಗವು ಯಾವುದೇ ಮತೀಯ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪಿಗೆ ಅಥವಾ ಜಾತಿಗೆ ಅಥವಾ ಕೋಮಿಗೆ ಸೇರಿರುವ ಕಾರಣದಿಂದ ಭಾರತದ ನಾಗರಿಕರಾಗಿ ಅವರಿಗಿರುವ ಅಧಿಕಾರಗಳನ್ನು ನಿರಾಕರಿಸತಕ್ಕದ್ದು ಅಥವಾ ಅಂಥ ಅಧಿಕಾರಗಳನ್ನು ತಪ್ಪಿಸತಕ್ಕುದೆಂದು ಒತ್ತಿ ಹೇಳಿದರೆ, ಸಲಹೆ ಕೊಟ್ಟರೆ, ಉಪದೇಶಿಸಿದರೆ, ಪ್ರಚಾರ ನಡೆಸಿದರೆ ಅಥವಾ ಪ್ರಕಟಿಸಿದರೆ: ಅಥವಾ

(ಸಿ) ಯಾರೇ ವ್ಯಕ್ತಿಗಳ ವರ್ಗವು, ಯಾವುದೇ ಮತೀಯ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪಿಗೆ ಅಥವಾ ಜಾತಿಗೆ ಅಥವಾ ಕೋಮಿಗೆ ಸೇರಿರುವ ಕಾರಣದಿಂದ ಅವರ ಬಾಧ್ಯತೆಗೆ ಸಂಬಂಧಿಸಿ ಯಾವುದೇ ಒತ್ತು ಹೇಳಿಕೆ, ಸಲಹೆ, ವಾದ ಅಥವಾ ವಿನಂತಿಯನ್ನು ಮಾಡಿದರೆ ಅಥವಾ ಪ್ರಕಟಿಸಿದರೆ, ಅಂಥ ಒತ್ತು, ಹೇಳಿಕೆ, ಸಲಹೆ, ವಾದ ಅಥವಾ ವಿನಂತಿಯು ಅಂಥ ಸದಸ್ಯರ ಮತ್ತು ಇತರ ವ್ಯಕ್ತಿಗಳ ಮಧ್ಯೆ ಅಸೌಹಾರ್ದವನ್ನು ಅಥವಾ ವೈರ ಅಥವಾ ದ್ವೇಷ ಅಥವಾ ವೈಮನಸ್ಯದ ಭಾವನೆಗಳನ್ನು ಉಂಟು ಮಾಡಿದರೆ ಅಥವಾ ಉಂಟು ಮಾಡುವ ಸಂಭವಿದ್ದರೆ;

–ಅವನು ಮೂರು ವರ್ಷಗಳ ಅವಧಿಯ ವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಮತೀಯ ಪೂಜೆಯನ್ನು ಅಥವಾ ಮತೀಯ ಕರ್ಮಗಳನ್ನು ನಡೆಸುವುದರಲ್ಲಿ ನಿರತವಾದ ಯಾವುದೇ ಕೂಟದಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧವನ್ನು ಮಾಡಿದರೆ, ಅವನು ಐದು ವರ್ಷಗಳ ಅವಧಿಯ ವರೆಗಿನ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು.

## ಚುನಾವಣೆಗಳಿಗೆ ಸಂಬಂಧಿಸಿದ ಅಪರಾಧಗಳನ್ನು ಕುರಿತು

**171ಎ. "ಅಭ್ಯರ್ಥಿ", "ಚುನಾವಣಾಧಿಕಾರ" ಎಂಬ ಪದಗಳ ಪರಿಭಾಷೆ:–**

ಈ ಅಧ್ಯಾಯದ ಉದ್ದೇಶಗಳಿಗಾಗಿ–

(ಎ) "ಅಭ್ಯರ್ಥಿ" ಎಂದರೆ ಯಾವುದೇ ಚುನಾವಣೆಗೆ ಅಭ್ಯರ್ಥಿಯಾಗಿ ನಾಮ ನಿರ್ದೇಶಿತನಾದ ವ್ಯಕ್ತಿ;

(ಬಿ) "ಚುನಾವಣಾಧಿಕಾರ" ಎಂದರೆ ಯಾವುದೇ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅಥವಾ ಸ್ಪರ್ಧಿಸದಿರಲು, ಅಥವಾ ತನ್ನ ಅಭ್ಯರ್ಥನೆಯನ್ನು ವಾಪಸ್ಸು ಪಡೆಯಲು ಅಥವಾ ಚುನಾವಣೆಯಲ್ಲಿ ಮತದಾನ ಮಾಡಲು ಅಥವಾ ಮಾಡದೆ ಇರಲು ಒಬ್ಬ ವ್ಯಕ್ತಿಗೆ ಇರುವ ಅಧಿಕಾರ.

**171ಬಿ ಲಂಚಗುಳಿತನ :–**

(1) ಯಾರೇ ವ್ಯಕ್ತಿಯು–

(i) ಯಾರೇ ವ್ಯಕ್ತಿಗೆ, ಆ ವ್ಯಕ್ತಿಗೆ ಅಥವಾ ಇತರ ಯಾವನೇ ವ್ಯಕ್ತಿಗೆ ಇರುವ ಚುನಾವಣೆಗೆ ಸಂಬಂಧಿಸಿದ ಅಧಿಕಾರವನ್ನು ಚಲಾಯಿಸುವಂತೆ ಪ್ರೇರಿಸಲು ಪರಿತೋಷವನ್ನು ಕೊಟ್ಟರೆ ಅಥವಾ ಅಂಥ ಯಾವುದೇ ಅಧಿಕಾರವನ್ನು ಚಲಾಯಿಸಿದ್ದಕ್ಕಾಗಿ ಬಹುಮಾನ ಕೊಟ್ಟರೆ; ಅಥವಾ

(ii) ಅಂಥ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಅಂಥ ಯಾವುದೇ ಅಧಿಕಾರವನ್ನು ಚಲಾಯಿಸುವಂತೆ ಇತರ ಯಾವನೇ ವ್ಯಕ್ತಿಯನ್ನು ಪ್ರೇರಿಸಲು ಅಥವಾ ಪ್ರೇರಿಸುವುದಕ್ಕಾಗಿ ಪ್ರಯತ್ನಿಸಲು ತನಗಾಗಿ ಅಥವಾ ಇತರ ಯಾವನೇ ವ್ಯಕ್ತಿಗಾಗಿ ಬಹುಮಾನವೆಂದು ಯಾವುದೇ ಪರಿತೋಷವನ್ನು ಸ್ವೀಕರಿಸಿದರೆ,ಅವನು ಲಂಚಗುಳಿತನದ ಅಪರಾಧ ಮಾಡಿದಂತಾಗುತ್ತದೆ:

ಪರಂತು, ಸಾರ್ವಜನಿಕ ಕಾರ್ಯ ನೀತಿಗೆ ಅಥವಾ ಸಾರ್ವಜನಿಕ ಕ್ರಮದ ಆಶ್ವಾಸನೆಗೆ ಸಂಬಂಧಿಸಿದ ಘೋಷಣೆಯು ಈ ಪ್ರಕರಣದ ಮೇರೆಗೆ ಅಪರಾಧವಾಗತಕ್ಕುದಲ್ಲ.

ಯಾರೇ ವ್ಯಕ್ತಿಯು ಪರಿತೋಷವನ್ನು ಕೊಡುವುದಾಗಿ ಹೇಳಿದರೆ ಅಥವಾ ಕೊಡಲು ಒಪ್ಪಿದರೆ ಅಥವಾ ದೊರಕಿಸಿಕೊಡುವುದಾಗಿ ಹೇಳಿದರೆ ಅಥವಾ ದೊರಕಿಸಿಕೊಡಲು ಪ್ರಯತ್ನಿಸಿದರೆ ಅವನು ಪರಿತೋಷವನ್ನು ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

(2) ಯಾವನೇ ವ್ಯಕ್ತಿಯು ಪರಿತೋಷವನ್ನು ಪಡೆದರೆ ಅಥವಾ ಸ್ವೀಕರಿಸಲು ಒಪ್ಪಿದರೆ ಅಥವಾ ಪಡೆಯಲು ಪ್ರಯತ್ನಿಸಿದರೆ, ಅವನು ಪರಿತೋಷವನ್ನು ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು.

(3) ಒಬ್ಬ ವ್ಯಕ್ತಿಯು ತಾನು ಮಾಡಲು ಉದ್ದೇಶಿಸಿರದ ಒಂದು ಕೃತ್ಯವನ್ನು ಮಾಡುವುದಕ್ಕಾಗಿ ಹೇತುವಾಗಿ ಅಥವಾ ತಾನು ಮಾಡದಿರುವ ಕೃತ್ಯವನ್ನು ಮಾಡಲು ಬಹುಮಾನವಾಗಿ ಪರಿತೋಷವನ್ನು ಸ್ವೀಕರಿಸಿದರೆ ಅವನು ಆ ಪರಿತೋಷವನ್ನು ಬಹುಮಾನವೆಂದು ಸ್ವೀಕರಿಸಿರುವುದಾಗಿ ಭಾವಿಸತಕ್ಕದು.

**171ಸಿ. ಚುನಾವಣೆಯಲ್ಲಿ ಅನುಚಿತ ಪ್ರಭಾವ:–**

(1) ಯಾವನೇ ವ್ಯಕ್ತಿಯು ಚುನಾವಣೆಗೆ ಸಂಬಂಧಿಸಿದ ಯಾವುದೇ ಅಧಿಕಾರವನ್ನು ಅನಿರ್ಬಂಧವಾಗಿ ಚಲಾಯಿಸಲು ಸ್ವಯಿಚ್ಛೆಯಿಂದ ಅಡ್ಡಿಪಡಿಸಿದರೆ ಅಥವಾ ಅಡ್ಡಿಪಡಿಸಲು ಪ್ರಯತ್ನಿಸಿದರೆ, ಅವನು ಚುನಾವಣೆಯಲ್ಲಿ ಅನುಚಿತ ಪ್ರಭಾವ ಭೀರಿದ ಅಪರಾಧ ಮಾಡುತ್ತಾನೆ.

(2) (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲವಾಗದಂತೆ ಯಾವನೇ ವ್ಯಕ್ತಿಯು,–

(ಎ) ಯಾವನೇ ಅಭ್ಯರ್ಥಿಗೆ ಅಥವಾ ಮತದಾರನಿಗೆ, ಅಥವಾ ಯಾವನಲ್ಲಿ ಅಭ್ಯರ್ಥಿಯು ಅಥವಾ ಮತದಾರನು ಆಸಕ್ತನಾಗಿರುವನೋ ಆ ವ್ಯಕ್ತಿಗೆ ಯಾವುದೇ ಬಗೆಯ ಕ್ಷತಿಯುಂಟು ಮಾಡುವ ಬೆದರಿಕೆ ಹಾಕಿದರೆ, ಅಥವಾ

(ಬಿ) ಒಬ್ಬ ಅಭ್ಯರ್ಥಿಗೆ ಅಥವಾ ಮತದಾರನಿಗೆ, ಅವನು ಅಥವಾ ಅವನು ಯಾರಲ್ಲಿ ಆಸಕ್ತನಾಗಿರುವನೋ ಆ ವ್ಯಕ್ತಿಯು ದೈವಾಗ್ರಹಕ್ಕೆ ಅಥವಾ ದೈವಿಕ ಆಕ್ಷೇಪಕ್ಕೆ ಗುರಿಯಾಗುವನು ಅಥವಾ ಗುರಿಪಡಿಸುವಂತೆ ಮಾಡಲಾಗುವುದು ಎಂದು ನಂಬುವಂತೆ ಪ್ರೇರಿಸಿದರೆ ಅಥವಾ ಪ್ರೇರಿಸಲು ಪ್ರಯತ್ನಿಸಿದರೆ, ಅವನು ಈ ಉಪಪ್ರಕರಣದ ಅರ್ಥದಲ್ಲಿ ಚುನಾವಣಾಧಿಕಾರದ ಅನಿರ್ಬಂಧ ಚಲಾವಣೆಗೆ ಅಡ್ಡಿಪಡಿಸುವನೆಂದು ಭಾವಿಸತಕ್ಕದ್ದು.

(3) ಸಾರ್ವಜನಿಕ ಕಾರ್ಯನೀತಿಗೆ ಅಥವಾ ಸಾರ್ವಜನಿಕ ಕ್ರಮಕ್ಕೆ ಸಂಬಂಧಿಸಿದ ಘೋಷಣೆಯು ಅಥವಾ ಚುನಾವಣಾಧಿಕಾರಕ್ಕೆ ಅಡ್ಡಿಪಡಿಸುವ ಉದ್ದೇಶವಿಲ್ಲದ ಕಾನೂನು ಸಮ್ಮತ ಅಧಿಕಾರವನ್ನು ಮಾತ್ರ ಚಲಾಯಿಸುವುದು, ಈ ಪ್ರಕರಣದ ಅರ್ಥದಲ್ಲಿ ಅಡ್ಡಿ ಎಂದು ಭಾವಿಸತಕ್ಕದ್ದಲ್ಲ.

**171 ಡಿ. ಚುನಾವಣೆಗಳಲ್ಲಿ ಇನ್ನೊಬ್ಬನಂತೆ ನಟಿಸುವುದು:–**

ಯಾವನೇ ವ್ಯಕ್ತಿಯು ಒಂದು ಚುನಾವಣೆಯಲ್ಲಿ ಯಾವನೇ ಜೀವಂತ ಅಥವಾ ಮೃತ ವ್ಯಕ್ತಿಯ ಹೆಸರಿನಲ್ಲಿ ಅಥವಾ ಯಾವುದೇ ಕಾಲ್ಪನಿಕ ಹೆಸರಿನಲ್ಲಿ ಮತ ಪತ್ರಕ್ಕಾಗಿ ಆವೇದಿಸಿಕೊಂಡರೆ ಅಥವಾ ಮತದಾನ ಮಾಡಿದರೆ ಅಥವಾ ಅಂಥ ಚುನಾವಣೆಯಲ್ಲಿ ಮತದಾನ ಮಾಡಿದ ತರುವಾಯ ತನ್ನ ಹೆಸರಿನಲ್ಲಿ ಅದೇ ಚುನಾವಣೆಯಲ್ಲಿ ಮತಪತ್ರಕ್ಕಾಗಿ ಆವೇದಿಸಿಕೊಂಡರೆ ಅವನು ಮತ್ತು ಅಂಥ ಯಾವುದೇ ರೀತಿಯಲ್ಲಿ ಯಾವನೇ ವ್ಯಕ್ತಿಯನ್ನು ಮತದಾನ ಮಾಡಲು ದುಷ್ಪ್ರೇರಿಸುವ, ಮತದಾನ ಮಾಡಿಸುವ ಅಥವಾ ಮಾಡಿಸಲು ಪ್ರಯತ್ನಿಸುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಇನ್ನೊಬ್ಬನಂತೆ ನಟಿಸುವ ಅಪರಾಧವನ್ನು ಮಾಡುತ್ತಾನೆ.

**171 ಇ. ಲಂಚಗುಳಿತನಕ್ಕೆ ದಂಡನೆ:–**

ಯಾವನೇ ವ್ಯಕ್ತಿಯು ಲಂಚ ಗುಳಿತನ ಅಪರಾಧವನ್ನು ಮಾಡಿದರೆ ಅವನು ಒಂದು ವರ್ಷದರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಸತ್ಕಾರದ ಮೂಲಕವಾದ ಲಂಚಗುಳಿತನಕ್ಕೆ ಜುಲ್ಮಾನೆಯನ್ನು ಮಾತ್ರ ವಿಧಿಸತಕ್ಕದ್ದು.

**ವಿವರಣೆ–'ಸತ್ಕಾರ'** ಎಂದರೆ, ಊಟ, ಪಾನೀಯ, ಮನೋರಂಜನೆ ಅಥವಾ ಸೌಕರ್ಯಗಳ ಏರ್ಪಾಟನ್ನು ಒಳಗೊಂಡ ಪರಿತೋಷದ ರೂಪದಲ್ಲಿರುವ ಲಂಚ.

**171 ಎಫ್. ಚುನಾವಣೆಯಲ್ಲಿ ಅನುಚಿತ ಪ್ರಭಾವ ಬೀರುವುದಕ್ಕೆ ಅಥವಾ ಇನ್ನೊಬ್ಬನಂತೆ ನಟಿಸುವುದಕ್ಕೆ ದಂಡನೆ:–**

ಯಾವನೇ ವ್ಯಕ್ತಿಯು ಒಂದು ಚುನಾವಣೆಯಲ್ಲಿ ಅನುಚಿತ ಪ್ರಭಾವವನ್ನು ಬೀರುವ ಅಥವಾ ಇನ್ನೊಬ್ಬನಂತೆ ನಟಿಸುವ ಅಪರಾಧವನ್ನು ಮಾಡಿದರೆ ಅವನು ಒಂದು ವರ್ಷದ ವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**171 ಜಿ. ಚುನಾವಣೆ ಸಂಬಂಧದ ಸುಳ್ಳು ಹೇಳಿಕೆ:–**

ಯಾವನೇ ವ್ಯಕ್ತಿಯ ಚುನಾವಣೆಯ ಫಲಿತಾಂಶದ ಮೇಲೆ ಪ್ರತಿಕೂಲ ಪರಿಣಾಮವಾಗಬೇಕೆಂಬ ಉದ್ದೇಶದಿಂದ ಯಾವನೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯವನ್ನು ಅಥವಾ ನಡತೆಯನ್ನು ಕುರಿತು ಸುಳ್ಳಾಗಿರುವ ಮತ್ತು ತಾನು ಸುಳ್ಳೆಂದು ತಿಳಿದಿರುವ ಅಥವಾ ನಂಬಿರುವ ಅಥವಾ ಸತ್ಯವೆಂದು ನಂಬದಿರುವ ಯಾವುದೇ ಹೇಳಿಕೆಯನ್ನು ಸತ್ಯಸಂಗತಿಯೆಂದು ತಾತ್ಪರ್ಯವಾಗುವ ಹಾಗೆ ಮಾಡಿದರೆ ಅಥವಾ ಪ್ರಕಟಿಸಿದರೆ ಅವನು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**171ಎಚ್. ಚುನಾವಣೆಗೆ ಸಂಬಂಧಿಸಿದಂತೆ ಕಾನೂನುಸಮ್ಮತವಲ್ಲದ ರೀತಿಯಲ್ಲಿ ಸಂದಾಯ ಮಾಡುವುದು:–**

ಯಾವನೇ ವ್ಯಕ್ತಿಯು, ಅಭ್ಯರ್ಥಿಯ ಸಾಮಾನ್ಯ ಅಥವಾ ವಿಶೇಷವಾದ ಲಿಖಿತ ಅಧಿಕಾರವಿಲ್ಲದೆ, ಅಂಥ ಅಭ್ಯರ್ಥಿಯ ಚುನಾವಣೆಗೆ ಬೆಂಬಲ ಒದಗಿಸುವ ಅಥವಾ ಅದನ್ನು ಸಾಧಿಸುವ ಉದ್ದೇಶದಿಂದ ಯಾವುದೇ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ ಬಗ್ಗೆ ಅಥವಾ ಯಾವುದೇ ಜಾಹೀರಾತು, ಸುತ್ತೋಲೆ ಅಥವಾ ಪ್ರಕಟಣೆಯ ನಿಮಿತ್ತ ಅಥವಾ ಇತರ ಯಾವುದೇ ರೀತಿಯಲ್ಲಿ ವೆಚ್ಚವನ್ನು ಮಾಡಿದರೆ ಅಥವಾ ಮಾಡಲು ಅಧಿಕಾರ ಕೊಟ್ಟರೆ, ಅವನು ಐದು ನೂರು ರೂಪಾಯಿಗಳ ವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಯಾವನೇ ವ್ಯಕ್ತಿಯು ಹತ್ತು ರೂಪಾಯಿಗಳಿಗೆ ಮೀರದ ಅಂಥ ಯಾವುವೇ ವೆಚ್ಚಗಳನ್ನು ಅಧಿಕಾರವಿಲ್ಲದೆ ಮಾಡಿದ ತರುವಾಯ, ಅಂಥ ವೆಚ್ಚಗಳನ್ನು ಮಾಡಿದ ದಿನಾಂಕದಿಂದ ಹತ್ತು ದಿವಸಗಳ ಒಳಗೆ ಅಭ್ಯರ್ಥಿಯ ಲಿಖಿತ ಅನುಮೋದನೆಯನ್ನು ಪಡೆದುಕೊಂಡರೆ, ಅವನು ಅಭ್ಯರ್ಥಿಯಿಂದ ಅಧಿಕಾರ ಪಡೆದು ಆ ವೆಚ್ಚಗಳನ್ನು ಮಾಡಿರುವುದಾಗಿ ಭಾವಿಸತಕ್ಕದ್ದು.

**171 ಐ. ಚುನಾವಣೆಗೆ ಸಂಬಂಧಿಸಿದ ಲೆಕ್ಕಗಳನ್ನು ಇಡಲು ತಪ್ಪುವುದು:–**

ಯಾವುದೇ ಚುನಾವಣೆಯಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿ ಮಾಡಿದ ವೆಚ್ಚಗಳ ಲೆಕ್ಕಗಳನ್ನು ಇಡಲು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಿಂದ ಅಥವಾ ಕಾನೂನಿನ ಬಲವುಳ್ಳ ಯಾವುದೇ ನಿಯಮದಿಂದ ಅಗತ್ಯಪಡಿಸಲಾದ ಯಾವನೇ ವ್ಯಕ್ತಿಯು ಹಾಗೆ ಮಾಡಲು ತಪ್ಪಿದರೆ, ಅವನು ಐದು ನೂರು ರೂಪಾಯಿಗಳ ವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**505. ಸಾರ್ವಜನಿಕ ಕೇಡಿಗೆ ಕಾರಣವಾಗುವ ಹೇಳಿಕೆಗಳು:–**

**(1) ಯಾರೇ ವ್ಯಕ್ತಿಯು,–**

(ಎ) ಭಾರತದ ಸೇನಾ, ನೌಕಾ ಅಥವಾ ವಾಯು ಬಲದ ಯಾವನೇ ಅಧಿಕಾರಿ, ಸೈನಿಕ, ನಾವಿಕ ಅಥವಾ ವೈಮಾನಿಕನು ದಂಗೆಯೇಳುವಂತೆ ಅಥವಾ ಅನ್ಯಥಾ ತನ್ನ ಕರ್ತವ್ಯವನ್ನು ಕಡೆಗಣಿಸುವಂತೆ ಅಥವಾ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪುವಂತೆ ಮಾಡುವ ಉದ್ದೇಶದಿಂದ ಅಥವಾ ಆ ಸಂಭವವಿರುವ; ಅಥವಾ

(ಬಿ) ಸಾರ್ವಜನಿಕರಿಗೆ ಅಥವಾ ಸಾರ್ವಜನಿಕರ ಯಾವುದೇ ವರ್ಗಕ್ಕೆ ಅಪಾಯ ಅಥವಾ ಭೀತಿಯನ್ನು ಹುಟ್ಟಿಸಿ ಆ ಮೂಲಕ ಯಾವನೇ ವ್ಯಕ್ತಿಯು ಸರ್ಕಾರದ ವಿರುದ್ಧ ಅಥವಾ ಸಾರ್ವಜನಿಕ ನೆಮ್ಮದಿಯ ವಿರುದ್ಧ ಅಪರಾಧವೆಸಗುವಂತೆ ಮಾಡುವ ಉದ್ದೇಶವಿರುವ ಅಥವಾ ಹಾಗೆ ಮಾಡುವ ಸಂಭವವಿರುವ; ಅಥವಾ

(ಸಿ) ಯಾವುದೇ ವರ್ಗ ಅಥವಾ ವ್ಯಕ್ತಿಗಳ ಸಮುದಾಯವು, ಯಾವುದೇ ಇತರ ವರ್ಗ ಅಥವಾ ವ್ಯಕ್ತಿಗಳ ಸಮುದಾಯದ ವಿರುದ್ಧ ಯಾವುದೇ ಅಪರಾಧವನ್ನು ಮಾಡುವಂತೆ ಪ್ರಚೋದಿಸುವ ಉದ್ದೇಶವಿರುವ ಅಥವಾ ಹಾಗೆ ಮಾಡು ಸಂಭವವಿರುವ;

ಯಾವುದೇ ಹೇಳಿಕೆಯನ್ನು, ವದಂತಿಯನ್ನು ಅಥವಾ ವರದಿಯನ್ನು ಮಾಡಿದರೆ, ಪ್ರಕಟಿಸಿದರೆ ಅಥವಾ ಪ್ರಸಾರ ಮಾಡಿದರೆ ಅವನು ಮೂರು ವರ್ಷಗಳ ವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

**(2) ವರ್ಗಗಳ ನಡುವೆ ವೈರ, ದ್ವೇಷ ಅಥವಾ ವೈಮನಸ್ಯವನ್ನು ಉಂಟುಮಾಡುವ ಅಥವಾ ಬೆಳೆಸುವ ಹೇಳಿಕೆಗಳು:–**

ಬೇರೆ ಬೇರೆ ಮತೀಯ, ಜನಾಂಗ, ಭಾಷಾ ಅಥವಾ ಪ್ರಾದೇಶಿಕ ಗುಂಪುಗಳ ಅಥವಾ ಜಾತಿಗಳ ಅಥವಾ ಜನಸಮುದಾಯಗಳ ನಡುವೆ ಮತ ಜನಾಂಗ, ಜನ್ಮಸ್ಥಳ, ವಾಸಸ್ಥಳ, ಭಾಷೆ, ಜಾತಿ ಅಥವಾ ಸಮುದಾಯದ ಆಧಾರಗಳ ಮೇಲೆ ಅಥವಾ ಯಾವುದೇ ಇತರ ಬಗೆಯ ಆಧಾರದ ಮೇಲೆ ವೈರ, ದ್ವೇಷ ಅಥವಾ ವೈಮನಸ್ಯದ ಭಾವನೆಗಳನ್ನು ಉಂಟು ಮಾಡುವ ಅಥವಾ ಬೆಳೆಸುವ ಅಥವಾ ಉಂಟು ಮಾಡುವ ಅಥವಾ ಬೆಳೆಸುವ ಸಂಭವವಿರುವ ವದಂತಿಯನ್ನು ಅಥವಾ ಅಪಾಯ ಭೀತಿಯನ್ನು ಹುಟ್ಟಿಸುವ ಸುದ್ದಿಯನ್ನು ಒಳಗೊಂಡ ಯಾವುದೇ ಹೇಳಿಕೆಯನ್ನು ಅಥವಾ ವರದಿಯನ್ನು ಮಾಡುವ, ಪ್ರಕಟಿಸುವ ಅಥವಾ ಪ್ರಸಾರ ಮಾಡುವ ವ್ಯಕ್ತಿಯು ಮೂರು ವರ್ಷಗಳ ವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**(3) ಪೂಜಾ ಸ್ಥಳ, ಇತ್ಯಾದಿಗಳಲ್ಲಿ ಮಾಡಲಾದ (2)ನೆಯ ಉಪ ಪ್ರಕರಣದ ಮೇರೆಗಿನ ಅಪರಾಧ:–**

ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಮತೀಯ ಪೂಜೆಯಲ್ಲಿ ಅಥವಾ ಮತೀಯ ಕರ್ಮಗಳಲ್ಲಿ ತೊಡಗಿದ ಯಾವುದೇ ಕೂಟದಲ್ಲಿ, (2) ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಪರಾಧವನ್ನು ಮಾಡುವ ವ್ಯಕ್ತಿಯು ಐದು ವರ್ಷಗಳ ವರೆಗಿನ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು. ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು.

**ಅಪವಾದ:–** ಅಂಥ ಯಾವುದೇ ಹೇಳಿಕೆ, ವದಂತಿ ಅಥವಾ ವರದಿಯನ್ನು ಮಾಡುವ ಪ್ರಕಟಿಸುವ ಅಥವಾ ಪ್ರಸಾರ ಮಾಡುವ ವ್ಯಕ್ತಿಗೆ ಅಂಥ ಹೇಳಿಕೆ, ವದಂತಿ ಅಥವಾ ವರದಿಯು ನಿಜವೆಂದು ನಂಬಲು ಯುಕ್ತ ಆಧಾರಗಳಿದ್ದರೆ ಮತ್ತು ಅವನು ಅದನ್ನು ಮೇಲೆ ಹೇಳಿದಂತಹ ಯಾವುದೇ ಉದ್ದೇಶವಿಲ್ಲದೆ ಸದ್ಭಾವನೆಯಿಂದ ಮಾಡಿದ್ದರೆ, ಪ್ರಕಟಿಸಿದ್ದರೆ ಅಥವಾ ಪ್ರಸಾರ ಮಾಡಿದ್ದರೆ, ಆ ಕೃತ್ಯವು ಈ ಪ್ರಕರಣದ ಅರ್ಥದಲ್ಲಿ ಅಪರಾಧವೆನಿಸುವುದಿಲ್ಲ.

## ಪರಿಶಿಷ್ಟ–17
## (ಅಧ್ಯಾಯ–7, ಪ್ಯಾರಾ 7.3.2)
## ರಾಜಕೀಯ ಪಕ್ಷಗಳ ಮತ್ತು ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಮಾದರಿ ನೀತಿ ಸಂಹಿತೆ

**1. ಸಾಮಾನ್ಯ ಸಂಹಿತೆ**

(1) ಯಾವುದೇ ಪಕ್ಷ ಅಥವಾ ಯಾರೇ ಅಭ್ಯರ್ಥಿಯು ಬೇರೆ ಬೇರೆ ಜಾತಿಗಳ ಮತ್ತು ಸಮುದಾಯಗಳ ನಡುವೆ ಧಾರ್ಮಿಕ ಅಥವಾ ಭಾಷೆಯ ಆಧಾರದ ಮೇಲೆ ಈಗಿರುವ ಭಿನ್ನಾಭಿಪ್ರಾಯಗಳನ್ನು ಇನ್ನಷ್ಟು ಹೆಚ್ಚಿಸಬಾರದು ಅಥವಾ ಪರಸ್ಪರ ದ್ವೇಷ ಭಾವನೆಯನ್ನು ಉಂಟುಮಾಡಬಾರದು ಅಥವಾ ಬಿಗುವಿನ ವಾತಾವರಣ ಸೃಷ್ಟಿಸಬಾರದು.

(2) ಬೇರೊಂದು ಪಕ್ಷದ ಬಗ್ಗೆ ಟೀಕಿಸುವಾಗ ಅದರ ನೀತಿಗಳು, ಕಾರ್ಯಕ್ರಮಗಳು, ಹಿಂದಿನ ಸಾಧನೆ ಮತ್ತು ಕೆಲಸಗಳ ಬಗ್ಗೆ ಮಾತ್ರ ಅದು ಸೀಮಿತವಾಗಿರಬೇಕು. ಬೇರೆ ಪಕ್ಷಗಳ ಮುಖಂಡರ ಅಥವಾ ಕಾರ್ಯಕರ್ತರ ಸಾರ್ವಜನಿಕ ಚಟುವಟಿಕೆಗಳಿಗೆ ಸಂಬಂಧಪಡದ ಖಾಸಗಿ ಬದುಕಿನ ಸಂಗತಿಗಳ ಬಗ್ಗೆ ಟೀಕೆಗಳನ್ನು ಮಾಡಬಾರದು. ಇತರ ಪಕ್ಷಗಳ ಅಥವಾ ಅದರ ಕಾರ್ಯಕರ್ತರ ಬಗ್ಗೆ ಖಾತ್ರಿಪಡಿಸಿಕೊಳ್ಳದ ಆರೋಪಗಳನ್ನು ಅಥವಾ ತಿರುಚಿದ ಹೇಳಿಕೆಗಳನ್ನು ಆಧರಿಸಿ ಟೀಕೆಗಳನ್ನು ಮಾಡಬಾರದು.

(3) ಮತ ಗಳಿಸುವ ಸಲುವಾಗಿ ಜಾತಿ ಅಥವಾ ಕೋಮು ಭಾವನೆಯನ್ನು ಕೆರಳಿಸಿ ಮತಕ್ಕಾಗಿ ಕೋರಿಕೆ ಮಾಡಬಾರದು. ಮಸೀದಿ, ಚರ್ಚು, ದೇವಸ್ಥಾನ ಅಥವಾ ಇನ್ನಿತರ ಯಾವುದೇ ಪೂಜಾ ಸ್ಥಳವನ್ನು ಚುನಾವಣಾ ಪ್ರಚಾರದ ವೇದಿಕೆಯಾಗಿ ಬಳಸಬಾರದು.

(4) ಮತದಾರರಿಗೆ ಲಂಚ ನೀಡುವುದು, ಮತದಾರರಿಗೆ ಬೆದರಿಕೆಯೊಡ್ಡುವುದು, ಮತದಾರರಂತೆ ನಟಿಸಿ ಇನ್ನೊಬ್ಬರು ಮತ ಚಲಾಯಿಸುವುದು, ಮತಗಟ್ಟೆಯ 100 ಮೀಟರ್ ಪರಿಧಿಯೊಳಗೆ ಪ್ರಚಾರ ಮಾಡುವುದು, ಮತದಾನದ ಮುಕ್ತಾಯಕ್ಕಾಗಿ ನಿಗದಿಯಾದ ಸಮಯದ 48 ಗಂಟೆ ಅವಧಿಯೊಳಗೆ ಸಾರ್ವಜನಿಕ ಸಭೆಗಳನ್ನು ನಡೆಸುವುದು, ಮತಗಟ್ಟೆಗೆ ಬರಲು ಹಾಗೂ ಅಲ್ಲಿಂದ ತೆರಳಲು ಮತದಾರರಿಗೆ ವಾಹನ ಅಥವಾ ಸಾರಿಗೆ ವ್ಯವಸ್ಥೆ ಕಲ್ಪಿಸುವುದು– ಇವು ಚುನಾವಣಾ ಕಾನೂನಿನ ಪ್ರಕಾರ ಭ್ರಷ್ಟ ನಡವಳಿಕೆಗಳು ಹಾಗೂ ಅಪರಾಧಗಳಾಗಿದ್ದು, ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಕಟ್ಟುನಿಟ್ಟಾಗಿ ಇಂತಹ ಚಟುವಟಿಕೆಗಳಿಂದ ದೂರವಿರಬೇಕು.

(5) ರಾಜಕೀಯ ಪಕ್ಷಗಳಿಗೆ ಅಥವಾ ಅಭ್ಯರ್ಥಿಗಳಿಗೆ ಬೇರೊಬ್ಬ ವ್ಯಕ್ತಿಯ ರಾಜಕೀಯ ನಿಲುವುಗಳು ಅಥವಾ ಚಟುವಟಿಕೆಗಳ ಬಗ್ಗೆ ಎಷ್ಟೇ ತೀವ್ರವಾದ ಅಭಿಪ್ರಾಯಭೇದವಿದ್ದರೂ, ಆ ವ್ಯಕ್ತಿಗೆ ಇರುವ ಶಾಂತಿಯುತ ಮತ್ತು ಉಪದ್ರವರಹಿತ ಕೌಟುಂಬಿಕ ಜೀವನದ ಹಕ್ಕನ್ನು ಗೌರವಿಸಬೇಕು. ಯಾವುದೇ ಸನ್ನಿವೇಶದಲ್ಲೂ ವ್ಯಕ್ತಿಗಳ ಮನೆಯ ಮುಂದೆ ಅವರ ಅಭಿಪ್ರಾಯಗಳನ್ನು ಅಥವಾ ಚಟುವಟಿಕೆಗಳನ್ನು ವಿರೋಧಿಸಿ ಪ್ರದರ್ಶನ ಅಥವಾ ಪಿಕೆಟಿಂಗ್ ಅಥವಾ ಪ್ರತಿಭಟನೆಗಳನ್ನು ಸಂಘಟಿಸಬಾರದು.

(6) ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಗಳು, ಮಾಲೀಕರ ಅನುಮತಿ ಪಡೆಯದೆ ಧ್ವಜ ಕಟ್ಟಲು, ಬ್ಯಾನರ್‌ಗಳನ್ನು ಹಾಕಲು, ನೋಟಿಸ್‌ಗಳನ್ನು ಅಂಟಿಸಲು, ಘೋಷವಾಕ್ಯಗಳನ್ನು ಬರೆಯಲು ಇತ್ಯಾದಿಗಳಿಗಾಗಿ ಅವರ ಭೂಮಿ, ಕಟ್ಟಡ, ಕಾಂಪೌಂಡ್, ಇತ್ಯಾದಿಗಳನ್ನು ಬಳಸಲು ತಮ್ಮ ಬೆಂಬಲಿಗರಿಗೆ ಅವಕಾಶ ನೀಡಬಾರದು.

(7) ಬೇರೆ ಪಕ್ಷಗಳು ಏರ್ಪಡಿಸುವ ಯಾವುದೇ ಸಭೆಗಳು ಅಥವಾ ಮೆರವಣಿಗೆಗಳಿಗೆ ತಮ್ಮ ಬೆಂಬಲಿಗರು ಅಡ್ಡಿ ಮಾಡದಂತೆ ಅಥವಾ ಚದುರಿಸದಿರುವಂತೆ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಕಾಳಜಿ ವಹಿಸಬೇಕು. ನಿರ್ದಿಷ್ಟ ರಾಜಕೀಯ ಪಕ್ಷವೊಂದರ ಕಾರ್ಯಕರ್ತರು ಅಥವಾ ಸಹಾನುಭೂತಿಯುಳ್ಳವರು ಬೇರೊಂದು ಪಕ್ಷದವರು ಏರ್ಪಡಿಸಿರುವ ಸಭೆಗಳಿಗೆ ತೆರಳಿ ಅಲ್ಲಿ ಮೌಖಿಕವಾಗಿಯಾಗಲೀ ಅಥವಾ ಲಿಖಿತವಾಗಿಯಾಗಲೀ ಪ್ರಶ್ನೆಗಳನ್ನು ಕೇಳುವ ಮೂಲಕವಾಗಲೀ ಅಥವಾ ತಮ್ಮ ರಾಜಕೀಯ ಪಕ್ಷದ ಕರಪತ್ರಗಳನ್ನು ಹಂಚುವ ಮೂಲಕವಾಗಲೀ ತೊಂದರೆ

ಮಾಡಬಾರದು. ಒಂದು ರಾಜಕೀಯ ಪಕ್ಷದವರು ಸಭೆ ನಡೆಸುತ್ತಿರುವ ಸ್ಥಳದ ಹಾದಿಯುದ್ದಕ್ಕೂ ಬೇರೊಂದು ಪಕ್ಷದವರು ಮೆರವಣಿಗೆ ನಡೆಸಬಾರದು. ಒಂದು ಪಕ್ಷದವರು ಅಂಟಿಸಿರುವ ಭಿತ್ತಿಪತ್ರಗಳನ್ನು ಬೇರೊಂದು ಪಕ್ಷದ ಕಾರ್ಯಕರ್ತರು ಕಿತ್ತುಹಾಕಬಾರದು.

## II ಸಭೆಗಳು

(1) ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಉದ್ದೇಶಿತ ಸಭೆಗಳ ಸ್ಥಳ ಮತ್ತು ಸಮಯದ ಬಗ್ಗೆ ಸ್ಥಳೀಯ ಪೊಲೀಸರಿಗೆ ಸಾಕಷ್ಟು ಮುಂಚಿತವಾಗಿ ತಿಳಿಸಬೇಕು. ಇದರಿಂದಾಗಿ ಪೊಲೀಸರು ಸಂಚಾರ ನಿಯಂತ್ರಣ ಹಾಗೂ ಕಾನೂನು ಮತ್ತು ಶಾಂತಿ ಪಾಲನೆಗಾಗಿ ಅವಶ್ಯವಾದ ವ್ಯವಸ್ಥೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

(2) ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ತಾವು ಸಭೆ ನಡೆಸಲು ಉದ್ದೇಶಿಸಿರುವ ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧಕಾಜ್ಞೆ ಅಥವಾ ನಿಷೇಧಾಜ್ಞೆಗಳನ್ನು ಜಾರಿಗೊಳಿಸಲಾಗಿದೆಯೇ ಎಂಬುದನ್ನು ಮುಂಚಿತವಾಗಿ ಖಚಿತಪಡಿಸಿಕೊಳ್ಳಬೇಕು. ಒಂದೊಮ್ಮೆ ಅಂತಹ ಆಜ್ಞೆಗಳು ಇದ್ದರೆ, ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಅಂತಹ ಆಜ್ಞೆಯಿಂದ ಯಾವುದೇ ವಿನಾಯಿತಿ ಅಗತ್ಯವಾಗಿದ್ದರೆ, ಆ ಸಂಬಂಧ ಮನವಿ ಸಲ್ಲಿಸಿ, ಸಾಕಷ್ಟು ಮುಂಚಿತವಾಗಿ ಅದನ್ನು ಪಡೆಯಬೇಕು.

(3) ಉದ್ದೇಶಿತ ಸಭೆಗೆ ಸಂಬಂಧಿಸಿದಂತೆ ಧ್ವನಿವರ್ಧಕಗಳನ್ನು ಅಥವಾ ಬೇರ್‍ಯಾವುದೇ ಸೌಲಭ್ಯಗಳನ್ನು ಬಳಸುವುದಕ್ಕಾಗಿ ಲೈಸೆನ್ಸ್ ಪಡೆಯಬೇಕಿದ್ದರೆ, ಪಕ್ಷ ಅಥವಾ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಸಾಕಷ್ಟು ಮುಂಚಿತವಾಗಿ ಅರ್ಜಿ ಸಲ್ಲಿಸಿ ಅವರಿಂದ ಅಂಥ ಅನುಮತಿ ಅಥವಾ ಲೈಸೆನ್ಸ್ ಪಡೆಯಬೇಕು.

(4) ಸಭೆ ನಡೆಸುವುದಕ್ಕೆ ತೊಂದರೆಯುಂಟು ಮಾಡಲು ಅಥವಾ ಬೇರೆ ರೀತಿಯಲ್ಲಿ ಅವ್ಯವಸ್ಥೆ ಉಂಟುಮಾಡಲು ಪ್ರಯತ್ನಿಸುವವರನ್ನು ನಿಭಾಯಿಸುವುದಕ್ಕಾಗಿ ಸಭೆಯ ಸಂಘಟಕರು ಕರ್ತವ್ಯ ನಿರತ ಪೊಲೀಸರ ನೆರವನ್ನು ಅಗತ್ಯವಾಗಿ ಕೋರಬೇಕು. ಅಂತಹ ವ್ಯಕ್ತಿಗಳ ವಿರುದ್ಧ ಸಂಘಟಕರು ಸ್ವತಃ ಯಾವುದೇ ಕ್ರಮ ತೆಗೆದುಕೊಳ್ಳಬಾರದು.

## III ಮೆರವಣಿಗೆಗಳು

(1) ಮೆರವಣಿಗೆ ಏರ್ಪಡಿಸುವ ಪಕ್ಷ ಅಥವಾ ಅಭ್ಯರ್ಥಿಯು ಮೆರವಣಿಗೆ ಆರಂಭವಾಗುವ ಸ್ಥಳ ಮತ್ತು ಸಮಯ, ಅದು ಸಾಗುವ ಹಾದಿ ಹಾಗೂ ಮೆರವಣಿಗೆ ಮುಗಿಯುವ ಸ್ಥಳ ಮತ್ತು ಸಮಯದ ಬಗ್ಗೆ ಮುಂಚಿತವಾಗಿಯೇ ನಿರ್ಧರಿಸಿರಬೇಕು. ಸಾಮಾನ್ಯವಾಗಿ ಈ ನಿಗದಿತ ಯೋಜನೆಯಲ್ಲಿ ಯಾವುದೇ ಬದಲಾವಣೆ ಮಾಡಬಾರದು.

(2) ಸ್ಥಳೀಯ ಪೊಲೀಸರಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಅನುಕೂಲವಾಗುವಂತೆ ಕಾರ್ಯಕ್ರಮಗಳ ಬಗ್ಗೆ ಸಂಘಟಕರು ಮುಂಚಿತವಾಗಿಯೇ ಮಾಹಿತಿ ನೀಡಬೇಕು.

(3) ಮೆರವಣಿಗೆ ಸಾಗಬೇಕಾದ ಪ್ರದೇಶಗಳಲ್ಲಿ ಯಾವುದೇ ನಿರ್ಬಂಧಕಾಜ್ಞೆ ಜಾರಿಯಲ್ಲಿದೆಯೇ ಎಂಬುದನ್ನು ಸಂಘಟಕರು ಖಚಿತಪಡಿಸಿಕೊಳ್ಳಬೇಕು, ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ವಿಶೇಷ ವಿನಾಯಿತಿ ಪಡೆದ ಹೊರತು, ನಿರ್ಬಂಧಕಾಜ್ಞೆಯನ್ನು ಪಾಲಿಸಬೇಕು. ಸಂಚಾರ ನಿಯಂತ್ರಣ ಮತ್ತು ನಿರ್ಬಂಧಗಳನ್ನು ಜಾಗರೂಕತೆಯಿಂದ ಪಾಲಿಸಬೇಕು.

(4) ಮೆರವಣಿಗೆ ಸಾಗುವುದರಿಂದ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಅಥವಾ ವಾಹನ ಸಂಚಾರ ಸ್ಥಗಿತವಾಗದಂತೆ ನೋಡಿಕೊಳ್ಳುವ ಸಲುವಾಗಿ ಸಂಘಟಕರು ಮುಂಚಿತವಾಗಿಯೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೆರವಣಿಗೆಯು ತುಂಬಾ ಉದ್ದವಾಗಿದ್ದರೆ ಅದನ್ನು ಪ್ರತ್ಯೇಕ ಭಾಗಗಳನ್ನಾಗಿ ಮಾಡಬೇಕು. ವಿಶೇಷವಾಗಿ, ಕೂಡುರಸ್ತೆಯ ತಾಣಗಳಲ್ಲಿ ಇದರ ಬಗ್ಗೆ ಹೆಚ್ಚಿನ ಲಕ್ಷ್ಯ

ವಹಿಸಬೇಕು. ಮೆರವಣಿಗೆಯಿಂದ ನಿಲುಗಡೆಗೊಂಡ ವಾಹನಗಳನ್ನು ಬಿಡಬೇಕಾದರೆ, ದಟ್ಟಣೆ ತಪ್ಪಿಸುವ ಸಲುವಾಗಿ ಅವನ್ನು ಹಂತಹಂತವಾಗಿ ಬಿಡಬೇಕು.

(5) ಮೆರವಣಿಗೆಯನ್ನು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ರಸ್ತೆಯ ಬಲಬದಿಯಲ್ಲಿಯೇ ಸಾಗುವಂತೆ ವ್ಯವಸ್ಥೆಗೊಳಿಸಬೇಕು ಹಾಗೂ ಈ ಸಂದರ್ಭದಲ್ಲಿ ಪೊಲೀಸರ ನಿರ್ದೇಶನ ಮತ್ತು ಸಲಹೆಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು.

(6) ಎರಡು ಅಥವಾ ಹೆಚ್ಚಿನ ರಾಜಕೀಯ ಪಕ್ಷಗಳು ಅಥವಾ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸರಿ ಸುಮಾರು ಒಂದೇ ಸಮಯದಲ್ಲಿ ಒಂದೇ ಮಾರ್ಗದಲ್ಲಿ ಅಥವಾ ಅದರ ಭಾಗಗಳಲ್ಲಿ ಮೆರವಣಿಗೆಗಳನ್ನು ನಡೆಸಲು ಉದ್ದೇಶಿಸಿರುವಲ್ಲಿ, ಸಂಘಟಕರು ಸಾಕಷ್ಟು ಮುಂಚೆಯೇ ಪರಸ್ಪರ ಸಂಪರ್ಕಿಸಿ, ಮೆರವಣಿಗೆಗಳಿಂದಾಗಿ ಘರ್ಷಣೆ ಅಥವಾ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕು. ತೃಪ್ತಿಕರವಾದ ಒಮ್ಮತಕ್ಕೆ ಬರುವ ನಿಟ್ಟಿನಲ್ಲಿ ಸ್ಥಳೀಯ ಪೊಲೀಸರ ನೆರವು ಪಡೆಯಬೇಕು. ಇದಕ್ಕಾಗಿ ಪಕ್ಷಗಳು ಪೊಲೀಸರನ್ನು ಸಾಕಷ್ಟು ಮುಂಚಿತವಾಗಿಯೇ ಸಂಪರ್ಕಿಸಬೇಕು.

(7) ಮೆರವಣಿಗೆಯಲ್ಲಿ ಸಾಗುವವರು ಯಾವುದೇ ವಸ್ತುವನ್ನು ಹೊಂದಿದ್ದು ಅದನ್ನು ಉದ್ವಿಗ್ನತೆಯ ಕ್ಷಣಗಳಲ್ಲಿ ಯಾವುದೇ ದುಷ್ಕರ್ಮಿಗಳು ದುರುಪಯೋಗ ಪಡಿಸಿಕೊಳ್ಳಬಹುದಾಗಿರುವುದರಿಂದ ಆ ಬಗ್ಗೆ ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಸಾಧ್ಯವಾದಷ್ಟು ಗರಿಷ್ಠ ನಿಯಂತ್ರಣವನ್ನು ಸಾಧಿಸಬೇಕು.

(8) ಇತರ ರಾಜಕೀಯ ಪಕ್ಷಗಳ ಸದಸ್ಯರನ್ನು ಅಥವಾ ನಾಯಕರನ್ನು ಪ್ರತಿನಿಧಿಸುವ ಪ್ರತಿಕೃತಿಗಳನ್ನು ಒಯ್ಯುಲು, ಪ್ರತಿಕೃತಿಗಳನ್ನು ಸಾರ್ವಜನಿಕವಾಗಿ ದಹಿಸಲು ಮತ್ತು ಇಂತಹ ಇನ್ನಿತರ ಪ್ರತಿಭಟನೆಗಳನ್ನು ಮಾಡಲು ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯು ಸಮ್ಮತಿಸತಕ್ಕದ್ದಲ್ಲ.

## IV. ಮತ ಚಲಾವಣೆಯ ದಿನ

ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು–

(i) ಶಾಂತಿಯುತವಾದ ಮತ್ತು ವ್ಯವಸ್ಥಿತವಾದ ಮತದಾನ ನಡೆಸಲು ಮತ್ತು ಮತದಾರರಿಗೆ ಯಾವುದೇ ಕಿರಿಕಿರಿ ಅಥವಾ ತೊಂದರೆಯಾಗದಂತೆ ತಮ್ಮ ಮತದಾನದ ಹಕ್ಕು ಚಲಾಯಿಸಲು ಸಂಪೂರ್ಣ ಸಾತಂತ್ರ್ಯವನ್ನು ಖಾತ್ರಿಗೊಳಿಸುವ ನಿಟ್ಟಿನಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜಿತರಾದ ಅಧಿಕಾರಿಗಳೊಂದಿಗೆ ಸಹಕರಿಸಬೇಕು;

(ii) ತಮ್ಮ ಅಧಿಕೃತ ಕಾರ್ಯಕರ್ತರಿಗೆ ಸೂಕ್ತ ಬ್ಯಾಡ್ಜ್‌ಗಳನ್ನು ಅಥವಾ ಗುರುತಿನ ಚೀಟಿಗಳನ್ನು ನೀಡಿರಬೇಕು;

(iii) ಮತದಾರರಿಗೆ ನೀಡುವ ಗುರುತು ಚೀಟಿಯನ್ನು ಬಿಳಿ ಹಾಳೆಯ ಮೇಲೆ ಮಾತ್ರವೇ ಮುದ್ರಿಸಿರಬೇಕು. ಅದರ ಮೇಲೆ ಯಾವುದೇ ಚಿಹ್ನೆಯಾಗಲೀ, ಅಭ್ಯರ್ಥಿಯ ಹೆಸರಾಗಲೀ ಅಥವಾ ಪಕ್ಷದ ಹೆಸರಾಗಲೀ ಇರಬಾರದು;

(iv) ಮತದಾನದ ದಿನದಂದು ಹಾಗೂ ಆನಂತರದ 24 ಗಂಟೆಗಳ ಅವಧಿಯೊಳಗೆ, ಮದ್ಯ ಪೂರೈಸುವುದನ್ನಾಗಲೀ ಅಥವಾ ವಿತರಿಸುವುದನ್ನಾಗಲೀ ಮಾಡಬಾರದು;

(v) ರಾಜಕೀಯ ಪಕ್ಷಗಳ ಕಾರ್ಯಕರ್ತರು ಹಾಗೂ ಪಕ್ಷ ಮತ್ತು ಅಭ್ಯರ್ಥಿಗಳ ಪರ ಸಹಾನುಭೂತಿಯುಳ್ಳವರ ನಡುವೆ ಘರ್ಷಣೆ ಮತ್ತು ಉದ್ವಿಗ್ನತೆ ಉಂಟಾಗದಂತೆ ಮಾಡಲು ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಮತಗಟ್ಟೆಗಳ ಸಮೀಪ ನಿರ್ಮಿಸಿರುವ ಶಿಬಿರಗಳ ಬಳಿ ಅನಗತ್ಯ ಜನಜಂಗುಳಿ ಸೇರಲು ಅವಕಾಶ ನೀಡತಕ್ಕದ್ದಲ್ಲ;

(vi) ಅಭ್ಯರ್ಥಿಗಳು ಹಾಕಿಸುವ ಬಿಡಾರಗಳು ಸರಳವಾಗಿರಬೇಕು– ಅಲ್ಲಿ ಯಾವುದೇ ಭಿತ್ತಿಪತ್ರವನ್ನಾಗಲೀ, ಧ್ವಜವನ್ನಾಗಲೀ, ಚಿಹ್ನೆಯನ್ನಾಗಲೀ ಅಥವಾ ಯಾವುದೇ ಇತರ ಪ್ರಚಾರ ಸಾಮಗ್ರಿಯನ್ನಾಗಲಿ ಪ್ರದರ್ಶಿಸಬಾರದು. ಭಿಡಾರಗಳ ಬಳಿ ತಿಂಡಿತಿನಿಸು ವಿತರಿಸುವುದಾಗಲೀ ಅಥವಾ ಜನಜುಂಗುಳಿ ನೆರೆಯಲು ಅವಕಾಶ ನೀಡುವುದಾಗಲೀ ಸಲ್ಲದು; ಮತ್ತು

(vii) ಮತದಾನದ ದಿನದಂದು ವಾಹನಗಳ ಓಡಾಟದ ಬಗ್ಗೆ ನಿರ್ಬಂಧ ವಿಧಿಸುವಂಥ ಕಾರ್ಯ ನಿರ್ವಹಿಸುವ ಅಧಿಕಾರಿಗಳೊಂದಿಗೆ ಸಹಕರಿಸಬೇಕು. ಅಗತ್ಯವಾದ ವಾಹನ ಓಡಾಟಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಂದ ಪರ್ಮಿಟ್‌ಗಳನ್ನು ಪಡೆದು ಅವುಗಳನ್ನು ಆ ವಾಹನಗಳ ಮೇಲೆ ಎದ್ದು ಕಾಣುವಂತೆ ಪ್ರದರ್ಶಿಸಬೇಕು.

**V ಮತಗಟ್ಟೆ**

ಮತದಾರನನ್ನು ಹೊರತುಪಡಿಸಿ ಚುನಾವಣಾ ಆಯೋಗದಿಂದ ಪಡೆದಿರುವ ಕ್ರಮಬದ್ಧವಾದ ಪಾಸ್ ಇಲ್ಲದೆ ಇತರ ಯಾರೇ ವ್ಯಕ್ತಿಯು ಮತಗಟ್ಟೆಯನ್ನು ಪ್ರವೇಶಿಸತಕ್ಕದ್ದಲ್ಲ.

**VI ವೀಕ್ಷಕರು**

ಚುನಾವಣಾ ಆಯೋಗವು ವೀಕ್ಷಕರನ್ನು ನೇಮಕ ಮಾಡಲಿದೆ. ಅಭ್ಯರ್ಥಿಗಳು ಅಥವಾ ಅವರ ಏಜೆಂಟರಿಗೆ ಚುನಾವಣೆ ನಡೆಸುವ ರೀತಿಯ ಬಗ್ಗೆ ಯಾವುದೇ ನಿರ್ದಿಷ್ಟ ದೂರು ಅಥವಾ ಸಮಸ್ಯೆ ಇದ್ದಲ್ಲಿ ಅದನ್ನು ಅವರು ವೀಕ್ಷಕರ ಗಮನಕ್ಕೆ ತರಬಹುದು.

**VII ಅಧಿಕಾರದಲ್ಲಿರುವ ಪಕ್ಷ**

ಕೇಂದ್ರದಲ್ಲಿ ಅಥವಾ ಸಂಬಂಧಪಟ್ಟ ರಾಜ್ಯದಲ್ಲಿ ಅಥವಾ ರಾಜ್ಯಗಳಲ್ಲಿ ಇರುವ ಆಡಳಿತಾರೂಢ ಪಕ್ಷಗಳು ತಮ್ಮ ಅಧಿಕಾರಸ್ಥಾನವನ್ನು ಚುನಾವಣಾ ಪ್ರಚಾರದ ಉದ್ದೇಶಕ್ಕೆ ಬಳಸಿಕೊಂಡರು ಎಂಬ ಯಾವುದೇ ದೂರಿಗೆ ಆಸ್ಪದವಾಗದಂತೆ ನಡೆದುಕೊಳ್ಳುವುದನ್ನು ಖಾತ್ರಿ ಪಡಿಸಬೇಕು, ಮತ್ತು ಅದರಲ್ಲೂ ವಿಶೇಷವಾಗಿ–

(i) (ಎ) ಸಚಿವರಾದವರು ಚುನಾವಣಾ ಪ್ರಚಾರ ಸಂಬಂಧಿ ಕಾರ್ಯದೊಂದಿಗೆ ತಮ್ಮ ಅಧಿಕೃತ ಭೇಟಿಯನ್ನು ಸಂಯೋಜಿಸಬಾರದು. ಚುನಾವಣಾ ಪ್ರಚಾರ ಕಾರ್ಯದ ಸಂಬಂಧವಾಗಿ ಆಡಳಿತ ಯಂತ್ರವನ್ನಾಗಲೀ ಅಥವಾ ಸಿಬ್ಬಂದಿಯನ್ನಾಗಲೀ ಬಳಸಿಕೊಳ್ಳಬಾರದು.

(ಬಿ) ಅಧಿಕೃತ ಪ್ರವಾಸದ ವಿಮಾನಗಳು, ವಾಹನಗಳೂ ಸೇರಿದಂತೆ ಸರ್ಕಾರಿ ಸಾರಿಗೆ ವ್ಯವಸ್ಥೆಯನ್ನು ಆಡಳಿತ ಯಂತ್ರವನ್ನು ಮತ್ತು ಸಿಬ್ಬಂದಿಯನ್ನು ಅಧಿಕಾರದಲ್ಲಿರುವ ಪಕ್ಷದ ಹಿತಾಸಕ್ತಿಯ ಉನ್ನತಿಗಾಗಿ ಬಳಸಬಾರದು.

(ii) ಚುನಾವಣಾ ಸಭೆಗಳನ್ನು ನಡೆಸಲು ಬೇಕಾಗುವ ಮೈದಾನಗಳು, ಇತ್ಯಾದಿ ಸಾರ್ವಜನಿಕ ಸ್ಥಳಗಳ ಮೇಲೆ ಮತ್ತು ಚುನಾವಣೆಗಳಿಗೆ ಸಂಬಂಧಿಸಿದಂತೆ ವಿಮಾನಗಳ ಹೆಲಿಪ್ಯಾಡ್‌ಗಳ ಬಳಕೆಯ ಮೇಲೆ ಅಧಿಕಾರದಲ್ಲಿರುವ ಪಕ್ಷವು ತಾನೇ ಏಕಸ್ವಾಮ್ಯ ಸಾಧಿಸಬಾರದು. ಅಧಿಕಾರದಲ್ಲಿರುವ ಪಕ್ಷವು ಯಾವ ನಿಬಂಧನೆಗಳು ಮತ್ತು ಷರತ್ತುಗಳ ಅನುಸಾರ ಇಂತಹ ಸ್ಥಳಗಳನ್ನು ಮತ್ತು ಸೌಲಭ್ಯಗಳನ್ನು ಬಳಸುತ್ತದೆಯೋ ಅದೇ ನಿಬಂಧನೆಗಳು ಮತ್ತು

ಷರತ್ತುಗಳ ಅನುಸಾರ ಇತರ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೂ ಅವುಗಳನ್ನು ಬಳಸಲು ಅವಕಾಶ ಕೊಡಬೇಕು.

(ii) ವಿಶ್ರಾಂತಿ ಗೃಹಗಳು, ಡಾಕ್ ಬಂಗಲೆಗಳು ಅಥವಾ ಇತರ ಸರ್ಕಾರಿ ವಸತಿ ಗೃಹಗಳ ಮೇಲೆ ಅಧಿಕಾರದಲ್ಲಿರುವ ಪಕ್ಷ ಅಥವಾ ಅದರ ಅಭ್ಯರ್ಥಿಗಳು ಏಕಸ್ವಾಮ್ಯ ಸಾಧಿಸಬಾರದು. ಇತರ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೂ ಅಂಥ ಸ್ಥಳಗಳನ್ನು ನ್ಯಾಯಸಮ್ಮತವಾಗಿ ಬಳಸಿಕೊಳ್ಳಲು ಅವಕಾಶ ನೀಡಬೇಕು. ಆದರೆ ಯಾವುದೇ ಪಕ್ಷಕ್ಕಾಗಲೀ ಅಥವಾ ಅಭ್ಯರ್ಥಿಗಾಗಲೀ ಅಂತಹ ಸ್ಥಳವನ್ನು (ಆ ಜಾಗಕ್ಕೆ ಹೊಂದಿಕೊಂಡಿರುವ ಆವರಣವೂ ಸೇರಿದಂತೆ) ಚುನಾವಣಾ ಪ್ರಚಾರ ಕಚೇರಿಯನ್ನಾಗಿ ಬಳಸಬಾರದು ಅಥವಾ ಚುನಾವಣಾ ಪ್ರಚಾರದ ಉದ್ದೇಶಕ್ಕಾಗಿ ಸಾರ್ವಜನಿಕ ಸಭೆ ನಡೆಸುವುದಕ್ಕೆ ಬಳಸಬಾರದು ಅಥವಾ ಬಳಸಲು ಅವಕಾಶ ನೀಡಬಾರದು.

(iv) ದಿನಪತ್ರಿಕೆಗಳಲ್ಲಿ ಮತ್ತು ಇತರ ಮಾಧ್ಯಮಗಳಿಗೆ ಸಾರ್ವಜನಿಕ ಬೊಕ್ಕಸದ ಹಣದಲ್ಲಿ ಜಾಹೀರಾತು ನೀಡುವುದನ್ನು ಹಾಗೂ ಅಧಿಕಾರದಲ್ಲಿರುವ ಪಕ್ಷದ ಚುನಾವಣಾ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಲು ಅನುಕೂಲಕರವಾಗುವಂತೆ ಚುನಾವಣೆಯ ಸಂದರ್ಭದಲ್ಲಿ ಸರ್ಕಾರದ ಸಾಧನೆಗಳ ಕುರಿತು ಪಕ್ಷಪಾತದಿಂದ ಕೂಡಿದ ರಾಜಕೀಯ ಸುದ್ದಿಗಳಿಗಾಗಿ ಮತ್ತು ಪ್ರಚಾರಕ್ಕಾಗಿ ಸರ್ಕಾರಿ ಸಮೂಹ ಮಾಧ್ಯಮಗಳನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ಜಾಗರೂಕತೆಯಿಂದ ತಪ್ಪಿಸಬೇಕು.

(v) ಚುನಾವಣಾ ಆಯೋಗದಿಂದ ಚುನಾವಣೆ ಬಗ್ಗೆ ಅಧಿಸೂಚನೆ ಪ್ರಕಟವಾದ ಸಮಯದಿಂದ, ಸಚಿವರು ಮತ್ತು ಸಂಬಂಧಪಟ್ಟ ಪ್ರಾಧಿಕಾರಿಗಳು, ತಮ್ಮ ವಿವೇಚನಾ ನಿಧಿಯಿಂದ ಅನುದಾನಗಳು/ ಸಂದಾಯಗಳನ್ನು ಮಂಜೂರು ಮಾಡಬಾರದು; ಮತ್ತು

(vi) ಆಯೋಗದಿಂದ ಚುನಾವಣೆ ಬಗ್ಗೆ ಅಧಿಸೂಚನೆ ಪ್ರಕಟವಾದ ಸಮಯದಿಂದ, ಸಚಿವರು ಮತ್ತು ಇತರ ಪ್ರಾಧಿಕಾರಿಗಳು ಈ ಕೆಳಕಂಡ ಕಾರ್ಯಗಳನ್ನು ಮಾಡತಕ್ಕದ್ದಲ್ಲ, ಎಂದರೆ:–

(ಎ) ಯಾವುದೇ ರೂಪದ ಹಣಕಾಸು ಅನುದಾನಗಳನ್ನು ಘೋಷಿಸಬಾರದು ಅಥವಾ ಅದರ ಆಶ್ವಾಸನೆಗಳ ನೀಡಬಾರದು; ಅಥವಾ

(ಬಿ) ಯಾವುದೇ ಬಗೆಯ ಕಾರ್ಯ ಯೋಜನೆ ಅಥವಾ ಸ್ಕೀಮ್‌ಗಳಿಗೆ ಶಂಕುಸ್ಥಾಪನೆ, ಇತ್ಯಾದಿಗಳನ್ನು ನೆರವೇರಿಸಬಾರದು; ಅಥವಾ

(ಸಿ) ರಸ್ತೆಗಳ ನಿರ್ಮಾಣ ಮಾಡುವುದಾಗಿ, ಕುಡಿಯುವ ನೀರಿನ ಸೌಲಭ್ಯ, ಇತ್ಯಾದಿ ಒದಗಿಸುವುದಾಗಿ ಯಾವುದೇ ಆಶ್ವಾಸನೆ ನೀಡಬಾರದು; ಅಥವಾ

(ಡಿ) ಅಧಿಕಾರದಲ್ಲಿರುವ ಪಕ್ಷದೆಡೆಗೆ ಮತದಾರರನ್ನು ಪ್ರಭಾವಿಸಿ ಸೆಳೆಯಲು ಅನುಕೂಲವಾಗುವಂತೆ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ತಾತ್ಕಾಲಿಕ ನೇಮಕಾತಿಗಳನ್ನು ಮಾಡಬಾರದು.

**ಸೂಚನೆ:** ಚುನಾವಣಾ ಆಯೋಗವು, ಚುನಾವಣೆಗಳಿಗೆ ಸಂಬಂಧಿಸಿದಂತೆ ಯಾವ ದಿನಾಂಕದಂದು ಅಧಿಸೂಚನೆಯನ್ನು ಹೊರಡಿಸುವ ಸಂಭವವಿದೆಯೋ ಆ ದಿನಾಂಕಕ್ಕೆ ಮುಂಚೆ ಮೂರು ವಾರಗಳಿಗೆ ಮೀರದಂತೆ ಅಂಥ ಯಾವುದೇ ಚುನಾವಣೆಯ ದಿನಾಂಕವನ್ನು ಪ್ರಕಟಿಸತಕ್ಕದ್ದು.

(vii) ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಚಿವರು ಒಬ್ಬ ಅಭ್ಯರ್ಥಿಯಾಗಿ ಅಥವಾ ಮತದಾರನಾಗಿ ಅಥವಾ ಅಧಿಕೃತ ಏಜೆಂಟ್ ಆಗಿ ಅಲ್ಲದೆ ಬೇರ್ಯಾವುದೇ ಬಗೆಯಲ್ಲಿ ಯಾವುದೇ ಮತಗಟ್ಟೆಯನ್ನು ಅಥವಾ ಮತಎಣಿಕೆ ಸ್ಥಳವನ್ನು ಪ್ರವೇಶಿಸತಕ್ಕದ್ದಲ್ಲ.

## ಪರಿಶಿಷ್ಟ–18

## (ಅಧ್ಯಾಯ–7, ಪ್ಯಾರಾ 7.11.1)

## ಭಿತ್ತಿಪತ್ರಗಳು ಮುಂತಾದವುಗಳ ಮುದ್ರಣದ ಮೇಲೆ ನಿರ್ಬಂಧದ ಆದೇಶ

ಸಂಖ್ಯೆ.3/9(ಇಎಸ್ 008)/94–ಜೆ.ಎಸ್. II, ದಿನಾಂಕ: 2ನೇ ಸೆಪ್ಟಂಬರ್, 1994

**ವಿಷಯ: ಕರಪತ್ರಗಳು, ಭಿತ್ತಿಪತ್ರಗಳು, ಮುಂತಾದವುಗಳ ಮುದ್ರಣದ ಮೇಲೆ ನಿರ್ಬಂಧಗಳು**

ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು, ಮುಂತಾದವುಗಳ ಮುದ್ರಣ ಮತ್ತು ಪ್ರಕಟಣೆಯನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ 127ಎ ಪ್ರಕರಣದ ಉಪಬಂಧಗಳು ನಿಯಂತ್ರಿಸುತ್ತದೆ.

2. ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು, ಮುಂತಾದವುಗಳ ಪ್ರಕಾಶಕರ ಮತ್ತು ಮುದ್ರಕರ ಗುರುತನ್ನು ದೃಢಪಡಿಸುವ ದೃಷ್ಟಿಯಿಂದ, ಕಾನೂನಿನ ಅಡಿಯಲ್ಲಿ ಅಂತಹ ದಸ್ತಾವೇಜುಗಳ ಮುದ್ರಣದ ಮೇಲಿನ ನಿರ್ಬಂಧನೆಗಳನ್ನು ವಿಧಿಸಲಾಗಿದೆ. ಹಾಗಾಗಿ, ಯಾವುದೇ ಅಂತಹ ದಸ್ತಾವೇಜು ಕಾನೂನು ಬಾಹಿರವಾದ, ಕಾನೂನನ್ನೇ ಉಲ್ಲಂಘಿಸುವ ಅಥವಾ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಅಪೀಲು ಮಾಡುವಂತಹ ಅಥವಾ ಪ್ರತಿಸ್ಪರ್ಧಿಯ ಚಾರಿತ್ರ್ಯವಧೆಯಂತಹ ಆಕ್ಷೇಪಣೀಯವಾದ ಯಾವುದೇ ವಿಷಯ ಅಥವಾ ಅಂಶಗಳನ್ನು ಒಳಗೊಂಡಿದ್ದರೆ, ಆ ಸಂಬಂಧಪಟ್ಟ ವ್ಯಕ್ತಿಗಳ ವಿರುದ್ಧ ಅವಶ್ಯಕ ದಂಡನಾ ಅಥವಾ ಮುಂಜಾಗ್ರತಾ ಕ್ರಮ ಕೈಗೊಳ್ಳಬಹುದು. ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು, ಮೊದಲಾದವುಗಳನ್ನು ಮುದ್ರಿಸುವುದು ಮತ್ತು ಪ್ರಕಟಿಸುವುದರ ಮೇಲೆ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಅನಧಿಕೃತ ಚುನಾವಣಾ ವೆಚ್ಚವನ್ನು ಭರಿಸುವುದರ ಮೇಲೆ ಕಡಿವಾಣ ಹಾಕುವ ಉದ್ದೇಶವನ್ನು ಸಹ ಈ ನಿರ್ಬಂಧಗಳು ಈಡೇರಿಸುತ್ತವೆ.

3. ಆಯೋಗವು, ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು ಮೊದಲಾದವುಗಳನ್ನು ಮುದ್ರಿಸುವುದಕ್ಕೆ ಮತ್ತು ಪ್ರಕಟಿಸುವುದಕ್ಕೆ ಸಂಬಂಧಿಸಿದ ಮೇಲಿನ ಕಾನೂನಿನ ಉಪಬಂಧಗಳು ಪಾಲನೆಯಾಗುವುದಕ್ಕಿಂತ ಹೆಚ್ಚಿಗೆ ಉಲ್ಲಂಘನೆಯಾಗುತ್ತಿರುವುದನ್ನು ಗಮನಿಸಿದೆ. ಚುನಾವಣೆಗಳ ಸಮಯದಲ್ಲಿ, ಮೇಲೆ ಹೇಳಲಾದ ಕಾನೂನಿನ ಅಗತ್ಯತೆಗಳನ್ನು ಪಾಲಿಸದೇ ಅಂತಹ ದಸ್ತಾವೇಜುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮುದ್ರಿಸಲಾಗುತ್ತಿದೆ, ಪ್ರಕಟಿಸಲಾಗುತ್ತಿದೆ, ಹಂಚಲಾಗುತ್ತಿದೆ ಮತ್ತು ಖಾಸಗಿ ಮತ್ತು ಸರ್ಕಾರಿ ಕಟ್ಟಡಗಳ ಗೋಡೆಯ ಮೇಲೆ ಅಂಟಿಸಲಾಗುತ್ತಿದೆ. ಮುದ್ರಣಾಲಯದವರು ಮುದ್ರಿತ ದಸ್ತಾವೇಜುಗಳನ್ನು 127ಎ(2)ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಒಮ್ಮೊಮ್ಮೆ ಪ್ರಕಾಶಕರಿಂದ ಪಡೆದ ಘೋಷಣೆಯೊಂದಿಗೆ ಎಲ್ಲ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಅಥವಾ ಸಂದರ್ಭಾನುಸಾರ ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಕಳುಹಿಸಲಾಗುತ್ತಿದ್ದು, ಬಹಳಷ್ಟು ಸಮಯದಲ್ಲಿ 127ಎ(1) ಪ್ರಕರಣವನ್ನು ಉಲ್ಲಂಘಿಸಿ, ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು ಮುಂತಾದವುಗಳ ಮೇಲೆ ಅದರ ಮುದ್ರಕರ ಮತ್ತು / ಅಥವಾ ಪ್ರಕಾಶಕರ ಹೆಸರು ಮತ್ತು ವಿಳಾಸಗಳನ್ನು ಹಾಕದಿರುವುದನ್ನು ಆಯೋಗವು ಗಮನಿಸಿದೆ.

4. ಅಪರಾಧಿಗಳ ವಿರುದ್ಧ ಸಕಾಲಿಕ ಕ್ರಮ ಕೈಗೊಳ್ಳದಿರುವುದರಿಂದ ಕಾನೂನು ಉಲ್ಲಂಘನಾ ವಿಷಯವನ್ನು ನಿರ್ಭೀತಿಯಿಂದ ಮುಕ್ತವಾಗಿ ಪ್ರಕಟಿಸಿ ನಿರ್ಭೀತಿಯಿಂದ ಹಂಚಲಾಗುತ್ತಿರುವ ಬಗ್ಗೆ ಆಯೋಗಕ್ಕೆ ಮತ್ತಷ್ಟು ದೂರು ಬಂದಿವೆ. ಈ ಸಂಬಂಧದಲ್ಲಿ ರಹಿಮ್‌ಖಾನ್–ವಿರುದ್ಧ– ಖುರ್ಷಿದ್

ಅಹಮದ್ ಮತ್ತು ಇತರರು (ಎಐಆರ್ 1975 ಎಸ್‌ಸಿ 290) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವ್ಯಕ್ತಪಡಿಸಿದ ಈ ಮುಂದಿನ ಅಭಿಪ್ರಾಯಗಳ ಕಡೆಗೆ ಗಮನ ಸೆಳೆಯಲಾಗಿದೆ:

> "ಈ ಹಂತದಲ್ಲಿಯೂ ಕೂಡ, ಮುದ್ರಕನ ಮತ್ತು ಪ್ರಕಾಶಕನ ಹೆಸರನ್ನು ಕರಪತ್ರವು ಒಳಗೊಂಡಿರಬೇಕು ಎಂದು ಚುನಾವಣಾ ಕಾನೂನು ಅಗತ್ಯಪಡಿಸಿದ್ದರೂ ಸಹ, ವಿವಾದಿತ ಕರಪತ್ರವು ಅದನ್ನು ಒಳಗೊಂಡಿಲ್ಲ ಎಂಬುದನ್ನು ನಾವು ಗಮನಿಸಬಹುದು. ದುರದೃಷ್ಟವಶಾತ್, ಆ ಮುದ್ರಿತ ವಿಷಯವನ್ನು ಹಂಚಿರುವಾಗ ಕಾನೂನು ಏಜೆನ್ಸಿಯು ಸೂಕ್ತ ತನಿಖೆಯನ್ನು ಮಾಡಿ, ತ್ವರಿತ ಕ್ರಮವನ್ನು ಕೈಗೊಂಡಿರುವುದಿಲ್ಲ, ಅದರ ಪರಿಣಾಮವಾಗಿ ಚುನಾವಣಾ ಅವಧಿಯಲ್ಲಿ ಮುದ್ರಕ ಅಥವಾ ಅಭ್ಯರ್ಥಿ ಅಥವಾ ಪ್ರಚಾರಕನು ಕಾನೂನಿನ ಬಗ್ಗೆ ಕಿಂಚಿತ್ತೂ ಯೋಚಿಸದೇ ಮತ್ತು ಚುನಾವಣೆಯ ನಂತರ ವೃಥಾ ಕೆಲವು ವ್ಯಾಜ್ಯಗಳಿಗೆ ಖರ್ಚು ಮಾಡಿ ಈ ಪ್ರಶ್ನೆಯನ್ನು ಎತ್ತುವವರೆಗೂ ಏನೂ ಆಗುವುದಿಲ್ಲ ಎಂದು ತಿಳಿದು, ಮೂಲದ ಜಾಡು ಸಿಗದಂತೆ ಅವನು ಹಗರಣವನ್ನು ವ್ಯಾಪಿಸಿಕೊಳ್ಳಲು ಯಶಸ್ವಿಯಾಗುತ್ತಾನೆ. ಶಾಸನ ರಚನೆಯಿಂದ ಕಾನೂನು ಬಲ ಎಷ್ಟು ಮುಖ್ಯವೋ ಅದನ್ನು ಸಕಾಲದಲ್ಲಿ ಜಾರಿಗೊಳಿಸುವುದು ಅಷ್ಟೇ ಮುಖ್ಯವಾಗುತ್ತದೆ".

5. ಮುಂದೆ, ಆಯೋಗವು ಸಂವಿಧಾನದ 324ನೇ ಅನುಚ್ಛೇದದ ಅಡಿಯಲ್ಲಿರುವ ತನ್ನ ಅಧಿಕಾರಗಳನ್ನು ಮತ್ತು ಈ ಬಗ್ಗೆ ಅದು ಹೆಚ್ಚಿಸುವ ಇನ್ನಿತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ ಮತ್ತು ವಿಷಯದ ಮೇಲಿನ ಅದರ ಹಿಂದಿನ ಎಲ್ಲ ಸೂಚನೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಆ ವಿಷಯ ಕುರಿತ ಮೇಲೆ ಹೇಳಲಾದ ಕಾನೂನಿನ ಉಪಬಂಧಗಳ ಅಗತ್ಯತೆಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುವ ಮತ್ತು ಪಾಲಿಸುವ ಸಲುವಾಗಿ, ಈ ಮೂಲಕ ಈ ಮುಂದಿನಂತೆ ನಿರ್ದೇಶಿಸುತ್ತದೆ:–

(1) ಚುನಾವಣಾ ಆಯೋಗವು ಸಂಸತ್ತು, ವಿಧಾನಸಭೆ ಅಥವಾ ವಿಧಾನ ಪರಿಷತ್ ಚುನಾವಣಾ ಕ್ಷೇತ್ರದಿಂದ ಯಾವುದೇ ಚುನಾವಣೆಯನ್ನು, ಚುನಾವಣಾ ಆಯೋಗವು ಘೋಷಿಸಿದ ಕೂಡಲೇ, ಜಿಲ್ಲಾ ಮ್ಯಾಜಿಸ್ಟ್ರೇಟರು, ಚುನಾವಣೆಯ ಅಂಥ ಘೋಷಣೆಯ ಮೂರು ದಿನಗಳ ಒಳಗಾಗಿ ಅವರ ಜಿಲ್ಲೆಗಳಲ್ಲಿನ ಎಲ್ಲ ಮುದ್ರಣಾಲಯಗಳಿಗೆ,–

(ಎ) ಮೇಲೆ ಹೇಳಿದ 127ಎ ಪ್ರಕರಣದ ಅಗತ್ಯತೆಗಳೆಡೆ ಅವರ ಗಮನ ಸೆಳೆದು ಮತ್ತು ಯಾವುದೇ ಚುನಾವಣಾ ಕರಪತ್ರಗಳು ಅಥವಾ ಭಿತ್ತಿಪತ್ರಗಳು ಮತ್ತು ಅವರು ಮುದ್ರಿಸಿದ ಇತರ ಸಾಮಗ್ರಿಗಳ ಪ್ರಿಂಟ್ ಲೈನ್‌ನಲ್ಲಿ ಮುದ್ರಕನ ಮತ್ತು ಪ್ರಕಾಶಕನ ಹೆಸರುಗಳು ಮತ್ತು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸುವಂತೆ ಅವರಿಗೆ ನಿರ್ದಿಷ್ಟ ಸೂಚನೆಯನ್ನು ನೀಡುವ;

(ಬಿ) ಮುದ್ರಿತ ವಿಷಯದ ಪ್ರತಿಗಳನ್ನು (ಅಂಥ ಪ್ರತಿಯೊಂದು ಮುದ್ರಿತ ವಿಷಯದ ಮೂರು ಹೆಚ್ಚಿನ ಪ್ರತಿಗಳ ಸಹಿತ) ಮತ್ತು 127ಎ(2) ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಅದನ್ನು ಮುದ್ರಿಸಿದ ಮೂರು ದಿನಗಳ ಒಳಗಾಗಿ ಪ್ರಕಾಶಕನಿಂದ ಪಡೆದ ಘೋಷಣೆಯನ್ನು ಕಳುಹಿಸುವಂತೆ ಮುದ್ರಣಾಲಯಗಳನ್ನು ಕೋರುವ;

(ಸಿ) 127ಎ ಪ್ರಕರಣದ ಉಪಬಂಧಗಳ ಮತ್ತು ಆಯೋಗದ ಮೇಲಿನ ನಿರ್ದೇಶನಗಳ ಯಾವುದೇ ಉಲ್ಲಂಘನೆಯನ್ನು ತುಂಬಾ ಗಂಭೀರವಾಗಿ ಪರಿಗಣಿಸಲಾಗುವುದೆಂದು ಮತ್ತು ರಾಜ್ಯದ ಸಂಬಂಧಪಟ್ಟ ಕಾನೂನುಗಳಡಿಯಲ್ಲಿ ಮುದ್ರಣಾಲಯಗಳ ಪರವಾನಗಿಗಳನ್ನು ರದ್ದುಗೊಳಿಸುವುದನ್ನು ಕೂಡ ಒಳಗೊಂಡಂತೆ ಸಂವಾದಿ ಪ್ರಕರಣಗಳಲ್ಲಿ ಕೈಗೊಳ್ಳಬಹುದಾದ ನಿರ್ದಾಕ್ಷಿಣ್ಯ

ಕ್ರಮವನ್ನು ಕೈಗೊಳ್ಳಲಾಗುವುದೆಂದು ಸ್ಪಷ್ಟವಾದ ಮಾತುಗಳಲ್ಲಿ ಅವರಿಗೆ ಮನದಟ್ಟಾಗುವ ಪತ್ರವನ್ನು ಬರೆಯತಕ್ಕದ್ದು.

(2) ಮುಖ್ಯ ಚುನಾವಣಾ ಅಧಿಕಾರಿಗಳು, ರಾಜ್ಯ ರಾಜಧಾನಿಗಳಲ್ಲಿ ಇರುವ ಮುದ್ರಣಾಲಯಗಳ ಸಂಬಂಧದಲ್ಲಿಯೂ ಇದೇ ರೀತಿ ಮಾಡತಕ್ಕದ್ದು.

(3) ಯಾವುದೇ ಚುನಾವಣಾ ಕರಪತ್ರಗಳು ಅಥವಾ ಭಿತ್ತಿಪತ್ರಗಳು, ಇತ್ಯಾದಿಗಳ ಮುದ್ರಣವನ್ನು ಕೈಗೆತ್ತಿಕೊಳ್ಳುವ ಮೊದಲು, ಮುದ್ರಕನು, ಇದರೊಂದಿಗಿರುವ ಪರಿಶಿಷ್ಟ–ಎಯಲ್ಲಿ ಆಯೋಗವು ಗೊತ್ತುಪಡಿಸಿದ ನಮೂನೆಯಲ್ಲಿ 127ಎ(2) ಪ್ರಕರಣದ ನಿಬಂಧನೆಗಳಿಗನುಸಾರವಾಗಿ ಪ್ರಕಾಶಕನಿಂದ ಒಂದು ಘೋಷಣೆಯನ್ನು ಪಡೆದುಕೊಳ್ಳತಕ್ಕದ್ದು. ಈ ಘೋಷಣೆಗೆ ಪ್ರಕಾಶಕನು ಯುಕ್ತವಾಗಿ ಸಹಿ ಹಾಕತಕ್ಕದ್ದು ಮತ್ತು ಪ್ರಕಾಶಕನಿಗೆ ವೈಯಕ್ತಿಕವಾಗಿ ಗೊತ್ತಿರುವ ಇಬ್ಬರು ವ್ಯಕ್ತಿಗಳು ಅದನ್ನು ದೃಢೀಕರಿಸಿರತಕ್ಕದ್ದು. ಸಂದರ್ಭಾನುಸಾರ ಮುಖ್ಯ ಚುನಾವಣಾ ಅಧಿಕಾರಿಗೆ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅದನ್ನು ಕಳುಹಿಸುವಾಗ ಮುದ್ರಕನು ಸಹ ಅದನ್ನು ದೃಢೀಕರಿಸತಕ್ಕದ್ದು.

(4) ಮೇಲೆ ನಿರ್ದೇಶಿಸಲಾದಂತೆ, ಮುದ್ರಕನು, ಮುದ್ರಿತ ವಿಷಯದ ನಾಲ್ಕು (4) ಪ್ರತಿಗಳನ್ನು ಅದರ ಮುದ್ರಣದ ಮೂರು (3) ದಿನಗಳ ಒಳಗಾಗಿ ಪ್ರಕಾಶಕನ ಘೋಷಣೆಯ ಜೊತೆಗೆ ಒದಗಿಸತಕ್ಕದ್ದು. ಅಂಥ ಮುದ್ರಿತ ಸಾಮಗ್ರಿ ಮತ್ತು ಘೋಷಣೆಯ ಜೊತೆಗೆ ಮುದ್ರಕನು, ಮುದ್ರಿಸಿದ ದಸ್ತಾವೇಜು ಪ್ರತಿಗಳ ಸಂಖ್ಯೆ ಮತ್ತು ಅಂಥ ಮುದ್ರಣಕ್ಕಾಗಿ ವಿಧಿಸಿದ ದರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಹ, ಇದರೊಂದಿಗಿನ ಪರಿಶಿಷ್ಟ–ಬಿ ಯಲ್ಲಿ ಆಯೋಗವು ಗೊತ್ತುಪಡಿಸಿದ ನಮೂನೆಯಲ್ಲಿ ಒದಗಿಸತಕ್ಕದ್ದು. ಅಂಥ ಮಾಹಿತಿಯನ್ನು ಮುದ್ರಕನು, ಆತನು ಮುದ್ರಿಸಿದ ಪ್ರತಿಯೊಂದು ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು, ಮುಂತಾದವುಗಳಿಗೆ ಸಂಬಂಧಿಸಿದಂತೆ ಅಂಥ ಪ್ರತಿಯೊಂದು ದಸ್ತಾವೇಜಿನ ಮುದ್ರಣದ ಮೂರು (3) ದಿನಗಳ ಒಳಗಾಗಿ ಒಟ್ಟಾಗಿ ಸಲ್ಲಿಸದೆ, ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.

(5) ಜಿಲ್ಲಾ ಮ್ಯಾಜಿಸ್ಟ್ರೇಟರು ಮುದ್ರಣಾಲಯದಿಂದ ಯಾವುದೇ ಚುನಾವಣಾ ಕರಪತ್ರಗಳು ಅಥವಾ ಭಿತ್ತಿಪತ್ರಗಳು, ಮುಂತಾದವುಗಳನ್ನು ಸ್ವೀಕರಿಸಿದ ಕೂಡಲೇ ಅವರು, ಮುದ್ರಕನು ಮತ್ತು ಪ್ರಕಾಶಕನು ಕಾನೂನಿನ ಅಗತ್ಯತೆಗಳನ್ನು ಮತ್ತು ಆಯೋಗದ ಮೇಲಿನ ನಿರ್ದೇಶನಗಳನ್ನು ಪಾಲಿಸಿರುವರೇ ಎಂಬುದನ್ನು ಪರಿಶೀಲಿಸತಕ್ಕದ್ದು. ಎಲ್ಲ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಇತರ ಆಸಕ್ತಿಯುಳ್ಳ ವ್ಯಕ್ತಿಗಳು, ಅಂಥ ದಸ್ತಾವೇಜಿನ ಸಂಬಂಧದಲ್ಲಿ ಕಾನೂನಿನ ಅಗತ್ಯಗಳನ್ನು ಕ್ರಮಬದ್ಧವಾಗಿ ಪಾಲಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸಲು ಅವರಿಗೆ ಸಾಧ್ಯವಾಗುವಂತೆ ತನ್ನ ಕಚೇರಿಯಲ್ಲಿನ ಕೆಲವು ಎದ್ದುಕಾಣುವ ಸ್ಥಳದಲ್ಲಿ ಅದರ ಒಂದು ಪ್ರತಿಯನ್ನು ಪ್ರದರ್ಶಿಸುವಂತೆ ಸಹ ಅವರು ಮಾಡತಕ್ಕದ್ದು ಮತ್ತು ಅದರಿಂದ ಇತರ ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು, ಮುಂತಾದವುಗಳ ಸಂಬಂಧದಲ್ಲಿ ಮೇಲಿನ ಕಾನೂನಿನ ಅಗತ್ಯತೆಗಳನ್ನು ಉಲ್ಲಂಘಿಸಲಾಗಿರುವಂತಹದೇ ಪ್ರಕರಣಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳ ಗಮನಕ್ಕೆ ತರಲು ಸಹ ಅವರಿಗೆ ಸಾಧ್ಯವಾಗುತ್ತದೆ.

(6) ಮುಖ್ಯ ಚುನಾವಣಾ ಅಧಿಕಾರಿಗಳು ಸಹ, ಅವರು ಸ್ವೀಕರಿಸಿದ ಕರಪತ್ರಗಳು, ಭಿತ್ತಿಪತ್ರಗಳು, ಮುಂತಾದವುಗಳ ಸಂಬಂಧದಲ್ಲಿ ಮೇಲಿನ ಉಪ–ಕಂಡಿಕೆ (5)ರಲ್ಲಿ ಉಲ್ಲೇಖಿಸಲಾದಂತಹುದೇ ಹೆಚ್ಚಿನ ಅನುಸರಣಾ ಕ್ರಮವನ್ನು ಸಹ ತೆಗೆದುಕೊಳ್ಳತಕ್ಕದ್ದು.

(7) ಮೇಲೆ ತಿಳಿಸಿದ 127ಎ ಪ್ರಕರಣದ ಉಪಬಂಧಗಳನ್ನು ಮತ್ತು / ಅಥವಾ ಮೇಲ್ಕಂಡ ಆಯೋಗದ ನಿರ್ದೇಶನಗಳನ್ನು ಉಲ್ಲಂಘಿಸಿ ಚುನಾವಣಾ ಕರಪತ್ರಗಳು, ಭಿತ್ತಿಪತ್ರಗಳು ಮುಂತಾದವುಗಳನ್ನು ಪ್ರಕಟಿಸಿರುವ ಯಾವುದೇ ಪ್ರಕರಣವು ಮುಖ್ಯ ಚುನಾವಣಾ ಅಧಿಕಾರಿಗಳು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ಗಮನಕ್ಕೆ ಬಂದರೆ ಅಥವಾ ಅದನ್ನು ಅವರ

ಗಮನಕ್ಕೆ ತಂದರೆ, ಆ ಕೂಡಲೇ ಅವರು ತನಿಖೆಗಾಗಿ ತ್ವರಿತ ಕ್ರಮವನ್ನು ಪ್ರಾರಂಭಿಸತಕ್ಕದ್ದು. ಅಂಥ ಎಲ್ಲ ಪ್ರಕರಣಗಳಲ್ಲಿ ಅತೀ ತ್ವರಿತವಾಗಿ ಅಪರಾಧಿಗಳ ವಿರುದ್ಧ ಪ್ರಾಸಿಕ್ಯೂಷನ್ ಅನ್ನು ಪ್ರಾರಂಭಿಸತಕ್ಕದ್ದು ಮತ್ತು ಈ ಪ್ರಕರಣಗಳನ್ನು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಸಕ್ರಿಯವಾಗಿ ಮುಂದುವರಿಸಿಕೊಂಡು ಹೋಗತಕ್ಕದ್ದು.

6. ಆಯೋಗವು, ಈ ಮೂಲಕ, ಎಲ್ಲ ರಾಜಕೀಯ ಪಕ್ಷಗಳಿಗೆ, ಅಭ್ಯರ್ಥಿಗಳಿಗೆ ಮತ್ತು ಇತರ ಸಂಬಂಧಪಟ್ಟವರಿಗೆ, ಮೇಲಿನ ವಿಷಯದ ಬಗ್ಗೆ ಕಾನೂನಿನ ಮತ್ತು ಆಯೋಗದ ನಿರ್ದೇಶನಗಳ ಯಾವುದೇ ಉಲ್ಲಂಘನೆಯನ್ನು ಅತ್ಯಂತ ಜಾಗರೂಕತೆಯಿಂದ ಪರಿಶೀಲಿಸಲಾಗುವುದೆಂದು ಮತ್ತು ಅಪರಾಧಿಗಳ ವಿರುದ್ಧ ಸಾಧ್ಯವಿರುವ ಅತ್ಯಂತ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡುತ್ತದೆ.

7. ಮೇಲ್ಕಂಡ ಕಾನೂನಿನ ಉಪಬಂಧಗಳನ್ನು ಮತ್ತು ಆಯೋಗದ ನಿರ್ದೇಶನಗಳನ್ನು ಜಾರಿಗೆ ತರಲು ಹೊಣೆಗಾರನಾಗಿರುವ ಯಾರೇ ಅಧಿಕಾರಿಯು ಈ ಸಂಬಂಧವಾಗಿ ತನ್ನ ಕರ್ತವ್ಯಗಳ ಯುಕ್ತ ನಿರ್ವಹಣೆಯಲ್ಲಿ ವಿಫಲನಾಗಿರುವುದು ಕಂಡುಬಂದರೆ, ಆತನ ಅಧಿಕೃತ ಕರ್ತವ್ಯದ ಉಲ್ಲಂಘನೆಗಾಗಿ ಆತನ ವಿರುದ್ಧ ಕೈಗೊಳ್ಳಬಹುದಾದಂಥ ಯಾವುದೇ ದಂಡನಾ ಕ್ರಮದ ಜೊತೆಗೆ ಆತನು ತೀವ್ರ ಶಿಸ್ತು ಕ್ರಮಕ್ಕೂ ಗುರಿಯಾಗಬೇಕಾಗುತ್ತದೆ.

**ಭಾರತ ಚುನಾವಣಾ ಆಯೋಗದ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**ಅನುಬಂಧ– ಎ**

**[ಅಧ್ಯಾಯ–11, ಪ್ಯಾರಾ 11.3 ನ್ನು ನೋಡಿ]**

**ಚುನಾವಣಾ ಭಿತ್ತಿಪತ್ರ, ಕರಪತ್ರ ಇತ್ಯಾದಿಗಳ ಪ್ರಕಾಶಕರು ಸಲ್ಲಿಸಬೇಕಾದ ಘೋಷಣಾ ಪತ್ರದ ನಮೂನೆ**

[ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 127–ಎ ಪ್ರಕರಣ ನೋಡಿ]

........................................................................................................ ಅವರ ಮಗ/ ಮಗಳು/ ಹೆಂಡತಿಯಾದ...........................(ಹೆಸರು) ............ಎಂಬ ನಾನು ............................................ ರಾಜ್ಯದ ......................ಜಿಲ್ಲೆಯ.......................ಗ್ರಾಮದ ನಿವಾಸಿಯಾಗಿದ್ದು......................... (ಮುದ್ರಣಾಲಯದ ಹೆಸರು) ಇವರು ಮುದ್ರಿಸಿರುವ......................... ದಸ್ತಾವೇಜುಗಳ (ಚುನಾವಣಾ ಭಿತ್ತಿಪತ್ರ, ಕರಪತ್ರ ಇತ್ಯಾದಿಗಳ ಸಂಕ್ಷಿಪ್ತ ವಿವರ ನೀಡಬೇಕು) ಪ್ರಕಾಶಕನಾಗಿರುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ: (ಪ್ರಕಾಶಕರ ಸಹಿ)

ದಿನಾಂಕ: ಪೂರ್ಣ ವಿಳಾಸ................

ದೃಢೀಕರಿಸುವವರು (ಪ್ರಕಾಶಕರಿಗೆ ವೈಯಕ್ತಿಕ ಪರಿಚಯ ಇರುವವರು)

1 ಸಹಿ, ಹೆಸರು ಮತ್ತು ವಿಳಾಸ

2 ಸಹಿ, ಹೆಸರು ಮತ್ತು ವಿಳಾಸ

ಮೇಲು ರುಜು

ಮುದ್ರಕರ ಸಹಿ, ಹೆಸರು ಮತ್ತು ವಿಳಾಸ

**ಅನುಬಂಧ– ಬಿ**

**[ಅಧ್ಯಾಯ–VII, ಪ್ಯಾರಾ 11.2 (ಬಿ) ನೋಡಿ]**

**ಚುನಾವಣಾ ಪೋಸ್ಟರ್‌ಗಳು, ಕರಪತ್ರಗಳು, ಇತ್ಯಾದಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಸಲ್ಲಿಕೆಯ ನಮೂನೆ**

1. ಮುದ್ರಕರ ಹೆಸರು ಮತ್ತು ವಿಳಾಸ------------------------------------------
   ------------------------------------------------------------
   ------------------------------------------------------------
2. ಪ್ರಕಾಶಕರ ಹೆಸರು ಮತ್ತು ವಿಳಾಸ------------------------------------------
   ------------------------------------------------------------
   -----------------------------------------------------------
3. ಪ್ರಕಾಶಕರು ಮುದ್ರಣಾ ಆದೇಶ ನೀಡಿದ ದಿನಾಂಕ--------------------------------
4. ಪ್ರಕಾಶಕರ ಘೋಷಣೆಯ ದಿನಾಂಕ---------------------------------
5. ಚುನಾವಣಾ ಪೋಸ್ಟರ್, ಕರಪತ್ರ ಇತ್ಯಾದಿಗಳ ಸಂಕ್ಷಿಪ್ತ ವಿವರಗಳು-------------------
   ------------------------------------------------------------
6. ಮೇಲಿನ ದಾಖಲೆಗಳನ್ನು ಮುದ್ರಿಸಿದ ಪ್ರತಿಗಳ ಸಂಖ್ಯೆ---------------------------
7. ಮುದ್ರಿಸಿದ ದಿನಾಂಕ---------------------------------------
8. ಮೇಲಿನ ದಾಖಲೆಗಳ ಮುದ್ರಣಕ್ಕಾಗಿ ಪ್ರಕಾಶಕರ ಮೇಲೆ ವಿಧಿಸಿದ ಶುಲ್ಕ (ಕಾಗದದ ವೆಚ್ಚವೂ ಸೇರಿದಂತೆ)---------------------------------------------------
   ----------------------------------------------

ಸ್ಥಳ----------------- (ಮುದ್ರಕರ ಸಹಿ)

ದಿನಾಂಕ---------------- (ಮುದ್ರಕರ ಮೊಹರು)

**ಪರಿಶಿಷ್ಟ– 19**
**(ಅಧ್ಯಾಯ–9, ಪ್ಯಾರಾ 9.1.3)**
**ಚುನಾವಣೆ ನಡೆಸುವ ನಿಯಮಗಳು, 1992**
**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ಅಧಿಸೂಚನೆ**
ನವದೆಹಲಿ, 24 ಮಾರ್ಚ್, 1992

**ಎಸ್.ಒ.230**(ಇ)– 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ (1951ರ 43) 169ನೆಯ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ನಂತರ, 1961ರ ಚುನಾವಣೆಗಳನ್ನು ನಡೆಸುವ ನಿಯಮಗಳಿಗೆ ಇನ್ನಷ್ಟು ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದೆ, ಎಂದರೆ:

1. (1) ಈ ನಿಯಮಗಳನ್ನು ಚುನಾವಣೆಗಳನ್ನು ನಡೆಸುವ (ತಿದ್ದುಪಡಿ) ನಿಯಮಗಳು, 1992 ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾದ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 1961ರ ಚುನಾವಣೆಗಳನ್ನು ನಡೆಸುವ ನಿಯಮಗಳಲ್ಲಿ (ಇಲ್ಲಿ ಇನ್ನು ಮುಂದೆ ಮೂಲ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)

(ಎ) ಭಾಗ–IVರ ಶೀರ್ಷಿಕೆಯ ನಂತರ, ಈ ಕೆಳಗೆ ಹೇಳಿರುವುದನ್ನು ಸೇರಿಸತಕ್ಕದ್ದು, ಎಂದರೆ:–

**"ಅಧ್ಯಾಯ –I**
**ಮತಪತ್ರದ ಮೂಲಕ ಮತ ನೀಡುವುದು";**

(ಬಿ) 28ನೇ ನಿಯಮದಲ್ಲಿ ಬರುವ "ಈ ಭಾಗದಲ್ಲಿ" ಎಂಬ ಪದಗಳಿಗೆ ಬದಲಾಗಿ "ಈ ಅಧ್ಯಾಯದಲ್ಲಿ ಮತ್ತು ಅಧ್ಯಾಯ – **II**ರಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) 49ನೇ ನಿಯಮದ ನಂತರ, ಈ ಮುಂದೆ ಹೇಳಿರುವುದನ್ನು ಸೇರಿಸತಕ್ಕದ್ದು, ಎಂದರೆ:–

## ಅಧ್ಯಾಯ –II
## ವಿದ್ಯುನ್ಮಾನ ಮತಯಂತ್ರಗಳಿಂದ ಮತದಾನ

**49ಎ. ವಿದ್ಯುನ್ಮಾನ ಮತಯಂತ್ರಗಳ ವಿನ್ಯಾಸ**

ಪ್ರತಿಯೊಂದು ವಿದ್ಯುನ್ಮಾನ ಮತಯಂತ್ರವು (ಇನ್ನು ಮುಂದೆ ಮತಯಂತ್ರ ಎಂದು ಉಲ್ಲೇಖಿಸಲಾಗುವುದು) ಒಂದು ಕಂಟ್ರೋಲ್ ಯೂನಿಟ್ಟನ್ನು ಮತ್ತು ಒಂದು ಬ್ಯಾಲೆಟಿಂಗ್ ಯೂನಿಟ್ಟನ್ನು ಹೊಂದಿರತಕ್ಕದ್ದು ಮತ್ತು ಅದು ಚುನಾವಣಾ ಆಯೋಗವು ಅನುಮೋದಿಸಿದಂಥ ವಿನ್ಯಾಸಗಳದ್ದಾಗಿರತಕ್ಕದ್ದು.

**49ಬಿ. ರಿಟರ್ನಿಂಗ್ ಅಧಿಕಾರಿಅವರು ಮತಯಂತ್ರಗಳನ್ನು ಸಿದ್ಧಪಡಿಸುವುದು:–**

(1) ಮತಯಂತ್ರದ ಬ್ಯಾಲೆಟಿಂಗ್ ಯೂನಿಟ್ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂತಹ ವಿವರಗಳನ್ನು ಮತ್ತು ಭಾಷೆ ಅಥವಾ ಭಾಷೆಗಳನ್ನು ಒಳಗೊಂಡಿರತಕ್ಕದ್ದು.

(2) ಅಭ್ಯರ್ಥಿಗಳ ಹೆಸರುಗಳನ್ನು ಬ್ಯಾಲೆಟಿಂಗ್ ಯೂನಿಟ್‌ನ ಮೇಲೆ, ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಇರುವಂತಹ ಕ್ರಮದಲ್ಲಿಯೇ ಅವುಗಳನ್ನು ವ್ಯವಸ್ಥೆ ಮಾಡತಕ್ಕದ್ದು.

(3) ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಒಂದೇ ಹೆಸರಿನವರಾಗಿದ್ದರೆ, ಅವರನ್ನು ಅವರ ವೃತ್ತಿ ಅಥವಾ ನಿವಾಸಗಳನ್ನು ಸೇರಿಸುವ ಮೂಲಕ ಅಥವಾ ಇತರ ವಿಧಾನದ ಮೂಲಕ ವಿಭಿನ್ನವಾಗಿ ತೋರಿಸತಕ್ಕದ್ದು.

(4) ಈ ನಿಯಮದ ಹಿಂದಿನ ಉಪಬಂಧಗಳಿಗೆ ಒಳಪಟ್ಟು ರಿಟರ್ನಿಂಗ್ ಅಧಿಕಾರಿಅವರು

(ಎ) ಸ್ಪರ್ಧಿಸಿರುವ ಅಭ್ಯರ್ಥಿಗಳ ಹೆಸರುಗಳನ್ನು ಮತ್ತು ಚಿಹ್ನೆಗಳನ್ನು ಒಳಗೊಂಡಿರುವ ಲೇಬಲ್‌ಗಳನ್ನು ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಅಳವಡಿಸತಕ್ಕದ್ದು ಮತ್ತು ಅವರ ಮೊಹರಿನಿಂದ ಮತ್ತು ತಮ್ಮ ಮೊಹರನ್ನು ಹಾಕಲು ಇಚ್ಛಿಸುವಂತಹ ಅಭ್ಯರ್ಥಿಗಳ ಅಥವಾ ಅಲ್ಲಿ ಹಾಜರಿರುವ ಅವರ ಚುನಾವಣಾ ಏಜೆಂಟರ ಮೊಹರುಗಳಿಂದ ಭದ್ರಗೊಳಿಸತಕ್ಕದ್ದು;

(ಬಿ) ಕಂಟ್ರೋಲ್ ಯೂನಿಟ್‌ನಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಅಭ್ಯರ್ಥಿಗಳನ್ನು ನಿಗದಿಪಡಿಸಿದ ವಿಭಾಗವನ್ನು ಮುಚ್ಚತಕ್ಕದ್ದು ಮತ್ತು ಅದನ್ನು ಅವರ ಮೊಹರಿನಿಂದ ಮತ್ತು ಸ್ಪರ್ಧಿಸಿರುವ ಅಭ್ಯರ್ಥಿಗಳ ಅಥವಾ ಮೊಹರು ಹಾಕಲು ಇಚ್ಛಿಸುವ, ಅಲ್ಲಿ ಹಾಜರಿರುವ ಅವರ ಚುನಾವಣಾ ಏಜೆಂಟರ ಮೊಹರುಗಳಿಂದ ಭದ್ರಗೊಳಿಸತಕ್ಕದ್ದು.

**49ಸಿ. ಮತಗಟ್ಟೆಗಳಲ್ಲಿ ಏರ್ಪಾಟು**

(1) ಪ್ರತಿಯೊಂದು ಮತಗಟ್ಟೆಯ ಹೊರಗಡೆ, –

(ಎ) ಯಾವ ಮತದಾನ ಪ್ರದೇಶದ ಮತದಾರರು ಮತಗಟ್ಟೆಯಲ್ಲಿ ಮತ ಚಲಾಯಿಸಲು ಹಕ್ಕುಳ್ಳವರಾಗಿದ್ದಾರೆ ಎಂಬುದನ್ನು ಮತ್ತು ಮತದಾನದ ಪ್ರದೇಶವು ಒಂದಕ್ಕಿಂತ ಹೆಚ್ಚು ಮತಗಟ್ಟೆಯನ್ನು ಹೊಂದಿದ್ದರೆ ಹಾಗೆ ಹಕ್ಕುಳ್ಳ ಮತದಾರರ ವಿವರಗಳನ್ನು ನಿರ್ದಿಷ್ಟಪಡಿಸಿರುವ ಒಂದು ನೋಟೀಸನ್ನು; ಮತ್ತು

(ಬಿ) ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಒಂದು ಪ್ರತಿಯನ್ನು ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

(2) ಪ್ರತಿಯೊಂದು ಮತಗಟ್ಟೆಯಲ್ಲಿ ಮತದಾರರು ಮತ್ತೊಬ್ಬರಿಗೆ ಕಾಣದಂತೆ ತಮ್ಮ ಮತ ಚಲಾಯಿಸಬಹುದಾದ ಒಂದು ಅಥವಾ ಹೆಚ್ಚು ವೋಟಿಂಗ್ ಕಂಪಾರ್ಟ್‌ಮೆಂಟ್‌ಗಳನ್ನು ಸ್ಥಾಪಿಸತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿರವರು ಪ್ರತಿಯೊಂದು ಮತಗಟ್ಟೆಯಲ್ಲಿ ಒಂದು ಮತಯಂತ್ರವನ್ನು ಮತ್ತು ಮತದಾರರ ಪಟ್ಟಿಯ ಸುಸಂಗತ ಭಾಗದ ಪ್ರತಿಗಳನ್ನು ಮತ್ತು ಮತದಾನಕ್ಕೆ ಅಗತ್ಯವಿರುವಂತಹ ಇತರ ಚುನಾವಣಾ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

(4) ಉಪನಿಯಮ (3)ರ ಉಪಬಂಧಗಳಿಗೆ ಬಾಧಕವಾಗದಂತೆ, ರಿಟರ್ನಿಂಗ್ ಅಧಿಕಾರಿಅವರು ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು ಒಂದೇ ಆವರಣದಲ್ಲಿ ಸ್ಥಾಪಿಸಲಾಗಿರುವ ಎರಡು ಅಥವಾ ಹೆಚ್ಚು ಮತಗಟ್ಟೆಗಳಿಗೆ ಒಂದು ಕಾಮನ್ ಮತಯಂತ್ರವನ್ನು ಒದಗಿಸತಕ್ಕದ್ದು.

**49ಡಿ. ಮತಗಟ್ಟೆಗೆ ಪ್ರವೇಶ**

ಪ್ರಿಸೈಡಿಂಗ್ ಅಧಿಕಾರಿರವರು ಮತಗಟ್ಟೆಯೊಳಗೆ ಯಾವುದೇ ಒಂದು ಸಮಯಕ್ಕೆ ಒಳಬರಬಹುದಾದಂಥ ಮತದಾರರ ಸಂಖ್ಯೆಯನ್ನು ನಿಯಂತ್ರಿಸತಕ್ಕದ್ದು ಮತ್ತು ಅಲ್ಲಿಂದ–

(ಎ) ಪೋಲಿಂಗ್ ಅಧಿಕಾರಿಗಳು;

(ಬಿ) ಚುನಾವಣೆಗೆ ಸಂಬಂಧಿಸಿದಂತೆ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರರು;

(ಸಿ) ಚುನಾವಣಾ ಆಯೋಗವು ಅಧಿಕಾರ ನೀಡಿರುವ ವ್ಯಕ್ತಿಗಳು;

(ಡಿ) ಅಭ್ಯರ್ಥಿಗಳು ಅವರ ಚುನಾವಣಾ ಏಜೆಂಟರು ಮತ್ತು ನಿಯಮ 13ರ ಉಪಬಂಧಗಳಿಗೆ ಒಳಪಟ್ಟು ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬೊಬ್ಬ ಪೋಲಿಂಗ್ ಏಜೆಂಟರು;

(ಇ) ಒಬ್ಬ ಮತದಾರರ ಜೊತೆಗಿರುವ ಒಂದು ಮಗು;

(ಎಫ್) ಇತರರ ನೆರವಿಲ್ಲದೆ ಚಲಿಸಲಾರದ ಒಬ್ಬ ಅಂಧ ಅಥವಾ ದುರ್ಬಲ ಮತದಾರರ ಜೊತೆಗಿರುವ ವ್ಯಕ್ತಿ; ಮತ್ತು

(ಜಿ) ರಿಟರ್ನಿಂಗ್ ಅಧಿಕಾರಿಅಥವಾ ಪ್ರಿಸೈಡಿಂಗ್ ಅಧಿಕಾರಿಅವರು ನಿಯಮ 49ಜಿ ಯ ಉಪನಿಯಮ(2) ಅಥವಾ ನಿಯಮ 49ಎಚ್ ನ ಉಪನಿಯಮ (1)ರ ಅಡಿಯಲ್ಲಿ ನಿಯೋಜಿಸಬಹುದಾದಂಥ ಇತರ ವ್ಯಕ್ತಿಗಳ ಹೊರತಾದ ಇತರ ಎಲ್ಲ ವ್ಯಕ್ತಿಗಳನ್ನು ಹೊರಗಿರಿಸತಕ್ಕದ್ದು.

**49ಇ. ಮತದಾನಕ್ಕೆ ಮತಯಂತ್ರಗಳ ಸಿದ್ಧತೆ**

(1) ಮತಗಟ್ಟೆಯಲ್ಲಿ ಬಳಸಲಾಗುವ ಪ್ರತಿಯೊಂದು ಮತಯಂತ್ರದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟಿಂಗ್ ಯೂನಿಟ್ ಹಾಗೂ ಪೇಪರ್ ಟ್ರೇಲ್‌ಗಾಗಿ ಪ್ರಿಂಟರನ್ನು ಬಳಸಿರುವೆಡೆಯಲ್ಲಿ, ಆ ಪ್ರಿಂಟರ್–

(ಎ) ಚುನಾವಣಾ ಕ್ಷೇತ್ರದ ಕ್ರಮಸಂಖ್ಯೆ, ಇದ್ದರೆ ಮತ್ತು ಹೆಸರು;

(ಬಿ) ಸಂದರ್ಭಾನುಸಾರವಾಗಿ ಮತಗಟ್ಟೆಯ ಅಥವಾ ಕೇಂದ್ರಗಳ ಕ್ರಮಸಂಖ್ಯೆ ಮತ್ತು ಹೆಸರು;

(ಸಿ) ಯೂನಿಟ್ಟಿನ ಕ್ರಮಸಂಖ್ಯೆಯನ್ನು; ಮತ್ತು

(ಡಿ) ಮತದಾನದ ದಿನಾಂಕವನ್ನು ಗುರುತು ಮಾಡಿರುವ ಒಂದೊಂದು ಲೇಬಲ್ ಅನ್ನು ಹೊಂದಿರತಕ್ಕದ್ದು.

(2) ಮತದಾನ ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಪ್ರಿಸೈಡಿಂಗ್ ಅಧಿಕಾರಿ ಅವರು ಪೋಲಿಂಗ್ ಏಜೆಂಟರಿಗೆ ಮತ್ತು ಹಾಜರಿರುವ ಇತರ ವ್ಯಕ್ತಿಗಳಿಗೆ, ಮತಯಂತ್ರದಲ್ಲಿ

ಈಗಾಗಲೇ ಯಾವುದೇ ಮತ ದಾಖಲು ಮಾಡಿಲ್ಲವೆಂಬುದನ್ನು ಮತ್ತು ಅದು ಉಪನಿಯಮ (1) ರಲ್ಲಿ ಉಲ್ಲೇಖಿಸಿರುವ ಲೇಬಲ್ ಅನ್ನು ಹೊಂದಿದೆ ಎಂಬುದನ್ನು ಮತ್ತು ಪೇಪರ್ ಟ್ರೇಲ್ ಪ್ರಿಂಟರನ್ನು ಬಳಸಿದ್ದಲ್ಲಿ, ಪ್ರಿಂಟರಿನ ಡ್ರಾಪ್ ಬಾಕ್ಸ್ ಖಾಲಿ ಇರುವುದನ್ನು ಪ್ರದರ್ಶಿಸತಕ್ಕದ್ದು.

(3) ಮತಯಂತ್ರದ ಕಂಟ್ರೋಲ್ ಯೂನಿಟನ್ನು ಭದ್ರಗೊಳಿಸಲು ಒಂದು ಪೇಪರ್ ಸೀಲ್ ಅನ್ನು ಬಳಸತಕ್ಕದ್ದು ಮತ್ತು ಪ್ರಿಸೈಡಿಂಗ್ ಅಧಿಕಾರಿಅವರು ಪೇಪರ್ ಸೀಲ್‌ನ ಮೇಲೆ ತಮ್ಮದೇ ಸಹಿಯನ್ನು ಹಾಕತಕ್ಕದ್ದು ಮತ್ತು ಅದರ ಮೇಲೆ ಮತಗಟ್ಟೆಯಲ್ಲಿ ಹಾಜರಿದ್ದು ತಮ್ಮ ಸಹಿ ಹಾಕಲಿಚ್ಛಿಸುವ ಪೋಲಿಂಗ್ ಏಜೆಂಟರ ಸಹಿಯನ್ನು ಪಡೆದುಕೊಳ್ಳತಕ್ಕದ್ದು.

(4) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಅವರು ಹಾಗೆ ಸಹಿ ಮಾಡಲಾದ ಪೇಪರ್ ಸೀಲ್ ಅನ್ನು ಮತಯಂತ್ರದ ಕಂಟ್ರೋಲ್ ಯೂನಿಟ್‌ನಲ್ಲಿ ಅದಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ಅಳವಡಿಸತಕ್ಕದ್ದು ಮತ್ತು ಭದ್ರಗೊಳಿಸಿ ಅದನ್ನು ಮೊಹರು ಮಾಡತಕ್ಕದ್ದು.

(5) ಕಂಟ್ರೋಲ್ ಯೂನಿಟ್ಟನ್ನು ಭದ್ರಗೊಳಿಸಲು ಉಪಯೋಗಿಸಿದ ಸೀಲ್ ಅನ್ನು, ಯೂನಿಟನ್ನು ಮೊಹರು ಮಾಡಿದ ಮೇಲೆ ಮೊಹರನ್ನು ಒಡೆಯದೆ 'ರಿಜಲ್ಟ್ ಬಟನ್' ಒತ್ತಲು ಸಾಧ್ಯವಾಗದ ಹಾಗೆ ಅಳವಡಿಸಬೇಕು.

(6) ಕಂಟ್ರೋಲ್ ಯೂನಿಟ್ಟನ್ನು ಮುಚ್ಚಿ ಭದ್ರಗೊಳಿಸತಕ್ಕದ್ದು ಮತ್ತು ಪ್ರಿಸೈಡಿಂಗ್ ಅಧಿಕಾರಿಅವರಿಗೆ ಮತ್ತು ಪೋಲಿಂಗ್ ಏಜೆಂಟರುಗಳಿಗೆ ಪೂರ್ಣವಾಗಿ ಕಾಣುವಂತಿರಿಸಬೇಕು ಮತ್ತು ಮತದಾನ ವಿಭಾಗದಲ್ಲಿ ಬ್ಯಾಲೆಟಿಂಗ್ ಯೂನಿಟ್ಟನ್ನು ಇಟ್ಟಿರಬೇಕು.

**49ಎಫ್. ಗುರುತು ಮಾಡಿರುವ ಮತದಾರರ ಪಟ್ಟಿಯ ಪ್ರತಿ**

ಮತದಾನ ಪ್ರಾರಂಭಗೊಳ್ಳುವ ನಿಕಟ ಮೊದಲು ಪ್ರಿಸೈಡಿಂಗ್ ಅಧಿಕಾರಿಅವರು ಮತದಾನದ ಅವಧಿಯಲ್ಲಿ ಉಪಯೋಗಿಸಲಾಗುವ ಗುರುತು ಮಾಡಿದ ಮತದಾರರ ಪಟ್ಟಿಯ ಪ್ರತಿಯು, –

(ಎ) ನಿಯಮ 20ರ ಉಪನಿಯಮ (2)ರ ಖಂಡ (ಬಿ)ಯ ಅನುಸಾರವಾಗಿ ಮಾಡಲಾದ ನಮೂದಿನ ಹೊರತಾದ ಯಾವುದೇ ನಮೂದನ್ನು; ಮತ್ತು

(ಬಿ) ನಿಯಮ 23ರ ಉಪನಿಯಮ (2)ರ ಖಂಡ (ಬಿ)ಯ ಅನುಸಾರವಾಗಿ ಮಾಡಲಾದ ಗುರುತಿನ ಹೊರತಾದ ಇತರ ಯಾವುದೇ ಗುರುತನ್ನು –ಒಳಗೊಂಡಿಲ್ಲವೆಂಬುದನ್ನು ಸಹಾ ಪೋಲಿಂಗ್ ಏಜೆಂಟರುಗಳಿಗೆ ಮತ್ತು ಹಾಜರಿರುವ ಇತರರಿಗೆ ಪ್ರದರ್ಶಿಸತಕ್ಕದ್ದು.

**49ಜಿ. ಮಹಿಳಾ ಮತದಾರರಿಗೆ ಸೌಲಭ್ಯಗಳು**

(1) ಒಂದು ಮತಗಟ್ಟೆಯು ಪುರುಷ ಮತ್ತು ಮಹಿಳಾ ಮತದಾರರುಗಳಿಗಾಗಿ ಇರುವಾಗ ಪ್ರಿಸೈಡಿಂಗ್ ಅಧಿಕಾರಿಅವರು ಅವರನ್ನು ಪ್ರತ್ಯೇಕ ತಂಡಗಳಲ್ಲಿ ಪರ್ಯಾಯವಾಗಿ ಮತಗಟ್ಟೆಯೊಳಗೆ ಬಿಡುವಂತೆ ನಿರ್ದೇಶಿಸಬಹುದು.

(2) ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಅವರು ಮಹಿಳಾ ಮತದಾರರಿಗೆ ನೆರವಾಗಲು ಹಾಗೂ ಒಟ್ಟಾರೆ ಮಹಿಳಾ ಮತದಾರರ ಸಂಬಂಧದಲ್ಲಿ ಮತ ಚಲಾವಣೆ ಮಾಡಿಸುವುದಕ್ಕೆ ಪ್ರಿಸೈಡಿಂಗ್ ಅಧಿಕಾರಿಅವರಿಗೆ ನೆರವಾಗಲು ಮತ್ತು ನಿರ್ದಿಷ್ಟವಾಗಿ ಅವಶ್ಯವಾದಾಗ ಯಾವುದೇ ಮಹಿಳೆಯನ್ನು ಶೋಧಿಸಲು ನೆರವಾಗುವುದಕ್ಕಾಗಿ ಯಾವುದೇ

ಮತಗಟ್ಟೆಯಲ್ಲಿ ಒಬ್ಬ ಅಟೆಂಡರ್ ಆಗಿ ಕೆಲಸ ಮಾಡಲು ಒಬ್ಬ ಮಹಿಳೆಯನ್ನು ನೇಮಕ ಮಾಡಿಕೊಳ್ಳಬಹುದು.

**49 ಎಚ್. ಮತದಾರರನ್ನು ಗುರುತಿಸುವುದು**

(1) ಪ್ರಿಸೈಡಿಂಗ್ ಅಧಿಕಾರಿರವರು ಮತಗಟ್ಟೆಯಲ್ಲಿ ಮತದಾರರನ್ನು ಗುರುತಿಸಲು ನೆರವಾಗುವುದಕ್ಕೆ ಅಥವಾ ಮತದಾನದಲ್ಲಿ ತಮಗೆ ಇತರ ರೀತಿಯಲ್ಲಿ ನೆರವಾಗುವುದಕ್ಕೆ ತಾವು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳಬಹುದು.

(2) ಪ್ರತಿಯೊಬ್ಬ ಮತದಾರನು ಮತಗಟ್ಟೆಗೆ ಪ್ರವೇಶಿಸುತ್ತಿದ್ದಂತೆ, ಪ್ರಿಸೈಡಿಂಗ್ ಅಧಿಕಾರಿಅವರು ಅಥವಾ ಈ ಪರವಾಗಿ ಅವರಿಂದ ಅಧಿಕಾರ ಪಡೆದ ಪೋಲಿಂಗ್ ಅಧಿಕಾರಿರವರು ಮತದಾರರ ಹೆಸರನ್ನು ಮತ್ತು ಮತದಾರರ ಪಟ್ಟಿಯಲ್ಲಿರುವ ಸುಸಂಗತ ನಮೂದನೆಯೊಂದಿಗೆ ಇತರ ವಿವರಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಆನಂತರ ಮತದಾರರ ಕ್ರಮಸಂಖ್ಯೆ, ಹೆಸರು ಮತ್ತು ಇತರ ವಿವರಗಳನ್ನು ಓದಿ ಹೇಳತಕ್ಕದ್ದು.

(3) ಯಾವ ಕ್ಷೇತ್ರದ ಮತದಾರರಿಗೆ 1960ರ ಮತದಾರರ ನೋಂದಣಿ ನಿಯಮಗಳ ಉಪಬಂಧದ ಅಡಿಯಲ್ಲಿ ಗುರುತಿನ ಚೀಟಿಗಳನ್ನು ಒದಗಿಸಲಾಗಿರುವುದೋ ಆ ಕ್ಷೇತ್ರದಲ್ಲಿ ಮತಗಟ್ಟೆಯನ್ನು ಸ್ಥಾಪಿಸಿರುವಲ್ಲಿ, ಮತದಾರನು ಪ್ರಿಸೈಡಿಂಗ್ ಅಧಿಕಾರಿಅಥವಾ ಈ ಪರವಾಗಿ ಅವರಿಂದ ಅಧಿಕಾರ ಪಡೆದಿರುವ ಪೋಲಿಂಗ್ ಅಧಿಕಾರಿರವರ ಮುಂದೆ ತನ್ನ ಗುರುತಿನ ಚೀಟಿಯನ್ನು ಹಾಜರುಪಡಿಸತಕ್ಕದ್ದು.

(4) ಒಬ್ಬ ವ್ಯಕ್ತಿಗೆ ಆತನ ಮತ ಚಲಾಯಿಸಲು ಇರುವ ಹಕ್ಕನ್ನು ನಿರ್ಧರಿಸುವಲ್ಲಿ ಸಂದರ್ಭಾನುಸಾರವಾಗಿ ಪ್ರಿಸೈಡಿಂಗ್ ಅಧಿಕಾರಿಅವರು ಅಥವಾ ಪೋಲಿಂಗ್ ಅಧಿಕಾರಿರವರಿಗೆ, ಯಾವ ವ್ಯಕ್ತಿಗೆ ಅಂಥ ನಮೂದನೆಯು ಸಂಬಂಧಿಸಿದೆಯೋ ಆ ವ್ಯಕ್ತಿಗೆ ಅಂಥ ವ್ಯಕ್ತಿ ಅನುರೂಪನಾಗಿದ್ದಾನೆಂದು ಮನದಟ್ಟಾದರೆ, ಮತದಾರರ ಪಟ್ಟಿಯಲ್ಲಿನ ನಮೂದನೆಯಲ್ಲಿನ ಲಿಪಿಕ ಅಥವಾ ಮುದ್ರಣ ದೋಷಗಳನ್ನು ಕಡೆಗಣಿಸಬಹುದು.

**49ಐ. ಚುನಾವಣಾ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರರಿಗೆ ಸೌಲಭ್ಯಗಳು**

(1) ನಿಯಮ 49ಹೆಚ್‌ನ ಉಪಬಂಧಗಳು ನಮೂನೆ 12ಭಿಯಲ್ಲಿನ ಚುನಾವಣಾ ಕರ್ತವ್ಯ ಪ್ರಮಾಣಪತ್ರವನ್ನು ಮತಗಟ್ಟೆಯಲ್ಲಿ ಹಾಜರುಪಡಿಸುವ ಮತ್ತು ಆ ಮತಗಟ್ಟೆಯು ಆತನು ಮತ ಚಲಾಯಿಸಲು ಹಕ್ಕುಳ್ಳದ್ದಕ್ಕಿಂತ ಬೇರೆಯದಾಗಿದ್ದರೂ ಸಹ ಅದರಲ್ಲಿ ಮತ ಚಲಾಯಿಸಲು ಅನುಮತಿ ಕೋರುವ ಯಾವುದೇ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

(2) ಅಂಥ ಪ್ರಮಾಣಪತ್ರ ಹಾಜರುಪಡಿಸಿದ ಮೇಲೆ ಪ್ರಿಸೈಡಿಂಗ್ ಅಧಿಕಾರಿಅವರು –

(ಎ) ಅದರ ಮೇಲೆ ಅದನ್ನು ಹಾಜರುಪಡಿಸುವ ವ್ಯಕ್ತಿಯ ರುಜುವನ್ನು ಪಡೆದುಕೊಳ್ಳತಕ್ಕದ್ದು;

(ಬಿ) ಪ್ರಮಾಣಪತ್ರದಲ್ಲಿ ತಿಳಿಸಿರುವಂತೆ ವ್ಯಕ್ತಿಯ ಹೆಸರನ್ನು ಮತ್ತು ಮತದಾರರ ಪಟ್ಟಿ ಸಂಖ್ಯೆಯನ್ನು ಮತದಾರರ ಪಟ್ಟಿಯ ಗುರುತುಹಾಕಿದ ಪ್ರತಿಯ ಕೊನೆಯಲ್ಲಿ ನಮೂದಿಸತಕ್ಕದ್ದು; ಮತ್ತು

(ಸಿ) ಆತನು ಒಬ್ಬ ಮತದಾರನಾಗಿ ಆ ಮತಗಟ್ಟೆಯಲ್ಲಿ ಮತ ಹಾಕಲು ಹಕ್ಕುಳ್ಳವನಾಗಿರುವ ರೀತಿಯಲ್ಲಿಯೇ ಆತನು ಮತ ಚಲಾಯಿಸಲು ಆತನಿಗೆ ಅನುಮತಿ ನೀಡತಕ್ಕದ್ದು.

**49ಜೆ. ಗುರುತನ್ನು ಆಕ್ಷೇಪಿಸುವುದು**

(1) ಒಬ್ಬ ನಿರ್ದಿಷ್ಟ ಮತದಾರನೆಂದು ಹೇಳುವ ಒಬ್ಬ ವ್ಯಕ್ತಿಯ ಗುರುತನ್ನು ಆಕ್ಷೇಪಿಸುವ ಯಾರೇ ಪೋಲಿಂಗ್ ಏಜೆಂಟನು, ಅಂಥ ಪ್ರತಿ ಆಕ್ಷೇಪಣೆಗಾಗಿ ಪ್ರಿಸೈಡಿಂಗ್ ಅಧಿಕಾರಿಅವರ ಬಳಿ ಮೊದಲು ನಗದಾಗಿ ಎರಡು ರೂಪಾಯಿ ಕಟ್ಟಿ ಹಾಗೆ ಆಕ್ಷೇಪಿಸಬಹುದು.

(2) ಹಾಗೆ ಠೇವಣಿ ಇಟ್ಟ ಮೇಲೆ ಪ್ರಿಸೈಡಿಂಗ್ ಅಧಿಕಾರಿರವರು–

(ಎ) ಆಕ್ಷೇಪಕ್ಕೆ ಗುರಿಯಾದ ವ್ಯಕ್ತಿಗೆ ಮತ್ತೊಬ್ಬನಂತೆ ವರ್ತಿಸಿದರೆ ವಿಧಿಸುವ ದಂಡನೆ ಬಗ್ಗೆ ಎಚ್ಚರಿಗೆ ನೀಡತಕ್ಕದ್ದು;

(ಬಿ) ಮತದಾರರ ಪಟ್ಟಿಯಲ್ಲಿನ ಸುಸಂಗತ ನಮೂದನ್ನು ಪೂರ್ಣವಾಗಿ ಓದಿ ಹೇಳಿ ಮತ್ತು ಆತನು ಅದರಲ್ಲಿ ಉಲ್ಲೇಖಿಸಿರುವ ವ್ಯಕ್ತಿಯೇ ಎಂದು ಕೇಳತಕ್ಕದ್ದು;

(ಸಿ) ಆತನ ಹೆಸರು ಮತ್ತು ವಿಳಾಸವನ್ನು ನಮೂನೆ 14ರಲ್ಲಿರುವ ಆಕ್ಷೇಪಿತ ಮತಗಳ ಪಟ್ಟಿಯಲ್ಲಿ ನಮೂದಿಸತಕ್ಕದ್ದು; ಮತ್ತು

(ಡಿ) ಸದರಿ ಪಟ್ಟಿಯಲ್ಲಿ ಆತನ ಸಹಿ ಹಾಕುವಂತೆ ಆತನನ್ನು ಅಗತ್ಯಪಡಿಸತಕ್ಕದ್ದು.

(3) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಅವರು ಆ ಆಕ್ಷೇಪಣೆಯ ಬಗ್ಗೆ ಒಂದು ಕ್ಷಿಪ್ರ ವಿಚಾರಣೆ ನಡೆಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ –

(ಎ) ಆ ಆಕ್ಷೇಪಣೆದಾರನು ಆಕ್ಷೇಪಣೆಯ ಸಮರ್ಥನೆಗಾಗಿ ಸಾಕ್ಷ್ಯ ಒದಗಿಸುವಂತೆ ಮತ್ತು ಆಕ್ಷೇಪಕ್ಕೆ ಗುರಿಯಾದ ವ್ಯಕ್ತಿಗೆ ಆತನ ಗುರುತಿನ ರುಜುವಾತಾಗಿ ಸಾಕ್ಷ್ಯ ಒದಗಿಸುವಂತೆ ಅಗತ್ಯಪಡಿಸಬಹುದು;

(ಬಿ) ಆಕ್ಷೇಪಕ್ಕೆ ಗುರಿಯಾಗುವ ವ್ಯಕ್ತಿಯ ಗುರುತನ್ನು ನಿರೂಪಿಸುವ ಸಲುವಾಗಿ ಅಗತ್ಯವಿರುವ ಯಾವುದೇ ಪ್ರಶ್ನೆಗಳನ್ನು ಆಕ್ಷೇಪಕ್ಕೆ ಗುರಿಯಾದ ವ್ಯಕ್ತಿಗೆ ಹಾಕಬಹುದು ಮತ್ತು ಅವನು ಪ್ರಮಾಣಪೂರ್ವಕವಾಗಿ ಉತ್ತರಿಸುವಂತೆ ಅವನನ್ನು ಅಗತ್ಯಪಡಿಸಬಹುದು; ಮತ್ತು

(ಸಿ) ಆಕ್ಷೇಪಣೆಗೆ ಗುರಿಯಾದ ವ್ಯಕ್ತಿಗೆ ಮತ್ತು ಸಾಕ್ಷ್ಯವನ್ನು ನೀಡಲು ಸಿದ್ಧನಿರುವ ಯಾರೇ ಇತರೇ ವ್ಯಕ್ತಿಗೆ ಪ್ರಮಾಣವಚನವನ್ನು ಬೋಧಿಸುವುದು.

(4) ವಿಚಾರಣೆಯ ತರುವಾಯ, ಪ್ರಿಸೈಡಿಂಗ್ ಅಧಿಕಾರಿರವರು ಆಕ್ಷೇಪಣೆಗೆ ನಿರೂಪಿತವಾಗಿಲ್ಲವೆಂದು ಅಭಿಪ್ರಾಯಪಟ್ಟರೆ, ಅವರು ಆಕ್ಷೇಪಕ್ಕೆ ಗುರಿಯಾದ ವ್ಯಕ್ತಿಗೆ ಮತ ಚಲಾಯಿಸಲು ಅವಕಾಶ ನೀಡತಕ್ಕದ್ದು; ಮತ್ತು ಆಕ್ಷೇಪಣೆ ರುಜುವಾತಾಗಿದೆ ಎಂದು ಭಾವಿಸಿದರೆ, ಅವರು ಆಕ್ಷೇಪಕ್ಕೆ ಗುರಿಯಾದ ವ್ಯಕ್ತಿಯನ್ನು ಮತ ಚಲಾಯಿಸದಂತೆ ಹೊರಹಾಕತಕ್ಕದ್ದು.

(5) ಪ್ರಿಸೈಡಿಂಗ್ ಅಧಿಕಾರಿರವರು ಆಕ್ಷೇಪಣೆಯು ಕ್ಷುಲ್ಲಕವಾದುದು ಅಥವಾ ಸದ್ಭಾವನೆಯಿಂದ ಮಾಡಿರುವುದಲ್ಲ ಎಂದು ಅಭಿಪ್ರಾಯಪಟ್ಟರೆ ಅವರು, ಉಪನಿಯಮ (1)ರ ಅಡಿಯಲ್ಲಿ ಮಾಡಲಾದ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ನಿರ್ದೇಶಿಸತಕ್ಕದ್ದು ಮತ್ತು ಇತರ ಯಾವುದೇ ಪ್ರಕರಣದಲ್ಲಿ ವಿಚಾರಣೆಯ ತರುವಾಯ ಆಕ್ಷೇಪಣೆದಾರನಿಗೆ ವಾಪಸ್ಸು ಮಾಡತಕ್ಕದ್ದು.

**49ಕೆ. ಮತ್ತೊಬ್ಬರಂತೆ ವರ್ತಿಸುವುದರ ವಿರುದ್ಧ ಸುರಕ್ಷಾ ಕ್ರಮಗಳು**

(1) ಯಾವ ಮತದಾರರ ಗುರುತಿನ ಬಗ್ಗೆ ಸಂದರ್ಭಾನುಸಾರ ಪ್ರಿಸೈಡಿಂಗ್ ಅಧಿಕಾರಿಅಥವಾ ಪೋಲಿಂಗ್ ಅಧಿಕಾರಿಅವರು ಮನದಟ್ಟು ಮಾಡಿಕೊಂಡಿರವರೋ ಆ ಪ್ರತಿಯೊಬ್ಬ ಮತದಾರನು ಪ್ರಿಸೈಡಿಂಗ್ ಅಧಿಕಾರಿಅಥವಾ ಆ ಪೋಲಿಂಗ್ ಅಧಿಕಾರಿಅವರಿಗೆ ತನ್ನ ಎಡ

ತೋರುಬೆರಳನ್ನು ಪರೀಕ್ಷಿಸಲು ಮತ್ತು ಅದರ ಮೇಲೆ ಅಳಿಸಲಾಗದ ಶಾಯಿ ಹಾಕಲು ಅವಕಾಶ ನೀಡತಕ್ಕದ್ದು.

(2) ಒಬ್ಬ ಮತದಾರನು –

(ಎ) ಉಪನಿಯಮ (1)ರ ಪ್ರಕಾರ ಪರೀಕ್ಷಿಸಲು ಅಥವಾ ಗುರುತು ಮಾಡಲು ತನ್ನ ಎಡ ತೋರುಬೆರಳನ್ನು ನೀಡಲು ನಿರಾಕರಿಸಿದರೆ ಅಥವಾ ಆತನ ಎಡ ತೋರುಬೆರಳಿನಲ್ಲಿ ಈಗಾಗಲೇ ಗುರುತು ಹೊಂದಿದ್ದರೆ ಅಥವಾ ಶಾಯಿ ಗುರುತನ್ನು ಅಳಿಸಿಹಾಕುವ ಕೃತ್ಯ ನಡೆಸಿದ್ದರೆ; ಅಥವಾ

(ಬಿ) ನಿಯಮ 49ಎಚ್‌ನ ಉಪನಿಯಮ (3)ರಿಂದ ಅಗತ್ಯಪಡಿಸಿದಂತೆ ಆತನ ಗುರುತಿನ ಚೀಟಿ ಹಾಜರುಪಡಿಸದಿದ್ದರೆ ಅಥವಾ ನಿರಾಕರಿಸಿದರೆ ಆತನಿಗೆ ಮತ ಚಲಾಯಿಸಲು ಅವಕಾಶ ನೀಡತಕ್ಕದ್ದಲ್ಲ.

(3) ಒಂದು ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರ ಈ ಎರಡಕ್ಕೂ ಏಕಕಾಲದಲ್ಲಿ ಚುನಾವಣೆ ನಡೆದಿರುವಾಗ ಎಡ ತೋರುಬೆರಳಿನಲ್ಲಿ ಅಳಿಸಲಾಗದ ಶಾಯಿ ಗುರುತಿರುವ ಅಥವಾ ಅಂಥ ಒಂದು ಚುನಾವಣೆಯಲ್ಲಿ ತನ್ನ ಗುರುತಿನ ಚೀಟಿ ಹಾಜರುಪಡಿಸಿರುವ ಒಬ್ಬ ಮತದಾರನನ್ನು, ಈ ಉಪನಿಯಮ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಇನ್ನೊಂದು ಚುನಾವಣೆಗೆ ತನ್ನ ಮತ ಚಲಾಯಿಸಲು ಅವಕಾಶ ನೀಡತಕ್ಕದ್ದಲ್ಲ.

(4) ಒಬ್ಬ ಮತದಾರನು ಎಡ ತೋರುಬೆರಳನ್ನು ಹೊಂದಿಲ್ಲದಿರುವಾಗ, ಈ ನಿಯಮದಲ್ಲಿ ಒಬ್ಬ ಮತದಾರನ ಎಡ ತೋರುಬೆರಳಿಗೆ ಮಾಡಿದ ಯಾವುದೇ ಉಲ್ಲೇಖವನ್ನು ಆತನ ಎಡಗೈನ ಇತರ ಯಾವುದೇ ಬೆರಳಿಗೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು ಮತ್ತು ಆತನ ಎಲ್ಲಾ ಎಡ ತೋರುಬೆರಳು ಇಲ್ಲದಿರುವಾಗ ಆತನ ಬಲ ತೋರುಬೆರಳಿಗೆ ಅಥವಾ ಇತರ ಯಾವುದೇ ಬೆರಳಿಗೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು ಮತ್ತು ಆತನ ಎರಡು ಕೈಗಳ ಬೆರಳುಗಳೂ ಇಲ್ಲದಿರುವಾಗ ಆತನ ಎಡ ಅಥವಾ ಬಲಗೈಗಳ ಅತ್ಯಂತ ತುದಿಯ ಭಾಗಕ್ಕೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು.

**49ಎಲ್. ಮತಯಂತ್ರಗಳ ಮೂಲಕ ಮತ ಚಲಾಯಿಸುವ ಪ್ರಕ್ರಿಯೆ**

(1) ಒಬ್ಬ ಮತದಾರನಿಗೆ ಮತ ಚಲಾಯಿಸಲು ಅನುಮತಿಸುವುದಕ್ಕೆ ಮೊದಲು ಪೋಲಿಂಗ್ ಅಧಿಕಾರಿರವರು –

(ಎ) ಮತದಾರರ ಅಧಿಕೃತ ಪಟ್ಟಿಯ ಪ್ರತಿಯಲ್ಲಿ ನಮೂದಿಸಿರುವಂತೆ ಮತದಾರನ ಮತದಾರ ಪಟ್ಟಿಯ ಸಂಖ್ಯೆಯನ್ನು, ನಮೂನೆ 17ಎ ಯಲ್ಲಿರುವ ಮತದಾರರ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(ಬಿ) ಸದರಿ ಮತದಾರರ ರಿಜಿಸ್ಟರಿನಲ್ಲಿ ಮತದಾರನ ಸಹಿ ಅಥವಾ ಹೆಬ್ಬೆರಳು ಗುರುತನ್ನು ಪಡೆದುಕೊಳ್ಳತಕ್ಕದ್ದು; ಮತ್ತು

(ಸಿ) ಮತದಾರನಿಗೆ ಮತ ಚಲಾಯಿಸಲು ಅವಕಾಶ ನೀಡಿರುವುದನ್ನು ಸೂಚಿಸಲು ಮತದಾರನ ಹೆಸರನ್ನು ಮತದಾರರ ಅಧಿಕೃತ ಪಟ್ಟಿಯ ಪ್ರತಿಯಲ್ಲಿ ಗುರುತು ಮಾಡತಕ್ಕದ್ದು:

(ಡಿ) ಮತದಾರನು ಆತ/ ಆಕೆಯ ಗುರುತಿನ ದಾಖಲೆಯಾಗಿ ನೀಡಿದ ದಾಖಲೆಯ ವಿವರಗಳನ್ನು ನೀಡುವುದು:

ಪರಂತು, ಯಾವುದೇ ಮತದಾರನು ಮತದಾರರ ರಿಜಿಸ್ಟರಿನಲ್ಲಿ ತನ್ನ ಸಹಿ ಅಥವಾ ಹೆಬ್ಬೆರಳು ಗುರುತು ಹಾಕಿದ ಹೊರತು ಮತ ಚಲಾಯಿಸಲು ಆತನಿಗೆ ಅವಕಾಶ ನೀಡತಕ್ಕದ್ದಲ್ಲ.

(2) ನಿಯಮ 2ರ ಉಪನಿಯಮ (2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾರೇ ಪ್ರಿಸೈಡಿಂಗ್ ಅಧಿಕಾರಿಅಥವಾ ಪೋಲಿಂಗ್ ಅಧಿಕಾರಿಅಥವಾ ಇತರ ಯಾರೇ ಅಧಿಕಾರಿಯು ಮತದಾರರ ರಿಜಿಸ್ಟರಿನಲ್ಲಿ ಮತದಾರರ ಹೆಬ್ಬೆರಳು ಗುರುತನ್ನು ದೃಢೀಕರಿಸುವುದು ಅಗತ್ಯ.

**49ಎಂ. ಮತಗಟ್ಟೆಯೊಳಗೆ ಮತದಾರರು ಮತದಾನದ ರಹಸ್ಯ ಕಾಪಾಡುವುದು ಮತ್ತು ಮತದಾನದ ಪ್ರಕ್ರಿಯೆಗಳು**

(1) ನಿಯಮ 49ಎಲ್ ಅಡಿಯಲ್ಲಿ ಮತ ಚಲಾಯಿಸಲು ಅನುಮತಿಸಲಾಗಿರುವ ಪ್ರತಿಯೊಬ್ಬ ಮತದಾರನು ಮತಗಟ್ಟೆಯೊಳಗೆ ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಈ ಮುಂದೆ ನಿರ್ದಿಷ್ಟಪಡಿಸಿರುವ ಮತದಾನದ ಪ್ರಕ್ರಿಯೆಯನ್ನು ಪಾಲಿಸತಕ್ಕದ್ದು.

(2) ಮತ ಹಾಕಲು ಅನುಮತಿ ನೀಡಿದ ತಕ್ಷಣವೇ ಮತದಾರನು ಪ್ರಿಸೈಡಿಂಗ್ ಅಧಿಕಾರಿಅವರ ಅಥವಾ ಮತಯಂತ್ರದ ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಪೋಲಿಂಗ್ ಅಧಿಕಾರಿಅವರ ಬಳಿ ಹೋಗತಕ್ಕದ್ದು. ಅವರು ಕಂಟ್ರೋಲ್ ಯೂನಿಟ್‌ನ ಮೇಲಿನ ಸರಿಯಾದ ಬಟನ್ ಒತ್ತುವ ಮೂಲಕ, ಮತದಾರನ ಮತವನ್ನು ದಾಖಲು ಮಾಡುವ ಸಲುವಾಗಿ 'ಬ್ಯಾಲೆಟಿಂಗ್ ಯೂನಿಟ್'ಅನ್ನು ಸಕ್ರಿಯಗೊಳಿಸುವರು.

(3) ಮತದಾರನು ಆ ತರುವಾಯ ತಕ್ಷಣವೇ,–

(ಎ) ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗಬೇಕು;

(ಬಿ) ಆತನು ತನ್ನ ಮತವನ್ನು ಯಾರಿಗೆ ನೀಡಲು ಉದ್ದೇಶಿಸಿರುವನೋ ಆ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯ ಎದುರಿನಲ್ಲಿ ಬ್ಯಾಲೆಟಿಂಗ್ ಯೂನಿಟ್‌ನ ಮೇಲೆ ಇರುವ ಬಟನ್ ಒತ್ತುವ ಮೂಲಕ ತನ್ನ ಮತವನ್ನು ದಾಖಲು ಮಾಡಬೇಕು.

(ಸಿ) ವೋಟಿಂಗ್ ಕಂಪಾರ್ಟ್‌ಮೆಂಟ್‌ನಿಂದ ಹೊರ ಬರಬೇಕು ಮತ್ತು ಮತಗಟ್ಟೆಯಿಂದ ಹೊರ ಹೋಗಬೇಕು.

(4) ಪ್ರತಿಯೊಬ್ಬ ಮತದಾರನೂ ಅನುಚಿತ ವಿಳಂಬ ಮಾಡದೇ ಮತ ಚಲಾಯಿಸಬೇಕು.

(5) ಯಾರೇ ಒಬ್ಬ ಮತದಾರನು ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿರುವಾಗ ಮತ್ತೊಬ್ಬ ಮತದಾರನು ಅದರೊಳಗೆ ಹೋಗಲು ಅನುಮತಿಸಲಾಗುವುದಿಲ್ಲ.

(6) ನಿಯಮ 49ಎಲ್ ಅಥವಾ ನಿಯಮ 49ಪಿ ಯ ಅಡಿಯಲ್ಲಿ ಮತ ಚಲಾಯಿಸಲು ಅನುಮತಿಸಲಾಗಿರುವ ಒಬ್ಬ ಮತದಾರನು, ಪ್ರಿಸೈಡಿಂಗ್ ಅಧಿಕಾರಿಅವರು ಎಚ್ಚರಿಕೆ ನೀಡಿದ ಮೇಲೂ, ಸದರಿ ನಿಯಮಗಳ ಉಪನಿಯಮ (3)ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಕ್ರಿಯೆಯನ್ನು ಪಾಲಿಸಲು ನಿರಾಕರಿಸಿದರೆ ಪ್ರಿಸೈಡಿಂಗ್ ಅಧಿಕಾರಿರವರು ಅಥವಾ ಪ್ರಿಸೈಡಿಂಗ್ ಅಧಿಕಾರಿರವರ ನಿರ್ದೇಶನದ ಮೇರೆಗೆ ಒಬ್ಬ ಪೋಲಿಂಗ್ ಅಧಿಕಾರಿರವರು ಅಂಥ ಮತದಾರನಿಗೆ ಮತ ಹಾಕಲು ಅವಕಾಶ ನೀಡತಕ್ಕದ್ದಲ್ಲ.

(7) ಉಪನಿಯಮ (6)ರ ಅಡಿಯಲ್ಲಿ ಒಬ್ಬ ಮತದಾರನಿಗೆ ಮತ ಚಲಾಯಿಸಲು ಅವಕಾಶ ನೀಡದಿರುವಾಗ, ಪ್ರಿಸೈಡಿಂಗ್ ಅಧಿಕಾರಿರವರು ನಮೂನೆ 17ಎ ಯಲ್ಲಿರುವ ಮತದಾರನ ರಿಜಿಸ್ಟರಿನಲ್ಲಿ ಮತದಾರನ ಹೆಸರಿನ ಎದುರಿನಲ್ಲಿ ಮತದಾನದ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆಯೆಂಬ ಮಟ್ಟಿಗೆ ಒಂದು ಷರಾ ಬರೆದು ಸಹಿ ಹಾಕತಕ್ಕದ್ದು.

**49ಎಂಎ. ಕಾಗದದ ಸ್ಲಿಪ್‌ನ ಮೇಲೆ ಮುದ್ರಿತವಾದ ವಿವರಗಳ ಕುರಿತಾದ ದೂರುಗಳನ್ನು ಸಲ್ಲಿಸುವುದರ ಕಾರ್ಯವಿಧಾನ**

(1) ಪೇಪರ್ ಟ್ರೇಲ್ ಪ್ರಿಂಟರ್ ಅನ್ನು ಬಳಸಿರುವೆಡೆಯಲ್ಲಿ, ಮತದಾರನು ನಿಯಮ 49ಎಂ ಅಡಿಯಲ್ಲಿ ಮತ ಚಲಾಯಿಸಿದ ನಂತರ, ಅವನು ಯಾವ ಅಭ್ಯರ್ಥಿಗೆ

ಮತ ಚಲಾಯಿಸಿರುವನೋ ಆ ಅಭ್ಯರ್ಥಿಗೆ ಬದಲಾಗಿ ಬೇರೆ ಅಭ್ಯರ್ಥಿಯ ಹೆಸರು ಚಿಹ್ನೆಯನ್ನು ಪ್ರಿಂಟರಿನ ಕಾಗದದ ಸ್ಲಿಪ್ ಹೊಂದಿದೆ ಎಂಬುದಾಗಿ ಆಪಾದಿಸಿದ್ದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ತಪ್ಪು ಘೋಷಣೆಯನ್ನು ಮಾಡಿದರೆ ಎದುರಿಸಬೇಕಾದ ಪರಿಣಾಮಗಳ ಕುರಿತಾಗಿ ಮತದಾರನಿಗೆ ಎಚ್ಚರಿಕೆ ನಂತರ ಅಂತಹ ಆಪಾದನೆ ಕುರಿತಾದ ಲಿಖಿತ ಘೋಷಣೆಯನ್ನು ಆ ಮತದಾರನಿಗೆ ಪಡೆಯತಕ್ಕದ್ದು.

(2) ಉಪ–ನಿಯಮ (1)ರಲ್ಲಿ ಉಲ್ಲೇಖಿಸಲಾದಂತೆ ಲಿಖಿತ ಘೋಷಣೆಯನ್ನು ಮತದಾರನು ನೀಡಿದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ಆ ಮತದಾರನಿಗೆ ಸಂಬಂಧಿಸಿದಂತೆ ನಮೂನೆ–17ಎ ಯಲ್ಲಿ ಎರಡನೇ ನಮೂದನ್ನು ಮಾಡತಕ್ಕದು ಮತ್ತು ತಮ್ಮ ಸಮ್ಮುಖದಲ್ಲಿ ಹಾಗೂ ಮತಕೇಂದ್ರದಲ್ಲಿ ಹಾಜರಿರಬಹುದಾದಂತಹ ಅಭ್ಯರ್ಥಿಗಳು ಅಥವಾ ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಮತದಾರನು ಪರೀಕ್ಷಾರ್ಥ ಮತವನ್ನು ಮತಯಂತ್ರದಲ್ಲಿ ಚಲಾಯಿಸುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಮತ್ತು ಪ್ರಿಂಟರಿನ ಕಾಗದದ ಸ್ಲಿಪ್ ಅನ್ನು ಗಮನಿಸತಕ್ಕದ್ದು.

(3) ಆಪಾದನೆಯು ಸರಿಯೆಂಬುದಾಗಿ ಕಂಡುಬಂದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಕೂಡಲೇ ರಿಟರ್ನಿಂಗ್ ಅಧಿಕಾರಿಗೆ ವಾಸ್ತವಾಂಶವನ್ನು ವರದಿ ಮಾಡತಕ್ಕದ್ದು, ಆ ಮತಯಂತ್ರದಲ್ಲಿ ಆನಂತರ ಮತಚಲಾಯಿಸುವುದನ್ನು ನಿಲ್ಲಿಸತಕ್ಕದ್ದು ಹಾಗೂ ರಿಟರ್ನಿಂಗ್ ಅಧಿಕಾರಿಯವರು ನೀಡಬಹುದಾದ ನಿರ್ದೇಶನದ ಅನುಸಾರ ಕ್ರಮಕೈಗೊಳ್ಳತಕ್ಕದ್ದು.

(4) ಆದಾಗ್ಯೂ, ಆಪಾದನೆಯು ತಪ್ಪು ಎಂಬುದಾಗಿ ಕಂಡುಬಂದಲ್ಲಿ, ಮತ್ತು (1)ನೇ ಉಪ ನಿಯಮದ ಅಡಿಯಲ್ಲಿನ ಕಾಗದದ ಸ್ಲಿಪ್ (2)ನೇ ಉಪನಿಯಮದ ಅಡಿಯಲ್ಲಿ ಮತದಾರನು ದಾಖಲಿಸಿದ ಪರೀಕ್ಷಾರ್ಥ ಮತದೊಂದಿಗೆ ಹೊಂದಿಕೆಯಾದಲ್ಲಿ, ಆಗ ಪ್ರಿಸೈಡಿಂಗ್ ಅಧಿಕಾರಿಯು,

(i) ಅಂತಹ ಪರೀಕ್ಷಾರ್ಥ ಮತವನ್ನು ಯಾವ ಅಭ್ಯರ್ಥಿಗಾಗಿ ದಾಖಲಿಸಲಾಯಿತೋ ಆ ಅಭ್ಯರ್ಥಿಯ ಕ್ರಮಸಂಖ್ಯೆ ಮತ್ತು ಹೆಸರನ್ನು ನಮೂದಿಸಿ, ನಮೂನೆ 17ಎಯಲ್ಲಿ ಆ ಮತದಾರನಿಗೆ ಸಂಬಂಧಪಟ್ಟ ಎರಡನೇ ನಮೂದಿಗೆ ಪ್ರತಿಯಾಗಿ ಸದರಿ ಅಂಶದ ಷರಾ ಮಾಡತಕ್ಕದ್ದು.

(ii) ಅಂತಹ ಷರಾಗಳಿಗೆ ಪ್ರತಿಯಾಗಿ ಆ ಮತದಾರನ ಸಹಿ ಅಥವಾ ಹೆಬ್ಬೆಟ್ಟು ಮುದ್ರೆಯನ್ನು ಪಡೆಯತಕ್ಕದ್ದು; ಮತ್ತು

(iii) ಅಂತಹ ಪರೀಕ್ಷಾರ್ಥ ಮತಕ್ಕೆ ಸಂಬಂಧಿಸಿದಂತೆ ನಮೂನೆ 17ಸಿಯ ಭಾಗ–1ರಲ್ಲಿನ ಬಾಬು 5ರಲ್ಲಿ ಅಗತ್ಯ ನಮೂದುಗಳನ್ನು ಮಾಡತಕ್ಕದ್ದು.

**49ಎನ್. ಅಂಧ ಅಥವಾ ದುರ್ಬಲ ಮತದಾರರ ಮತಗಳ ದಾಖಲಾತಿ**

(1) ಅಂಧನಾಗಿರುವ ಅಥವಾ ಇತರ ದೈಹಿಕ ದುರ್ಬಲತೆಗಳ ಕಾರಣದಿಂದಾಗಿ ಒಬ್ಬ ಮತದಾರನು ಮತಯಂತ್ರದ ಬ್ಯಾಲೆಟಿಂಗ್ ಯೂನಿಟಿನ ಮೇಲಿನ ಚಿಹ್ನೆಯನ್ನು ಗುರುತಿಸಲು ಅಸಮರ್ಥನಾಗಿದ್ದಾನೆ ಅಥವಾ ಇತರರ ನೆರವಿಲ್ಲದೆ ಅದರ ಮೇಲಿನ ಸರಿಯಾದ ಬಟನ್ ಒತ್ತುವ ಮೂಲಕ ತನ್ನ ಮತ ದಾಖಲು ಮಾಡಲು ಅಸಮರ್ಥನಾಗಿದ್ದಾನೆ ಎಂದು ಪ್ರಿಸೈಡಿಂಗ್ ಅಧಿಕಾರಿ ಅವರಿಗೆ ಮನವರಿಕೆಯಾದರೆ, ಪ್ರಿಸೈಡಿಂಗ್ ಅಧಿಕಾರಿರವರು ಮತದಾರನು ತನ್ನ ಜೊತೆಗೆ, ತನ್ನ ಪರವಾಗಿ ಮತ್ತು ತನ್ನ ಇಚ್ಛೆಗನುಸಾರವಾಗಿ ತನ್ನ ಮತ ದಾಖಲು ಮಾಡಲು ವೋಟಿಂಗ್

ಕಂಪಾರ್ಟ್‌ಮೆಂಟ್‌ಗೆ ಹದಿನೆಂಟು ವರ್ಷಗಳಿಗೆ ಕಡಿಮೆಯಿಲ್ಲದ ಒಬ್ಬ ಸಂಗಡಿಗನನ್ನು ಕರೆದುಕೊಂಡು ಹೋಗಲು ಅನುಮತಿಸತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ಒಂದೇ ದಿನ ಯಾವುದೇ ಮತಗಟ್ಟೆಯಲ್ಲಿ ಒಬ್ಬನಿಗಿಂತ ಹೆಚ್ಚು ಮತದಾರರ ಸಂಗಡಿಗನಾಗಿ ಕಾರ್ಯನಿರ್ವಹಿಸಲು ಅನುಮತಿ ನೀಡತಕ್ಕದ್ದಲ್ಲ:

ಮತ್ತೂ ಪರಂತು, ಈ ನಿಯಮದ ಅಡಿಯಲ್ಲಿ ಯಾವುದೇ ದಿನ ಒಬ್ಬ ಮತದಾರನ ಸಂಗಡಿಗನಾಗಿ ಕಾರ್ಯನಿರ್ವಹಿಸಲು ಯಾರೇ ವ್ಯಕ್ತಿಗೆ ಅನುಮತಿ ನೀಡುವ ಮೊದಲು, ಆತನು ಮತದಾರನ ಪರವಾಗಿ ದಾಖಲು ಮಾಡಿದ ಮತದ ರಹಸ್ಯವನ್ನು ಕಾಪಾಡುವುದಾಗಿ ಮತ್ತು ಆತನು ಆ ದಿನ ಇತರ ಯಾವುದೇ ಮತಗಟ್ಟೆಯಲ್ಲಿ ಇತರ ಯಾವುದೇ ಮತದಾರನ ಸಂಗಡಿಗನಾಗಿ ಈಗಾಗಲೇ ಕಾರ್ಯನಿರ್ವಹಿಸಿಲ್ಲವೆಂಬುದಾಗಿ ಘೋಷಣೆ ನೀಡುವಂತೆ ಅಗತ್ಯಪಡಿಸತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿರವರು ಈ ನಿಯಮದ ಅಡಿಯಲ್ಲಿ ನಮೂನೆ 14ಎ ಯಲ್ಲಿ ಎಲ್ಲ ಪ್ರಕರಣಗಳ ಒಂದು ದಾಖಲೆಯನ್ನು ಇಡತಕ್ಕದ್ದು.

**49ಒ. ಮತದಾರನು ಮತ ಚಲಾಯಿಸದಿರಲು ನಿರ್ಧರಿಸುವುದು**

ಒಬ್ಬ ಮತದಾರನು, ತನ್ನ ಮತದಾರರ ಪಟ್ಟಿ ಸಂಖ್ಯೆಯನ್ನು ನಮೂನೆ 17ಎಯಲ್ಲಿರುವ ಮತದಾರರ ರಿಜಿಸ್ಟರಿನಲ್ಲಿ ವಿಧ್ಯುಕ್ತವಾಗಿ ನಮೂದಿಸಿದ ಮೇಲೆ ಮತ್ತು ನಿಯಮ 49ಎಲ್‌ನ ಉಪನಿಯಮ (1)ರ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಅದರ ಮೇಲೆ ತನ್ನ ಸಹಿ ಅಥವಾ ಹೆಬ್ಬೆರಳು ಗುರುತನ್ನು ಹಾಕಿದ ಮೇಲೆ ತನ್ನ ಮತ ಚಲಾಯಿಸದಿರಲು ನಿರ್ಧರಿಸಿದರೆ, ಪ್ರಿಸೈಡಿಂಗ್ ಅಧಿಕಾರಿರವರು ಈ ಮಟ್ಟಿಗೆ ನಮೂನೆ 17ಎ ಯಲ್ಲಿನ ಸದರಿ ನಮೂದಿನ ಎದುರಿನಲ್ಲಿ ಒಂದು ಷರಾ ಬರೆಯತಕ್ಕದ್ದು ಮತ್ತು ಅಂಥ ಷರಾದ ಎದುರು ಮತದಾರನ ಸಹಿ ಅಥವಾ ಹೆಬ್ಬೆರಳು ಗುರುತನ್ನು ಪಡೆದುಕೊಳ್ಳತಕ್ಕದ್ದು.

**49ಪಿ. ಟೆಂಡರ್ಡ್ ಮತಗಳು**

(1) ಒಬ್ಬ ವ್ಯಕ್ತಿಯು, ಮತ್ತೊಬ್ಬ ವ್ಯಕ್ತಿಯ ಅಂಥ ಮತದಾರನೆಂಬುದಾಗಿ ಈಗಾಗಲೇ ಮತ ಚಲಾಯಿಸಿ ಹೋದಮೇಲೆ, ಆ ನಿರ್ದಿಷ್ಟ ಮತದಾರನು ತಾನೇ ಎಂದು ಹೇಳಿಕೊಂಡು ಮತ ಚಲಾಯಿಸಲು ಕೋರಿದರೆ, ಆತನು, ಪ್ರಿಸೈಡಿಂಗ್ ಅಧಿಕಾರಿರವರು ಆತನ ಗುರುತಿಗೆ ಸಂಬಂಧಿಸಿದಂತೆ ಕೇಳುವಂಥ ಪ್ರಶ್ನೆಗಳಿಗೆ ತೃಪ್ತಿಕರವಾಗಿ ಉತ್ತರ ಹೇಳಿದ ಮೇಲೆ, ಆತನಿಗೆ ಬ್ಯಾಲೆಟಿಂಗ್ ಯೂನಿಟಿನ ಮೂಲಕ ಮತಹಾಕಲು ಅನುಮತಿಸುವ ಬದಲಾಗಿ ಆತನಿಗೆ ಒಂದು ಟೆಂಡರ್ಡ್ ಮತಪತ್ರವನ್ನು ನೀಡತಕ್ಕದ್ದು. ಅದು ಚುನಾವಣಾ ಆಯೋಗವು ನಿರ್ದಿಷ್ಟಪಡಿಸುವಂಥ ವಿನ್ಯಾಸದಲ್ಲಿರತಕ್ಕದ್ದು ಮತ್ತು ಅದರ ವಿವರಗಳು ಅದು ನಿರ್ದಿಷ್ಟಪಡಿಸುವಂಥ ಭಾಷೆ ಅಥವಾ ಭಾಷೆಗಳಲ್ಲಿರತಕ್ಕದ್ದು.

(2) ಟೆಂಡರ್ಡ್ ಮತಪತ್ರ ಒದಗಿಸುವುದಕ್ಕೆ ಮೊದಲು ಅಂಥ ಪ್ರತಿಯೊಬ್ಬ ಮತದಾರನು ನಮೂನೆ – 17ಬಿಯಲ್ಲಿ ಆತನಿಗೆ ಸಂಬಂಧಿಸಿದ ನಮೂದುಗಳ ಎದುರಿನಲ್ಲಿ ತನ್ನ ಹೆಸರನ್ನು ಬರೆಯತಕ್ಕದ್ದು.

(3) ಮತಪತ್ರ ಸ್ವೀಕರಿಸಿದ ಮೇಲೆ ಆತನು ತಕ್ಷಣವೇ,–

(ಎ) ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ತೆರಳತಕ್ಕದ್ದು;

(ಬಿ) ಮತಪತ್ರದಲ್ಲಿ ತಾನು ಮತ ಹಾಕಲು ಇಚ್ಛಿಸುವ ಅಭ್ಯರ್ಥಿಯ ಚಿಹ್ನೆಯ ಮೇಲೆ ಅಥವಾ ಅದರ ಸಮೀಪ ಆ ಉದ್ದೇಶಕ್ಕಾಗಿ ನೀಡಲಾಗಿರುವ ಸಾಧನ ಅಥವಾ ಉಪಕರಣದ ಸಹಾಯದಿಂದ ಒಂದು ಅಡ್ಡ ಗುರುತು 'ಥ' ಹಾಕುವ ಮೂಲಕ ತನ್ನ ಮತ ದಾಖಲು ಮಾಡತಕ್ಕದ್ದು;

(ಸಿ) ತಾನು ಹಾಕಿದ ಮತವು ಕಾಣಿಸದ ರೀತಿಯಲ್ಲಿ ಮತಪತ್ರವನ್ನು ಮಡಿಸತಕ್ಕದ್ದು;

(ಡಿ) ಅಗತ್ಯವಿದ್ದಲ್ಲಿ ಪ್ರಿಸೈಡಿಂಗ್ ಅಧಿಕಾರಿರವರಿಗೆ ಮತಪತ್ರದ ಮೇಲಿನ ವಿಭಿನ್ನತಾ ಗುರುತನ್ನು ತೋರಿಸತಕ್ಕದ್ದು;

(ಇ) ಅದನ್ನು ಪ್ರಿಸೈಡಿಂಗ್ ಅಧಿಕಾರಿರವರಿಗೆ ನೀಡತಕ್ಕದ್ದು. ಅವರು ಆ ಉದ್ದೇಶಕ್ಕಾಗಿ ಇಡಲಾಗಿರುವ ಲಕೋಟೆಯಲ್ಲಿ ಅದನ್ನು ಇಡುವರು; ಮತ್ತು

(ಎಫ್) ಮತಗಟ್ಟೆಯಿಂದ ತೆರಳತಕ್ಕದ್ದು.

(4) ಅಂಧನಾಗಿರುವ ಅಥವಾ ದೈಹಿಕವಾಗಿ ದುರ್ಬಲನಾಗಿರುವ ಕಾರಣದಿಂದಾಗಿ ಅಂತಹ ಮತದಾರನು ಇತರರ ನೆರವಿಲ್ಲದೆ ಮತ ಚಲಾಯಿಸಲು ಅಸಮರ್ಥನಾಗಿದ್ದರೆ, ಪ್ರಿಸೈಡಿಂಗ್ ಅಧಿಕಾರಿರವರು, ತನ್ನ ಜೊತೆಯಲ್ಲಿ, ತನ್ನ ಇಚ್ಛೆಗನುಸಾರವಾಗಿ ಮತ ದಾಖಲು ಮಾಡುವ ಸಲುವಾಗಿ ನಿಯಮ 49ಎನ್ ನಲ್ಲಿ ನಿದಿಷ್ಟಪಡಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು ಆ ಪ್ರಕ್ರಿಯೆಯನ್ನು ಅನುಸರಿಸಿದ ಮೇಲೆ, ಒಬ್ಬ ಸಂಗಡಿಗನನ್ನು ಕರೆದುಕೊಂಡುಹೋಗಲು ಆತನಿಗೆ ಅನುಮತಿಸತಕ್ಕದ್ದು.

**49ಕ್ಯೂ. ಮತದಾನದ ಅವಧಿಯಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರಿಸೈಡಿಂಗ್ ಅಧಿಕಾರಿಯವರ ಪ್ರವೇಶ**

(1) ಪ್ರಿಸೈಡಿಂಗ್ ಅಧಿಕಾರಿಅವರು ಮತದಾನದ ಅವಧಿಯಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸುವುದು ಅಗತ್ಯವೆಂದು ಪರಿಗಣಿಸಿದಾಗ ಹಾಗೆ ಪ್ರವೇಶಿಸಬಹುದು ಮತ್ತು ಬ್ಯಾಲೆಟಿಂಗ್ ಯೂನಿಟನ್ನು ಹಾಳುಗೆಡವಲಾಗುತ್ತಿಲ್ಲ ಅಥವಾ ಅದರಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಅವಶ್ಯವಿರುವಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

(2) ಪ್ರಿಸೈಡಿಂಗ್ ಅಧಿಕಾರಿರವರು ವೋಟಿಂಗ್ ಕಂಪಾರ್ಟ್‌ಮೆಂಟಿನೊಳಗೆ ಹೋಗುವ ಒಬ್ಬ ಮತದಾರನು ಬ್ಯಾಲೆಟಿಂಗ್ ಯೂನಿಟನ್ನು ಹಾಳುಗೆಡವುತ್ತಿದ್ದಾನೆ ಅಥವಾ ಅದರ ವಿಷಯದಲ್ಲಿ ಅನ್ಯಥಾ ಹಸ್ತಕ್ಷೇಪ ಮಾಡುತ್ತಿದ್ದಾನೆಂದು ಅಥವಾ ಅನುಚಿತವಾಗಿ ದೀರ್ಘಕಾಲ ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿದ್ದಾನೆಂದು ಸಂಶಯಿಸಲು ಕಾರಣ ಹೊಂದಿದ್ದರೆ, ಅವರು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸತಕ್ಕದ್ದು ಮತ್ತು ಮತದಾನವು ಸುಗಮವಾಗಿ ಹಾಗೂ ಕ್ರಮಬದ್ಧವಾಗಿ ಜರುಗುವಂತೆ ನೋಡಿಕೊಳ್ಳಲು ಅಗತ್ಯವಿರುವಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ಈ ನಿಯಮದ ಅಡಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿರವರು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸಿದಾಗ, ಪೋಲಿಂಗ್ ಏಜೆಂಟರು ಅವರ ಜೊತೆ ಹೋಗಲು ಇಚ್ಛಿಸಿದಲ್ಲಿ ಹಾಗೆ ಹೋಗಲು ಅವರಿಗೆ ಅನುಮತಿಸತಕ್ಕದ್ದು.

**49ಆರ್. ಮತದಾನ ಮುಕ್ತಾಯ**

(1) ಪ್ರಿಸೈಡಿಂಗ್ ಅಧಿಕಾರಿರವರು ಪ್ರಕರಣ 56ರ ಅಡಿಯಲ್ಲಿ ಮತಗಟ್ಟೆ ಮುಚ್ಚುವುದಕ್ಕೆ ನಿರ್ದಿಷ್ಟಪಡಿಸಿರುವ ಸಮಯಕ್ಕೆ ಸರಿಯಾಗಿ ಅದನ್ನು ಮುಚ್ಚತಕ್ಕದ್ದು ಮತ್ತು ಆ ತರುವಾಯ ಯಾವುದೇ ಮತದಾರನನ್ನು ಮತಗಟ್ಟೆಯೊಳಗೆ ಬಿಡತಕ್ಕದ್ದಲ್ಲ:

ಪರಂತು, ಮತಗಟ್ಟೆ ಮುಚ್ಚುವುದಕ್ಕೆ ಮೊದಲು ಅದರೊಳಗೆ ಹಾಜರಿರುವ ಎಲ್ಲ ಮತದಾರರಿಗೆ ಅವರ ಮತ ಚಲಾಯಿಸಲು ಅವಕಾಶ ಮಾಡಿಕೊಡತಕ್ಕದ್ದು.

(2) ಮತಗಟ್ಟೆ ಮುಚ್ಚುವುದಕ್ಕೆ ಮೊದಲು ಒಬ್ಬ ಮತದಾರನು ಅದರೊಳಗೆ ಹಾಜರಿದ್ದನೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದನ್ನು ಪ್ರಿಸೈಡಿಂಗ್ ಅಧಿಕಾರಿಅವರು ನಿರ್ಧರಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**49ಎಸ್. ದಾಖಲಾದ ಮತಗಳ ಲೆಕ್ಕ**

(1) ಪ್ರಿಸೈಡಿಂಗ್ ಅಧಿಕಾರಿರವರು ಮತದಾನ ಮುಗಿದ ಮೇಲೆ ದಾಖಲಾದ ಮತಗಳ ಒಂದು ಲೆಕ್ಕವನ್ನು ನಮೂನೆ 17ಸಿಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು 'ದಾಖಲಾದ ಮತಗಳ ಲೆಕ್ಕ' ಎಂದು ಬರೆಯಲಾದ ಒಂದು ಪ್ರತ್ಯೇಕ ಲಕೋಟೆಯೊಳಗೆ ಇಡತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿರವರು ಮತದಾನ ಮುಗಿದಾಗ ಅಲ್ಲಿ ಹಾಜರಿರುವ ಪ್ರತಿಯೊಬ್ಬ ಪೋಲಿಂಗ್ ಏಜೆಂಟನಿಗೆ ನಮೂನೆ 17ಸಿಯಲ್ಲಿ ಮಾಡಲಾದ ನಮೂದುಗಳ ಒಂದೊಂದು ಯಥಾಪ್ರತಿಯನ್ನು, ಅದಕ್ಕಾಗಿ ಸದರಿ ಪೋಲಿಂಗ್ ಏಜೆಂಟನಿಂದ ಅದನ್ನು ಸ್ವೀಕರಿಸಿದ ಬಗ್ಗೆ ಒಂದು ಸ್ವೀಕೃತಿ ಪಡೆದುಕೊಂಡು ನೀಡತಕ್ಕದ್ದು ಮತ್ತು ಅದನ್ನು ಯಥಾಪ್ರತಿ ಎಂದು ದೃಢೀಕರಿಸತಕ್ಕದ್ದು.

**49ಟಿ. ಮತದಾನ ಮುಗಿದ ಮೇಲೆ ಮತಯಂತ್ರಗಳನ್ನು ಮೊಹರು ಮಾಡುವುದು**

(1) ಮತದಾನ ಮುಗಿದ ಮೇಲೆ ಕಾರ್ಯಸಾಧ್ಯವಾದಷ್ಟು ಬೇಗನೆ, ಪ್ರಿಸೈಡಿಂಗ್ ಅಧಿಕಾರಿಅವರು ಮತ್ತಾವುದೇ ಮತಗಳನ್ನು ದಾಖಲು ಮಾಡಲಾಗುವುದಿಲ್ಲವೆಂಬುದನ್ನು ಖಾತರಿಪಡಿಸಿಕೊಳ್ಳಲು ಕಂಟ್ರೋಲ್ ಯೂನಿಟನ್ನು ಮುಚ್ಚತಕ್ಕದ್ದು ಮತ್ತು ಬ್ಯಾಲೆಟಿಂಗ್ ಯೂನಿಟನ್ನು ಕಂಟ್ರೋಲ್ ಯೂನಿಟ್‌ನಿಂದ ಬೇರ್ಪಡಿಸತಕ್ಕದ್ದು.

(2) ಆ ತರುವಾಯ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟಿಂಗ್ ಯೂನಿಟನ್ನು ಮೊಹರು ಮಾಡತಕ್ಕದ್ದು ಮತ್ತು ಚುನಾವಣಾ ಆಯೋಗವು ನಿರ್ದೇಶಿಸುವಂಥ ರೀತಿಯಲ್ಲಿ ಭದ್ರಪಡಿಸತಕ್ಕದ್ದು ಮತ್ತು ಅವುಗಳನ್ನು ಭದ್ರಗೊಳಿಸಲು ಉಪಯೋಗಿಸಿದ ಮೊಹರನ್ನು, ಮೊಹರುಗಳನ್ನು ಒಡೆಯದೆಯೆ ಯೂನಿಟ್‌ಗಳನ್ನು ತೆರೆಯಲು ಸಾಧ್ಯವಿಲ್ಲವೆನ್ನುವ ರೀತಿಯಲ್ಲಿ ಹಾಕಿರತಕ್ಕದ್ದು.

(3) ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರು ತಮ್ಮ ಮೊಹರುಗಳನ್ನು ಹಾಕಲು ಇಚ್ಛಿಸಿದಲ್ಲಿ, ಹಾಗೆ ತಮ್ಮ ಮೊಹರು ಹಾಕಲು ಅವರಿಗೆ ಅನುಮತಿಸತಕ್ಕದ್ದು.

**49ಯು. ಇತರೆ ಪ್ಯಾಕೆಟ್‌ಗಳ ಮೊಹರು**

(1) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿರವರು, –

(ಎ) ಮತದಾರರ ಅಧಿಕೃತ ಪಟ್ಟಿಯ ಪ್ರತಿಯನ್ನು;

(ಬಿ) ನಮೂನೆ 17ಎಯಲ್ಲಿನ ಮತದಾರರ ರಿಜಿಸ್ಟರ್ ಅನ್ನು;

(ಸಿ) ಟೆಂಡರ್ಡ್ ಮತಪತ್ರಗಳನ್ನು ಒಳಗೊಂಡಿರುವ ಲಕೋಟೆ ಮತ್ತು ನಮೂನೆ 17ಬಿಯಲ್ಲಿನ ಪಟ್ಟಿಯನ್ನು;

(ಡಿ) ಆಕ್ಷೇಪಿತ ಮತಗಳ ಪಟ್ಟಿಯನ್ನು; ಮತ್ತು

(ಇ) ಒಂದು ಮೊಹರು ಮಾಡಿದ ಪ್ಯಾಕೆಟ್‌ನಲ್ಲಿ ಇಡುವಂತೆ ಚುನಾವಣಾ ಆಯೋಗವು ನಿರ್ದೇಶಿಸಿದಂಥ ಇತರ ಯಾವುದೇ ಪತ್ರಗಳನ್ನು ಪ್ರತ್ಯೇಕ ಪ್ಯಾಕೆಟ್‌ಗಳಲ್ಲಿ ಇಡತಕ್ಕದ್ದು.

(2) ಪ್ರತಿಯೊಂದು ಪ್ಯಾಕೆಟ್ ಅನ್ನು ಪ್ರಿಸೈಡಿಂಗ್ ಅಧಿಕಾರಿಅವರ ಮೊಹರಿನೊಂದಿಗೆ ಮತ್ತು ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಅಥವಾ ಮತಗಟ್ಟೆಯಲ್ಲಿ ಹಾಜರಿರುವ ಮತ್ತು ಅದರ ಮೇಲೆ

ಮೊಹರು ಹಾಕಲು ಇಚ್ಛಿಸುವ ಆತನ ಪೋಲಿಂಗ್ ಏಜೆಂಟನ ಮೊಹರಿನೊಂದಿಗೆ ಮೊಹರು ಮಾಡತಕ್ಕದ್ದು.

**49ವಿ. ಮತಯಂತ್ರಗಳು, ಇತ್ಯಾದಿಗಳನ್ನು ರಿಟರ್ನಿಂಗ್ ಅಧಿಕಾರಿರವರಿಗೆ ರವಾನಿಸುವುದು**

(1) ಅನಂತರ ಪ್ರಿಸೈಡಿಂಗ್ ಅಧಿಕಾರಿಅವರು, –

(ಎ) ಮತಯಂತ್ರ;

(ಬಿ) ನಮೂನೆ 17ಸಿಯಲ್ಲಿ ದಾಖಲು ಮಾಡಿದ ಮತಗಳ ಲೆಕ್ಕ;

(ಸಿ) ನಿಯಮ 49ಯು ಯಲ್ಲಿ ಉಲ್ಲೇಖಿಸಲಾದ ಮೊಹರು ಮಾಡಿದ ಪ್ಯಾಕೆಟ್‌ಗಳು; ಮತ್ತು

(ಡಿ) ಮತದಾನದಲ್ಲಿ ಬಳಸಿದ ಇತರ ಎಲ್ಲ ಕಾಗದಪತ್ರಗಳನ್ನು ರಿಟರ್ನಿಂಗ್ ಅಧಿಕಾರಿರವರು ನಿರ್ದೇಶಿಸುವಂಥ ಸ್ಥಳದಲ್ಲಿ ರಿಟರ್ನಿಂಗ್ ಅಧಿಕಾರಿರವರಿಗೆ ಕೊಡತಕ್ಕದ್ದು ಅಥವಾ ಕೊಡುವಂತೆ ಮಾಡತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿರವರು, ಮತ ಎಣಿಕೆ ಪ್ರಾರಂಭವಾಗುವವರೆಗೆ ಮತಯಂತ್ರ, ಪ್ಯಾಕೆಟ್‌ಗಳು ಮತ್ತು ಇತರ ಕಾಗದಪತ್ರಗಳ ಸುರಕ್ಷಿತ ಅಭಿರಕ್ಷೆಗೆ, ಅವುಗಳ ಸುರಕ್ಷಿತ ರವಾನೆಗೆ ಸಾಕಷ್ಟು ವ್ಯವಸ್ಥೆಗಳನ್ನು ಮಾಡತಕ್ಕದ್ದು.

**49ಡಬ್ಲ್ಯು. ಮುಂದೂಡಿದ ಮತದಾನದ ಬಗ್ಗೆ ಪ್ರಕ್ರಿಯೆ**

(1) ಪ್ರಕರಣ 57ರ ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಮತಗಟ್ಟೆಯಲ್ಲಿ ಮತದಾನ ಮುಂದೂಡಲ್ಪಟ್ಟಿದ್ದರೆ, 49ಎಸ್ ನಿಂದ 49ವಿ ವರೆಗಿನ ನಿಯಮಗಳ ಉಪಬಂಧಗಳು, ಕಾರ್ಯಸಾಧ್ಯವಾದಷ್ಟು ಮಟ್ಟಿಗೆ, ಮತದಾನವನ್ನು ಪ್ರಕರಣ 56ರ ಅಡಿಯಲ್ಲಿ ಆ ಬಗ್ಗೆ ನಿಗದಿಪಡಿಸಿದ ಸಮಯದಲ್ಲಿ ಮುಕ್ತಾಯಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) ಪ್ರಕರಣ 57ರ ಉಪಪ್ರಕರಣ (2)ರ ಅಡಿಯಲ್ಲಿ ಮತದಾನ ಮುಂದೂಡಿಕೆಗೆ ಶಿಫಾರಸು ಮಾಡಿರುವಾಗ, ಹಾಗೆ ಮುಂದೂಡಲಾದ ಮತದಾನದಲ್ಲಿ ಈಗಾಗಲೇ ಮತ ಚಲಾಯಿಸಿರುವ ಮತದಾರರಿಗೆ ಪುನಃ ಮತ ಚಲಾಯಿಸಲು ಅವಕಾಶ ನೀಡತಕ್ಕದ್ದಲ್ಲ.

(3) ರಿಟರ್ನಿಂಗ್ ಅಧಿಕಾರಿರವರು ಅಂಥ ಮುಂದೂಡಿಕೆಯ ಮತದಾನ ನಡೆಯುತ್ತಿರುವ ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಅವರಿಗೆ ಮತದಾರರ ಅಧಿಕೃತ ಪಟ್ಟಿಯ ಪ್ರತಿ, ನಮೂನೆ 17ಎಯಲ್ಲಿನ ಮತದಾರರ ರಿಜಿಸ್ಟರ್ – ಇವುಗಳನ್ನು ಒಳಗೊಂಡಿರುವ ಮೊಹರು ಮಾಡಿದ ಪ್ಯಾಕೆಟ್‌ಗಳು ಮತ್ತು ಒಂದು ಹೊಸ ಮತಯಂತ್ರವನ್ನು ಒದಗಿಸತಕ್ಕದ್ದು.

(4) ಪ್ರಿಸೈಡಿಂಗ್ ಅಧಿಕಾರಿರವರು ಮೊಹರು ಮಾಡಿರುವ ಪ್ಯಾಕೆಟ್ ಅನ್ನು ಹಾಜರಿರುವ ಪೋಲಿಂಗ್ ಏಜೆಂಟರ ಎದುರಿನಲ್ಲಿ ತೆರೆಯತಕ್ಕದ್ದು ಮತ್ತು ಮುಂದೂಡಿದ ಮತದಾನದಲ್ಲಿ ಮತಹಾಕಲು ಅನುಮತಿಸಲಾದ ಮತದಾರರ ಹೆಸರುಗಳನ್ನು ಗುರುತುಮಾಡಿಕೊಳ್ಳಲು ಮತದಾರರ ಅಧಿಕೃತ ಪಟ್ಟಿಯ ಪ್ರತಿಯನ್ನು ಬಳಸತಕ್ಕದ್ದು.

(5) ನಿಯಮ 28ರ ಮತ್ತು 49ಎ ಯಿಂದ 49ವಿ ವರೆಗಿನ ನಿಯಮಗಳ ಉಪಬಂಧಗಳು, ಮುಂದೂಡಿದ ಅಂಥ ಒಂದು ಮತದಾನ ನಡೆಸುವುದಕ್ಕೆ ಸಂಬಂಧಿಸಿದಂತೆ ಅದನ್ನು ಹಾಗೆ ಮುಂದೂಡುವುದಕ್ಕೆ ಮೊದಲು ಅದಕ್ಕೆ ಅನ್ವಯಿಸುವಂತೆಯೇ ಅನ್ವಯವಾಗತಕ್ಕದ್ದು.

**49ಎಕ್ಸ್. ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಮತಯಂತ್ರ ಮುಚ್ಚುವುದು**

ಒಂದು ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳದಲ್ಲಿ ಮತಗಟ್ಟೆ ವಶಪಡಿಸಿಕೊಳ್ಳಲಾಗುತ್ತಿದೆಯೆಂದು ಪ್ರಿಸೈಡಿಂಗ್ ಅಧಿಕಾರಿಅವರು ಅಭಿಪ್ರಾಯಪಟ್ಟರೆ, ಅವರು ತಕ್ಷಣವೇ, ಮತ್ತಾವುದೇ ಮತವನ್ನು ಚಲಾಯಿಸಲು ಸಾಧ್ಯವಾಗದಂತೆ

ಮತಯಂತ್ರದ ಕಂಟ್ರೋಲ್ ಯೂನಿಟನ್ನು ಮುಚ್ಚತಕ್ಕದ್ದು ಮತ್ತು ಬ್ಯಾಲೆಟಿಂಗ್ ಯೂನಿಟನ್ನು ಕಂಟ್ರೋಲ್ ಯೂನಿಟ್‌ನಿಂದ ಬೇರ್ಪಡಿಸತಕ್ಕದ್ದು.

(ಡಿ) ನಿಯಮ 66ರ ತರುವಾಯ, ಈ ಮುಂದಿನದನ್ನು ಎಂದರೆ. 66ಎ ಅನ್ನು ಸೇರ್ಪಡೆ ಮಾಡತಕ್ಕದ್ದು. ವಿದ್ಯುನ್ಮಾನ ಮತಯಂತ್ರ ಬಳಸಿರುವ ಕಡೆಗಳಲ್ಲಿ ಮತಗಳ ಎಣಿಕೆಯು ಮತಯಂತ್ರ ಉಪಯೋಗಿಸಿರುವ ಮತಗಟ್ಟೆಯಲ್ಲಿ ಚಲಾಯಿಸಲಾದ ಮತಗಳ ಎಣಿಕೆಗೆ ಸಂಬಂಧಿಸಿದಂತೆ,

(i) 50 ರಿಂದ 54ರವರೆಗಿನ ನಿಯಮಗಳ ಉಪಬಂಧಗಳು ಮತ್ತು ನಿಯಮ, 55, 56 ಮತ್ತು 57ರ ಬದಲಾಗಿ ಈ ಮುಂದಿನ ನಿಯಮಗಳು ಅನುಕ್ರಮವಾಗಿ ಅನ್ವಯವಾಗತಕ್ಕದ್ದು, ಎಂದರೆ:–

**"55ಸಿ. ಮತಯಂತ್ರಗಳ ಪರಿಶೀಲನೆ ಮತ್ತು ಪರಿವೀಕ್ಷಣೆ":**

(1) ರಿಟರ್ನಿಂಗ್ ಅಧಿಕಾರಿರವರು ಒಂದಕ್ಕಿಂತ ಹೆಚ್ಚು ಮತಗಟ್ಟೆಗಳಲ್ಲಿ ಬಳಸಲಾದ ಮತಯಂತ್ರಗಳ ಕಂಟ್ರೋಲ್ ಯೂನಿಟ್‌ಗಳನ್ನು ಪರಿಶೀಲನೆ ಮತ್ತು ಪರಿವೀಕ್ಷಣೆಗಾಗಿ ತೆಗೆದುಕೊಳ್ಳಬಹುದು ಮತ್ತು ಅಂಥ ಯೂನಿಟ್‌ಗಳಲ್ಲಿ ದಾಖಲಾದ ಮತಗಳನ್ನು ಏಕಕಾಲದಲ್ಲಿ ಎಣಿಕೆ ಮಾಡಬಹುದು.

(2) ಮತಯಂತ್ರದ ಯಾವುದೇ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲು ಮಾಡಲಾದ ಮತಗಳನ್ನು ಉಪನಿಯಮ (1)ರ ಅಡಿಯಲ್ಲಿ ಎಣಿಕೆ ಮಾಡುವುದಕ್ಕೆ ಮೊದಲು ಅಭ್ಯರ್ಥಿ ಅಥವಾ ಆತನ ಪೋಲಿಂಗ್ ಏಜೆಂಟ್ ಅಥವಾ ಎಣಿಕೆ ಮೇಜಿನ ಬಳಿ ಹಾಜರಿರುವ ಆತನ ಎಣಿಕೆ ಏಜೆಂಟನು ಪೇಪರ್ ಸೀಲನ್ನು ಮತ್ತು ಯೂನಿಟ್‌ನ ಮೇಲೆ ಹಾಕಿರಬಹುದಾದಂಥ ಇತರ ಮುಖ್ಯ ಮೊಹರುಗಳನ್ನು ಪರೀಕ್ಷಿಸಲು ಮತ್ತು ಮೊಹರುಗಳು ಯಥಾಸ್ಥಿತಿಯಲ್ಲಿವೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಲು ಅವರಿಗೆ ಅವಕಾಶ ನೀಡತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಅವರು ಯಾವುದೇ ಮತಯಂತ್ರದ ವಿಷಯದಲ್ಲಿ ಹಸ್ತಕ್ಷೇಪ ನಡೆದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(4) ವಾಸ್ತವವಾಗಿ ಯಾವುದೇ ಮತಯಂತ್ರದ ವಿಷಯದಲ್ಲಿ ಹಸ್ತಕ್ಷೇಪ ನಡೆದಿದೆ ಎಂದು ರಿಟರ್ನಿಂಗ್ ಅಧಿಕಾರಿಅವರಿಗೆ ಮನವರಿಕೆಯಾದರೆ, ಅವರು ಆ ಯಂತ್ರದಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡತಕ್ಕದ್ದಲ್ಲ ಮತ್ತು ಆ ಯಂತ್ರವನ್ನು ಬಳಸಲಾದ ಮತಗಟ್ಟೆಗಳ ಸಂಬಂಧದಲ್ಲಿ ಅನ್ವಯವಾಗುವಂತೆ ಪ್ರಕರಣ 58 ಅಥವಾ 58ಎ ಅಥವಾ ಪ್ರಕರಣ 64ಎಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

**56ಸಿ. ಮತಗಳ ಎಣಿಕೆ:**

(1) ರಿಟರ್ನಿಂಗ್ ಅಧಿಕಾರಿಅವರು, ಒಂದು ಮತಯಂತ್ರವನ್ನು ವಾಸ್ತವವಾಗಿ ಹಾಳುಗೆಡವಿಲ್ಲ ಎಂದು ಮನದಟ್ಟು ಮಾಡಿಕೊಂಡ ಮೇಲೆ, ಅವರು ಅದರಲ್ಲಿ ದಾಖಲು ಮಾಡಲಾಗಿರುವ ಮತಗಳನ್ನು ಕಂಟ್ರೋಲ್ ಯೂನಿಟ್‌ನಲ್ಲಿ ಒದಗಿಸಲಾಗಿರುವ 'ರಿಸಲ್ಟ್ I' ಎಂದು ಗುರುತು ಮಾಡಿರುವ ಸೂಕ್ತ ಬಟನನ್ನು ಒತ್ತುವ ಮೂಲಕ ಎಣಿಸುವಂತೆ ಮಾಡತಕ್ಕದ್ದು. ಆ ಮುಖೇನ ಹಾಕಿರುವ ಒಟ್ಟು ಮತಗಳು ಮತ್ತು ಪ್ರತಿಯೊಬ್ಬ ಅಭ್ಯರ್ಥಿ ಪಡೆದಿರುವ ಮತಗಳನ್ನು, ಮತಗಳನ್ನು ಪ್ರದರ್ಶಿಸಲು ಯೂನಿಟ್‌ನಲ್ಲಿ ಒದಗಿಸಿರುವ ಪ್ರದರ್ಶನ ಪ್ಯಾನೆಲ್ ಮೇಲೆ ಅಂಥ ಪ್ರತಿಯೊಬ್ಬ ಅಭ್ಯರ್ಥಿಯ ಸಂಬಂಧದಲ್ಲಿ ಪ್ರದರ್ಶಿಸತಕ್ಕದ್ದು.

(2) ಕಂಟ್ರೋಲ್ ಯೂನಿಟಿನ ಮೇಲೆ ಪ್ರತಿಯೊಬ್ಬ ಅಭ್ಯರ್ಥಿಯು ಗಳಿಸಿರುವ ಮತಗಳನ್ನು ಪ್ರದರ್ಶಿಸುತ್ತಿದ್ದಂತೆಯೇ ರಿಟರ್ನಿಂಗ್ ಅಧಿಕಾರಿಯವರು,–

(ಎ) ಪ್ರತಿಯೊಬ್ಬ ಅಭ್ಯರ್ಥಿಯ ಸಂಬಂಧದಲ್ಲಿ, ದಾಖಲಾಗಿರುವಂಥ ಮತಗಳ ಸಂಖ್ಯೆಯನ್ನು ನಮೂನೆ 17ಸಿಯ ಭಾಗ ಖಖರಲ್ಲಿ ಪ್ರತ್ಯೇಕವಾಗಿ ದಾಖಲು ಮಾಡುವಂತೆ;

(ಬಿ) ಇತರ ರೀತಿಗಳಲ್ಲಿ ನಮೂನೆ 17ಸಿಯ ಭಾಗ–II ಪೂರ್ಣಗೊಳಿಸುವಂತೆ ಮತ್ತು ಎಣಿಕೆ ಮೇಲ್ವಿಚಾರಕರು ಹಾಗೂ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟರು ಅಥವಾ ಹಾಜರಿರುವ ಅವರ ಎಣಿಕೆ ಏಜೆಂಟರು ಸಹಿ ಹಾಕುವಂತೆ; ಮತ್ತು

(ಸಿ) ನಮೂನೆ 20ರಲ್ಲಿನ ಫಲಿತಾಂಶದ ಹಾಳೆಯಲ್ಲಿ ಸಂವಾದಿ ನಮೂದುಗಳನ್ನು ಮಾಡುವಂತೆ ಮತ್ತು ಹಾಗೆ ಫಲಿತಾಂಶದ ಹಾಳೆಯಲ್ಲಿ ನಮೂದಿಸಿದ ವಿವರಗಳನ್ನು ಪ್ರಕಟಿಸುವಂತೆ ಮಾಡತಕ್ಕದ್ದು.

**56ಡಿ. ಕಾಗದದ ತಾಳೆದರ್ಶಕ ಪರಿಶೀಲನೆ:–**

(1) ಕಾಗದದ ತಾಳೆದರ್ಶಕ ಪ್ರಿಂಟರನ್ನು ಬಳಸಿದ್ದರೆ, ಫಲಿತಾಂಶದ ಹಾಳೆಯಲ್ಲಿ ಮಾಡಲಾದ ನಮೂದು ವಿವರಗಳನ್ನು ಘೋಷಿಸಿದ ನಂತರ, ಯಾರೇ ಅಭ್ಯರ್ಥಿಯು, ಅಥವಾ ಆತನ ಅನುಪಸ್ಥಿತಿಯಲ್ಲಿ, ಆತನ ಚುನಾವಣಾ ಏಜೆಂಟನು ಅಥವಾ ಆತನ ಯಾರೇ ಎಣಿಕೆ ಏಜೆಂಟರು ಯಾವುದೇ ಮತಗಟ್ಟೆಗೆ ಅಥವಾ ಮತಗಟ್ಟೆಗಳಿಗೆ ಸಂಬಂಧಪಟ್ಟಂತೆ, ಪ್ರಿಂಟರ್‌ನ ಡ್ರಾಪ್ ಬಾಕ್ಸ್‌ನಲ್ಲಿರುವ ಮುದ್ರಿತ ಕಾಗದದ ಚೀಟಿಗಳನ್ನು ಎಣಿಸಲು ರಿಟರ್ನಿಂಗ್ ಆಫೀಸರಿಗೆ ಲಿಖಿತದಲ್ಲಿ ಕೋರಬಹುದು.

(2) ಅಂಥ ಮನವಿ ಸಲ್ಲಿಸಿದ ಮೇಲೆ, ರಿಟರ್ನಿಂಗ್ ಆಫೀಸರ್‌ರವರು, ಚುನಾವಣಾ ಆಯೋಗವು ಹೊರಡಿಸಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಮಾರ್ಗಸೂಚಿಗಳಿಗೆ ಒಳಪಟ್ಟು, ಆ ವಿಷಯವನ್ನು ತೀರ್ಮಾನಿಸತಕ್ಕದ್ದು ಹಾಗೂ ಅರ್ಜಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಪುರಸ್ಕರಿಸಬಹುದು ಅಥವಾ ಅದು ಅವರಿಗೆ ಕ್ಷುಲ್ಲಕ ಅಥವಾ ಅನುಚಿತ ಎಂದು ಕಂಡುಬಂದಲ್ಲಿ, ಪೂರ್ಣವಾಗಿ ಅದನ್ನು ತಿರಸ್ಕರಿಸಬಹುದು.

(3) ಉಪ–ನಿಯಮ(2)ರ ಅಡಿಯಲ್ಲಿ ರಿಟರ್ನಿಂಗ್ ಆಫೀಸರವರು ಕೈಗೊಂಡ ಪ್ರತಿಯೊಂದು ತೀರ್ಮಾನವು ಲಿಖಿತ ರೂಪದಲ್ಲಿ ಇರತಕ್ಕದ್ದು ಹಾಗೂ ಅದರ ಕಾರಣಗಳನ್ನು ಒಳಗೊಂಡಿರತಕ್ಕದ್ದು.

(4) ರಿಟರ್ನಿಂಗ್ ಆಫೀಸರವರು ಉಪನಿಯಮ (2)ರ ಮೇರೆಗೆ ಕಾಗದ ಚೀಟಿಗಳನ್ನು ಪೂರ್ಣವಾಗಿ ಅಥವಾ ಭಾಗದಲ್ಲಿ ಅಥವಾ ಭಾಗಗಳಲ್ಲಿ, ಎಣಿಕೆ ಮಾಡುವುದಕ್ಕೆ ಅನುಮತಿಸಲು ತೀರ್ಮಾನಿಸಿದರೆ, ಅವರು–

(ಎ) ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಎಣಿಕೆ ಮಾಡತಕ್ಕದ್ದು;

(ಬಿ) ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿತವಾದ ಮತಗಳು ಹಾಗೂ ಕಾಗದ ಚೀಟಿಗಳ ಎಣಿಕೆ ಇವುಗಳ ನಡುವೆ ವ್ಯತ್ಯಾಸವಿದ್ದಲ್ಲಿ, ಕಾಗದ ಚೀಟಿಗಳ ಎಣಿಕೆ ಅನುಸಾರ ನಮೂನೆ 20ರಲ್ಲಿನ ಫಲಿತಾಂಶ ಹಾಳೆಯಲ್ಲಿ ತಿದ್ದುಪಡಿ ಮಾಡತಕ್ಕದ್ದು;

(ಸಿ) ಅವರು ಹಾಗೆ ಮಾಡಿದ ತಿದ್ದುಪಡಿಗಳನ್ನು ಘೋಷಿಸತಕ್ಕದ್ದು; ಮತ್ತು

(ಡಿ) ಫಲಿತಾಂಶ ಹಾಳೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಅದಕ್ಕೆ ಸಹಿ ಮಾಡತಕ್ಕದ್ದು"

**57ಸಿ. ಮತಯಂತ್ರಗಳನ್ನು ಮೊಹರು ಮಾಡುವುದು**

(1) ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾದ ಮತದಾನ ಫಳಲಿತಾಂಶವನ್ನು ಅಭ್ಯರ್ಥಿವಾರು ಆಗಿ ಖಾತರಿಪಡಿಸಿಕೊಂಡ ಮತ್ತು ನಮೂನೆ 17ಸಿಯ ಭಾಗ ಖಖರಲ್ಲಿ ಮತ್ತು ನಿಯಮ 56ಸಿ ಅಡಿ ನಮೂನೆ 20ರಲ್ಲಿ ನಮೂದಿಸಿದ ಮೇಲೆ, ರಿಟರ್ನಿಂಗ್ ಅಧಿಕಾರಿರವರು ಆ ಯೂನಿಟನ್ನು ತಮ್ಮ ಮೊಹರಿನಿಂದ ಮತ್ತು ಅಭ್ಯರ್ಥಿಗಳ ಅಥವಾ ಅಲ್ಲಿ ಹಾಜರಿರುವ, ತಮ್ಮ ಮೊಹರುಗಳನ್ನು ಹಾಕಲು

ಇಚ್ಛಿಸುವ ಅವರ ಚುನಾವಣಾ ಏಜೆಂಟಗಳ ಮೊಹರಿನಿಂದ, ಯೂನಿಟನಲ್ಲಿ ದಾಖಲಾಗಿರುವ ಮತದಾನ ಫಲಿತಾಂಶವನ್ನು ಅಳಿಸಲಾಗದಂತೆ ಮಾಡಲು ಮತ್ತು ಯೂನಿಟ್ ಅಂಥ ಫಲಿತಾಂಶವನ್ನು ನೆನಪಿನಲ್ಲಿ ಇಟ್ಟುಕೊಳ್ಳುವಂತೆ ಮಾಡುವ ಸಲುವಾಗಿ ಯೂನಿಟನ್ನು ಮರು ಮೊಹರು ಮಾಡತಕ್ಕದ್ದು.

(2) ಹಾಗೆ ಮೊಹರು ಮಾಡಿದ ಕಂಟ್ರೋಲ್ ಯೂನಿಟನ್ನು ವಿಶೇಷವಾಗಿ ಸಿದ್ಧಪಡಿಸಿದ ಪೆಟ್ಟಿಗೆಗಳಲ್ಲಿ ಇಡತಕ್ಕದ್ದು. ಅದರ ಮೇಲೆ ರಿಟರ್ನಿಂಗ್ ಅಧಿಕಾರಿಅವರು ಈ ಮುಂದಿನ ವಿವರಗಳನ್ನು ದಾಖಲು ಮಾಡತಕ್ಕದ್ದು, ಎಂದರೆ: –

(ಎ) ಚುನಾವಣಾ ಕ್ಷೇತ್ರದ ಹೆಸರು;

(ಬಿ) ಕಂಟ್ರೋಲ್ ಯೂನಿಟ್ ಅನ್ನು ಬಳಸಿದ ಮತಗಟ್ಟೆಯ ಅಥವಾ ಮತಗಟ್ಟೆಗಳ ವಿವರಗಳು;

(ಸಿ) ಕಂಟ್ರೋಲ್ ಯೂನಿಟಿನ ಕ್ರಮ ಸಂಖ್ಯೆ;

(ಡಿ) ಮತದಾನದ ದಿನಾಂಕ; ಮತ್ತು

(ಇ) ಮತ ಎಣಿಕೆಯ ದಿನಾಂಕ;

(ii) ನಿಯಮ 60ರಿಂದ 66ರ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಮತಯಂತ್ರಗಳಿಂದ ಮಾಡಿದ ಮತದಾನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಆ ನಿಯಮಗಳಲ್ಲಿ,–

(ಎ) ಮತಪತ್ರವನ್ನು ಅಂಥ ಮತಯಂತ್ರಕ್ಕೆ ಮಾಡಲಾದ ಉಲ್ಲೇಖವನ್ನು ಒಳಗೊಂಡಿರುವಂತೆ ಅರ್ಥೈಸತಕ್ಕದ್ದು;

(ಬಿ) ಯಾವುದೇ ನಿಯಮವನ್ನು ಭಾಗ IVರ ಅಧ್ಯಾಯ IIರಲ್ಲಿನ ಸಂವಾದಿ ನಿಯಮಕ್ಕೆ ಅಥವಾ ಸಂದರ್ಭಾನುಸಾರ ನಿಯಮ 55ಸಿ ಅಥವಾ 56ಸಿ ಅಥವಾ 57ಸಿಗೆ ಮಾಡಲಾದ ಉಲ್ಲೇಖವೆಂಬಂತೆ ಅರ್ಥೈಸತಕ್ಕದ್ದು;

(ಇ) ಮೂಲ ನಿಯಮದ ನಿಯಮ 92ರಲ್ಲಿ, –

(i) ಉಪ ನಿಯಮ (1)ರ ತರುವಾಯ, ಈ ಮುಂದಿನ ಉಪ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

"(1ಎ) ಒಂದು ಚುನಾವಣೆಯಲ್ಲಿ ಬಳಸಲಾದ ಎಲ್ಲ ಮತಯಂತ್ರಗಳನ್ನು ಸಂಬಂಧಪಟ್ಟ ಜಿಲ್ಲಾ ಚುನಾವಣಾ ಅಧಿಕಾರಿಯವರ ಅಭಿರಕ್ಷೆಯಲ್ಲಿಡತಕ್ಕದ್ದು."

(ii) ಉಪನಿಯಮ (2)ರಲ್ಲಿ ಖಂಡ (ಡಿ)ಯ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ: –

"(ಡಿಡಿ) ನಮೂನೆ 17ಎಯಲ್ಲಿ ಮತದಾರರ ರಿಜಿಸ್ಟರ್‌ಗಳನ್ನು ಒಳಗೊಂಡಿರುವ ಪ್ಯಾಕೆಟ್‌ಗಳು".

(ಎಫ್) ಮೂಲ ನಿಯಮಗಳ ನಿಯಮ 93ರಲ್ಲಿ, –

(i) ಉಪನಿಯಮ (1)ರಲ್ಲಿ, ಖಂಡ (ಡಿ)ಯ ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಡಿಡಿ) ನಮೂನೆ 17ಎಯಲ್ಲಿ ಮತದಾರರ ರಿಜಿಸ್ಟರ್‌ಗಳನ್ನು ಒಳಗೊಂಡಿರುವ ಪ್ಯಾಕೆಟ್‌ಗಳು".

**ಪರಿಶಿಷ್ಟ–20**

**ನಮೂನೆ 17ಎ**

**(49ಎಲ್ ನಿಯಮ ನೋಡಿ)**

**ಮತದಾರರ ರಿಜಿಸ್ಟರು**

ಲೋಕಸಭೆಗೆ-------------------------------------- ರಾಜ್ಯದ/ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ -------------------- ಚುನಾವಣಾ ಕ್ಷೇತ್ರದಿಂದ ಚುನಾವಣೆ.
ಮತಗಟ್ಟೆಯ ಸಂಖ್ಯೆ ಮತ್ತು ಹೆಸರು ---------------------------------------
ಮತದಾರರ ಪಟ್ಟಿಯ ಭಾಗದ ಸಂಖ್ಯೆ ------------------------------------

| ಕ್ರ. ಸಂ. | ಮತದಾರರ ಪಟ್ಟಿಯಲ್ಲಿ ಮತದಾರನ ಕ್ರ.ಸಂ. | ಮತದಾರರು ಆತನ/ಆಕೆಯ ಗುರುತಿನ ದಾಖಲೆಯಾಗಿ ನೀಡಿದ ದಾಖಲೆಯ ವಿವರಗಳು | ಮತದಾರನ ಸಹಿ/ ಎಡಗೈ ಹೆಬ್ಬೆಟ್ಟಿನ ಗುರುತು | ಷರಾ |
|---|---|---|---|---|
| | | | | |
| 1 | | | | |
| 2 | | | | |
| 3 | | | | |
| 4 | | | | |

**ಪ್ರಿಸೈಡಿಂಗ್ ಅಧಿಕಾರಿಯವರ ಸಹಿ**

**ಪರಿಶಿಷ್ಟ–21**

**ನಮೂನೆ 17 ಬಿ**

**(49ಪಿ ನಿಯಮ ನೋಡಿ)**

**ಟೆಂಡರ್ಡ್ ಮತಗಳ ಪಟ್ಟಿ**

ಲೋಕಸಭೆಗೆ ------------------------------------ ರಾಜ್ಯದ/ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ------------------ ಚುನಾವಣಾ ಕ್ಷೇತ್ರದಿಂದ ಚುನಾವಣೆ.

ಮತಗಟ್ಟೆಯ ಸಂಖ್ಯೆ ಮತ್ತು ಹೆಸರು --------------------

ಮತದಾರರ ಪಟ್ಟಿಯ ಭಾಗ ಸಂಖ್ಯೆ ------------------------------------

| ಕ್ರ. ಸಂ. | ಮತದಾರನ ಹೆಸರು | ಮತದಾರರ ಪಟ್ಟಿಯಲ್ಲಿ ಮತದಾರನ ಕ್ರಮ ಸಂಖ್ಯೆ | ಮತದಾರನ ಹೆಸರಿನಲ್ಲಿ ಈಗಾಗಲೇ ಮತ ಚಲಾಯಿಸಿರುವಂಥ ವ್ಯಕ್ತಿಯ ಮತದಾರರ ಪಟ್ಟಿಯಲ್ಲಿನ ನಮೂನೆ 17ಎ) ಕ್ರಮ ಸಂಖ್ಯೆ | ಮತದಾರರ ಸಹಿ / ಎಡಗೈ ಹೆಬ್ಬೆಟ್ಟಿನ ಗುರುತು |
|---|---|---|---|---|
| 1 | 2 | 3 | 4 | 5 |
| | | | | |
| | | | | |

ದಿನಾಂಕ: --------------- ಪ್ರಿಸ್ಯೈಡಿಂಗ್ ಅಧಿಕಾರಿಯವರ ಸಹಿ

**ಪರಿಶಿಷ್ಟ–22**

**ನಮೂನೆ 17ಸಿ**

**(49ಎಸ್ ಮತ್ತು 56ಸಿ (2) ನಿಯಮ ನೋಡಿ)**

**ಭಾಗ I– ದಾಖಲಿಸಿದ ಮತಗಳ ಲೆಕ್ಕ**

---------- ಚುನಾವಣಾ ಕ್ಷೇತ್ರದಿಂದ ----------- ರಾಜ್ಯ/ಕೇಂದ್ರಾಡಳಿತ ಪ್ರದೇಶದ ಲೋಕಸಭೆಗೆ ಅಥವಾ ವಿಧಾನಸಭೆಗೆ ಚುನಾವಣೆ

ಮತಗಟ್ಟೆ ಸಂಖ್ಯೆ ಮತ್ತು ಹೆಸರು ------------

ಮತಗಟ್ಟೆಯಲ್ಲಿ ಬಳಸಿದ ಮತಯಂತ್ರದ ಗುರುತಿನಸಂಖ್ಯೆ:

ಕಂಟ್ರೋಲ್ ಯೂನಿಟ್ ಸಂಖ್ಯೆ--------

ಬ್ಯಾಲೆಟ್ ಯೂನಿಟ್ ಸಂಖ್ಯೆ ------

ವಿವಿಪ್ಯಾಟ್ ---------------

1 ಮತಗಟ್ಟೆಗೆ ಹಂಚಿಕೆ ಮಾಡಿದ ಮತದಾರರ ಒಟ್ಟು ಸಂಖ್ಯೆ

2. ಮತದಾರರ ರಿಜಿಸ್ಟರಿನಲ್ಲಿ ದಾಖಲಾದಂತೆ ಮತದಾರರ ಒಟ್ಟು ಸಂಖ್ಯೆ (ನಮೂನೆ 17ಎ)

3. ನಿಯಮ 49–ಒ ಮೇರೆಗೆ ಮತವನ್ನು ದಾಖಲು ಮಾಡದಿರಲು ನಿರ್ಧರಿಸಿದ ಮತದಾರರ ಸಂಖ್ಯೆ

4. ನಿಯಮ 49–ಎಂ ಮೇರೆಗೆ ಮತಹಾಕಲು ಅನುಮತಿ ನೀಡದಿರುವ ಮತದಾರರ ಸಂಖ್ಯೆ

5. ಅಗತ್ಯಪಡಿಸಿದ 49ಎಂಎ(ಡಿ) ನಿಯಮದ ಅಡಿಯಲ್ಲಿ ದಾಖಲಾದ ಪರೀಕ್ಷಾರ್ಥ ಮತಗಳನ್ನು ಕಳೆಯಬೇಕಾಗಿದೆ.

(ಎ) ಕಳೆಯಬೇಕಾದ ಒಟ್ಟು ಮತಗಳ ಸಂಖ್ಯೆ:

| ಒಟ್ಟು ಸಂಖ್ಯೆ | ನಮೂನೆ 17 (ಎ)ಯಲ್ಲಿ ಮತದಾರನ(ರ) ಕ್ರಮಸಂಖ್ಯೆ |
|---|---|
| ------- | ----------- ------ |

(ಬಿ) ಯಾವ ಅಭ್ಯರ್ಥಿಗೆ ಪರೀಕ್ಷಾರ್ಥ ಮತಗಳನ್ನು ಹಾಕಲಾಗಿದೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಮತಗಳ ಸಂಖ್ಯೆ |
|---|---|---|
| -------- | ----------- | ----------- |
| -------- | ----------- | ----------- |

6. ಮತಯಂತ್ರದ ಪ್ರಕಾರ ದಾಖಲಾಗಿರುವ ಮತಗಳ ಒಟ್ಟು ಸಂಖ್ಯೆ–--------------

7. ಬಾಬು 2ರಲ್ಲಿ ತೋರಿಸಲಾದಂತಹ ಒಟ್ಟು ಮತಗಳ ಸಂಖ್ಯೆಯಲ್ಲಿ ಬಾಬು–3ರಲ್ಲಿನ ಮತಗಳನ್ನು ದಾಖಲಿಸದಿರಲು ನಿರ್ಧರಿಸಿರುವ ಮತದಾರರ ಸಂಖ್ಯೆಯನ್ನು ಮತ್ತು ಬಾಬು 4ರಲ್ಲಿನ ಮತದಾರರ ಸಂಖ್ಯೆಯನ್ನು ಕಳೆದರೆ (2–3–4) ಬರುವ ಸಂಖ್ಯೆಗೆ ಬಾಬು 6ರಲ್ಲಿ ತೋರಿಸಲಾದಂಥ ಒಟ್ಟು ಮತಗಳ ಸಂಖ್ಯೆಯು

ತಾಳೆಯಾಗುತ್ತದೆಯೇ ಅಥವಾ ವ್ಯತ್ಯಾಸವೇನಾದರೂ
ಕಂಡು ಬಂದಿದೆಯೇ?

-----------------

8. ನಿಯಮ 49–ಪಿ ಅನ್ವಯ ಟೆಂಡರ್ಡ್ ಮತಪತಗಳನ್ನು
ನೀಡಲಾದ ಮತದಾರರ ಸಂಖ್ಯೆ ------------

9. ಟೆಂಡರ್ಡ್ ಮತಪತ್ರಗಳ ಸಂಖ್ಯೆ

| | ಕ್ರಮ ಸಂಖ್ಯೆ | | |
|---|---|---|---|
| | ಒಟ್ಟು | ಯಿಂದ | ಗೆ |
| | ----- | ----- | ----- |
| (ಎ) ಬಳಕೆಗಾಗಿ ಸ್ವೀಕರಿಸಿದ್ದು | | | |
| (ಬಿ) ಮತದಾರರಿಗೆ ನೀಡಿದ್ದು | | | |
| (ಸಿ) ಬಳಸದೇ ಹಿಂದಿರುಗಿಸಿದ್ದು | | | |

ಮತಗಟ್ಟೆ ಏಜೆಂಟರುಗಳ ಸಹಿ

10. ಪೇಪರ್ ಸೀಲ್‌ಗಳ ಲೆಕ್ಕ :

1. ಬಳಕೆಗೆ ಒದಗಿಸಲಾದ ಪೇಪರ್ ಸೀಲ್‌ಗಳ ಸಂಖ್ಯೆ ಒಟ್ಟು ಸಂಖ್ಯೆ ----- 1. -----
ಕ್ರ. ಸಂಖ್ಯೆ --------- ಯಿಂದ -------- ಗೆ

2. ಬಳಸಲಾದ ಪೇಪರ್ ಸೀಲ್‌ಗಳ ಸಂಖ್ಯೆ ಒಟ್ಟು ಸಂಖ್ಯೆ ---- 2. -----
ಕ್ರ. ಸಂಖ್ಯೆ --------- ಯಿಂದ -------- ಗೆ

3. ಬಳಸದೇ ರಿಟರ್ನಿಂಗ್ ಅಧಿಕಾರಿಗೆ ಹಿಂದಿರುಗಿಸಿದ ಪೇಪರ್ ಸೀಲ್‌ಗಳ ಸಂಖ್ಯೆ ಒಟ್ಟು ಸಂಖ್ಯೆ---- 3. -----

4. ಹಾನಿಗೊಳಗಾದ ಪೇಪರ್ ಸೀಲ್ ಯಾವುದಾದರೂ ಇದ್ದರೆ, ಒಟ್ಟು ಸಂಖ್ಯೆ ----- 4. -----
ಕ್ರ. ಸಂಖ್ಯೆ --------- ಯಿಂದ -------- ಗೆ 5. ------
6. ------

ದಿನಾಂಕ:
ಸ್ಥಳ:

ಪ್ರಿಸೈಡಿಂಗ್ ಅಧಿಕಾರಿಯ ಸಹಿ
ಮತಗಟ್ಟೆ ಸಂಖ್ಯೆ

**ಭಾಗ II– ಎಣಿಕೆಯ ಫಲಿತಾಂಶ**

| **ಅಭ್ಯರ್ಥಿಗಳ ಕ್ರಮ ಸಂಖ್ಯೆ** | **ಅಭ್ಯರ್ಥಿಗಳ ಹೆಸರು** | **ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿತವಾದ ಮತಗಳ ಸಂಖ್ಯೆ** | **ಭಾಗ Iರ 5ನೇ ಬಾಬಿನ ಅನ್ವಯ ತೆಗೆದುಹಾಕಲಾದ ಪರೀಕ್ಷಾರ್ಥ ಮತಗಳ ಸಂಖ್ಯೆ** | **ಸಿಂಧುವಾದ ಮತ ಸಂಖ್ಯೆ (3–4)** |
|---|---|---|---|---|
| (1) | (2) | (3) | (4) | (5) |
| 1 | | | | |
| 2 | | | | |
| 3 | | | | |
| 4 | | | | |
| 5 | | | | |
| ಎನ್ | ಮೇಲ್ಕಂಡ ಯಾರಿಗೂ ಮತ ಇಲ್ಲ (NOTA) | | | |
| ಒಟ್ಟು | | | | |

ಇಲ್ಲಿ ತೋರಿಸಿದ ಮತಗಳ ಒಟ್ಟು ಸಂಖ್ಯೆಯು ಭಾಗ Iರ
6ನೇ ಬಾಬಿನಲ್ಲಿ ತೋರಿಸಲಾದ ಒಟ್ಟು ಮತಗಳ
ಸಂಖ್ಯೆಯೊಂದಿಗೆ ಹೋಲಿಕೆಯಾಗುತ್ತದೆಯೇ
ಅಥವಾ ಎರಡೂ ಒಟ್ಟು ಸಂಖ್ಯೆಗಳ ನಡುವೆ
ಯಾವುದೇ ವ್ಯತ್ಯಾಸ ಕಂಡುಬಂದಿದೆಯೇ ಹೌದು ತಾಳೆಯಾಗುತ್ತದೆ

**ದಿನಾಂಕ ------------**
**ಸ್ಥಳ ----------------** **ಎಣಿಕೆ ಮೇಲ್ವಿಚಾರಕರ ಸಹಿ**

**ಉಮೇದುವಾರ / ಚುನಾವಣಾ ಏಜೆಂಟ್ / ಎಣಿಕೆ ಏಜೆಂಟನ ಹೆಸರು** **ಪೂರ್ಣ ಸಹಿ**

1
2
3
4
5
6
7

**ದಿನಾಂಕ -------------**
**ಸ್ಥಳ: ----------------** **ರಿಟರ್ನಿಂಗ್ ಅಧಿಕಾರಿಯ ಸಹಿ**

## ಪರಿಶಿಷ್ಟ –23
## (ಅಧ್ಯಾಯ–15, ಪ್ಯಾರಾ 15.11.2)

## ನಮೂನೆ – 10
**[ನಿಯಮ 13(2) ನ್ನು ನೋಡಿ]**
***ಪೋಲಿಂಗ್ ಏಜೆಂಟರ ನೇಮಕಾತಿ**

**______________________________ಗೆ ನಡೆಯುವ ಚುನಾವಣೆ
ಮೇಲ್ಕಂಡ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿರುವ+________________________ಎಂಬ ನಾನು/ಅಭ್ಯರ್ಥಿಯಾಗಿರುವಶ್ರೀ________________________ಎಂಬುವರ ಚುನಾವಣಾ ಏಜೆಂಟ್‌ನಾಗಿರುವ ________________________ಎಂಬ ನಾನು ಈ ಮೂಲಕ ಶ್ರೀ__________________(ಹೆಸರು ಮತ್ತು ವಿಳಾಸ) ಎಂಬುವವರನ್ನು ಮತದಾನಕ್ಕಾಗಿ ನಿಗದಿಯಾಗಿರುವ ________________ಎಂಬ ಸ್ಥಳದಲ್ಲಿ +ಸಂಖ್ಯೆಯ ಮತಗಟ್ಟೆಯಲ್ಲಿ ಹಾಜರಿರುವುದಕ್ಕಾಗಿ ಈ ಮೂಲಕ ಒಬ್ಬ ಪೋಲಿಂಗ್ ಏಜೆಂಟ್‌ನನ್ನಾಗಿ ಈ ಮೂಲಕ ನೇಮಿಸಿದ್ದೇನೆ.

ಸ್ಥಳ: ________________ +ಅಭ್ಯರ್ಥಿಯ/ ಚುನಾವಣಾ ಏಜೆಂಟ್‌ರಸಹಿ
ದಿನಾಂಕ: ________________

ನಾನು ಪೋಲಿಂಗ್ ಏಜೆಂಟ್ ಆಗಿ ಕಾರ್ಯ ನಿರ್ವಹಿಸಲು ಒಪ್ಪಿದ್ದೇನೆ.

ಸ್ಥಳ: __________________ ಪೋಲಿಂಗ್ ಏಜೆಂಟರ ಸಹಿ
ದಿನಾಂಕ: ____________

**ಪ್ರಿಸೈಡಿಂಗ್ ಅಧಿಕಾರಿ ಸಮಕ್ಷಮದಲ್ಲಿ ಪೋಲಿಂಗ್ ಏಜೆಂಟ್‌ರ ಘೋಷಣೆ ಮತ್ತು ಸಹಿ**

ಮೇಲ್ಕಂಡ ಚುನಾವಣೆಯಲ್ಲಿ ನಾನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 128++ರ ಮೂಲಕ ನಿಷೇದಿಸಿರುವ ಯಾವುದೇ ಕೆಲಸಗಳನ್ನು ಮಾಡುವುದಿಲ್ಲವೆಂದು ಮತ್ತು ಆ ಪ್ರಕರಣಗಳನ್ನು ನಾನು ಓದಿದ್ದೇನೆಂದು/ನನಗೆ ಓದಿ ಹೇಳಲಾಯಿತೆಂದು ನಾನು ಈ ಮೂಲಕ ಘೋಷಿಸುತ್ತೇನೆ.
ದಿನಾಂಕ: ____________
ನನ್ನ ಸಮಕ್ಷಮದಲ್ಲಿ ಸಹಿ ಮಾಡಿದೆ ಪೋಲಿಂಗ್ ಏಜೆಂಟರ ಸಹಿ
ದಿನಾಂಕ: ______________________

ಪ್ರಿಸೈಡಿಂಗ್ ಅಧಿಕಾರಿ

---

* ಮತಗಟ್ಟೆಯಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಹಾಜರು ಪಡಿಸಲು ಪೋಲಿಂಗ್ ಏಜೆಂಟರಿಗೆ ನೀಡಬೇಕು.

** ಈ ಕೆಳಗಿನವುಗಳಲ್ಲಿ ಸರಿ ಹೊಂದುವ ಪರ್ಯಾಯವನ್ನು ಇಲ್ಲಿ ಸೇರಿಸಬೇಕು.

1. ಚುನಾವಣಾ ಕ್ಷೇತ್ರದಿಂದ ಲೋಕಸಭೆಗೆ
2. ಚುನಾವಣಾ ಕ್ಷೇತ್ರದಿಂದ ವಿಧಾನಸಭೆಗೆ
3. (ರಾಜ್ಯದ) ವಿಧಾನಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ
4. (ಕೇಂದ್ರಾಡಳಿತ ಪ್ರದೇಶ)ದ ಚುನಾಯಕ ಸಮುದಾಯದಿಂದ ರಾಜ್ಯಸಭೆಗೆ
5. ವಿಧಾನ ಸಭೆಯ ಸದಸ್ಯರಿಂದ ವಿಧಾನಪರಿಷತ್‌ಗೆ
6. ಚುನಾವಣಾ ಕ್ಷೇತ್ರದಿಂದ ವಿಧಾನಪರಿಷತ್ತಿಗೆ

+ ಸರಿಹೊಂದದಿರುವ ಪರ್ಯಾಯಗಳನ್ನು ಹೊಡೆದು ಹಾಕಿ

++ 1951 ರ ಜನತಾ ಪ್ರಾತಿನಿದ್ಯ ಅಧಿನಿಯಮದ ಪ್ರಕರಣ–128

**128. ಮತದಾನದ ರಹಸ್ಯವನ್ನು ಕಾಪಾಡುವುದು :–**

(1) ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಹಾಗೆ ಕಾಪಾಡುವಲ್ಲಿ ನೆರವಾಗತಕ್ಕದ್ದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸಲು ಉದ್ದೇಶಿಸುವ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ:

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

## ಪರಿಶಿಷ್ಟ –24

(ಅಧ್ಯಾಯ–15, ಪ್ಯಾರಾ 15.11.4)

## ನಮೂನೆ – 11

## ಪೋಲಿಂಗ್ ಏಜೆಂಟರ ನೇಮಕಾತಿಯನ್ನು ರದ್ದುಮಾಡುವುದು

**(ನಿಯಮ 14(1) ನೋಡಿ)**

*____________________________ಗೆ ನಡೆಯುವ ಚುನಾವಣೆ

ಇವರಿಗೆ,
ಪ್ರಿಸೈಡಿಂಗ್ ಅಧಿಕಾರಿ

ಈ ಮೇಲ್ಕಂಡ ಚುನಾವಣೆಯ ಅಭ್ಯರ್ಥಿಯಾದ ಶ್ರೀ._________________________ರವರ ಚುನಾವಣಾ ಏಜೆಂಟ್ ಆದ _______________ಎಂಬ ನಾನು ನನ್ನ/ಅವನ ಪೋಲಿಂಗ್ ಏಜೆಂಟ್‌ನ ನೇಮಕಾತಿಯನ್ನು ರದ್ದು ಮಾಡುತ್ತಿದ್ದೇನೆ.

ಸ್ಥಳ: _________________ ರದ್ದು ಮಾಡುವ ವ್ಯಕ್ತಿಯ ಸಹಿ
ದಿನಾಂಕ: ______________

*ಈ ಕೆಳಗಿನವುಗಳಲ್ಲಿ ಸೂಕ್ತವಾಗಿ ಸರಿಹೊಂದುವ ಪರ್ಯಾಯಗಳನ್ನು ಸೇರಿಸಿ:

1. ___________________ ಚುನಾವಣಾ ಕ್ಷೇತ್ರದಿಂದ ಲೋಕಸಭೆಗೆ
2. ___________________ ಚುನಾವಣಾ ಕ್ಷೇತ್ರದಿಂದ ವಿಧಾನಸಭೆಗೆ
3. ___________________(ರಾಜ್ಯ)ದ ವಿಧಾನ ಸಭೆಯ ಚುನಾಯಿತ ಸದಸ್ಯರಿಂದ ರಾಜ್ಯ ಸಭೆಗೆ
4. ____________________(ಕೇಂದ್ರಾಡಳಿತ ಪ್ರದೇಶ)ದ ಚುನಾಯಕ ಸಮುದಾಯದ ಸದಸ್ಯರಿಂದ ರಾಜ್ಯಸಭೆಗೆ
5. ವಿಧಾನ ಸಭೆಯ ಸದಸ್ಯರಿಂದ ವಿಧಾನ ಪರಿಷತ್ತಿಗೆ
6. _______________ ಚುನಾವಣಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ

ಸೂಚನೆ:– (–) ಎಂದು ಗುರುತು ಮಾಡಿರುವ ಪದಗಳನ್ನು ಅವಶ್ಯವಿರಬಹುದಾದಂತೆ ಬಿಟ್ಟು ಬಿಡುವುದು.

**ಪರಿಶಿಷ್ಟ – 25**
**(ಅಧ್ಯಾಯ–15 ಪ್ಯಾರ 15.11.3)**
**ಅಭ್ಯರ್ಥಿಯ ಮತ್ತು ಅವರ ಚುನಾವಣಾ ಏಜೆಂಟರ ಮಾದರಿ ಸಹಿಗಳ ನಮೂನೆ**

*ಸಾಮಾನ್ಯ / ದ್ವೈವಾರ್ಷಿಕ / ಉಪಚುನಾವಣೆ ____________________ (ತಿಂಗಳು / ವರ್ಷ)
*ವಿಧಾನಸಭಾ/ಲೋಕಸಭಾ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು _________________
ವಿಧಾನ ಪರಿಷತ್ತು ____________________________
(*ಅನ್ವಯವಾಗದಿರುವುದನ್ನು ಒಡೆದು ಹಾಕಿ.)

ಪ್ರಿಸೈಡಿಂಗ್ ಅಧಿಕಾರಿಯು ಮತದಾನ ನಡೆಯುವ ವೇಳೆಯಲ್ಲಿ ಪೋಲಿಂಗ್ ಏಜೆಂಟರ ನೇಮಕಾತಿ ಪತ್ರದಲ್ಲಿ ಇರುವ ಸಹಿಗಳೊಂದಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಮತ್ತು ಅವರ ಚುನಾವಣಾ ಏಜೆಂಟರ ಸಹಿಗಳನ್ನು ತಾಳೆ ನೋಡಿ ಖಚಿತ ಪಡಿಸಿಕೊಳ್ಳುವ ಸಲುವಾಗಿ ಅವರ ಮಾದರಿ ಸಹಿಗಳನ್ನು ಕೆಳಗೆ ನೀಡಲಾಗಿದೆ.

| **ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಹೆಸರು** | **ಮಾದರಿ ಸಹಿ** | **ಆತನ/ಆಕೆಯ ಚುನಾವಣಾ ಏಜೆಂಟರ ಹೆಸರು** | **ಮಾದರಿ ಸಹಿ** |
|---|---|---|---|
| 1. ಶ್ರೀ / ಶ್ರೀಮತಿ/ ಕುಮಾರಿ | | ಶ್ರೀ / ಶ್ರೀಮತಿ/ ಕುಮಾರಿ | |
| 2. ಶ್ರೀ / ಶ್ರೀಮತಿ/ ಕುಮಾರಿ | | ಶ್ರೀ / ಶ್ರೀಮತಿ/ ಕುಮಾರಿ | |
| 3. ಶ್ರೀ / ಶ್ರೀಮತಿ/ ಕುಮಾರಿ | | ಶ್ರೀ / ಶ್ರೀಮತಿ/ ಕುಮಾರಿ | |
| 4. ಶ್ರೀ / ಶ್ರೀಮತಿ/ ಕುಮಾರಿ | | ಶ್ರೀ / ಶ್ರೀಮತಿ/ ಕುಮಾರಿ | |

ಸ್ಥಳ: ಸಹಿ
ದಿನಾಂಕ: (ಮೊಹರು)
ರಿಟರ್ನಿಂಗ್ ಅಧಿಕಾರಿ

**ಪರಿಶಿಷ್ಟ–26**
**(ಅಧ್ಯಾಯ–15, ಪ್ಯಾರಾ 15.34.1)**
**ಪ್ರಿಸೈಡಿಂಗ್ ಅಧಿಕಾರಿರವರಿಂದ ಘೋಷಣೆ**

ಭಾಗ – 1

ಮತದಾನವು ಪ್ರಾರಂಭವಾಗುವುದಕ್ಕೆ ಮೊದಲು ಪ್ರಿಸೈಡಿಂಗ್ ಅಧಿಕಾರಿ ಅವರಿಂದ ಘೋಷಣೆ ------- ------ ಲೋಕಸಭಾ/ವಿಧಾನಸಭಾ ಕ್ಷೇತ್ರಕ್ಕಾಗಿ ನಡೆಯುವ ಚುನಾವಣೆ,
ಮತಗಟ್ಟೆಯ ಕ್ರಮಸಂಖ್ಯೆ ಮತ್ತು ಹೆಸರು -----------------
ಚುನಾವಣಾ ದಿನಾಂಕ -----------------------------
ನಾನು ಈ ಮೂಲಕ ಘೋಷಿಸುವುದೇನೆಂದರೆ:

(1) ಹಾಜರಿರುವ ಪೋಲಿಂಗ್ ಏಜೆಂಟ್ ಮತ್ತಿತರರಿಗೆ:
   (ಎ) ಅಣಕು ಮತದಾನ ನಡೆಸಿ ಮತಯಂತ್ರ ಚೆನ್ನಾಗಿ ಕೆಲಸ ಮಾಡುತ್ತಿದೆ ಮತ್ತು ಅದರಲ್ಲಿ ಈಗಾಗಲೇ ಯಾವುದೇ ಮತವನ್ನು ದಾಖಲು ಮಾಡಿಲ್ಲ ಎಂಬುದನ್ನು;
   (ಬಿ) ಮತದಾನದ ಸಮಯದಲ್ಲಿ ಬಳಸುವ ಅಧಿಕೃತ ಮತದಾರರ ಪಟ್ಟಿಯ (ಮಾರ್ಕ್ಡ್ ಕಾಪಿ) ಪ್ರತಿಯಲ್ಲಿ ಅಂಚೆ ಮತಪತ್ರಗಳು ಮತ್ತು ಚುನಾವಣಾ ಕರ್ತವ್ಯ ಪ್ರಮಾಣಪತ್ರಗಳಿಗೆ ಉಪಯೋಗಿಸುವ ಗುರುತುಗಳನ್ನು ಬಿಟ್ಟು ಇತರ ಯಾವುದೇ ಗುರುತಿಲ್ಲವೆಂಬುದನ್ನು;
   (ಸಿ) ಮತದಾನದ ಸಮಯದಲ್ಲಿ ಬಳಸುವ ಮತದಾರರ ರಿಜಿಸ್ಟರಿನಲ್ಲಿ (ನಮೂನೆ 17ಎ) ಯಾವುದೇ ಮತದಾರರ ಸಂಬಂಧದಲ್ಲಿ ಯಾವುದೇ ನಮೂದು ಇಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿರುತ್ತೇನೆ.

(2) ಮತಯಂತ್ರದ ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನನ್ನು ಭದ್ರಪಡಿಸಲು ಬಳಸಿದ ಪೇಪರ್ ಸೀಲ್‌ಗಳ ಮೇಲೆ ನನ್ನ ಸ್ವ ಹಸ್ತಾಕ್ಷರದ ಸಹಿ ಹಾಕಿರುತ್ತೇನೆ ಮತ್ತು ಹಾಜರಿದ್ದು ಸಹಿ ಹಾಕಲು ಇಚ್ಛಿಸಿದ ಪೋಲಿಂಗ್ ಏಜೆಂಟರ ಸಹಿಗಳನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.

(3) ವಿಶೇಷ ಟ್ಯಾಗ್ ಮೇಲೆ ಕಂಟ್ರೋಲ್ ಯೂನಿಟ್‌ನ ಸಂಖ್ಯೆಯನ್ನು ಬರೆದು, ವಿಶೇಷ ಟ್ಯಾಗ್‌ನ ಹಿಂಬದಿಯಲ್ಲಿ ನನ್ನ ಸಹಿಯನ್ನು ಹಾಕಿರುತ್ತೇನೆ ಹಾಗೂ, ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಯ/ಪೋಲಿಂಗ್ ಏಜೆಂಟರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.

(4) ಸ್ಟ್ರಿಪ್ ಸೀಲ್ ಮೇಲೆ ನನ್ನ ಸಹಿಯನ್ನು ಮಾಡಿರುತ್ತೇನೆ ಮತ್ತು ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಯ/ಪೋಲಿಂಗ್ ಏಜೆಂಟರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.

(5) ವಿಶೇಷ ಟ್ಯಾಗ್‌ನಲ್ಲಿ ಈ ಮೊದಲೇ ಮುದ್ರಿಸಿರುವ ಕ್ರಮ ಸಂಖ್ಯೆಯನ್ನು ಅಭ್ಯರ್ಥಿಗಳಿಗೆ/ ಪೋಲಿಂಗ್ ಏಜೆಂಟ್‌ರಿಗೆ ಓದಿ ಹೇಳಿ, ಕ್ರಮಸಂಖ್ಯೆಯನ್ನು ಬರೆದುಕೊಳ್ಳಲು ಅವರಿಗೆ ಸೂಚಿಸಿದ್ದೇನೆ.

ಸಹಿ/–
ಪ್ರಿಸೈಡಿಂಗ್ ಅಧಿಕಾರಿ

ಪೋಲಿಂಗ್ ಏಜೆಂಟರ ಸಹಿ:
1. ------ (------ ಅಭ್ಯರ್ಥಿ) 2. ------- (------- ಅಭ್ಯರ್ಥಿ)
3. ------ (------- ಅಭ್ಯರ್ಥಿ) 4. ------- (------- ಅಭ್ಯರ್ಥಿ)
5. ------ (------- ಅಭ್ಯರ್ಥಿ) 6. ------- (------- ಅಭ್ಯರ್ಥಿ)
7. ------ (------- ಅಭ್ಯರ್ಥಿ) 8. ------- (------- ಅಭ್ಯರ್ಥಿ)
9. ------ (------- ಅಭ್ಯರ್ಥಿ)

ಈ ಮುಂದಿನ ಪೋಲಿಂಗ್ ಏಜೆಂಟರುಗಳು ಈ ಘೋಷಣಾ ಪತ್ರದ ಮೇಲೆ ತಮ್ಮ ಸಹಿ ಮಾಡಲು ನಿರಾಕರಿಸಿದ್ದಾರೆ.

1. ------ (--------- ಅಭ್ಯರ್ಥಿ) 2. ------- (------- ಅಭ್ಯರ್ಥಿ)
3. ------ (--------- ಅಭ್ಯರ್ಥಿ) 4. ------- (------- ಅಭ್ಯರ್ಥಿ)

ದಿನಾಂಕ: -------------

ಸಹಿ: ----------------

ಪ್ರಿಸೈಡಿಂಗ್ ಅಧಿಕಾರಿ

## ಭಾಗ –II

## ಹೆಚ್ಚಿನ ಮತಯಂತ್ರವನ್ನೇನಾದರೂ ಉಪಯೋಗಿಸುವ ಸಮಯದಲ್ಲಿ ಪ್ರಿಸೈಡಿಂಗ್ ಅಧಿಕಾರಿ ಅವರು ಮಾಡಬೇಕಾದ ಘೋಷಣೆ, ಯಾವುದಾದರೂ ಇದ್ದರೆ,

-------------------------- ಲೋಕಸಭಾ/ ವಿಧಾನಸಭಾ ಚುನಾವಣಾ ಕ್ಷೇತ್ರಕ್ಕೆ ಚುನಾವಣೆ
ಮತಗಟ್ಟೆಯ ಕ್ರಮಸಂಖ್ಯೆ ಮತ್ತು ಹೆಸರು
ಮತದಾನದ ದಿನಾಂಕ ----------------------

ನಾನು ಈ ಮೂಲಕ ಘೋಷಿಸುವುದೇನೆಂದರೆ:

(1) ಹಾಜರಿರುವ ಪೋಲಿಂಗ್ ಏಜೆಂಟ್ ಮತ್ತಿತರರಿಗೆ–

(ಎ) ಅಣಕು ಮತದಾನ ನಡೆಸಿ ಮತಯಂತ್ರ ಚೆನ್ನಾಗಿ ಕೆಲಸ ಮಾಡುತ್ತಿದೆ ಮತ್ತು ಅದರಲ್ಲಿ ಈಗಾಗಲೇ ಯಾವುದೇ ಮತವನ್ನು ದಾಖಲು ಮಾಡಿಲ್ಲ ಎಂಬುದನ್ನು;

(ಬಿ) ಮತದಾನದ ಸಮಯದಲ್ಲಿ ಬಳಸುವ ಅಧಿಕೃತ ಮತದಾರರ ಪಟ್ಟಿಯ (ಮಾರ್ಕ್ಡ್ ಕಾಪಿ) ಪ್ರತಿಯಲ್ಲಿ ಅಂಚೆ ಮತಪತ್ರಗಳು ಮತ್ತು ಚುನಾವಣಾ ಕರ್ತವ್ಯ ಪ್ರಮಾಣಪತ್ರಗಳಿಗೆ ಉಪಯೋಗಿಸುವ ಗುರುತುಗಳನ್ನು ಬಿಟ್ಟು ಇತರ ಯಾವುದೇ ಗುರುತಿಲ್ಲವೆಂಬುದನ್ನು;

(ಸಿ) ಮತದಾನದ ಸಮಯದಲ್ಲಿ ಬಳಸುವ ಮತದಾರರ ರಿಜಿಸ್ಟರಿನಲ್ಲಿ (ನಮೂನೆ 17ಎ) ಯಾವುದೇ ಮತದಾರರ ಸಂಬಂಧದಲ್ಲಿ ಯಾವುದೇ ನಮೂದು ಇಲ್ಲ ಎಂಬುದನ್ನು–ಪ್ರತ್ಯಕ್ಷವಾಗಿ ತೋರಿಸಿರುತ್ತೇನೆ.

(2) ಮತಯಂತ್ರದ ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನನ್ನು ಭದ್ರಪಡಿಸಲು ಬಳಸಿದ ಪೇಪರ್ ಸೀಲ್‌ಗಳ ಮೇಲೆ ನನ್ನ ಸ್ವ ಹಸ್ತಾಕ್ಷರದ ಸಹಿ ಹಾಕಿರುತ್ತೇನೆ ಮತ್ತು ಹಾಜರಿದ್ದು ಸಹಿ ಹಾಕಲು ಇಚ್ಛಿಸಿದ ಪೋಲಿಂಗ್ ಏಜೆಂಟರ ಸಹಿಗಳನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.

(3) ವಿಶೇಷ ಟ್ಯಾಗ್ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮಸಂಖ್ಯೆಯನ್ನು ಬರೆದು, ವಿಶೇಷ ಟ್ಯಾಗ್‌ನ ಹಿಂಬದಿಯಲ್ಲಿ ನನ್ನ ಸಹಿಯನ್ನು ಹಾಕಿರುತ್ತೇನೆ ಹಾಗೂ, ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಯ/ಪೋಲಿಂಗ್ ಏಜೆಂಟ್‌ರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.

(4) ಸ್ಟ್ರಿಪ್ ಸೀಲ್ ಮೇಲೆ ನನ್ನ ಸಹಿಯನ್ನು ಮಾಡಿರುತ್ತೇನೆ ಮತ್ತು ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಯ/ಪೋಲಿಂಗ್ ಏಜೆಂಟರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.

(5) ವಿಶೇಷ ಟ್ಯಾಗ್‌ನಲ್ಲಿ ಈ ಮೊದಲೇ ಮುದ್ರಿಸಿರುವ ಕ್ರಮಸಂಖ್ಯೆಯನ್ನು ಅಭ್ಯರ್ಥಿಗಳಿಗೆ/ ಪೋಲಿಂಗ್ ಏಜೆಂಟರಿಗೆ ಓದಿ ಹೇಳಿ, ಕ್ರಮಸಂಖ್ಯೆಯನ್ನು ಬರೆದುಕೊಳ್ಳಲು ಅವರಿಗೆ ಸೂಚಿಸಿದ್ದೇನೆ.

ಸಹಿ --------------
ಪ್ರಿಸೈಡಿಂಗ್ ಅಧಿಕಾರಿ

ಪೋಲಿಂಗ್ ಏಜೆಂಟ್‌ರ ಸಹಿ:

1. ------------------- (---------------- ಅಭ್ಯರ್ಥಿ)
2. ------------------- (---------------- ಅಭ್ಯರ್ಥಿ)
3. ------------------- (---------------- ಅಭ್ಯರ್ಥಿ)
4. ------------------- (---------------- ಅಭ್ಯರ್ಥಿ)
5. ------------------- (---------------- ಅಭ್ಯರ್ಥಿ)
6. ------------------- (-----------------ಅಭ್ಯರ್ಥಿ)
7. ------------------- (---------------- ಅಭ್ಯರ್ಥಿ)
8. ------------------- (---------------- ಅಭ್ಯರ್ಥಿ)
9. ------------------- (---------------- ಅಭ್ಯರ್ಥಿ)

ಈ ಮುಂದಿನ ಪೋಲಿಂಗ್ ಏಜೆಂಟರುಗಳು ಈ ಘೋಷಣಾ ಪತ್ರದ ಮೇಲೆ ತಮ್ಮ ಸಹಿ ಮಾಡಲು ನಿರಾಕರಿಸಿದ್ದಾರೆ.

1. ----------------- (-----------------ಅಭ್ಯರ್ಥಿ)
2. ----------------- (----------------- ಅಭ್ಯರ್ಥಿ)
3. ---------------- (----------------- ಅಭ್ಯರ್ಥಿ)
4. ---------------- (----------------- ಅಭ್ಯರ್ಥಿ)

ದಿನಾಂಕ:

ಸಹಿ ------------

ಪ್ರಿಸೈಡಿಂಗ್ ಅಧಿಕಾರಿ

## ಭಾಗ –III
## ಮತದಾನದ ಕೊನೆಯಲ್ಲಿ ಮಾಡುವ ಘೋಷಣೆ

ನಾನು, ಮತದಾನದ ಕೊನೆಯಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದ ಮತ್ತು ಈ ಮುಂದೆ ಸಹಿ ಮಾಡಿರುವ ಪೋಲಿಂಗ್ ಏಜೆಂಟರಿಗೆ, 1961ರ ಚುನಾವಣೆ ನಡೆಸುವ ನಿಯಮಗಳ ನಿಯಮ 49 ಎಸ್ (2)ರನ್ವಯ ನಮೂನೆ 17ಸಿ ಯ "ಭಾಗ–1 ದಾಖಲಿಸಲಾದ ಮತಗಳ ಲೆಕ್ಕ"ದಲ್ಲಿನ ನಮೂದುಗಳ ಪ್ರತಿಯೊಂದರ ದೃಢೀಕೃತ ನಕಲನ್ನು ಒದಗಿಸಿದ್ದೇನೆ.

ಸಹಿ
ಪ್ರಿಸೈಡಿಂಗ್ ಅಧಿಕಾರಿ

ದಿನಾಂಕ: ---------------
ಸಮಯ: ---------------

ದಾಖಲಾದ ಮತಗಳ ಲೆಕ್ಕದಲ್ಲಿನ (ನಮೂನೆ 17ಸಿನ ಭಾಗ 1) ನಮೂದುಗಳ ದೃಢೀಕೃತ ನಕಲನ್ನು ಸ್ವೀಕರಿಸಿದ್ದೇನೆ.
ಪೋಲಿಂಗ್ ಏಜೆಂಟ್‌ರ ಸಹಿ:

1. ---------------- (-------------- ಅಭ್ಯರ್ಥಿ)
2. ---------------- (-------------- ಅಭ್ಯರ್ಥಿ)
3. ---------------- (-------------- ಅಭ್ಯರ್ಥಿ)
4. ---------------- (-------------- ಅಭ್ಯರ್ಥಿ)
5. ---------------- (-------------- ಅಭ್ಯರ್ಥಿ)
6. ---------------- (-------------- ಅಭ್ಯರ್ಥಿ)
7. ---------------- (-------------- ಅಭ್ಯರ್ಥಿ)
8. ---------------- (-------------- ಅಭ್ಯರ್ಥಿ)
9. ---------------- (-------------- ಅಭ್ಯರ್ಥಿ)

ಮತದಾನದ ಕೊನೆಯಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದ ಈ ಮುಂದಿನ ಪೋಲಿಂಗ್ ಏಜೆಂಟರುಗಳು ನಮೂನೆ 17ಸಿ ಭಾಗ 1ರ ದೃಢೀಕೃತ ಪ್ರತಿಯನ್ನು ಸ್ವೀಕರಿಸಲು ಮತ್ತು ಹಾಗೆ ಸ್ವೀಕರಿಸಿದ ಬಗ್ಗೆ ಸ್ವೀಕೃತಿಯನ್ನು ನೀಡಲು ನಿರಾಕರಿಸಿದ ಕಾರಣ ಸದರಿ ನಮೂನೆಯ ದೃಢೀಕೃತ ಪ್ರತಿಯನ್ನು ಅವರಿಗೆ ಕೊಟ್ಟಿರುವುದಿಲ್ಲ.

1. -------------- (-------------- ಅಭ್ಯರ್ಥಿ)
2. -------------- (--------------- ಅಭ್ಯರ್ಥಿ)
3. -------------- (--------------- ಅಭ್ಯರ್ಥಿ)
4. -------------- (--------------- ಅಭ್ಯರ್ಥಿ)
5. --------------(-------------- ಅಭ್ಯರ್ಥಿ)
6. -------------- (-------------- ಅಭ್ಯರ್ಥಿ)
7. ------------- (-------------- ಅಭ್ಯರ್ಥಿ)
8. ------------- (-------------- ಅಭ್ಯರ್ಥಿ)
9. ------------- (-------------- ಅಭ್ಯರ್ಥಿ)

ದಿನಾಂಕ: --------------- ಸಹಿ......................

ಸಮಯ: --------------- ಪ್ರಿಸೈಡಿಂಗ್ ಅಧಿಕಾರಿ

## ಭಾಗ –IV
## ಮತಯಂತ್ರವನ್ನು ಮೊಹರು ಮಾಡಿದ ತರುವಾಯ ಘೋಷಣೆ

ಮತಯಂತ್ರದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಸಾಗಿಸುವ ಪೆಟ್ಟಿಗೆಗಳ ಮೇಲೆ ನಾನು ನನ್ನ ಮೊಹರುಗಳನ್ನು ಹಾಕಿದ್ದೇನೆ ಮತ್ತು ಮತದಾನ ಮುಕ್ತಾಯವಾದಾಗ ಮತಗಟ್ಟೆಯಲ್ಲಿ ಹಾಜರಿದ್ದ ಪೋಲಿಂಗ್ ಏಜೆಂಟರಿಗೆ ಅವರು ಸಹಿ ಹಾಕಲು ಅವಕಾಶ ನೀಡಿದ್ದೇನೆ.

ಸಹಿ
ಪ್ರಿಸೈಡಿಂಗ್ ಅಧಿಕಾರಿ

ದಿನಾಂಕ: ---------------
ಸಮಯ: ---------------

ಈ ಮುಂದಿನ ಪೋಲಿಂಗ್ ಏಜೆಂಟರು ತಮ್ಮ ಮೊಹರುಗಳನ್ನು ಹಾಕಿರುತ್ತಾರೆ.

ಪೋಲಿಂಗ್ ಏಜೆಂಟ್‌ರ ಸಹಿ:
1. ------ (------ ಅಭ್ಯರ್ಥಿ) 4. ------- (------- ಅಭ್ಯರ್ಥಿ)
2. ------ (------- ಅಭ್ಯರ್ಥಿ) 5. ------- (------- ಅಭ್ಯರ್ಥಿ)
3. ------ (------- ಅಭ್ಯರ್ಥಿ) 6. ------- (------- ಅಭ್ಯರ್ಥಿ)

ಈ ಮುಂದಿನ ಪೋಲಿಂಗ್ ಏಜೆಂಟರು ಮೊಹರು ಹಾಕಲು ನಿರಾಕರಿಸಿರುತ್ತಾರೆ ಅಥವಾ ಮೊಹರು ಹಾಕಲು ಇಚ್ಛಿಸಲಿಲ್ಲ.
1. ------ (------ ಅಭ್ಯರ್ಥಿ) 3. ------- (------- ಅಭ್ಯರ್ಥಿ)
2. ------ (------- ಅಭ್ಯರ್ಥಿ) 4. ------- (------- ಅಭ್ಯರ್ಥಿ)

ದಿನಾಂಕ: ---------------
ಸಮಯ: ---------------

ಸಹಿ
ಪ್ರಿಸೈಡಿಂಗ್ ಅಧಿಕಾರಿ

# ಪರಿಶಿಷ್ಟ –27

**(ಅಧ್ಯಾಯ 15, ಪ್ಯಾರಾ 15.44.1)**
**ಆಕ್ಷೇಪಿತ ಮತಗಳ ಪಟ್ಟಿ**
**[ನಿಯಮ 36(2) (ಸಿ) ನೋಡಿ]**

__________________ ಚುನಾವಣಾ ಕ್ಷೇತ್ರದಿಂದ ________________ ಗೆ ಚುನಾವಣೆ
ಮತಗಟ್ಟೆ ಸಂಖ್ಯೆ ಮತ್ತು ಹೆಸರು __________________
____________________ವಿಧಾನಸಭಾ ಕ್ಷೇತ್ರ/ಮತದಾನ ನಡೆಯುವ ಸ್ಥಳ________________

| ನಮೂದಿನ ಕ್ರಮ ಸಂಖ್ಯೆ | ಮತದಾರನ ಹೆಸರು | ಕ್ರಮಸಂಖ್ಯೆ | | ಆಕ್ಷೇಪಿತ ವ್ಯಕ್ತಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತು | ಆಕ್ಷೇಪಿತ ವ್ಯಕ್ತಿಯ ವಿಳಾಸ | ಗುರುತಿಸುವ ವ್ಯಕ್ತಿ ಯಾರಾದರೂ ಇದ್ದರೆ ಅವರ ಹೆಸರು | ಆಕ್ಷೇಪಿಸಿದ ವ್ಯಕ್ತಿಯ ಹೆಸರು | ಪ್ರಿಸೈಡಿಂಗ್ ಅಧಿಕಾರಿಯವರ ಆದೇಶ | ಠೇವಣಿಯನ್ನು ಹಿಂಪಡೆದ ಮೇಲೆ ಆಕ್ಷೇಪಿಸಿದ ವ್ಯಕ್ತಿಯ ಸಹಿ |
|---|---|---|---|---|---|---|---|---|---|
| | | ಮತದಾರರ ಪಟ್ಟಿಯ ಭಾಗದ ಕ್ರಮಸಂಖ್ಯೆ | ಆ ಭಾಗದಲ್ಲಿನ ಮತದಾರನ ಹೆಸರು | | | | | | |
| **1** | **2** | **3** | **4** | **5** | **6** | **7** | **8** | **9** | **10** |
| | | | | | | | | | |

ದಿನಾಂಕ: ____ 20 ___

ಪ್ರಿಸೈಡಿಂಗ್ ಅಧಿಕಾರಿಯ ಸಹಿ

*ಚುನಾವಣೆಗೆ ಸಂಬಂಧಿಸಿದ ಸೂಕ್ತವಾದ ವಿವರಗಳನ್ನು ಇಲ್ಲಿ ಭರ್ತಿಮಾಡಿ

## ಪರಿಶಿಷ್ಟ–28
## ಅಣಕು ಮತದಾನದ ಪ್ರಮಾಣಪತ್ರ

__________ ವಿಧಾನಸಭಾ ಕ್ಷೇತ್ರದ (ಅಥವಾ __________ ಲೋಕಸಭಾ ಕ್ಷೇತ್ರದ ಭಾಗವಾಗಿರುವ __________________ ವಿಧಾನಸಭಾ ಕ್ಷೇತ್ರ) ಮತಗಟ್ಟೆಯ ಸಂಖ್ಯೆ _____ ರಲ್ಲಿ ಪ್ರಿಸೈಡಿಂಗ್ ಅಧಿಕಾರಿಯಾದ __________________ ಹೆಸರಿನ ನಾನು, ____________ ಕ್ರಮ ಸಂಖ್ಯೆಯ ಕಂಟ್ರೋಲ್ ಯೂನಿಟ್ (ಕಂಟ್ರೋಲ್ ಯೂನಿಟ್‌ನ ಹಿಂಭಾಗದಲ್ಲಿ ಮುದ್ರಿಸಿರುವಂತೆ), __________ ಕ್ರಮಸಂಖ್ಯೆಯ ಬ್ಯಾಲೆಟ್ ಯೂನಿಟ್ (ಬ್ಯಾಲೆಟ್ ಯೂನಿಟ್‌ನ ಹಿಂಭಾಗದಲ್ಲಿ ಮುದ್ರಿಸಿರುವಂತೆ) ಹಾಗೂ _____ ಕ್ರಮಸಂಖ್ಯೆಯ ವಿವಿಪ್ಯಾಟ್ ಅನ್ನು (ವಿವಿಪ್ಯಾಟ್‌ನ ಮೇಲೆ ಮುದ್ರಿಸಿರುವಂತೆ) ಬಳಸಿಕೊಂಡು, ಭಾರತದ ಚುನಾವಣಾ ಆಯೋಗವು ಹೊರಡಿಸಿದ ಈ ಕೆಳಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಚುನಾವಣಾ ದಿನವಾದ ಇಂದು ಎಂದರೆ __________________ (ದಿನಾಂಕ) ______ ಬೆಳಗಿನ ಸಮಯದಲ್ಲಿ ಅಣಕು ಮತದಾನವನ್ನು ನಡೆಸಿದೆನೆಂದು ಪ್ರಮಾಣಿಕರಿಸುತ್ತೇನೆ.

1. ಒಟ್ಟು _____________ ಮತಗಳನ್ನು ಪ್ರತಿ ಅಭ್ಯರ್ಥಿಗೆ ಮತ್ತು ನೋಟಾಗೆ ಚಲಾಯಿಸಲಾಗಿತ್ತು.
2. ಬಟನ್ ಅನ್ನು ಒತ್ತಿದಾಗ ಸೂಕ್ತ ಅಭ್ಯರ್ಥಿ/ನೋಟಾದ ಎದುರಿನ ಎಲ್.ಇ.ಡಿ ಬೆಳಕು ಬೆಳಗುತ್ತಿತ್ತು ಮತ್ತು ಬೀಪ್ ಶಬ್ದವು ಸರಿಯಾಗಿ ಕೇಳಿಸುತ್ತಿತ್ತು ಎಂಬುದನ್ನು ಪರೀಕ್ಷಿಸಲಾಯಿತು.
3. ಅಣಕು ಮತದಾನದ ಸಮಯದಲ್ಲಿ ಮತದಾನ ಮಾಡಿದ ಅಭ್ಯರ್ಥಿವಾರು ಮತಗಳು ಮತ್ತು ಪ್ರದರ್ಶನಗೊಂಡ ಫಲಿತಾಂಶವು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಅಣಕು ಮತದಾನದಲ್ಲಿ ಚಲಾವಣೆಯಾದ ಮತಗಳ ಸಂಖ್ಯೆ | ಪರಿಶೀಲಿಸಿರದ ಫಲಿತಾಂಶವನ್ನು ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿಸಲಾದ ಮತಗಳ ಸಂಖ್ಯೆ | ಅಣಕು ಮತದಾನದ ಫಲಿತಾಂಶ ಪರೀಕ್ಷೆಯಲ್ಲಿ ಎಣಿಸಿದಂತೆ ಮುದ್ರಿತ ಮತಚೀಟಿಗಳ ಸಂಖ್ಯೆ | ಮತದಾನವಾದ ವೋಟುಗಳು ಮತ್ತು ತೋರಿಸಿದ ಫಲಿತಾಂಶ ಮತ್ತು ಮತ ಚೀಟಿಯ ಎಣಿಕೆ (ವಿವಿಪ್ಯಾಟ್ ಬಳಸಿದರೆ) ಪ್ರತಿಯೊಂದರೊಂದಿಗೆ ತಾಳೆಯಾಗುತ್ತವೆಯೇ (ಹೌದು/ಇಲ್ಲ) |
|---|---|---|---|---|---|
| | ನೋಟಾ | | | | |
| | ಒಟ್ಟು | | | | |

4. ನಾನು ಅಣಕು ಮತದಾನದ ನಂತರ ಇವಿಎಂ ಸ್ಮರಣೆಯನ್ನು (ಮೆಮೊರಿ) ಯನ್ನು ಅಳಿಸಿಹಾಕಿದ್ದೇನೆ ಮತ್ತು ವಿವಿಪ್ಯಾಟ್‌ನ ಮುದ್ರಿತ ಮತಚೀಟಿಯನ್ನು ತೆಗೆದು ಹಾಕಿದ್ದೇನೆ ಮತ್ತು ಸ್ಮರಣೆಯನ್ನು ಟೋಟಲ್ ಬಟನ್ ಅನ್ನು ಒತ್ತುವ ಮೂಲಕ ಅಳಿಸಿ ಹಾಕಲಾಗಿದೆ ಮತ್ತು ಟೋಟಲ್ ಫಲಕವನ್ನು **"0"** ಯನ್ನು ತೋರಿಸುತ್ತಿದೆಯೆಂಬುದನ್ನು ಪರಿಶೀಲಿಸಿದ್ದೇನೆ.
5. ಅಣಕು ಮತದಾನದ ಸಂದರ್ಭದಲ್ಲಿ ಕೆಳಕಂಡ ಅಭ್ಯರ್ಥಿಗಳನ್ನು ಪ್ರತಿನಿಧಿಸುವ ಏಜೆಂಟರುಗಳ ಎದುರಿಗೆ ಹೆಸರಿರುವ ಅಭ್ಯರ್ಥಿಗಳ ಪ್ರತಿನಿಧಿಗಳು ಹಾಜರಿದ್ದರು ಮತ್ತು ನಾನು ಅವರುಗಳ ಸಹಿಗಳನ್ನು ಪಡೆದಿದ್ದೇನೆ.
6. ನೈಜ ಮತದಾನ ಪ್ರಾರಂಭವಾದ ಸಮಯದಲ್ಲಿ ಕಂಟ್ರೋಲ್ ಯೂನಿಟ್‌ನ ಫಲಕದಲ್ಲಿ ಪ್ರದರ್ಶಿತವಾದ ಮತದಾನ ಆರಂಭವಾದ ದಿನಾಂಕ ಮತ್ತು ಸಮಯ _____________

| ಕ್ರಮ ಸಂಖ್ಯೆ | ಮತಗಟ್ಟೆ ಏಜೆಂಟರ ಹೆಸರು | ಪಕ್ಷದ ಹೆಸರು | ಅಭ್ಯರ್ಥಿಯ ಹೆಸರು | ಮತಗಟ್ಟೆ ಏಜೆಂಟ್‌ನ ಸಹಿ |
|---|---|---|---|---|
| | | | | |
| | | | | |
| | | | | |
| | | | | |
| | | | | |

ಅಥವಾ

ಅಣಕು ಮತದಾನಕ್ಕೆ ನಿಗದಿಪಡಿಸಿದ ಸಮಯದಲ್ಲಿ, ಯಾವುದೇ ಮತಗಟ್ಟೆ ಏಜೆಂಟನು ಹಾಜರಿರಲಿಲ್ಲ/ ಸ್ಪರ್ಧಿಸಿರುವ ಅಭ್ಯರ್ಥಿಯ ಏಜೆಂಟನು ಮಾತ್ರ ಹಾಜರಿದ್ದನು, 15 ನಿಮಿಷಕ್ಕೂ ಹೆಚ್ಚು ಕಾಲ ಕಾದ ನಂತರ, ________________ ಸಮಯದಲ್ಲಿ ಇತರೆ ಚುನಾವಣಾ ಸಿಬ್ಬಂದಿಯೊಂದಿಗೆ ಅಣಕು ಮತದಾನವನ್ನು ನಡೆಸಿದೆನು.

ಸೂಕ್ಷ್ಮ ವೀಕ್ಷಕರ ಸಹಿ (ಮತಕೇಂದ್ರದಲ್ಲಿ ನಿಯೋಜಿಸಿದ್ದರೆ)

ದಿನಾಂಕ:
ಸಮಯ:

ಪ್ರಿಸೈಡಿಂಗ್ ಅಧಿಕಾರಿಯ ಹೆಸರು ಮತ್ತು ಸಹಿ
ಮತದಾನ ಕೇಂದ್ರದ ಸಂಖ್ಯೆ--------
ಮತದಾನ ಕೇಂದ್ರದ ಹೆಸರು-------

## ಪರಿಶಿಷ್ಟ–29

## (ಅಧ್ಯಾಯ–16, ಪ್ಯಾರಾ– 16.6.1)

## ಮತ ಎಣಿಕೆಯ ದಿನಾಂಕ, ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟರುಗಳಿಗೆ ನೋಟೀಸ್

------------ ಲೋಕಸಭೆಯ/------------ವಿಧಾನಸಭೆಯ ಚುನಾವಣಾ ಕ್ಷೇತ್ರಕ್ಕೆ ಚುನಾವಣೆ. (ಒಂದೇ ಸ್ಥಳದಲ್ಲಿ ಮತಎಣಿಕೆ ಕೈಗೊಂಡಿದ್ದಾಗ)

ಚುನಾವಣೆ ನಡೆಸುವ ನಿಯಮಗಳು, 1961ರ 51ನೇ ನಿಯಮದ ಅನುಸಾರವಾಗಿ, ಸದರಿ ನಿಯಮದಲ್ಲಿ ತಿಳಿಸಿರುವಂತೆ ಚುನಾವಣಾ ಕ್ಷೇತ್ರದಲ್ಲಿನ ಮತಗಳ ಎಣಿಕೆಗಾಗಿ ----------- ವರ್ಷ---- ತಿಂಗಳ ------------- ದಿನದಂದು ಅಪರಾಹ್ನ/ಪೂರ್ವಾಹ್ನ ---------- ಘಂಟೆಗೆ ಮತಗಳ ಎಣಿಕೆಗೆ ಸ್ಥಳವನ್ನು ನಿಗದಿಪಡಿಸಿ ಈ ಮೂಲಕ ನೋಟೀಸ್ ಅನ್ನು ನೀಡಿದೆ.

ಸ್ಥಳ: ರಿಟರ್ನಿಂಗ್ ಅಧಿಕಾರಿಯ ಸಹಿ

ದಿನಾಂಕ:

**ಇವರಿಗೆ:**
ಎಲ್ಲಾ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟರುಗಳು

## ಪರಿಶಿಷ್ಟ–30
## (ಅಧ್ಯಾಯ–16, ಪ್ಯಾರಾ– 16.6.1)
## ಮತ ಎಣಿಕೆಯ ದಿನಾಂಕ, ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟರಿಗೆ ನೋಟೀಸ್

ಚುನಾವಣೆ ನಡೆಸುವ ನಿಯಮಗಳು, 1961ರ 51ನೇ ಪ್ರಕರಣದ ಅನುಸಾರವಾಗಿ(ಮತ ಎಣಿಕೆಯು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನಡೆಯುವಾಗ)------------- ಲೋಕಸಭೆಯ --------- ವಿಧಾನಸಭಾ ಕ್ಷೇತ್ರಕ್ಕೆ ನಡೆಯುವ ಚುನಾವಣೆ.

ಚುನಾವಣೆ ನಡೆಸುವ ನಿಯಮಗಳು, 1961ರ 51ನೇ ನಿಯಮದ ಅನುಸಾರವಾಗಿ, ಈ ಸಂಸದೀಯ ಚುನಾವಣಾ ಕ್ಷೇತ್ರದ ವಿಧಾನಸಭಾ ವಿಭಾಗಗಳಿಗೆ ನಡೆಯುವ ಮತ ಎಣಿಕೆಯ ದಿನಾಂಕ, ಸಮಯ ಮತ್ತು ಸ್ಥಳಗಳನ್ನು ನಿಗದಿಪಡಿಸಿ ಈ ಮೂಲಕ ನಿಮಗೆ ತಿಳಿಸಿದ್ದು, ಅದು ಈ ಕೆಳಗಿನಂತಿದೆ:

| **ವಿಧಾನಸಭಾ ಕ್ಷೇತ್ರದ ಹೆಸರು** | **ದಿನಾಂಕ ಮತ್ತು ಸಮಯ** | **ಮತ ಎಣಿಕೆ ಸ್ಥಳ** |
|---|---|---|
| | | |
| | | |
| | | |

ಎಲ್ಲಾ ಸಂಸದೀಯ ಕ್ಷೇತ್ರದ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಲಾಗುವುದು ಮತ್ತು ಎಲ್ಲಾ ಮತದಾನ ಕೇಂದ್ರಗಳ ಮತದಾನದ ಫಲಿತಾಂಶಗಳನ್ನು --------- ಸ್ಥಳದಲ್ಲಿ ---------ರಂದು ----------- ಸಮಯದಲ್ಲಿ ಕ್ರೋಡೀಕರಿಸಲಾಗುವುದು.

ಸ್ಥಳ:----------------                    ರಿಟರ್ನಿಂಗ್ ಅಧಿಕಾರಿಯ ಸಹಿ

ದಿನಾಂಕ:---------

**ಇವರಿಗೆ:**
ಎಲ್ಲಾ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟರುಗಳು

## ಪರಿಶಿಷ್ಟ –31
**(ಅಧ್ಯಾಯ–16, ಪ್ಯಾರಾ 16.12.1)**
**(ನಮೂನೆ) –18**
**ಎಣಿಕೆಯ ಏಜೆಂಟರ ನೇಮಕಾತಿ**

______________ ಚುನಾವಣಾ ಕ್ಷೇತ್ರದಿಂದ _________________ ಗೆ ಚುನಾವಣೆ.

ಇವರಿಗೆ
ರಿಟರ್ನಿಂಗ್ ಅಧಿಕಾರಿ,

ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾದ* ______________ ಎಂಬ ನಾನು/ಅಭ್ಯರ್ಥಿಯಾಗಿರುವ_________________________ ಇವರ ಚುನಾವಣಾ ಏಜೆಂಟ್ ಆದ ನಾನು, ________________ರಲ್ಲಿ ನಡೆಯುವ ಮತಗಳ ಎಣಿಕೆಯಲ್ಲಿ ಹಾಜರಿರುವ ನನ್ನ ಎಣಿಕೆ ಏಜೆಂಟರಾಗಿ ಈ ಮೂಲಕ ಈ ಕೆಳಕಂಡ ವ್ಯಕ್ತಿಗಳನ್ನು ನೇಮಿಸುತ್ತೇನೆ:

**ಮತ ಎಣಿಕೆ ಏಜೆಂಟರ ಹೆಸರು ಮತ್ತು ವಿಳಾಸ:**
1.
2.
3.
ಇತ್ಯಾದಿ.

*ಅಭ್ಯರ್ಥಿ/ಚುನಾವಣಾ ಏಜೆಂಟರ ಸಹಿ.

ಮತ ಎಣಿಕೆ ಏಜೆಂಟರಾಗಿ ಕರ್ತವ್ಯ ನಿರ್ವಹಿಸಲು ನಾವು ಒಪ್ಪಿರುತ್ತೇವೆ.
1.
2.
3.
ಇತ್ಯಾದಿ

ಸ್ಥಳ ––––––––––––––– ಎಣಿಕೆ ಏಜೆಂಟರುಗಳ ಸಹಿ
ದಿನಾಂಕ:–––––––––––––

## ಎಣಿಕೆ ಏಜೆಂಟರ ಘೋಷಣಾ ಪತ್ರ
## (ರಿಟರ್ನಿಂಗ್ ಅಧಿಕಾರಿ ಮುಂದೆ ಸಹಿ ಮಾಡುವುದು)

ನಾವು ಓದಿರುವ ಮತ್ತು ನಮ್ಮ ಮುಂದೆ ಓದಿ ಹೇಳಲಾಗಿರುವ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 128ನೇ ಪ್ರಕರಣವು ನಿರ್ಬಂಧಿಸಿರುವ ಯಾವುದೇ ಕಾರ್ಯವನ್ನು ಮೇಲ್ಕಂಡ ಚುನಾವಣೆಯಲ್ಲಿ ಮಾಡುವುದಿಲ್ಲವೆಂದು ನಾವು ಈ ಮೂಲಕ ಘೋಷಿಸುತ್ತೇವೆ.

1.
2.
3.

ಎಣಿಕೆ ಏಜೆಂಟರ ಸಹಿ.

ಸ್ಥಳ:
ನನ್ನ ಮುಂದೆ ಸಹಿ ಮಾಡಿದ್ದಾರೆ ರಿಟರ್ನಿಂಗ್ ಅಧಿಕಾರಿ

* ಸೂಕ್ತವಲ್ಲದಿರುವುದನ್ನು ಹೊಡೆದು ಹಾಕಿ.
** ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 128ನೇ ಪ್ರಕರಣ

**"128: ಮತದಾನದ ಗೋಪ್ಯತೆ ಕಾಪಾಡುವುದು**–(1) ಚುನಾವಣೆಯಲ್ಲಿ ಮತ ಎಣಿಕೆಯ ದಾಖಲಾತಿಗೆ ಸಂಬಂಧಿಸಿದಂತೆ ಕರ್ತವ್ಯ ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿ ಮತದಾನದ ಗೌಪ್ಯತೆಯನ್ನು ಕಾಪಾಡತಕ್ಕದ್ದು ಮತ್ತು ಕಾಪಾಡುವಲ್ಲಿ ನೆರವಾಗತಕ್ಕದ್ದು ಮತ್ತು ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಸಲಾದ ಕೆಲವೊಂದು ಉದ್ದೇಶಕ್ಕಾಗಿ ಹೊರತು ಅಂಥ ಗೌಪ್ಯತೆಯ ಉಲ್ಲಂಘನೆಯೆಂದು ಪರಿಗಣಿಸಲಾಗುವ ಯಾವುದೇ ಮಾಹಿತಿಯನ್ನು ಯಾವುದೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ.

(2) ಉಪ–ಪ್ರಕರಣ 1ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು 3 ತಿಂಗಳುಗಳವರೆಗೆ ವಿಸ್ತರಿಸಬಹುದಾದ ಜೈಲುಶಿಕ್ಷೆ ಅಥವಾ ದಂಡ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

## ಪರಿಶಿಷ್ಟ–32
## (ಅಧ್ಯಾಯ–16, ಪ್ಯಾರಾ 16.14.2)
## ನಮೂನೆ 19
## ಎಣಿಕೆ ಏಜೆಂಟರ ನೇಮಕವನ್ನು ಹಿಂಪಡೆಯುವುದು

--------------- *ಗೆ ಚುನಾವಣೆ

**ಇವರಿಗೆ:**

ರಿಟರ್ನಿಂಗ್ ಅಧಿಕಾರಿ,

ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ ----------------- ಎಂಬುವರ ಚುನಾವಣಾ ಏಜೆಂಟ್‌ನಾದ -------------- ಎಂಬ ನಾನು, ನನ್ನ ಅಭ್ಯರ್ಥಿಯ ಎಣಿಕೆ ಏಜೆಂಟನಾದ ------------------ ಇವರ ನೇಮಕಾತಿಯನ್ನು ಈ ಮೂಲಕ ಹಿಂಪಡೆಯುತ್ತೇನೆ.

ದಿನಾಂಕ:--------------

ಸ್ಥಳ:------------------ ಹಿಂಪಡೆಯುವ ವ್ಯಕ್ತಿಯ ಸಹಿ.

* ಈ ಕೆಳಗಿನ ಪರ್ಯಾಯಗಳಲ್ಲಿ ಒಂದನ್ನು ಸೂಕ್ತವಾಗಬಹುದಾದಂತೆ ಸೇರ್ಪಡೆ ಮಾಡಿ.

(1) ---------- ಚುನಾವಣಾಕ್ಷೇತ್ರದಿಂದ ಲೋಕಸಭೆಗೆ.

(2) ---------- ಚುನಾವಣಾಕ್ಷೇತ್ರದಿಂದ ವಿಧಾನ ಸಭೆಗೆ.

(3) ---------- ರಾಜ್ಯದ ವಿಧಾನ ಸಭೆಯ ಚುನಾಯಿತ ಸದಸ್ಯರಿಂದ ರಾಜ್ಯ ಸಭೆಗೆ

(4) ---------- (ಕೇಂದ್ರಾಡಳಿತ ಪ್ರದೇಶ)ದ ಮತದಾರರ ಗಣದ ಚುನಾಯಿತ ಸದಸ್ಯರಿಂದ ರಾಜ್ಯ ಸಭೆಗೆ

(5) ------------- ವಿಧಾನ ಸಭೆಯ ಸದಸ್ಯರಿಂದ ವಿಧಾನ ಪರಿಷತ್ತಿಗೆ

(6) ---------- ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ

**ಸೂಚನೆ:** ಅಗತ್ಯವಿಲ್ಲದ ಪದಗಳನ್ನು ಬಿಟ್ಟುಬಿಡಿ.

**ಪರಿಶಿಷ್ಟ–33**
**(ಅಧ್ಯಾಯ–16, ಪ್ಯಾರಾ 16.32.1)**

**ನಮೂನೆ–20**
**ಅಂತಿಮ ಫಲಿತಾಂಶದ ಹಾಳೆ**
**[56ಸಿ(2)(ಸಿ) ನಿಯಮವನ್ನು ನೋಡಿ)**
**56 ಸಂಸದೀಯ ಕ್ಷೇತ್ರದಿಂದ ಲೋಕಸಭೆಗೆ ಚುನಾವಣೆ**
**ಭಾಗ–I**
*(ಸಂಸದೀಯ ಮತ್ತು ವಿಧಾನಸಭೆ ಚುನಾವಣೆಗಳೆರಡಕ್ಕೂ ಬಳಸಬೇಕು)*

ವಿಧಾನಸಭಾ ಕ್ಷೇತ್ರ/ವಿಭಾಗದಲ್ಲಿನ ಒಟ್ಟು ಮತದಾರರ ಸಂಖ್ಯೆ-------- 87,725

ವಿಧಾನಸಭೆ/ಕ್ಷೇತ್ರದ ಹೆಸರು: ----- 275ಎಬಿ ------------ (ಸಂಸದೀಯ ಚುನಾವಣಾ ಕ್ಷೇತ್ರದ ಚುನಾವಣೆಯ ಸಂದರ್ಭದಲ್ಲಿ)

| ಮತದಾನ ಕೇಂದ್ರದ ಕ್ರಮ ಸಂಖ್ಯೆ | | ---- ರ ಪರವಾಗಿ ಚಲಾವಣೆಗೊಂಡ ಸಿಂಧುವಾದ ಮತಗಳ ಸಂಖ್ಯೆ | | | | ಸಿಂಧುವಾದ ಒಟ್ಟು ಮತಗಳು | ತಿರಸ್ಕೃತ ಮತಗಳ ಸಂಖ್ಯೆ | NOTA (ನೋಟಾ) | ಒಟ್ಟು | ಟೆಂಡರ್ಡ್ ಮತಗಳ ಸಂಖ್ಯೆ |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | | | | | |
| 1 | | 2 | 3 | 4 | 5 | 6 | 7 | | 8 | 9 |
| 1 | 5 | 135 | 205 | 403 | 5 | 748 | ಏನೂ ಇಲ್ಲ | | 748 | 1 |
| 2 | 6 | 170 | 145 | 340 | 118 | 765 | ಏನೂ ಇಲ್ಲ | | 765 | – |
| 3 | 6 ಎ | 405 | 70 | 105 | 230 | 810 | ಏನೂ ಇಲ್ಲ | | 810 | – |
| 4 | 7 | 240 | 120 | 215 | 362 | 937 | ಏನೂ ಇಲ್ಲ | | 937 | 2 |
| 5 | 8 | 72 | 269 | 142 | 319 | 802 | ಏನೂ ಇಲ್ಲ | | 802 | – |
| 6 | 9 | 72 | 142 | 347 | 92 | 653 | ಏನೂ ಇಲ್ಲ | | 653 | – |
| 7 | 10 | 240 | 267 | 142 | 115 | 764 | ಏನೂ ಇಲ್ಲ | | 764 | – |

-------------- ಮತ್ತು ------------------- ವರೆಗೆ

**(ಕೊನೆಯ ಪುಟ)**

| ಮತದಾನಕೇಂದ್ರದ ಕ್ರಮಸಂಖ್ಯೆ | ---- ರ ಪರವಾಗಿ ಚಲಾವಣೆಗೊಂಡ ಸಿಂಧುವಾದ ಮತಗಳ ಸಂಖ್ಯೆ | | | | ಸಿಂಧುವಾದ ಮತಗಳ ಸಂಖ್ಯೆ | ತಿರಸ್ಕೃತ ಮತಗಳ ಸಂಖ್ಯೆ | **NOTA** (ನೋಟಾ) | ಒಟ್ಟು | ಟೆಂಡರ್ಡ್ ಮತಗಳ ಸಂಖ್ಯೆ |
|---|---|---|---|---|---|---|---|---|---|
| | ಎ | ಬಿ | ಸಿ | ಡಿ | ಮತಗಳು | ಮತಗಳು | | | ಮತಗಳು |
| 1 | 2 | 3 | 4 | 5 | 6 | 7 | | 8 | 9 |
| | | | | | | | | | |
| | | | | | | | | | |
| | | | | | | | | | |
| 78 | 93 | 127 | 347 | 349 | 916 | ಏನೂ ಇಲ್ಲ | | 916 | – |
| 79 | 368 | 40 | 197 | 215 | 820 | ಏನೂ ಇಲ್ಲ | | 820 | – |
| ಮತದಾನ ಕೇಂದ್ರಗಳಲ್ಲಿ ದಾಖಲಾದ ಒಟ್ಟು ಮತಗಳ ಸಂಖ್ಯೆ | 21,059 | 19,178 | 12,357 | 18,753 | 71,340 | ಏನೂ ಇಲ್ಲ | | 71,340 | 3 |
| ಅಂಚೆ ಮತಪತ್ರಗಳಲ್ಲಿ ದಾಖಲಿಸಿದ ಮತಗಳ ಸಂಖ್ಯೆ ಅನ್ವಯಿಸುವುದಿಲ್ಲ | | | | | | | | | |
| (ವಿಧಾನಸಭಾ ಕ್ಷೇತ್ರದ ಚುನಾವಣೆ ಸಂದರ್ಭದಲ್ಲಿ ಭರ್ತಿ ಮಾಡುವುದು) | | | | | | | | | |
| ಮತದಾನ ಮಾಡಲಾದ ಒಟ್ಟು ಮತಗಳು | 21,059 | 19,178 | 12,357 | 18,753 | 71,340 | ಏನೂ ಇಲ್ಲ | | 71,340 | 3 |

ಸ್ಥಳ: ಉಪವಿಭಾಗ ಕಚೇರಿ ಎ ಬಿ
ದಿನಾಂಕ: 27ನೇ ಜುಲೈ 1992

ಸಹಾಯಕ ರಿಟರ್ನಿಂಗ್ ಅಧಿಕಾರಿ

## ಭಾಗ–II

## (ಸಂಸದೀಯ ಚುನಾವಣಾ ಕ್ಷೇತ್ರದ ಉಪಯೋಗಕ್ಕಾಗಿ ಮಾತ್ರ)

| ವಿಧಾನಸಭಾ ಕ್ಷೇತ್ರದ ಹೆಸರು | ---- ರ ಪರವಾಗಿ ಚಲಾವಣೆಗೊಂಡ ಸಿಂಧುವಾದ ಮತಗಳ ಸಂಖ್ಯೆ | | | | ಸಿಂಧುವಾದ ಒಟ್ಟು ಮತಗಳು | ತಿರಸ್ಕೃತ ಮತಗಳ ಸಂಖ್ಯೆ | NOTA (ನೋಟಾ) | ಒಟ್ಟು | ಟೆಂಡರ್ ಮತಗಳ ಸಂಖ್ಯೆ |
|---|---|---|---|---|---|---|---|---|---|
| | ಎ | ಬಿ | ಸಿ | ಡಿ | | | | | |
| 1 | 2 | 3 | 4 | 5 | 6 | 7 | | 8 | 9 |
| 275 ಎಬಿ | 18697 | 15353 | 10974 | 8458 | 53482 | –ಇಲ್ಲ– | | 53482 | 3 |
| 276 ಸಿಡಿ | 21059 | 19170 | 12358 | 18753 | 71340 | –ಇಲ್ಲ– | | 71340 | 9 |
| 277 ಇಎಫ್ | 21610 | 13448 | 23117 | 9321 | 67496 | –ಇಲ್ಲ– | | 67496 | – |
| 278 ಜಿಹೆಚ್ | 11822 | 23731 | 13728 | 6540 | 55821 | –ಇಲ್ಲ– | | 55821 | 1 |
| 280 ಐಜೆ | 17523 | 17399 | 16055 | 18835 | 69812 | –ಇಲ್ಲ– | | 69812 | 2 |
| 281 ಕೆಎಲ್ | 21937 | 16756 | 17080 | 11921 | 67694 | –ಇಲ್ಲ– | | 67694 | – |
| ಒಟ್ಟು | 111648 | 105857 | 93312 | 73828 | 8770 | 385645 | 15 | | |
| ಅಂಚೆ ಮತಪತ್ರಗಳಲ್ಲಿ ದಾಖಲಿಸಲಾದ ಮತಗಳ ಸಂಖ್ಯೆ | 47 | 13 | 22 | 5 | 87 | 17 | 104 | 15 | |

ಸ್ಥಳ: -------
ದಿನಾಂಕ: 28ನೇ ಜುಲೈ 1992

(ಸಹಿ) ಕ್ಯೂಆರ್‌ಎಸ್
ರಿಟರ್ನಿಂಗ್ ಅಧಿಕಾರಿ

## ಪರಿಶಿಷ್ಟ –34
### (ಅಧ್ಯಾಯ–17, ಪ್ಯಾರಾ 17.1.1)
### ಭಾರತ ಸಂವಿಧಾನದಿಂದ ಉದ್ಧೃತ ಭಾಗಗಳು

**ಸಂವಿಧಾನದ 101(1) ನೇ ಅನುಚ್ಛೇದ**

**ಸ್ಥಾನಗಳನ್ನು ಖಾಲಿ ಮಾಡುವುದು:–**

(1) ಯಾರೇ ವ್ಯಕ್ತಿಯು ಸಂಸತ್ತಿನ ಉಭಯ ಸದನಗಳ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಉಭಯ ಸದನಗಳ ಸದಸ್ಯನಾಗಿ ಆಯ್ಕೆಯಾಗಿರುವ ಯಾರೇ ವ್ಯಕ್ತಿಯು, ಅವುಗಳಲ್ಲಿ ಯಾವುದಾದರೂ ಒಂದು ಸದನದಲ್ಲಿನ ತನ್ನ ಸ್ಥಾನವನ್ನು ಖಾಲಿ ಮಾಡುವಂತೆ ಸಂಸತ್ತು ಕಾನೂನಿನ ಮೂಲಕ ಉಪಬಂಧವನ್ನು ಮಾಡತಕ್ಕದ್ದು.

**ಸಂವಿಧಾನದ 101(2) ನೇ ಅನುಚ್ಛೇದ**

(2) ಯಾರೇ ವ್ಯಕ್ತಿಯು ಸಂಸತ್ತು ಮತ್ತು ಒಂದು ರಾಜ್ಯದ ವಿಧಾನ ಮಂಡಲದ ಯಾವುದೇ ಸದನ – ಇವೆರಡರ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಸಂಸತ್ತು ಮತ್ತು ಒಂದು ರಾಜ್ಯದ ವಿಧಾನಮಂಡಲದ ಯಾವುದೇ ಸದನ – ಈ ಎರಡರ ಸದಸ್ಯನಾಗಿ ಆಯ್ಕೆಯಾದಲ್ಲಿ, ಆಗ, ರಾಷ್ಟ್ರಪತಿಯು ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಅವನು ಆ ರಾಜ್ಯದ ವಿಧಾನಮಂಡಲದಲ್ಲಿನ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರದಿದ್ದರೆ, ಆ ಅವಧಿಯು ಮುಕ್ತಾಯವಾದ ಮೇಲೆ ಸಂಸತ್ತಿನಲ್ಲಿನ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**ಸಂವಿಧಾನದ 190 ನೇ ಅನುಚ್ಛೇದ**

**ಸ್ಥಾನಗಳನ್ನು ಖಾಲಿ ಮಾಡುವುದು:–**

(1) ಯಾರೇ ವ್ಯಕ್ತಿಯು ಸಂಸತ್ತಿನ ಉಭಯ ಸದನಗಳ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಉಭಯ ಸದನಗಳ ಸದಸ್ಯನಾಗಿ ಆಯ್ಕೆಯಾಗಿರುವ ಯಾರೇ ವ್ಯಕ್ತಿಯು, ಅವುಗಳಲ್ಲಿ ಯಾವುದಾದರೂ ಒಂದು ಸದನದಲ್ಲಿನ ತನ್ನ ಸ್ಥಾನವನ್ನು ಖಾಲಿ ಮಾಡುವಂತೆ ಸಂಸತ್ತು ಕಾನೂನಿನ ಮೂಲಕ ಉಪಬಂಧವನ್ನು ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯು ಸಂಸತ್ತು ಮತ್ತು ಒಂದು ರಾಜ್ಯದ ವಿಧಾನ ಮಂಡಲದ ಯಾವುದೇ ಸದನ – ಇವೆರಡರ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಸಂಸತ್ತು ಮತ್ತು ಒಂದು ರಾಜ್ಯದ ವಿಧಾನಮಂಡಲದ ಯಾವುದೇ ಸದನ – ಈ ಎರಡರ ಸದಸ್ಯನಾಗಿ ಆಯ್ಕೆಯಾದಲ್ಲಿ, ಆಗ, ರಾಷ್ಟ್ರಪತಿಯು ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಅವನು ಆ ರಾಜ್ಯದ ವಿಧಾನಮಂಡಲದಲ್ಲಿನ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರದಿದ್ದರೆ, ಆ ಅವಧಿಯು ಮುಕ್ತಾಯವಾದ ಮೇಲೆ ಸಂಸತ್ತಿನಲ್ಲಿನ ಅವನ ಸ್ಥಾನವು ಖಾಲಿಯಾಗತಕ್ಕದ್ದು.

## ಪರಿಶಿಷ್ಟ–35

### (ಅಧ್ಯಾಯ–17, ಪ್ಯಾರಾ 17.1.4)

### ಜನತಾ ಪ್ರಾತಿನಿಧ್ಯ ಅಧಿನಿಯಮ 1951 ರಿಂದ ಉದ್ಧೃತ ಭಾಗಗಳು

**67ಎ. ಅಭ್ಯರ್ಥಿಯು ಆಯ್ಕೆಯಾದ ದಿನಾಂಕ :–**

ಈ ಅಧಿನಿಯಮದ ಉದ್ದೇಶಗಳಿಗಾಗಿ, 53ನೇ ಪ್ರಕರಣದ ಅಥವಾ 66ನೇ ಪ್ರಕರಣದ ಉಪಬಂಧಗಳ ಮೇರೆಗೆ ಚುನಾವಣಾ ಅಧಿಕಾರಿಯು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಸದನಕ್ಕೆ ಒಬ್ಬ ಅಭ್ಯರ್ಥಿಯು ಆಯ್ಕೆಗೊಂಡಿರುವನೆಂದು ಘೋಷಿಸುವ ದಿನಾಂಕವು ಆ ಅಭ್ಯರ್ಥಿಯು ಆಯ್ಕೆಯಾದ ದಿನಾಂಕವಾಗಿರತಕ್ಕದ್ದು.

**ಅಧ್ಯಾಯ –VI :- ಬಹುಪದೀಯ ಚುನಾವಣೆ**

**68. ಸಂಸತ್ತಿನ ಉಭಯ ಸದನಗಳಿಗೆ ಆಯ್ಕೆಯಾದಾಗ ಸ್ಥಾನಗಳನ್ನು ತೆರವು ಮಾಡುವುದು :–**

(1) ಲೋಕಸಭೆ ಮತ್ತು ರಾಜ್ಯ ಸಭೆಯ ಎರಡೂ ಸದನಗಳಿಗೆ ಸದಸ್ಯನೆಂದು ಚುನಾಯಿತನಾಗಿರುವ ಮತ್ತು ಯಾವುದೇ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರದ ಯಾವನೇ ವ್ಯಕ್ತಿಯು ಲಿಖಿತ ನೋಟೀಸಿಗೆ ಸಹಿ ಹಾಕಿ ಮತ್ತು ಅವನು ಹಾಗೆ ಆಯ್ಕೆಗೊಂಡ ದಿನಾಂಕ ಅಥವಾ ದಿನಾಂಕಗಳ ತರುವಾಯದ ದಿನಾಂಕದಿಂದ ಹತ್ತು ದಿವಸಗಳೊಳಗಾಗಿ ಚುನಾವಣಾ ಆಯೋಗದ ಕಾರ್ಯದರ್ಶಿಗೆ ಅದನ್ನು ಒಪ್ಪಿಸಿ ಅವನು ಆ ಸದನಗಳ ಪೈಕಿ ಯಾವುದರಲ್ಲಿ ಸೇವೆ ಸಲ್ಲಿಸಲು ಇಚ್ಛಿಸುತ್ತಾನೋ ಅದನ್ನು ತಿಳಿಸಬಹುದು, ಮತ್ತು ಆ ತರುವಾಯ ಅವನು ಸೇವೆ ಸಲ್ಲಿಸಲು ಇಚ್ಛಿಸದ ಸದನದಲ್ಲಿನ ಅವನ ಸ್ಥಾನವು ತೆರವಾಗತಕ್ಕದ್ದು.

(2) ಮೇಲೆ ಹೇಳಿದ ಅವಧಿಯೊಳಗಾಗಿ ಹಾಗೆ ತಿಳಿಸಲು ತಪ್ಪಿದಲ್ಲಿ, ರಾಜ್ಯ ಸಭೆಯಲ್ಲಿನ ಅವನ ಸ್ಥಾನವು ಆ ಅವಧಿಯು ಮುಕ್ತಾಯಗೊಂಡ ತರುವಾಯ ತೆರವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ನೀಡಿದ ಯಾವುದೇ ನೋಟೀಸು ಅಂತಿಮವಾದುದು ಮತ್ತು ಹಿಂತೆಗೆದುಕೊಳ್ಳಲಿಕ್ಕಾಗದಂತಹುದಾಗಿರತಕ್ಕದ್ದು.

(4) ಈ ಪ್ರಕರಣ ಮತ್ತು 69ನೇ ಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿ ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನೆಂದು ಆಯ್ಕೆಗೊಂಡಿರುವ ದಿನಾಂಕವು, ಚುನಾಯಿತ ಸದಸ್ಯನ ಸಂದರ್ಭದಲ್ಲಿ ಅವನು ಚುನಾಯಿತನಾದ ದಿನಾಂಕವು ಮತ್ತು ನಾಮನಿರ್ದೇಶಿತ ಸದಸ್ಯನ ಸಂದರ್ಭದಲ್ಲಿ ಭಾರತ ರಾಜಪತ್ರದಲ್ಲಿ ಅವನ ನಾಮನಿರ್ದೇಶನದ ಮೊದಲ ಪ್ರಕಟಣೆ ದಿನಾಂಕವು ಆಗಿರತಕ್ಕದ್ದು.

69. **ಈಗಾಗಲೇ ಒಂದು ಸದನದ ಸದಸ್ಯರಾಗಿರುವ ವ್ಯಕ್ತಿಗಳು ಸಂಸತ್ತಿನ ಇನ್ನೊಂದು ಸದನಕ್ಕೆ ಚುನಾಯಿತರಾದಾಗ ಸ್ಥಾನಗಳನ್ನು ತೆರವು ಮಾಡುವುದು :–**

(1) ಈಗಾಗಲೇ ಲೋಕಸಭೆಯ ಸದಸ್ಯನಾಗಿರುವ ಮತ್ತು ಅಂಥ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ಒಬ್ಬ ವ್ಯಕ್ತಿಯು ರಾಜ್ಯ ಸಭೆಯ ಸದಸ್ಯನಾಗಿ ಆಯ್ಕೆಗೊಂಡರೆ ಲೋಕಸಭೆಯಲ್ಲಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಯಾದ ದಿನಾಂಕದಂದು ತೆರವಾಗತಕ್ಕದ್ದು.

(2) ಈಗಾಗಲೇ ರಾಜ್ಯ ಸಭೆಯ ಸದಸ್ಯನಾಗಿರುವ ಮತ್ತು ಅಂಥ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ಒಬ್ಬ ವ್ಯಕ್ತಿಯು ಲೋಕಸಭೆಯ ಸದಸ್ಯನಾಗಿ ಆಯ್ಕೆಯಾದರೆ, ರಾಜ್ಯ ಸಭೆಯಲ್ಲಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಯಾದ ದಿನಾಂಕದಂದು ತೆರವಾಗತಕ್ಕದ್ದು.

70. **ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದಲ್ಲಿನ ಅಥವಾ ಎರಡು ಸದನಗಳ ಪೈಕಿ ಯಾವುದೇ ಸದನದಲ್ಲಿನ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಗೊಳ್ಳುವುದು :–**

ಒಬ್ಬ ವ್ಯಕ್ತಿಯು ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದಲ್ಲಿನ ಅಥವಾ ಉಭಯ ಸದನಗಳ ಪೈಕಿ ಯಾವುದೇ ಸದನದ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಯಾಗಿದ್ದರೆ, ಆಗ ಸಂದರ್ಭಾನುಸಾರ, ಅಧ್ಯಕ್ಷ ಅಥವಾ ಸಭಾಪತಿಗೆ ಅಥವಾ ನಿಯಮಿಸಬಹುದಾದಂಥ ಇತರ ಪ್ರಾಧಿಕಾರ ಅಥವಾ ಅಧಿಕಾರಿಗೆ ತನ್ನ ಹಸ್ತಾಕ್ಷರದೊಡನೆ ಬರೆಯುವ ಮೂಲಕ ಆ ಸ್ಥಾನಗಳ ಪೈಕಿ ಒಂದನ್ನು ಉಳಿದು ಎಲ್ಲವುಗಳಿಗೆ ನಿಯಮಿಸಿದ ಕಾಲದೊಳಗೆ ಅವನು ರಾಜೀನಾಮೆ ನೀಡುವ ಹೊರತು, ಎಲ್ಲ ಸ್ಥಾನಗಳು ತೆರವಾಗತಕ್ಕದ್ದು.

## ಪರಿಶಿಷ್ಟ –36

### (ಅಧ್ಯಾಯ–17, ಪ್ಯಾರಾ 17.4.1)
### ಚುನಾವಣೆ ನಡೆಸುವ ನಿಯಮಗಳು, 1961ರ ಉದ್ಧೃತ ಭಾಗಗಳು

**91. ಸದನದಲ್ಲಿ ಒಂದಕ್ಕಿಂತ ಹೆಚ್ಚು ಸದಸ್ಯ ಸ್ಥಾನಕ್ಕಾಗಿ ಚುನಾವಣೆ ನಡೆದ ಸಂದರ್ಭದಲ್ಲಿ, ಸದಸ್ಯ ಸ್ಥಾನಗಳಿಗೆ ರಾಜೀನಾಮೆ ನೀಡುವುದು.–**

(1) ಒಬ್ಬ ವ್ಯಕ್ತಿಯು, ತಾನು ಆಯ್ಕೆಯಾದ ಸದನದ ಯಾವುದೇ ಒಂದು ಸ್ಥಾನಕ್ಕೆ ಅಥವಾ ಸದನದಲ್ಲಿ ಅಥವಾ ರಾಜ್ಯದ ವಿಧಾನಮಂಡಲದ ಯಾವುದೇ ಒಂದು ಸದನಕ್ಕೆ ಆಯ್ಕೆಯಾದ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಬಹುದಾದ ಸಮಯವು, –

ಎ) 67–ಎ ಪ್ರಕರಣದಡಿ ಆತನು ಆಯ್ಕೆಯಾದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಿರತಕ್ಕದ್ದು; ಅಥವಾ

ಬಿ) ವಿವಿಧ ಸ್ಥಾನಗಳಿಗೆ ಸಂಬಂಧಿಸಿದಂತೆ ಆತನ ಆಯ್ಕೆಯ ದಿನಾಂಕಗಳು ಬೇರೆ ಬೇರೆಯಾಗಿದ್ದ ಸಂದರ್ಭದಲ್ಲಿ, ಆ ದಿನಾಂಕಗಳ ಕೊನೆಯ ದಿನಾಂಕದಿಂದ ಹದಿನಾಲ್ಕು ದಿನಗಳಾಗಿರತಕ್ಕದ್ದು.

(2) ಅಂತಹ ರಾಜೀನಾಮೆ ನೀಡುವಿಕೆಯನ್ನು ಈ ಮುಂದಿನವರಿಗೆ ಎಂದರೆ.–

(ಎ) ಸಂಬಂಧಪಟ್ಟ ಸದನದ ಸಭಾಧ್ಯಕ್ಷರಿಗೆ ಅಥವಾ ಸಭಾಪತಿಗಳಿಗೆ; ಅಥವಾ

(ಬಿ) ತತ್ಕಾಲದಲ್ಲಿ ಸಭ್ಯಾಧ್ಯಕ್ಷರು ಅಥವಾ ಸಭಾಪತಿಗಳ ಹುದ್ದೆಯು ಖಾಲಿಯಿರುವಲ್ಲಿ ಅಥವಾ ಖಾಲಿಯಾಗಿದ್ದಲ್ಲಿ, ಅಥವಾ ಸ್ಥಗಿತಗೊಂಡಿದೆಯೆಂದು ಭಾವಿಸಿದಲ್ಲಿ ಸಂಬಂಧಪಟ್ಟ ಸದನದ, ಉಪ ಸಭ್ಯಾಧ್ಯಕ್ಷರಿಗೆ ಅಥವಾ ಉಪಸಭಾಪತಿಗಳಿಗೆ; ಅಥವಾ

(ಸಿ) ಉಪ ಸಭಾಧ್ಯಕ್ಷರ ಅಥವಾ ಸಭಾಪತಿಗಳ ಹುದ್ದೆಯು ಸಹ ತತ್ಕಾಲದಲ್ಲಿ ಖಾಲಿಯಿರುವಲ್ಲಿ ಅಥವಾ ಖಾಲಿಯಾಗಿದ್ದಲ್ಲಿ ಅಥವಾ ಹಾಗೆಂದು ಸ್ಥಗಿತಗೊಂಡಿದೆಯೆಂದು ಭಾವಿಸಿರುವಲ್ಲಿ, ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು.

(3) (2)ನೇ ಉಪನಿಯಮದ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವಲ್ಲಿ, ಚುನಾವಣಾ ಆಯೋಗವು, ರಾಜೀನಾಮೆಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೇ, ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ಸದನದ ಕಾರ್ಯದರ್ಶಿಗೆ ಕಳುಹಿಸತಕ್ಕದ್ದು.

## ಪರಿಶಿಷ್ಟ –37
## (ಅಧ್ಯಾಯ–17, ಪ್ಯಾರಾ 17.5.1)
## ಏಕಕಾಲಿಕ ಸದಸ್ಯತ್ವ ನಿಯಮಗಳು, 1950ರ ಉದ್ಧೃತ ಭಾಗ.

ಏಕಕಾಲಿಕ ಸದಸ್ಯತ್ವ ನಿಷೇಧ ನಿಯಮಗಳು, 1950ರ ನಿಯಮ 2

ಸಂಸತ್ತಿನ ಮತ್ತು ಭಾರತದ ಸಂವಿಧಾನದ (ಇದರಲ್ಲಿ ಇನ್ನು ಮುಂದೆ "ಸಂವಿಧಾನ" ಎಂದು ಉಲ್ಲೇಖಿಸಲಾಗಿದೆ) ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯದ ವಿಧಾನಮಂಡಲದ ಸದನದ ಸದಸ್ಯನಾಗಿ ಆಯ್ಕೆಗೊಂಡ ವ್ಯಕ್ತಿಯ ಸಂಸತ್ತಿನ ಸದಸ್ಯ ಸ್ಥಾನವು ಮುಕ್ತಾಯಗೊಳ್ಳುವ ಅವಧಿಯು, ಆತನು ಅಂಥ ರಾಜ್ಯದ ವಿಧಾನಮಂಡಲದಲ್ಲಿನ ತನ್ನ ಸದಸ್ಯ ಸ್ಥಾನಕ್ಕೆ ಈ ಹಿಂದೆಯೇ ರಾಜೀನಾಮೆ ನೀಡದ ಹೊರತು, ಆ ಸ್ಥಾನವು ತೆರವಾಗತಕ್ಕ ಅವಧಿಯು, ಹಾಗೆ ಆತನು ಆಯ್ಕೆಯಾಗಿರುವನೆಂಬ ಘೋಷಣೆಯು ಭಾರತದ ರಾಜ್ಯಪತ್ರದಲ್ಲಿ ಅಥವಾ ರಾಜ್ಯದ ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ, ಇವುಗಳಲ್ಲಿ ಯಾವುದು ನಂತರವೋ ಆ ದಿನಾಂಕದಿಂದ ಹದಿನಾಲ್ಕು ದಿನಗಳಾಗಿರತಕ್ಕದ್ದು.

## ಪರಿಶಿಷ್ಟ–38
## (ಅಧ್ಯಾಯ–18, ಪ್ಯಾರಾ 18.35.1)
## ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಉದ್ಧೃತ ಭಾಗಗಳು
## ಭಾಗ–5

## ಅಧ್ಯಾಯ–VIII
## ಚುನಾವಣಾ ವೆಚ್ಚಗಳು

**76. ಅಧ್ಯಾಯದ ಅನ್ವಯ:–**

ಈ ಅಧ್ಯಾಯವು ಲೋಕಸಭೆಯ ಮತ್ತು ರಾಜ್ಯ ವಿಧಾನಸಭೆಯ ಚುನಾವಣೆಗಳಿಗೆ ಮಾತ್ರ ಅನ್ವಯವಾಗತಕ್ಕದ್ದು.

**77. ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳು ಮತ್ತು ಅದರ ಪರಮಾವಧಿ:–**

(1) ಪ್ರತಿಯೊಬ್ಬ ಚುನಾವಣಾ ಅಭ್ಯರ್ಥಿಯು, ಸ್ವತಃ ಅಥವಾ ತನ್ನ ಚುನಾವಣಾ ಏಜೆಂಟನ ಮೂಲಕ ಅವನನ್ನು ನಾಮ ನಿರ್ದೇಶನ ಮಾಡಲಾಗಿರುವ ದಿನಾಂಕ ಮತ್ತು ಚುನಾವಣಾ ಫಲಿತಾಂಶದ ಘೋಷಣೆಯ ದಿನಾಂಕ ಇವೆರಡೂ ದಿನಾಂಕಗಳೂ ಸೇರಿದಂತೆ ಈ ನಡುವಿನ ಅವಧಿಯಲ್ಲಿ ಅಥವಾ ಚುನಾವಣೆಯ ಸಂಬಂಧದಲ್ಲಿ ಅವನು ಅಥವಾ ಅವನ ಚುನಾವಣಾ ಏಜೆಂಟನು ವಹಿಸಿರುವ ಅಥವಾ ಅಧಿಕೃತಗೊಳಿಸಿರುವ ಎಲ್ಲಾ ವೆಚ್ಚದ ಬಗ್ಗೆ ಪ್ರತ್ಯೇಕ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕದ್ದು.

**ವಿವರಣೆ 1 : ಸಂದೇಹಗಳ ನಿವಾರಣೆಗಾಗಿ:–**

(ಎ) ರಾಜಕೀಯ ಪಕ್ಷದ ಕಾರ್ಯಕ್ರಮದ ಪ್ರಚಾರಕ್ಕಾಗಿ ರಾಜಕೀಯ ಪಕ್ಷದ ನಾಯಕರು ವಿಮಾನದ ಮೂಲಕ ಅಥವಾ ಯಾವುದೇ ಇತರ ಸಾರಿಗೆ ಸಾಧನಗಳ ಮೂಲಕ ಕೈಗೊಂಡ ಪ್ರಯಾಣಕ್ಕೆ ಭರಿಸಿದ ವೆಚ್ಚವನ್ನು ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ ಆ ರಾಜಕೀಯ ಪಕ್ಷದ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಚುನಾವಣೆಯ ಸಂಬಂಂಧದಲ್ಲಿ ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂಬುದಾಗಿ ಬಾವಿಸತಕ್ಕದಲ್ಲ;

(ಬಿ) ಸರ್ಕಾರದ ಸೇವೆಯಲ್ಲಿರುವ ಮತ್ತು 123ನೇ ಪ್ರಕರಣದ (7)ನೇ ಖಂಡದಲ್ಲಿ ನಮೂದಿಸಿರುವ ಯಾವುದೇ ವರ್ಗಕ್ಕೆ ಸೇರಿದ ಯಾರೇ ವ್ಯಕ್ತಿಯು, ಆ ಖಂಡದ ಪರಂತುಕದಲ್ಲಿ ನಮೂದಿಸಿರುವಂತೆ ತನ್ನ ಪದೀಯ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅಥವಾ ನಿರ್ವಹಿಸುವನೆಂದು ತಾತ್ಪರ್ಯವಾಗುವಲ್ಲಿ, ಮಾಡಿದ ಯಾವುದೇ ಏರ್ಪಾಡುಗಳು, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಇತರ ಯಾವುದೇ ಕಾರ್ಯ ಅಥವಾ ಕೃತ್ಯದ ಸಂಬಂಧದಲ್ಲಿ ವಹಿಸಿರುವ ಯಾವುದೇ ವೆಚ್ಚವು ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಆ ಚುನಾವಣೆಯ ಸಂಬಂಧದಲ್ಲಿ ಭರಿಸಿದ ಅಥವಾ ಅಧೀಕೃತಗೊಳಿಸಿದ ವೆಚ್ಚವೆಂದು ಭಾವಿಸತಕ್ಕದಲ್ಲ

– ಎಂದು ಈ ಮೂಲಕ ಘೋಷಿಸಲಾಗಿದೆ.

**ವಿವರಣೆ 2 :–** ವಿವರಣೆ 1ರ (ಎ)ಖಂಡದ ಉದ್ದೇಶಗಳಿಗಾಗಿ, ಚುನಾವಣೆಯ ಸಂಬಂಧದಲ್ಲಿ, "ರಾಜಕೀಯಪಕ್ಷದಮುಖಂಡರು" ಎಂಬಪದಾವಳಿಗೆ.–

ಈ ಅಧಿನಿಯಮದ ಅಡಿಯಲ್ಲಿ ಭಾರತ ರಾಜ್ಯಪತ್ರದಲ್ಲಿ ಅಥವಾ ಸಂಧರ್ಭಾನುಸಾರ, ರಾಜ್ಯದ ರಾಜ್ಯಪತ್ರದಲ್ಲಿ ಪ್ರಕಟಗೊಂಡ ಅಂಥ ಚುನಾವಣೆಯ ಅಧಿಸೂಚನೆಯ ದಿನಾಂಕದಿಂದ

ಏಳು ದಿನಗಳ ಅವಧಿಯೊಳಗೆ ಅಂಥ ಚುನಾವಣೆಯ ಉದ್ದೇಶಗಳಿಗಾಗಿ ರಾಜಕೀಯ ಪಕ್ಷವು ಚುನಾವಣಾ ಆಯೋಗಕ್ಕೆ ಮತ್ತು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಯಾರ ಹೆಸರುಗಳನ್ನು ತಿಳಿಸಲಾಗಿದೆಯೋ ಅಂಥ ಮುಂದಿನ ವ್ಯಕ್ತಿಗಳು ಎಂದರೆ,

(i) ಅಂಥ ರಾಜಕೀಯ ಪಕ್ಷವು ಮಾನ್ಯತೆ ಪಡೆದ ರಾಜಕೀಯ ಪಕ್ಷವಾಗಿದ್ದಲ್ಲಿ ನಲವತ್ತನ್ನು ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು; ಮತ್ತು

(ii) ಅಂಥ ರಾಜಕೀಯ ಪಕ್ಷವು ಮಾನ್ಯತೆ ಪಡೆದ ರಾಜಕೀಯ ಪಕ್ಷದ ಹೊರತಾದ ಬೇರೆ ಪಕ್ಷವಾಗಿದ್ದಲ್ಲಿ ಇಪ್ಪತ್ತನ್ನು ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು ಎಂದರ್ಥ

ಪರಂತು, ಒಂದು ರಾಜಕೀಯ ಪಕ್ಷವು, (i) ನೇ ಖಂಡದಲ್ಲಿ ಅಥವಾ ಸಂಧರ್ಭಾನುಸಾರ, (ii) ನೇ ಖಂಡದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು ಮರಣ ಹೊಂದಿದ ಅಥವಾ ಅಂಥ ರಾಜಕೀಯ ಪಕ್ಷದ ಸದಸ್ಯನಾಗಿರುವುದು ನಿಂತು ಹೋದ ಸಂಧರ್ಭದಲ್ಲಿ, ಚುನಾವಣಾ ಆಯೋಗಕ್ಕೆ ಮತ್ತು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಮತ್ತೊಮ್ಮೆ ತಿಳಿಸುವ ಮೂಲಕ ಮರಣ ಹೊಂದಿದ ಅಥವಾ ಸದಸ್ಯನಾಗುವುದು ನಿಂತು ಹೋದ ಅಂಥ ವ್ಯಕ್ತಿಯ ಹೆಸರಿಗೆ ಬದಲಾಗಿ ಅವನ ಸ್ಥಾನದಲ್ಲಿ ಹೊಸ ನಾಯಕನನ್ನು ನೇಮಕ ಮಾಡುವ ಉದ್ದೇಶಗಳಿಗಾಗಿ, ಅಂಥ ಚುನಾವಣೆಯ ಕೊನೆಯ ಮತದಾನವು ಮುಕ್ತಾಯಗೊಳ್ಳುವುದಕ್ಕೆ ನಿಗದಿ ಪಡಿಸಿದ ಸಮಯದ ಸಮಾಪ್ತಿಯ ನಲವತ್ತೆಂಟು ಗಂಟೆಗಳ ನಿಕಟ ಪೂರ್ವಕ್ಕೆ ಸಮವಾಗುವ ಅವಧಿಯಲ್ಲಿ ಹೊಸ ಹೆಸರನ್ನು ಪ್ರತಿಯೋಜಿಸಬಹುದು.

(2) ಲೆಕ್ಕ ಪತ್ರವು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(3) ಸದರಿ ವೆಚ್ಚದ ಒಟ್ಟು ಮೊತ್ತವು ನಿಯಮಿಸಬಹುದಾದಂಥ ಮೊಬಲಗನ್ನು ಮೀರತಕ್ಕದಲ್ಲ.

**78. ಜಿಲ್ಲಾ ಚುನಾವಣಾಧಿಕಾರಿಯ ಬಳಿ ಲೆಕ್ಕಪತ್ರವನ್ನು ದಾಖಲು ಮಾಡುವದು.–**

(1) ಒಂದು ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು ಚುನಾಯಿತ ಅಭ್ಯರ್ಥಿಯ ಆಯ್ಕೆಯ ದಿನಾಂಕದಿಂದ ಅಥವಾ ಆ ಚುನಾವಣೆಯಲ್ಲಿ ಒಬ್ಬರಿಗಿಂತ ಹೆಚ್ಚಿಗೆ ಚುನಾಯಿತ ಅಭ್ಯರ್ಥಿಗಳಿದ್ದರೆ ಮತ್ತು ಅವರ ಆಯ್ಕೆಯ ದಿನಾಂಕಗಳು ಬೇರೆ ಬೇರೆ ಇದ್ದರೆ, ಆ ಎರಡು ದಿನಾಂಕಗಳ ಪೈಕಿ ತರುವಾಯದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅವನ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಜಿಲ್ಲಾ ಚುನಾವಣಾಧಿಕಾರಿಯ ಬಳಿ ದಾಖಲು ಮಾಡತಕ್ಕದ್ದು; ಆ ಲೆಕ್ಕ ಪತ್ರವು 77ನೇ ಪ್ರಕರಣದ ಮೇರೆಗೆ ಅವನು ಅಥವಾ ಅವನ ಚುನಾವಣಾ ಏಜೆಂಟ್‌ನು ಇಟ್ಟಿರುವ ಲೆಕ್ಕಪತ್ರದ ಯಥಾ ಪ್ರತಿಯಾಗಿರತಕ್ಕದ್ದು.

## ಚುನಾವಣೆಗಳನ್ನು ನಡೆಸುವ ನಿಯಮಗಳು, 1961

## ಭಾಗ –VIII

## ಚುನಾವಣಾ ವೆಚ್ಚಗಳು

**86. ಚುನಾವಣಾ ವೆಚ್ಚಗಳ ಲೆಕ್ಕಪತ್ರದ ವಿವರಗಳು.–**

(1) ದಿನನಿತ್ಯವೂ ಪ್ರತಿಯೊಂದು ವೆಚ್ಚದ ಬಾಬಿಗೆ ಸಂಬಂಧಿಸಿದಂತೆ ಪ್ರಕರಣ 77ರ ಚುನಾವಣಾ ವೆಚ್ಚಗಳ ಲೆಕ್ಕವು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ,–

(ಎ) ವೆಚ್ಚವನ್ನು ಭರಿಸಿದ ಅಥವಾ ಅಧಿಕೃತಗೊಳಿಸಿದ ದಿನಾಂಕ;

(ಬಿ) ವೆಚ್ಚದ ಸ್ವರೂಪ (ಉದಾಹರಣೆಗೆ ಪ್ರಯಾಣ, ಅಂಚೆ ವೆಚ್ಚ ಅಥವಾ ಮುದ್ರಣ ಮತ್ತು ಅಂತಹ ಇನ್ನಿತರ ವೆಚ್ಚಗಳು);

(ಸಿ) ವೆಚ್ಚದ ಮೊತ್ತ–

(i) ಸಂದಾಯ ಮಾಡಿದ ಮೊತ್ತ

(ii) ಬಾಕಿ ಉಳಿದಿರುವ ಮೊತ್ತ

(ಡಿ) ಸಂದಾಯ ಮಾಡಿದ ದಿನಾಂಕ;

(ಇ) ಸಂದಾಯ ಮಾಡಿದ ವ್ಯಕ್ತಿಯ ಹೆಸರು ಮತ್ತು ವಿಳಾಸ;

(ಎಫ್) ಹಣವನ್ನು ಸಂದಾಯ ಮಾಡಿದ ಸಂಧರ್ಭದಲ್ಲಿ, ವೋಚರುಗಳ ಕ್ರಮ ಸಂಖ್ಯೆ;

(ಜಿ) ಮೊತ್ತವು ಬಾಕಿ ಇದ್ದ ಸಂದರ್ಭದಲ್ಲಿ, ಭಿಲ್ಲುಗಳು ಯಾವುದಾದರೂ ಇದ್ದರೆ, ಅವುಗಳ ಕ್ರಮಸಂಖ್ಯೆ;

(ಹೆಚ್) ಬಾಕಿ ಇರುವ ಮೊತ್ತವನ್ನು ಯಾರಿಗೆ ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ.

(2) ವೋಚರನ್ನು ಪಡೆಯಲು ಕಾರ್ಯಸಾಧ್ಯವಿಲ್ಲದ, ಎಂದರೆ ಅಂಚೆ, ರೈಲಿನ ಮೂಲಕ ಪ್ರಯಾಣ ಮತ್ತು ಅಂತಹ ಇನ್ನಿತರ ಸಾಂದರ್ಭಿಕ ಸ್ವರೂಪವನ್ನು ಹೊರತುಪಡಿಸಿ, ವೆಚ್ಚ ಮಾಡಿದ ಪ್ರತಿಯೊಂದು ಬಾಬ್ತಿಗೆ ವೋಚರನ್ನು ಪಡೆದುಕೊಳ್ಳತಕ್ಕದ್ದು.

(3) ಎಲ್ಲ ವೋಚರುಗಳನ್ನು, ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಸಂದಾಯ ಮಾಡಿದ ದಿನಾಂಕಕ್ಕೆ ಅನುಸಾರವಾಗಿ ಜೋಡಿಸಿ ಮತ್ತು ಅವುಗಳಿಗೆ ಅನುಕ್ರಮ ಸಂಖ್ಯೆಗಳನ್ನು ನೀಡಿ ಚುನಾವಣಾ ವೆಚ್ಚಗಳ ಲೆಕ್ಕಪತ್ರದ ಸಮೇತ ಸಲ್ಲಿಸತಕ್ಕದ್ದು ಮತ್ತು ಅಂಥ ಅನುಕ್ರಮ ಸಂಖ್ಯೆಗಳನ್ನು (1) ನೇ ಉಪ ಪ್ರಕರಣದ (ಎಫ್) ಬಾಬಿನ ಲೆಕ್ಕದಲ್ಲಿ ನಮೂದಿಸತಕ್ಕದ್ದು.

(2) ಉಪ–ನಿಯಮ(2) ಮೇರೆಗೆ ವೋಚರುಗಳನ್ನು ಪಡೆಯದಿರುವ ವೆಚ್ಚದ ಬಾಬುಗಳ ಸಂಬಂಧದಲ್ಲಿ (1)ನೇ ಉಪ–ನಿಯಮದ (ಇ) ಬಾಭಿನಲ್ಲಿ ನಮೂದಿಸಿದ ವಿವರಗಳನ್ನು ನೀಡುವುದು ಅವಶ್ಯಕವಾಗಿರತಕ್ಕದ್ದಲ್ಲ.

**87. ಲೆಕ್ಕ ಪತ್ರಗಳ ತಪಾಸಣೆಗಾಗಿ ಜಿಲ್ಲಾ ಚುನಾವಣಾ ಅಧಿಕಾರಿಯಿಂದ ನೋಟಿಸ್:–** ಜಿಲ್ಲಾ ಚುನಾವಣಾಧಿಕಾರಿಯು 78ನೇ ಪ್ರಕರಣದ ಅಡಿಯಲ್ಲಿ ಅಭ್ಯರ್ಥಿಯು ಸಲ್ಲಿಸಿದ ಚುನಾವಣೆ ವೆಚ್ಚಗಳ ಲೆಕ್ಕವನ್ನು ಸಲ್ಲಿಸಿದ ದಿನಾಂಕದಿಂದ ಎರಡು ದಿನಗಳ ಒಳಗಾಗಿ,–

(ಎ) ಲೆಕ್ಕಪತ್ರವನ್ನು ಸಲ್ಲಿಸಿದ ದಿನಾಂಕವನ್ನು;

(ಬಿ) ಅಭ್ಯರ್ಥಿಯ ಹೆಸರು; ಮತ್ತು

(ಸಿ) ಅಂಥ ಲೆಕ್ಕಪತ್ರವನ್ನು ತಪಾಸಣೆ ಮಾಡಬಹುದಾದ ಕಾಲ ಮತ್ತು ಸ್ಥಳವನ್ನು

ನಿರ್ದಿಷ್ಟವಾಗಿ ತಿಳಿಸಿದ ನೋಟಿಸನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

**88) ಲೆಕ್ಕಪತ್ರವನ್ನು ಪರಿಶೀಲಿಸುವುದು ಮತ್ತು ಅದರ ಪ್ರತಿಗಳನ್ನು ಪಡೆದುಕೊಳ್ಳುವುದು.–** ಯಾರೇ ವ್ಯಕ್ತಿಯು, ಒಂದು ರೂಪಾಯಿಯ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅಂಥ ಯಾವುದೇ ಲೆಕ್ಕಪತ್ರವನ್ನು ಪರಿಶೀಲಿಸಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಈ ಬಗ್ಗೆ ಚುನಾವಣಾ ಆಯೋಗವು ನಿಗದಿಪಡಿಸಬಹುದಾದಂಥ ಶುಲ್ಕ ಸಂದಾಯ ಮಾಡಿದ ಮೇಲೆ ಅಂಥ ಲೆಕ್ಕಪತ್ರದ ಅಥವಾ ಅದರ ಯಾವುದೇ ಭಾಗದ ದೃಢೀಕೃತ ಪ್ರತಿಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**89) ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸಿದ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಯ ವರದಿ ಮತ್ತು ಅದರ ಮೇಲೆ ಚುನಾವಣಾ ಆಯೋಗದ ನಿರ್ಣಯ.–**

(1) ಯಾವುದೇ ಚುನಾವಣೆಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸುವುದಕ್ಕಾಗಿ 78ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯಗೊಂಡ ನಂತರ ಸಾಧ್ಯವಾದಷ್ಟು ಬೇಗನೇ, [ಜಿಲ್ಲಾ ಚುನಾವಣಾಧಿಕಾರಿಯು],–

(ಎ) ಸ್ಪರ್ಧಿಸುತ್ತಿರುವ ಅಭ್ಯರ್ಥಿಯ ಹೆಸರನ್ನು ;

(ಬಿ) ಅಂಥ ಅಭ್ಯರ್ಥಿಯು ಚುನಾವಣಾ ವೆಚ್ಚಗಳ ತನ್ನ ಲೆಕ್ಕಪತ್ರಗಳನ್ನು ಸಲ್ಲಿಸಿರುವನೇ ಮತ್ತು ಸಲ್ಲಿಸಿದ್ದರೆ ಅಂಥ ಲೆಕ್ಕಪತ್ರವನ್ನು ಸಲ್ಲಿಸಿದ ದಿನಾಂಕವನ್ನು; ಮತ್ತು

(ಸಿ) ಅಂಥ ಲೆಕ್ಕಪತ್ರವನ್ನು ಅಧಿನಿಯಮ ಮತ್ತು ಈ ನಿಯಮಗಳು ಅಗತ್ಯಪಡಿಸಿದ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಸಲ್ಲಿಸಿರುವನೆಂಬುದು ತಮ್ಮ ಅಭಿಪ್ರಾಯವೇ,

–ಎಂಬುದನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು.

(2) ಯಾರೇ ಅಭ್ಯರ್ಥಿಯ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಅಧಿನಿಯಮ ಮತ್ತು ಈ ನಿಯಮಗಳು ಅಗತ್ಯಪಡಿಸಿದ ರೀತಿಯಲ್ಲಿ ಸಲ್ಲಿಸಿಲ್ಲವೆಂದು ಜಿಲ್ಲಾ ಚುನಾವಣಾಧಿಕಾರಿಯು ಅಭಿಪ್ರಾಯಪಟ್ಟಲ್ಲಿ, ಅವರು ಅಂಥ ಪ್ರತಿಯೊಂದು ವರದಿಯೊಂದಿಗೆ ಅಭ್ಯರ್ಥಿಯ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಮತ್ತು ಅದರೊಂದಿಗೆ ಸಲ್ಲಿಸಿದ ವೋಚರುಗಳನ್ನು ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು.

(3) ಉಪ–ನಿಯಮ (1)ರಲ್ಲಿ ಉಲ್ಲೇಖಿಸಿದ ವರದಿಯನ್ನು ಸ್ವೀಕರಿಸಿದ ಕೂಡಲೇ, ಜಿಲ್ಲಾ ಚುನಾವಣಾಧಿಕಾರಿಯು ಅವರ ಸೂಚನಾ ಫಲಕದಲ್ಲಿ ಅದರ ಒಂದು ಪ್ರತಿಯನ್ನು ಪ್ರಕಟಿಸಿತಕ್ಕದ್ದು.

(4) ಉಪ–ನಿಯಮ (1)ರಲ್ಲಿ ಉಲ್ಲೇಖಿಸಿದ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಚುನಾವಣಾ ಆಯೋಗವು ಅದನ್ನು ಪರಿಗಣಿಸತಕ್ಕದ್ದು ಮತ್ತು ಸ್ಪರ್ಧಿಸುತ್ತಿರುವ ಯಾರೇ ಅಭ್ಯರ್ಥಿಯು ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಅಧಿನಿಯಮ ಮತ್ತು ಈ ನಿಯಮಗಳು ಅಗತ್ಯಪಡಿಸಿದ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ ಸಲ್ಲಿಸಲು ವಿಫಲನಾಗಿರುವನೇ ಎಂಬುದನ್ನು ತೀರ್ಮಾನಿಸತಕ್ಕದ್ದು.

(5) ಸ್ಪರ್ಧಿಸುತ್ತಿರುವ ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಅಧಿನಿಯಮ ಮತ್ತು ಈ ನಿಯಮಗಳು ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಸಲ್ಲಿಸಲು ವಿಫಲನಾಗಿದ್ದಾನೆಂದು ಚುನಾವಣಾ ಆಯೋಗವು ತೀರ್ಮಾನಿಸಿದರೆ, ಅದು, ಅಂಥ ವಿಫಲತೆಗಾಗಿ 10ಎ ಪ್ರಕರಣದಡಿ ತಮ್ಮನ್ನು ಏಕೆ ಅನರ್ಹಗೊಳಿಸಬಾರದು ಎಂಬುದಕ್ಕೆ ಕಾರಣ ನೀಡುವಂತೆ ಲಿಖಿತ ನೋಟಿಸಿನ ಮೂಲಕ ಅವನನ್ನು ಕೋರತಕ್ಕದ್ದು.

(6) ಉಪ-ನಿಯಮ (5) ಅಡಿಯಲ್ಲಿ ಕಾರಣ ನೀಡುವಂತೆ ಕೋರಲ್ಪಟ್ಟ ಸ್ಪರ್ಧಿಸುತ್ತಿರುವ ಯಾರೇ ಅಭ್ಯರ್ಥಿಯು, ಅಂಥ ನೋಟಿಸನ್ನು ಸ್ವೀಕರಿಸಿದ 20 ದಿನಗಳ ಒಳಗಾಗಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಲಿಖಿತ ಮನವಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬಹುದು ಮತ್ತು ಅದೇ ಸಮಯಕ್ಕೆ ಆತನ ಮನವಿಯ ಒಂದು ಪ್ರತಿಯನ್ನು ಈಗಾಗಲೇ ಆತನು ಲೆಕ್ಕಪತ್ರವನ್ನು ಸಲ್ಲಿಸದಿದ್ದರೆ, ಆತನ ಚುನಾವಣೆಯ ವೆಚ್ಚಗಳ ಸಂಪೂರ್ಣ ಲೆಕ್ಕಪತ್ರದೊಂದಿಗೆ ಜಿಲ್ಲಾ ಚುನಾವಣಾ ಅಧಿಕಾರಿಗೆ ಕಳುಹಿಸತಕ್ಕದ್ದು.

(7) ಜಿಲ್ಲಾ ಚುನಾವಣಾ ಅಧಿಕಾರಿಯು, ಅದನ್ನು ಸ್ವೀಕರಿಸಿದ 5 ದಿನಗಳ ಒಳಗಾಗಿ, ಆ ಮನವಿಯ ಪ್ರತಿಯನ್ನು ಮತ್ತು ಲೆಕ್ಕಪತ್ರವನ್ನು ಅದರ ಮೇಲೆ ತಾನು ಬರೆಯಲು ಇಚ್ಛಿಸುವ (ಷರಾಗಳೇನಾದರೂ ಇದ್ದರೆ) ಅಂಥ ಷರಾಗಳೊಂದಿಗೆ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು.

(8) ಅಭ್ಯರ್ಥಿಯು ಸಲ್ಲಿಸಿದ ಮನವಿಯನ್ನು ಮತ್ತು ಜಿಲ್ಲಾ ಚುನಾವಣಾಧಿಕಾರಿಯು ಷರಾಗಳನ್ನು ಚುನಾವಣಾ ಆಯೋಗವು ಪರಿಶೀಲಿಸಿದ ತರುವಾಯ ಮತ್ತು ಅದು ಸೂಕ್ತವೆಂದು ಯೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, ಅಭ್ಯರ್ಥಿಯು ತನ್ನ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲವಾಗಿರುವುದಕ್ಕೆ ಯಾವುದೇ ಸಕಾರಣ ಅಥವಾ ಸಮರ್ಥನೆ ಇಲ್ಲವೆಂದು ಆಯೋಗಕ್ಕೆ ಮನವರಿಕೆಯಾದರೆ ಅದು, ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ 10ಎ ಪ್ರಕರಣದ ಮೇರೆಗೆ ಆತನನ್ನು ಅನರ್ಹಗೊಳಿಸಲಾಗಿದೆಯೆಂದು ಘೋಷಿಸತಕ್ಕದ್ದು ಮತ್ತು ಆದೇಶವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾಗುವಂತೆ ಮಾಡತಕ್ಕದ್ದು.

## ಪರಿಶಿಷ್ಟ–39

### (ಅಧ್ಯಾಯ–19, ಪ್ಯಾರಾ–19.6.1)

### ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34ನೇ ಪ್ರಕರಣದ ಮೇರೆಗೆ ಠೇವಣಿ ಮರುಪಾವತಿ ಮಾಡುವುದಕ್ಕೆ ಅರ್ಜಿ

### (ಅಭ್ಯರ್ಥಿ)

**ಇಂದ:**

ಹೆಸರು -------------------

ವಿಳಾಸ ------------------

**ಇವರಿಗೆ**

ರಿಟರ್ನಿಂಗ್ ಅಧಿಕಾರಿಗಳು,

---------- ಸಂಸದೀಯ/ವಿಧಾನಸಭಾ ಕ್ಷೇತ್ರ

**ಮಾನ್ಯರೇ,**

**ವಿಷಯ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 158ನೇ ಪ್ರಕರಣದ ಮೇರೆಗೆ ಠೇವಣಿಯನ್ನು ಮರುಪಾವತಿ ಮಾಡುವ ಬಗ್ಗೆ.**

-----

1. ನಾನು -------------- ಚುನಾವಣಾ ಕ್ಷೇತ್ರದಿಂದ ----------- ಚುನಾವಣೆಗೆ ಅಭ್ಯರ್ಥಿಯಾಗಿದ್ದೆನು.
2. ನಾನು, --------- ದಿನಾಂಕದಂದು ------------ ಖಜಾನೆಯ ರಸೀದಿ ಸಂಖ್ಯೆಯಲ್ಲಿ --------- ಚುನಾವಣೆಗೆ -------------------- ರೂ.ಗಳನ್ನು ಠೇವಣಿ ಮಾಡಿದ್ದೇನು.
3. ನನ್ನ ನಾಮಪತ್ರವು ರಿಟರ್ನಿಂಗ್ ಅಧಿಕಾರಿಯ ಮೂಲಕ ----------- * ಅಂಗೀಕೃತವಾಗಿತ್ತು/ತಿರಸ್ಕೃತವಾಗಿತ್ತು.
4. ----------- ನಾನು ಸಕಾಲದಲ್ಲಿ ನನ್ನ ಅಭ್ಯರ್ಥಿಕೆಯನ್ನು ಹಿಂಪಡೆದುಕೊಂಡಿದ್ದೇನೆ / ಹಿಂಪಡೆದುಕೊಂಡಿರುವುದಿಲ್ಲ.
5. -------- ಆದ ನಾನು* ಚುನಾವಣೆಯಲ್ಲಿ ಮತದಾನಗೊಂಡ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯಲ್ಲಿನ ಆರನೇ ಒಂದು ಭಾಗಕ್ಕಿಂತಲೂ* ಹೆಚ್ಚು--------- ಮತಗಳನ್ನು ಗಳಿಸಿ ಆಯ್ಕೆಯಾಗಿದ್ದೇನೆ ಮತ್ತು ಸಿಂಧುವಾದ ಮತಗಳನ್ನು ಗಳಿಸಿಲ್ಲದಿರುವುದರಿಂದ* ಆಯ್ಕೆಯಾಗಿರುವುದಿಲ್ಲ.

6ಎ. ನಾನು ಯಾವುದೇ ಇತರ ಚುನಾವಣಾ ಕ್ಷೇತ್ರದಿಂದ ಸಾರ್ವತ್ರಿಕ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದಿಲ್ಲ.

6ಬಿ. (ಎ) ನಾನು,

(i) ---------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ

(ii) --------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ

(iii)--------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ ಕೂಡ

- ಸಾರ್ವತ್ರಿಕ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ.

(ಬಿ) ನಾನು, ಈ ಯಾವುದೇ ಇತರೆ ಚುನಾವಣಾ ಕ್ಷೇತ್ರಗಳಲ್ಲಿ ನನ್ನ ಠೇವಣಿಯ ಮರುಪಾವತಿಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಈ ಇತರೆ ಚುನಾವಣೆ ಕ್ಷೇತ್ರಗಳಲ್ಲಿನ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.

7. 2ನೇ ಪ್ಯಾರಾದಲ್ಲಿ ಉಲ್ಲೇಖಿಸಿರುವ ಠೇವಣಿ ಮೊತ್ತವನ್ನು ನನಗೆ ಮರುಪಾವತಿ ಮಾಡಬೇಕೆಂದು ಕೋರುತ್ತೇನೆ.

8. ಈ ಅರ್ಜಿಯಲ್ಲಿನ ಎಲ್ಲಾ ವಿವರಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಸತ್ಯವಾದವುಗಳೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ: ----------

ದಿನಾಂಕ:-----------

(ಅಭ್ಯರ್ಥಿಯ ಸಹಿ)

---

* ನಿಮಗೆ ಅನ್ವಯವಾಗದಿರುವ ಪದಗಳನ್ನು [] ಬಿಟ್ಟುಬಿಡಿ/ಅಡ್ಡ ಗೆರೆ ಎಳೆಯುವ ಮೂಲಕ ಹೊಡೆದುಹಾಕಿ.

**ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34ನೇ ಪ್ರಕರಣದ ಮೇರೆಗೆ ಠೇವಣಿ ಮರುಪಾವತಿ ಮಾಡುವುದಕ್ಕೆ ಅರ್ಜಿ**

**(ಅಭ್ಯರ್ಥಿಯಲ್ಲದ ಠೇವಣಿದಾರ)**

**ಇಂದ:**

ಹೆಸರು ---------------------

ವಿಳಾಸ --------------------

**ಇವರಿಗೆ**

ರಿಟರ್ನಿಂಗ್ ಅಧಿಕಾರಿ --------ಮತಕ್ಷೇತ್ರ

**ಮಾನ್ಯರೇ,**

**ವಿಷಯ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 158ನೇ ಪ್ರಕರಣದ ಮೇರೆಗೆ ಠೇವಣಿಯನ್ನು ಮರುಪಾವತಿ ಮಾಡುವ ಬಗ್ಗೆ.**

---

1. ನಾನು, ---------------- (ಅಭ್ಯರ್ಥಿಯ ಹೆಸರು) -------- ಚುನಾವಣಾ ಕ್ಷೇತ್ರದಿಂದ --------------- ಚುನಾವಣೆಗೆ ಅಭ್ಯರ್ಥಿಯಾಗಿದ್ದೆನು.
2. ಸದರಿ ಅಭ್ಯರ್ಥಿಯ ಪರವಾಗಿ ನಾನು, -------------ದಿನಾಂಕದಂದು ಖಜಾನೆಯ ರಸೀದಿ ಸಂಖ್ಯೆ: ----------ರಲ್ಲಿ ------------ ಚುನಾವಣೆಗೆ --------ರೂ.ಗಳನ್ನು ಠೇವಣಿ ಮಾಡಿದ್ದೇನೆ.
3. ಆತನ ನಾಮಪತ್ರವು ------------ ರಿಟರ್ನಿಂಗ್ ಅಧಿಕಾರಿಯ ಮೂಲಕ* ಅಂಗೀಕೃತವಾಗಿತ್ತು/ತಿರಸ್ಕೃತವಾಗಿತ್ತು.
4. ------------ ಅವರು ಸಕಾಲದಲ್ಲಿ ತನ್ನ ಅಭ್ಯರ್ಥಿಕೆಯನ್ನು ಹಿಂತೆಗೆದುಕೊಂಡಿದ್ದರು/ ಹಿಂತೆಗೆದುಕೊಂಡಿರುವುದಿಲ್ಲ .
5. -------------* ಅವರು ಚುನಾವಣೆಯಲ್ಲಿ ಮತದಾನವಾದ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯಲ್ಲಿನ ಆರನೇ ಒಂದು ಭಾಗಕ್ಕಿಂತ ಹೆಚ್ಚು ಮತಗಳನ್ನು ಗಳಿಸಿ ಆಯ್ಕೆಯಾಗಿರಲಿಲ್ಲ ಮತ್ತು * ಚುನಾವಣೆಯಲ್ಲಿ ಮತದಾನವಾದ ಸಿಂಧುವಾದ ಮತಗಳಿಂದ ಬಹುಮತವನ್ನು ಗಳಿಸಿರುವುದಿಲ್ಲ.
6. ಅವರು ಇತರ ಯಾವುದೇ ಚುನಾವಣಾ ಕ್ಷೇತ್ರದಿಂದ ಸಾರ್ವತ್ರಿಕ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದಿಲ್ಲ.

ಅಥವಾ

6\. (ಎ) ----------- ಅವರು,

(i) ----------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ

(ii) ---------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ

(iii)---------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ ಕೂಡ

- ಸಾರ್ವತ್ರಿಕ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.
-

(ಬಿ) ಈ ಮೇಲಿನ ಯಾವುದೇ ಇತರೆ ಚುನಾವಣಾ ಕ್ಷೇತ್ರಗಳಿಗೆ ಸಂಬಂಧಿಸಿ ಮಾಡಿದ ಠೇವಣಿ ಮೊತ್ತವನ್ನು ಮರುಪಾವತಿಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಈ ಇತರೆ ಚುನಾವಣೆ ಕ್ಷೇತ್ರಗಳಲ್ಲಿನ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.

7. 2ನೇ ಪ್ಯಾರಾದಲ್ಲಿ ಉಲ್ಲೇಖಿಸಿರುವ ಠೇವಣಿ ಮೊತ್ತವನ್ನು ನನಗೆ ಮರುಪಾವತಿ ಮಾಡಬಹುದೆಂದು ಕೋರುತ್ತೇನೆ.

8. ಈ ಅರ್ಜಿಯಲ್ಲಿನ ಎಲ್ಲಾ ವಿವರಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ----------
ದಿನಾಂಕ:----------- (ಅರ್ಜಿದಾರನ ಸಹಿ)

--------- ಚುನಾವಣಾ ಕ್ಷೇತ್ರದಿಂದ ---- ಚುನಾವಣೆಗೆ ಈ ಮೇಲೆ ನಮೂದಿಸಿದ------------- ಅಭ್ಯರ್ಥಿ ಆದ ನಾನು, ಈ ಅರ್ಜಿಯ ಪ್ಯಾರಾ 2ರಿಂದ 6ರವರೆಗೆ ಒಳಗೊಂಡಿರುವ ಆ ಎಲ್ಲಾ ವಿವರಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ:----------
ದಿನಾಂಕ:----------- (ಅಭ್ಯರ್ಥಿಯ ಸಹಿ)

---

* ನಿಮಗೆ ಸಂಬಂಧಪಡದಿರುವ ವಿಷಯವನ್ನು () ಭಾಗದೊಳಗೆ ಅಡ್ಡಗೆರೆ ಹಾಕಿ ಹೊಡೆದುಹಾಕಿ.

**ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 34ನೇ ಪ್ರಕರಣದ ಮೇರೆಗೆ ಠೇವಣಿ ಮರುಪಾವತಿ ಮಾಡುವುದಕ್ಕಾಗಿ ಅರ್ಜಿ**
**(ಅಭ್ಯರ್ಥಿಯ ಕಾನೂನು ಸಮ್ಮತ ಪ್ರತಿನಿಧಿ)**

**ಇಂದ:**

ಹೆಸರು ------------------

ವಿಳಾಸ -----------------

**ಇವರಿಗೆ**

ರಿಟರ್ನಿಂಗ್ ಅಧಿಕಾರಿಗಳು --------- ಮತಕ್ಷೇತ್ರ

-------------------------

**ಮಾನ್ಯರೇ,**

**ವಿಷಯ: ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 158ನೇ ಪ್ರಕರಣದ ಮೇರೆಗೆ ಠೇವಣಿಯನ್ನು ಮರುಪಾವತಿ ಮಾಡುವ ಬಗ್ಗೆ.**

-----

1. ದಿವಂಗತ ಶ್ರೀ-------------- (ಅಭ್ಯರ್ಥಿಯ ಹೆಸರು) ------ಚುನಾವಣಾ ಕ್ಷೇತ್ರದಿಂದ ---------- ಚುನಾವಣೆಗೆ ಅಭ್ಯರ್ಥಿಯಾಗಿದ್ದರು. ಅವರು ---------------ರಂದು ಮೃತನಾಗಿದ್ದು, ನಾನು ಅವರ ಕಾನೂನು ಸಮ್ಮತ ಪ್ರತಿನಿಧಿಯಾಗಿದ್ದೇನೆ.
2. ---------- ಅವರು, ------------ದಿನಾಂಕದಂದು ಖಜಾನೆ ರಸೀದಿ ಸಂಖ್ಯೆ: ------- --ರಲ್ಲಿ ---------- ಚುನಾವಣೆಗೆ ------------------ ರೂ.ಗಳನ್ನು ಠೇವಣಿ ಮಾಡಿರುತ್ತಾರೆ.
3. ---------- ಅವರ ನಾಮಪತ್ರವು ----------* ರಿಟರ್ನಿಂಗ್ ಅಧಿಕಾರಿಯ ಮೂಲಕ ಅಂಗೀಕೃತವಾಗಿದೆ/ತಿರಸ್ಕೃತವಾಗಿದೆ.
4. ---------- ಅವರು ಸಕಾಲದಲ್ಲಿ * ಆತನ ಅಭ್ಯರ್ಥಿಕೆಯನ್ನು ಹಿಂತೆಗೆದುಕೊಂಡಿದ್ದಾರೆ/ ಹಿಂತೆಗೆದುಕೊಂಡಿರುವುದಿಲ್ಲ.
5. ---------- ಅವರು ಚುನಾವಣೆಯಲ್ಲಿ ಮತದಾನವಾದ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯಲ್ಲಿನ ಆರನೇ ಒಂದು ಭಾಗಕ್ಕಿಂತಲೂ *ಹೆಚ್ಚು ಮತಗಳನ್ನು ಗಳಿಸಿ* ಆಯ್ಕೆಯಾಗಿದ್ದಾರೆ ಮತ್ತು ಆಯ್ಕೆಯಾಗಿರುವುದಿಲ್ಲ.
6. ---------- ಅವರು ಇತರ ಯಾವುದೇ ಚುನಾವಣಾ ಕ್ಷೇತ್ರದಿಂದ ಸಾರ್ವತ್ರಿಕ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದಿಲ್ಲ.

ಅಥವಾ

6. (ಎ) ---------- ಅವರು,

(i) --------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ

(ii) -------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ

(iii)-------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ ಕೂಡ

\- ಸಾರ್ವತ್ರಿಕ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

(ಬಿ) ----------- ಅವರು, ಈ ಮೇಲಿನ ಯಾವುದೇ ಇತರೆ ಚುನಾವಣಾ ಕ್ಷೇತ್ರಗಳಲ್ಲಿನ ಠೇವಣಿ ಹಣದ ಮರುಪಾವತಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ಇತರೆ ಚುನಾವಣೆ ಕ್ಷೇತ್ರಗಳಲ್ಲಿನ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.

7. 2ನೇ ಪ್ಯಾರಾದಲ್ಲಿ ಉಲ್ಲೇಸಿಖಿರುವ, ಠೇವಣಿ ಮೊತ್ತವನ್ನು ನನಗೆ ಮರುಪಾವತಿ ಮಾಡಬೇಕೆಂದು ಕೋರುತ್ತೇನೆ.

8. ಈ ಅರ್ಜಿಯಲ್ಲಿನ ಎಲ್ಲಾ ವಿವರಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ----------

ದಿನಾಂಕ:-----------

(ಅರ್ಜಿದಾರನ ಸಹಿ)

---

*** ನಿಮಗೆ ಸಂಬಂಧಪಡದ ವಿಷಯಗಳನ್ನು () ಅಡ್ಡಗೆರೆ ಮೂಲಕ ಹೊಡೆದುಹಾಕಿ.**

## ಪರಿಶಿಷ್ಟ –40
## (ಅಧ್ಯಾಯ–11, ಪ್ಯಾರಾ 11.1.1)
## ಚುನಾವಣೆ ನಡೆಸುವ ನಿಯಮಗಳು, 1961 ರ ಉದ್ಧೃತ ಭಾಗಗಳು

**ಅಂಚೆ ಮತದಾನ**

**17. ಪರಿಭಾಷೆಗಳು**: – ಈ ಭಾಗದಲ್ಲಿ,–

(ಎ) **"ಸೇವಾಮತದಾರ"** ಎಂದರೆ, 60ನೇ ಪ್ರಕರಣದ (ಎ)ಖಂಡ ಅಥವಾ (ಭಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಯಾರೇ ವ್ಯಕ್ತಿ, ಆದರೆ ಇದು 27ಎಂ ನಿಯಮದ ಮೇರೆಗೆ ಪರಿಭಾಷಿಸಲಾದ **"**ವರ್ಗೀಕೃತ ಸೇವಾ ಮತದಾರ**"** ನನ್ನು ಒಳಗೊಳ್ಳುವುದಿಲ್ಲ;

(ಬಿ) **"**ವಿಶೇಷ ಮತದಾರ**"** ಎಂದರೆ, ಜನತಾಪ್ರಾತಿನಿಧ್ಯ ಅಧಿನಿಯಮ, 1950ರ 43(4) ನೇ ಉಪ–ಪ್ರಕರಣದ ಉಪಬಂಧಗಳು ಅನ್ವಯಿಸುವ ಹುದ್ದೆಯನ್ನು ಹೊಂದಿರುವ ಸದರಿ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಹೇಳಿಕೆ ಅಂಥ ಯಾರೇ ವ್ಯಕ್ತಿ ಅಥವಾ ಅಂಥ ವ್ಯಕ್ತಿಯ ಪತ್ನಿಯು ನೀಡಿದ ಕಾರಣದಿಂದ ಮತದಾರನೆಂದು ಆತ/ ಆಕೆ ನೋಂದಾಯಿತರಾಗಿದ್ದರೆ; ಮತ್ತು

(ಸಿ) **"**ಚುನಾವಣಾ ಕರ್ತವ್ಯನಿರತ ಮತದಾರ**"** ಎಂದರೆ, ಮತಕ್ಷೇತ್ರದಲ್ಲಿ ಮತದಾರನಾಗಿರುವ ಮತ್ತು ಅವನು ಚುನಾವಣಾ ಕರ್ತವ್ಯದಲ್ಲಿ ನಿರತನಾಗಿರುವ ಕಾರಣದಿಂದಾಗಿ, ಅವನು ಮತದಾನ ಮಾಡಲು ಹಕ್ಕುಳ್ಳ ಮತಗಟ್ಟೆಯಲ್ಲಿ ಮತ ಚಲಾಯಿಸಲು ಸಾಧ್ಯವಿಲ್ಲದಿರುವ ಯಾರೇ ಚುನಾವಣಾ ಏಜೆಂಟ್, ಯಾರೇ ಪೋಲಿಂಗ್ ಅಧಿಕಾರಿ, ಪ್ರಿಸೈಡಿಂಗ್ ಅಧಿಕಾರಿ ಅಥವಾ ಇತರ ಸಾರ್ವಜನಿಕ ಸೇವಕ

**18. ಅಂಚೆ ಮೂಲಕ ಮತದಾನ ಮಾಡುವ ಹಕ್ಕುಳ್ಳ ವ್ಯಕ್ತಿಗಳು.–** ಈ ಮುಂದಿನ ವ್ಯಕ್ತಿಗಳು, ಇಲ್ಲಿ ಇನ್ನುಮುಂದೆನಿರ್ದಿಷ್ಟಪಡಿಸಲಾದ ಅಗತ್ಯತೆಗಳನ್ನುಈಡೇರಿಸುವುದಕ್ಕೆ ಒಳಪಟ್ಟು, ಅಂಚೆಮೂಲಕಮತದಾನಮಾಡಲುಹಕ್ಕುಳ್ಳವರಾಗಿರತಕ್ಕದ್ದು, ಎಂದರೆ.–

(ಎ) ಲೋಕಸಭೆ ಅಥವಾ ವಿಧಾನಸಭೆ ಮತಕ್ಷೇತ್ರದಲ್ಲಿನ ಚುನಾವಣೆಯಲ್ಲಿ –

- (i) ವಿಶೇಷ ಮತದಾರರು;
- (ii) ಸೇವಾ ಮತದಾರರು;
- (iii) ಚುನಾವಣಾ ಕರ್ತವ್ಯನಿರತ ಮತದಾರರು; ಮತ್ತು
- (iv) ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ಮತದಾರರು.

(ಬಿ) ಪರಿಷತ್ತಿನ ಮತ ಕ್ಷೇತ್ರದ ಚುನಾವಣೆಯಲ್ಲಿ –

- (i) ಚುನಾವಣಾ ಕರ್ತವ್ಯ ನಿರತ ಮತದಾರರು;
- (ii) ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ಮತದಾರರು;
- (iii) ನಿಯಮ 68ರ (ಬಿ) ಖಂಡದಡಿಯಲ್ಲಿ, ಈ ಬಗ್ಗೆ ಚುನಾವಣಾ ಆಯೋಗವು ನಿರ್ದೇಶಿಸಿದ್ದರೆ, ಮತಕ್ಷೇತ್ರದ ಎಲ್ಲಾ ಭಾಗದ ಅಥವಾ ಯಾವುದೇ ನಿರ್ದಿಷ್ಟಪಡಿಸಲಾದ ಭಾಗಗಳಲ್ಲಿನ ಮತದಾರರು.

(ಸಿ) ವಿಧಾನಸಭಾ ಸದಸ್ಯರ ಚುನಾವಣೆಯಲ್ಲಿ –

(i) ಪ್ರತಿಬಂಧಕ ಸ್ಥಾನ ಬದ್ಧತೆಗೆ ಒಳಪಟ್ಟಿರುವ ಮತದಾರರು; ಮತ್ತು
(ii) 68ನೇ ನಿಯಮದ (ಎ) ಖಂಡದ ಮೇರೆಗೆ ಚುನಾವಣಾ ಆಯೋಗವು ಈ ಬಗ್ಗೆ ನಿರ್ದೇಶಿಸಿದ್ದರೆ, ಎಲ್ಲಾ ಮತದಾರರು.

**19**. **ವಿಶೇಷ ಮತದಾರರಿಂದ ಸೂಚನೆ.–** ಒಂದು ಚುನಾವಣೆಯಲ್ಲಿ ಅಂಚೆಯ ಮೂಲಕ ಮತದಾನ ಮಾಡಲು ಇಚ್ಛಿಸುವ ವಿಶೇಷ ಮತದಾರನು, ಮತದಾನದ ದಿನಾಂಕಕ್ಕಿಂತ ಮುಂಚೆ ಕಡೆಪಕ್ಷ ಹತ್ತು ದಿನಗಳ ಮೊದಲು ರಿಟರ್ನಿಂಗ್ ಅಧಿಕಾರಿಗೆ ತಲುಪುವಂತೆ ನಮೂನೆ 12 ರಲ್ಲಿ ಸೂಚನೆಯನ್ನು ಕಳುಹಿಸತಕ್ಕದ್ದು ; ಮತ್ತು ಸೂಚನೆಯನ್ನು ಸ್ವೀಕರಿಸಿದ ನಂತರ, ರಿಟರ್ನಿಂಗ್ ಅಧಿಕಾರಿಯು ಅವನಿಗೆ ಅಂಚೆ ಮತಪತ್ರವನ್ನು ನೀಡತಕ್ಕದ್ದು.

**20**. **ಚುನಾವಣಾ ಕರ್ತವ್ಯದ ಮೇಲಿರುವ ಮತದಾರರಿಂದ ಸೂಚನೆ.–** [(1)] ಚುನಾವಣಾ ಕರ್ತವ್ಯ ನಿರತನಾದ ಒಬ್ಬ ಮತದಾರನು, ಚುನಾವಣೆಯಲ್ಲಿ ಅಂಚೆ ಮೂಲಕ ಮತ ನೀಡಲು ಬಯಸಿದರೆ, ಆತನು ನಮೂನೆ–12ರಲ್ಲಿ ಒಂದು ಅರ್ಜಿಯನ್ನು, ಮತದಾನ ದಿನಾಂಕಕ್ಕೆ ಕನಿಷ್ಠ ಪಕ್ಷ ಏಳು ದಿನಗಳ ಒಳಗೆ ಅಥವಾ ರಿಟರ್ನಿಂಗ್ ಅಧಿಕಾರಿಯು ಅನುಮತಿಸಬಹುದಾದ ಕಡಿಮೆ ಅವಧಿಯ ಒಳಗೆ ರಿಟರ್ನಿಂಗ್ ಅಧಿಕಾರಿಗೆ ತಲುಪುವಂತೆ ಕಳುಹಿಸಿಕೊಡತಕ್ಕದ್ದು; ಮತ್ತು ಅರ್ಜಿದಾರನು ಚುನಾವಣಾ ಕರ್ತವ್ಯ ನಿರತನಾದ ಮತದಾರನೆಂದು ಮನದಟ್ಟಾದರೆ ರಿಟರ್ನಿಂಗ್ ಅಧಿಕಾರಿಯ ಆತನಿಗೆ ಅಂಚೆ ಮತಪತ್ರವನ್ನು ನೀಡತಕ್ಕದ್ದು.

**(2)** ಅಂಥ ಮತದಾರನು, ಯಾವ ಮತ ಕ್ಷೇತ್ರದಲ್ಲಿ ಆತನು ಮತದಾರನಾಗಿರುವನೋ ಅಲ್ಲಿಯೇ ಚುನಾವಣಾ ಕರ್ತವ್ಯದ ಮೇಲಿರುವ ಪೋಲಿಂಗ್ ಅಧಿಕಾರಿ, ಪ್ರಿಸೈಡಿಂಗ್ ಅಧಿಕಾರಿ ಅಥವಾ ಇತರ ಸರ್ಕಾರಿ ನೌಕರನಾಗಿದ್ದರೆ, ಆತನು (ಲೋಕಸಭಾ ಅಥವಾ ವಿಧಾನಸಭಾ ಚುನಾವಣೆಯಲ್ಲಿ) ಅಂಚೆ ಮೂಲಕವಲ್ಲದೆ ಖುದ್ದಾಗಿ ಮತ ನೀಡಬಯಸಿದರೆ, ಆತನು ನಮೂನೆ–12ರಲ್ಲಿ ಒಂದು ಅರ್ಜಿಯನ್ನು ರಿಟರ್ನಿಂಗ್ ಅಧಿಕಾರಿಗೆ, ಮತದಾನದ ದಿನಾಂಕಕ್ಕೆ ಕನಿಷ್ಠಪಕ್ಷ ನಾಲ್ಕು ದಿನ ಮುಂಚೆ ಅಥವಾ ರಿಟರ್ನಿಂಗ್ ಅಧಿಕಾರಿಯು ಅನುಮತಿಸಬಹುದಾದಂಥ ಕಡಿಮೆ ಅವಧಿಯೊಳಗೆ ತಲುಪುವಂತೆ ಕಳುಹಿಸಿಕೊಡತಕ್ಕದ್ದು; ಮತ್ತು ಆ ಅರ್ಜಿದಾರನು ಅಂಥ ಸರ್ಕಾರಿ ನೌಕರನಾಗಿರುವನೆಂದು ಮತ್ತು ಮತಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯದ ಮೇಲಿನ ಮತದಾರನಾಗಿರುವನೆಂದು ಆ ರಿಟರ್ನಿಂಗ್ ಅಧಿಕಾರಿಗೆ ಮನದಟ್ಟಾದರೆ, ಆತನು:–

(ಎ) 12ಬಿ ನಮೂನೆಯಲ್ಲಿ ಅರ್ಜಿದಾರನಿಗೆ ಚುನಾವಣಾ ಕರ್ತವ್ಯ ಪ್ರಮಾಣಪತ್ರವನ್ನು ನೀಡತಕ್ಕದ್ದು;
(ಬಿ) ಆತನಿಗೆ ಚುನಾವಣಾ ಕರ್ತವ್ಯನಿರತ ಪ್ರಮಾಣಪತ್ರವನ್ನು ನೀಡಿರುವುದರ ಸೂಚಕವಾಗಿ ಮತದಾರರ ಪಟ್ಟಿಯ ಮಾರ್ಕ್‌ಡ್ ಕಾಪಿಯಲ್ಲಿರುವ ಆತನ ಹೆಸರಿನ ಮುಂದೆ ಇಡಿಸಿ ಎಂದು ಗುರುತು ಮಾಡತಕ್ಕದ್ದು.
(ಸಿ) ಆತನು ಮತ ಚಲಾಯಿಸಲು ಹಕ್ಕುಳ್ಳ ಮತಗಟ್ಟೆಯಲ್ಲಿ ಮತ ಚಲಾಯಿಸಲು ಆತನಿಗೆ ಅವಕಾಶ ನೀಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**21**. **ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ಮತದಾರರು:–** (1) ಸಮುಚಿತ ಸರ್ಕಾರವು ಚುನಾವಣೆಯನ್ನು ಪ್ರಕಟಗೊಳಿಸಿದ 15 ದಿನಗಳೊಳಗೆ, ರಿಟರ್ನಿಂಗ್ ಅಧಿಕಾರಿಗೆ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ಮತದಾರು ಯಾರಾದರು ಇದ್ದರೆ ಅವರ ಹೆಸರುಗಳನ್ನು ವಿಳಾಸಗಳು

ಮತ್ತು ಮತದಾರರ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳು ಮತ್ತು ಅವರನ್ನು ಸ್ಥಾನಬದ್ಧತೆಯಲ್ಲಿಟ್ಟಿರುವ ಸ್ಥಳಗಳ ಬಗ್ಗೆ ವಿವರಗಳನ್ನು ಕಂಡುಹಿಡಿದು ತಿಳಿಸಬೇಕು.

20. (2) ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ಯಾರೇ ಮತದಾರರನು ಚುನಾವಣೆಯನ್ನು ಪ್ರಕಟಗೊಳಿಸಿದ 15 ದಿನಗಳೊಳಗಾಗಿ ರಿಟರ್ನಿಂಗ್ ಅಧಿಕಾರಿಗೆ ತಾನು ಅಂಚೆ ಮೂಲಕ ಮತ ಚಲಾಯಿಸಲು ಇಚ್ಛಿಸುವುದಾಗಿ, ತನ್ನ ಹೆಸರು, ವಿಳಾಸ, ಮತದಾರರ ಪಟ್ಟಿಯಲ್ಲಿನ ಕ್ರಮಸಂಖ್ಯೆ ಮತ್ತು ಸ್ಥಾನಬದ್ಧತೆಯಲ್ಲಿಟ್ಟಿರುವ ಸ್ಥಳಗಳನ್ನು ನಿರ್ದಿಷ್ಟವಾಗಿ ತಿಳಿಸಿ ಒಂದು ಸೂಚನೆಯನ್ನು ಕಳುಹಿಸತಕ್ಕದ್ದು.

21. (3) ರಿಟರ್ನಿಂಗ್ ಅಧಿಕಾರಿಯು, ಉಪ–ನಿಯಮ (1) ಅಥವಾ ಉಪ–ನಿಯಮ (2)ದ ಮೇರೆಗೆ ಆತನಿಗೆ ತಿಳಿಸಿದ ಹೆಸರಿನ ವ್ಯಕ್ತಿಗೆ, ಅಂದರೆ ಪ್ರತಿಬಂಧಕ ಸ್ಥಾನಬದ್ಧತೆಗೊಳಪಟ್ಟಿರುವ ಪ್ರತಿಯೊಬ್ಬ ಮತದಾರನಿಗೆ ಅಂಚೆ ಮತಪತ್ರವನ್ನು ನೀಡತಕ್ಕದ್ದು.

**22. ಮತಪತ್ರದ ನಮೂನೆ**

(1) ಪ್ರತಿಯೊಂದು ಅಂಚೆ ಮತಪತ್ರವು ಅದಕ್ಕೆ ಲಗತ್ತಿಸಿರುವ ಒಂದು ಕೌಂಟರ್ ಫೈಲ್‌ನ್ನು ಹೊಂದಿರಬೇಕು ಮತ್ತು ಸದರಿ ಮತಪತ್ರ ಮತ್ತು ಕೌಂಟರ್‌ಫೈಲ್ ಇವು, ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ಅಂಥ ನಮೂನೆಯಲ್ಲಿರತಕ್ಕದ್ದು, ಮತ್ತು ಅದರಲ್ಲಿರುವ ವಿವರಗಳು ಅಂಥ ಭಾಷೆ ಅಥವಾ ಭಾಷೆಗಳಲ್ಲಿರತಕ್ಕದ್ದು.

(2) ಅಂಚೆ ಮತಪತ್ರದ ಮೇಲೆ ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಅವರ ಹೆಸರು ಕಂಡು ಬರುವಂತಹ ಕ್ರಮದಲ್ಲಿ ಜೋಡಿಕೆಯಾಗಿರತಕ್ಕದ್ದು.

(3) ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಒಂದೇ ಹೆಸರನ್ನು ಹೊಂದಿದ್ದರೇ, ಅವರುಗಳ ವೃತ್ತಿ ಅಥವಾ ವಸತಿ ಸ್ಥಳವನ್ನು ಸೇರಿಸುವುದರಿಂದ ಅಥವಾ ಇತರ ಯಾವುದೇ ರೀತಿಯಲ್ಲಿ ಅವರನ್ನು ಪ್ರತ್ಯೇಕಿಸಬೇಕು.

**23. ಮತಪತ್ರ ನೀಡಿಕೆ.**

(1) ಮತದಾರನಿಗೆ ಅಂಚೆ ಮತಪತ್ರವನ್ನು ಅಂಚೆ ಪ್ರಮಾಣ ಪತ್ರದ ಅಡಿಯಲ್ಲಿ ಅಂಚೆ ಮೂಲಕ ಈ ಮುಂದಿನವುಗಳೊಂದಿಗೆ ಎಂದರೆ:–

(ಎ) 13ಎ ನಮೂನೆಯಲ್ಲಿ ಘೋಷಣೆ;

(ಬಿ) 13ಬಿ ನಮೂನೆಯಲ್ಲಿ ಲಕೋಟೆ;

(ಸಿ) 13ಸಿ ನಮೂನೆಯಲ್ಲಿ ರಿಟರ್ನಿಂಗ್ ಅಧಿಕಾರಿಯ ವಿಳಾಸ ಬರೆದ ದೊಡ್ಡ ಲಕೋಟೆ; ಮತ್ತು

(ಡಿ) 13ಡಿ ನಮೂನೆಯಲ್ಲಿಮತದಾರರ ಮಾರ್ಗದರ್ಶನಕ್ಕಾಗಿ ಸೂಚನೆಗಳು

– ಇವುಗಳೊಂದಿಗೆ ಕಳುಹಿಸತಕ್ಕದ್ದು.

ಪರಂತು, ರಿಟರ್ನಿಂಗ್ ಅಧಿಕಾರಿಯು ವಿಶೇಷ ಮತದಾರ ಅಥವಾ ಚುನಾವಣಾ ಕರ್ತವ್ಯದ ಮೇಲಿರುವ ಮತದಾರ ಸಂದರ್ಭದಲ್ಲಿ, ಅಂಥ ಮತದಾರನಿಗೆ ಖುದ್ದಾಗಿ ಮತಪತ್ರ ಮತ್ತು ನಮೂನೆಗಳನ್ನು ತಲುಪಿಸತಕ್ಕದ್ದು ಅಥವಾ ಅವುಗಳನ್ನು ತಲುಪುವಂತೆ ನೋಡಿಕೊಳ್ಳತಕ್ಕದ್ದು.

ಮತ್ತೂ ಪರಂತು, ನಿಯಮ 18ರ ಖಂಡ (ಎ)ಯ ಉಪಖಂಡ (ii)ರಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಗಳಿಗಾಗಿ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂತಹ ವಿದ್ಯುನ್ಮಾನ ವಿಧಾನಗಳ ಮೂಲಕ ರಿಟರ್ನಿಂಗ್ ಅಧಿಕಾರಿಯವರು ಅಂಚೆ ಮತಪತ್ರವನ್ನು ವರ್ಗಾಯಿಸಬಹುದಾಗಿರುತ್ತದೆ.

(1ಎ) ಅಂಚೆ ಮತಪತ್ರವನ್ನು ವಿದ್ಯುನ್ಮಾನಿತವಾಗಿ ವರ್ಗಾಯಿಸಿರುವಲ್ಲಿ, ಈ ನಿಯಮ ಮತ್ತು ನಿಯಮಗಳು 22, 24, 27ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು;

(2) ರಿಟರ್ನಿಂಗ್ ಅಧಿಕಾರಿಯು ಅದೇ ಸಮಯದಲ್ಲಿ –

(ಎ) ಮತಪತ್ರದ ಕೌಂಟರ್ ಫೈಲ್‌ನಲ್ಲಿ, ಮತದಾರರ ಪಟ್ಟಿಯ ಮಾರ್ಕ್‌ಡ್ ಪ್ರತಿಯಲ್ಲಿ ನಮೂದಿಸಿರುವಂತೆ, ಮತದಾರ ಪಟ್ಟಿಯ ಸಂಖ್ಯೆಯನ್ನು ದಾಖಲು ಮಾಡತಕ್ಕದ್ದು.

(ಬಿ) ಮತದಾರನಿಗೆ ಮತಪತ್ರವನ್ನು ನೀಡಲಾಗಿದೆ ಎಂದು ಸೂಚಿಸಲು ನೀಡಿದ್ದರೆ ಕ್ರಮಸಂಖ್ಯೆಯನ್ನು ಅದರಲ್ಲಿ ದಾಖಲಿಸದೆ ಪ್ರತಿಯ ಮೇಲೆ ಮತದಾರನ ಹೆಸರನ್ನು ಗುರುತು ಮಾಡತಕ್ಕದ್ದು. ಆದಾಗ್ಯೂ, ಆ ಮತದಾರನಿಗೆ ನೀಡಿದ ಮತಪತ್ರದ ಕ್ರಮಸಂಖ್ಯೆಯನ್ನು ಅದರಲ್ಲಿ ದಾಖಲಿಸದೆ ನೀಡಿರತಕ್ಕದ್ದಲ್ಲ;

(ಸಿ) ಆ ಮತದಾರನಿಗೆ ಮತಗಟ್ಟೆಯಲ್ಲಿ ಮತ ನೀಡಲು ಅನುಮತಿ ಕೊಟ್ಟಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(3) ಒಂದು ಚುನಾವಣೆಯಲ್ಲಿ, ಸ್ಥಳೀಯ ಸಂಸ್ಥೆಗಳ ಮತಕ್ಷೇತ್ರದಲ್ಲಿ ಅಥವಾ ವಿಧಾನಸಭಾ ಸದಸ್ಯರು ಒಬ್ಬ ಮತದಾರನಿಗೆ ಯಾವುದೇ ಮತಪತ್ರವನ್ನು ನೀಡುವ ಮುಂಚೆ, ಮತಪತ್ರದ ಕ್ರಮಸಂಖ್ಯೆಯನ್ನು ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪರಿಣಾಮಕಾರಿಯಾಗಿ ಗೌಪ್ಯವಾಗಿಡತಕ್ಕದ್ದು.

(4) ಯಾವ ಅಧಿಕಾರಿಯ ಅಧೀನದಲ್ಲಿ ಅಥವಾ ಯಾರ ಮೂಲಕ ಅಂಚೆ ಮತಪತ್ರವನ್ನು ನೀಡಲಾಗಿದೆಯೋ ಆ ಪತ್ರಿಯೊಬ್ಬ ಅಧಿಕಾರಿ ವಿಳಂಬವಿಲ್ಲದಂತೆ ಅದು ವಿಳಾಸದಾರನಿಗೆ ತಲುಪಿದ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

(5) ಅಂಚೆ ಮೂಲಕ ಮತ ಚಲಾಯಿಸಲು ಹಕ್ಕುಳ್ಳ ಎಲ್ಲಾ ಮತದಾರರಿಗೂ ಮತಪತ್ರಗಳನ್ನು ನೀಡಿದ ನಂತರ, ರಿಟರ್ನಿಂಗ್ ಅಧಿಕಾರಿಯು –

(ಎ) ಲೋಕಸಭೆ ಅಥವಾ ವಿಧಾನಸಭೆ ಮತಕ್ಷೇತ್ರದಲ್ಲಿನ ಚುನಾವಣೆಯಲ್ಲಿ 27ಪಿ ನಿಯಮದ ಉಪಬಂಧಗಳಿಗೊಳಪಟ್ಟು, ಸೇವಾ ಮತದಾರರಿಗೆ ಸಂಬಂಧಪಟ್ಟ ಮತದಾರರ ಪಟ್ಟಿಯ ಮಾರ್ಕ್ಡ್ ಪ್ರತಿಯ ಆ ಭಾಗಕ್ಕೆ ಮೊಹರು ಹಾಕಿ ಒಂದು ಲಕೋಟೆಯಲ್ಲಿ ಹಾಕಿಡತಕ್ಕದ್ದು ಮತ್ತು ಆ ಲಕೋಟೆಯ ಮೇಲೆ ಅದರಲ್ಲಿರುವ ವಸ್ತುಗಳ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ಮತ್ತು ಅದನ್ನು ಮೊಹರು ಮಾಡಿದ ದಿನಾಂಕವನ್ನು ನಮೂದಿಸಿ, ಮಾರ್ಕ್ಡ್ ಪ್ರತಿಯ ಇತರ ಸೂಕ್ತ ಭಾಗಗಳನ್ನು ಹಲವಾರು ಪ್ರಿಸೈಡಿಂಗ್ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು ಅಥವಾ ಮತದಾರರಿಗೆ ನೀಡಿದ ಮತಪತ್ರಗಳ ಕ್ರಮಸಂಖ್ಯೆಗಳನ್ನು ಅದರಲ್ಲಿ ದಾಖಲಿಸದೇ ಮತಗಟ್ಟೆಗಳಲ್ಲಿ ಮತಪತ್ರಗಳನ್ನು ನೀಡಲಾದ ಮತದಾರರ ಹೆಸರುಗಳನ್ನು ಗುರುತು ಮಾಡತಕ್ಕದ್ದು; ಮತ್ತು

(ಬಿ) ಇತರ ಯಾವುದೇ ಚುನಾವಣೆಯಲ್ಲಿ ಮತದಾರರ ಪಟ್ಟಿಯ ಮಾರ್ಕ್ಡ್ ಪ್ರತಿಯನ್ನು ಒಂದು ಲಕೋಟೆಯಲ್ಲಿ ಹಾಕಿ ಮೊಹರು ಮಾಡತಕ್ಕದ್ದು ಮತ್ತು ಅದರ ಮೇಲೆ ಅದರಲ್ಲಿರುವ ವಸ್ತುಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಮತ್ತು ಅದನ್ನು ಮೊಹರು ಮಾಡಿ ದಿನಾಂಕವನ್ನು ನಮೂದಿಸತಕ್ಕದ್ದು.

(6) ರಿಟರ್ನಿಂಗ್ ಅಧಿಕಾರಿಯು ಅಂಚೆ ಮೂಲಕ ಮತದಾನ ಮಾಡಲು ಹಕ್ಕುಳ್ಳ ಮತದಾರರಿಗೆ ನೀಡಿದ ಮತಪತ್ರಗಳ ಕೌಂಟರ್‌ಫೈಲ್‌ಗಳನ್ನು ಪ್ರತ್ಯೇಕ ಲಕೋಟೆಯಲ್ಲಿಟ್ಟು ಮೊಹರು ಮಾಡತಕ್ಕದ್ದು ಮತ್ತು ಆ ಪ್ಯಾಕೆಟ್‌ನ ಮೇಲೆ ಅದರಲ್ಲಿರುವ ವಸ್ತುಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಮತ್ತು ಅದನ್ನು ಮೊಹರು ಮಾಡಿದ ದಿನಾಂಕವನ್ನು ನಮೂದಿಸತಕ್ಕದು.

**24. ಮತವನ್ನು ದಾಖಲಿಸುವುದು.–**

(1) ಅಂಚೆ ಮತಪತ್ರವನ್ನು ಪಡೆದು ಮತದಾನ ಮಾಡಬಯಸುವ ಒಬ್ಬ ಮತದಾರನು 13ಡಿ ನಮೂನೆಯ ಭಾಗ–Iರಲ್ಲಿ ಒಳಗೊಂಡಿರುವ ನಿರ್ದೇಶನಗಳಿಗೆ ಅನುಸಾರವಾಗಿ ಮತಪತ್ರದಲ್ಲಿ ತನ್ನ ಮತವನ್ನು ದಾಖಲು ಮಾಡತಕ್ಕದ್ದು ಮತ್ತು 13ಬಿ ನಮೂನೆಯಲ್ಲಿರುವ ಲಕೋಟೆಯಲ್ಲಿ ಹಾಕಿ ಇಡತಕ್ಕದ್ದು.

(2) ಮತದಾರನು, ಸ್ಟೈಫಂಡರಿ ಮ್ಯಾಜಿಸ್ಟ್ರೇಟರ ಅಥವಾ ಈ ಕೆಳಗೆ ನಿರ್ದಿಷ್ಟಪಡಿಸಿದ ಸಮುಚಿತವಾಗಬಹುದಾದಂಥ ಯಾವ ಇತರ ಅಧಿಕಾರಿಯು ಮತದಾರನಿಗೆ ವೈಯಕ್ತಿಕವಾಗಿ ಪರಿಚಿತನಾಗಿರುವನೋ ಅಥವಾ ಆತನಿಗೆ ಮನದಟ್ಟಾಗುವ ರೀತಿಯಲ್ಲಿ ಯಾರು ಗುರುತಿಸಿದ್ದಾರೋ, ಆ ಇತರ ಅಧಿಕಾರಿಯ ಸಮ್ಮುಖದಲ್ಲಿ 13ಎ – ನಮೂನೆಯಲ್ಲಿರುವ ಘೋಷಣೆಗೆ ಸಹಿ ಹಾಕತಕ್ಕದ್ದು, ಮತ್ತು ಅವರ ಸಹಿಯ ಮೂಲಕ ದೃಢೀಕರಿಸಿರತಕ್ಕದ್ದು;

(ಎ) ಸೇವಾ ಮತದಾರರಾಗಿದ್ದರೆ, ಯಾವ ಘಟಕದಲ್ಲಿ, ನೌಕೆಯಲ್ಲಿ ಅಥವಾ ಸಂಸ್ಥೆಯಲ್ಲಿ ಸಂದರ್ಭಾನುಸಾರ, ಮತದಾರನು ಅಥವಾ ಆತನ/ಆಕೆಯ ಪತ್ನಿ/ಪತಿಯು ಉದ್ಯೋಗದಲ್ಲಿರುವರೋ ಆ ಘಟಕದ, ನೌಕೆಯ ಅಥವಾ ಸಂಸ್ಥೆಯ ಕಮಾಂಡಿಂಗ್ ಅಧಿಕಾರಿಯು ನೇಮಕ ಮಾಡಬಹುದಾದಂಥ ಅಧಿಕಾರಿ ಅಥವಾ ಮತದಾರನು ಯಾವ ದೇಶದಲ್ಲಿ ನಿವಾಸಿಯಾಗಿರುವನೋ ಆ ದೇಶದಲ್ಲಿ ಭಾರತದ ರಾಜತಾಂತ್ರಿಕ ಅಥವಾ ಕೌನ್ಸಿಲರ್ ಪ್ರತಿನಿಧಿಯು ಈ ಸಂಬಂಧದಲ್ಲಿ ನೇಮಕ ಮಾಡಬಹುದಾದಂಥ ಅಧಿಕಾರಿ;

(ಬಿ) ವಿಶೇಷ ಮತದಾರನ, ಸಂದರ್ಭದಲ್ಲಿ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿ;

(ಸಿ) ಚುನಾವಣಾ ಕರ್ತವ್ಯ ನಿರತ ಮತದಾರನ ಸಂದರ್ಭದಲ್ಲಿ, ಆತನು ಚುನಾವಣೆ ಕರ್ತವ್ಯದಲ್ಲಿ ನಿರತನಾಗಿರುವಮತಗಟ್ಟೆಯ ಯಾರೇ ಪತ್ರಾಂಕಿತ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿ;

(ಡಿ) ಪ್ರತಿಬಂಧಕ ಬಂಧನದಲ್ಲಿರುವ ಮತದಾರನಾಗಿದ್ದ ಸಂದರ್ಭದಲ್ಲಿ, ಮತದಾರನು ಬಂಧನದಲ್ಲಿರುವ ಜೈಲಿನ ಅಧೀಕ್ಷಕ ಅಥವಾ ಬಂಧನ ಶಿಬಿರದ ಕಮಾಂಡೆಂಟ್;

(ಇ) ಇತರ ಯಾವುದೇ ಸಂದರ್ಭದಲ್ಲಿ, ಚುನಾವಣಾ ಆಯೋಗವು ಈ ಬಗ್ಗೆ ಅಧಿಸೂಚಿಸಬಹುದಾದಂಥ ಅಧಿಕಾರಿ.

**25. ಅನಕ್ಷರಸ್ಥ ಅಥವಾ ದುರ್ಬಲ ಮತದಾರರಿಗೆ ಸಹಾಯ.–**

1) ಒಬ್ಬ ಮತದಾರನು ಅನಕ್ಷರಸ್ಥತೆ ಅಂಧತ್ವ ಅಥವಾ ಇತರ ದೈಹಿಕ ದುರ್ಬಲತೆಯಿಂದ ಅಂಚೆ ಮತಪತ್ರದ ಮೇಲೆ ತನ್ನ ಮತವನ್ನು ದಾಖಲು ಮಾಡಲು ಮತ್ತು ಘೋಷಣೆಗೆ ಸಹಿ ಹಾಕಲು ಅಸಮರ್ಥನಾಗಿದ್ದರೆ, ಅವನು ಘೋಷಣೆಯೊಂದಿಗೆ ಮತ್ತು ತಾನು ಸ್ವೀಕರಿಸಿದ ಲಕೋಟೆಗಳ ಸಹಿತ ಮತಪತ್ರವನ್ನು ತೆಗೆದುಕೊಂಡು 24ನೇ ನಿಯಮದ (2)ನೇ ಉಪ–ನಿಯಮದ ಮೇರೆಗೆ ಅವನ ಸಹಿಯನ್ನು ದೃಡೀಕರಿಸಲು ಸಕ್ಷಮನಾದ ಅಧಿಕಾರಿಗೆ ತನ್ನ ಮತವನ್ನು ದಾಖಲಿಸಲು ಮತ್ತು ತನ್ನ ಪರವಾಗಿ ದೃಢೀಕರಣಕ್ಕೆ ಸಹಿಹಾಕಲು ಕೋರಬಹುದು.

2) ಆ ತರುವಾಯ ಅಂಥ ಅಧಿಕಾರಿಯು, ಮತದಾರನ ಸಮ್ಮುಖದಲ್ಲಿ ಅವನ ಇಚ್ಛೆಯನುಗುಣವಾಗಿ ಮತಪತ್ರದ ಮೇಲೆ ಗುರುತು ಹಾಕತಕ್ಕದ್ದು ಮತ್ತು ಅವನ ಪರವಾಗಿ ದೃಢೀಕರಣಕ್ಕೆ ಸಹಿ ಹಾಕಬೇಕು ಮತ್ತು 13ಎ ನಮೂನೆಯಲ್ಲಿ ಇರುವ ಸಮುಚಿತ ಪ್ರಮಾಣಪತ್ರವನ್ನು ಪೂರ್ಣಗೊಳಿಸತಕ್ಕದ್ದು.

**26. ಮತಪತ್ರದ ಮರು ನೀಡಿಕೆ:–**

1) 23ನೇ ನಿಯಮದ ಮೇರೆಗೆ ಕಳುಹಿಸಲಾದ ಅಂಚೆ ಮತಪತ್ರ ಮತ್ತು ಇತರ ಪತ್ರಗಳು ಯಾವುದೇ ಕಾರಣಕ್ಕಾಗಿ, ಬಟವಾಡೆಯಾಗದೇ ಹಿಂದಿರುಗಿ ಬಂದರೆ, ರಿಟರ್ನಿಂಗ್ ಅಧಿಕಾರಿಯು ಮತದಾರನು ಮಾಡಿದ ಕೋರಿಕೆಯ ಮೇರೆಗೆ ಅಂಚೆ ಪ್ರಮಾಣಪತ್ರದ ಅಡಿಯಲ್ಲಿ ಅವುಗಳನ್ನು ಮತ್ತೆ ನೀಡಬಹುದು ಅಥವಾ ವೈಯಕ್ತಿಕವಾಗಿ ಮತದಾರನಿಗೆ ನೀಡಬಹುದು ಅಥವಾ ನೀಡುವಂತೆ ಮಾಡಬಹುದು.

2) ಯಾರೇ ಮತದಾರನು 23ನೇ ನಿಯಮದ ಮೇರೆಗೆ ಮತದಾರನಿಗೆ ಕಳುಹಿಸಿದ ಮತಪತ್ರ ಅಥವಾ ಇತರ ಪತ್ರಗಳಲ್ಲಿ ಯಾವುದಾದರೂ ಒಂದನ್ನು ಅವುಗಳನ್ನು ಮತ್ತೆ ಬಳಸಲಾರದಂಥ ವಿಧಾನದಲ್ಲಿ ಪ್ರಮಾದವಶಾತ್ ಉಪೇಕ್ಷೆಯಿಂದ ವ್ಯವಹರಿಸಿದ್ದರೇ, ಅವನು ಹಾಳಾಗಿರುವ ಪತ್ರಗಳನ್ನು ಹಿಂದಿರುಗಿಸಿದ ನಂತರ ಮತ್ತು ರಿಟರ್ನಿಂಗ್ ಅಧಿಕಾರಿಗೆ ಪ್ರಮಾದದ ಬಗ್ಗೆ ಮನವರಿಕೆಯಾದ್ದರೆ, ಪತ್ರಗಳ ಎರಡನೇ ಸೆಟ್‌ಅನ್ನು ಆತನಿಗೆ ನೀಡತಕ್ಕದ್ದು.

3) ರಿಟರ್ನಿಂಗ್ ಅಧಿಕಾರಿಯು ಹಾಗೆ ಹಿಂದಿರುಗಿಸಿದ ಹಾನಿಯಾಗಿರುವ ಪತ್ರಗಳನ್ನು ರದ್ದುಪಡಿಸತಕ್ಕದ್ದು ಮತ್ತು ಅವುಗಳ ಮೇಲೆ ಚುನಾವಣೆಯ ವಿವರಗಳನ್ನು ಮತ್ತು ರದ್ದಾದ ಮತಪತ್ರಗಳ ಕ್ರಮಸಂಖ್ಯೆಗಳನ್ನು ಬರೆದ ನಂತರ ಪ್ರತ್ಯೇಕ ಲಕೋಟೆಯಲ್ಲಿ ಅವುಗಳನ್ನು ಇಡತಕ್ಕದ್ದು.

**27. ಮತಪತ್ರಗಳನ್ನು ಹಿಂದಿರುಗಿಸುವುದು:–**

1) ಮತದಾರನು ತನ್ನ ಮತವನ್ನು ದಾಖಲಿಸಿದ ನಂತರ ಮತ್ತು ನಿಯಮ 24ರ ಅಥವಾ ನಿಯಮ 25 ರ ಮೇರೆಗೆ ಆತನ ಘೋಷಣೆಯನ್ನು ಮಾಡಿದ ನಂತರ, ನಮೂನೆ–13ಡಿ ಇದರ ಭಾಗ–IIರಲ್ಲಿ ಆತನಿಗೆ ತಿಳಿಸಲಾದ ಸೂಚನೆಗಳಿಗನುಸಾರವಾಗಿ ಮತಗಳ ಎಣಿಕೆ ಪ್ರಾರಂಭವಾಗುವುದಕ್ಕೆ ನಿಗದಿಪಡಿಸಿರುವ ಸಮಯಕ್ಕೆ ಮುಂಚಿತವಾಗಿ ರಿಟರ್ನಿಂಗ್ ಅಧಿಕಾರಿಗೆ ತಲುಪುವಂತೆ ಹಿಂದಿರುಗಿತಕ್ಕದ್ದು.

2) ಉಪ–ನಿಯಮ (1)ರಲ್ಲಿ ನಿಗದಿಪಡಿಸಿದ ಅವಧಿಯು ಮುಕ್ತಾಯವಾದ ನಂತರ ರಿಟರ್ನಿಂಗ್ ಅಧಿಕಾರಿಯು ಅಂಚೆ ಮತಪತ್ರವಿರುವ ಯಾವುದೇ ಲಕೋಟೆಯನ್ನು ಸ್ವೀಕರಿಸಿದರೆ, ಆತನು ಅದರ ಮೇಲೆ ಅದನ್ನು ಸ್ವೀಕರಿಸಿದ ದಿನಾಂಕ ಮತ್ತು ಸಮಯವನ್ನು ಬರೆಯತಕ್ಕದ್ದು ಮತ್ತು ಅಂಥ ಎಲ್ಲಾ ಲಕೋಟೆಗಳನ್ನು ಒಂದು ಪ್ರತ್ಯೇಕ ಲಕೋಟೆಯಲ್ಲಿ ಒಟ್ಟಾಗಿ ಇರಿಸತಕ್ಕದ್ದು.

3) ರಿಟರ್ನಿಂಗ್ ಅಧಿಕಾರಿಯು, ತಾನು ಸ್ವೀಕರಿಸಿದ ಅಂಚೆ ಮತಪತ್ರಗಳನ್ನು ಒಳಗೊಂಡಿರುವ ಎಲ್ಲಾ ಲಕೋಟೆಗಳನ್ನು ಮತ ಎಣಿಕೆಯು ಪ್ರಾರಂಭವಾಗುವವರೆಗೆ ತನ್ನ ಸುರಕ್ಷಿತ ವಶದಲ್ಲಿರಿಸಿಕೊಳತಕ್ಕದ್ದು.

**ಪರಿಶಿಷ್ಟ–41**
**(ಅಧ್ಯಾಯ–18, ಪ್ಯಾರಾ 18.1.4)**
**(ಭಾಗ ಎ)**

**ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಚುನಾವಣಾ ವೆಚ್ಚದ ಬಗ್ಗೆ ಪ್ರತಿದಿನದ ಲೆಕ್ಕಗಳಿಗಾಗಿ ನಿರ್ವಹಿಸಬೇಕಾದ ರಿಜಿಸ್ಟರು**

ಅಭ್ಯರ್ಥಿಯ ಹೆಸರು:
ರಾಜಕೀಯ ಪಕ್ಷದ ಹೆಸರು, ಯಾವುದಾದರೂ ಇದ್ದರೆ:
ಯಾವ ಚುನಾವಣಾ ಕ್ಷೇತ್ರದಿಂದ ಸ್ಪರ್ಧಿಸಿರುವುದು:
ಫಲಿತಾಂಶ ಘೋಷಣೆಯ ದಿನಾಂಕ:
ಚುನಾವಣಾ ಏಜೆಂಟ್‌ನ ಹೆಸರು ಮತ್ತು ವಿಳಾಸ:
ಭರಿಸಲಾದ/ ಅಧಿಕೃತಗೊಳಿಸಲಾದ ಒಟ್ಟು ವೆಚ್ಚ:

(ಚುನಾವಣೆಯ ನಾಮಪತ್ರದ ದಿನಾಂಕದಿಂದ ಫಲಿತಾಂಶ ಘೋಷಣೆಯ ದಿನಾಂಕದವರೆಗೂ, ಎರಡು ದಿನಗಳನ್ನು ಒಳಗೊಂಡು)

| ವೆಚ್ಚದ/ ಸಂದರ್ಭದ ದಿನಾಂಕ | ವೆಚ್ಚದ ಸ್ವರೂಪ | | | ಒಟ್ಟು ಮೊತ್ತ ರೂಪಾಯಿಗಳಲ್ಲಿ (ಸಂದಾಯ ಮಾಡಿರುವುದು + ಬಾಕಿ ಉಳಿದಿರುವುದು) | ಹಣ ಸ್ವೀಕರಿಸುವವರ ಹೆಸರು ಮತ್ತು ವಿಳಾಸ | ಬಿಲ್ಲು ಸಂಖ್ಯೆ /ವೋಚರ್ ಸಂಖ್ಯೆ ಮತ್ತು ದಿನಾಂಕ | ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟ್‌ನು ಭರಿಸಿದ/ ಅಧಿಕೃತವಾಗಿ ವೆಚ್ಚ ಮಾಡಿದ ಮೊಬಲಗು | ರಾಜಕೀಯ ಪಕ್ಷವು ಮತ್ತು ರಾಜಕೀಯ ಪಕ್ಷದ ಹೆಸರಿನಲ್ಲಿ ಭರಿಸಿದ/ ಅಧಿಕೃತವಾಗಿ ವೆಚ್ಚ ಮಾಡಿದ ಮೊಬಲಗು | ಇತರೆ ವ್ಯಕ್ತಿಯು ಸಂಘಸಂಸ್ಥೆಯು/ ನಿಕಾಯ/ ಯಾರೇ ಇತರೆಯವರು ಭರಿಸಿದ/ ಅಧಿಕೃತವಾಗಿ ಮಾಡಿದ ವೆಚ್ಚ ಮಾಡಿದ ಮೊಬಲಗು (ಪೂರ್ಣ ಹೆಸರು ಮತ್ತು ವಿಳಾಸವನ್ನು ನಮೂದಿಸಿ) | ಷರಾ ಯಾವುದಾದರೂ ಇದ್ದರೆ |
|---|---|---|---|---|---|---|---|---|---|---|
| 1 | 2 | | | 3 | 4 | 5 | 6 | 7 | 8 | 9 |
| | ವಿವರಣೆ | ಪರಿಮಾಣ | ಪ್ರತಿ ಘಟಕದ ದರ | | | | | | | |
| | | | | | | | | | | |
| | | | | | | | | | | |

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಪ್ರಕರಣದ ಮೇರೆಗೆ ಇದು ನಾನು/ನನ್ನ ಚುನಾವಣಾ ಏಜೆಂಟ್‌ನು ಇಟ್ಟಿರುವ ನಿಜವಾದ ಲೆಕ್ಕವೆಂದು ಈ ಮೂಲಕ ಪ್ರಮಾಣೀಕರಿಸಿದೆ (ಫಲಿತಾಂಶ ಘೋಷಣೆ ದಿನಾಂಕದ ತರುವಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ).

**ಅಭ್ಯರ್ಥಿಯ ಸಹಿ**

**ಸೂಚನೆ:–**

1. ಈ ರಿಜಿಸ್ಟರನ್ನು ಪ್ರತಿದಿನ ನಿರ್ವಹಿಸತಕ್ಕದ್ದು ಮತ್ತು ಇದು ಚುನಾವಣಾ ಆಯೋಗವು ನೇಮಕ ಮಾಡಿದ ವೀಕ್ಷಕರಿಂದ ಜಿಲ್ಲಾ ಚುನಾವಣಾಧಿಕಾರಿ/ರಿಟರ್ನಿಂಗ್ ಅಧಿಕಾರಿಯಿಂದ ಅಥವಾ ಈ ಬಗ್ಗೆ ಅಧಿಕೃತಗೊಂಡ ಯಾರೇ ಇತರ ಅಧಿಕಾರಿಯಿಂದ ಯಾವುದೇ ಸಮಯದಲ್ಲಿ ತಪಾಸಣೆಗೆ ಒಳಪಟ್ಟಿರತಕ್ಕದ್ದು.

2. ಈ ಮೂಲ ರಿಜಿಸ್ಟರನ್ನು ಜನತಾಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 78ರ ಅಡಿಯಲ್ಲಿ ಚುನಾವಣಾ ವೆಚ್ಚಗಳ ವಿವರಪಟ್ಟಿಕೆಯಂತೆ ಜಿಲ್ಲಾ ಚುನಾವಣಾಧಿಕಾರಿಯರಿಗೆ ಸಲ್ಲಿಸಬೇಕಾಗುತ್ತದೆ. ಇದರ ಜೊತೆ ಗೊತ್ತುಪಡಿಸಿದ ನಮೂನೆಗಳಲ್ಲಿ, ಚುನಾವಣಾ ವೆಚ್ಚಗಳು (ಭಾಗ Iರಿಂದ IV ರವರೆಗೆ ಮತ್ತು 1 ರಿಂದ 9 ಅನುಸೂಚಿಗಳು) ಸಂಕ್ಷಿಪ್ತ ವಿವರಣ ಪತ್ರ ಮತ್ತು ಸಮರ್ಥನೆ ಒದಗಿಸುವ ಅಫಿಡಾವಿಟ್ ಇರತಕ್ಕದ್ದು. ಚುನಾವಣಾ ವೆಚ್ಚಗಳ ಸಂಕ್ಷಿಪ್ತ ವಿವರಣಾ ಪತ್ರ ಮತ್ತು ಅಫಿಡಾವಿಟ್ ಇರದ ವೆಚ್ಚಗಳ ವಿವರಪಟ್ಟಿಯನ್ನು ಪೂರ್ಣವಾದುದೆಂದು ಸ್ವೀಕರಿಸಲಾಗುವುದಿಲ್ಲ.

3. ಚುನಾವಣೆ ನಡೆಸುವ ನಿಯಮಗಳು, 1961ರ 86(2)ನೇ ನಿಯಮದಲ್ಲಿ ಪಟ್ಟಿ ಮಾಡಲಾಗಿರುವ ಬಾಬುಗಳ ಸಂಬಂಧದಲ್ಲಿ ಮಾತ್ರ ವೋಚರ್‌ಗಳನ್ನು ಎಂದರೆ ಅಂಚೆ ವೆಚ್ಚ, ವಿಮಾನದ ಮೂಲಕ ಪ್ರಯಾಣ, ಮುಂತಾದುದನ್ನು ಲಗತ್ತಿಸಬೇಕಾಗಿಲ್ಲ.ಈ ನಿಯಮಗಳಪ್ರಕಾರ ಯಾವುದೇ ವೋಚರ್‌ನ್ನು ಲಗತ್ತಿಸದೇ ಇದ್ದರೆ, ಅಗತ್ಯಪಡಿಸಿದ ಆ ವೋಚರುಗಳನ್ನು ಪಡೆದುಕೊಳ್ಳುವುದಕ್ಕೆ ಏಕೆ ಕಾರ್ಯತಃ ಸಾಧ್ಯವಾಗಿಲ್ಲ ಎಂಬುದಕ್ಕೆ ವಿವರಣೆಯನ್ನು ನಿಗದಿತ ರಿಜಿಸ್ಟರಿನಲ್ಲಿ ನೀಡಬೇಕು.

4. ಲೆಕ್ಕವನ್ನು ಮತ್ತು ಸಂಕ್ಷಿಪ್ತ ವಿವರಣಾ ಪಟ್ಟಿಕೆಯನ್ನು ಚುನಾವಣಾ ಏಜೆಂಟನು ಸಲ್ಲಿಸಿದ್ದಲ್ಲಿ, ಅಭ್ಯರ್ಥಿಯು ಮೇಲುರುಜು ಮಾಡತಕ್ಕದ್ದು ಮತ್ತು ಇಟ್ಟಿರುವ ಲೆಕ್ಕದ ಯಥಾಪ್ರತಿಯೆಂದು ಅಭ್ಯರ್ಥಿಯೇ ಸ್ವತಃ ಪ್ರಮಾಣೀಕರಿಸತಕ್ಕದ್ದು. ಅಫಿಡಾವಿಟ್‌ಗೆ ಅಭ್ಯರ್ಥಿಯೇ ಸ್ವತಃ ಪ್ರಮಾಣ ಮಾಡಿರತಕ್ಕದ್ದು.

5. ಅಭ್ಯರ್ಥಿಯೇ/ಚುನಾವಣಾ ಏಜೆಂಟನೇ ನೇರವಾಗಿ ವೆಚ್ಚಗಳನ್ನು ಮಾಡಿದ್ದರೇ ಅಥವಾ ಮಾಡಲು ಅಧಿಕೃತಗೊಳಿಸಿದ್ದರೆ ರಾಜಕೀಯ ಪಕ್ಷವು, ಇತರೆ ಸಂಘ ಸಂಸ್ಥೆಗಳು, ವ್ಯಕ್ತಿ ನಿಕಾಯಗಳು, ವ್ಯಕ್ತಿಗಳು ಅವುಗಳ ಹೊರತು, ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದಂತೆ ಅವನ ಸಮ್ಮತಿಯಿಂದ ಮಾಡಿದ ಎಲ್ಲಾ ಖರ್ಚುಗಳನ್ನು ಅಥವಾ ಮಾಡಲು ಅಧಿಕೃತಗೊಳಿಸಿದ ವೆಚ್ಚಗಳನ್ನು ಲೆಕ್ಕದಲ್ಲಿ ಸೇರಿಸಬೇಕಾಗುತ್ತದೆ. ರಾಜಕೀಯ ಪಕ್ಷದ ನಿರ್ದಿಷ್ಟ ನಾಯಕರುಗಳು ಪಕ್ಷದ ಕಾರ್ಯಕ್ರಮವನ್ನು ಪ್ರಚಾರ ಮಾಡುವುದಕ್ಕಾಗಿ ಪ್ರಯಾಣ ಮಾಡಿದ್ದರಿಂದಾಗಿ ಮಾಡಿದ ಖರ್ಚುವೆಚ್ಚಗಳಿಗೆ ಮಾತ್ರ ವಿನಾಯಿತಿ ಇರುತ್ತದೆ (ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ಪ್ರಕರಣ 77(1) ರ ವಿವರಣೆ 1 ಮತ್ತು 2ನ್ನು ನೋಡಿ)

6. 2 ಮತ್ತು 3ನೇ ಕಾಲಂನಲ್ಲಿ ಮೇಲೆ ತೋರಿಸಿದ ಯಾವುದೇ ಬಾಬುಗಳ ಮೇಲೆ ವೆಚ್ಚವನ್ನು (ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟ್‌ನ ಹೊರತು) ಯಾವುದೇ ರಾಜಕೀಯ ಪಕ್ಷವು/ಸಂಘ ಸಂಸ್ಥೆಯು/ವ್ಯಕ್ತಿಗಳ ನಿಕಾಯವು/ಯಾರೇ ವ್ಯಕ್ತಿ ಖರ್ಚು ಮಾಡಿದ್ದರೆ/ಮಾಡಲು ಅಧಿಕೃತಗೊಳಿಸಿದ್ದರೆ, ಅದರ/ಆತನ ಹೆಸರನ್ನು ಮತ್ತು ಸಂಪೂರ್ಣ ವಿಳಾಸವನ್ನು 7 ಮತ್ತು 8ನೇ ಕಾಲಂನಲ್ಲಿ ತೋರಿಸತಕ್ಕದ್ದು.

7. ಮೇಲಿನ ಕೋಷ್ಠಕದ 2ಮತ್ತು 3ನೇ ಕಾಲಂಗಳಲ್ಲಿ ಹೇಳಿರುವ ಒಟ್ಟು ವೆಚ್ಚಗಳಲ್ಲಿ, ಯಾವುದೇ ಮೂಲದಿಂದ ಅಭ್ಯರ್ಥಿಯು ಅಥವಾ ಆತನ ಚುನಾವಣಾ ಏಜೆಂಟನು ನಗದಾಗಿ ಮಾಡಿದ ವೆಚ್ಚಗಳನ್ನು ಮತ್ತು ಪಡೆದುಕೊಂಡ ಸರಕುಗಳ ಮತ್ತು ಸೇವೆಗಳನ್ನು ಮೌಲ್ಯವನ್ನು ಒಳಗೊಂಡಿರತಕ್ಕದ್ದು.

8. ಈ ರಿಜಿಸ್ಟರಿನಲ್ಲಿ ಬಿಳಿ ಪುಟಗಳಲ್ಲಿ ಭಾಗ 'ಎ' ನಲ್ಲಿ ಪ್ರತಿದಿನದ ಲೆಕ್ಕದ ರಿಜಿಸ್ಟರ್‌ನ್ನು, ಗುಲಾಬಿ ಬಣ್ಣದ ಪುಟಗಳಲ್ಲಿ ಭಾಗ–'ಬಿ' ಹೇಳಿರುವಂತೆ ನಗದು ರಿಜಿಸ್ಟರನ್ನು ಮತ್ತು ಭಾಗ – 'ಸಿ' ನಲ್ಲಿ ಹೇಳಿರುವಂತೆ ಹಳದಿ ಪುಟಗಳಲ್ಲಿ ಬ್ಯಾಂಕ್ ರಿಜಿಸ್ಟರನ್ನು ನಿಗದಿಪಡಿಸಿರುವ ನಮೂನೆಗಳಿಗೆ ಅನುಸಾರವಾಗಿ ಒಳಗೊಂಡಿರಬೇಕು.

**(ಭಾಗ ಬಿ)**

**ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಪ್ರತಿದಿನದ ಲೆಕ್ಕಗಳನ್ನು ನಿರ್ವಹಿಸಲು ರಿಜಿಸ್ಟರು**

ಅಭ್ಯರ್ಥಿಯ ಹೆಸರು:
ರಾಜಕೀಯ ಪಕ್ಷದ ಹೆಸರು, ಯಾವುದಾದರೂ ಇದ್ದಲ್ಲಿ:
ಸ್ಪರ್ಧಿಸುತ್ತಿರುವ ಚುನಾವಣಾ ಕ್ಷೇತ್ರ:
ಫಲಿತಾಂಶ ಘೋಷಣೆಯ ದಿನಾಂಕ:
ಚುನಾವಣಾ ಏಜೆಂಟ್‌ನ ಹೆಸರು ಮತ್ತು ವಿಳಾಸ:
(ಚುನಾವಣೆಯ ನಾಮಪತ್ರದ ದಿನಾಂಕದಿಂದ ಫಲಿತಾಂಶ ಘೋಷಣೆಯ ದಿನಾಂಕದವರೆಗೂ, ಎರಡೂ ದಿನಗಳನ್ನು ಒಳಗೊಂಡು)

| ಸ್ವೀಕೃತಿ | | | | ಸಂದಾಯ | | | | ಶಿಲ್ಕು ಮೊತ್ತ | ಷರಾಗಳು ಯಾವುದಾದರೂ ಇದ್ದರೆ |
|---|---|---|---|---|---|---|---|---|---|
| ದಿನಾಂಕ | ಯಾವ ವ್ಯಕ್ತಿಯಿಂದ/ಪಕ್ಷದಿಂದ / ಸಂಘದಿಂದ/ ನಿಕಾಯದಿಂದ/ಇತರರಿಂದ ಮೊತ್ತವನ್ನು ಸ್ವೀಕರಿಸಲಾಯಿತೋ ಅವುಗಳ ಹೆಸರು ಮತ್ತು ವಿಳಾಸ | ರಶೀದಿ ಸಂಖ್ಯೆ | ಮೊತ್ತ | ಬಿಲ್ಲು ಸಂಖ್ಯೆ/ ವೋಚರ್ ಸಂಖ್ಯೆ ಮತ್ತು ದಿನಾಂಕ | ಹಣ ಸ್ವೀಕರಿಸಿದವರ ಹೆಸರು ಮತ್ತು ವಿಳಾಸ | ವೆಚ್ಚದ ಸ್ವರೂಪ | ಮೊತ್ತ | ಶಿಲ್ಕನ್ನು ಯಾವ ಸ್ಥಳಗಳಲ್ಲಿ ಅಥವಾ ಯಾವ ವ್ಯಕ್ತಿಯ ಬಳಿ ಇಡಲಾಗಿದೆ (ಹಣವನ್ನು ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ/ ವ್ಯಕ್ತಿಗಳ ಬಳಿ ಇಟ್ಟಿದ್ದರೆ ಹೆಸರನ್ನು ಹಾಗೂ ಲಭ್ಯವಿರುವ ಶಿಲ್ಕನ್ನು ನಮೂದಿಸಿ) | ಈ ಕೋಷ್ಟಕದ 7ನೇ ಕಾಲಂನಲ್ಲಿ ನಮೂದಿಸಿದ ಯಾವುದೇ ವೆಚ್ಚಗಳು ಮತ್ತು ಭಾಗ ಎ ಯ ಕೋಷ್ಟಕದ 2ನೇ ಕಾಲಂನಲ್ಲಿ ನಮೂದಿಸದ ಯಾವುದೇ ವೆಚ್ಚಗಳನ್ನು ಇಲ್ಲಿ ಸ್ಪಷ್ಟೀಕರಿಸತಕ್ಕದ್ದು |
| 1. | 2. | 3. | 4. | 5. | 6. | 7. | 8. | 9. | 10. |
| | | | | | | | | | |
| | | | | | | | | | |

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಪ್ರಕರಣದ ಮೇರೆಗೆ ಇದು ನಾನು/ನನ್ನ ಚುನಾವಣಾ ಏಜೆಂಟನು ಇಟ್ಟಿರುವ ನಿಜವಾದ ಲೆಕ್ಕವೆಂದು ಈ ಮೂಲಕ ಪ್ರಮಾಣೀಕರಿಸಿದೆ (ಫಲಿತಾಂಶ ಘೋಷಣೆಯ ದಿನಾಂಕದ ತರುವಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ).

**ಅಭ್ಯರ್ಥಿಯ ಸಹಿ**

## (ಭಾಗ ಸಿ)

## ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ದೈನಂದಿನ ಲೆಕ್ಕಗಳನ್ನು ನಿರ್ವಹಿಸುವುದಕ್ಕಾಗಿ ಬ್ಯಾಂಕ್ ರಿಜಿಸ್ಟರು

ಅಭ್ಯರ್ಥಿಯ ಹೆಸರು:
ರಾಜಕೀಯ ಪಕ್ಷದ ಹೆಸರು, ಯಾವುದಾದರೂ ಇದ್ದರೆ,
ಸ್ಪರ್ಧಿಸುತ್ತಿರುವ ಚುನಾವಣಾ ಕ್ಷೇತ್ರ :
ಫಲಿತಾಂಶ ಘೋಷಣೆ ದಿನಾಂಕ:
ಚುನಾವಣಾ ಏಜೆಂಟ್‌ನ ಹೆಸರು ಮತ್ತು ವಿಳಾಸ:
ಬ್ಯಾಂಕಿನ ಹೆಸರು :
ಶಾಖೆಯ ವಿಳಾಸ:
ಖಾತೆ ಸಂಖ್ಯೆ:
(ಚುನಾವಣೆಯ ನಾಮಪತ್ರದ ದಿನಾಂಕದಿಂದ ಫಲಿತಾಂಶ ಘೋಷಣೆಯ ದಿನಾಂಕದವರೆಗೆ ಎರಡೂ ದಿನಗಳನ್ನು ಒಳಗೊಂಡು)

| ಸ್ವೀಕೃತಿ | | | | ಸಂದಾಯ | | | | ಶಿಲ್ಕು | ಷರಾಗಳು ಯಾವುದಾದರೂ ಇದ್ದರೆ |
|---|---|---|---|---|---|---|---|---|---|
| ದಿನಾಂಕ | ಯಾವ ವ್ಯಕ್ತಿಯಿಂದ/ಪಕ್ಷದಿಂದ/ ಸಂಘದಿಂದ/ ನಿಕಾಯದಿಂದ/ಇತರರಿಂದ ಮೊತ್ತವನ್ನು ಸ್ವೀಕರಿಸಲಾಯಿತೋ ಅವುಗಳ ಹೆಸರು ಮತ್ತು ವಿಳಾಸ | ನಗದು/ ಚೆಕ್‌ನ ಸಂಖ್ಯೆ, ಬ್ಯಾಂಕ್‌ನ ಹೆಸರು ಮತ್ತು ಶಾಖೆ | ಮೊತ್ತ | ಚೆಕ್ ಸಂಖ್ಯೆ | ಹಣ ಸ್ವೀಕರಿಸುವವರ ಹೆಸರು | ಖರ್ಚು ವೆಚ್ಚದ ಸ್ವರೂಪ | ಮೊತ್ತ | | ಈ ಕೋಷ್ಟಕದ 7 ನೇ ಕಾಲಂನಲ್ಲಿ ನಮೂದಿಸಿದ ಯಾವುದೇ ವೆಚ್ಚಗಳು ಮತ್ತು ಭಾಗ–ಎ ಕೋಷ್ಟಕದ 2ನೇ ಕಾಲಂನಲ್ಲಿ ನಮೂದಿಸದ ವೆಚ್ಚಗಳನ್ನು ಸ್ಪಷ್ಟೀಕರಿಸತಕ್ಕದ್ದು. |
| 1. | 2. | 3. | 4. | 5. | 6. | 7. | 8. | 9. | 10. |
| | | | | | | | | | |

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77ನೇ ಪ್ರಕರಣದ ಮೇರೆಗೆ ಇದು ನಾನು/ನನ್ನ ಚುನಾವಣಾ ಏಜೆಂಟ್‌ನು ಇಟ್ಟಿರುವ ನಿಜವಾದ ಲೆಕ್ಕವೆಂದು ಈ ಮೂಲಕ ಪ್ರಮಾಣೀಕರಿಸಿದೆ. (ಫಲಿತಾಂಶ ಘೋಷಣೆ ದಿನಾಂಕದ ತರುವಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ).

**ಅಭ್ಯರ್ಥಿಯ ಸಹಿ**

**ಚುನಾವಣಾ ವೆಚ್ಚದ ಪ್ರತಿದಿನದ ಲೆಕ್ಕಗಳನ್ನು ನಿರ್ವಹಿಸುವುದಕ್ಕಾಗಿ ಮಾರ್ಗದರ್ಶನಗಳು:**
ಅಭ್ಯರ್ಥಿಯು ತನ್ನ ಸ್ವಂತ ನಿಧಿಯಿಂದಾಗಲಿ ಅಥವಾ ರಾಜಕೀಯ ಪಕ್ಷದಿಂದ ಅಥವಾ ಯಾರೇ ಇತರ ವ್ಯಕ್ತಿಯಿಂದ, ನಿಕಾಯದಿಂದ, ಸಂಸ್ಥೆಯಿಂದ, ಅಥವಾ ಕಂಪನಿಯಿಂದಾಗಲಿ ಸ್ವೀಕರಿಸಿದ ಎಲ್ಲಾ ನಗದನ್ನು, ಚೆಕ್‌ಗಳನ್ನು ಅಥವಾ ಡ್ರಾಫ್ಟ್‌ಗಳನ್ನು ಅಥವಾ ಪೇ–ಆರ್ಡರ್‌ಗಳನ್ನು ಚುನಾವಣಾ ವೆಚ್ಚದ ಉದ್ದೇಶಕ್ಕಾಗಿ ಅಭ್ಯರ್ಥಿಯು ತೆರೆಯಲಾದ ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮೆ ಮಾಡತಕ್ಕದ್ದು.

**1. ಸ್ವೀಕರಿಸಿದ ಹಣ**

1.1 **ಅಭ್ಯರ್ಥಿಯು ತನ್ನ ಸ್ವಂತ ಹಣವನ್ನು ಚುನಾವಣಾ ವೆಚ್ಚಕ್ಕೆ ಬಳಸಬೇಕಾದಾಗ:–**ಅಭ್ಯರ್ಥಿಯು ತನ್ನ ಸ್ವಂತ ಹಣವನ್ನು ತಂದರೆ, ಆಗ ಆತ/ಆಕೆಯು ಚುನಾವಣಾ ಖರ್ಚುವೆಚ್ಚಗಳಿಗಾಗಿ ತೆರೆಯಲಾದ ಬ್ಯಾಂಕ್ ಖಾತೆಗೆ ಜಮೆ ಮಾಡತಕ್ಕದ್ದು. ಬ್ಯಾಂಕ್ ರಿಜಿಸ್ಟರ್‌ನ (ದೈನಂದಿನಲೆಕ್ಕದ ರಿಜಿಸ್ಟರಿನ ಭಾಗ–ಸಿಯಲ್ಲಿ) 2ನೇ ಕಾಲಂನಲ್ಲಿ "ಅಭ್ಯರ್ಥಿಯ ಸ್ವಂತನಿಧಿ" ಎಂದು, 3ನೇ ಕಾಲಂನಲ್ಲಿ "ನಗದು" ಎಂದು ಮತ್ತು 4ನೇ ಕಾಲಂನಲ್ಲಿ ಮೊತ್ತವೆಂದು ಬರೆದು ನಮೂದು ಮಾಡಬೇಕು.

1.2 **ಯಾರೇ ಇತರ ವ್ಯಕ್ತಿಯಿಂದ/ ಪಕ್ಷದಿಂದ/ ಸಂಘದಿಂದ/ ನಿಕಾಯದಿಂದ ಅಭ್ಯರ್ಥಿಯು ಸ್ವೀಕರಿಸಿದ ನಗದು ಹಣ:–** ಅಭ್ಯರ್ಥಿಯು ತನ್ನ ಚುನಾವಣಾ ಖರ್ಚುವೆಚ್ಚಗಳ ಉದ್ದೇಶಕ್ಕಾಗಿ ಯಾರೇ ಇತರ ವ್ಯಕ್ತಿಯಿಂದ/ಪಕ್ಷದಿಂದ ನಗದು ಹಣವನ್ನು ಸ್ವೀಕರಿಸಿದ್ದರೆ, ಆಗ ಆ ಮೊತ್ತವನ್ನು ಸ್ವೀಕೃತಿ ಭಾಗದಲ್ಲಿ ಕಾಲಂ–1 ರಲ್ಲಿ ದಿನಾಂಕವನ್ನು ಬರೆದು ನಗದು ರಿಜಿಸ್ಟರಿನಲ್ಲಿ (ಭಾಗ ಬಿ) ನಮೂದು ಮಾಡಬೇಕು. ಯಾರಿಂದ ನಗದನ್ನು ಸ್ವೀಕರಿಸಲಾಯಿತೋ ಆ ವ್ಯಕ್ತಿಯ/ ಆ ಪಕ್ಷದ ಇತ್ಯಾದಿಯ ಹೆಸರನ್ನು ಮತ್ತು ವಿಳಾಸವನ್ನು 2ನೇ ಕಾಲಂನಲ್ಲಿ ನಮೂದು ಮಾಡಬೇಕು. 3ನೇ ಕಾಲಂನಲ್ಲಿ ರಶೀದಿ ಸಂಖ್ಯೆಯನ್ನು (ಯಾವುದಾದರೂ ಇದ್ದರೆ) ಮತ್ತು ಕಾಲಂ–4ರಲ್ಲಿ ನಗದು ಮೊತ್ತವನ್ನು ನಮೂದು ಮಾಡಬೇಕು. ನಗದು ರಿಜಿಸ್ಟರ್‌ನಲ್ಲಿ ನಮೂದುಗಳನ್ನು ಮಾಡಿದ ನಂತರ, ಹಣವನ್ನು ಚುನಾವಣಾ ಖರ್ಚುವೆಚ್ಚಗಳಿಗಾಗಿ ತೆರೆಯಲಾದ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು. ಬ್ಯಾಂಕ್ ಖಾತೆಗಳಲ್ಲಿ ಹಣವನ್ನು ಜಮೆ ಮಾಡಿದ ನಂತರ, ಆ ಬಗ್ಗೆ ನಗದು ರಿಜಿಸ್ಟರ್‌ನ ಸಂದಾಯದ ಭಾಗದಲ್ಲಿ ಕಾಲಂ–5ರಲ್ಲಿ ದಿನಾಂಕವನ್ನು ಬರೆದು ನಮೂದುಗಳನ್ನು ಮಾಡಬೇಕು, ನಗದು ಹಣವನ್ನು ಇಟ್ಟಾಗ ಕಾಲಂ–6ರಲ್ಲಿ ಬ್ಯಾಂಕ್ ಖಾತೆಯ ಖಾತೆ ಸಂಖ್ಯೆಯನ್ನು ನಮೂದು ಮಾಡಬೇಕು ಮತ್ತು ಹಣ ಇಟ್ಟಿರುವುದನ್ನು ಕಾಲಂ–7ರಲ್ಲಿ ಮತ್ತು ಹಣದ ಮೊತ್ತವನ್ನು ಕಾಲಂ ನಂ.8ರಲ್ಲಿ ನಮೂದು ಮಾಡಬೇಕು.

1.3 ನಗದು ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟ ಮೇಲೆ, ಕಾಲಂ–1ರಲ್ಲಿ ದಿನಾಂಕವನ್ನು ಬರೆದು, ಕಾಲಂ–2 ರಲ್ಲಿ "ಅಭ್ಯರ್ಥಿಯ ಸ್ವಂತ ಹಣ", ಕಾಲಂ–3 ರಲ್ಲಿ ನಗದು, ಕಾಲಂ–4 ರಲ್ಲಿ ಹಣದ ಮೊತ್ತ ಇವುಗಳನ್ನೆಲ್ಲ ಬರೆದು ಬ್ಯಾಂಕ್ ರಿಜಿಸ್ಟರ್‌ನ್ನು (ಭಾಗ–ಸಿ) ಅಪ್‌ಡೇಟ್ ಮಾಡಬೇಕು. ಹೀಗೆ ಮಾಡಿದರೆ ಬ್ಯಾಂಕ್ ಶಿಲ್ಕನ್ನು ಹಿಂಪಡೆದುಕೊಳ್ಳಲು, ಬ್ಯಾಂಕ್ ಪಾಸ್ ಪುಸ್ತಕದೊಂದಿಗೆ ತಾಳೆ ನೋಡಲು ಸಾಧ್ಯವಾಗುತ್ತದೆ.

**2. ಸ್ವೀಕರಿಸಿದ ಚೆಕ್‌ಗಳು/ಡ್ರಾಫ್ಟ್‌ಗಳು/ಪೇ–ಆರ್ಡರ್‌ಗಳು**

**2.1 ಯಾರೇ ವ್ಯಕ್ತಿಯಿಂದ/ಪಕ್ಷದಿಂದ/ಸಂಘ ಸಂಸ್ಥೆ, ಮುಂತಾದವುಗಳಿಂದ ಸ್ವೀಕರಿಸಿದ ಅಥವಾ ಅಭ್ಯರ್ಥಿಯ ಸ್ವಂತ ಬ್ಯಾಂಕ್ ಅಕೌಂಟ್‌ನಿಂದ ತೆಗೆದ ಚೆಕ್‌ಗಳು/ಡ್ರಾಫ್ಟ್‌ಗಳು/ಪೇ–ಆರ್ಡರ್‌ಗಳು:**
ಅಭ್ಯರ್ಥಿಯು, ತನ್ನ ಚುನಾವಣಾ ಖರ್ಚುವೆಚ್ಚಗಳ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯಿಂದ/ಪಕ್ಷ ಮುಂತಾದವುಗಳಿಂದ ಚೆಕ್‌ನ್ನು/ಡ್ರಾಫ್ಟ್‌ನ್ನು/ಪೇ–ಆರ್ಡರ್‌ನ್ನು ಸ್ವೀಕರಿಸಿದ ಅಥವಾ ತನ್ನ ಸ್ವಂತ ಬ್ಯಾಂಕ್ ಖಾತೆಯಿಂದ ತಾನು ನೀಡಿದ ಚೆಕ್‌ನ್ನು/ಡ್ರಾಫ್ಟ್‌ನ್ನು/ಪೇ–ಆರ್ಡರ್‌ನ್ನು ಚುನಾವಣಾ

ಖರ್ಚುವೆಚ್ಚಗಳಿಗಾಗಿ ತೆರೆಯಲಾದಖಾತೆಗೆ ಜಮೆ ಮಾಡಬೇಕು. ಆತನು/ಆಕೆಯು ಬ್ಯಾಂಕ್ ರಿಜಿಸ್ಟರಿನ ಡೆಪಾಸಿಟ್ ಭಾಗದಲ್ಲಿ ಕಾಲಂ–1 ರಲ್ಲಿ ದಿನಾಂಕ ಬರೆದು ನಮೂದು ಮಾಡಬೇಕು. ಯಾವ ವ್ಯಕ್ತಿಯಿಂದ/ಪಕ್ಷದಿಂದ ಚೆಕ್ ನ್ನು ಸ್ವೀಕರಿಸಲಾಯಿತೋ ಆ ವ್ಯಕ್ತಿಯು/ಪಕ್ಷದ ಹೆಸರನ್ನು ಮತ್ತು ವಿಳಾಸವನ್ನು ಕಾಲಂ–2 ರಲ್ಲಿ ನಮೂದು ಮಾಡಬೇಕು. ಚೆಕ್‌ನ/ಡ್ರಾಫ್ಟ್‌ನ/ಪೇ–ಆರ್ಡರ್‌ನ ಸಂಖ್ಯೆಯನ್ನು ಬ್ಯಾಂಕಿನ/ಶಾಖೆಯ ಹೆಸರನ್ನು ಕಾಲಂ–3 ರಲ್ಲಿ ನಮೂದು ಮಾಡಬೇಕು ಮತ್ತು ಚೆಕ್‌ನ/ಡ್ರಾಫ್ಟ್‌ನ/ಪೇ–ಆರ್ಡರ್‌ನ ಮೊತ್ತವನ್ನು ಕಾಲಂ–4 ರಲ್ಲಿ ನಮೂದು ಮಾಡಬೇಕು. ಚೆಕ್ ತನ್ನ ಸ್ವಂತ ಬ್ಯಾಂಕ್ ಖಾತೆಯಿಂದ ತೆಗೆದಿದ್ದರೆ ಬ್ಯಾಂಕ್ ರಿಜಿಸ್ಟರ್‌ನ ಕಾಲಂ–2ರಲ್ಲಿ "ಅಭ್ಯರ್ಥಿಯ ಸ್ವಂತ" ನಿಧಿಯಿಂದ ಎಂದು ನಮೂದು ಮಾಡಬೇಕು.

**3. ವಸ್ತುರೂಪದಲ್ಲಿ ಸ್ವೀಕರಿಸಿದ ಸರಕುಗಳು ಅಥವಾ ಸೇವೆಗಳು**

**3.1 ಕೆಲವೊಂದು ಸರಕುಗಳನ್ನು ಅಥವಾ ಸೇವೆಗಳನ್ನು ವಸ್ತುಗಳ ರೂಪದಲ್ಲಿ ಎಂದರೆ ವಾಹನಗಳು, ಭಿತ್ತಿಪತ್ರಗಳು, ಕರಪತ್ರಗಳು, ಮಾಧ್ಯಮದ ಜಾಹೀರಾತುಗಳು, ಹೆಲಿಕ್ಯಾಪ್ಟರ್‌ಗಳು, ವಿಮಾನಗಳು, ಮುಂತಾದ ಸೇವೆಗಳನ್ನು ಪಕ್ಷದಿಂದ/ಯಾರೆ ವ್ಯಕ್ತಿಯಿಂದ/ನಿಕಾಯದಿಂದ/ಸಂಘ ಸಂಸ್ಥೆಯಿಂದ ಸ್ವೀಕರಿಸಿದಾಗ:**

ಅಭ್ಯರ್ಥಿಯು ಚುನಾವಣಾ ಪ್ರಚಾರ ಇತ್ಯಾದಿಗಾಗಿ ಕೆಲವೊಂದು ಸರಕುಗಳನ್ನು ಅಥವಾ ವಸ್ತು ರೂಪದಲ್ಲಿ ಸೇವೆಗಳನ್ನು ಯಾರೇ ವ್ಯಕ್ತಿಯು/ನಿಕಾಯವು/ಸಂಘ ಸಂಸ್ಥೆಯು ಒದಗಿಸಿದಾಗ ಆ ಬಾಬುಗಳ ಬಗ್ಗೆ ಅವಶ್ಯಕ ನಮೂದುಗಳನ್ನು ಎಂದರೆ ದೈನಂದಿನ ಲೆಕ್ಕದ ರಿಜಿಸ್ಟರ್ ಭಾಗ–ಎ ಯಲ್ಲಿ ಮಾಡಬೇಕಾಗುತ್ತದೆ ಎಂದರೆ ಕಾಲಂ–1 ರಲ್ಲಿ ದಿನಾಂಕವನ್ನು ಬರೆದು, ಕಾಲಂ–2ರಲ್ಲಿ ಪ್ರತಿಯೊಂದು ಬಾಬಿನ ವಿವರಣೆ, ಪರಿಮಾಣ, ದರವನ್ನು ಕಾಲಂ–3ರಲ್ಲಿ ವೆಚ್ಚದ ಸ್ವರೂಪವನ್ನು ಮತ್ತು ಒಟ್ಟು ಮೌಲ್ಯವನ್ನು (ಎಂದರೆ ಬಾಬುಗಳಿಗೆ ಇಂತೀಷ್ಟಾಗಬಹುದೆಂದು ಅಂದುಕೊಂಡ ಮೌಲ್ಯವನ್ನು) ಆ ರಿಜಿಸ್ಟರಿನಲ್ಲಿ ನಮೂದು ಮಾಡಬೇಕು. ಅಲ್ಲದೆ ವಸ್ತುರೂಪದಲ್ಲಿನ ಬಾಬುಗಳನ್ನು ರಾಜಕೀಯ ಪಕ್ಷವು ಒದಗಿಸಿದ್ದರೆ, ಆಗ ಒಟ್ಟು ಮೌಲ್ಯವನ್ನು ಮತ್ತು ರಾಜಕೀಯ ಪಕ್ಷದ ಹೆಸರನ್ನು ಕಾಲಂ–7ರಲ್ಲಿ ನಮೂದು ಮಾಡಬೇಕು ಮತ್ತು ಅಂಥ ಬಾಬುಗಳನ್ನು ಯಾರೇ ಇತರ ವ್ಯಕ್ತಿಯ/ಸಂಘ ಸಂಸ್ಥೆ ಮುಂತಾದವು ಒದಗಿಸಿದ್ದರೆ ಆಗ ಹಣದ ಮೊತ್ತವನ್ನು ಮತ್ತು ಅಂಥ ವ್ಯಕ್ತಿಗಳ/ಸಂಘ ಸಂಸ್ಥೆ ಮುಂತಾದವುಗಳ ಹೆಸರು ಮತ್ತು ವಿಳಾಸವನ್ನು ಆ ರಿಜಿಸ್ಟರಿನ ಕಾಲಂ–8 ರಲ್ಲಿ ನಮೂದು ಮಾಡಬೇಕು.

**4. ಎಲ್ಲಾ ಚುನಾವಣಾ ಖರ್ಚು ವೆಚ್ಚಗಳ ಬಗ್ಗೆ**

4.1 ಎಲ್ಲಾ ಚುನಾವಣಾ ಖರ್ಚುವೆಚ್ಚವನ್ನು ದೈನಂದಿನ ಲೆಕ್ಕದ ರಿಜಿಸ್ಟರ್‌ನಲ್ಲಿ (ಭಾಗ–ಎ) ನಮೂದು ಮಾಡಬೇಕು. ಯಾವುದೇ ಖರ್ಚುವೆಚ್ಚ ಮಾಡಿದಾಗಲೆಲ್ಲ ಉದಾಹರಣೆಗೆ ಟ್ಯಾಕ್ಸಿಯನ್ನು ಬಾಡಿಗೆಗೆ ಪಡೆದುಕೊಂಡಾಗ, ದೈನಂದಿನ ಲೆಕ್ಕದ ರಿಜಿಸ್ಟರ್‌ನಲ್ಲಿ (ಭಾಗ–ಎ) ಎಂದರೆ, ಕಾಲಂ–1ರಲ್ಲಿ ದಿನಾಂಕವನ್ನು, ಕಾಲಂ–2ರಲ್ಲಿ ಖರ್ಚುವೆಚ್ಚದ ಸ್ವರೂಪವನ್ನು ಎಂದರೆ, ಟ್ಯಾಕ್ಸಿ ನಂಬರ್‌ನ್ನು, ಬಾಡಿಗೆಗೆ ಪಡೆದುಕೊಂಡ ಒಟ್ಟು ಗಂಟೆಗಳನ್ನು\ ದಿನಗಳನ್ನು ಮತ್ತು ಪ್ರತಿ ಗಂಟೆಗೆ/ದಿನಕ್ಕೆ ದರವನ್ನು ಮತ್ತು ಕಾಲಂ– 3ರಲ್ಲಿ ಒಟ್ಟು ಹಣವನ್ನು, ಕಾಲಂ–4ರಲ್ಲಿ, ಟ್ಯಾಕ್ಸಿ ಒದಗಿಸಿದವರ ಹೆಸರನ್ನು ಮತ್ತು ವಿಳಾಸವನ್ನು, ಕಾಲಂ–5ರಲ್ಲಿ ಬಿಲ್ಲು ಸಂಖ್ಯೆ/ವೋಚರ್ ಸಂಖ್ಯೆಯನ್ನು ನಮೂದು ಮಾಡಬೇಕು. ಹಣವನ್ನು ಅಭ್ಯರ್ಥಿಯೇ ಸಂದಾಯ ಮಾಡಿದ್ದರೆ, ಕಾಲಂ–5ರಲ್ಲಿ ನಮೂದು ಮಾಡಬೇಕು. ರಾಜಕೀಯ ಪಕ್ಷವು ಟ್ಯಾಕ್ಸಿ ಒದಗಿಸಿದವರಿಗೆ ನೇರವಾಗಿ ಹಣ ಸಂದಾಯ ಮಾಡಿದ್ದರೆ ಆ ಮೊತ್ತವನ್ನು ಕಾಲಂ–7ರಲ್ಲಿ ನಮೂದು ಮಾಡಬೇಕು. ಆ ಹಣವನ್ನು ಯಾರೇ ಇತರ ವ್ಯಕ್ತಿಯು ಸಂದಾಯ ಮಾಡಿದ್ದರೆ ಆ ಹಣದ ಮೊತ್ತವನ್ನು ಮತ್ತು ಆ ವ್ಯಕ್ತಿಯ ಹೆಸರನ್ನು ಹಾಗೂ ವಿಳಾಸವನ್ನು ಕಾಲಂ–8ರಲ್ಲಿ ನಮೂದು ಮಾಡಬೇಕು.

4.2 **ಚೆಕ್ಕುಗಳ ಮೂಲಕ ಮಾಡಿದ ಖರ್ಚುವೆಚ್ಚಗಳ ಸಂದಾಯದ ಬಗ್ಗೆ:**ಖರ್ಚುವೆಚ್ಚಗಳಿಗಾಗಿ ಮಾಡಿರುವ ಎಲ್ಲಾ ಸಂದಾಯಗಳನ್ನು (ಇಡೀ ಚುನಾವಣಾ ಪ್ರಕ್ರಿಯೆಯ ಅವಧಿಯಲ್ಲಿ ಒಬ್ಬನೆ ವ್ಯಕ್ತಿಗೆ 20,000 ಸಾವಿರ ರೂಪಾಯಿಗಳವರೆಗೆ ಮಾಡಿದ ಚಿಲ್ಲರೆ ಖರ್ಚುಗಳ ಹೊರತುಪಡಿಸಿ) A/c payeeಚೆಕ್ಕುಗಳ ಮೂಲಕವೇ ಸಂದಾಯ ಮಾಡಬೇಕು. ಚೆಕ್ಕುಗಳ ಮೂಲಕ ಸಂದಾಯ ಮಾಡುವುದಕ್ಕಾಗಿ ಈ ಕೆಳಕಂಡಂತೆ ಬ್ಯಾಂಕ್ ರಿಜಿಸ್ಟರಿನಲ್ಲಿ (ಭಾಗ–ಸಿ) ನಮೂದು ಮಾಡಬೇಕು. ಕಾಲಂ–5ರಲ್ಲಿ ಚೆಕ್ ಸಂಖ್ಯೆ, ಕಾಲಂ–6ರಲ್ಲಿ ಯಾರಿಗೆ ಚೆಕ್ಕನ್ನು ನೀಡಲಾಯಿತೋ ಆ ವ್ಯಕ್ತಿಯ ಹೆಸರನ್ನು, ಕಾಲಂ–7ರಲ್ಲಿ ವೆಚ್ಚದ ಸ್ವರೂಪವನ್ನು ಮತ್ತು ಕಾಲಂ–8ರಲ್ಲಿ ಹಣದ ಮೊತ್ತವನ್ನು ನಮೂದು ಮಾಡಬೇಕು.

4.3 **ಚಿಲ್ಲರೆ ಖರ್ಚುವೆಚ್ಚಗಳಿಗಾಗಿ ನಗದು ರೂಪದಲ್ಲಿ ಮಾಡಿದ ಸಂದಾಯ:**ಚಿಲ್ಲರೆ ಖರ್ಚುವೆಚ್ಚಗಳಿಗಾಗಿ ಯಾವುದೇ ನಗದು ರೂಪದಲ್ಲಿ ಸಂದಾಯ ಮಾಡಿದ್ದರೆ (ಅದರಲ್ಲೂ ಇಡೀ ಚುನಾವಣಾ ಪ್ರಚಾರದ ಅವಧಿಯಲ್ಲಿ ಒಬ್ಬ ವ್ಯಕ್ತಿಗೆ ಕೊಟ್ಟ ಒಟ್ಟು ಮೊತ್ತವು 20,000 ಸಾವಿರ ರೂಪಾಯಿಯನ್ನು ಮೀರತಕ್ಕದ್ದಲ್ಲ) ಆಗ ಚುನಾವಣಾ ವೆಚ್ಚಕ್ಕಾಗಿ ತೆರೆಯಲಾದ ಬ್ಯಾಂಕ್ ಖಾತೆಯಿಂದ ಹಣವನ್ನು ಹಿಂತೆಗೆದುಕೊಳ್ಳಬೇಕು. ಈ ಬಗ್ಗೆ, ಬ್ಯಾಂಕ್ ರಿಜಿಸ್ಟರಿನ ಕಾಲಂ–5ರಲ್ಲಿ ಹಣವನ್ನು ಹಿಂಪಡೆಯುವುದಕ್ಕಾಗಿ ಚೆಕ್‌ನ ನಂಬರನ್ನು ಉಲ್ಲೇಖಿಸಿ ನಮೂದುಗಳನ್ನು ಮಾಡಬೇಕು, 'ಸೆಲ್ಫ್' ಕಾಲಂ–6ರಲ್ಲಿ ವೆಚ್ಚದ ಸ್ವರೂಪವನ್ನು, ಕಾಲಂ–7ರಲ್ಲಿ 'ಚಿಲ್ಲರೆ ಖರ್ಚುವೆಚ್ಚಗಳಿಗಾಗಿ ತೆಗೆದ ಹಣ',ಕಾಲಂ–8ರಲ್ಲಿ ಮೊಬಲಗನ್ನು ನಮೂದು ಮಾಡಬೇಕು. ಹಣವನ್ನು ಹಿಂಪಡೆದ ನಂತರ ಈ ಮೊಬಲಗನ್ನು ನಗದು ರಿಜಿಸ್ಟರಿನ (ಭಾಗ–ಬಿ) ಸ್ವೀಕೃತಿಯ ಭಾಗದಲ್ಲಿ ನಮೂದಿಸುವ ಮೂಲಕ ಪರಿಚಯಿಸಬೇಕು. ಈ ಬಗ್ಗೆ ಕಾಲಂ–1ರಲ್ಲಿ ದಿನಾಂಕವನ್ನು, ಕಾಲಂ–2ರಲ್ಲಿ 'ಸೆಲ್ಫ್' ಎಂದು, ಕಾಲಂ–3ರಲ್ಲಿ ಬ್ಯಾಂಕಿನಿಂದ ಸ್ವಯಂ ಹಿಂಪಡೆಯಕೊಳ್ಳಲಾದುದನ್ನು, ಕಾಲಂ–4ರಲ್ಲಿ ಮೊಬಲಗನ್ನು ನಮೂದು ಮಾಡಬೇಕು. ಚಿಲ್ಲರೆ ಖರ್ಚುವೆಚ್ಚಗಳನ್ನು ಮಾಡುವುದಕ್ಕಾಗಿ ಬೇರೆ ಬೇರೆ ಶಾಖಾ ಕಚೇರಿಗಳು ಅಥವಾ ಏಜೆಂಟರುಗಳಿಗೆ ಚಿಲ್ಲರೆ ಹಣವನ್ನು ಕೊಟ್ಟಿದ್ದರೆ, ಆಗ ಕಾಲಂ–9 ರಲ್ಲಿ ಹಣದ ಮೊತ್ತವನ್ನು, ವ್ಯಕ್ತಿಗಳ/ಸ್ಥಳಗಳ ಹೆಸರುಗಳನ್ನು ನಮೂದು ಮಾಡಬೇಕು. ಚಿಲ್ಲರೆ ಖರ್ಚುಗಳಿಗಾಗಿ ಹಣ ಸಂದಾಯ ಮಾಡಿದ ನಂತರ, ಅಂಥ ಖರ್ಚುವೆಚ್ಚಗಳ ಕುರಿತು ದೈನಂದಿನ ಲೆಕ್ಕಗಳ ರಿಜಿಸ್ಟರಿನಲ್ಲಿ (ಭಾಗ–ಎ) ಈ ಕೆಳಕಂಡಂತೆ ನಮೂದು ಮಾಡಬೇಕು ಎಂದರೆ, ಕಾಲಂ1 ರಲ್ಲಿ ದಿನಾಂಕವನ್ನು, ಕಾಲಂ–2 ರಲ್ಲಿ ಸಂದಾಯದ ಬಗೆಯನ್ನು, ಕಾಲಂ–3 ರಲ್ಲಿ ಒಟ್ಟು ಮೊತ್ತವನ್ನು, ಕಾಲಂ–4ರಲ್ಲಿ ಹಣ ಸ್ವೀಕರಿಸಿದವನ ಹೆಸರು ಮತ್ತು ವಿಳಾಸವನ್ನು, ಕಾಲಂ–5ರಲ್ಲಿ ಬಿಲ್ ಸಂಖ್ಯೆ/ವೋಚರು ಸಂಖ್ಯೆಯನ್ನು ಹಾಗೂ ಕಾಲಂ–6 ರಲ್ಲಿ "self" ಎಂದು ನಮೂದಿಸಬೇಕು.

**(ಇಸಿಐ ಸಂ. 76/ಸೂಚನೆಗಳು/2014/ಇಇಪಿಎಸ್/ಸಂ. I, ದಿನಾಂಕ 23–01–2014)**

| ಚುನಾವಣಾ ವೆಚ್ಚಗಳ ಸಂಕ್ಷಿಪ್ತ ವಿವರಣ ಪಟ್ಟಿಕೆ | | |
|---|---|---|
| ಭಾಗ – I | | |
| I | ಅಭ್ಯರ್ಥಿಯ ಹೆಸರು | ಶ್ರೀ/ಶ್ರೀಮತಿ/ಕುಮಾರಿ |
| II | ಮತಕ್ಷೇತ್ರದ ಸಂಖ್ಯೆ ಮತ್ತು ಹೆಸರು | |
| III | ರಾಜ್ಯ/ಕೇಂದ್ರಾಡಳಿತ ಪ್ರದೇಶದ ಹೆಸರು | |

| | | |
|---|---|---|
| IV | ಚುನಾವಣೆಯ ವಿಧ (ರಾಜ್ಯ ವಿಧಾನಸಭೆಗೆ/ಲೋಕಸಭೆಗೆ ಸಾರ್ವತ್ರಿಕ, ಚುನಾವಣೆಯೇ, ಉಪ ಚುನಾವಣೆಯೇ ದಯವಿಟ್ಟು ನಮೂದಿಸಿ) | |
| V | ಫಲಿತಾಂಶ ಘೋಷಣೆಯ ದಿನಾಂಕ | |
| VI | ಚುನಾವಣಾ ಏಜೆಂಟ್‌ನ ಹೆಸರು ಮತ್ತು ವಿಳಾಸ | |
| VII | ರಾಜಕೀಯ ಪಕ್ಷದಿಂದ ಚುನಾವಣೆಗೆ ನಿಂತಿರುವ ಅಭ್ಯರ್ಥಿಯಾಗಿದ್ದರೆ, ರಾಜಕೀಯ ಪಕ್ಷದ ಹೆಸರನ್ನು ದಯವಿಟ್ಟು ನಮೂದಿಸಿ. | |
| VIII | ರಾಜಕೀಯ ಪಕ್ಷವು ಮನ್ನಣೆ ಪಡೆದ ಪಕ್ಷವೇ | ಹೌದು/ಇಲ್ಲ |

ದಿನಾಂಕ: ಅಭ್ಯರ್ಥಿಯ ಸಹಿ

ಸ್ಥಳ: ಹೆಸರು

| ಭಾಗ–II:ಅಭ್ಯರ್ಥಿಯ ಚುನಾವಣಾ ವೆಚ್ಚದ ಸಂಕ್ಷಿಪ್ತ ವಿವರ ಪಟ್ಟಿಕೆ | | | | | |
|---|---|---|---|---|---|
| ಕ್ರ.ಸಂ. | ವಿವರಗಳು | ಅಭ್ಯರ್ಥಿಯು ಚುನಾವಣಾ ಏಜೆಂಟ್‌ನು ಖರ್ಚು ಮಾಡಿದ ಮೊತ್ತ/ಅಧಿಕೃತ ಗೊಳಿಸಿದ ಮೊತ್ತ (ರೂಪಾಯಿಗಳಲ್ಲಿ) | ಚುನಾವಣಾ ಪಕ್ಷವು ಖರ್ಚು ಮಾಡಿದ ಮೊತ್ತ/ ಅಧಿಕೃತಗೊಳಿಸಿದ ಮೊತ್ತ (ರೂಪಾಯಿಗಳಲ್ಲಿ) | ಇತರರು ಖರ್ಚು ಮಾಡಿದ ಮೊತ್ತ/ ಅಧಿಕೃತಗೊಳಿಸಿದ ಮೊತ್ತ | ಒಟ್ಟು ಚುನಾವಣೆಯ ವೆಚ್ಚಗಳು (3)+(4)+(5) |
| 1 | 2 | 3 | 4 | 5 | 6 |
| I | ಸಾರ್ವಜನಿಕ ಸಭೆ, ರ‍್ಯಾಲಿ, ಮೆರವಣಿಗೆ ಮುಂತಾದವುಗಳಲ್ಲಿನ ವೆಚ್ಚಗಳು:–<br>Iಎ: ಸಾರ್ವಜನಿಕ ಸಭೆ, ರ‍್ಯಾಲಿ, ಮೆರವಣಿಗೆ ಮುಂತಾದವುಗಳಲ್ಲಿನ ವೆಚ್ಚಗಳು (ಎಂದರೆ: ರಾಜಕೀಯ ಪಕ್ಷದ ತಾರಾ ಪ್ರಚಾರಕರುಗಳಿಗೆ ಆಗಿರುವವುಗಳನ್ನು ಹೊರತುಪಡಿಸಿ (ಅನುಸೂಚಿ–1ರ ಅನುಸಾರ ಲಗತ್ತಿಸಿ) | | | | |
| | Iಬಿ: ಸಾರ್ವಜನಿಕ ಸಭೆ, ರ‍್ಯಾಲಿ, ಮೆರವಣಿಗೆ ಮುಂತಾದವುಗಳಲ್ಲಿನ ತಾರಾ ಪ್ರಚಾರಕರುಗಳಿಗಾಗಿ ಆಗಿರುವ ಖರ್ಚುವೆಚ್ಚಗಳು (ಎಂದರೆ, ಪಕ್ಷದ ಸಾಮಾನ್ಯ ಪಕ್ಷದ ಪ್ರಚಾರ ಕಾರ್ಯಕ್ರಮದ ಹೊರತಾಗಿ) (ಅನುಸೂಚಿ–2ರ ಅನುಸಾರ ಲಗತ್ತಿಸಿ) | | | | |
| II | ಮೇಲಿನ ಕ್ರಮಸಂಖ್ಯೆ–1ರಲ್ಲಿ ನಮೂದಿಸಲಾದ ಸಾರ್ವಜನಿಕ ಸಭೆ, ರ‍್ಯಾಲಿ, ಮೆರವಣಿಗೆ ಮೊದಲಾದವುಗಳಲ್ಲಿ ಉಪಯೋಗಿಸಿದವುಗಳನ್ನು ಹೊರತುಪಡಿಸಿ ಪ್ರಚಾರ ಸಾಮಗ್ರಿಗಳನ್ನು ನಮೂದಿಸುವುದು (ಅನುಸೂಚಿ–3ರ ಅನುಸಾರ ಲಗತ್ತಿಸಿ) | | | | |
| III | ಕೇಬಲ್ ನೆಟ್‌ವರ್ಕ್, ದೊಡ್ಡ ಪ್ರಮಾಣದ ಎಸ್.ಎಂ.ಎಸ್ ಅಥವಾ ಅಂತರ್ಜಾಲ ಮತ್ತು ಸಾಮಾಜಿಕ ಜಾಲತಾಣಗಳ ಒಳಗೊಂಡಂತೆ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದಮೂಲಕ ಪ್ರಚಾರ | | | | |

| | | | | | |
|---|---|---|---|---|---|
| | (ಅನುಸೂಚಿ–4ರ ಅನುಸಾರ ಲಗತ್ತಿಸಿ) | | | | |
| IV | ಅಭ್ಯರ್ಥಿಯು ಪ್ರಚಾರಕ್ಕಾಗಿ ಬಳಸಿದ ವಾಹನಗಳ ಮೇಲಿನ ಖರ್ಚುವೆಚ್ಚಗಳು (ಅನುಸೂಚಿ–5ರ ಅನುಸಾರ ಲಗತ್ತಿಸಿ) | | | | |
| V | ಪ್ರಚಾರದ ಕಾರ್ಯಕರ್ತರುಗಳು/ ಏಜೆಂಟರುಗಳ ವೆಚ್ಚಗಳು ( ಅನುಸೂಚಿ–6ರ ಅನುಸಾರ ಲಗತ್ತಿಸಿ) | | | | |
| VI | ಇತರೆ ಯಾವುದೇ ಪ್ರಚಾರದ ಖರ್ಚು ವೆಚ್ಚಗಳು | | | | |
| | ಒಟ್ಟು ಮೊತ್ತ | | | | |

**ಭಾಗ–III: ಅಭ್ಯರ್ಥಿಗಳು ಸಂಗ್ರಹಿಸಿದ ನಿಧಿಗಳ ಮೂಲದ ವಿವರಣ ಪಟ್ಟಿಕೆ**

| **ಕ್ರ.ಸಂ.** | **ವಿವರಗಳು** | **ಮೊತ್ತ (ರೂಪಾಯಿಗಳಲ್ಲಿ)** |
|---|---|---|
| 1 | 2 | 3 |
| I | ಚುನಾವಣಾ ಪ್ರಚಾರಕ್ಕಾಗಿ ಬಳಸಲಾದ ಸ್ವಂತ ನಿಧಿಯ ಮೊತ್ತ (ಅನುಸೂಚಿ–7ರ ಅನುಸಾರ ಲಗತ್ತಿಸಿ) | |
| II | ನಗದು ಅಥವಾ ಚೆಕ್ ಮುಂತಾದವುಗಳಲ್ಲಿ ಪಕ್ಷದದಿಂದ (ಗಳಿಂದ) ಸ್ವೀಕರಿಸಿದ ಒಟ್ಟು ಮೊತ್ತ (ಅನುಸೂಚಿ–8ರ ಅನುಸಾರ ಲಗತ್ತಿಸಿ) | |
| III | ಯಾವುದೇ ವ್ಯಕ್ತಿ/ಕಂಪನಿ/ಸಂಸ್ಥೆ/ಸಂಘ ಸಂಸ್ಥೆಗಳು/ವ್ಯಕ್ತಿ ನಿಕಾಯಗಳಿಂದ ಸ್ವೀಕರಿಸಿದ ಒಟ್ಟು ಮೊತ್ತ (ಅನುಸೂಚಿ–9ರ ಅನುಸಾರ ಲಗತ್ತಿಸಿ) | |
| | ಒಟ್ಟು | |

# ಭಾಗ –IV
## ಅಫಿಡಾವಿಟ್ ನಮೂನೆ

**-------------- (ಜಿಲ್ಲೆ, ರಾಜ್ಯ/ಕೇಂದ್ರಾಡಳಿತ ಪ್ರದೇಶ) ಜಿಲ್ಲಾ ಚುನಾವಣಾಧಿಕಾರಿಗಳ ಸಮಕ್ಷಮ**

ಶ್ರೀ/ಶ್ರೀಮತಿ/ಕುಮಾರಿ ----------- ಇವರ (ಮಗ/ಹೆಂಡತಿ/ಮಗಳು) ಆದ ---------- ಇವರ ಅಫಿಡಾವಿಟ್.

----------- ಇವರ ಮಗ/ಹೆಂಡತಿ/ಮಗಳು --------- ವಯಸ್ಸಿನ ----------- ರ ನಿವಾಸಿಯಾದ -------- ಆದ ನಾನು ಈ ಮೂಲಕ ಪ್ರಮಾಣಪೂರ್ವಕವಾಗಿ ಮತ್ತು ಪ್ರಾಮಾಣಿಕವಾಗಿ ಈ ಕೆಳಕಂಡಂತೆ:

(1) ನಾನು -------------- ಲೋಕಸಭೆ/ವಿಧಾನಸಭಾ ಕ್ಷೇತ್ರದಿಂದ------------- ಲೋಕಸಭೆಗೆ/ವಿಧಾನಸಭೆಗೆ ನಡೆದ ಸಾರ್ವತ್ರಿಕ/ಉಪ–ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೆ ಮತ್ತು ಇದರ ಫಲಿತಾಂಶ ದಿನಾಂಕ --------------ರಂದು ಘೋಷಿತವಾಗಿರುತ್ತದೆ.

(2) ನಾನು/ನನ್ನ ಚುನಾವಣಾ ಏಜೆಂಟರು ------- ರ ನಡುವೆ ನಡೆದ ಮೇಲ್ಕಂಡ ಚುನಾವಣೆಗೆ ಸಂಬಂಧಿಸಿದಂತೆ (ನಾಮಪತ್ರ ಸಲ್ಲಿಸಿದ ದಿನಾಂಕದಿಂದ) ಅದರ ಫಲಿತಾಂಶದ ಘೋಷಣೆ ದಿನಾಂಕದವರೆಗೆ ಆ ಎರಡೂ ದಿನಗಳು ಸೇರಿದಂತೆ, ನಾನು ಮತ್ತು ನನ್ನ ಚುನಾವಣಾ ಏಜೆಂಟ್ ಮಾಡಿದ ಎಲ್ಲಾ ವೆಚ್ಚಗಳ ಬಗ್ಗೆ ಪ್ರತ್ಯೇಕವಾದ ಹಾಗೂ ಸರಿಯಾದ ಲೆಕ್ಕಗಳನ್ನು ಇಟ್ಟಿರುತ್ತೇವೆ ಎಂದೂ

(3) ಈ ಉದ್ದೇಶಕ್ಕಾಗಿ, ನಾನು ಮೇಲ್ಕಂಡ ಚುನಾವಣಾ ವೆಚ್ಚದ ಲೆಕ್ಕಗಳನ್ನು ರಿಟರ್ನಿಂಗ್ ಅಧಿಕಾರಿಯು ಒದಗಿಸಿರುವ ರಿಜಿಸ್ಟರಿನಲ್ಲಿ ನಿರ್ವಹಿಸಲಾಗಿದ್ದು,ಸದರಿ ರಿಜಿಸ್ಟರನ್ನೇ ಆ ಲೆಕ್ಕದಲ್ಲಿ ನಮೂದಿಸಿರುವಂತೆ ಸಮರ್ಥಿತ ವೋಚರುಗಳ ಮತ್ತು ಬಿಲ್ಲುಗಳ ಸಮೇತ ಇಲ್ಲಿ ಲಗತ್ತಿಸಲಾಗಿದೆ ಎಂದೂ,

(4) ಇದಕ್ಕೆ ಲಗತ್ತಿಸಿರುವ ನನ್ನ ಚುನಾವಣಾ ವೆಚ್ಚದ ಲೆಕ್ಕಪತ್ರವು, ಮೇಲ್ಕಂಡ ಚುನಾವಣೆಗೆ ಸಂಬಂಧಿಸಿದಂತೆ ನನ್ನಿಂದ ಭರಿಸಲಾದ ಅಥವಾ ಅಧಿಕೃತಗೊಳಿಸಲಾದ ಅಥವಾ ನನ್ನ ಚುನಾವಣಾ ಏಜೆಂಟರು ಮಾಡಿರುವ ಎಲ್ಲಾ ವೆಚ್ಚಗಳು, ಮತ್ತು ನನ್ನನ್ನು ಪುರಸ್ಕರಿಸುವ ರಾಜಕೀಯ ಪಕ್ಷ ಮಾಡಿರುವ ವೆಚ್ಚ, ನನ್ನನ್ನು ಬೆಂಬಲಿಸುವ ಇತರ ಸಂಘ ಸಂಸ್ಥೆಗಳು/ ವ್ಯಕ್ತಿಗಳ ನಿಕಾಯಗಳು ಮತ್ತು ಇತರೆ ವ್ಯಕ್ತಿಗಳು ಮಾಡಿದ ಇವುಗಳೂ ಒಳಗೊಂಡಿರುತ್ತದೆ ಮತ್ತು ಚುನಾವಣೆಗೆ ಸಂಬಂಧಿಸಿದಂತೆ, ಈ ನನ್ನ ಲೆಕ್ಕದಲ್ಲಿ ಯಾವುದನ್ನು (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 77(1)ನೆಯ ಪ್ರಕರಣದಲ್ಲಿನ ವಿವರಣೆ 1 ಮತ್ತು ವಿವರಣೆ 2 ಅನ್ವಯವಾಗುವ ನಾಯಕರ ಪ್ರಯಾಣಕ್ಕೆ ತಗಲಿದ ವೆಚ್ಚವನ್ನು ಹೊರತುಪಡಿಸಿ) ಯಾವುದೇ ವೆಚ್ಚಗಳನ್ನು ಮರೆಮಾಚಿರುವುದಿಲ್ಲ ಅಥವಾ ತಡೆಹಿಡಿದಿರುವುದಿಲ್ಲ/ನಿಗ್ರಹಿಸಿರುವುದಿಲ್ಲ ಎಂದೂ,

(5) ಮೇಲಿನ ಹೇಳಿದ ಲೆಕ್ಕಕ್ಕೆ ಅನುಬಂಧ–IIರ ಅನುಸಾರ ಲಗತ್ತಿಸಿರುವ ಚುನಾವಣಾ ವೆಚ್ಚಗಳ ಸಂಕ್ಷಿಪ್ತ ವಿವರಣೆಯು, ಮೇಲ್ಕಂಡ ಚುನಾವಣೆಗಾಗಿ ನಾನು ಮಾಡಿದ/ನನ್ನಿಂದ ಅಧಿಕೃತಗೊಳಿಸಲಾದ/ನನ್ನ ಚುನಾವಣಾ ಏಜೆಂಟರು ಮಾಡಿದ/ನನ್ನನ್ನು ಪುರಸ್ಕರಿಸಿದ ರಾಜಕೀಯ ಪಕ್ಷ, ಇತರೆ ಸಂಘ ಸಂಸ್ಥೆಗಳು/ನನ್ನನ್ನು ಸಮರ್ಥಿಸಿದ ವ್ಯಕ್ತಿಗಳ ಹಾಗೂ ಇತರ ವ್ಯಕ್ತಿಗಳ ಗುಂಪು ಮಾಡಿರುವ ಎಲ್ಲ ವೆಚ್ಚಗಳು ಒಳಗೊಂಡಿವೆ ಎಂದೂ,

(6) ಮೇಲಿನ 1 ರಿಂದ 5 ರವರೆಗಿನ ಪ್ಯಾರಾಗಳಲ್ಲಿರುವ ಹೇಳಿಕೆಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ಅರಿವಿನ ಮಟ್ಟಿಗೆ ನಿಜವಾದವುಗಳು ಮತ್ತು ಯಾವುದೂ ಸುಳ್ಳಲ್ಲ ಮತ್ತು ಯಾವುದನ್ನು ಮರೆ ಮಾಚಿರುವುದಿಲ್ಲವೆಂದು

- ಘೋಷಿಸುತ್ತೇನೆ.

**ವಾಙ್ಮೂಲಕಾರ**

ನನ್ನ ಸಮಕ್ಷಮದಲ್ಲಿ 201 --------------ಇಸವಿಯ --------------ತಿಂಗಳ -------------ರಂದು ಈ ದಿನ --------------ಇಲ್ಲಿ ಘೋಷಿಸಿರುತ್ತಾರೆ.

(ದೃಢೀಕರಿಸುವ ಅಧಿಕಾರಿಯು, ಎಂದರೆ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ಅಥವಾ ಓತ್ ಕಮಿಷನ್‌ರವರ ಅಥವಾ ನೋಟರಿ ಪಬ್ಲಿಕ್‌ರವರ ಸಹಿ ಮತ್ತು ಮೊಹರು)

## ಸ್ವೀಕೃತಿ ನಮೂನೆ

ಗೆ

ರಿಟರ್ನಿಂಗ್ ಅಧಿಕಾರಿ

____________________

____________________

____________________

ಮಾನ್ಯರೆ,

1. ನಾನು, ನಿಮ್ಮ ಪತ್ರ ಸಂಖ್ಯೆ ––––––––––––––ದಿನಾಂಕ ––––––––––––––ನ್ನು ಚುನಾವಣೆ ವೆಚ್ಚಗಳಿಗೆ ಸಂಬಂಧಿಸಿದಂತೆ ನನ್ನ ಲೆಕ್ಕಗಳನ್ನು ಇಟ್ಟಿರುವ ––––––––––––––ಕ್ರಮಸಂಖ್ಯೆಯ ರಿಜಿಸ್ಟರು, ಇತರೆ ದಾಖಲೆಗಳೊಂದಿಗೆ ಅದರ ಲಗತ್ತುಗಳ ಸಹಿತ ಸ್ವೀಕೃತಿ ಸ್ವೀಕರಿಸಿದ್ದೇನೆ.
2. ನಾನು ಚುನಾವಣೆ ವೆಚ್ಚಗಳಿಗೆ ಸಂಬಂಧಿಸಿದ ಲೆಕ್ಕಗಳನ್ನು ಇಡುವುದಕ್ಕಾಗಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗೆ/ರಿಟರ್ನಿಂಗ್ ಅಧಿಕಾರಿಯವರಿಗೆ ಆ ಲೆಕ್ಕಗಳ ಯಥಾಪ್ರತಿಯನ್ನು ಸಲ್ಲಿಸುವುದಕ್ಕಾಗಿ ಇರುವ ಕಾನೂನಿನ ನಿಬಂಧನೆಗಳನ್ನು ಗಮನಿಸಿರುತ್ತೇನೆ.

ತಮ್ಮ ವಿಶ್ವಾಸಿ,
(ಅಭ್ಯರ್ಥಿಯ ಸಹಿ ದಿನಾಂಕದ ಜೊತೆಗೆ)
*ಅನ್ವಯವಾಗದೆ ಇರುವುದನ್ನು ಹೊಡೆದು ಹಾಕಿ.

––––––––––––––––––––––––––––––––––––––––––––––––––––

## ಸ್ವೀಕೃತಿ (ಕಛೇರಿಯಿಂದ ಭರ್ತಿ ಮಾಡಬೇಕು)

–––––––––––––– (ದಿನಾಂಕದಂದು)––––––––––––––ಚುನಾವಣಾ ಕ್ಷೇತ್ರದ ಫಲಿತಾಂಶದ ಘೋಷಣೆ ಆಗಿದೆಯೋ ಆ ಚುನಾವಣಾ ಕ್ಷೇತ್ರಕ್ಕೆ ಸಂಬಂಧಿಸಿದ ಚುನಾವಣಾ ಖರ್ಚುವೆಚ್ಚಗಳ ಲೆಕ್ಕಗಳನ್ನು ಮೇಲೆ ಹೇಳಿರುವ ಅಭ್ಯರ್ಥಿಯು/ಆತನ ಪರವಾಗಿ –––––––––– (ದಿನಾಂಕ) ದಂದು ಸಲ್ಲಿಸಿದ್ದಾರೆ ಮತ್ತು ––––––––––––––ವರ್ಷ ––––––––––– ತಿಂಗಳಿನ –––– ದಿನಾಂಕದಂದು ನಾನು ಅವುಗಳನ್ನು ಸ್ವೀಕರಿಸಿದ್ದೇನೆ.

ಜಿಲ್ಲಾ ಚುನಾವಣಾಧಿಕಾರಿ

ಜಿಲ್ಲೆ ______________ ಕಚೇರಿ ಮೊಹರು

## ಅನುಸೂಚಿ–1 ರಿಂದ 9: ಅಭ್ಯರ್ಥಿಯ ಚುನಾವಣಾ ನಿಧಿಗಳು ಮತ್ತು ವೆಚ್ಚದ ವಿವರಗಳು

| **ಅನುಸೂಚಿ – 1** | | | | | |
|---|---|---|---|---|---|
| **ಸಾರ್ವಜನಿಕ ಸಭೆ, ರ್‍ಯಾಲಿ, ಮೆರವಣಿಗೆ ಇತ್ಯಾದಿಗಳಲ್ಲಿ ಆದ ಖರ್ಚು (ಎಂದರೆ, ರಾಜಕೀಯ ಪಕ್ಷದ ತಾರಾ ಪ್ರಚಾರಕರನ್ನು ಹೊರತುಪಡಿಸಿ)** | | | | | |
| ಕ್ರ. ಸಂ. | ವೆಚ್ಚದ ಸ್ವರೂಪ | ಒಟ್ಟು ಮೊಬಲಗು ರೂ.ಗಳಲ್ಲಿ | ವೆಚ್ಚದ ಮೂಲ | | |
| | | | ಅಭ್ಯರ್ಥಿಯು / ಏಜೆಂಟ್‌ನು ಭರಿಸಿದ /ಅಧಿಕೃತಗೊಳಿಸಿದ ಮೊಬಲಗು | ರಾಜಕೀಯ ಪಕ್ಷವು ಭರಿಸಿದ ಮೊಬಲಗು/ರಾಜಕೀಯ ಪಕ್ಷದ ಹೆಸರು | ಇತರರು ಭರಿಸಿದ ಮೊಬಲಗು |
| 1 | 2 | 3 | 4 | 5 | 6 |
| 1 | ಸಂದರ್ಶಕರನ್ನು ಒಯ್ಯುವ ವಾಹನಗಳು | | | | |
| 2 | ವೇದಿಕೆ ನಿರ್ಮಾಣ, ಪೆಂಡಾಲ್ ಮತ್ತು ಪೀಠೋಪಕರಣ, ಜೋಡಣೆಗಳು, ನಿಲುವುಗಂಬಗಳು, ಇತ್ಯಾದಿ | | | | |
| 3 | ಕಮಾನುಗಳು ಮತ್ತು ಅಡ್ಡಗಟ್ಟುಗಳು, ಇತ್ಯಾದಿ | | | | |
| 4 | ಪುಷ್ಪಗುಚ್ಛಗಳು / ಹಾರಗಳು | | | | |
| 5 | ಬಾಡಿಗೆ ಧ್ವನಿವರ್ಧಕಗಳು, ಮೈಕ್ರೋಫೋನು, ವಿದ್ಯುದ್ವರ್ಧಕಗಳು, ಇದೇ ರೀತಿಯ ಇತರೆ ಸಾಮಗ್ರಿಗಳು | | | | |
| 6 | ಪೋಸ್ಟರುಗಳು, ಕರಪತ್ರಗಳು, ಭಿತ್ತಿಪತ್ರಗಳು, ಬ್ಯಾನರುಗಳು, ಕಟೌಟುಗಳು, ಜಾಹೀರಾತು ಫಲಕಗಳು | | | | |
| 7 | ಟೀ, ನೀರು, ತಂಪು ಪಾನೀಯ, ಹಣ್ಣಿನ ರಸ ಇತ್ಯಾದಿಗಳಂತಹ ಪಾನೀಯಗಳು | | | | |
| 8 | ಡಿಜಿಟಲ್ ಟಿವಿ – ಪ್ರದರ್ಶಕ ಫಲಕಗಳು, ಪ್ರದರ್ಶಕ ಪ್ರೊಜೆಕ್ಟರ್, ಟಿಕ್ಕರ್ಸ್ ಫಲಕಗಳು, 3ಡಿ ಪ್ರದರ್ಶಕ | | | | |

| | | | | | |
|---|---|---|---|---|---|
| 9 | ಸೆಲೆಬ್ರಿಟಿಗಳಿಗೆ ಮಾಡಿದ ಖರ್ಚು ವೆಚ್ಚಗಳು, ಸಂಗೀತಗಾರರಿಗೆ ಸಂದಾಯ, ಇತರೆ ಕಲಾವಿಧರಿಗೆ ಗೌರವಧನ ಇತ್ಯಾದಿ | | | | |
| 10 | ಪ್ರಜ್ವಲಿಸುವ ದೀಪಗಳು, ಫಲಕಗಳು ಇತ್ಯಾದಿಗಳಂತಹ ದೀಪಾಲಂಕಾರಿಕ ವಸ್ತುಗಳು | | | | |
| 11 | ಸಾರಿಗೆ, ಹೆಲಿಕಾಪ್ಟರ್ / ವಿಮಾನ/ವಾಹನಗಳು / ಹಡಗುಗಳು, ಇತ್ಯಾದಿಗಳ ಮೇಲಣ ವೆಚ್ಚಗಳ ಚಾರ್ಜುಗಳು (ತಾರಾ ಪ್ರಚಾರಕರನ್ನು ಹೊರತುಪಡಿಸಿ ಸ್ವಂತಕ್ಕೆ ಮಾಡಿದ ಖರ್ಚುವೆಚ್ಚ, ಸೆಲೆಬ್ರಿಟಿಗೆ ಅಥವಾ ಯಾರೇ ಇತರ ಪ್ರಚಾರಕರಿಗೆ ಶುಲ್ಕಗಳು) | | | | |
| 12 | ವಿದ್ಯುತ್ ಬಳಕೆ / ಜನರೇಟರ್ ಚಾರ್ಜುಗಳು | | | | |
| 13 | ಸ್ಥಳದ ಬಾಡಿಗೆ | | | | |
| 14 | ಪಹರೆ (ಕಾವಲು) ಮತ್ತು ಭದ್ರತೆಯ ಚಾರ್ಜುಗಳು | | | | |
| 15 | ತಾರಾ ಪ್ರಚಾರಕರನ್ನು ಒಳಗೊಂಡು ಸ್ವಂತಕ್ಕೆ, ಸೆಲೆಬ್ರಿಟಿಗೆ, ಪಕ್ಷದ ಕಾರ್ಯನಿರ್ವಾಹಕರಿಗೆ ಅಥವಾ ಯಾರೇ ಇತರ ಪ್ರಚಾರಕರಿಗೆ ಊಟ ಮತ್ತು ವಸತಿ ಖರ್ಚುವೆಚ್ಚಗಳು | | | | |
| 16 | ಇತರೆ ಖರ್ಚುಗಳು | | | | |
| | ಒಟ್ಟು | | | | |

**ಅನುಸೂಚಿ – 2**

**ತಾರಾ ಪ್ರಚಾರಕನೊಂದಿಗೆ(ರುಗಳೊಂದಿಗೆ)/ನಡೆಸಿದ ಸಾರ್ವಜನಿಕ ಸಭೆ, ರ್‍ಯಾಲಿ, ಮೆರವಣಿಗೆ ಇತ್ಯಾದಿಗಳಿಗೆ ಆದ ಖರ್ಚಿನಲ್ಲಿ ಅಭ್ಯರ್ಥಿಯ ಪಾಲು (ಸಾಮಾನ್ಯವಾಗಿ ಪಕ್ಷದ ಪ್ರಚಾರಕ್ಕಾಗಿ ಆದ ಖರ್ಚುವೆಚ್ಚವನ್ನು ಹೊರತುಪಡಿಸಿ)**

| ಕ್ರ. ಸಂ. | ದಿನಾಂಕ ಮತ್ತು ಸ್ಥಳ | ತಾರಾ ಪ್ರಚಾರಕರ(ರುಗಳ) ಹೆಸರು ಮತ್ತು ಪಕ್ಷದ ಹೆಸರು | ತಾರಾ ಪ್ರಚಾರಕನೊಂದಿಗೆ (ರುಗಳೊಂದಿಗೆ) ನಡೆಸಿದ ಸಾರ್ವಜನಿಕ ಸಭೆ, ರ್‍ಯಾಲಿ, ಮೆರವಣಿಗೆ, ಇತ್ಯಾದಿಗಳಿಗೆ ಆದ ಖರ್ಚಿನಲ್ಲಿ ಅಭ್ಯರ್ಥಿಯ ಪಾಲು (ಸಾಮಾನ್ಯವಾಗಿ ಪಕ್ಷದ ಪ್ರಚಾರಕ್ಕಾಗಿ ಆದ ಖರ್ಚುವೆಚ್ಚವನ್ನು ಹೊರತುಪಡಿಸಿ) ರೂ.ಗಳಲ್ಲಿ | | | ಷರಾ ಯಾವುದಾದರೂ ಇದ್ದರೆ |
|---|---|---|---|---|---|---|
| 1 | 2 | 3 | 4 | | | 5 |
| | | | ಆದಾಯದ ಮೂಲಗಳು | | | |
| | | | ಅಭ್ಯರ್ಥಿ / ಏಜೆಂಟ್ ನಿಂದ ಮೊಬಲಗು | ರಾಜಕೀಯ ಪಕ್ಷದಿಂದ ಮೊಬಲಗು | ಇತರರಿಂದ ಮೊಬಲಗು | |
| 1 | | | | | | |
| 2 | | | | | | |
| 3 | | | | | | |
| 4 | | | | | | |
| ಒಟ್ಟು | | | | | | |

**ಅನುಸೂಚಿ – 3**

ಪ್ರಚಾರ ಸಾಮಗ್ರಿಗಳ ವೆಚ್ಚದ ವಿವರಗಳು, ಎಂದರೆ, ಅಭ್ಯರ್ಥಿಗಳ ಚುನಾವಣಾ ಪ್ರಚಾರಕ್ಕಾಗಿ ಕರಪತ್ರಗಳು, ಪಾಂಪ್ಲೆಟ್‌ಗಳು, ಪೋಸ್ಟರುಗಳು, ಜಾಹೀರಾತು ಫಲಕಗಳು, ಬ್ಯಾನರುಗಳು, ಕಟೌಟುಗಳು, ಗೇಟ್‌ಗಳು ಮತ್ತು ಕಮಾನುಗಳು, ವಿಡಿಯೋ ಮತ್ತು ಆಡಿಯೋ ಕ್ಯಾಸೆಟುಗಳು, ಸಿಡಿಗಳು / ಡಿವಿಡಿಗಳು, ಧ್ವನಿವರ್ಧಕಗಳು, ವಿದ್ಯುತ್ ಧ್ವನಿವರ್ಧಕಗಳು, ಡಿಜಿಟಲ್ ಟಿವಿ/ಪ್ರದರ್ಶಕ ಫಲಕಗಳು, 3ಡಿ ಪ್ರದರ್ಶಕ, ಇತ್ಯಾದಿಗಳು (ಎಂದರೆ, ಅನುಸೂಚಿ 1 ಮತ್ತು 2 ರಲ್ಲಿ ಹೇಳಿರುವುದನ್ನು ಹೊರತುಪಡಿಸಿ)

| ಕ್ರ. ಸಂ. | ವೆಚ್ಚಗಳ ಸ್ವರೂಪ | ಒಟ್ಟು ಮೊಬಲಗು ರೂ.ಗಳಲ್ಲಿ | ವೆಚ್ಚದ ಮೂಲಗಳು | | | ಷರಾ ಯಾವುದಾದರೂ ಇದ್ದರೆ |
|---|---|---|---|---|---|---|
| | | | ಅಭ್ಯರ್ಥಿ / ಏಜೆಂಟ್ ನಿಂದ ಮೊಬಲಗು | ರಾಜಕೀಯ ಪಕ್ಷದಿಂದ ಮೊಬಲಗು | ಇತರ ರಿಂದ ಮೊಬಲಗು | |
| 1 | 2 | 3 | 4 | 5 | 6 | 7 |
| 1 | | | | | | |
| 2 | | | | | | |
| 3 | | | | | | |
| 4 | | | | | | |
| ಒಟ್ಟು | | | | | | |

**ಅನುಸೂಚಿ – 4**

ಎಂಸಿಎಂಸಿಯು ನಿರ್ಧರಿಸಿದಂತೆ ಅಥವಾ ಅಭ್ಯರ್ಥಿಯು ಸ್ವಯಂಪ್ರೇರಿತವಾಗಿ ಒಪ್ಪಿಕೊಳ್ಳಲಾದಂತೆ ಕಾಸಿಗಾಗಿ ಸುದ್ದಿಗಳನ್ನು ಒಳಗೊಂಡಂತೆ ಅಭ್ಯರ್ಥಿಗಾಗಿ ಕೇಬಲ್ ನೆಟ್‌ವರ್ಕ್, bulk SMS ಅಥವಾ ಇಂಟರ್‌ನೆಟ್ ಅಥವಾ ಸಾಮಾಜಿಕ ಜಾಲತಾಣ, ಹೊಸ ಬಾಬುಗಳು/ದೂರದರ್ಶನ/ ರೇಡಿಯಾ ಚಾನೆಲ್ಲುಗಳು ಇತ್ಯಾದಿಗಳನ್ನು ಒಳಗೊಂಡು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ ಮೂಲಕ ಪ್ರಚಾರಕ್ಕಾಗಿ ಮಾಡಿದ ವೆಚ್ಚದ ವಿವರಗಳು. ಖಾಸಗಿ ಒಡೆತನದ ವಾರ್ತಾಪತ್ರಿಕೆ/ ಟಿವಿ/ ರೇಡಿಯೋ ಚಾನೆಲ್ಲು, ಇತ್ಯಾದಿಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಇಂತಹ ಎಲ್ಲಾ ವಾರ್ತೆಗಳಿಗಾಗಿ ಮಾಡಿದ ವೆಚ್ಚವನ್ನು ಈ ವಿವರಗಳು ಒಳಗೊಂಡಿರಬೇಕು.

| ಕ್ರ. ಸಂ. | ಮಾಧ್ಯಮದ ಸ್ವರೂಪ (ವಿದ್ಯುನ್ಮಾನ / ಮುದ್ರಣ) ಮತ್ತು ಕಾಲಾವಧಿ | ಮಾಧ್ಯಮ ಪೂರೈಕೆದಾರನ ಹೆಸರು ಮತ್ತು ವಿಳಾಸ (ಮುದ್ರಣ/ ವಿದ್ಯುನ್ಮಾನ/ಎಸ್‌ಎಂಎಸ್/ ಧ್ವನಿ/ ಕೇಬಲ್ ಟಿವಿ, ಸಾಮಾಜಿಕ ಜಾಲತಾಣ ಇತ್ಯಾದಿ) | ಯಾವುದಾದರೂ ಚಾರ್ಜುಗಳು / ಕಮೀಷನ್‌ನ್ನು ಯಾವ ಏಜೆನ್ಸಿಗೆ, ವರದಿಗಾರನಿಗೆ, ಸ್ಟ್ರಿಂಗರ್‌ಗೆ, ಕಂಪನಿಗೆ ಅಥವಾ ಯಾರೇ ವ್ಯಕ್ತಿಗೆ ಚಾರ್ಜುಗಳು/ ಕಮೀಷನ್, ಮುಂತಾದವುಗಳನ್ನು ಸಂದಾಯ ಮಾಡಲಾಗಿದೆಯೋ/ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ | ಒಟ್ಟು ಮೊಬಲಗು ರೂ.ಗಳಲ್ಲಿ ಕಾಲಂ (3)+(4) | ಅಭ್ಯರ್ಥಿಯಿಂದ / ಏಜೆಂಟ್‌ನಿಂದ ಮೊಬಲಗು | ರಾಜಕೀಯ ಪಕ್ಷದಿಂದ ಮೊಬಲಗು | ಇತರರು ಮಾಡಿದ ವೆಚ್ಚದ ಮೂಲ ಮೊತ್ತ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| ಒಟ್ಟು | | | | | | | |

**ಅನುಸೂಚಿ–4ಎ**

ಎಂಸಿಎಂಸಿಯು ನಿರ್ಧರಿಸಿದಂತೆ ಅಥವಾ ಅಭ್ಯರ್ಥಿಯು ಸ್ವಯಂಪ್ರೇರಿತವಾಗಿ ಒಪ್ಪಿಕೊಳ್ಳಲಾದಂತೆ ಕಾಸಿಗಾಗಿ ಸುದ್ದಿಗಳನ್ನು ಒಳಗೊಂಡಂತೆ ಅಭ್ಯರ್ಥಿಗಾಗಿ ಕೇಬಲ್ ನೆಟ್‌ವರ್ಕ್, bulk SMS ಅಥವಾ ಇಂಟರ್‌ನೆಟ್ ಅಥವಾ ಸಾಮಾಜಿಕ ಜಾಲತಾಣ, ಹೊಸ ಬಾಬುಗಳು/ದೂರದರ್ಶನ/ ರೇಡಿಯಾ ಚಾನೆಲ್ಲುಗಳು ಇತ್ಯಾದಿಗಳನ್ನು ಒಳಗೊಂಡು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ ಮೂಲಕ ಪ್ರಚಾರಕ್ಕಾಗಿ ಮಾಡಿದ ವೆಚ್ಚದ ವಿವರಗಳು. ಖಾಸಗಿ ವಾರ್ತಾಪತ್ರಿಕೆ/ ಟಿವಿ/ ರೇಡಿಯೋ ಚಾನೆಲ್ಲು, ಇತ್ಯಾದಿಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಅಭ್ಯರ್ಥಿ ಒಡೆತನದ ಅಥವಾ ಅಭ್ಯರ್ಥಿಗೆ ಪ್ರಾಯೋಜಿಸುವಂತಹ ರಾಜಕೀಯ ಪಕ್ಷ ಒಡೆತನದಇಂತಹ ಎಲ್ಲಾ ವಾರ್ತೆಗಳಿಗಾಗಿ ಮಾಡಿದ ವೆಚ್ಚವನ್ನು ಈ ವಿವರಗಳು ಒಳಗೊಂಡಿರಬೇಕು.

| ಕ್ರ. ಸಂ. | ಮಾಧ್ಯಮದ ಸ್ವರೂಪ (ವಿದ್ಯುನ್ಮಾನ / ಮುದ್ರಣ) ಮತ್ತು ಕಾಲಾವಧಿ | ಮಾಧ್ಯಮ ಪೂರೈಕೆದಾರನ ಹೆಸರು ಮತ್ತು ವಿಳಾಸ (ಮುದ್ರಣ/ ವಿದ್ಯುನ್ಮಾನ/ಎಸ್‌ಎಂಎಸ್/ ಧ್ವನಿ/ ಕೇಬಲ್ ಟಿವಿ, ಸಾಮಾಜಿಕ ಜಾಲತಾಣ, ಇತ್ಯಾದಿ) | ಯಾವುದಾದರೂ ಚಾರ್ಜುಗಳು / ಕಮೀಷನ್‌ನ್ನು ಯಾವ ಏಜೆನ್ಸಿಗೆ, ವರದಿಗಾರನಿಗೆ, ಸ್ಟ್ರಿಂಗರ್‌ಗೆ, ಕಂಪೆನಿಗೆ ಅಥವಾ ಯಾರೇ ವ್ಯಕ್ತಿಗೆ ಸಂದಾಯ ಮಾಡಲಾಗಿದೆಯೋ/ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ | ಒಟ್ಟು ಮೊಬಲಗು ರೂ.ಗಳಲ್ಲಿ ಕಾಲಂ (3)+(4) | ವೆಚ್ಚದ ಮೂಲಗಳು | | |
|---|---|---|---|---|---|---|---|
| | | | | | ಅಭ್ಯರ್ಥಿಯಿಂದ / ಏಜೆಂಟ್‌ನಿಂದ ಮೊಬಲಗು | ಅಭ್ಯರ್ಥಿಯಿಂದ / ಏಜೆಂಟ್‌ನಿಂದ ಮೊಬಲಗು | ಅಭ್ಯರ್ಥಿಯಿಂದ / ಏಜೆಂಟ್‌ನಿಂದ ಮೊಬಲಗು |
| 1 | 2 | 3 | 4 | 5 | 6 | 7 | 8 |
| 2 | | | | | | | |
| 3 | | | | | | | |
| 4 | | | | | | | |
| ಒಟ್ಟು | | | | | | | |

**ಅನುಸೂಚಿ – 5**

ಪ್ರಚಾರದ ವಾಹನಕ್ಕೆ (ಗಳಿಗೆ) ಆದ ವೆಚ್ಚದ ಮತ್ತು ಅಭ್ಯರ್ಥಿಯ ಚುನಾವಣಾ ಪ್ರಚಾರಕ್ಕಾಗಿ ಬಳಸಿದ ವಾಹನಕ್ಕೆ (ಗಳಿಗೆ) ಚುನಾವಣಾ ವೆಚ್ಚದ ವಿವರಗಳು

| ಕ್ರ. ಸಂ. | ವಾಹನದ ನೋಂದಣಿ ಸಂಖ್ಯೆ ಮತ್ತು ವಾಹನದ ಪ್ರಕಾರ | ವಾಹನದ ಬಾಡಿಗೆ ಚಾರ್ಜುಗಳು | | | ಉಪಯೋಗಿಸಿದ ದಿನಗಳ ಸಂಖ್ಯೆ | ಭರಿಸಿದ/ ಭರಿಸಲು ಅಧಿಕೃತಗೊಳಿಸಿದ ಒಟ್ಟು ಮೊಬಲಗು ರೂ. ಗಳಲ್ಲಿ | ವೆಚ್ಚದ ಮೂಲ | | |
|---|---|---|---|---|---|---|---|---|---|
| | | ವಾಹನದ ಬಾಡಿಗೆ/ ನಿರ್ವಹಣೆ ದರ | ಇಂಧನ ಚಾರ್ಜುಗಳು (ಬಾಡಿಗೆಯಲ್ಲಿ ಸೇರಿರದಿದ್ದರೆ) | ಚಾಲಕರ ಚಾರ್ಜುಗಳು (ಬಾಡಿಗೆಯಲ್ಲಿ ಸೇರಿರದಿದ್ದರೆ) | | | ಅಭ್ಯರ್ಥಿ/ ಏಜೆಂಟ್ ನಿಂದ ಮೊಬಲಗು | ರಾಜಕೀಯ ಪಕ್ಷ ದಿಂದ ಮೊಬಲಗು | ಇತರ ರಿಂದ ಮೊಬಲಗು |
| 1 | 2 | 3ಎ | 3ಬಿ | 3ಸಿ | 4 | 5 | 6 | 7 | 8 |
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |
| ಒಟ್ಟು | | | | | | | | | |

**ಅನುಸೂಚಿ–6**

ಪ್ರಚಾರ ಕಾರ್ಯಕರ್ತರ/ಏಜೆಂಟರ ಮತ್ತು ಮತದಾರರ ಚೀಟಿಗಳ ವಿತರಣೆಗಾಗಿ ಮತಕೇಂದ್ರಗಳ ಹೊರಗೆ ಅಭ್ಯರ್ಥಿಯ ಮತಗಟ್ಟೆಗಳಲ್ಲಿ (ಕಿಯೋಸ್ಕ್) ನ ವೆಚ್ಚದ ವಿವರಗಳು

| **ಕ್ರ. ಸಂ.** | **ದಿನಾಂಕ ಮತ್ತು ಸ್ಥಳ** | **ಪ್ರಚಾರ ಕಾರ್ಯಕರ್ತರಿಗೆ ಮಾಡಿದ ಖರ್ಚುಗಳು** | | | **ಭರಿಸಿದ/ ಭರಿಸಲು ಅಧಿಕೃತಗೊಳಿಸಿದ ಒಟ್ಟು ಮೊಬಲಗು (ರೂ. ಗಳಲ್ಲಿ)** | **ವೆಚ್ಚದ ಮೂಲಗಳು** | | |
|---|---|---|---|---|---|---|---|---|
| | | **ಖರ್ಚಿನ ಸ್ವರೂಪ** | **ಪ್ರಮಾಣ** | **ಕಾರ್ಯಕರ್ತರ / ಏಜೆಂಟರ ಸಂಖ್ಯೆ/ ಕಿಯೋಸ್ಕಗಳ ಸಂಖ್ಯೆ** | | **ಅಭ್ಯರ್ಥಿ / ಏಜೆಂಟ್‌ನಿಂದ ಮೊಬಲಗು** | **ರಾಜಕೀಯ ಪಕ್ಷದಿಂದ ಮೊಬಲಗು** | **ಇತರರಿಂದ ಮೊಬಲಗು** |
| 1 | 2 | 3ಎ | 3ಬಿ | 3ಸಿ | 4 | 5 | 6 | 7 |
| 1 | | ಮತದಾರರ ಚೀಟಿಗಳ ವಿತರಣೆಗಾಗಿ ಸ್ಥಾಪಿಸಲಾಗಿದ್ದ ಅಭ್ಯರ್ಥಿಗಳ ಮತಗಟ್ಟೆಗಳು (ಕಿಯೋಸ್ಕ್) | | | | | | |
| 2 | | ಪ್ರಚಾರ ಕಾರ್ಯಕರ್ತರ ಸಂಭಾವನೆ/ ಸಂಬಳ ಇತ್ಯಾದಿ | | | | | | |
| 3 | | ಊಟ | | | | | | |
| 4 | | ವಸತಿ | | | | | | |
| 5 | | ಇತರೆ | | | | | | |
| ಒಟ್ಟು | | | | | | | | |

**ಅನುಸೂಚಿ–7**

ಚುನಾವಣಾ ಪ್ರಚಾರಕ್ಕಾಗಿ ಬಳಸಿದ ಸ್ವಂತ ನಿಧಿಯ ಮೊಬಲಗುಗಳ ವಿವರಗಳು

| **ಕ್ರ. ಸಂ.** | **ದಿನಾಂಕ** | **ನಗದು** | **ಡ್ರಾಯಿ ಬ್ಯಾಂಕಿನ ವಿವರಗಳೊಂದಿಗೆ ಡಿಡಿ/ಚೆಕ್ ಸಂಖ್ಯೆ ಇತ್ಯಾದಿಗಳು** | **ಒಟ್ಟು ಮೊಬಲಗು ರೂ.ಗಳಲ್ಲಿ** | **ಷರಾ** |
|---|---|---|---|---|---|
| 1 | 2 | 3 | 4 | 5 | 6 |
| 1 | | | | | |
| 2 | | | | | |
| 3 | | | | | |
| 4 | | | | | |
| ಒಟ್ಟು | | | | | |

**ಅನುಸೂಚಿ–8**

ನಗದು ಅಥವಾ ಚೆಕ್ ಅಥವಾ ಡಿಡಿ ರೂಪದಲ್ಲಿ ಅಥವಾ ಖಾತೆ ವರ್ಗಾವಣೆಯ ಮೂಲಕ ಪಕ್ಷದಿಂದ (ಗಳಿಂದ) ಒಟ್ಟಾಗಿ ಸ್ವೀಕರಿಸಿದ ಮೊಬಲಗಿನ ವಿವರಗಳು

| **ಕ್ರ. ಸಂ.** | **ರಾಜಕೀಯ ಪಕ್ಷದ ಹೆಸರು** | **ದಿನಾಂಕ** | **ನಗದು** | **ಡ್ರಾಯಿ ಬ್ಯಾಂಕಿನ ವಿವರಗಳ ಸಹಿತ ಡಿಡಿ/ಚೆಕ್ ಸಂಖ್ಯೆ** | **ಒಟ್ಟು ಮೊಬಲಗು ರೂ.ಗಳಲ್ಲಿ** | **ಷರಾಗಳು ಯಾವುದಾದರೂ ಇದ್ದರೆ** |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | | | | | | |
| 2 | | | | | | |
| 3 | | | | | | |
| 4 | | | | | | |
| ಒಟ್ಟು | | | | | | |

**ಅನುಸೂಚಿ–9**

ಸಾಲ, ಉಡುಗೊರೆ ಅಥವಾ ದೇಣಿಗೆಯಾಗಿ ಯಾವುದೇ ವ್ಯಕ್ತಿ/ಕಂಪನಿ/ಫರ್ಮ್/ಸಂಘಗಳು/ವ್ಯಕ್ತಿಗಳ ಸಂಸ್ಥೆ, ಮುಂತಾದವುಗಳಿಂದ ಒಟ್ಟಾಗಿ ಸ್ವೀಕರಿಸಲಾದ ಮೊಬಲಗಿನ ವಿವರಗಳು

| **ಕ್ರ.ಸಂ.** | **ಹೆಸರು ಮತ್ತು ವಿಳಾಸ** | **ದಿನಾಂಕ** | **ನಗದು** | **ಡ್ರಾಯಿ ಬ್ಯಾಂಕಿನ ವಿವರಗಳ ಸಹಿತ ಡಿಡಿ/ಚೆಕ್ ಸಂಖ್ಯೆ** | **ಸಾಲ, ಕಾಣಿಕೆ ಅಥವಾ ದೇಣಿಗೆ ಇತ್ಯಾದಿಗಳಾಗಿದ್ದರೆ ವಿವರಿಸಿ** | **ಒಟ್ಟು ಮೊಬಲಗು ರೂ.ಗಳಲ್ಲಿ** | **ಷರಾಗಳು** |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| ಒಟ್ಟು | | | | | | | |

ಸೂಚನೆ:

1. ಅನುಸೂಚಿ 5 ರಲ್ಲಿ:–

(ಎ) ರಿಟರ್ನಿಂಗ್ ಅಧಿಕಾರಿಯು ಯಾವ ವಾಹನಗಳಿಗೆ ಪರ್ಮಿಟ್‌ನ್ನು ನೀಡಿದ್ದಾರೋ ಆ ಎಲ್ಲಾ ವಾಹನಗಳಪಟ್ಟಿಯನ್ನು ಒಳಗೊಂಡಿರುವ ಆದೇಶದ ಪ್ರತಿಯನ್ನು ಲಗತ್ತಿಸಬೇಕು.

(ಬಿ) ವಾಹನವು ಅಭ್ಯರ್ಥಿಯ/ಆತನ ಸಂಬಂಧಿಕರ/ಏಜೆಂಟರ ಒಡೆತನದಲ್ಲಿದ್ದರೆ, ಅದನ್ನು ಚುನಾವಣಾ ಉದ್ದೇಶಕ್ಕಾಗಿ ಬಳಕೆ ಮಾಡಿದ್ದರೆ, ಅದರಲ್ಲಿ ಒಂದು ವಾಹನವು ಅಭ್ಯರ್ಥಿಯ ಒಡೆತನದಲ್ಲಿದ್ದರೆ ಮತ್ತು ಅದನ್ನು ಬಳಸಿದ್ದರೆ, ಆ ಒಂದು ವಾಹನವನ್ನು ಹೊರತುಪಡಿಸಿ,

ಎಲ್ಲ ಅಂಥ ವಾಹನಗಳಿಗೆ ತಗಲಬಹುದೆಂದು ಅಂದಾಜು ಮಾಡಿದ ಬಾಡಿಗೆ ವೆಚ್ಚವನ್ನು, ಅಂಥ ವಾಹನಕ್ಕೆ ಬೇಕಾಗುವ ಇಂಧನದ ಅಂದಾಜು ವೆಚ್ಚವನ್ನು ಮತ್ತು ಅಂಥ ವಾಹನದ ಚಾಲಕರ ಸಂಬಳವನ್ನು ಮೇಲಿನ ಕೋಷ್ಟಕದ ಖರ್ಚಿನ ಒಟ್ಟು ಮೊಬಲಗಿನಲ್ಲಿ ಸೇರಿಸತಕ್ಕದ್ದು.

2. ರಾಜಕೀಯ ಪಕ್ಷವು ಅಥವಾ ಅಭ್ಯರ್ಥಿಯ ಪರವಾಗಿ, ಯಾರೇ ವ್ಯಕ್ತಿಯು / ಕಂಪನಿಯು / ಫರ್ಮು / ಸಂಘ ಸಂಸ್ಥೆಗಳು / ಜನರು ಸಮೂಹ, ಮುಂತಾದಸರಕುಗಳು ಮತ್ತು ಸೇವೆಗಳ ಮೇಲೆ ಯಾವುದಾದರೂ ವೆಚ್ಚವನ್ನು ಒದಗಿಸಿದ್ದರೆ ಆಗ, ಕಾಲಂಗಳ ಪ್ರಕಾರವಾಗಿ ಅಂಥ ಸರಕುಗಳ ಅಥವಾ ಸೇವೆಗಳ ಅಂದಾಜು ಮಾರುಕಟ್ಟೆ ಮೌಲ್ಯವನ್ನು ಎಲ್ಲ ಅನುಸೂಚಿಗಳಲ್ಲಿ ಸೂಚಿಸತಕ್ಕದ್ದು.

3. ಭಾಗ –IIIರಲ್ಲಿ, ರಾಜಕೀಯ ಪಕ್ಷದಿಂದ ಅಥವಾ ಇತರರಿಂದ ಅಥವಾ ಅಭ್ಯರ್ಥಿಗಳ ಸ್ವಂತ ನಿಧಿಗಳಿಂದ ಒಂದೇ ಮೊತ್ತದಲ್ಲಿ ಸ್ವೀಕರಿಸಿದ ಹಣವನ್ನು ದಿನಾಂಕವಾರು ನಮೂದಿಸಬೇಕು. ಅಂಥ ಎಲ್ಲಾ ಸಂದರ್ಭಗಳಲ್ಲಿ, ಅಭ್ಯರ್ಥಿಯು ಅದನ್ನು ಚುನಾವಣಾ ವೆಚ್ಚಗಳಿಗಾಗಿ ತೆರೆದ ಬ್ಯಾಂಕ್ ಖಾತೆಗೆ ಅಂಥ ಮೊಬಲಗುಗಳನ್ನು ಮೊದಲು ಜಮೆ ಮಾಡಬೇಕಾಗುತ್ತದೆ.

4. ಸಂಕ್ಷಿಪ್ತ ವಿವರಪಟ್ಟಿಯ ಪ್ರತಿಯೊಂದು ಪುಟದಲ್ಲಿ ಅಭ್ಯರ್ಥಿಯು ಸಹಿ ಮಾಡತಕ್ಕದ್ದು.

(ಇಸಿಐ ಸಂ:76/ಇಸಿಐ/ಐಎನ್‌ಎಸ್‌ಟಿ/ಎಫ್‌ಯುಎನ್‌ಸಿ/ಇಇಎಂ/ಇಇಪಿಎಸ್/2016/ಸಂಪುಟ IX, ದಿನಾಂಕ 13–01–2017)

**ಪರಿಶಿಷ್ಟ–42**

(ಅಧ್ಯಾಯ 18, ಕಂಡಿಕೆ 18.1.3)

ಸಂ. ______________ ದಿನಾಂಕ: __________

ಇವರಿಗೆ ______________

(ಹೆಸರು)

ಮತ್ತು ಅಭ್ಯರ್ಥಿಯ ವಿಳಾಸ)

ವಿಷಯ: ಚುನಾವಣಾ ವೆಚ್ಚದ ಲೆಕ್ಕಗಳನ್ನು ನಿರ್ವಹಿಸುವುದು ಮತ್ತು ಅವುಗಳ ನೈಜ ಪ್ರತಿಯನ್ನು ಲಗತ್ತಿಸುವುದು.

ಸರ್/ಮೇಡಮ್,

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 77ರಲ್ಲಿ ವಿವರಿಸಲಾಗಿರುವಂತೆ ಚುನಾವಣೆಯಲ್ಲಿನ ಪ್ರತೀ ಅಭ್ಯರ್ಥಿಯು ಆತನು/ ಆಕೆಯಾಗಲಿ ಅಥವಾ ಆತನ/ಆಕೆಯ ಚುನಾವಣಾ ಏಜೆಂಟನ ಮೂಲಕವಾಗಲಿ, ಆತನು/ಆಕೆಯು ನಾಮಪತ್ರ ಸಲ್ಲಿಸಿದ ದಿನಾಂಕ ಮತ್ತು ಚುನಾವಣೆಯ ಫಲಿತಾಂಶ ಘೋಷಣೆ ದಿನಾಂಕದ ನಡುವೆ ಹಾಗೂ ಆ ಎರಡೂ ದಿನಾಂಕಗಳು ಸೇರಿದಂತೆ ಚುನಾವಣೆಗಾಗಿ ಖರ್ಚು ಮಾಡಿದ ಎಲ್ಲಾ ವೆಚ್ಚಗಳ ಪ್ರತ್ಯೇಕವಾದ ಮತ್ತು ನಿಖರವಾದ ಲೆಕ್ಕವನ್ನು ಇಡಲೇ ಬೇಕಾಗಿರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

2. ಮೇಲೆ ಹೇಳಿದ ಅಧಿನಿಯಮದ ಪ್ರಕರಣ 78 ವಿವರಿಸುವಂತೆ ಚುನಾವಣೆಯಲ್ಲಿ ಸ್ಪರ್ಧಿಸುವಂತಹ ಪ್ರತಿ ಅಭ್ಯರ್ಥಿಯು ಚುನಾವಣೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ಜಿಲ್ಲಾ ಚುನಾವಣಾ ಅಧಿಕಾರಿಯವರಿಗೆ ಒಪ್ಪಿಸಬೇಕಾಗಿದ್ದು, ಅದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 77ರ ಅಡಿಯಲ್ಲಿ, ಆತನು/ಆಕೆಯು ಅಥವಾ ಆತನ/ಆಕೆಯ ಚುನಾವಣಾ ಏಜೆಂಟರು ಇಡಲಾದ ಲೆಕ್ಕದ ನೈಜ ಪ್ರತಿಯಾಗಿರತಕ್ಕದ್ದು ಎಂಬುದನ್ನು ಸಹ ನಿಮ್ಮ ಗಮನಕ್ಕೆ ತರಲಾಗಿದೆ.

3. ಸ್ಪರ್ಧಾಕಣದಲ್ಲಿರುವ ಅಭ್ಯರ್ಥಿಯು ಚುನಾವಣೆಗೆ ಗಂಭೀರವಾಗಿ ಸ್ಪರ್ಧಿಸದೆ ಇದ್ದಾಗ್ಯೂ ಕೂಡ ಅಥವಾ ಮತ್ಯಾವುದೇ ಕಾರಣಗಳಿದ್ದರೂ ಕೂಡ ಮತ್ತು ಆತನ ಭದ್ರತಾ ಠೇವಣಿಯ ಮೇಲೆ ಸಾಧಾರಣ ವೆಚ್ಚವನ್ನು ಮಾತ್ರ ಮಾಡಿದಾಗ್ಯೂ ಕೂಡ ಆತನ/ಆಕೆಯು ತಮ್ಮ ಚುನಾವಣಾ ವೆಚ್ಚಗಳ ಲೆಕ್ಕವನ್ನು ಕಾನೂನು ಸಮ್ಮತವಾಗಿ ಒಪ್ಪಿಸುವ ಅಗತ್ಯತೆ ಇರುತ್ತದೆ.

4. ಚುನಾವಣಾ ವೆಚ್ಚಗಳ ಲೆಕ್ಕವನ್ನು ಒಪ್ಪಿಸುವುದಕ್ಕೆ ಸಂಬಂಧಪಟ್ಟ ಕಾನೂನು ಅವಶ್ಯಕತೆಗಳನ್ನು ಅನುಪಾಲಿಸುವುದಕ್ಕೆ ವಿಫಲನಾಗುವಂತಹ ಸ್ಪರ್ಧಿಸುತ್ತಿರುವ ಅಭ್ಯರ್ಥಿಯು ಚುನಾವಣಾ ಆಯೋಗದಿಂದ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 10ಎ ಅಡಿಯಲ್ಲಿ ಮೂರು ವರ್ಷಗಳ ಅವಧಿಗೆ ಅನರ್ಹನಾಗುವುದಕ್ಕೆ ಬಾಧ್ಯನಾಗತಕ್ಕದ್ದು.

5. ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 77ರ ಅಡಿಯಲ್ಲಿ ಅಭ್ಯರ್ಥಿ ಅಥವಾ ಆತನ/ಆಕೆಯ ಚುನಾವಣಾ ಏಜೆಂಟರು ನಿರ್ವಹಿಸಬೇಕಾದ ಚುನಾವಣಾ ವೆಚ್ಚಗಳ ಲೆಕ್ಕವು, ಚುನಾವಣಾ ನಿರ್ವಹಣೆ ನಿಯಮಗಳು, 1961ರ ನಿಯಮ 86ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಪ್ರತೀ ದಿನ ಮಾಡಿದ/ ಅಧಿಕೃತಗೊಳಿಸಿದ ಖರ್ಚುವೆಚ್ಚಗಳ ವಿವರಗಳನ್ನು ಒಳಗೊಳ್ಳತಕ್ಕದ್ದು.

6. ಪ್ರತಿನಿತ್ಯದ ಲೆಕ್ಕ ವಹಿ, ನಗದು ವಹಿ, ಬ್ಯಾಂಕ್ ವಹಿ, ಅಫಿಡವಿಟ್ ನಮೂನೆ, ಸಂಕ್ಷಿಪ್ತ ವಿವರಣಾ ಪಟ್ಟಿ (ಭಾಗ 1 ರಿಂದ 4) ಮತ್ತು ಸ್ವೀಕೃತಿ ನಮೂನೆಯನ್ನು ಒಳಗೊಂಡ ವೆಚ್ಚ ರಿಜಿಸ್ಟರ್ ಅನ್ನು ಈ ಮೂಲಕ ನಿಮಗೆ ಒದಗಿಸಲಾಗಿದೆ. ಇದೇ ರಿಜಿಸ್ಟರಿನಲ್ಲಿ ನಿಮ್ಮ ಚುನಾವಣಾ ವೆಚ್ಚಗಳ ಪ್ರತಿನಿತ್ಯದ ಲೆಕ್ಕವನ್ನು ನಿರ್ವಹಿಸುವಂತೆ ಮತ್ತು ಮತ್ಯಾವುದೇ ದಾಖಲೆಯಲ್ಲಿ ನಿರ್ವಹಿಸದಂತೆ ನಿಮ್ಮನ್ನು ವಿನಂತಿಸಲಾಗಿದೆ. ಇನ್ನಿತರ ಎಲ್ಲಾ ಪೂರಕ ವೋಚರ್, ಬಿಲ್ಲುಗಳು ಇತ್ಯಾದಿಗಳನ್ನು ಸಹ ಈ ರಿಜಿಸ್ಟರಿನೊಂದಿಗೆ ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿ ಇಡಬೇಕಿರುತ್ತದೆ. ಚುನಾವಣೆಯ ಫಲಿತಾಂಶವು ಘೋಷಣೆಯಾದ ನಂತರ ವೆಚ್ಚದ ಸಂಕ್ಷಿಪ್ತ ವಿವರಣ ಪಟ್ಟಿಯನ್ನು ಸಹ ನೀವು ಈ ಮೂಲಕ ಲಗತ್ತಿಸಲಾದ ಭಾಗ 1 ರಿಂದ 4 ರವರೆಗಿನ ನಮೂನೆಯಲ್ಲಿ ಸಿದ್ಧಪಡಿಸಬೇಕಿರುತ್ತದೆ.

7. ಮಾಡಲಾಗಿರುವ ಅಥವಾ ಉಂಟಾದ ವೆಚ್ಚಕ್ಕೆ ಪೂರಕವಾಗಿ ವೋಚರ್‌ಗಳು, ರಸೀದಿಗಳು, ಸ್ವೀಕೃತಿಗಳಂತಹ ಎಲ್ಲ ದಾಖಲೆಗಳನ್ನು ಪ್ರತಿನಿತ್ಯ ಪಡೆಯತಕ್ಕದ್ದು ಮತ್ತು ಪ್ರತಿನಿತ್ಯದ ಲೆಕ್ಕವನ್ನು ತೋರಿಸುವಂತಹ ರಿಜಿಸ್ಟರಿನೊಂದಿಗೆ ಸರಿಯಾದ ಕಾಲಾನುಕ್ರಮಣಿಕೆಯಲ್ಲಿ ನಿರ್ವಹಿಸತಕ್ಕದ್ದು.

**ಪರಿಶಿಷ್ಟ–43**
**(ಅಧ್ಯಾಯ 3, ಪ್ಯಾರಾ 3.8)**
**ನಮೂನೆ ಸಿ–1 ಯಿಂದ ಸಿ–3**

ನಮೂನೆ ಸಿ–1
(ಅಭ್ಯರ್ಥಿಯು ವೃತ್ತಪತ್ರಿಕೆಗಳು, ಟಿವಿಯಲ್ಲಿ ಪ್ರಕಟಿಸುವುದಕ್ಕಾಗಿ)

**ಅಪರಾಧ ಪ್ರಕರಣಗಳ ಬಗ್ಗೆ ಘೋಷಣೆ**

(ಮಾನ್ಯ ಸರ್ವೋಚ್ಚ ನ್ಯಾಯಾಲಯವು, 2011ರ ಡಬ್ಲ್ಯೂಪಿ (ಸಿವಿಲ್) ಸಂ. 536, ದಿನಾಂಕ: 25ನೇ ಸೆಪ್ಟೆಂಬರ್ 2018 (ಸಾರ್ವಜನಿಕ ಹಿತಾಸಕ್ತಿ ಪ್ರತಿಷ್ಠಾನ ಮತ್ತು ಇತರರು –ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು) ರಲ್ಲಿ ನೀಡಿದ ತೀರ್ಪಿಗೆ ಅನುಸಾರವಾಗಿ)

ಅಭ್ಯರ್ಥಿಯ ಹೆಸರು ಮತ್ತು ವಿಳಾಸ : ______________________

ರಾಜಕೀಯ ಪಕ್ಷದ ಹೆಸರು : ___________________

(ಪಕ್ಷೇತರ ಅಭ್ಯರ್ಥಿಗಳು "ಪಕ್ಷೇತರ" ಎಂದು ಇಲ್ಲಿ ಬರೆಯಬೇಕು)

ಚುನಾವಣೆಯ ಹೆಸರು :__________________________

*ಚುನಾವಣಾ ಕ್ಷೇತ್ರದ ಹೆಸರು : ____________________

ಮೇಲೆ ಸೂಚಿಸಿರುವ ಚುನಾವಣೆಯ ಅಭ್ಯರ್ಥಿಯಾಗಿರುವ __________________ (ಅಭ್ಯರ್ಥಿಯ ಹೆಸರು) ನಾನು, ನನ್ನ ಅಪರಾಧಿಕ ಪೂರ್ವೇತಿಹಾಸದ ಬಗ್ಗೆ ಮುಂದಿನ ವಿವರಗಳನ್ನು ಸಾರ್ವಜನಿಕ ಮಾಹಿತಿಗಾಗಿ ಘೋಷಿಸುತ್ತೇನೆ:

| **ಕ್ರಮ ಸಂಖ್ಯೆ** | **ಬಾಕಿ ಇರುವ ಅಪರಾಧ ಪ್ರಕರಣಗಳು** | | | **ಅಪರಾಧಗಳಿಗೆ ಸಂಬಂಧಿಸಿದಂತೆ ಅಪರಾಧ ನಿರ್ಣಿತವಾದ ಪ್ರಕರಣಗಳ ವಿವರಗಳು** | |
|---|---|---|---|---|---|
| | **ನ್ಯಾಯಾಲಯದ ಹೆಸರು** | **ಪ್ರಕರಣದ ಸಂಖ್ಯೆ ಮತ್ತು ಸ್ಥಿತಿಗತಿ** | **ಸಂಬಂಧಪಟ್ಟ ಅಧಿನಿಯಮದ ಪ್ರಕರಣ (ಗಳು) ಮತ್ತು ಅಪರಾಧ(ಗಳ) ಸಂಕ್ಷಿಪ್ತ ವಿವರಣೆ** | **ನ್ಯಾಯಾಲಯದ ಹೆಸರು ಮತ್ತು ಆದೇಶದ(ಗಳ) ದಿನಾಂಕ(ಗಳು)** | **ಅಪರಾಧದ(ಗಳ) ಮತ್ತು ವಿಧಿಸಲಾದ ಶಿಕ್ಷೆ ವಿವರ** |
| | | | | | |
| | | | | | |
| | | | | | |
| | | | | | |

* ವಿಧಾನಸಭಾ ಸದಸ್ಯರಿಂದ ರಾಜ್ಯಸಭೆಗೆ ಅಥವಾ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆ ಸಂದರ್ಭದಲ್ಲಿಮತಕ್ಷೇತ್ರದ ಹೆಸರಿನ ಜಾಗದಲ್ಲಿ ಸಂಬಂಧಪಟ್ಟ ಚುನಾವಣೆಯನ್ನು ನಮೂದಿಸಿ.

ಸೂಚನೆ:
(i) ಪ್ರತಿ ಪ್ರಕರಣಕ್ಕೆ ಸಂಬಂಧಪಟ್ಟ ವಿವರಗಳನ್ನು ಪ್ರತ್ಯೇಕವಾದ ಸಾಲುಗಳಲ್ಲಿ ನೀಡಬೇಕು.
(ii) ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಷಯವು ಕನಿಷ್ಠ 12 ಅಕ್ಷರ ಗಾತ್ರದಲ್ಲಿರಬೇಕು.

## ನಮೂನೆ–ಸಿ2

(ರಾಜಕೀಯ ಪಕ್ಷವು ಜಾಲತಾಣ, ವೃತ್ತಪತ್ರಿಕೆಗಳು, ಟಿವಿಯಲ್ಲಿ ಪ್ರಕಟಿಸುವುದಕ್ಕಾಗಿ)

**ಅಭ್ಯರ್ಥಿಗಳ ಅಪರಾಧ ಪೂರ್ವೇತಿಹಾಸದ ಬಗ್ಗೆ ರಾಜಕೀಯ ಪಕ್ಷವು ಮಾಡಬೇಕಾದ ಘೋಷಣೆ.**

(ಮಾನ್ಯ ಸರ್ವೋಚ್ಚ ನ್ಯಾಯಾಲಯವು, 2011ರ ಡಬ್ಲ್ಯೂಪಿ (ಸಿವಿಲ್) ಸಂ. 536, ದಿನಾಂಕ: 25ನೇ ಸೆಪ್ಟೆಂಬರ್ 2018 (ಸಾರ್ವಜನಿಕ ಹಿತಾಸಕ್ತಿ ಪ್ರತಿಷ್ಠಾನ ಮತ್ತು ಇತರರು –ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು) ರಲ್ಲಿ ನೀಡಿದ ತೀರ್ಪಿಗೆ ಅನುಸಾರವಾಗಿ)

ರಾಜಕೀಯ ಪಕ್ಷದ ಹೆಸರು: ______________________

*ಚುನಾವಣೆಯ ಹೆಸರು :__________________________

ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು : ____________________

| 1 | 2 | 3 | 4 | | 5 | |
|---|---|---|---|---|---|---|
| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಚುನಾವಣಾ ಕ್ಷೇತ್ರದ ಹೆಸರು | ಬಾಕಿ ಇರುವ ಅಪರಾಧ ಪ್ರಕರಣಗಳು | | ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದಂತೆ ದೋಷ ಸಾಬೀತಾಗಿರುವ ಪ್ರಕರಣಗಳ ಕುರಿತಾದ ವಿವರಗಳು | |
| | | | ನ್ಯಾಯಾಲಯದ ಹೆಸರು ಮತ್ತು ಪ್ರಕರಣದ(ಗಳ) ಸಂಖ್ಯೆ ಮತ್ತು ಸ್ಥಿತಿಗತಿ | ಸಂಬಂಧಪಟ್ಟ ಅಧಿನಿಯಮದ ಪ್ರಕರಣಗಳು ಮತ್ತು ಅಪರಾಧ(ಗಳ) ಸಂಕ್ಷಿಪ್ತ ವಿವರಣೆ | ನ್ಯಾಯಾಲಯದ ಹೆಸರು ಮತ್ತು ಆದೇಶದ(ಗಳ) ದಿನಾಂಕ(ಗಳು) | ಅಪರಾಧದ(ಗಳ) ವಿವರಣೆ ಮತ್ತು ವಿಧಿಸಲಾದ ಶಿಕ್ಷೆ |
| | | | | | | |
| | | | | | | |
| | | | | | | |
| | | | | | | |

* ವಿಧಾನಸಭಾ ಸದಸ್ಯರಿಂದ ರಾಜ್ಯಸಭೆಗೆ ಅಥವಾ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆ ಸಂದರ್ಭದಲ್ಲಿಮತಕ್ಷೇತ್ರದ ಹೆಸರಿನ ಜಾಗದಲ್ಲಿ ಸಂಬಂಧಪಟ್ಟ ಚುನಾವಣೆಯನ್ನು ನಮೂದಿಸಿ.

ಸೂಚನೆ: (i) ಮೇಲಿನ ಮಾಹಿತಿಯನ್ನು ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ರಾಜ್ಯವಾರು ಪ್ರಕಟಿಸತಕ್ಕದ್ದು.

(ii) ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಷಯವು ಕನಿಷ್ಠ 12 ಅಕ್ಷರ ಗಾತ್ರದಲ್ಲಿರಬೇಕು.

**ನಮೂನೆ ಸಿ3**

**ರಿಟರ್ನಿಂಗ್ ಅಧಿಕಾರಿಯವರ ಕಚೇರಿ**

ಚುನಾವಣಾ ಕ್ಷೇತ್ರದ ಹೆಸರು :____________________
ರಾಜ್ಯದ ಹೆಸರು : ____________________________
ಚುನಾವಣೆಯ ಹೆಸರು :________________________

ಮಾನ್ಯ ಸರ್ವೋಚ್ಚ ನ್ಯಾಯಾಲಯವು 2011ರ ಡಬ್ಲ್ಯೂಪಿ (ಸಿವಿಲ್) ಸಂ. 536, (ಸಾರ್ವಜನಿಕ ಹಿತಾಸಕ್ತಿ ಪ್ರತಿಷ್ಠಾನ ಮತ್ತು ಇತರರು ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು)ರಲ್ಲಿ ದಿನಾಂಕ: 25/09/2018ರಂದು ನೀಡಿದ ತೀರ್ಪಿನ ಅನುಸಾರ ಮತ್ತು ಆಯೋಗದ ಪತ್ರ ಸಂಖ್ಯೆ 3/ಇಆರ್/2018/ಎಸ್‌ಡಿಆರ್, ದಿನಾಂಕ 10.10.2018ರ ನಿರ್ದೇಶನಗಳಿಗೆ ಅನುಸಾರವಾಗಿ,ಅಪರಾಧ ಪ್ರಕರಣಗಳನ್ನುಳ್ಳ ಎಲ್ಲಾ ಅಭ್ಯರ್ಥಿಗಳು ಬಾಕಿ ಇರುವಂತಹ ಅಥವಾ ಹಿಂದೆ ಅಪರಾಧ ನಿರ್ಣಿತವಾದ ಅಂತಹ ಎಲ್ಲಾ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದ ತಮ್ಮ ಘೋಷಣೆಯನ್ನು, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ನಿಗದಿಪಡಿಸಿದ ಕಡೆಯ ದಿನಾಂಕದಿಂದ ಹಿಡಿದು ಮತದಾನ ದಿನಾಂಕದ ಮೊದಲಿನ ಎರಡು ದಿನಗಳವರೆಗಿನ ಅವಧಿಯಲ್ಲಿ ಒಟ್ಟು ಮೂರು ಸಂದರ್ಭಗಳಲ್ಲಿ, ವೃತ್ತ ಪತ್ರಿಕೆಗಳಲ್ಲಿ ಮತ್ತು ಟಿವಿ ಚಾನೆಲ್‌ಗಳಲ್ಲಿ ಪ್ರಕಟಿಸಬೇಕಾಗಿರುತ್ತದೆ ಎಂಬುದಾಗಿ ತಿಳಿಸಲಾಗಿದೆ. ಟಿವಿ ಚಾನೆಲ್‌ಗಳಲ್ಲಿ ಘೋಷಣೆಯನ್ನು ಪ್ರಕಟಿಸುವಿಕೆಯು ಮತದಾನಕ್ಕೆ ನಿಗದಿಯಾದ ಅಥವಾ ಮತದಾನದ ಮುಕ್ತಾಯಕ್ಕೆ ನಿಗದಿಯಾದ ಕೊನೆಯ ಗಂಟೆಗೆ ಮೊದಲಿನ 48 ಗಂಟೆಗಳ ಅವಧಿಗೆ ಮೊದಲು ಪೂರ್ಣಗೊಳಿಸಬೇಕಿರುತ್ತದೆ.

ಮೇಲೆ ತಿಳಿಸಿದ ಚುನಾವಣೆಗಾಗಿ ನಾಮನಿರ್ದೇಶಿತ ಅಭ್ಯರ್ಥಿಯಾಗಿರುವ ಶ್ರೀ/ಶ್ರೀಮತಿ/ಕುಮಾರಿ ________________(ಅಭ್ಯರ್ಥಿಯ ಹೆಸರನ್ನು ನಮೂದಿಸಿ) ಆದ ನೀವು, ನಮೂನೆ 26ರ 5/6 ಬಾಬುಗಳಲ್ಲಿನ ಅಪರಾಧ ಪ್ರಕರಣಗಳ ಬಗೆಗೆ ಮಾಹಿತಿಯನ್ನು ಘೋಷಿಸಿರುವುದರಿಂದಾಗಿ, ಮೇಲೆ ನಮೂದಿಸಿದಂತೆ ಕನಿಷ್ಠ ಮೂರು ಸಂದರ್ಭಗಳಲ್ಲಿ ಚುನಾವಣಾ ಪ್ರದೇಶದಲ್ಲಿ ಹೆಚ್ಚು ಪ್ರಸಾರವನ್ನು ಹೊಂದಿರುವಂತಹ ವೃತ್ತಪತ್ರಿಕೆಗಳಲ್ಲಿ ಮತ್ತು ಟಿವಿ ಚಾನಲ್‌ಗಳಲ್ಲಿ ಆ ಮಾಹಿತಿಯನ್ನು ಪ್ರಕಟಿಸಬೇಕಿರುತ್ತದೆ. ಮಾಹಿತಿಯನ್ನು ಪ್ರಕಟಿಸುವುದಕ್ಕಾಗಿನ ನಮೂನೆಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಅಪರಾಧ ಪ್ರಕರಣಗಳ ಕುರಿತಾದ ಮಾಹಿತಿಗಳನ್ನು ಪ್ರಕಟಿಸುವಂತಹ ವೃತ್ತ ಪತ್ರಿಕೆಗಳ ಪ್ರತಿಗಳನ್ನು ಹಾಗೆಯೇ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 78ರ ಅಡಿಯಲ್ಲಿನ ಚುನಾವಣಾ ವೆಚ್ಚಗಳ ಲೆಕ್ಕದ ವಿವರಗಳನ್ನು ಜಿಲ್ಲಾ ಚುನಾವಣಾ ಅಧಿಕಾರಿಗೆ ಸಲ್ಲಿಸಬೇಕೆಂಬುದನ್ನು ಸಹ ಈ ಮೂಲಕ ತಿಳಿಸಲಾಗಿದೆ.

ದಿನಾಂಕ:

ಸಹಿ ______________________
ಆರ್‌ಓ/ಎಆರ್‌ಓ ಹೆಸರು ________________
ಅಭ್ಯರ್ಥಿಯ ಸಹಿ ____________

ಸೂಚನೆ: ಇದರ ಒಂದು ಪ್ರತಿಯನ್ನು ಅಭ್ಯರ್ಥಿಗೆ ಕೊಡಬೇಕು, ಮತ್ತೊಂದು ಪ್ರತಿಯನ್ನು ರಿಟರ್ನಿಂಗ್ ಅಧಿಕಾರಿಯು ಹೊಂದಿರಬೇಕು.

## ನಮೂನೆ–ಸಿ4

### ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂಧಿಸಿದ ಘೋಷಣೆಯನ್ನು ಪ್ರಕಟಿಸುವ ಬಗ್ಗೆ ಅಭ್ಯರ್ಥಿಯ ವರದಿ

ಅಭ್ಯರ್ಥಿಯ ಹೆಸರು ಮತ್ತು ವಿಳಾಸ : ____________________

ರಾಜಕೀಯ ಪಕ್ಷದ ಹೆಸರು : ________________

(ಪಕ್ಷೇತರ ಅಭ್ಯರ್ಥಿಗಳು "ಪಕ್ಷೇತರ" ಎಂದು ಇಲ್ಲಿ ಬರೆಯಬೇಕು)

ಚುನಾವಣೆಯ ಹೆಸರು :______________________

*ಚುನಾವಣಾ ಕ್ಷೇತ್ರದ ಹೆಸರು : _________________

ಮೇಲೆ ಸೂಚಿಸಿರುವ ಚುನಾವಣೆಯ ಅಭ್ಯರ್ಥಿಯಾಗಿರುವ ________________ (ಅಭ್ಯರ್ಥಿಯ ಹೆಸರು) ನಾನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು 2011ರ ಡಬ್ಲ್ಯೂಪಿ (ಸಿವಿಲ್) ಸಂ. 536, (ಸಾರ್ವಜನಿಕ ಹಿತಾಸಕ್ತಿ ಪ್ರತಿಷ್ಠಾನ ಮತ್ತು ಇತರರು ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು)ರಲ್ಲಿ ದಿನಾಂಕ: 25/09/2018ರಂದು ನೀಡಿದ ತೀರ್ಪಿನ ಅನುಸಾರ ಮತ್ತು ಆಯೋಗದ ನಿರ್ದೇಶನಗಳಿಗೆ ಅನುಸಾರವಾಗಿ ನನ್ನ ಅಪರಾಧಿಕ ಪೂರ್ವೇತಿಹಾಸದ ಬಗ್ಗೆ ಘೋಷಣೆಯನ್ನು ಸುದ್ಧಿಪತ್ರಿಕೆಗಳು ಮತ್ತು ಟಿವಿ ಚಾನಲ್ಲುಗಳಲ್ಲಿ ಪ್ರಕಟಿಸಿದ್ದೇನೆಂದು ಪ್ರಮಾಣೀಕರಿಸುತ್ತೇನೆ.

| ಕ್ರಮ ಸಂಖ್ಯೆ | ವಾರ್ತಾ ಪತ್ರಿಕೆ | | | ದೂರದರ್ಶನ | | | ಪಾವತಿ ವಿಧಾನ (ವಿದ್ಯುನ್ಮಾನಿತ/ ಚೆಕ್/ಡಿಡಿ/ ನಗದು) (ದಯವಿಟ್ಟು ನಿರ್ದಿಷ್ಟಪಡಿಸಿ) |
|---|---|---|---|---|---|---|---|
| | ವಾರ್ತಾ ಪತ್ರಿಕೆಯ ಹೆಸರು | ಪ್ರಕಟಣೆಯ ದಿನಾಂಕ | ತಗುಲಿದ ವೆಚ್ಚ (ರೂ. ಗಳಲ್ಲಿ) | ಚಾನಲ್‌ನ ಹೆಸರು | ಪ್ರಸಾರವಾದ ದಿನಾಂಕ/ ಸಮಯ | ತಗುಲಿದ ವೆಚ್ಚ (ರೂ.ಗಳಲ್ಲಿ) | |
| | | | | | | | |
| | | | | | | | |
| | | | | | | | |
| | | | | | | | |

* ಘೋಷಣೆಯನ್ನು ಪ್ರಕಟಿಸಿರುವ ವಾರ್ತಾಪತ್ರಿಕೆಗಳ ಪ್ರತಿಗಳನ್ನು ಲಗತ್ತಿಸಲಾಗಿದೆ

ದಿನಾಂಕ: ಅಭ್ಯರ್ಥಿಯ ಹೆಸರು ಮತ್ತು ಸಹಿ

ಸೂಚನೆ:
(i) ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಇದನ್ನು ಚುನಾವಣಾ ವೆಚ್ಚಗಳ ಲೆಕ್ಕದೊಂದಿಗೆ ಸಲ್ಲಿಸತಕ್ಕದ್ದು.
(ii) ರಾಜ್ಯಸಭಾ ಮತ್ತು ರಾಜ್ಯ ವಿಧಾನಪರಿಷತ್ತಿನ ಚುನಾವಣೆಗಳ ಸಂದರ್ಭದಲ್ಲಿ ಇದನ್ನು ಚುನಾವಣಾ ಫಲಿತಾಂಶ ಘೋಷಣೆಯಾದ 30 ದಿನಗಳ ಒಳಗೆ ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು.

**ನಮೂನೆ–ಸಿ5**

**ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂಧಿಸಿದ ಘೋಷಣೆಯನ್ನು ಪ್ರಕಟಿಸುವ ಬಗ್ಗೆ ರಾಜಕೀಯ ಪಕ್ಷದ ವರದಿ**

ರಾಜಕೀಯ ಪಕ್ಷದ ಹೆಸರು: ____________________

ಚುನಾವಣೆಯ ಹೆಸರು :________________________

ಮೇಲೆ ಸೂಚಿಸಿರುವ ರಾಜಕೀಯ ಪಕ್ಷವಾದ _______________ (ರಾಜಕೀಯ ಪಕ್ಷದ ಹೆಸರು) ನಾನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು 2011ರ ಡಬ್ಲ್ಯೂಪಿ (ಸಿವಿಲ್) ಸಂ. 536, (ಸಾರ್ವಜನಿಕ ಹಿತಾಸಕ್ತಿ ವೇದಿಕೆ ಮತ್ತು ಇತರರು ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು)ರಲ್ಲಿ ದಿನಾಂಕ: 25/09/2018ರಂದು ನೀಡಿದ ತೀರ್ಪಿನ ಅನುಸಾರ ಮತ್ತು ಆಯೋಗದ ನಿರ್ದೇಶನಗಳಿಗೆ ಅನುಸಾರವಾಗಿ ಪಕ್ಷವು ಅಭ್ಯರ್ಥಿಯ ಅಪರಾಧಿಕ ಪೂರ್ವೇತಿಹಾಸದ ಬಗ್ಗೆ ಘೋಷಣೆಯನ್ನು ಪಕ್ಷದ ಜಾಲತಾಣದಲ್ಲಿ, ಸುದ್ಧಿಪತ್ರಿಕೆಗಳು ಮತ್ತು ಟಿವಿ ಚಾನಲ್ಲುಗಳಲ್ಲಿ ಪ್ರಕಟಿಸಿದೆ ಎಂದು ಪ್ರಮಾಣೀಕರಿಸಲಾಗಿದೆ.

| ಕ್ರಮ ಸಂಖ್ಯೆ | ಜಾಲತಾಣ | ವಾರ್ತಾ ಪತ್ರಿಕೆ | | | ದೂರದರ್ಶನ | | | ಪಾವತಿ ವಿಧಾನ (ವಿಧ್ಯುನ್ಮಾನಿತ/ ಚೆಕ್/ಡಿಡಿ/ ನಗದು) (ದಯವಿಟ್ಟು ನಿರ್ದಿಷ್ಟಪಡಿಸಿ) |
|---|---|---|---|---|---|---|---|---|
| | ಪ್ರದರ್ಶಿಸಿದ ಅವಧಿ | ವಾರ್ತಾ ಪತ್ರಿಕೆಯ ಹೆಸರು (ಗಳು) | ಪ್ರಕಟಣೆಯ ದಿನಾಂಕ(ಗಳು) | ತಗುಲಿದ ವೆಚ್ಚ (ರೂ. ಗಳಲ್ಲಿ) | ಚಾನಲ್‌ನ ಹೆಸರು(ಗಳು) | ಪ್ರಸಾರವಾದ ದಿನಾಂಕ(ಗಳು)/ ಸಮಯ | ತಗುಲಿದ ವೆಚ್ಚ (ರೂ.ಗಳಲ್ಲಿ) | |
| | | | | | | | | |
| | | | | | | | | |
| | | | | | | | | |
| | | | | | | | | |

* ಘೋಷಣೆಯನ್ನು ಪ್ರಕಟಿಸಿರುವ ವಾರ್ತಾಪತ್ರಿಕೆಗಳ ಪ್ರತಿಗಳನ್ನು ಲಗತ್ತಿಸಲಾಗಿದೆ

ದಿನಾಂಕ:

ಪದಾಧಿಕಾರಿಯ ಸಹಿ

ಹೆಸರು ಮತ್ತು ಪದನಾಮ ––––

ಸೂಚನೆ: (i) ಸಂಬಂಧಪಟ್ಟ ಚುನಾವಣೆಯ ಫಲಿತಾಂಶ ಘೋಷಣೆಯಾದ 30 ದಿನಗಳ ಒಳಗೆ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು.

**ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು :**

**ಒಬ್ಬ ಅಭ್ಯರ್ಥಿಯ ಕ್ರಿಮಿನಲ್ ಹಿನ್ನೆಲೆಗಳೇನಾದರೂ ಇದ್ದರೆ ಅಂತಹ ಕ್ರಿಮಿನಲ್ ಪ್ರಕರಣಗಳು ಮತ್ತು ರಿಟ್ ಅರ್ಜಿ** (ಸಿವಿಲ್) ಸಂಖ್ಯೆ **536/2011 ದಿನಾಂಕ : 25.09.2018**ರಲ್ಲಿನ **ಮಾನ್ಯ** ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರವಾಗಿ ಅವುಗಳ ಪ್ರಚಾರ.

ಪ್ರಶ್ನೆ 1. ಅಭ್ಯರ್ಥಿಗಳಿಂದ ಅಂತಹ ಪ್ರಚಾರಕ್ಕಾಗಿ ಯಾವ ಪತ್ರಿಕೆಗಳನ್ನು ಆಯ್ಕೆ ಮಾಡಬೇಕು?

ಉತ್ತರ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನಿರ್ದೇಶನಗಳಅನುಸಾರವಾಗಿ, ಸಂಬಂಧಪಟ್ಟ ಪ್ರದೇಶದಲ್ಲಿ ವ್ಯಾಪಕ ಪ್ರಸಾರ ಹೊಂದಿರುವ ಪತ್ರಿಕೆಗಳಲ್ಲಿ ಘೋಷಣೆಯನ್ನು ಪ್ರಕಟಿಸುವುದು ಅವಶ್ಯವಾಗಿದೆ. ಮುಖ್ಯ ಚುನಾವಣಾ ಅಧಿಕಾರಿಯು, ರಾಜ್ಯದ ಡಿಐಪಿಯು ಸಿದ್ಧಪಡಿಸಿದ ರಾಜ್ಯದ ವಿವಿಧ ಜಿಲ್ಲೆಗಳು / ವಿಭಿನ್ನ ಚುನಾವಣಾ ಕ್ಷೇತ್ರದ ಪ್ರದೇಶಗಳಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ವಿವಿಧ ವೃತ್ತಪತ್ರಿಕೆಗಳ ಸೂಚೀಪಟ್ಟಿಯನ್ನು ಪಡೆದುಕೊಳ್ಳಬಹುದು.

ಈ ಸೂಚೀ ಪಟ್ಟಿಯನ್ನು ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳೊಂದಿಗೆ ಹಂಚಿಕೊಳ್ಳಬೇಕು.

ಪ್ರಶ್ನೆ 2. ಅದನ್ನು ಯಾವಾಗ ಸಾರ್ವಜನಿಕಗೊಳಿಸಬೇಕು?

ಉತ್ತರ. ಅಭ್ಯರ್ಥಿಯು ಚುನಾವಣೆಯ ನಾಮಪತ್ರವನ್ನು ಹಿಂಪಡೆಯುವ ಕೊನೆಯ ದಿನಾಂಕದ ನಂತರದ ದಿನದಿಂದ ಮತ್ತು ಮತದಾನ ದಿನಾಂಕಕ್ಕಿಂತ ಎರಡು ದಿನಗಳ ಮುಂಚಿನ ದಿನದವರೆಗಿನ ಅವಧಿಯಲ್ಲಿಪ್ರಕಟಿಸಬೇಕೆಂದು ಆಯೋಗದ ದಿನಾಂಕ : 10.10.2018ರ ಪತ್ರದಲ್ಲಿ ಈಗಾಗಲೇ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಪ್ರಶ್ನೆ 3. ಸಹಿಗೆ ಯಾವುದೇ ಕಲಂ ಇಲ್ಲ. ಅದನ್ನು ದೃಢೀಕರಿಸುವವರು ಯಾರು?

ಉತ್ತರ. ನಮೂನೆಯಲ್ಲಿ ಅಭ್ಯರ್ಥಿಯ ಹೆಸರನ್ನು ಮತ್ತು ವಿಳಾಸವನ್ನು ಹಾಗೂ ರಾಜಕೀಯ ಪಕ್ಷದ ಹೆಸರನ್ನು ನಮೂದಿಸಲು ನಮೂನೆಯ ಮೇಲ್ಭಾಗದಲ್ಲಿ ಕಾಲಂ ಇರುತ್ತದೆ. ಹಾಗಾಗಿ, ಪ್ರಕಾಶಕರ ಹೆಸರು ಘೋಷಣೆಯಿಂದ ಸ್ಪಷ್ಟವಾಗುತ್ತದೆ. ಪ್ರಕಾಶಕರ ಸಹಿಯನ್ನು ಹೊಂದಿರುವ ಮಾಹಿತಿಯನ್ನು ಪ್ರಕಟಿಸುವ ಅಗತ್ಯವಿಲ್ಲ.

ಪ್ರಶ್ನೆ 4.ಮತ್ತೊಬ್ಬ ಅಭ್ಯರ್ಥಿಯ ಕ್ರಿಮಿನಲ್ ಪ್ರಕರಣಗಳ ಬಗ್ಗೆ ತಪ್ಪು ಮಾಹಿತಿಯನ್ನು ಯಾರಾದರೂ ಪ್ರಕಟಿಸಿದರೆ?

ಉತ್ತರ. ಅಭ್ಯರ್ಥಿಗೆ ಸಂಬಂಧಿಸಿದಂತೆ ಸುಳ್ಳು ಹೇಳಿಕೆ ಪ್ರಕಟಿಸುವ ಯಾವುದೇ ಪ್ರಕರಣದ ಬಗ್ಗೆ ವ್ಯವಹರಿಸುವಉಪಬಂಧಗಳು ಈಗಾಗಲೇ ಜಾರಿಯಲ್ಲಿವೆ. [ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 123 (4)ನೇ ಪ್ರಕರಣಮತ್ತು ಐಪಿಸಿ 171 ಜಿಪ್ರಕರಣ].

ಪ್ರಶ್ನೆ 5. ಘೋಷಣೆಯನ್ನು ಪ್ರಸಾರ ಮಾಡಬೇಕಾದ ಟಿವಿ ಚಾನಲ್ ಯಾವುದು?

ಉತ್ತರ. ದಯವಿಟ್ಟು ಈ ಬಗ್ಗೆ ಮೇಲ್ಕಂಡ ಪ್ರಶ್ನೆ ಸಂಖ್ಯೆ 01ರಉತ್ತರವನ್ನು ಗಮನಿಸಿ, ಸಂಬಂಧಿಸಿದ ಪ್ರದೇಶಗಳಲ್ಲಿ ಲಭ್ಯವಿರುವ / ಜನಪ್ರಿಯವಾಗಿರುವ ಟಿವಿ ಚಾನೆಲ್ ಗಳಲ್ಲಿ ಪ್ರಸಾರ ಮಾಡಬೇಕಾಗುತ್ತದೆ.

ಪ್ರಶ್ನೆ 6. ಟಿವಿಯಲ್ಲಿ ಪ್ರಸಾರಮಾಡಬೇಕಾದ ಫಾಂಟ್ ಗಾತ್ರ ಮತ್ತು ಅವಧಿ ಎಷ್ಟು?

ಉತ್ತರ. ಫಾಂಟ್ ಗಾತ್ರವು ಟಿವಿಯಲ್ಲಿ ಮುದ್ರಿತ ವಿಷಯಗಳನ್ನು ಡಿಸ್ ಪ್ಲೇ ಮಾಡಲು ಬಳಸಲಾಗುವ ಪ್ರಮಾಣಿತ ಗಾತ್ರವಾಗಿರಬೇಕು. ಇದರ ಅವಧಿಯು 7 ಸೆಕೆಂಡ್ಗಳಿಗಿಂತ ಕಡಿಮೆಯಿರಬಾರದು.

ಪ್ರಶ್ನೆ 7. ಅಭ್ಯರ್ಥಿಯು ಯಾವುದೇ ಕ್ರಿಮಿನಲ್ ಹಿನ್ನೆಲೆ ಹೊಂದಿಲ್ಲದಿದ್ದರೆ, ಆತ/ಆಕೆಯ ಘೋಷಣೆಯನ್ನು ಪ್ರಕಟಿಸುವ ಅಗತ್ಯವಿದೆಯೇ?

ಉತ್ತರ. ಇಲ್ಲ. ಕ್ರಿಮಿನಲ್ ಪ್ರಕರಣಗಳು ಬಾಕಿ ಇರುವ ಅಥವಾ ಹಿಂದೆ ಅಪರಾಧ ನಿರ್ಣೀತರಾಗಿರುವ ಅಭ್ಯರ್ಥಿಗಳು ಮಾತ್ರ ಘೋಷಣೆಗಳನ್ನು ಪ್ರಕಟಿಸಬೇಕಾಗುತ್ತದೆ.

ಪ್ರಶ್ನೆ 8. ಸಂಬಂಧಪಟ್ಟ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ಎಫ್ಐಆರ್ ಪ್ರಕರಣಗಳನ್ನು ಪ್ರಕಟಿಸಬೇಕೇ?

ಉತ್ತರ. ಹೌದು. “ಪ್ರಕರಣ ಸಂಖ್ಯೆ ಮತ್ತು ಪ್ರಕರಣದ ಸ್ಥಿತಿ” ಶೀರ್ಷಿಕೆಯಡಿಯಲ್ಲಿ, ನಮೂನೆ-26 ರ ಬಾಬು-5 ರಲ್ಲಿ ಉಲ್ಲೇಖಿಸಿರುವ ಎಫ್ಐಆರ್ ಗಳಕುರಿತಾದ ವಿವರಗಳನ್ನು ನಮೂದಿಸಬೇಕು.

ಪ್ರಶ್ನೆ 9. ನಾಮಪತ್ರವನ್ನು ಸಲ್ಲಿಸಿದ ನಂತರ, ಕ್ರಿಮಿನಲ್ ಪ್ರಕರಣದಸ್ಥಿತಿಯು ಬದಲಾವಣೆಯಾದರೆ, ಅಭ್ಯರ್ಥಿಯು ವಿವರಗಳನ್ನು ಪರಿಷ್ಕರಿಸಬಹುದೇ?

ಉತ್ತರ. ಪ್ರಕರಣದ ಪರಿಷ್ಕೃತ ಸ್ಥಿತಿಯನ್ನು ರಿಟರ್ನಿಂಗ್ ಅಧಿಕಾರಿಗಳಿಗೆ ತಿಳಿಸುವುದು ಮತ್ತು ಪರಿಷ್ಕೃತ ಸ್ಥಿತಿಯನ್ನು ಮಾತ್ರ ಪ್ರಕಟಿಸುವುದು, ಸಂಬಂಧಪಟ್ಟ ಅಭ್ಯರ್ಥಿಗೆ ಮುಕ್ತವಾಗಿರುತ್ತದೆ. ಅದೇನೂ ಇಲ್ಲದಿದ್ದರೆ ಅಭ್ಯರ್ಥಿಗೆಅದನ್ನು ಪ್ರಕಟಿಸುವ ಅಗತ್ಯವಿಲ್ಲ.

ಪ್ರಶ್ನೆ 10. ಪ್ರಕಟಣೆಯ ಖರ್ಚನ್ನು ಯಾರುಭರಿಸುತ್ತಾರೆ?

ಉತ್ತರ. ಸಂಬಂಧಿಸಿದ ಪ್ರಕರಣಗಳಲ್ಲಿವೆಚ್ಚಗಳು, ಯಾವುದಾದರೂ ಇದ್ದರೆ, ಅಭ್ಯರ್ಥಿ ಮತ್ತು ರಾಜಕೀಯ ಪಕ್ಷಗಳೇ ಭರಿಸುತ್ತವೆ.

ಪ್ರಶ್ನೆ 11. ಲೆಕ್ಕಕ್ಕೆ ಸಂಬಂಧಿಸಿದ ವೆಚ್ಚವನ್ನು ಈ ಲೆಕ್ಕಕ್ಕೆ ಪರಿಗಣಿಸಲಾಗುವುದೇ?

ಉತ್ತರ. ಹೌದು. ಇದು ಚುನಾವಣಾ ಸಂಬಂಧಿತ ವೆಚ್ಚವಾಗಿದ್ದು, ಈ ಸಂಬಂಧವಾಗಿ ಖರ್ಚು ಮಾಡಿದರೆ, ಅದನ್ನು, ಚುನಾವಣೆಯ ಉದ್ದೇಶಗಳ ಖರ್ಚಿಗೆ ಲೆಕ್ಕಹಾಕಲಾಗುತ್ತದೆ.

ಪ್ರಶ್ನೆ 12., ಅಂತಹ ವಿವರಗಳಲ್ಲಿ ಯಾವುದೇ ವ್ಯತ್ಯಾಸವಿರುವುದರ ಬಗ್ಗೆಗಮನಸೆಳೆದಿದ್ದರೆರಿಟರ್ನಿಂಗ್ ಅಧಿಕಾರಿಯು ಆ ಬಗ್ಗೆ ಕ್ರಮ ತೆಗೆದುಕೊಳ್ಳಬಹುದೇ?

ಉತ್ತರ. ಇಲ್ಲ. ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಗಳು / ರಾಜಕೀಯ ಪಕ್ಷಗಳು ಪ್ರಕಟಿಸಿದ ಘೋಷಣೆಗಳ ಸತ್ಯಾ ಸತ್ಯತೆಯ ಬಗ್ಗೆ ತನಿಖೆ ನಡೆಸುವಂತಿಲ್ಲ.

ಪ್ರಶ್ನೆ 13.ಪ್ರಕರಣಗಳ ಪ್ರಕಟಣೆಯ ಕುರಿತಾದ ಮಾಹಿತಿಯನ್ನು ಅಂತಹ ಅಭ್ಯರ್ಥಿಗಳು ಯಾವ ರೀತಿಯಲ್ಲಿ, ಜಿಲ್ಲಾ ಚುನಾವಣಾಧಿಕಾರಿಗಳಿಗೆಸಲ್ಲಿಸುತ್ತಾರೆ?

ಉತ್ತರ. ಘೋಷಣೆಯನ್ನು ಪ್ರಕಟಿಸುವ ಬಗ್ಗೆ ವರದಿಯನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ ಮತ್ತು ರಾಜಕೀಯ ಪಕ್ಷಗಳಿಗಾಗಿಆಯೋಗವುಪ್ರತ್ಯೇಕ ನಮೂನೆಗಳನ್ನು ಗೊತ್ತುಪಡಿಸಿದೆ. ಅಭ್ಯರ್ಥಿಗಳಿಗೆ ನಮೂನೆ ಸಿ-4 ಮತ್ತು ರಾಜಕೀಯ ಪಕ್ಷಗಳಿಗೆ ನಮೂನೆ ಸಿ-5ನಮೂನೆಗಳನ್ನು ಗೊತ್ತುಪಡಿಸಲಾಗಿದೆ.

ಪ್ರಶ್ನೆ 14. ಅಂತಹ ಅಭ್ಯರ್ಥಿಗಳು ಅಥವಾ ರಾಜಕೀಯ ಪಕ್ಷಗಳು ನಿಗದಿಪಡಿಸಿದ ರೀತಿಯಲ್ಲಿ ಪ್ರಕಟಿಸದಿದ್ದರೆ ಏನಾಗುತ್ತದೆ?

ಉತ್ತರ. ಅಂತಹ ವೈಫಲ್ಯತೆಯನ್ನು, ಚುನಾವಣಾ ಅರ್ಜಿ ಅಥವಾ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಂಗ ನಿಂದನೆಯಂತಹ ಚುನಾವಣಾ ನಂತರದ ಕ್ರಮ ಜರುಗಿಸಲು ಆಧಾರವಾಗಿ ಪರಿಗಣಿಸಬಹುದಾಗಿದೆ.